CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತ ದರ್ಶನ

(ಮಹರ್ಷಿ ವೇದವ್ಯಾಸ ಪ್ರಣೀತ ಶ್ರೀಮದ್ಭಾಗವತ ಮಹಾಪುರಾಣ)

ಶ್ರೀ ಶ್ರೀ ಅಖಂಡಾನಂದ ಸರಸ್ವತಿಯವರ ವಿಸ್ತೃತ ಪ್ರಸ್ತಾವನೆ
ಶ್ರೀ ಶ್ರೀ ಸಚ್ಚಿದಾನಂದ ಸ್ವಾಮಿಜಿ, ಶ್ರೀಧರಾಶ್ರಮ ಇವರ ಆಶೀರ್ವಾದಗಳು.
ಡಾ॥ಕೆ. ಕೃಷ್ಣಮೂರ್ತಿಯವರ ಮುನ್ನುಡಿ, ಶ್ರವಣ ಮಾಹಾತ್ಮ್ಯ ಮಹಾತ್ಮರ
ವಿಶ್ಲೇಷಣೆಗಳೊಂದಿಗೆ ೧-೨-೩ ಸ್ಕಂಧಗಳು. (ಒಟ್ಟು ಪುಟ ಸಂಖ್ಯೆ 650)

ಓಂ

ಶ್ರೀಮದ್ಭಾಗವತಾಖ್ಯೋಽಯಂ
ಪ್ರತ್ಯಕ್ಷ : ಕೃಷ್ಣ ಏವಹಿ

ಸಂಪಾದಕ
ಕೆ.ರಾ.ವೆ.ಸುಬ್ರಹ್ಮಣ್ಯ ಶಾಸ್ತ್ರಿ
ಪ್ರವಕ್ತಾ

ಸಂಪುಟ ೧ ಕಪಿಲ
ಕಪಿಲಃ ಶ್ರೀ ಹರಿಃ ಸ್ವಯಂ

SAMPADAKA
Shri Bhagavata Prakashana Samiti
No. 350, ... 15th Main, 1st Block, III Stage
Basaveshwaranagar BANGALORE 79

ಶ್ರೀ ಭಾಗವತ ಪ್ರಕಾಶನ, ಬೆಂಗಳೂರು

ಬೆಲೆ : ~~30~~-00 35-00
~~ಮೂವತ್ತು~~ ರೂ.ಗಳು ಮಾತ್ರ
ಅಂಚೆ ವೆಚ್ಚ ಪ್ರತ್ಯೇಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮ ಮುದ್ರಣ 2005 ಪ್ರತಿಗಳು. ಡಿಸೆಂಬರ್ 1984
ಶಾ.ಶ.1906 ರಕ್ತಾಕ್ಷಿ ಸಂ. ಮಾರ್ಗ ಶೀರ್ಷ ಪೂರ್ಣಿಮಾ
(ಶ್ರೀದತ್ತಾತ್ರೇಯ ಶ್ರೀಧರ ಜಯಂತೀ)

ಶ್ರೀ ಭಾಗವತ ಪ್ರಕಾಶನ ಸಮಿತಿ

ಅಧ್ಯಕ್ಷರು : ಶ್ರೀ ವಿ.ಎಸ್.ಕೃಷ್ಣ ಅಯ್ಯರ್
ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರಕಾರ

ಉಪಾಧ್ಯಕ್ಷರು : ಶ್ರೀ ವಿ.ಗೋಪಾಲಯ್ಯ
ನಿವೃತ್ತ ಸೆಷನ್ಸ್ ನ್ಯಾಯಾಧೀಶರು
ಶಂಕರಾ ಪಾರ್ಕ ಬೆಂಗಳೂರು-4

ಕೋಶಾಧ್ಯಕ್ಷರು : ಶ್ರೀ ಕೆ.ಆರ್.ಶ್ರೀಕಂಠಯ್ಯ
ಉಪನ್ಯಾಸಕರು, ಬೆಂಗಳೂರು ವಿಶ್ವವಿದ್ಯಾಲಯ

ಕಾರ್ಯದರ್ಶಿ : ಶ್ರೀ ಆರ್.ನಾಗರಾಜ್, ಜಮೀನ್ದಾರ್,

ಸದಸ್ಯರು : ಶ್ರೀ ಸಿ.ಎನ್.ಶ್ರೀಕಂಠನ್, ಕೈಗಾರಿಕೋದ್ಯಮಿ
" ಶ್ರೀ **ದೇವದಾಸ ನಾಯಕ** ಗೀ.ಸ.ಸಮಿತಿ, ಬೆಂಗಳೂರು
" ಶ್ರೀ ಬಿ.ಆರ್.ನಾಗರಾಜ್ ಲೆಕ್ಕಾಧಿಕಾರಿ,ಮೈಕೋ
" ಶ್ರೀ ಎನ್.ಶ್ರೀನಿವಾಸಯ್ಯ, ಮ್ಯಾನೇಜರ್,
ಮೈಸೂರು ಬ್ಯಾಂಕ್

ಸಂಪಾದಕರು

ಕೆ.ರಾ.ವೆ.ಸುಬ್ರಹ್ಮಣ್ಯ ಶಾಸ್ತ್ರಿ, ಪ್ರವಕ್ತಾ.

ಮುದ್ರಕರು : ನಿರ್ಮಲಾ ಪ್ರಿಂಟರ್ಸ್, ಚಾ.ಪೇಟೆ, ಬೆಂಗಳೂರು
ರಾಘವೇಂದ್ರ ಪವರ್ ಪ್ರೆಸ್, ತ್ಯಾಗರಾಜನಗರ ಬೆಂಗಳೂರು
ಭರಣಿ ಪ್ರಿಂಟರ್ಸ್, ಸೌಂತ್ ಎಂಡ್ ರಸ್ತೆ, ಬೆಂಗಳೂರು

ಪುಸ್ತಕಗಳು ದೊರೆಯುವ ವಿಳಾಸ

ಸಂಪಾದಕ

ಶ್ರೀ ಭಾಗವತ ಪ್ರಕಾಶನ ಸಮಿತಿ

[illegible] (ಡಾಕ್.ಚಿಫ್.) 1ನೇ ಬ್ಲಾಕ್ ಈಸ್ಟ್ ಜಯನಗರ
ಬೆಂಗಳೂರು-560 011 79

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾದರ ಸಮರ್ಪಣೆ



ಪರಮಹಂಸ ಪರಿವ್ರಾಜಕಾಚಾರ್ಯ ವರದ ಪುರಾಧೀಶ, ದೀನ
ಜನೋದ್ಧರಣ ತತ್ಪರ ಶ್ರೀ ಶ್ರೀ ಶ್ರೀಧರಸ್ವಾಮಿಗಳ ಚರಣಾರವಿಂದಗಳಲ್ಲಿ

ಆವಿರ್ಭಾವ 7-12-1908

Sri Vidyabharathi Book Centre, Sringeri

ಅಂತರ್ಧಾನ 19-4-1978

CC-O. In Public Domain. Digitized by eGangotri

ಶ್ರೀ ಗುರ್ವಷ್ಟಕಮ್

1 ಸರ್ವಾನಂದ ಮಯಂ ದೇವಂ, ಜ್ಞಾನ ವಿಜ್ಞಾನ ಕಾರಣಂ ।
ಸರ್ವಾಶ್ಚರ್ಯಕರಂದತ್ತಂ, ಶ್ರೀಧರಂ ತಂ ನಮಾಮ್ಯಹಂ ॥

2 ಅಜ್ಞಾನತಿಮಿರಾರ್ಕಂಚ, ಜ್ಞಾನ ವೈರಾಗ್ಯ ಬೋಧಕಂ ।
ಸದಾ ಬೋಧಯುತಂ ದೇವಂ, ಶ್ರೀಧರಂ ತಂ ನಮಾಮ್ಯಹಂ ॥

3 ಸದ್ಗುರುಂ ಪರಮಾನಂದಂ ಲೋಕಾನುಗ್ರಹ ತತ್ಪರಂ ।
ಸದಾ ಸದ್ಭಿಃ ಸೇವ್ಯ ಮಾನಂ, ಶ್ರೀಧರಂ ತಂ ನಮಾಮ್ಯಹಂ ॥

4 ತಪೋ ರೂಪಂ ತಪೋ ಮಗ್ನಂ, ಸದಾಸತ್ತಪಸಿಸ್ಥಿತಂ ।
ದತ್ತರೂಪಧರಂದೇವಂ, ಶ್ರೀಧರಂ ತಂ ನಮಾಮ್ಯಹಂ ॥

5 ಸಚ್ಚಿದಾನಂದ ಶಿಷ್ಯೇಣ, ಸದಾಸಂಸೇವಿತಂಮುದಾ ।
ಚಿದಾನಂದಂ ಮಹಾದೇವಂ, ಶ್ರೀಧರಂ ತಂ ನಮಾಮ್ಯಹಂ ॥

6 ತಚ್ಛಿಶ್ಯಂ ಸಚ್ಚಿದಾನಂದಂ, ಸದಾ ಸದ್ಭಾವಭಾವಿತಂ ।
ಧರ್ಮಪ್ರಿಯಂ ಮಹಾನಂದಂ, ಭೂಯೋಭೂಯೋನಮಾಮ್ಯಹಂ ॥

7 ನಮಃ ಶ್ರೀ ಗುರುದೇವಾಯ, ಶ್ರೀಧರಾಯ ನಮೋನಮಃ ।
ನಮಸ್ತೇ ಹಂಸರೂಪಾಯ, ಪರಬ್ರಹ್ಮಸ್ವರೂಪಿಣೇ ॥

8 ನಮೋ ನಮಸ್ತೇ ಗುರುದೇವ ತುಭ್ಯಂ
ನಮೋ ನಮಸ್ತೇ ಕರುಣೈಕಸಿಂಧೋ
ನಮೋ ನಮಸ್ತೇ ಗುರುಪುಣ್ಯಕೀರ್ತೇ
ನಮೋ ನಮಸ್ತೇ ಜಗದೇಕಮೂರ್ತೇ

Sri Vidyabharathi Book Centre, Sringeri

ಶ್ರೀ ಗುರುದೇವಚರಣಾರವಿಂದಾರ್ಪಣಮಸ್ತು

CC-O. In Public Domain. Digitized by eGangotri

ಶ್ರೀ ಶ್ರೀ ಸಚ್ಚಿದಾನಂದಸ್ವಾಮೀಜಿ, ಶ್ರೀ ಶ್ರೀಧರಾಶ್ರಮ ವರದಪುರ,
ಯಡಜಿಗಳಿ ಮನೆ ಪೋ ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
ಇವರು ಅನುಗ್ರಹಿಸಿರುವ ಕೃಪಾಶೀರ್ವಾದಗಳು.

ಶ್ರೀ ಕೆ.ರಾ.ವೆ.ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ಆಶೀರ್ವಾದ

'ಶ್ರೀಮದ್ಭಾಗವತ ದರ್ಶನ' ಎಂಬ ಗ್ರಂಥ ಪ್ರಕಾಶನದ ವಿಷಯವಾಗಿ ಹಿಂದೆ ನೀವು ನಮ್ಮಲ್ಲಿ ನಿವೇದಿಸಿಕೊಂಡಂತೆ ಈ ಅಲ್ಪ ಕಾಲದಲ್ಲಿಯೇ ಪ್ರಥಮ ಸಂಪುಟದ ಮುದ್ರಣ ಕಾರ್ಯವು ಪೂರ್ಣವಾಗುವುದರಲ್ಲಿದೆ ಎಂಬ ಸಮಾಚಾರ ದೊಂದಿಗೆ ನಮ್ಮ ಆಶೀರ್ವಚನ ಸಂದೇಶವನ್ನು ಬಯಸಿ ಬರೆದ ಪತ್ರವು ತಲುಪಿ ಸಂತಸವಾಯಿತು.

ಶ್ರೀಮದ್ಭಾಗವತವೆಂದರೆ ಕರ್ಮ, ಉಪಾಸನೆ, ಜ್ಞಾನಗಳ ಸಂಗಮ ಅಥವಾ ಆಗರವೇ ಆಗಿದ್ದು ಮಾನವ ಜೀವನದ ಮುಖ್ಯ ಧ್ಯೇಯವಾದ ಅಧ್ಯಾತ್ಮಜ್ಞಾನ ಸ್ವಸ್ವರೂಪದ ಅರಿವಿಗೆ ಬೇಕಾದ ಎಲ್ಲಾ ಜ್ಞಾನ ಸಾಧನೆಗಳು ಇದರಲ್ಲಿ ತುಂಬಿಕೊಂಡಿವೆ. ಆದ್ದರಿಂದಲೇ 'ವಿದ್ಯಾ ಭಾಗವತಾವಧಿ" ಎಂಬ ಲೋಕೋಕ್ತಿಯೂ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯೇಯ ಸಾಧನೆಗೆ ಅನೇಕ ಮಾರ್ಗಗಳಿದ್ದರೂ ಇಂತಹ ಕಲಿ ಕಲ್ಮಶ ಕಾಲ ದಲ್ಲಿ ಭಗವಂತನ ಭಕ್ತಿಮಾರ್ಗವೇ ಸುಲಭವೂ ಶ್ರೇಷ್ಠವೂ ಆಗಿರುವುದೆಂಬುದು ಅನೇಕ ಗ್ರಂಥಗಳ, ಸಂತರ ಸಿದ್ಧಾಂತವಾಗಿದೆ. ಅಂತಹ ಪರಮ ಭಕ್ತಿಯ ಸಿದ್ಧಾಂತ ಹಾಗೂ ಸಮಗ್ರ ಸಾಧನೆಗಳನ್ನು ಶ್ರೀಮದ್ಭಾಗವತದಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಆದ್ದರಿಂದಲೇ "ಯಸ್ಯಾಂ ವೈ ಶ್ರೂಯಮಾಣಾಯಾಂ ಕೃಷ್ಣೇ ಪರಮ ಪೂರುಷೇ। ಭಕ್ತಿರುತ್ಪದ್ಯತೇ ಪುಂಸಃ ಶೋಕ ಮೋಹ ಭಯಾ ಪಹಾ॥" ಶ್ರೀಮದ್ಭಾಗವತದ ಶ್ರವಣ ಮಾತ್ರದಿಂದಲೇ ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣಪರಮಾತ್ಮನಲ್ಲಿ ಪರಮ ಪ್ರೇಮರೂಪೀ ಭಕ್ತಿಯುಂಟಾಗಿ ಜೀವಿಯ ಶೋಕ, ಮೋಹ, ಭಯಾದಿಗಳು ನಷ್ಟವಾಗುವುದೆಂದು ಭಾಗವತ ದಲ್ಲಿಯೇ ಸಾರಲ್ಪಟ್ಟಿದೆ.

ಹೀಗೆ ಅಪಾರ ಮಹಿಮೆಯಿಂದ ಕೂಡಿದ ಶ್ರೀಮದ್ಭಾಗವತವನ್ನು ಕನ್ನಡ ದಲ್ಲಿ ಅರ್ಥ ಬರೆದು ಪ್ರಕಾಶಿಸುತ್ತಿರುವುದು ಕನ್ನಡ ಭಾಷೆಯ ಜನಗಳಿಗೆ ಮಹ ದುಪಕಾರವನ್ನು ಮಾಡಿದಂತಾಗಿದ್ದು ಇದು ಸ್ತುತ್ಯವೂ ಯೋಗ್ಯವೂ ಆಗಿರುವುದು.

ಅಜ್ಞಾನಾಯ ಚ ಯೋ ಜ್ಞಾನಂ ದದ್ಯಾದ್ಧರ್ಮೋಪದೇಶತಃ ।
ಕೃತ್ಸ್ನಾಂ ವಾ ಪೃಥಿವೀಂ ದದ್ಯಾತ್ತೇನ ತುಲ್ಯಂ ನ ತತ್ಫಲಂ॥ (ಅನುಸ್ಮೃತಿ)

ತಾವು ಜ್ಞಾನ ಸಂಪಾದನೆ ಮಾಡಿಕೊಂಡು ಅದನ್ನು ಪರರಿಗೂ ತಿಳಿಸಿ ಕೊಡುವಂತಹ ಕಾರ್ಯವೆಂದರೆ ಸಂಪೂರ್ಣ ಪೃಥ್ವೀ ದಾನಕ್ಕಿಂತಲೂ ಮಹತ್ವ ದ್ದಾಗಿರುವುದು. ಅಂತೆಯೇ ಭಾಗವತದ ಎಲ್ಲಾ ಸಂಪುಟಗಳ ಕಾರ್ಯವು ಶೀಘ್ರವಾಗಿ ಸಂಪನ್ನಗೊಂಡು ಇತೋಪ್ಯತಿಶಯವಾಗಿ ಅನೇಕ ಗ್ರಂಥಗಳು ನಿಮ್ಮಿಂದ ನೆರವೇರಿ ಅದರ ಶ್ರವಣ ಮನನಗಳಿಂದ ಎಲ್ಲರ ಉದ್ಧಾರವಾಗ ಲೆಂದು ಹಾರೈಸುವುದರೊಂದಿಗೆ ಶ್ರೀ ಸದ್ಗುರು ಚರಣದಲ್ಲಿ ಪ್ರಾರ್ಥಿಸಿ ಆಶೀರ್ವದಿಸುತ್ತೇವೆ.

ಇತ್ಯೋಂ

Sri Vidyabharathi Book Centre, Sringeri

ಶ್ರೀ ಸಚ್ಚಿದಾನಂದ ಸ್ವಾಮಿ

CC-O. In Public Domain. Digitized by eGangotri

ಸಂಪಾದಕೀಯ

ಪ್ರಿಯ ಪಾಠಕರಲ್ಲಿ ಸಪ್ರೇಮ ವಂದನೆಗಳು:

ಪರಮ ಪುರುಷ ಪರಮಾತ್ಮನ ಪ್ರೇರಣೆಗನುಗುಣವಾಗಿ, ಶ್ರೀ ಭಾಗವತ ಪ್ರಕಾಶನ ಸಮಿತಿಯ ನಿಶ್ಚಯಾನುಸಾರ ಶ್ರೀ ಭಾಗವತ ದರ್ಶನದ ಕಪಿಲ ನಾಮಕ ಸಂಪುಟವು ಸ್ವಲ್ಪ ಸಾವಕಾಶವಾಗಿಯೆ ತಮ್ಮ ಕೈ ಸೇರಿದೆ. ತಾವು ಗ್ರಂಥ ಪಠಣಾರಂಭಕ್ಕೆ ಪ್ರಾರಂಭಿಸುತ್ತಿರುವಾಗ ನಾನು ವಿಶೇಷವಾಗಿ ಹೇಳಬೇಕಾದುದೇನೂ ಇಲ್ಲವು. ಸಂದರ್ಭಕ್ಕನುಗುಣವಾಗಿ ಅಲ್ಲಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಲಾಗಿದೆ. ವ್ಯಕ್ತಪಡಿಸುವುದರಲ್ಲಿ ಸರ್ವ ಸಾಮಾನ್ಯ ರೀತಿಯನ್ನು ಅಳವಡಿಸಿಕೊಂಡಿದೆಯೇ ಹೊರತು ಒಂದನ್ನು ಪುರಸ್ಕರಿಸಿ ಒಂದನ್ನು ತಿರಸ್ಕರಿಸುವ ಪವ್ಯಾಸಕ್ಕೆ ಹೋಗಿಲ್ಲ. ಶ್ರೀಮದ್ಭಾಗವತವು ಸರ್ವರಿಗೂ ಸರ್ವದಾ ಸನ್ಮಾನ್ಯ ಗ್ರಂಥರತ್ನವಾಗಿದೆ. ಭಗವಾನ್ ಶ್ರೀಕೃಷ್ಣನೇ ಕಲಿಯುಗದ ವರ ಪರಮ ಕಲ್ಯಾಣ ಪ್ರಾಪ್ತಿಗಾಗಿ ತನ್ನ ಪ್ರತಿರೂಪದಂತಿರುವ ಭಾಗವತವನ್ನು ಪರಮ ಭಕ್ತಶಿರೋಮಣಿ ಉದ್ಧವನಿಗೆ ಕೊಟ್ಟು ತನ್ನ ಲೀಲಾಧಾಮಕ್ಕೆ ತೆರಳಿದನು. ಶ್ರೀಮದ್ಭಾಗವತಾಖ್ಯೋಯಂ,ಪ್ರತ್ಯಕ್ಷಃ ಕೃಷ್ಣ ಏವಹಿ:ಶ್ರೀಕೃಷ್ಣನೇ ಭಾಗವತವೆಂಬುವುದು ಮಹಾತ್ಮರುಗಳ ಅಭಿಪ್ರಾಯವಾಗಿದೆ. ಈ ಪವಿತ್ರ ಗ್ರಂಥದ ಪಠಣ, ಪಾಠನ ಶ್ರವಣ, ಮನನಾದಿಗಳಿಂದ ಸರ್ವ ವಿಧ ಸೌಖ್ಯಗಳೂ ಸರ್ವರಿಗೆ ದೊರಕುತ್ತವೆಂದರೆ ಯಾರೂ ಅನುಮಾನಿಸಬೇಕಾಗಿಲ್ಲ.

ಅಂತಃಕರಣ ಶುದ್ಧಿಯೇ ಪರಮ ಕಲ್ಯಾಣದ ಪ್ರಥಮ ಸೋಪಾನವೆಂಬುದು ನಿರ್ವಿವಾದ ವಾದ ವಿಚಾರವು. ಅಂತಃಕರಣ ಶುದ್ಧಿಗೆ ಭಾಗವತಾದಿ ಸದ್ಗ್ರಂಥಗಳ ಪಠಣ ಮನನಗಳಿಗಿಂತ ಸುಲಭವಾದ ಉಪಾಯವು ಮತ್ತೊಂದಿಲ್ಲ. ಶ್ರೀಭಾಗವತದರ್ಶನದಿಂದ ಅಂತಃಕರಣದ ಶುದ್ಧಿಯಾಗುತ್ತದೆ. ಭಕ್ತಿಯು ಆವಿರ್ಭಾವವಾಗುತ್ತದೆ. ಜ್ಞಾನ, ವೈರಾಗ್ಯಗಳು ಉದಯಿಸುತ್ತವೆ.

ಮನಸ್ಸಿನ ಭಾವನೆಗೆ ಅನುಗುಣವಾಗಿ ಕಾರ್ಯಗಳು ಸಿದ್ಧಿಸುತ್ತವೆ. ಸದಾ ಮನಸ್ಸು ಪವಿತ್ರ ಬಾವನಾಮಯವಾಗಿರುವಂತೆ ಕಾರ್ಯಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಸರ್ವ ಮಾನವನ ಆದ್ಯ ಕರ್ತವ್ಯವಾಗಿದೆ. ಇದೊಂದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತ್ರ ಪಶುಧರ್ಮವು ದೂರವಾಗಿ ಮಾನವನು ಮಾನವನಾಗಿಯೇ ಉಳಿ ದಾನು. ಮಾನವನಾಗಿಯೇ ಅಳಿದಾನು. ಇಂತಹ ಪವಿತ್ರ ಗ್ರಂಥಗಳ ಪಠಣವು ದಿನೇ ದಿನೇ ಕ್ಷೀಣಿಸುತ್ತಿದೆ. ಕಾರಣವೇನೆಂದರೆ–ಇವುಗಳ ಅಧ್ಯಯನದಿಂದ ಪಡೆಯಬಹುದಾದರೆ ಪರಲೋಕದ ಸದ್ಗತಿಯೆ ಹೊರತು ಇಹಕ್ಕೇನೂ ಇವು ಗಳಿಂದ ಪ್ರಯೋಜನವಿಲ್ಲ, ಎಂಬ ಧೋರಣೆಯನ್ನು ಭಾವೀ ಜನಾಂಗವು ರೂಡಿಸಿಕೊಳ್ಳುತ್ತಿದೆ. ಇದು ಸಲ್ಲದು. ಈ ಧೋರಣೆಯು ಮಹಾನ್ ಅನರ್ಥಕಾರಿಯಾದುದು. ಇದರಿಂದ ಯಾರಿಗೂ ಎಲ್ಲಿಯೂ ಶ್ರೇಯಸ್ಸು ದೊರೆಯುವುದಿಲ್ಲ.

ನಮ್ಮ ಸನಾತನ ಧರ್ಮವು ಇಹ–ಪರಗಳೆರಡನ್ನೂ ಸಮಾನ ದೃಷ್ಟಿ ಯಿಂದ ನೋಡುತ್ತಿದೆಯೇ ಹೊರತು ಇಹವೇ ಸಾಕು. ಪರವೇ ಸಾಕು ಎಂದು ಹೇಳುವುದಿಲ್ಲ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುವನು, ಇದೇ ನಮ್ಮ ಸಿದ್ಧಾಂತ. ಯುವ ಜನಾಂಗವನ್ನು ಈ ದೃಷ್ಟಿ ಕೋಣಕ್ಕೆ ತಿರುಗಿಸಬೇಕು. ಪ್ರಾಚೀನ ಸಂಸ್ಕೃತಿಯನ್ನು ನವೀನ ರೀತಿಯಲ್ಲಿ ಬೋಧಿಸಬೇಕು. ಮಧ್ಯಕಾಲದ ಅನರ್ಥಕಾರಿಗಳಾದ ನಿರರ್ಥಕ ನಡವಳಿಕೆಗಳನ್ನು ದೂರೀಕರಿಸಬೇಕು. ದೇಶ ಸೇವೆಯನ್ನು ಮಾಡುವ ಉತ್ಸಾಹದಲ್ಲಿ, ಪ್ರಾಂತ್ಯ, ಗ್ರಾಮುಗಳನ್ನು ಕಡೆಗಣಿಸ ಬಾರದು. ಅಂತೆಯೇ ದೇಶದ ಬೃಹದ್ಭಾವನೆಗೆ ಕತ್ತರಿಯನ್ನು ಹಾಕುವ ಸಂಕುಚಿತ ಪ್ರಾಂತೀಯ ಭಾವನೆಗಳನ್ನು ಬಲಿಕೊಡಬೇಕಷ್ಟೆ. ನಮ್ಮದು ವಿಶ್ವ ಧರ್ಮ, ವೇದಧರ್ಮ, ಸನಾತನ ಧರ್ಮ. ಸರ್ವೇಜನಾಃ ಸುಖಿನೋಭವಂತು ಎನ್ನುವುದೇ ನಮ್ಮ ಧ್ಯೇಯ ವಾಕ್ಯ. ಇದನ್ನು ಎಲ್ಲರಿಗೂ ಅರ್ಥಮಾಡಿಸಿ ಕೊಡಬೇಕು. ಸರ್ವಧರ್ಮ ಸಮನ್ವಯ ಭಾವನೆಯನ್ನು ರೂಢಿಸಿಕೊಳ್ಳಬೇಕು. ಇದರಿಂದಲೇ ಎಲ್ಲರ ಕ್ಷೇಮ, ಸಂತೃಪ್ತಿ, ಸಂತುಷ್ಟಿ. ಮತ್ತು ಸಮನ್ವಯಾತ್

ಪ್ರಸ್ತುತ ಶ್ರೀ ಭಾಗವತ ದರ್ಶನದ ಕಪಿಲ ನಾಮಕ ಪ್ರಥಮ ಸಂಪುಟವು ತಮ್ಮ ಕೈಯ್ಯಿನಲ್ಲಿದೆ. ಯದ್ಯಪಿ ಭಾಗವತಕಾರರು ಸಂಪುಟಾನುಸಾರ ನಾಮ ಗ್ರಹಣವನ್ನು ಮಾಡಿಲ್ಲ. ಯಾವಾಗ ನಾವು ಸಮಗ್ರ ಭಾಗವತವನ್ನು ಐದು ಸಂಪುಟಗಳಲ್ಲಿ ಪ್ರಕಟಿಸಲು ಉದ್ದೇಶಿಸಿದೆವು, ಆವಾಗ ಒಂದೊಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪುಟಕ್ಕೂ ಹೊಂದುವಂತೆ ಒಂದೊಂದು ಹೆಸರನ್ನಿಡೋಣ ಎಂದೆನಿಸಿ,ಪ್ರಥಮ ಸಂಪುಟವನ್ನು "ಕಪಿಲ" ಎಂದು ಕರೆಯಲಾಗಿದೆ. ಕಾರಣ-ಭಾಗವತದಲ್ಲಿ ಆದ್ಯೋಪಾಂತವಾಗಿ ಶ್ರೀಹರಿಯ ವರ್ಣನೆಯಿದೆ. ಕಪಿಲಃ "ಶ್ರೀಹರಿಃ ಸ್ವಯಂ" ಎಂದು ಭಗವಂತನೇ ಹೇಳಿದ್ದಾನೆ. ಭಗವಂತನ ಅಸಂಖ್ಯಾತ ಪವಿತ್ರ ನಾಮಗಳಲ್ಲಿ ಕಪಿಲ ಎನ್ನುವುದೂ ಒಂದು. ನೋಡಿ ಇದರ ವಿಚಿತ್ರತೆಯನ್ನು. ಕ-ಬ್ರಹ್ಮಾ ಪ-ಪಾಲನಕರ್ತಾ ವಿಷ್ಣು, ಲ-ಲಯಕರ್ತಾ ಈಶ್ವರ. ಅಂದರೆ ತ್ರಿಮೂರ್ತ್ಯಾತ್ಮಕನು ಕಪಿಲನು. ಶ್ರೇಷ್ಠ ಜ್ಞಾನಿಗಳು ಸರ್ವ ಶ್ರೇಷ್ಠ ಪರಾಶಕ್ತಿಯನ್ನೇ ತ್ರಿಮೂರ್ತ್ಯಾತ್ಮಕವಾಗಿ ವರ್ಣಿಸುತ್ತಾರೆ ಹಾಗೂ ಯಾವುದನ್ನು, ಯಾವ ರೂಪದಿಂದ ಪೂಜಿಸುವರೋ ಅದು ತ್ರಿಮೂರ್ತ್ಯಾತ್ಮಕವಾದುದು ಎಂದೇ ಭಾವಿಸುತ್ತಾರೆ. ಇದೇ ಭಾರತೀಯ ವೇದಾಂತದ ವೈಶಿಷ್ಟ್ಯವು. ಹೇಗೆ ಒಬ್ಬನೇ ಆದ ಗೃಹಸ್ಥನು ನಾಲ್ಕಾರು ನಾಮರೂಪಗಳಿಂದ ಸಾಂಸಾರಿಕ ಕರ್ತವ್ಯಗಳನ್ನು ನಡೆಸುವನೋ ಹಾಗೆಯೇ ಒಂದೇ ಆದ ಭಗವಚ್ಛಕ್ತಿಯು ಹಲವಾರು ನಾಮ ರೂಪಗಳಿಂದ ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳನ್ನು ನಡೆಸುತ್ತದೆ. ಕಪಿಲನು ತಾಯಿಯಾದ ದೇವಹೂತಿಗೆ ಜ್ಞಾನೋಪದೇಶವನ್ನು ಮಾಡಿದನು, ಸಾಂಖ್ಯಾಚಾರ್ಯನಾದ ಮಹಾತ್ಮನು. ಕಪಿಲಯೋಗವು ಈ ಸಂಪುಟಕ್ಕೆ ತಿಲಕ ಪ್ರಾಯವಾದುದು. ಸ್ತ್ರೀಯು ಜ್ಞಾನಾಧಿಕಾರಿಯಲ್ಲ ಎನ್ನುವವರು ಕಪಿಲ ಯೋಗವನ್ನು ಅಭ್ಯಸಿಸಲಿ. ಈ ಕಾರಣದಿಂದ ಈ ಸಂಪುಟವನ್ನು ಕಪಿಲ ಎಂದು ಕರೆದಿದೆ. ಅದೇ ದೃಷ್ಟಿಯಿಂದ ಸಂಪುಟವನ್ನು ಪರಮಹಂಸ ಪರಿವ್ರಾಜಕಾಚಾರ್ಯ ದತ್ತಾತ್ರೇಯ ಸ್ವರೂಪೀ ವರದ ಪುರಾಧೀಶ ಶ್ರೀ ಶ್ರೀ ಶ್ರೀ ಶ್ರೀಧರ ಸ್ವಾಮಿಗಳ ಚರಣಾರವಿಂದಗಳಲ್ಲಿ ಅರ್ಪಿಸಿದೆ. ಶ್ರೀ ಶ್ರೀಧರಾಶ್ರಮವೊಂದು ಪವಿತ್ರ ಯೋಗ ಭೂಮಿ. ಆಗಾಗ್ಗೆ ನಾವು ಅನುಷ್ಠಾನಕ್ಕೆ ಅಲ್ಲಿಗೆ ಹೋಗುವ ಪದ್ಧತಿಯಿದೆ. ಅವರ ಕರಕಮಲ ಸಂಜಾತರಾದ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮಿಾಜಿಯವರು ಗ್ರಂಥಾರಂಭದಲ್ಲಿಯೆ ಸಂಪೂರ್ಣಾನುಗ್ರಹವನ್ನು ಮಾಡಿದ್ದಾರೆ. "ಯದ್ಯತ್ಕರೋಮಿ ತತ್ಸರ್ವಂ ಪದಯೋರಯಾರ್ಪಯಮಿತೇ"

ಈ ಪ್ರಥಮ ಸಂಪುಟದ ಪಠನವು ನಿಮಗೆ ಸರ್ವ ವಿಧದಿಂದಲೂ ಆನಂದದಾಯಕವಾಗಿರಲಿ, ವಿಚಾರ ಪ್ರಚೋದಕವಾಗಿರಲಿ, ಸುಖ-ದುಃಖಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಸ್ತವಿಕತೆಯನ್ನು ತಿಳಿಸುವುದಾಗಲಿ, ದ್ವಿತೀಯ ಸಂಪುಟದ ಬಿಡುಗಡೆಯನ್ನು ಕಾತುರತೆಯಿಂದ ನೋಡುವಂತಾಗಲಿ.

ಶ್ರೀ ಭಾ.ಪ್ರ.ಸಮಿತಿಯವರು ಈ ಕಾರ್ಯವನ್ನು ನಿರ್ವಹಿಸಲು ನನಗೆ ಒಪ್ಪಿಸಿರುವುದನ್ನು ಭಗವಂತನ ಮಹದನುಗ್ರಹವೆಂದು ತಿಳಿಯುತ್ತೇನೆ. ಒಮ್ಮೊಮ್ಮೆ ನಡೆಯುತ್ತಿದ್ದ ಭಾಗವತ ಚಿಂತನೆಯು ಸದಾ ನಡೆಯುವಂತಾಗಿದೆ. ಸಂಪುಟವು ನಿರ್ದುಷ್ಟವಾಗಿರಬೇಕೆಂಬುವುದು ಸರ್ವರ ಅಪೇಕ್ಷೆಯಾದರೂ ದೋಷಗಳು ಎಷ್ಟು ಪ್ರಯತ್ನಿಸಿದರೂ ನುಸುಳಿಕೊಂಡು ಮನೆ ಕಟ್ಟಿಕೊಳ್ಳುತ್ತವೆ. ನಿರ್ಮೂಲವಾಗುವುದಿಲ್ಲ. ಸಹೃದಯೀ ಪಾಠಕರು ಸಹಕರಿಸಬೇಕು. ಮುಂದಿನ ಸಂಪುಟದಲ್ಲಿ ಅವುಗಳಿರದಂತೆ ಮತ್ತಷ್ಟು ಪ್ರಯತ್ನಗಳನ್ನು ಮಾಡಲಾಗುವುದು. ಈ ಸಂಪುಟವನ್ನು ಓದಿ ಇಲ್ಲಿ ಹೀಗಿರಬೇಕಿತ್ತು ಎಂದು ಅನ್ನಿಸಿದರೆ ದಯವಿಟ್ಟು ಸಂಕೋಚಪಡದೇ ಬರೆದು ತಿಳಿಸಿ. (ಅಕ್ಷರ ತಪ್ಪುಗಳನ್ನು ಬಿಟ್ಟು, ಅದು ನಮಗೇ ಗೊತ್ತಿದೆ) ಇದರಿಂದ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೆ, ತಿದ್ದಿಕೊಳ್ಳುವುದಕ್ಕೆ ಅನುಕೂಲವಾಗುವುದು.

ಭಗವಾನ್ ಶ್ರೀ ಕೃಷ್ಣ ಸ್ವರೂಪಿಗಳೇ ಆಗಿರುವ ತಮ್ಮಗಳಿಗೆಲ್ಲರಿಗೂ ಅನಂತಾನಂತ ವಂದನೆಗಳು.

ತಂಧ್ಯಾತ್ವಾ ಸಗುಣಂ ದೇವಂ
ಶ್ರೀ ಕೃಷ್ಣಂ ಪರಮಂ ಪ್ರಭುಂ
ಶ್ರೀ ಮದ್ಭಾಗವತಂ ವಕ್ಷ್ಯೇ
ಶೃಣ್ವಂತು ವಿಬುಧಾಮುದಾ

ಇತಿ

ಸಜ್ಜನ ವಿಧೇಯ
ಕೆ.ರಾ.ವೆ.ಸುಬ್ರಹ್ಮಣ್ಯ ಶಾಸ್ತ್ರಿ
ಸಂಪಾದಕ
ಶ್ರೀ ಭಾಗವತ ಪ್ರಕಾಶನ ಸಮಿತಿ
127 (ಮೇಲ್ಮನೆ) 1ನೇ ಬ್ಲಾಕ್
ಜಯನಗರ ಪೂರ್ವ ಬೆಂಗಳೂರು-11

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕೀಯ

ಶತ ಶತಮಾನಗಳ ರಾಜಕೀಯ ದಾಸ್ಯ ಹರಿದು ರಾಷ್ಟ್ರವು ಸ್ವತಂತ್ರವಗಿ ಮೂವತ್ತೆಂಟು ವರ್ಷಗಳು ಸಂದಿವೆ. ಸಂಪನ್ಮೂಲಗಳ ಕ್ರೋಢೀಕರಣದಿಂದ ಭಾರತವು ಆರ್ಥಿಕವಾಗಿ ಅಭಿವೃದ್ಧಿಯತ್ತ ಸಾಗುತ್ತಿದೆ. ವ್ಯಕ್ತಿಯ ಜೀವನ ಮಟ್ಟವು ಸುಧಾರಿಸುತ್ತಿದೆ. ನಿಜ–ಆದರೆ ಸ್ಥಾನ–ಸ್ಥಾನಗಳಲ್ಲಿ ಧರ್ಮಾಂಧತೆ, ಭಾಷಾಂಧತೆಯಿಂದಾಗಿ ನಡೆಯುತ್ತಿರುವ ಗಲಭೆಗಳು, ಕೊಲೆಗಳು, ಪ್ರತ್ಯೇಕ ಧರ್ಮ–ಜಾತಿ–ಭಾಷೆಗಳಿಗಾಗಿ ಪ್ರತ್ಯೇಕ ರಾಷ್ಟ್ರ ಬೇಡಿಕೆಗಳು. ಅದಕ್ಕಾಗಿ ನಡೆಯುತ್ತಿರುವ ರಾಜಕೀಯ ಚಳುವಳಿಗಳು, ಗಲಭೆಗಳು, ಕೊಲೆಗಳು,ಸೈನಿಕ ಕಾರ್ಯಾಚಣೆಗಳು, ಸೇಡಿಗಾಗಿ ರಾಷ್ಟ್ರನಾಯಕರುಗಳ ಕೊಲೆಗಳು, ಇವುಗಳಿಂದಾಗಿ ಮತ್ತೆ ರಾಷ್ಟ್ರವು ರಾಜಕೀಯ ಅಸ್ಥಿರತೆಯನ್ನು ಎದುರಿಸುವ ಸನ್ನಿವೇಶದಲ್ಲಿದೆ. ವ್ಯಕ್ತಿ–ವ್ಯಕ್ತಿಯ ಮೇಲೆ ಕ್ರೌರ್ಯ ಅತ್ಯಾಚಾರ ದಬ್ಬಾಳಿಕೆಗಳು ನಡೆಯುತ್ತಿದ್ದು ಭೀಕರ ಬರ್ಬರತೆ ತಾಂಡವವಾಡುತ್ತಿದೆ. ಇದರ ಪ್ರಭಾವದಿಂದ ವ್ಯಕ್ತಿಗತ ಜೀವನವು ಅತಿದುರ್ಭರ, ಅಸಹನೀಯ ಮತ್ತು ದಾರುಣವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ನಾವು ವಿದೇಶಿ ಆಕ್ರಮಣವನ್ನು ಎದುರಿಸಬೇಕಾಗಿ ಬಂದರೆ ಆಶ್ಚರ್ಯವೇನಲ್ಲ. ನಮ್ಮಲ್ಲಿ ನೀಡುತ್ತಿರುವ ಸಮಾಜ ಶಿಕ್ಷಣದ ಕೊರತೆಯಿಂದಾಗಿ ಸರಿಯಾದ ವ್ಯಕ್ತಿತ್ವದ ನಿರ್ಮಾಣವಾಗದಿರುವುದೇ ಈ ಪರಿಸ್ಥಿತಿಗೆ ಕಾರಣವು.

ಸ್ವಾಮಿ ವಿವೇಕಾನಂದರು ಹೇಳಿರುವಂತೆ ಹಿಂದೂ ವೇದಾಂತವು ಒಂದು ಬೃಹತ್ ಆಲದ ಮರದಂತೆ. ಪ್ರಪಂಚದ ಎಲ್ಲಾ ವೇದಾಂತಗಳು ಕೇವಲ ಎಲೆ, ರೆಂಬೆ, ಕೊಂಬೆಗಳಂತೆ. ಪ್ರಪಂಚದ ಎಲ್ಲಾ ವೇದಾಂತಗಳನ್ನೂ ಒಳಗೊಂಡು ಸರ್ವ ಸಮನ್ವಯ ಮಾಡಿ, ಮನುಷ್ಯನಿಗೆ ಮನುಷ್ಯನಾಗಿಯೇ ಬದುಕುವ ಮಾರ್ಗವನ್ನು ಸೂಚಿಸುವ. ಅನಾರ್ಯರನ್ನೂ ಆರ್ಯರನ್ನಾಗಿಸುವ ಏಕೈಕ ಮಾರ್ಗ ಭಾರತೀಯ ವೇದಾಂತದ್ದಾಗಿದೆ. ಆದರಿಂದ ಹಿಂದೂ ಧರ್ಮವು ಒಂದು ಜಾತಿ, ಕುಲ, ಪಂಥ ಅಥವಾ ಕೇವಲ ಧರ್ಮವಾಗಿರದೇ ಅದೊಂದು ಜೀವನ ಕಲೆ, ಜೀವನ ಮಾರ್ಗವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಹ ಅಮೌಲ್ಯ ಗುಣಗಳ ಝುರಿಯಾಗಿರುವ ಹಿಂದೂ ಧರ್ಮದ ಸಾರಸರ್ವಸ್ವವೂ ಅಡಗಿರುವುದು ವೇದಾಂತದಲ್ಲಿ. ವೇದೋಪನಿಷತ್ ಪುರಾಣೇತಿಹಾಸಾದಿ ಮಹಾ ಗ್ರಂಥಗಳಲ್ಲಿ ಸಾಮಾನ್ಯ ಜನತೆಯು ಇವುಗಳ ಶಿಕ್ಷಣವನ್ನು ಹೊಂದಿ ವ್ಯಕ್ತಿತ್ವದ ವಿಕಾಸವನ್ನು ಪಡೆಯಬೇಕು. ಹಾಗಾದಾಗ ರಾಷ್ಟ್ರದ ಸಮಸ್ಯೆಯು ನಿವಾರಣೆಯಾವುದು.

ಸಂಸ್ಕೃತ ಭಾಷೆಯಲ್ಲಿರುವ ಮೌಳಿಕ ಧಾರ್ಮಿಕ ವೇದಾಂತ ಗ್ರಂಥಗಳನ್ನು ಸಮಾಲೋಚನಾತ್ಮಕ ರೀತ್ಯಾ ಕನ್ನಡದಲ್ಲಿ ಮುದ್ರಿಸಿ ಯೋಗ್ಯ ಬೆಲೆಗೆ ವಿತರಣೆ ಮಾಡಬೇಕೆಂಬ ಉದ್ದೇಶದಿಂದ ಶ್ರೀಭಾಗವತ ಪ್ರಕಾಶನ ಸಮಿತಿಯು ಕಾರ್ಯೋನ್ಮುಖವಾಗಿದೆ.

ಭಾರತೀಯ ಸಂಸ್ಕೃತಿ ಪರಂಪರೆಯನ್ನೂ, ವೇದಾಂತವನ್ನೂ, ಪ್ರಚುರಪಡಿಸಿ, ಸಧರ್ಮ, ಸಚ್ಚಾರಿತ್ರ್ಯ, ಸುನೀತಿ, ಸದಾಚಾರ, ಸುವಿಚಾರಗಳನ್ನು ಶ್ರೀ ಸಾಮಾನ್ಯನ ಅಂತಃಕರಣದಲ್ಲಿ ಬಿತ್ತಿ, ವ್ಯಕ್ತಿಯ ವ್ಯಕ್ತಿತ್ವವನ್ನು ತಿದ್ದಿ ಬೆಳೆಸಿ, ಪೋಷಿಸಿ, ಸತ್ಪ್ರಜೆಯಾಗುವಂತೆ ಪ್ರೇರಣೆ ನೀಡುವ ಈ ಮಹತ್ಕಾರ್ಯದಲ್ಲಿ ಶ್ರೀ ಭಾಗವತ ಪ್ರಕಾಶನ ಸಮಿತಿಯು ಪೋಷಕ-ಮಹಾ ಪೋಷಕರ ಧರ್ಮಾಭಿಮಾನಿಗಳಾದ ಆಸ್ತಿಕ ಮಹಾಶಯರ ಪ್ರೋತ್ಸಾಹ, ಸಹಾಯ, ಸಹಕಾರ, ಕೃಪಾಶೀರ್ವಾದದಿಂದ, ಶ್ರೀ ಭಾಗವತ ದರ್ಶನದ "ಕಪಿಲ" ನಾಮಕ ಪ್ರಥಮ ಸಂಪುಟದ ಪ್ರಕಾಶನವನ್ನು ನಡೆಸುತ್ತಿದೆ.

ತಾಯಿ ಭಾರತಾಂಬೆಯ ದಿವ್ಯಮಂದಿರಲ್ಲಿ, ಕನ್ನಡ ರಾಜರಾಜೇಶ್ವರಿ ಶ್ರೀ ಭುವನೇಷ್ವರಿಯ ಅಡಿದಾವರೆಗಳಲ್ಲಿ ಪ್ರಜ್ವಲಿಸಿರುವ, ಭಕ್ತಿ-ಜ್ಞಾನ ಯೋಗಾತ್ಮಕವಾದ ಈ ಭಗವಜ್ಜ್ಯೋತಿಗೆ ಎಲ್ಲರ ಒಲವು, ನೆರವು, ಕೃಪಾಶೀರ್ವಾದಗಳು ತೈಲಧಾರೆಯಂತೆ ಸತತ ಹರಿದು ಬರಲಿ. ನಮ್ಮ ಮುಂದಿನ ಬೃಹತ್ಕಾರ್ಯವು ಎಡರು ತೊಡರುಗಳಿಲ್ಲದೇ ನಡೆಯುವಂತಾಗಲೆಂಬುದೇ ನಮ್ಮ ಹೃದಯಾಂತರಾಳದ ಹಾರೈಕೆಯಾಗಿದೆ.

ಆರ್. ನಾಗರಾಜ್
ಕಾರ್ಯದರ್ಶಿ

15-11-84 ಶ್ರೀ ಭಾ. ಪ್ರ. ಸಮಿತಿ

Sri Vidyabharathi Book Centre, Sringeri.

CC-O. In Public Domain. Digitized by eGangotri

ಪುಸ್ತಕವನ್ನು ಕುರಿತು

ಶ್ರೀ ಭಾಗವತ ಪ್ರಕಾಶನ ಸಮಿತಿಯ ಚೊಚ್ಚಲ ಪ್ರಕಾಶನವಾದ, ಶ್ರೀ ಭಾಗವತ ದರ್ಶನದ ಕಪಿಲ ನಾಮಕ ಪ್ರಥಮ ಸಂಪುಟವು ಐದು ಸಂಪುಟಗಳಲ್ಲಿ ಹೊರಬರಲಿರುವ ಶ್ರೀ ಭಾಗವತ ದರ್ಶನದ ಮೊದಲನೇ ಸಂಪುಟವಾಗಿದೆ. ಯದ್ಯಪಿ ಕಳೆದ ಕೃಷ್ಣ ಜಯಂತಿಯಂದೇ ಬಿಡುಗಡೆ ಮಾಡಬೇಕೆಂದು ನಿಶ್ಚಯಿಸಿತ್ತಾದರೂ, ಮುದ್ರಕರ ಸಹಜವಾದ ಧೋರಣೆಯಿಂದ ವಿಳಂಬವಾದುದಕ್ಕೆ ಪೋಷಕ–ಮಹಾ ಪೋಷಕರಲ್ಲಿ ಕ್ಷಮೆಯನ್ನು ಯಾಚಿಸುತ್ತಾ, ಗ್ರಂಥದ ಬಗ್ಗೆ ಒಂದೆರಡು ವಿಚಾರಗಳನ್ನು ತಮ್ಮಗಳ ಮುಂದಿಡಲು ಬಯಸುತ್ತೇನೆ.

ಶ್ರೀಮದ್ಭಾಗವತವು ಅಷ್ಟಾದಶ ಪುರಾಣಗಳಲ್ಲಿ ಒಂದಾಗಿದೆ ಎಂಬುವುದು ತಮಗೆಲ್ಲರಿಗೂ ತಿಳಿದಿದೆ. ಹಾಗೂ "ವಿದ್ಯಾವತಾಂ ಭಾಗವತೇ ಪರೀಕ್ಷಾ" ಎಂಬುವುದನ್ನೂ ತಾವು ಕೇಳಿರುವಿರಿ. ಇದು ಭಾರತೀಯ ವೇದಾಂತದ ಸಾರ ಸರ್ವಸ್ವವಾಗಿದೆ. ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ, ಭಕ್ತಿಯೋಗಗಳನ್ನು ಪ್ರತಿಪಾದಿಸಿ ವಿಶೇಷತಃ ಜನಸಾಮಾನ್ಯರಿಗೆ ಸುಲಭವಾಗಿರುವ ಭಕ್ತಿಯನ್ನೇ ಪರಮೋಚ್ಚವೆಂದು ನಿರ್ಧರಿಸಿ ಪ್ರತಿಪಾದಿಸಿದೆ. ಮಹಾನ್ ವೇದಾಂತ ಮೌಳಿಕ ಗ್ರಂಥವಾಗಿದೆ. ಭಾಗವತವು ಭಕ್ತಿಯ ಭಂಡಾರ, ಜ್ಞಾನಕರ್ಮಗಳ ಸಮನ್ವಯ, ವೇದಾಂತದ ಗಣಿ, "ನಹಿ ಜ್ಞಾನೇನ ಸದೃಶಂ" ಎನ್ನುವುದರ ಜೊತೆಗೆ "ಭಕ್ತಿರೇವ ಗರೀಯಸೀ" ಎಂದು ಉದ್ಘೋಷಿಸುವ ಗ್ರಂಥರತ್ನವಾಗಿದೆ. ಶ್ರೀ ಭಾಗವತ ದರ್ಶನದಿಂದ ಮಾನವನು ದೇವನಾಗಿ ಸ್ವಾತ್ಮನು ಪರಮಾತ್ಮನೇ ಎಂದು ತಿಳಿದು ಇಹಪರಗಳೆರಡರಲ್ಲಿಯೂ ಸುಖಶಾಂತಿಗಳನ್ನು ಕಾಣುತ್ತಾನೆ. ಹಾಗೂ ಹುಟ್ಟು ಸಾವುಗಳ ಬಂಧನದಿಂದ ಪಾರಾಗಿ ಪರಮ ಕಲ್ಯಾಣ ಭಾಗಿಯಾಗುತ್ತಾನೆ. ಹೀಗೆ ವೇದೋಪನಿಷತ್ ಪ್ರತಿಪಾದಿತ ಶ್ರೇಷ್ಠ ವಿಚಾರಗಳನ್ನು ವಿಶೇಷತಃ ಶ್ರೀಕೃಷ್ಣನ ಜನ್ಮದಿಂದ ನಿರ್ಯಾಣದವರೆಗಿನ ಕಥಾ ವಸ್ತುವಿನಲ್ಲಿ ಅಡಕ ಮಾಡಿ ವೇದೋಪನಿಷತ್ತುಗಳನ್ನು ಅಧ್ಯಯನ ಮಾಡದವ

Sri Vidyabharathi Book Centre, Sringeri

CC-O. In Public Domain. Digitized by eGangotri

ರಿಗೂ ಭಕ್ತಿ ಜ್ಞಾನ ವೈರಾಗ್ಯಗಳು ಸುಲಭವಾಗಿ ಸಿದ್ಧಿಸಲಿ ಎಂದು ಮಹರ್ಷಿಗಳು ಈ ಗ್ರಂಥವನ್ನು ಕೊಡುಗೆಯಾಗಿ ನೀಡಿದ್ದಾರೆ.

ಈ ಗ್ರಂಥದ ಸಂಪಾದಕರಾಗಿರುವ ವೇ.ಬ್ರ.ಶ್ರೀ ಕೆ.ರಾ.ವೆ.ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಸ್ಕೃತ-ಹಿಂದಿ ಭಾಷೆಗಳಲ್ಲಿ ಪಂಡಿತರಾಗಿದ್ದು ಕಳೆದ 15-20 ವರ್ಷಗಳಿಂದಲೂ ಶ್ರೀಮದ್ಭಾಗವತ, ಶ್ರೀಮದ್ದೇವೀಭಾಗವತ, ಶ್ರೀ ದತ್ತ ಮಹಿಮೆ, ಉಪನಿಷದ್ವ್ಯಾಖ್ಯಾನ ಇತ್ಯಾದಿಗಳನ್ನು ತಿಂಗಳುಗಟ್ಟಲೆ ನೂರಾರು ಕಡೆ ಪ್ರವಚನಗಳನ್ನು ನಡೆಸಿ ಜನರ ಪ್ರೀತ್ಯಾದರಗಳಿಗೆ ಪಾತ್ರರಾಗಿರುತ್ತಾರೆ. ಭಾಗವತ ಧರ್ಮದ ಉಗಮ ಸ್ಥಾನವಾದ ಶ್ರೀಕ್ಷೇತ್ರ ಮಥುರಾ ವೃಂದಾವನದಲ್ಲಿರುವ, ಭಾಗವತ ತತ್ವ ಪ್ರತಿಪಾದನಾಚಾರ್ಯರಾದ, ಪರಮ ಪೂಜ್ಯ ಶ್ರೀಶ್ರೀ ಅಖಂಡಾನಂದ ಸರಸ್ವತೀ ಮಹಾರಾಜರ ಸಂಪೂರ್ಣ ಕೃಪಾಶೀರ್ವಾದಗಳಿಗೆ ಪಾತ್ರರಾಗಿರುತ್ತಾರೆ.

ಮೊದಲಿನಿಂದಲೂ ಶ್ರೀ ದೇವೀ ದತ್ತಾತ್ರೇಯರ ಉಪಾಸಕರೂ, ವೈದಿಕ ಕ್ರಿಯಾಸಕ್ತರೂ, ಶ್ರೋತ್ರಿಯರೂ ಆದ ಇವರು 10-15 ವರ್ಷಗಳಿಂದ ಯಾವುದೇ ಆಶೆ ಆಕಾಂಕ್ಷೆಗಳಿಲ್ಲದೇ ತಪಸ್ಸಿನ ರೂಪದಲ್ಲಿ ಗೀತೋಪನಿಷದ್ಭಾಗವತಾದಿಗಳನ್ನು ಕನ್ನಡದಲ್ಲಿ ವಿಮರ್ಶಾತ್ಮಕವಾಗಿ ಬರೆದು ಹಸ್ತಪ್ರತಿಯನ್ನು ಸಿದ್ಧಪಡಿಸಿದ್ದಾರೆ. ಇವರ ಬರವಣಿಗೆಯ ವಿಷಯದಲ್ಲಿ ಡಾ॥ಕೃಷ್ಣಮೂರ್ತಿಯಂತಹ ವಿಮರ್ಶಕರು ನೋಡಿ ಮೆಚ್ಚುಗೆಯನ್ನು ಸೂಚಿಸಿದ್ದಾರೆಂದ ಮೇಲೆ ನಾನಿನ್ನು ವಿಶೇಷ ಹೇಳಲು ಇಷ್ಟ ಪಡುವುದಿಲ್ಲ.

ನಮ್ಮ ಪ್ರಾರ್ಥನೆಯ ಮೇರೆಗೆ ಇವರು ನಾವು ಗ್ರಂಥವನ್ನು ಪ್ರಕಟಿಸಲು ಒಪ್ಪಿ ಈ ಕಾರ್ಯಕ್ಕಾಗಿ ತಮ್ಮ ಸಂಪೂರ್ಣ ವೇಳೆಯನ್ನು ಕೊಟ್ಟು ಇದೊಂದು ಶ್ರೇಷ್ಠವಾದ ಭಗವತ್ಸೇವೆಯೆಂದೇ ಕಾರ್ಯನಿರತರಾಗಿದ್ದಾರೆ. ಮುದ್ರಣದ ಯಾವತ್ ಜವಾಬ್ದಾರಿಯನ್ನೂ ಹೊತ್ತುಕೊಂಡು, ಪುಸ್ತಕವು ಈ ರೂಪಕ್ಕೆ ಬರಲು ಸಂಪೂರ್ಣ ಶ್ರಮಿಸಿದ್ದಾರೆ. ಅವರ ಈ ಮಹತ್ಕಾರ್ಯವನ್ನು ಸಮಿತಿಯು ಎಂದೆಂದೂ ಮರೆಯಲು ಸಾಧ್ಯವಿಲ್ಲ. ಸಂಪಾದಕರ ಈ ಸೇವೋಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರಗಳು ಮುಂದಿನ ಎಲ್ಲಾ ಪ್ರಕಟಣೆಗಳಿಗೂ ಇತ್ಯೋಪ್ಯತಿಶಯವಾಗಿ ದೊರಕಲಿ ಎಂದು ಸಮಿತಿಯು ಸಂಪಾದಕರಲ್ಲಿ ಪ್ರಾರ್ಥಿಸಿಕೊಳ್ಳುತ್ತದೆ. ಹಾಗೂ ಅಂತಹ ಶಕ್ತಿಯು ಅವರಿಗೆ ಭಗವತ್ಕೃಪೆಯಿಂದ ದೊರಕಲಿ ಎಂದು ಪ್ರಾರ್ಥಿಸುತ್ತದೆ.

ಹೂವಿನ ಜೊತೆ ನಾರೂ ದೇವಶಿರವನ್ನು ಮುಟ್ಟಿದಂತೆ ಸಂಪಾದಕರು ಮಾಡಿರುವ ಮಹತ್ಕಾರ್ಯದಲ್ಲಿ ನಾವು ಸಮಿತಿಯವರು ಗ್ರಂಥ ಪ್ರಕಟಣೆಯ ಯತ್ಕಿಂಚಿತ್ ಕಾರ್ಯಮಾಡಿ, ನಾವೂ ಪುಣ್ಯಭಾಗಿಗಳಾಗುತ್ತೇವೆ ಎಂದು ನಿವೇದಿಸಿಕೊಳ್ಳುತ್ತಾ ಅನಂತ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀಭಾಗವತ ದರ್ಶನದ ಕಪಿಲ ನಾಮಕ ಈ ಸಂಪುಟವು, ಪರಮಹಂಸ ಪರಿವ್ರಾಜಕಾಚಾರ್ಯ, ಶ್ರೀ ಶ್ರೀ ಶ್ರೀಧರ ಸ್ವಾಮಿಗಳ ಚರಣಾರವಿಂದಗಳಲ್ಲಿ ಸಮರ್ಪಿಸಲ್ಪಟ್ಟಿದೆ. ಈ ಸಮರ್ಪಣೆಯನ್ನು ಅಂಗೀಕರಿಸಿ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮೀಜೀ ಶ್ರೀಧರಾಶ್ರಮ ಇವರು ಅಮೋಘ ಆಶೀರ್ವಚನಗಳನ್ನು ನೀಡಿ ಅನುಗ್ರಹಿಸಿದ್ದಾರೆ. ಅವರಿಗೆ ಸಮಿತಿಯವರು ಅನಂತ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸುತ್ತಾರೆ.

ಕರ್ನಾಟಕ ವಿಶ್ವವಿದ್ಯಾನಿಲಯದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರೂ, ಸುಪ್ರಸಿದ್ಧ ವಿದ್ವಾಂಸರೂ, ಹೆಸರಾಂತ ಗ್ರಂಥ ವಿಮರ್ಶಕರೂ ಆಗಿರುವ ಡಾ॥ಕೆ.ಕೃಷ್ಣಮೂರ್ತಿಯವರು ಗ್ರಂಥಕ್ಕೆ ಕಲಶ ಪ್ರಾಯವಾದ ಮುನ್ನುಡಿಯನ್ನು ಬರೆದು ಆಶೀರ್ವದಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಸಮಿತಿಯು ಶ್ರೀಯುತರಿಗೆ ಅನಂತಾನಂತ ಕೃತಜ್ಞತಾ ಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

ಸಮಿತಿಯ ಅಧ್ಯಕ್ಷರಾದ, ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಸಚಿವರಾದ, ಜನಪ್ರಿಯ ಶ್ರೀ ವಿ.ಎಸ್.ಕೃಷ್ಣಯ್ಯರ್ ಅವರು ತಮ್ಮ ಅವಿರತ ಕಾರ್ಯಕ್ರಮಗಳ ಮಧ್ಯೆಯೂ, ನಮ್ಮ ಕಾರ್ಯದ ಮುನ್ನಡೆಯನ್ನು ಕೇಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲ ಕಾಲಕ್ಕೆ ನಮಗೆ ಉತ್ತಮ ಮಾರ್ಗದರ್ಶನವನ್ನು ಕೊಟ್ಟು ಬಹಳ ಮಟ್ಟಿಗೆ ಉಪಕರಿಸಿದ್ದಾರೆ. ಮುಂದೆಯೂ ಇವರ ಮಾರ್ಗದರ್ಶನವನ್ನು ಪ್ರಾರ್ಥಿಸುತ್ತಾ ಅನಂತ ವಂದನೆಗಳನ್ನು ಸಮರ್ಪಿಸುತ್ತೇನೆ.

ಸಮಿತಿಯ ಉಪಾಧ್ಯಕ್ಷರಾದ ನಿವೃತ್ತ ಸೆಷನ್ಸ್ ನ್ಯಾಯಾಧೀಶರು, ಶ್ರೀ ಬಿ.ಗೋಪಾಲಯ್ಯನವರು ಮತ್ತು ಅವರ ಕುಟುಂಬ ಶ್ರೀಮತಿ ಸಾವಿತ್ರಮ್ಮ ಗೋಪಾಲಯ್ಯನವರು ಮಾಡಿರುವ ಉಪಕಾರವು ಚಿರಸ್ಮರಣೀಯವಾದುದು. ಸಮಿತಿಯ ಸಮಾವೇಶಗಳು ನಡೆಯಲು ಸ್ಥಳವನ್ನು ಕೊಟ್ಟು, ಆತಿಥ್ಯವನ್ನು ನೀಡಿ,ಸೂಕ್ತ ಮಾರ್ಗದರ್ಶನ ನೀಡಿ, ಮುಂದೆ ಸಾರ್ವಜನಿಕರಿಂದ ಬರಬಹುದಾದ ಕೆಟ್ಟ ಹೆಸರಿನ ಬಗ್ಗೆ ಸ್ಪಷ್ಟವಾಗಿ ಎಚ್ಚರಿಕೆಯನ್ನು ನೀಡಿ ಸಮಿತಿಯು ಸರಿಯಾದ ರೀತಿಯಲ್ಲಿ ನಡೆಯುವಂತೆ ಪ್ರೇರಣೆ ನೀಡಿದ್ದಾರೆ. ಇವರುಗಳಿಗೆ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಎರಡು ಮೂರು ತಿಂಗಳುಗಳ ಹಿಂದೆಯೆ ಬಿಡುಗಡೆ ಮಾಡಬೇಕೆಂದಿದ್ದ ಈ ಗ್ರಂಥದ ಮುದ್ರಣವನ್ನು ಯಥಾಸಾವಕಾಶವಾಗಿ ನಡೆಸಿಕೊಟ್ಟಿರುವ ನಿರ್ಮಲಾ ಪ್ರಿಂಟರ್ಸ್ ಚಾಮರಾಜಪೇಟೆ, ರಾಘವೇಂದ್ರ ಪ್ರಿಂಟರ್ಸ್ ತ್ಯಾಗರಾಜನಗರ ಇವರುಗಳಿಗೆ ಹಾಗೂ ಬೈಂಡಿಂಗ್ ಮತ್ತು ಸ್ವಲ್ಪ ಭಾಗ ಮುದ್ರಣವನ್ನೂ ನಡೆಸಿಕೊಟ್ಟಿರುವ ಭರಣಿ ಪ್ರಿಂಟರ್ಸ್, ಸೌತ್ಎಂಡ್ ರಸ್ತೆ ಅವರಿಗೂ ವಂದನೆಗಳನ್ನು ಸಮರ್ಪಿಸುತ್ತದೆ, ಮತ್ತು ರಕ್ಷಾಪುಟದ ಹಾಗೂ ಒಳಪುಟದ ಸ್ಥಿರಚಿತ್ರದ ಅಚ್ಚುಗಳನ್ನು ಸುಂದರವಾಗಿ ನಿರ್ಮಿಸಿಕೊಟ್ಟಿರುವ ಮಂಜುನಾಥ ಪ್ರೋಸೆಸ್ ಅವರಿಗೂ ಸಮಿತಿಯು ಆಭಾರಿಯಾಗಿದೆ,

ಗ್ರಂಥದ ಪ್ರಚಾರ ಕಾರ್ಯದಲ್ಲಿ ಸಹಕರಿಸಿದ ಭಾರತದರ್ಶನದ ವ್ಯವಸ್ಥಾಪಕರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಈ ಗ್ರಂಥ ಪ್ರಕಟಣೆಗೆ ಹಲವಾರು ವಿಧದಲ್ಲಿ ನೆರವಾದ ಎಲ್ಲಾ ಪೋಷಕ-ಮಹಾಪೋಷಕ ಅಭಿಮಾನಿಗಳಿಗೂ ಸಮಿತಿಯು ಚಿರಋಣಿಯಾಗಿರುತ್ತದೆ.

ಆರ್. ನಾಗರಾಜ್
ಕಾರ್ಯದರ್ಶಿ

15-11-84 ಶ್ರೀ ಭಾಗವತ ಪ್ರಕಾಶನ ಸಮಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಳಾಸ
ಡಾ|| ಕೆ. ಕೃಷ್ಣಮೂರ್ತಿ
ದತ್ತನಿವಾಸ, ಸಪ್ತಾಪುರ
ಧಾರವಾಡ–೧

ಮುನ್ನುಡಿ

ಒಂದು ಅಪರಿಚಿತ ಗ್ರಂಥಕ್ಕೆ ಮುನ್ನುಡಿ ಬೇಕೇನೊ; ಆದರೆ ಶ್ರೀಮದ್ಭಾಗವತದಂತಹ ಸುಪ್ರಸಿದ್ಧ ಪ್ರಾಸಾದಿಕ ಉದ್ಗ್ರಂಥಕ್ಕೆ ಮುನ್ನುಡಿ ಒಂದು ಮುಂಭಾರ.

ವಿಷಯ ಪ್ರಸಿದ್ಧಿಯಿಂದ ನಮ್ಮ ಇಡೀ ಭಾರತದೇಶದ ಸಂಸ್ಕೃತಿಯಲ್ಲಿ ಯಾವುದಾದರೂ ಒಂದು ಗ್ರಂಥಕ್ಕೆ ಅಗ್ರಮಾನ್ಯತೆ ಕನಿಷ್ಠ ಈ ಒಂದು ಸಾವಿರ ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಮಹಾಮಹಾ ಸಾಧು ಸಂತರ, ಪಂಡಿತ ಶ್ರೇಷ್ಠರ, ಕವಿ–ಗಮಕಿಗಳ, ವಾದಿ–ವಾಗ್ಮಿಗಳ, ಗಾನ–ಕೀರ್ತನಕಾರರ ಪರಂಪರೆಯಲ್ಲಿ ಪ್ರಾಪ್ತವಾಗಿದ್ದರೆ ಅದು ಶ್ರೀಮದ್ಭಾಗವತಕ್ಕೇ ಸರಿ. ಅದನ್ನು ಪುರಾಣವೆಂದು ಪೂಜಿಸಿ ಪುರಸ್ಕರಿಸಿದ ಆಚಾರ್ಯರುಂಟು. ಕಾವ್ಯರಸದ ಸಾಗರವೆಂದು ಸವಿದು ನಲಿದ ಸಹೃದಯರುಂಟು. ವೇದಾಂತದ ಪರತತ್ವದ ಸರಳ ಸರೋವರವೆಂದು ಏಕಾಗ್ರಬುದ್ಧಿಯಿಂದ ಟೀಕೆ ಟಿಪ್ಪಣಿ ಬರೆದವರುಂಟು. ಭಕ್ತಿಯುಗದ ಪರಮೋನ್ನತ ಶಿಖರ ಪ್ರಾಯರೆನಿಸಿದ ಮೇಧಾವಿಗಳು, ದ್ರಾವಿಡ ದೇಶದ ಆಳ್ವಾರುಗಳು ಮತ್ತು ಬಂಗಾಳದ ಚೈತನ್ಯ ಮಹಾಪ್ರಭುಗಳಂತಹ ಮಹಾನುಭಾವರು ಭಕ್ತಿಯೋಗದ ಸಾರಸರ್ವಸ್ವವನ್ನೂ ಇಲ್ಲಿಯೇ ಅನುಭವಿಸಿದ್ದುಂಟು. ಜಾತಿ–ಪಂಥಗಳ ಕುಲಗೋತ್ರಗಳ, ಸ್ತ್ರೀ–ಪುರುಷಾದಿಗಳ ಉಚ್ಚ ನೀಚ ಭಾವಕ್ಕೆ ತಿಲಾಂಜಲಿಯಿತ್ತು ಮಾನವ ಕುಲವೆಲ್ಲ ಒಂದೇ ಎಂಬ ವಿಶ್ವವಿಶಾಲ ಮನೋಧರ್ಮ ಇಲ್ಲಿಯ ವಿಶ್ವತೋಮುಖ ಧರ್ಮದ ಮಾರ್ಮಿಕ ಮನೋಹರ ವಿವರಣೆಯ ಮೂಲಶ್ರುತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಗವತವು ಆಸ್ತಿಕರಿಗೆ ಅದ್ವಿತೀಯವಾದ ಧರ್ಮಕಥೆಯು. ಜೀವನದಲ್ಲಿ ಪ್ರಾಣಿ ಧರ್ಮಕ್ಕಿಂತ ಹೆಚ್ಚಿನ ಸಾರ್ಥಕ್ಯವನ್ನು ಸಾಧಿಸಬೇಕೆನ್ನುವ, ಭಗವಂತನ ಕೃಪೆಯಿಂದ ಸಂಸಾರವನ್ನು ದಾಟಿ ಪುನರ್ಜನ್ಮಗಳ ಚಕ್ರದಿಂದ ಪಾರಾಗಬೇಕೆಂದು ಹಂಬಲಿಸುವ ಮೋಕ್ಷಾಪೇಕ್ಷಿಗಳಿಗೆ ಇದೊಂದು ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ.

ವಿಶ್ವದ ಯಾವ ಧರ್ಮಗಳಲ್ಲೂ ಭಗವಂತನು ಮನುಷ್ಯರ ನಡುವೆ ಮನುಷ್ಯನಾಗಿ ಅವತಾರ ಮಾಡಿ ಬರುವನೆಂಬ ಕಲ್ಪನೆಯಿಲ್ಲ. ಭಗವದ್ಗೀತೆಯಲ್ಲಿ ಇದರ ಸ್ಪಷ್ಟ ಘೋಷಣೆಯಿದೆ. ದೇವರ ಅವತಾರಗಳ ಸಂಖ್ಯೆಯನ್ನು ಒಂದೊಂದು ಪುರಾಣ ಒಂದೊಂದು ಬಗೆಯಾಗಿ ಹೇಳಬಹುದು. ಕೆಲವು ಹತ್ತೆನ್ನಬಹುದು. ಭಾಗವತವು ಇಪ್ಪತ್ತನಾಲ್ಕು ಎನ್ನಬಹುದು. ಮತ್ತೆ ಕೆಲವರು ಲೋಕೋತ್ತರ ಮಹಿಮೆ ಕಾಣ ಬರುವಂತಹ ಮಹಾತ್ಮರನ್ನೆಲ್ಲಾ ಅವತಾರವೆಂದೇ ತಿಳಿಯಬಹುದು. ಆದರೆ ಲೋಕೋತ್ತರ ವಿಭೂತಿ ಪುರುಷರು ಬೇರೆ. ಪರಮಾತ್ಮನ ಪೂರ್ಣಾವತಾರವು ಬೇರೆಯೇ, "ಆತ್ಮಾನಂ ಮಾನುಷಂಮನ್ಯೇ ಎಂದು ಹೇಳಿಕೊಳ್ಳುವ ಶ್ರೀರಾಮನು ಕೂಡ ಪೂರ್ಣಾವತಾರವಲ್ಲವೇನೊ ಎನ್ನುವವರು ಇದ್ದಾರು. ಆದರೆ ಕೃಷ್ಣಸ್ತು ಭಗವಾನ್ ಸ್ವಯಂ ಎಂಬುವುದು ನಿರ್ವಿವಾದ ವಾದ, ಸರ್ವ ಸಮ್ಮತವಾದ ಮೌಳಿಕ ಪ್ರಮೇಯ. ಮಹಾಭಾರತದಲ್ಲಿ ಬಾಲಲೀಲೆ ಮುಗಿದ ಬಳಿಕವೇ ಶ್ರೀ ಕೃಷ್ಣನ ಪ್ರವೇಶ. ಅವನ ನಿರ್ಯಾಣದ ನಂತರ ಅರ್ಜುನನು ನಿಸ್ಸತ್ವನಾದ ಕಥೆಯೊಂದಿಗೆ ಪರ್ಯವಸಾನ. ಆದ್ದರಿಂದ "ಹರಿವಂಶ" ಅದಕ್ಕೆ ಪರಿಶಿಷ್ಟವಾಗಿ ಬಂದಿತು. ಸ್ವತಂತ್ರವಾಗಿಯೇ ವಿಷ್ಣು ಪುರಾಣದ ರಚನೆಯಾಯಿತು. ಆದರೆ ಶ್ರೀ ಕೃಷ್ಣನ ಸಂಪೂರ್ಣ ಭಗವೆತ್ಪಾರಮ್ಯ ಅವನ ಮಾನವ ಲೀಲಾ ಪ್ರಸಂಗಗಳಲ್ಲಿ ಎಲ್ಲಿಯೂ ಕಣ್ಮರೆಯಾಗದಂತೆ ಕಂಗೊಳಿಸುವುದೇ ಭಾಗವತದ ವೈಶಿಷ್ಟ್ಯವು. ಶ್ರೀ ಕೃಷ್ಣನು ಗೋಪೀಜನ ಪ್ರಿಯನಷ್ಟೇ ಅಲ್ಲ, ಗೋಪಾಲ ಬಾಲನೂ ಅಹುದು. ಗೋವರ್ಧನ ಗಿರಿಧಾರಿಯೂ ಅಹುದು. ಇತ್ತ ವೃಂದಾವನ ವಿಹಾರಿಯೂ ಅತ್ತ ಕಂಸಾದಿ ಸಂಹಾರಿಯೂ ಆಗುತ್ತಾನೆ. ಒಮ್ಮೆ ವಸ್ತ್ರಾಪಹಾರಕನಾಗಿ ಕುಚೇಷ್ಟೆ ಮಾಡುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೊಮ್ಮೆ ವಿರಹಾಗ್ನಿಯಲ್ಲಿ ಅದೇ ಗೋಪಿಯರನ್ನು ನೂಕಿ ಬೇಯಿಸುತ್ತಾನೆ. ಕಡೆಗೆ ಅತ್ಯಂತ ಅಶಿಕ್ಷಿತರಾದ ಅದೇ ಮುಗುದೆಯರಿಗೆ ಶಾಶ್ವತ ಮುಕ್ತಿಯನ್ನೂ ಕರುಣಿಸುತ್ತಾನೆ. ಇಲ್ಲಿ ಇದು ವಿರಹ ವ್ಯಥೆ, ಬರಿಯ ಕಾವ್ಯ ಕಥೆಯಷ್ಟೇ ಅಲ್ಲ; ದೇವಸಾಯುಜ್ಯಕ್ಕಾಗಿ ಒಂದೇ ಮನದಿಂದ ಬೆಂದು ನೊಂದು, ಹಂಬಲಿಸುವ ಭಕ್ತನ ಆರ್ತಭಾವದ ಪ್ರತಿನಿಧಿಯಾಗುತ್ತದೆ. ಇದರ ಅಂತರಾರ್ಥವನ್ನು, ಗೂಢಾರ್ಥವನ್ನು, ಎಷ್ಟೆಷ್ಟೋ ರೀತಿಗಳಿಂದ ಶ್ರೀಧರ ಸ್ವಾಮಿಗಳೇ ಮುಂತಾದ ಪ್ರಾಚೀನ ಮಹಾತ್ಮರು (ಸು.1300ಕ್ರಿ.ಶ.) ಆಳಕ್ಕಿಳಿದು, ಉಪನಿಷತ್ತು, ಶ್ರುತಿ, ಸ್ಮೃತಿ, ಪುರಾಣಗಳ ಸಕಲ ಸಾರವನ್ನೂ ಸಂಗ್ರಹಿಸಿ ವಿವರಿಸಿದ್ದಾರೆ. ವೋಪದೇವನಂತಹ ಮಹಾಲಾಕ್ಷಣಿಕರು (1200ಕ್ರಿ.ಶ.) ಶಾಸ್ತ್ರಬದ್ಧವಾಗಿ ಭಕ್ತಿರಸದ ವಿವಿಧ ಸ್ತರಗಳನ್ನಿಲ್ಲಿ ಗುರುತಿಸಿದ್ದಾರೆ.

ಚೈತನ್ಯ ಪಂಥದ ರೂಪಗೋಸ್ವಾಮಿ, ಜೀವಗೋಸ್ವಾಮಿ(ಕ್ರಿ.ಶ.1500) ಮೊದಲಾದವರು ರಾಧಕೃಷ್ಣ ಭಕ್ತಿಗೆ ಮಧುರರಸ,ರಸರಾಜ, ಎಂಬ ಪ್ರತಿಷ್ಠೆಯ ಪಟ್ಟವನ್ನು ಕಟ್ಟಿದ್ದಾರೆ. ಅದ್ವೈತ ವಿದ್ವನ್ಮಣಿಗಳಲ್ಲಿ ಮೂರ್ಧನ್ಯರಾದ ಮಧುಸೂದನ ಸರಸ್ವತಿಗಳಂತಹವರು "ಭಕ್ತಿರಸಾಯನ"ದಂತಹ ಮೌಳಿಕ ಲಕ್ಷಣ ಗ್ರಂಥವನ್ನೇ ಬರೆದಿದ್ದಾರೆ. ರಾಮಾನುಜೀಯರೂ, ಮಧ್ವಾಚಾರ್ಯರೂ, ಸ್ವತಂತ್ರ ವ್ಯಾಖ್ಯಾನಗಳನ್ನೇ ರಚಿಸಿದ್ದಾರೆ. ಮೇಲ್ನೋಟಕ್ಕೆ ಅತ್ಯಂತ ಸುಲಭ. ಆದರೆ ಒಳಗೆ ಇಳಿದಷ್ಟೂ ತಳಗಾಣದಂತಹ ಆಳ. ಇದು ಶ್ರೀಮದ್ಭಾಗವತದ ವಿಸ್ಮಯಕಾರಿ ವಿಶೇಷತೆಯು, ಆದ್ದರಿಂದಲೇ "ವಿದ್ಯಾವತಾಂ ಭಾಗವತೇ ಪರೀಕ್ಷಾ" ಎಂಬುದು ವಿದ್ವನ್ಮಂಡಳಿಗಳಲ್ಲಿ ಪ್ರಸಿದ್ಧವಾದ ಮಾತಾಗಿದೆ. ವಿದ್ವಾಂಸರಿಗೆ ಎಂದರೆ ಭಾರತೀಯರ ಸಕಲ ಕಾವ್ಯ ಶಾಸ್ತ್ರಾದಿಗಳನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿದವರಿಗೆ ಅವರ ವಿದ್ವತ್ತೆಯನ್ನು ಒರೆಗೆ ಹಚ್ಚಿ ನೋಡುವ ಗ್ರಂಥ ಭಾಗವತ.

ವ್ಯವಹಾರ ಪ್ರಧಾನವಾದ ಇಂದಿನ ದಿನಮಾನದಲ್ಲಿ ಭಾಗವತ ಎಂದಿನಿಂದಲೂ ಹಾಕುವ ಸವಾಲನ್ನು ದಿಟ್ಟತನದಿಂದ ಕೈಗೆತ್ತಿಕೊಳ್ಳುವ ಆಧ್ಯಾತ್ಮಿಕ ಧೀಮಂತರೆಷ್ಟು ಜನ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕ್ಷರಶಃ ಅನುವಾದ ಮಾಡುವ ಪಂಡಿತರಿರಬಹುದು. ಕಲ್ಪನೆ ಹರಿಯಬಿಟ್ಟು ಹರಿಕಥೆ ಮಾಡುವ ಕೀರ್ತನಕಾರರಿಬಹುದು. ಕವಿಗಳೂ ಹಲವರಿದ್ದಾರು ಅಲ್ಲೊಂದು ಇಲ್ಲೊಂದು ಪದ್ಯವನ್ನು ಎತ್ತಿಕೊಂಡು ಮನ ಬಂದಂತೆ ಉದ್ದುದ್ದವಾಗಿ ಮಾತಿನ ಮಾಲೆಯನ್ನು ನೇಯುವ ಉಪನ್ಯಾಸಕರನ್ನೂ ನಾವು ಕಾಣುತ್ತೇವೆ. ಆದರೆ ಇದಕ್ಕೆ ಪ್ರಾಧಾನ್ಯವೀಯದೆ ಆಧ್ಯಾತ್ಮಿಕಾನುಭವವನ್ನು ಸಾಕ್ಷಾತ್ಕರಿಸಿಕೊಂಡು ಅದಕ್ಕೆ ಎಲ್ಲಿಯೂ ಅಪೋಹ ಬಾರದಂತೆ, ಇಡಿಯ ಭಾಗವತವನ್ನೇ, ಸ್ಕಂಧ, ಸ್ಕಂಧವಾಗಿ, ಪದ್ಯ ಪದ್ಯವಾಗಿ, ಅದೇ ಆನುಪೂರ್ವಿಯನ್ನುಳಿಸಿಕೊಂಡು, ತಮ್ಮ ಅಪಾರ ವಿದ್ವತ್ತೆಯಿಂದ ಸೂಕ್ಷ್ಮಾತಿ ಸೂಕ್ಷ್ಮವಾದ ರಹಸ್ಯಾರ್ಥವೂ ಎಲ್ಲರಿಗೂ ತಿಳಿಯುವಂತೆ, ಇಂದಿನ ಲೌಕಿಕ ಜೀವನದ ಸುಪರಿಚಿತ ಉದಾಹರಣೆಗಳ ಒಗ್ಗರಣೆ ಸಮೇತ ಮೃಷ್ಟಾನ್ನ ಭೋಜನದಂತೆ ಉಣಬಡಿಸುವ ಮಹಾಮಹಿಮರೆಂದರೆ, ನಾನು ಕಂಡವರಲ್ಲಿ ಆನಂದ ವೃಂದಾವನ ಕ್ಷೇತ್ರದಲ್ಲಿ ಆಶ್ರಮವಾಸಿಗಳಾಗಿರುವ ಶ್ರೀ ಶ್ರೀ ಅಖಂಡಾನಂದ ಸರಸ್ವತಿಗಳೊಬ್ಬರೇ ಎನ್ನಬಹುದು, ಇವರ ಹಿಂದಿ ಉಪನ್ಯಾಸಗಳನ್ನು ನಾನು ಕೇಳಿ ಪುಳಕಿತನಾಗಿದ್ದೇನೆ. ರಾಮಾಯಣ, ಭಗವದ್ಗೀತೆ, ಮಹಾಭಾರತ ಇತ್ಯಾದಿ ಭಾರತೀಯ ಸಂಸ್ಕೃತಿಯ ಎಲ್ಲಾ ಮಹಾ ಆಕರ ಗ್ರಂಥಗಳ ಹಾಗೂ ಎಲ್ಲಾ ವೇದಾಂತ ತತ್ವ ಶಾಸ್ತ್ರಗಳ ಮೇಲೂ ಅವರ ಪ್ರಾಸಾದಿಕವಾಣಿ ದಿವ್ಯಗಂಗೆಯಂತೆ ಹರಿದಿದೆ. ಶ್ರೋತೃಗಳ ಮನೋ ಮಾಲಿನ್ಯವನ್ನು ತೊಳೆದಿದೆ. ಗ್ರಂಥರೂಪವಾಗಿ ಪ್ರಕಟಗೊಂಡು ಸಾವಿರಗಟ್ಟಲೆ ಜನರನ್ನು ಆಸ್ತಿಕರನ್ನಾಗಿ ಮಾಡಿದೆ. ಅವರ ಶೈಲಿಯಲ್ಲಿ ಪ್ರಕಾಶದ ಹರಹಿದೆ. ಪೂರ್ಣಾನುಭವದ ಗಾಂಭೀರ್ಯವಿದೆ. ಜ್ಞಾನಿಯ ಸರಳತೆಯಿದೆ.

ಈ ಗುಣಗಳನ್ನು ಮನಸಾಮೆಚ್ಚಿ, ಹಿಂದಿಭಾಷೆಯಲ್ಲಿ ಪರಿಣತರೂ ಸಂಸ್ಕೃತ ಕಾವ್ಯಶಾಸ್ತ್ರಗಳಲ್ಲಿ ಪಂಡಿತರೂ ಕಥನ ಕಲೆಯಲ್ಲಿ ಪ್ರಗಲ್ಭರೂ ಆದ ನನ್ನ ಆಪ್ತಮಿತ್ರ ಶ್ರೀ ಕೆ.ರಾ.ವೆ.ಸುಬ್ರಹ್ಮಣ್ಯಶಾಸ್ತ್ರಿಗಳು ಈಗ "ಶ್ರೀ ಭಾಗವತ ಪ್ರಕಾಶನ" ಎಂಬ ಯೋಜನೆಯನ್ನು ಹಾಕಿಕೊಂಡು ಕಾಲಕಾಲಕ್ಕೆ ಇಂದಿನ ತಿಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗನ್ನಡದಲ್ಲಿ ಶ್ರೀ ಭಾಗವತ ದರ್ಶನದ ಸಂಪುಟಗಳನ್ನು ಹೊರತರಲು ಶ್ರಮಿಸುತ್ತಿರುವುದು ಕನ್ನಡ ಸಾಹಿತ್ಯವನ್ನು ನಿಜಕ್ಕೂ ಶ್ರೀಮಂತಗೊಳಿಸುತ್ತದೆ.

ನಾನು ಅಲ್ಲಲ್ಲಿ ಸ್ಥಾಲೀಪುಲಾಕ ನ್ಯಾಯದಿಂದ ಈ ಮೊದಲ ಸಂಪುಟವನ್ನು ಫಲಶ್ರುತಿ ಪ್ರಸ್ತಾವನೆ ಸಮೇತ ಓದಿ ನೋಡಿ ಆನಂದ ಪಟ್ಟಿದ್ದೇನೆ. ಎಲ್ಲಿಯೂ ವಾಕ್ಯಗಳು ತೊಡರಿಕೊಂಡು ಗೋಜಲಾಗುವುದಿಲ್ಲ. ರಾಮಬಾಣದಂತೆ ನೇರವಾಗಿ ಸಾಗಿ ಗುರಿ ಮುಟ್ಟುತ್ತವೆ. ಚಿಕ್ಕ ಚಿಕ್ಕದಾಗಿರುವಂತೆ ಚೊಕ್ಕವಾಗಿಯೂ ಇವೆ. ಗಹನವಾದ ವೇದಾಂತ ಪ್ರಕ್ರಿಯೆ, ದರ್ಶನವಿಚಾರಗಳು, ಸಾಂಕೇತಿಕ ರಹಸ್ಯಗಳು ಮುಂತಾದುವೆಲ್ಲಾ ಸ್ಪಷ್ಟವಾದ ಕಥಾಭಿತ್ತಿಯ, ಅಥವಾ ಚೌಕಟ್ಟಿನ ಪರಿಮಿತಿಯಲ್ಲಿಯೇ ಹಿತಮಿತವಾಗಿ ರೂಪುಪಡೆಯುತ್ತವೆ. ಇಷ್ಟು ಓದ ತೊಡಗಿದರೆ ಇನ್ನಷ್ಟು ಓದುವ ಉತ್ಸಾಹ ಮೂಡಿಸುವಂತೆ ಗದ್ಯ ಗುಣ ಆಕರ್ಷಕವಾಗಿದೆ. ಕೇವಲ ಸಂಸ್ಕೃತಿ ಸೇವಾಭಾವದಿಂದ ಇವರು ಈ ಬೃಹದ್ಯೋಜನೆಯನ್ನು ಕೈಗೊಂಡಿರುವುದಷ್ಟೇ ಅಲ್ಲದೆ ಸಂಪೂರ್ಣ ಭಾಗವತದ ಹಸ್ತಪ್ರತಿಯನ್ನು ಯಶಸ್ವಿಯಾಗಿ ಸಿದ್ಧಮಾಡಿ ಮುಗಿಸಿರುವುದು ಅಷ್ಟೇ ಅಲ್ಲ. ಶ್ರೀ ದೇವೀ ಭಾಗವತ, ಗೀತೋಪನಿಷತ್ತು, ನಾರದ ಭಕ್ತಿದರ್ಶನ, ಯೋಗವಾಸಿಷ್ಠ ಇತ್ಯಾದಿ ಗ್ರಂಥಗಳ ಹಸ್ತಪ್ರತಿಯನ್ನೂ ತಯಾರಿಸಿರುವುದು, ಇವರಿಗೆ ದೈವ ಕೃಪೆಯಿರುವುದರ ಸಾಕ್ಷಿಯಾಗಿದೆ. ಅವೆಲ್ಲವೂ ಬೇಗ ಬೆಳಕಿಗೆ ಬರುವಂತೆ ಮಾಡುವುದು ಗುಣಗ್ರಾಹಿ ವಾಚಕರನ್ನೇ ಅವಲಂಬಿಸಿದೆ. ಅವರಿಗೆ ಸಕಾಲದಲ್ಲಿ ಜನಾನುರಾಗವು ಲಭಿಸಿ ಕೃತಕತ್ಯತೆಯುಂಟಾಗಲೆಂದು ಹಾರೈಸುತ್ತೇನೆ.

ಈ ಗ್ರಂಥದಲ್ಲಿ ಕವಿ-ಕಾಲ ದೇಶಗಳನ್ನು ಕುರಿತ ನೀರಸ ಚರ್ಚೆಗಳಿಲ್ಲ. ಇದೇ ಸಂಶೋಧನೆಯೆನ್ನುವ ಆಧುನಿಕ ವಿದ್ವಾಂಸರಿಗೆ ಇಲ್ಲಿ ಆಹಾರವಿಲ್ಲವಾದರೂ ಶ್ರುತಿ ಸ್ಮೃತಿ ಪುರಾಣಾದಿಗಳಲ್ಲಿ ಷಡ್ದರ್ಶನಾದಿಗಳಲ್ಲಿ ಒಂದೇ ಮಾತಿನಲ್ಲಿ ಹೇಳಬೇಕಾದರೆ ಇಡೀ ಭಾರತೀಯ ಸಂಸ್ಕೃತಿಯ ಅಖಂಡ ಪರಂಪರೆಯಲ್ಲಿ ಸಮನ್ವಯ ದೃಷ್ಟಿಯಿಂದ ಸಾರವಿಷ್ಟೇ ಎಂಬ ಒಂದು ಸ್ಪಷ್ಟ ಪರಿಜ್ಞಾನವು ಈ ಗ್ರಂಥದಿಂದ ದೊರೆಯುವುದರಲ್ಲಿ ಸಂಶಯವಿಲ್ಲ. ಇದಕ್ಕಿಂತ ಹೆಚ್ಚಿನದೇನಿದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿತೈಷಿಣಃ ಸಂತಿ ನತೇ ಮನೀಷಿಣಃ
ಮನೀಷಿಣಃ ಸಂತಿ ನತೇ ಹಿತೈಷಿಣಃ ।

ಎಂಬ ದುಷ್ಕಾಲದ ಕತ್ತಲೆ ಕಳೆದು ಮನೀಷಿಗಳೇ ಹಿತೈಷಿಗಳೂ ಆಗುವ ಅರುಣೋದಯ ಅಥವಾ ಕರುಣೋದಯದ ಬೆಳಕಿಗೆ ಈ ಸಂಪುಟವು ನಾಂದಿಯಾಗಲಿ.

ಡಾ॥ಕೆ.ಕೃಷ್ಣಮೂರ್ತಿ
11-11-84

ಶ್ರೀ ಭಾಗವತದರ್ಶನ, ವಿಷಯ ವಿಭಾಗ

ಶ್ರೀ ಭಾಗವತ ಮಹಾತ್ಮ್ಯೆ

ಅಧ್ಯಾಯ	ವಿಷಯ
1	ನಾರದರಿಗೆ ಭಕ್ತಿ ದೇವಿಯ ದರ್ಶನ
2	ಭಕ್ತಿದೇವಿಯ ಕಷ್ಟ ನಿವೃತ್ತಿಗೆ ನಾರದರ ಉದ್ಯೋಗ
3	ಭಕ್ತಿದೇವಿಯ ಕಷ್ಟ ನಿವೃತ್ತಿ
4	ಗೋಕರ್ಣೋಪಾಖ್ಯಾನ
5	ಪ್ರೇತಯೋನಿಯಿಂದ ಧುಂಧುಕಾರಿಯ ಉದ್ಧಾರ
6	ಸಪ್ತಾಹ ಯಜ್ಞವಿಧಾನ

ಪ್ರಥಮ ಸ್ಕಂಧ

ಅಧ್ಯಾಯ	ವಿಷಯ
	ಪ್ರಸ್ತಾವನೆ
1	ಸೂತರೊಡನೆ ಶೌನಕಾದಿಗಳ ಪ್ರಶ್ನೆ
2	ಭಗವತ್ಕಥಾ ಭಕ್ತಿಯ ಮಹಿಮೆ
3	ಭಗವದವತಾರಗಳ ವರ್ಣನೆ
4	ವ್ಯಾಸ ಮಹರ್ಷಿಗಳ ಅಸಂತೋಷ
5	ನಾರದರ ಪೂರ್ವ ಚರಿತ್ರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ	ವಿಷಯ
6	ನಾರದ ಚರಿತ್ರೆಯ ಶೇಷಭಾಗ
7	ಅಶ್ವತ್ಥಾಮನಿಂದ ದ್ರೌಪದೇಯರಮರಣ
8	ಗರ್ಭಗತ ಪರೀಕ್ಷಿತನ ರಕ್ಷಣೆ
9	ಭೀಷ್ಮನಲ್ಲಿಗೆ ಯುಧಿಷ್ಠಿರಾದಿಗಳ ಪಯಣ
10	ಶ್ರೀ ಕೃಷ್ಣನದ್ವಾರಕಾಗಮನ
11	ಶ್ರೀ ಕೃಷ್ಣನಿಗೆ ರಾಜೋಚಿತ ಸ್ವಾಗತ
12	ಪರೀಕ್ಷಿತನ ಜನ್ಮ
13	ಗಾಂಧಾರೀ ಧೃತರಾಷ್ಟ್ರರ ವನಗಮನ
14	ಹಸ್ತಿನಾವತಿಗೆ ಅರ್ಜುನನ ಪ್ರತ್ಯಾಗಮನ
15	ಪಾಂಡವರ ಸ್ವರ್ಗಾರೋಹಣ
16	ಪರೀಕ್ಷಿತನೊಡನೆ ಪೃಥ್ವೀ ಧರ್ಮರ ಸಂವಾದ
17	ಪರೀಕ್ಷಿತನಿಂದ ಕಲಿಯ ದಮನ
18	ರಾಜನಿಗೆ ಶೃಂಗಿ ಋಷಿಯ ಶಾಪ
19	ಪರೀಕ್ಷಿತನ ಪ್ರಾಯೋಪವೇಶ ಶ್ರೀ ಶುಕರ ಆಗಮನ

ದ್ವಿತೀಯ ಸ್ಕಂಧ

ಅಧ್ಯಾಯ	ವಿಷಯ
	ಪ್ರಸ್ತಾವನೆ
1	ಧ್ಯಾನವಿಧಿ, ಭಗವಂತನ ವಿರಾಡ್ರೂಪ ವರ್ಣನೆ
2	ಕ್ರಮಮುಕ್ತಿ ಸದ್ಯೋಮುಕ್ತಿಗಳ ವರ್ಣನೆ
3	ಭಿನ್ನಭಿನ್ನ ದೇವತೆಗಳ ಉಪಾಸನೆ
4	ಶ್ರೀ ಶುಕದೇವರಿಂದ ಕಥಾರಂಭ
5	ಸೃಷ್ಟಿಯ ವರ್ಣನೆ
6	ವಿರಾಟ್ ಪುರುಷನ ವಿಭೂತಿ ವರ್ಣನೆ
7	ಭಗವಂತನ ಲೀಲಾವತಾರದ ಕಥೆಗಳು
8	ಪರೀಕ್ಷಿದ್ರಾಜನ ವಿವಿಧ ಪ್ರಶ್ನೆಗಳು
9	ಭಗವಂತನಿಂದ ಬ್ರಹ್ಮನಿಗೆ ಉಪದೇಶ
10	ಭಾಗವತದ ಹತ್ತು ಲಕ್ಷಣಗಳು

ತೃತೀಯ ಸ್ಕಂಧ

ಅಧ್ಯಾಯ	ವಿಷಯ
	ಪ್ರಸ್ತಾವನೆ
1	ವಿದುರ–ಉದ್ಧವರ ಮಿಲನ
2	ಉದ್ಧವನಿಂದ ಭಗವಂತನ ಲೀಲಾವರ್ಣನೆ
3	ಶ್ರೀ ಕೃಷ್ಣನ ಲೀಲಾವರ್ಣನೆ
4	ವಿದುರನಿಂದ ಮೈತ್ರೇಯರ ಸಂದರ್ಶನ
5	ಮೈತ್ರೇಯರಿಂದ ಸೃಷ್ಟಿ ಕ್ರಮ ವರ್ಣನೆ
6	ವಿರಾಟ್ ಶರೀರದ ಉತ್ಪತ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ	ವಿಷಯ
7	ವಿದುರ ಪ್ರಶ್ನೆ
8	ಬ್ರಹ್ಮನ ಉತ್ಪತ್ತಿ
9	ಬ್ರಹ್ಮನಿಂದ ಭಗವಂತನ ಸ್ತುತಿ
10	ದಶವಿಧ ಸೃಷ್ಟಿಯ ವರ್ಣನೆ
11	ಮನ್ವಂತರ ಕಾಲ ವಿಭಾಗ ವರ್ಣನೆ
12	ಸೃಷ್ಟಿಯ ವಿಸ್ತಾರ
13	ಕ್ರಿಯಾಯೋಗ, ವರಾಹಾವತಾರದ ಕಥೆ
14	ದ್ವಿತೀಯ ಗರ್ಭಧಾರಣೆ
15	ಜಯ ವಿಜಯರಿಗೆ ಸನಕಾದಿಗಳ ಶಾಪ
16	ಜಯ ವಿಜಯರ ವೈಕುಂಠ ಪತನ
17	ಹಿರಣ್ಯಕಶಿಪು ಹಿರಣ್ಯಾಕ್ಷರ ಜನ್ಮ
18	ಹಿರಣ್ಯಾಕ್ಷನೊಡನೆ ವರಾಹನ ಯುದ್ಧ
19	ಹಿರಣ್ಯಾಕ್ಷನ ವಧೆ
20	ಬ್ರಹ್ಮನ ವಿವಿಧ ಸೃಷ್ಟಿಯ ವರ್ಣನೆ

ಅಧ್ಯಾಯ	ವಿಷಯ
21	ಕಪಿಲಯೋಗ–ಕರ್ದಮರ ತಪಸ್ಸು–ವರದಾನ
22	ದೇವಹೂತಿ–ಕರ್ದಮರ ವಿವಾಹ
23	ದೇವಹೂತಿ–ಕರ್ದಮರ ವಿಹಾರ
25	ದೇವಹೂತಿಯ ಪ್ರಶ್ನೆ, ಭಗವಂತನಿಂದಭಕ್ತಿಯೋಗ ಕಥನ
26	ಮಹದಾದಿ ತತ್ತ್ವೋತ್ಪತ್ತಿ
27	ಪ್ರಕೃತಿ–ಪುರುಷ ವಿವೇಕದಿಂದ
28	ಮೋಕ್ಷ ಪ್ರಾಪ್ತಿ
29	ಅಷ್ಟಾಂಗ ಯೋಗವಿಧಿ
30	ಭಕ್ತಿರಹಸ್ಯ–ಕಾಲಮಹಿಮೆ
	ದೇಹಾಸಕ್ತ ಪುರುಷರ ಅಧೋ
31	ಗತಿ ವರ್ಣನೆ
	ಮನುಷ್ಯ ಯೋನಿಗೆ ಬಂದ
32	ಜೀವನ ಗತಿ ವರ್ಣನೆ
	ಧೂಮಮಾರ್ಗ, ಅರ್ಚಿರಾದಿ
33	ಮಾರ್ಗ, ಭಕ್ತಿಯ ವೈಶಿಷ್ಟ್ಯ
	ದೇವಹೂತಿಯ ತತ್ತ್ವಜ್ಞಾನ,
	ಮೋಕ್ಷಪ್ರಾಪ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತ ದರ್ಶನ

ಶ್ರೀ ಮದ್ಭಾಗವತ ಮಾಹಾತ್ಮ್ಯಂ ನಾರದರಿಗೆ ಭಕ್ತಿ ದೇವಿಯ ದರ್ಶನ.

ಅಧ್ಯಾಯ-೧

ಸಚ್ಚಿದಾನಂದ ರೂಪಾಯ, ವಿಶ್ವೋತ್ಪತ್ತ್ಯಾದಿ ಹೇತವೇ
ತಾಪತ್ರಯ ವಿನಾಶಾಯ ಶ್ರೀ ಕೃಷ್ಣಾಯವಯಂ ನುಮಃ

ಭಗವಂತನು ಸಚ್ಚಿದಾನಂದಾತ್ಮಕನು. ಅವನ ಸದ್ರೂಪ-ಚಿದ್ರೂಪ-ಆನಂದ ರೂಪಗಳಲ್ಲಿ ಸೃಷ್ಟಿ-ಸ್ಥಿತಿ -ಪ್ರಳಯಗಳ ಸಮನ್ವಯವಾಗುತ್ತದೆ.

ಹಾಗೂ ಸೃಷ್ಟಿ-ಸ್ಥಿತಿ-ಪ್ರಳಯಗಳಲ್ಲಿ ಸತ್-ಚಿತ್-ಆನಂದ ಈ ಮೂರರ ಸಮನ್ವಯವೂ ಆಗುತ್ತದೆ.

ಅಂದರೆ ಈ ಮೂರರ ಅದ್ವಯತ್ತ್ವದಲ್ಲಿ ವಿವರ್ತವಿದೆ.

ಆದರೆ ಸತ್ತಿನಲ್ಲಿಯೂ, ಆನಂದದಲ್ಲಿಯೂ, ಪೃಥಕ್ಕಾಗಿ ಪರಿಣಾಮದ ಪ್ರಾಪ್ತಿಯಾಗುತ್ತದೆ. ಚಿತ್ತಿನಲ್ಲಿ ಪರಿಣಾಮ ಪ್ರಾಪ್ತಿಯಿಲ್ಲ.

ಚಿತ್ ಪರಿಣಾಮಕ್ಕೆ ಸಾಕ್ಷಿಯು ಯಾವಾಗಲೂ ಅಪರಿಣಾಮಿ.

ಇದೇ ಇದರ ವಿಲಕ್ಷಣವಾದ ವಿವೇಚನೆ.

ವಯಂ ಶ್ರೀಕೃಷ್ಣಾಯ ನುಮಃ

ನಾವು ಶ್ರೀಕೃಷ್ಣನನ್ನು ನಮಸ್ಕರಿಸುತ್ತೇವೆ. ನಮಸ್ಕಾರವೆಂದರೆ ನ – ಮೇ ಇತಿ ನಮಃ ಅಂದರೆ ನನ್ನದೇನೂ ಇಲ್ಲ. ನಾನು – ನನ್ನದು ಎನ್ನುವುದನ್ನು ಸಂಪೂರ್ಣ ತ್ಯಜಿಸುವುದು.

ಕರ್ಮಕಾಂಡಿಗಳೂ ಸಹ ಸ್ವಾಹಾ ಎಂದು ಹೇಳಿ ನಮಮ ಎಂದು ಹೇಳುತ್ತಾರೆ.

ನಮನಂ ನಮಃ ನಮನವೇ ನಮಸ್ಕಾರವು ಅಹಂಕಾರ ತ್ಯಾಗವನ್ನೇ ನಮಸ್ಕಾರವೆನ್ನುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಪತ್ರಯ ವಿನಾಶಾಯ

ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕತ್ರಿಕವೇ ತಾಪತ್ರಯವು. ಇವುಗಳ ನಿವೃತ್ತಿಗಾಗಿ ನಮಸ್ಕಾರವು.

ಇಲ್ಲಿಯ ವೈಲಕ್ಷಣವನ್ನು ಗಮನಿಸಬೇಕು. ಇಲ್ಲಿ ಪಾಪ ನಿವೃತ್ತಿಯ ವಿಚಾರವನ್ನು ಹೇಳಿಲ್ಲ. ತಾಪ ನಿವೃತ್ತಿಯ ವಿಚಾರವನ್ನು ತಿಳಿಸಿದೆ.

ತಾಪ ನಿವೃತ್ತಿಯ ಅರ್ಥವೆಂದರೆ ಫಲ ನಿವೃತ್ತಿ.

ಪಾಪ ನಿವೃತ್ತಿಯ ಅರ್ಥವೆಂದರೆ ಸಾಧನೆಯ ನಿವೃತ್ತಿ.

ತಾಪ ಸಾಧನ ನಿವೃತ್ತಿಯೇ ಪಾಪ ನಿವೃತ್ತಿಯು. ಪಾಪದ ಫಲವಾದ ತಾಪ ನಿವೃತ್ತಿಯನ್ನು ಇಲ್ಲಿ ಹೇಳಿದೆ.

ನಾವು ಪಾಪವನ್ನು ಆಚರಿಸಿರಬಹುದು. ಅದರ ಫಲಾನುಭವವನ್ನು ನಿವೃತ್ತಗೊಳಿಸಬೇಕಾಗಿದೆ.

ಇಲ್ಲಿ ವಯಂ ಎಂದರೆ ಶ್ರೋತಾ – ವಕ್ತಾ ಇಬ್ಬರೂ ಎಂದರ್ಥವು.

ಪಾಪಗಳು ಎಷ್ಟೆಲ್ಲಾ ಇರಬಹುದು. ಅವುಗಳ ತಾಪವನ್ನು ಅನುಭವಿಸಬೇಕಾಗಿಲ್ಲ. ಪಾಪ–ತಾಪಗಳ ಸಂಬಂಧದ ವ್ಯವಚ್ಛೇದವಾಯಿತು.

ಇನ್ನು ಪಾಪದ ಫಲವಾದ ತಾಪದ ಭಯವಿಲ್ಲ.

ವಿಶ್ವೋತ್ಪತ್ತ್ಯಾದಿಹೇತವೇ

ಭಗವಂತನು ಜಗತ್ತಿನ ಸೃಷ್ಟಿ–ಸ್ಥಿತಿ––ಲಯಗಳಿಗೆ ಕಾರಣನು ಎಂದು ಭಗವಂತನ ತಟಸ್ಥ ಲಕ್ಷಣವನ್ನು ಹೇಳಿದೆ.

ಯತೋವಾ ಇಮಾನಿ ಭೂತಾ ನಿಜಾಯಂತೇ
ಯೇನ ಜಾತಾನಿ ಜೀವಂತಿ
ಯತ್ಪ್ರಯಂತ್ಯಭಿಸಂವಿಶಂತಿ.

ಎಂದು ಶ್ರುತಿಯಲ್ಲಿ ಹೇಳಿರುವ ಬ್ರಹ್ಮನ ಲಕ್ಷಣವನ್ನು ಅನುವಾದಿಸಿ ಹೇಳಿದ್ದಾರೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಭಗವಾನ್ ಶುಕದೇವರು ಈ ಭಾಗವತದ ವಕ್ತಾ.

ಪ್ರತಿಪಾದ್ಯ ದೇವತೆಯನ್ನು ಸ್ಮರಿಸಿ ವಕ್ತಾರರಾದ ಶ್ರೀ ಶುಕದೇವರನ್ನು ನಮಸ್ಕರಿಸುತ್ತಾರೆ.

ನಾರಾಯಣನು ಸರ್ವಾಂತರ್ಯಾಮಿ, ಮಾಯಾಧೀಶ್ವರ ಹಾಗೂ ಕಾರಣಾವಚ್ಛಿನ ಚೈತನ್ಯನು,

ಬ್ರಹ್ಮನು ಸಮಷ್ಟಿ ಅಂತಃಕರಣಾ ವಚ್ಛಿನ ಚೈತನ್ಯನು.

ನಾರದರು ಸಮಷ್ಟಿಮನ ಅವಚ್ಛಿನ್ನ ಚೈತನ್ಯರು.

ಭಾಗವತದಲ್ಲಿಯೆ ಹೇಳಿದ್ದಾರೆ.

ಕಸ್ಮೈ ತಯೇನ ವಿಭಾಸಿತೋ ಯುಮತುಲೋ
ಜ್ಞಾನಪ್ರದೀಪಃ ಪುರಾ
ತದ್ರೂಪೇಣಚನಾರದಾಯುಮುನಯೇ
ಕೃಷ್ಣಾಯ ತದ್ರೂಪಿಣಂ.

ಭಗವಂತನು ನಾರಾಯಣನು

ವ್ಯಾಸರೂ ನಾರಾಯಣನೇ

ವ್ಯಾಸರು ವಾಗವಚ್ಛಿನ್ನ ಚೈತನ್ಯರು. ಎಲ್ಲಗೂ ನಾರಾಯಣರೂಪಿಗಳೇ

ಪರಮಾತ್ಮನು ಸರ್ವರೂಪಿಯಾದ ಮೇಲೆ ಭಗವಂತನೇ ಶಬ್ದಗಳ ರೂಪದಲ್ಲಿಯೂ ಪ್ರಕಟನಾಗಿದ್ದಾನೆ.

ಇದೆಲ್ಲವೂ ಚೈತನ್ಯನ ವಿವರ್ತ

ಈಶ್ವರನನ್ನು ಸಗುಣನನ್ನಾಗಿ ಸ್ವೀಕರಿಸಿದಾಗ ಎಲ್ಲಾ ಸಗುಣ ರೂಪಗಳೂ ಈಶ್ವರನ ರೂಪಗಳೇ.

ನಾರಾಯಣ, ಬ್ರಹ್ಮ, ನಾರದ ವ್ಯಾಸ, ಶುಕದೇವರೆಲ್ಲರೂ ಇದರ ವಕ್ತಾರರು.

ಈಗ ಮುಖ್ಯಶ್ರೋತೃವಾದ ಪರೀಕ್ಷಿತನಿಗೆ ಭಾಗವತವನ್ನು ಶ್ರವಣ ಮಾಡಿಸಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶುಕದೇವರನ್ನು ವಂದಿಸುತ್ತಾರೆ.

> ಯಂ ಪ್ರವ್ರಜಂತ ಮನುಪೇತಮ ಪೇತ ಕೃತ್ಯಂ
> ದ್ವೈಪಾಯನೋ ವಿರಹಕಾತರ ಆಜುಹಾವ
> ಪುತ್ರೇತಿ ತನ್ಮಯತಯಾ ತರವೋಭಿನೇದುಃ
> ತಂ ಸರ್ವಭೂತ ಹೃದಯಂ ಮುನಿಮಾನತೋಸ್ಮಿ

ಕೌಶಿಕೀ ಸಂಹಿತೆಯ ಭಾಗವತ ಮಾಹಾತ್ಮ್ಯೆಯಲ್ಲಿ ಈ ಕಥೆಯು ಬರುತ್ತದೆ

ಭಗವಾನ್ ಶಂಕರನು ಗಿರಿಜೆಗೆ ರಹಸ್ಯದಲ್ಲಿ ಭಾಗವತ ತತ್ವವನ್ನು ಉಪದೇಶಿಸುತ್ತಿದ್ದನು. ಈಶ್ವರನು ಸುತ್ತಾ ಯಾರಾದರೂ ಇರುವರೇ ಎಂದು ನೋಡಿದನು.

ಸಂಯೋಗವಶಾತ್ ಅಲ್ಲಿ ಒಂದು ಶುಕಾಂಡವು ಬಿದ್ದಿದ್ದಿತು. ಶ್ರೀಮದ್ಭಾಗವತ ಕಥಾಮೃತ ಸೇವನೆಯಿಂದ ಅದು ಚೇತನಯುಕ್ತವಾಯಿತು.

ಗೌರಿಯಂತೂ ಕೇಳುತ್ತಾ-ಕೇಳುತ್ತಾ ಭಾವ ಸಮಾವಿಸ್ಥಳಾದಳು.

ಆ ಶುಕವು ಕಥೆಯನ್ನು ಕೇಳುತ್ತಾ ಮಧ್ಯೆ-ಮಧ್ಯೆ ಹೂಂ-ಹೂಂ ಎನ್ನುತ್ತಿತ್ತು.

ಶಂಕರನಿಗೆ ಇದು ಕಥಾಶ್ರವಣವನ್ನು ಮಾಡುತ್ತಿದೆ ಎಂಬುದು ತಿಳಿಯಿತು.

ಇದಕ್ಕೆ ದೀಕ್ಷಾದಿ ಸಂಸ್ಕಾರಗಳಿಲ್ಲ. ಶಿಷ್ಯ ವೃತ್ತಿಯನ್ನು ವಹಿಸಿಲ್ಲ. ಸುಮ್ಮ ಸುಮ್ಮನೆ ಕೇಳುತ್ತಿದೆಯೆಂದು ಕೋಪದಿಂದ ತ್ರಿಶೂಲವನ್ನು ಪ್ರಯೋಗಿಸಿದನು.

ಆ ಶುಕವು ಹಾರಿ ಹೋಗಿ ವ್ಯಾಸ ಪತ್ನಿಯ ಶರೀರವನ್ನು ಸೇರಿತು.

ಅಲ್ಲಿಯೇ ಅದು ಹನ್ನೆರಡು ವರ್ಷಗಳ ಕಾಲ ಶ್ರೀಕೃಷ್ಣ ಧ್ಯಾನದಲ್ಲಿದ್ದಿತು.

ವ್ಯಾಸರು ಗರ್ಭಸ್ಥ ಶಿಶುವಿನಿಂದ ಹೊರಡುವ ಭಗವನ್ನಾಮವನ್ನು ಕೇಳಿ ಹೊರಕ್ಕೆ ಬಾ ಎಂದು ಕರೆದರು.

ಆದರೆ ಅದು ಹೇಳಿತು, ಭಗತದ್ದರ್ಶನವಾದ ಹೊರತು ಹೊರಗಡೆ ಬರುವುದಿಲ್ಲ. ಆಗ ವೇದವ್ಯಾಸರು ಶ್ರೀಕೃಷ್ಣನನ್ನು ಪ್ರಾರ್ಥಿಸಿ ಕರೆತಂದರು. ಆಗ ಭಗವದ್ದರ್ಶನಾಕಾಂಕ್ಷೆಯಿಂದ ಶುಕನು ಹೊರಕ್ಕೆ ಬಂದನು. ಹೇಳಿದನು.

ಪ್ರಭೋ ವಿಕಾರಿಯಾದವನಿಗೆ ಸಂಸ್ಕಾರದ ಆವಶ್ಯಕತೆಯಿದೆ. ವಿಕಾರವಿಲ್ಲದ

Sri Vidyabharathi Book Centre, Sringeri

CC-0. In Public Domain. Digitized by eGangotri

ಕಡೆ ಸಂಸ್ಕಾರವೂ ಇಲ್ಲ.

ದೇಹವು ಮಲಿನವಾದರೆ ತಾನೇ ಸ್ನಾನದ ಆವಶ್ಯಕತೆಯಿರುವುದು.

ಪರಮ ಪದವಾದರೊ ವಿಕೃತವೂ ಅಲ್ಲ, ಸಂಸ್ಕೃತವೂ ಅಲ್ಲ.

ವಿಕಾರ ಸಂಸ್ಕಾರಗಳೆರಡರಿಂದಲೂ ವಿಲಕ್ಷಣವಾದುದು.

ನಾನು ಸ್ವಭಾವತಃ ಅವಿಕಾರಿಯಾದುದರಿಂದ ಪುನಃ ಸಂಸ್ಕಾರಿಯಾಗ ಬೇಕಾದುದಿಲ್ಲವು.

ನಾನು ವಿಶ್ವ–ತೈಜಸ–ಪ್ರಾಜ್ಞಅವಸ್ಥಾತ್ರಯ ವಿಹೀನನೂ, ಆಶ್ರಮ ಧರ್ಮಾತೀತನೂ ಆಗಿರುವೆನು.

ನನ್ನ ಸ್ವಭಾವವೇ ಸಂನ್ಯಾಸವು. ಅದರಲ್ಲಿಯೇ ನಾನು ಪ್ರತಿಷ್ಠಿತನು.

ನೋಡಿ–ಶೂದ್ರನು ವಿಶ್ವನು, ವೈಶ್ಯನು ತೈಜಸನು, ಕ್ಷತ್ರಿಯನು ಪ್ರಾಜ್ಞನು.

ಬ್ರಾಹ್ಮಣನು ತುರೀಯನು.

ಹೀಗೆ ಆಧ್ಯಾತ್ಮಿಕತೆಯ ಆಧಾರದ ಮೇಲೆ ಆಶ್ರಮಗಳ ವ್ಯವಸ್ಥೆ ಯಾಗಿದೆ.

ತಾಯಿ–ಬ್ರಾಹ್ಮಣಿ, ತಂದೆ ಬ್ರಾಹ್ಮಣ ಹೀಗಿರುವಾಗ ರಜೋ–ವೀರ್ಯ ಗಳು ಆಧಿಭೌತಿಕವಾಗಿ ಶುದ್ಧವಾಗಿರುತ್ತವೆ.

ಯಜ್ಞೋಪವೀತ ಸಂಸ್ಕಾರ ಗಾಯತ್ರ್ಯುಪದೇಶ, ಸೂರ್ಯೋಪಾಸನೆ, ಇವುಗಳಿಂದ ಆಧಿ ದೈವಿಕ ಶುದ್ಧಿಯುಂಟಾಗುತ್ತದೆ.

ಹಾಗೂ ಶಮ–ದಮಾದಿ ಷಟ್ ಸಂಪನ್ನತೆಯು ಆಧ್ಯಾತ್ಮಿಕ ಶುದ್ಧಿಯು.

ಶ್ರೀ ಶುಕದೇವರ ಸಹಜವಾದ ಸಂನ್ಯಾಸಕ್ಕೆ, ಗುರುವಿನ ಶರಣಾಗತಿ ಯಾಗಲಿ, ಉಪನಯನಾದಿ ಸಂಸ್ಕಾರಗಳ ಆವಶ್ಯಕತೆಯಾಗಲಿ ಇಲ್ಲ. ಆದರಿಂದ ಹೇಳಿದರು–

"ಅನುಪೇತಮ ಪೇತಕೃತ್ಯಂ."

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವುದೇ ವಿಧವಾದ ಪ್ರವೃತ್ತಿ_ನಿವೃತ್ತಿ ರೂಪವಾದ ಕರ್ತವ್ಯವೂ ಇಲ್ಲ.

ಕೇವಲ ಸಹಜ ಸ್ವಭಾವ ಸ್ಥಿತಿಯಲ್ಲಿರುವುದು.

ನೈಷ್ಕರ್ಮ್ಯ ಸಿದ್ಧಿಯಲ್ಲಿ

ಹೇಳುತ್ತಾರೆ-

ನಿವೃತ್ತಿ ಮಪಿಮೃದ್ನಾತಿ

ಸಮ್ಯಗ್‌ಭೋಧಃ ಪ್ರವೃತ್ತಿವತ್

ಸಮ್ಯಗ್‌ಬೋಧವು ಪ್ರವೃತ್ತಿ-ನಿವೃತ್ತಿಗಳೆರಡನ್ನೂ ಉಪಮರ್ಧಿಸುತ್ತದೆ

ನಿಜವಾದ ಸಂನ್ಯಾಸಿಯು ಪ್ರವೃತ್ತನೂ ಅಲ್ಲ. ನಿವೃತ್ತನೂ ಅಲ್ಲ.

ಯಾವುದರಲ್ಲಿಯೂ ಆಗ್ರಹವಿಲ್ಲ

ಎರಡರಲ್ಲಿಯೂ ಸಮತಾದೃಷ್ಟಿ

ಎರಡರ ಅಧಿಷ್ಠಾನವೂ ಒಂದೇ

ಎರಡರ ಸಾಕ್ಷಿಯೂ ಒಬ್ಬನೇ

ಅವನಲ್ಲಿ ಎರಡೂ ವಿವರ್ತವು.

ಮೀಮಾಂಸಕರ ಅಭಿಪ್ರಾಯ ರೀತ್ಯಾ ಯಾರು ಕುರುಡನೋ, ಕುಂಟನೋ ಹೆಳವನೊ ಸರ್ವಥಾ ಕರ್ಮಕ್ಕೆ ಅನಧಿಕಾರಿಯೊ ಅಂತಹವನು ಮಾತ್ರ ಸಂನ್ಯಾಸಿಯಾಗಬಹುದು.

ಅದರಂತೆ ಶುಕನೂ ಸಹ ಕರ್ಮಾನಧಿಕಾರಿಯಾಗಿರಬಹುದು. ಅದಕ್ಕೇ ಅವನು ಅನುಪೇತನು ಎಂದು ಹೇಳುವುದು ಸರಿಯಲ್ಲ.

ಶುಕನಲ್ಲಿ ಸರ್ವ ವಿಧ ಯೋಗ್ಯತೆಯೂ ಇದ್ದಿತು.

"ದ್ವೈಪಾಯನೊ ವಿರಹ ಕಾತುರ ಆಜುಹಾವ."

ಯಾರು ಸರ್ವ ಶಾಸ್ತ್ರವಿದರೋ ಯಾರು ಅಖಂಡವಾಗಿದ್ದ ವೇದಸಂಹಿತೆಯನ್ನು ನಾಲ್ಕು ವಿಭಾಗವಾಗಿ ಮಾಡಿರುವವರೋ, ಉಪನಿಷತ್ ತಾತ್ಪರ್ಯ ನಿರ್ಣಯಕ್ಕಾಗಿ ಬ್ರಹ್ಮ ಸೂತ್ರಗಳನ್ನು ರಚಿಸಿರುವವರೋ.

Sri Vidyabharathi Book Centre, Sringeri

CC-0. In Public Domain. Digitized by eGangotri

ಯಾರು ಅಷ್ಟಾದಶ ಪುರಾಣಗಳ ಕರ್ತೃವೋ ಅಂತಹ ಭಗವಾನ್ ವೇದ ವ್ಯಾಸರು ಆ ಬಾಲಕನನ್ನು ನೋಡಿ ವಿರಹ ವ್ಯಾಕುಲರಾಗಿ ಪುತ್ರ-ಪುತ್ರ ಎಂದು ಕೂಗತೊಡಗಿದರು.

ಆದರೆ ಶ್ರೀ ಶುಕರಿಗೆ ತಂದೆ-ಮಗ ಎಂಬ ಭಾವನೆಯೆ ಇಲ್ಲವಲ್ಲ.

ಯಾರು ಯಾರ ಮಗ ? ಯಾರು ಯಾರ ತಂದೆ ?

ಪಂಚಭೂತಗಳಲ್ಲಿಯೆ ತಂದೆ ಮಕ್ಕಳ ಸಂಬಂಧವಿಲ್ಲದಿರುವಾಗ ಬ್ರಹ್ಮ ಚೈತನ್ಯನಲ್ಲಿ ಈ ಸಂಬಂಧವು ಹೇಗೆ ಬಂದೀತು ?

ಸೃಷ್ಟಿಯಲ್ಲಿ ಆಕಾರ ಮಾತ್ರದಿಂದ ಪಶು-ಪಕ್ಷಿ-ಮನುಷ್ಯ ಇತ್ಯಾದಿ ಭೇದವಾಗುವುದು.

ಬ್ರಾಹ್ಮಣಾದಿ ಭೇದವಾದರೊ ವರ್ಣದಿಂದಾಗುವುದು.

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ-ಕರ್ಮ-ವಿಭಾಗಶಃ,

ತನ್ಮಯತಯಾ ತರವೋ ಪುತ್ರೇತಿ ಅಭಿನೇದುಃ-ಉತ್ತರಂದದುಃ

ಯಾರನ್ನು ನೀನು ಪುತ್ರ-ಪುತ್ರ ಎಂದು ಕೂಗುತ್ತಿರುವೆಯೋ ಅವನು ಸರ್ವಭೂತ ಹೃದಯನು. ಸಾಧಾರಣ ಬಾಲಕ ಮಾತ್ರನಲ್ಲ.

ಸರ್ವಪ್ರಾಣಿಗಳ ಹೃದಯಾಂತರ್ವರ್ತಿಯು.

ಹರತೀತಿಹರಿಃ, ಹರತೀತಿಹರಃ
ಹೃದಿ ಅಯತೀತಿ ಹೃದಯಂ
ತಂ ಸರ್ವಭೂತಹೃದಯಂ

ಸರ್ವಭೂತ ಹೃದಯಸ್ಥನಾದ ಪರಮಾತ್ಮನನ್ನು ಆನತೋಸ್ಮಿ.

ಶ್ರೀಮದ್ಭಾಗವತವು ಗ್ರಂಥರೂಪವಾದರೂ ಇದು ಗ್ರಂಥಿ ಭೇದಕವು. ಸಗ್ರಂಥಿಯನ್ನು ನಿಗ್ರಂಥಿಯನ್ನಾಗಿ ಮಾಡುತ್ತದೆ.

ಕೆಲವು ಗ್ರಂಥಗಳನ್ನು ವ್ಯಾಸಂಗಮಾಡಿದರೆ ಗ್ರಂಥಿಗಳು ಪುಷ್ಟವಾಗುತ್ತವೆ

ಗ್ರಂಥಿನಾಶಕ್ಕೆ ಶ್ರೀ ಮದ್ಭಾಗವತದ ಅಧ್ಯಯನವು ಪರಮ ಪ್ರಯೋಜನ ಕಾರಿಯಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೈಮಿಷೇ ಸೂತಮಾಸೀನಂ
ಅಭಿವಾದ್ಯ ಮಹಾಮತಿಂ
ಕಥಾಮೃತರಸಾಸ್ವಾದ ಕುಶಲಃ
ಶೌನಕೋಽಬ್ರವೀತ್

ಶೌನಕರು ಬಂದು ಅಭಿವಂದಿಸಿದರು. ಅದು ನೈಮಿಷಕ್ಷೇತ್ರ. ಚಕ್ರವು ಬಿದ್ದ ಸ್ಥಳ, ದೀರ್ಘಕಾಲದ ಯಜ್ಞ ಯಾಗಾದ್ಯನುಷ್ಠಾನವು ಶೌನಕಾದಿ ಮಹಾ ಬ್ರಾಹ್ಮಣರುಗಳಿಂದ ಪ್ರಾರಂಭಿಸಲ್ಪಟ್ಟಿದೆ.

ವಿರಾಮ ಕಾಲದಲ್ಲಿ ಮಹರ್ಷಿಗಳು ಒಟ್ಟಾಗಿ ಸೇರಿ ಪುರಾಣ ಶ್ರವಣವನ್ನು ಮಾಡುವ ಪದ್ಧತಿಯೂ ಸಹ ಇದೆ.

ಸೂತರೇ ವಕ್ತಾ. ಅವರ ಕೆಲಸವೇ ಪುರಾಣ–ಪುಣ್ಯಕಥೆಗಳನ್ನು ಕೇಳಿಸುವುದು.

ಪುರಾಣಾದಿಗಳು ಬ್ರಹ್ಮನ ಮುಖದಿಂದ ಹೊರಟ ಮೇಲೆ ವೇದಾದಿಗಳು ಹೊರಟುವು ಎಂದು ಮತ್ಸ್ಯಾದಿ ಪುರಾಣಗಳಲ್ಲಿ ಹೇಳುತ್ತಾರೆ.

ಪುರಾಣಂ ಸರ್ವಶಾಸ್ತ್ರಾಣಾಂ
ಪ್ರಥಮಂ ಬ್ರಹ್ಮಣಾಸ್ಮೃತಂ
ಅನಂತರಂ ಚವಕ್ತ್ರೇಭ್ಯೋ
ವೇದಾಸ್ಯಚವಿನಿರ್ಗತಾಃ

ಪುರಾಣವೆಂದರೆ–ಪರಮಾತ್ಮನ ಸ್ವರೂಪ, ಪುರಾಣಿ–ಅಂತಃಕರಣಾನಿ ಜೀವಹೃದಯಾನಿ. ಅನತಿ–ಉಜ್ಜೀವಯತೀತಿ ಪುರಾಣಂ.

ಯಾವುದು ಮಾನವ ಹೃದಯವನ್ನು ಪರಿಪೂರ್ಣವನ್ನಾಗಿ ಮಾಡುತ್ತದೆಯೊ ಅದು ಪುರಾಣ.

ಪೂರ್ಣತ್ವಾತ್ ಪುರಾಅಪಿ ನವಮೇವೇತಿ ಪುರಾಣಂ.
ಮೊದಲೂ ಹೊಸದು, ಈಗಲೂ ಹೊಸದು,

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಒಂದು ವಿಚಾರವನ್ನು ಗಮನಿಸಬೇಕು–ಇಲ್ಲಿ ಶ್ರೋತಾರರು ವೇದಾಧ್ಯಾಯಿಪಾ ಸಂಪನ್ನ ಬ್ರಾಹ್ಮಣರು ಹೇಳುವವರು ಸೂತರು.

ತಾತ್ಪರ್ಯವೇನಾಯಿತು ?

ವೇದಾಭ್ಯಾಸಮಾಡಬೇಕಾದರೆ ಸದಾಚಾರೀ ಬ್ರಾಹ್ಮಣರನ್ನು ಶರಣು ಹೋಗಬೇಕು.

ಭಾಗವತ ಚರಿತ್ರೆಯನ್ನು ಕೇಳುವುದಾದರೆ ಸೂತರಿಂದಲಾದರೂ ಸರಿ ಕೇಳಿ ಬಿಡಬೇಕು.

ಭಾಗವತ ಶ್ರವಣದಲ್ಲಿಶ್ರವಣಗತ ವಸ್ತು ಮಹಾತ್ಮ್ಯೆಗೇ ಪ್ರಾಧಾನ್ಯತೆಯು, ವಕ್ತೃಗತ ಮಾಹಾತ್ಮ್ಯೆಗಲ್ಲ.

ಹೇಗಾದರೂ ನಾವು ಭಗವದಾಶ್ರಯವನ್ನು ಪಡೆದುಬಿಡಬೇಕು.

ಭಗವಚ್ಚರಿತ್ರೆಯ ಶ್ರವಣವಾಗಬೇಕು,

ಶೌನಕರು ಭಗವತ್ ಕಥಾಮೃತ ರಸಾಸ್ವಾದ ಕುಶಲರಾದ ಸೂತರನ್ನು ಪ್ರಾರ್ಥಿಸಿದರು.

ಅಜ್ಞಾನಧ್ವಾಂತ ವಿಧ್ವಂಸ
ಕೋಟಿಸೂರ್ಯ ಸಮಪ್ರಭ
ಸೂತಾಖ್ಯಾಹಿ ಕಥಾಸಾರಂ
ಮಮಕರ್ಣರಸಾಯನಂ

ಇಲ್ಲಿ "ಕೋಟಿ ಸೂರ್ಯಸಮಪ್ರಭ" ಎಂದು ಪ್ರಭಾ ಶಬ್ದವನ್ನು ಉಪಯೋಗಿಸಿದ್ದಾರೆ,

ಇಲ್ಲಿ ಪ್ರಭಾ ಎಂಬ ಶಬ್ದಕ್ಕೆ 'ಪ್ರತಿಭಾ' ಎಂದರ್ಥವು ಸೂರ್ಯನ ಪಕ್ಷದಲ್ಲಿ ಪ್ರಕಾಶವೆಂದರ್ಥವು.

ಸಾಂಸಾರಿಕರು ಅಜ್ಞಾನಾಂಧಕಾರದಲ್ಲಿ ತೊಳಲುತ್ತಿದ್ದಾರೆ.

ಅದನ್ನು ನಾಶಮಾಡಲು ಕೋಟಿ ಸೂರ್ಯ ಪ್ರಕಾಶಕ್ಕೆ ಸಮಾನವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿಭೆಯು ನಿನ್ನಲ್ಲಿದೆ. ನಮಗಳಿಗೆ ಕಥಾಸಾರವನ್ನು ತಿಳಿಸಿರಿ. ಅದು ಕಿವಿಗಳಿಗೆ ರಸಾಯನವು,

ಯೇನ ಪ್ರಕಾರೇಣ ಯಥಾ
ತೇನ ಪ್ರಕಾರೇಣ ತಥಾ
ಸರ್ವೇಣ ಪ್ರಕಾರೇಣೇತಿ ಸರ್ವಥಾ
ಅದರಂತೆ ಕೇನ ಪ್ರಕಾರೇಣೇತಿ ಕಥಾ

ಋಗ್ವೇದದಲ್ಲಿಯೂ ಸಹ ಹತ್ತಾರು ಕಡೆ ಕಥಾ ಶಬ್ಧದ ಪ್ರಯೋಗವು ಬಂದಿದೆ.

ವ್ಯಾಕರಣದಲ್ಲಿ ಕಥಂ ಶಬ್ದದ ಪ್ರಯೋಗವನ್ನು ಯಾವ ಅರ್ಥದಲ್ಲಿ ಉಪಯೋಗಿಸಿರುವರೋ ಅದೇ ಅರ್ಥದಲ್ಲಿ ವೇದದಲ್ಲಿ ಕಥಾಶಬ್ದದ ಪ್ರಯೋಗ ಇದೆ.

ಕಥಾ ಎಂದರೆ ಹೇಗಾಯಿತು ?

ಭಗವಂತನು ಹೇಗೆ ಅವತರಿಸಿದನು ?

ಭಗವಂತನಿಂದ ಸೃಷ್ಟಿಯು ಹೇಗಾಯಿತು ?

ಈ ವಿಚಾರಗಳನ್ನು ಪ್ರತಿಪಾದಿಸಲು ಕಥಾಶಬ್ದದ ಪ್ರಯೋಗವು ರೂಢಿಯಲ್ಲಿದೆ.

ಕಥೆಯನ್ನು ಹೇಳುವುದರಲ್ಲಿ ವಿಸ್ತಾರ ಪದ್ಧತಿ, ಸಂಕ್ಷೇಪ ಪದ್ಧತಿ ಎಂದು ಎರಡು ಪದ್ಧತಿಗಳಿವೆ.

ಅವುಗಳ ಪೈಕಿ ಸಂಕ್ಷೇಪ ಪದ್ಧತಿಯಿಂದಲೇ ಹೇಳಿ, ಅದು ಕರ್ಣಗಳಿಗೆ ರಸಾಯನವು ಎಂದು ಶೌನಕರು ಕೇಳುತ್ತಿದ್ದಾರೆ.

ಯಾರಾದರೂ ತಮ್ಮ ಹೇಳಿಕೆಯನ್ನು ಅವಚ್ಛೇದ ಕಾವಚ್ಛೇದ ಪದ್ಧತಿಯಿಂದ ಹೇಳತೊಡಗಿದರೆ. ಕೇಳುವವನು ಉದ್ವಿಗ್ನನಾಗುತ್ತಾನೆ.

ಕಥೆಯಾದರೂ ಕರ್ಣ ರಸಾಯನವು ಇನ್ನೂ ಕೇಳಬೇಕು, ಇನ್ನೂ ಕೇಳಬೇಕು ಎಂಬ ಆಸೆಯನ್ನು ಮೂಡಿಸುತ್ತಲೇ ಇರುತ್ತದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಶೌನಕರು ಮುಂದುವರೆದು ಕೇಳುತ್ತಾರೆ–ಭಕ್ತಿ-ಜ್ಞಾನ-ವೈರಾಗ್ಯಯುಕ್ತವಾದ ವಿವೇಕವು ಹೇಗೆ ವೃದ್ಧಿಯಾಗುತ್ತದೆ ?

ಡಾಕ್ಟರ್–ಬ್ಯಾರಿಸ್ಟರ್–ಸೈಂಟಿಸ್ಟ್ ಇವರುಗಳಲ್ಲಿ ವಿವೇಕದ ಅಭಾವವೇನೂ ಇಲ್ಲ. ಆದರೆ ಆ ವಿವೇಕವು ಪರಮಾರ್ಥವಸ್ತು ಪ್ರಾಪ್ತಿಗೆ ಸಹಾಯಕವಾದುದಲ್ಲ.

ಆ ವಿವೇಕವು ಸ್ನೇಹರಹಿತವಾದುದು. ಸಾಮಾನ್ಯ ವಿವೇಕದಿಂದ ಪರಮಾರ್ಥ ವಸ್ತು ಪ್ರಾಪ್ತಿಯಾಗುವುದಿಲ್ಲ.

ಪರಮಾರ್ಥ ವಸ್ತು ಪ್ರಾಪ್ತಿಗಾಗಿ ವಿವೇಕದ ವಿಶಿಷ್ಟ ವೈಶಿಷ್ಟ್ಯವೊಂದು ಬೇಕು.

ಆ ವೈಶಿಷ್ಟ್ಯಕ್ಕನುಗುಣವಾಗಿ ಸಂಪ್ರದಾಯಗಳಿರುತ್ತವೆ.

ಸಂಪ್ರಧಾಯವೆಂದರೆ ಒಂದು ಕ್ರಮದ ಸ್ವೀಕಾರ. ಸತ್ಯಾರ್ಥದಲ್ಲಿಯೇ ಸಂಪ್ರದಾಯ ಶಬ್ದದ ಪ್ರಯೋಗವು ಇರುವುದು.

ಮಿಥ್ಯಾರ್ಥದಲ್ಲಿ ಸಂಪ್ರದಾಯ ಶಬ್ದದ ಪ್ರಯೋಗವಿಲ್ಲ.

ಸಂ–ಸಮ್ಯಕ್, ಪ್ರ–ಪ್ರಕೃಷ್ಟೈಃ ಪ್ರಾಪ್ತಸ್ಯಜ್ಞಾನಸ್ಯದಾಯಂ ಇದೇ ಸಂಪ್ರದಾಯ.

ವಿವೇಕವು ಭಕ್ತಿ–ಜ್ಞಾನ–ವೈರಾಗ್ಯಗಳಿಂದ ರೂಢಿಸಲ್ಪಟ್ಟಿರಬೇಕು.

ಶ್ರೀ ವಿಷ್ಣುಭಕ್ತರು ಇಂತಹ ವಿವೇಕದಿಂದ ಮಾಯಾಮೋಹಾದಿಗಳನ್ನು ದೂರೀಕರಿಸಿಕೊಳ್ಳುತ್ತಾರೆ.

ಶೌನಕರು ಕೇಳುತ್ತಾರೆ. ಕಲಿಕಾಲವು ಪ್ರಾಪ್ತವಾಗಿದೆ. ಜೀವರು ಅಸುರರಾಗಿದ್ದಾರೆ. ಈ ಕ್ಲೇಶಾಕ್ರಾಂತ ಜೀವಿಗಳ ಬಿಡುಗಡೆಯು ಹೇಗೆ ಸಾಧ್ಯ ?

ಜೀವಿಗೆ ಜೀವನವು ಇಲ್ಲ. ಮರಣವೂ ಇಲ್ಲ, ಹಾಗಾಗಿದೆ.

ಒಂದು ಕಡೆ ಪ್ರೀತಿಯ ಬಲೆ–ಮತ್ತೊಂದು ಕಡೆ ಶತ್ರುತ್ವದ ಬೆಂಕಿ. ಮರಣ ಭೀತಿಯು ಯಾವಾಗಲೂ ಕಣ್ಣು ಮುಂದೆಯೆ ನರ್ತಿಸುತ್ತಿದೆ.

ಈ ಅಜ್ಞಾನದ ಹೆಸರೇ ದುಃಖ–ಕ್ಲೇಶ. ಮಹಾತ್ಮರಾದ ಸೂತ ಪೌರಾಣಿಕರೇ–ಈ ಕ್ಲೇಶದಿಂದ ಜೀವಿಗಳು ಪಾರಾಗುವುದು ಹೇಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವುದು ಶ್ರೇಯಸಾಮಪಿ ಶ್ರೇಯಸ್ಸೋ ಪಾವನಾನಾಂಚ ಪಾವನವೋ.

ಶ್ರೀ ಕೃಷ್ಣ ಪ್ರಾಪ್ತಿಗೆ ಪರಮಸಾಧನ ಭೂತವೋ ಅನಂತ ಕಲ್ಯಾಣ ಕಾರಿಯೋ ಅಂತಹುದನ್ನು ನಿರೂಪಿಸಿ.

ಅನಂತರೂಪೀ ಪರಮಾತ್ಮನನ್ನು ಪಡೆಯುವ ಸಾಧನವೂ ಅನಂತ ವಾಗಿಯೇ ಇರಬೇಕಷ್ಟೆ. ಆ ಸಾಧನೆಯು ಶಾಂತಿ–ಪ್ರೀತಿದಾಯಕವಾಗಿರುವುದು.

ಚಿಂತಾಮಣಿ ರ್ಲೋಕಸುಖಂ
ಸುರದ್ರುಃ ಸ್ವರ್ಗಸಂಪದಂ
ಪ್ರಯಚ್ಛತಿಗುರುಃ ಪ್ರೀತೋ
ವೈಕುಂಠಂ ಯೋಗಿದುರ್ಲಭಂ

ಚಿಂತಾಮಣಿಯಿಂದ ಲೋಕಸುಖದ ಪ್ರಾಪ್ತಿಯಾಗುತ್ತದೆ. ಕಲ್ಪವೃಕ್ಷವು ಅಧಿಕವೆಂದರೆ ಸ್ವರ್ಗೀಯ ಸಂಪತ್ತನ್ನು ಕೊಡುತ್ತದೆ.

ಸದ್ಗುರುವು ಸುಪ್ರೀತನಾದರೆ ಯೋಗಿಗಳಿಗೂ ದುರ್ಲಭವಾದ ವೈಕುಂಠ ವನ್ನೇ ಕೊಡುತ್ತಾನೆ.

ಸೂತರು ಹೇಳುತ್ತಾರೆ–

ಪ್ರೀತಿಃ ಶೌನಕ ಚಿತ್ತೇತೇ ಹ್ಯತೋವಚ್ಮಿ ವಿಚಾರ್ಯಚ ।

ಸರ್ವಸಿದ್ಧಾಂತ ನಿಷ್ಪನ್ನ
ಸಂಸಾರ ಭಯನಾಶನಂ
ಭಕ್ತ್ಯೌಘವರ್ಧನಂಯಚ್ಚ
ಕೃಷ್ಣ ಸಂತೋಷಹೇತುಕಂ
ತದಹಂ ತೇಭಿಧಾಸ್ಯಾಮಿ
ಸಾವಧಾನತಯಾ ಶೃಣು

ನಿಮಗಳ ಹೃದಯದಲ್ಲಿ ಅಪಾರ ಪ್ರೀತಿಯಿದೆ.

ಆದರಿಂದ ನಾನು ವಿಚಾರಮಾಡಿ ಸರ್ವ ಸಿದ್ಧಾಂತ ನಿಷ್ಪನ್ನವಾದ,ಸಂಸಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಯನಾಶಕವಾದ. ಭಕ್ತಿವರ್ಧಕವಾದ ಸಾಧನವನ್ನು ತಿಳಿಸುತ್ತೇನೆ. ಸಾವಧಾನ ತಯಾಶೃಣು.

ಕಲಿಯುಗವೆಂಬ ವಿಷಸರ್ಪವು ಎಲ್ಲರನ್ನೂ ದುಃಖಿಗಳನ್ನಾಗಿ ಮಾಡುತ್ತಿದೆ ಆದರಿಂದ ಪಾರಾಗಲು ಶುಕದೇವರು ಭಾಗವತ ಶಾಸ್ತ್ರವೆಂಬ ಮಂತ್ರವನ್ನು ಉಪದೇಶಿಸಿದ್ದಾರೆ.

ಒಬ್ಬನು ಸರ್ಪದಿಂದ ಕಚ್ಚಲ್ಪಟ್ಟರೆ ಮಂತ್ರವಿದನು ಮಂತ್ರವನ್ನು ಉಚ್ಚರಿಸಿ ವಿಷದ ವೇಗವನ್ನು ಶಮನ ಮಾಡುತ್ತಾನೆ. ಕೇಳುವವನಿಗೆ ಮಂತ್ರಾರ್ಥವೇನೂ ಗೊತ್ತಿರುವುದಿಲ್ಲ.

ಆದರೂ ವಿಷದ ಆವೇಗವು ಕಮ್ಮಿಯಾಗುತ್ತದೆ.

ಇದೇ ಶ್ರೀ ಶುಕದೇವರ ವೈಶಿಷ್ಟ್ಯವು.

ಗಿಣಿಗೆ ಏನು ಹೇಳಿಕೊಟ್ಟರೆ ಅದನ್ನು ಹಾಗೇ ಹೇಳುತ್ತದೆ,

ಶುಕಪಾಠವೆಂದೇ ರೂಢಿಯಲ್ಲಿದೆ. ಅಂದರೆ ತನ್ನ ಕಡೆಯಿಂದ ಸೇರಿಸುವುದಾಗಲಿ. ಬಿಡುವುದಾಗಲಿ ಏನೂ ಇಲ್ಲ.

ಪರಂಪರಾನುಗತವಾಗಿ ಬಂದ ಪಾಠಕ್ಕನುಗುಣವಾಗಿ ಶುಕದೇವರು ಹೇಳುತ್ತಾರೆ. ಏನನ್ನೂ ಸೇರಿಸುವುದಿಲ್ಲ—ಏನನ್ನೂ ಕಳೆಯುವುದಿಲ್ಲ.

ಶ್ರೀ ಮದ್ಭಾಗವತಂ ಶಾಸ್ತ್ರಂ
ಕಲೌಕೀರೇಣ ಕೀರ್ತಿತಂ

ಎನ್ನುವುದಕ್ಕೆ ಇದೇ ಅರ್ಥವು. ಭಾಗವತಶಾಸ್ತ್ರವು ಅನಾದಿ ಪರಂಪರೆಗೆ ಅನುಗುಣವಾಗಿ ಪ್ರಾಪ್ತವಾದುದಾಗಿದೆ.

ಭಾಗವತ ಶಾಸ್ತ್ರದ ಮತ್ತೊಂದು ವೈಶಿಷ್ಟ್ಯವನ್ನು ಹೇಳುತ್ತಾರೆ.

ಏತಸ್ಮಾದಪರಂ ಕಿಂಚಿತ್
ಮನಃಶುದ್ಧ್ಯೈನವಿದ್ಯತೇ

ಇದೇ ಮನಃಶುದ್ಧಿಗೆ ಪರಮಸಾಧನವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ವಕ್ತಾರನ ಮುಖದಿಂದ ಹೊರಟು ಶ್ರೋತಾರನ ಮನಸ್ಸನ್ನು ಶುದ್ಧಿಗೊಳಿಸುತ್ತದೆ. ಕರ್ತಾ ಒಬ್ಬನಾದರೆ ಫಲಭೋಕ್ತೃವು ಮತ್ತೊಬ್ಬನು.

ಸಾಮಾನ್ಯವಾಗಿ ವ್ಯವಹಾರದಲ್ಲಿ ಕರ್ಮಕರ್ತೃವೇ ಫಲಭೋಕ್ತೃವೂ ಸಹ.

ಆದರೆ ಇಲ್ಲಿ ಹಾಗಲ್ಲ.

ಸತ್ಕರ್ಮದ–ಜ್ಞಾನಯಜ್ಞದ ವಿಲಕ್ಷಣ ಪ್ರಭಾವವಿದು.

ಇಲ್ಲಿ ನಿಮ್ಮ ಶ್ರವಣವೇ ಅಗ್ನಿಕುಂಡ. ನಿಮ್ಮ ಹೃದಯಸ್ಥ ಆತ್ಮದೇವನೇ ಯಜ್ಞಾರಾಧ್ಯ ದೇವನು. ವಸ್ತುತಃ ಇಲ್ಲಿ ಕರ್ತಾ–ಭೋಕ್ತಾ ಬೇರೆ-ಬೇರೆ ಇಲ್ಲ. ಅಂತರ್ಯಾಮಿಯೇ ಇಲ್ಲಿ ಹೇಳುತ್ತಿದ್ದಾನೆ. ಅಲ್ಲಿ ಕೇಳುತ್ತಿದ್ದಾನೆ.

ಕೇಳುವವನ–ಹೇಳುವವನ ಹೃದಯಸ್ಥ ಅಂತರ್ಯಾಮಿಯು ಒಬ್ಬನೇ.

ಇಂತಹ ಭಾಗವತ ಶಾಸ್ತ್ರವನ್ನು ಕೇಳುವುದಕ್ಕೆ ಪುಣ್ಯವು ಬೇಕು.

ಜನ್ಮಾಂತರೇ ಭವೇತ್ಪುಣ್ಯಂ
ತದಾಭಾಗವತಂ ಲಭೇತ್

ಇದು ಕೇವಲ ಪುಣ್ಯವಲ್ಲ, ಪುಣ್ಯ-ಕರ್ಮವಲ್ಲ, ಪುಣ್ಯಫಲವು. ಇದರ ಶ್ರವಣದಿಂದ ಒದಗುವುದು ಅನಂತತೃಪ್ತಿ.

ಶ್ರೀ ಶುಕದೇವರು ರಾಜಾ ಪರೀಕ್ಷಿತನಿಗೆ ಕಥೆಯನ್ನು ಹೇಳಲು ಬಂದಾಗ ದೇವತೆಗಳು ಅಮೃತದ ಕುಂಭವನ್ನು ತೆಗೆದುಕೊಂಡು ಅವರ ಮುಂದಿಟ್ಟು ಹೇಳಿದರು–ಮಹಾತ್ಮನ್ ತಾವು ಈ ಅಮೃತವನ್ನು ತೆಗೆದುಕೊಂಡು ಅದರ ಬದಲಾಗಿ ನಮಗೆ ಭಾಗವತ ಕಥಾಮೃತವನ್ನು ಕೊಡಿರಿ.

ಎಷ್ಟಾದರೂ ದೇವತೆಗಳು ಸ್ವಕಾರ್ಯ ಸಾಧನೆಯಲ್ಲಿ ನಿರತರಷ್ಟೆ.

ಶ್ರೀ ಶುಕದೇವರು ಹೇಳಿದರು–ದೇವತೆಗಳೇ ನೀವು ಮಹಾ ಸ್ವಾರ್ಥಿಗಳು. ಸ್ವರ್ಗದ ವಿನಿಮಯವನ್ನು ಬಯಸುತ್ತಿರುವಿರಿ.

ಕ್ವಸುಧಾ ಕ್ವಕಥಾ ಲೋಕೇ
ಕ್ವಕಾಚಃಕ್ವಮಣಿರ್ಮಹಾನ್

Sri Vidyabharathi Book Centre, Sringeri

CC-0. In Public Domain. Digitized by eGangotri

ಅಮೃತವೆಲ್ಲಿ ? ಕಥಾಮೃತವೆಲ್ಲಿ ? ಗಾಜಿಗೂ ಮಣಿಗೂ ವ್ಯತ್ಯಾಸವಿಲ್ಲವೆ ? ಅಭಕ್ತರು ಇದರ ಅಧಿಕಾರಿಗಳಲ್ಲ.

ನೀವು ವಿದ್ವಾಂಸರೂ, ಸಮರ್ಥರೂ, ಅರ್ಥಿಗಳೂ ಆಗಿರಬಹುದು. ಆದರೆ ಅಧಿಕಾರಿಗಳಲ್ಲ.

ಸಂಸಾರ ದುಃಖತಪ್ತ ಜೀವಿಗಳಿಗೆ ಮಾತ್ರ ಭಾಗವತ ಕಥಾಮೃತ ಸೇವನೆಯಲ್ಲಿ ಅಧಿಕಾರವುಂಟು.

ದೇವತೆಗಳಿಗಿದು ದುರ್ಲಭವು.

ಪರೀಕ್ಷಿತನಿಗೆ ಮೋಕ್ಷ ಪ್ರಾಪ್ತಿಯಾದುದನ್ನು ನೋಡಿ ಬ್ರಹ್ಮನಿಗೂ ಆಶ್ಚರ್ಯವಾಯಿತು. ಅವನು ಎಲ್ಲಾ ವಸ್ತುಗಳನ್ನೂ ತುಲನಮಾಡಿ, ಭಾಗವತವೇ ಅತ್ಯಂತ ಶ್ರೇಷ್ಠವೆಂದು ಹೇಳಿದನು. ಇದರ ಶ್ರವಣ ಸಮಕಾಲದಲ್ಲಿಯೇ ಈಶ್ವರ ಪ್ರಾಪ್ತಿಯಾಗುತ್ತದೆ.

ಪೂಜ್ಯ ನಾರದರು ಸನಕಾದಿಗಳಿಂದ ಶ್ರೀ ಮದ್ಭಾಗವತವನ್ನು ಶ್ರವಣ ಮಾಡಿದರು. ಯದ್ಯಪಿ ನಾರದರು ಬ್ರಹ್ಮನಿಂದಲೇ ಭಾಗವತವನ್ನು ಶ್ರವಣ ಮಾಡಿದ್ದರು.

ಸನಕಾದಿಗಳು ಸಪ್ತಾಹ ಶ್ರವಣ ವಿಧಿಯನ್ನು ನಿರೂಪಿಸಿದರು.

ಶೌನಕರು ಕೇಳಿದರು–ಪೂಜ್ಯರೇ–ನಾರದರು ಸದಾ ಸಂಚರಣ ಶೀಲರು. ಒಂದು ಕಡೆ ಇರುವವರಲ್ಲ. ಅವರಿಂದ ವೇದಿ ರಚನೆ–ಕುಂಡ ನಿರ್ಮಾಣ ಸಮಿದಾಹರಣ–ಕುಶಗ್ರಹಣ ಇತ್ಯಾದಿಗಳು ಸಾಧ್ಯವಿಲ್ಲ, ಅವರು ಯಾವಾಗಲೂ ಶ್ರೀ ಕೃಷ್ಣ ಗೋವಿಂದ ಹರೇ ಮುರಾರೇ ಹೇ ನಾಥ ನಾರಾಯಣ ವಾಸುದೇವ, ಎಂದು ಭಗವನ್ನಾಮೋಚ್ಚಾರಣೆಯಲ್ಲಿಯೆ ಅವರಿಗೆ ಆನಂದವು ಅಂತಹವರು ಭಾಗವತದಂತಹ ಮಹಾ ಪುರಾಣವನ್ನೇಕೆ ಶ್ರವಣ ಮಾಡಿದರು.

ಆಗ ಸೂತ ಪುರಾಣಿಕರು ಹೀಗೆ ಉತ್ತರಿಸಿದರು–

ಬ್ರಾಹ್ಮಣರೇ–ವೇದಾದಿಗಳೆಲ್ಲವೂ ಕರ್ಮಕಾಂಡಿಗಳಿಗಾಗಿ ಎನ್ನುವುದು ಕೆಲವರ ಅಭಿಪ್ರಾಯವಷ್ಟೆ. ಎಲ್ಲರೂ ಕರ್ಮ ಕಾಂಡಿಗಳಾಗಿಬಿಟ್ಟರೆ ಪರಮ ಕಲ್ಯಾಣ ಭಾಗಿಗಳಾಗುತ್ತಾರೆ ಎನ್ನುವುದು ಸೂಕ್ತವಾದ ಅಭಿಪ್ರಾಯವಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲರೂ ಕರ್ಮಕಾಂಡಿಗಳಾಗಲು ಸಾಧ್ಯವಿಲ್ಲ.

ನಾರದರಾದರೂ ಕರ್ಮಕಾಂಡದಲ್ಲಿ ಅನಾಸಕ್ತರು. ಭಕ್ತಿಯ ಪ್ರೀತಿಯ ಆಚಾರ್ಯರು, ಇವರ ವಿಚಾರವನ್ನು ಶ್ರೀ ಶುಕದೇವರು ನನಗೆ ತಿಳಿಸಿದ ರೀತಿಯಲ್ಲಿ ನಿಮಗಳಿಗೆ ತಿಳಿಸುತ್ತೇನೆ,

ಒಂದು ಸಾರಿ ವಿಶಾಲಾ ನದಿತೀರದಲ್ಲಿ ಸತ್ಸಂಗವು ಸೇರಿದ್ದಿತು. ಸನಕಾದಿಗಳೂ ಅಲ್ಲಿ ಉಪಸ್ಥಿತರಿದ್ದರು. ಹಠಾತ್ ನಾರದರ ದರ್ಶನವಾಯಿತು. ಸನಕಾದಿಗಳು ಕೇಳಿದರು–

ಕಥಂ ಬ್ರಹ್ಮನ್ ದೀನಮುಖಃ
ಕುತಶ್ಚಿಂತಾತುರೋ ಭವಾನ್
ತ್ವರಿತಂ ಗಮ್ಯತೇ ಕುತ್ರ
ಕುತಶ್ಚಾಗಮನಂತವ

ಬ್ರಹ್ಮನ್ ಏಕೆ ದೀನಮುಖರಾಗಿರುವಿರಿ ? ಚಿಂತಾತುರರಾಗಿ ಕಾಣುತ್ತಿರುವಿರಿ ?

ಇಷ್ಟು ತ್ವರಿತತೆಯಿಂದ ಎಲ್ಲಿಗೆ ಹೋಗಬೇಕೆಂದಿರುವಿರಿ ? ನೀವು ಬಂದುದಾದರೂ ಎಲ್ಲಿಂದ ?

ನಾರದರು ಹೇಳಿದರು–

ತೀರ್ಥೇಷು ಭ್ರಮಮಾಣ ಇತಸ್ತತಃ, ಪುಷ್ಕರ ಪ್ರಯಾಗ–ಕಾಶೀ ಭೂಲೋಕದ ಉತ್ಕೃಷ್ಟ ತೀರ್ಥಗಳಲ್ಲಿ ಸಂಚರಿಸುತ್ತಿದ್ದೆ.

ಅಂದರೆ–ಮಹಾತ್ಮರು ತೀರ್ಥನದಿಗಳಲ್ಲಿ ಅಷ್ಟಾಗಿ ಸಂಚರಿಸುವುದಿಲ್ಲ. ಸಮಾಧಿನಿಷ್ಠರೂ–ಅದ್ವೈತನಿಷ್ಠರೂ ತೀರ್ಥಾಟನೆಯ ಆವಶ್ಯಕತೆಯನ್ನು ಅಷ್ಟಾಗಿ ಒಪ್ಪುವುದಿಲ್ಲ.

ಆತ್ಮತೀರ್ಥಂ ನಜಾನಂತಿ
ಕಥಂಮೋಕ್ಷೀ ಭವೇಜ್ಞನಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಭಕ್ತಿಯ ಗ್ರಾಹಕರೇನೋ ಇದ್ದಾರೆ. ಆದರೆ ಜ್ಞಾನ-ವೈರಾಗ್ಯಗಳ ಗ್ರಾಹಕರಿಲ್ಲ.

ಒಬ್ಬೊಬ್ಬರು ವೈರಾಗ್ಯವನ್ನು ಭಕ್ತಿಯ ಆಭೂಷಣವನ್ನಾಗಿ ತಿಳಿಯುತ್ತಾರೆ. ಆದರೆ ಆಭೂಷಣವಿಲ್ಲದೆಯೂ ಸೌಂದರ್ಯವಿರುತ್ತದೆ.

ಕೆಲವರ ಅಭಿಪ್ರಾಯದಲ್ಲಿ ವೈರಾಗ್ಯವು ಭಕ್ತಿಯ ಕಣ್ಣು. ವೈರಾಗ್ಯವಿಲ್ಲದ ಭಕ್ತಿಯು ಕುರುಡು.

ವೈರಾಗ್ಯವು ಭಕ್ತಿಯ ಫಲವೆಂಬುದು ಕೆಲವರ ಅಭಿಪ್ರಾಯ.

ಈ ವಿಚಾರದಲ್ಲಿ ಭಾಗವತದ ದೃಷ್ಟಿಕೋಣವೆಂದರೆ-ಜ್ಞಾನ-ವೈರಾಗ್ಯಗಳು ಭಕ್ತಿಯ ಆಭೂಷಣಗಳೂ ಅಲ್ಲ, ಅಂಗಗಳೂ ಅಲ್ಲ.

ಜ್ಞಾನ-ವೈರಾಗ್ಯಗಳು ಭಕ್ತಿಯ ಫಲಗಳು.

ಫಲವೆಂದರೆ-ಭಗವದಾಕಾರದ ವೃತ್ತಿ. ಈ ವೃತ್ತಿಯು ಮೂಡಿದಾಗ ಪ್ರಪಂಚವು ಬಾಧಿಸಲ್ಪಡುತ್ತದೆ. ಆಗ ಸ್ವರೂಪದ ಬೋಧವಾಗುತ್ತದೆ.

ಭಜನೀಯಸ್ವರೂಪದ ಬೋಧ, ತದಿತರವ್ಯಾವೃತ್ತಿಯೇ ಭಾಗವತದ ದೃಷ್ಟಿಯಿಂದ ಭಕ್ತಿಯ ಸ್ವರೂಪವು ಜ್ಞಾನ-ವೈರಾಗ್ಯಗಳು ನೇತಿ-ನೇತಿ-ಇತ್ಯಾದಿ ನಿಷೇಧದಿಂದ, ಹಾಗೂ "ಅಹಂ ಬ್ರಹ್ಮಾಸ್ಮಿ" ಇತ್ಯಾದಿ ವಾಕ್ಯಗಳಿಂದ ಪ್ರತ್ಯಕ್‌ಚೈತನ್ಯಾಭಿನ್ನವಾದ ಬ್ರಹ್ಮಾನುಭವವನ್ನು ಮಾಡಿಸುತ್ತವೆ.

ಜ್ಞಾನ ವೈರಾಗ್ಯಗಳು ಭಕ್ತಿಯ ಪುತ್ರರು, ಅಂದರೆ ಭಕ್ತಿಯ ಫಲಗಳು. ಭಕ್ತಿಯುಸಮಸ್ತವೇದ-ಶಾಸ್ತ್ರಗಳೊಡನೆ ಸಮನ್ವಿತವಾಗಿರುವುದು.

ಭಕ್ತಿದೇವಿಯು ನಾರದರನ್ನು ಕೇಳಿದಳು-ರಾಜಾಪರೀಕ್ಷಿತನು ಕಲಿಯುಗವನ್ನೇಕೆ ಆಶ್ರಯಕೊಟ್ಟು ಸ್ಥಾಪಿಸಿದನು ?

ಈಗ ಎಲ್ಲಾ ಪದಾರ್ಥಗಳೂ ಸಾರರಹಿತವಾಗಿವೆಯಲ್ಲ ? ಸಾರವು ಎಲ್ಲಿ ಹೋಯಿತು ?...

ಭಗವಂತನಲ್ಲಿಯೂ ಕರುಣೆಯ ಅಭಾವವು ತೋರುತ್ತಿದೆ. ದಯಾ-ದಾಕ್ಷಿಣ್ಯಾದಿಗಳು ಕಂಡುಬರುತ್ತಿಲ್ಲ. ಇಷ್ಟರ ಮಟ್ಟಿಗೆ ಅಧರ್ಮವು ವರ್ಧಿಸುತ್ತಿದ್ದರೂ ಏನೂ ಪ್ರತೀಕಾರಮಾಡದೇ ಇದ್ದಾನೆ. ಇದೇಕೆ ಹೀಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ ಭಕ್ತಿಯು ಉದ್ದೇಶವು ಭಗವಂತನನ್ನು ನಿಂದಿಸಬೇಕೆಂಬುದಲ್ಲ; ಪರೀಕ್ಷಿತನನ್ನು ದೋಷಿಯನ್ನಾಗಿ ಮಾಡಬೇಕೆಂಬುದೂ ಅಲ್ಲ.

ಜನಸಾಮಾನ್ಯರಲ್ಲಿ ಮೂಡಿರುವ ಪ್ರಶ್ನೆಯನ್ನು ಉದಾಹರಿಸುತ್ತಿದ್ದಾಳೆ.

ನಾರದರು ಹೇಳಿದರು :

ದೇವಿ ! ಭಗವಾನ್ ಕೃಷ್ಣನು ತನ್ನ ಲೀಲೆಗಳನ್ನು ಉಪಸಂಹರಿಸಿಕೊಂಡು ಅಂತರ್ಧಾನನಾದ ಮೇಲೆ ಸಂಪೂರ್ಣಧರ್ಮಾದಿಸಾಧನೆಗಳನ್ನು ಬಾಧಿಸತಕ್ಕ ಕಲಿಯುಗವು ಪ್ರಾಪ್ತವಾಯಿತು.

ರಾಜಾಪರೀಕ್ಷಿತನು ದೀನನಾದ ಕಲಿಯನ್ನು ಶರಣಾಗತನ ರೂಪದಲ್ಲಿ ಗ್ರಹಿಸಿದನು.

ಭಗವಂತನಿಗೆ ಕಲಿಯಂತಹವರಿಂದ ಯಾವ ಬಾಧೆಯೂ ಇಲ್ಲ. ಅವನ ಒಂದು ಸಂಕಲ್ಪಮಾತ್ರದಿಂದ ಸಾವಿರಾರು ಕಲಿಗಳು ಹುಟ್ಟುತ್ತಾರೆ. ಲಯ ವಾಗುತ್ತಾರೆ.

ರಾಜಾ ಪರೀಕ್ಷಿತನು ಶರಣಾಗತ ಧರ್ಮವನ್ನುಪಾಲಿಸಿದ್ದಾನೆ.

ದೋಷಿಯಾದರೂ ಶರಣಾಗತನಾದರೆ ಅವನನ್ನು ಸ್ವೀಕರಿಸಬೇಕು. ಇದು ಸತ್ಪುರುಷರ ಧರ್ಮವು.

ಭಗವಂತನನ್ನು ನಂಬಿರುವ ಅವನಿಗೆ ಕಲಿಯಿಂದ ಹೆದರಿಕೆಯಿರಲಿಲ್ಲ.

ಭ್ರಮರವು ಪುಷ್ಪಸಾರವನ್ನು ಮಾತ್ರ ಗ್ರಹಿಸುವಂತೆ–ಹಂಸವು ಜಲವನ್ನು ಪ್ರತ್ಯೇಕಿಸಿ ಹಾಲನ್ನು ಸ್ವೀಕರಿಸುವಂತೆ ಗುಣಗ್ರಾಹಿಗಳ ಸ್ವಭಾವವು ಸಾರಗ್ರಾಹಿಯು. ಅಲ್ಲದೆ ಕಲಿಯಲ್ಲಿ ಒಂದು ಉತ್ಕೃಷ್ಟವಾದ ಗುಣವಿದೆ.

ಯತ್ಫಲಂ ನಾಸ್ತಿ ತಪಸಾ
ನ ಯೋಗೇನ ಸಮಾಧಿನಾ
ತತ್ಫಲಂ ಲಭತೇ ಸಮ್ಯಕ್
ಕಲೌ ಕೇಶವಕೀರ್ತನಾತ್

Sri Vidyabharathi Book Centre, Sringeri

CC-0. In Public Domain. Digitized by eGangotri

ತಪಸ್ಸಿನಿಂದ, ಯೋಗಾಭ್ಯಾಸದಿಂದ ಯಾವ ಫಲವು ದೊರಕುವುದಿಲ್ಲವೊ, ಕಲಿಯುಗದಲ್ಲಿ ಆ ಫಲವು ಭಗವನ್ನಾಮೋಚ್ಚಾರಣೆಯಿಂದ ಪ್ರಾಪ್ತವಾಗುವುದು. ಸಾಕು–ಇಂತಹ ಮಹತ್ಫಲವು ಕಲಿಯುಗದಲ್ಲಿರುವಾಗ ಕಲಿಯನ್ನೇಕೆ ದೂಷಿಸ ಬೇಕು ?

ಕಲಿಯುಗದಲ್ಲಿ ವಸ್ತುಗಳ ಸಾರವು ಹೊರಟುಹೋಗುತ್ತಿದೆ.

ಅಕ್ಕಿಯಿಂದ ತೌಡು ಬೇರೆಯಾಗುವಂತೆ ವಸ್ತುವು ಸಾರದಿಂದ ಬೇರೆ ಯಾಗುತ್ತಿದೆ.

ಮಹಾ–ಮಹಾ ವಿದ್ವಾಂಸರುಗಳೂ ಭಾಗವತದ ಕಥಾಪ್ರವಚನಕ್ಕೂ– ಗೀತೋಪನಿಷತ್ತುಗಳ ಪ್ರವಚನಕ್ಕೂ ಮೌಲ್ಯವನ್ನು ನಿರ್ಧರಿಸಿ ಹೇಳುತ್ತಾರೆ. ಅಷ್ಟು ಕೊಟ್ಟರೆ ಹೇಳುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು. ಆಗ ಕಥಾಸಾರವು ನನ್ನನ್ನು ಅಪಮಾನಗೊಳಿಸುತ್ತಿದ್ದಾರೆಂದು ತಿಳಿದು ಹೊರಟು ಹೋಗುವುದು.

ನಾಸ್ತಿಕರ–ಅಶ್ರದ್ಧಾಳುಗಳ ಕಾರಣದಿಂದ ತಪಸ್ಸಿನ ಸಾರವು ಹೋಯಿತು

ಅಪಾತ್ರಿಗಳ ಧ್ಯಾನದಿಂದ ಧ್ಯಾನದ ಸಾರವು ಹೋಯಿತು.

2–3 ನಿಮಿಷಗಳಲ್ಲಿ ಧ್ಯಾನಸ್ಥರಾಗುವಿರಿ–ಎಂಬ ಕೂಗಿಗೆ ಜನರು ಬಲಿ ಬೀಳುತ್ತಿದ್ದಾರೆ. ಇದೂ ಸಹ ನೋಟುಗಳನ್ನು ದ್ವಿಗುಣಮಾಡುವ ಕಥೆಯಾಗಿದೆ.

ಧ್ಯಾನಾವಸ್ಥೆಯನ್ನು ಪಡೆಯಬೇಕಾದರೆ–ಗುರುವಿನ ಶರಣಾಗತಿಯನ್ನು ಪಡೆದು ಜಪಾನುಷ್ಠಾನಾದಿ ಅಭ್ಯಾಸಗಳನ್ನು ನಡೆಸಬೇಕು, ಸುಮ್ಮ-ಸುಮ್ಮನೆ ಇದ್ದಕ್ಕಿದ್ದ ಹಾಗೆಯೇ ಯಾರು–ಎಲ್ಲಿ ಯಾವಾಗ ಬೇಕಾದರೂ, ಎತ್ತಿಕೊಂಡು ಹೋಗಲು ರಸ್ತೆಯಂಚಿನಲ್ಲಿ ಬಿದ್ದಿರುವ ಪದಾರ್ಥವಲ್ಲ.

ಜನರಲ್ಲಿ ಅಂತಃಕರಣಶುದ್ಧಿಯಿಲ್ಲ. ಲೋಭಾಕ್ರಾಂತವಾಗಿರುವ ಮನಸ್ಸಿಗೆ ದಂಭಾಚಾರ-ಪಾಖಂಡಿತನವೇ ಸತ್ಯವಾಗಿ ತೋರುತ್ತದೆ.

ಶಾಸ್ತ್ರಾಭ್ಯಾಸವಂತೂ ಇಲ್ಲವೇ ಇಲ್ಲ. ಧ್ಯಾನವೆಂದರೇನೆಂಬುದನ್ನೇ ತಿಳಿದಿಲ್ಲ. ಯಾರಾದರೂ ನಾಡಿಯನ್ನು ಅದುಮಿಬಿಟ್ಟರೆ, ಕಣ್ಣು ಮುಚ್ಚಿದಾಗ ವಿದ್ಯುತ್ತಿನ ಬೆಳಕು ಕಂಡರೆ ಅದೇ ಧ್ಯಾನವೆನ್ನುತ್ತಾರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಡಿತರ ಸ್ಥಿತಿಯೂ ಅತಿಶೋಚನೀಯವಾಗಿದೆ.

ಪಂಡಿತಾಸ್ತು ಕಲತ್ರೇಣ
ರಮಂತೇ ಮಹಿಷಾ ಇವ
ಪುತ್ರಸ್ಯೋತ್ಪಾದನೇ ದಕ್ಷಾಃ
ಅದಕ್ಷಾ ಮುಕ್ತಿಸಾಧನೇ

ಸಂಪ್ರದಾಯಾನುಸಾರವಾಗಿ ಪರಂಪರಾಪ್ರಾಪ್ತವಾದ ಭಾಗವತಧರ್ಮವು ಎಲ್ಲರಿಗೂ ಗೋಚರವಾಗುವುದಿಲ್ಲ.

ಭಗವಂತನೇಕೆ ಇದೆಲ್ಲವನ್ನೂ ಸಹಿಸಿಕೊಂಡಿದ್ದಾನೆಂದರೆ : ಇದು ಕಾಲಧರ್ಮ ಯುಗಧರ್ಮ. ಅಂತೆಯೆ ಸಹಿಸಿಕೊಂಡಿದ್ದಾನೆ.

ಮಗುವು ಕೆಳಕ್ಕೆ ಬಿದ್ದು ಅಳುತ್ತಾ ಧೂಳಿನಲ್ಲಿ ಹೊರಳಾಡುತ್ತಿದ್ದರೂ. ತಾಯಿಯು ನೋಡುತ್ತಿದ್ದರೂ-ಎತ್ತಿಕೊಳುವುದಿಲ್ಲ. ಅವಳ ಅಭಿಪ್ರಾಯವಿಷ್ಟೆ : ಮಗುವು ತಾನೇ ಏಳಲು ಅಭ್ಯಾಸಮಾಡಿಕೊಳ್ಳಲಿ, ತನ್ನ ದೇಹವನ್ನು ತಾನೇ ಶುದ್ಧೀಕರಿಸಿಕೊಳ್ಳಲಿ.

ತಾಯಿಯೇ ಮಾಡುತ್ತಾ ಹೋದರೆ ಮಗುವು ಕಲಿತುಕೊಳ್ಳುವುದು ಹೇಗೆ ?

ಅದರಂತೆ ಭಗವಂತನೂ ನೋಡುತ್ತಿದ್ದಾನೆ.

ನಾರದರ ವಾಗ್ವೈಖರಿಯಿಂದ ಅಚ್ಚರಿಗೊಂಡ ಭಕ್ತಿದೇವಿಯು ಹೇಳಿದಳು :

ಸಾಧೂನಾಂ ದರ್ಶನಂ ಲೋಕೇ
ಸರ್ವಸಿದ್ಧಿಕರಂ ಪರಮ್

ಸಾಧುದರ್ಶನವೆಂದರೆ ಸರ್ವಮಂಗಳದಾಯಕವು.

ಜಯತಿ ಜಗತಿ ಮಾಯಾಂ
ಯಸ್ಯ ಕಾಯಾಧವಸ್ತೇ

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನರಚನಮೇಕಂ
ಕೇವಲಂ ಚಾಕಲಯ್ಯ
ಧ್ರುವ ಪದಮಪಿ ಯಾತೋ
ಯತ್ಕೃಪಾತೋಧ್ರುವೋಯಂ
ಸಕಲಕುಶಲಪಾತ್ರಂ
ಬ್ರಹ್ಮಪುತ್ರಂ ನತಾಸ್ಮಿ

ಕಯಾದುಪುತ್ರನಾದ ಪ್ರಹ್ಲಾದನು ನಿನ್ನ ಒಂದು ಉಪದೇಶದಿಂದ ಮಾಯೆಯನ್ನೇ ಗೆದ್ದುಬಿಟ್ಟನು.

ಧ್ರುವನು ಧ್ರುವಪದವನ್ನು ಹೊಂದಿದನು. ಬ್ರಹ್ಮಮಾನಸಪುತ್ರರಾದ ಸಕಲಕುಶಲಗಳನ್ನೂ ಅನುಗ್ರಹಿಸುವ ನಿಮಗೆ ಅನಂತವಂದನೆಗಳು.

ಇತ್ಯೇವಂ ಪ್ರಥಮೋಽಧ್ಯಾಯಃ
ಶ್ರೀ ಕೃಷ್ಣಾರ್ಪಣಮಸ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ದರ್ಶನ

ಭಕ್ತಿದೇವಿಯ ಕಷ್ಟನಿವೃತ್ತಿಗೆ ನಾರದರ ಉದ್ಯೋಗ

ಅಧ್ಯಾಯ-೨

ನಾರದರು ಹೇಳಿದರು : ದೇವಿ ! ನೀನು ವೃಥಾ ಖೇದಗೊಳ್ಳಬೇಡ. ಚಿಂತಿಸಬೇಡ. ಭಗವಂತನ ಚರಣಾರವಿಂದಗಳನ್ನು ಸ್ಮರಿಸು.

ದುಷ್ಟಕೌರವರ ಬಾಧೆಯಿಂದ ದ್ರೌಪದಿಯನ್ನು ರಕ್ಷಿಸಿದ, ಸಾವಿರಾರು ಜನ ಗೋಪಿಕೆಯರನ್ನು ಅವರವರ ಇಷ್ಟಾನುಸಾರ ಸಂತೃಪ್ತಿಗೊಳಿಸಿದ ಶ್ರೀಕೃಷ್ಣನು ಈಗಲೂ ಇದ್ದಾನೆ.

ನೀನಾದರೊ ಭಗವಂತನಿಗೆ ಪ್ರಾಣಾಧಿಕ ಪ್ರಿಯಳು. ನೀನು ಕರೆದ ಕಡೆಗೆ ನೀಚಾತಿನೀಚರ ಗೃಹವಾದರೂ ಸರಿ ಭಗವಂತನು ಬರುತ್ತಾನೆ.

ನೋಡಿ, ಸತ್ಯಾದಿ ಯುಗದಲ್ಲಿ ಜ್ಞಾನ ವೈರಾಗ್ಯಾದಿಗಳು ಮುಕ್ತಿಸಾಧಕ ಗಳಾದರೆ ಕಲಿಯುಗದಲ್ಲಿ ಭಕ್ತಿಯೇ ಬ್ರಹ್ಮ ಸಾಯುಜ್ಯಕಾರಿಣಿಯು.

ಪೀತಾಂಬರಧಾರೀ-ಮುರಳೀಮನೋಹರ-ನಂದನಂದನ-ಶ್ಯಾಮಸುಂದರ ಶ್ರೀಕೃಷ್ಣನಾಗಲೀ,ಧನುರ್ಧಾರೀ,ಕೌಸಲ್ಯಾನಂದವರ್ಧನ-ಶ್ರೀರಾಮಭದ್ರನಾಗಲೀ ಸದಾಶಿವನಾಗಲಿ, ಶ್ರೀದೇವಿಯಾಗಲಿ—ಇವರುಗಳ ಚಿಂತನೆಯಿಂದ ಮನಸ್ಸು ಆನಂದಸಮುದ್ರದಲ್ಲಿ ಮುಳುಗುತ್ತದೆ.

ದುಃಖವನ್ನು ದೂರಮಾಡುವ ಸರಳಮಾರ್ಗವೆಂದರೆ—ಮನಸ್ಸನ್ನು ಭಗವಂತನ ಜ್ಞಾನ-ಧ್ಯಾನ-ಚಿಂತನೆಗಳಲ್ಲಿ ತದಾಕಾರವನ್ನಾಗಿ ಮಾಡುವುದು. ಇದು ದುಃಖವಿಮೋಚನೆಗೆ ವಿಧಾಯಕವಾಗಿರುವ ಸರಳವೈಜ್ಞಾನಿಕರೀತಿ.

ಭಾಗವತದ ಎರಡನೇ ಸ್ಕಂದದಲ್ಲಿ ಹೇಳಿದ್ದಾರೆ :

ಶ್ರೀಕೃಷ್ಣಚರಣಾಂಭೋಜಂ ಸ್ಮರ ದುಃಖಂ ಗಮಿಷ್ಯತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರಿಂದ ನಾರದರು ಹೇಳುತ್ತಾರೆ. ಭಕ್ತಿದೇವಿ ! ನೀನು ದುಃಖಿಸುವ ಕಾರಣವಿಲ್ಲ.

ಗೀತೆಯಲ್ಲಿ ಹೇಳಿದ್ದಾರೆ :

ಅಪಿ ಚೇತ್ ಸುದುರಾಚರೋ
ಭಜತೇ ಮಾಮನನ್ಯಭಾಕ್
ಸಾಧುರೇವ ಸ ಮಂತವ್ಯಃ
ಸಮ್ಯಗ್ವ್ಯವಸಿತೋ ಹಿ ಸಃ

ಎಂತಹ ದುರಾಚಾರಿಯಾದರೂ ಭಗವಂತನನ್ನು ಅನನ್ಯಭಾವದಿಂದ ಸ್ಮರಿಸುವುದಾದ ಪಕ್ಷದಲ್ಲಿ ಅವನು ಸಾಧು-ಸತ್ಪುರುಷನು. ಇವನು ನೀಚ-ದುಷ್ಟ-ದೀನ-ಹೀನ ಪತಿತ-ಹೀಗೆ ಭೇದಭಾವವಿಲ್ಲದೆ ಎಲ್ಲರ ಹೃದಯಗಳಲ್ಲಿಯೂ ನಿನ್ನ ಪ್ರವೇಶವಾಗುವುದು. ಯಾವಾಗ ಮನುಷ್ಯನಿಗೆ ನಾನು ದೀನ-ಹೀನ-ಪಾಪಿ ಎಂಬ ಅನುಭವವಾಗುವುದೋ ಆವಾಗ ಭಗವಂತನ ಸ್ಮರಣೆಯುಂಟಾಗುತ್ತದೆ. ನೀನು ಹೋದ ಕಡೆ ಭಗವಂತನು ಬರಲೇಬೇಕಷ್ಟೆ.

ತನ್ನ ಪತ್ನಿಯು ಆವರ ಮನೆಗೆ ಸೇವೆಗೆ ಹೋಗಿದ್ದಾಳೆಂದರೆ ಪತಿಯು ಹೋಗದೇ ಇರುವನೇ ?

ಭಕ್ತಿಯ ಪ್ರವೇಶವಾದೆಡೆಯಲ್ಲಿ ಭಗವಂತನ ಆವಿರ್ಭಾವವಿದ್ದೇ ಇರುತ್ತದೆ ಎಲ್ಲೆಡೆಗಳಲ್ಲಿಯೂ ಪರಿಪೂರ್ಣನಾಗಿರುವ ಭಗವಂತನು ಭಕ್ತಿಯ ಪ್ರವೇಶವಾದಾಗ ಆವಿರ್ಭಾವವಾಗುತ್ತಾನೆ. ಇಲ್ಲದಿದ್ದಾಗ ತಿರೋಹಿತನಾಗುತ್ತಾನೆ.

ಪುರಾಣಗಳಲ್ಲಿ ಹೇಳುತ್ತಾರೆ.

ಅತಿಪಾಪಪ್ರಸಕ್ತೋऽಪಿ ಧ್ಯಾಯನ್ನಿಮಿಷಮಚ್ಯುತಮ್
ಸದ್ಯಃ ತಪಸ್ವೀ ಭವತಿ ಪಂಕ್ತಿಪಾವನಪಾವನಃ

ಅತಿಮಲಿನಚಿತ್ತವ್ಯಕ್ತಿಯೂ ಸ್ವಲ್ಪ ಕಾಲ ಭಗವದ್ಧ್ಯಾನಮಾಡಿದರೆ ಅವನು ಮಹಾತಪಸ್ವಿಯಾಗುತ್ತಾನೆ. ಹಾಗೂ ಪಂಕ್ತಿಪಾವನನಾಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಭಕ್ತಿಯ ಗ್ರಾಹಕರೇನೋ ಇದ್ದಾರೆ. ಆದರೆ ಜ್ಞಾನ-ವೈರಾಗ್ಯಗಳ ಗ್ರಾಹಕರಿಲ್ಲ.

ಒಬ್ಬೊಬ್ಬರು ವೈರಾಗ್ಯವನ್ನು ಭಕ್ತಿಯ ಆಭೂಷಣವನ್ನಾಗಿ ತಿಳಿಯುತ್ತಾರೆ. ಆದರೆ ಆಭೂಷಣವಿಲ್ಲದೆಯೂ ಸೌಂದರ್ಯವಿರುತ್ತದೆ.

ಕೆಲವರ ಅಭಿಪ್ರಾಯದಲ್ಲಿ ವೈರಾಗ್ಯವು ಭಕ್ತಿಯ ಕಣ್ಣು. ವೈರಾಗ್ಯವಿಲ್ಲದ ಭಕ್ತಿಯು ಕುರುಡು.

ವೈರಾಗ್ಯವು ಭಕ್ತಿಯ ಫಲವೆಂಬುದು ಕೆಲವರ ಅಭಿಪ್ರಾಯ.

ಈ ವಿಚಾರದಲ್ಲಿ ಭಾಗವತದ ದೃಷ್ಟಿಕೋಣವೆಂದರೆ–ಜ್ಞಾನ-ವೈರಾಗ್ಯಗಳು ಭಕ್ತಿಯ ಆಭೂಷಣಗಳೂ ಅಲ್ಲ, ಅಂಗಗಳೂ ಅಲ್ಲ.

ಜ್ಞಾನ–ವೈರಾಗ್ಯಗಳು ಭಕ್ತಿಯ ಫಲಗಳು.

ಫಲವೆಂದರೆ–ಭಗವದಾಕಾರದ ವೃತ್ತಿ. ಈ ವೃತ್ತಿಯು ಮೂಡಿದಾಗ ಪ್ರಪಂಚವು ಬಾಧಿಸಲ್ಪಡುತ್ತದೆ. ಆಗ ಸ್ವರೂಪದ ಬೋಧವಾಗುತ್ತದೆ.

ಭಜನೀಯಸ್ವರೂಪದ ಬೋಧ, ತದಿತರವ್ಯಾವೃತ್ತಿಯೇ ಭಾಗವತದ ದೃಷ್ಟಿಯಿಂದ ಭಕ್ತಿಯ ಸ್ವರೂಪವು ಜ್ಞಾನ–ವೈರಾಗ್ಯಗಳು ನೇತಿ–ನೇತಿ–ಇತ್ಯಾದಿ ನಿಷೇಧದಿಂದ, ಹಾಗೂ "ಅಹಂ ಬ್ರಹ್ಮಾಸ್ಮಿ" ಇತ್ಯಾದಿ ವಾಕ್ಯಗಳಿಂದ ಪ್ರತ್ಯಕ್‌ಚೈತನ್ಯಾಭಿನ್ನವಾದ ಬ್ರಹ್ಮಾನುಭವವನ್ನು ಮಾಡಿಸುತ್ತವೆ.

ಜ್ಞಾನ ವೈರಾಗ್ಯಗಳು ಭಕ್ತಿಯ ಪುತ್ರರು, ಅಂದರೆ ಭಕ್ತಿಯ ಫಲಗಳು. ಭಕ್ತಿಯುಸಮಸ್ತವೇದ–ಶಾಸ್ತ್ರಗಳೊಡನೆ ಸಮನ್ವಿತವಾಗಿರುವುದು.

ಭಕ್ತಿದೇವಿಯು ನಾರದರನ್ನು ಕೇಳಿದಳು–ರಾಜಾಪರೀಕ್ಷಿತನು ಕಲಿಯುಗವನ್ನೇಕೆ ಆಶ್ರಯಕೊಟ್ಟು ಸ್ಥಾಪಿಸಿದನು ?

ಈಗ ಎಲ್ಲಾ ಪದಾರ್ಥಗಳೂ ಸಾರರಹಿತವಾಗಿವೆಯಲ್ಲ ? ಸಾರವು ಎಲ್ಲಿ ಹೋಯಿತು ?. .

ಭಗವಂತನಲ್ಲಿಯೂ ಕರುಣೆಯ ಅಭಾವವು ತೋರುತ್ತಿದೆ. ದಯಾ–ದಾಕ್ಷಿಣ್ಯಾದಿಗಳು ಕಂಡುಬರುತ್ತಿಲ್ಲ. ಇಷ್ಟರ ಮಟ್ಟಿಗೆ ಅಧರ್ಮವು ವರ್ಧಿಸುತ್ತಿದ್ದರೂ ಏನೂ ಪ್ರತೀಕಾರಮಾಡದೇ ಇದ್ದಾನೆ. ಇದೇಕೆ ಹೀಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ ಭಕ್ತಿಯ ಉದ್ದೇಶವು ಭಗವಂತನನ್ನು ನಿಂದಿಸಬೇಕೆಂಬುದಲ್ಲ, ಪರೀಕ್ಷಿತನನ್ನು ದೋಷಿಯನ್ನಾಗಿ ಮಾಡಬೇಕೆಂಬುದೂ ಅಲ್ಲ.

ಜನಸಾಮಾನ್ಯರಲ್ಲಿ ಮೂಡಿರುವ ಪ್ರಶ್ನೆಯನ್ನು ಉದಾಹರಿಸುತ್ತಿದ್ದಾಳೆ.

ನಾರದರು ಹೇಳಿದರು :

ದೇವಿ ! ಭಗವಾನ್ ಕೃಷ್ಣನು ತನ್ನ ಲೀಲೆಗಳನ್ನು ಉಪಸಂಹರಿಸಿಕೊಂಡು ಅಂತರ್ಧಾನನಾದ ಮೇಲೆ ಸಂಪೂರ್ಣ ಧಾರ್ಮಿಕಸಾಧನೆಗಳನ್ನು ಬಾಧಿಸತಕ್ಕ ಕಲಿಯುಗವು ಪ್ರಾಪ್ತವಾಯಿತು.

ರಾಜಾಪರೀಕ್ಷಿತನು ದೀನನಾದ ಕಲಿಯನ್ನು ಶರಣಾಗತನ ರೂಪದಲ್ಲಿ ಗ್ರಹಿಸಿದನು.

ಭಗವಂತನಿಗೆ ಕಲಿಯಂತಹವರಿಂದ ಯಾವ ಬಾಧೆಯೂ ಇಲ್ಲ. ಅವನ ಒಂದು ಸಂಕಲ್ಪಮಾತ್ರದಿಂದ ಸಾವಿರಾರು ಕಲಿಗಳು ಹುಟ್ಟುತ್ತಾರೆ. ಲಯ ವಾಗುತ್ತಾರೆ.

ರಾಜಾ ಪರೀಕ್ಷಿತನು ಶರಣಾಗತ ಧರ್ಮವನ್ನುಪಾಲಿಸಿದ್ದಾನೆ.

ದೋಷಿಯಾದರೂ ಶರಣಾಗತನಾದರೆ ಅವನನ್ನು ಸ್ವೀಕರಿಸಬೇಕು. ಇದು ಸತ್ಪುರುಷರ ಧರ್ಮವು.

ಭಗವಂತನನ್ನು ನಂಬಿರುವ ಅವನಿಗೆ ಕಲಿಯಿಂದ ಹೆದರಿಕೆಯಿರಲಿಲ್ಲ.

ಭ್ರಮರವು ಪುಷ್ಪಸಾರವನ್ನು ಮಾತ್ರ ಗ್ರಹಿಸುವಂತೆ–ಹಂಸವು ಜಲವನ್ನು ಪ್ರತ್ಯೇಕಿಸಿ ಹಾಲನ್ನು ಸ್ವೀಕರಿಸುವಂತೆ ಗುಣಗ್ರಾಹಿಗಳ ಸ್ವಭಾವವು ಸಾರಗ್ರಾಹಿಯು. ಅಲ್ಲದೆ ಕಲಿಯಲ್ಲಿ ಒಂದು ಉತ್ಕೃಷ್ಟವಾದ ಗುಣವಿದೆ.

ಯತ್ಫಲಂ ನಾಸ್ತಿ ತಪಸಾ
ನ ಯೋಗೇನ ಸಮಾಧಿನಾ
ತತ್ಫಲಂ ಲಭತೇ ಸಮ್ಯಕ್
ಕಲೌ ಕೇಶವಕೀರ್ತನಾತ್

Sri Vidyabharathi Book Centre, Sringeri

CC-O. In Public Domain. Digitized by eGangotri

ತಪಸ್ಸಿನಿಂದ, ಯೋಗಾಭ್ಯಾಸದಿಂದ ಯಾವ ಫಲವು ದೊರಕುವುದಿಲ್ಲವೋ, ಕಲಿಯುಗದಲ್ಲಿ ಆ ಫಲವು ಭಗವನ್ನಾಮೋಚ್ಚಾರಣೆಯಿಂದ ಪ್ರಾಪ್ತವಾಗುವುದು. ಸಾಕು-ಇಂತಹ ಮಹತ್ಫಲವು ಕಲಿಯುಗದಲ್ಲಿರುವಾಗ ಕಲಿಯನ್ನೇಕೆ ದೂಷಿಸ ಬೇಕು?

ಕಲಿಯುಗದಲ್ಲಿ ವಸ್ತುಗಳ ಸಾರವು ಹೊರಟುಹೋಗುತ್ತಿದೆ.

ಅಕ್ಕಿಯಿಂದ ತೌಡು ಬೇರೆಯಾಗುವಂತೆ ವಸ್ತುವು ಸಾರದಿಂದ ಬೇರೆ ಯಾಗುತ್ತಿದೆ.

ಮಹಾ-ಮಹಾ ವಿದ್ವಾಂಸರುಗಳೂ ಭಾಗವತದ ಕಥಾಪ್ರವಚನಕ್ಕೂ-ಗೀತೋಪನಿಷತ್ತುಗಳ ಪ್ರವಚನಕ್ಕೂ ಮೌಲ್ಯವನ್ನು ನಿರ್ಧರಿಸಿ ಹೇಳುತ್ತಾರೆ. ಇಷ್ಟು ಕೊಟ್ಟರೆ ಹೇಳುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು. ಆಗ ಕಥಾಸಾರವು ನನ್ನನ್ನು ಅಪಮಾನಗೊಳಿಸುತ್ತಿದ್ದಾರೆಂದು ತಿಳಿದು ಹೊರಟು ಹೋಗುವುದು.

ನಾಸ್ತಿಕರ-ಅಶ್ರದ್ಧಾಳುಗಳ ಕಾರಣದಿಂದ ತಪಸ್ಸಿನ ಸಾರವು ಹೋಯಿತು

ಅಪಾತ್ರಿಗಳ ಧ್ಯಾನದಿಂದ ಧ್ಯಾನದ ಸಾರವು ಹೋಯಿತು.

2-3 ನಿಮಿಷಗಳಲ್ಲಿ ಧ್ಯಾನಸ್ಥರಾಗುವಿರಿ-ಎಂಬ ಕೂಗಿಗೆ ಜನರು ಬಲಿ ಬೀಳುತ್ತಿದ್ದಾರೆ. ಇದೂ ಸಹ ನೋಟುಗಳನ್ನು ದ್ವಿಗುಣಮಾಡುವ ಕಥೆಯಾಗಿದೆ.

ಧ್ಯಾನಾವಸ್ಥೆಯನ್ನು ಪಡೆಯಬೇಕಾದರೆ-ಗುರುವಿನ ಶರಣಾಗತಿಯನ್ನು ಪಡೆದು ಜಪಾನುಷ್ಠಾನಾದಿ ಅಭ್ಯಾಸಗಳನ್ನು ನಡೆಸಬೇಕು. ಸುಮ್ಮ-ಸುಮ್ಮನೆ ಇದ್ದಕ್ಕಿದ್ದ ಹಾಗೆಯೇ ಯಾರು-ಎಲ್ಲಿ ಯಾವಾಗ ಬೇಕಾದರೂ, ಎತ್ತಿಕೊಂಡು ಹೋಗಲು ರಸ್ತೆಯಂಚಿನಲ್ಲಿ ಬಿದ್ದಿರುವ ಪದಾರ್ಥವಲ್ಲ.

ಜನರಲ್ಲಿ ಅಂತಃಕರಣಶುದ್ಧಿಯಿಲ್ಲ. ಲೋಭಾಕ್ರಾಂತವಾಗಿರುವ ಮನಸ್ಸಿಗೆ ದಂಭಾಚಾರ-ಪಾಖಂಡಿತನವೇ ಸತ್ಯವಾಗಿ ತೋರುತ್ತದೆ.

ಶಾಸ್ತ್ರಾಭ್ಯಾಸವಂತೂ ಇಲ್ಲವೇ ಇಲ್ಲ. ಧ್ಯಾನವೆಂದರೇನೆಂಬುದನ್ನೇ ತಿಳಿದಿಲ್ಲ. ಯಾರಾದರೂ ನಾಡಿಯನ್ನು ಅದುಮಿಬಿಟ್ಟರೆ, ಕಣ್ಣು ಮುಚ್ಚಿದಾಗ ವಿದ್ಯುತ್ತಿನ ಬೆಳಕು ಕಂಡರೆ ಅದೇ ಧ್ಯಾನವೆನ್ನುತ್ತಾರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಡಿತರ ಸ್ಥಿತಿಯೂ ಅತಿಶೋಚನೀಯವಾಗಿದೆ.

ಪಂಡಿತಾಸ್ತು ಕಲತ್ರೇಣ
ರಮಂತೇ ಮಹಿಷಾ ಇವ
ಪುತ್ರಸ್ಯೋತ್ಪಾದನೇ ದಕ್ಷಾಃ
ಅದಕ್ಷಾ ಮುಕ್ತಿಸಾಧನೇ

ಸಂಪ್ರದಾಯಾನುಸಾರವಾಗಿ ಪರಂಪರಾಪ್ರಾಪ್ತವಾದ ಭಾಗವತಧರ್ಮವು ಎಲ್ಲರಿಗೂ ಗೋಚರವಾಗುವುದಿಲ್ಲ.

ಭಗವಂತನೇಕೆ ಇದೆಲ್ಲವನ್ನೂ ಸಹಿಸಿಕೊಂಡಿದ್ದಾನೆಂದರೆ : ಇದು ಕಾಲಧರ್ಮ ಯುಗಧರ್ಮ. ಅಂತೆಯೆ ಸಹಿಸಿಕೊಂಡಿದ್ದಾನೆ.

ಮಗುವು ಕೆಳಕ್ಕೆ ಬಿದ್ದು ಅಳುತ್ತಾ ಧೂಳಿನಲ್ಲಿ ಹೊರಳಾಡುತ್ತಿದ್ದರೂ: ತಾಯಿಯು ನೋಡುತ್ತಿದ್ದರೂ-ಎತ್ತಿಕೊಳುವುದಿಲ್ಲ.ಅವಳ ಅಭಿಪ್ರಾಯವಿಷ್ಟೆ : ಮಗುವು ತಾನೇ ಏಳಲು ಅಭ್ಯಾಸಮಾಡಿಕೊಳ್ಳಲಿ, ತನ್ನ ದೇಹವನ್ನು ತಾನೇ ಶುದ್ಧೀಕರಿಸಿಕೊಳ್ಳಲಿ.

ತಾಯಿಯೇ ಮಾಡುತ್ತಾ ಹೋದರೆ ಮಗುವು ಕಲಿತುಕೊಳ್ಳುವುದು ಹೇಗೆ ?

ಅದರಂತೆ ಭಗವಂತನೂ ನೋಡುತ್ತಿದ್ದಾನೆ.

ನಾರದರ ವಾಗ್ವೈಖರಿಯಿಂದ ಅಚ್ಚರಿಗೊಂಡ ಭಕ್ತಿದೇವಿಯು ಹೇಳಿದಳು :

ಸಾಧೂನಾಂ ದರ್ಶನಂ ಲೋಕೇ
ಸರ್ವಸಿದ್ಧಿಕರಂ ಪರಮ್

ಸಾಧುದರ್ಶನವೆಂದರೆ ಸರ್ವಮಂಗಳದಾಯಕವು.

ಜಯತಿ ಜಗತಿ ಮಾಯಾಂ
ಯಸ್ಯ ಕಾಯಾಧವಸ್ತೇ

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನರಚನಮೋಕಂ
ಕೇವಲಂ ಚಾಕಲಯ್ಯ
ಧ್ರುವ ಪದಮಪಿ ಯಾತೋ
ಯತ್ಕೃಪಾತೋಧ್ರುವೋಯಂ
ಸಕಲಕುಶಲಪಾತ್ರಂ
ಬ್ರಹ್ಮಪುತ್ರಂ ನತಾಸ್ಮಿ

ಕಯಾದುಪುತ್ರನಾದ ಪ್ರಹ್ಲಾದನು ನಿನ್ನ ಒಂದು ಉಪದೇಶದಿಂದ ಮಾಯೆಯನ್ನೇ ಗೆದ್ದುಬಿಟ್ಟನು.

ಧ್ರುವನು ಧ್ರುವಪದವನ್ನು ಹೊಂದಿದನು. ಬ್ರಹ್ಮಮಾನಸಪುತ್ರರಾದ ಸಕಲಕುಶಲಗಳನ್ನೂ ಅನುಗ್ರಹಿಸುವ ನಿಮಗೆ ಅನಂತವಂದನೆಗಳು.

ಇತ್ಯೇವಂ ಪ್ರಥಮೋಽಧ್ಯಾಯಃ
ಶ್ರೀ ಕೃಷ್ಣಾರ್ಪಣಮಸ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ದರ್ಶನ

ಭಕ್ತಿದೇವಿಯ ಕಷ್ಟನಿವೃತ್ತಿಗೆ ನಾರದರ ಉದ್ಯೋಗ

ಅಧ್ಯಾಯ-೨

ನಾರದರು ಹೇಳಿದರು : ದೇವಿ ! ನೀನು ವೃಥಾ ಖೇದಗೊಳ್ಳಬೇಡ. ಚಿಂತಿಸಬೇಡ. ಭಗವಂತನ ಚರಣಾರವಿಂದಗಳನ್ನು ಸ್ಮರಿಸು.

ದುಷ್ಟಕೌರವರ ಬಾಧೆಯಿಂದ ದ್ರೌಪದಿಯನ್ನು ರಕ್ಷಿಸಿದ, ಸಾವಿರಾರು ಜನ ಗೋಪಿಕೆಯರನ್ನು ಅವರವರ ಇಷ್ಟಾನುಸಾರ ಸಂತೃಪ್ತಿಗೊಳಿಸಿದ ಶ್ರೀಕೃಷ್ಣನು ಈಗಲೂ ಇದ್ದಾನೆ.

ನೀನಾದರೊ ಭಗವಂತನಿಗೆ ಪ್ರಾಣಾಧಿಕ ಪ್ರಿಯಳು. ನೀನು ಕರೆದ ಕಡೆಗೆ ನೀಚಾತಿನೀಚರ ಗೃಹವಾದರೂ ಸರಿ ಭಗವಂತನು ಬರುತ್ತಾನೆ.

ನೋಡಿ, ಸತ್ಯಾದಿ ಯುಗದಲ್ಲಿ ಜ್ಞಾನ ವೈರಾಗ್ಯಾದಿಗಳು ಮುಕ್ತಿಸಾಧಕ ಗಳಾದರೆ ಕಲಿಯುಗದಲ್ಲಿ ಭಕ್ತಿಯೇ ಬ್ರಹ್ಮ ಸಾಯುಜ್ಯಕಾರಿಣಿಯು.

ಪೀತಾಂಬರಧಾರೀ-ಮುರಳೀಮನೋಹರ-ನಂದನಂದನ-ಶ್ಯಾಮಸುಂದರ ಶ್ರೀಕೃಷ್ಣನಾಗಲೀ,ಧನುರ್ಧಾರೀ,ಕೌಸಲ್ಯಾನಂದವರ್ಧನ-ಶ್ರೀರಾಮಭದ್ರನಾಗಲೀ ಸದಾಶಿವನಾಗಲಿ, ಶ್ರೀದೇವಿಯಾಗಲಿ—ಇವರುಗಳ ಚಿಂತನೆಯಿಂದ ಮನಸ್ಸು ಆನಂದಸಮುದ್ರದಲ್ಲಿ ಮುಳುಗುತ್ತದೆ.

ದುಃಖವನ್ನು ದೂರಮಾಡುವ ಸರಳಮಾರ್ಗವೆಂದರೆ-ಮನಸ್ಸನ್ನು ಭಗವಂತನ ಜ್ಞಾನ-ಧ್ಯಾನ-ಚಿಂತನೆಗಳಲ್ಲಿ ತದಾಕಾರವನ್ನಾಗಿ ಮಾಡುವುದು. ಇದು ದುಃಖವಿಮೋಚನೆಗೆ ವಿಧಾಯಕವಾಗಿರುವ ಸರಳವೈಜ್ಞಾನಿಕರೀತಿ.

ಭಾಗವತದ ಎರಡನೇ ಸ್ಕಂದದಲ್ಲಿ ಹೇಳಿದ್ದಾರೆ :

ಶ್ರೀಕೃಷ್ಣ ಚರಣಾಂಭೋಜಂ ಸ್ಮರ ದುಃಖಂ ಗಮಿಷ್ಯತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರಿಂದ ನಾರದರು ಹೇಳುತ್ತಾರೆ. ಭಕ್ತಿದೇವಿ ! ನೀನು ದುಃಖಿಸುವ ಕಾರಣವಿಲ್ಲ.

ಗೀತೆಯಲ್ಲಿ ಹೇಳಿದ್ದಾರೆ :

ಅಪಿ ಚೇತ್ ಸುದುರಾಚರೋ
ಭಜತೇ ಮಾಮನನ್ಯಭಾಕ್
ಸಾಧುರೇವ ಸ ಮಂತವ್ಯಃ
ಸಮ್ಯಗ್ವ್ಯವಸಿತೋ ಹಿ ಸಃ

ಎಂತಹ ದುರಾಚಾರಿಯಾದರೂ ಭಗವಂತನನ್ನು ಅನನ್ಯಭಾವದಿಂದ ಸ್ಮರಿಸುವುದಾದ ಪಕ್ಷದಲ್ಲಿ ಅವನು ಸಾಧು-ಸತ್ಪುರುಷನು. ಇವನು ನೀಚ-ದುಷ್ಟ-ದೀನ-ಹೀನ ಪತಿತ-ಹೀಗೆ ಭೇದಭಾವವಿಲ್ಲದೆ ಎಲ್ಲರ ಹೃದಯಗಳಲ್ಲಿಯೂ ನಿನ್ನ ಪ್ರವೇಶವಾಗುವುದು. ಯಾವಾಗ ಮನುಷ್ಯನಿಗೆ ನಾನು ದೀನ-ಹೀನ-ಪಾಪಿ ಎಂಬ ಅನುಭವವಾಗುವುದೋ ಆವಾಗ ಭಗವಂತನ ಸ್ಮರಣೆಯುಂಟಾಗುತ್ತದೆ. ನೀನು ಹೋದ ಕಡೆ ಭಗವಂತನು ಬರಲೇಬೇಕಷ್ಟೆ.

ತನ್ನ ಪತ್ನಿಯು ಅವರ ಮನೆಗೆ ಸೇವೆಗೆ ಹೋಗಿದ್ದಾಳೆಂದರೆ ಪತಿಯು ಹೋಗದೇ ಇರುವನೇ ?

ಭಕ್ತಿಯ ಪ್ರವೇಶವಾದೆಡೆಯಲ್ಲಿ ಭಗವಂತನ ಆವಿರ್ಭಾವವಿದ್ದೇ ಇರುತ್ತದೆ ಎಲ್ಲೆಡೆಗಳಲ್ಲಿಯೂ ಪರಿಪೂರ್ಣನಾಗಿರುವ ಭಗವಂತನು ಭಕ್ತಿಯ ಪ್ರವೇಶವಾದಾಗ ಆವಿರ್ಭಾವವಾಗುತ್ತಾನೆ. ಇಲ್ಲದಿದ್ದಾಗ ತಿರೋಹಿತನಾಗುತ್ತಾನೆ.

ಪುರಾಣಗಳಲ್ಲಿ ಹೇಳುತ್ತಾರೆ.

ಅತಿಪಾಪಪ್ರಸಕ್ತೋಽಪಿ ಧ್ಯಾಯನ್ನಿಮಿಷಮಚ್ಯುತಮ್
ಸದ್ಯಃ ತಪಸ್ವೀ ಭವತಿ ಪಂಕ್ತಿಪಾವನಪಾವನಃ

ಅತಿಮಲಿನಚಿತ್ತವ್ಯಕ್ತಿಯೂ ಸ್ವಲ್ಪ ಕಾಲ ಭಗವದ್ಧ್ಯಾನಮಾಡಿದರೆ ಅವನು ಮಹಾತಪಸ್ವಿಯಾಗುತ್ತಾನೆ. ಹಾಗೂ ಪಂಕ್ತಿಪಾವನನಾಗುತ್ತಾನೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಭಗವಂತನೇ ಗೀತೆಯಲ್ಲಿ ಹೇಳುತ್ತಾನೆ.

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತಪ್ಯರಿಸಿ

ಎಂತಹ ಪಾಪಿಯಾಗಲಿ ಅಂದರೆ ಪಾಪಕೃತ್-ಪಾಪಕೃತ್ತರ-ಪಾಪ ಕೃತ್ತಮನೇ ಆಗಿರಲಿ-ಜ್ಞಾನಾಕಾರಾರೂಢನಾಗಿ ಸಂಸಾರಸಾಗರವನ್ನು ಸುಖ ವಾಗಿ ದಾಟುತ್ತಾನೆ. ವಸ್ತುತಃ ಯಾವ ಧರ್ಮದಲ್ಲಿ ದೀನ-ಹೀನರಿಗೆ-ಪಾಪೀ ಪತಿತರಿಗೆ ಉದ್ಧಾರವಾಗುವ ಮಾರ್ಗವಿಲ್ಲವೋ-ಆ ಧರ್ಮವು ಧರ್ಮವಲ್ಲ. ದೀನ ಹೀನರಿಗೆ ಉದ್ಧಾರದ ಮಾರ್ಗವನ್ನು ತೋರಿಸುವುದೇ ನಿಜವಾದ ಧರ್ಮವು.

ಆದರಿಂದ ಅತಿ ಪಾವನೆಯಾದ ಭಕ್ತಿದೇವಿ-ನೀನು ಭಗವಂತನನ್ನು ಅತಿ ನೀಚರ ಮನೆಗೂ ಕರೆದೊಯ್ಯುತ್ತಿರುವೆ.

ಸತ್ಯಾದಿತ್ರಿಯುಗೇ ಬೋಧವೈರಾಗ್ಯೌ ಮುಕ್ತಿಸಾಧಕೌ
ಕಲೌತು ಕೇವಲಾ ಭಕ್ತಿಃ ಬ್ರಹ್ಮಸಾಯುಜ್ಯಕಾರಿಣೀ

ಸತ್ಯ-ತ್ರೇತಾ-ದ್ವಾಪರಯುಗಗಳಲ್ಲಿ ಜ್ಞಾನ-ವೈರಾಗ್ಯಗಳು ಮುಕ್ತಿ ದಾಯಕಗಳು. ಕಲಿಯುಗದಲ್ಲಿಯಾದರೋ ಕೇವಲ ಭಕ್ತಿಯೇ ಮುಕ್ತಿದಾಯಕಿಯು-ಆದರಿಂದಲೇ ಭಗವಂತನು ನಿನ್ನನ್ನು ಸೃಷ್ಟಿಸಿರುವುದು. ನೀನು ಪರಮ ಸೌಂದರ್ಯವತಿಯೂ ಶ್ರೀ ಕೃಷ್ಣಪ್ರಿಯೆಯೂ ಆಗಿರುವೆ. ಭಗವಂತನಂತೆ ನೀನೂ ಸಹ ಪರಮಾನಂದಚಿನ್ಮೂರ್ತಿಯು, ನೀನು ಒಂದು ಬಾರಿ ಭಗವಂತ ನನ್ನು ಕೇಳಿದೆ : ನಾನೇನು ಮಾಡಲಿ ? ನನ್ನ ಕರ್ತವ್ಯವೇನು ?

ಭಗವಂತನು ಅಪ್ಪಣೆ ಮಾಡಿದನು :

"ಮದ್ಭಕ್ತಾನ್ ಪೋಷಯ"

ಪತ್ನಿಯು ಮಕ್ಕಳ ಲಾಲನೆ-ಪಾಲನೆಗಳನ್ನುಸರಿಯಾಗಿ ನಡೆಸಿದರೆ ಪತಿಯು ಸಂತೋಷಗೊಳ್ಳುವನಲ್ಲವೇ ?

ಈ ಸೃಷ್ಟಿಯೆಲ್ಲವೂ ಭಗವಂತನದು. ಭಗವಂತನ ಆಜ್ಞೆಯನ್ನು ನೀನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪಿಕೊಂಡೆ. ಅವನೂ ಪ್ರಸನ್ನನಾದನು. ಅವನು ನಿನಗೆ ಮುಕ್ತಿರೂಪೀ ದಾಸಿಯನ್ನೂ ಜ್ಞಾನ-ವೈರಾಗ್ಯರೆಂಬ ಪುತ್ರರನ್ನೂ ಕರುಣಿಸಿದನು. ನೀನು ವೈಕುಂಠದಲ್ಲಿ ಸ್ವಸ್ವರೂಪದಿಂದಿರುವೆ. ಭೂಲೋಕದಲ್ಲಿ ಛಾಯಾಮಾತ್ರ ಳಾಗಿರುವೆ.

ಮುಕ್ತಿಂ ಜ್ಞಾನಂ ವಿರಕ್ತಿಂ ಚ ಸಹ ಕೃತ್ವಾಗತಾ ಭುವಿ
ಕೃತಾದಿದ್ವಾಪರಸ್ಯಾಂತಂ ಮಹಾನಂದೇನ ಸಂಸ್ಥಿತಾ

ಜ್ಞಾನ-ವೈರಾಗ್ಯ-ಮುಕ್ತಿಯರೊಡನೆ ದ್ವಾಪರಾಂತ್ಯದವರೆಗೂ ನೀನು ಮಹಾನಂದದಲ್ಲಿದ್ದೆ. ಕಲಿಯುಗವು ಪ್ರಾರಂಭವಾಗೋಣ. ಮುಕ್ತಿದೇವಿಯು ವೈಕುಂಠಕ್ಕೆ ಹೋದಳು. ನೀನು ನೆನಸಿದರೆ ಬರುತ್ತಾಳಷ್ಟೆ. ಜ್ಞಾನ ವೈರಾಗ್ಯಗಳು ಮಕ್ಕಳ ರೂಪದಲ್ಲಿ ನಿನ್ನ ಬಳಿ ಇರುತ್ತಾರೆ. ಉಪೇಕ್ಷೆಯಿಂದ ವೃದ್ಧರಂತೆ ಕಾಣುತ್ತಾರೆ. "ತಥಾಪಿ ಚಿಂತಾಂ ಮುಂಚ ತ್ವಂ" ಆದರೂ ನೀನು ಚಿಂತಿಸಬೇಡ.

ನಾನು ಉಪಾಯವನ್ನು ಮಾಡುತ್ತೇನೆ. ಸತ್ಯಾಂಶವೇನೆಂದರೆ : ಕಲಿಯುಗ ದಂತಹ ಮತ್ತೊಂದು ಯುಗವಿಲ್ಲ. ಭಗವದ್ವಿಮುಖರಾದವರೇ ಕಲಿಯಲ್ಲಿ ಪ್ರಾದುರ್ಭವಿಸುತ್ತಾರೆ.

ಕಂ ಲಾತೀತಿ ಕಲಿಃ

ಭಗವಂತನ ಸಂಕೀರ್ತನಮಾತ್ರದಿಂದಲೇ ಕಲಿಯಲ್ಲಿ ಮಾನವನು ಉದ್ಧೃತ ನಾಗುತ್ತಾನೆ. ಭಕ್ತಿಯ ಪ್ರಚಾರವೇ ಹರಿದಾಸನಾದ ನನ್ನ ಕರ್ತವ್ಯವು. ಯಾರ ಹೃದಯದಲ್ಲಿ ಭಗವಂತನ ಬಗ್ಗೆ ಪ್ರೇಮರೂಪಿಣೀ ಭಕ್ತಿಯಿರುವುದೋ ಅವರು ಪಾಪಿಗಳಾದರೂ ಯಮಲೋಕವನ್ನು ಸಂದರ್ಶಿಸುದಿಲ್ಲ. ಕರ್ಮ—ತಪಸ್ಸು—ವೇದಾಧ್ಯಯನಾದಿಗಳಿಂದ ಭಗವತ್‌ಪ್ರಾಪ್ತಿಯಾಗುವುದಿಲ್ಲ. ಕೇವಲ ಭಕ್ತಿ ಯಿಂದ ಪರಮಾತ್ಮನ ಪ್ರಾಪ್ತಿಯಾಗುತ್ತದೆ.

ಹರಿರ್ಹಿ ಸಾಧ್ಯತೇ ಭಕ್ತ್ಯಾ ಪ್ರಮಾಣಂ ತತ್ರ ಗೋಪಿಕಾಃ
ನೃಣಾಂ ಜನ್ಮಸಹಸ್ರೇಣ ಭಕ್ತೌ ಪ್ರೀತಿರ್ಹಿ ಜಾಯತೇ
ಕಲೌ ಭಕ್ತಿಃ ಕಲೌ ಭಕ್ತಿಃ ಭಕ್ತ್ಯಾ ಕೃಷ್ಣಃ ಪುರಃ ಸ್ಥಿತಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನವರಿಗೆ ನೂರಾರು ಜನ್ಮಗಳ ಪುಣ್ಯಫಲದಿಂದ ಪರಮಾತ್ಮನಲ್ಲಿ ಭಕ್ತಿಯು ಮೂಡುವುದು.

ಭಗವದ್ಭಕ್ತರನ್ನು ಯಾರೂ ನಿಂದಿಸಬಾರದು. ದುರ್ವಾಸರೇ ಇದಕ್ಕೆ ಸಾಕ್ಷಿಯು.

> ಅಲಂ ವ್ರತೈರಲಂ ತೀರ್ಥೈರಲಂ ಯೋಗೈರಲಂ ಮಖೈಃ
> ಅಲಂ ಜ್ಞಾನಕಥಾಲಾಪೈಃ ಭಕ್ತಿರೇಕೈವ ಮುಕ್ತಿದಾ

ವ್ರತಾದಿಗಳನ್ನು ಖಂಡಿಸುವುದಕ್ಕಾಗಿ ಈ ಶ್ಲೋಕವನ್ನು ಹೇಳಿಲ್ಲ. ಭಕ್ತಿಯು ಗುಣಾನುವರ್ಣನೆಗಾಗಿ ಮಾತ್ರ ಹೇಳಿದೆ.

ನಾರದರ ಮುಖದಿಂದ ಸ್ವಗುಣಸಂಕೀರ್ತನೆಯನ್ನು ಕೇಳಿ ಭಕ್ತಿದೇವಿಯು ಹೇಳಿದಳು : ನಾರದರೇ ! ನೀವು ಧನ್ಯರು. ನನ್ನ ಸರ್ವಬಾಧೆಗಳೂ ನಿವಾರಣೆಯಾದುವು. ನನ್ನ ಮಕ್ಕಳ ವಿಚಾರವೇನು ?

ಜ್ಞಾನದಾನವೇ ನಾರದರ ಕೆಲಸವಷ್ಟೆ. ನಾರ ಎಂದರೆ ಸಂಪ್ರದಾಯ-ಪರಂಪರಾನುಗತವಾದ ನರ–ನಾರಾಯಣಜ್ಞಾನವನ್ನೇ 'ನಾರ'ವೆಂದು ಹೇಳುತ್ತಾರೆ. ನಾರಂ ದದಾತೀತಿ ನಾರದಃ, ದಿವ್ಯಜ್ಞಾನವನ್ನು ಹಂಚುವವನೇ ನಾರದನು.

ಹೀಗೂ ಅರ್ಥವನ್ನು ಮಾಡುತ್ತಾರೆ ನರಸ್ಯ ಸಂಬಂಧಿ ಅಜ್ಞಾನಂ ದ್ಯತೀತಿ ನಾಶಯತೀತಿ ನಾರದಃ.

ಭಕ್ತಿದೇವಿಯ ಪ್ರಾರ್ಥನಾನುಸಾರವಾಗಿ ಜ್ಞಾನ–ವೈರಾಗ್ಯರನ್ನು ತಟ್ಟಿ ತಟ್ಟಿ ಎಚ್ಚರಿಸಿದರು.

ಜ್ಞಾನ !–ಪ್ರಬುಧ್ಯತಾಂ ವೈರಾಗ್ಯ !–ಪ್ರಬುಧ್ಯತಾಂ

ಆದರೂ ವೇದ–ವೇದಾಂತ–ಗೀತಾ–ಪಾರಾಯಣಾದಿಗಳನ್ನು ನಡೆಸಿದರೂ ಎಚ್ಚರಗೊಳ್ಳಲಿಲ್ಲ.

ಒಂದು ಸಲ ಎಚ್ಚರಗೊಂಡರೂ ಪುನಃ ಎಚ್ಚರತಪ್ಪುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರಿಂದ ಚಿಂತಿತರಾದ ನಾರದರು ಸರ್ವವಿಪತ್ತಿನಾಶಕವಾದ ಭಗವತ್ ಸ್ಮರಣೆಯನ್ನು ಮಾಡಿದರು.

ವಿಪದ್ವಿಸ್ಮರಣಂ ವಿಷ್ಣೋಃ, ಸಂಪನ್ನಾರಾಯಣ ಸ್ಮೃತಿಃ ।
ಭಗವದ್ವಿಸ್ಮೃತಿಯೇ ವಿಪತ್ತು, ಭಗವತ್‌ಸ್ಮೃತಿಯೇ ಸಂಪತ್ತು ।

ಆಗ ಅವರಿಗೆ ಆಕಾಶವಾಣಿಯು ಕೇಳಿಸಿತು—ಮಾ ಋಷೇ ಖಿದ್ಯತಾಮಿತಿ ಋಷಿಯೇ ಖೇದಗೊಳ್ಳಬೇಡ.

ಉದ್ಯಮಃ ಸಫಲಸ್ತೇಽಯಂ ಭವಿಷ್ಯತಿ ನ ಸಂಶಯಃ

ನಿನ್ನ ಪ್ರಯತ್ನವು ಸಫಲವಾಗುವುದರಲ್ಲಿ ಸಂಶಯವಿಲ್ಲ.

ಏತದರ್ಥಂ ತು ಸತ್ಕರ್ಮ ಸುರರ್ಷೇ ತ್ವಂ ಸಮಾಚರ

ಇದಕ್ಕಾಗಿ ನೀನು ಸತ್ಕರ್ಮವನ್ನು ಆಚರಿಸು. ಆ ಸತ್ಕರ್ಮವಾವುದೆಂಬುವುದನ್ನು ಸಾಧು-ಸತ್ಪುರುಷರು ತಿಳಿಸುತ್ತಾರೆ. ಸತ್ಕರ್ಮಾಚರಣೆಯಿಂದ ಇವರ ನಿದ್ರೆಯೂ ಕಳೆಯುವುದು. ಹಾಗೂ ನಿನ್ನ ಜೀವನವುಜ್ಞಾನ-ವೈರಾಗ್ಯಮಯವಾಗುವುದು.

ಆಕಾಶವಾಣಿಯಿಂದ ಪ್ರೇರಿತರಾದ ನಾರದರು ಆಸತ್ಕರ್ಮವಾವುದೆಂಬುದನ್ನು ತಿಳಿಯಲು ಅಲ್ಲಲ್ಲಿ ಅಲೆಯತೊಡಗಿದರು. ಮಹಾ-ಮಹಾಪಂಡಿತರುಗಳು ನಾರದರ ಪ್ರಶ್ನೆಯನ್ನು ಕೇಳಿದರು. ನಿಶ್ಚಿತರೀತಿಯಲ್ಲಿ ಏನು ಹೇಳಲೂ ಅಸಮರ್ಥರಾದರು.

ಕೆಲವರಂತೂ ಇದು ಅಸಾಧ್ಯವೆಂದೇ ಅಭಿಪ್ರಾಯಪಟ್ಟರು, ಕೆಲವರು ಕಾಷ್ಠಮೌನಿಗಳಾದರು. ಕೆಲವರು ನಾರದರ ಮುಂದೆ ತಾವು ಅಜ್ಞಾನಿಗಳೆಂದು ಏಕೆ ಪ್ರಕಟಪಡಿಸಿಕೊಳ್ಳಬೇಕೆಂದು ಅವರನ್ನು ನೋಡದೆಯೇ ಓಡಿಹೋದರು. ಕೆಲವರು ಸಮಾಧಿಸ್ಥರಾದರು.

ವೇದ—ವೇದಾಂತ-ಗೀತಾಪಾಠಾದಿಗಳಿಂದಲೇ ಈ ಕೆಲಸವಾಗಿಲ್ಲವೆಂದಮೇಲೆ ಮತ್ತೇತರಿಂದ ಸಾಧ್ಯವಾದೀತು ?

Sri Vidyabharathi Book Centre, Sringeri

CC-0. In Public Domain. Digitized by eGangotri

ಚಿಂತಾನ್ವಿತರಾದ ನಾರದರು ತಪಸ್ಸನ್ನು ಮಾಡುವ ಉದ್ದೇಶದಿಂದ ಬದರೀವನಕ್ಕೆ ಹೋದರು. ಅಲ್ಲಿ ನಾರದರಿಗೆ ಸನಕಾದಿಗಳ ದರ್ಶನವಾಯಿತು.

ನಾರದರು ಅವರನ್ನು ವಂದಿಸಿ ಪ್ರಶ್ನಿಸಿದರು : ತಮ್ಮ ದರ್ಶನವಾದುದು ಮಹಾಭಾಗ್ಯೋದಯವಾದಂತೆ. ತಾವು ದಯೆಯಿಟ್ಟು ಹೇಳಿ.

ಜ್ಞಾನ-ವೈರಾಗ್ಯರ ನಿದ್ರಾಸ್ಥಿತಿಯು ಹೇಗೆ ನಿವಾರಣೆಯಾಗುವುದು ?

ಎಷ್ಟೋ ಮಾರ್ಗಗಳಿವೆ.

ಆದರೆ ಅವುಗಳಿಂದಾಗುವ ಫಲವು ಅತ್ಯಲ್ಪ. ಅನಂತಫಲಪ್ರಾಪ್ತಿದಾಯಕವಾದ ಮಾರ್ಗವನ್ನು ತೋರಿಸುವ ಮಹಾತ್ಮರು ಅತಿ ವಿರಳ. ತಾವು ದಯೆಯಿಟ್ಟು ತಿಳಿಸಿ.

ಅನುಗ್ರಹಸ್ತು ಕರ್ತವ್ಯೋ ಮಯಿ ದೀನೇ ದಯಾಪರೈಃ

ದಯಾಶಾಲಿಗಳಾದ ನೀವು ದೀನನಾದ ನನ್ನಲ್ಲಿ ಅನುಗ್ರಹವನ್ನು ತೋರಬೇಕು.

ಈ ಸ್ಥಳದಲ್ಲಿ ನೀವು ತಿಳಿದುಕೊಳ್ಳಬೇಕು—ಮಹಾತ್ಮರ ಅನುಗ್ರಹವೇ ವರ. ಜಿಜ್ಞಾಸುವಿನ ಶ್ರದ್ಧೆಯೆ ಕನ್ಯಾ ಇವರಿಬ್ಬರ ವಿವಾಹವಾಗಬೇಕು. ಆಗ ಪರಮಾರ್ಥಜ್ಞಾನದ ಉದಯವಾಗುತ್ತದೆ. ಅಹಂಕಾರಿಗಳಿಗೆ ಮಹಾತ್ಮರ ಅನುಗ್ರಹವೊದಗುವುದಿಲ್ಲ.

ಅದರಿಂದ ನಾರದರು ಪ್ರಾರ್ಥಿಸಿದರು :

ಮಯಿ ದೀನೇ ದಯಾಪರೈಃ ಅನುಗ್ರಹಃ ಕರ್ತವ್ಯಃ

ಜಿಜ್ಞಾಸುವಿನ ಹೃದಯವು ಅಹಂಕಾರಮುಕ್ತವಾದಾಗ, ಮಹಾತ್ಮರ ಅನುಗ್ರಹವೊದಗುತ್ತದೆ ಎಂಬುವುದು ಸ್ಪಷ್ಟವಾಯಿತು.

ಸನತ್ಕುಮಾರರೂ—ನಾರದರೂ ಬ್ರಹ್ಮನ ಮಾನಸಪುತ್ರರು. ಇಬ್ಬರೂ ಸರಿಸಮಾನರು. ಜ್ಞಾನಪ್ರಾಪ್ತಿಯಾದರೋ ಸಂಪೂರ್ಣ ಅಹಂಕಾರನಾಶವನ್ನು ಅಪೇಕ್ಷಿಸುತ್ತದೆ.

ಇದರಿಂದ ಸ್ವಯಂ ನಾರದರು ಸುಖಿಗಳಾಗುವ ವಿಚಾರವಲ್ಲ. ಅವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿ–ಜ್ಞಾನ–ವೈರಾಗ್ಯರನ್ನು ಸುಖಿಗಳನ್ನಾಗಿ ಮಾಡಬೇಕು. ಅಷ್ಟೇ ಅಲ್ಲ–
ಸ್ಥಾಪನಂ ಸರ್ವವರ್ಣೇಷು, ಪ್ರೇಮಪೂರ್ವಂ ಪ್ರಯತ್ನತಃ

ಎಲ್ಲ ವರ್ಣಗಳಲ್ಲಿಯೂ, ಎಲ್ಲ ಆಶ್ರಮಗಳಲ್ಲಿಯೂ ಭಕ್ತಿ ಜ್ಞಾನ-ವೈರಾಗ್ಯಾದಿಗಳ ಸ್ಥಾಪನೆಯಾಗಬೇಕು.

ಸನತ್ಕುಮಾರರು ಹೇಳಿದರು :

ಮಾ ಚಿಂತಾಂ ಕುರು ದೇವರ್ಷೇ ಹರ್ಷಂ ಚಿತ್ತೇ ಸಮಾವಹ

ದೇವರ್ಷಿಯೇ !-ನೀನು ಚಿಂತಿಸಬೇಡ, ಹರ್ಷವನ್ನು ತಾಳು.

ಇದಕ್ಕೆ ಸುಖಸಾಧ್ಯವಾದ ಉಪಾಯವಿದೆ.

ನೀನಾದರೋ ವಿರಕ್ತಶಿರೋಮಣಿಯು. ಶ್ರೀಕೃಷ್ಣ ಭಕ್ತಾಗ್ರಣಿಯು. ಯೋಗಭಾಸ್ಕರನು.

ನೀನು ಭಕ್ತಿದೇವಿಯ ಶ್ರೇಯಸ್ಸಿಗಾಗಿ ಶ್ರಮಪಡುತ್ತಿರುವುದು ಶ್ಲಾಘನೀಯವಾದುದು. ನಿನ್ನಂತಹವರಲ್ಲದೇ ಮತ್ತಾರು ಶ್ರಮಿಸುವವರು ?

ನೋಡಿ-ಭಕ್ತರಿಗೆ ಸಂಸಾರವೆಲ್ಲವೂ ಭಕ್ತಿಮಯವಾಗಿಯೆ ತೋರುತ್ತದೆ.

ಗೋಪಿಯರು ಶ್ರೀಕೃಷ್ಣನ ಭಕ್ತಿವಿಶಿಷ್ಟರಾದಾಗ ಲತಾ-ವೃಕ್ಷ-ನದೀ-ನದಗಳೆಲ್ಲವೂ ಕೃಷ್ಣರೂಪಿಯಾಗಿಯೇ ತೋರುತ್ತಿದ್ದುವು.

ಅವುಗಳು ಪುಷ್ಪಿತಗಳಾಗುವುದು, ಫಲಿತಗಳಾಗುವುದು, ಎಲ್ಲವೂ ಶ್ರೀಕೃಷ್ಣನಿಂದಲೇ-ಶ್ರೀಕೃಷ್ಣನಿಗಾಗಿಯೆ.

ಭಕ್ತನು ಭಕ್ತಿಯನ್ನು ವಿಸ್ತರಿಸುತ್ತಾ ಹೋಗುತ್ತಾನೆ. ಸಂತ ಮಹಾತ್ಮರು ಭಕ್ತಿಪಂಥವನ್ನು ಬಹಳ ರೀತಿಯಲ್ಲಿ ಪ್ರಕಟಿಸಿದ್ದಾರೆ.

ಏಕೆಂದರೆ-ಪ್ರಾಪ್ತವ್ಯವಸ್ತುವು ಸರ್ವವ್ಯಾಪಿಯಷ್ಟೆ. ಅದರ ಪಂಥಗಳೂ ಎಲ್ಲ ಕಡೆಗಳಲ್ಲಿಯೂ ಇರುತ್ತವೆ. ಪರಮಾತ್ಮನು ಸರ್ವವ್ಯಾಪಿಯೆಯು.

ಯಾರು ಎಲ್ಲಿ ಯಾವಾಗ ಇದ್ದರೂ ಅಲ್ಲಿ ಅವರು ಆಗಲೇ ಭಗವಂತನನ್ನು ಪಡೆಯಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರಾದರೂ ಇಲ್ಲಿ ಇಂತಹವನಿಗೆ ಈಗ ಭಗವತ್ಪ್ರಾಪ್ತಿಯಾಗುವುದಿಲ್ಲ ಎಂದು ಹೇಳುವುದಾದರೆ ಅದೇ ಸ್ಥಳದಲ್ಲಿ ಆಗಲೇ ಅದೇ ವ್ಯಕ್ತಿಯ ಹೃದಯದಲ್ಲಿ ಭಗವಂತನು ಇದ್ದೇ ಇರುತ್ತಾನೆ. ಅದರಿಂದ ಎಷ್ಟು ಜೀವರಿರುವರೊ ಅಷ್ಟೇ ಪಂಥಗಳೂ ಇವೆ. ಅವನು ಇರುವ ಸ್ಥಳದಿಂದಲೇ ಭಗವಂತನು ಪ್ರಕಟನಾಗುವನು.

ಸಂಸಾರದಲ್ಲಿಯೇ ಅಲೆಯುವವನಿಗೆ ಭಗವತ್ಪ್ರಾಪ್ತಿಯಿಲ್ಲ.

ಸನತ್ಕುಮಾರರು ನಾರದರೊಡನೆ ಹೇಳಿದರು : ನಾರದ ! ಆಕಾಶವಾಣಿಯು ತಿಳಿಸಿದ ರಹಸ್ಯವನ್ನು ಹೇಳುತ್ತೇನೆ ಕೇಳು.

ಲೋಕದಲ್ಲಿ ಚರು-ಪುರೋಡಾಶಾದಿ ದ್ರವ್ಯಸಾಧ್ಯಗಳಾದ ಯಜ್ಞಗಳು ಬಹಳ ಇವೆ. ಕೃಚ್ಛ್ರ ಚಾಂದ್ರಾಯಣಾದಿ ವ್ರತಗಳಿವೆ. ಆಸನ-ಪ್ರಾಣಾಯಾಮಾದಿ ಯೋಗಾನುಷ್ಠಾನಗಳಿವೆ. ವೈದಿಕಪ್ರಕ್ರಿಯೆಗಳಿವೆ.

ಇವೆಲ್ಲವೂ ಕರ್ತೃಸಾಧನಗಳು. ಮನುಷ್ಯಪ್ರಯತ್ನದಿಂದ ಜರುಗತಕ್ಕವು. ಆದರೆ ಜ್ಞಾನವು ಕರ್ತೃಸಾಪೇಕ್ಷವಲ್ಲ. ಜ್ಞಾನವು ಪ್ರಮೇಯ ವಸ್ತು ಸ್ವರೂಪವೇ ಆಗಿರುತ್ತದೆ. ಉತ್ಕರ್ಷರೀತಿಯಿಂದ ಯಜ್ಞಾದಿಗಳನ್ನು ಆಚರಿಸಿ ಸ್ವರ್ಗಾದಿಲೋಕಗಳನ್ನು ಪಡೆಯುತ್ತಾರೆ.

ನಗರ ಪ್ರದೇಶಗಳಲ್ಲಿ ನೀವು ದ್ರವ್ಯವನ್ನು ವ್ಯಯಮಾಡುವುವಕ್ಕನುಗುಣವಾಗಿ ಊಟ-ವಸತಿಗಳ ಸೌಕರ್ಯವು ದೊರಕುತ್ತದೆ.

ಆದರೆ ಗಂಗೋದಕ-ಚಂದ್ರನ ಚಂದ್ರಿಕೆ, ಸೂರ್ಯನ ಬೆಳಕು ಇವುಗಳು ನೀವು ಖರ್ಚು ಮಾಡುವ ದ್ರವ್ಯಾನುಗುಣವಾಗಿ ದೊರಕುವುದಿಲ್ಲ. ಇವುಗಳು ಸ್ವತಃ ಸಿದ್ಧವಸ್ತುಗಳು. ಎಲ್ಲರಿಗೂ ಸಮಾನರೂಪದಲ್ಲಿ ದೊರಕುತ್ತವೆ.

ಕೃತ್ರಿಮವಸ್ತುಗಳಾದರೆ ದ್ರವ್ಯದಿಂದ ಪ್ರಾಪ್ತವಾಗುತ್ತವೆ. ಜ್ಞಾನಯಜ್ಞವಾದರೋ ಪ್ರಮೇಯ ವಸ್ತ್ವನುಸಾರವಾಗಿರುತ್ತದೆ. ಕರ್ಮಫಲವು ಕರ್ತ್ರನುರೂಪವಾಗಿರುತ್ತದೆ.

ಶ್ರೀಮದ್ಭಾಗವತವು ಜ್ಞಾನಯಜ್ಞರೂಪವಾದದು. ಜ್ಞಾನವೆಂದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾಯತೀತಿಜ್ಞಾನಂ, ಜ್ಞಾನದಿಂದ ಪರಮಾತ್ಮನು ಇರುವಂತೆಯೇ ದೊರಕುತ್ತಾನೆ. ಭಕ್ತಿ-ಜ್ಞಾನ-ವೈರಾಗ್ಯಗಳು ಒಂದೇ. ಬೇರೆ ಬೇರೆಯಲ್ಲ.

ಭಕ್ತಿ ಎಂದರೆ ಭಜನ. ಭಕ್ತಿಯಲ್ಲಿ ಎರಡು ಅಂಶಗಳಿವೆ-ಭಜನ-ಭಂಜನ. ಭಜನಾತ್-ಭಂಜನಾದ್ವಾಭಕ್ತಿಃ. ಭಕ್ತಿಯಾದರೊ ಭಗವತ್ ಸೇವಾರತಿಯನ್ನು ಉಂಟುಮಾಡಿ. ಸಂಸಾರ ವಾಸನೆಯನ್ನು ಭಂಜಿಸುತ್ತದೆ.

ಭಕ್ತಿಯಿಂದ ಭಗವದ್ವಿಷಯಕ ಜ್ಞಾನವಾಗುತ್ತದೆ. ಹಾಗೂ ಭಗವದ್ಭಿನ್ನ ಸಂಸಾರದಲ್ಲಿ ವೈರಾಗ್ಯವುಂಟಾಗುತ್ತದೆ-ಭಗವದಾಕಾರ ವೃತ್ತಿಯಾಗುತ್ತದೆ.

ಈ ಮೂರರ ಸಮವೃದ್ಧಿಯಿಂದ ಭಕ್ತಿಯು ಸುಪುಷ್ಟವಾಗುತ್ತದೆ. ಇಂತಹ ಭಕ್ತಿಯಿಂದ ಮಾನವನ ಸರ್ವದೋಷಗಳೂ ದೂರವಾಗುತ್ತವೆ. ಇದೇ ಶ್ರೀಮದ್ಭಾಗವತದ ಧ್ವನಿ-ಘೋಷ.

ಜ್ಞಾನ–ವೈರಾಗ್ಯಗಳಿಲ್ಲದ ಭಕ್ತಿಯು ಸುಪುಷ್ಟವಾಗಿರುವುದಿಲ್ಲ. ಆಸಕ್ತಿಯೆಲ್ಲವೂ ಸಂಸಾರದ ಕಡೆಗಿದ್ದರೆ ಭಗವತ್ಪ್ರಾಪ್ತಿಯು ಹೇಗಾದೀತು ?

ನಾರದೀಯ ಭಕ್ತಿಸೂತ್ರದಲ್ಲಿ ಹೇಳುತ್ತಾರೆ-ತದ್ವಿಹೀನಂತು ಜಾರಾಣಾಮಿವ, ತತ್ರಾಪಿನ ಮಹಾತ್ಮ್ಯ ಜ್ಞಾನವಿಸ್ಮೃತ್ಯಪವಾದಃ"

ಮಹಾತ್ಮ್ಯ ಜ್ಞಾನವಿಲ್ಲದ ಪ್ರೀತಿಯು ಜಾರ ಪ್ರೀತಿಯಂತೆ.

ಇವರ ಮೇಲೆ ನಾರದರು ಪ್ರಶ್ನಿಸುತ್ತಾರೆ. ಪೂಜ್ಯರೇ-ವೇದ-ವೇದಾಂತ ಘೋಷದಿಂದ ಗೀತಾಪಾಠಾದಿಗಳಿಂದಲೂ ಸಹ ಎಚ್ಚರಗೊಳ್ಳದ ಜ್ಞಾನ ವೈರಾಗ್ಯರು ಹೇಗೆ ತಾನೇ ಶ್ರೀಮದ್ಭಾಗವತಾಲಾಪದಿಂದ ಎಚ್ಚರಗೊಳ್ಳುತ್ತಾರೆ?

ನಾರದರ ಈ ಪ್ರಶ್ನೆಯಲ್ಲಿ ಬಹಳ ಮಹತ್ವವಿದೆ. ಕೆಲವರ ಮನಸ್ಸನ್ನು ಬಿಚ್ಚಿ ಇಟ್ಟಂತಿದೆ. ಇದರಿಂದ ವೇದ ವೇದಾಂತಗಳ ನಿಂದೆಯೂ ಭಾಗವತದ ಪ್ರಶಂಸೆಯೂ ಮಾಡಲ್ಪಟ್ಟಂತೆ ತೋರುತ್ತದೆ.

ಯದ್ಯಪಿ ಭಾಗವತದ ಪ್ರಶಂಸೆಯು ಯುಕ್ತವಾದರೂ ವೇದಾದಿಗಳ ನಿಂದೆಯು ಸಲ್ಲದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಸನಕಾದಿಗಳ ಉತ್ತರವನ್ನು ಪರಿಶೀಲಿಸೋಣ. ಅವರು ಹೇಳು ತ್ತಾರೆ. ವೇದ–ವೇದಾಂತಗಳ ಸಾರವೇ ಭಾಗವತವು. ಇದರ ಮೂಲಕ ಜ್ಞಾನ–ವೈರಾಗ್ಯಗಳ ಅಭಿವೃದ್ಧಿಯಾಗುವುದೆಂದರೆ. ಅದು ವೇದ–ವೇದಾಂತಗಳ ಪ್ರತಿಷ್ಠೆಯಾಯಿತೇ ಹೊರತು ನಿಂದೆಯಲ್ಲ. ಭಾಗವತದ ಶ್ಲೋಕ. ಶ್ಲೋಕ ಗಳಲ್ಲಿಯೂ. ಪದ–ಪದಗಳಲ್ಲಿಯೂ ವೇದಾರ್ಥವೇ ತುಂಬಿದೆ. ಭಾಗವತೀ ಕಥೆಯೆಲ್ಲವೂ ವೇದೋಪನಿಷತ್ತುಗಳ ಸಾರದಿಂದಲೇ ಸಂಗ್ರಥಿತವಾಗಿದೆ.

ವೃಕ್ಷದಲ್ಲಿ ಬಿಟ್ಟ ಫಲದಲ್ಲಿ ವೃಕ್ಷದ ಸಾರವೆಲ್ಲವೂ ಇರುವಂತೆ ಭಾಗವತ ದಲ್ಲಿ ವೇದೋಪನಿಷತ್ತುಗಳ ಸಾರವಿದೆ. ವಿವಿಧ ಭಾಗಗಳಲ್ಲಿ ವೇದಗಳು ಹೇಳಿರುವ ಧರ್ಮಾರ್ಥ ಕಾಮಮೋಕ್ಷಗಳ ಸಾರವನ್ನೇ ಒಟ್ಟಾಗಿ ಭಾಗವತದಲ್ಲಿ ನಿರೂಪಿಸಿದ್ದಾರೆ.

ಹಾಲಿನಲ್ಲಿ ಯದ್ಯಪಿ ತುಪ್ಪವಿದೆ. ಅದನ್ನು ಹಾಲಿನಿಂದ ಬೇರ್ಪಡಿಸಿದಾಗ ಅದರಿಂದ ದೇವತೆಗಳಿಗೆ ತೃಪ್ತಿ.

ಕಬ್ಬಿನ ಜಲ್ಲೆಯಲ್ಲಿ ರಸವು ಬುಡದಿಂದ ತುದಿಯವರೆಗೂ ವ್ಯಾಪಿಸಿರು ತ್ತದೆ. ಆದರೆ ಅದರ ರಸವನ್ನು ಬೇರ್ಪಡಿಸಿ ಸಕ್ಕರೆಯನ್ನಾಗಿ ಮಾಡಿದಾಗ ಅದರಿಂದ ವಿವಿಧ ಲಾಭವಾಗುತ್ತದೆ.

ಅಂತೆಯೇ ಭಾಗವತ ಪುರಾಣವು ಸಾಕ್ಷಾತ್ ವೇದಾತ್ಮಕವೇ. ಭಕ್ತಿ–ಜ್ಞಾನ-ವೈರಾಗ್ಯಗಳ ಅಭಿವೃದ್ಧಿಗಾಗಿ ಭಾಗವತ ರೂಪದಲ್ಲಿ ವೇದವೇ ಪ್ರಕಾಶಿ ಸುತ್ತಿದೆ.

ನಾರದ-ಹಿಂದಿನ ಘಟನೆಯನ್ನು ಮರೆತು ಬಿಟ್ಟೆಯಾ ? ವೇದ-ವೇದಾಂತ ನಿಷ್ಣಾತರಾದ ವ್ಯಾಸರು ಒಮ್ಮೆ ಸಂತಾಪಿಗಳಾಗಿರಲಿಲ್ಲವೇ ? ನೀನೇ ಅವರಿಗೆ ಚತುಶ್ಲೋಕೀ ಭಾಗವತವನ್ನು ಉಪದೇಶಿಸಿ ಅವರ ಸಂತಾಪವನ್ನು ದೂರ ಮಾಡಲಿಲ್ಲವೇ ?

ಚತುರ್ವೇದಗಳ ಪ್ರತೀಕವು ಭಾಗವತವೆಂದು ತಿಳಿಸುವ ಅಭಿಪ್ರಾಯ ದಿಂದ ಚತುಃಶ್ಲೋಕಿ ಭಾಗವತವನ್ನು ಉಪದೇಶಿಸಿದ್ದಾರೆ. ವಾಸುದೇವನ ಚತುರ್ವ್ಯೂಹದಂತೆ, ಚತುರ್ವೇದಗಳಂತೆ, ವಿಶ್ವ–ತೈಜಸ–ಪ್ರಾಜ್ಞ-ತುರೀಯ

Sri Vidyabharathi Book Centre, Sringeri

CC-O. In Public Domain. Digitized by eGangotri

ರೂಪೀ ಬ್ರಹ್ಮನ ನಾಲ್ಕು ಕಾಲುಗಳಂತೆ ಶ್ರೀಮದ್ಭಾಗವತವು ಚತುಃಶ್ಲೋಕಾತ್ಮಕವಾಗಿದೆ.

ಇಂತಹ ಶ್ರೀಮದ್ಭಾಗವತವನ್ನು ಶ್ರವಣಮಾಡು ಎಂದು ಸನತ್ಕುಮಾರರು ಉಪದೇಶಿಸೋಣ-ನಾರದರು ನಮ್ರತೆಯಿಂದ ನಿವೇದಿಸಿಕೊಂಡರು. ಮಹಾನುಭಾವರೇ ತಮ್ಮ ದರ್ಶನದಿಂದ ಜೀವನು ಸರ್ವಪಾಪ ವಿಮುಕ್ತನಾಗುತ್ತಾನೆ.

ಸಂಸಾರ ದಾವನಾಲದಿಂದ ಸಂಕಟಪಡುತ್ತಿರುವವರಿಗೆ ತಮ್ಮ ದರ್ಶನದಿಂದ ಶಾಂತಿ ಪ್ರಾಪ್ತಿಯಾಗುತ್ತದೆ.

ನೀವು ಯಾವಾಗಲೂ ಶೇಷನು ತನ್ನ ಸಹಸ್ರ ಮುಖಗಳಿಂದ ಯಾರ ಗುಣಾನು ಕೀರ್ತನೆಯನ್ನು ಮಾಡುವನೊ ಅಂತಹ ಪರಮ ಪಾವನನ ಕಥಾಽಮೃತಪಾಯಿಗಳಾಗಿದ್ದೀರಿ. ಪರಮ ಶ್ರೇಷ್ಠ ಭಕ್ತಿಯ ಪ್ರಕಾಶನಕ್ಕಾಗಿ ತಮಗೆ ಶರಣಾಗತನಾಗಿ ಬಂದಿದ್ದೇನೆ.

ಮನುಷ್ಯನು ಸತ್ಸಂಗಿಯಾಗಬೇಕಾದರೆ ಪೂರ್ವಜನ್ಮಕೃತ ಪುಣ್ಯಫಲದಿಂದ ಮಾತ್ರ ಸಾಧ್ಯವು.

ಮನುಷ್ಯನು ಸತ್ಸಂಗಿಯಾದಾಗ ಮಾತ್ರ ಅಜ್ಞಾನಜನಿತ ಮದ-ಮೋಹ ಮಾತ್ಸರ್ಯ-ಅಹಂಕಾರಾದಿಗಳಿಂದ ಮುಕ್ತನಾಗುತ್ತಾನೆ. ವಿವೇಕಶಾಲಿಯಾಗುತ್ತಾನೆ.

ಸತ್ಸಂಗವು ಸಾಧನವಲ್ಲ. ಫಲವು.

ಇತ್ಯೇವಂ ದ್ವಿತೀಯೋಽಧ್ಯಾಯಃ
ಶ್ರೀ ಕೃಷ್ಣಾರ್ಪಣಮಸ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ದರ್ಶನ

" ಭಕ್ತಿದೇವಿಯ ಕಷ್ಟನಿವೃತ್ತಿ "

ಅಧ್ಯಾಯ-೩

ಈಗ ನಾರದರು ಸನತ್ಕುಮಾರರ ಮುಂದೆ ಪ್ರತಿಜ್ಞೆಯನ್ನು ಮಾಡುತ್ತಾರೆ "ಜ್ಞಾನಯಜ್ಞಂ ಕರಿಷ್ಯಾಮಿ. ಶುಕ್ರಶಾಸ್ತ್ರ ಕಥೋಜ್ವಲಂ."

ಭಕ್ತಿ–ಜ್ಞಾನ–ವೈರಾಗ್ಯಗಳ ಸ್ಥಾಪನೆಗಾಗಿ ಜ್ಞಾನಯಜ್ಞವನ್ನು ಮಾಡುತ್ತೇನೆ. ಅದಕ್ಕೆ ಪ್ರಶಸ್ತವಾದ ಸ್ಥಳವನ್ನು ತಿಳಿಸಿರಿ.

ಎಷ್ಟು ದಿವಸಗಳಲ್ಲಿ ಭಾಗವತವನ್ನು ಕೇಳಬೇಕು ? ಅದರ ಶ್ರವಣ ವಿಧಿಯೇನು ? ಸನತ್ಕುಮಾರರು ಹೇಳಿದರು. ನಾರದ–ನೀನು ಇದೆಲ್ಲವನ್ನೂ ತಿಳಿದುಕೊಳ್ಳಲು ಸಂಪೂರ್ಣ ಅಧಿಕಾರಿಯು.

'ವಿನಮ್ರಾಯ ವಿವೇಕಿನೇ ವಕ್ಷ್ಯಾಮಃ'

ನೀನು ವಿನಮ್ರನು. ಹಾಗೂ ವಿವೇಕಿಯು. ವಿವೇಕಿಯೆಂದರೆ ಸಾರಾಸಾರಗಳನ್ನು ವಿವೇಚಿಸುವುದರಲ್ಲಿ ಚತುರನು.

ನಿನಗೆ ನಾನು ಎಲ್ಲವನ್ನೂ ತಿಳಿಸುವೆನು.

ಗಂಗಾದ್ವಾರ-ಹರಿದ್ವಾರದ ಬಳಿ ಆನಂದ ನಾಮಕ ತಟವಿದೆ.

ಅದು ಅನೇಕ ವೃಕ್ಷ-ಲತಾ-ಗುಲ್ಮಗಳಿಂದಾವೃತವಾಗಿದೆ. ಅನೇಕ ಋಷಿ ಸಿದ್ಧ–ಮಹಾತ್ಮರು ಅಲ್ಲಿ ಇದ್ದಾರೆ. ಅಲ್ಲಿ ಸ್ವರ್ಣ ಕಮಲಗಳುಂಟು. ಆ ಸ್ಥಾನದ ಪರಿಸರದಲ್ಲಿರುವ ದುಷ್ಟ–ವನ್ಯ ಮೃಗಗಳಲ್ಲಿಯೂ ವೈರಭಾವನೆಯಿಲ್ಲವು.

ನಾವು ಹೀಗೆ ಹೇಳಿರುವುದರ ಅರ್ಥವನ್ನು ಗ್ರಹಿಸಬೇಕು ! ಯಾರ ಮನಸ್ಸು ದುಷ್ಟವಾಗಿರುತ್ತದೊ ಅವನಿಗೆ ಕಥಾಶ್ರವಣದಿಂದಲೂ ಭಗವಧ್ಯಾನವು ಉಂಟಾಗುವುದಿಲ್ಲ. ಶುದ್ಧಾಂತಃಕರಣದಿಂದಲೇ ಕಥಾಶ್ರವಣವನ್ನು ಮಾಡಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸನತ್ಕುಮಾರರು ಹೇಳುತ್ತಾರೆ.

ಜ್ಞಾನಯಜ್ಞಸ್ತ್ವಯಾತತ್ರಕರ್ತವ್ಯೋಽಹ್ಯಪ್ರಯತ್ನತಃ

ಅಂದರೆ-ಶ್ರೋತಾ-ಶ್ರಾವಕರಿಬ್ಬರೂ ಸಹಜಭಾವದಿಂದ ಕಥಾಶ್ರವಣವನ್ನು ಮಾಡಬೇಕು-ಮಾಡಿಸಬೇಕು. ಬಹಿರಂಗ ವ್ಯಾಪಾರದಲ್ಲಿ ಚಿತ್ತವು ತೊಡಗಿದರೆ ವಿಕ್ಷೇಪ ಸ್ಥಿತಿಯೊದಗುವುದು. ಅಪ್ರಮತ್ತಭಾವದಿಂದ ಕಥಾ ಶ್ರವಣ ಮಾಡಿದರೇನೇ ಅಪೂರ್ವ ರಸಾನುಭವವುಂಟಾಗುವುದು.

ಕಥಾ ಪ್ರಾರಂಭವಾಗುವಾಗ ಭಕ್ತಿದೇವಿಯೂ ಕುಮಾರರಾದ ಜ್ಞಾನ-ವೈರಾಗ್ಯರೊಡನೆ ಉಪಸ್ಥಿತಳಾಗುತ್ತಾಳೆ. ಏಕೆಂದರೆ ಎಲ್ಲೆಲ್ಲಿ ಕಥಾಶ್ರವಣವು ನಡೆಯುತ್ತದೊ ಅಲ್ಲಲ್ಲಿ ಈ ಮೂವರೂ ಉಪಸ್ಥಿತರಾಗುತ್ತಾರೆ. ಪುನಃ ಪುನಃ ತಾರುಣ್ಯವನ್ನು ಪಡೆಯುತ್ತಾರೆ.

ಹೀಗೆ ತಿಳಿಸಿದ ಸನತ್ಕುಮಾರರೊಡನೆ ನಾರದರು ಗಂಗಾತಟಕ್ಕೆ ಬಂದರು.

ಎಲ್ಲೆಡೆಯಲ್ಲಿಯೂ ವಾರ್ತೆಯು ಹಬ್ಬಿತು.

ಶ್ರೀ ಭಾಗವತ ಪೀಯೂಷ ಪಾನಾಯ ರಸಲಂಪಟಾಃ ಧಾವಂತೋಽಪ್ಯಾಯಯುಃ

ಶ್ರೀಮದ್ಭಾಗವತ ರಸಾಮೃತಪಾನಕ್ಕೆ ಮಹಾವೈಷ್ಣವಾಗ್ರಣಿಗಳಾದ, ಭೃಗು.-ವಸಿಷ್ಠ-ಚ್ಯವನ-ಗೌತಮ-ಮೇಧಾತಿಥಿ - ಇತ್ಯಾದಿ ಋಷಿಮಹರ್ಷಿಗಳೆಲ್ಲರೂ ಪುತ್ರ-ಮಿತ್ರ-ಶಿಷ್ಯ ಸಹಿತ ಓಡೋಡಿ ಬಂದರು.

ವೇದ-ವೇದಾಂತ-ಶಾಸ್ತ್ರ-ಪುರಾಣಾದಿಗಳೂ ಗಂಗಾ-ಯಮುನಾದಿ ನದಿಗಳೂ ದೇಹ-ಧಾರಿಗಳಾಗಿ ಅಲ್ಲಿ ಉಪಸ್ಥಿತರಾದರು.

ನೋಡಿ-ಇಂತಹ ಸಂದರ್ಭಗಳಲ್ಲಿಯೂ ಕೆಲವರು ನಮ್ಮನ್ನು ಕರೆದಿಲ್ಲ ನಾವೇಕೆ ಹೋಗಬೇಕೆಂದು ಬಿಗುಮಾನದಿಂದ ಇರುತ್ತಾರೆ.

ಆಯೋಜಕನು ಅಂತಹವರನ್ನು ನಮಸ್ಕರಿಸಿ ಆದರದಿಂದ ಕರೆದುಕೊಂಡು ಬರಬೇಕು. ಅಭಿಮಾನಿಗಳಾಗಿದ್ದರೂ, ದೊಡ್ಡವರಾಗಿದ್ದರೂ, ಅವರಲ್ಲಿಗೆ ಹೋಗಿ ಗೌರವದಿಂದ ಕಥಾಶ್ರವಣಕ್ಕೆ ಬರಬೇಕೆಂದು ಪ್ರಾರ್ಥಿಸಿ ಬರಬೇಕು.

Sri Vidyabharathi Book Centre, Sringeri

 CC-0. In Public Domain. Digitized by eGangotri

ಚಿಕ್ಕವರಾಗಿದ್ದರೆ ಸ್ನೇಹದಿಂದ ಬರಲೇಬೇಕೆಂದು ಆಗ್ರಹಪಡಿಸಬೇಕು. ಆಯೋಜಕನು ಯಾವ ವಿಧವಾದ ಬಿಗುಮಾನವನ್ನು ತಾಳಬಾರದು.

ಮಹರ್ಷಿ ಭೃಗುಗಳು ಎಲ್ಲರನ್ನೂ ಕಲೆಹಾಕಿದರು. ನಾರದರು ಎಲ್ಲರನ್ನೂ ಸ್ವಾಗತಿಸಿ ಆಸನಗಳಲ್ಲಿ ಕೂರಿಸಿದರು.

ಆ ಸಮುದಾಯದಲ್ಲಿ ಎಲ್ಲೆಡೆಯಲ್ಲಿಯೂ ಜಯಕಾರ–ನಮಸ್ಕಾರ–ಶಂಖ ಧ್ವನಿಗಳಾದುವು. ಪುಷ್ಪವೃಷ್ಟಿಯಾಯಿತು. ದೇವತೆಗಳೂ ಈ ಮಹೋತ್ಸವ ದಲ್ಲಿ ಪಾಲುಗೊಂಡರು. ವೈಷ್ಣವರು, ವಿರಕ್ತರು, ಸಂನ್ಯಾಸಿಗಳು, ಗೃಹಸ್ಥರು, ಬ್ರಹ್ಮಚಾರಿಗಳು, ಎಲ್ಲರೂ ಮುಖ್ಯಸ್ಥಾನಗಳಲ್ಲಿ ಕುಳಿತರು. ಎಲ್ಲರಿಗಿಂತ ಮುಂದುಗಡೆ ನಾರದರು ಕುಳಿತರು. ಎಲ್ಲರೂ ಏಕಾಗ್ರತೆಯಿಂದ ಶ್ರವಣ ಮಾಡುತ್ತಿದ್ದಾರೆ. ಸನತ್ಕುಮಾರರು ನಿರೂಪಕರಾಗಿದ್ದಾರೆ.

ನೋಡಿ-ವೇದಾಂತದಲ್ಲಿ ಶ್ರವಣಕ್ಕೆ ಮುಖ್ಯ ಸ್ಥಾನವಿದೆ. ಶಬ್ದಶಕ್ತಿಯು ಅಚಿಂತ್ಯ. ಮನುಷ್ಯನು ನಿಂದಾಶಬ್ದಗಳನ್ನು ಕೇಳಿ ಉದ್ವಿಗ್ನನಾಗುತ್ತಾನೆ. ಹೊಗಳಿಕೆಯ ಶಬ್ದಗಳಿಂದ ಪ್ರಸನ್ನನಾಗುತ್ತಾನೆ. ಪರಮಾತ್ಮ ವಾಚಕಶಬ್ದಗಳು ಕೇಳುವವನನ್ನು ಎಚ್ಚರಗೊಳಿಸಿ ಅವನ ಹೃದಯದಲ್ಲಿ ಜ್ಞಾನಪ್ರಕಾಶವನ್ನು ಬೀರುತ್ತವೆ.

ಶ್ರೀಮದ್ಭಾಗವತದಲ್ಲಿ ಹದಿನೆಂಟು ಸಾವಿರ ಶ್ಲೋಕಗಳಿವೆ. ಹದಿನೇಳು ತತ್ತ್ವಗಳಿಂದ ಮಾನವನ ಸೂಕ್ಷ್ಮಶರೀರವಾಗಿದೆ. ಅದನ್ನು ಬಾಧಿಸಿ, ವಾಸನಾ ಜಾಲವನ್ನು ಸುಟ್ಟು, ಏಕಮೇವಾದ್ವಿತೀಯನಾದ ಪರಮಾತ್ಮನೊಡನೆ ಸಂಬಂಧ ವನ್ನು ಏರ್ಪಡಿಸುತ್ತದೆ.

ಭಾಗವತದಲ್ಲಿ ಶುಕ–ಪರೀಕ್ಷಿತರ ಸಂವಾದರೂಪದಲ್ಲಿ ಹನ್ನೆರಡು ಸ್ಕಂಧ ಗಳಿವೆ. ಭಾಗವತವು ದ್ವಾದಶಾದಿತ್ಯಾತ್ಮಕನಾದ ವಿಷ್ಣುವಿನ ಪ್ರತೀಕವು.

ಶ್ರೀಮದ್ಭಾಗವತೀ ಕಥೆಯನ್ನು ಕೇಳದಿರುವವರೆಗೆ ಮನುಷ್ಯನು ಸಂಸಾರ ಚಕ್ರದಲ್ಲಿ ಸುತ್ತುತ್ತಿರುತ್ತಾನೆ.

ಮಹಾತ್ಮರು ಹೀಗೆ ಘೋಷಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಸ್ಯ ಶ್ರವಣ ಮಾತ್ರೇಣ, ಮುಕ್ತಿಃ ಕರತಲೇಸ್ಥಿತಾ ।
ಸದಾಸೇವ್ಯಾ, ಸದಾಸೇವ್ಯಾ, ಶ್ರೀಮದ್ಭಾಗವತೀ ಕಥಾ ॥
ಯಸ್ಯಾಃ ಶ್ರವಣಮಾತ್ರೇಣ ಹರಿಶ್ಚಿತ್ತಂ ಸಮಾಶ್ರಯೇತ್

ಇತರೇ ವಿಚಾರಗಳಿಂದೇನು ಪ್ರಯೋಜನ? ಆಚಾರ್ಯರು ಹೇಳುತ್ತಾರೆ.

ಶಬ್ದಜಾಲಂ ಮಹಾರಣ್ಯಂ, ಚಿತ್ತಭ್ರಮಣ ಕಾರಣಂ ।
ಅತಃ ಪ್ರಯತ್ನಾತ್ ಜ್ಞಾತವ್ಯಂ, ತತ್ತ್ವಜ್ಞೈಃ ತತ್ತ್ವಮಾತ್ಮನಃ ॥

ಕೇವಲ ಪ್ರತಿವಾದಿಯ ಪರಾಭವಕ್ಕಾಗಿ ಪ್ರಯತ್ನಿಸುವುದು ಬೇಡ.

ಸರ್ವಶಾಸ್ತ್ರಗಳಲ್ಲಿಯೂ ಪ್ರಧಾನಭೂತವಾದುದು-ಶ್ರೀಮದ್ಭಾಗವತ ಶಾಸ್ತ್ರವು. ಭಾಗವತವು ಇರುವೆಡೆಯಲ್ಲಿ ಸರ್ವತೀರ್ಥಗಳೂ ಇರುವುವು.

ಶುಕಶಾಸ್ತ್ರಕಥಾಯಾಶ್ಚ, ನಫಲೇನ ಸಮತಾಂ ನಯೇತ್

ಭಾಗವತದ ಒಂದೊಂದು ಶ್ಲೋಕದ ಉಚ್ಚಾರಣೆಯೂ ಮಹಾಫಲ ದಾಯಕವಾದುದು. ಗಾಯತ್ರೀ–ಪುರುಷಸೂಕ್ತ–ತ್ರಯೀವಿದ್ಯಾ ಇವುಗಳೆಲ್ಲವೂ ಒಂದು ತೂಕವಾದರೆ ಸಾಕ್ಷಾತ್ ಪುರುಷೋತ್ತಮನ ರೂಪಿಯಾಗಿರುವ ಭಾಗವತವನ್ನು ಪಾರಾಯಣ ಮಾಡುವವನು ಸಾಕ್ಷಾತ್ ವಿಷ್ಣುವೇ. ಸರ್ವ–ಪಾಪ–ತಾಪ–ನಿರ್ಮುಕ್ತನು.

ರಾಜಸೂಯಾ-ಶ್ವಮೇಧಾದಿ ಯಾಗಗಳು ಬಹು ಶ್ರಮಸಾಧ್ಯಗಳು. ಅವುಗಳ ಫಲವೂ ಅಲ್ಪ. ಹಾಗೂ ಅನಿಶ್ಚಿತ.. ಭಾಗವತ ಕಥಾಶ್ರವಣದಿಂದ ಸರ್ವ-ಯಜ್ಞ-ಯಾಗಗಳ ಫಲವೂ ಒದಗುತ್ತದೆ. ಈ ಶುಕವಾಣಿಯನ್ನು ಕೇಳಿಸಿಕೊಳ್ಳುವವನು ವೈಕುಂಠಲೋಕ ವಾಸಿಯಾಗುತ್ತಾನೆ.

ಭಕ್ತರಿಗೆ ಭಾಗವತ ಪುಸ್ತಕವನ್ನು ದಾನಮಾಡುವವರು ವಿಷ್ಣುಸಾಯುಜ್ಯ ವನ್ನು ಪಡೆಯುತ್ತಾರೆ. ಮಾನವನು ಜೀವನದಲ್ಲಿ ಒಂದು ಸಾರಿಯಾದರೂ ಈ ಶುಕ ಶಾಸ್ತ್ರವನ್ನು ಶ್ರವಣಮಾಡದಿದ್ದರೆ ಅವನ ಜೀವನವು ವ್ಯರ್ಥವಾದಂತೆ. ಇಷ್ಟೇ ಅಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಆಜನ್ಮಮಾತ್ರಮಪಿಯೇನಶಠೇನ ಕಿಂಚಿ
ಚ್ಚಿತ್ತಂವಿಧಾಯ ಶುಕಶಾಸ್ತ್ರಕಥಾನಪೀತಾ
ಚಾಂಡಾಲವಚ್ಚ ಖರವತ್ಬತತೇನ ನೀತಂ
ಮಿಥ್ಯಾ ಸ್ವಜನ್ಮಜನನೀಜನಿದುಃಖ ಭಾಜಾ ॥

ಜೀವಚ್ಛವೋ ನಿಗದಿತಃ ಸತುಪಾಪಕರ್ಮಾ
ಯೇನ ಶ್ರುತಂ ಶುಕಕಥಾವಚನಂ ನಕಿಂಚಿತ್ ।
ಧಿಕ್ತಂ ನರಂ ಪಶುಸಮಂಭುವಿಭಾರ ರೂಪಂ
ಏವಂ ವದಂತಿದಿವಿದೇವಸಮಾಜ ಮುಖ್ಯಾಃ ॥

ಹೀಗೆ ಕಟುಶಬ್ದಗಳಿಂದ ಭಾಗವತ ಕಥಾಶ್ರವಣದಿಂದ ವಿಮುಖರಾಗಿರುವವರನ್ನು ನಿಂದಿಸುತ್ತಾರೆ.

ಆದರೆ ಇದಕ್ಕರ್ಥವಿಷ್ಟೆ-ಶಾಸ್ತ್ರಾಂತರಗಳನ್ನು-ಅನ್ಯ ಸಂಪ್ರದಾಯದವರನ್ನು ಕೀಳು ಎಂಬ ಭಾವನೆಯಿಂದ ತೆಗಳುತ್ತಿಲ್ಲ. ಯೇನಕೇನ ಪ್ರಕಾರೇಣ ಜೀವನು ಭಾಗವತ ಸಂಪ್ರದಾಯವನ್ನನುಸರಿಸಲಿ, ಜನ್ಮ ಸಾರ್ಥಕತೆಯನ್ನು ಹೊಂದಲಿ ಎಂಬುವುದೇ ಆಗಿದೆ.

ಭಾರತೀಯ ಸಂಸ್ಕೃತಿಯು ಯಾವ ಶಾಸ್ತ್ರವನ್ನೂ-ಯಾವ ಸಂಪ್ರದಾಯವನ್ನೂ ಯಾವ್ರತಾದಿಗಳನ್ನಾದರೂ ಸರಿ ಹೇಳತೊಡಗಿದರೆ ಅದು ಸರ್ವೋತ್ತಮವೆಂದೇ ಪ್ರತಿಪಾದಿಸುತ್ತದೆ.

ಅವರ ಸರ್ವೋತ್ತಮತೆಯನ್ನು ಪ್ರತಿಪಾದಿಸುವುದರಲ್ಲಿ ತಾತ್ಪರ್ಯವೇ ಹೊರತು ತದ್ಭಿನ್ನವಾದುವುಗಳನ್ನು ತೆಗಳುವುದರಲ್ಲಿ ತಾತ್ಪರ್ಯವಿಲ್ಲ. ಇದನ್ನು ವಾಚಕರು ಮುಖ್ಯವಾಗಿ ಗಮನಿಸಬೇಕು.

ಮುಂದೆ ಸನತ್ಕುಮಾರರು ತಿಳಿಸುತ್ತಾರೆ-ಶ್ರೀ ಮದ್ಭಾಗವತ ಕಥಾ ಶ್ರವಣಕ್ಕೆ ದಿನಶುದ್ಧಿ-ಲಗ್ನಶುದ್ಧಿಯನ್ನು ನೋಡಬೇಕಾಗಿಲ್ಲ. ಸರ್ವಕಾಲದಲ್ಲಿಯೂ ಕಥಾಶ್ರವಣವನ್ನು ಮಾಡಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯಭಾಷಿಯಾಗಿರು. ಬ್ರಹ್ಮಚಾರಿಯಾಗಿರು. ಸದಾ ಶ್ರವಣಮಾಡು. ಅದು ಕಷ್ಟವಾದರೆ ಏಳು ದಿನಗಳ ಒಂದು ಗಡುವನ್ನು ಮಾಡಿಕೊ. ಏಕೆಂದರೆ ಮನಸ್ಸು ಕೇಂದ್ರೀಕೃತವಾಗಬೇಕು. ನಿಯಮ ಪಾಲಕನಾಗಿರಬೇಕು. ದೀಕ್ಷಾ ಬದ್ಧನಾಗಿರಬೇಕು.

ಸಾಪ್ತಾಹಿಕ ಕಥಾಶ್ರವಣಕ್ಕೆ ಮಾಘಮಾಸವು ಅತ್ಯಂತ ಶ್ರೇಷ್ಠ. ಮಾಘ ಪಾಪವಿಲ್ಲದಿರುವ ತಿಂಗಳು. ಚೈತ್ರ-ವೈಶಾಖಗಳೂ ಶ್ರೇಷ್ಠ-ಕಾರ್ತೀಕ-ಮಾರ್ಗಶೀರ್ಷಗಳೂ ಉತ್ತಮವು.

ಈ ಶರೀರವನ್ನು ನಂಬಿಕೊಂಡು ಸುಮ್ಮನೆ ಕುಳಿತಿರಬಾರದು. ಯಾವ ನಿಮಿಷದಲ್ಲಿ ಏನಾಗುವುದೋ ? ತಪಸ್ಸು–ಯೋಗ-ಸಮಾಧಿಯಿಂದ ದೊರಕಲಾರದ ವಸ್ತುವು ಇದರಿಂದ ದೊರಕುತ್ತದೆ.

ಯೋಗಾದ್ಗರ್ಜತಿ ಸಪ್ತಾಹೋ, ಧ್ಯಾನಾತ್ ಜ್ಞಾನಾಚ್ಚ ಗರ್ಜತಿ
ಕಿಂ ಬ್ರುವೇ ಗರ್ಜನಂ ತಸ್ಯ, ರೇರೇ ಗರ್ಜತಿ ಗರ್ಜತಿ ॥

ಈ ಭಾಗವತ ಕಥಾಶ್ರವಣವು ಸರ್ವ ಶ್ರೇಷ್ಠವಾದುದು.

ಹೀಗೆ ಹೇಳುತ್ತಿದ್ದ ಸೂತ ಪೌರಾಣಿಕರನ್ನು ಶೌನಕಾದಿಗಳು ಪ್ರಶ್ನಿಸಿದರು-ಸ್ವಾಮಿ-ತಾವು ಭಾಗವತದ ಸರ್ವಶ್ರೇಷ್ಠತೆಯನ್ನು ಹೇಳುತ್ತಿರುವುದು ಆಶ್ಚರ್ಯಕರವಾಗಿದೆ.

ಜ್ಞಾನ–ಯೋಗಾದಿ ಸಾಧನೆಗಳನ್ನೂ-ವೇದಾಂತಾದಿ ಶಾಸ್ತ್ರಗಳನ್ನೂ ಭಾಗವತವು ಹಿಂದಕ್ಕೆ ಸರಿಸಿದೆ ಎನ್ನುವುದಾದರೆ ಅದು ಹೇಗೆ ಸಾಧ್ಯ ?

ಸೂತ ಪೌರಾಣಿಕರು ಉತ್ತರಿಸಿದರು - ಅಹುದು - ಇದೇ ಭಾಗವತ ಸಿದ್ಧಾಂತವು.

ಶ್ರೀಕೃಷ್ಣನು ಸ್ವಧಾಮಕ್ಕೆ ತೆರಳುವಾಗ-ಉದ್ಧವನು ಶ್ರೀಕೃಷ್ಣಮುಖಾರವಿಂದದಿಂದ ಹನ್ನೊಂದನೇ ಸ್ಕಂದವನ್ನು ಕೇಳಿ ಶ್ರೀಕೃಷ್ಣನನ್ನು ಪ್ರಾರ್ಥಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಭೋ-ನೀನು ನಿನ್ನ ಲೀಲಾಧಾಮಕ್ಕೆ ತೆರಳುವೆ. ಈ ಘೋರಕಲಿಯುಗದಲ್ಲಿ ಜನರು ಉಗ್ರರೂಪಿಗಳಾಗುತ್ತಾರೆ. ಪಾಪಿಗಳಾಗುತ್ತಾರೆ. ಭೂಭಾರವು ಹೆಚ್ಚಾಗುವುದು. ನಿನ್ನ ಹೊರತು ರಕ್ಷಕರಾರಿರುವರು ? ಭಕ್ತವತ್ಸಲ ! ಸತ್ಪುರುಷರ ಮೇಲೆ ದಯೆತೋರು. ನೀನು ಹೋಗಬೇಡ. ನೀನು ತೆರಳಿಬಿಟ್ಟರೆ ಭಕ್ತರು ಮಹಾ ದುಃಖಿಗಳಾಗುವರು. ಅವರಿರುವುದು ತಾನೇ ಹೇಗೆ ? ಯದ್ಯಪಿ ಸಗುಣನೇ ನಿರ್ಗುಣನು. ನಿರ್ಗುಣನೇ ಸಗುಣನು. ಆದರೆ ಎಲ್ಲರೂ ಕಣ್ಣುಮುಚ್ಚಿಕೊಂಡು ನಿರ್ಗುಣನನ್ನು ಧ್ಯಾನಿಸಲು ಸಾಧ್ಯವೇ ? ಉದ್ಧವನ ಪ್ರಾರ್ಥನೆಯಿಂದ ಶ್ರೀ ಕೃಷ್ಣನೂ ಚಿಂತಾಕುಲನಾದನು.

ಭಕ್ತರಿಗೆ ಯಾವುದಾದರೂ ಅವಲಂಬನವು ಬೇಕೆಂದು ಇಚ್ಛಿಸಿದನು.

ನಂತರ ಭಗವಂತನು ತನ್ನ ಸಂಪೂರ್ಣತೇಜಸ್ಸನ್ನು ಭಾಗವತದಲ್ಲಿ ಇಟ್ಟನು.

ಅವನು ತಿರೋಹಿತರೂಪದಿಂದ ಭಾಗವತಾರ್ಣವವನ್ನು ಪ್ರವೇಶಿಸಿದನು.

ಭಾಗವತವು ಕೇವಲ ಗ್ರಂಥಮಾತ್ರವಲ್ಲ. ಭಗವಂತನ ತೇಜೋವಿಶಿಷ್ಟ ಸಾಕಾರಮೂರ್ತಿಯು. ಪೀಠವಿಲ್ಲದೆ ವಿಗ್ರಹಸ್ಥಾಪನೆಯಾಗುವುದಿಲ್ಲ. ವಿಗ್ರಹವನ್ನು ಪೂಜಿಸಲು ಒಂದು ಪೀಠವು ಬೇಕು. ಅದನ್ನೇ ಆಧಾರಶಕ್ತಿಯೆಂದು ಹೇಳುತ್ತಾರೆ.

ಶಿಶುಜನನಕ್ಕೆ ಸ್ತ್ರೀಯ ಗರ್ಭಾಶಯವು ಶುದ್ಧವಾಗಿರಬೇಕಷ್ಟೆ. ಹಾಗೆಯೇ ಭಗವಂತನಿಗೆ ಈ ಭಾಗವತವು ಶುದ್ಧವಾದ ಆಸನವು.

ಆದರಿಂದ ಹೇಳಿದರು.

ತಿರೋಧಾಯ ಪ್ರವಿಷ್ಟೋಽಯಂ, ಶ್ರೀಮದ್ಭಾಗವತಾರ್ಣವಮ್ ॥

ಕ್ಷೀರಸಾಗರವಾಸಿಯಾದ ಪ್ರಭುವು ಭಾಗವತಮಹಾಸಾಗರದಲ್ಲಿದ್ದಾನೆ.

ಭಾಗವತವು ಭಗವಂತನ ಪ್ರತ್ಯಕ್ಷಮೂರ್ತಿಯು. ಇದರ ಸೇವೆ, ಶ್ರವಣ-ಪಠನಾದಿಗಳಿಂದ ಮಹಾಪಾಪಗಳೂ ನಷ್ಟವಾಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಕಾರಣದಿಂದ ಭಾಗವತಕಥಾಶ್ರವಣವನ್ನು ಸರ್ವಸಾಧನಗಳಿಗಿಂತಲೂ ಶ್ರೇಷ್ಠವಾದುದೆಂದು ಮಹಾತ್ಮರು ಹೇಳುತ್ತಾರೆ. ದುಃಖ-ದಾರಿದ್ರ್ಯ-ದೌರ್ಭಾಗ್ಯಪರಿಹಾರಕ್ಕೂ, ಪಾಪಪ್ರಕ್ಷಾಳನೆಗೂ ಕಾಮ-ಕ್ರೋಧಾದಿಗಳ ಜಯಕ್ಕೂ ಸರ್ವಶ್ರೇಷ್ಠಸಾಧನವಿದು.

ಹೀಗೆ ಸನತ್ಕುಮಾರರು ಪ್ರತಿಪಾದಿಸುತ್ತಿರೋಣ-ಆಶ್ಚರ್ಯವೋ ಎಂಬಂತೆ-ಪರಿಪುಷ್ಟಳಾದ, ಪರಿತುಷ್ಟಳಾದ ಭಕ್ತಿದೇವಿಯು ತನ್ನ ಪುತ್ರರೊಡನೆ ಮೂರ್ತಿ ಮತಿಯಾಗಿ ಆವಿರ್ಭವಿಸಿದಳು.

ನೋಡಿ-ಪ್ರತ್ಯೇಕವಾಗಿ ಒಂದೊಂದು ಭಾವನೆಗೂ ಒಂದೊಂದು ಮೂರ್ತಿಯಿದೆ. ಮನಸ್ಸಿನಲ್ಲಿ ಆಧ್ಯಾತ್ಮಿಕವಾಗಿ ಮೂಡಿದ ಭಾವನೆಗೆ ಅನುಗುಣವಾಗಿ ಆಧಿದೈವಿಕಮೂರ್ತಿಯು ಆವಿರ್ಭಾವವಾಗುತ್ತದೆ. ಅದೇ ಆಧಿಭೌತಿಕವಾಗಿಯೂ ಭಕ್ತರಿಗೆ ಅನುಕೂಲವಾಗಿಯೂ ಪ್ರಕಟವಾಗುತ್ತದೆ. ಮನಸಾ ನೋಡುವ ಪದಾರ್ಥವೇ ಕಣ್ಣಿನಿಂದಲೂ ನೋಡಲ್ಪಡುತ್ತದೆ. ನಿಜವಾದ ಕಣ್ಣು ಮನಸ್ಸೆ. ಈ ಚಕ್ಷುರ್ಗೋಳಕದ ಮೂಲಕ ಹೊರಟು ವಸ್ತುವನ್ನು ಗ್ರಹಿಸುತ್ತದೆ.

ಪ್ರಕಟಳಾದ ಭಕ್ತಿದೇವಿಯ ಮೂರ್ತಿಯನ್ನು ಸೂತರು ವರ್ಣಿಸುತ್ತಾರೆ.

ಪ್ರೇಮೈಕರೂಪಾ, ಸಹಸಾಽಽವಿರಾಸೀತ್
ಶ್ರೀಕೃಷ್ಣ ಗೋವಿಂದ ಹರೇ ಮುರಾರೇ,
ನಾಥೇತಿ ನಾಮಾನಿ ಮುಹುರ್ವದಂತೀ

ಅವಳು ಪ್ರೇಮೈಕರೂಪಿಣಿಯು. ಕೃಷ್ಣ-ಗೋವಿಂದ-ಹರೇ-ಮುರಾರೇ ಎಂದು ಹೇಳುತ್ತಿದ್ದಾಳೆ.

ಹಠಾತ್ ಭಕ್ತಿದೇವಿಯ ಪ್ರವೇಶವಾಗೋಣ, ಸನತ್ಕುಮಾರರು ಹೇಳಿದರು : ಇವಳು ಹೊರಗಡೆಯಿಂದ ಬರಲಿಲ್ಲ.

ಕಥಾರ್ಥತೋ ನಿಷ್ಪತಿತಾಧುನೇಯಂ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಇಲ್ಲಿ ತಿಳಿದುಕೊಳ್ಳಬೇಕಾಗಿದೆ-ಇಂದ್ರಿಯಗಳಿಂದ ಅನುಭೂತ ಗಳಾದ ಭಾವನೆಗಳು ಮನಸ್ಸಿನಲ್ಲಿ ಸಂಸ್ಕಾರರೂಪದಿಂದ ಸಂಕುಚಿತವಾಗಿರು ತ್ತವೆ ಹಾಗೂ ಸಮಯದಲ್ಲಿ ಪ್ರಕಟವಾಗುತ್ತವೆ.

ಆದರೆ ಯಾವುದು ನಮ್ಮ ಅನುಭವಕ್ಕೆ ಬಂದಿಲ್ಲವೋ ಯಾವುದರ ಸಂಸ್ಕಾರವೇ ಇಲ್ಲವೊ ಅದು ಪ್ರಕಟವಾಗುವುದು ಹೇಗೆ ?

ನಮಗೆ ಇಲ್ಲಿಯವರೆಗೆ ಬ್ರಹ್ಮಾನುಭವವು ಆಗಿಲ್ಲ. ಆಗಿದ್ದರೆ ನಾವು ಹುಟ್ಟುತ್ತಲೇ ಇರಲಿಲ್ಲ. ಬ್ರಹ್ಮಾನುಭೂತಿಯು ನಮ್ಮ ಸಂಸ್ಕಾರದಿಂದ ಹುಟ್ಟುವುದಿಲ್ಲ. ನಾವು ವಾಕ್ಯಾರ್ಥಶ್ರವಣದಿಂದ ಬ್ರಹ್ಮಾನುಭೂತಿಯನ್ನು ಒಳಕ್ಕೆ ದಬ್ಬಿದರೆ ತಜ್ಜನ್ಯವೃತ್ತಿಯು ವೃತ್ಯಂತರಗಳನ್ನು ಖಂಡಿಸಿ ತಾನೂ ನಿವೃತ್ತವಾಗುತ್ತದೆ.

ಅದರಿಂದ ಯಾವುದು ಮನಸ್ಸಿನಲ್ಲಿಲ್ಲವೋ ನಿತ್ಯ ಅಪರೋಕ್ಷವಸ್ತು ವಾಗಿದೆಯೋ-ಅದು ವಾಕ್ಯಶ್ರವಣವಿಲ್ಲದೇ ಹೃದಯದಲ್ಲಿ ಆರೂಢವಾಗಿರು ವುದಿಲ್ಲ.

ನಿತ್ಯಾಪರೋಕ್ಷಾತ್ಮಾನುಭೂತಿಯು ಅಜ್ಞಾತವಾಗಿರುವುದರಿಂದ ಅದನ್ನು ತಿಳಿಯಲು ವಾಕ್ಯಾರ್ಥಶ್ರವಣವನ್ನು ಬಿಟ್ಟರೆ ಉಪಾಯಾಂತರವಿಲ್ಲ.

ಪ್ರತ್ಯಕ್ಷ, ಅನುಮಾನ, ಉಪಮಾನ ಅರ್ಥಾಪತ್ತಿ, ಅನುಪಲಬ್ಧಿ-ಮುಂತಾದ ಯಾವ ಪ್ರಮಾಣದಿಂದಲೂ ಆತ್ಮಸಾಕ್ಷಾತ್ಕಾರವಾಗುವುದಿಲ್ಲ.

ಆತ್ಮನು ನಿತ್ಯಾಪರೋಕ್ಷನಾದುದರಿಂದ ವಾಕ್ಯಾರ್ಥಶ್ರವಣದಿಂದಲೇ ಬ್ರಹಾನುಭೂತಿಯಾಗಬೇಕು. ಇದರಿಂದ ಶಾಬ್ದಿಕಮಹಿಮೆಯನ್ನು ಗುರು ತಿಸಬಹುದು.

ಕಥಾಸಾರರೂಪದಲ್ಲಿ ಆವಿರ್ಭವಿಸಿದ ಭಕ್ತಿದೇವಿಯು ಕೇಳಿದಳು :

ಭವದ್ಭಿರದ್ಯೈವ ಕೃತಾಸ್ಮಿ ಪುಷ್ಟಾ ।
ಕಲಿಪ್ರಣಷ್ಟಾಪಿ ಕಥಾರಸೇನ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ನಾನು ಯದ್ಯಪಿ ಕಲಿಪ್ರಣಷ್ಟಳಾಗಿದ್ದೆನು. ಆದರೆ ಈಗ ನಿಮ್ಮಿಂದ ಪರಿಪುಷ್ಟಳಾಗಿದ್ದೇನೆ. ನನ್ನ ವಾಸಸ್ಥಾನವೆಲ್ಲಿ ? ದಯೆಯಿಟ್ಟು ತಿಳಿಸಿ.

ಆಗ ಸನತ್ಕುಮಾರರು ಹೇಳಿದರು-

ಭಕ್ತೇಷು ಗೋವಿಂದಸ್ವರೂಪಕರ್ತ್ರೀ ।
ಪ್ರೇಮೈಕಧರ್ತ್ರೀ ಭವರೋಗಹಂತ್ರೀ ।
ಸಾ ತ್ವಂ ಚ ತಿಷ್ಠಸ್ವ ಸುಧೈರ್ಯಸಂಶ್ರಯಾ
ನಿರಂತರಂ ವೈಷ್ಣವಮಾನಸಾನಿ

ಭಕ್ತರ ಹೃದಯದಲ್ಲಿ ಭಗವದ್ರೂಪದಲ್ಲಿರು.

ಇದರ ಅರ್ಥವೇನೆಂದರೆ-ನಮ್ಮ ವೃತ್ತಿಯು ಭಗವದಾಕಾರವಾಗಿದ್ದರೆ ಭಗವಂತನಿರುವನೆಂದು ತಿಳಿದುಕೊಳ್ಳಬೇಕು. ನಮ್ಮ ಹೃದಯದ ಭಗವದಾಕಾರತೆಯೆ ಭಕ್ತಿಯು.

ಇದು ಪ್ರೇಮಪ್ರದಾಯಿನೀ.

ಸಾಂಸಾರಿಕರೋಗವನ್ನು ನಾಶಮಾಡುವವಳು.

ನೀನು ಧೈರ್ಯವಾಗಿ ದೈವಭಕ್ತರ ಹೃದಯದಲ್ಲಿ ವಾಸವನ್ನು ಮಾಡು. ಹೃದಯದಲ್ಲಿ ಭಕ್ತಿಯು ಮೂಡಿದರೆ ಹೃದಯಸ್ಥಸರ್ವದೋಷಗಳೂ ದೂರವಾಗುತ್ತವೆ.

ಕಲಿಯ ಯಾವ ವಿಧದ ದೋಷವೂ ಭಕ್ತರ ಮೇಲೆ ಪ್ರಭಾವವನ್ನು ಬೀರಲಾರದು. ಅದರಿಂದ ಭಕ್ತಿವಂತರೇ ಧನ್ಯರು.

ಸಕಲಭುವನಮಧ್ಯೇ ನಿರ್ಧನಾಸ್ತೇಽಪಿ ಧನ್ಯಾಃ

ಜಗತ್ತಿನಲ್ಲಿ ನಿರ್ಧನರೂ ಸಹ ಭಕ್ತಿವಂತರಾಗಿದ್ದರೆ ಧನ್ಯರು.

ಏಕೆಂದರೆ : ಭಗವಂತನಿರುವುದು ವೈಕುಂಠ-ಕೈಲಾಸಗಳಲ್ಲಲ್ಲ.

ಅವನಿರುವುದು ಭಕ್ತರ ಹೃದಯದಲ್ಲಿ.

Sri Vidyabharathi Book Centre, Sringeri

CC-0. In Public Domain. Digitized by eGangotri

ಭಾಗವತದ ಮಹಿಮೆಯನ್ನು ಎಷ್ಟು ಹೇಳಿದರೂ ಅಲ್ಪವೇ.

ಭಾಗವತದ ವಕ್ತ್ರಾ-ಶ್ರೋತಾ ಇಬ್ಬರೂ ಶ್ರೀ ಕೃಷ್ಣರೂಪರೇ ಆಗುತ್ತಾರೆ.

ಅಲಮನ್ಯಧರ್ಮತಃ

ಇತ್ಯೇವಂ ತೃತೀಯೋಽಧ್ಯಾಯಃ

ಶ್ರೀ ವಾಸುದೇವಾರ್ಪಣಮಸ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತದರ್ಶನ

ಗೋಕರ್ಣೋಪಾಖ್ಯಾನ

ಅಧ್ಯಾಯ-೪

ನೈಮಿಷಾರಣ್ಯದಲ್ಲಿ ಸೂತಪೌರಾಣಿಕರಿಂದ ಭಾಗವತಮಾಹಾತ್ಮ್ಯೆಯ ಪ್ರವಚನವು ಮುಂದುವರಿಯುತ್ತಿದೆ. ಅಲ್ಲಿ ನೆರೆದಿದ್ದ ಶ್ರೋತೃಗಳ ಹೃದಯ ಗಳಲ್ಲಿ ತುಂಬಿಕೊಂಡಿರುವ ಅಪೂರ್ವಭಕ್ತಿಯನ್ನು ನೋಡಿ ಭಗವಂತನು ತನ್ನ ಭಕ್ತವಾತ್ಸಲ್ಯಕ್ಕೆ ಅನುಗುಣವಾಗಿ ಭಕ್ತರ ಹೃದಯಗಳಲ್ಲಿಯೇ ನೆಲೆಸಿಬಿಟ್ಟನು. ಭಗವಂತನು ಭಕ್ತರ ಗುಣ-ದೋಷಗಳನ್ನು ಎಣಿಸುವುದಿಲ್ಲ. ವತ್ಸಲೆಯು ತನ್ನ ಸಂತಾನವನ್ನು ಶುಚಿಗೊಳಿಸುವ ರೀತಿಯಲ್ಲಿ ಭಕ್ತವತ್ಸಲನಾದ ಭಗವಂತನು ಭಕ್ತರ ಹೃದಯಗಳನ್ನು ಶುದ್ಧಿಗೊಳಿಸುತ್ತಾನೆ. ಸರ್ವರ ಹೃದಯಗಳೂ ಭಗವಂತನ ಆವಾಸಸ್ಥಾನಗಳಾದುವು.

ವನಮಾಲೀ-ಘನಶ್ಯಾಮ-ವರಪೀತಾಂಬರಧಾರೀ - ಮುರಳೀಮನೋಹರ ಕಾಂಚೀಕಲಾಪಕಟಿ - ತ್ರಿಭಂಗಲಲಿತ - ಕೌಸ್ತುಭಧಾರೀ-ಕೋಟಿಮನ್ಮಥಲಾವಣ್ಯ ಪರಿಪೂರಿತ - ಹರಿಚಂದನಚರ್ಚಿತ - ಪರಮಾನಂದಮಯಚಿನ್ಮೂರ್ತಿಯ ಆವಿ ರ್ಭಾವವಾದೊಡನೆಯೇ ಪುಷ್ಪವೃಷ್ಟಿಯಾಯಿತು. ಜಯ–ಜಯಧ್ವನಿಗಳು ಮೊಳಗಿದುವು. ಶಂಖಧ್ವನಿಗಳಾದುವು. ಉದ್ಧವನೂ ಕಥಾಶ್ರವಣಕ್ಕಾಗಿ ಗಂಗಾತಟಕ್ಕೆ ಬಂದಿದ್ದನು. ಅವನಿಗೂ ಅಪೂರ್ವವಾದ ಅನುಭವವಾಯಿತು. ಅವನಂತೆಯೇ ಇದ್ದವರೆಲ್ಲರಿಗೂ ದೇಹಾದಿಗಳ ಸ್ಮರಣೆಯು ತಪ್ಪಿಹೋಯಿಂತು. ಶ್ರೋತೃಗಳ ತನ್ಮಯತೆಯನ್ನು ಕಂಡ ನಾರದರು ಹೇಳಿದರು.

ಅಲೌಕಿಕೋಽಯಂ ಮಹಿಮಾ ಮುನೀಶ್ವರಾಃ !

"ಮುನಿಶ್ರೇಷ್ಠರೇ ! ಶ್ರೀಮದ್ಭಾಗವತದ ಶ್ರವಣಮಹಿಮೆಯು ಅತ್ಯ ದ್ಭುತವು. ಇಲ್ಲಿರುವ ಪಶು-ಪಕ್ಷಿಗಳೂ ನಿಷ್ಪಾಪಿಗಳಾಗಿವೆ. ಭಾಗವತಕಥಾ

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರವಣವನ್ನು ಬಿಟ್ಟರೆ ಚಿತ್ತಶುದ್ಧಿಗೆ ಮತ್ತೊಂದು ಸುಲಭೋಪಾಯವಿಲ್ಲ. ಭಾಗವತವೆಂಬ ಮಾಧ್ಯಮದಿಂದ ಒಂದು ಹೊಸ ಮಾರ್ಗವೇ ಪ್ರಕಾಶಕ್ಕೆ ಬಂದ ಹಾಗಾಯಿತು".

ಬಳಿಕ ಸನತ್ಕುಮಾರರನ್ನು ಪ್ರಶ್ನಿಸಿದರು : "ಪೂಜ್ಯರೇ ! ಭಾಗವತಕಥಾ ಶ್ರವಣದಿಂದ ಎಂತೆಂತಹವರು ಪವಿತ್ರರಾಗುತ್ತಾರೆ ? ದಯೆಯಿಟ್ಟು ತಿಳಿಸಿರಿ"

ಸನತ್ಕುಮಾರರು ಹೇಳಿದರು : ನಾರದರೇ ! ಕಥಾಶ್ರವಣದಿಂದ ದುರಾಚಾರಿಗಳು, ಕುಮಾರ್ಗಗಾಮಿಗಳು, ಕ್ರೋಧಾಗ್ನಿದಗ್ಧರು, ಕುಟಿಲರು, ಕಾಮಿಗಳು ಈ ಎಲ್ಲರೂ ಪಾವನರಾಗುತ್ತಾರೆ. ವಸ್ತುತಃ ವಿಕಾರವನ್ನು ದೂರಮಾಡುವ ಸಾಮರ್ಥ್ಯವಿಲ್ಲದ ಸಾಧನೆಯು ನಿಜವಾದ ಸಾಧನೆಯಲ್ಲ. ಭಾಗವತಶ್ರವಣವಾದರೋ-ಸರ್ವವಿಕಾರಗಳನ್ನೂ ದೂರಮಾಡಿ ಮಿಥ್ಯಾಭಾಷಿಗಳನ್ನೂ. ಮಾತಾಪಿತೃದ್ರೋಹಿಗಳನ್ನೂ, ತೃಷ್ಣಾಕುಲರನ್ನೂ, ಆಶ್ರಮಧರ್ಮರಹಿತರನ್ನೂ, ದಾಂಭಿಕರನ್ನೂ, ಮಾತ್ಸರ್ಯಯುಕ್ತರನ್ನೂ, ಹಿಂಸಕರನ್ನೂ–ಪವಿತ್ರರನ್ನಾಗಿ ಮಾಡುತ್ತದೆ. ಪಂಚಮಹಾಪಾಪಿಗಳೂ, ಛಲ–ಛದ್ಮಕಾರಿಗಳೂ, ಪಿಶಾಚರಂತೆ ಕ್ರೂರಿಗಳೂ, ಬ್ರಹ್ಮಸ್ವಾಪಹಾರಿಗಳೂ, ವ್ಯಭಿಚಾರಿಗಳೂ-ಶ್ರವಣಮಾತ್ರದಿಂದ ಪುನೀತರಾಗುತ್ತಾರೆ.

ಈ ವಿಷಯದಲ್ಲಿ ನಿಮಗೊಂದು ಪ್ರಾಚೀನವಾದ ಇತಿಹಾಸವನ್ನು ಹೇಳುತ್ತೇನೆ. (ಇತಿಹಾಸವೆಂದರೆ : ಇತಿ-ಹ-ಆಸ, ಏತದೇವ ಇತಿಹಾಸಸ್ಯ ಇತಿಹಾಸತ್ವಂ)

ತುಂಗಭದ್ರಾನದೀತೀರದಲ್ಲಿ 'ಉತ್ತಮ'ವೆಂಬ ಪಟ್ಟಣವಿದ್ದಿತು. ಅಲ್ಲಿ ಶ್ರೌತ–ಸ್ಮಾರ್ತಕರ್ಮನಿಪುಣನಾದ 'ಆತ್ಮದೇವ'ನೆಂಬ ಬ್ರಾಹ್ಮಣನಿದ್ದನು. ದ್ವಿತೀಯ ಇವ ಭಾಸ್ಕರಃ-ಎರಡನೆಯ ಸೂರ್ಯನೋಪಾದಿಯಲ್ಲಿ ಪ್ರಕಾಶಿಸುತ್ತಿದ್ದನು. ಅವನ ಮಹತ್ತ್ವವು ಹೀಗಿದ್ದರೂ ಭಿಕ್ಷಾವೃತ್ತಿಯಿಂದಲೇ ಜೀವಿಸುತ್ತಿದ್ದನು. ಕಾರ್ಪಣ್ಯವೇ ಮೂರ್ತಿವೆತ್ತಂತೆ ಇದ್ದನು. ಅವನ ಪತ್ನಿಯಾದ ಧುಂಧುಲಿಯು ತಾನು ಹೇಳುವುದೇ ಸರಿ–ಎಂಬ ಸ್ವಭಾವದವಳು. ಅವಳಾದರೋ

Sri Vidyabharathi Book Centre, Sringeri

ಸುಂದರಿಯೂ, ಒಳ್ಳೆಯ ಕುಲದಲ್ಲಿ ಹುಟ್ಟಿದವಳು, ನಿತ್ಯವೂ ಲೋಕವಾರ್ತೆಯಲ್ಲಿ ಆಸಕ್ತಿಯುಳ್ಳವಳು, ಹೆಚ್ಚು ಮಾತನಾಡುವವಳು, ಗೃಹಕೃತ್ಯಗಳಲ್ಲಿ ನಿಪುಣೆ, ಕೃಪಣೆ, ಕಲಹಪ್ರಿಯಳು. ನೋಡಿ ಬಹಳ ಮಾತನಾಡುವವರು ಸತ್ಯವಾದಿಗಳಾಗಿರಲು ಸಾಧ್ಯವಿಲ್ಲ. ಒಬ್ಬರು ಹೇಳುತ್ತಾರೆ : 'ಇವರು ಕೋಟ್ಯಧೀಶರಿರಬಹುದು. ಆದರೆ ಪ್ರಾಮಾಣಿಕತೆಯಿಂದಲೇ ವ್ಯಾಪಾರವನ್ನು ನಡೆಸುತ್ತಾರೆಂಬುದನ್ನು ನಂಬಲು ಹೇಗೆ ಸಾಧ್ಯ ?

ಆ ದಂಪತಿಗಳಿಗೆ ಮನೆಯಿತ್ತು ; ಧನವಿತ್ತು ; ಭೋಗವಿತ್ತು. ಆದರೆ ಶಾಂತಿ-ಸುಖಗಳಿರಲಿಲ್ಲ. ಅವರು ಸಂತಾನಹೀನರಾಗಿದ್ದರು. ಸಂತಾನಪ್ರಾಪ್ತಿಗಾಗಿ ದಾನ-ಧರ್ಮಗಳನ್ನು ಮಾಡಿದರು. ಏನೂ ಪ್ರಯೋಜನವಾಗಲಿಲ್ಲ. ನಿರ್ವಿಣ್ಣನಾದ ಬ್ರಾಹ್ಮಣನು ದುಃಖದಿಂದ ಅರಣ್ಯವನ್ನು ಸೇರಿದನು. ಅಲ್ಲಿ ಸರೋವರದಲ್ಲಿ ನೀರನ್ನು ಕುಡಿದು ವಿಶ್ರಮಿಸಿಕೊಳ್ಳುತ್ತಾ ಕುಳಿತನು. ಆಗ ಓರ್ವ ಸಂನ್ಯಾಸಿಯ ದರ್ಶನವಾಯಿತು. ಬ್ರಾಹ್ಮಣನು ವಿನಯದಿಂದ ನಮಸ್ಕರಿಸಿದನು. ಸಂನ್ಯಾಸಿಯು ಕೇಳಿದನು ; "ಏಕೆ ಬ್ರಾಹ್ಮಣ ! ಇಷ್ಟೊಂದು ದುಃಖಿಯಾಗಿರುವೆ ? ನಿನ್ನ ಚಿಂತೆಗೆ ಕಾರಣವೇನು ?"

ಬ್ರಾಹ್ಮಣನು ಹೇಳಿದನು : "ಮಹಾತ್ಮರೇ ! ಏನು ಹೇಳಲಿ ? ಪೂರ್ವಸಂಚಿತಪಾಪದ ಫಲವಾಗಿ ಈ ಜನ್ಮದಲ್ಲಿ ಸಂತಾನಹೀನನಾಗಿದ್ದೇನೆ. ನಾನು ಕೊಡುವ ತರ್ಪಣವನ್ನು ಸ್ವೀಕರಿಸುವಾಗ ಪಿತೃದೇವತೆಗಳು ನಿಟ್ಟುಸಿರುಬಿಡುತ್ತಾ ಕಣ್ಣೀರು ಸುರಿಸುತ್ತಾರೆ. ನನ್ನ ನಂತರ ಪಿಂಡೋದಕಗಳನ್ನು ಕೊಡುವವರು ಯಾರೂ ಇಲ್ಲವಲ್ಲ–ಎಂದು ಪರಿತಪಿಸುತ್ತಾರೆ. ದೇವ–ಬ್ರಾಹ್ಮಣರು ಅಪುತ್ರವಂತನೆಂದು ತಿಳಿದು ನಾನು ಕೊಡುವ ದಾನಾದಿಗಳನ್ನು ಸ್ವೀಕರಿಸುವುದಿಲ್ಲ. ನನ್ನ ಜನ್ಮವು ನಿರರ್ಥಕ. ಪ್ರಾಣತ್ಯಾಗಮಾಡುವ ನಿರ್ಧಾರದಲ್ಲಿದ್ದೇನೆ. ನನ್ನ ಮನೆಯ ಹಸುವೂ ಬರಡು. ಗಿಡ-ಮರಗಳೂ ಫಲ-ಪುಷ್ಪಗಳನ್ನು ಕೊಡುವುದಿಲ್ಲ. ಇಂತಹ ನಿರರ್ಥಕವಾದ ಬಾಳ್ವೆಯಿಂದ ಏನು ಪ್ರಯೋಜನ ?" ಕರುಣಾಳುಗಳಾದ ಯತಿಗಳು ದೀರ್ಘವಾಗಿ ಚಿಂತಿಸಿ ಹೇಳಿದರು :

Sri Vidyabharathi Book Centre, Sringeri

CC-0. In Public Domain. Digitized by eGangotri

ಮುಂಚಾಜ್ಞಾನಂ ಪ್ರಜಾರೂಪಂ ಬಲಿಷ್ಠಾ ಕರ್ಮಣೋಗತಿಃ ।
ವಿವೇಕಂ ತು ಸಮಾಸಾದ್ಯ ತ್ಯಜ ಸಂಸಾರವಾಸನಾಮ್ ।

ಬ್ರಾಹ್ಮಣನೇ ! ನೀನು ಸಂತಾನದ ಯೋಚನೆಯನ್ನು ಬಿಟ್ಟುಬಿಡು. ಕರ್ಮದ ಗತಿಯು ಬಲಿಷ್ಠವಾದುದು. ಮನುಷ್ಯನು ಪುತ್ರಾದಿ ಸಂಪತ್ತನ್ನು ಅಪೇಕ್ಷಿಸುತ್ತಾನೆ. ಅದರಿಂದ ತಾನು ಕೊನೆಯವರೆಗೂ ಸುಖವಾಗಿರಬಹು ದೆಂದು ತಿಳಿಯುತ್ತಾನೆ. ಸಾಮಾನ್ಯವಾಗಿ ನಾವು ಆಶಿಸಿದಂತೆ ಆಗುವುದಿಲ್ಲ. ಪುತ್ರಾದಿಗಳು ಜನಿಸಿದ ಮೇಲೆ ಅವರು ತಂದೆಯನ್ನೇ ಹೊರದೂಡುತ್ತಾರೆ. ಇನ್ನು ಏಳು ಜನ್ಮಗಳವರೆಗೆ ನಿನಗೆ ಸಂತಾನಯೋಗವಿಲ್ಲ. ಸಂತಾನದ ಕಾರಣ ದಿಂದ ಸಗರ, ಅಂಗ-ಮುಂತಾದ ರಾಜ-ಮಹಾರಾಜರು ಬಹಳ ದುಃಖಿ ಗಳಾಗಿದ್ದಾರೆ. ಅದರಿಂದ ಹೇಗಾದರೂ ಸಂತಾನವನ್ನು ಪಡೆಯಬೇಕೆಂಬ ಹಂಬಲ ವನ್ನು ದೂರೀಕರಿಸು. ನಿನ್ನ ಆತ್ಮಕಲ್ಯಾಣವು ನಿನ್ನಿಂದಾಗದಿದ್ದರೆ ಮತ್ತೊಬ್ಬ ರಿಂದಾಗುವುದೇ ? ಈ ದುರಾಶೆಯನ್ನು ದೂರಮಾಡು. ನಿಜವಾಗಿಯೂ ಸುಖವಿರುವುದು ಸಂನ್ಯಾಸದಲ್ಲಿಯೇ. ಸರ್ವ ರೀತಿಯ ಆಸೆಗಳನ್ನೂ ತ್ಯಜಿಸಿ ಸಂನ್ಯಾಸ ಧರ್ಮವನ್ನು ಅಂಗೀಕರಿಸಿ ಸುಖ-ಶಾಂತಿಗಳನ್ನು ಹೊಂದು.

ಇಂತಹ ಬೋಧೆಯಿಂದಲೂ ಬ್ರಾಹ್ಮಣನು ಬುದ್ಧಿವಂತನಾಗಲಿಲ್ಲ. ಸಂನ್ಯಾಸಿಗಳಿಗೆ ಹೇಳಿದನು : "ಪೂಜ್ಯರೇ ! ನಿಮ್ಮೀ ಪ್ರವಚನವು ನನಗೆ ಹಿಡಿಸುತ್ತಿಲ್ಲ. ನನಗೆ ಸಂತಾನಪ್ರಾಪ್ತಿಯಾಗಲೇಬೇಕು. ಇಲ್ಲದಿದ್ದರೆ ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳುವೆನು. ಸಂನ್ಯಾಸಧರ್ಮದಲ್ಲೇನು ಸುಖವಿದೆ ? ಮಕ್ಕಳಿಲ್ಲ ; ಮರಿಯಿಲ್ಲ."

ಬ್ರಾಹ್ಮಣನ ಮಾತಿನಿಂದ ಬೇಸರಗೊಂಡ ಯತಿಗಳು ಹೇಳಿದರು. "ವಿಪ್ರನೇ ! ವಿಧಿಯ ಬರಹವನ್ನು ಅಳಿಸಲಾಗುವುದಿಲ್ಲ. ನೀನು ಸತ್ಯಾಂಶವನ್ನು ಗ್ರಹಿಸಲಾರೆ. ಆಗಲಿ-ನಿನಗೊಂದು ಫಲವನ್ನು ಕೊಡುತ್ತೇನೆ. ಅದನ್ನು ಪತ್ನಿಯು ಭುಂಜಿಸಲಿ. ಹಾಗೂ ವ್ರತನಿಷ್ಠಳಾಗಿ ಒಂದು ವರ್ಷವಿರಬೇಕು. ಸತ್ಯಭಾಷಿಣಿಯಾಗಿ-ಪರಿಶುದ್ಧಳಾಗಿ ಅಹಿಂಸೆಯನ್ನು ಪಾಲಿಸಬೇಕು. ದಾನ-ಧರ್ಮಗಳನ್ನು ನಡೆಸುತ್ತಾ ಏಕಭುಕ್ತಳಾಗಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಹೇಳಿ ಫಲವನ್ನು ಕೊಟ್ಟು ಸಂನ್ಯಾಸಿಗಳು ಹೊರಟುಹೋದರಂ.

ಬ್ರಾಹ್ಮಣನು ಸಂತೋಷದಿಂದ ಮನೆಗೆ ಬಂದು, ಪತ್ನಿಗೆ ಫಲವನ್ನು ಕೊಟ್ಟು ನಿಯಮಗಳನ್ನು ತಿಳಿಸಿದನು. ಧುಂಧಲಿಯಾದರೋ ಫಲವನ್ನು ತೆಗೆದುಕೊಂಡು ತನ್ನ ಸಖಿಯೊಡನೆ ಚಿಂತಿಸುತ್ತಾ ಕುಳಿತಳು.

ಅಹೋಚಿಂತಾ ಮಮೋತ್ಪನ್ನಾ ಫಲಂ ಚಾಹಂ ನ ಭಕ್ಷಯೇ ॥

"ನೋಡು ಗೆಳತಿ! ಇದನ್ನು ತಿಂದರೆ ಮಕ್ಕಳಾಗುವುದಂತೆ, ನಾನು ಗರ್ಭವನ್ನು ಧರಿಸುತ್ತೇನೆ, ಹೊಟ್ಟೆಯು ಬೆಳೆಯುತ್ತಾ ದಪ್ಪವಾಗುತ್ತದೆ. ಎಂದಿನಂತೆ ಆಹಾರವು ಸೇರುವುದಿಲ್ಲ. ಅಶಕ್ತಿಯು ಹೆಚ್ಚಾಗುತ್ತದೆ. ಮನೆಯ ಕೆಲಸಗಳನ್ನು ಹೇಗೆ ನಿರ್ವಹಿಸುವುದು? ದುರದೃಷ್ಟದಿಂದ ಊರಿಗೆ ಕಳ್ಳರು ನುಗ್ಗಿದರೆ-ಬೆಂಕಿ ಬಿದ್ದರೆ-ಗರ್ಭಿಣಿಯಾದ ನಾನು ಓಡಿಹೋಗುವುದು ಹೇಗೆ? ಪ್ರಸವಕಾಲದಲ್ಲಿ ತೊಂದರೆಯಾದರೆ ನಾನೇ ಸಾಯಬೇಕಲ್ಲವೇ? ಗರ್ಭಭಾರದಿಂದ ಏಳಲಾರವೇ ನಾನು ಮಲಗಿಬಿಟ್ಟರೆ ನನ್ನ ನಾದಿನಿಯು ಬಂದು ಮನೆಯ ಸಾಮಗ್ರಿಗಳೆಲ್ಲವನ್ನೂ ದೋಚಿಬಿಡುತ್ತಾಳೆ. ನನ್ನ ಪತಿಗೋ ಏನೂ ತಿಳಿಯುವುದಿಲ್ಲ. ನೀನೇ ನೋಡು–ಮಕ್ಕಳಿಲ್ಲದಿದ್ದರೇನು? ನಾವೀಗ ಸುಖವಾಗಿಲ್ಲವೇ? ಮಕ್ಕಳ ಲಾಲನೆ–ಪಾಲನೆಗಳೂ ಬಹಳ ಕಷ್ಟ ಸಾಧ್ಯವಲ್ಲವೇ? ನಿಜವಾಗಿಯೂ ಬಂಜೆಯರೂ–ವಿಧವೆಯರೂ ಪರಮಸುಖಿಗಳು. ನಿರಾತಂಕರಾಗಿರುತ್ತಾರೆ.

ದುಂಧುಲಿಯು ಸಖಿಯೊಡನೆ ಹೀಗೆ ಹೇಳುತ್ತಾ-ಹಣ್ಣನ್ನು ತಿನ್ನುವುದಿಲ್ಲವೆಂದು ನಿರ್ಧರಿಸಿಬಿಟ್ಟಳು. ಎರಡು ದಿವಸಗಳು ಕಳೆದ ನಂತರ ಪತಿಯು ಪ್ರಶ್ನಿಸಲಾಗಿ ಓಹೋ! ತಿಂದುಬಿಟ್ಟೆನಲ್ಲಾ-ಎಂದು ಉತ್ತರಿಸಿದಳು.

ನೋಡಿ–ಸ್ತ್ರೀಚರಿತ್ರೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಮತ್ಸ್ಯೇಂದ್ರನಾಥರ ಚರಿತ್ರೆಯಲ್ಲಿಯೂ ಇಂತಹುದೇ ಪ್ರಸಂಗವೊಂದು ಬರುತ್ತದೆ.

ಓರ್ವ ಸ್ತ್ರೀಯು ಪುತ್ರಾರ್ಥಿನಿಯಾಗಿ ಮತ್ಸ್ಯೇಂದ್ರನಾಥರಿಂದ ಭಸ್ಮವನ್ನು

Sri Vidyabharathi Book Centre, Sringeri

CC-0. In Public Domain. Digitized by eGangotri

ಪಡೆಯುತ್ತಾಳೆ. ನಂತರ ತನ್ನ ಗೆಳತಿಯೊಡನೆ ವಿಮರ್ಶಿಸುತ್ತಾಳೆ. ಆ ಗೆಳತಿಯು ದುಂಧುಲಿಯಂತೆಯೇ ಗರ್ಭಿಣಿಯರಿಗಾಗುವ ತೊಂದರೆಗಳನ್ನು ತಿಳಿಸುತ್ತಾಳೆ. ಆದರಿಂದ ಭಯಗೊಂಡ ಆ ಹೆಂಗಸು ಭಸ್ಮವನ್ನು ತಿಪ್ಪೆಗೆ ಎಸೆಯುತ್ತಾಳೆ. ಕೆಲವು ವರ್ಷಗಳು ಕಳೆದ ಬಳಿಕ ಮತ್ಸ್ಯೇಂದ್ರನಾಥರು ಅವಳ ಮನೆಗೆ ಬಂದು 'ನನ್ನ ವರಪುತ್ರನನ್ನು ತೋರಿಸು'—ಎಂದು ಕೇಳುತ್ತಾರೆ. ಅವಳು ತಿಪ್ಪೆಯ ಕಡೆಗೆ ಕೈತೋರಿಸೋಣ. ಅಲ್ಲಿ ರಾಶಿ ಹಾಕಿದ್ದ ಸಗಣಿಯನ್ನು ಒತ್ತರಿಸಿದಾಗ ದಿವ್ಯತೇಜಃಪುಂಜನಾದ ಬಾಲಕನು ಯೋಗಾರೂಢನಾಗಿ ಕುಳಿತಿದ್ದನು. ಮತ್ಸ್ಯೇಂದ್ರನಾಥರು 'ಗೋರಕ್ಷ' ಎಂದು ಆತನನ್ನು ಸಂಬೋಧಿಸಿ ಜೊತೆಯಲ್ಲಿಯೇ ಕರೆದುಕೊಡು ಹೋದರು. ಆ ಹೆಂಗಸಾದರೋ ತನ್ನ ದುಷ್ಕೃತ್ಯಕ್ಕೆ ಪಶ್ಚಾತ್ತಾಪ ಪಡುತ್ತಾ ನೋಡುತ್ತಿದ್ದಳು.

ದಿನಗಳ ಮೇಲೆ ದಿನಗಳು ಉರುಳಿದುವು. ಒಂದು ದಿನ ಧುಂಧುಲಿಯ ಸಹೋದರಿಯು ಅವಳಲ್ಲಿಗೆ ಬಂದಾಗ ದುಂಧಲಿಯು ತಂಗಿಯೊಡನೆ ಎಲ್ಲವನ್ನೂ ಹೇಳಿಕೊಂಡು ಗೋಳಾಡಿದಳು. ಆಗ ತಂಗಿಯು ಸಮಾಧಾನಪಡಿಸುತ್ತಾ ಹೇಳಿದಳು. "ಅಕ್ಕ! ಅಳಬೇಡ ನನಗೂ ಮೂರು ತಿಂಗಳಾಗಿದೆ. ಜನನವಾದ ಕೂಡಲೇ ಗುಟ್ಟಾಗಿ ಮಗುವನ್ನು ನಿನಗೆ ತಲುಪಿಸುವೆನು, ಇನ್ನೂ ನವಮಾಸವಾಗಿರಲಿಲ್ಲ. ಮಗುವು ಹುಟ್ಟಿ ಸತ್ತುಹೋಯಿತೆಂದು ನನ್ನ ಯಜಮಾನರಿಗೆ ಹೇಳಿಬಿಡುವೆನು, ನೀನು ಮಾತ್ರ ಗರ್ಭಿಣಿಯಂತೆಯೇ ನಟಿಸುತ್ತಿರು. ಹೀಗೆ ಬೋಧಿಸಿ ಹೊರಟು ಹೋದಳು.

ದುಂಧಲಿಯೂ ತಂಗಿಯ ಮಾತಿಗೆ ಸಮ್ಮತಿಸಿ ಸಂನ್ಯಾಸಿಯು ಕೊಟ್ಟ ಫಲವನ್ನು ಹಸುವಿಗೆ ತಿನ್ನಿಸಿಬಿಟ್ಟಳು. ತಾನು ಗರ್ಭಿಣಿಯಂತೆ ನಟಿಸತೊಡಗಿದಳು. ಆತ್ಮದೇವನಿಗೆ ಸಂತೋಷವೋ ಸಂತೋಷ. ಪುಂಸವನಸೀಮಂತೋನ್ನಯನಾದಿ ಸಂಸ್ಕಾರಗಳೆಲ್ಲವನ್ನೂ ವಿಧ್ಯುಕ್ತವಾಗಿ ನಡೆಸಿದನು. ಗರ್ಭದೀಕ್ಷೆಯನ್ನೂ ಧರಿಸಿದನು. ಸಕಾಲದಲ್ಲಿ ಪುತ್ರಜನನವಾಯಿತು. (ತಂಗಿಯು ತಾನು ಹೆತ್ತಮಗುವನ್ನು ರಹಸ್ಯದಲ್ಲಿ ಅಕ್ಕನಿಗೆ ಕೊಟ್ಟಳು.) ಆತ್ಮದೇವನು ಜಾತಕರ್ಮಾದಿ ಸಂಸ್ಕಾರಗಳನ್ನೂ ನಡೆಸಿನು. ನಾಮಕರಣ ಸಮಾರಂಭವು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜೃಂಭಣೆಯಿಂದ ನೆರವೇರಿತು. ಮಗುವಿಗೆ ಹೆಸರನ್ನಿಡುವಾಗತನ್ನ ಪೂರ್ವಜರ ಹೆಸರುಗಳನ್ನು ಜ್ಞಾಪಿಸಿಕೊಳ್ಳತೊಡಗಿದನು. ಆಗ ದುಂಧಲಿಯು 'ಮಗನಿಗೆ ಹೆಸರಿಡುವವಳು ನಾನು. ನಿಮಗೆ ಅಧಿಕಾರವಿಲ್ಲ. ನನ್ನ ಹೆಸರು ಧುಂಧುಲೀ ನನ್ನ ಹೆಸರಿನ ಮೇಲೆ ಇವನ ಹೆಸರು ಧುಂಧುಕಾರೀ' ಎಂದು ಆಗ್ರಹಪಡಿಸಿದಳು ಆತ್ಮದೇವನು ವಿಧಿಯಿಲ್ಲದೇ ಧುಂಧುಕಾರೀ–ಎಂದೇ ಹೆಸರನ್ನಿಟ್ಟನು.

ಇತ್ತ ಫಲವನ್ನು ಭಕ್ಷಿಸಿದ ಹಸುವು ಓರ್ವ ಕುಮಾರನಿಗೆ ಜನ್ಮವನ್ನಿತ್ತಿತು ಆ ಮಗುವಿನ ಕಿವಿಗಳೂ ಹಸುವಿನ ಕಿವಿಗಳಂತೆಯೇ ಉದ್ದವಾಗಿದ್ದುದರಿಂದ ಆತ್ಮದೇವನು ಬಹಳ ಸಂತೋಷದಿಂದ ಮಗುವಿಗೆ 'ಗೋಕರ್ಣ' ನೆಂದು ಹೆಸರನ್ನಿಟ್ಟನು.

ಗೋಕರ್ಣನು ಮಹಾಪಂಡಿತನೂ–ಶಾಸ್ತ್ರಜ್ಞನೂ ಆದನು. ಧುಂಧುಕಾರಿಯು ಬಹಳ ದುಷ್ಟನೂ, ಸ್ನಾನ–ಶೌಚ–ಕ್ರಿಯಾಹೀನನೂ, ದುಷ್ಟಪರಿಗ್ರಹಿಯೂ ಆದನು. ತಾಂತ್ರಿಕಮಂತ್ರಸಾಧನೆಗಾಗಿ ರಾತ್ರಿಯಲ್ಲಿ ಶ್ಮಶಾನಕ್ಕೆ ಹೋಗಿ ಶವಹಸ್ತ ಭೋಜನವನ್ನು ಮಾಡುತ್ತಿದ್ದನು. ಪರರ ಸ್ವತ್ತನ್ನು ಅಪಹರಿಸುತ್ತಿದ್ದನು. ಬಡವರ ಗುಡಿಸಲುಗಳಿಗೆ ಬೆಂಕಿ ಹಚ್ಚುತ್ತಿದ್ದನು. ಅವನಿಗೆ ಈ ಎಲ್ಲವೂ ಆಟವೇ ಆಗಿದ್ದಿತು, ಎಳೆಮಕ್ಕಳನ್ನು ಭಾವಿಗೆ ತಳ್ಳಿ ತಮಾಷೆ ನೋಡುತ್ತಿದ್ದನು, ವೇಶ್ಯಾಲಂಪಟನಾಗಿ ತಂದೆಯ ಆಸ್ತಿಯೆಲ್ಲವನ್ನೂ ಕಳೆದನು. ಸ್ವೇಚ್ಛಾಚಾರಕ್ಕೆ ಹಣವು ಸಿಕ್ಕದಿದ್ದಾಗ ತಾಯಿ–ತಂದೆಗಳನ್ನು ಭಯಪಡಿಸುತ್ತಾ ಹೊಡೆಯುತ್ತಾ ಹಿಂಸಿಸತೊಡಗಿದನು.

ಆಗ ಆತ್ಮದೇವನು ಕೊರಗಲಾರಂಭಿಸಿದನು. ಅವನ ದುಃಖಕ್ಕೆ ಇತಿ–ಮಿತಿಯೇ ಇಲ್ಲವಾಯಿತು. ಅವನ ಆಶಾಗೋಪುರಗಳೆಲ್ಲವೂ ಕುಸಿದುಬಿದ್ದುವು. ಎಲ್ಲಿಗೆ ಹೋಗುವುದು ? ಎಲ್ಲಿರುವುದು ? ಏನು ಮಾಡುವುದು ? ಎಂಬ ಚಿಂತೆಯೇ ಯಾವಾಗಲೂ. ಚಿತೆಯು ನಿರ್ಜೀವವನ್ನು ಸುಟ್ಟರೆ ಚಿಂತೆಯು ಸಜೀವವನ್ನೇ ಸುಡುತ್ತದೆ. ಸಂತಾನಹೀನನಾಗಿದ್ದರೇನು ? ಕುಪುತ್ರವಂತನಾಗಿ ಆಗಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಚಿಂತಾನ್ವಿತನಾದ ತಂದೆಗೆ ಜ್ಞಾನಿಯಾದ ಗೋಕರ್ಣನು ಬೋಧಿಸಿದನು. ನೋಡಿ–ಜ್ಞಾನಮಾರ್ಗದಲ್ಲಿ ಹಿರಿಯವನು, ಕಿರಿಯವನು–ಎಂಬ ಭೇದವಿಲ್ಲ, 'ವೃದ್ಧಾಃ ಶಿಷ್ಯಾಃ ಗುರುರ್ಯುವಾ', ಇದು ಅಸಂಭವವೇನಲ್ಲ. ವಯಸ್ಸಿನಿಂದ ಕಿರಿಯರು ಹಿರಿಯರಿಗೆ ಜ್ಞಾನವನ್ನು ಬೋಧಿಸುವ ಘಟನೆಗಳು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೇರಳವಾಗಿವೆ.

ಗೋಕರ್ಣನು ತಂದೆಗೆ ಹೇಳತೊಡಗಿದನು : "ತಂದೆಯೇ ! ರಾಗವೇ ದುಃಖದಾಯಕವು. **ಅಸಾರಃ ಖಲು ಸಂಸಾರಃ !** ಇದರಲ್ಲಿ ಸಿಲುಕಿಕೊಂಡವನಿಗೆ ಈಶ್ವರ, ಧರ್ಮ, ಗುರು–ಇವಾವುವೂ ತೋರುವುದಿಲ್ಲ. ಕರ್ತವ್ಯವಿಮುಖನಾಗುವನು. ರಾಗರಹಿತನಾದವನಿಗೆ ಅಂದರೆ ವೈರಾಗ್ಯಶೀಲನಿಗೆ ಯಾವ ವಿಧವಾದ ದುಃಖವೂ ಇರುವುದಿಲ್ಲ. ರಾಗ–ದ್ವೇಷಾದಿಗಳಿಂದ ಕಲುಷಿತವಾದ ಹೃದಯದಲ್ಲಿ ದುಃಖ-ಭಯ-ಶೋಕ-ತಾಪ-ಮರಣ ಭೀತಿಗಳು ಆವಿರ್ಭವಿಸುತ್ತವೆ. ಸಂಸರಣ ಶೀಲವೇ ಸಂಸಾರವು. ಇದು ದುಃಖರೂಪವು ; ವಿಮೋಹಕವು.

ಸುತಃ ಕಸ್ಯ ಧನಂ ಕಸ್ಯ ಸ್ನೇಹವಾನ್ ಜ್ವಲತೇಽನಿಶಮ್ ।
ನ ಚೇಂದ್ರಸ್ಯ ಸುಖಂ ಕಿಂಚಿತ್ ನ ಸುಖಂ ಚಕ್ರವರ್ತಿನಃ ॥

ಯಾರ ಮಕ್ಕಳು ? ಯಾರ ಧನ ? ಕಸ್ಯ ಸ್ವಿದ್ಧನಂ–ಎಂದು ಈಶೋಪನಿಷತ್ತು ಕೇಳುತ್ತದೆ. ಭೂಮಿ-ಧನಾದಿಗಳು ಯಾರದ್ದೂ ಅಲ್ಲ. ಆದರೆ ಅವುಗಳ ಮೇಲೆ 'ಮಮೇದಂ'–ಎಂಬ ಮುದ್ರೆಯೊತ್ತುವುದರಿಂದ-ಸ್ನೇಹವನ್ನು ಬೆಳೆಸುವುದರಿಂದ ಜೀವಿಯು ಸದಾ ದುಃಖವನ್ನು ಅನುಭವಿಸುತ್ತಾನೆ. ನಿಜವಾಗಿ ಹೇಳುವುದಾದರೆ :–ಭೂಮಂಡಲಾಧಿಪತಿಯಾದ ಚಕ್ರವರ್ತಿಗಾಗಲೀ, ತ್ರಿಭುವನಾಧಿಪತಿಯಾದ ಚಕ್ರವರ್ತಿಗಾಗಲೀ-ಸುಖವಿಲ್ಲ. ದೀಪವು ಎಣ್ಣೆಯಿರುವವರೆಗೆ ಉರಿಯುವಂತೆ-ಹೃದಯದಲ್ಲಿ ಸಂಸಾರದ ಬಗೆಗೆ ಮೋಹವಿರುವವರೆಗೆ ದುಃಖದ ತಾಪವು ತಪ್ಪಿದ್ದಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ : ರಾಗ–ದ್ವೇಷಗಳೆರಡೂ ಪರಸ್ಪರ ಸ್ನೇಹಿತರು. ಒಂದು ಮತ್ತೊಂದನ್ನು ಬಿಟ್ಟಿರಲಾರದು. ಮಧು-ಕೈಟಭರಂತೆ ಸದಾ ಪರಮಾತ್ಮ ನೊಡನೆ ಯುದ್ಧಮಾಡುತ್ತಲೇ ಇರುತ್ತವೆ. ಸ್ವತಃ ಮರಣವನ್ನು ಅಪೇಕ್ಷಿಸಿ ದಾಗ ಭಗವಂತನು ಅವರನ್ನು ಕೊಲ್ಲುತ್ತಾನೆ. ಅದೂ ವಿಷಯರಸನಿವೃತ್ತಿ ಯಾದಲ್ಲಿ ಮಾತ್ರ. ಇವರು ನಮ್ಮವರು, ಇವರಲ್ಲ-ಎನ್ನುವ ರಾಗದ್ವೇಷಗಳು ನಿವೃತ್ತಿಯಾಗದ ಹೊರತು ಮನುಷ್ಯನಿಗೆ ಮುಕ್ತಿಯಿಲ್ಲ.

ಈ ಶರೀರವು ನಾಶವಾನ್, **ಶೀರ್ಯತೇ–ಇತಿ ಶರೀರಂ,** ಕ್ಷಯಿಸುವುದೇ ಇದರ ಧರ್ಮವು. ದಹ–ಭಸ್ಮೀಕರಣೆ ಎಂಬ ಧಾತುವಿನಿಂದ ನಿಷ್ಪನ್ನವಾಗಿರುವ ದೇಹವು ಭಸ್ಮವಾಗತಕ್ಕದ್ದೇ. ಆದರಿಂದ ದೇಹದ ಮೇಲಿನ ಮಮತೆಯನ್ನು ದೂರೀಕರಿಸಿ ವನವಾಸಿಯಾಗಿ ಶಾಂತಿಯನ್ನು ಹೊಂದು" ಎಂದು ಗೋಕರ್ಣನು ಬೋಧಿಸಲಾಗಿ : ಆತ್ಮದೇವನು ಕೇಳಿದನು :

ಕಿಂ ಕರ್ತವ್ಯಂ ವನೇ ತಾತ । ಮಗು ಕಾಡಿಗೆ ಹೋಗಿ ಏನು ಮಾಡಲಿ ? ನನಗೇನೂ ತಿಳಿಯುವುದಿಲ್ಲ. '**ತತ್ತ್ವಂ ವದ ಸವಿಸ್ತರಮ್ ।**' ಈ ವಿಷಯದಲ್ಲಿ ನಾನು ಮಹಾಮೂರ್ಖನು. ಕರ್ಮವಾಸನಾಜಾಲದಲ್ಲಿ ಸಿಲುಕಿಕೊಂಡು ಪಂಗು ವಿನಂತೆ ಕರ್ತವ್ಯವಿಮುಖನಾಗಿರುವ ನನ್ನನ್ನು ತತ್ತ್ವಬೋಧೆಯಿಂದ ಉದ್ಧರಿಸು" ಎಂದು ಹೇಳಿಕೊಳ್ಳಲು ಗೋಕರ್ಣನು ಹೇಳಿದನು :

'**ದೇಹೇಽಸ್ಥಿಮಾಂಸರುಧಿರೇಽಭಿಮತಿಂ ತ್ಯಜ ತ್ವಂ।**' ಮೂಳೆ–ಮಾಂಸ–ರಕ್ತಗಳಿಂದ ಕೂಡಿರುವ ಈ ದೇಹಾಭಿಮಾನವನ್ನು ದೂರೀಕರಿಸು. ನೋಡಿ ನಮ್ಮ ಸರ್ವದುಃಖಗಳಿಗೂ ಈ ದೇಹಾಭಿಮಾನವೇ ಮೂಲವೆಂದು-**ದೇಹಾದೀನ್ ಆತ್ಮತ್ವೇನಾಭಿಮನ್ಯತೇಸೋಽಭಿಮಾನ** ಆತ್ಮನೇಽ ಬಂಧಃ ; ತನ್ನಿವೃತ್ತಿ-**ರ್ಮೋಕ್ಷಃ** ಎಂದು ಉಪನಿಷತ್ತು ಉದ್ಘೋಷಿಸುತ್ತದೆ. ಈ ದೇಹಾಭಿಮಾನ ವನ್ನೂ, ಪತ್ನೀಪುತ್ರಾದಿಗಳ ಮಮತೆಯನ್ನೂ ದೂರಮಾಡಬೇಕು. ಕ್ಷಣ ಭಂಗುರವಾದ ಈ ಸಂಸಾರವನ್ನು ನೆಚ್ಚಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗರಸವಿಲ್ಲದೇ ಹೇಗಿರುವುದು ? ಎನ್ನುವುದಾದರೆ :–**ವೈರಾಗ್ಯರಾಗ ರಸಿಕೋ ಭವ ಭಕ್ತಿನಿಷ್ಠಃ।** ವೈರಾಗ್ಯದಲ್ಲಿ ಅನುರಾಗವನ್ನು ಬೆಳೆಸು ಅದಕ್ಕಾಗಿ ಪರಿತಪಿಸು. ಭಕ್ತಿಯಲ್ಲಿ ನಿಷ್ಠೆಯನ್ನಿಡು.

ಧರ್ಮಂ ಭಜಸ್ವ ಸತತಂ ತ್ಯಜ ಲೋಕಧರ್ಮಾನ್ ।
ಸೇವಸ್ವ ಸಾಧುಪುರುಷಾನ್ ಜಹಿ ಕಾಮತೃಷ್ಣಾಮ್
ಅನ್ಯಸ್ಯ ದೋಷಗುಣಚಿಂತನಮಾಶು ಮುಕ್ತ್ವಾ
ಸೇವಾಕಥಾರಸಮಹೋ ನಿತರಾಂ ಪಿಬ ತ್ವಮ್ ॥

ಗೋಕರ್ಣನು ಈ ಶ್ಲೋಕದಲ್ಲಿ ನಿವೃತ್ತಿಮಾರ್ಗದ ಲಕ್ಷಣಗಳನ್ನು ತಿಳಿಸುತ್ತಾನೆ. **ಧರ್ಮಂ ಭಜಸ್ವ ಸತತಂ** ಯಾವಾಗಲೋ ಒಮ್ಮೊಮ್ಮೆ ಶರನ್ನವ ರಾತ್ರಾದಿಗಳಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವಂತೆ ಧರ್ಮವನ್ನು ಆಚರಿಸು ವುದಲ್ಲ. ಎಲ್ಲರೂ ಯಾವಾಗಲೂ ಒಂದಲ್ಲ ಒಂದು ಧರ್ಮಕಾರ್ಯವನ್ನು ಆಚರಿಸುತ್ತಲೇ ಇರಬೇಕು. ಆದರೆ ಇಲ್ಲಿ ಧರ್ಮವೆಂದರೆ :-ಲೋಕಧರ್ಮ ಗಳಲ್ಲ. ಲೋಕಧರ್ಮಗಳನ್ನು ತ್ಯಜಿಸಿ ಸತ್ಯಧರ್ಮಗಳನ್ನು ಆಶ್ರಯಿಸಬೇಕು. ಉಧರಂಭರಣಕ್ಕಾಗಿ - ಸ್ವಾರ್ಥಸಾಧನೆಗಾಗಿ ನೀಚಜನರನ್ನು ಸೇವಿಸುವುದನ್ನು ತ್ಯಜಿಸಿಸಾಧು-ಸಂತರನ್ನು ಸೇವಿಸಬೇಕು. ದಶ-ಮುಖಗಳಾಗಿ ನಿತ್ಯವೂ ಪ್ರವರ್ಧಿಸುವ ಕಾಮತೃಷೆಗಳನ್ನು ಮಟ್ಟಹಾಕಬೇಕು. ಮತ್ತೊಬ್ಬರ ಗುಣ–ದೋಷಗಳ ಚಿಂತನೆಯನ್ನು ಮಾಡಬಾರದು. ಅಂದರೆ-ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎನ್ನುವ ಗಾದೆಯನ್ನು ಸ್ಮರಿಸುತ್ತಿರಬೇಕು. ಗುಣಚಿಂತನೆ ಯಿಂದ ರಾಗವೂ–ದೋಷಚಿಂತನೆಯಿಂದ ದ್ವೇಷವೂ ಹುಟ್ಟುತ್ತದೆ. ಹೃದಯವು ರಾಗ–ದ್ವೇಷ ಪೂರಿತವಾದಾಗ ಸ್ನೇಹಿತರೂ-ಶತ್ರುಗಳೂ ಬರತೊಡಗುತ್ತಾರೆ. ಆಗ ಈಶ್ವರನಿಗೆ ಅವಕಾಶವಿರುವುದಿಲ್ಲ. ಯಾವಾಗಲೂ ಭಗವತ್ಸೇವಾಮೃತದ ಭಗವತ್ಕಥಾಸ್ವಾದನೆಯ ರಸವನ್ನು ಕುಡಿಯುತ್ತಿರಬೇಕು.

ಗೋಕರ್ಣನು ಈ ರೀತಿಯಲ್ಲಿ ಬೋಧಿಸಿದಾಗ-ಪ್ರಾಜ್ಞನಾದ ಆತ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವನು ಗೃಹತ್ಯಾಗಿಯಾಗಿ ಅರಣ್ಯವಾಸಿಯಾದನು. ಭಗವಂತನಲ್ಲಿ ಶ್ರದ್ಧಾ-ಭಕ್ತಿಗಳನ್ನಿಟ್ಟುಕೊಂಡು ನಿರಂತರವಾಗಿ ಭಾಗವತದ ದಶಮಸ್ಕಂಧವನ್ನು ಪಠಿಸುತ್ತಾ ಶಾಂತಿಯಿಂದ ಇದ್ದನು. ಕಾಲಾನಂತರದಲ್ಲಿ ಪರಮಾತ್ಮನ ಸಾಯುಜ್ಯವನ್ನು ಪಡೆದನು.

ಇತ್ಯೇವಂ ಚತುರ್ಥೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತದರ್ಶನ

ಪ್ರೇತಯೋನಿಯಿಂದ ಧುಂಧುಕಾರಿಯ ಉದ್ಧಾರ

ಅಧ್ಯಾಯ-೫

ಸೂತಪೌರಾಣಿಕರು ಶೌನಕಾದಿಗಳಿಗೆ ಹೇಳುತ್ತಾರೆ :

ಮಹರ್ಷಿಗಳೇ ! ಆತ್ಮದೇವನು ಅರಣ್ಯವಾಸಿಯಾದ ಮೇಲೆ ಧುಂಧುಕಾರಿಯು ಬೋನಿನಿಂದ ಬಿಟ್ಟ ಹುಲಿಯಂತಾದನು. ಒಂದು ದಿನ ಉರಿಯುತ್ತಿರುವ ಕೊಳ್ಳಿಯನ್ನು ಕೈಯಲ್ಲಿ ಹಿಡಿದುಕೊಂಡು ತಾಯಿಯ ಬಳಿಗೆ ಹೋಗಿ ಹೆದರಿಸುತ್ತಾ ಕೇಳಿದನು :

ಕ್ವ ವಿತ್ತಂ ತಿಷ್ಠತಿ ಬ್ರೂಹಿ ಹನಿಷ್ಯೇ ಲತ್ತಯಾ ನ ಚೇತ್ ।

'ಹಣವನ್ನು ಎಲ್ಲಿ ಬಚ್ಚಿಟ್ಟಿರುವೆ ? ಹೇಳು. ಇಲ್ಲದಿದ್ದರೆ ಇದರಿಂದ ಕೊಂದುಹಾಕುತ್ತೇನೆ'-ಎಂದು ಹೊಡೆಯತೊಡಗಿದಾಗ ಭೀತಳಾದ ಧುಂಧಲಿಯು ಭಾವಿಯಲ್ಲಿ ಬಿದ್ದು ಅಸು ನೀಗಿದಳು. ಆ ಸಮಯದಲ್ಲಿ ಗೋಕರ್ಣನು ಯೋಗ ಸಂಸ್ಥಿತನಾಗಿ ತೀರ್ಥಯಾತ್ರೆಗೆ ಹೊರಟುಹೋಗಿದ್ದನು. ಅವನಿಗೆ ಸುಖವೂ ಇಲ್ಲ ; ದುಃಖವೂ ಇಲ್ಲ. ಪ್ರಿಯನೂ ಇಲ್ಲ : ಅಪ್ರಿಯನೂ ಇಲ್ಲ.

ತಾಯಿಯ ಮರಣದಿಂದ ಧುಂಧುಕಾರಿಯ ಚಟುವಟಿಕೆಗಳು ಮತ್ತಷ್ಟು ತೀವ್ರಗೊಂಡುವು. ಐದು ಮಂದಿ ವೇಶ್ಯೆಯರನ್ನು ಮನೆಯಲ್ಲಿಯೇ ಇಟ್ಟುಕೊಂಡನು. **ಪಂಚಪಣ್ಯವಧೂವೃತಃ**–ಒಬ್ಬಳು ಪತ್ನಿಯೇ ಪುರುಷನಿಗೆ ಸಾಕು–ಬೇಕಾದಷ್ಟನ್ನು ಮಾಡುತ್ತಾಳೆ. ಇನ್ನು ಐದು ಮಂದಿ ಪಣ್ಯಸ್ತ್ರೀಯರೆಂದರೆ ಹೇಳುವದೇನು ? ಅವರ ಸಂತೋಷಾರ್ಥವಾಗಿ ಧುಂಧುಕಾರಿಯು ಮಾಡದ ದುಷ್ಕರ್ಮಗಳಿಲ್ಲ. ಒಂದು ದಿನ ಅವರು ವಿವಿಧ ಆಭರಣಗಳಿಗಾಗಿ ಪೀಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಒತ್ತಾಯಕ್ಕೆ ಮಣಿದ ಧುಂಧುಕಾರಿಯು ಅನೇಕರನ್ನು ಹೆದರಿಸಿ-ಪೀಡಿಸಿ ತಲೆಯೊಡೆದು ಸಿಕ್ಕಿದಷ್ಟನ್ನು ದೋಚಿಕೊಂಡು ಬಂದನು. ಆಗ ವೇಶ್ಯೆಯರು ಯೋಚಿಸಿದರು : 'ರಾಜಪುರುಷರು ಇವನನ್ನು ದಂಡಿಸದೇ ಬಿಡರು. ಹಾಗೂ ಈ ಒಡವೆಗಳನ್ನು ಕಿತ್ತುಕೊಂಡು ಹೋಗುವರು. ನಾವೇ ಇವನನ್ನು ಮುಗಿಸಿ ಬಿಟ್ಟರೆ ಒಡವೆಗಳಾದರೂ ಉಳಿಯುವುವು'. ಎಂದು ಯೋಚಿಸಿ ಒಂದು ರಾತ್ರಿ ಅವನನ್ನು ಐವರೂ ಆಕ್ರಮಿಸಿದರು. ಒಬ್ಬನೇನು ಮಾಡಿಯಾನು ? ಬೇಗ ಜೀವ ಹೋಗಲಿಲ್ಲ. ಉರಿಯುತ್ತಿರುವ ಕಟ್ಟಿಗೆಯನ್ನು ಬಾಯಿಗೆ ತುರುಕಿದರು ; ಬಡಿದರು : ಚಚ್ಚಿದರು. ಅಂತೂ ಅವನನ್ನು ಮುಗಿಸಿ ಹಾಳುಭಾವಿಯಲ್ಲಿ ಎಸೆದುಬಿಟ್ಟರು. ಮಾರನೆಯ ದಿನ ಕೇಳಿದವರೆಲ್ಲರಿಗೂ ವ್ಯಾಪಾರಕ್ಕೆ ಹೊರ ದೇಶಕ್ಕೆ ಹೋಗಿದ್ದಾರೆ. ಮುಂದಿನ ವರ್ಷ ಬರುತ್ತಾರೆ–ಎಂದು ಹೇಳ ತೊಡಗಿದರು.

ನೋಡಿ - ದುಷ್ಟಸ್ತ್ರೀಯರನ್ನು ನಂಬಬಾರದು. ನೀತಿಶಾಸ್ತ್ರಕಾರರು ಹೇಳುತ್ತಾರೆ :

ಸ್ತ್ರೀಣಾಂ ನೈವ ತು ವಿಶ್ವಾಸಂ ದುಷ್ಟಾನಾಂ ಕಾರಯೇದ್ಬುಧಃ
ವಿಶ್ವಾಸೇ ಯಃ ಸ್ಥಿತೋ ಮೂಢಃ ಸ ದುಃಖೈಃ ಪರಿಭೂಯತೇ ॥

ಬುದ್ಧಿವಂತನಾದವನು ದುಷ್ಟಸ್ತ್ರೀಯರ ಸಹವಾಸವನ್ನು ಮಾಡಲೇ ಬಾರದು. ಅವರನ್ನು ನಂಬಿದವನು ದುಃಖಿಯಾಗುವುದು ನಿಶ್ಚಿತ, ಕುಲಟೆಯು ವಾಸಮಾಡುವ ಮನೆಯಲ್ಲಿ ಮೃತ್ಯುದೇವತೆಯು ವಾಸಮಾಡುತ್ತಿದ್ದಾಳೆಂದೇ ತಿಳಿಯಬೇಕು.

ದುಷ್ಟಾ ಭಾರ್ಯಾ ಶಠಂ ಮಿತ್ರಂ ಭೃತ್ಯಶ್ಚೋತ್ತರದಾಯಕಃ ।
ಸಸರ್ಪೇಚ ಗೃಹೇ ವಾಸಃ ಮೃತ್ಯುರೇವ ನ ಸಂಶಯಃ ॥

ವ್ಯಭಿಚಾರಿಯಾದ ಪತ್ನೀ, ಶಠನಾದ ಮಿತ್ರ, ಪ್ರತ್ಯುತ್ತರ ಕೊಡುವ ಸೇವಕ, ಹಾವಿರುವ ಮನೆಯಲ್ಲಿ ವಾಸ-ಇವೆಲ್ಲವೂ ಮೃತ್ಯುದೇವತೆಯ ಆವಾಸ ಸ್ಥಾನಗಳೆಂದೇ ತಿಳಿಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಲಟಾಕಾಮಿನಿಯರ ಮಾತು ಹೇಗಿರುತ್ತದೆಂದರೆ :-

ಸುಧಾಮಯಂ ವಚೋ ಯಾಸಾಂ ಕಾಮಿನಾಂ ರಸವರ್ಧನಮ್ ।

ಮಾತುಗಳು ಅಮೃತೋಪಮಗಳು, ಕಾಮುಕರನ್ನು ಉದ್ರೇಕಗೊಳಿಸುವಂತಹುವುಗಳು. ಆದರೆ ಅವರ ಹೃದಯವು ಮಾತ್ರ ವಿಷಮಯ. ಇಂತಹ ಸ್ತ್ರೀಯರನ್ನು ನಂಬುವುದುಂಟೇ ?

ಆ ವೇಶ್ಯೆಯರು ಧುಂದುಕಾರಿಯ ಸರ್ವಸ್ವವನ್ನೂ ತೆಗೆದುಕೊಂಡು ಮನಬಂದತ್ತ ಹೊರಟುಹೋದರು. ಧುಂಧುಕಾರಿಯು ಪ್ರೇತನಾಗಿ ಅಲೆಯ ತೊಡಗಿದನು.

ನೋಡಿ : ತಿಳಿದೋ-ತಿಳಿಯದೆಯೋ ಜನರಲ್ಲಿ ಆತ್ಮನು ದೇಹಭಿನ್ನನೆಂಬ ಭಾವನೆಯು ಇರುವುದು. ದೇಹವು ನಾಶವಾದರೂ ಆತ್ಮನ ನಾಶವಾಗುವುದಿಲ್ಲ. ಒಂದು ಪಕ್ಷದವರು ಹೇಳುತ್ತಾರೆ : **ಅಸ್ತೀತಿ ಚೈಕೇ** ಮರಣಾನಂತರವೂ ಆತ್ಮನಿರುತ್ತಾನೆ'. ಇನ್ನೊಂದು ಪಕ್ಷದವರು ಹೇಳುತ್ತಾರೆ ; **'ನಾಯಮ ಸ್ತೀತಿ ಚೈಕೇ**-ಮರಣಾನಂತ ಆತ್ಮನಿರುವುದಿಲ್ಲ'. ಈ ರೀತಿ ಹೇಳುವ ಚಾರ್ವಾಕಪಕ್ಷವೂ ಪುರಾತನವಾದುದು. ನಾಸ್ತಿಕರಿದ್ದೇ ಇದ್ದರು.

ಅಸ್ತೀತಿಯೇ ವದಂತಿ ತೇ ಆಸ್ತಿಕಾಃ । ನಾಸ್ತೀತಿಯೇ ವದಂತಿ ತೇ ನಾಸ್ತಿಕಾಃ । ಈ ನಾಸ್ತಿಕರು ವಾಕ್ಯಾಭಾಸ-ಅನುಭವಾಭಾಸಗಳನ್ನು ಆಶ್ರಯಿಸಿ ಆತ್ಮನು ಅನ್ನಮಯ, ಪ್ರಾಣಮಯ, ಮನೋಮಯ, ಇಂದ್ರಿಯಮಯವೆಂದು ಹೇಳುತ್ತಿದ್ದರು. ಉಪನಿಷತ್ಕಾರರು ಇದನ್ನು ಪೂರ್ವಪಕ್ಷರೂಪದಲ್ಲಿ ಉದಾಹರಿಸಿದ್ದರೂ-ಸಿದ್ಧಾಂತದಲ್ಲಿ ಖಂಡಿಸಿರುತ್ತಾರೆ. ಇದರ ವರ್ಣನೆಯು ಶಾಸ್ತ್ರ-ಪುರಾಣಾದಿಗಳಲ್ಲಿ ವಿಸ್ತಾರವಾಗಿ ಬರುತ್ತದೆ

ಪ್ರೇತನಾದ ಧುಂಧುಕಾರಿಗೆ ರಕ್ಷಕರಾರೂ ದೊರಕಲಿಲ್ಲ. ತೀರ್ಥಯಾತ್ರೆಗೆ ಹೋಗಿದ್ದ ಗೋಕರ್ಣನಿಗೆ ವಿಷಯವು ತಿಳಿಯಿತು. ಅಣ್ಣನ ಮುಕ್ತಿಗಾಗಿ ಗಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರಾದ್ಧವನ್ನು ನಡೆಸಿದನು. ಹಾಗೂ ಎಲ್ಲ ಕ್ಷೇತ್ರಗಳಲ್ಲಿಯೂ ಪಿಂಡದಾನಾದಿಗಳನ್ನು ನಡೆಸಿದನು. ಕೆಲವು ಕಾಲಾನಂತರದಲ್ಲಿ ಗೋಕರ್ಣನು ಯಾತ್ರೆಯನ್ನು ಮುಗಿಸಿಕೊಂಡು ಸ್ವಗ್ರಾಮಕ್ಕೆ ಬಂದು ರಾತ್ರಿಯಲ್ಲಿ ತನ್ನ ಮನೆಯ ಜಗುಲಿಯ ಮೇಲೆ ಮಲಗಿದ್ದನು. ಅದನ್ನು ತಿಳಿದ ಪ್ರೇತರೂಪಿಯಾದ ಧುಂಧುಕಾರಿಯು ತನ್ನ ಉಗ್ರರೂಪದಿಂದ ಪ್ರಕಟವಾದನು. ಒಮ್ಮೆ ಆಡಾಗಿ. ಮತ್ತೊಮ್ಮೆ ಆನೆಯಾಗಿ, ಕೋಣನಾಗಿ, ಬೆಂಕಿಯಂತೆ-ಮನುಷ್ಯನಂತೆ ಕಾಣಿಸಿಕೊಂಡನು. ಅಂತಃಕರಣದ ಸ್ಥೈರ್ಯವನ್ನು ಕಳೆದುಕೊಂಡ ಪ್ರೇತವು ಈ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಆ ವೈಪರೀತ್ಯವನ್ನು ಕಂಡ ಗೋಕರ್ಣನು ಇದು ದುರ್ಗತಿಗೀಡಾದ ಪ್ರೇತವಿರಬೇಕೆಂದು ಭಾವಿಸಿ ಪ್ರಶ್ನಿಸಿದನು.

ಕಸ್ತ್ವಮುಗ್ರತರೋ ರಾತ್ರೌ ಕುತೋ ಯಾತೋ ದಶಾವಿಮಾಮ್ ।
ಕಿಂ ವಾ ಪ್ರೇತಃ ಪಿಶಾಚೋ ವಾ ರಾಕ್ಷಸೋಽಸೀತಿ ಶಂಸ ನಃ ॥

ನೀನಾರು ? ನಿನ್ನ ಈ ಸ್ಥಿತಿಗೆ ಕಾರಣವಾವುದು ? ನೀನು ಪ್ರೇತನೇ ? ಪಿಶಾಚನೇ ? ಅಥವಾ ರಾಕ್ಷಸನೇ ? ಹೇಳು. ಗೋಕರ್ಣನ ಪ್ರಶ್ನೆಗಳಿಗೆ ಉತ್ತರಿಸಲಾರದೇ ಪ್ರೇತನು ಅಳತೊಡಗಿದನು. ಮಾತು ಹೊರಡುತ್ತಿರಲಿಲ್ಲ. ಆಗಿನ ಅವನ ಸ್ಥಿತಿಯನ್ನು ಅರ್ಥಮಾಡಿಕೊಂಡ ಗೋಕರ್ಣನು ಕೈಯಲ್ಲಿ ಜಲವನ್ನು ತುಂಬಿಕೊಂಡು ಅಭಿಮಂತ್ರಿಸಿ ಅವನ ಮೇಲೆ ಚುಮುಕಿಸಿದನು. ಬಳಿಕ ಪ್ರೇತನು ಹೇಳಿದನು :-

ಅಹಂ ಭ್ರಾತಾ ತ್ವದೀಯೋಽಸ್ಮಿ ಧುಂಧುಕಾರೀತಿ ನಾಮತಃ ।
ಸ್ವಕೀಯೇನೈವ ದೋಷೇಣ ಬ್ರಹ್ಮತ್ವಂ ನಾಶಿತಂ ಮಯಾ ॥

ನಾನು ನಿನ್ನ ಸಹೋದರನಾದ ಧುಂಧುಕಾರಿಯು. ನನ್ನ ಪಾಪಕರ್ಮಾಚರಣೆಯ ಫಲವಾಗಿ ಬ್ರಾಹ್ಮಣತ್ವದಿಂದ ಚ್ಯುತನಾಗಿ ಈ ಸ್ಥಿತಿಯನ್ನು ಹೊಂದಿರುವೆನು. ನಾನು ಮಾಡಿರುವ ಕುಕರ್ಮಗಳನ್ನು ಎಣಿಸಲಾಗುವುದಿಲ್ಲ. ವೇಶ್ಯಾಸ್ತ್ರೀಯರ ಹಿಂಸೆಗೆ ಗುರಿಯಾಗಿ ಪ್ರೇತನಾಗಿ ಅಲೆಯುತ್ತಿದ್ದೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಹೋ ಬಂಧೋ ಕೃಪಾಸಿಂಧೋ ಭ್ರಾತರ್ಮಾಮಾಶು ಮೋಚಯ।

"ದಯಾಸಾಗರನಾದ ಸಹೋದರನೇ ! ಈ ದುರ್ಗತಿಯಿಂದ ನನ್ನನ್ನು ಪಾರುಮಾಡು "

ಗೋಕರ್ಣನು ಕೇಳಿದನು :-"ನಾನು ನಿನ್ನ ಮುಕ್ತಿಗಾಗಿ ಗಯಾಶ್ರಾದ್ಧ ವನ್ನು ಮಾಡಿದೆನಲ್ಲಾ ! ಆದರೂ ಮುಕ್ತನಾಗಲಿಲ್ಲವೆಂದರೆ-ನಾನಿನ್ನೇನು ತಾನೇ ಮಾಡಲು ಸಾಧ್ಯವಿದೆ ?"

ಪ್ರೇತನು ಹೇಳಿದನು :-"ನೀನು ನೂರು ಗಯಾಶ್ರಾದ್ಧವನ್ನು ಮಾಡಿದರೂ ನನಗೆ ಮುಕ್ತಿ ಲಭಿಸುವುದಿಲ್ಲ, ಉಪಾಯಾಂತರವನ್ನು ಯೋಚಿಸು.

ಗೋಕರ್ಣನು ಹೇಳಿದನು :-'ಆಗಲಿ ; ನಾನು ವಿಚಾರಮಾಡುವೆನು. ನೀನು ನಿನ್ನ ಸ್ಥಳಕ್ಕೆ ಹೋಗು'-ಎಂದು ಹೇಳಿ ಪ್ರೇತವನ್ನು ಕಳುಹಿಸಿಕೊಟ್ಟನು. ಬಳಿಕ ಗೋಕರ್ಣನು ಕಂಡ ಕಂಡ ಮಹಾಪಂಡಿತರನ್ನೆಲ್ಲಾ ಪ್ರೇತಮುಕ್ತಿಗೆ ಉಪಾಯ ವೇನೆಂದು ಪ್ರಶ್ನಿಸತೊಡಗಿದನು. ಒಬ್ಬೊಬ್ಬರೇ ಏನು ಹೇಳಲೂ ಅಸಮರ್ಥ ರಾದರು. ಕೊನೆಗೆ ಎಲ್ಲರೂ ಸೇರಿ ಚರ್ಚಿಸಿ ಗಾಯತ್ರೀಪ್ರತಿಪಾದ್ಯನಾದ ಸೂರ್ಯನನ್ನೇ ಈ ವಿಷಯವಾಗಿ ಪ್ರಶ್ನಿಸಬೇಕೆಂದು ನಿರ್ಣಯಿಸಿದರು. ಅಂತೆಯೇ ತಪಸ್ವಿಗಳಾದ ಬ್ರಾಹ್ಮಣರು ಸೂರ್ಯನನ್ನು ಉಪಾಸನೆ ಮಾಡಿ ಪ್ರೇತಾವಸ್ಥೆಯಲ್ಲಿರುವ ಧುಂಧುಕಾರಿಯು ಮುಕ್ತನಾಗಲು ಏನು ಮಾಡ ಬೇಕೆಂದು ಕೇಳಿದರು.

ಆಗ ಸೂರ್ಯವಾಣಿಯು ಹೀಗೆ ಕೇಳಿಸಿತು :

ಶ್ರೀಮದ್ಭಾಗವತಾನ್ಮುಕ್ತಿಃ ಸಪ್ತಾಹಂ ವಾಚನಂ ಕುರು ।

"ಶ್ರೀಮದ್ಭಾಗವತ ಸಪ್ತಾಹವನ್ನು ನಡೆಸಿದರೆ ಅವನಿಗೆ ಮುಕ್ತಿಯಾಗು ವುದು." ಸೂರ್ಯವಾಣಿಯನ್ನು ಎಲ್ಲರೂ ಕೇಳಿದರು. ಎಷ್ಟು ಸರಳವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಾಯ ! ಯಾವ ಶ್ರಮವೂ ಇಲ್ಲದೇ ತನ್ನ ಮನೆಯಲ್ಲಿಯೇ ಭಾಗವತ ಪಾಠವನ್ನು ನಡೆಸಿದರೆ ಆಯಿತು.

[ಈ ಸಂದರ್ಭದಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಒಂದು ಘಟನೆಯನ್ನು ಸ್ಮರಿಸಿಕೊಳ್ಳಬಹುದು :-ಬಿಹಾರಿನ ಶ್ರೀಮಂತರೊಬ್ಬರು ಬದರೀಯಾತ್ರೆಗೆ ಹೋಗಿದ್ದರು. ಅವರು ಯಾತ್ರಾವಿಧಿಗಳೆಲ್ಲವನ್ನೂ ನಡೆಸಿ ಕೆಲವು ತಿಂಗಳುಗಳ ಹಿಂದೆ ಗತಿಸಿದ್ದ ತಮ್ಮ ಮಗನಿಗಾಗಿ ಬ್ರಹ್ಮಕಪಾಲದಲ್ಲಿ ಪಿಂಡಪ್ರದಾನವನ್ನು ಮಾಡಿದರು. ಆಗ ಆ ಹುಡುಗನ ಆತ್ಮವು ತಾಯಿಯ ಮೇಲೆ ಬಂದು–'ನನಗಿದ ರಿಂದ ಮುಕ್ತಿಯಾಗುವುದಿಲ್ಲ. ಶ್ರೀಮದ್ಭಾಗವತ ಶ್ರವಣವನ್ನು ಮಾಡಿಸು'– ಎಂದು ಹೇಳಿತು. ಸಾಹುಕಾರರು ಪ್ರಖ್ಯಾತ ಪ್ರವಚನಕಾರರಾಗಿದ್ದ ಬೃಂದಾ ವನದ ಶ್ರೀ ಶ್ರೀ ಅಖಂಡಾನಂದ ಸರಸ್ವತಿಗಳನ್ನು ಸಂದರ್ಶಿಸಿ ಶ್ರೀಮದ್ಭಾಗವತ ಸಪ್ತಾಹವನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸಿದರು. ಆಗ ಸ್ವಾಮೀಜಿ ಯವರು ಸಪ್ತಾಹಕಾರ್ಯವನ್ನು ನಡೆಸುತ್ತಿದ್ದರು. ಅದು ಪೂರ್ತಿಯಾಗದೇ ಹೋಗಲು ಸಾಧ್ಯವಿರಲಿಲ್ಲ. ಶ್ರೀಮಂತರ ಒತ್ತಾಯವು ಬಲವಾಗಿದ್ದಿತು. ಆಗ ಶ್ರೋತೃವರ್ಗದವರಿಗೆಲ್ಲಾ ಒಂದು ರೀತಿಯ ಒತ್ತಾಯವಾದಂತಾಗಿ - ತಾವು ಹೋಗಿಬರಬೇಕೆಂದು-ಎಲ್ಲರೂ ಸ್ವಾಮಿಗಳಿಗೆ ಹೇಳಿದರು.

ಅದರಂತೆ ಶ್ರೀ ಶ್ರೀ ಸ್ವಾಮೀಜಿಯವರೂ ಹೊರಟರು. ಕಥಾಪ್ರಾರಂಭ ವಾಯಿತು. ಮಗನ ಪ್ರೇತವು ತಾಯಿಯ ಮೇಲೆ ಬಂದು ಆತ್ಯಾಶ್ಚರ್ಯಕರ ಗಳಾದ ವಿಚಾರಗಳನ್ನು ಹೇಳತೊಡಗಿತು. ಕಥಾಶ್ರವಣವು ಮುಕ್ತಾಯವಾದ ಮೇಲೆ–"ನಾನಿನ್ನು ವೈಕುಂಠಕ್ಕೆ ಹೋಗುತ್ತೇನೆ. ಇನ್ನು ಅಮ್ಮನ ಮೇಲೆ ಬರುವುದಿಲ್ಲ".–ಎಂದು ಹೇಳಿ ಹೊರಟುಹೋಯಿತು.

ಇದು ಈಗ ಕೆಲವೇ ವರ್ಷಗಳ ಹಿಂದೆ ಹಲವಾರು ಜನರ ಸಮ್ಮುಖದಲ್ಲಿ ನಡೆದಿರುವ ಘಟನೆಯಾದರೂ–ನಂಬದಿರುವ ಮಹನೀಯರೂ ಇದ್ದಾರೆ. ಇರಲಿ]

ಗೋಕರ್ಣನು ಭಾಗವತಕಥಾಶ್ರವಣಕ್ಕೆ ಏರ್ಪಡಿಸಿದನು. ಹಳ್ಳಿಹಳ್ಳಿ ಗಳಿಂದ, ನಗರ–ಪಟ್ಟಣಗಳಿಂದ ಜನರು ಬಂದರು. ಅಂಗವಿಕಲರೂ ಬಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರೀ ಜನಸಮೂಹವೇ ಸೇರಿತು. ಗೋಕರ್ಣನು ವ್ಯಾಸಪೀಠವನ್ನು ಅಲಂಕರಿಸಿ ಕಥಾಪ್ರವಚನವನ್ನು ಪ್ರಾರಂಭಿಸಿದನು. ಪ್ರೇತರೂಪದಲ್ಲಿದ್ದ ಧುಂಧುಕಾರಿಯೂ ಶ್ರವಣಕ್ಕೆ ಬಂದನು. ಸುತ್ತಲೂ ನೋಡಿದನು, ಎಲ್ಲೂ ಕೂರಲು ಆಶ್ರಯವು ಸಿಗಲಿಲ್ಲ. ಏಳು ಗಿಣ್ಣುಗಳುಳ್ಳ ದಪ್ಪವಾಗಿದ್ದ ಬೊಂಬಿನ ಬುಡದ ಛಿದ್ರದಲ್ಲಿ ಕುಳಿತು ಕಥಾಶ್ರವಣವನ್ನು ಮಾಡತೊಡಗಿದನು. (ಪ್ರೇತ–ಪಿಶಾಚಾದಿಗಳು ಭೂಮಿಯ ಮೇಲೆ ನಿಲ್ಲಲಾರವು.) ಗೋಕರ್ಣನು ವಿಷ್ಣುಭಕ್ತನಾದ ಬ್ರಾಹ್ಮಣನೊಬ್ಬನನ್ನು ಮುಖ್ಯಶ್ರೋತೃವನ್ನಾಗಿಟ್ಟುಕೊಂಡು ಕಥಾರಂಭವನ್ನು ಮಾಡಿದನು. ಸಾಯಂಕಾಲ ಕಥಾವಿಶ್ರಾಂತಿಯಾದಾಗ ಆ ಬಿದಿರಿನ ಒಂದು ಗಿಣ್ಣು ಸಿಡಿಯಿತು. ಎಲ್ಲರಿಗೂ ಪರಮಾಶ್ಚರ್ಯವಾಯಿತು. ಹೀಗೆ ಏಳು ದಿವಸಗಳಲ್ಲಿ ಏಳು ಗಿಣ್ಣುಗಳೂ ಸಿಡಿದುವು. ಹನ್ನೆರಡನೆಯ ಸ್ಕಂಧದ ಶ್ರವಣವಾದ ಮೇಲೆ ಧುಂಧುಕಾರಿಯ ಪ್ರೇತತ್ವವು ನಿವಾರಣೆಯಾಯಿತು. ಅವನು ದಿವ್ಯರೂಪಧಾರಿಯಾಗಿ, ತುಲಸೀಮಾಲಾಲಂಕೃತನಾಗಿ, ಭಗವದ್ರೂಪವನ್ನೇ ಧರಿಸಿದನು. ಪೀತಾಂಬರಧಾರೀ–ಘನಶ್ಯಾಮ-ಮುಕುಟೀ-ಕುಂಡಲೀ ಧುಂಧುಕಾರಿಯು ಗೋಕರ್ಣನಿಗೆ ನಮಸ್ಕರಿಸಿ ಹೇಳಿದನು.

ತ್ವಯಾಹಂ ಮೋಚಿತೋ ಬಂಧೋ ಕೃಪಯಾ ಪ್ರೇತಕಶ್ಮಲಾತ್।
ಧನ್ಯಾ ಭಾಗವತೀ ವಾರ್ತಾ ಪ್ರೇತಪೀಡಾವಿನಾಶಿನೀ ।

"ಶ್ರೀಮದ್ಭಾಗವತ ಶ್ರವಣವು ಜನರ ಪಾಪಗಳೆಲ್ಲವನ್ನೂ ಕೂಡಲೇ ನಿವಾರಣೆ ಮಾಡುವುದಾಗಿದೆ. ಈ ಭಾಗವತೀ ವಾರ್ತೆಯು ಪ್ರೇತಕಶ್ಮಲದಿಂದ ನನ್ನನ್ನು ಉದ್ಧರಿಸಿದೆ. ಪ್ರೇತತ್ವನಿವಾರಣೆಗೆ ಶ್ರೀಮದ್ಭಾಗವತಶ್ರವಣವನ್ನು ಬಿಟ್ಟರೆ ಮತ್ತೊಂದು ಉಪಾಯವಿಲ್ಲ."

ನೋಡಿ ; ಪಾಪಪರಿಹಾರಕ್ಕೆ ಬೇರೆ–ಬೇರೆ ಪ್ರಾಯಶ್ಚಿತ್ತಗಳಿವೆ. ಆದರೆ ಭಾಗವತಕಥಾಶ್ರವಣವಾದರೋ-ಅತ್ಯದ್ಭುತವಾದುದು. ಹೇಳುವ ಪರಿಶ್ರಮವು ಒಬ್ಬನದಾದರೆ-ಕೇಳುವವರೆಲ್ಲರ ಪಾಪವೂ ಪರಿಹಾರವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವತೆಗಳು ಹೇಳುತ್ತಾರೆ :-ಭೂಲೋಕದಲ್ಲಿ ಭಾಗವತಕಥಾಶ್ರವಣ ವನ್ನು ಮಾಡದವನ ಜನ್ಮವು ವ್ಯರ್ಥವೇ ಸರಿ. ಅಂಥವನ ದೇಹೇಂದ್ರಿಯಾದಿ ಗಳಿಂದ ಲಾಭವೇನಾಯಿತು ? ಈ ದೇಹವಾದರೋ ನರಗಳಿಂದ ಬಿಗಿಯಲ್ಪಟ್ಟು ಮಾಂಸ–ಶೋಣಿತಲೇಪಿತವಾಗಿ, ಚರ್ಮದಿಂದ ಆಚ್ಛಾದಿತವಾಗಿದೆ. ಹಾಗೂ ದುರ್ಗಂಧ-ಮೂತ್ರ-ಪುರೀಷಗಳ ಆಗರವಾಗಿದೆ. ಇದರ ಹೆಸರೇ ಶರೀರ. ಕ್ಷಯಿಸುತ್ತಿರುವುದೇ ಇದರ ಧರ್ಮ, ಕೊನೆಗೊಂದು ದಿನ ಕೊಳೆತು ಹೋಗು ತ್ತದೆ. ಶರೀರವು ಇಂತಹ ತುಚ್ಛಪದಾರ್ಥವಾದರೂ ಇದರಿಂದ ಅವಿನಾಶಿಯಾದ ವಸ್ತುವನ್ನು ಪಡೆಯಬಹುದು. ಹಾಗೆ ಪಡೆಯದೇ ಇದನ್ನು ಹೊತ್ತು ತಿರುಗು ವುದು ವ್ಯರ್ಥ. ಬೆಳಿಗ್ಗೆ ಮಾಡಿದ ಅಡಿಗೆಯು ಸಾಯಂಕಾಲಕ್ಕೆ ಹಳಸಿಹೋಗು ತ್ತದೆ. ಅಂತಹ ಅಡಿಗೆಯಿಂದ ಈ ದೇಹವು ಬೆಳೆಯುತ್ತದೆ. ಅಂದ ಮೇಲೆ ಇದರ ಸ್ಥಿತಿಯನ್ನು ಹೇಳುವುದೇನಿದೆ ? ಇದು ಬಹಳ ಬೇಗ ನಾಶವಾಗುವು ದಂತೂ ನಿಶ್ಚಯ. ಅಷ್ಟರಲ್ಲಿಯೇ ಭಗವಂತನನ್ನು ಕಂಡುಕೊಂಡರೆ ಸಾರ್ಥಕ ವಾಗುವುದು. ಬಳಿಕ ಪಶ್ಚಾತ್ತಾಪವಾಗುವುದರಿಂದ ಏನೂ ಲಾಭವಿಲ್ಲ. ನೀರಿನಲ್ಲಿ ಎಷ್ಟೋ ಗುಳ್ಳೆಗಳು ಏಳುತ್ತವೆ. ನಮ್ಮ ಶರೀರವೂ ಹಾಗೆಯೇ ಬಂದಿತು ; ಹೋಯಿತು ಎನ್ನುವುದಾದರೆ ಏನು ಪಡೆದ ಹಾಗಾಯಿತು ? ಶ್ರೀಮದ್ಭಾಗವತ ವಾದರೋ ಗ್ರಂಥಿಭೇದನಕ್ಕೆ ಸಿದ್ಧೌಷಧವಾಗಿದೆ. ನಮ್ಮೊಳಗೆ ಅಡಗಿರುವ ಗ್ರಂಥಿಭೇದನವಾಗಬೇಕಾದರೆ-ಶ್ರೀಮದ್ಭಾಗವತವನ್ನು ಶ್ರವಣ ಮಾಡಲೇಬೇಕು.

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ಸಪ್ತಾಹಶ್ರವಣೇ ಕೃತೇ ॥

ಭಾಗವತಶ್ರವಣದಿಂದ ಹೃದಯಗ್ರಂಥಿಯು ಭೇದಿಸಲ್ಪಟ್ಟು, ಸರ್ವ ಸಂಶಯಗಳೂ ನಿವೃತ್ತವಾಗುತ್ತವೆ. ಸಂಸಾರದ ಕಶ್ಮಲವನ್ನು ತೊಳೆಯಲು ಈ ಕಥಾತೀರ್ಥವು ಸಮರ್ಥವಾಗಿದೆ. ಈ ತೀರ್ಥವಾಸಿಯಾದವನಿಗೆ ಮುಕ್ತಿಯು ಅಂಗೈಯಲ್ಲಿದ್ದಂತೆಯೇ ಸರಿ.

ಆ ಸಮಯಕ್ಕೆ ಸರಿಯಾಗಿ ದೇವಲೋಕದಿಂದ ವಿಮಾನವೊಂದು

Sri Vidyabharathi Book Centre, Sringeri

CC-0. In Public Domain. Digitized by eGangotri

ಬಂದಿತು. ಧುಂಧುಕಾರಿಯು ಅದರಲ್ಲಿ ಕುಳಿತುಕೊಂಡನು. ಸಂಗಡ ಬಂದಿದ್ದ ಪಾರ್ಷದರನ್ನು ಗೋಕರ್ಣನು ಕೇಳಿದನು :

"ಉಳಿದ ಶ್ರೋತೃಗಳಿಗೇಕೆ ವಿಮಾನಗಳು ಬರಲಿಲ್ಲ ?"

ಪಾರ್ಷದರು ಉತ್ತರಿಸಿದರು ;

ಶ್ರವಣಸ್ಯ ವಿಭೇದೇನ ಫಲಭೇದೋಽತ್ರ ಸಂಸ್ಥಿತಃ ॥

"ಜನರೇನೋ ಶ್ರವಣವನ್ನು ಮಾಡುತ್ತಾರೆ. ಆದರೆ ಮನನ ಮಾಡುವುದಿಲ್ಲ. ಭಜನಾದಿಗಳನ್ನೂ ನಡೆಸುವುದಿಲ್ಲ, ಹೀಗೆ ಶ್ರವಣವಿಭೇದದಿಂದ ಫಲಭೇದವು ತೋರುತ್ತದೆ. ಈ ಪ್ರೇತನಾದರೋ ಏಳು ದಿವಸಗಳೂ ಅನ್ನಾಹಾರದಿಗಳನ್ನು ತೊರೆದು ಭಕ್ತಿಯಿಂದ ಶ್ರವಣಮಾಡಿರುವನು. ಜ್ಞಾನಾಭ್ಯಾಸದಲ್ಲಿ ದೃಢತೆಯಿರಬೇಕು.

ಅ ದೃಢಂ ಚ ಹತಂ ಜ್ಞಾನಂ ಪ್ರಮಾದೇನ ಹತಂ ಶ್ರುತಮ್ ।
ಸಂಧಿಗ್ಧೋ ಹಿ ಹತೋ ಮಂತ್ರೋ ವ್ಯಗ್ರಚಿತ್ತೋ ಹತೋ ಜಪಃ ॥

ದೃಢವಲ್ಲದ ಜ್ಞಾನವೂ, ಪ್ರಮಾದದಿಂದ ಮಾಡಿದ ಶ್ರವಣವೂ. ಸಂದಿಗ್ಧವಾದ ಮಂತ್ರವೂ, ವ್ಯಗ್ರಚಿತ್ತದಿಂದ ಮಾಡಿದ ಜಪವೂ ವ್ಯರ್ಥವು. ಹಾಗೆಯೇ ವೈಷ್ಣವರಿಲ್ಲದ ದೇಶವೂ. ಅಪಾತ್ರದಲ್ಲಿ ಮಾಡಿದ ಶ್ರಾದ್ಧವೂ, ಶ್ರೋತ್ರಿಯನಲ್ಲದವನಿಗೆ ಕೊಟ್ಟ ದಾನವೂ, ಆಚಾರವಿಲ್ಲದ ಕುಲವೂ ನಿರರ್ಥಕವು. ಗುರುವಾಕ್ಯಗಳಲ್ಲಿ ವಿಶ್ವಾಸವಿರಬೇಕು. ಮಾನಸಿಕ ದೋಷಗಳನ್ನು ಕಳೆದುಕೊಳ್ಳಬೇಕೆಂಬ ನಿಶ್ಚಯವಿರಬೇಕು. ಕಥಾಶ್ರವಣದಲ್ಲಿ ಆಸಕ್ತಿಯಿರಬೇಕು. ಹೀಗಿದ್ದರೆ ಭಗವತ್ಪ್ರಾಪ್ತಿಯಾಗುವುದು. ಗೋಕರ್ಣನೇ ! ನಾರಾಯಣನು ನಿನ್ನನ್ನು ಗೋ-ಲೋಕವಾಸಿಯನ್ನಾಗಿ ಮಾಡುವನು." ಪಾರ್ಷದರು ಹೀಗೆ ಹೇಳಿ ಧುಂಧುಕಾರಿಯನ್ನು ಕರೆದುಕೊಂಡುಹೋದರು.

ಗೋಕರ್ಣನು ಶ್ರಾವಣಮಾಸದಲ್ಲಿ ಪುನಃ ಸಪ್ತಾಹಶ್ರವಣವನ್ನು ಏರ್ಪಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದನು. ಕಥಾಪರಿಸಮಾಪ್ತಿಯ ದಿನ ಶ್ರೀಹರಿಯೇ ಸ್ವಯಂ ಆವಿರ್ಭವಿಸಿ ಗೋಕರ್ಣನಿಗೆ ತನ್ನ ಪ್ರೇಮಾಲಿಂಗನವನ್ನು ದಯಪಾಲಿಸಿದನು. ಎಲ್ಲೆಡೆಯಲ್ಲಿಯೂ ಜಯ-ಜಯ ಧ್ವನಿಗಳೂ-ಶಂಖಧ್ವನಿಗಳೂ ಮೊಳಗಿದುವು. ಭಗವಂತನ ಕೃಪಾಕಟಾಕ್ಷದಿಂದ ಅಲ್ಲಿದ್ದವರೆಲ್ಲರೂ ನಾರಾಯಣರೂಪಧಾರಿಗಳಾದರು. ಎಲ್ಲರೂ ವಿಮಾನವನ್ನೇರಿದರು. ಶ್ರೀರಾಮನು ಎಲ್ಲರನ್ನೂ ಸಾಕೇತ ನಗರಕ್ಕೆ ಕಳುಹಿಸಿದಂತೆ ಭಗವಂತನು ಎಲ್ಲರನ್ನೂ ಗೋಲೋಕಕ್ಕೆ ಕಳುಹಿಸಿದನು.

ಸನತ್ಕುಮಾರರು ನಾರದರಿಗೆ ಹೇಳುತ್ತಾರೆ :-

"ನಾರದ ಮಹರ್ಷಿಯೇ ! ಸಪ್ತಾಹಯಜ್ಞದಿಂದ ಸಂಚಿತವಾಗುವ ಫಲವನ್ನು ಹೇಳಲು ಸಾಧ್ಯವಿಲ್ಲ. ಯೋಗಾಭ್ಯಾಸ, ತಪಶ್ಚರ್ಯೆ-ಇತ್ಯಾದಿಗಳ ಆವಶ್ಯಕತೆಯೇ ಇಲ್ಲ. ಚಿತ್ರಕೂಟದಲ್ಲಿ ಶಾಂಡಿಲ್ಯರು ಕಥಾಶ್ರವಣದಲ್ಲಿ ನಿರತರಾಗಿದ್ದಾರೆ. ಯಾರು ಪರಮಪವಿತ್ರವಾದ ಈ ಆಖ್ಯಾನವನ್ನು ನಿತ್ಯವೂ ಪಠನಮಾಡುವರೋ-ಅವರು ಪುನರಾವೃತ್ತಿ ರಹಿತವಾದ ಬ್ರಹ್ಮಸಾಯುಜ್ಯವನ್ನು ಪಡೆಯುತ್ತಾರೆ."

ಇತ್ಯೇವಂ ಪಂಚಮೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತದರ್ಶನ

ಸಪ್ತಾಹಯಜ್ಞವಿಧಾನ

ಅಧ್ಯಾಯ-೬

ಸನತ್ಕುಮಾರರು ನಾರದರಿಗೆ ಸಪ್ತಾಹಶ್ರವಣವಿಧಿಯನ್ನು ತಿಳಿಸತೊಡಗಿದರು :–ಸಪ್ತಾಹಯಜ್ಞವನ್ನು ಏರ್ಪಡಿಸಬೇಕಾದರೆ–ಜನಸಹಾಯ, ಧನಸಹಾಯ–ಇವೆರಡೂ ಅತ್ಯವಶ್ಯವು. ಜ್ಯೋತಿಷಿಗಳಿಂದ ಮುಹೂರ್ತವನ್ನು ನಿಶ್ಚಯಿಸಿಕೊಳ್ಳಬೇಕು. ವಿವಾಹಾದಿಗಳಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಪ್ತಾಹಯಜ್ಞಕ್ಕೂ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಮಾಸನಿಯಮವನ್ನು ಅಷ್ಟಾಗಿ ಹೇಳದಿದ್ದರೂ ಮಾಘ-ಫಾಲ್ಗುಣ-ವೈಶಾಖ–ಮಾರ್ಗಶೀರ್ಷಮಾಸಗಳು ಪ್ರಶಸ್ತವೆಂದು ಹೇಳುತ್ತಾರೆ. ವೈರಾಗ್ಯಶಾಲಿಗಳಿಗೆ ಮುಹೂರ್ತದ ಅವಶ್ಯಕತೆಯಿಲ್ಲ, ಕಾಲನಿಯಮವೂ ಇಲ್ಲ. ಸಾಮಾನ್ಯವಾಗಿ ಯಾವ–ಯಾವ ತಿಂಗಳುಗಳಲ್ಲಿ ಏನೇನನ್ನು ತಿನ್ನಬಾರದೆಂದು ಹೇಳಿರುವರೋ ಆ ನಿಯಮವನ್ನು ಪಾಲಿಸಬೇಕು. ಕಥಾಶ್ರವಣದಲ್ಲಿ ಪರಿಶ್ರಮಪೂರ್ವಕವಾಗಿ ಸಹಯೋಗವನ್ನು ಕೊಡುವವರನ್ನೇ ಆಹ್ವಾನಿಸಬೇಕು. ಎಲ್ಲ ಕಡೆಗಳಿಗೂ ಆಹ್ವಾನಪತ್ರಿಕೆಗಳನ್ನು ಕಳುಹಿಸಿಕೊಡಬೇಕು. ಎಲ್ಲರನ್ನೂ ಕಥಾಶ್ರವಣಕ್ಕೆ ಬರಬೇಕೆಂದು ನಮ್ರತೆಯಿಂದ ಪ್ರಾರ್ಥಿಸಿಕೊಳ್ಳಬೇಕು. ಜನರು ಹೆಚ್ಚಾಗಿ ಬಂದರೆ ಸ್ಥಳಾವಕಾಶವನ್ನು ಕಲ್ಪಿಸಲು ಕಷ್ಟವಾಗುವುದೆಂದು ಯೋಚಿಸಬಾರದು. ಅಧಿಕಸಂಖ್ಯೆಯಲ್ಲಿ ಜನರು ಬರಬೇಕೆಂದೇ ಪ್ರಯತ್ನಿಸಬೇಕು. ಪ್ರಬಂಧಕರು ಬೇರೆಯೇ ಇರಬೇಕು. ಸಾಧವಾದಷ್ಟೂ ಕಥಾಶ್ರವಣದಲ್ಲಿ ತನ್ಮಯತೆಯಿರಬೇಕೆಂಬುವುದನ್ನು ಮರೆಯಬಾರದು. ಯಾರು ಶ್ರವಣಾದಿಗಳಿಂದ ದೂರವಿರುವರೋ ಅವರನ್ನೂ ಆಹ್ವಾನಿಸಬೇಕು. ಸ್ತ್ರೀ-ಶೂದ್ರಾದಿಗಳು ಭಾಗವಹಿಸುವಂತಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಭಾರತದ ಕಥೆಯು ಹಲವಾರು ಲೌಕಿಕವಾದಗಳಿಂದ ತುಂಬಿಕೊಂಡಿದೆ. ಈ ಭಾಗವತೀ ಕಥೆಯಾದರೋ–ಪತಿತರನ್ನೂ, ಪಾಪಿಗಳನ್ನೂ, ಅನಧಿಕಾರಿಗಳನ್ನೂ ಸಹ ಕಲ್ಯಾಣಮಾರ್ಗಾವಲಂಬಿಗಳನ್ನಾಗಿ ಮಾಡುತ್ತದೆ. ಆಹ್ವಾನಪತ್ರವು ಹೀಗಿರಬೇಕೆಂದು ಹೇಳುತ್ತಾರೆ :–

ಸತಾಂ ಸಮಾಜೋ ಭವಿತಾ ಸಪ್ತರಾತ್ರಂ ಸುದುರ್ಲಭಃ ॥

"ಸಾಧು–ಸಂತರ ಸಮಾಜವು ಏಳು ದಿನ ಸೇರುವುದು. ಅಪೂರ್ವ ಕಥಾಮೃತವಾಹಿನಿಯು ಹರಿಯುವುದು. ನೀವು ಅವಶ್ಯವಾಗಿ ಬಂದು ಭಾಗಿಗಳಾಗುವುದು. ಹೆಚ್ಚಿನ ಕಾಲಾವಕಾಶವಿಲ್ಲದಿದ್ದರೆ ಒಂದು ದಿನದ ಮಟ್ಟಿಗಾದರೂ ಬರುವುದು. ಕಥಾಕಾಲಕ್ಷೇಪದಲ್ಲಿ ಒಂದು ಕ್ಷಣವನ್ನು ಕಳೆದರೂ ಮಹತ್ಫಲವು ಲಭಿಸುವುದು,

ಹೀಗೆ ವಿನಯದಿಂದ ಎಲ್ಲರನ್ನೂ ಆಹ್ವಾನಿಸಬೇಕು. ಎಲ್ಲರಿಗೂ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬೇಕು. ತೀರ್ಥದಲ್ಲಾಗಲೀ. ವನದಲ್ಲಾಗಲೀ. ಮನೆಯಲ್ಲಾಗಲೀ, ವಿಶಾಲವಾದ ಪ್ರದೇಶದಲ್ಲಾಗಲೀ–ಕಥಾಸ್ಥಳವನ್ನು ನಿರ್ಮಿಸಬೇಕು. ಸ್ಥಳವು ಕಶ್ಮಲರಹಿತವಾಗಿರಬೇಕು. ಭೂಶುದ್ಧಿಯು ಚೆನ್ನಾಗಿರಬೇಕು. ಐದು ದಿವಸಗಳ ಮುಂಚೆಯೇ ಅಲ್ಲಿ ಶುದ್ಧಿಕಾರ್ಯವು ನಡೆಯಬೇಕು. ಎತ್ತರವಾದ ಮಂಟಪವು ರಚನೆಯಾಗಬೇಕು. ತಳಿರುತೋರಣ–ಕದಲೀ ಸ್ಥಂಭಗಳಿಂದ ಅಲಂಕೃತವಾಗಿರಬೇಕು. ಧ್ವಜ–ಪತಾಕೆಗಳು ಎತ್ತರದಲ್ಲಿ ಹಾರಾಡುತ್ತಿರಬೇಕು. ಮಂಟಪದಲ್ಲಿ ಸಪ್ತಲೋಕಗಳನ್ನೂ ನಿರ್ಮಿಸಬೇಕು.

ಬ್ರಾಹ್ಮಣರನ್ನೂ. ಸಾಧು–ಸಂತರನ್ನೂ. ವಿರಕ್ತರನ್ನೂ ಸಮ್ಮಾನಪೂರ್ವಕವಾಗಿ ಕರೆದುಕೊಂಡು ಬರಬೇಕು. ಯಾರಾದರೂ ವಿರೋಧಿಸಿದರೆ ಅವರನ್ನು ಸಮಾಧಾನಪಡಿಸಿ ಕರೆದುಕೊಂಡು ಬಂದು ಉಚ್ಚಾಸನದಲ್ಲಿ ಕೂರಿಸಬೇಕು. ವಕ್ತೃವಿನ ಸ್ಥಾನವು ಎತ್ತರವಾಗಿಯೂ–ಭವ್ಯವಾಗಿಯೂ ಇರಬೇಕು. ಹೇಳುವವನು ಸದಾಚಾರಸಂಪನ್ನನಾಗಿರಬೇಕು ದೇಶ–ಕಾಲಾನುಗುಣವಾಗಿ ಎಲ್ಲದರ ವ್ಯವಸ್ಥೆಯೂ ಆಗಬೇಕು. ಯಾವುದರಲ್ಲಿಯೂ ದುರಾಗ್ರಹವಿರಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರಕ್ತೋ ವೈಷ್ಣವೋ ವೇದಶಾಸ್ತ್ರವಿಶುದ್ಧಿಕೃತ್ ।
ದೃಷ್ಟಾಂತಕುಶಲೋ ಧೀರೋ ವಕ್ತಾ ಕಾರ್ಯೋಽತಿನಿಸ್ಪೃಹಃ ॥

ವ್ಯಾಸಪೀಠವನ್ನು ಅಲಂಕರಿಸುವವನು ವಿರಕ್ತ-ವೈಷ್ಣವ-ಬ್ರಾಹ್ಮಣನಾಗಿರಬೇಕು. ವೇದ-ಶಾಸ್ತ್ರಾದಿಸಂಪನ್ನನಾಗಿ ದೃಷ್ಟಾಂತಗಳನ್ನು ಕೊಟ್ಟು ಪ್ರತಿಪಾದಿಸುವುದರಲ್ಲಿ ಚತುರನಾಗಿರಬೇಕು. ಗಂಭೀರನಾಗಿ, ವೀರನಾಗಿ, ನಿಸ್ಪೃಹನಾಗಿರಬೇಕು. ಬೇರೆ ಯಾರೂ ಆ ವ್ಯಾಸಪೀಠದಲ್ಲಿ ಕೂರಬಾರದು. ಪಂಡಿತನೂ-ಸಂಶಯಚ್ಛೇತ್ತನೂ, ಲೋಕಬೋಧನತತ್ಪರನೂ, ಹೇಳುವವನ ಸಹಾಯಕನಾಗಿರಬೇಕು. ಕಥಾರಂಭದ ಹಿಂದಿನ ದಿನ ವಕ್ತೃವಿಗೆ ಕ್ಷೌರಾದಿ ಶುದ್ಧಿಕರ್ಮಗಳು ನಡೆಯಬೇಕು. ಅರುಣೋದಯದಲ್ಲಿ ಶೌಚ-ಸ್ನಾನಾದಿ ನಿತ್ಯಕರ್ಮಗಳನ್ನು ಸಂಕ್ಷೇಪವಾಗಿಯೇ ಮುಗಿಸಬೇಕು. ಕಥಾರಂಭಕ್ಕೆ ಮೊದಲು ಗಣನಾಥನನ್ನು ಪೂಜಿಸಿ, ಪಿತೃದೇವತೆಗಳಿಗೆ ತರ್ಪಣಾದಿಗಳನ್ನು ಕೊಟ್ಟು, ಪ್ರಾಯಶ್ಚಿತ್ತಾದಿಗಳಿಂದ ಶುದ್ಧರಾಗಬೇಕು.

ಸರ್ವತೋಭದ್ರಮಂಡಲವನ್ನು ರಚಿಸಿ, ಶ್ರೀಹರಿಯನ್ನು ಸ್ಥಾಪಿಸಿ, ಶ್ರೀಕೃಷ್ಣಮಂತ್ರದಿಂದ ಕ್ರಮವಾಗಿ ಪೂಜಾವಿಧಿಗಳನ್ನು ನಡೆಸಬೇಕು. ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಹೀಗೆ ಪ್ರಾರ್ಥಿಸಬೇಕು :–

ಸಂಸಾರಸಾಗರೇ ಮಗ್ನಂ ದೀನಂ ಮಾಂ ಕರುಣಾನಿಧೇ ।
ಕರ್ಮಮೋಹಗೃಹೀತಾಂಗಂ ಮಾಮುದ್ಧರ ಭವಾರ್ಣವಾತ್ ॥

ಬಳಿಕ ಶ್ರೀಮದ್ಭಾಗವತ ಗ್ರಂಥದ ಪೂಜೆಯನ್ನು ಮಾಡಬೇಕು. ಧೂಪ ದೀಪ-ಫಲ ಸಮರ್ಪಣೆಗಳನ್ನು ಮಾಡಿ ನಮಸ್ಕರಿಸಿ ಪ್ರಸನ್ನತೆಯಿಂದ ಹೀಗೆ ಸ್ತೋತ್ರಮಾಡಬೇಕು :–

ಶ್ರೀಮದ್ಭಾಗವತಾಖ್ಯೋಽಯಂ ಪ್ರತ್ಯಕ್ಷಃ ಕೃಷ್ಣ ಏವ ಹಿ ।
ಸ್ವೀಕೃತೋಽಸಿ ಮಯಾ ನಾಥ ಮುಕ್ತ್ಯರ್ಥಂ ಭವಸಾಗರೇ ॥
ಮನೋರಥೋ ಮದೀಯೋಽಯಂ ಸಫಲಃ ಸರ್ವಥಾತ್ವಯಾ ।
ನಿರ್ವಿಘ್ನೇನೈವ ಕರ್ತವ್ಯೋದಾಸೋಹಂತವ ಕೇಶವ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಗವತವೆಂದರೆ ಪ್ರತ್ಯಕ್ಷಕೃಷ್ಣನೇ. ಭವಸಾಗರದಿಂದ ಪಾರಾಗಲು ಅವನನ್ನು ಆಶ್ರಯಿಸಬೇಕು. ಭಗವಂತನೇ ! ನಿನ್ನ ದಾಸನಾದ ನನ್ನ ಈ ಕರ್ತವ್ಯವು ನಿರ್ವಿಘ್ನವಾಗಿ ಪೂರ್ಣಗೊಳ್ಳಲಿ–ಎಂದು ಪ್ರಾರ್ಥಿಸಬೇಕು.

ನಂತರ ಪೌರಾಣಿಕನನ್ನು ಪೂಜಿಸಿ ವಸ್ತ್ರಾದ್ಯಲಂಕಾರಗಳಿಂದ ಸಂತುಷ್ಟನನ್ನಾಗಿ ಮಾಡಬೇಕು, ಹಾಗೂ ಈ ರೀತಿಯಲ್ಲಿ ಅವನನ್ನು ಪ್ರಾರ್ಥಿಸಬೇಕು·

ಶುಕರೂಪ ಪ್ರಬೋಧಜ್ಞ ಸರ್ವಶಾಸ್ತ್ರವಿಶಾರದ ।
ಏತತ್ಕಥಾಪ್ರಕಾಶೇನ ಮದಜ್ಞಾನಂ ವಿನಾಶಯ ॥

ಬಳಿಕ ಕಥಾವಿಘ್ನನಿವಾರಣೆಗಾಗಿ ದ್ವಾದಶಾಕ್ಷರೀ ಮಂತ್ರಜಪವನ್ನು ಮಾಡಲು ಐದು ಮಂದಿ ಸದ್ಬ್ರಾಹ್ಮಣರನ್ನು ವರಿಸಬೇಕು. ಹಾಗೂ ಕೇಳುವವರಲ್ಲಿ ಹಿರಿಯರಾದವರನ್ನು ಪೂಜಿಸಿ ಅವರಿಂದ ಅನುಜ್ಞೆಯನ್ನು ಪಡೆಯಬೇಕು.

ಕಥಾಶ್ರವಣವನ್ನು ಮಾಡುವಾಗ ಲೋಕಚಿಂತೆ, ಧನಚಿಂತೆ. ವಿತ್ತಚಿಂತೆ. ಗೃಹಚಿಂತೆ, ಪುತ್ರಚಿಂತೆ-ಮುಂತಾದ ಎಲ್ಲ ಚಿಂತೆಗಳನ್ನೂ ದೂರಮಾಡಿ ಭಗವದ್ಧ್ಯಾನವನ್ನು ಮಾಡುತ್ತಾ ಕಥೆಯನ್ನು ಕೇಳಬೇಕು. ಬುದ್ಧಿಯು ಪರಿಶುದ್ಧವಾಗಿದ್ದರೆ ಮಾತ್ರ ಉತ್ತಮ ಫಲಪ್ರಾಪ್ತಿಯಾಗುವುದು. ಕಥಾಶ್ರವಣವು ಸೂರ್ಯೋದಯದಿಂದ ಮೂರು ಜಾವಗಳವರೆಗೆ ನಡೆಯಬೇಕು. ಮಧ್ಯಾಹ್ನ ಎರಡು ಘಂಟೆಗಳ ಕಾಲ ವಿರಾಮವಿರಬೇಕು. ಭೋಜನವು ಅಲ್ಪಪ್ರಮಾಣದ್ದಾಗಿರಬೇಕು. ಇದರಿಂದ ಮಲ-ಮೂತ್ರಗಳನ್ನು ಜಯಿಸಲು ಸಾಧ್ಯವಾಗುವುದು 'ಲಘ್ವಾಹಾರಃ ಸುಖಾವಹಃ'-ಎಂದು ಹೇಳುತ್ತಾರೆ, ಏನನ್ನು ತಿನ್ನಬೇಕು : ಏನನ್ನು ತಿನ್ನಬಾರದು-ಎನ್ನುವ ಬಗೆಗೆ ಹೇಳುವುದಿಷ್ಟೆ–ಯಾವುದು ಭಗವಂತನ ನಿವೇದನಕ್ಕೆ ಅರ್ಹವಾಗಿದೆಯೋ ಯಾವುದರ ಸೇವೆಯಿಂದ ಕಥಾಶ್ರವಣಕ್ಕೆ ತೊಂದರೆಯಾಗುವುದಿಲ್ಲವೋ-ಅಂತಹುದನ್ನು ಮಾತ್ರ ಸೇವಿಸಬೇಕು. ಸಾಧ್ಯವಿದ್ದವರು ಉಪವಾಸವಿದ್ದೇ ಕಥಾಶ್ರವಣವನ್ನು ಮಾಡಬಹುದು. ಭೋಜನದಿಂದ ಕಥಾಶ್ರವಣಕ್ಕೆ ಅಡ್ಡಿಯಾಗದಿದ್ದಲ್ಲಿ ಮಾಡಬಹುದು. ಕಥಾವಿರಾಮದಲ್ಲಿ

Sri Vidyabharathi Book Centre, Sringeri

CC-0. In Public Domain. Digitized by eGangotri

ವ್ಯರ್ಥವಾಗಿ ಮಾತನಾಡದೇ ಭಗವನ್ನಾಮಸ್ಮರಣೆಯನ್ನು ಮಾಡುತ್ತಿರಬೇಕು. ವೈಷ್ಣವದೀಕ್ಷೆಯನ್ನು ಹೊಂದದವರು ಕಥಾಶ್ರವಣದಲ್ಲಿ ಅನಧಿಕಾರಿಗಳು.

ಸಪ್ತಾಹದ ಅವಧಿಯಲ್ಲಿ ಬ್ರಹ್ಮಚರ್ಯವ್ರತದಿಂದಿರಬೇಕು. ಭೂಶಾಯಿ ಯಾಗಿರಬೇಕು. ಪತ್ರಾವಳಿಯಲ್ಲಿ ಭೋಜನವನ್ನು ಮಾಡಬೇಕು. ಕಾಮ-ಕ್ರೋಧಾದಿಗಳಿಗೆ ವಶವಾಗಬಾರದು. ಕಥಾವ್ರತಿಯು ಅಸ್ಪೃಶ್ಯರೊಡನೆ, ರಜಸ್ವಲೆಯರೊಡನೆ, ಮ್ಲೇಚ್ಛ-ತುರುಷ್ಕರೊಡನೆ ಮಾತನಾಡಬಾರದು. ಕಥಾ ವ್ರತಿಯಾದವನು ಸತ್ಯ-ಶೌಚ-ದಯಾ-ಮೌನ-ಆರ್ಜವ-ವಿನಯ-ಔದಾರ್ಯ-ಇವುಗಳಿಂದ ಸಂಪನ್ನನಾಗಿರಬೇಕು.

ದರಿದ್ರನೂ, ಕ್ಷಯರೋಗಿಯೂ, ನಿರ್ಭಾಗ್ಯನೂ, ಪಾಪಕರ್ಮಿಯೂ. ಸಂತಾನಹೀನನೂ, ಮೋಕ್ಷಕಾಮಿಯೂ ಕಥಾಶ್ರವಣವನ್ನು ಮಾಡಬೇಕು. ಸಂತಾನರಹಿತರು, ರಜೋಧರ್ಮವು ಸರಿಯಿಲ್ಲದವರು, ಮೃತಪುತ್ರವಂತರು, ಗರ್ಭಪಾತವಾಗುವವರು-ಇವರೆಲ್ಲರೂ ಭಾಗವತಕಥಾಶ್ರವಣವನ್ನು ಮಾಡಿ ಪಾಪನಿರ್ಮುಕ್ತರಾಗಬಹುದು.

ಅಂತ್ಯದಲ್ಲಿ ಉದ್ಯಾಪನೆಯನ್ನು ಮಾಡುವ ವಿಧಾನವೂ ಉಂಟು. ಕಥಾ ಶ್ರವಣವು ಪರಿಸಮಾಪ್ತಿಯಾದ ಮೇಲೆ ಪುಸ್ತಕದ-ವಾಚಕನ ಪೂಜೆಯಾಗಬೇಕು. ಶ್ರೋತೃವರ್ಗದವರೆಲ್ಲರಿಗೂ ಪ್ರಸಾದವನ್ನೂ ತುಳಸೀದಳಗಳನ್ನೂ ಕೊಡಬೇಕು. ಮೃದಂಗಾದಿ ವಾದ್ಯಗಳೊಡನೆ ಸಂಕೀರ್ತನೆಯು ನಡೆಯಬೇಕು. ಬ್ರಾಹ್ಮಣರಿಗೂ ಯಾಚಕರಿಗೂ ಅನ್ನ-ಧನಾದಿಗಳನ್ನು ಕೊಡಬೇಕು. ಶ್ರೋತೃವು ವಿರಕ್ತನಾಗಿದ್ದರೆ ಕೊನೆಯ ದಿನ ಗೀತಾಪಾಠವು ನಡೆಯಬೇಕು. ಸಂಸಾರಿಯಾಗಿದ್ದರೆ ಹೋಮ ವನ್ನು ನಡೆಸಬೇಕು ದಶಮಸ್ಕಂಧದ ಪ್ರತಿಶ್ಲೋಕದಿಂದಲೂ ಹೋಮವು ನಡೆಯಬೇಕು. ಪಾಯಸ, ಜೇನುತುಪ್ಪ-ಇವು ಹೋಮದ್ರವ್ಯಗಳು. ನಂತರ ವಿಷ್ಣುಸಹಸ್ರನಾಮವನ್ನು ಪಾರಾಯಣ ಮಾಡಿದರೆ ವಿಶೇಷ ಫಲವುಂಟು. ಗಾಯತ್ರೀ ಮಂತ್ರದಿಂದಲೂ ಹೋಮವನ್ನು ಮಾಡಬಹುದು. ಜೀವಾತ್ಮ-ಪರಮಾತ್ಮನ ಸಂಯೋಗವಾಗಬೇಕಾದರೆ ಭಗವನ್ನಾಮಸ್ಮರಣೆಯಿಂದಲೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಅನವತರವಾಗಿ ನಾಮಜಪವನ್ನು ಮಾಡುತ್ತಿದ್ದರೆ ಪರಮಾತ್ಮನೊಡನೆ ಸೇರಿಯೇ ಸೇರುವೆವು. ಕಥಾಪರಿಸಮಾಪ್ತಿಯಾದನಂತರ ಅಧಿಕ ಸಂಖ್ಯೆಯಲ್ಲಿ ಬ್ರಾಹ್ಮಣ ಭೋಜನವಾಗಬೇಕೆಂಬುದು ಕಡ್ಡಾಯವಲ್ಲ. ಹನ್ನೆರಡು ಮಂದಿ ಬ್ರಾಹ್ಮಣರಿಗೆ ಭೋಜನ ಮಾಡಿಸಿದರೂ ಸಾಕು. ಧನವಂತರಾಗಿದ್ದಲ್ಲಿ ಗೋ–ಭೂ-ಹಿರಣ್ಯಾದಿ ದಾನಗಳನ್ನು ಮಾಡಬಹುದು. ಇದರಿಂದ ಶ್ರವಣವು ಸಂಪೂರ್ಣ ಫಲದಾಯಕವಾಗುವುದು. ಚಿನ್ನದ ಸಿಂಹಾಸನದಲ್ಲಿ ಸುಂದರಲಿಪಿಯ ಭಾಗವತವನ್ನಿಟ್ಟು ಪೂಜಿಸಿ ಯೋಗ್ಯಬ್ರಾಹ್ಮಣನಿಗೆ ದಾನಮಾಡಬೇಕು, ಮೋಕ್ಷ ಕಾಮಿಗಳಿಗೆ ವಯಸ್ಸಾದವರಿಗೆ ಮಾತ್ರವೇ ಭಾಗವತಕಥಾಶ್ರವಣವೆಂದು ಯಾರೂ ಭಾವಿಸಬಾರದು. ಭಾಗವತಕಥಾಶ್ರವಣದಿಂದ ಧರ್ಮಾರ್ಥ-ಕಾಮ ಗಳೂ ಸಿದ್ಧಿಸುತ್ತವೆ. ಅಂತ್ಯದಲ್ಲಿ ಮೋಕ್ಷಪ್ರಾಪ್ತಿಯೂ ಆಗುತ್ತದೆ. ಚತುರ್ವಿಧ ಪುರುಷಾರ್ಥಸಾಧಕವಿದು.

ಸರ್ವಪಾಪ ಹರಾ ಪುಣ್ಯಾ ಭುಕ್ತಿ-ಮುಕ್ತಿಪ್ರದಾಯಿನೀ ।

ಸೂತರು ಶೌನಕಾದಿಗಳಿಗೆ ಹೇಳುತ್ತಾರೆ :-

ಮುನಿಶ್ರೇಷ್ಠರೇ ! ಸೂತರು ಈ ಪ್ರಕಾರವಾಗಿ ನಾರದರಿಗೆ ಸಪ್ತಾಹ ಕಥೆಯನ್ನು ಹೇಳಲಾಗಿ ; ಭಕ್ತಿ–ಜ್ಞಾನ-ವೈರಾಗ್ಯಗಳು ಪರಿಪುಷ್ಟವಾದುವು ತಾರುಣ್ಯವನ್ನು ಪಡೆದುವು ; ಎಲ್ಲರನ್ನೂ ಆಕರ್ಷಿಸತೊಡಗಿದುವು.

ಇದರ ಅರ್ಥವೇನೆಂದರೆ :–ಎಷ್ಟು ಜನ ಕೇಳುವವರಿದ್ದರೋ-ಅವರೆಲ್ಲರೂ ಜ್ಞಾನ–ಭಕ್ತಿ–ವೈರಾಗ್ಯಯುತರಾದರು. ತಮ್ಮ ಮನೋರಥವು ಕೈಗೂಡಿದುದರಿಂದ ಕೃತಾರ್ಥರಾದರು, ರೋಮಾಂಚಿತರಾದರು, ಪರಮಾನಂದದಲ್ಲಿ ಮುಳುಗಿದರು. ಕೈಗಳನ್ನು ಮುಗಿದುಕೊಂಡು ಪ್ರೇಮಗದ್ಗದಿತವಾಣಿಯಿಂದ ಹೇಳಿದರು :–

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಭವದ್ಭಿಃ ಕರುಣಾಪರೈಃ ।
ಅದ್ಯ ಮೇ ಭಗವಾನ್ ಲಬ್ಧಃ ಸರ್ವಪಾಪಹರೋ ಹರಿಃ ।

"ತಪಸ್ವಿಗಳೇ ! ಸರ್ವಧರ್ಮಾಚರಣೆಗಳಿಗಿಂತಲೂ ಶ್ರೀಮದ್ಭಾಗವತ

Sri Vidyabharathi Book Centre, Sringeri

CC-0. In Public Domain. Digitized by eGangotri

ಕಥಾಶ್ರವಣವು ಶ್ರೇಷ್ಠವಾದುದು. ಇದರ ಶ್ರವಣದಿಂದ ವೈಕುಂಠವಾಸಿಯಾದ ಶ್ರೀಕೃಷ್ಣನ ಪ್ರಾಪ್ತಿಯಾಗುತ್ತದೆ. ಶ್ರವಣವಿಲ್ಲದೇ ಭಕ್ತಿಯೂ ಇಲ್ಲ ; ಜ್ಞಾನವೂ ಇಲ್ಲ. ಸ್ವಾಧ್ಯಾಯವಿಧಿಯೇ ಬೇರೆ : ಶ್ರವಣವಿಧಿಯೇ ಬೇರೆ. ಶ್ರೋತವ್ಯಃ ಮಂತವ್ಯಃ, ನಿಧಿಧ್ಯಾಸಿತವ್ಯಃ-ಇದೇ ಜ್ಞಾನಸಾಧನವು.

ನಾರದರು ಹೀಗೆ ಹೇಳುತ್ತಿರುವಾಗಲೇ-

ತತ್ರಾಯಯೌ ಷೋಡಶವಾರ್ಷಿಕಸ್ತದಾ
ವ್ಯಾಸಾತ್ಮಜೋ ಜ್ಞಾನಮಹಾಬ್ಧಿಚಂದ್ರಮಾಃ ।
ಕಥಾವಸಾನೇ ನಿಜಲಾಭಪೂರ್ಣಃ
ಪ್ರೇಮ್ಣಾ ಪಠನ್ ಭಾಗವತಂ ಶನೈಃ ಶನೈಃ ॥

ಹದಿನಾರು ವರ್ಷಗಳ ಯುವಕರಾದ, ವ್ಯಾಸಪುತ್ರರಾದ ಶ್ರೀಶುಕದೇವರು ಜ್ಞಾನಾನಂದವೆಂಬ ಮಹಾಸಮುದ್ರದಲ್ಲಿ ಮುಳುಗಿರುವ ಚಂದ್ರನಂತೆ ದಯ ಮಾಡಿಸಿದರು. ಶ್ರೀಶುಕರಾದರೋ ಜೀವನ್ಮುಕ್ತಮಹಾತ್ಮರು, ಆದರೂ ನಿತ್ಯವೂ ಭಾಗವತ ಮಹಾಪಾಠವನ್ನು ಮಾಡುತ್ತಿದ್ದುದರಿಂದ ಎಲ್ಲರಿಗೂ ಅವರ ದರ್ಶನ ದಿಂದ ಬಹಳ ಸಂತೋಷವಾಯಿತು. ಎಲ್ಲರೂ ಎದ್ದು ನಮಸ್ಕರಿಸಿ ಸ್ವಾಗತಿಸಿ ದರು. ನಾರದರು ಶ್ರೀಶುಕರನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿ ವಿಧಿವತ್ತಾಗಿ ಪೂಜಿಸಿದರು. ಬಳಿಕ ಶ್ರೀಶುಕರು ಹೇಳಿದರು :-

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಮ್ ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥

ರಸಿಕರಾದ ಭಾವುಕಜನರೇ ! ವೇದಗಳು ಕಲ್ಪವೃಕ್ಷಗಳು. ವೇದತ್ವ ವೆಂದರೆ ಅಜ್ಞಾತಜ್ಞಾಪಕತ್ವವು, ನಿಗಮಯತೀತಿ-ನಿಗಮಃ. ಯಾವ ಅಜ್ಞಾತವಸ್ತುವನ್ನು ಮನೋಬುದ್ಧೀಂದ್ರಿಯಾದಿಗಳಿಂದ, ಸಮಾಧಿಯಿಂದ ತಿಳಿಯಲಾರೆವೋ-ಸಾಕ್ಷಿಭಾಸ್ಯರೂಪದಿಂದಲೂಯಾರ ಜ್ಞಾನವಾಗಲಾರದೋ-

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರು ಅಭ್ಯಾಸಭಾಸ್ಯನೂ, ಸಾಕ್ಷಿಭಾಸ್ಯನೂ ಅಲ್ಲವೋ-ಅಂತಹವನ ಜ್ಞಾನವನ್ನು ಮಾಡಿಸುವ ನಿಗಮವು ನಿಜವಾಗಿಯೂ ಕಲ್ಪವೃಕ್ಷವೇ. ನಿಗಮವು ನಿಜವಾಗಿ ಕಲ್ಪವೃಕ್ಷವೆಂದರೆ-ದ್ವೈತವನ್ನು ಕೇಳುವವರಿಗೆ ದ್ವೈತವನ್ನು ಕೊಟ್ಟಿತು. ಅದ್ವೈತಿಗಳಿಗೆ ಅದ್ವೈತವನ್ನು ಕೊಟ್ಟಿತು. ದ್ವೈತಾದ್ವೈತಿಗಳಿಗೆ ಅದನ್ನೇ ಕೊಟ್ಟಿತು. ಹೀಗೆ ಕೇಳಿದವರಿಗೆ ಕೇಳಿದುದನ್ನು ಕೊಡುವ ನಿಗಮವು ಕಲ್ಪವೃಕ್ಷವೇ ಸರಿ.

ಮಹಾತ್ಮರು ಹೇಳಿದರು :-'ನಾವು ಕೇಳುವವರಲ್ಲ. ನಿನ್ನ ಬಳಿ ಇರುವುದರಲ್ಲಿ ಒಳ್ಳೆಯದನ್ನು ಕೊಟ್ಟುಬಿಡು'.

ನಿಗಮಕಲ್ಪತರುವು ಹೇಳಿತು :-'ಆಗಬಹುದು ತೆಗೆದುಕೊಳ್ಳಿ. 'ಗಲಿತಂ ಫಲಂ' ಗಲಿತಫಲವೆಂದರೆ-ಯಾರೂ ಇದನ್ನು ಕುಯ್ದಿರುವುದಿಲ್ಲ. ಕಲ್ಲು ಹೊಡೆದು ಅಥವಾ ಕೊಂಬೆಯಲ್ಲಾಡಿಸಿ ಬೀಳಿಸಿದ ಫಲವಲ್ಲ. ಇದು ವಾಸನಾನುಸಾರವಾಗಿ ಪ್ರಾಪ್ತವಾದುದಲ್ಲ. ವೇದದ ಸ್ವಾರಸಿಕಫಲ ವೇದದ ಸಾರಸರ್ವಸ್ವವೇ ಭಾಗವತದ ರೂಪದಲ್ಲಿ ಪ್ರಾಪ್ತವಾಗಿದೆ. ಇದು ಸಾಧನಾತ್ಮಕವಲ್ಲ. ಫಲಾತ್ಮಕವು. ಎಲ್ಲ ಸಾಧನೆಗಳ ಫಲಗಳೂ ಇದರಲ್ಲಿವೆ. ಇದರಲ್ಲಿ ತ್ಯಾಗಮಾಡುವ ಭಾಗವೇ ಇಲ್ಲ. ಇದು ರಸ ಸ್ವರೂಪ. ಕೇವಲ ಫಲಮಾತ್ರವಾಗಿದ್ದರೆ ಸಿಪ್ಪೆ, ಬೀಜ-ಇವುಗಳನ್ನು ತೆಗೆದು ಬಿಸಾಡಬೇಕಾಗಿದ್ದಿತು. ಕೇವಲ ರಸಾತ್ಮಕವಾಗಿದ್ದರೂ ನೆಲದ ಮೇಲೆ ಚಲ್ಲಿಹೋಗುತ್ತಲಿದ್ದಿತು. ಇದು ಫಲವೂ ಹೌದು ; ರಸವೂ ಹೌದು. ಇದರಲ್ಲಿ ತ್ಯಾಗದ ಭಾಗವೇ ಇಲ್ಲ. ಇದರ ಮೇಲೆ ಇದು ಶುಕದೇವರ ಶ್ರೀಮುಖದ ಅಮೃತದ್ರವದಿಂದ ಸಂಯುಕ್ತವಾಗಿದೆ. ಗಿಣಿ ಕಚ್ಚಿದ ಹಣ್ಣು ಹೆಚ್ಚು ರುಚಿಕರವಲ್ಲವೇ ! ಆದುದರಿಂದ 'ಪಿಬತ ಭಾಗವತಂ ರಸಮಾಲಯಮ್' ! ಕುಡಿಯಿರಿ ; ಕುಡಿಯಿರಿ ; ಭಾಗವತರಸವನ್ನು ಪಾನ ಮಾಡಿರಿ. ಭಾಗವತವೆಂದರೆ-ಭಗವತಾ ಬ್ರಹ್ಮಣೇ ಪ್ರೋಕ್ತಂ-ಭಗವಾನ್ ನಾರಾಯಣನು ಬ್ರಹ್ಮನಿಗೆ ಹೇಳಿದುದು. ಆದುದರಿಂದ ಇದು ಭಾಗವತ. ಈ ರಸವನ್ನು ಕುಡಿಯಿರಿ. ಎಷ್ಟು ಕುಡಿಯೋಣ ; ಎಲ್ಲಿಯವರೆಗೆ ಕುಡಿಯೋಣ-ಎಂದರೆ ; ಪ್ರಜ್ಞೆ ತಪ್ಪುವವರೆಗೆ. ಆ-ಲಯಂ-ಪ್ರಪಂಚದಲ್ಲಿ ಪ್ರಜ್ಞೆತಪ್ಪಿಸುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೇಕ ವಸ್ತುಗಳಿವೆ. ಆದರೆ ಭಾಗವತರಸವನ್ನು ಕುಡಿದು ಪ್ರಜ್ಞೆತಪ್ಪುವವು ದಾದರೆ ಅದರ ಆನಂದವು ಎಷ್ಟೆಂಬುದನ್ನು ಅನುಭವಿಸಬೇಕು. ಲಯ ಪರ್ಯಂತ ಕುಡಿಯಿರಿ ಅಂದರೆ-ದೇಹವು ಬಿದ್ದುಹೋಗುವವರೆಗೂ ಕುಡಿಯಿರಿ. ದೇಹದ ಪತನವಾದ ಮೇಲೆ ಪುನಃ ದೇಹಪ್ರಾಪ್ತಿಯಿಲ್ಲ. ಜನ್ಮಾದಿಗಳೇ ಇರುವುದಿಲ್ಲ. ಈ ಜೀವನದಲ್ಲಿ ಈ ರಸವನ್ನು ಆಸ್ವಾದಿಸುವವರೇ ರಸಿಕರು. ಪರಲೋಕದಲ್ಲಿ ರಸಗ್ರಾಹಿಗಳು, ಭಾವುಕರು-ಇಬ್ಬರೂ ಬನ್ನಿ, ಬನ್ನಿ, ಇದು ಪರಮ ಮಂಗಳಮಯವಾದ ವಸ್ತುವು.

ಶ್ರೀ ಶುಕದೇವರು ಹೇಳುತ್ತಾರೆ :

ಧರ್ಮಃ ಪ್ರೋಜ್ಝಿತಕೈತವೋಽತ್ರ ಪರಮೋ ನಿರ್ಮತ್ಸರಾಣಾಂ ಸತಾಂ
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಮ್ ।
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ
ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ ಶುಶ್ರೂಷುಭಿಸ್ತತ್ಕ್ಷಣಾತ್ ॥

ಈ ಶ್ಲೋಕದಲ್ಲಿ ಧರ್ಮದ ವ್ಯಾಖ್ಯೆಯಿದೆ. ನಿಷ್ಕಪಟವಾದುದೇ. ನಿಷ್ಕಾಮವಾದುದೇ ಧರ್ಮವು. ಜನರು ಧರ್ಮದೊಡನೆಯೂ ಕಪಟವನ್ನು ಹೊಂದಿಸುತ್ತಾರೆ. ಸಣ್ಣನಾಣ್ಯವನ್ನು ಕಾಣಿಕೆಯನ್ನಾಗಿ ಕೊಟ್ಟು ಮಹದೈಶ್ವರ್ಯವನ್ನೇ ಕೇಳಿಕೊಳ್ಳುತ್ತಾರೆ. ಧರ್ಮದಲ್ಲಿರುವ ಈ ಕಾಮನೆಯೂ-ಧರ್ಮಕ್ಕಾಗಿ ಸ್ವಲ್ಪವನ್ನೇ ವ್ಯಯಮಾಡಿ ಹೆಚ್ಚಿಗೆ ಲಾಭಪಡೆಯುವ ಕಾಪಟ್ಯವೂ ಧರ್ಮದ ಪವಿತ್ರತೆಯನ್ನು ಹಾಳುಮಾಡುತ್ತವೆ. ಶ್ರೀಮದ್ಭಾಗವತದಲ್ಲಿ ಧರ್ಮವಿದೆ. ಆದರೆ ಅದು-ಪ್ರೋಜ್ಝಿತಕೈತವ-ಅರ್ಥಾತ್ ಕೈತವರಹಿತ. ಶ್ರೀಧರ ಸ್ವಾಮಿಗಳು ಹೀಗೆ ಬರೆಯುತ್ತಾರೆ :

'ಪ್ರ–ಇತ್ಯುಪಸರ್ಗೇಣ ಮೋಕ್ಷಾಭಿಸಂಧಿರಪಿ ನಿರಸ್ತಾ ।'

ತಾತ್ಪರ್ಯವೇನೆಂದರೆ :-ಧರ್ಮವನ್ನು ಆಶ್ರಯಿಸಬೇಕು. ಆದರೆ ಮೋಕ್ಷ ಪರ್ಯಂತವಾಗಿ ಕಾಮನಾರಾಹಿತ್ಯವಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ–ಎಷ್ಟೋ ಭಕ್ತರು ಆಶ್ರಮಗಳಲ್ಲಿ ಸೇವಕರಾಗಿರುತ್ತಾರೆ. ಭಿಕ್ಷೆಯಿಂದ ಜೀವಿಸುತ್ತಾರೆ. ಯಾವುದೇ ವಿಧವಾದ ಪ್ರತಿಫಲವನ್ನು ಅಪೇಕ್ಷಿಸದೇ ಹಗಲು-ರಾತ್ರಿ ಆಶ್ರಮಕ್ಕಾಗಿ ದುಡಿಯುತ್ತಾರೆ. ಹಾಗೂ ಬೇರೆ ಕಡೆ ಅಲ್ಪ–ಸ್ವಲ್ಪ ಧನಪ್ರಾಪ್ತಿಯಾದರೂ ಆಶ್ರಮಕ್ಕೇ ಕೊಡುತ್ತಾರೆ. ಸೇವೆಯಿಂದ ಮುಕ್ತನಾಗು, ನಿವೃತ್ತಿವೇತನವನ್ನು ತೆಗೆದುಕೋ-ಎಂದರೂ ರಾಮ ! ರಾಮ ! ಅದೆಲ್ಲಾ ನನಗೇಕೆ ? ಎನ್ನುತ್ತಾರೆ. ಇಹ-ಪರಗಳಲ್ಲಿ ಸುಖವನ್ನು ಬಯಸುವವರು ವಿಶ್ರಾಂತಿವೇತನ ಮುಂತಾದುವನ್ನು ಬಯಸುತ್ತಾರೆ. ಇಲ್ಲಿ ಪ್ರೇಮದ ಸ್ವರೂಪವು ಹೇಗಿದೆಯೆಂದರೆ :-ವೇತನವೂ ಬೇಡ ; ಮುಕ್ತಿಯೂ ಸಹ ಬೇಡ-ಎನ್ನುತ್ತಾರೆ. ಇದೇ ಪ್ರೋಜ್ಝಿತಕೈತವ-ಎನ್ನುವ ಪದಕ್ಕೆ ಅರ್ಥ, ಇದರಲ್ಲಿ ಯಾವ ಇಚ್ಛೆಯೂ ಇಲ್ಲ ; ಕಪಟವಿಲ್ಲ ; ಆಸೆಯಿಲ್ಲ. ಇದನ್ನೇ ಪರಮಧರ್ಮವೆನ್ನುತ್ತಾರೆ. "ಅತ್ರ ಪರಮೋ ಧರ್ಮಃ"-ಇದು ಧರ್ಮವಷ್ಟೇ ಅಲ್ಲ ಪರಮಧರ್ಮವು.

ಭಾಗವತದಲ್ಲಿ ಪರಮಧರ್ಮದ ವ್ಯಾಖ್ಯೆಯು ಪದೇ ಪದೇ ಬರುತ್ತದೆ. ಕಾಶಿಯ ಮಹಾಪಂಡಿತರೊಬ್ಬರು ಅತ್ರ ಪರಮಃ-ಎನ್ನುವುದಕ್ಕೆ ಹೀಗೆ ವ್ಯಾಖ್ಯಾನವನ್ನು ಮಾಡಿದ್ದಾರೆ.

ನಾಸ್ತಿ ತ್ರಪಾ ಯೇಷಾಂ ತೇ-ಅತ್ರಪಾಃ-ದಿಗಂಬರಾಃ ಅವಧೂತಾಃ, ಅತ್ರಪಾಃ ರಮಂತೇ ಅಸ್ಮಿನ್ನಿತಿ-ಅತ್ರಪರಮಃ. ಅವಧೂತರು-ದಿಗಂಬರರು ಲಜ್ಜಾ-ಭಯರಹಿತರಾಗಿ ಸಂಚರಿಸುತ್ತಾರೆ. ಅಂತಹವರೂ ಸಹ ಇದರಲ್ಲಿ ವಿಹರಿಸುತ್ತಾರೆ. ಯಾರು ಶುದ್ಧಾಂತಃಕರಣರೋ-ನಿರ್ಮತ್ಸರರೋ-ಅಂತಹ ಸತ್ಪುರುಷರಿಗೆ ಇವರಲ್ಲಿ ತಿಳಿದುಕೊಳ್ಳಬೇಕಾದ ವಾಸ್ತವಿಕವಸ್ತುವಿನ ವರ್ಣನೆಯಿದೆ. ಅತ್ರೈವ ಸಾಕ್ಷಾತ್ ಅಪರೋಕ್ಷಂ ಯದ್ವಸ್ತು–ಅಂತಹ ವಸ್ತುವು ಇಲ್ಲಿ ಸಾಕ್ಷಾದಪರೋಕ್ಷವಾಗಿ ಪ್ರಾಪ್ತವಾಗುತ್ತದೆ. ವಾಸ್ತವಂ ವಸ್ತು-ಎಂದು ಹೇಳಿರುವುದರ ಅಭಿಪ್ರಾಯವನ್ನು ಗಮನಿಸಬೇಕು. ಇದು ಕೇವಲ ಭಾವನಾತ್ಮಕವಲ್ಲದಿರುವುದೇ ವಾಸ್ತವಿಕವಾದ ವಸ್ತುವು. ಅದೇ ಪರಮಾರ್ಥವು. ಇಲ್ಲಿ ಎಂತಹ ವಸ್ತುವಿನ ವರ್ಣನೆಯಿದೆಯೆಂದರೆ, ಯಾವುದರಿಂದ ಸರ್ವಾನರ್ಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ ನಿವೃತ್ತಿಯಾಗುವುದೋ-ತಾಪತ್ರಯೋನ್ಮೂಲನವಾಗಿ 'ಶಿವದಂ'-ಪರಮಾನಂದ ಪ್ರಾಪ್ತಿಯಾಗುವುದೋ-ಅಂತಹ ವಸ್ತುವಿನ ವರ್ಣನೆಯಿದೆ.

ಕೇವಲ ದುಃಖನಿವೃತ್ತಿಯು ನೈಯಾಯಿಕ-ವೈಶೇಷಿಕರು ಪ್ರತಿಪಾದಿಸುವ ಮೋಕ್ಷದಲ್ಲಿಯೂ ಇದೆ. ಜೈನ-ಬೌದ್ಧಸಂಮತವಾದ ಮುಕ್ತಿಯಲ್ಲಿಯೂ ದುಃಖನಿವೃತ್ತಿಯಿದೆ. ಆದರೆ ಇಲ್ಲಿ ಹೇಳುವುದೇನೆಂದರೆ :-ಎಲ್ಲ ಅನರ್ಥಗಳ ನಿವೃತ್ತಿಯಾಗಿ ಪರಮಾನಂದಪ್ರಾಪ್ತಿ. ಅದೇ ಇಲ್ಲಿಯ ವಿಶೇಷ. ಇಂತಹ ಭಾಗವತವು ವ್ಯಾಸಮಹಾಮುನಿಗಳಿಂದ ವರ್ಣಿಸಲ್ಪಟ್ಟಿದೆ. ಇದರಿಂದ ಕರ್ತೃವಿನ ಪವಿತ್ರತೆಯು ಹೇಳಲ್ಪಟ್ಟಿತು. ಧರ್ಮದ ವಿಲಕ್ಷಣ ಸ್ವರೂಪವು ತೋರಿಸಲ್ಪಟ್ಟಿತು. ಅಧಿಕಾರಿಯ ವೈಲಕ್ಷಣ್ಯವೂ ಹೇಳಲ್ಪಟ್ಟಿತು.

ವ್ಯಾಸೋ ನಾರಾಯಣಃ ಪ್ರೋಕ್ತಃ । ವ್ಯಾಸನೇ ನಾರಾಯಣನು. ಅವನೇ ಮಹಾಮುನಿಯು, ಕಿ ವಾ ಪರೈಃ ಸಾಧನೈಃ, ಶಾಸ್ತ್ರೈರ್ವಾ ಕಿಂ ಪ್ರಯೋಜನಂ. ಈಶ್ವರಃ ಸದ್ಯಃ ಹೃದಿ ಅವರುಧ್ಯತೇ-ಭಗವಂತನು ಕೂಡಲೇ ಹೃದಯಾಧಿಷ್ಠಿತನಾಗುತ್ತಾನೆ. ಬನ್ನಿ ! ಭಾಗವತಕಥಾಶ್ರವಣವನ್ನು ಮಾಡಿ ನಿಮ್ಮ ಹೃದಯಗಳಲ್ಲಿ ಈಶ್ವರಾವರೋಧನವಾಗುವುದನ್ನು ನೋಡಿರಿ. ಯಶೋದೆಯು ಕೃಷ್ಣನನ್ನು ಒರಳಿಗೆ ಕಟ್ಟಿಹಾಕಿದಂತೆ. ಈಶ್ವರನು ನಿಮ್ಮ ಹೃದಯಗಳಲ್ಲಿ ಬಂದಿಯಾಗುವನು. ಇದು ಕೇವಲ ಫಲಶ್ರುತಿಯೆಂದು ತಿಳಿಯಬಾರದು. ಹೃದಯದಲ್ಲಿ ಭಗವತ್ಕಥಾರಸಾಸ್ವಾದನೆಯ ಇಚ್ಛೆಯು ಪ್ರಾರಂಭವಾದೊಡನೆಯೇ ಭಗವಂತನು ಬಂದು ಆಸೀನನಾಗುವನು. ನಿಮಗೆ ನೀರು ಕುಡಿಯುವ ಇಚ್ಛೆಯು ಬಂದೊಡನೆಯೇ ನೀರಿನ ನೆನಪು ಬರುವುದೋ ಇಲ್ಲವೋ ? ಸ್ತ್ರೀ ಸಹವಾಸವು ಬೇಕೆಂದು ಇಚ್ಛೆಯುದಿಸಿದೊಡನೆಯೇ ನಿಮ್ಮ ಹೃದಯದಲ್ಲಿ ಸ್ತ್ರೀಯು ಬಂದು ಕೂರುವಳೋ ಇಲ್ಲವೋ? ಆದರೆ ನೀರು ಜಡವಸ್ತು ; ಬಯಸಿದ ಮಾತ್ರದಿಂದ ಬರುವುದಿಲ್ಲ. ಸ್ತ್ರೀಯು ದೂರದಲ್ಲಿರುತ್ತಾಳೆ ; ಬೇಗ ಬರುವುದಿಲ್ಲ. ಅವರ ಆಭಾಸವು ಮಾತ್ರ ಬರುವುದು. ಈಶ್ವರನಾದರೋ-ಜಡನಲ್ಲ ; ದೂರದಲ್ಲಿಯೂ ಇಲ್ಲ. ಈಶ್ವರ ಪ್ರಾಪ್ತೀಚ್ಛೆಯು ಮೂಡಿದೊಡನೆಯೇ ತದುಪಾಧ್ಯವಚ್ಛಿನ್ನ. ಪರಮಾತ್ಮನು ಇಚ್ಛೆಯಲ್ಲಿ ಪ್ರಕಟನಾಗುತ್ತಾನೆ. ಇಚ್ಛೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿರುವವರೆಗೂ ಇರುತ್ತಾನೆ. ಎಂದೆಂದಿಗೂ ಈಶ್ವರನು ಹೃದಯದಲ್ಲಿ ನೆಲೆಸಿರುವಂತೆ ನೋಡಿಕೊಳ್ಳಬೇಕು. ಇದಕ್ಕೆ ಕಾಲಾವಕಾಶವು ಬೇಕಿಲ್ಲ.

ತತ್ಕ್ಷಣಾತ್-ಅಂದರೆ ಅನ್ಯೇಚ್ಛಾನಿವೃತ್ತಿಪೂರ್ವಕವಾದ ಭಗವದಿಚ್ಛೆಯು ಉದಿಸಿದೊಡನೆಯೇ ಅಥವಾ ಅನ್ಯೇಚ್ಛಾನಿವರ್ತಕವಾದ ಭಗವತ್ಪ್ರಾಪ್ತೀಚ್ಛೆಯು ಹುಟ್ಟಿದೊಡನೆಯೇ ಹೃದಯದಲ್ಲಿ ಈಶ್ವರನು ಅವರುದ್ಧನಾಗುತ್ತಾನೆ.

ಶ್ರೀಮದ್ಭಾಗವತಂ ಪುರಾಣತಿಲಕಂ ಯದ್ವೈಷ್ಣವಾನಾಂ ಧನಂ
ಯಸ್ಮಿನ್ಪಾರಮಹಂಸ್ಯಮೇವಮಮಲಂ ಜ್ಞಾನಂ ಪರಂ ಗೀಯತೇ ।
ಯತ್ರ ಜ್ಞಾನವಿರಾಗಭಕ್ತಿಸಹಿತಂ ನೈಷ್ಕರ್ಮ್ಯಮಾವಿಷ್ಕೃತಂ
ತಚ್ಛೃಣ್ವನ್ ಪ್ರಪಠನ್ ವಿಚಾರಣಪರೋ ಭಕ್ತ್ಯಾ ವಿಮುಚ್ಯೇನ್ನರಃ ॥

ಶ್ರೀಮದ್ಭಾಗವತವು ಪುರಾಣಾದಿಗಳಿಗೆಲ್ಲಾ ತಿಲಕಪ್ರಾಯವು. ವೈಷ್ಣವರ ಶ್ರೇಷ್ಠಧನವು. ಇಲ್ಲಿ ವೈಷ್ಣವರೆಂದರೆ–'ವೈಷ್ಣವ' ಎಂದು ಹೆಸರನ್ನು ಪಡೆದಿರುವ ಒಂದು ಪಂಗಡವಲ್ಲ. ವ್ಯಾಪ್ನೋತೀತಿ–ವಿಷ್ಣುಃ, ವಿಷ್ಣೋರಿಮೇ–ವೈಷ್ಣವಾಃ, ಯದ್ಯಪಿ ಶೈವ–ವೈಷ್ಣವರೆಂಬ ಹೆಸರುಗಳಿಂದ ಒಂದೊಂದು ಪಂಗಡವನ್ನು ಗುರುತಿಸುತ್ತಾರೆ. ಮೇಲು ಕೀಳೆಂಬ ತರ–ತಮಭಾವನೆಗಳನ್ನು ತಾಳುತ್ತಾರೆ. ಅಂತಹ ಕ್ಷುಲ್ಲಕ ಭಾವನೆಗಳಿಗೆ ಇಲ್ಲಿ ಎಡೆಯಿಲ್ಲ. ಕಾರಣವಿಷ್ಟೆ :- ಲೋಕದಲ್ಲಿ ನಿಜವಾದ ಶೈವನೊಬ್ಬನೇ ; ಅವನೇ ನಾರಾಯಣ. ನಿಜವಾದ ವೈಷ್ಣವನೊಬ್ಬನೇ ; ಅವನೇಪರಮೇಶ್ವರ. "ಆವಯೋ ರಂತರಂ ನಾಸ್ತಿ" ಎಂದು ವಿಷ್ಣು–ಶಿವರೇ ಹಲವಾರು ಕಡೆಗಳಲ್ಲಿ ಹೇಳಿರುವುದನ್ನು ನಾವು ಗಮನಿಸಬೇಕು. ಅಂತೆಯೇ ಇಲ್ಲಿ ವೈಷ್ಣವಾನಾಂ–ಎಂದರೆ ಶೈವಾನಾಂ ಚಧನಂ–ಎಂಬುದಾಗಿಯೇ ಅಧ್ಯಾಹೃತಾರ್ಥವು. ಭಾಗವತ ಗ್ರಂಥದಲ್ಲಿ ಶಿವ-ವಿಷ್ಣುಗಳೆಂಬ ಭೇದಭಾವನೆಗೆ ಎಲ್ಲಿಯೂ ಎಳ್ಳಷ್ಟೂ ಅವಕಾಶವಿಲ್ಲ. ಇದರಲ್ಲಿ ಪರಮಹಂಸರಿಗೆ ಪ್ರಿಯವಾದ ಶುದ್ಧಜ್ಞಾನದ ವರ್ಣನೆಯಿದೆ.

ಹಂಸವೆಂದರೆ-ಯಾರಲ್ಲಿ ವಿವೇಕ ಜ್ಞಾನವಿರುವುದೋ-ಯಾರು ನೀರ-

Sri Vidyabharathi Book Centre, Sringeri

CC-0. In Public Domain. Digitized by eGangotri

ಕ್ಷೀರಗಳನ್ನು ಪ್ರತ್ಯೇಕಪಡಿಸಬಲ್ಲರೋ-ಅವರೇ ಹಂಸಶಬ್ದವಾಚ್ಯರು. ವಿವೇಕ ವೆಂದರೆ ವಿಚಿರ್-ಪೃಥಗ್ಭಾವೇ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ವಿವೇಚನಂ-ವಿವೇಕಃ. ಖಂಡ-ಖಂಡವಾಗಿರದೇ ಅಖಂಡ ಅದ್ವಿತೀಯ ಪರ ಮಾತ್ಮಜ್ಞಾನವಿರುವುದೇ ಹಂಸಜ್ಞಾನವು, ಅಂದರೆ ; ದ್ವೈತವನ್ನು ಬಾಧಿಸಿದ ಪ್ರತ್ಯಕ್‌ಚೈತನ್ಯಾಭಿನ್ನಬ್ರಹ್ಮತತ್ತ್ವವೇ "ಪಾರಮಹಂಸ್ಯಜ್ಞಾನ. ಈ ಜ್ಞಾನವೇ ಪರಿಶುದ್ಧವಾದ ಜ್ಞಾನವು. ಇದರಲ್ಲಿ ಭಕ್ತಿ-ಜ್ಞಾನ-ವೈರಾಗ್ಯಗಳ ವಿರೋಧ ವಿಲ್ಲ. ನೈಷ್ಕರ್ಮ್ಯಬ್ರಹ್ಮನ ಆವಿಷ್ಕಾರವಿದೆ. ಇದರ ಶ್ರವಣ–ಪಠನ–ವಿಚಾರ ಗಳಿಂದ ಮಾನವನು ಮುಕ್ತಿಭಾಗಿಯಾಗುತ್ತಾನೆ. ಸ್ವರ್ಗ–ಕೈಲಾಸ–ವೈಕುಂಠಾದಿ ಲೋಕಗಳಲ್ಲಿ ಈ ಕಥಾಸಾರವಿಲ್ಲ. ನೀವೇ ಭಾಗ್ಯವಂತರು, ಭಾಗವತಕಥಾ ರಸಪಾನವನ್ನು ಮಾಡಿರಿ. ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯಬೇಡಿರಿ." ಎಂದು ಶುಕದೇವರು ಭಾಗವತ ಮಹಿಮೆಯನ್ನು ಹೇಳುತ್ತಿರುವಷ್ಟರಲ್ಲಿ :–

ಏವಂ ಬ್ರುವಾಣೇ ಸತಿ ಬಾದರಾಯಣೇ

ಮಧ್ಯೇ ಸಭಾಯಾಂ ಹರಿರಾವಿರಾಸೀತ್ ॥

ಸಭಾಮಧ್ಯದಲ್ಲಿ ಶ್ರೀಹರಿಯ ಸಾಕ್ಷಾತ್ಕಾರವಾಯಿತು. ಅವನೊಡನೆ ಪ್ರಹ್ಲಾದ. ಬಲಿ, ಉದ್ಧವ, ಅರ್ಜುನ–ಇವರೆಲ್ಲರೂ ಇದ್ದರು. ನಾರದರು ಎಲ್ಲರನ್ನೂ ಪೂಜಿಸಿದರು. ಗೌರೀ–ಶಂಕರರೂ ಬಂದರು. ಬ್ರಹ್ಮನೂ ಬಂದನು. ಸರಸ್ವತಿಯು ಬ್ರಹ್ಮನೊಡನೆ ಬರಲಿಲ್ಲ. ವಿಚಾರವಿಷ್ಟೆ :– ಭವಾನಿಯು ಶಂಕರನನ್ನು ಬಿಟ್ಟು ಎಲ್ಲಿಗೂ ಬರುವುದೂ ಇಲ್ಲ ; ಹೋಗುವುದೂ ಇಲ್ಲ. ಆದರೆ ಸರಸ್ವತಿಯು ಬ್ರಹ್ಮನನ್ನು ಬಿಟ್ಟು ಹೋಗಿ ಬರುವುದುಂಟು. ಭಾಗವತದ ಕಥಾಪ್ರಾರಂಭದಲ್ಲಿಯೇ ಸರಸ್ವತಿಯ ಆಗಮನವಾಗಿದ್ದಿತು. ಅವಳು ವಾಗ್ರೂಪಿಣಿಯು ಅವಳಿಲ್ಲದೇ ಏನೂ ನಡೆಯುವುದಿಲ್ಲ. ಆದರಿಂದ ಬ್ರಹ್ಮನು ಒಬ್ಬನೇ ಬಂದನು.

ನಾರಾಯಣನು ಸಿಂಹಾಸನಾಸೀನನಾದನು. ಸಂಕೀರ್ತನವು ಪ್ರಾರಂಭ ವಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಹ್ಲಾದಸ್ತಾಲಧಾರೀ ತರಲಗತಿತಯಾ ಚೋದ್ಧವಃ ಕಾಂಸ್ಯಧಾರೀ
ವೀಣಾಧಾರೀ ಸುರರ್ಷಿಃ ಸ್ವರಕುಶಲತಯಾ ರಾಗಕರ್ತಾರ್ಜುನೋಽ
ಭೂತ್ ।

ದ್ರುತಗತಿಯ ಪ್ರಹ್ಲಾದನು ಕರತಾಳಗಳನ್ನೂ, ಉದ್ಧವನು ಝಲ್ಲರಿಯನ್ನೂ ಬಾರಿಸತೊಡಗಿದರು. ದೇವರ್ಷಿಗಳಾದ ನಾರದರು ವೀಣೆಯನ್ನು ನುಡಿಸುತ್ತಿದ್ದರು. ಗಾನಕಲಾಭಿಜ್ಞನಾದ ಅರ್ಜುನನು ರಾಗಾಲಾಪನೆಗೆ ತೊಡಗಿದನು. ಅಷ್ಟೇ ಅಲ್ಲ ; ಇಂದ್ರನು ಮೃದಂಗವನ್ನು ಬಾರಿಸತೊಡಗಿದನು. ಸನಕಾದಿಗಳು ಜಯ–ಜಯಕಾರಗಳನ್ನು ಮಾಡುತ್ತಿದ್ದರು. ಶುಕದೇವರೇ ಭಾವನಿರ್ದೇಶಕರಾದರು. ಜ್ಞಾನ–ವೈರಾಗ್ಯರು ನಟರಾದರು. ಅಂತಹ ಅಲೌಕಿಕಸಂಕೀರ್ತನದಿಂದ ಹರಿಯು ಸಂತುಷ್ಟನಾದನು. ಹಾಗೂ ಪ್ರಸನ್ನತೆಯಿಂದ ಹೇಳಿದನು :–

"ಮತ್ತೋ ವರಂ ವೃಣುಧ್ವಂ"–ಬೇಕಾದ ವರಗಳನ್ನು ಕೇಳಿರಿ. ಭಗವಂತನ ದಿವ್ಯವಾಣಿಯ ಶ್ರವಣದಿಂದ ಎಲ್ಲರೂ ಪುಲಕಿತರಾದರು. ಗದ್ಗದ ಕಂಠದಿಂದ ಹೇಳಿದರು :–"ದಯಾಮಯನೇ ! ಎಲ್ಲಿ ಭಾಗವತ ಸಪ್ತಾಹವು ನಡೆವರೂ–ಅಲ್ಲಿ ನೀನು ನಿನ್ನ ಪಾರ್ಷದರೊಡನೆ ಉಪಸ್ಥಿತನಿರಬೇಕು. ಹಾಗೂ ಭಕ್ತರನ್ನು ಅನುಗ್ರಹಿಸಬೇಕು. ಇದೇ ನೀನು ಅನುಗ್ರಹಿಸಬೇಕಾದ ವರ." ಅದಕ್ಕೆ ಭಗವಂತನು–ತಥಾಸ್ತು–ಹಾಗೆಯೇ ಆಗಲಿ–ಎಂದು ಹೇಳಿ ಅಂತರ್ಧಾನನಾದನು. ನಾರದರಿಂದ ಸತ್ಕರಿಸಲ್ಪಟ್ಟ ಸರ್ವರೂ ಭಗವತ್ಕಥಾಮೃತಪಾಯಿಗಳಾಗಿ ಸ್ವಸ್ಥಾನಗಳಿಗೆ ತೆರಳಿದರು.

ಭಗವಂತನು ಭಾಗವತದಲ್ಲಿ ಸದಾ ಇರುತ್ತಾನೆ. ಶ್ರೀಶುಕದೇವರ ಆಜ್ಞಾನುಸಾರವಾಗಿ ಭಕ್ತಿ-ಜ್ಞಾನ-ವೈರಾಗ್ಯಗಳೂ ಭಾಗವತದಲ್ಲಿ ಇರುತ್ತವೆ. ಶ್ರೀಮದ್ಭಾಗವತ ಕಥಾಸೇವನೆಯಿಂದ ವಕ್ತಾ, ಶ್ರೋತಾ-ಇಬ್ಬರೂ ಭಗವತ್ಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ಯಾರು ದಾರಿದ್ರ್ಯದುಃಖಜ್ವರಪೀಡಿತರಾಗಿರುವರೋ-ಮಾಯಾಪಿಶಾಚಗ್ರಸ್ತರಾಗಿರುವರೋ-ಸಂಸಾರಸಿಂಧು ನಿಮಗ್ನ

Sri Vidyabharathi Book Centre, Sringeri

CC-0. In Public Domain. Digitized by eGangotri

ರಾಗಿರುವರೋ–ಅವರೆಲ್ಲರ ಕಲ್ಯಾಣಕ್ಕಾಗಿ ಶ್ರೀಮದ್ಭಾಗವತದ ಆವಿರ್ಭಾವವಾಗಿದೆ.

ಶೌನಕಾದಿಗಳು ಸೂತಪುರಾಣಿಕರನ್ನು ಪ್ರಶ್ನಿಸುತ್ತಾರೆ :–

"ಪೂಜ್ಯರೇ ! ಶುಕದೇವರೂ ಹಾಗೂ ಗೋಕರ್ಣರೂ ಭಾಗವತವನ್ನು ಯಾವಾಗ ಶ್ರವಣಮಾಡಿಸಿದರು."

ಸೂತರು ಹೇಳುತ್ತಾರೆ :-"ಬ್ರಾಹ್ಮಣ ಶ್ರೇಷ್ಠರೇ ! ಯದ್ಯಪಿ ಭಾಗವತ ರಸಾಯನವು ಸಮಯಸಾಪೇಕ್ಷವಲ್ಲ ; ಇದು ಅನ್ಯನಿರಪೇಕ್ಷವು. ಸ್ವತಂತ್ರ ರೂಪವಾದುದು. ಆದರೂ ಭಗವಂತನ ಆವಿರ್ಭಾವ–ತಿರೋಭಾವಗಳನ್ನು ವರ್ಣಿಸುವ ರೀತಿಯಲ್ಲಿ ಈ ವಿಚಾರದಲ್ಲಿಯೂ ಮಹಾತ್ಮರು ವರ್ಣಿಸಿರುವ ರೀತಿಯಲ್ಲಿ ನಾನೂ ಹೇಳುತ್ತೇನೆ.

"ಜನ್ಮಾದ್ಯಸ್ಯ ಯತಃ" ಈ ಶ್ಲೋಕದಿಂದ ಪ್ರಾರಂಭವಾಗಿರುವ ಮತ್ತು "ತಂ ನಮಾಮಿ ಹರಿಂ ಪರಮ್" ಈ ಶ್ಲೋಕಪರ್ಯಂತವಿರುವ ಅಖಂಡವಾದ ಸನಾತನವಾದ ಭಾಗವತಶಾಸ್ತ್ರವಿದು. ವ್ಯಾಸರು ಇದರ ಕರ್ತೃಗಳಲ್ಲ. ಸ್ಮರ್ತಾರರಷ್ಟೆ. ಔಪಚಾರಿಕವಾಗಿ ಕರ್ತಾ-ಎಂದು ಹೇಳುತ್ತಾರೆ. ವೇದದಲ್ಲಿ ಶಬ್ದಾನುಪೂರ್ವಿಯು ಇರುವಂತೆ–ಇದರಲ್ಲಿ ಭಾವನೆಯ ಆನುಪೂರ್ವಿಯಿದೆ. ಎಲ್ಲ ಕಲ್ಪಗಳಲ್ಲಿಯೂ ಇದು ಒಂದೇ ರೀತಿಯಿರುತ್ತದೆ. ಭಗವಾನ್ ಶ್ರೀಕೃಷ್ಣನು ಗೋಲೋಕಕ್ಕೆ ತೆರಳಿದ ಬಳಿಕ ಕಲಿಯುಗದಲ್ಲಿ ಮೂವತ್ತು ವರ್ಷಗಳು ಕಳೆದ ನಂತರ ಭಾದ್ರಪದ ಶುಕ್ಲನವಮೀ ತಿಥಿಯಿಂದ ಶ್ರೀ ಶುಕದೇವರು ಕಥಾರಂಭವನ್ನು ಮಾಡಿದರು. ಬಳಿಕ ಇನ್ನೂರು ವರ್ಷಗಳಾದ ಮೇಲೆ ಆಷಾಢನವಮೀ ತಿಥಿಯಿಂದ ಗೋಕರ್ಣನು ಕಥಾರಂಭವನ್ನು ಮಾಡಿದನು. ಅಲ್ಲಿಂದ ಮುಂದೆ ಮೂವತ್ತು ವರ್ಷಗಳು ಕಳೆದ ಮೇಲೆ ಕಾರ್ತಿಕಮಾಸದಲ್ಲಿ ಸನತ್ಕುಮಾರರು ಕಥಾರಂಭವನ್ನು ಮಾಡಿದರು.

ಕಲೌ ಭಾಗವತೀ ವಾರ್ತಾ ಭವರೋಗವಿನಾಶಿನೀ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ಭಾಗವತವು ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯವಾದುದು. ಸಕಲ ಕಲಿಕಲ್ಮಷನಾಶಕವು : ಮುಕ್ತಿಜನಕವು : ಭಕ್ತ್ಯಭಿವರ್ಧಕವು. ಎಲ್ಲರೂ ಭಾಗವತವನ್ನು ಆದರದಿಂದ ಶ್ರವಣಮಾಡಬೇಕು, ಮಾನವನ ಸಕಲ ಕಲ್ಯಾಣಗಳಿಗೂ ಭಾಗವತಶ್ರವಣವೇ ಅತ್ಯಂತ ಶ್ರೇಷ್ಠವಾದುದು.

ಯಮರಾಜನು ತನ್ನ ದೂತರಿಗೆ ಹೇಳುತ್ತಾನೆ :–

ಪರಿಹರ ಭಗ ತ್ಕಥಾಸು ಮತ್ತಾನ್
ಪ್ರಭುರಹಮನ್ಯನೃಣಾಂ ನ ವೈಷ್ಣವಾನಾಮ್ ॥

"ನಾನು ಭಾಗವತಕಥಾರಸಮತ್ತರಿಗೆ ಪ್ರಭುವಲ್ಲ. ವಿಷಯಲೋಲುಪರಿಗೆ ಮಾತ್ರ ನಾನು ಪ್ರಭುವು. ಭಗವದ್ಭಕ್ತರಿಗೆ ಮಾತ್ರ ನಾನು ಪ್ರಭುವಲ್ಲ. ಭಗವದ್ಭಕ್ತರಿಗೆ ಯಾವ ಅಪಚಾರವೂ ನಡೆಯದಂತೆ ನೋಡಿಕೊಳ್ಳಿ.

ಕೊನೆಯದಾಗಿ ಸಂಸಾರಿಗಳಾದ ಮಾನವರಿಗೆ ಹೀಗೆ ಎಚ್ಚರಿಕೆಯನ್ನು ಕೊಡುತ್ತಾ ಬುದ್ಧಿವಾದವನ್ನು ಹೇಳಿದ್ದಾರೆ :–

ಅಸಾರೆ ಸಂಸಾರೇ ವಿಷಯವಿಷಸಂಗಾಕುಲಧಿಯಃ
ಕ್ಷಣಾರ್ಧಂ ಕ್ಷೇಮಾರ್ಥಂ ಪಿಬತ ಶುಕಗಾಥಾತುಲಸುಧಾವ ।
ಕಿಮರ್ಥಂ ವ್ಯರ್ಥಂ ಭೋ ವ್ರಜತ ಕುಪಥೇ ಕುತ್ಸಿತಕಥೇ
ಪರೀಕ್ಷಿತ್ಸಾಕ್ಷೀ ಯಚ್ಛ್ರವಣಗತಮುಕ್ತ್ಯುಕ್ತಿಕಥನೇ ॥

"ಮಾನವರೇ ! ಈ ಸಂಸಾರವು ನಿಸ್ಸಾರವಾದುದು. ವಿಷಯೋಪಭೋಗರೂಪವಾದ ವಿಷದ ಸೇವನೆಯಿಂದ ಜನರ ಬುದ್ಧಿಯು ಹಾಳಾಗಿ ಹೋಗಿದೆ. ನಿಜವಾಗಿಯೂ ಆತ್ಮಕಲ್ಯಾಣಾಪೇಕ್ಷಿಗಳಾಗಿದ್ದರೆ-ಪ್ರತಿದಿನ ಒಂದು ಕ್ಷಣವಾದರೂ ಅಥವಾ ಅರ್ಧ ಕ್ಷಣವಾದರೂ ಭಾಗವತಾಮೃತವನ್ನು ಪಾನ ಮಾಡಿರಿ. ಕುತ್ಸಿತಕುಮಾರ್ಗದಲ್ಲಿ ಏತಕ್ಕೆ ಹೋಗುವಿರಿ ? ದುಃಖದಾಯಕಳಾದ ದುರ್ವಿಚಾರಗಳನ್ನೇಕೆ ಕೇಳುವಿರಿ ? ನಿಮಗೇನಾದರೂ ಕಥಾಶ್ರವಣದ ಫಲದ

Sri Vidyabharathi Book Centre, Sringeri

CC-0. In Public Domain. Digitized by eGangotri

ವಿಷಯದಲ್ಲಿ ಅನುಮಾನ-ಸಂಶಯಗಳಿದ್ದರೆ ಪರೀಕ್ಷಿತನ ಚರಿತ್ರೆಯನ್ನು ಕೇಳಿರಿ. ಅವನೇ ಇದಕ್ಕೆ ಸಾಕ್ಷಿಯು.

ಶ್ರೀಶುಕದೇವರು ರಸಪ್ರವಾಹಮಗ್ನರಾಗಿ ಈ ಕಥೆಯನ್ನು ಹೇಳಿದ್ದಾರೆ. ಕೇಳಿದವರು ವೈಕುಂಠಲೋಕದ ಪ್ರಭುಗಳೇ ಆಗುತ್ತಾರೆ. ಜಗತ್ತಿನಲ್ಲಿ ಶುಕ ವಾಣಿಗಿಂತಲೂ ಪವಿತ್ರವಾದುದು ಮತ್ತೊಂದಿಲ್ಲ. ಸರ್ವಶಾಸ್ತ್ರಸಿದ್ಧಾಂತವಿದು. ಭಾಗವತದ ಹನ್ನೆರಡು ಸ್ಕಂಧಗಳೂ ವೇದ-ಶಾಸ್ತ್ರ-ಪುರಾಣಗಳ ಸಾರವೇ ಆಗಿದೆ. ಭಕ್ತಿಯಿಂದ ಶ್ರವಣ ಮಾಡುವವರು-ಮಾಡಿಸುವವರು ಪರಮಾನಂದ ಭಾಗಿಗಳಾಗುತ್ತಾರೆ. ಪರಮಸತ್ಯವನ್ನು ಆಶ್ರಯಿಸಿದವರಿಗೆ ಸಂಸಾರದಲ್ಲಿ ಯಾವುದೂ ದುರ್ಲಭವಲ್ಲ. ಶ್ರೀಮದ್ಭಾಗವತಾಶ್ರಯವು ಸರ್ವೋತ್ತಮವಾದುದು.

ಇತ್ಯೇವಂ ಪಂಚಮೋಽಧ್ಯಾಯಃ

ಶ್ರವಣವಿಧಿಕಥನವೂ-ಭಾಗವತಮಾಹಾತ್ಮ್ಯವೂ ಮುಗಿದುದು

ಶ್ರೀಕೃಷ್ಣಾರ್ಪಣಮಸ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮಸ್ಕಂಧದ ಪೀಠಿಕೆ

ಶ್ರೀಮದ್ಭಾಗವತ ಮಹಾಪುರಾಣದಲ್ಲಿ ಸರ್ವತ್ರ ಭಗವಂತನೇ ಪ್ರತಿಪಾದ್ಯನೆಂಬುವುದನ್ನು ಪ್ರಸ್ತಾವನೆಯಲ್ಲೂ ವಿವರಿಸಲಾಗಿದೆ.

ಭಗಾಃ ಅಸ್ಮಿನ್ ಸಂತೀತಿ ಭಗವಾನ್. ಭಗಗಳೆಂದರೆ = ಜ್ಞಾನ ವೈರಾಗ್ಯ, ಧರ್ಮ, ಐಶ್ವರ್ಯ, ಯಶಸ್ಸು, ಶ್ರೀ–ಇವುಗಳ ನಿತ್ಯನಿವಾಸ ಭೂತನಾದವನೇ 'ಭಗವಾನ್'. ಭಗವಂತನನ್ನು ಪ್ರತಿಪಾದಿಸುವುದರಿಂದ ಈ ಮಹಾಪುರಾಣದ ಹೆಸರು 'ಭಾಗವತ'.

ಇದರಲ್ಲಿ ಹನ್ನೆರಡು ಸ್ಕಂಧಗಳಿವೆ. ಮೊದಲಿನ ಎರಡು ಸ್ಕಂಧಗಳಲ್ಲಿ 'ಜ್ಞಾನ', ಮೂರು ನಾಲ್ಕರಲ್ಲಿ 'ವೈರಾಗ್ಯ'. ಐದು ಆರರಲ್ಲಿ 'ಧರ್ಮ', ಏಳು ಎಂಟರಲ್ಲಿ 'ಐಶ್ವರ್ಯ'. ಒಂಭತ್ತು ಹತ್ತರಲ್ಲಿ 'ಯಶಸ್ಸು', ಹನ್ನೊಂದು ಹನ್ನೆರಡರಲ್ಲಿ 'ಶ್ರೀ' ಹೀಗೆ ನಿರೂಪಣೆಯು ಮಾಡಲ್ಪಟ್ಟಿದೆ.

ಮಂಗಳಾಚರಣೆಯ ಶ್ಲೋಕದಲ್ಲಿ ಗಾಯತ್ರೀ–ಸೃಷ್ಟಿ–ಶ್ರುತಿ ಹಾಗೂ ಬ್ರಹ್ಮಸೂತ್ರಗಳ ಸಾರವು ಬರುತ್ತದೆ. ಬ್ರಹ್ಮಸೂತ್ರಗಳಲ್ಲಿ ಎರಡನೆಯ ಸೂತ್ರವಾದ '**ಜನ್ಮಾದ್ಯಸ್ಯ ಯತಃ**' ಈ ಸೂತ್ರವನ್ನೇ ಮೊದಲು ಉದಾಹರಿಸಿದ್ದಾರೆ.

ಇದರಿಂದ ನಾವು ತಿಳಿದುಕೊಳ್ಳಬಹುದು : ವೇದೋಪನಿಷತ್–ಬ್ರಹ್ಮಸೂತ್ರಗಳ ಪರಮತತ್ತ್ವವನ್ನೇ ಶ್ರೀಮದ್ಭಾಗವತವೂ ಪ್ರತಿಪಾದಿಸುತ್ತದೆ. ವಿಶೇಷವೆಂದರೆ : ಸೂತ್ರಕಾರರು **ಜನ್ಮಾದ್ಯಸ್ಯ ಯತಃ** ಹೇಳುವುದಕ್ಕಿಂತ ಮುಂಚೆ **ಅಥಾತೋ ಬ್ರಹ್ಮಜಿಜ್ಞಾಸಾ** ಹೇಳಿ ಅಧಿಕಾರವಿಶಿಷ್ಟನಾದವನಿಗೆ ಬ್ರಹ್ಮಜ್ಞಾನೋಪದೇಶವೆಂದು ಹೇಳಿದ್ದಾರೆ. ಭಾಗವತಕಾರರು ಅಧಿಕಾರ ವೈಶಿಷ್ಟ್ಯವನ್ನು ತಿಳಿಸದೇ **ಜನ್ಮಾದ್ಯಸ್ಯ ಯತಃ** ಉಲ್ಲೇಖಿಸಿದ್ದಾರೆ. ಭಗವಂತನಲ್ಲಿ ಪ್ರೇಮವನ್ನಿಡಲು–ಭಗವತ್ಸೇವೆಯನ್ನು ಮಾಡಲು ಅಧಿಕಾರದ ಪ್ರಶ್ನೆಯೇ ಏಳುವುದಿಲ್ಲ. ಅದರಿಂದೆ ಇದರಲ್ಲಿ '**ಅಥಾತಃ**' ಪ್ರಯೋಗವಿಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನು ಅರೂಪನು, ಚಿದಾತ್ಮನು. ಆಕಾಶದಲ್ಲಿ ಮೇಘಗಳು ತೋರುವಂತೆ–ಪರಮಾತ್ಮನಲ್ಲಿ ಪ್ರಾಕೃತರೂಪಗಳೆಲ್ಲವೂ ತೋರುತ್ತವೆ. ಅವು ಅಜ್ಞಾನದಿಂದ ಪರಮಾತ್ಮನಲ್ಲಿ ಆರೋಪಿತವಾಗಿವೆ. ಬ್ರಹ್ಮಾತ್ಮೈಕ್ಯ ಬೋಧ ದಿಂದ ಸ್ಥೂಲ-ಸೂಕ್ಷ್ಮ-ಕಾರ್ಯ–ಕಾರಣಗಳ ನಿಷೇಧವಾದರೆ ವಸ್ತುತತ್ತ್ವದ ಸಾಕ್ಷಾತ್ಕಾರವಾಗುವುದು.

ಹೀಗೆ ಮೊದಲಿನ ಮೂರು ಅಧ್ಯಾಯಗಳಲ್ಲಿ ಗ್ರಂಥೋಪಕ್ರಮವು ಮಾಡಲ್ಪಟ್ಟಿದೆ. ಸೂತ-ಶೌನಕಸಂವಾದವು ನೈಮಿಷಾರಣ್ಯಕ್ಷೇತ್ರದಲ್ಲಿ ಯಜ್ಞಾಂ ಗದ ರೂಪದಲ್ಲಿ ನಡೆಯುತ್ತದೆ.

ಯಜ್ಞಾನುಷ್ಠಾನದಲ್ಲಿ ನಿರತರಾಗಿದ್ದ ಶೌನಕಾದಿಗಳು ವಿರಾಮದ ವೇಳೆ ಯಲ್ಲಿ ಪುರಾಣಶ್ರವಣವನ್ನು ಮಾಡುತ್ತಾರೆ. ಇವರಿಗೆ ಶ್ರವಣವು ಮುಖ್ಯವಲ್ಲ ಯಜ್ಞಾಚರಣೆಯೇ ಮುಖ್ಯವು, ಋಷಿಗಳು ಯಜಮಾನರಾದರೆ ವಕ್ತಾ ಸೂತರು. ಶ್ರೋತೃಗಳಲ್ಲಿ ನಾವು ಶ್ರೇಷ್ಠರೆಂಬ ಅಭಿಮಾನವೂ ಇದೆ. ಈ ಸ್ಥಿತಿಯಲ್ಲಿ ಭಾಗವತಶ್ರವಣವು ನಿಧಾನವಾಗಿ ಫಲಪ್ರದವಾಗುತ್ತದೆ. ಮೊದಲಿನ ಮೂರು ಅಧ್ಯಾಯಗಳ ಸಾರವಿದು.

ನಾಲ್ಕು-ಐದು-ಆರನೇ ಅಧ್ಯಾಯಗಳಲ್ಲಿ ನಾರದ-ವ್ಯಾಸರ ಸಂವಾದವಿದೆ.

ವ್ಯಾಸರು ಭಗವಂತನ ಕಲಾವತಾರಿಗಳು, ಲೋಕಹಿತಚಿಂತಕರು. ತಮ್ಮ ಶಕ್ತಿಮೀರಿ ಲೋಕಕಲ್ಯಾಣಕ್ಕಾಗಿ ಶ್ರಮಿಸಿದರು. ಆದರೂ ಆತ್ಮ ಸಂತೋಷವಿಲ್ಲ ಅವರನ್ನು ಸಮಾಧಾನಪಡಿಸಲು ಭಗವತ್ಸ್ವರೂಪೀ ನಾರದರು ಬರುತ್ತಾರೆ. ಇಬ್ಬರಲ್ಲಿಯೂ ಅಭಿಪ್ರಾಯವಿನಿಮಯವು ನಡೆಯುತ್ತದೆ. ನಿರ್ಣಯಿಸಿಕೊಳ್ಳು ತ್ತಾರೆ= ಅಲ್ಪಜ್ಞನಾದ, ಅಲ್ಪಶಕ್ತಿಮಾನ್ ಆದ ಜೀವನು ತನ್ನ ಪ್ರಯತ್ನ ದಿಂದ ದೊಡ್ಡ ವಿದ್ಯಾವಂತನಾಗಿರಬಹುದು. ಕರ್ಮಠನಾಗಿರಬಹುದು. ಆದರೆ ಈ ಸಂಸಾರವನ್ನು ದಾಟಲಾರ. ಪರಿಪೂರ್ಣತಮನಾದ ಪ್ರಭುವಿನ ವರ್ಣನೆ–ಶ್ರವಣ ಚಿಂತನ ಇವುಗಳನ್ನು ಬಿಟ್ಟರೆ ಸಾಂಸಾರಿಕ ಚಿಂತಾದುಃಖಗಳಿಂದ ಮುಕ್ತ ನಾಗಲು ಉಪಾಯಾಂತರವಿಲ್ಲ.

ನಾರದರು ಆತ್ಮೋದಾಹರಣೆಯಿಂದಲೂ ಇದನ್ನು ವ್ಯಕ್ತಪಡಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಗಳಾಚರಣೆಯ ಶ್ಲೋಕದಲ್ಲಿ ಭವವತ್ತತ್ತ್ವದ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ. ಯಾರಿಂದ ಈ ದೃಶ್ಯಮಾನನಾಮರೂಪಾತ್ಮಕ ಪ್ರಪಂಚದ ಜನ್ಮ-ಸ್ಥಿತಿ-ಲಯಗಳು ಆಗುತ್ತವೆಯೋ—ಅವನೇ ಭಗವಾನ್. ಅವನು ಜನ್ಮ-ಸ್ಥಿತಿ-ಲಯರಹಿತನು. ಜಗತ್ತಿನ ಉತ್ಪತ್ತಿಯಾಗುತ್ತದೆ. ಸತ್ಯವು ಉತ್ಪನ್ನವಾಗುವುದಿಲ್ಲ. ಸ್ಥಿತಿ-ಲಯಗಳು ಜಗತ್ತಿಗುಂಟು. ಸತ್ಯಕ್ಕಿಲ್ಲ. ಸತ್ಯವು ಜಗತ್ತನ್ನು ಬಿಟ್ಟಿರುತ್ತದೆ. ಆದರೆ ಸತ್ಯರಹಿತಜಗತ್ತು ಇರಲಾರದು. ವೇದಗಳೂ ಅವನಿಂದಲೇ ಪ್ರಕಾಶಿಸಲ್ಪಡುತ್ತವೆ. ವೇದಗಳು ಅಪೌರುಷೇಯಗಳು.

ಪರಮಾತ್ಮನಲ್ಲಿ ಮಾಯಾ—ಛಾಯಾ ಒಂದೂ ಇಲ್ಲ. ಅವನು ಪ್ರತ್ಯಕ್ ಚೈತನ್ಯಾಭಿನ್ನನು.

ಈ ರೀತಿ ವಸ್ತುನಿರ್ದೇಶನಾತ್ಮಕ ಮಂಗಳಾಚರಣೆಯಿಂದ ಶ್ರೀಮದ್ಭಾಗವತವು ಪ್ರಾರಂಭಿಸಲ್ಪಡುತ್ತದೆ.

ಶ್ರೀಕೃಷ್ಣಸಂಬಂಧಿ ಪ್ರಶ್ನೋತ್ತರಗಳಿಂದ ಹೃದಯವು ಶುದ್ಧವಾಗುತ್ತದೆ. ಧರ್ಮದಿಂದ ಅಂತಃಕರಣವು ಶುದ್ಧವಾಗುತ್ತದೆ. ಭಗವತ್ಸಂಬಂಧಿ ಪ್ರಶ್ನೋತ್ತರದಿಂದ ಅಂತಃಕರಣಶುದ್ಧಿಯೊಡನೆಯೇ ಭಗವಂತನಲ್ಲಿ ಅಹೈತುಕೀ ಭಕ್ತಿಯು ಮೂಡುತ್ತದೆ ಹಾಗೂ ಭಗವತ್ತತ್ತ್ವದ ಜ್ಞಾನವಾಗುತ್ತದೆ. ಭಕ್ತಿಯು ಜ್ಞಾನ-ವೈರಾಗ್ಯಗಳ ಜನನೀ. ವಿಧಿಗೆ ಅನುಗುಣವಾಗಿ ಅನುಷ್ಠಾನಮಾಡಿದ ಧರ್ಮದಿಂದ ಭಗವದ್ಭಕ್ತಿಯು ಪ್ರಾಪ್ತವಾಗದಿದ್ದರೆ ಅದು ಕೇವಲ ಶ್ರಮವೆಂದೇ ತಿಳಿದುಕೊಳ್ಳಬೇಕು.

ಧರ್ಮಾಚರಣೆಗೆ ಫಲವು ಮೋಕ್ಷವೇ ಹೊರತು ಧನಾದಿಪ್ರಾಪ್ತಿಯಲ್ಲ. ಜೀವಿಗಳ ಜೀವನದ ಸಫಲತೆಯು ತತ್ತ್ವವಿಚಾರವೇ ಹೊರತು ಕರ್ಮವಲ್ಲ.

ಭಗವಾನ್—ಪರಮಾತ್ಮಾ—ಬ್ರಹ್ಮ ಈ ಪದಗಳಿಂದಲೂ ತತ್ತ್ವವನ್ನೇ ಕರೆಯುತ್ತಾರೆ. ಆದರೂ ಅದರ ವಾಸ್ತವಿಕ ಸ್ವರೂಪವೆಂದರೆ ಜ್ಞಾತೃಜ್ಞೇಯ ವಿಭಾಗರಹಿತ ಅದ್ವಯಜ್ಞಾನವು. ತತ್ತ್ವಜ್ಞಾನಾನಂತರ ಹೃದಯಗ್ರಂಥಿ ಭೇಧನವೂ, ಸಂಪೂರ್ಣ ಸಂಶಯಚ್ಛೇದನವೂ, ಅನಾದಿಪರಂಪರೆಯಿಂದ ಸಂಚಿತವಾದ ಕರ್ಮರಾಶಿಯ ಕ್ಷಯವೂ ಆಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಸರು ದೀರ್ಘಕಾಲ ಸಮಾಧಿಯ ಮೂಲಕ ಪರಮಾತ್ಮನ ಸ್ವಭಾವ-ಸ್ವರೂಪಗಳನ್ನು ಚಿಂತಿಸಿದರು.

ಚಿಂತನೆಯಿಂದಲೇ ಚಿಂತಾನಿವೃತ್ತಿಯಾಗಬೇಕು. ಆದರಿಂದ ನಾರದ-ವ್ಯಾಸರ ಸಂವಾದವು ದೀರ್ಘಕಾಲಿಕ ಶ್ರವಣ-ಕೀರ್ತನ-ಸ್ಮರಣಾದಿಗಳಲ್ಲಿ ಪರ್ಯವಸಾನವಾಗುತ್ತದೆ. ವ್ಯಾಸರಿಗೂ ಲೋಕಚಿಂತೆ-ನಾರದರಿಗೂ ಅಷ್ಟೆ. ಇಲ್ಲಿಯೂ ಶ್ರವಣವು ತತ್ಕಾಲದಲ್ಲಿಯೇ ಫಲವನ್ನು ಕೊಡುವುದಿಲ್ಲ. ಕಾಲಾನಂತರದಲ್ಲಿ ಫಲಪರ್ಯವಸಾನವಾಗುತ್ತದೆ.

ಶುಕದೇವ–ಪರೀಕ್ಷಿತರದು ಮೂರನೆಯ ಸಂವಾದ. ಶ್ರೀಮದ್ಭಾಗವತದ ಮುಖ್ಯವಕ್ತಾ ಶ್ರೀಶುಕದೇವರು. ಮುಖ್ಯಶ್ರೋತಾ ರಾಜಾ ಪರೀಕ್ಷಿತ. ಹನ್ನೆರಡು ಅಧ್ಯಾಯಗಳಲ್ಲಿ ರಾಜಾ ಪರೀಕ್ಷಿತನ ವರ್ಣನೆಯೂ ಒಂದು ಅಧ್ಯಾಯದಲ್ಲಿ ಶುಕರ ವರ್ಣನೆಯೂ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತದರ್ಶನ

ಶ್ರೀ ಶ್ರೀ ಅಖಂಡಾನಂದ ಸರಸ್ವತಿಗಳು ಅನುಗ್ರಹಿಸಿರುವ ಪ್ರಕಾರ

" ಪ್ರಸ್ತಾವನಾ "

ಭಗವಾನ್ ನಾರಾಯಣನು, ಸೃಷ್ಟಿಯ ಪ್ರಾರಂಭದಲ್ಲಿ ಕಿಂಕರ್ತವ್ಯತಾ ವಿಮೂಢನಾಗಿದ್ದ ಬ್ರಹ್ಮನಿಗೆ ಜ್ಞಾನಪ್ರದೀಪವನ್ನಿತ್ತನು.

ಅನಂತರ ಬ್ರಹ್ಮನಿಂದ ನಾರದರಿಗೂ, ನಾರದರಿಂದ ವ್ಯಾಸರಿಗೂ. ವ್ಯಾಸ ರಿಂದ ಪರೀಕ್ಷಿತನಿಗೂ ಈ ಅಧ್ಯಾತ್ಮಜ್ಞಾನಪ್ರದೀಪವು ಕೊಡಲ್ಪಟ್ಟಿತು.

ಶ್ರೀಮದ್ಭಾಗವತದಲ್ಲಿ ನಾಲ್ಕಾರು ಕಡೆಗಳಲ್ಲಿ ಭಗವಾನ್ ಶ್ರೀಕೃಷ್ಣನನ್ನು ಅಧ್ಯಾತ್ಮಪ್ರದೀಪನೆಂದು ಕರೆದಿದೆ. ಅಂದರೆ-ಶ್ರೀಮದ್ಭಾಗವತಕ್ಕೂ ಶ್ರೀಕೃಷ್ಣ ನಿಗೂ ಭೇದವಿಲ್ಲ.

ತಾತ್ಪರ್ಯವಿಷ್ಟೆ = **ಭಗವತ್ಪ್ರಕಾಶಕನೂ "ಭಗವಂತನೇ."** ಭಗವಂತನು ಸ್ವಪ್ರಕಾಶಕನು ; ಸ್ವಮಹಿಮಾಪ್ರತಿಷ್ಠಿತನು. ಭಾಗವತವನ್ನು ಶ್ರವಣಮಾಡು ವವರು **ಭಗವತ್**ಸ್ವರೂಪಿಗಳೇ ಆಗುತ್ತಾರೆ. ಭಗವಂತನು ಭಾಗವತದ ಮೂಲಕ ಆವಿರ್ಭವಿಸಿ ಆಯಾಯಾ ವಕ್ತಾರರ ರೂಪದಲ್ಲಿ ತಾನೇ ಆವಿಷ್ಟನಾಗು ವನು. ಶ್ರೀಮದ್ಭಾಗವತರೂಪದಲ್ಲಿ ಬ್ರಹ್ಮ-ನಾರದ-ವ್ಯಾಸ-ಶುಕದೇವರ ರೂಪದಲ್ಲಿ ಪ್ರಕಟನಾಗಿರುವವನು ಆ ನಾರಾಯಣನೇ. ನಾರಾಯಣನ ಕರು ಣೆಯ ರಹಸ್ಯವು ಪ್ರಕಟವಾಗಬೇಕಾದರೆ ಚಿತ್ತದಲ್ಲಿ ಸ್ನೇಹ-ಕರುಣೆಗಳ ಸಮಾ ವೇಶವಾಗಬೇಕು,ನಾರಾಯಣನು ಕರುಣೆಯಿಂದ ಶುಕನ ರೂಪದಲ್ಲಿ ಆವಿರ್ಭವಿಸಿ ಶಾಪಗ್ರಸ್ತನಾದ ಪರೀಕ್ಷಿತನಿಗೆ ಭಾಗವತವನ್ನು ಬೋಧಿಸಿ ಅವನನ್ನು ಉದ್ಧರಿ ಸಿದನು. ಭಾಗವತದ ಶ್ರವಣದಿಂದ ಪರೀಕ್ಷಿತನು ಬ್ರಹ್ಮನಿರ್ವಾಣವನ್ನು ಪಡೆ ದನು. ಯದ್ಯಪಿ ಭಾಗವತವನ್ನು ಹೇಳುವವರೂ, ಕೇಳುವವರೂ ಬಹಳ ಮಂದಿ ಇದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಲ್ಲಿ ಮುಖ್ಯವಕ್ತಾ–"ಶುಕ."

ಮುಖ್ಯಶ್ರೋತಾ–"ಪರೀಕ್ಷಿತ."

ಬ್ರಹ್ಮನು ಸೃಷ್ಟಿಯ ನಿರ್ಮಾಣಕ್ಕಾಗಿ ಭಾಗವತವನ್ನು ಕೇಳಿದನು. ನಾರದರು ಭಕ್ತಿಭಾವದ ವಿಸ್ತಾರಕ್ಕಾಗಿ ಕೇಳಿದರು. ವ್ಯಾಸರು ಲೋಕಕಲ್ಯಾಣಕ್ಕಾಗಿ ಕೇಳಿದರು. ಶೌನಕಾದಿಗಳು ದೀರ್ಘಕಾಲೀನವಾದ ಯಜ್ಞಾಚರಣೆಯ ಅವಕಾಶದಲ್ಲಿ ಕರ್ಮಪೂರ್ತಿಗಾಗಿ ಭಾಗವತವನ್ನು ಶ್ರವಣಮಾಡಿದರು.

ರಾಜರ್ಷಿ ಪರೀಕ್ಷಿತನಾದರೋ ಪರಮಾತ್ಮಾನುಭವಕ್ಕಾಗಿ ಶ್ರವಣ ಮಾಡಿದನು.

ಬ್ರಹ್ಮನು	ರಜೋಗುಣಾವತಾರಿ
ನಾರದರು	ಮಾನಸಾವತಾರಿಗಳು
ವ್ಯಾಸರು	ವಿಷ್ಣುಕಲಾವತಾರಿಗಳು
ಶುಕರು	ಸ್ಫೂರ್ತ್ಯವತಾರಿಗಳು

ಇಂತಹವರಿಂದ ರಾಜರ್ಷಿ ಪರೀಕ್ಷಿತನು ಆತ್ಮಕಲ್ಯಾಣಕ್ಕಾಗಿ ಭಾಗವತವನ್ನು ಶ್ರವಣಮಾಡಿದನು.

ಯದ್ಯಪಿ ಶೌನಕಾದಿಗಳು ಶ್ರವಣಮಾಡಿದರೂ ಅವರಿಗೆ ಕಾರ್ಯ ಫಲ ಪ್ರಾಪ್ತಿಯಾಯಿತೇ ಹೊರತು–ಮೋಕ್ಷದಲ್ಲಿ ಅಥವಾ ಭಗವಲ್ಲೀಲಾಮೃತಸೇವನೆಯಲ್ಲಿ ಪ್ರವೇಶವು ದೊರಕಲಿಲ್ಲ.

ಪರೀಕ್ಷಿತನು ಶ್ರವಣಮಾತ್ರದಿಂದಲೇ ಮುಕ್ತನಾದನು. ಆದರಿಂದ ಪರೀಕ್ಷಿತನೇ ಮುಖ್ಯಶ್ರೋತಾ. ಇವನ ಶ್ರವಣನಿಷ್ಠೆಯು ಸಂಶಯಾತೀತವಾದುದು.

ಶುಕದೇವರು ಅವಧೂತಶಿರೋಮಣಿಗಳು. ನಾರಾಯಣನಂತೆ ವೈಕುಂಠ ವಿಹಾರಿಗಳಲ್ಲ–ಹಾಗೂ ಲಕ್ಷ್ಮೀಸೇವಿತಪದಾರವಿಂದಗಳುಳ್ಳವರಲ್ಲ.

ಬ್ರಹ್ಮನಂತೆ ಸೃಷ್ಟಿನಿರ್ಮಾಪಕರೂ ಅಲ್ಲ. ವೀಣಾಪಾಣಿ ನಾರದರಂತೆ ಪ್ರಚಾರಕ-ಪ್ರಸಾರಕರೂ ಅಲ್ಲ. ವ್ಯಾಸರಂತೆ ಲೋಕಸಂಗ್ರಹಿಗಳೂ ಅಲ್ಲ.

ಅವಧೂತಶಿರೋಮಣಿಗಳಾದ ಶುಕರು ಗೂಢಭಾವದಿಂದ ಮೂಢರಂತೆ ತಿರುಗುವವರು. ಅವರು ಮಹಾಯೋಗಿಗಳು, ಸಮದರ್ಶಿಗಳು, ಹಾಗೂ ಬ್ರಹ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಷ್ಠರು. ಅವಿದ್ಯಾ-ನಿದ್ರಾದಿಗಳು ಅವರ ಬಳಿ ಸುಳಿಯುತ್ತಲೂ ಇರಲಿಲ್ಲ, ಅವರಲ್ಲಿ ಸ್ತ್ರೀಪುರುಷ ಭೇದಜ್ಞಾನವೇ ಇರಲಿಲ್ಲ. ಉನ್ಮತ್ತರಂತೆ ಮೂಕರಂತೆ, ಜಡರಂತೆ ತಿರುಗುತ್ತಿದ್ದರು. ಸದಾ ಆತ್ಮಾರಾಮರಾಗಿ ಮೌನಿಗಳಾಗಿರುತ್ತಿದ್ದರು.

ಪ್ರಥಮಸ್ಕಂಧದ 19ನೇ ಅಧ್ಯಾಯದಲ್ಲಿ ಶುಕರ 38 ಗುಣಗಳನ್ನು ಹೇಳುತ್ತಾರೆ. ಇಂತಹ ಮಹನೀಯರ ಮುಖಾರವಿಂದದಿಂದ ಭಾಗವತಶ್ರವಣವನ್ನು ಮಾಡುವ ಮಹಾಭಾಗ್ಯವು ಪರೀಕ್ಷಿತನದಾಗಿತ್ತು. ಭಾಗವತವೆಂದರೆ ವೇದಸಾರವು. ಮಾನಸಿಕ ಗುಪ್ತಾತಿಗುಪ್ತರಹಸ್ಯಗಳನ್ನು ಪ್ರಕಟಗೊಳಿಸಿರುವ ಅಧ್ಯಾತ್ಮದೀಪವು ಸರ್ವಪುರಾಣಗಳಲ್ಲಿಯೂ ಶ್ರೇಷ್ಠತಮವಾದ ಪುರಾಣವು. ಇದರಲ್ಲಿ ತತ್ತ್ವಜಿಜ್ಞಾಸುಗಳಿಗೆ ಪರಮಕಲ್ಯಾಣಕಾರಿಯಾದ ತತ್ತ್ವಜಿಜ್ಞಾಸೆಯಿದೆ. ಸಾಧನಾದೃಷ್ಟಿಯಿಂದ ನಿಷ್ಕಾಮಕರ್ಮಯೋಗಿಗಳಿಗೆ ಭಕ್ತಿಯೋಗದ, ಭಾಗವತಧರ್ಮದ ವಿವರಣೆಯಿದೆ. ಬ್ರಹ್ಮಜ್ಞಾನಪ್ರಾಪ್ತಿಗೆ ಸರ್ವೋಪಾಯಗಳಲ್ಲಿಯೂ ಭಕ್ತಿಯೋಗವು ಸರ್ವಶ್ರೇಷ್ಠವಾದುದು. ಭಕ್ತಿಯ ವೈಭವದಿಂದ ಸರ್ವತ್ರ ಭಗವದ್ದರ್ಶನವಾಗುತ್ತದೆ. ಹಾಗೂ ಅದ್ವೈತಜ್ಞಾನವು ಮೂಡುತ್ತದೆ. ದುರವಗಾಹ್ಯವಾದ ಸಂಸಾರದಲ್ಲಿ ಮಗ್ನರಾಗಿರುವವರ ದುಃಖನಿವಾರಣೆಗಾಗಿ ಭಕ್ತಿಯೋಗದ ವೈಭವವು ವರ್ಣಿಸಲ್ಪಟ್ಟಿದೆ, ಶ್ರೀಮದ್ಭಾಗವತದ ಅಪೂರ್ವತೆಯೆಂದರೆ = ಇದರಲ್ಲಿ ಜ್ಞಾನ-ವೈರಾಗ್ಯನಿರೂಪಣೆಯೂ, ಭಕ್ತಿಸಹಿತನೈಷ್ಕರ್ಮ್ಯನಿರೂಪಣೆಯೂ ಮಾಡಲ್ಪಟ್ಟಿದೆ.

ಇದು ವೈಷ್ಣವರ ಅಪೂರ್ವಧನ, ಪರಮಹಂಸರ ಜ್ಞಾನನಿಧಿ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ = ಈಶ್ವರನಲ್ಲಿಡುವ ಅವ್ಯಭಿಚಾರಿಣೀ ಭಕ್ತಿಯಿಂದ ಈಶ್ವರಭಿನ್ನತತ್ತ್ವವು ಅನುಭವಕ್ಕೆ ಬಂದು, ವೈರಾಗ್ಯವುಂಟಾಗಿ, ಈಶ್ವರತತ್ತ್ವಸಾಕ್ಷಾತ್ಕಾರವುಂಟಾಗುವುದು.

ಬ್ರಹ್ಮಭಿನ್ನವಸ್ತುಗಳಲ್ಲಿ ಮೂಡುವ ವೈರಾಗ್ಯವು ಪದಾರ್ಥಶೋಧನೆಗೆ ಬಹಿರಂಗಸಾಧನವು. ಜ್ಞಾನವು ಅಂತರಂಗಸಾಧನವು.

ಭಕ್ತಿಯು ಅಂತರಂಗ-ಬಹಿರಂಗ ಸಾಧನೆಗಳೆರಡಕ್ಕೂ ಸಹಕಾರಿಯು.

ಹೇಗೆ ಭೋಜನದ ಪ್ರತಿ ಒಂದು ಗ್ರಾಸವೂ ತುಷ್ಟಿ-ಪುಷ್ಟಿ-ಕ್ಷುಧಾನಿವೃತ್ತಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಕಾರಿಯೋ–ಹಾಗೆ ಭಕ್ತಿಯು ಪ್ರತಿ ಒಂದು ಭಾಗವೂ, ಪರಮಾತ್ಮಾನುರಕ್ತಿ, ಸಂಸಾರವಿರಕ್ತಿ ಹಾಗೂ ಬ್ರಹ್ಮಾನುಭೂತಿಗೆ ಸಹಕಾರಿಯಾಗುತ್ತದೆ.

ಉಪನಿಷತ್ತುಗಳಲ್ಲಿಯೂ ಪರಾಭಕ್ತಿಯನ್ನು ಔಪನಿಷದರ್ಥಪ್ರಕಾಶನಕ್ಕೆ ಸಹಕಾರಿಯೆಂದು ಹೇಳಿದೆ. **"ಯಸ್ಯ ದೇವೇ ಪರಾಭಕ್ತಿಃ" "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ"** ಈ ಮಂತ್ರಗಳಲ್ಲಿ ಭಕ್ತಿಪರಸ್ತುತಿವಾಕ್ಯಗಳಿವೆ. ಈ ಪರಮಹಾಂಸಿಕ ಸಂಹಿತೆಯಲ್ಲಿ ಭಕ್ತಿಯ ವರ್ಣನೆಯು ಅದ್ಭುತವಾಗಿದೆ. ಲೌಕಿಕ ವಸ್ತುಗಳಿಂದ ಹಿಡಿದು ಪರಮಾರ್ಥ ವಸ್ತುಪ್ರಾಪ್ತಿಯವರೆಗೆ ಭಕ್ತಿಯನ್ನು ಸಾಧನಾರೂಪದಲ್ಲಿ ಸ್ವೀಕರಿಸಿದ್ದಾರೆ. ಎರಡನೇ ಸ್ಕಂಧದ ಮೂರನೇ ಅಧ್ಯಾಯದ ಹತ್ತನೇ ಶ್ಲೋಕದಲ್ಲಿ ಹೇಳುತ್ತಾರೆ :

ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ
ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಮ್ ॥

ಬುದ್ಧಿವಂತನಾದ ಪುರುಷನು ನಿಷ್ಕಾಮನಾಗಲಿ, ಸಕಾಮನಾಗಲಿ, ಮೋಕ್ಷ ಕಾಮಿಯಾಗಲಿ–ಅವನು ತೀವ್ರವಾದ ಭಕ್ತಿಯೋಗದ ಮೂಲಕ ಪರಮಾತ್ಮ ನನ್ನು ಆರಾಧಿಸಬೇಕು. ಕೇವಲ ಸಾಧನಾಕಾಲದಲ್ಲಿ ಮಾತ್ರವಲ್ಲ ; ಭಕ್ತಿಯು ಸ್ವಭಾವ ಸಿದ್ಧವಾಗಿಬಿಟ್ಟರೆ, ಅದ್ವೇಷಾದಿಸದ್ಗುಣಗಳಂತೆ, ತತ್ತ್ವಜ್ಞಾನಾ ನಂತರವೂ, ಜೀವನ್ಮುಕ್ತಮಹಾಪುರುಷನ ಹೃದಯದಲ್ಲಿ, ಜೀವನ್ಮುಕ್ತಿಯ ವಿಲಕ್ಷಣಸುಖಾನುಭವಕ್ಕೆ ಕಾರಣವಾಗುವುದು. ಭಾಗವತದಲ್ಲಿ ವಿವರಿಸಿರುವ ಪ್ರಕಾರ ಭಕ್ತಿಯೆಂದರೆ= "ಭಗವದಾಕಾರವೃತ್ತಿ." ಇದು ಪ್ರಾರಬ್ಧಜನ್ಯ ಸುಖ ದುಃಖಗಳು ಬಾಧಿಸದಂತೆ ತಡೆಯುತ್ತದೆ. ಹೊಸದಾಗಿ ವಾಸನಾಜನ್ಯದೋಷ ಗಳು ಬರದಂತೆ ತಡೆಯುತ್ತದೆ. ಸಂಸಾರಜನ್ಯರಾಗದ್ವೇಷಾದಿಗಳನ್ನು ಕತ್ತರಿ ಸುತ್ತದೆ. ಸಂಚಿತಕರ್ಮರಾಶಿಯನ್ನು ಕಳೆದು ಮಾನವನನ್ನು ಭಗವದುನ್ಮುಖ ನನ್ನಾಗಿ ಮಾಡುತ್ತದೆ. ಕ್ರಿಯಮಾಣಕರಿಷ್ಯಮಾಣಕರ್ಮವು ಸುಧಾರಿಸುವಂತೆ ವೈರಾಗ್ಯಾದಿ ಶಮ-ದಮಸಂಪತ್ತಿಯನ್ನು ಹೆಚ್ಚಿಸುತ್ತದೆ.ಪದಾರ್ಥಶೋಧನೆಯು ಸ್ಪಷ್ಟವಾಗುವಂತೆ ಮಾಡುತ್ತದೆ. ಅವಿದ್ಯಾನಿವೃತ್ತಿಪೂರ್ವಕ ವಿದ್ಯಾಪ್ರಾಪ್ತಿ ಯಾದಾಗ, ಅಖಂಡತೃಪ್ತಿರೂಪದಲ್ಲಿ, ಸಾಧಕನಲ್ಲಿ ಯಾವಜ್ಜೀವವೂ ವಾಸ ಮಾಡುತ್ತದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಹೀಗೆ ಭಾಗವತವು ಕರ್ಮಯೋಗ, ಬುದ್ಧಿಯೋಗ, ಅಷ್ಟಾಂಗಯೋಗಾದಿ ಸಾಧನೆಗಳೆಲ್ಲವನ್ನೂ ಪರಮಾತ್ಮಾನುಭೂತಿಗೆ ಸಹಾಯಕವಾದುವುಗಳನ್ನಾಗಿ ವರ್ಣಿಸಿದೆ.

ಈ ಗ್ರಂಥದಲ್ಲಿ ಭಗವದವತಾರಗಳನ್ನು ಚಮತ್ಕಾರಿಣೀ ರೀತಿಯಿಂದ ವರ್ಣಿಸಿದೆ. ಪ್ರತಿಯೊಂದು ವರ್ಣನೆಯೂ ಭಗವತ್ತತ್ತ್ವಬೋಧಕವಾಗಿದೆ. ಆಧಿಭೌತಿಕ-ಆಧಿದೈವಿಕರೂಪಗಳಿಂದ ಜನಕಲ್ಯಾಣಕಾರಿಯಾಗಿ, ಅಂತಃಕರಣ ಬೋಧಕಗಳಾಗಿವೆ. ಹಾಗೂ ಆಧ್ಯಾತ್ಮಿಕರೀತಿಯಿಂದ ಅವಿದ್ಯಾನಿವರ್ತಕವಾಗಿವೆ. ಕರ್ದಮ-ಕಶ್ಯಪ-ಸುತಪಾ-ವಸುದೇವ-ಇತ್ಯಾದಿ ಪದಗಳು ಭಗವತ್ಪದವಾಚಕ ಗಳು. ಹಾಗೂ ಶುದ್ಧಮನಸ್ಕರ ಶುದ್ಧಸತ್ತ್ವಾತ್ಮಕ ಶಮಾದಿ-ಸದ್ಗುಣವಾಚಕ ಗಳು. ದೇವಹೂತಿ. ಅದಿತಿ. ಪೃಶ್ನೀ ದೇವಕೀ ಇವರುಗಳು ಏಕಾಗ್ರಪ್ರಜ್ಞೆಯ ಉಪಲಕ್ಷಣರು. ಶಿಶುರೂಪದಲ್ಲಿ ಭಗವಂತನ ಜನನವೆಂದರೆ-ಬ್ರಹ್ಮಚೈತನ್ಯವು ಚಿತ್ತಾರೂಢವಾಗುವುದು. ವ್ಯವಹಾರಿಯ ಯಾವ ವ್ಯವಹಾರವೂ ಕೇವಲ ಇಂದ್ರಿಯಗಳಿಂದ ನಡೆಯುವುದಿಲ್ಲ. ತತ್ತದ್ವೃತ್ತ್ಯಾರೂಢಚೈತನ್ಯವೇ ಕರ್ತಾ, ಜ್ಞಾತಾ ಆಗುತ್ತದೆ. ಹಾಗೂ ಅವಿದ್ಯಾನಿವರ್ತಕವಾಗುತ್ತದೆ. ಅವಿದ್ಯಾನಿವೃತ್ತಿ ಯಾದಾಗ ಸಾಧಕನು ತನ್ನನ್ನು ಬ್ರಹ್ಮಾಭಿನ್ನನನ್ನಾಗಿ ತಿಳಿಯುತ್ತಾನೆ. ಆಗ ವೃತ್ತಿಯು ತನಗೆ ತಾನೇ ಬಾಧಿಸಲ್ಪಡುತ್ತದೆ. ಹಾಗೂ ಬ್ರಹ್ಮಾಭಿನ್ನಚೇತನವೂ ಸ್ವಸ್ವರೂಪದಿಂದ ಪ್ರಕಾಶಿಸುತ್ತದೆ. ಅಮೃತಮಂಥನದ ಸಮಯದಲ್ಲಿ ಅಮೃತ ತ್ವಪ್ರಾಪ್ತಿಗೆ ಸಾಧಕಗಳಾದ ಪ್ರಮೇಯಗಳನ್ನು ವರ್ಣಿಸಿದ್ದಾರೆ.

ಶ್ರೀಕೃಷ್ಣಾವತಾರಕಾಲದಲ್ಲಿ ವಸುದೇವ-ದೇವಕಿಯರು ಶುದ್ಧಪ್ರಜ್ಞಾ ಹಾಗೂ ಶುದ್ಧಸತ್ತ್ವದಿಂದ ಆವಿರ್ಭೂತರಾದವರು.

ಯಶೋದಾ-ನಂದರೂ ತಾಯಿ-ತಂದೆಗಳ ರೂಪದಲ್ಲಿ ಸ್ವೀಕೃತಿಯನ್ನು ಪಡೆದವರು.

ವಸ್ತುತಃ ಭಗವಂತನಿಗೆ ತಂದೆಯೂ ಇಲ್ಲ-ತಾಯಿಯೂ ಇಲ್ಲ-ಭಾವದ ಪ್ರಗಾಢತೆಯ ತಾರತಮ್ಯದಿಂದ ಪಿತೃತ್ತ್ವವೂ ಆರೋಪಿಸಲ್ಪಡುತ್ತದೆ.

ಹಾಗೆಯೇ ಪೂತನಾ-ಶಕಟಾಸುರರು ಜಡವಾದದ ಪ್ರತೀಕರು ಬಕಾಸುರನು ದಂಭ, ಅಘಾಸುರನು ಪಾಪ, ಧೇನುಕಾಸುರನು ದೇಹಾಧ್ಯಾಸ, ಕಾಳೀಯನಾಗನು ಭೋಗಾಸಕ್ತಿರೂಪವಾದ ವಿಷ. ಇವುಗಳನ್ನು ಪರಿಶೀಲಿಸಿ ತಿಳಿದುಕೊಳ್ಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇವು ಕೇವಲ ಕಲ್ಪಿತಕಥೆಗಳಲ್ಲ. ಭೌತಿಕರೂಪದಲ್ಲಿ ಐತಿಹಾಸಿಕ ಸತ್ಯಗಳು. ಆದಿಭೌತಿಕರೂಪದಲ್ಲಿ ದೈತ್ಯರೆಂದರೆ–ಆಧ್ಯಾತ್ಮಿಕತೆಯ ಜೀವನ ವಿಕಾರಗಳು. ಇವುಗಳ ನಿವೃತ್ತಿಯಾಗಬೇಕಾದರೆ–ಸ್ವಯಂಪ್ರಕಾಶನದ, ಸರ್ವಾಧಿಷ್ಠಾನದ, ಸರ್ವರೂಪಿಚೇತನದಿಂದ ಆಗುವುದಿಲ್ಲ. ಅವುಗಳ ನಿವೃತ್ತಿಗಾಗಿ ಅವತಾರ ಚೇತನದ ಆವಶ್ಯಕತೆಯಿದೆ. ಪ್ರಯೋಜನವು ಪೂರ್ಣವಾದ ಮೇಲೆ ಅವತಾರ ಚೇತನವು ತಿರೋಹಿತವಾಗುತ್ತದೆ. ಪೌರಾಣಿಕಕಥೆಗಳ ಮೂಲಕವಾಗಿ ಭಗವತ್ತತ್ತ್ವದ ರಹಸ್ಯವು ವಿಲಕ್ಷಣರೀತಿಯಿಂದ ವರ್ಣಿಸಲ್ಪಟ್ಟಿದೆ. **ಭಗವಾನ್** ಶ್ರೀಕೃಷ್ಣನ ವಸ್ತ್ರಾಪಹರಣಾದಿ–ಶೃಂಗಾರರಸ ಪ್ರಧಾನವಾದ ಲೀಲೆಗಳಲ್ಲಿಯೂ ಅದ್ಭುತತತ್ತ್ವದ ವರ್ಣನೆಯನ್ನು ಆಬಾಲವೃದ್ಧರಾದಿಯಾಗಿ, ಎಲ್ಲರಿಗೂ ತಿಳಿಯುವಂತೆ ವರ್ಣಿಸಿರುವುದನ್ನು ನೋಡಿದರೆ ಆಶ್ಚರ್ಯವಾಗದೇ ಇರದು. ವಸ್ತ್ರಾಪಹರಣವೆಂದರೆ : ಆವರಣಭಂಗ. ರಾಸಲೀಲಾವರ್ಣನೆಯಿದೆ. ಅಂತಃಕರಣದ ಶಾಂತ-ಮುದಿತ-ಲೀನ-ಗತಿ ಶೀಲ-ವೃತ್ತಿಗಳಲ್ಲಿ ಭಗವತ್ತತ್ತ್ವವನ್ನು ಅದ್ಭುತರೀತಿಯಲ್ಲಿ ವರ್ಣಿಸಿದೆ. ಈ ಪರಮಾತ್ಮನ ಲೀಲೆಯಲ್ಲಿ ಆಧ್ಯಾತ್ಮಿಕ ರೀತ್ಯಾ ವಿವೇಚಿಸಿ ತಿಳಿದುಕೊಂಡವನು ಜೀವನ್ಮುಕ್ತನಾಗುತ್ತಾನೆ. ಕೇವಲ ಕಂಸ ಜರಾಸಂಧ ಇತ್ಯಾದಿ ಕ್ಲಿಷ್ಟ ವ್ಯಕ್ತಿಗಳ ಸಂಹಾರದಿಂದಲೇ ಕೈವಲ್ಯಪ್ರಾಪ್ತಿಯಾಗುವುದಿಲ್ಲ. ಯದುವಂಶಿಗಳಂಥ ಸಾತ್ತ್ವಿಕವ್ಯಕ್ತಿಗಳನ್ನೂ ನಿರೋಧಿಸಬೇಕು-ಎನ್ನುವುದು ಯಾದವರ ನಾಶದಿಂದ ಅರ್ಥವಾಗುತ್ತದೆ.

ಈ ನಾಮರೂಪಾತ್ಮಕಪ್ರಪಂಚವು ಮಾಯಾಮಾತ್ರವೆಂದು ಬೋಧಿಸಲು ಮಾರ್ಕಂಡೇಯೋಪಾಖ್ಯಾನದಂತಹ ಆಖ್ಯಾನಗಳನ್ನು ಉದಾಹರಿಸಿದ್ದಾರೆ. ಇವುಗಳ ಪರಿಶೀಲನೆಯಿಂದ ನಾವು ಅದನ್ನು ತಿಳಿದುಕೊಳ್ಳಬಹುದಾಗಿದೆ. ಆಭಾಸ ಹಾಗೂ ನಿರೋಧಕ್ಕೆ ಅದ್ವಿತೀಯ ಅಧಿಷ್ಠಾನವಾದ ಭಗವತ್ತತ್ತ್ವವನ್ನು ಭಾಗವತದಲ್ಲಿ ಅಪೂರ್ವಶೈಲಿಯಿಂದ, ಯುಕ್ತಿ-ಪ್ರತ್ಯುಪಪತ್ತಿಗಳಿಂದ ವರ್ಣಿಸಿದ್ದಾರೆ. ಶ್ರೀಮದ್ಭಾಗವತದ ಕಥಾಶ್ರವಣ ಮಾತ್ರದಿಂದ ಈಶ್ವರಸಾಕ್ಷಾತ್ಕಾರವಾಗುವುದೆಂದರೆ ಯಾರೂ ಅಸಹಜವೆಂದು ತಿಳಿಯಬೇಕಾಗಿಲ್ಲ.

ಶ್ರೀಮದ್ಭಾಗವತವನ್ನು ಶ್ರವಣಮಾಡಬೇಕೆಂಬ ಇಚ್ಛೆಯು ಉದಯಿಸಿದೊಡನೆಯೇ ಶ್ರೀಹರಿಯು ಹೃದಯಾಧಿಷ್ಠಿತನಾಗುತ್ತಾನೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀಮದ್ಭಾಗವತದ ವೈಶಿಷ್ಟ್ಯವೆಂದರೆ = **ಯಸ್ಮಿನ್ ಜ್ಞಾನವಿರಾಗ ಭಕ್ತಿಸಹಿತಂ, ನೈಷ್ಕರ್ಮ್ಯಮಾವಿಷ್ಕೃತಂ** ಅಂದರೆ ಜ್ಞಾನ-ವೈರಾಗ್ಯ-ಭಕ್ತಿ ಯುಕ್ತವಾದ ನೈಷ್ಕರ್ಮ್ಯದ ಆವಿಷ್ಕಾರವಾಗುತ್ತದೆ.

ಗ್ರಂಥಾಂತರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ನೈಷ್ಕರ್ಮ್ಯವು ಜ್ಞಾನ-ವೈರಾಗ್ಯ-ಭಕ್ತಿರಹಿತವಾದುದಾದರೆ-ಇಲ್ಲಿ ಪ್ರತಿಪಾದಿಸಲ್ಪಟ್ಟಿರುವ ನೈಷ್ಕರ್ಮ್ಯವು ಜ್ಞಾನ-ವೈರಾಗ್ಯ-ಭಕ್ತಿಸಹಿತವಾದುದು. ಇದೇ ಸರ್ವಾಪೇಕ್ಷಿತವೂ ಅಪೂರ್ವವೂ ಆದುದು.

ಶ್ರೀಮದ್ಭಾಗವತವು ಸ್ಪಷ್ಟಪಡಿಸಿದೆ = **ನೈಷ್ಕರ್ಮ್ಯಮಪ್ಯಚ್ಯುತಭಾವ ವರ್ಜಿತಂ, ನ ಶೋಭತೇ,** ಭಗವದ್ಭಕ್ತಿರಹಿತವಾದ ನೈಷ್ಕರ್ಮ್ಯವೂ ಅಷ್ಟಾಗಿ ಶೋಭಿಸದೆಂದು ಹೇಳಿದಹಾಗಾಯಿತು,

ಭಕ್ತಿರಹಿತವಾದ ಜ್ಞಾನಸಂಪಾದನೆಯಲ್ಲಿ ನಿರತರಾಗಿರುವವರನ್ನು ಅಲ್ಲಲ್ಲಿ ಎಚ್ಚರಿಸಿದ್ದಾರೆ.

ಶ್ರೀಮದ್ಭಾಗವತದ 3-4-7-11-12ನೇ ಸ್ಕಂಧಗಳಲ್ಲಿ ಜ್ಞಾನಪ್ರಸಂಗಗಳು ಬರುತ್ತವೆ. ಆಯಾಯಾ ಸ್ಥಳಗಳಲ್ಲಿ ಅವಸ್ಥಾತ್ರಯರಹಿತವಾದ ನಿರ್ಗುಣಪರ ಬ್ರಹ್ಮತತ್ತ್ವದ ವಿವೇಚನೆಯು ಮಾಡಲ್ಪಟ್ಟಿದೆ.

ಜ್ಞಾನದ ಅಂತರಂಗಸಾಧನೆಗಳಲ್ಲಿ ಶ್ರವಣ–ಮನನ–ನಿಧಿಧ್ಯಾಸನಗಳಿಗೆ ವಿಶೇಷಪ್ರಾಧಾನ್ಯವನ್ನು ಕೊಟ್ಟರೂ "**ತತ್ರೋಪಾಯ ಸಹಸ್ರಾಣಾಂ ಭಕ್ತಿರೇವ ಗರೀಯಸೀ** ಎಂದು ಭಕ್ತಿಯನ್ನೇ ಮುಖ್ಯವನ್ನಾಗಿ ವರ್ಣಿಸಿದ್ದಾರೆ.

ಕಾರಣವಿಷ್ಟೆ : ಜ್ಞಾನಾವಿರ್ಭಾವಕ್ಕೆ ಶುದ್ಧಾಂತಃಕರಣವು ಅವಶ್ಯಕವು. ಅಂತಃಕರಣದ ಶುದ್ಧಿಯಿಲ್ಲದಿದ್ದರೆ ಶ್ರವಣಮಾಡಿದ ತತ್ತ್ವವು ಅಂತಃಕರಣದಲ್ಲಿ ನಿಲ್ಲುವುದಿಲ್ಲ.

ಅಂತಃಕರಣದ ಶುದ್ಧಿಯೆಂದರೇನು ?

ಸರ್ವಕಾಮನಾತ್ಯಾಗ–ನಿಷ್ಕಾಮತೆ. ಇದು ಯಾವಾಗ ಪ್ರಾಪ್ತವಾಗುತ್ತದೆ ? ನಾವು ಮಾಡುವ ಕರ್ಮಗಳೆಲ್ಲವೂ ಭಗವದರ್ಪಿತವಾದಾಗ, ಆತ್ಮಸಾಕ್ಷಾತ್ಕಾರರೂಪೀ ಕಾಮನೆಗೆ ಸಂಬಂಧಪಟ್ಟಾಗ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವತ್ಕಾಮನಾರೂಪೀ ಭಕ್ತಿಯು, ಕಾಮನಾಂತರಗಳನ್ನೆಲ್ಲಾ ನಷ್ಟ ಪಡಿಸಿ, ಅಂತಃಕರಣಶುದ್ಧಿಗೆ ಪ್ರಧಾನಸಾಧನವಾಗುತ್ತದೆ. ನಿರಾಲಂಬವಾದ ನಿಷ್ಕಾಮತೆಯು ಸ್ಥಾಯಿಯಾಗಿ ಉಳಿಯಲಾರದು.

ನಿಷ್ಕಾಮನಾಗಲೂ ಮಹಾನ್ ಉದ್ದೇಶವಿರಬೇಕು, ಹಾಗೂ ಬಲಿಷ್ಠ-ಗರಿಷ್ಠ-ವರಿಷ್ಠವಾದ ಆಧಾರವು ಬೇಕು. ಅಂತಹವನು ಭಗವಂತನಲ್ಲದೇ ಮತ್ತ್ಯಾರೂ ಆಗಲಾರನು. ಈ ಕಾರಣಗಳಿಂದ ಜ್ಞಾನಪ್ರಕರಣಗಳಲ್ಲಿ ಭಗವದಾಶ್ರಯದಿಂದ ಆತ್ಮಶುದ್ಧಿಯನ್ನು ಪಡೆದು, ಆತ್ಮತತ್ತ್ವಜ್ಞಾನಿಯಾಗಬೇಕೆಂದು ಉಪದೇಶಿಸಿದೆ.

ಶ್ರೀಮದ್ಭಾಗವತದಲ್ಲಿ ಭಕ್ತಿಯು ಕೇವಲ ಸಾಧನಾರೂಪದಲ್ಲಿಯೇ ವರ್ಣಿತವಾಗಿದೆಯೆಂದು ತಿಳಿಯಬಾರದು. ಕೆಲವು ಕಡೆಗಳಲ್ಲಂತೂ ಜ್ಞಾನಮುಕ್ತಿಗಳಿಗಿಂತಲೂ ಭಕ್ತಿಯೇ ಶ್ರೇಷ್ಠವೆಂದು ಪ್ರತಿಪಾದಿಸಲ್ಪಟ್ಟಿದೆ.

ಐದನೆಯ ಸ್ಕಂಧದಲ್ಲಿ ಹೇಳುತ್ತಾರೆ = **"ಮುಕ್ತಿಂ ದದಾತಿ ಕರ್ಹಿಚಿತ್ ನ ಭಕ್ತಿಯೋಗಂ"**-ಭಗವಂತನು ಮುಕ್ತಿಯನ್ನು ಕೊಡುವಷ್ಟು ಸುಲಭವಾಗಿ ಭಕ್ತಿಯನ್ನು ಕೊಡಲಾರ. ಅಂದರೆ ಭಕ್ತಿಯು ಮುಕ್ತಿಗಿಂತಲೂ ಶ್ರೇಷ್ಠವಾದುದೆಂದು ಹೇಳಿದಹಾಗಾಯಿತು.

ಭಗವದ್ಭಕ್ತರ ಸೇವಾಪ್ರಿಯತೆಯನ್ನು ವರ್ಣಿಸುತ್ತಾ ಹೇಳುತ್ತಾರೆ : ಸಾರ್ಷ್ಟಿ-ಸಾಲೋಕ್ಯ - ಸಾಮೀಪ್ಯ - ಸಾರೂಪ್ಯ - ಸಾಯುಜ್ಯಮುಕ್ತಿಗಳನ್ನೂ ಭಕ್ತರು ತಿರಸ್ಕರಿಸಿ ಕೇವಲ ಭಗವತ್‌ಸೇವೆಯನ್ನು ಭಕ್ತರು ಅಪೇಕ್ಷಿಸುತ್ತಾರೆ.

ತೃತೀಯಸ್ಕಂಧದಲ್ಲಿ ಭಗವಾನ್ ಕಪಿಲಮಹರ್ಷಿಗಳು ತಮ್ಮ ತಾಯಿ ದೇವಹೂತಿಯೊಡನೆ ಹೇಳುತ್ತಾರೆ-"ಶ್ರೇಷ್ಠ ಭಕ್ತಸಂತರು ನನ್ನೊಡನೆ ಐಕ್ಯವನ್ನು ಬಯಸುವುದಿಲ್ಲ. ಅವರು ನನ್ನ ಸೇವಾಭಿಲಾಷಿಗಳಾಗಿರುತ್ತಾರೆ. ಆಜ್ಞಾಧಾರಿಗಳಾಗಿರುತ್ತಾರೆ. ಹಾಗೂ ತಮ್ಮ-ತಮ್ಮಲ್ಲಿ ನನ್ನ ಲೀಲಾ ವಿಭೂತಿಗಳನ್ನೂ ವರ್ಣಿಸುತ್ತಾ-ಕೇಳುತ್ತಾ ಆನಂದಪಡುತ್ತಾರೆ. ಇಂತಹ ಅನನ್ಯಭಕ್ತರಿಗೆ ನಾನು ದರ್ಶನಕೊಡುತ್ತೇನೆ. ಅವರೊಡನೆ ಮಾತನಾಡುತ್ತೇನೆ. ಹಾಗೂ ಅವರ ಸೇವಕನಾಗುತ್ತೇನೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಈ ವಿಚಾರಗಳಿಂದ ನಾವು ಭಕ್ತಿಯು ಸ್ವಯಂಸಾಧ್ಯರೂಪವೂ ಹಾಗೂ ಫಲರೂಪವೂ ಆಗಿದೆ ಎಂಬುದನ್ನು ತಿಳಿದುಕೊಳ್ಳಬಹುದು.

ವಾಸ್ತವಿಕದೃಷ್ಟಿಯಿಂದ ನೋಡುವುದಾದರೆ ಜ್ಞಾನ-ಭಕ್ತಿಗಳಲ್ಲಿ ಅಂತರ ವಿಲ್ಲ. ಶಾಸ್ತ್ರಕಾರರ ಅಭಿಪ್ರಾಯದಲ್ಲಿ **ಭಕ್ತಿ**ಯ ಪರಕಾಷ್ಠತೆಯೆ ಜ್ಞಾನ, ಹಾಗೂ ಜ್ಞಾನದ ಪರಾಕಾಷ್ಠತೆಯೆ **ಭಕ್ತಿ**. ಭಕ್ತಿಗಿಂತಲೂ ಜ್ಞಾನವು ಶ್ರೇಷ್ಠವೆಂದು ಹೇಳುವ ಸ್ಥಳಗಳಲ್ಲಿ ಭಕ್ತಿಶಬ್ದಕ್ಕೆ ಸಾಧನಾಭಕ್ತಿಯೆಂದು ಅರ್ಥವು. ಜ್ಞಾನ ಕ್ಕಿಂತಲೂ ಭಕ್ತಿಯು ಶ್ರೇಷ್ಠವೆಂದು ಹೇಳುವ ಸ್ಥಳಗಳಲ್ಲಿ ಜ್ಞಾನವೆಂದರೆ "ಪರೋಕ್ಷಜ್ಞಾನ"ವೆಂದು ಅರ್ಥವು. ಪರಾ**ಭಕ್ತಿ**ಯೂ ಪರಮಜ್ಞಾನವೂ ಎರಡೂ ಒಂದೇ. **ರುಚಿ**ಭೇದದಿಂದ ನಾಮಭೇದವಷ್ಟೆ.

ಶ್ರೀಭಾಗವತದಲ್ಲಿ ಅಲ್ಲಲ್ಲಿ ಜ್ಞಾನ-**ಭಕ್ತಿ**-ಸಾಧನೆಗಳ ವರ್ಣನೆಯಿದೆ. ಭಗವಂತನ ಸ್ವರೂಪ_ಗುಣ_ನಾಮ-ಲೀಲಾದಿಗಳ ಶ್ರವಣ-ಕೀರ್ತನ-ಸ್ಮರಣೆಗಳಿವೆ.

ಆತನ ದಿವ್ಯ-ಭವ್ಯಮೂರ್ತಿಯನ್ನು ಮನಸಾ ಕಲ್ಪಿಸಿಕೊಂಡು ಅವನ ಪಾದಸೇವನ, ಅರ್ಚನ, ವಂದನ, ಅವನ ಸಾನ್ನಿಧ್ಯವನ್ನು ಕಲ್ಪಿಸಿಕೊಂಡು ಸಖ್ಯ-ದಾಸ್ಯಾದಿ ಸಂಬಂಧಸ್ಥಾಪನೆ, ಭಗವಂತಂ ಪ್ರತಿ ಆತ್ಮಸಮರ್ಪಣ. ಇವುಗಳು ನವಧಾ ಭಕ್ತಿಯ ಅಂಗಗಳು.

ಭಾಗವತದಲ್ಲಿ ಬಹಳ ಕಡೆ ನವಧಾ ಭಕ್ತಿಯ ಲಕ್ಷಣಗಳೂ ಉದಾಹರಣೆಗಳೂ ದೊರಕುತ್ತವೆ.

ನಿರ್ಗುಣಭಕ್ತಿಯ ಸ್ವರೂಪವನ್ನು ವರ್ಣಿಸುತ್ತಾ **ಹೇಳುತ್ತಾರೆ-ಭ**ಗವಂತನ ವರ್ಣನೆಗಳನ್ನು ಕೇಳಿ, ಚಿತ್ತದ ಸಂಪೂರ್ಣವೃತ್ತಿಗಳೂ. ಸಮುದ್ರದಲ್ಲಿ ಗಂಗೆಯು ಸೇರುವಂತೆ ಭಗವಂತನಲ್ಲಿ ಸೇರಬೇಕು.

ಸ್ಮರಣೆಯಲ್ಲಿ ವಿಚ್ಛಿನ್ನತೆಯಿಲ್ಲದಿರುವುದೇ 'ನಿರ್ಗುಣಭಕ್ತಿ'.

ಹಾಗೂ ಜ್ಞಾನದ ಲಕ್ಷಣವನ್ನು ಹೇಳುತ್ತಾ ಬರೆಯುತ್ತಾರೆ-ಭಾವಾ ಭಾವರೂಪವಾದ, ಸರ್ವಕಾರ್ಯ-ಕಾರಣಾತ್ಮಕವಾದ ಜಗತ್ತು ಆತ್ಮನಲ್ಲಿ ಅವಿದ್ಯಾಕಾರಣದಿಂದ ತೋರುತ್ತಿದೆ. ವಸ್ತುತಃ ಜಗತ್ತು ಸತ್ತಾಹೀನವಾದುದು. ಕೇವಲ ಆತ್ಮಸತ್ತೆಯೊಂದೇ ಇರುವುದು-ಎಂದು ತಿಳಿಯಲ್ಪಡಬೇಕು. ಇದೇ

Sri Vidyabharathi Book Centre, Sringeri

CC-O. In Public Domain. Digitized by eGangotri

'ಬ್ರಹ್ಮದರ್ಶನ' ಹಾಗೂ ಅನ್ವಯ–ವ್ಯತಿರೇಕಗಳಿಂದ ಭೇದಿಸಲಾಗದ ವಸ್ತುವಿನ ಜ್ಞಾನವನ್ನೇ ಪಡೆಯಬೇಕು.

ಆತ್ಮಜ್ಞಾನವಾಗದಿರುವುದಕ್ಕೆ ಆತ್ಮಾಸ್ತಿತ್ವದಲ್ಲಿ ಮೂಡಿರುವ ವಿಕಲ್ಪತೆಯೇ ಕಾರಣವು. ಅಮಾನಿತ್ವಾದಿ ಸಾಧನಗಳಿಂದ ತತ್ತ್ವವಿಚಾರ ಮಾಡಿದರೆ ಜ್ಞಾನೋಪಲಬ್ಧಿಯಾಗುವುದು.

ನಾವು ಜ್ಞಾನ-ಭಕ್ತಿ ಇವೆರಡರ ವಿಚಾರಗಳನ್ನು ಮಾಡುವಾಗ, ನಮ್ಮ ದೃಷ್ಟಿಯು ಸಂಸಾರದ ಕಡೆಗಿರಬಾರದು. ಹಾಗೂ ಅದರ ಭಾವವೂ ಬರಬಾರದು. ಪರಮಾತ್ಮನಲ್ಲಿಯೇ ಲೀನವಾಗಿರಬೇಕು. ಈ ವಿಚಾರದಲ್ಲಿ ಯಾವ ಮತಭೇದವೂ ಇಲ್ಲ. ಪರಮಾತ್ಮನು ಸಗುಣನೋ, ನಿರ್ಗುಣನೋ, ಸಾಕಾರನೋ ನಿರಾಕಾರನೋ–ಈ ಸಂದೇಹಗಳು ಪರಮಾತ್ಮನ ದರ್ಶನವಾದ ಮೇಲೆ ನಿವಾರಣೆಯಾಗುವುವು.

ವಿಷಯಾಸಕ್ತಿ-ಸಂಸಾರದ ಮೋಹಗಳನ್ನು ದೂರಮಾಡದೇ ಪರಮಾತ್ಮನ ಚಿಂತನೆಗೆ ಹೊರಟರೆ–ಅವನು ಸಗುಣನೋ, ನಿರ್ಗುಣನೊ, ಅದ್ವಿತೀಯನೋ, ಸದ್ವಿತೀಯನೋ, ನಿರಾಕಾರಿಯೋ, ಸಾಕಾರಿಯೋ ಹೀಗೆ ವಿಮರ್ಶಿಸತೊಡಗಿದರೆ–ಕೇವಲ ಕಲ್ಪನಾಲೋಕದಲ್ಲಿ ಬುದ್ಧಿಯ ಬಲವಿರುವಷ್ಟು ಅಲೆದಾಡುತ್ತಿರಬಹುದು. ಸ್ವರೂಪಜ್ಞಾನವಾಗುವವರೆಗೆ ಇಂತಹ ಭ್ರಮಣೆಗೆ ಅವಕಾಶವನ್ನು ಕೊಡಬಾರದು.

ಜ್ಞಾನ-ಭಕ್ತಿಗಳೆರಡೂ ಅಂತರಂಗದ ಭಾವನೆಗಳು, ಅವು ಅಂತರಂಗಸ್ಥ ಪರಮಾತ್ಮನನ್ನು ಸಾಕ್ಷಾತ್ ಸ್ಪರ್ಶಿಸುತ್ತವೆ. ಶಾಸ್ತ್ರಗಳ ನಿರ್ಣಯವು ಹೀಗಿದೆ–

ಇಂದ್ರಿಯೇಭ್ಯಃ ಪರಂ ಮನಃ । ಮನಸಸ್ತು ಪರಾ ಬುದ್ಧಿಃ ಯೋ ಬುದ್ಧೇಃ ಪರತಸ್ತು ಸಃ ।

ಸ್ವಾಧ್ಯಾಯ, ಶ್ರೀಗುರುಸೇವೆ–ಇತ್ಯಾದಿ ಕರ್ಮಗಳಿಂದ ಜ್ಞಾನಯೋಗವನ್ನು ಸಾಧಿಸಿರಿ. ಅಥವಾ ಪೂಜಾ–ಪಾರಾಯಣ ಭಜನೆ ಇತ್ಯಾದಿಗಳಿಂದ ಭಕ್ತಿಯೋಗವನ್ನು ಸಾಧಿಸಿರಿ. ಇವುಗಳು ಜ್ಞಾನದ ಹಾಗೂ ಭಕ್ತಿಯ ಸಾಧನಗಳೇ ಆಗುವುವು.

ನಿಷ್ಕಾಮಕರ್ಮಯೋಗವನ್ನು ನಿಷ್ಠೆಯಿಂದ ಸಾಧಿಸುವುದಾದರೆ ಅಲ್ಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಿಷ್ಕಾಮತೆಯು ಪ್ರಧಾನವಾಗುವುದು. ನಿಷ್ಕಾಮತೆಯೂ ಭಕ್ತಿಯೋಗದ ಅಂತರ್ಗತವೇ ಆಗುತ್ತದೆ. ಭಗವತ್ಪ್ರೀತ್ಯರ್ಥವಾಗಿ ಆಚರಿಸುವ ಕರ್ಮಗಳು ನಿಷ್ಕಾಮಕರ್ಮಗಳು.

ಸಾಮಾನ್ಯತಃ ಕರ್ಮಗಳು ಮೂರು ವಿಧಗಳಾಗಿರುತ್ತವೆ : ನಿಷ್ಕಾಮ–ಸಕಾಮ-ನಿರರ್ಥಕ. ನಿರರ್ಥಕಕರ್ಮಗಳನ್ನು ಬಿಡಿ_ಅವು ಅನುಪಯೋಗಿಗಳು.

ಸಕಾಮಕರ್ಮಗಳು ಎರಡು ವಿಧಗಳಾಗಿರುತ್ತವೆ. ಶಾಸ್ತ್ರಾನುಕೂಲ ಕರ್ಮಗಳು, ಶಾಸ್ತ್ರಪ್ರತಿಕೂಲಕರ್ಮಗಳು. ಶಾಸ್ತ್ರಪ್ರತಿಕೂಲಕರ್ಮಗಳೂ ಸ್ವಲ್ಪ ಕಾಲದವರೆಗೆ ಈ ಲೋಕಕ್ಕೆ ಚೆನ್ನಾಗಿ ತೋರಬಹುದು. ಆದರೆ ಮುಂದೆ ಅವುಗಳ ಫಲವೆಂದರೆ ಆಸುರಿಯೋನಿಗಳಲ್ಲಿ ಜನ್ಮ–ನರಕಪ್ರಾಪ್ತಿ.

ಶಾಸ್ತ್ರಾನುಕೂಲಗಳಾದ ಸಕಾಮಕರ್ಮಗಳಿಂದ ಇಹ_ಪರಗಳಲ್ಲಿ ಸುಖ ಪ್ರಾಪ್ತಿಯಾಗುವುದು. ಆದರೆ ಭಗವತ್ಪ್ರಾಪ್ತಿಯಾಗುವುದಿಲ್ಲ.

ನಿಷ್ಕಾಮಕರ್ಮದಿಂದ ಮಾತ್ರ ಭಗವತ್ಪ್ರಾಪ್ತಿಯಾಗುತ್ತದೆ. ಸಂಪೂರ್ಣ ಸಾತ್ತ್ವಿಕವೂ, ಶಾಸ್ತ್ರಾನುಕೂಲವೂ ಆಗಿರುವುದೇ ನಿಷ್ಕಾಮಕರ್ಮವು.

ಶ್ರೀಮದ್ಭಾಗವತದಲ್ಲಿ ಭಗವತ್ಪ್ರೀತ್ಯರ್ಥವಾಗಿ ಆಚರಿಸುವ ಶಾಸ್ತ್ರಾನುಕೂಲವಾದ ಸಾತ್ತ್ವಿಕಕರ್ಮಗಳನ್ನೇ ನಿಷ್ಕಾಮಕರ್ಮಗಳೆಂದು ಹೇಳಿದ್ದಾರೆ.

ಭಗವತ್ಪ್ರೀತಿಗೆ ಸಲ್ಲದ ಕರ್ಮಗಳು ನಿರರ್ಥಕಗಳೆಂದೇ ಅಭಿಪ್ರಾಯವು. ಅಲ್ಲದೆ ಭಗವಂತನಿಗಾಗಿ ಮಾಡುವ ಕರ್ಮಗಳು ಕರ್ಮಗಳೇ ಅಲ್ಲ. ಅವುಗಳು ಭಕ್ತಿಯ ಅಂತರ್ಗತಗಳು.

ಶ್ರೀಮದ್ಭಾಗವತದಲ್ಲಿ ಜ್ಞಾನಯೋಗ–ಭಕ್ತಿಯೋಗಗಳಿಗೆ ಸಂಬಂಧಪಟ್ಟಂತೆ ಯೋಗವನ್ನೂ, ಯೋಗಫಲಗಳನ್ನೂ, ಅದ್ಭುತ_ಸುಂದರರೂಪದಿಂದ ವರ್ಣಿಸಿದ್ದಾರೆ. ಅತಿಶಯವೆಂದರೆ ಸರ್ವಜನೋಪಯೋಗಿಯಾಗಿ, ಸರ್ವಕಾಲ ದೇಶೋಪಯೋಗಿಯಾಗಿ ಭಗವನ್ನಾಮವರ್ಣನೆಯು ಮಾಡಲ್ಪಟ್ಟಿದೆ.

ಈ ಕಲಿಯುಗದಲ್ಲಿ ಭಗವಂತನ ಪ್ರೇಮಾನುಗ್ರಹಸಾಕ್ಷಾತ್ಕಾರವನ್ನು ಪಡೆಯಬೇಕೆಂದಿರುವ ಸಾಮಾನ್ಯಜನರಿಗೆ ಭಾಗವತಕ್ಕಿಂತಲೂ ಉತ್ತಮ ವಸ್ತುವೊಂದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ಭಾಗವತವು ಸ್ತೋತ್ರರತ್ನಾಕರವಾಗಿದೆ. ಇಲ್ಲಿ ಯಾವ ದೇವತೆಯನ್ನೂ ತಿರಸ್ಕರಿಸಿಲ್ಲ. ಏಕೇಶ್ವರವಾದಕ್ಕೂ ಬಹುದೇವವಾದಕ್ಕೂ ಅವಕಾಶವಿದೆ.

ಭಗವಂತನ ಸ್ತುತಿಗಳು ಎರಡು ವಿಧವಾಗಿವೆ. ಸಕಾಮ ಮತ್ತು ನಿಷ್ಕಾಮ ಬಂಧನದಿಂದ ಬಿಡುಗಡೆಹೊಂದಲು, ಕೋಪವನ್ನು ಶಾಂತಗೊಳಿಸಲು ದುಃಖ ವಿಮೋಚನೆಯಾಗಲು ಅನೇಕ ವಿಧದ ಸ್ತೋತ್ರಗಳಿವೆ.

ನಿಷ್ಕಾಮಸ್ತುತಿಗಳಲ್ಲಿಯೂ ಎರಡು ವಿಧಗಳಿವೆ. ತತ್ತ್ವಪ್ರಧಾನವಾದುವು. ಸಾಧನಾಪ್ರಧಾನವಾದುವು. ಈ ಸ್ತೋತ್ರಗಳ ಪಠನದಿಂದ ಅಂತರಂಗವು ಶುದ್ಧವಾಗುತ್ತದೆ. ಭಗವತ್ತತ್ತ್ವವು ಮೂಡುತ್ತದೆ.

ಶ್ರೀಮದ್ಭಾಗವತವು ಸಂಸ್ಕೃತವಾಙ್ಮಯದ ಸರ್ವಶ್ರೇಷ್ಠ ಮಹಾಪುರಾಣ ಗ್ರಂಥವು. ಈ ಗ್ರಂಥದ ಲಕ್ಷ್ಯ ಸಾಧನ, ಶೈಲಿಗಳು ವಿಲಕ್ಷಣಗಳಾಗಿವೆ. ಅತ್ಯಂತ ಗಂಭೀರ–ಮಧುರ–ಪ್ರಸಾದ ಪೂರ್ಣಗಳಾಗಿವೆ. ಜೀವರ ಪರಮಕಲ್ಯಾಣಕ್ಕಾಗಿ ಇದರ ಆವಿರ್ಭವವಾಗಿದೆ, ಇದು ಸಾಕ್ಷಾತ್ ಭಗವತ್‌ಸ್ವರೂಪಿಯು. ಉದ್ಧವನ ಪ್ರಾರ್ಥನೆಗೆ ಅನುಗುಣವಾಗಿ ಭಗವಂತನು ಇದರಲ್ಲಿ ಪ್ರವೇಶಿಸಿದ್ದಾನೆ. ಭಗವಂತನ ವಿಶೇಷ ಕಳೆಯು ಇದರಲ್ಲಿ ಪ್ರತಿಷ್ಠಿಸಲ್ಪಟ್ಟಿದೆ. ವಾಙ್ಮಯಾವತಾರಿ ಭಗವಂತನ ರೂಪವೇ "ಭಾಗವತವು". ಭಗವಂತನಿಗೂ ಭಾಗವತಕ್ಕೂ ಆಶ್ರಯಾಶ್ರಯೀಭಾವಸಂಬಂಧವಿದೆ. ಭಗವಂತನಿಂದ ಪ್ರೋಕ್ತವಾದುದು ಭಾಗವತವು. ಭಾಗವತದ ಅನೇಕ ಪ್ರಸಂಗಗಳಲ್ಲಿ "ಭಕ್ತ" ಎಂಬ ಅರ್ಥದಲ್ಲಿಯೂ ಭಾಗವತದ ಪ್ರಯೋಗವಾಗಿದೆ.

ಭಕ್ತರ ಹೃದಯದಲ್ಲಿ, ಭಕ್ತರ ದೃಷ್ಟಿಯಲ್ಲಿ, ಅವರ ರೋಮರೋಮಗಳಲ್ಲಿ ಭಗವಂತನು ವಾಸಮಾಡುತ್ತಾನೆ. ಭಗವಂತನಿಗಾಗಿ ಭಕ್ತರಿದ್ದಾರೆ.

ಭಕ್ತರ ಸಾಧ್ಯ-ಸಾಧನ-ಜೀವನ ಎಲ್ಲವೂ ಭಗವಂತನದೇ, ಇದು ಸತ್ಯ–ಪರಮಸತ್ಯ. ಆದರೂ ಕೆಲವರು ಆಧುನಿಕರು ಇದನ್ನು ಭಾವುಕತೆಯೆಂದು ಕರೆಯುತ್ತಾರೆ. ಆದರಿಂದ ಭಾಗವತದ ಸಂರಕ್ಷಣೆಗಾಗಿ ಅಲ್ಲ–ಭಾಗವತವು ಸ್ವಯಂಸಂರಕ್ಷಿತವಾಗಿದೆ. ತಾರ್ಕಿಕರ ಸಮಾಧಾನಕ್ಕಾಗಿ–ಅದೂ ಅಲ್ಲ. ಏಕೆಂದರೆ

Sri Vidyabharathi Book Centre, Sringeri

 CC-O. In Public Domain. Digitized by eGangotri

ತರ್ಕಕ್ಕೆ ಅಂತವೇ ಇಲ್ಲ. ಅಂದಮೇಲೆ ಕೇವಲ ಭಕ್ತಜನರ ಸಂತೋಷಾರ್ಥವಾಗಿ ಭಾಗವತದ ಸಂಬಂಧದಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಲಾಗುವುದು.

ಭಾರತೀಯ ಸಮಾಜದಲ್ಲಿ ಸರ್ವರ ಸರ್ವವಿಧದ ಉನ್ನತಿಯ ದೃಷ್ಟಿಯಿಂದ ಎರಡು ವಿಧದ ಶಾಸ್ತ್ರಗಳು ಸ್ವೀಕರಿಸಲ್ಪಡುತ್ತವೆ.

ಒಂದು ಸ್ಮೃತಿ-ಮತ್ತೊಂದು ಶ್ರುತಿ. ಶ್ರುತಿಗಳು ನಿತ್ಯ. ಎಲ್ಲ ಯುಗ ಮನ್ವಂತರ–ಕಲ್ಪಗಳಲ್ಲಿಯೂ ಅವುಗಳ ಅನುಪೂರ್ವಿಯು ಒಂದೇ ವಿಧವಾಗಿರುತ್ತದೆ.

ಸೃಷ್ಟಿಯ ಪ್ರಾರಂಭದಲ್ಲಿ ಪ್ರಣವ-ಗಾಯತ್ರೀ-ಮಂತ್ರ ಸಂಹಿತಾರೂಪದಲ್ಲಿ ಶ್ರುತಿಗಳ ಅನಾಹತನಾದವು ಕೇಳಿಸಲ್ಪಡುತ್ತದೆ.

ವಿಶುದ್ಧಾಂತಃಕರಣದವರಾದ ಋಷಿಗಳು ಇದನ್ನು ಕೇಳುತ್ತಾರೆ. ತಮ್ಮ ಶಿಷ್ಯಪರಂಪರೆಯಲ್ಲಿ ಪ್ರಚುರಪಡಿಸುತ್ತಾರೆ. ವೇದಗಳ ಉಚ್ಚಾರಣಾ ಕ್ರಮದಲ್ಲಿ ಕಾಲ–ದೇಶಗಳ ಪ್ರಭಾವದಿಂದ ವ್ಯತ್ಯಾಸವುಂಟಾಗುವುದಿಲ್ಲ. ಅವು ಪರಮಾತ್ಮನ ನಿಶ್ಚಿತ ಶಬ್ದಗಳು.

ಸ್ಮೃತಿಗಳೆಂದರೆ ಮನ್ವಾದಿಸ್ಮೃತಿಗಳು, ಮಹಾಭಾರತಾದಿ ಇತಿಹಾಸಗಳು ಶ್ರೀಮದ್ಭಾಗವತಾದಿ ಮಹಾಪುರಾಣಾದಿಗಳು–ಸ್ಮೃತಿ ಶಾಸ್ತ್ರಗಳ ಕೋಟಿಯಲ್ಲಿ ಬರುತ್ತವೆ.

ಮಹಾನ್ ತಪಸ್ವೀ ತ್ರಿಕಾಲಜ್ಞ ಋಷಿಗಳ ಪರಮಪವಿತ್ರಾಂತಃಕರಣದಲ್ಲಿ ಭಗವತ್ಪ್ರೇರಣೆಯಿಂದ ಈ ಭಾವಗಳು ಆವಿರ್ಭವಿಸುತ್ತವೆ.

ಯದ್ಯಪಿ ಸ್ಮೃತಿಶಾಸ್ತ್ರಗಳು ಭಾವರೂಪದಿಂದ ಎಲ್ಲ ಕಾಲದೇಶಗಳಲ್ಲಿಯೂ ಒಂದೇ ವಿಧವಾಗಿರುತ್ತವೆ. ಆದರೆ ಇವುಗಳ ಶಬ್ದಾನುಪೂರ್ವಿಯಲ್ಲಿ ಪರಿವರ್ತನೆಯು ಕಂಡುಬರುತ್ತದೆ.

ಸೃಷ್ಟಿಯ ಪ್ರಾರಂಭದಲ್ಲಿ ಪ್ರಾಚೀನಭಾವಗಳ ಸ್ಮೃತಿಯುಂಟಾಗುತ್ತದೆ. ಸ್ಮೃತಿಯ (ಸ್ಮರಣೆ) ಆಧಾರದ ಮೇಲೆ ರಚಿಸಲ್ಪಟ್ಟಿರುವುದರಿಂದ ಇವುಗಳು ಪ್ರಾಮಾಣಿಕತೆಯಲ್ಲಿ ಶ್ರುತಿಯ ಸಮಕಕ್ಷಿಗಳು. ಇವುಗಳು ಜಗತ್ತಿನ ಪರಿವರ್ತನೆಗೆ ಅನುಗುಣವಾಗಿ ಪರಿವರ್ತಿತಗಳಾಗುವುದಿಲ್ಲ. ವಾಜಸನೇಯ– ಬ್ರಾಹ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಷೋಪನಿಷತ್ತಿನಲ್ಲಿ (4–11–15) ಹೇಳುತ್ತಾರೆ= ಅಸ್ಯ ಮಹತೋ ಭೂತಸ್ಯ ನಿಶ್ವಸಿತ– ಮೇತದ್ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಪುರಾಣಂ ಪಂಚಮಂ ವೇದನಾಂ ವೇದಂ"

ಪರಂಪರಾಗತಜ್ಞಾನಸಂಪನ್ನರಾದ ಋಷಿಮುನಿಗಳಿಂದ ವೇದಾರ್ಥಗಳು ಸ್ಪಷ್ಟವಾಗಿ ತಿಳಿಯಲ್ಪಡುತ್ತವೆ. ಜನಸಾಮಾನ್ಯವು ಇದನ್ನು ತಿಳಿಯಲಾರದು. ಅದರ ಭಾಷೆಯೂ ಸಾಧಾರಣವಾದುದಲ್ಲ.

ವೇದಾರ್ಥವನ್ನು ಜನಸಾಮಾನ್ಯವು ಅರ್ಥಮಾಡಿಕೊಳ್ಳಲು ಒಂದು ಮಾಧ್ಯಮದ ಆವಶ್ಯಕತೆಯಿತ್ತು.

ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್

ಪುರಾಣಾದಿಗಳು ವೇದಗಳ ಭಾಷ್ಯರೂಪದಲ್ಲಿವೆ–ಎಂದು ಹೇಳಬಹುದು. ವೇದಗಳಂತೆಯೇ ಇವುಗಳೂ ಅನಾದಿ ; ನಿತ್ಯ.

ಪ್ರತ್ಯೇಕ ದ್ವಾಪರಯುಗಾಂತ್ಯದಲ್ಲಿ ಭಗವಾನ್ ವಿಷ್ಣುವು ವ್ಯಾಸರೂಪದಿಂದ ಅವತರಿಸಿ ಅಲ್ಪಬುದ್ಧಿ, ಅಲ್ಪಶಕ್ತಿ. ಅಲ್ಪಾಯುಗಳಾದ ಜೀವರ ಕಲ್ಯಾಣಕ್ಕಾಗಿ ವೇದರಾಶಿಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸುತ್ತಾನೆ.

ವಿಭಾಗಿಸುವವನ ಹೆಸರೇ ವ್ಯಾಸ. ಪ್ರತಿಮನ್ವಂತರದ ಪ್ರತಿದ್ವಾಪರದಲ್ಲಿಯೂ ಭಿನ್ನ-ಭಿನ್ನವ್ಯಾಸರು ಅವತರಿಸುತ್ತಾರೆ. ವೈವಸ್ವತಮನ್ವಂತರದ 28ನೆಯ ದ್ವಾಪರಯುಗದಲ್ಲಿ ಮಹರ್ಷಿ ಪಾರಾಶರ್ಯರು ವ್ಯಾಸರಾದರು.

ಅಷ್ಟಾದಶಪುರಾಣಗಳ ಹಾಗೂ ಭಾರತದ ಸ್ಮರ್ತಾರರೂ ಕರ್ತಾರರೂ ಇವರೇ ಆಗಿದ್ದಾರೆ.

ಅಷ್ಟಾದಶಪುರಾಣಗಳು

ಮದ್ವಯಂ = ಮತ್ಸ್ಯ, ಮಾರ್ಕಂಡೇಯ
ಭದ್ವಯಂ = ಭವಿಷ್ಯ, ಭಾಗವತ
ಬ್ರತ್ರಯಂ = ಬ್ರಹ್ಮಾಂಡ, ಬ್ರಹ್ಮ, ಬ್ರಹ್ಮವೈವರ್ತ
ವಚತುಷ್ಟಯಂ = ವಿಷ್ಣು. ವರಾಹ, ವಾಯು, ವಾಮನ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಇವಲ್ಲದೇ ಆದಿತ್ಯ, ಲಿಂಗ, ಪದ್ಮ, ಅಗ್ನಿ, ಕೂರ್ಮ, ಸ್ಕಂಧ, ಗಾರುಡ. ಎರಡು ಭಾಗವತಗಳನ್ನು ಕೇಳುತ್ತೇವೆ, 1. ಶ್ರೀಮದ್ಭಾಗವತ 2. ಶ್ರೀಮದ್ದೇವೀಭಾಗವತ. ಇವೆರಡರಲ್ಲಿ ಶ್ರೀಮದ್ಭಾಗವತವೇ ಅಷ್ಟಾದಶ ಪುರಾಣಾಂತರ್ಗತವಾದ ಮಹಾಪುರಾಣವೆಂಬುದು ಬಹುವಿಮರ್ಶಕರ ಅಭಿಪ್ರಾಯವಾಗಿದೆ. ಇದರ ಪ್ರತಿಪಾದ್ಯನು ಸ್ವಯಂ ಭಗವಂತನು. ಅವನು ನಿರಾಕಾರಿಯೂ ಸಾಕಾರಿಯೂ ಸಹ. ಅಧಿಕಾರಿಯು ಬಯಸಿದಂತೆ ಕಾಣುತ್ತಾನೆ. ವಸ್ತುತಃ ಭಗವಂತನು ಸರ್ವಸ್ವರೂಪೀ.

ಶ್ರೀಮದ್ಭಾಗವತದಲ್ಲಿ ಹತ್ತು ವಿಷಯಗಳ ವರ್ಣನೆಗಳು ಬರುತ್ತವೆ. ಸರ್ಗ. ವಿಸರ್ಗ, ಸ್ಥಾನ, ಪೋಷಣ, ಊತಿ, ಮನ್ವಂತರ, ಈಶಾನುಕಥಾ. ನಿರೋಧ, ಮುಕ್ತಿ ಮತ್ತು ಆಶ್ರಯ. ಇವುಗಳಲ್ಲಿ ಪ್ರಧಾನವು ಆಶ್ರಯ.

ಸರ್ವಜೀವಿಗಳಿಗೂ ಆಶ್ರಯಭೂತನಾದ ಭಗವಂತನು ವ್ಯಕ್ತನು ; ಅವ್ಯಕ್ತನು : ಆಭಾಸನಿರೋಧಗಳ ಅಧಿಷ್ಠಾನನು ; ನಿರಪೇಕ್ಷಸಾಕ್ಷಿಬ್ರಹ್ಮನು.

ಈ ಆಶ್ರಯತತ್ತ್ವದ ಉಪಲಬ್ಧಿಗಾಗಿ ಉಳಿದ ಒಂಭತ್ತು ವಿಷಯಗಳ ವರ್ಣನೆಯಿದೆ.

ಸರ್ಗ–ವಿಸರ್ಗಾದಿಗಳ ವರ್ಣನೆಯ ಮೂಲಕ ಭಗವತ್ತತ್ತ್ವವನ್ನು ಪ್ರತಿಪಾದಿಸುತ್ತಾ, ಜೀವಿಗಳ ಅವಿದ್ಯಾನಿವೃತ್ತಿ ಮಾಡುವುದೇ ಶ್ರೀಮದ್ಭಾಗವತದ ಪರಮೋದ್ದೇಶವಾಗಿದೆ.

ಶ್ರೀಮದ್ಭಾಗವತದ ಪ್ರತಿ ಒಂದು ಸ್ಕಂಧದಲ್ಲಿಯೂ ಆಶ್ರಯತತ್ತ್ವದ ನಿರೂಪಣೆಯು ಮಾಡಲ್ಪಟ್ಟಿದೆ. ಆದರೂ ದಶಮಸ್ಕಂಧದಲ್ಲಿ ಸಗುಣಸಾಕಾರ ರೂಪವಾದ ಆಶ್ರಯತತ್ತ್ವವೂ ಹನ್ನೆರಡನೆಯ ಸ್ಕಂಧದಲ್ಲಿ ನಿರ್ಗುಣ-ನಿರಾಕಾರ ರೂಪವಾದ ಆಶ್ರಯತತ್ತ್ವವೂ ವಿಶೇಷತಃ ವರ್ಣಿಸಲ್ಪಟ್ಟಿದೆ.

ಶ್ರೀಮದ್ಭಾಗವತಾನುಸಾರವಾಗಿ ಆಶ್ರಯಸ್ವರೂಪವನ್ನು ವಿಚಾರಿಸಿ ತಿಳಿದುಕೊಳ್ಳುವುದಕ್ಕಿಂತಲೂ ಮೊದಲು ಭಾರತೀಯ ಸನಾತನಧರ್ಮಾನುಗತ ಸಂಪ್ರದಾಯಾಚಾರ್ಯರ ಮೂಲಕ ನಿರ್ಣೀತವಾದ ಆಶ್ರಯಸ್ವರೂಪವನ್ನು ವಿವೇಚಿಸಿ ತಿಳಿದುಕೊಳ್ಳುವುದು ಆವಶ್ಯಕವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ವೈತಸಂಪ್ರದಾಯದ ಪ್ರಧಾನಾಚಾರ್ಯರಾದ ಭಗವಾನ್ ಶಂಕರಾಚಾರ್ಯರು ಹೇಳುತ್ತಾರೆ :-**ಅತಶ್ಚಾನ್ಯತರಲಿಂಗಪರಿಗ್ರಹೇಽಪಿ ಸಮಸ್ತವಿಶೇಷರಹಿತಂ ನಿರ್ವಿಕಲ್ಪಕಮೇವ ಬ್ರಹ್ಮ ಪ್ರತಿಪತ್ತವ್ಯಂ, ನ ತದ್ವಿಪರೀತಮ್ । ಸರ್ವತ್ರ ಹಿ ಬ್ರಹ್ಮಸ್ವರೂಪಪ್ರತಿಪಾದನಪರೇಷು ವಾಕ್ಯೇಷು–ಅಶಬ್ದಮಸ್ಪರ್ಶಮರೂಪಮವ್ಯಯಂ ಇತ್ಯೇವಮಾದಿಷು ಅಪಾಸ್ತಸಮಸ್ತವಿಶೇಷಮೇವಬ್ರಹ್ಮ ಉಪದಿಶ್ಯತೇ (ಶಾಂಭಾ. ೩-೨-೧೧) ಅರ್ಥಾತ್**= ಬ್ರಹ್ಮನ ಸಗುಣ– ನಿರ್ಗುಣಾತ್ಮಿಕ ವರ್ಣನೆಗಳಲ್ಲಿ ಸರ್ವವಿಶೇಷಣವಿಕಲ್ಪರಹಿತವಾದ ನಿರ್ಗುಣಸ್ವರೂಪವನ್ನೇ ಸ್ವೀಕರಿಸಬೇಕು. ಸಗುಣವನ್ನಲ್ಲ. ಏಕೆಂದರೆ : ಉಪನಿಷತ್ತುಗಳಲ್ಲಿ ಬ್ರಹ್ಮಸ್ವರೂಪವನ್ನು ವರ್ಣಿಸುವಾಗ, 'ಅಶಬ್ದಮಸ್ಪರ್ಶಮರೂಪಮವ್ಯಯಂ ಎಂದೇ ಹೇಳಲ್ಪಟ್ಟಿದೆ

ವಿಶಿಷ್ಟಾದ್ವೈತಪ್ರಧಾನಾಚಾರ್ಯರಾದ ಭಗವದ್ರಾಮಾನುಜರು ಸಗುಣಬ್ರಹ್ಮವನ್ನೇ ಸ್ವೀಕರಿಸಬೇಕೆಂದು ಹೇಳುತ್ತಾರೆ : **ಅತ್ರೇದಂ ತತ್ತ್ವಂ ಚಿದಚಿದ್ವಸ್ತುಶರೀರತಯಾ ತತ್ಪ್ರಕಾರಂ ಬ್ರಹ್ಮೈವ ಸರ್ವಥಾ ಸರ್ವಶಬ್ದಾಭಿಧೇಯಂ ತತ್ ಕದಾಚಿತ್ ಸ್ವಸ್ಮಾತ್ ಸ್ವಶರೀರತಯಾಪಿ ಪೃಥಗ್ವ್ಯಪದೇಶಾನರ್ಹಸೂಕ್ಷ್ಮದಶಾಪನ್ನ ಚಿದಚಿದ್ವಸ್ತುಶರೀರಂ ತತ್ಕಾರಣಾವಸ್ಥಂ ಬ್ರಹ್ಮ**

ಕದಾಚಿಚ್ಚ ವಿಭಕ್ತನಾಮರೂಪವ್ಯವಹಾರಾರ್ಹ ಸ್ಥೂಲದಶಾಪನ್ನ ಚಿದಚಿದ್ವಸ್ತು ಶರೀರಂ, ತಚ್ಚ ಕಾರ್ಯಾವಸ್ಥಮಿತಿ ಕಾರಣಾತ್ ಪರಸ್ಮಾತ್ ಬ್ರಹ್ಮಣಃ ಕಾರ್ಯರೂಪಂ ಜಗದನ್ಯತ್

(ಶ್ರೀಭಾಷ್ಯ 2-1-14)

ಅರ್ಥಾತ್ = ಈ ವಿಷಯದಲ್ಲಿ ತತ್ತ್ವಪ್ರಕಾರವು ಹೀಗಿದೆ. ಬ್ರಹ್ಮನೇ ಸರ್ವಶಬ್ದವಾಚ್ಯನು. ಏಕೆಂದರೆ : ಚಿದ್ದೇಹವಾಗಲಿ, ಜಡದೇಹವಾಗಲಿ– ಅದು ಅವನದೇ ; ಅವನ ಪ್ರಕಾರವೇ. ಅವನೊಮ್ಮೆ ಕಾರಣಾವಸ್ಥೆಯಲ್ಲಿಯೂ ಮತ್ತೊಮ್ಮೆ ಕಾರ್ಯಾವಸ್ಥೆಯಲ್ಲಿಯೂ ಇರುತ್ತಾನೆ. ಕಾರಣಾವಸ್ಥೆಯಲ್ಲಿ ಬ್ರಹ್ಮನು ಸ್ಥೂಲದ ಶಾಪನ್ನನಾಗಿರುತ್ತಾನೆ. ಆಗ ನಾಮ-ರೂಪ ಭೇದಗಳೊಡನೆ ಜೀವರೂಪಜಡವೂ ಅವನ ದೇಹವಾಗಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರ್ಯಾವಸ್ಥೆಯಲ್ಲಿ ಬ್ರಹ್ಮನು ಸ್ಥೂಲದಶಾಪನ್ನನಾಗಿರುತ್ತಾನೆ. ಆಗ ನಾಮ-ರೂಪಭೇದಗಳೊಡನೆ ಜೀವರೂಪಜಡವೂ ಅವನ ದೇಹವಾಗಿರುತ್ತದೆ.

ಕಾರ್ಯರೂಪಜಗತ್ತು. ಬ್ರಹ್ಮಭಿನ್ನವಲ್ಲ.

ಈಗ ಭಾಗವತದಲ್ಲಿ ನೋಡಿ—ಆಶ್ರಯತತ್ತ್ವದ ನಿರೂಪಣೆಯು ಎಲ್ಲ ಕಡೆಗಳಲ್ಲಿಯೂ ಬಂದಿದೆ. ಅಂದರೇನು ? ಎಲ್ಲ ವಿಚಾರಗಳೂ ಆಶ್ರಯ ತತ್ತ್ವ ನಿರೂಪಣೆಗೇ ಸಂಬಂಧಪಟ್ಟಿವೆ. ಆದರಲ್ಲಿಯೂ, ದ್ವಿತೀಯಸ್ಕಂಧದ ಹತ್ತನೆಯ ಅಧ್ಯಾಯದಲ್ಲಿ—ದ್ವಾದಶಸ್ಕಂಧದ ಏಳನೆಯ ಅಧ್ಯಾಯದಲ್ಲಿ ಆಶ್ರಯತತ್ತ್ವದ ಸಾಕ್ಷಾಲ್ಲಕ್ಷಣವು ಹೇಳಲ್ಪಟ್ಟಿದೆ.

ಆಭಾಸಶ್ಚ ನಿರೋಧಶ್ಚ ಯತಶ್ಚಾಧ್ಯವಸೀಯತೇ
ಸ ಆಶ್ರಯಃ ಪರಂ ಬ್ರಹ್ಮ ಪರಮಾತ್ಮೇತಿ ಶಬ್ದ್ಯತೇ ||

ಸೋಧ್ಯಾऽತ್ಮಿಕೋऽಯಂ ಪುರುಷಃ
ಸೋಽಸಾವೋಽಪಾಧಿದೈವಿಕಃ
ಯಸ್ತತ್ರೋಭಯವಿಚ್ಛೇದಃ
ಪುರುಷೋऽಸ್ಯಾಧಿಭೌತಿಕಃ
ಏಕಮೇಕತರಾಭಾವೇ ಯಥಾ ನೋಪಲಭಾಮಹೇ ||

ತ್ರಿತಯಂ ತತ್ರ ನೋ ವೇದ
ಸ ಆತ್ಮಾ ಸ್ವಾಶ್ರಯಾಶ್ರಯಃ 2-10, 7-9
ವ್ಯತಿರೇಕಾನ್ವಯೋ ಯಃಸ್ಯ

ಜಾಗ್ರತ್ ಸ್ವಪ್ನಸುಷುಪ್ತಿಷು ।
ಮಾಯಾಮಯೇಷು ತದ್ಬ್ರಹ್ಮ
ಜೀವವೃತ್ತಿಷ್ವಪಾಶ್ರಯಃ || 12-7-19

ಸೃಷ್ಟಿ–ಸ್ಥಿತಿ–ಲಯಗಳೂ, ವಿಷಯಗಳೂ ವಿಷಯಾಭಾವಗಳೂ ಯಾರಿಂದ ಪ್ರಕಾಶಿಸಲ್ಪಡುತ್ತವೆಯೋ—ಆ ಪರಬ್ರಹ್ಮನೇ "ಆಶ್ರಯವು" ಅರ್ಥಾತ್, ಅಧಿಷ್ಠಾನವು. ಅವನನ್ನೇ ಪರಮಾತ್ಮನೆಂದು ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಧ್ಯಾತ್ಮಿಕಪುರುಷನೇ ಆಧಿದೈವಿಕನು. ಇವರಿಬ್ಬರನ್ನೂ ಪೃಥಗ್ಗೊಳಿಸು ವವನೇ "ಆಧಿಭೌತಿಕನು". ಒಬ್ಬನಿಲ್ಲದಿದ್ದರೆ ಮತ್ತೊಬ್ಬನಿರುವುದಿಲ್ಲ. ಈ ಮೂವರೂ ಪರಸ್ಪರಸಾಪೇಕ್ಷಕರು.

ಈ ಮೂವರ ಭಾವಾಭಾವಗಳನ್ನು ತಿಳಿಯುವ ಅಪೇಕ್ಷಾಹೀನ ಸಾಕ್ಷಿಯೇ "ಆಶ್ರಯನು"

ಜೀವರ ಅವಸ್ಥಾತ್ರಯದ ಅಭಿಮಾನಿಗಳಾದ ವಿಶ್ವ-ತೈಜಸ-ಪ್ರಾಜ್ಞರ ರೂಪದಲ್ಲಿ ಅಭಿವ್ಯಕ್ತನಾಗುವವನೂ, ಸಂಸಾರದ-ಸಂಸಾರಾಭಾವದ ಅಧಿಷ್ಠಾನನೂ ಆದ ಬ್ರಹ್ಮನೇ 'ಆಶ್ರಯನು'

ಮೇಲೆ ಉದಾಹರಿಸಿದ ಶ್ಲೋಕಗಳಲ್ಲಿ ಮೂರು ವಿಚಾರಗಳು ಪ್ರಧಾನ ವಾಗಿ ಬಂದಿವೆ.

"ಅಧಿಷ್ಠಾನತಾ", "ಸಾಕ್ಷಿತಾ", ನಿರಪೇಕ್ಷಿತಾ", ಅವನು ಭಾವಾಭಾವ ಗಳೆರಡರಿಂದಲೂ ಪರನು, ಹಾಗೂ ಎರಡರಲ್ಲಿಯೂ ಇದ್ದಾನೆ. ಅವನ ಇರುವಿಕೆ ಯಿಂದಲೇ ಇವುಗಳು ಸತ್ತಾವಂತಗಳು. ಅವನಿಲ್ಲದೇ ಇವುಗಳು ಇರಲಾರವು. ಇವುಗಳಿಲ್ಲದೇ ಅವನಿರಬಹುದು.

ಆಧ್ಯಾತ್ಮಿಕಪುರುಷನೆಂದರೆ = ನೇತ್ರೇಂದ್ರಿಯಾದಿಗಳ ಅಭಿಮಾನೀ ಜೀವನು. ಆಧಿದೈವಿಕಪುರುನೆಂದರೆ = ನೇತ್ರೇಂದ್ರಿಯಾದಿಗಳ ಅಧಿಷ್ಠಾತೃ ದೇವತಾ.

ಆಧಿಭೌತಿಕಪುರುಷನೆಂದರೆ = ನೇತ್ರಾದಿಗೋಳಕಗಳನ್ನುಳ್ಳ ಸ್ಥೂಲ ಶರೀರಾಭಿಮಾನೀ. ಈ ಮೂವರೂ ಸಾಪೇಕ್ಷಕರು. ಒಬ್ಬನಿಲ್ಲದಿದ್ದರೆ ಇಬ್ಬರೂ ವ್ಯರ್ಥ.

ದೃಶ್ಯವಿಲ್ಲದಿದ್ದರೆ ದರ್ಶನವೇ ಇಲ್ಲ. ದ್ರಷ್ಟೃವೂ ಏನೂ ಮಾಡಲಾರ. ದ್ರಷ್ಟೃವೇ ಇಲ್ಲದಿದ್ದರೆ ದರ್ಶನ-ದೃಶ್ಯಗಳ ಕಲ್ಪನೆಯೇ ಮೂಡುವುದಿಲ್ಲ, ಆದುದರಿಂದ ಈ ಮೂರೂ ಪರಸ್ಪರಸಾಪೇಕ್ಷಗಳು. ಹಾಗೂ ಬಾಧಿತಗಳು.

ಈ ಮೂರರ ಭಾವಾಭಾವಗಳನ್ನು ನೋಡುವ ಆತ್ಮನು ನಿರಪೇಕ್ಷ ಸಾಕ್ಷಿಸ್ವರೂಪನು. ಈ ಆತ್ಮನೇ ಆಶ್ರಯಬ್ರಹ್ಮನು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಹೀಗೆ ಆಶ್ರಯತತ್ತ್ವದ ವ್ಯಾಖ್ಯಾನದಿಂದ ಬ್ರಹ್ಮನೇ ಆಶ್ರಯತತ್ತ್ವನು. ಶ್ರೀಕೃಷ್ಣನಲ್ಲ—ಎಂದು ತಿಳಿಯಬಾರದು. ಭಾಗವತದಲ್ಲಿ ಶ್ರೀಕೃಷ್ಣನೂ ಬ್ರಹ್ಮನೂ ಒಂದೇ.

ಬ್ರಹ್ಮಸೂತ್ರದ ಬ್ರಹ್ಮನೂ, ಗೀತೆಯ ಪುರುಶೋತ್ತಮನೂ ಭಾಗವತದ ಶ್ರೀಕೃಷ್ಣನೂ—ಎಲ್ಲರೂ ಆ ಪರಬ್ರಹ್ಮಪರಮಾತ್ಮರೇ.

ಭಾಗವತದಲ್ಲಿ ಹೇಳುತ್ತಾರೆ :

ವದಂತಿ ತತ್ತತ್ತ್ವವಿದಃ ತತ್ತ್ವಂ ಯತ್ ಜ್ಞಾನಮದ್ವಯಮ್ ।
ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥
ಕೃಷ್ಣಮೇನ ಮವೇಹಿ ತ್ವಂ ಆತ್ಮಾನಮಖಿಲಾತ್ಮನಾಂ ।
ಜಗದ್ಧಿತಾಯ ಸೋಽಪ್ಯತ್ರ ದೇಹೀವಾಭಾತಿ ಮಾಯಯಾ

ತತ್ತ್ವವಿದರು ಒಂದೇ ಆದ ಅದ್ವಿತೀಯಪರಬ್ರಹ್ಮಜ್ಞಾನಸ್ವರೂಪವನ್ನು ಬ್ರಹ್ಮ. ಪರಮಾತ್ಮಾ. ಭಗವಾನ್ ಎಂಬುದಾಗಿ ಕರೆಯುತ್ತಾರೆ.

ಶ್ರೀಕೃಷ್ಣನೇ ಜಗತ್ತಿನ ಅಸಂಖ್ಯಾತ ಜೀವಾತ್ಮಸ್ವರೂಪಿಯು. ಜಗತ್ತಿನ ಕಲ್ಯಾಣಕ್ಕಾಗಿ ಅವನು ಆತ್ಮಮಾಯೆಯಿಂದ ಶರೀರಧಾರಿಯಂತೆ ತೋರುತ್ತಾನೆ.

ಭಗವಂತನಲ್ಲಿ ದೇಹ-ದೇಹೀ ಭಾವನೆಯಿಲ್ಲ. ಜೀವನು ಮಾತ್ರ ಶರೀರದಿಂದ ಪೃಥಕ್ಕಾಗಿ ಇರುತ್ತಾನೆ. ಶರೀರವನ್ನು ಧರಿಸುತ್ತಾನೆ ; ತ್ಯಜಿಸುತ್ತಾನೆ.

ಭಗವಂತನ ಶರೀರವು ನಮ್ಮಗಳ ಶರೀರದಂತೆ ಜಡವಲ್ಲ. ಚಿನ್ಮಯವು. ಅದು ಹೇಯೋಪಾದೇಯಭೇದರಹಿತವಾದುದು. ಶರೀರದಂತೆಯೇ ಗುಣ–ಕರ್ಮಗಳೂ ಸಹ. ಅವೂ ಆತ್ಮಸ್ವರೂಪಗಳೇ.

ಜೀವನ ಗುಣಗಳು ಪ್ರಾಕೃತಗಳು. ಭಗವಂತನ ಗುಣಗಳು ಅಪ್ರಾಕೃತಗಳು. ನಿಜಸ್ವರೂಪವಾದುವು. ಅವುಗಳು ತ್ಯಾಗಮಾಡಲ್ಪಡುವವುಗಳಲ್ಲ.

ಇನ್ನೊಂದು ವೈಲಕ್ಷಣ್ಯವೆಂದರೆ : ಭಗವಚ್ಛರೀರವೂ, ಅವನ ಗುಣಗಳೂ ಜೀವರ ದೃಷ್ಟಿಯಲ್ಲಿಯೇ ಹೊರತು ಭಗವದ್ದೃಷ್ಟಿಯಲ್ಲಲ್ಲ. ಭಗವಂತನು ಯಾವಾಗಲೂ ನಿಜಸ್ವರೂಪದಲ್ಲಿ ಸಮತಾಸ್ಥಿತಿಯಲ್ಲಿಯೇ ಇರುವವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನಲ್ಲಿ ಗುಣ-ಗುಣಿಗಳ ಭೇದವಿಲ್ಲ, ಎಲ್ಲ ಆಚಾರ್ಯರೂ ಭಗವಂತನ ಈ ಸ್ವರೂಪದ ಕಡೆಗೇ ಲಕ್ಷವನ್ನಿರಿಸಿದ್ದಾರೆ.

ಅವರ ವರ್ಣನಾಶೈಲಿಯು ಬೇರೆ ಬೇರೆಯಾಗಿರಬಹುದು. ಅಜ್ಞರು ಅವರಲ್ಲಿ ಪರಸ್ಪರ ವಿರೋಧವಿದೆಯೆಂದು ತಿಳಿಯುತ್ತಾರೆ. ವಿಚಾರದೃಷ್ಟಿಯಿಂದ ನೋಡುವುದಾದರೆ ಆಶ್ರಯ ಸ್ವರೂಪಪರಬ್ರಹ್ಮ ಶ್ರೀಕೃಷ್ಣನಲ್ಲಿ ಸರ್ವ ಸಮನ್ವಯವೂ ಆಗುವುದು.

ಭಗವಂತನ ಸ್ವರೂಪಭೂತಗಳಾದ ಈ ಅಚಿಂತ್ಯಗುಣಗಳು ಅವನ 'ಹ್ಲಾದಿನಿ' ನಿತ್ಯಶಕ್ತಿಯ ಪ್ರಕಾಶಗಳು.

ಶ್ರೀರಾಧಿಕೆಯೇ 'ಹ್ಲಾದಿನೀಶಕ್ತಿಯು.' ಇವಳು ಭಗವಂತನಿಂದ ಅಭಿನ್ನಳು. ಇದರಿಂದ 'ಶ್ರೀ ರಾಧಾಕೃಷ್ಣನೇ ಆಶ್ರಯತತ್ತ್ವ' ಎಂದು ಹೇಳುವುದು ಸರಿಯಾಗಿದೆ. ಈ ದಶಮತತ್ತ್ವವಾದ ಆಶ್ರಯತತ್ತ್ವವನ್ನು ವಿಶುದ್ಧ ರೂಪದಲ್ಲಿ ತಿಳಿಯಲು ಹಾಗೂ ಸರ್ಗ-ವಿಸರ್ಗಾದಿ ನವತತ್ತ್ವಗಳನ್ನು ವರ್ಣಿಸಿದ್ದಾರೆ.

ದಶಮಸ್ಯ ವಿಶುಧ್ಯರ್ಥಂ ನವಾನಾಮಿಹ ಲಕ್ಷಣಮ್
ವರ್ಣಯಂತಿ ಮಹಾತ್ಮಾನಃ ಶ್ರುತೇನಾರ್ಥೇನ ಚಾಂಜಸಾ ॥

ಇನ್ನು ಸರ್ಗ ವಿಸರ್ಗಾದಿಗಳ ಸ್ವರೂಪವನ್ನರಿಯೋಣ :

ಸರ್ಗವೆಂದರೆ ಸೃಷ್ಟಿ. ಸೃಷ್ಟಿಯ ಸಂಬಂಧದಲ್ಲಿ ಹಲವಾರು ವಿಚಾರಗಳಿವೆ.

ಈ ಜಗತ್ತು ಎಂದರೇನು ? ಇದರ ಉತ್ಪತ್ತಿಯು ಹೇಗಾಯಿತು ?

ವೇದೋಪನಿಷತ್ತುಗಳಲ್ಲಿ, ದರ್ಶನಗಳಲ್ಲಿ, ಪುರಾಣಾದಿಗಳಲ್ಲಿ ಸೃಷ್ಟಿಯ ಬಗ್ಗೆ ಅನೇಕ ಪ್ರಕ್ರಿಯೆಗಳನ್ನು ಕಾಣಬಹುದು. ಶ್ರೀಮದ್ಭಾಗವತದಲ್ಲಿಯೂ ಸೃಷ್ಟಿಯನ್ನು ವರ್ಣಿಸಿದ್ದಾರೆ. ಆಸ್ತಿಕಸಿದ್ಧಾಂತ ಪ್ರತಿಪಾದಕ ಗ್ರಂಥಗಳಲ್ಲಿ ಆಶ್ರಯ ಹಾಗೂ ಆಧಾರರೂಪಗಳಲ್ಲಿ ಪರಮಾತ್ಮನನ್ನು ಸ್ವೀಕರಿಸಿದ್ದಾರೆ. ಸೃಷ್ಟಿಕ್ರಮ ಪ್ರತಿಪಾದನೆಯಲ್ಲಿ ಭಿನ್ನ-ಭಿನ್ನ ರೀತಿಯನ್ನು ತೋರಿಸಿದ್ದಾರೆ. ಈ ವಿಚಾರದಲ್ಲಿ ಮೂರು ವಾದಗಳು ಪ್ರಸಿದ್ಧಿಯಲ್ಲಿವೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

1. ಆರಂಭವಾದ 2. ಪರಿಣಾಮವಾದ 3. ವಿವರ್ತವಾದ

1. ಆರಂಭವಾದ ;—ನ್ಯಾಯವೈಶೇಷಿಕದರ್ಶನಗಳಲ್ಲಿ ಪರಮಾಣು ರೂಪದಲ್ಲಿ ಆಕಾಶ-ಕಾಲಾದಿ ನಿತ್ಯದ್ರವ್ಯಗಳನ್ನೂ, ಗುಣಕರ್ಮ-ಸಾಮಾನ್ಯಾದಿ ಪದಾರ್ಥಗಳನ್ನೂ ಒಪ್ಪುತ್ತಾರೆ.

ಸೃಷ್ಟಿಯ ಪ್ರಾರಂಭದಲ್ಲಿ ಸರ್ವಜೀವರಿಂದ ವಿಲಕ್ಷಣನಾದ ಪರಮಾತ್ಮನು ನಿಮಿತ್ತಕಾರಣನಾಗಿ ಈ ಪರಮಾಣುಗಳನ್ನು ಒಟ್ಟುಗೂಡಿಸುತ್ತಾನೆ. ಪರಮಾಣು ಗಳ ಸಂಯೋಗದಿಂದ ನಾನಾಪ್ರಕಾರದ ಪದಾರ್ಥಗಳ ಸೃಷ್ಟಿಯಾಗುತ್ತದೆ.

ಪರಮಾಣು ಸಂಯೋಗದ ಆರಂಭವಾದ ಮೇಲೆಯೇ ಸೃಷ್ಟಿಯಾಗುತ್ತದೆ ಪರಮಾಣು ಸಂಯೋಗದಲ್ಲಿ ಈಶ್ವರನು ನಿಮಿತ್ತನೆಂದು ಒಪ್ಪುವವರು 'ಸೇಶ್ವರರು'. ಒಪ್ಪದಿರುವವರು 'ನಿರೀಶ್ವರರು'.

2. ಪರಿಣಾಮವಾದ ;-ಸೇಶ್ವರಸಾಂಖ್ಯರು, ಯೋಗದರ್ಶನಕಾರರು ವಿಭಿನ್ನಪರಮಾಣುಗಳನ್ನು ಸೃಷ್ಟಿಕಾರಣಗಳೆಂದು ಒಪ್ಪುವುದಿಲ್ಲ. ತ್ರಿಗುಣಾತ್ಮಿಕಾಪ್ರಕೃತಿಯನ್ನು ಮಾನ್ಯಮಾಡುತ್ತಾರೆ. ಪರಮಾತ್ಮನಿಂದ ಪ್ರಕೃತಿಯು ಕ್ಷುಬ್ಧಗೊಂಡಾಗ ತ್ರಿಗುಣಗಳ ವಿಕಾಸವಾಗುವುದು.

ತ್ರಿಗುಣಗಳ ಪರಿಣಾಮದಿಂದಲೇ ಸೃಷ್ಟಿಯಾಗುವುದು, ಕೆಲವರು ಪರಿಣಾಮಕ್ಕೆ ಈಶ್ವರನು ನಿಮಿತ್ತನೆಂದು ಒಪ್ಪುತ್ತಾರೆ. ಕೆಲವರ ಅಭಿಪ್ರಾಯದಲ್ಲಿ ಪ್ರಕೃತಿಯ ಸ್ವಭಾವವೇ ಪರಿಣಾಮವನ್ನು ಹೊಂದುವುದಾಗಿದೆ.

ಪರಿಣಾಮವು ಪ್ರಕೃತಿಯ ಸ್ವಭಾವವೆಂದು ಒಪ್ಪುವವರಲ್ಲಿ ಕೆಲವರು ಪುರುಷವಿಶೇಶರೂಪದಲ್ಲಿ ಈಶ್ವರನನ್ನು ಉದಾಸೀನನು, ಅಸಂಗನು_ಎಂದು ಒಪ್ಪುತ್ತಾರೆ. ಕೆಲವರು ಒಪ್ಪುವುದಿಲ್ಲ.

ಶ್ರೀಮಧ್ವಾಚಾರ್ಯರು, ಪ್ರಕೃತಿಯು ಪರಮಾತ್ಮನಿಂದ ಭಿನ್ನವೆಂದು ಒಪ್ಪುತ್ತಾರೆ. ಅವರು ಪ್ರಕೃತಿಯು ಜಗತ್ತಿಗೆ ಕಾರಣವೆಂದು ಹೇಳುತ್ತಾರೆ.

ಶ್ರೀರಾಮಾನುಜಾಚಾರ್ಯರು ಪ್ರಕೃತಿ-ಜೀವ ಈಶ್ವರ-ಈ ಮೂರು ತತ್ತ್ವಗಳನ್ನೂ ಬ್ರಹ್ಮನೆಂದೇ ಒಪ್ಪುತ್ತಾರೆ. ಅವರ ಮತದ ರೀತ್ಯಾ ಬ್ರಹ್ಮನೇ ಅಂಶವಿಶೇಷದಲ್ಲಿ ಪ್ರಕೃತಿರೂಪದಿಂದ ಪರಿಣತನಾಗುತ್ತಾನೆ. ಅವನೇ ಜಗ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಾಗುತ್ತಾನೆ. ಅಂದರೇನಾಯಿತು ? ಪರಿಣಾಮವಾದದಲ್ಲಿ ಎರಡು ರೂಪ ಗಳಾದುವು ಗುಣಪರಿಣಾಮವಾದ, ಬ್ರಹ್ಮಪರಿಣಾಮವಾದ.

ಬ್ರಹ್ಮನು ಪರಿಣಾಮಿಯಾದರೆ ವಿಕಾರಿಯಾಗುತ್ತಾನೆಂದು ಶ್ರೀವಲ್ಲಭಾ ಚಾರ್ಯರು ಅವಿಕೃತಪರಿಣಾಮವನ್ನು ಒಪ್ಪುತ್ತಾರೆ.

ವಿವರ್ತವಾದ = ಶ್ರೀ ಶಂಕರಾಚಾರ್ಯರೇ ಆದಿಯಾಗಿ ಬಹಳ ಮಂದಿ ಆಚಾರ್ಯರು ಬ್ರಹ್ಮನಿಂದ ಪೃಥಕ್ಕಾಗಿ ಪರಮಾಣು. ಪ್ರಕೃತಿ ಹಾಗೂ ಅವುಗಳ ಕಾರ್ಯಸತ್ತೆಯನ್ನು ಸ್ವೀಕರಿಸುವುದಿಲ್ಲ. ಅವರು ಆರಂಭವಾದವನ್ನಾಗಲಿ, ಪರಿಣಾಮವಾದವನ್ನಾಗಲಿ ಒಪ್ಪುವುದಿಲ್ಲ. ಸೃಷ್ಟಿಯ ವ್ಯವಸ್ಥೆಯು ಕೇವಲ 'ವಿವರ್ತ'ವೆಂದು ಒಪ್ಪುತ್ತಾರೆ.

ಸತ್ಯವಸ್ತುವಿನಲ್ಲಾಗುವ ವಾಸ್ತವಿಕಪರಿವರ್ತನೆಯನ್ನು ಕೆಲವರು ಪರಿಣಾಮವೆಂದು ಹೇಳಿದರೆ–ಇವರು ಸೃಷ್ಟಿಯು ವಾಸ್ತವಿಕವಾದರೂ ಅದರ ದರ್ಶನಕ್ಕೆ 'ಭ್ರಮೆಯು' ಕಾರಣವೆನ್ನುತ್ತಾರೆ. ಇದೇ 'ವಿವರ್ತ.' ಈ ವಿವರ್ತ ವನ್ನು ಮಾಯೆಯೆಂದು ಹೇಳುತ್ತಾರೆ. ಮಾಯೆಯು ವಾಸ್ತವಿಕ ತತ್ತ್ವವಲ್ಲ.

ಅಧ್ಯಾರೋಪದ ದೃಷ್ಟಿಯಿಂದ ಸೃಷ್ಟಿಯನ್ನು ಒಂದು ಹಂತದವರೆಗೆ ಸತ್ಯವೆಂದು ಒಪ್ಪುತ್ತಾರೆ. ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳನ್ನು ನಿರೂ ಪಿಸುತ್ತಾ ಪ್ರಕೃತಿಯವರೆಗೆ ತೆಗೆದುಕೊಂಡು ಹೋಗುತ್ತಾರೆ. ಅನಂತರ ಅದ್ವಿತೀಯ ಚಿತ್‌ಸ್ವರೂಪದಲ್ಲಿ ಪ್ರಕೃತಿಯನ್ನು 'ಅಸತ್' ಎಂದು ತೆಗಳಿ, ಸದ್ವಸ್ತುವಿನ ಪ್ರತಿಷ್ಠೆಯನ್ನು ಮಾಡುತ್ತಾರೆ. ಅಧ್ಯಾರೋಪವನ್ನು ತತ್ತ್ವ ಜ್ಞಾನದಿಂದ ಅಪವದಿಸಿ ಸ್ವಸ್ವರೂಪಸ್ಥಿತಿಯನ್ನು ವರ್ಣಿಸುತ್ತಾರೆ.

ಒಮ್ಮೆ ಜಗತ್ತಿನ ಅಧ್ಯಾರೋಪವಾಗಿಬಿಟ್ಟರೆ ಆಮೇಲೆ ಅದರ ಪರಿ ಣಾಮವು, ಹೇಗೆ ಆಗಲಿ-ವಿವರ್ತವಾದಿಗಳಿಗೆ ಯಾವ ಆಪತ್ತಿಯೂ ಇಲ್ಲ. ಅದರ ತಾತ್ಪರ್ಯವು ಸೃಷ್ಟಿಯ ವರ್ಣನೆಯಲ್ಲಿಲ್ಲ.

ಸೃಷ್ಟಿಯ ವಿಷಯದಲ್ಲಿ ಇನ್ನೂ ಬೇರೆ-ಬೇರೆ ವಿಧದ ಅಭಿಪ್ರಾಯಗಳಿವೆ. ಪೂರ್ವಮೀಮಾಂಸಕರು ಸೃಷ್ಟಿಯ ವಿಷಯದಲ್ಲಿ ವ್ಯಾವಹಾರಿಕ ದೃಷ್ಟಿಯನ್ನೇ ತಾಳುತ್ತಾರೆ. ಸೃಷ್ಟಿಯು ಕಾಲಪುರುಷನ ಕ್ರೀಡೆಯೆಂದೂ. ದೈವೇಚ್ಛೆಯೆಂದೂ ಈಶ್ವರನ ವಿಲಾಸವೆಂದೂ ಬಹಳ ಕಾರಣಗಳನ್ನೂ ನಿರೂಪಿಸುತ್ತಾರೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಪಾಶ್ಚಾತ್ಯವೈಜ್ಞಾನಿಕಪ್ರಪಂಚದಲ್ಲಿ, ಸೃಷ್ಟಿಯ ಸಂಬಂಧದಲ್ಲಿ ಹಾಗೂ ಅತೀಂದ್ರಿಯಪದಾರ್ಥಗಳ ಸಂಬಂಧದಲ್ಲಿ ಇಲ್ಲಿಯವರೆಗೆ ನಿಶ್ಚಿತ ಸಿದ್ಧಾಂತವು ಏರ್ಪಟ್ಟಿಲ್ಲ. ಯದ್ಯಪಿ ಒಂದು ಪದಾರ್ಥದ ವಿಕಾಸದಿಂದ ಸೃಷ್ಟಿಯ ವಿಕಾಸ ವನ್ನು ಹೇಳುತ್ತಾರಾದರೂ ಆ ಪದಾರ್ಥವು ಜಡವೋ, ಚೇತನವೋ-ಎಂದು ನಿರೂಪಿಸಲು ಸಮರ್ಥರಾಗಿಲ್ಲ.

ಆದರೆ ಭಾರತೀಯ ಋಷಿ-ಮುನಿಗಳು ಯೋಗದೃಷ್ಟಿಯಿಂದ ಸೃಷ್ಟಿಯ ಮೂಲವು ಚಿತ್ತೆಂಬುವುದನ್ನು ನಿಶ್ಚಿತಗೊಳಿಸಿದ್ದಾರೆ.

ಶ್ರೀಮದ್ಭಾಗವತದಲ್ಲಿ ಸೃಷ್ಟಿತತ್ತ್ವದ ವರ್ಣನೆಯು ಭಿನ್ನರೀತಿಯಲ್ಲಿ ಬರುತ್ತದೆ. ಸರ್ಗಲಕ್ಷಣವನ್ನು ಹೀಗೆ ಹೇಳುತ್ತಾರೆ ;

ಭೂತಮಾತ್ರೇಂದ್ರಿಯಧಿಯಾಂ ಜನ್ಮಸರ್ಗ ಉದಾಹೃತಃ ।
ಬ್ರಹ್ಮಣೋ ಗುಣವೈಷಮ್ಯಾತ್ 2-10-3
ಅವ್ಯಾಕೃತ ಗುಣಕ್ಷೋಭಾತ್ ಮಹತಸ್ತ್ರಿವೃತೋಽಹಮಃ ।
ಭೂತಮಾತ್ರೇಂದ್ರಿಯಾರ್ಥಾನಾಂ ಸಂಭವಃ ಸರ್ಗ ಉಚ್ಯತೇ
12-7-11

ಅಂದರೆ-ಅವ್ಯಕ್ತತೆಯಿಂದ ವ್ಯಕ್ತತೆ. ಏಕತೆಯಿಂದ ಅನೇಕತೆ. ನಿರಾಕಾರತೆ ಯಿಂದ. ಸಾಕಾರತೆ, ಸೂಕ್ಷ್ಮದಿಂದ ಸ್ಥೂಲವಾಗುವುದೇ 'ಸೃಷ್ಟಿಯು.'

ಪರಮಾತ್ಮನ ದ್ವಾರಾ ಸಾಮ್ಯಾವಸ್ಥಾಪ್ರಕೃತಿಯಲ್ಲಿ ಕ್ಷೋಭೆಯುಂಟಾದ ಮೇಲೆ ಗುಣಗಳ ವೈಷಮ್ಯದಿಂದ ಮಹತ್ತತ್ತ್ವ, ತ್ರಿವಿಧಾಹಂಕಾರಗಳು ತನ್ಮಾತ್ರೆ ಗಳು. ಇಂದ್ರಿಯಗಳು ಹಾಗೂ ಪಂಚಭೂತಗಳ ಸೃಷ್ಟಿಯಾಗುವುದೇ 'ಸರ್ಗವು'.

ಈ ಪರಿಣಾಮವು ಪ್ರಕೃತಿಗೆ ಸಂಬಂಧಪಟ್ಟುದು. ಭಾಗವತದಲ್ಲಿ ಅನೇಕ ಸ್ಥಳಗಳಲ್ಲಿ ಮಾಯೆಯನ್ನೂ. ಪ್ರಕೃತಿಯನ್ನೂ ಏಕಾರ್ಥದಲ್ಲಿ ಪ್ರಯೋಗಿಸಿ ದ್ದಾರೆ.

ಒಂದೊಂದು ಕಡೆ ಭಗವದಿಚ್ಛೆಯನ್ನೇ ಪ್ರಕೃತಿಯೆಂದು ಕರೆದಿದ್ದಾರೆ.

ಪ್ರಕೃತಿ–ಜೀವ ವಿವಿಧಕಾರ್ಯಗಳ ರೂಪದಿಂದ ಸ್ವಯಂ ಭಗವಂತನೇ ಪ್ರಕಟನಾಗುತ್ತಾನೆ. ಇವುಗಳಲ್ಲಿ ಪ್ರವಿಷ್ಟನಾಗದಿದ್ದರೂ ಪ್ರವಿಷ್ಟನಾದವನಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೋರುತ್ತಾನೆ. ಅವನು ಸ್ವಯಂ ತನ್ನಲ್ಲಿಯೇ, ತನ್ನಿಂದಲೇ, ತಾನೇ ಸೃಷ್ಟಿಯನ್ನು ಮಾಡುತ್ತಾನೆ. ಅವನೇ ಸ್ರಷ್ಟಾ-ಸೃಜ್ಯ-ಸೃಷ್ಟಿ. ತದ್ಭಿನ್ನ ವಸ್ತುವಿಲ್ಲ. ತೋರುವ ಭೇದಗಳು ಮಾಯಿಕ ಅಸತ್.

ಸ್ವಪ್ನದಲ್ಲಿ ಏನೂ ಇಲ್ಲದಿದ್ದರೂ ಎಲ್ಲವೂ ತೋರುವಂತೆ-ದೃಶ್ಯವಿಲ್ಲದಿದ್ದರೂ ದರ್ಶನವಾಗುತ್ತದೆ. ಹಾಗೂ ಮೂರನೇ ಸ್ಕಂಧದ ಹನ್ನೊಂದನೇ ಅಧ್ಯಾಯದಲ್ಲಿ ಪರಮಾಣುಗಳ ಸಂಯೋಗದಿಂದಲೂ ಸೃಷ್ಟಿಯ ವರ್ಣನೆಯನ್ನು ಮಾಡುತ್ತಾರೆ.

ಈ ವಿವಿಧ ಅಭಿಪ್ರಾಯಗಳ ಸಮಾಲೋಚನೆಯಿಂದ ನಾವು ತಿಳಿಯಬಹುದಾದ ಅಂಶವೇನೆಂದರೆ : 'ಸರ್ವವಿಚಾರಗಳ ಅಂತಿಮಗುರಿಯೂ ಭಗವಂತನೇ.' ಇದನ್ನೇ ಋಷಿ-ಮುನಿಗಳು ಸ್ಪಷ್ಟಪಡಿಸಿದ್ದಾರೆ.

ಸೃಷ್ಟಿಕ್ರಮವನ್ನು ಅನಾದಿಯೆಂದು ಹೇಳುತ್ತಾರೆ. ಪ್ರಳಯಾನಂತರ ಸೃಷ್ಟಿ, ಸೃಷ್ಟಿಯ ನಂತರ ಪ್ರಳಯ–ಈ ಕ್ರಮವು ಅನಾದಿಕಾಲದಿಂದ ನಡೆಯುತ್ತಿದೆ. ತಮೋಗುಣದ ಪ್ರಾಧಾನ್ಯದಿಂದ ಪ್ರಳಯವಾಗುತ್ತದೆ. ರಜೋಗುಣದ ಪ್ರಾಧಾನ್ಯದಿಂದ ಸೃಷ್ಟಿಯಾಗುತ್ತದೆ.

ಕರುಣಾಸಾಗರನಾದ ಭಗವಂತನು ಪ್ರಳಯಕಾಲೀನ ಅಜ್ಞಾನನಿದ್ರೆಯಲ್ಲಿ ಮಲಗಿರುವ ಜೀವರನ್ನು ಪುರುಷಾರ್ಥಸಾಧನೆಗಾಗಿ ಸೃಷ್ಟಿಯನ್ನು ಮಾಡಿ ಎಚ್ಚರಿಸುತ್ತಾನೆ. ಪುರುಷಾರ್ಥಗಳಲ್ಲಿ ಮೋಕ್ಷವೇ ಶ್ರೇಷ್ಠವಾದುದು. ಸಂಸಾರದಿಂದ ಮುಕ್ತನಾಗಲು ಸಂಸಾರದ ಸೃಷ್ಟಿಯಾಗಿದೆ.

ಸೃಷ್ಟಿಯ ವಿಷಯದಲ್ಲಿ ಮತ್ತೊಂದು ದೃಷ್ಟಿಯೆಂದರೆ : ಭಾವದೃಷ್ಟಿ. ಭಕ್ತರ ದೃಷ್ಟಿ, ಈ ದೃಷ್ಟಿಯಲ್ಲಿ-ಸೃಷ್ಟಿಯು ಭಗವಂತನ ಕ್ರೀಡೆಗಾಗಿ, ಸಂತೋಷಕ್ಕಾಗಿ. ಈ ವಿಚಾರದಲ್ಲಿ ಶ್ರುತಿಪ್ರಮಾಣವು ಹೀಗಿದೆ = **ಸ ಏಕಾಕೀ ನಾರಮತ । ತತೋ ದ್ವಿತೀಯಮಸೃಜತ । ಸ ರಂತುಮೈಚ್ಛತ್ ।**

ಈ ಚರಾಚರ ಜಗತ್ತು ಭಗವಂತನ ಕ್ರೀಡಾಸ್ಥಳ. ಭಕ್ತನ ದೃಷ್ಟಿಯಲ್ಲಿ ಕರ್ಮ, ಕರ್ಮಜನ್ಯ ಸುಖದುಃಖಗಳಿಗೆ ಬೆಲೆಯಿಲ್ಲ. ಅವುಗಳು ಲೀಲಾಮಾತ್ರಗಳು. ಈ ದೃಢತೆಯಿಂದ ಭಕ್ತನು ಭಗವಂತನ ಲೀಲಾಮೃತ ಸೇವನೆಯಲ್ಲಿ ಮತ್ತನಾಗಿರುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನಯೋಗಿಗಳ ದೃಷ್ಟಿಯಿಂದಲೂ ಸಹ ಪ್ರತೀತಿಮಾತ್ರವಾದ ಈ ಜಗತ್ತು ತನ್ನ ಭಾವಾಭಾವಗಳಿಗೆ ಸಾಕ್ಷಿಮಾತ್ರನಾದ ಅಧಿಷ್ಠಾತೃವಿನ ಬೋಧೆಯನ್ನು ಮಾಡುತ್ತದೆ, ವೃತ್ತಿಯು ಗಾಢವಾದಾಗ ಪ್ರತೀತಿಯೂ ಇರುವುದಿಲ್ಲ. ಸ್ವಸ್ವರೂಪಮಾತ್ರವೇ ತೋರುತ್ತದೆ.

ಈ ನಿಜಸ್ವರೂಪದ ಜ್ಞಾನಕ್ಕಾಗಿ ಸೃಷ್ಟಿಯಿದೆ. ಹೇಗೆ ಬೇಕಾದರೂ ವರ್ಣಿಸಿರಿ. ಕಲ್ಪಭೇದದಿಂದಲೂ ಸಹ ಸೃಷ್ಟಿಕ್ರಮದ ವರ್ಣನೆಯಲ್ಲಿ ಭೇದವು ತೋರುತ್ತದೆ.

ಶ್ರೀಮದ್ಭಾಗವತದ ಎರಡನೇ ಮೂರನೇ ಸ್ಕಂಧಗಳಲ್ಲಿ ಸೃಷ್ಟಿಕ್ರಮವನ್ನು ವಿಶದವಾಗಿ ತಿಳಿಸಿದ್ದಾರೆ.

೨. ವಿಸರ್ಗ

ಪ್ರಕೃತಿಯ ಗುಣವೈಷಮ್ಯದಿಂದ ಆಗುವ ವಿರಾಟ್‌ಸೃಷ್ಟಿಯು ಸರ್ಗವಾದರೆ–ವಿರಾಟ್‌ಪುರುಷನ, ಬ್ರಹ್ಮನ ಮೂಲಕ ಆಗುವ ವ್ಯಷ್ಟಿಸೃಷ್ಟಿ ಹಾಗೂ ವಿವಿಧಸೃಷ್ಟಿಯು 'ವಿಸರ್ಗವು.'

ಸರ್ಗದ ಆಧಾರ. ಸರ್ಗದ ಉಪಾದಾನ, ಸರ್ಗದ ನಿಮಿತ್ತ ಹಾಗೂ ಸರ್ಗರೂಪದಲ್ಲಿ ಸರ್ಗಾಭಾವದಲ್ಲಿಯೂ ಪರಮಾತ್ಮನನ್ನು ದರ್ಶನಮಾಡುತ್ತಾ ಜೀವರು ಕೃತಕೃತ್ಯರಾಗುತ್ತಾರೆ. ಹಾಗೆಯೇ ವಿಸರ್ಗದಲ್ಲಿಯೂ ಪರಮಾತ್ಮಾನುಭೂತಿಯನ್ನು ಕಾಣುತ್ತಾರೆ.

ಸರ್ಗವು ಮಹಾನ್, ಆದರೆ ವಿಸರ್ಗವು ಅಲ್ಪ. ಒಂದು ಬ್ರಹ್ಮಾಂಡವನ್ನು ತನ್ನ ಶರೀರವೆಂದು ಒಪ್ಪುವ ರಜೋಗುಣಾಧಿದೇವತೆ ಬ್ರಹ್ಮನು. ಹಂಸರೂಪೀ ಪರಮಾತ್ಮನ ಆಧಾರದ ಮೇಲೆ ವಿದ್ಯಾರೂಪಿಣೀ ಸರಸ್ವತಿಯ ಸಹಾಯದಿಂದ ವೇದಜ್ಞಾನದ ಆಶ್ರಯವನ್ನು ಪಡೆದು ಜೀವಿಗಳ ಪ್ರಾಕ್ತನ ಕರ್ಮಗಳನ್ನು ಸ್ಮರಿಸುತ್ತಾನೆ.

ಕರ್ಮಾನುಸಾರತಃ ಭೋಗಾಯತನ, ಕರ್ಮಾಯತನ ಶರೀರಗಳನ್ನು ನಿರ್ಮಿಸುತ್ತಾನೆ. ಮೊದಲು ಬ್ರಹ್ಮನಿಗೂ ಸೃಷ್ಟಿಜ್ಞಾನವಿರುವುದಿಲ್ಲ. ಸೃಷ್ಟಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲವಾದ ಭಗವಂತನನ್ನು ಅನ್ವೇಷಿಸುತ್ತಾ ಅವನ ಪ್ರೇರಣೆಯಂತೆ ತಪಸ್ಸು ಮಾಡುತ್ತಾನೆ. ಅವನ ಅನುಗ್ರಹದಿಂದ '**ಯಥಾಪೂರ್ವಮಕಲ್ಪಯತ್**'

ಬ್ರಹ್ಮಸೃಷ್ಟಿಯು ಮಾನಸಿಕವು. ಅವನು ಶರೀರಸಂಯೋಗಪೂರ್ವಕವಾದ ಬೈಜೀಸೃಷ್ಟಿಯನ್ನು ಮಾಡುವುದಿಲ್ಲ. ಅವನ ಸೃಷ್ಟಿಯಲ್ಲಿ ಜೀವಿಗಳ ಕರ್ಮಾನುಸಾರವಾಗಿ ವೈವಿಧ್ಯವಿರುತ್ತದೆ.

ಬ್ರಹ್ಮನೊಡನೆಯೇ ಮರೀಚಿ, ಕಶ್ಯಪ, ಮನು ಇತ್ಯಾದಿ-ಆಧಿಕಾರಿಕ ಪುರುಷರಿರುತ್ತಾರೆ. ಇವರಿಗೂ ಮಾನಸಿಕ ಸೃಷ್ಟಿಮಾಡುವ ಅಧಿಕಾರ ಹಾಗೂ ಯೋಗ್ಯತೆಯಿರುತ್ತದೆ. ಕಶ್ಯಪರಿಂದ ದೇವತೆಗಳು, ದೈತ್ಯರು. ಪಶು-ಪಕ್ಷಿಗಳು ಸ್ಥಾವರ-ಜಂಗಮಗಳು—ಹೀಗೆ ವಿವಿಧ ಪ್ರಕಾರದ ಸೃಷ್ಟಿಯಾಗುತ್ತದೆ.

ನಿರುಕ್ತಕಾರರು ಕಶ್ಯಪಶಬ್ದಕ್ಕೆ 'ಪಶ್ಯಕ' ಎಂದು ಅರ್ಥವನ್ನು ಹೇಳುತ್ತಾರೆ. ಅಂದರೆ ದರ್ಶನಮಾತ್ರದಿಂದ ಸೃಷ್ಟಿಸುವವನು. ಶ್ರುತಿಗಳಲ್ಲಿ ಮಾನಸಿಕ ಸೃಷ್ಟಿಯನ್ನು ಹೀಗೆ ವರ್ಣಿಸಿರುತ್ತಾರೆ: '**ಮನಸಾ ಸಾಧು ಪಶ್ಯತಿ। ಮಾನಸಾಃ ಪ್ರಜಾಃ ಅಸೃಜಂತ।**'

ಮಹಾಭಾರತದಲ್ಲಿ ಹೇಳುತ್ತಾರೆ: **ಪ್ರಜಾಪತಿರಿದಂ ಸರ್ವಂ ಮನಸೈವಾಸೃಜತ್ ಪ್ರಭುಃ। ತಥೈವ ದೇವಾನ್ ಋಷಯಃ ತಪಸಾ ಪ್ರತಿಪೇದಿರೇ। ಆದಿದೇವಸಮುದ್ಭೂತಾ ಬ್ರಹ್ಮಮೂಲಾಕ್ಷಯಾ‍ಽವ್ಯಯಾ। ಸಾ ಸೃಷ್ಟಿರ್ಮಾನಸೀ ನಾಮ ಧರ್ಮತಂತ್ರಪರಾಯಣಾ॥**

ಶ್ರೀಮದ್ಭಾಗವತದಲ್ಲಿ ಬ್ರಹ್ಮನ ಮಾನಸಿಕಸೃಷ್ಟಿಯನ್ನು ವರ್ಣಿಸಿದ್ದಾರೆ. **ಭಗವದ್ಧ್ಯಾನಪೂತೇನ ಮನಸಾಽನ್ಯಾಂಸ್ತದಾಸೃಜತ್। ಅಥಾಭಿಧ್ಯಾಯತಃ ಸರ್ಗಂ ದಶ ಪುತ್ರಾಃ ಪ್ರಜಜ್ಞಿರೇ॥**

ಬ್ರಹ್ಮಪುತ್ರರುಗಳು ಮಾನಸೀಸೃಷ್ಟಿಯಿಂದಲೇ ದೇವತೆಗಳನ್ನು, ಋಷಿಗಳನ್ನೂ, ದೈತ್ಯರುಗಳನ್ನೂ ಸೃಷ್ಟಿಸಿದರು. ಕಾಲಕ್ರಮದಲ್ಲಿ ಯುಗಪರಿವರ್ತನೆಯಿಂದ ತಪಃಶಕ್ತಿಯು ಕ್ಷೀಣವಾಗಲು ಮಾನಸೀಸೃಷ್ಟಿಯು ನಿಂತುಹೋಯಿತು. ಕೇವಲ ಮೈಥುನೀಸೃಷ್ಟಿಯು ಪ್ರಾರಂಭವಾಯಿತು. ಆದರೂ ಕೆಲವರು ಮಹಾತ್ಮರು—ಮಾನಸೀ—ಚಾಕ್ಷುಷೀಸೃಷ್ಟಿಯನ್ನು ಮಾಡುತ್ತಿದ್ದರು. ಈಗ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಂಪೂರ್ಣತಃ ತಪಃಶಕ್ತಿಯು ಲೋಪವಾಗಿರುವುದರಿಂದ ಮಾನಸೀಸೃಷ್ಟಿಯನ್ನು ಒಪ್ಪಿಕೊಳ್ಳಲೂ ಸಹ ಜನರು ಹಿಂದು ಮುಂದು ನೋಡುತ್ತಾರೆ.

ಶಾಸ್ತ್ರಾನುಸಾರತಃ ಸೃಷ್ಟಿಯು ಏಳು ವಿಭಾಗಗಳನ್ನು ಗುರುತಿಸಬಹುದು.

1. ಮಾನಸೀಸೃಷ್ಟಿ. 2. ಸ್ತ್ರೀ-ಪುರುಷಾದಿ ಲಿಂಗಭೇದವಿಲ್ಲದ ಸೃಷ್ಟಿ 3. ಒಂದೇ ದೇಹದಲ್ಲಿ ಸ್ತ್ರೀ-ಪುರುಷರಿಬ್ಬರ ಸೃಷ್ಟಿ.

4. ಸ್ತ್ರೀ-ಪುರುಷರು ಬೇರೆ ಬೇರೆ ಇದ್ದರೂ ಮಾನಸಿಕಶಕ್ತಿಯ ಮೂಲಕ ಸಂತಾನೋತ್ಪತ್ತಿ. ಇಂದಿನ ವಿಜ್ಞಾನವೂ ಸಹ ಚಿಂತನಶಕ್ತಿಯ ಮಹಿಮೆಯನ್ನರಿತಿದೆ. ಚಿಂತನಶಕ್ತಿಯಿಂದ ಎದುರಿಗಿರುವ ಕುರ್ಚಿ ಇತ್ಯಾದಿಗಳನ್ನು ಅಳ್ಳಾಡಿಸುತ್ತಾರೆ. ಎದುರಿಗಿರುವವರ ದೃಷ್ಟಿಮಾಂದ್ಯವನ್ನು ಮಾಡುತ್ತಾರೆ.

ಮಾನಸಿಕಶಕ್ತಿಯಿಂದ ಗರ್ಭಾಧಾನವೂ ಆಗಬಹುದೆಂಬುದನ್ನು ಅಲ್ಲಗಳೆಯುವುದಿಲ್ಲ. ಭಗವಾನ್ ವೇದವ್ಯಾಸರ ಮಾನಸಿಕಪ್ರೇರಣೆಯಿಂದ ಧೃತರಾಷ್ಟ್ರ ಪಾಂಡು-ವಿದುರರ ಉತ್ಪತ್ತಿಯನ್ನು ಕೇಳುತ್ತೇವೆ. ದೇವತೆಗಳ ಮಾನಸಿಕ ಪ್ರೇರಣೆಯಿಂದ ಪಾಂಡವರ ಉತ್ಪತ್ತಿಯನ್ನು ಕೇಳುತ್ತೇವೆ.

5. ಯಜ್ಞಾವಶಿಷ್ಟ ಅಭಿಮಂತ್ರಿತ ಚರುವಿನಿಂದ ಸೃಷ್ಟಿ.

6. ಮಾನಸಿಕಶಕ್ತಿಗಳ ಲೋಪದಿಂದ ಸ್ತ್ರೀ-ಪುರುಷಸಂಯೋಗದಿಂದ ಮಾತ್ರ ಸೃಷ್ಟಿ

7. ಬ್ರಹ್ಮಚರ್ಯ-ಸದಾಚಾರಾದಿ ಸಂಯಮಾಭಾವದಿಂದ, ಶಕ್ತಿಹೀನರಾದ ಸ್ತ್ರೀ-ಪುರುಷರಿಂದ ಅವಾಂಛಿತಸೃಷ್ಟಿಯ ವೃದ್ಧಿ. ಹೀಗೆ ಶಕ್ತಿಯು ಹ್ರಾಸವಾಗುತ್ತಾ ಕ್ರಮೇಣ ನಪುಂಸಕತ್ವವಂಧ್ಯಾತ್ವವು ಉಳಿಯುತ್ತದೆ.

ಶ್ರೀಮದ್ಭಾಗವತದಲ್ಲಿ ಬರುವ ಸೃಷ್ಟಿವರ್ಣನೆಗಳಲ್ಲಿ ಅವಿಶ್ವಾಸವನ್ನು ತಾಳದೆ ವಿಚಾರದೃಷ್ಟಿಯಿಂದ ನೋಡಬೇಕು. ಸಾಂಗತ್ಯವನ್ನು ಕಲ್ಪಿಸಿಕೊಳ್ಳಬೇಕು.

ಶ್ರೀಮದ್ಭಾಗವತದಲ್ಲಿ ವಿಸರ್ಗವನ್ನು ಬಹಳ ಸುಂದರವಾಗಿ ವಿಸ್ತಾರವಾಗಿ, ವಿಜ್ಞಾನಾನುಮೋದಿತ ರೀತ್ಯಾ ವರ್ಣಿಸಿದ್ದಾರೆ. "ವಿಸರ್ಗದ ಲಕ್ಷಣವನ್ನು ಹೇಳುತ್ತಾರೆ = ವಿಸರ್ಗಃ ಪೌರುಷಃ ಸ್ಮೃತಃ" 2_10-3)

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷಾನುಗೃಹೀತಾನಾಂ
ಏತೇಷಾಂ ವಾಸನಾಮಯಃ
ವಿಸರ್ಗೋಽಯಂ ಸಮಾಹಾರೋ
ಬೀಜಾದ್ಬೀಜಂ ಚರಾಚರಮ್

ಜೀವಿಗಳ ವಾಸನಾನುಸಾರವಾಗಿ ಬೀಜದಿಂದ ಮತ್ತೊಂದು ಬೀಜವಾಗುವ ಚರಾಚರಸೃಷ್ಟಿಯೇ 'ವಿಸರ್ಗವು' ಅಂದರೆ ವಾಸನಾವಿಶಿಷ್ಟ ಸೃಷ್ಟಿಯ ಹೆಸರು "ವಿಸರ್ಗ". ವಿಸರ್ಗವು ಭಗವಂತನ ಸರ್ವೋತ್ಕೃಷ್ಟ ಜ್ಞಾನ-ಕ್ರಿಯಾ-ಶಕ್ತಿ ಬೋಧಕವಾಗಿದೆ. ಜಗತ್ತಿನ ವಿಚಿತ್ರತೆಯನ್ನು ಭಗವಂತನ ಕೌಶಲವನ್ನೂ ನೋಡಿ-ನೋಡಿ ಭಕ್ತರು ಮುಗ್ಧರಾಗುತ್ತಾರೆ.

ಈ ಭಕ್ತಿಗ್ರಂಥದಲ್ಲಿ ವಿಸರ್ಗದ ವರ್ಣನೆಯನ್ನು ಮಾಡಿರುವ ಉದ್ದೇಶ ವಿಷ್ಟೆ: ವಿಸರ್ಗದ ಮೂಲಕ ಭಕ್ತರು ಆಶ್ರಯಭೂತನಾದ ಭಗವಂತನನ್ನು ಅನ್ವೇಷಿಸಲಿ. ಅವನನ್ನು ಪಡೆಯಲು ಪ್ರಯತ್ನಿಸಲಿ.

ಸ್ಥಾನ (ಸ್ಥಿತಿ) = ಆಶ್ರಯಸ್ವರೂಪ ಪರಮಾತ್ಮನಲ್ಲಿ ವಿವರ್ತ ಅಥವಾ ಪರಿಣಾಮದ ಮೂಲಕ, ಮಹತ್ತತ್ತ್ವಾದಿ ವಿರಾಟ್‌ಸೃಷ್ಟಿಯೂ, ಆ ಸೃಷ್ಟ್ಯಂತರ್ಗತ ಒಂದು ಬ್ರಹ್ಮಾಂಡದ ಸೃಷ್ಟಿಯೂ ಹೇಗೆ ಆಗುತ್ತದೆ ?–ಎಂದು ಸರ್ಗ ವಿಸರ್ಗಗಳ ಮೂಲಕ ವಿವೇಚಿಸಲಾಯಿತು, ಸರ್ಗವು ಸಮಾನ್ಯಸೃಷ್ಟಿಯಾದರೆ ವಿಸರ್ಗವು ವಿಶೇಷಸೃಷ್ಟಿ. ಒಂದು ಬ್ರಹ್ಮಾಂಡದ ಸೃಷ್ಟಿಯು ಹೇಗಾಗುತ್ತದೋ ಹಾಗೆಯೇ ಅನೇಕ ಬ್ರಹ್ಮಾಂಡಗಳ ಸೃಷ್ಟಿಯೂ ಆಗುತ್ತದೆ.

ಸೃಷ್ಟಿಯ ವರ್ಣನೆಯನಂತರ ಸ್ಥಿತಿಯ ವರ್ಣನೆಯಾಗಬೇಕು. ಯಾವ ಮರ್ಯಾದೆಗಳ ಪಾಲನೆಯಿಂದ ಬ್ರಹ್ಮಾಂಡವು ಸ್ಥಿರವಾಗಿದೆ ? ಎಂಬುವುದನ್ನು ತಿಳಿಸುವುದೇ ಸ್ಥಿತಿಶಬ್ದದ ತಾತ್ಪರ್ಯ. ಬ್ರಹ್ಮಾಂಡದಲ್ಲಿ ಎಷ್ಟು ಲೋಕಗಳಿವೆ ? ಅವುಗಳಲ್ಲಿರುವ ಮರ್ಯಾದೆಗಳೇನು ? ಲೋಕಗಳ ವಿಸ್ತಾರಗಳು ಹೇಗಿವೆ ? ಅವುಗಳ ಧಾರಣೆಯು ಹೇಗೆ ?–ಈ ಎಲ್ಲಾ ವಿಚಾರಗಳನ್ನೂ ತಿಳಿಸಬೇಕು.

ಈ ವಿಚಾರಗಳಿಂದ ಭಗವಂತನ ಸರ್ವೋತ್ಕೃಷ್ಟತೆಯು ಸಾಧಿಸಲ್ಪಡುತ್ತದೆ ಭಗವಂತನೇ ಸಕಲಬ್ರಹ್ಮಾಂಡಗಳ ಧಾರಕನು. ಮರ್ಯಾದಾಪ್ರವರ್ತಕನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂರಕ್ಷಕನೂ ಸಹ. ಭಾಗವತದಲ್ಲಿ ಸ್ಥಿತಿಯ ಲಕ್ಷಣವನ್ನು ಹೇಳುತ್ತಾ "ಸ್ಥಿತಿ ರ್ವೈಕುಂಠವಿಜಯಃ" ಎಂದು ಹೇಳುತ್ತಾರೆ,

ಮನುಷ್ಯನ ದೃಷ್ಟಿಯು ಅತ್ಯಂತ ಸ್ಥೂಲವಾದುದು. ಹತ್ತಿರದಲ್ಲಿರುವ ಕೆಲವು ಸ್ಥೂಲಗಳನ್ನು ನೋಡುತ್ತಾನಷ್ಟೆ. ಆದರೆ ಸೂಕ್ಷ್ಮಜಗತ್ತನ್ನು ಇವನು ಗುರುತಿಸಲಾರ-ತಿಳಿಯಲಾರ.

ಮಾನವನು ಸೂಕ್ಷ್ಮಜಗತ್ತಿನ ಬಗೆಗೆ ಜಿಜ್ಞಾಸೆಯನ್ನೇನೊ ಮಾಡುತ್ತಾನೆ. ಅನ್ವೇಷಣೆಗೂ ಹೊರಡುತ್ತಾನೆ. ಪೃಥ್ವಿಯ ಕೆಲವು ಭಾಗಗಳನ್ನು ಹುಡುಕಿದ್ದಾನೆ ಸ್ಥೂಲಪೃಥ್ವಿಯ ಅನ್ವೇಷಣೆಯೇ ಇವನಿಗಿನ್ನೂ ಮುಗಿದಿಲ್ಲ. ಎಷ್ಟೋ ಅರಣ್ಯ ಗಳು. ಮರಳುಗಾಡುಗಳು, ಪರ್ವತಶಿಖರಗಳು, ಸಮುದ್ರತಳಗಳು—ಇವನ ಅನ್ವೇಷಣೆಗೆ ಒಳಪಡದೇ ಹಾಗೆಯೇ ಉಳಿದಿವೆ.

ಈ ಅಲ್ಪಸಾಮರ್ಥ್ಯವುಳ್ಳ ಮಾನವನು ನಮ್ಮ ಋಷಿ-ಮುನಿಗಳು ಉದಾಹರಿಸಿರುವ ಲೋಕ-ಲೋಕಾಂತರಗಳನ್ನೂ, ವಿವಿಧಸಮುದ್ರಗಳನ್ನೂ ಪೃಥ್ವಿಯ ಕೆಳಭಾಗಗಳನ್ನೂ ಸಂದರ್ಶಿಸಬೇಕಾದರೆ—ಹತ್ತಾರು ಶತಮಾನಗಳು ಕಳೆದರೂ ಸಾಧ್ಯವಾಗುವುದಿಲ್ಲವೇನೋ! ಅವುಗಳನ್ನು ಓದುವುದರಿಂದಲೇ ಇವನು ಮೂಕನಾಗುತ್ತಾನೆ. ಅವಿಶ್ವಾಸಿಯಾಗುತ್ತಾನೆ. ಇವೆಲ್ಲಾ ಪೌರಾಣಿಕ ಕಥೆಗಳೆಂದು ಮುಚ್ಚಿಡುತ್ತಾನೆ.

ಅನೇಕ ವರ್ಷಗಳ ಯೋಗಸಾಧನಾಬಲದಿಂದ ವಿಶಿಷ್ಟಶಕ್ತಿಸಂಪನ್ನರಾದ ಋಷಿ-ಮುನಿಗಳು ಅನುಭವಕ್ಕೆ ತಂದುಕೊಂಡ ಸೂಕ್ಷ್ಮತತ್ತ್ವಗಳ ಸ್ಥಾನಗಳ ಪರಿಚಯವನ್ನು ಕೇವಲ ಗ್ರಂಥಪಠನಮಾಡುವ, ಯಂತ್ರಗಳನ್ನು ನಂಬಿ ಕುಳಿತಿರುವ ಮಾನವನು ಪಡೆಯುವುದು ಹೇಗೆ?

ಯೋಗದರ್ಶನದಲ್ಲಿ ಚತುರ್ದಶಲೋಕಗಳ ಜ್ಞಾನಪ್ರಕ್ರಿಯೆಯನ್ನು ತಿಳಿಸುತ್ತಾ ಹೇಳುತ್ತಾರೆ: ಸೂರ್ಯನಲ್ಲಿ ಸಂಯಮಮಾಡುವುದರಿಂದ ಈ ಚತುರ್ದಶಭುವನಗಳ ವರ್ಣನೆಯನ್ನೂ ಐದನೇ ಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ಮಾಡಿದ್ದಾರೆ. ಪೋಷಣಸ್ಥಿತಿ ವರ್ಣನೆಯನ್ನು ಮಾಡಿದ ಮೇಲೆ ಪೋಷಣ ಅರ್ಥಾತ್ ಭಗವಂತನ ಅನುಗ್ರಹದ ವರ್ಣನೆಯನ್ನು ಮಾಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪೋಷಣಂತದನುಗ್ರಹಃ-ಭಾಗವತದ ಆರನೇ ಸ್ಕಂಧದಲ್ಲಿ ದೇವತೆಗಳು ದೈತ್ಯರು-ಮನುಷ್ಯರು ಇವರುಗಳ ಮೇಲೆ ಭಗವಂತನ ಅಹೈತುಕೀ ಕೃಪೆಯು ವರ್ಣನೆಯಿದೆ. ಅಜಾಮಿಳನು ದುರಾಚಾರೀ. ಪಾಪಿಷ್ಠನು. ಅವನು ಮರಣಕಾಲದಲ್ಲಿ ತನ್ನ ಮಗನನ್ನು ಕೂಗುವುದರ ಮೂಲಕ ಭಗವಂತನ ನಾಮ ವನ್ನು ಸ್ಮರಿಸಿ ಸದ್ಗತಿಯನ್ನು ಪಡೆದನು.

ಇಂದ್ರನಿಂದ ಗುರುಗಳ ಅವಮಾನವಾಯಿತು. ವಿಶ್ವರೂಪಬ್ರಾಹ್ಮಣನ ವಧೆಯಾಯಿತು. ಆದರೂ ಭಗವಂತನು ಅವನನ್ನು ಕೈಬಿಡಲಿಲ್ಲ. ದೈತ್ಯರಲ್ಲಿ ವೃತ್ರಾಸುರನು ಬಹಳ ಭಯಂಕರನೇ. ಅವನು ಐರಾವತಸಮೇತನಾದ ಇಂದ್ರ ನನ್ನೇ ನುಂಗಿಬಿಟ್ಟನು. ಆದರೂ ಭಗವಂತನು ಜಾತಿ-ಮತ-ಧರ್ಮ-ಕರ್ಮ ಆಚಾರ-ವಿಚಾರಗಳೊಂದನ್ನೂ ಗಮನಿಸದೇ ಜಗದ್ರಕ್ಷಣೆಯಲ್ಲಿ ತತ್ಪರನಾಗಿದ್ದಾನೆ. ಊತಿ = ಎಂದರೆ ಕರ್ಮವಾಸನಾ. ಊತಯಃ ಕರ್ಮವಾಸನಾಃ ೨-೧೦-೪. ಕರ್ಮಬಂಧನಕ್ಕೊಳಗಾದ ಜೀವನು ಭಗವಂತನನ್ನು ಮರೆಯುತ್ತಾನೆ. ಶರೀರ ದಿಂದ ಶರೀರಾಂತರದಲ್ಲಿ, ಲೋಕದಿಂದ ಲೋಕಾಂತರದಲ್ಲಿ, ಕರ್ಮದಿಂದ ಕರ್ಮಾಂತರದಲ್ಲಿ ಅಲೆಯುವುದೇ ಜೀವನ ಕೆಲಸವಾಗಿದೆ.

ಅದನ್ನು ಮಾಡಬೇಕು, ಇದನ್ನು ಪಡೆಯಬೇಕು—ಎಂಬ ತರಾತುರಿಯಲ್ಲಿ ರುವ ಜೀವನು ಸರ್ವವ್ಯಾಪೀ ಭಗವಂತನ ಕೃಪೆಯಿಂದ ವಂಚಿತನಾಗಿದ್ದಾನೆ. ವಾಸನಾಧೀನನಾದ ಅವನು ಪ್ರಿಯಾಪ್ರಿಯಗಳಲ್ಲಿ, ರಾಗದ್ವೇಷಾದಿಗಳಲ್ಲಿ, ಶುಭಾಶುಭಗಳಲ್ಲಿ ಸಿಲುಕಿಕೊಂಡು ಪರದಾಡುತ್ತಿದ್ದಾನೆ. ವಾಸನೆಯು ಜೀವನದ ದುಃಖಕ್ಕೆ ಕಾರಣವು. ಅವುಗಳ ವರ್ಣನೆಯೇಕೆಂದರೆ ಜೀವನು ಅವುಗಳನ್ನು ದುಃಖರೂಪಗಳೆಂದು ತಿಳಿಯಲಿ. ಅವುಗಳಿಂದ ಮುಕ್ತನಾಗಿ ಪರಮಾತ್ಮನನ್ನ ರಿಯಲಿ, ಎಂಬುದಕ್ಕಾಗಿ. ವಾಸನೆಗಳು ಎರಡು ವಿಧ. ಶುಭ-ಅಶುಭ. ಮಹಾ ಪುರುಷರ ಕೃಪೆಯಿಂದ ಶುಭವಾಸನೆಯು ಮೂಡುತ್ತದೆ. ಅವರ ದ್ವೇಷದಿಂದ ಅಶುಭವಾಸನೆಯು ಮೂಡುತ್ತದೆ.

ವೈಕುಂಠದ್ವಾರಪಾಲಕರಾದ ಜಯ-ವಿಜಯರು ಸನಕಾದಿಗಳನ್ನು ದ್ವೇಷಿಸಿ ಭಗವತ್ಕೃಪೆಯಿಂದ ವಂಚಿತರಾದರು. ಭಗವಂತನು ಅವರನ್ನು ಕೈಬಿಡದೇ ಪುನಃ ಪುನಃ ಅವತಾರಮಾಡಿ ಅವರನ್ನು ವಾಸನಾಮುಕ್ತರನ್ನಾಗಿ ಮಾಡಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಹ್ಲಾದನಿಗೆ ಗರ್ಭದಲ್ಲಿಯೇ ನಾರದರ ಸತ್ಸಂಗವು ದೊರಕಿತು. ದುರ್ವಾಸನಾತ್ಯಾಗ–ಸದ್ವಾಸನಾಗ್ರಹಣವನ್ನು ೭ನೇ ಸ್ಕಂಧದ ಕೊನೆಯ ೫ ಅಧ್ಯಾಯಗಳಲ್ಲಿ ಹೇಳಿದ್ದಾರೆ.

"ಮನ್ವಂತರ" ಈ ಜನ್ಮದಲ್ಲಿಯೇ ಸಾಧ್ಯವಾದಷ್ಟು ಬೇಗ ಭಗವತ್ಕೃಪೆಯನ್ನು ಸಂಪಾದಿಸಿಕೊಳ್ಳಬೇಕು. ಇಲ್ಲದಿದ್ದರೆ ಎಷ್ಟು ಜನ್ಮಗಳಾದರೂ ಸಾಲದು ಎಷ್ಟು ಕಲ್ಪಗಳಾದರೂ ಸಾಲದು. ಕೊನೆಗೆ ಮನ್ವಂತರಗಳಾದರೂ ಸಾಲದು. ಪ್ರತ್ಯೇಕ ಸಮಯದಲ್ಲಿಯೂ ಸದ್ಧರ್ಮ ಪರಿಪಾಲನಾರ್ಥವಾಗಿ ಕೆಲವರು ಆಧಿಕಾರಿಕ ಪುರುಷರು ನಿಯುಕ್ತರಾಗುತ್ತಾರೆ. ಅವರೇ ಮನ್ವಂತರಾಧಿಪತಿಗಳು.

ಮನ್ವಂತರವೆಂದರೆ ನಮ್ಮ ಕಾಲಮಾನರೀತ್ಯಾ 43,20,000 ವರ್ಷಗಳಿಗೆ ಒಂದು ಚತುರ್ಯುಗ, 71 ಚತುರ್ಯುಗಗಳಿಗೆ ಒಂದು ಮನ್ವಂತರ. ಹದಿನಾಲ್ಕು ಮನ್ವಂತರಗಳಿಗೆ ಒಂದು ಕಲ್ಪ. ಈ ಕಲ್ಪವು ಬ್ರಹ್ಮನ ಒಂದು ಹಗಲು. ಅಷ್ಟೇ ಕಾಲವು ಒಂದು ರಾತ್ರಿ. ಈ ಲೆಕ್ಕದಂತೆ ಬ್ರಹ್ಮನಿಗೆ ಒಂದು ನೂರು ವರ್ಷ ಆಯುಷ್ಯವು.

ಬ್ರಹ್ಮನ ಒಂದು ದಿವಸದಲ್ಲಿ 14 ಜನ ಮನುಗಳು ಬದಲಾವಣೆಯನ್ನು ಹೊಂದುತ್ತಾರೆ. ಈ ಶ್ವೇತವರಾಹಕಲ್ಪದಲ್ಲಿ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ. ರೈವತ. ಚಾಕ್ಷುಷ–ಈ ಆರು ಮನುಗಳು ಕಳೆದಿದ್ದಾರೆ. ಈಗ ಏಳನೆಯದಾದ ವೈವಸ್ವತಮನ್ವಂತರವು ನಡೆಯುತ್ತಿದೆ. ಪ್ರತ್ಯೇಕ ಮನ್ವಂತರದಲ್ಲಿಯೂ ದೇವತೆಗಳೂ, ಇಂದ್ರರೂ, ಸಪ್ತರ್ಷಿಗಳೂ ಬದಲಾಗುತ್ತಾರೆ. ಇವುಗಳ ವರ್ಣನೆಯು ಭಾಗವತದಲ್ಲಿ ಅಲ್ಲಲ್ಲಿ ಬರುತ್ತದೆ.

ಈ ವೈವಸ್ವತಮನ್ವಂತರದಲ್ಲಿ ಭಗವಂತನ ವಾಮನಾವತಾರವು ಮನ್ವಂತರಾವತಾರವಾಗಿದೆ. ಕಶ್ಯಪ. ಅತ್ರಿ. ವಸಿಷ್ಠ, ವಿಶ್ವಾಮಿತ್ರ, ಗೌತಮ. ಜಮದಗ್ನಿ, ಭರದ್ವಾಜರು ಸಪ್ತರ್ಷಿಗಳು. ಆದಿತ್ಯ, ರುದ್ರ, ವಸು. ವಿಶ್ವೇದೇವ, ಮರುದ್ಗಣ, ಅಶ್ವಿನೀಕುಮಾರರು ಋಭುಗಣ–ಇವರು ದೇವತೆಗಳು. ಪುರಂದರನಾಮಕನು ಇಂದ್ರನು.

ಈ ವೈವಸ್ವತಮನುವಿಗೆ ಹತ್ತು ಜನ ಪುತ್ರರು. ಇಕ್ಷ್ವಾಕು, ನೃಗ, ಶರ್ಯಾತಿ. ದಿಷ್ಟ, ಧೃಷ್ಟ, ಕರೂಷ, ನರಿಷ್ಯಂತ, ಪೃಷಧ್ರ, ನಭಗ. ಕವಿ. ಹೀಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತ್ಯೇಕ ಮನ್ವಂತರದಲ್ಲಿಯೂ ಸದ್ಧರ್ಮರಕ್ಷಕರು, ಪ್ರಚಾರಕರು, ಋಷಿಗಳು, ದೇವತೆಗಳು ಗುಪ್ತರೂಪದಿಂದ ಅಲ್ಲಲ್ಲಿ ಇದ್ದುಕೊಂಡು ಧಾರ್ಮಿಕಜನರಿಗೆ ಸಹಾಯವನ್ನು ಮಾಡುತ್ತಾರೆ.

ಸದ್ಧರ್ಮಶಬ್ಧದಿಂದ ಭಾಗವತದಲ್ಲಿ ಮನ್ವಂತರವ್ಯಾಖ್ಯೆಯನ್ನು ಮಾಡಿದ್ದಾರೆ. ಮನ್ವಂತರಗಣನೆಯ ರೀತ್ಯಾ ಭೂಮಿಗೆ ನಾವು ಹೇಳುವ ಕಾಲಮಾನಕ್ಕೂ, ವೈಜ್ಞಾನಿಕದೃಷ್ಟಿಕೋನದಿಂದ ಹೇಳುವ ಕಾಲಮಾನಕ್ಕೂ ವ್ಯತ್ಯಾಸವು ಕಂಡುಬಂದಿಲ್ಲ. ಭಾರತೀಯ ಗ್ರಂಥಗಳಲ್ಲಿ ಮನುವಿನ ಚರಿತ್ರೆಯನ್ನು ವರ್ಣಿಸಿದ್ದಾರೆ.

ಈಶಾನುಕಥಾ

ಒಂದು ಮನ್ವಂತರವಾದ ಮೇಲೆ ಮತ್ತೊಂದು ಮನ್ವಂತರ, ಒಂದು ಕಲ್ಪದ ಮೇಲೆ ಮತ್ತೊಂದು ಕಲ್ಪ. ಹೀಗೆ ಸೃಷ್ಟಿಯ ಪರಂಪರೆಯು ಮುಂದುವರಿಯುತ್ತಲೇ ಇದೆ. ಸೃಷ್ಟಿಯ ನಂತರ ಪ್ರಳಯ–ಪ್ರಳಯಾನಂತರ ಸೃಷ್ಟಿ-ನಡೆಯುತ್ತಲೇ ಇದೆ. ಜೀವನು ಭಗವದಾಶ್ರಯವನ್ನು ಹೊಂದಿ ಈ ಜನ್ಮ-ಮರಣರೂಪೀ ಪ್ರವಾಹಪರಂಪರೆಯಿಂದ ಉದ್ಧೃತನಾಗದಿದ್ದರೆ_ಅಲೆಯುವುದರಿಂದ ತಪ್ಪಿಸಿಕೊಳ್ಳಲು ಉಪಾಯಾಂತರವಿಲ್ಲ. ಆದರಿಂದ ಭಾಗವತದಲ್ಲಿ ಈಶಾನುಕಥೆಯ ವರ್ಣನೆಯಿದೆ.

ಹಿಂದೂಧರ್ಮರೀತ್ಯಾ ಭಗವಂತನು ಲೋಕಕಲ್ಯಾಣಕ್ಕಾಗಿ ಆಗಾಗ್ಗೆ ಅವತರಿಸುವನೆಂದು ಹಿಂದೆಯೇ ಹೇಳಿದ್ದೇವೆ. ಭಕ್ತರು ಅವನ ಅವತಾರದ ಲೀಲಾವಿಭೂತಿಯನ್ನು ವರ್ಣಿಸುತ್ತಾ ಮುಕ್ತಿಮಾರ್ಗಾನುಯಾಯಿಗಳಾಗುತ್ತಾರೆ ಅವತಾರಗಳಲ್ಲಿ ಹಲವು ಅವತಾರಗಳಿವೆ. ಅಂಶಾವತಾರ, ಗುಣಾವತಾರ, ವ್ಯೂಹಾವತಾರ, ಅರ್ಚಾವತಾರ, ಆವೇಶಾವತಾರ, ಸ್ಫೂರ್ತ್ಯವತಾರ–ಇತ್ಯಾದಿಗಳು.

ಅವತಾರೀಪುರುಷರುಗಳಲ್ಲಿ ಶ್ರೀಕೃಷ್ಣನೂ ಒಬ್ಬನು. ಇವನ ಚರಿತ್ರಶ್ರವಣದಿಂದ ಭಕ್ತರು ಜ್ಞಾನ-ವೈರಾಗ್ಯಸಂಪನ್ನರಾಗುತ್ತಾರೆ_ಎಂಬ ವಿಚಾರವನ್ನು ಭಾಗವತದ ಎಲ್ಲ ಸ್ಕಂಧಗಳಲ್ಲಿಯೂ ತೋರಿಸಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವದ್ಭಕ್ತರು ಮನಸಾ ಭಗವಂತನನ್ನು ಚಿಂತಿಸುತ್ತಾರೆ. ಅವರ ಹೃದಯ, ಜೀವನ, ಅವರ ಪ್ರತಿಯೊಂದು ಕ್ರಿಯೆಯೂ ಭಗವನ್ಮಯವಾಗಿರುತ್ತದೆ. ಅದಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಸ್ತುವೂ ಭಗವಂತನ ಸ್ಮರಣದಾಯಕವಾಗಿರುತ್ತದೆ.

ಮಹಾಪುರುಷರ ಚರಿತ್ರಾನುಸಂಧಾನದಿಂದ ಸಂಸಾರಸಮುದ್ರವನ್ನು ಹೇಗೆ ದಾಟಬಹುದು ? ಭಗವಂತನನ್ನು ಹೇಗೆ ಹೊಂದಬಹುದು ? ಎಂಬುದನ್ನು ಮನಗಾಣಬಹುದು. ಆದುದರಿಂದ ಇಲ್ಲಿ ಧ್ರುವ, ಪ್ರಹ್ಲಾದ. ಅಂಬರೀಷ—ಇತ್ಯಾದಿ ಮಹಾಭಕ್ತರ ಚರಿತ್ರೆಗಳು ಹೇಳಲ್ಪಟ್ಟಿವೆ.

ಭಗವಂತನೂ ಅವತರಿಸುತ್ತಾನೆ. ಅವನ ಭಕ್ತರುಗಳ ಅವತಾರವೂ ಆಗುತ್ತದೆ. ಸರ್ವವ್ಯಾಪಕನಾದ. ನಿರಾಕಾರಕನಾದ, ಏಕರಸಾತ್ಮಕನಾದ ಪರಮಾತ್ಮನು ಇಲ್ಲದಿರುವ ಸ್ಥಳವೇ ಇಲ್ಲ. ಅವತಾರವೆಂದರೆ ಎಲ್ಲಿಂದಲೋ ಇಳಿದು ಬರುತ್ತಾನೆಂಬ ಅರ್ಥವಲ್ಲ. ಅವತರಿಸುತ್ತಾನೆಂಬುದು ಒಂದು ಬಾಲಕರ ನುಡಿ

ಅವತಾರವೆಂದರೆ-ಅವ್ಯಕ್ತರೂಪದಿಂದ ವಿರಾಜಮಾನನಾದ ಪರಮಾತ್ಮನು ವ್ಯಕ್ತರೂಪಿಯಾಗುವುದು. ಮುಚ್ಚಿಟ್ಟುಕೊಂಡಿದ್ದವನು ಕಣ್ಣೆದುರಿಗೆ ಬಂದಂತೆ ಜಗತ್ತೇ ಪರಮಾತ್ಮನು-ಪರಮಾತ್ಮನೇ ಜಗತ್ತು. ಪರಮಾತ್ಮನು ವ್ಯಕ್ತನಾದರೂ ಅವ್ಯಕ್ತನೇ ; ಅವ್ಯಕ್ತನಾಗಿದ್ದರೂ ವ್ಯಕ್ತನೇ. ಅವ್ಯಕ್ತರೂಪವನ್ನು ಅರಿಯದ ಮೂಢಜನರು ಅತ್ಯಾಚಾರಿಗಳೂ-ಅನಾಚಾರಿಗಳೂ ಆದಾಗ ಜಗತ್ತಿನ ಸುವ್ಯವಸ್ಥೆಗಾಗಿ—ಒಂದು ಮಹಾಶಕ್ತಿ ಸ್ವರೂಪದಲ್ಲಿ ಪರಮಾತ್ಮನು ಅವತಾರಿಯಾಗುತ್ತಾನೆ.

"**ನಿರೋಧ**" ಪರಮಾತ್ಮಾತಿರಿಕ್ತವಾದ ಸ್ಥಾವರ-ಜಂಗಮಾತ್ಮಕವಾದ ಈ ಜಗತ್ತಿನ ಅಂತಿಮಗತಿಯು "**ಪ್ರಳಯ.**" ಜಗವಂತನು ಆಗಾಗ್ಗೆ ಅವತರಿಸಿ ಇದರ ಅಧರ್ಮಗತಿಯನ್ನು ನಿರೋಧಿಸುತ್ತಾನೆ. ಆದರೆ ತಮೋಗುಣವು ಅಧಿಕವಾದಾಗ ಭಗವಂತನು ನೂತನವಾಗಿ ಸೃಷ್ಟಿಸುವ ಉದ್ದೇಶದಿಂದ ಈ ಜಗತ್ತನ್ನು ಪ್ರಳಯಗೊಳಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಾತ್ಮನು ಸರ್ವಶಕ್ತಿಗಳೊಡನೆ ನಿದ್ರಿಸುವುದನ್ನೇ ಜಗತ್ತಿನ ನಿರೋಧ ಅಥವಾ ಪ್ರಳಯ ಎಂದು ಕರೆಯುತ್ತಾರೆ. ಪ್ರಳಯದಲ್ಲಿ ನಾಲ್ಕು ವಿಧಗಳುಂಟು ನಿತ್ಯ, ನೈಮಿತ್ತಿಕ, ಪ್ರಾಕೃತ. ಆತ್ಯಂತಿಕ, ಎಲ್ಲ ಪುರಾಣಗಳಲ್ಲಿಯೂ ಪ್ರಳಯಗಳ ವರ್ಣನೆಯೂ ಬರುತ್ತದೆ. ಪೌರಾಣಿಕರಿಗೆ ಯೋಗದೃಷ್ಟಿಯಿಂದ ಪ್ರತಿಕ್ಷಣದಲ್ಲಿಯೂ ಆಗುವ ನಿತ್ಯಪ್ರಳಯ, ಮುಂದಾಗುವ ಪ್ರಳಯ ಹಾಗೂ ಮರು ಪ್ರಳಯಗಳು ತಿಳಿದಿರುತ್ತವೆ. ಅವರುಗಳು ಅದನ್ನು ಸರಿಯಾಗಿ ವರ್ಣಿಸುತ್ತಾರೆ.

ಮುಕ್ತಿ :—ಮುಕ್ತಿಯೆಂದರೆ ಆತ್ಯಂತಿಕಪ್ರಳಯ. ಪ್ರಳಯ ಮಹಾ ಪ್ರಳಯಗಳು ಪ್ರಕೃತಿಯಲ್ಲಿ ಆಗುತ್ತಿರುತ್ತವೆ. ಹಾಗೆ ಆತ್ಯಂತಿಕ ಪ್ರಳಯ ವಾಗುವುದಿಲ್ಲ.

ಭಗವತ್ತತ್ತ್ವಜ್ಞಾನದಿಂದ ಅಭಿನ್ನವಾದ ಭಗವತ್ಪ್ರೇಮವನ್ನು ಹೊಂದಿದ ಮೇಲೆ ಅಥವಾ ಭಗವತ್ಪ್ರೇಮದಿಂದ ಅಭಿನ್ನವಾದ ಭಗವತ್ತತ್ತ್ವ ಜ್ಞಾನವನ್ನು ಪಡೆದ ಮೇಲೆಯೇ ಮುಕ್ತಿಯು ದೊರಕುತ್ತದೆ. ಭಗವಂತನು ವಿಜ್ಞಾನಾನಂದ ಘನನು, ಅವನ ಬಳಿ ಇದ್ದರೇನೇ ಜೀವನಪುರುಷಾರ್ಥ ಪರಿಸಮಾಪ್ತಿಯು. ಎಲ್ಲ ಜೀವರೂ ಒಂದೇ ಸಾರಿ ಮುಕ್ತರಾಗಲು ಆಗುವುದಿಲ್ಲ. ಆದರೆ ಮುಕ್ತ ರಾಗಲು ಕಾಲದ–ಸಮಯದ ಪರಿಮಿತಿಯಿಲ್ಲ. ಯಾವ ದೇಶದಲ್ಲಿ, ಯಾವ ಸ್ಥಿತಿಯಲ್ಲಿ, ಯಾವ ಸಮಯದಲ್ಲಿ, ಯಾವ ರೂಪದಲ್ಲಿ ಹೇಗಿದ್ದರೂ ಅವನು ಅಲ್ಲಿಯೇ ಹಾಗೆಯೇ ಮುಕ್ತನಾಗಬಹುದು. ಅವನಿಗೆ ಸಂಸಾರದ ಆತ್ಯಂತಿಕ ಪ್ರಳಯವಾಗುವುದು. ಹಾಗೂ ಪುನಃ ಸಂಸಾರಸಾಗರಕ್ಕೆ ಧುಮುಕಬೇಕಾದ್ದಿಲ್ಲ.

ವೇದಾಂತದ ದೃಷ್ಟ್ಯಾ ಮುಕ್ತಿಯೆಂದ ಕೈವಲ್ಯಮುಕ್ತಿ. ಅದು ಒಂದೇ ವಿಧವಾದುದು. ಇದನ್ನು ಹೊಂದುವುದಕ್ಕೆ ಉಪಾಯವೆಂದರೆ = ವಿವಿಧ ಕಾಮನಾರೂಪೀ ಅವಿದ್ಯೆಯನ್ನು ನಾಶಪಡಿಸಿಕೊಳ್ಳಬೇಕು.

ಪರಾವಿದ್ಯೆಯಿಂದ ಅವಿದ್ಯಾನಾಶವಾಗುವುದು. ಅಂತಃಕರಣಶುದ್ಧಿಯಿಂದ ಪರಾವಿದ್ಯಾಪ್ರಾಪ್ತಿಯಾಗುವುದು. ನಿಷ್ಕಾಮಕರ್ಮಾಚರಣೆ ಹಾಗೂ ಉಪಾಸ ನಾದಿಗಳಿಂದ ಅಂತಃಕರಣಶುದ್ಧಿಯಾಗುವುದು. ಭಗವತ್ಕೃಪೆಯಿಂದ ಜ್ಞಾನೋ

Sri Vidyabharathi Book Centre, Sringeri

CC-O. In Public Domain. Digitized by eGangotri

ದಯದಿಂದಾಗಲಿ, ಶ್ರವಣಾದ್ಯಂತರಂಗಸಾಧನೆಗಳಿಂದಾಗಲೀ ಅದನ್ನು ಸಂಪಾದಿಸಲೇಬೇಕು.

ಭಾಗವತಕಾರರು ಮುಕ್ತಿಯ ಲಕ್ಷಣವನ್ನು ಹೀಗೆ ಹೇಳುತ್ತಾರೆ :

ಮುಕ್ತಿರ್ಹಿತ್ವಾನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ ।

ನಿನ್ನ ಅಜ್ಞಾನಕಲ್ಪಿತಅಸತ್ ಸ್ವರೂಪವನ್ನು ಬಿಟ್ಟು ವಾಸ್ತವಿಕ ಸ್ವರೂಪದಲ್ಲಿರುವುದೇ ಮುಕ್ತಿ. ಈ ಲಕ್ಷಣವು ಕೈವಲ್ಯಮುಕ್ತಿಯಲ್ಲಿ ಅನ್ವಿತವಾಗುತ್ತದೆ.

ಜಗತ್ತಿನಲ್ಲಿ **ಅಹಂ-ಮಮೇದಂ** ಎನ್ನುವ ವ್ಯವಹಾರವು ಅನಾದಿಕಾಲದಿಂದ ನಡೆದುಕೊಂಡು ಬರುತ್ತಿದೆ. ಅಹಂಬೋಧವು ಒಬ್ಬೊಬ್ಬರಿಗೆ ಆಗಿರುತ್ತದೆ. ಎಲ್ಲರೂ ದೇಹೇಂದ್ರಿಯಗಳೇ ನಾನು ಎಂದು ತಿಳಿದುಕೊಂಡಿದ್ದಾರೆ. ಅದಕ್ಕೆ ಅನುಗುಣವಾಗಿ ನಾನು ಮೂರ್ಖ-ಬುದ್ಧಿವಂತ, ಸುಖೀ-ದುಃಖೀ, ಚಿಕ್ಕವನು-ದೊಡ್ಡವನು ಎಂದೆಲ್ಲ ತಿಳಿದುಕೊಳ್ಳುತ್ತಾರೆ, ಈ ಭ್ರಾಂತಿಯ ಕಾರಣದಿಂದ ಅವರು ಸ್ಥೂಲ-ಸೂಕ್ಷ್ಮಶರೀರದೊಡನೆ ತಾದಾತ್ಮ್ಯವನ್ನು ಹೊಂದುತ್ತಾರೆ. ಆಗ ಸಮಸ್ತವಾಸನೆಗಳೂ ಹಿಂಬಾಲಿಸುತ್ತವೆ.

ಎಲ್ಲಿಯವರೆಗೆ ಇದಂಪದವಾಚ್ಯವಾದ ಅನ್ಯಥಾಗ್ರಹಣವನ್ನು ಬಿಡುವುದಿಲ್ಲವೋ-ಅಲ್ಲಿಯವರೆಗೆ ಸಂಸಾರದಲ್ಲಿ ಅಲೆಯುವುದು ತಪ್ಪುವುದಿಲ್ಲ. ಇದೊಂದು ವಿಲಕ್ಷಣವಿಚಾರ.

ಅಹಂ–ಪದದ ಅರ್ಥವನ್ನು ಇದಂಪದಾರ್ಥದಿಂದ ಪ್ರತ್ಯೇಕಗೊಳಿಸಬೇಕು. ಆಗ ವಾಸ್ತವವಾದ ಅಹಂಪದದ ಅರ್ಥವು ಸ್ಥಾಪಿಸಲ್ಪಡುವುದು, ಸಂಸಾರದ ಆತ್ಯಂತಿಕಪ್ರಳಯವಾಗುವುದು. ಇದೇ ಕೈವಲ್ಯಮುಕ್ತಿ.

ಶ್ರೀಮದ್ಭಾಗವತದಲ್ಲಿ ಐದು ಪ್ರಕಾರದ ಮುಕ್ತಿಯನ್ನು ಸ್ವೀಕರಿಸಿದ್ದಾರೆ. ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ.

ಭಗವಂತನ ನಿತ್ಯಚಿನ್ಮಯಧಾಮದಲ್ಲಿರುವುದು ಸಾಲೋಕ್ಯಮುಕ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನಿಗೆ ಸಮಾನವಾದ ಐಶ್ವರ್ಯವನ್ನು ಹೊಂದುವುದು ಸಾರ್ಷ್ಟಿಮುಕ್ತಿ.

ಭಗವಂತನ ಸಮೀಪದಲ್ಲಿರುವುದು ಸಾಮೀಪ್ಯಮುಕ್ತಿ.

ಭಗವಂತನಂತೆ ರೂಪಧಾರಿಯಾಗುವುದು ಸಾರೂಪ್ಯಮುಕ್ತಿ. ಭಗವಂತನಲ್ಲಿ ಸೇರುವುದು ಸಾಯುಜ್ಯಮುಕ್ತಿ

ಶ್ರೀಮದ್ಭಾಗವತದಲ್ಲಿ ಐದು ವಿಧವಾದ ಮುಕ್ತಿಗಳಿಗೂ ಅನೇಕ ಉದಾಹರಣೆಗಳು ದೊರಕುತ್ತವೆ. ಭಗವಂತನೊಡನೆ ಯಾವ ವಿಧದ ಸಂಬಂಧವನ್ನಿಟ್ಟುಕೊಂಡರೆ ಆಯಾ ವಿಧದ ಮುಕ್ತಿಯಾಗುತ್ತದೆ. ಆದರೆ ಭಗವಂತನ ಉಚ್ಚಕೋಟಿಯ ಭಕ್ತರು ಇವುಗಳಲ್ಲಿ ಯಾವುದೇ ವಿಧದ ಮುಕ್ತಿಯನ್ನೂ ಬಯಸುವುದಿಲ್ಲ. ಅವರು ಭಗವಂತನ ಸೇವೆಯನ್ನು ಮಾತ್ರ ಬಯಸುತ್ತಾರೆ. ಭಗವಂತನು ಸ್ವತಃ ಮುಕ್ತಿಯನ್ನು ಕೊಡುತ್ತೇನೆಂದರೂ ಬೇಡವೆನ್ನುತ್ತಾರೆ.

ಮುಕ್ತಿಗಿಂತಲೂ ಭಗವದ್ಭಕ್ತಿಯು ಮೇಲ್ಮಟ್ಟದ್ದು. ಈ ವಿಚಾರವನ್ನು ಭಾಗವತದಲ್ಲಿ ಹಲವಾರು ಕಡೆ ತೋರಿಸಿದ್ದಾರೆ. ನ್ಯಾಯ–ವೈಶೇಷಿಕ ದರ್ಶನಗಳಲ್ಲಿ : ಸಪ್ತ ಪದಾರ್ಥಗಳ ತತ್ತ್ವಜ್ಞಾನದಿಂದ ಇಪ್ಪತ್ತೊಂದು ವಿಧಗಳಾದ ದುಃಖಗಳ ಧ್ವಂಸವಾಗಿ ಮುಕ್ತಿಯು ಸಾಧಿಸಲ್ಪಡುತ್ತದೆ.

ಸಾಂಖ್ಯದರ್ಶನದಲ್ಲಿ : ಪ್ರಕೃತಿ–ಪುರುಷವಿವೇಕದಿಂದ ಪುರುಷನು ಸ್ವಸ್ವರೂಪವಾದ ಅಸಂಗರೂಪದಲ್ಲಿರುವುದನ್ನೇ 'ಮುಕ್ತಿ' ಎಂದು ಹೇಳುತ್ತಾರೆ.

ಯೋಗದರ್ಶನಕಾರರು : ವಿವೇಕದೊಡನೆ ಸಮಾಧಿಯ ಆವಶ್ಯಕತೆಯನ್ನು ಮುಕ್ತಿಗಾಗಿ ಸ್ವೀಕರಿಸುತ್ತಾರೆ. ಭಕ್ತಿದರ್ಶನಗಳಲ್ಲಿ ಭಗವತ್ಕೃಪೆಯನ್ನೇ ಮುಕ್ತಿಹೇತುವನ್ನಾಗಿ ಒಪ್ಪಿಕೊಂಡಿದ್ದಾರೆ.

ಪೂರ್ವಮೀಮಾಂಸಕರು ಸ್ವರ್ಗಾತಿರಿಕ್ತವಾದ ಮುಕ್ತಿಯನ್ನು ಒಪ್ಪುವುದಿಲ್ಲ. ವೇದಾಂತದರ್ಶನದ ವ್ಯಾಖ್ಯೆಯಾದರೆ ಭಕ್ತಿ, ಜ್ಞಾನ ಎರಡರ ಪಕ್ಷದಲ್ಲಿಯೂ ಇದೆ. ಆದರೆ ಕೈವಲ್ಯಮುಕ್ತಿಯಾದರೆ ತತ್ತ್ವಜ್ಞಾನದಿಂದ ಮಾತ್ರ ಎಂಬುದು ನಿಶ್ಚಿತ.

Sri Vidyabharathi Book Centre, Sringeri

 CC-O. In Public Domain. Digitized by eGangotri

ತತ್ತ್ವಜ್ಞಾನವು ಭಗವತ್ಕೃಪೆಯಿಂದಾಗಲೀ ಶ್ರವಣಾದಿ ಸಾಧನಗಳಿಂದ ಲಾಗಲೀ ಆಗಬಹುದು.

ಮುಕ್ತಿಸಂಬಂಧದಲ್ಲಿ ಶ್ರೀಮದ್ಭಾಗವತವು ಒಂದು ವಿಶೇಷತೆಯನ್ನು ಹೊಂದಿದೆ. ಇದರಲ್ಲಿ ಪೂರ್ವಮೀಮಾಂಸಕರ ಅಭಿಪ್ರಾಯವೊಂದನ್ನು ಬಿಟ್ಟು ಎಲ್ಲ ದರ್ಶನಸಿದ್ಧಾಂತಗಳ ಸಾಧನೆಗಳ ನಿರ್ದೇಶನವಿದೆ. ಸಾಧಕರು ಯಾವ ವಿಧವಾದ ಮುಕ್ತಿಯು ಬೇಕೆಂಬ ವಿಮರ್ಶೆಗೆ ಸಿಕ್ಕಿಕೊಳ್ಳಬಾರದು. ಮುಕ್ತಿಯ ಸ್ವರೂಪವೇನೆಂಬ ವಾದ-ವಿವಾದಗಳಲ್ಲಿಯೂ ತೊಡಗಬಾರದು. ಕೇವಲ ಸಾಧನಾತತ್ಪರರಾಗಿರಬೇಕು. ಯಾವುದನ್ನೂ ಬಯಸದಿರುವುದೇ ಸರ್ವಶ್ರೇಷ್ಠ ಮುಕ್ತಿಯ ಸ್ವರೂಪವು.

ನೈರಪೇಕ್ಷ್ಯಂ ಪರಂ ಪ್ರಾಹುಃ ನಿಃಶ್ರೇಯಸಮನಲ್ಪಕಮ್ ।

ಪರಮನಿರಪೇಕ್ಷತೆಯೇ ಸರ್ವಶ್ರೇಷ್ಠನಿಃಶ್ರೇಯಸವು.

ಯಾರು ಮುಕ್ತಿಯನ್ನು ಅಪೇಕ್ಷಿಸುವರೋ—ಅವರ ಮಾರ್ಗದಲ್ಲಿ ಆ ಅಪೇಕ್ಷೆಯೇ ಆವರಣವಾಗಿರುತ್ತದೆ. ಸರ್ವಾಪೇಕ್ಷೆಯನ್ನೂ ತೊರೆದಾಗ ಮುಕ್ತಿಯು ಸ್ವತಃ ಸಿದ್ಧವಾಗುವುದು. ಇದೇ ವಾಸ್ತವಿಕಮುಕ್ತಿ.

ಸ್ವರ್ಗದಿಂದ ಪ್ರಳಯದವರೆಗೆ ಸಂಸಾರದ ವಿಸ್ತೃತಿಯಿದೆ. ಅದರ ಮಧ್ಯೆ ಅನೇಕಪ್ರಕಾರದ ಸಾಧಕ-ಬಾಧಕ ಕರ್ಮಗಳಿವೆ. ಕಾಲವಿದೆ. ದೇಶ ವಿದೆ. ವಸ್ತುವಿದೆ. ಇವುಗಳ ಭಾವಾಭಾವಗಳೂ ಇವೆ. ಇವುಗಳೆಲ್ಲದರ ವಿರೋಧಿನಿಯೇ 'ಮುಕ್ತಿ.' ಇದಕ್ಕೆ ಆಶ್ರಯನು ಸಾಕ್ಷಾತ್ ಭಗವಾನ್ ಪುರುಷೋತ್ತಮ ಶ್ರೀಕೃಷ್ಣ. ಅವನೇ ಬ್ರಹ್ಮನು. ಪರಮಾತ್ಮನು. ಈ ದಶಮತತ್ತ್ವದ ನಿರೂಪಣೆಗಾಗಿಯೇ ಸರ್ಗ-ವಿಸರ್ಗಾದಿಗಳ ಲಕ್ಷಣವು ಹೇಳ ಲ್ಪಟ್ಟಿದೆ.

ಭಾಗವತದ ಪ್ರತಿಯೊಂದು ಪದದಿಂದಲೂ ಪರಬ್ರಹ್ಮಪರಮಾತ್ಮನಾದ ಶ್ರೀಕೃಷ್ಣನ ಪ್ರತಿಪಾದನೆಯೇ ಮಾಡಲ್ಪಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ಭಾಗವತದರ್ಶನ

ಪ್ರಥಮಸ್ಕಂಧ-ಪ್ರಥಮಾಧ್ಯಾಯ

ಸೂತರೊಡನೆ ಶೌನಕಾದಿಗಳ ಪ್ರಶ್ನೆ

ಮಂಗಳಾಚರಣೆ

ಜನ್ಮಾದ್ಯಸ್ಯ ಯತೋಽನ್ವಯಾದಿತರತ
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥೧॥

ಸತ್ಯರೂಪಪರಮಾತ್ಮನಲ್ಲಿ ಜಗತ್ತಿನ ಸೃಷ್ಟಿ-ಸ್ಥಿತಿಲಯಗಳು ತೋರುತ್ತವೆ. ಅವನು ಎಲ್ಲ ಸದ್ರೂಪಪದಾರ್ಥಗಳಲ್ಲಿ ಅನುಗತನು. ಅಸತ್ ಪದಾರ್ಥಗಳಿಂದ ಪೃಥಕ್ಕಾಗಿ ಇದ್ದಾನೆ. ಅವನು ಹಿರಣ್ಯಗರ್ಭನಿಗೆ ಸ್ವಸಂಕಲ್ಪದಿಂದಲೇ ವೇದಜ್ಞಾನವನ್ನು ಕೊಟ್ಟನು. ಈ ವಿಷಯದಲ್ಲಿ ದೊಡ್ಡ-ದೊಡ್ಡ ವಿದ್ವಾಂಸರೂ ಮೋಹಿತರಾಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತೇಜೋಮಯವಾದ ಸೂರ್ಯರಶ್ಮಿಗಳಲ್ಲಿ ಜಲದ, ಜಲದಲ್ಲಿ ಸ್ಥಲದ, ಸ್ಥಲದಲ್ಲಿ ಜಲದ ಭ್ರಮೆಯುಂಟಾಗುವಂತೆ–ಅವನಲ್ಲಿ ಈ ತ್ರಿಗುಣಮಯೀ ಅವಸ್ಥಾತ್ರಯರೂಪಿಣೀ ಸೃಷ್ಟಿಯು ಅಧಿಷ್ಠಾನಸತ್ತೆಯಿಂದ ಸತ್ಯವತ್ ತೋರುತ್ತದೆ.

ಆ ಸ್ವಯಂಪ್ರಕಾಶನಾದ ಸತ್ಯಸ್ವರೂಪೀ ಪರಮಾತ್ಮನು ಸರ್ವದಾ ಸರ್ವಥಾ ಮಾಯಾಮಯಕಾರ್ಯದಿಂದ ಮುಕ್ತನು. ಇಂತಹ ಸತ್ಯಸ್ವರೂಪೀ ಭಗವಂತನನ್ನು ಧ್ಯಾನಿಸುತ್ತೇವೆ.

ತತ್ರ ಭಗವಾನ್ ವೇದವ್ಯಾಸರು ನಾನಾಪುರಾಣ-ಶಾಸ್ತ್ರ-ಪ್ರಬಂಧಗಳಿಂದಲೂ ಚಿತ್ತ ಶಾಂತಿಯನ್ನು ಪಡೆಯದಿರುವಾಗ ನಾರದರ ಉಪದೇಶಾನುಸಾರವಾಗಿ ಶ್ರೀಮದ್ಭಗವಂತನ ಗುಣಾನುವರ್ಣನೆಯೇ ಪ್ರಧಾನವಾಗಿ ಉಳ್ಳ ಶ್ರೀಮದ್ಭಾಗವತಶಾಸ್ತ್ರವನ್ನು ಪ್ರಾರಂಭಮಾಡುತ್ತಾ ನಿರ್ವಿಘ್ನತಾ ಪರಿಸಮಾಪ್ತ್ಯರ್ಥವಾಗಿ ಪ್ರತಿಪಾದ್ಯಪರದೇವತಾನುಸ್ಮರಣಪೂರ್ವಕವಾದ ಮಂಗಳವನ್ನು ಆಚರಿಸುತ್ತಾರೆ.

ಇದು ವಸ್ತುನಿರ್ದೇಶಾತ್ಮಕಮಂಗಳವು. ಇದರಲ್ಲಿ ವೈದಿಕತ್ವ–ಸತ್ಯತ್ವದ ನಿರೂಪಣೆಯು ಅತೀವ ಕುಶಲತೆಯಿಂದ ಮಾಡಲ್ಪಟ್ಟಿದೆ.

ಧೀಮಹಿ ಶಬ್ದದ ಪ್ರಯೋಗವು ವೈದಿಕತ್ವಸೂಚಕವಾಗಿದೆ. **ಭರ್ಗೋ ದೇವಸ್ಯ ಧೀಮಹಿ** – ಇದು ಪ್ರಸಿದ್ಧಗಾಯತ್ರೀಮಂತ್ರದ ದ್ವಿತೀಯ ಪಾದವು. ಅದರ ಅಂತಿಮಪದವನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ.

ಶ್ರೀಮದ್ಭಾಗವತವು ಸಂಪ್ರದಾಯನಿರಪೇಕ್ಷಗ್ರಂಥವು. ಇಲ್ಲಿಯ ರಚನಾ ಕೌಶಲ್ಯವನ್ನು ಗಮನಿಸಬೇಕು = **ಸತ್ಯಂ ಪರಂ ಧೀಮಹಿ** ಈ ಸ್ಥಳದಲ್ಲಿ–ರಾಮಂ ಪರಂ, ಕೃಷ್ಣಂ ಪರಂ. ಶಂಭುಂ ಪರಂ, ಶಕ್ತಿಂ ಪರಾಂ, ಭಾನುಂ ಪರಂ– ಹೀಗೆ ಯಾವ ಇಷ್ಟದೇವತೆಯ ಹೆಸರನ್ನಾದರೂ ನಿರ್ದೇಶಿಸಬಹುದಿತ್ತು. ಛಂದಸ್ಸೂ ಕೆಡುತ್ತಿರಲಿಲ್ಲ.

ಕಠೋಪನಿಷತ್ತು ಹೇಳುತ್ತದೆ.=

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ।

ಆ ಪರಮಪುರುಷನಿಗಿಂತಲೂ ಪರಮವಾದುದು ಮತ್ತೊಂದಿಲ್ಲ.

ಶ್ರೀಮದ್ಭಾಗವತಸತ್ಯವು ಜಡಾತ್ಮಕವಲ್ಲ. ಚೇತನಾತ್ಮಕವಾದುದು, ಎಲ್ಲ ಅಧ್ಯಾರೋಪಾಪವಾದಗಳನಂತರ ಯಾವುದು ಉಳಿದಿರುವುದೋ ಅದೇ ಸತ್ಯವು. ಯಾವುದು ಪ್ರತ್ಯಕ್‌ಚೈತನ್ಯಾಭಿನ್ನ ಪರಮಸತ್ಯವೋ ಅದರ ಅನು ಚಿಂತನೆಮಾಡುತ್ತೇವೆ. ಈಗ ಪ್ರಶ್ನೆಯೇನೆಂದರೆ : ಸತ್ಯವನ್ನು ಗುರುತಿಸುವುದು ಹೇಗೆ? ಅದರ ಲಕ್ಷಣವೇನು? 'ಲಕ್ಷ್ಮಣನೊಡನಿರುವವನು ರಾಮನು' ಎಂಬಂತೆ ಸತ್ಯಕ್ಕೇನಾದರೂ ಲಕ್ಷಣವುಂಟೇ ?

ಲಕ್ಷಣವು ದ್ವಿವಿಧ= ತಟಸ್ಥಲಕ್ಷಣ. ಸ್ವರೂಪಲಕ್ಷಣ.

ಆ ಬಿಳಿಯ ಹುಡುಗನೊಡನೆ ಇರುವವನು ರಾಮನು ಎಂದು ಹೇಳಿದರೆ ತಟಸ್ಥಲಕ್ಷಣವಾಯಿತು. 'ಆ ಶ್ಯಾಮಲಾಂಗನು ರಾಮನು' ಎಂದು ಹೇಳಿದರೆ ಸ್ವರೂಪಲಕ್ಷಣವಾಯಿತು.

ತದ್ಭಿನ್ನತ್ವೇ ಸತಿ ತದ್ಬೋಧಕತ್ವಂ ತಟಸ್ಥಲಕ್ಷಣಮ್
ತದಭಿನ್ನತ್ವೇಸತಿ ತದ್ಬೋಧಕತ್ವಂ ಸ್ವರೂಪಲಕ್ಷಣಮ್

ನಾವು ಈಗ ತಟಸ್ಥಲಕ್ಷಣದಿಂದ ಪರಮಾತ್ಮನನ್ನು ತಿಳಿಯೋಣ.

ಶ್ರುತಿಯು ಹೇಳುತ್ತದೆ :

ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವಂತಿ । ಯತ್ಪ್ರಯಂತ್ಯಭಿಸಂವಿಶಂತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ

ಇದನ್ನೇ ಬ್ರಹ್ಮಸೂತ್ರವು ಹೇಳುತ್ತದೆ. **ಜನ್ಮಾದ್ಯಸ್ಯ ಯತಃ**

ಶ್ರೀಮದ್ಭಾಗವತದ ಮಂಗಳಶ್ಲೋಕವು **ಜನ್ಮಾದ್ಯಸ್ಯ ಯತೋಽನ್ವಯಾತ್** ಎಂದು ಪ್ರಾರಂಭವಾಗುತ್ತದೆ. ಇದರ ಅರ್ಥವೇನಾಯಿತು ? ಶ್ರೀಮದ್ಭಾಗವತಪುರಾಣವು ಶ್ರುತಿಸೂತ್ರಾನುರೂಪವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮಸೂತ್ರದಲ್ಲಿ ಮೊದಲು-ಅಥಾತೋ ಬ್ರಹ್ಮಜಿಜ್ಞಾಸಾ-ಸೂತ್ರವಿದೆ. ಭಾಗವತದಲ್ಲಿ ಎರಡನೆಯ ಸೂತ್ರವನ್ನು ಮೊದಲು ಉದಾಹರಿಸಿದ್ದಾರೆ. ಕಾರಣವಿಷ್ಟೆ-ಅಲ್ಲಿ ಅಧಿಕಾರಿಯು ವೈರಾಗ್ಯ, ಶಮ-ದಮಾದಿಗಳು ಬ್ರಹ್ಮಜಿಜ್ಞಾಸೆಗೆ ಆವಶ್ಯಕವು. ಶ್ರೀಮದ್ಭಾಗವತಶ್ರವಣಕ್ಕೆ ಅಂತಹ ವೈಶಿಷ್ಟ್ಯತೆಯು ಆವಶ್ಯಕತೆಯಿಲ್ಲ.

ಶಮ-ದಮಾದಿ ಅಧಿಕಾರಸಂಪನ್ನತೆಗಾಗಿಯೂ-ನಂತರವೂ ಭಾಗವತ ಶ್ರವಣದ ವಿಧಾನವಿದೆ. ಅದರಿಂದ ನೇರವಾಗಿ **ಜನ್ಮಾದ್ಯಸ್ಯ ಯತಃ** ಸೂತ್ರವನ್ನು ಉದಾಹರಿಸಿದ್ದಾರೆ.

ಯಾರಿಂದ ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಾಗುವುವೋ-ಆ ಪರಮಾತ್ಮನಲ್ಲಿ ಉತ್ಪತ್ತಿ-ಸ್ಥಿತಿ-ಲಯಗಳಾವುವೂ ಇಲ್ಲ. ಜನ್ಮಾದಿಸ್ಥಿತಿಯು ದೃಶ್ಯದ ಲಕ್ಷಣವು. ಅನಿರ್ವಚನೀಯತ್ವವೇ ಪರಮಾತ್ಮನ ಲಕ್ಷಣವು. ಅದರಿಂದ **ಯತಃ** ಎಂದು ಹೇಳಿದರು. ಜಗತ್ತಿಗೆ ಪರಮಾತ್ಮನು ಅಭಿನ್ನ ನಿಮಿತ್ತೋಪಾದಾನಕಾರಣನು. ಅಂದರೆ ಮಣ್ಣೂ ಅವನೇ; ಕುಂಬಾರನೂ ಅವನೇ-ಎಂದು ಹೇಳಿದಂತೆ.

ಅನ್ವಯಾದಿತರತಶ್ಚ = ಅನ್ವಯ-ವ್ಯತಿರೇಕಗಳಿಂದ, ಅನ್ವಯಶಬ್ದದಿಂದ ಅನುವೃತ್ತಿ, ಇತರ ಶಬ್ದದಿಂದ ವ್ಯಾವೃತ್ತಿ. **ಸದ್ರೂಪಂ ಬ್ರಹ್ಮ ಕಾರಣಂ =. ಮೃತ್ಸು ವರ್ಣಾದಿವತ್ ಅನುವೃತ್ತಿ ವಿಶ್ವಂ ಕಾರ್ಯಂ ಘಟವತ್,** ವ್ಯಾವೃತ್ತಿ ಅಂದರೆ ಶ್ರೀಮದ್ಭಾಗವತದಲ್ಲಿ ಸೃಷ್ಟಿಕರ್ತನ ರೂಪದಲ್ಲಿಯೇ ಅಲ್ಲ. ಸ್ವಯಂ ಸೃಷ್ಟಿರೂಪದಲ್ಲಿಯೂ ಪರಮೇಶ್ವರನನ್ನು ವರ್ಣಿಸಿದ್ದಾರೆ.

ಮುಸ್ಲಿಮರೂ ಕ್ರಿಸ್ತರೂ ಸಹ ಪ್ರಪಂಚದ ಸೃಷ್ಟಿಕರ್ತನು ಭಗವಂತನೆಂದು ಒಪ್ಪುತ್ತಾರೆ. ನೈಯ್ಯಾಯಿಕರೂ ಸಹ ಸೃಷ್ಟಿರೂಪಕಾರ್ಯದಿಂದ ಭಗವಂತನನ್ನು ಅನುಮಾನಿಸುತ್ತಾರೆ.

ಅರ್ಥೇಷ್ವಭಿಜ್ಞಃ ಅರ್ಥೇಷು= ಆಕಾಶಾದಿ ಕಾರ್ಯಗಳಲ್ಲಿ ಅಭಿಜ್ಞಃ =ಸರ್ವಪದಾರ್ಥದ್ರಷ್ಟಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಪಂಚವಿಲ್ಲದಿದ್ದರೂ ಪರಮೇಶ್ವರನಿರುತ್ತಾನೆ. ಪ್ರಪಂಚವು ಮಾತ್ರ ಪರಮೇಶ್ವರನಿಲ್ಲದೇ ಇರಲಾರದು. ಪರಮೇಶ್ವರನು ಜೀವರ ಮೇಲಿನ ಕರುಣೆಯಿಂದ, ಪ್ರಳಯರೂಪೀಘೋರನಿದ್ರೆಯಿಂದ ಅಜ್ಞಾನಾತ್ಮಕನಿದ್ರೆಯಿಂದ ಜೀವರನ್ನು ಎಚ್ಚರಿಸಿದನು. ಏಕೆಂದರೆ : ಅವರಿಗೆ ಧರ್ಮಾರ್ಥ-ಕಾಮ-ಮೋಕ್ಷಗಳು ದೊರಕಲಿ. ಇಲ್ಲದಿದ್ದರೆ ಈ ಮೂಢಾವಸ್ಥೆಯಲ್ಲಿಯೇ ಬಿದ್ದಿರುತ್ತಾರೆ ಎಂದು. ಮಲಗಿರುವ ಮಗುವನ್ನು ಸಕಾಲಕ್ಕೆ ಎಚ್ಚರಿಸಿ ಹಾಲುಕುಡಿಸುವ ತಾಯಿಯಂತೆ-ಪರಮೇಶ್ವರನು ಜೀವಿಗಳನ್ನು ಅನುಗ್ರಹಿಸುತ್ತಾನೆ.

ಅವನು ತಿಳಿದಿದ್ದಾನೆ–ಇವರನ್ನು ಎಚ್ಚರಿಸದಿದ್ದರೆ-ಸೃಷ್ಟಿಮಾಡದಿದ್ದರೆ ಇವರು ಯಾವ ಪ್ರಯೋಜನವನ್ನೂ ಹೊಂದಲಾರರು. ಈ ದೃಷ್ಟಿಯಿಂದ ಪರಮೇಶ್ವರನೇ ಸೃಷ್ಟಿಕರ್ತನು. **ಅರ್ಥೇಷ್ವಭಿಜ್ಞಃ** =ಇದರಿಂದ ಮತ್ತೊಂದು ಅಭಿಪ್ರಾಯವೂ ತೋರುತ್ತದೆ. ಪರಮೇಶ್ವರನು ಜಡನಲ್ಲ. ಚೇತನನು. ಅವನು ಜೀವರ ಕರ್ಮ-ಸಂಸ್ಕಾರಗಳೆಲ್ಲವನ್ನೂ ಬಲ್ಲವನು. ಅದರಿಂದ ಹೇಳುತ್ತಾರೆ–'**ಸ್ವರಾಟ್**' **ಸ್ವೇನೈವ ರಾಜತೀತಿ ಸ್ವರಾಟ್** ಸ್ವಯಂಪ್ರಕಾಶನು. ಸರ್ವತಂತ್ರಸ್ವತಂತ್ರನು. **ತೇನೇ ಬ್ರಹ್ಮ ಹೃದಾಯ ಆದಿಕವಯೇ.**

ಯಾರಾದರೂ ಕೆಲವರು ಇಲ್ಲಿ ಹಿರಣ್ಯಗರ್ಭನೇ ಧ್ಯೇಯನು ಎಂದು ತಿಳಿದಾರು. ಏಕೆಂದರೆ-ಶ್ರುತಿಯು ಹೇಳುತ್ತದೆ =**ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ । ಸದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ।** ಅದರಿಂದ ಇಲ್ಲಿ ಹಿರಣ್ಯಗರ್ಭನು ಧ್ಯೇಯನಲ್ಲವೆಂದು ಹೇಳುತ್ತಾರೆ.

ಆದಿಕವಯೇ–ಹಿರಣ್ಯಗರ್ಭನಿಗೆ, **ಬ್ರಹ್ಮ**–ವೇದವನ್ನು. **ಹೃದಾ** ಮನಸೈವ **ತೇನೇ** ಪ್ರಕಾಶಿತವಾನ್ ಈ ವಿಷಯದಲ್ಲಿ ಶ್ರುತಿಪ್ರಮಾಣವು ಹೀಗಿದೆ= **ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಗ್ಂಹ ದೇವಮಾತ್ಮ ಬುದ್ಧಿ**

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ। (ಏವಂ ಬುದ್ಧಿವೃತ್ತಿಪ್ರವರ್ತಕತ್ವೇನ ಗಾಯತ್ರ್ಯರ್ಥಃ ಪ್ರದರ್ಶಿತಃ)

ಬ್ರಹ್ಮನಿಗೆ ವೇದವನ್ನು ಕೊಡುವುದರಲ್ಲಿಯೂ ಒಂದು ವೈಶಿಷ್ಟ್ಯವನ್ನು ಹೇಳುತ್ತಾರೆ. ಹೃದಾ = ಮುಖದಿಂದ ಉಚ್ಚರಿಸಿ ವಕ್ತೃ-ಶ್ರೋತೃಪರಂಪರಾಮೂಲಕವಾಗಿ ಕೊಡಲಿಲ್ಲ, ಕೇವಲ ತನ್ನ ಸಂಕಲ್ಪಮಾತ್ರದಿಂದ ಹಿರಣ್ಯಗರ್ಭನಿಗೆ ವೇದಜ್ಞಾನವನ್ನು ಕೊಟ್ಟನು. ಕೊಡುವುದೇನು ? ಅವನೇ ವೇದಜ್ಞಾನವನ್ನು ಪಡೆದುಕೊಳ್ಳಬಹುದಿತ್ತಲ್ಲ ? ಎಂದರೆ **ಮುಹ್ಯಂತಿ ಯತ್ಸೂರಯಃ** ।

ಆ ಶಬ್ದಬ್ರಹ್ಮನ ವಿಷಯದಲ್ಲಿ–ಜ್ಞಾನಸ್ವರೂಪದ ವಿಷಯದಲ್ಲಿ ಹಿರಿಯ ವಿದ್ವಾಂಸರೂ ಮೋಹಿತರಾಗುತ್ತಾರೆ ಸೂರಿಪದವು ವೈಶಿಷ್ಟ್ಯಪೂರ್ಣವಾಗಿದೆ. **ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ**-ಮಹಾತ್ಮರು ದೇಶ-ಕಾಲಾನವಚ್ಛೇದನ ಸದಾ ಪರಮಾತ್ಮನ ದರ್ಶನವನ್ನು ಮಾಡುತ್ತಾರೆ.

ಈಗ ಒಂದು ಪ್ರಶ್ನೆಯು ಏಳುತ್ತದೆ. ಪರಮಾತ್ಮನು ಚೇತನನು. ಹಿರಣ್ಯಗರ್ಭನಿಗೂ ಜ್ಞಾನವನ್ನು ಕೊಟ್ಟವನು. ಸ್ವಯಂಪ್ರಕಾಶನು, ಅಭಿಜ್ಞನು. ಕಾರ್ಯ–ಕಾರಣರೂಪದಿಂದ ಸರ್ವವ್ಯಾಪಿಯಾಗಿದ್ದರೂ ಸರ್ವಾತೀತನು-ಜಗತ್ತಿನ ಜನ್ಮಾದಿಗಳಿಗೆ ಕಾರಣನು. ಆದರೆ ಅವನಲ್ಲಿ ತೋರುವ ಪ್ರಪಂಚವು ಅವನಿಂದ ಪೃಥಕ್ಕಾಗಿ ಸತ್ಯವೋ–ಸ್ವಯಂಸ್ವರೂಪದಲ್ಲಿ ಸತ್ಯವೋ ?

ಈ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ = **ತೇಜೋವಾರಿಮೃದಾಂ ಯಥಾ ವಿನಿಮಯಃ** = ಜಲದಲ್ಲಿ ಸ್ಥಲಭ್ರಮೆ, ಸ್ಥಲದಲ್ಲಿ ಜಲಭ್ರಮೆ. ದುರ್ಯೋಧನನಿಗೆ ಧರ್ಮರಾಜನ ಸಭಾಭವನದಲ್ಲಿ ಭ್ರಮೆಯುಂಟಾಗಿ ಮಹಾನರ್ಥಕ್ಕೆ ಕಾರಣವಾಗಲಿಲ್ಲವೇ ? ಆ ರೀತಿ ಜಗತ್ತಿನ ಭ್ರಮೆಯಿಂದ ಜೀವನು ಅನರ್ಥಕ್ಕೆ ಭಾಗಿಯಾಗುತ್ತಾನೆ.

ಯತ್ರ ತ್ರಿಸರ್ಗೋಽಮೃಷಾ= ಪರಮಾತ್ಮ ದೃಷ್ಟಿಯಿಂದ ಮಾಯೆಯ ಮೂರು ಗುಣಗಳೂ ಪರಮಾತ್ಮನೇ ಆದುದರಿಂದ ಅಮೃಷಾ ಸತ್ಯವು. ಆದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಾತ್ಮಭಿನ್ನರೂಪದಿಂದ ಅವು ಸತ್ಯವಲ್ಲ. ಅಭಿಪ್ರಾಯವಿಷ್ಟೆ-ಈ ಸೃಷ್ಟ್ಯಾತ್ಮಕ ಪ್ರಪಂಚದಲ್ಲಿ ಪರಮಾತ್ಮನ ಹೊರತು ಮತ್ತೊಂದು ವಸ್ತುವಿಲ್ಲ. ಎಲ್ಲೆಲ್ಲಿಯೂ ಅವನೇ ಅವನು.

ಇದು ಸಾಮಾನ್ಯವಿಚಾರವಲ್ಲ. ಮಾನವನ ರಾಗ-ದ್ವೇಷಾದಿಗಳ ನಿವೃತ್ತಿಗೆ ಇದಕ್ಕಿಂತಲೂ ಮಿಗಿಲಾದ ಸಿದ್ಧಾಂತವು ಮತ್ತೊಂದಿಲ್ಲವು.

ಭಗವದ್ಭಿನ್ನವಸ್ತುವೊಂದಿದ್ದರೆ ಅದರಿಂದ ರಾಗ-ಭಯ-ದ್ವೇಷಾದಿಗಳು ಹುಟ್ಟುತ್ತವೆ. ಆದರೆ ಎಲ್ಲೆಲ್ಲಿಯೂ ಏಕಮೇವಾದ್ವಿತೀಯನಾದ ಪ್ರತ್ಯಕ್ ಚೈತನ್ಯಾಭಿನ್ನಬ್ರಹ್ಮನಾದರೆ ರಾಗ-ದ್ವೇಷ-ಅಸ್ಮಿತಾದಿಗಳ ಆತ್ಯಂತಿಕ ನಿವೃತ್ತಿಯಾಗುತ್ತದೆ. ಎಲ್ಲೆಲ್ಲಿಯೂ ತ್ರಿಕಾಲಾಬಾಧಿತನಾದ ಪರಮಾತ್ಮನೇ ವಿರಾಜಿಸುತ್ತಿದ್ದಾನೆ. ಪರಮಾತ್ಮನನ್ನು ಸ್ವಭಿನ್ನನನ್ನಾಗಿ ತಿಳಿಯುವವನು ಭ್ರಾಂತನು. ಪರಮಾತ್ಮಭಿನ್ನಜಗತ್ತು ಮೃಷಾ.

ಕೆಲವರು ಸೃಷ್ಟಿಯ ಉತ್ಪತ್ತಿಯನ್ನು ಒಪ್ಪುವುದಿಲ್ಲ. ಕೆಲವರ **ನ ಕದಾಚಿದನೀದೃಶಂ ಜಗತ್** ಯಾವಾಗಲೂ ಈ ಜಗತ್ತು ಹೀಗೆಯೇ ಇರುವುದೆಂದು ಹೇಳುತ್ತಾರೆ.

ಕೆಲವರು ಜಗತ್ತು ಉತ್ಪನ್ನವಾಗಿದೆ. ಆದರೆ ಅದಕ್ಕೆ ಕಾರಣವಿಲ್ಲವೆನ್ನುತ್ತಾರೆ ಮತ್ತೊಬ್ಬರ ಅಭಿಪ್ರಾಯದಲ್ಲಿ ಕಾರ್ಯ-ಕಾರಣಾತ್ಮಕ ಜಗತ್ತೇನೋ ಇದೆ. ಆದರೆ ಇದು ಜಡ. ಈ ಅಭಿಪ್ರಾಯಗಳನ್ನೆಲ್ಲಾ ಅಲ್ಲಗಳೆಯುತ್ತಾ ಭಾಗವತಕಾರರು ಹೇಳುತ್ತಾರೆ-ಜಗತ್ತು ಉತ್ಪನ್ನವಾಗಿದೆ. ಇದಕ್ಕೆ ಕಾರಣವುಂಟು. ಅದು ಜಡವಲ್ಲ. ಚೇತನವು. ಸಾಮಾನ್ಯವಾದ ಜೀವವಲ್ಲ-ಸ್ವರಾಟ್ ಪರಮಾತ್ಮಭಿನ್ನಜಗತ್ತು ಸತ್ಯವಲ್ಲ. ಪರಮಾತ್ಮಸ್ವರೂಪದಿಂದಲೇ ಸತ್ಯವು.

ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ-**ಸ್ವೇನ-ಧಾಮ್ನಾ**= **ಸ್ವಯಂಪ್ರಕಾಶರೂಪೇಣ**-**ನಿರಸ್ತಕುಹಕಂ** – ಇಲ್ಲಿ ಕುಹಕ ಎಂದರೆ ಮಾಯಾ. ಭಾಗವತದಲ್ಲಿ ತಕ್ಷಕನನ್ನೂ ಕುಹಕನೆಂದು ಕರೆದಿದ್ದಾರೆ = **ಕುಹಕಸ್ತಕ್ಷಕೋವಾ ದಶತ್ವಲಂ ಗಾಯತ ವಿಷ್ಣುಗಾಥಾಃ** ನಮಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಜನ್ಮ-ಮರಣಗಳುಂಟು. ಸಂಸಾರದಲ್ಲಿ ನಾನು ನನ್ನದು ಎಂದು ತಿಳಿಯುವುದು ಮಾಯಾ.

ಪರಮಾತ್ಮನು ಸ್ವಸ್ವರೂಪದಿಂದ ಮಾಯಾ-ಛಾಯಾ ಎಲ್ಲವನ್ನೂ ಕತ್ತರಿಸಿದ್ದಾನೆ. ನಿರಸ್ತಮಾಡಿದ್ದಾನೆ. ಮಾಯಾ ಛಾಯಾದಿಗಳು ಅವನನ್ನು ಸ್ಪರ್ಶಿಸಲೂ ಸಾಧ್ಯವಿಲ್ಲ. **ಮಾಯಾ ಮಾಯಾ ಕಥಂ ತಾತ ಛಾಯಾ ಛಾಯಾ ನ ವಿದ್ಯತೇ**

ಜಿಜ್ಞಾಸುಗಳ ಸಮಾಧಾನಕ್ಕೋಸ್ಕರ ಪ್ರಕ್ರಿಯಾ ರೂಪದಲ್ಲಿ ಮಾಯೆಯು ಸ್ವೀಕರಿಸಲ್ಪಟ್ಟಿದೆ-ಅಂದ ಮಾತ್ರಕ್ಕೆ ಪರಬ್ರಹ್ಮಪರಮಾತ್ಮನಲ್ಲಿ ಮಾಯೆಯು ವಾಸ್ತವಿಕವಲ್ಲ. ಜಿಜ್ಞಾಸುವಿಗೆ ತಿಳಿಯಪಡಿಸುವುದಕ್ಕಾಗಿ ಮಾತ್ರ ಅನಿರ್ವಚನೀಯರೂಪದಿಂದ ಮಾಯೆಯು ಸ್ವೀಕರಿಸಲ್ಪಟ್ಟಿದೆ.

ತತ್ತ್ವಬೋಧಾನಂತರ ಮಾಯಾ-ಛಾಯಾ ಏನೂ ಇಲ್ಲ. ಇಂತಹ **ಸತ್ಯಂ ಪರಂ ಧೀಮಹಿ** ಸತ್ಯರೂಪೀಪರಮಾತ್ಮನನ್ನೇಧ್ಯಾನಿಸುತ್ತೇವೆ.

ಧರ್ಮಃ ಪ್ರೋಜ್ಝಿತಕೈತವೋಽತ್ರಪರಮೋ
ನಿರ್ಮತ್ಸರಾಣಾಂ ಸತಾಂ
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ
ತಾಪತ್ರಯೋನ್ಮೂಲನಮ್ ।
ಶ್ರೀಮದ್ಭಾಗವತೇ ಮಹಾಮುನಿಕೃತೇ
ಕಿಂ ವಾ ಪರೈರೀಶ್ವರಃ
ಸದ್ಯೋ ಹೃದ್ಯವರುಧ್ಯತೇಽತ್ರ
ಕೃತಿಭಿಃ ಶುಶ್ರೂಷುಭಿಸ್ತತ್ಕ್ಷಣಾತ್ ॥೨॥

ಮಹಾಮುನಿಗಳಾದ ವ್ಯಾಸರು ಶ್ರೀಮದ್ಭಾಗವತ ಮಹಾಪುರಾಣವನ್ನು ರಚಿಸಿದರು. ಇದರಲ್ಲಿ ನಿಷ್ಕಾಮಧರ್ಮದ ನಿರೂಪಣೆಯಿದೆ. ಶುದ್ಧಾಂತಃಕರಣರಾದ ಸತ್ಪುರುಷರು ತಿಳಿಯಬಹುದಾದ ಸತ್ಯವಸ್ತುವಿನ ವರ್ಣನೆಯಿದೆ. ತಾಪತ್ರಯಗಳೂ ಶಾಂತವಾಗುತ್ತವೆ. ಇದನ್ನು ಆಶ್ರಯಿಸಿದವರಿಗೆ ಶಾಸ್ತ್ರಾಂ

Sri Vidyabharathi Book Centre, Sringeri

 CC-O. In Public Domain. Digitized by eGangotri

ತರಗಳ-ಸಾಧನಾಂತರಗಳ ಅವಶ್ಯಕತೆಯಿರುವುದಿಲ್ಲ. ಇದರ ಶ್ರವಣಾಸಕ್ತಿಯು ಮೂಡಿದೊಡನೆಯೇ ಈಶ್ವರನು ಹೃದಯಾಧಿಷ್ಠಿತನಾಗುತ್ತಾನೆ. ಈ ಶ್ಲೋಕದಲ್ಲಿ ಧರ್ಮದ ವ್ಯಾಖ್ಯೆಯಿದೆ. ನಿಷ್ಕಪಟವಾದುದೇ ನಿಷ್ಕಾಮವಾದುದೇ ಧರ್ಮವು.

ಜನರು ಧರ್ಮದೊಡನೆಯೂ ಕಪಟವನ್ನು ಜೋಡಿಸುತ್ತಾರೆ. ಐದು ಪೈಸೆ ಧರ್ಮವನ್ನು ಕೊಟ್ಟು ಐದು ಸಾವಿರ ರೂ. ಲಾಭವಾಗಲೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಧರ್ಮದಲ್ಲಿರುವ ಈ ಕಾಮನೆಯು ಧರ್ಮಕ್ಕಾಗಿ ಸ್ವಲ್ಪ ಖರ್ಚುಮಾಡಿ ಹೆಚ್ಚಿಗೆ ಲಾಭ ಪಡೆಯುವ ಕಪಟ. ಇದು ಧರ್ಮದ ಪವಿತ್ರತೆಯನ್ನು ನಾಶಮಾಡುತ್ತದೆ.

ಶ್ರೀಮದ್ಭಾಗವತದಲ್ಲಿ ಧರ್ಮವಿದೆ. ಆದರೆ ಅದು ಪ್ರೋಜ್ಝಿತಕೈತವ. ಅರ್ಥಾತ್ ಕಪಟರಹಿತವಾದುದು.

ಶ್ರೀ ಶ್ರೀಧರಸ್ವಾಮಿಗಳು ಬರೆಯುತ್ತಾರೆ= **ಪ್ರ – ಉಪಸರ್ಗೇಣ ಮೋಕ್ಷಾಭಿಸಂಧಿರಪಿ ನಿರಸ್ತಾ.** ತಾತ್ಪರ್ಯವೇನೆಂದರೆ ; ಧರ್ಮವನ್ನು ಆಶ್ರಯಿಸಬೇಕು–ಆಚರಿಸಬೇಕು. ಆದರೆ ಮೋಕ್ಷಪರ್ಯಂತವಾಗಿ ಕಾಮನಾರಾಹಿತ್ಯವಿರಬೇಕು.

ಬಹಳ ಮಂದಿ ಮಹಾತ್ಮಾಭಕ್ತರು ಪುಣ್ಯಾಶ್ರಮಗಳ ಸೇವಕರಾಗಿದ್ದುಕೊಂಡು ಅಲ್ಲಿ ಇಲ್ಲಿ ದೊರೆತ ಅಲ್ಪ-ಸ್ವಲ್ಪ ದ್ರವ್ಯವನ್ನೂ ಆಶ್ರಮಕ್ಕೆ ವಿನಿಯೋಗಿಸುತ್ತಾರೆ.

ಸೇವೆಯಿಂದ ಮುಕ್ತರಾಗಿ ವಿಶ್ರಾಂತಿವೇತನವನ್ನು ಪಡೆಯಿರಿ ಎಂದರೂ– ರಾಮ ರಾಮ ! ನಮಗೇಕೆ ಅದೆಲ್ಲ. ನಮಗೀ ಸೇವೆಯೇ ಸಾಕು ಎನ್ನುತ್ತಾರೆ. ಇಹ-ಪರಗಳಲ್ಲಿ ಸುಖವನ್ನು ಬಯಸುವವರು ವಿಶ್ರಾಂತಿವೇತನವನ್ನು ಕೇಳುತ್ತಾರೆ. ಇಲ್ಲಿಯ ಪ್ರೇಮವಾದರೊ ಮುಕ್ತಿಯನ್ನಾಗಲೀ ವೇತನವನ್ನಾಗಲೀ ಬಯಸುವುದಿಲ್ಲ. ಇದೇ ಪ್ರೋಜ್ಝಿತಕೈತವ.

ಇದರಲ್ಲಿ ಕಷ್ಟವಿಲ್ಲ ; ದ್ರೋಹವಿಲ್ಲ ; ಇಚ್ಛೆಯೂ ಇಲ್ಲ. ಇದನ್ನೇ ಪರಮಧರ್ಮವೆನ್ನುತ್ತಾರೆ. ಭಾಗವತದಲ್ಲಿ **ಪರಮಧರ್ಮವ್ಯಾಖ್ಯೆಯು**

Sri Vidyabharathi Book Centre, Sringeri

CC-O. In Public Domain. Digitized by eGangotri

ಪದೇ–ಪದೇ ಬರುತ್ತದೆ. ಅತ್ರಪರಮಃ-ಈ ಪದಕ್ಕೆ ಮಾನ್ಯಪಂಡಿತರೊಬ್ಬರು ಹೀಗೆ ವ್ಯಾಖ್ಯೆಯನ್ನು ಮಾಡುತ್ತಾರೆ : **ನಾಸ್ತಿತ್ರಪಾ ಯೇಷಾಂ ತೇ ಅತ್ರಪಾಃ ದಿಗಂಬರಾಃ ಅವಧೂತಾಃ, ತೇ ರಮಂತೇ ಅಸ್ಮಿನ್ನಿತಿ ಅತ್ರ ಪರಮಃ** ಅರ್ಥಾತ್ ಮಹಾತ್ಮಾ ದಿಗಂಬರರು ಅವಧೂತರು ಲಜ್ಜಾ–ಭಯ ತ್ಯಾಗಿಗಳಾಗಿ ಸಂಚರಿಸುತ್ತಾರೆ ಅಂತಹವರೂ **ಅತ್ರ ರಮಂತೇ.**

ಶುದ್ಧಾಂತಃಕರಣರಾದ ನಿರ್ಮತ್ಸರರಾದ ಸತ್ಪುರುಷರಿಗೆ ವೇದ್ಯಂವಸ್ತು ವಾಸ್ತವಿಕವಸ್ತುವಿನ ವರ್ಣನೆಯಿದೆ. ವಾಸ್ತವಂ ವಸ್ತು ಎಂದು ಹೇಳಿರುವುದರ ಅಭಿಪ್ರಾಯವನ್ನು ಗಮನಿಸಬೇಕು. ಇದು ಕೇವಲ ಭಾವನಾತ್ಮಕವಲ್ಲ. ಕೇವಲ ಭಾವನಾತ್ಮಕವಲ್ಲದಿರುವುದೇ ವಾಸ್ತವವಸ್ತು. ಅದೇ ಪರಮಾರ್ಥ.

ಇದನ್ನು ತಿಳಿಯುವುದರಿಂದ ಸರ್ವಾನರ್ಥಗಳ ನಿವೃತ್ತಿಯಾಗುವುದು. ತಾಪತ್ರಯೋನ್ಮೂಲನವಾಗಿ ಪರಮಾನಂದಪ್ರಾಪ್ತಿಯಾಗುವುದು. ಶಿವದಂ–ದುಃಖನಿವೃತ್ತಿಯಾದರೋ ನೈಯಾಯಿಕರು ವೈಶೇಷಿಕರು ಪ್ರತಿಪಾದಿಸುವ ಮೋಕ್ಷದಲ್ಲಿಯೂ ಇದೆ.

ಜೈನ-ಬೌದ್ಧರು ಹೇಳುವ ನಿರ್ವಾಣದಲ್ಲಿಯೂ ದುಃಖನಿವೃತ್ತಿಯಿದೆ. ಆದರೆ ಇಲ್ಲಿ ಹೇಳುವುದೇನೆಂದರೆ ಸಂಪೂರ್ಣ ಅನರ್ಥಗಳ ನಿವೃತ್ತಿಯಾಗಿ ಪರಮಾನಂದಪ್ರಾಪ್ತಿ. ಇದೇ ಇಲ್ಲಿಯ ವಿಶೇಷ.

ಇಂತಹ ಮಹಾಭಾಗವತಗ್ರಂಥವು ವ್ಯಾಸಮುನಿಗಳಿಂದ ವರ್ಣಿತವಾಗಿದೆ. ಇದರಿಂದ ಕರ್ತೃವಿನ ಪವಿತ್ರತೆಯು ಹೇಳಲ್ಪಟ್ಟಿತು. ಧರ್ಮದ ವಿಲಕ್ಷಣ ಸ್ವರೂಪವು ತೋರಿಸಲ್ಪಟ್ಟಿತು. ಅಧಿಕಾರಿಯ ವೈಲಕ್ಷಣ್ಯವು ಹೇಳಲ್ಪಟ್ಟಿತು. ಇಂತಹ ಮಹಾಗ್ರಂಥವು ದೊರಕಿದ ಮೇಲೆ **ಪರೈಃ = ಸಾಧನೈರ್ನಾನಾಶಾಸ್ತ್ರೈಃ ಕಿಂ ಪ್ರಯೋಜನಂ ?**

ಈಶ್ವರಃ ಸದ್ಯಃ ಹೃದ್ಯವರುಧ್ಯತೇ–ಭಗವಂತನು ಕೂಡಲೇ ಹೃದಯದಲ್ಲಿ ಬಂದು ಕೂರುವಂತಹ ಶಾಸ್ತ್ರವಾಗಲೀ ಸಾಧನವಾಗಲೀ ಮತ್ತೊಂದು ಯಾವುದಿದೆ ? **ಕೃತಿಭಿಃ ಶುಶ್ರೂಷುಭಿಃ ತತ್ಕ್ಷಣಾತ್ ಅವರುಧ್ಯತೇ**

Sri Vidyabharathi Book Centre, Sringeri

 CC-O. In Public Domain. Digitized by eGangotri

ಬನ್ನಿ, ಭಾಗವತಕಥಾಶ್ರವಣವನ್ನು ಮಾಡಿ, ನಿಮ್ಮ ಹೃದಯದಲ್ಲಿ ಈಶ್ವರಾವರೋಧವಾಗುವುದನ್ನು ನೋಡಿ.

ಯಶೋದೆಯು ಕೃಷ್ಣನನ್ನು ಒರಳಿಗೆ ಬಂಧಿಸಿದಂತೆ ಈಶ್ವರನು ನಿಮ್ಮ ಹೃದಯದಲ್ಲಿ ಬಂಧಿಸಲ್ಪಡುತ್ತಾನೆ. ಇದು ಕೇವಲ ಫಲಶ್ರುತಿಯಲ್ಲ. ಹೃದಯ ದಲ್ಲಿ ಭಗವತ್ಕಥಾರಸಾಸ್ವಾದನೆಯ ಇಚ್ಛೆಯು ಮೂಡಿದೊಡನೆ ಭಗವಂತನು ಬಂದು ಕುಳಿತುಬಿಡುವನು.

ನಿಮಗೆ ನೀರುಕುಡಿಯಬೇಕೆಂಬ ಇಚ್ಛೆಯು ಉದಿಸಿದೊಡನೆ ನೀರಿನ ನೆನಪು ಬರುವುದೋ ಇಲ್ಲವೋ ? ಸ್ತ್ರೀಸಹವಾಸವು ಬೇಕೆಂಬ ಇಚ್ಛೆಯು ಮೂಡಿ ದೊಡನೆ ಸ್ತ್ರೀಯು ಬಂದು ಕೂರುವಳೋ ಇಲ್ಲವೋ ? ಆದರೆ ನೀರು ಜಡ ಬಯಸಿದ ಮಾತ್ರದಿಂದ ಬರುವುದಿಲ್ಲ. ಸ್ತ್ರೀಯು ದೂರದಲ್ಲಿರುತ್ತಾಳೆ. ಬೇಗ ಬರುವುದಿಲ್ಲ. ಅವರ ಆಭಾಸವು ಮಾತ್ರ ಬರುವುದು.

ಈಶ್ವರನು ದೂರದಲ್ಲಿಯೂ ಇಲ್ಲ. ಜಡನೂ ಅಲ್ಲ. ಅಂದ ಮೇಲೆ ಈಶ್ವರ ಪ್ರಾಪ್ತೀಚ್ಛೆಯು ಮೂಡಿದೊಡನೆ ತದುಪಾಧ್ಯವಚ್ಛಿನ್ನಪರಮಾತ್ಮನು ಇಚ್ಛೆ ಯಲ್ಲಿ ಪ್ರಕಟವಾಗುತ್ತಾನೆ. ಇಚ್ಛೆಯಿರುವವರೆಗೂ ಇರುತ್ತಾನೆ. ಎಂದೆಂದಿಗೂ ಈಶ್ವರನು ಹೃದಯದಲ್ಲಿ ನೆಲೆಸಿರುವಂತೆ ನೋಡಿಕೊಳ್ಳಬೇಕು. ಇದಕ್ಕೆ ಕಾಲಾವಕಾಶ ಬೇಕಿಲ್ಲ.

ತತ್ಕ್ಷಣಾತ್ ಎಂದರು. ಅಂದರೆ ಅನ್ಯೇಚ್ಛಾನಿವೃತ್ತಿಪೂರ್ವಕಭಗವ ದಿಚ್ಛೆಯು ಉದಿಸಿದೊಡನೆ ಅಥವಾ ಅನ್ಯೇಚ್ಛಾನಿವೃತ್ತಿಪೂರ್ವಕ ಭಗವತ್ಪ್ರಾ ಪ್ತೀಚ್ಛೆಯು ಹುಟ್ಟಿದೊಡನೆ ಹೃದಯದಲ್ಲಿ ಈಶ್ವರನು ಅವರುದ್ಧನಾಗುತ್ತಾನೆ.

ಈ ಶ್ಲೋಕದ ತಾತ್ಪರ್ಯವನ್ನು ಹೀಗೆ ಸಂಗ್ರಹಿಸಬಹುದು.

ಶ್ರೀಮದ್ಭಾಗವತದಲ್ಲಿ ಸಾಧನಾರೂಪದಲ್ಲಿ ಪರಮಧರ್ಮವನ್ನು ನಿರೂಪಿ ಸಿದ್ದಾರೆ. ಕೈತವ. ಕಪಟ. ಕಾಮನಾದಿಗಳಿಲ್ಲದಿರುವುದೇ ಪರಮಧರ್ಮ. ವೈಕುಂಠಾದಿ ಲೋಕಪ್ರಾಪ್ತಿಗಾಗಲೀ ಮೋಕ್ಷಪ್ರಾಪ್ತಿಗಾಗಲೀ—ಪರಮೇಶ್ವರ ನನ್ನು ಸೇವಿಸದೇ ನಿಷ್ಕಾಮನೆಯಿಂದ ಪರಮೇಶ್ವರನನ್ನು ಸೇವಿಸುವುದೇ ಪರಮ ಧರ್ಮವು. ಅಂತಹವರಿಗಾಗಿ ವಾಸ್ತವಿಕ ವಸ್ತುವನ್ನು ವರ್ಣಿಸಿದ್ದಾರೆ.

Sri Vidyabharathi Book Centre, Sringeri

ಇದರಲ್ಲಿ ವಿವಿಧ ಆಭರಣಾದಿಗಳ ವರ್ಣನೆಯಿಲ್ಲ. ಸ್ವರ್ಣತತ್ತ್ವದ ವರ್ಣನೆಯಿದೆ. ಇದರ ಪ್ರಯೋಜನವೆಂದರೆ ಸಕಲಾನರ್ಥನಿವೃತ್ತಿ ಪೂರ್ವಕ ಪರಮಾನಂದ ಪ್ರಾಪ್ತಿ.

ಭಾಗವತವು ವೇದಕ್ಕೆ ಸಮಾನವಾದುದು. ಭಗವಂತನು ತನ್ನ ಹೃದಯವನ್ನೇ ಈ ರೂಪದಲ್ಲಿ ಬಿಚ್ಚಿಟ್ಟಿದ್ದಾನೆ. ಕರುಣಾಪಾರಾವಾರನಾದ ಭಗವಂತನು ತನ್ನ ಹೃದಯವನ್ನು ಬಿಚ್ಚಿಟ್ಟಿರುವುದರ ಜೊತೆಗೆ ತನ್ನ ಸಹಚಾರಿಣೀ ಭಕ್ತಿ ದೇವಿಯನ್ನು–ಯಾರನ್ನು ರಾಧಾ, ಮಹಾಲಕ್ಷ್ಮೀ, ಸೀತಾ, ಗೌರಿ, ಎಂದೆಲ್ಲ ಕರೆಯುವರೋ–ಅವಳನ್ನು ಪ್ರಕಟಿಸಿದ್ದಾನೆ.

ಪರಮಾತ್ಮನು ಇಚ್ಛಾರೂಪಿ. ಅಂತರಂಗದಲ್ಲಿಯೇ ವಿರಾಜಮಾನನಾಗಿದ್ದಾನೆ. ಆದರಿಂದ ಇಚ್ಛೆಯು ಉದಿಸಿದೊಡನೆ ಮುರಳೀಮನೋಹರ ಪೀತಾಂಬರಧಾರೀ ಶ್ಯಾಮಸುಂದರನ ದರ್ಶನವಾಗುತ್ತದೆ. ಆದರಿಂದ ನೀವು ಪರಮೇಶ್ವರನ ರೂಪಮಾಧುರೀ, ನಾಮಮಾಧುರೀ, ಗುಣಮಾಧುರೀ, ಲೀಲಾ ಮಾಧುರಿಗಳ ಶ್ರವಣವನ್ನು ಮಾಡಿರಿ. ತತ್ಕಾಲದಲ್ಲಿಯೇ ನಿಮ್ಮ ಅನುಭವವು ಎಷ್ಟು ವಿಚಿತ್ರವಾಗುವುದೆಂಬುವುದನ್ನು ತಿಳಿಯುವಿರಿ.

ಶ್ರೀಮದ್ಭಾಗವತವು ವೈದಿಕಮಹಾಗ್ರಂಥವೆಂದು ಮುಂದಿನ ಶ್ಲೋಕದಲ್ಲಿ ತಿಳಿಸುತ್ತಾರೆ.

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಮ್ ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥೩॥

ರಸಿಕರಾದ ಭಾವುಕಜನರೇ ! ಈ ಶ್ರೀಮದ್ಭಾಗವತವು ವೇದರೂಪೀಕಲ್ಪವೃಕ್ಷದ ಪರಿಪಕ್ವಫಲವು. ಶ್ರೀ ಶುಕಮಹಾಮುನಿಗಳ ವಚನಾಮೃತದ್ರವದಿಂದ ಕೂಡಿಕೊಂಡಿದೆ. ಇದರಲ್ಲಿ ಬೀಜ, ಸಿಪ್ಪೆ, ತೊಗಟೆ-ಇತ್ಯಾದಿಗಳಿಲ್ಲ. ಈ ದಿವ್ಯಫಲವು ಪರಮರಸಪರಿಪೂರ್ಣವಾದುದು. ನಿಮ್ಮ ಶಕ್ತಿ ಮೀರಿ ಪುನಃ ಪುನಃ ಈ ರಸವನ್ನು ಪಾನಮಾಡಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಗಳು ಕಲ್ಪವೃಕ್ಷಗಳು. ಅಜ್ಞಾತಜ್ಞಾಪಕಗಳು. ನಿಗಮ =ನಿಗಮ್ಯ ಯತೇ. ಯಾವ ಅಜ್ಞಾತವಸ್ತುವನ್ನು ಮನೋಬುದ್ಧೀಂದ್ರಿಯಾದಿಗಳಿಂದಲೂ ಹಾಗೂ ಸಮಾಧಿಯಿಂದಲೂ ತಿಳಿಯಲಾರೆವೋ, ಸಾಕ್ಷಿಭಾಸ್ಯರೂಪದಿಂದಲೂ ಯಾರ ಜ್ಞಾನವಾಗಲಾರದೋ. ಯಾರು ಸಾಕ್ಷಿಭಾಸ್ಯನೂ ಅಲ್ಲವೊ-ಅವನ ಜ್ಞಾನವನ್ನು ಮಾಡಿಸುವ ನಿಗಮವು ಕಲ್ಪವೃಕ್ಷವೇ ಸರಿ. ದ್ವೈತಿಗಳಿಗೂ, ಅದ್ವೈತಿಗಳಿಗೂ, ದ್ವೈತಾದ್ವೈತಿಗಳಿಗೂ ಅವರವರು ಕೇಳಿದ್ದನ್ನು ಕೊಟ್ಟಿತು. ಮಹಾತ್ಮರು ಹೇಳಿದರು : ನಾವು ಕೇಳುವವರಲ್ಲ. ನಿನ್ನ ಬಳಿಯಿರುವುದರಲ್ಲಿ ಒಳ್ಳೆಯದನ್ನು ನಮಗೆ ಕೊಟ್ಟುಬಿಡು.

ನಿಗಮಕಲ್ಪತರುವು ಹೇಳಿತು-ಆಗಬಹುದು. ನೀವು ತೆಗೆದುಕೊಳ್ಳಿ. **'ಗಲಿತಂ ಫಲಂ'.**

ಯಾರೂ ಇದನ್ನು ಕುಯ್ದಿರುವುದಿಲ್ಲ. ಕಲ್ಲು ಹೊಡೆದು ಕೊಂಬೆಯನ್ನು ಅಳ್ಳಾಡಿಸಿ ಪಡೆದ ಫಲವಲ್ಲ. ಅಂದರೆ ಇದು ವಾಸನಾನುಸಾರವಾಗಿ ಪ್ರಾಪ್ತವಾದುದಲ್ಲ. ವೇದದ ಸಾರಸರ್ವಸ್ವವೇ ಭಾಗವತದ ರೂಪದಲ್ಲಿ ಪ್ರಕಟವಾಗಿದೆ ಇದು ಸಾಧನಾತ್ಮಕವಲ್ಲ-ಫಲಾತ್ಮಕ.

ಎಲ್ಲ ಸಾಧನೆಗಳ ಫಲವೂ ಇದರಲ್ಲಿದೆ. ಇದರಲ್ಲಿ ತ್ಯಾಗಾಂಶವಿಲ್ಲ. ಇದು ಕೇವಲ ರಸಸ್ವರೂಪ. ಕೇವಲ ಫಲರೂಪವಾಗಿದ್ದರೆ ಸಿಪ್ಪೆ-ಬೀಜ ಇತ್ಯಾದಿಗಳನ್ನು ತೆಗೆಯಬೇಕಿತ್ತು. ಕೇವಲ ರಸಾತ್ಮಕವಾಗಿದ್ದರೂ ನೆಲದ ಮೇಲೆ ಚೆಲ್ಲಿ ಹೋಗುತ್ತಿತ್ತು. ಇದು ಫಲವೂ ಹೌದು-ರಸವೂ ಹೌದು. ಇದರ ವೈಶಿಷ್ಟ್ಯವೆಂದರೆ : ಶುಕದೇವರ ಶ್ರೀಮುಖದ ಅಮೃತದ್ರವದಿಂದ ಸಂಯುಕ್ತವಾಗಿದೆ.

ಪಿಬತ ಭಾಗವತಂ ರಸಮಾಲಯಂ= ಕುಡಿಯಿರಿ, ಕುಡಿಯಿರಿ. ಭಾಗವತರಸಪಾನವನ್ನು ಮಾಡಿರಿ. ಪುನಃ ಪುನಃ ಕುಡಿಯಿರಿ. **ಭಗವತಾ ಬ್ರಹ್ಮಣೇ ಪ್ರೋಕ್ತಂ ಭಾಗವತಂ** ಭಗವಾನ್ ನಾರಾಯಣನು ಬ್ರಹ್ಮನಿಗೆ ಹೇಳಿದುದು. ಎಷ್ಟು ಕುಡಿಯೋಣ ? ಎಲ್ಲಿಯವರೆಗೆ ಕುಡಿಯೋಣ ? ಕುಡಿಯಿರಿ. ಪ್ರಜ್ಞೆ ತಪ್ಪುವವರೆಗೆ ಕುಡಿಯಿರಿ. **ಆಲಯಂ**= ಜನರು

Sri Vidyabharathi Book Centre, Sringeri

ಪ್ರಜ್ಞಾಹೀನರಾಗಲು ಏನೇನೋ ಕುಡಿಯುತ್ತಾರೆ. ಆದರೆ ಭಾಗವತರಸವನ್ನು ಕುಡಿದು ಪ್ರಜ್ಞಾತಪ್ಪುವುದಾದರೆ ಅದರ ಆನಂದವು ಎಷ್ಟೆಂಬುದನ್ನು ಹೇಳಲಾಗುವುದಿಲ್ಲ. ಲಯಪರ್ಯಂತರ ಕುಡಿಯಿರಿ. ದೇಹವು ಬಿದ್ದುಹೋಗುವವರೆಗೂ ಕುಡಿಯಿರಿ. ಕುಡಿಯುತ್ತಾ ಕುಡಿಯುತ್ತಾ ದೇಹಪತನವಾದರೆ ಪುನಃ ದೇಹ ಪ್ರಾಪ್ತಿಯಿಲ್ಲ. ಜನ್ಮಾದಿಗಳೂ ಲಯವಾಗುತ್ತವೆ.

ಈ ಜೀವನದಲ್ಲಿ ರಸವನ್ನು ಆಸ್ವಾದಿಸುವವರೇ ರಸಿಕರು. ಪರಲೋಕದಲ್ಲಿ ರಸಗ್ರಾಹಿಗಳು ಭಾವುಕರು. ಇಬ್ಬರೂ ಬನ್ನಿ ; ಬನ್ನಿ : ಕುಡಿಯಿರಿ. ಆನಂದಿಸಿರಿ. ಇದು ಇಹ-ಪರಗಳೆರಡಕ್ಕೂ ಹಿತಕಾರಿಯಾದುದು. ಇದು ಫಲವಾದುದರಿಂದ ರಸಾತ್ಮಕ : ರಸಾತ್ಮಕವಾದುದರಿಂದ ಫಲ. ಫಲವು 'ಜ್ಞಾನ' ರಸವು 'ಭಕ್ತಿ' ಅವಿದ್ಯಾನಿವರ್ತಕಜ್ಞಾನವು ಫಲ.

ನೈಮಿಷೇಽನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ
ಸತ್ರಂ ಸ್ವರ್ಗಾಯ ಲೋಕಾಯ ಸಹಸ್ರಸಮಮಾಸತ ॥೪॥

ದೇವತೆಗಳ ಕ್ಷೇತ್ರವಾದ ನೈಮಿಷಾರಣ್ಯದಲ್ಲಿ ಶೌನಕಾದಿ ಋಷಿಗಳು ಪರಮಾತ್ಮಪ್ರಾಪ್ತಿಗಾಗಿ ಸಹಸ್ರವರ್ಷವ್ಯಾಪ್ತಿಯಾದ ಮಹಾಸತ್ರವನ್ನು ಪ್ರಾರಂಭಿಸಿದರು.

ಸ್ವರ್ಗಾಯ ಲೋಕಾಯ = ಎಂದರೆ ಪರಮೇಶ್ವರ ಪ್ರಾಪ್ತಿಗಾಗಿ ಎಂದರ್ಥವು.

ತ ಏಕದಾ ತು ಮುನಯಃ ಪ್ರಾತರ್ಹುತಹುತಾಗ್ನಯಃ
ಸತ್ಕೃತಂ ಸೂತಮಾಸೀನಂ ಪಪ್ರಚ್ಛುರಿದಮಾದರಾತ್ ॥೫॥

ಒಂದು ದಿವಸ ಋಷಿಗಳು ಹವನಾದಿಗಳನ್ನು ಮುಗಿಸಿ, ಸೂತರನ್ನು ಸತ್ಕರಿಸಿ ಆದರದಿಂದ ಅವರನ್ನು ಕೇಳಿದರು.

ಪ್ರಶ್ನಿಸುವಾಗ ಅವಶ್ಯವಾಗಿ ಆದರವಿರಬೇಕು. ಇಲ್ಲದಿದ್ದರೆ ಹೇಳುವವನ ಹೃದಯವು ಸಂಕುಚಿತವಾಗುತ್ತದೆ.

'**ಆ**'-'**ದರ**'. '**ದರ**' ಎಂದರೆ ಹೆದರಿಕೆ. '**ಆ**' ಎಂದರೆ ಈಷತ್ ಅಲ್ಪ-

Sri Vidyabharathi Book Centre, Sringeri

 CC-O. In Public Domain. Digitized by eGangotri

ಸ್ವಲ್ಪ ಹೆದರಿಕೆಯೂ ಇರಬೇಕು. ಗೌರವವೂ ಇರಬೇಕು. ಅದೇ 'ಆದರಃ' (ಭಾರವಿಯ ಕಿರಾತಾರ್ಜುನೀಯುವಲ್ಲಿ (1-32) ನ-ವಿದ್ವಿಷಾ ದರಃ ಎಂದು ಬಂದಿದೆ. ಅಲ್ಲಿ ಮಲ್ಲಿನಾಥರು **ಆದರಃ** ಎನ್ನುವುದನ್ನು **ಆ-ದರಃ** ಎಂದು ಪದಚ್ಛೇದ ಮಾಡಿ ವ್ಯಾಖ್ಯಾನಿಸಿದ್ದಾರೆ)

ಋಷಿಗಳ ಪ್ರಶ್ನೆಯಿಂದ ಸೂತರಿಗೂ ಆನಂದವಾಗಿದೆ. ಜ್ಞಾನದಲ್ಲಿ ವಯಸ್ಸಿನಲ್ಲಿ ಹೆಸರುಗಳಿಸಿದವರು, ಶಂಕಾಸಮಾಧಾನಕ್ಕಾಗಿ ಪ್ರಶ್ನಿಸುವುದೆಂದರೆ ದೊಡ್ಡ ಗೌರವವನ್ನು ಕೊಟ್ಟಂತೆ. ಇದರಿಂದ ಅವರ ವಿನಮ್ರತೆಯೂ ಪ್ರಕಟ ವಾಗುತ್ತದೆ. ಹೇಳುವವರಿಗೂ ಆನಂದವಾಗುತ್ತದೆ. ಇದು ಆದರಿಸುವ ಶ್ರೇಷ್ಠಪದ್ಧತಿಯು. ಋಷಿಗಳು ಕೇಳುತ್ತಾರೆ : ಪುರಾಣಿಕರೇ ! ನೀವಾದರೋ ಇತಿಹಾಸ–ಪುರಾಣಾದಿಗಳನ್ನು ಅಧ್ಯಯನಮಾಡಿರುವಿರಿ.

ಇತಿಹಾಸವೆಂದರೆ-ಘಟನಾಪ್ರಧಾನಗಳು. ಪುರಾಣಗಳೆಂದರೆ = ಶಿಕ್ಷಾ ಪ್ರಧಾನಗಳು. ಯಾವಾಗ ಒಂದು ಐತಿಹಾಸಿಕ ಘಟನೆಯನ್ನು ಶಿಕ್ಷಣಕೊಡುವ ಉದ್ದೇಶದಿಂದ ವರ್ಣಿಸುತ್ತಾರೋ–ಆವಾಗ ಅದು ಪುರಾಣವಾಗುವುದು. ಯಥಾರ್ಥವನ್ನು ತಿಳಿಸುವುದಕ್ಕಾಗಿ ಅದು ನಿರೂಪಿಸಲ್ಪಟ್ಟರೆ-ಇತಿಹಾಸವಾಗು ತ್ತದೆ. (**ಇತಿ-ಹ-ಆಸ**-ಹೀಗೆ ನಡೆಯಿತು, ಹೀಗೆ ಇದ್ದಿತು.

ವ್ಯಾಸಾದಿಮುಹನೀಯರು ತಿಳಿದಿರುವುದನ್ನೆಲ್ಲಾ ನೀವು ತಿಳಿದಿರುವಿರಿ. ಸದ್ಗುರುಗಳು ತಮ್ಮ ಪ್ರೇಮಿ ಶಿಷ್ಯರುಗಳಿಗೆ ರಹಸ್ಯಗಳನ್ನೂ ತಿಳಿಸಿರುತ್ತಾರೆ. ಇದರಿಂದ ದಯೆಯಿಟ್ಟು :

ಪುಂಸಾಮೇಕಾಂತತಃ ಶ್ರೇಯಃ ತನ್ನಃ ಶಂಸಿತುಮರ್ಹಸಿ ॥೯॥

ಮಾನವರ ಪರಮ ಕಲ್ಯಾಣವು ಹೇಗೆ ಸಾಧಿಸಲ್ಪಡುತ್ತದೆ ? ಇದರಲ್ಲಿ ನಿಮ್ಮ ಸ್ಪಷ್ಟ ಅಭಿಪ್ರಾಯವೇನು ? ತಿಳಿಸಿ.

ಕಲಿಯುಗದವರ ಆಯುಷ್ಯವಾದರೋ ಅತ್ಯಲ್ಪವಾದುದು. ಅಷ್ಟೇ ಅಲ್ಲ ;

ಮಂದಾಃ ಸುಮಂದಮತಯಃ ಮಂದಭಾಗ್ಯಾಃ ಹ್ಯುಪದ್ರುತಾಃ

ಇವರು ಮಂದರು. ಮಂದವೆಂದರೆ-ಅರಸಿಕರು-ಅಲಸಿಗಳು. ಅವರ ಬುದ್ಧಿಯಲ್ಲಿ ತೀಕ್ಷ್ಣತೆಯಿಲ್ಲ. ಭವಿಷ್ಯವನ್ನು ಅರ್ಥಮಾಡಿಕೊಳ್ಳದವರು. ಕರ್ಮವಿಪಾಕವು ಹೇಗಿರುವುದೆಂಬುದನ್ನು ಅರಿಯದವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಮಮಾಡಲೂ-ಕರ್ಮಫಲವನ್ನು ಹೊಂದಲೂ ಒಂದು ಲೆಕ್ಕಾಚಾರ ವಿದೆ. ಇದನ್ನು ತಿಳಿದವರು ಸುಖಿಗಳಾಗುತ್ತಾರೆ ತಿಳಿಯದವರ ಜೀವನವು ಸಂಶಯಗ್ರಸ್ತವಾಗುತ್ತದೆ. ವಿಫಲವಾಗುತ್ತದೆ.

ಕಲಿಯುಗದವರು ಮಂದರಷ್ಟೇ ಅಲ್ಲ. ಮಂದಭಾಗ್ಯರೂ ಸಹ. ಅವರ ಭಾಗ್ಯವೂ ಮಂದ. ಅಷ್ಟೇ ಅಲ್ಲ. ಯಾವಾಗಲೂ ರಾಗದ್ವೇಷಾದ್ಯುಪದ್ರವ ಗಳಿಂದ ತುಂಬಿರುತ್ತಾರೆ.

ಇಂತಹವರಿಗೆ ಜೀವನದಲ್ಲಿ ಸಫಲತೆಯು ಹೇಗೆ ದೊರಕೀತು ?

ಶಾಸ್ತ್ರಗಳಾದರೋ ಬಹಳ ಇವೆ. ಅವುಗಳಲ್ಲಿ ನಾನಾವಿಧಕರ್ಮಗಳ ವರ್ಣನೆಯಿದೆ. ಅವುಗಳನ್ನೆಲ್ಲಾ ತಿಳಿದುಕೊಂಡು ಆಚರಿಸುವುದು ಬಹಳ ಕಷ್ಟ.

ಆದರಿಂದ ಶ್ರದ್ಧಾಳುಗಳು ಸುಲಭವಾಗಿ ಗ್ರಹಿಸುವಂತೆ ಅವುಗಳ ಸಾರ ವನ್ನು ಹೇಳಿಬಿಡಿ.

ಬ್ರೂಹಿ ನಃ ಶ್ರದ್ದಧಾನಾನಾಂ ಯೇನಾತ್ಮಾ ಸಂಪ್ರಸೀದತಿ ॥೧೧॥

ನಾವು ಶ್ರದ್ಧಾವಂತರು. ನೀವು ಹೇಳುವುದನ್ನು ಶ್ರದ್ಧೆಯಿಂದ ತಿಳಿದು ಕೊಳ್ಳುತ್ತೇವೆ. ಅಂದರೆ ನಮ್ಮ ವಾಸನಾವಾಸಿತವಿಚಾರಗಳಿಗೆ ಅಂಟಿಕೊಂಡಿರು ವುದಿಲ್ಲ-ಎಂದರ್ಥವು.

ಶ್ರತ್ ಎಂದರೆ 'ಸತ್ಯ'. ನಿರುಕ್ತಕಾರರು ಸತ್ಯವನ್ನು 'ಶ್ರತ್' ಮಾಡಿ ದ್ದಾರೆ.

"ಶ್ರದಿತಿ ಸತ್ಯಂ"

ನಾರಾಯಣನು ಏತಕ್ಕಾಗಿ ವಸುದೇವ-ದೇವಕಿಯರಲ್ಲಿ ಅವತರಿಸಿದನು ? ಎನ್ನುವುದನ್ನು ನೀವು ಅರಿತಿರುವಿರಿ. ಮಾನವರ ಕಲ್ಯಾಣಾಭ್ಯುದಯದ ಸಾಧನೆಯೇ ಭಗವದವತಾರದ ವೈಶಿಷ್ಟ್ಯವಷ್ಟೆ.

ಆಪನ್ನಃ ಸಂಸೃತಿಂ ಘೋರಾಂ ಯನ್ನಾಮ ವಿವಶೋ ಗೃಣನ್
ತತಃ ಸದ್ಯೋ ವಿಮುಚ್ಯೇತ ಯದ್ಬಿಭೇತಿ ಸ್ವಯಂ ಭಯಮ್ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ಜೀವನಾದರೋ ಭಯಂಕರವಾದ ಜನ್ಮ-ಮರಣಾತ್ಮಕಸಂಸಾರದಲ್ಲಿ ಸಿಲುಕಿಕೊಂಡಿದ್ದಾನೆ. ಅವನು ಅಜ್ಞಾನದಿಂದಲಾದರೂ ಭಗವಂತನ ಮಂಗಳ ನಾಮವನ್ನು ಸ್ಮರಿಸಿದರೆ ಕೂಡಲೆ ಮುಕ್ತನಾಗುತ್ತಾನೆ.

ಭಯವೂ ಭಗವಂತನಿಂದ ಭಯಪಡುತ್ತದೆ.

ಯತ್ಪಾದ ಸಂಶ್ರಯಾಃ ಸೂತ ಮುನಯಃ ಪ್ರಶಮಾಯಿನಾಃ
ಸದ್ಯಃ ಪುನಂತ್ಯುಪಸ್ಪೃಷ್ಟಾಃ ಸ್ವರ್ಧುನ್ಯಾಪೋಽನುಸೇವಯಾ ॥

ಭಗವಚ್ಚರಣಾಶ್ರಿತರಾದ ಸಂತಮಹಾತ್ಮರು '**ಪ್ರಶಮಾಯಿನಾಃ**' : ಅಂದರೆ ಅವರು ಶಾಂತಿಗೆ ಆಶ್ರಯರು. ಅವರು ಯಾವಾಗಲೂ ಭಗವಂತನ ಪಾದಾರವಿಂದಗಳನ್ನೇ ಆಶ್ರಯಿಸಿರುತ್ತಾರೆ.

ಅವರ ದರ್ಶನ-ಸ್ಪರ್ಶನಾದಿಗಳಿಂದ ಜೀವಿಗಳ ಉದ್ಧಾರವಾಗುತ್ತದೆ.

ಸ್ವರ್ಧುನ್ಯಾಪೋಽನುಸೇವಯಾ

ಪವಿತ್ರಗಂಗೋದಕವನ್ನು ಬಹಳ ಕಾಲ ಸೇವಿಸಿದರೆ ಪವಿತ್ರರಾಗುತ್ತಾರೆ. ಗಂಗೆಯು ಪಾವಿತ್ರ್ಯವನ್ನು ನಾವಾಗಿ ತೆಗೆದುಕೊಳ್ಳಬೇಕು. ಮಹಾತ್ಮರಾದರೋ ತಾವಾಗಿಯೇ ಪಾವಿತ್ರ್ಯವನ್ನು ಕೊಟ್ಟುಬಿಡುತ್ತಾರೆ.

ಕಲಿಕಲ್ಮಷದಿಂದ ಮುಕ್ತನಾಗಿ-ಸ್ವಶುದ್ಧಿಯನ್ನು ಬಯಸುವ ಯಾರು ತಾನೇ ಪುಣ್ಯಶ್ಲೋಕಭಗವಂತನ ಪವಿತ್ರಕಥಾನಕವನ್ನು ಕೇಳಲು ಇಷ್ಟ ಪಡುವುದಿಲ್ಲ ?

ತಸ್ಯ ಕರ್ಮಾಣ್ಯುದಾರಾಣಿ ಪರಿಗೀತಾನಿ ಸೂರಿಭಿಃ ॥೧೭॥

ಭಗವತ್ಕಥಾನಕಗಳು ಉದಾರಗಳು. ಸಾಮಾನ್ಯವಾಗಿ ಲೋಕದಲ್ಲಿಯೂ ತನ್ನ ಶಕ್ತಿ-ಸಾಮರ್ಥ್ಯಗಳಿಗೆ ಮೀರಿ ಕೊಡುವವರನ್ನು 'ಉದಾರಿ'ಗಳೆಂದು ಕರೆಯುತ್ತಾರೆ. **ಉತ್–ಊರ್ಧ್ವಂ (ಶಕ್ತೇಃ) ರಾತೀತಿ ಉದಾರಃ**

ಭಗವಂತನ ಲೀಲಾವಿಭೂತಿವರ್ಣನೆಯು ಉದಾರವು. ಏಕೆಂದರೆ ಅದು ಆ ವಿಭೂತಿಪುರುಷನನ್ನೇ ದಾನಮಾಡಿಬಿಡುತ್ತದೆ. ಯಾರು ಭಗವಚ್ಚರಿತ್ರೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಸಂಧಾನವನ್ನು ಮಾಡುವರೋ–ಅವರ ಹೃದಯದಲ್ಲಿ ಭಗವಂತನು ಕುಳಿತು ಬಿಡುತ್ತಾನೆ. ಇಂತಹ ಭಗವದವತಾರಗಳ ಕಥೆಗಳನ್ನು ನಮಗೆ ವರ್ಣಿಸಿ ಹೇಳಿರಿ.

ಅವನ ಲೀಲೆಗಳನ್ನು ಎಷ್ಟು ಶ್ರವಣಮಾಡಿದರೂ ನಮಗೆ ತೃಪ್ತಿಯಿಲ್ಲ. ಕೇಳಿದಷ್ಟೂ ಕೇಳಬೇಕೆಂಬ ಕುತೂಹಲವು ಕೆರಳುತ್ತಿರುತ್ತದೆ.

ಓರ್ವ ಮಹಾತ್ಮರು ಹೇಳಿರುವಂತೆ :

'ಹರಿ ಅನಂತ ಹರಿಕಥಾ ಅನಂತ'

ಹರಿಯ ಕಥೆಗಳನ್ನು ಕೇಳಿದಷ್ಟೂ ಹೊಸ ಹೊಸ ರಸಾನುಭವವುಂಟಾಗುವುದು. ಶ್ರೀಕೃಷ್ಣನಾದರೋ ಸಾಮಾನ್ಯನಂತೆಯೇ ನಟಿಸುತ್ತಿದ್ದನು ಹಾಗೂ. ಬಲರಾಮನೊಡನೆ ಮಾನವರಿಂದ ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದನು. ಅದ್ಭುತಪರಾಕ್ರಮದಿಂದ ಮೆರೆದನು.

ಕಲಿಭಯಗ್ರಸ್ತರಾದ ನಾವುಗಳು ಈ ವೈಷ್ಣವಕ್ಷೇತ್ರದಲ್ಲಿ ದೀರ್ಘಸತ್ರಾಚರಣೆಯನ್ನು ಮಾಡುತ್ತಾ ಕುಳಿತಿದ್ದೇವೆ ಹಾಗೂ ಶ್ರೀಹರಿಕಥಾಶ್ರವಣಕ್ಕೆ ಸಾಕಷ್ಟು ಅವಕಾಶವೂ ಇದೆ. ಈ ಕಲಿಯುಗವಾದರೋ ಅಂತಃಕರಣದ ಪವಿತ್ರತೆಯನ್ನೂ-ಶಕ್ತಿಯನ್ನೂ ನಾಶಮಾಡಿಬಿಡುತ್ತದೆ. ಇವರಿಂದ ಪಾರಾಗುವುದು ಬಹಳ ಕಠಿಣ.

ನದಿಯನ್ನು ದಾಟಲು ದೋಣಿಯು ಸಿಕ್ಕಿದಂತೆ–ಸಂಸಾರಭಯಗ್ರಸ್ತರಾದ ನಮಗೆ ವಿಧಿಯ ಸುಮುಖತೆಯಿಂದ ನೀವು ದೊರಕಿರುವಿರಿ.

ಧರ್ಮರಕ್ಷಕನಾದ, ಬ್ರಾಹ್ಮಣಭಕ್ತನಾದ, ಯೋಗೇಶ್ವರೇಶ್ವರನಾದ ಭಗವಾನ್ ಶ್ರೀಕೃಷ್ಣನು ಸ್ವಧಾಮಗಮನ ಮಾಡಿದ ಮೇಲೆ ಧರ್ಮದಸ್ಥಿತಿಯು ಹೇಗಾಯಿತು ? ದಯೆಯಿಟ್ಟು ತಿಳಿಸಿ ಎಂದು ವಿನಯದಿಂದ ಪ್ರಾರ್ಥಿಸಿದರು.

೧ನೆಯ ಅಧ್ಯಾಯವು ಮುಗಿಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮಸ್ಕಂಧ-೨ನೆಯ ಅಧ್ಯಾಯ

ಶೌನಕಾದಿಗಳ ಆ ಪ್ರಶ್ನೆಯಿಂದ ರೋಮಹರ್ಷಣನಂದನರಾದ ಉಗ್ರಶ್ರ ವಸೂತರು ಬಹಳ ಹರ್ಷಗೊಂಡರು.

ರೋಮಹರ್ಷಣ ಎಂದರೆ ರೋಮಾಂಚನವಾಗುವುದೆಂದರ್ಥ. ಅವರು ಕಥಾಶ್ರವಣವನ್ನು ಮಾಡಿಸುತ್ತಿದ್ದರೆ ಕೇಳುವವರು ರೋಮಾಂಚಿತರಾಗುತ್ತಿದ್ದರು. ಅದರಿಂದ ಅವರ ಹೆಸರು 'ರೋಮಹರ್ಷಣ' ಅವರ ಮಗನೆ 'ರೌಮಹರ್ಷಣಿ'

ಪ್ರತಿಪೂಜ್ಯ ವಚಸ್ತೇಷಾಂ_ಸೂತರು ಶೌನಕಾದಿಗಳನ್ನು ಅಭಿನಂದಿಸುತ್ತಾ ಹೇಳಿದರು : ಎಂದರೆ =ಪ್ರಾಶ್ನಿಕರನ್ನು ಹೆದರಿಸಿದರೆ. ಬೆದರಿಸಿದರೆ, ನಿನಗೆ ಪ್ರಶ್ನೆಗಳನ್ನು ಕೇಳಲು ಬರುವುದಿಲ್ಲ ಎಂದರೆ-ಅದು ಅನುಚಿತವೆನ್ನಿಸುವುದು. ಪ್ರಶ್ನಿಸುವವನು ವಿದ್ವಾಂಸನೇ ಆಗಿರಬೇಕೆಂದು ನಿರೀಕ್ಷಿಸಬಾರದು, ಸೂತರು. ಪ್ರಶ್ನೆಮಾಡಿದ ಶೌನಕಾದಿಗಳನ್ನು ಆದರಿಸಿದರು. ಅಭಿನಂದಿಸಿ ಹೇಳಿದರು ; ನೀವು ಬಹಳ ಸುಂದರ ಪ್ರಶ್ನೆಗಳನ್ನು ಕೇಳಿರುವಿರಿ. ನಾನು ಸಂತೋಷದಿಂದ ತಿಳಿದಿರುವುದನ್ನು ಹೇಳುತ್ತೇನೆ-ಎಂದು ತಿಳಿಸಿ ಶ್ರೀಕೃಷ್ಣಲೀಲಾಮೃತವನ್ನು ವರ್ಣಿಸಿರುವ ಶ್ರೀಶುಕದೇವರನ್ನು ವಂದಿಸುತ್ತಾ ಹೇಳುತ್ತಾರೆ.

ಯಂ ಪ್ರವ್ರಜನ್ತಮನುಪೇತಮಪೇತಕೃತ್ಯಂ
ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಭಿನೇದು
ಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥೨॥

ಶ್ರೀಶುಕದೇವರು ಜನ್ಮತಃ ಸಂನ್ಯಾಸಿಗಳು. ಭಗವದ್ದರ್ಶನಕ್ಕಾಗಿಯೇ ಲೋಕದಲ್ಲಿ ಆವಿರ್ಭವಿಸಿದ್ದರು. ಅವರಿಗೆ ಯಜ್ಞೋಪವೀತಾದಿ ಸಂಸ್ಕಾರಗಳೂ ನಡೆದಿರಲಿಲ್ಲ. ಏಕೆಂದರೆ : ವಿಕಾರವಿದ್ದೆಡೆ ಸಂಸ್ಕಾರದ ಅವಶ್ಯಕತೆಯಿದೆ. ಪರಮಾತ್ಮಸ್ವರೂಪವಾದರೋ ; ಅಸಂಸ್ಕೃತ. ಶ್ರೀಶುಕದೇವರು ಯಾವಾಗಲೂ ಪರಮಾತ್ಮಸ್ವರೂಪದಲ್ಲಿಯೇ ಪ್ರತಿಷ್ಠಿತರಾಗಿರತಕ್ಕವರು.

ಕೂದಲೇ ಬೆಳೆಯದಿರುವವರಿಗೆ ಕ್ಷೌರಿಕನ ಅವಶ್ಯಕತೆಯೇನು ? ಶುಕನೆಂದರೆ ಪರಮಾತ್ಮಸ್ವರೂಪಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಕಲಪುರಾಣಕರ್ತಾ. ಬ್ರಹ್ಮಸೂತ್ರಾದಿಗಳ ರಚಯಿತಾ ಮಹಾತ್ಮಾ ವೇದವ್ಯಾಸರು ಯಜ್ಞೋಪವೀತಾದಿ ಸಂಸ್ಕಾರಗಳೂ ಇಲ್ಲದೇ, ಲೌಕಿಕ-ವೈದಿಕ ಕರ್ಮಾನುಷ್ಠಾನಗಳೂ ಇಲ್ಲದೇ ಸಂನ್ಯಾಸಿಯಾಗಿ ಹೊರಟ ಮಗನನ್ನು ನೋಡಿ ವಿರಹವ್ಯಾಕುಲರಾದರು. ಆಗ **ತರವೋಽಭಿನೇದುಃ** ಏಕೆಂದರೆ ವೃಕ್ಷಾಂತರ್ಗತನಾದ ಆತ್ಮನೂ ಪರಮಾತ್ಮನೇ. ಶುಕದೇವನೂ ಪರಮಾತ್ಮ ಸ್ವರೂಪಿಯೇ. ವೃಕ್ಷಾಂತರ್ಗತ ಪ್ರತ್ಯಕ್ ಚೈತನ್ಯನೇ ಶುಕದೇವಾಂತರ್ಗತ ಪ್ರತ್ಯಕ್ ಚೈತನ್ಯನು, ವೃಕ್ಷಗಳಲ್ಲಿಯೂ ಮನುಷ್ಯರಲ್ಲಿಯೂ ಶರೀರೋಪಾಧಿಯ ಭೇದವೇ ಹೊರತು ಭೇದಾಂತರವಿಲ್ಲ. ಆದರಿಂದ ವೃಕ್ಷಗಳು ಪ್ರತ್ಯುತ್ತರಿಸಿದುವು **ಅಯಂ ಸರ್ವಭೂತಹೃದಯಃ**-ಇವನು ಸರ್ವ ಭೂತಹೃದಯಗಳ ನಿವಾಸಿಪರಮಾತ್ಮನು. **ಸರ್ವಭೂತಹೃದಿ ಅಯತಿ ಇತಿ**-ಇಂತಹ ಮುನಿಗೆ ನಮಸ್ಕಾರವು.

ಅವರು ಭಾಗವತದಲ್ಲಿ ತಮ್ಮ ಅಸಾಧಾರಣಪ್ರಭಾವವನ್ನು ಪ್ರಕಟಿಸಿದ್ದಾರೆ.

ಭಾಗವತವು ಅಖಿಲಶ್ರುತಿಗಳ ಸಾರವು. **ಏಕಂ ಏತೀತಿ ಏಕಃ** ಸರ್ವದರಲ್ಲಿಯೂ ಅನುಗತವಾಗಿರುವುದು. ಇದಕ್ಕೆ ಸರಿಸಮಾನವಾದುದು ಮತ್ತೊಂದಿಲ್ಲ. ಭಾಗವತದಲ್ಲಿರುವುದೇ ಎಲ್ಲ ಕಡೆಗಳಲ್ಲೂ ಇರುವುದು. ಇದರಲ್ಲಿಲ್ಲದಿರುವುದು ಎಲ್ಲಿಯೂ ಇಲ್ಲ. ಇದು ಅಂತ:ಕರಣದ ಜ್ಞಾನದೀಪ. ಘೋರಾಂಧಕಾರದಿಂದ ಪಾರುಮಾಡುತ್ತದೆ.

ಸಂಸಾರಿಗಳ ಮೇಲಿನ ಕರುಣೆಯಿಂದ ಶುಕದೇವರು ಈ ರಹಸ್ಯಾತಿ ರಹಸ್ಯವಾದ ಪುರಾಣವನ್ನು ಉಪದೇಶಿಸಿದ್ದಾರೆ. ಅವರು ಮುನಿಕುಲಕ್ಕೆ ಗುರುಗಳು. ಅಂತಹ ಶ್ರೀಶುಕದೇವರನ್ನು ವಂದಿಸಿ ಗುರುವಂದನೆಯಾದ ಮೇಲೆ ಈಶ್ವರವಂದನೆಯನ್ನು ಮಾಡುತ್ತಾರೆ.

ಗುರುವು ಇಲ್ಲದಿದ್ದರೆ ವೇದದ ಅಪೌರುಷೇಯತೆಯು ತಿಳಿಯುವುದಿಲ್ಲ. ಧರ್ಮ-ಈಶ್ವರ-ಆತ್ಮಾ ಯಾವುದರ ಜ್ಞಾನವೂ ತಿಳಿಯುವುದಿಲ್ಲ.

ನಿತ್ಯಾಪರೋಕ್ಷವಸ್ತುವಿನ ಜ್ಞಾನವು ಕೇವಲ ವಾಕ್ಯದಿಂದಲೇ ತಿಳಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಲ್ಪಡಬೇಕು. ಇದೇ ವೇದಾಂತಶಾಸ್ತ್ರದ ನಿಯಮ ಇದನ್ನು ಚೆನ್ನಾಗಿ ಮನ ಗಾಣಬೇಕು.

ಸ್ವರ್ಗವಾಗಲೀ ಸ್ವರ್ಗಸಾಧನವಾಗಲೀ – ವೇದದಿಂದ ತಿಳಿಯಲ್ಪಡುವು ದಿಲ್ಲ. ನಿತ್ಯಾಪರೋಕ್ಷಸ್ವಾತ್ಮನೇ ಬ್ರಹ್ಮನು. ಈ ಜ್ಞಾನವು ಮಹಾವಾಕ್ಯ ಶ್ರವಣದಿಂದಲೇ ತಿಳಿಯಲ್ಪಡಬೇಕು. ಧ್ಯಾನಮಾತ್ರದಿಂದ ತಿಳಿಯಲ್ಪಡುವು ದಿಲ್ಲ. ಇದನ್ನು ಗುರುವೇ ತಿಳಿಸಬೇಕು. ನೀನೇ ಪರಮಾತ್ಮನು. ಪರ ಮಾತ್ಮನೇ ನೀನು.

ಶ್ರೀಗುರುವಂದನೆಯಾದ ಮೇಲೆ ಈಶ್ವರವಂದನೆಯನ್ನು ಮಾಡುತ್ತಾರೆ.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥೪॥

ಪ್ರತಿಪಾದ್ಯದೇವತಾ ನಾರಾಯಣನನ್ನೂ = **ನರೋತ್ತಮಂ ನರಂ**= ಅರ್ಜುನನನ್ನೂ. ನರ-ನಾರಾಯಣಮಹರ್ಷಿಗಳನ್ನೂ-ಶ್ರೀಕೃಷ್ಣಾರ್ಜುನರನ್ನೂ **ನಮಸ್ಕೃತ್ಯ**

ನಾರಾಯಣಂ ನರಂ ಚೈವ ಸತ್ಯಮೇಕಂ ದ್ವಿಧಾ ಸ್ಥಿತಂ-ಒಂದೇ ವಸ್ತುವು ಎರಡು ರೂಪವಾಗಿ ಪ್ರಕಟವಾಗಿದೆ. ವಾಣಿಯ ಅಧಿಷ್ಠಾತ್ರೀ ಸರಸ್ವತಿಯನ್ನೂ, ವ್ಯಾಸರನ್ನೂ ನಮಸ್ಕರಿಸಿ, ಅಂತ:ಕರಣದ ಸಮಸ್ತವಿಕಾರ ಗಳನ್ನೂ ನಾಶಪಡಿಸಲು **ಜಯಮುದೀರಯೇತ್ ಜಯೋ ಗ್ರಂಥಃ** ಶ್ರೀಮದ್ಭಾಗವತದ ಕಥಾಶ್ರವಣವನ್ನು ಮಾಡಬೇಕು.

ಮುನಯಃ ಸಾಧು ಪೃಷ್ಟೋಽಹಂ ಭವದ್ಭಿರ್ಲೋಕಮಂಗಳಮ್ ।
ಯತ್ಕೃತಃ ಕೃಷ್ಣ ಸಂಪ್ರಶ್ನೋಯೇನಾತ್ಮಾ ಸುಪ್ರಸೀದತಿ ॥೫॥

ಸೂತರು ಹೇಳುತ್ತಾರೆ : ಋಷಿಗಳೇ ! ನೀವುಗಳು ವಿಶ್ವಕಲ್ಯಾಣದೃಷ್ಟಿ ಯಿಂದ ಸುಂದರಪ್ರಶ್ನೆಗಳನ್ನು ಮಾಡಿರುವಿರಿ. ಇದು ಶ್ರೀಕೃಷ್ಣವಿಷಯಕ ಪ್ರಶ್ನೆ. ಭೋಗ-ರಾಗ-ಧನವಿಷಯಕಪ್ರಶ್ನೆಯಲ್ಲ. ಈ ವಿಧದ ಪ್ರಶ್ನೆ ಯಿಂದ ಭಗವಂತನು ಸುಪ್ರೀತನಾಗುತ್ತಾನೆ. ಅಂತರಂಗವು ಶುದ್ಧವಾಗುತ್ತದೆ.

ಸಾಂಸಾರಿಕಪ್ರಶ್ನೆಗಳಿಂದ ರಾಗ-ದ್ವೇಷಾದಿಗಳು ಹೆಚ್ಚುತ್ತವೆ. ಅಂತ:

Sri Vidyabharathi Book Centre, Sringeri

CC-O. In Public Domain. Digitized by eGangotri

ಕರಣವು ವಿಷಾದವನ್ನು ಹೊಂದುತ್ತದೆ. ಭಗವದ್ವಿಷಯಕ ಪ್ರಶ್ನೆಯಿಂದ ಹೃದಯದಲ್ಲಿ ಸಂಪ್ರಸಾದವು ಉಂಟಾಗುತ್ತದೆ.

ವಸ್ತುತ: ಪರಮಧರ್ಮವು ಒಂದೇ.

ಸವೈ ಪುಂಸಾಂ ಪರೋ ಧರ್ಮೋ ಯತೋ ಭಕ್ತಿರಧೋಕ್ಷಜೇ ।
ಅಹೈತುಕ್ಯಪ್ರತಿಹತಾ ಯಯಾತ್ಮಾ ಸಂಪ್ರಸೀದತಿ ॥೬॥

ಧರ್ಮವು ಎರಡು ವಿಧವಾಗಿದೆ. **ಪ್ರವೃತ್ತಿಲಕ್ಷಣಕ:, ನಿವೃತ್ತಿಲಕ್ಷಣಕಶ್ಚೇತಿ. ಆದ್ಯ: ಸ್ವರ್ಗಾದ್ಯರ್ಥ:, ದ್ವಿತೀಯ; ಶ್ರವಣಾದರಾದಿ ಲಕ್ಷಣಾ ಭಕ್ತಿರ್ಭವತಿ**

ಮನ್ವಾದಿಸ್ಮೃತಿಗಳು ಸಾಮಾನ್ಯಧರ್ಮವನ್ನು. ವರ್ಣಿಸಿವೆ. ಭಾಗವತವಾದರೋ ಪರಮಧರ್ಮದ ವರ್ಣನೆಯನ್ನು ಮಾಡಿದೆ. **ಧರ್ಮ: ಪ್ರೋಜ್ಝಿತಕೈತವೋऽತ್ರ ಪರಮ:**-ಎಂದು ಮೊದಲೇ **ಧರ್ಮ**ದ ವ್ಯಾಖ್ಯಾನವನ್ನು ಮಾಡಿದ್ದಾರೆ

ಅಧೋಕ್ಷಜನಾದ ಭಗವಂತನಲ್ಲಿ ಭಕ್ತಿಯನ್ನಿಡುವುದೇ ಪರಮ ಧರ್ಮವು ನಿರ್ಹೇತುಕವಾದ ಶ್ರೇಷ್ಠ ಭಕ್ತಿಯಿಂದಲೇ ಭಗವಂತನು ಪ್ರಸನ್ನನಾಗುತ್ತಾನೆ.

ಭಗವದ್ವಿಷಯಕ ಪ್ರಶ್ನೆಯಿಂದ ಅಂತ:ಕರಣವು ಶುದ್ಧವಾಗುತ್ತದೆ. ಭಕ್ತಿಯಿಂದ ಭಗವಂತನು ಪ್ರಸನ್ನನಾಗುತ್ತಾನೆ

ಭಗವಾನ್ ವಾಸುದೇವನೊಡನೆ ಭಕ್ತಿಯೋಗವೆಂದರೆ ಪತಿ-ಪತ್ನಿಯರ ಸಮಾಗಮದಂತೆ. ಭಕ್ತಿಯು ಪತ್ನಿಯಾದರೆ_ಭಗವಂತನು ಪತಿ.

ಭಕ್ತಿಯೋಗವೆಂದರೆ ಇಬ್ಬರ ಸಮಾಗಮ. ಇವರಿಬ್ಬರ ಸಮಾಗಮದಿಂದ ಜ್ಞಾನ.ವೈರಾಗ್ಯರೂಪಿಗಳಾದ ಪುತ್ರರ ಜನ್ಮವಾಗುತ್ತದೆ.

ಪರಮಾತ್ಮಾಂಶದ ಪ್ರಧಾನತೆಯಿಂದ • ಜ್ಞಾನದ • ಜನನವಾಗುವುದು. ಭಕ್ತ್ಯಂಶದ ಪ್ರಧಾನತೆಯಿಂದ ವೈರಾಗ್ಯದ ಜನನವಾಗುವುದು. ಇವರುಗಳ ಜನನಕ್ಕೆ ಬಹಳ ಕಾಲ ಕಾಯಬೇಕಾಗಿಲ್ಲ. ೨೨ **ಜನಯತ್ಯಾಶು ವೈರಾಗ್ಯಂ** ೨೨

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮ: ಸ್ವನುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಸು ಯಃ ।
ನೋತ್ಪಾದಯೇದ್ಯದಿ ರತಿಂ ಶ್ರಮ ಏವ ಹಿ ಕೇವಲಮ್ ॥೮॥

ಧರ್ಮಾಚರಣೆಯ ಫಲವೆಂದರೆ ಭಗವತ್ಕಥಾಶ್ರವಣದಲ್ಲಿ ಪ್ರೀತಿಯುಂಟಾಗುವುದು. ಹೀಗಾಗದಿದ್ದರೆ ಅದು ಧರ್ಮವಲ್ಲ ; ಕೇವಲ ಶ್ರಮ.

ಕಾರ್ಖಾನೆಗಳಲ್ಲಿ ಕೆಲಸಮಾಡುವುದು, ಮಿಷನ್ ಜೋಡಿಸುವುದು, ಒಡವೆಗಳನ್ನು ತಯಾರಿಸುವುದು, ಕೃಷಿಮಾಡುವುದು – ಇತ್ಯಾದಿಗಳೆಲ್ಲವೂ ಶ್ರಮಗಳೇ.

ಹೃದಯವನ್ನು ಭಗವದಾಕಾರವನ್ನಾಗಿ ಮಾಡುವುದು ಧರ್ಮವು. ಶ್ರವಣದಿಂದ ಅಂತಃಕರಣದ ಶುದ್ಧಿಯಾದರೆ-ಶ್ರಮದಿಂದ ಲೌಕಿಕವಸ್ತುಗಳ ನಿರ್ಮಾಣವಾಗುತ್ತದೆ. ಬಂಧನಕ್ಕೆ ಶ್ರಮವಾದರೆ ಮುಕ್ತಿಗೆ ಧರ್ಮವು.

ಧರ್ಮಸ್ಯ ಹ್ಯಪವರ್ಗಸ್ಯ ನಾರ್ಥೋಽರ್ಥಾಯೋಪಕಲ್ಪತೇ ।
ನಾರ್ಥಸ್ಯ ಧರ್ಮೈಕಾನ್ತಸ್ಯ ಕಾಮೋಲಾಭಾಯ ಹಿ ಸ್ಮೃತಃ ॥೯॥

ಧರ್ಮವು ಸರ್ವವನ್ನೂ ನಿಷೇಧಿಸಿ ಪರಮಾತ್ಮನಲ್ಲಿ ನಮ್ಮನ್ನು ಸ್ಥಾಪಿಸುತ್ತದೆ.

ಅಪಗತ; ವರ್ಗ: =ಅಪವರ್ಗ: ಯಾವುದರಲ್ಲಿ ಮೇಲು-ಕೀಳೆಂಬ ಭಾವನೆಯಿಲ್ಲವೋ ಅದು ಅಪವರ್ಗ. ಹಾಗೂ ' **ನಾಸ್ತಿ ಪವರ್ಗೋ ಯಂತ್ರ** ' ಅಂದರೆ ಪಾಪ-ಪುಣ್ಯ-ಫಲ-ಬಂಧ_ಮೋಕ್ಷ–ಈ ಪವರ್ಗವು ಯಾವುದರಲ್ಲಿಲ್ಲವೋ ಅದು ಅಪವರ್ಗ.

ಈ ಅಪವರ್ಗಪ್ರಾಪ್ತಿಗಾಗಿ ಧರ್ಮವಿದೆ. **ಅಪವರ್ಗವರ್ತ್ಮನಿ ಶ್ರದ್ಧಾ–ರತಿರ್ಭಕ್ತಿ: ಅನುಕ್ರಮಿಷ್ಯತಿ**-ಧರ್ಮವಿದೆ .ಫಲವು ಅರ್ಥಪ್ರಾಪ್ತಿಯಲ್ಲ. ಅಪವರ್ಗವೇ ಧರ್ಮದ ಫಲವು.

ಅರ್ಥದ ಫಲವು ಕಾಮವಲ್ಲ ; **ಧರ್ಮ.** ಕಾಮವೂ ಸಹ ಇಂದ್ರಿಯಗಳ ತೃಪ್ತ್ಯರ್ಥವಾಗಿಯಲ್ಲ. ಜೀವನ ನಿರ್ವಹಣಕ್ಕಾಗಿ ಇದೆ.

ಜೀವನವೆಂದರೆ ಕಾಮೋಪಭೋಗವಲ್ಲ. ಹಗಲು_ರಾತ್ರಿ ವ್ಯಸ್ತರಾಗಿರುವುದು ಜೀವನದ ಲಕ್ಷ್ಯವಲ್ಲ.

Sri Vidyabharathi Book Centre, Sringeri

ಜೀವನದ ಲಕ್ಷ್ಯವೆಂದರೆ; ಯಾವಾಗಲೂ ಬದಲಾಯಿಸದಿರುವ ಸತ್ಯ ವಸ್ತುವನ್ನು - ಪರಮಾತ್ಮನನ್ನು ತಿಳಿಯುವುದೇ ಆಗಿದೆ.

ತತ್ತ್ವಾತ್ಮಕ ವಸ್ತುವಾವುದು? **ತತ್–ತತ್–ತತ್**- ತಾನಿ, **ತೇಷಾಂ ಭಾವಃ ತತ್ವಂ**-ಜೀವತತ್ತ್ವ, ಬ್ರಹ್ಮತತ್ತ್ವ, ಜಗತ್ತತ್ತ್ವ, 'ಹೀಗೆ **ತತ್**–ತ್ವಂ–ಇವೆಡರ ವಾಸ್ತವಿಕತೆಯನ್ನು ತಿಳಿದುಕೊಳ್ಳುವುದೇ ತತ್ತ್ವಜ್ಞಾನವು.

ವದನ್ತಿ ತತ್ತತ್ತ್ವವಿದಸ್ತತ್ತ್ವಂಯದ್ಜ್ಞಾನಮದ್ವಯುವಶ್ ।
ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥೧೧॥

ಅದ್ವಯಜ್ಞಾನದ ಹೆಸರು ತತ್ತ್ವ. ತತ್ವಜ್ಞಾನದಲ್ಲಿ ಜ್ಞಾತಾ ಜ್ಞೇಯ, ಜ್ಞಾನಗಳು ಬೇರೆ ಬೇರೆಯಲ್ಲ. ಜಡ–ಚೇತನಗಳು ಬೇರೆಯಲ್ಲ. ಜೀವೇಶ್ವರರು ಬೇರೆಯಲ್ಲ ಪ್ರಕಾಶ್ಯ–ಪ್ರಕಾಶಕರು ಬೇರೆಯಲ್ಲ. **ಅದ್ವಯ ಜ್ಞಾನೇ ಭೇದನಿರ್ಮುಕ್ತಂ ಬ್ರಹ್ಮೇತಿ, ಪರಮಾತ್ಮೇತಿ, ಭಗವಾನಿತಿಶಬ್ದ್ಯತೆ.**

ಉಪನಿಷತ್ಕಾರರು ಅದನ್ನೇ ಬ್ರಹ್ಮನೆಂದು ಹೇಳುತ್ತಾರೆ. ಹಿರಣ್ಯಗರ್ಭ ಪರಮಾತ್ಮಾ ಎಂದೂ ಹೇಳುತ್ತಾರೆ. ಅವನು ಹೇಗೆ ತಿಳಿಯಲ್ಪಡುತ್ತಾನೆಂದರೆ:

ತಚ್ಛ್ರದ್ಧಧಾನಾ ಮುನಯೋ ಜ್ಞಾನವೈರಾಗ್ಯಯುಕ್ತಯಾ।
ಪಶ್ಯಂತ್ಯಾತ್ಮನಿ ಚಾತ್ಮಾನಂ ಭಕ್ತ್ಯಾ ಶ್ರುತಗೃಹಿತೇಯಾ ॥೧೨॥

ಈ ಶ್ಲೋಕದಲ್ಲಿ ಭಗವತ್ಪ್ರಾಪ್ತಿಯ ಸಾಧನಗಳನ್ನು ವರ್ಣಿಸಿದ್ದಾರೆ. ಶ್ರದ್ಧಾಳುತ್ತ್ವ, ವಿವೇಕತ್ತ್ವ, ವೈರಾಗ್ಯತ್ತ್ವ, ಶ್ರವಣಶೀಲತ್ತ್ವ, ಹಾಗೂ ದೃಢಭಕ್ತಿತ್ವ–ಈ ಸಾಧನೆಗಳಿಂದ ಹೃದಯದಲ್ಲಿ ಪರಮಾತ್ಮನ ದರ್ಶನವಾಗುತ್ತದೆ.

ಯಾರು ಏಕಾಂತವಾಸಿಗಳೋ, ಶ್ರದ್ಧಾಳುಗಳೋ ಶ್ರವಣಮಾಡಿರುವರೋ, ಜ್ಞಾನ-ವೈರಾಗ್ಯಯುಕ್ತರೋ, ಯಾರ ಹೃದಯವು ಭಕ್ತಿಪೂರಿತವಾಗಿದೆಯೋ–ಅವರು ತಮ್ಮ ಹೃದಯದಲ್ಲಿ ಪರಮಾತ್ಮನ ದರ್ಶನವನ್ನು ಮಾಡುತ್ತಾರೆ. ಈ ಭಕ್ತಿಯಾದರೂ ಹಾಗೆಯೇ ಬರುವುದಿಲ್ಲ.

ಶ್ರುತಗೃಹೀತಯಾ ಶ್ರವಣದಿಂದ ಪ್ರಾಪ್ತವಾಗುತ್ತದೆ ಸಂಸಾರ.

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಸುಂದರಸ್ತ್ರೀ-ಪುರುಷರನ್ನೂ, ಸುಂದರವಾದಮರ-ಗಿಡಗಳನ್ನೂ ಕಣ್ಣಿನಿಂದ ನೋಡಿ ಪ್ರೀತಿಸುತ್ತಾರೆ.

ಆದರೆ ಪರಮೇಶ್ವರನನ್ನು ಪ್ರೀತಿಸಬೇಕಾದರೆ ಬಾಹ್ಯೇಂದ್ರಿಯಗಳ ಅನುಭವದಿಂದ ಸಾಧ್ಯವಿಲ್ಲ.

ಶ್ರವಣದಿಂದಲೇ ಅವನಲ್ಲಿ ಪ್ರೇಮೋದಯವಾಗುವುದು.

ಶ್ರವಣವನ್ನು ಮಾಡದಿದ್ದರೆ ಭಕ್ತಿಯು ಹುಟ್ಟುವುದೇ ಇಲ್ಲ. ಭಗವಂತನು ಅತೀಂದ್ರಿಯನಾದುದರಿಂದ ಅತೀಂದ್ರಿಯದ ಸಂಬಂಧದಲ್ಲಿ ಶ್ರವಣದ ಹೊರತಾಗಿ ಭಕ್ತಿಯುಂಟಾಗುವುದಿಲ್ಲ.

ಶ್ರವಣಮಾಡುವುದರಲ್ಲಿ ಆದರವನ್ನು ತಾಳದವರು ಪರಮಾರ್ಥಸಾಧನೆಯಿಂದ ವಂಚಿತರಾಗುತ್ತಾರೆ.

ಇಂದ್ರಿಯಗಳಿಗೆ ಅಗೋಚರನಾದ ಪರಮಾತ್ಮನ ಬಗೆಗೆ ತಿಳಿದುಕೊಳ್ಳಬೇಕಾದರೆ ಶ್ರವಣವೇ ಮುಖ್ಯಸಾಧನವು.

ಅತಃ ಪುಂಭಿರ್ದ್ವಿಜಶ್ರೇಷ್ಠಾ ವರ್ಣಾಶ್ರಮವಿಭಾಗಶಃ ।
ಸ್ವನುಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಮ್ ॥೧೩॥

ವರ್ಣಾಶ್ರಮವಿಭಾಗಕ್ಕೆ ಅನುಗುಣವಾಗಿ ಸ್ವನುಷ್ಠಿತಧರ್ಮದ ಸಂಸಿದ್ಧಿಯೆಂದರೆ-" **ಹರಿತೋಷಣಂ** "-ಭಗವಂತನನ್ನು ಪ್ರಸನ್ನಗೊಳಿಸುವುದು.

ಬ್ರಾಹ್ಮಣೋತ್ತಮರೇ ! ಆದುದರಿಂದ, ಏಕಾಗ್ರಚಿತ್ತರಾಗಿ ಯದುವಂಶಶಿರೋಮಣಿ, ಸಾತ್ವತರ ಪತಿ, ಅಂತರ್ಯಾಮೀ ಭಗವಂತನ ಶ್ರವಣ-ವರ್ಣನ-ಕೀರ್ತನ-ಧ್ಯಾನ_ಪೂಜಾದಿಗಳನ್ನು ನಡೆಸುತ್ತಿರಬೇಕು.

ಭಗವಂತನ ಪ್ರಸನ್ನತೆಗೆ ಈ ನಾಲ್ಕು ಸಾಧನಗಳು ಮುಖ್ಯವಾದುವು.

1) ವಕ್ತಾ ಸಿಕ್ಕಿದಾಗ ಶ್ರವಣಮಾಡು.
2) ಶ್ರೋತಾ ಸಿಕ್ಕಿದಾಗ ಕೀರ್ತನಮಾಡು.
3) ಇಬ್ಬರೂ ಇಲ್ಲದಿದ್ದಾಗ ಧ್ಯಾನಮಾಡು.
4) ಧ್ಯಾನದಿಂದ ವಿರಮಿಸಿದಾಗ ಪೂಜೆಮಾಡು.

ಈ ನಾಲ್ಕು ಭಗವದಾರಾಧನೆಯ ಸಾಧನೆಗಳು. ಈ ಸಾಧನಾಬಲದಿಂದ ವಿದ್ವಾಂಸರು ಜನ್ಮ-ಮರಣರೂಪಿಗ್ರಂಥಿಗಳನ್ನೂ ಭೇದಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಛಿನ್ದನ್ತಿ ಕೋವಿದಾಸ್ತಸ್ಯ ಕೋ ನ ಕುರ್ಯಾತ್ಕಥಾರತಿಮ್ ॥೧೫॥

ಲೋಕದಲ್ಲಿ ಬಹಳ ಮಂದಿ ವಿದ್ವಾಂಸರು ನಮ್ಮ ಸಮಾನರಾರುಂಟು? ನಾವೇ ಕೋವಿದರು. ಕೋ-ವಿದ, ನಮಗಿಂತಲೂ ಮಿಗಿಲಾದವರಿಲ್ಲ-ಎಂದು ಉದ್ಘೋಷಿಸುತ್ತಾರೆ. ಆದರೆ ಅಂತಹವರು ಭಗವತ್ಕಥಾ ಶ್ರವಣದಲ್ಲಿ ಆದರ ವನ್ನು ತಾಳದಿದ್ದರೆ ಆ ಪಾಂಡಿತ್ಯಕ್ಕೇನೂ ಬೆಲೆಯಿಲ್ಲ.

ಶುಶ್ರೂಷೋಃ ಶ್ರದ್ದಧಾನಸ್ಯ ವಾಸುದೇವಕಥಾರುಚಿಃ ।
ಸ್ಯಾನ್ಮಹತ್ಸೇವಯಾ ವಿಪ್ರಾಃ ಪುಣ್ಯತೀರ್ಥನಿಷೇವಣಾತ್

ಈ ಶ್ಲೋಕದಲ್ಲಿ ಭಗವತ್ಸೇವೆಯ ಸಾಧನೆಗಳನ್ನು ವರ್ಣಿಸಿದ್ದಾರೆ.

ಮೊದಲು ಪುಣ್ಯತೀರ್ಥಸೇವನೆ, ಪುಣ್ಯತೀರ್ಥಗಳಿಗೆ ಹೋಗುವುದು ರಿಂದ ಮಹಾಪುರುಷರ ಸೇವಾಭಾಗ್ಯವು ದೊರಕುತ್ತದೆ. ಆದರಿಂದ ಶ್ರದ್ಧೆ ಯುಂಟಾಗುತ್ತದೆ.

ಶ್ರವಣದಿಂದ ಕಥಾರುಚಿಯು ವರ್ಧಿಸುವುದು. ಕಥಾರುಚಿಯುಂಟಾ ದಾಗ ಭಗವಂತನು ಹೃದಯಾಧಿಷ್ಠಿತನಾಗುತ್ತಾನೆ. ಆವಾಗ ಹೃದಯದ ಸರ್ವ ಕಲ್ಮಷಗಳೂ ದೂರವಾಗುತ್ತವೆ.

ಶುದ್ಧಾಂತರಂಗದಲ್ಲಿ ಭಕ್ತಿನಿಷ್ಠೆಯು ಕೂರುತ್ತದೆ. ಕಾಮ-ಕ್ರೋಧಗಳ ನಿವೃತ್ತಿಯಾಗಿ ಚಿತ್ತವು ನಿರ್ಮಲವಾಗುತ್ತದೆ. ಮನಸ್ಸು ಭಕ್ತಿಯಿಂದ ನಿರ್ಮಲವಾದಾಗ ಆಸಕ್ತಿಯು ಬಿಟ್ಟುಹೋಗುತ್ತದೆ. ಆಗ ಭಗವತ್ತತ್ತ್ವದ ಸಾಕ್ಷಾತ್ಕಾರವಾಗುವುದು. ಹೃದಯಸ್ಥ ಗ್ರಂಥಿಗಳ ಛೇದನವಾಗುವುದು.

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮನೀಶ್ವರೇ ॥೨೧॥

ನಮ್ಮ ಎಲ್ಲ ವೈದಿಕಸಂಪ್ರದಾಯಸ್ಥರೂ ತತ್ತ್ವಜ್ಞಾನದಿಂದ ಗ್ರಂಥಿ ಭೇದನವೆಂಬುವುದನ್ನು ಒಪ್ಪುತ್ತಾರೆ. ಯಾರು ಅದ್ವೈತಿಗಳೋ ಅವರಿಗೆ ಅದ್ವೈತವಿಜ್ಞಾನದಿಂದ, ಯಾರ ಪರಮಾತ್ಮನು ವಿಶಿಷ್ಟನೋ ಅವರಿಗೆ ವಿಶಿಷ್ಟ ವಿಜ್ಞಾನದಿಂದ. ದ್ವೈತಿಗಳಿಗೆ ದ್ವೈತವಿಜ್ಞಾನದಿಂದ ಭಗವತ್ಸಾಕ್ಷಾತ್ಕಾರ ವಾಗುವುದು.

Sri Vidyabharathi Book Centre, Sringeri

 CC-0. In Public Domain. Digitized by eGangotri

ಅಂತೂ ತತ್ತ್ವಜ್ಞಾನದಿಂದ ಗ್ರಂಥಿಭೇದನವೆಂಬುವುದರಲ್ಲಿ ಮಾತ್ರ ಮತ ಭೇದವಿಲ್ಲ.

ಇಲ್ಲಿ ಮತ್ತೊಂದು ವಿಚಾರವನ್ನು ಪರಿಶೀಲಿಸಬೇಕು. ಗ್ರಂಥಿಯು ನಿಜವೋ ಸುಳ್ಳೋ ? ಖಂಡಿತವಾಗಿಯೂ ಸುಳ್ಳು, ಗ್ರಂಥಿಯು ಇಲ್ಲವೇ ಇಲ್ಲ ಇಲ್ಲದೇ ಇರುವುದನ್ನೇ ಇದೆಯೆಂದು ಭ್ರಾಂತಿಯಿಂದ ಹೇಳುತ್ತಾರೆ.

ವಸ್ತುತಃ ಗ್ರಂಥಿಯಿದ್ದ ಪಕ್ಷದಲ್ಲಿ ಅದು ಹೋಗುತ್ತಲೇ ಇರಲಿಲ್ಲ. ಗ್ರಂಥಿಭೇದನವಾಯಿತು ಎಂದು ಹೇಳುವುದರಿಂದಲೇ ಅದರ ಅಸ್ತಿತ್ವವು ವಾಸ್ತವವಾದುದಲ್ಲ ಎಂಬುದು ಅರ್ಥವಾಗುವುದು.

ಜ್ಞಾನ ಅಥವಾ ಭಕ್ತಿಯ ಪ್ರಕಾಶದಲ್ಲಿ ನೋಡುವಿರಾದರೆ ಗ್ರಂಥಿಯು ಕಾಣುವುದೇ ಇಲ್ಲ.

ಕಾಣದೇ ಇರುವ ಗ್ರಂಥಿಯಿಂದ ನೀವು ಭಯಪಡುತ್ತಿದ್ದಿರಿ. ಪರ ಮಾತ್ಮನ ದರ್ಶನವಾದರೆ ಹೃದಯಗ್ರಂಥಿಭೇದನ, ಸರ್ವಸಂಶಯಗಳ ಛೇದನ, ಜನ್ಮ –ಮರಣಗಳಿಗೆ ಕಾರಣವಾದ ಕರ್ಮಕ್ಷಯ, - ಇಷ್ಟು ಉಂಟಾ ಗುತ್ತದೆ. ಅದರಿಂದ ವಿದ್ವಾಂಸರು ಪ್ರೇಮದಿಂದ ಭಗವದ್ಭಕ್ತಿಯನ್ನು ಮಾಡು ತ್ತಾರೆ.

ಭಗವಂತನು ಒಬ್ಬನೇ. ಪ್ರಾಕೃತಿಕಗುಣಗಳಿಂದ ಬ್ರಹ್ಮಾ-ವಿಷ್ಣು-ಮಹೇಶ್ವರ– ಎಂದು ಕರೆಯಿಸಿಕೊಳ್ಳಲ್ಪಡುತ್ತಾನೆ. ಯಾರು ಸತ್ತ್ವಗುಣೋ ಪಾಧಿಯಿಂದ ಪರಮಾತ್ಮನನ್ನು ಭಜಿಸುತ್ತಾರೋ - ಅವರಿಗೆ ಸತ್ವ ಗುಣ ದಲ್ಲಿಯೇ ಪರಬ್ರಹ್ಮ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ.

ರಜಸ್ತಮೋಗುಣಗಳು ಕನ್ನಡಿಯ ಮೇಲೆ ಧೂಳು ಬಿದ್ದಂತೆ. ಚೆನ್ನಾಗಿ ಪ್ರತಿಬಿಂಬವು ಬೀಳುವುದಿಲ್ಲ. ಅದೇ ರೀತಿಯಲ್ಲಿ ಮಹಾತ್ಮರು ಸತ್ತ್ವೋಪಾಧಿ ಯಿಂದ ಪರಮಾತ್ಮನನ್ನು ಆರಾಧಿಸುತ್ತಾರೆ.

ಭೂತ–ಭೈರವಾದಿಗಳು ಪರಮಾತ್ಮನ ಘೋರರೂಪಗಳು. ಮುಮುಕ್ಷು ಗಳು ಭೂತ-ಭೈರವಾದಿಗಳನ್ನು ಭಜಿಸುವುದಿಲ್ಲ. ಅವರು ಶಾಂತನಾರಾಯಣ ಕಲೆಯನ್ನು ಉಪಾಸಿಸುತ್ತಾರೆ.

ಸಮಾನಶೀಲವ್ಯಸನೇಷು ಸಖ್ಯಂ – ದೇವತಾಪೂಜಾದಿಗಳನ್ನು ಮಾಡುವುದು ಅವರವರ ಮನೋಧರ್ಮಕ್ಕನುಗುಣವಾಗಿಯೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಒಬ್ಬನು ಭೂತವನ್ನು ಪೂಜಿಸಿದರೆ ಮತ್ತೊಬ್ಬನು ಪ್ರೇತವನ್ನು ಪೂಜಿಸುತ್ತಾನೆ. ಯಾರು ಯಾವುದನ್ನು ಪೂಜಿಸುವರೋ ಅವರು ಅದನ್ನೇ ಹೊಂದುತ್ತಾರೆ.

ಎಲ್ಲ ವೇದಗಳ ತಾತ್ಪರ್ಯವೂ ವಾಸುದೇವಪರವಾಗಿಯೆ ಇದೆ. ಎಲ್ಲ ಯಜ್ಞ-ಯಾಗಾದಿ ಕ್ರಿಯಾಕಾಂಡಗಳೂ ವಾಸುದೇವನ ಸುಪ್ರೀತಿಗಾಗಿಯೇ ಇವೆ. ಯೋಗಶಾಸ್ತ್ರದ ಮುಖ್ಯತಾತ್ಪರ್ಯವು ಹೃದಯಸ್ಥಪರಮಾತ್ಮ ಪ್ರಾಪ್ತಿಯೇ ಆಗಿದೆ. ವಾಸುದೇವಪ್ರಾಪ್ತಿಗಾಗಿಯೇ ತಪಸ್ಸು-ಯೋಗ-ಧರ್ಮಾದ್ಯಾಚರಣೆಗಳು.

ಕಟ್ಟಿಗೆಯು ಚಿಕ್ಕದಾಗಿರಲಿ, ದೊಡ್ಡದಾಗಿರಲಿ-ಅದರಲ್ಲಿ ಪ್ರವೇಶಿಸುವ ಅಗ್ನಿಯು ಬೇರೆ ಬೇರೆ ರೂಪದಲ್ಲಿ ಕಾಣುವಂತೆ-ಈ ವಿಶ್ವಸೃಷ್ಟಿಯಲ್ಲಿ ಒಬ್ಬನೇ ಆದ ಪರಮಾತ್ಮನು ನಾಮ-ರೂಪೋಪಾಧಿಗಳಿಗೆ ಅನುಗುಣವಾಗಿ ಸರ್ವ ರೂಪಗಳಲ್ಲಿಯೂ ಪ್ರಕಾಶಿಸುತ್ತಿದ್ದಾನೆ.

ಈಶ್ವರನನ್ನು ಒಪ್ಪದೆ ಇರತಕ್ಕ ಚಾರ್ವಾಕರಿಗೆ ಭಗವದವತಾರವಿಲ್ಲ.

ಜೈನರು ಅವತಾರಗಳನ್ನು ಒಪ್ಪುವುದಿಲ್ಲ. ಅವರ ಸಿದ್ಧಾಂತರೀತ್ಯಾ ಶುದ್ಧಜೀವನೇ ವೀತರಾಗನಾಗಿ ತೀರ್ಥಂಕರನಾಗುತ್ತಾನೆ.

ಈಶ್ವರನು ನಿರಾಕಾರನೆಂದು ಒಪ್ಪುವ ಮುಸಲ್ಮಾನರೂ ಕ್ರಿಸ್ತರೂ ಆರ್ಯಸಮಾಜದವರೂ ಅವತಾರಾದಿಗಳನ್ನೂ ಒಪ್ಪುವುದಿಲ್ಲ.

ಯಾರು ಈಶ್ವರನು ಸರ್ವಾತ್ಮನೆಂದು ಒಪ್ಪುತ್ತಾರೋ, ಅಶ್ವತ್ಥ-ಪಶು-ಪತಿ-ಗುರು ಎಲ್ಲರನ್ನೂ ಭಗವದ್ರೂಪವೆಂದೇ ತಿಳಿಯುತ್ತಾರೋ-ಅವರಿಗೆ ಮೂರ್ತಿಪೂಜೆ, ಈಶ್ವರಪೂಜೆ, ಎಲ್ಲವೂ ಉಂಟು.

ಇವನು ನಿರಾಕಾರಿಗಳ ಈಶ್ವರನಲ್ಲ. ಇವನು ಸರ್ವಾತ್ಮವಾದಿಗಳ ಅದ್ವಯಾತ್ಮವಾದಿಗಳ ಈಶ್ವರನು. ಇವನಿಗೆ ಅವತಾರವುಂಟು. ಮೂರ್ತಿಪೂಜೆಯೂ ಉಂಟು. ಇವರ ಸಿದ್ಧಾಂತಕ್ಕನುಗುಣವಾಗಿ ಗಿಡ-ಮರಗಳು, ಹಕ್ಕಿ-ಪಕ್ಷಿಗಳು ಎಲ್ಲದರ ಪೂಜೆಯೂ ನಡೆಯುತ್ತದೆ. ಪತ್ನಿಯು, ತಾಯಿಯು ಕುಮಾರಿಯು, ಆತ್ಮನ ಪೂಜೆಯೂ ನಡೆಯುತ್ತದೆ. ಎಲ್ಲ ರೂಪಗಳನ್ನೂ ಧರಿಸಿ ಪರಮಾತ್ಮನೇ ವಿಹರಿಸುತ್ತಿದ್ದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ರೂಪಗಳು ಅನೇಕ. ದೇವತೆ, ಪಶು, ಪಕ್ಷಿ, ಹಂದಿ, ಮೀನು, ಸಿಂಹ, ಕಮಠ–ಯಾವ ರೂಪದಲ್ಲಿ ತೆಗೆದುಕೊಳ್ಳಿ. ಪರಮಾತ್ಮನೇ ಪರಮಾತ್ಮನು.

ಅವನ ನಿರ್ಭಯತೆ-ಕಾರ್ಯತತ್ಪರತೆಗಳನ್ನು ನಾವು ಗಮನಿಸಬೇಕು.

ನಿರಾಕಾರವೂ ಪರಮಾತ್ಮನ ಒಂದು ಸ್ವರೂಪವು. **ಸರ್ವಂ ಖಲ್ವಿದಂ ಬ್ರಹ್ಮ । ಬ್ರಹ್ಮೈತವೇದಂ ವರಿಷ್ಠಂ** - ಈ ಸಿದ್ಧಾಂತಕ್ಕನುಗುಣವಾಗಿ ಮೂರ್ತಿಪೂಜೆಯು ನಡೆಯುತ್ತದೆ.

೨ ನೇ ಅಧ್ಯಾಯವು ಮುಗಿಯಿತು.

ತೃತೀಯೋಽಧ್ಯಾಯಃ

ಸೂತರು ಶೌನಕಾದಿಗಳಿಗೆ ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ:

ಸೃಷ್ಟಿಯ ಆದಿಯಲ್ಲಿ ಭಗವಂತನು ಲೋಕಗಳನ್ನು ನಿರ್ಮಿಸಬೇಕೆಂದು ಇಚ್ಛಿಸಿದನು. ಕೂಡಲೇ ಮಹತ್ತತ್ತ್ವಾದಿಗಳಿಂದ ನಿಷ್ಪನ್ನವಾದ ಪುರುಷರೂಪವನ್ನು ಗ್ರಹಿಸಿದನು. ಅದರಲ್ಲಿ ಹತ್ತು ಇಂದ್ರಿಯಗಳು, ಪಂಚಭೂತಗಳು ಮನಸ್ಸು-ಹೀಗೆ ಹದಿನಾರು ಕಲೆಗಳಿದ್ದುವು.

ಮಹಾಪುರುಷನ ನಾಭಿಸರೋವರದಿಂದ ಒಂದು ಕಮಲವು ಪ್ರಾದುರ್ಭವಿಸಿತು. ಅದರಿಂದ ಪ್ರಜಾಪತಿಬ್ರಹ್ಮನು ಪ್ರಾದುರ್ಭವಿಸಿದನು.

ಅವನ ಅಂಗ-ಪ್ರತ್ಯಂಗಗಳಲ್ಲಿಯೇ ಸರ್ವಲೋಕಗಳೂ ಕಲ್ಪಿಸಲ್ಪಟ್ಟಿವೆ. ಇದು ಭಗವಂತನ ವಿಶುದ್ಧಸತ್ತ್ವಮಯರೂಪ.

ಯೋಗಿಗಳು ಯೋಗದೃಷ್ಟಿಯಿಂದ ಭಗವಂತನ ಈ ದಿವ್ಯರೂಪದ ದರ್ಶನವನ್ನು ಪಡೆಯುತ್ತಾರೆ. ಸಾವಿರಾರು ಪಾದಗಳು, ಸಾವಿರಾರು ಕೈಗಳು, ಸಾವಿರಾರು ತಲೆಗಳು, ಕಿವಿಗಳು-ಕಣ್ಣುಗಳು–ಮೂಗುಗಳು, ವಸ್ತ್ರ-ಕುಂಡಲ-ಮುಕುಟಾದ್ಯಾಭರಣಗಳಿಂದ ವಿಭೂಷಿತನಾಗಿದ್ದಾನೆ. ಈ ನಾರಾಯಣಾತ್ಮಕ ಪುರುಷರೂಪವೇ ಅನೇಕಾವತಾರಗಳ ಕೋಷವು. ಈ ಮಹತ್ತಾದ ರೂಪದ ಅಂಶಾಂಶಗಳಿಂದ ದೇವತೆಗಳೂ, ಪಶು-ಪಕ್ಷಿಗಳೂ, ಮನುಷ್ಯಾದಿಗಳೂ ಸೃಷ್ಟಿಸಲ್ಪಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಮಹಾಪ್ರಭುವೇ ಮೊದಲು ಕುಮಾರಸರ್ಗದಲ್ಲಿ ಸನಕ-ಸನಂದನ-ಸನಾತನ-ಸನತ್ಕುಮಾರರ ರೂಪದಲ್ಲಿ ಅವತರಿಸಿ ಅಖಂಡಬ್ರಹ್ಮಚರ್ಯವನ್ನು ಪಾಲಿಸಿದನು.

ಎರಡನೆಯ ಬಾರಿ ಈ ಮಹಾಪುರುಷನೇ ರಸಾತಲದಲ್ಲಿ ಮುಳುಗಿದ್ದ ಪೃಥ್ವಿಯ ಉದ್ಧರಣಕ್ಕಾಗಿ ವರಾಹಾವತಾರವನ್ನು ತಾಳಿದನು.

ದೇವರ್ಷಿಗಳಾದ ನಾರದರ ರೂಪದಲ್ಲಿ ಮೂರನೆಯ ಅವತಾರವಾಯಿತು. ಆವಾಗ ಕರ್ಮಾಚರಣೆಯಿಂದ ಕರ್ಮಬಂಧಮುಕ್ತಿಯನ್ನು ಉಪದೇಶಿಸುವ ಸಾತ್ವತತಂತ್ರವನ್ನು (ನಾರದಪಾಂಚರಾತ್ರ) ಉಪದೇಶಿಸಿದನು.

ಧರ್ಮಪತ್ನಿಯಾದ ಮೂರ್ತಿ ಎಂಬುವಳ ಗರ್ಭದಿಂದ ನರ-ನಾರಾಯಣರೂಪದಲ್ಲಿ ನಾಲ್ಕನೆಯ ಅವತಾರವಾಯಿತು.

ಈ ಅವತಾರದಲ್ಲಿ ದೇಹೇಂದ್ರಿಯಗಳ ಸಂಯಮದ ಮೂಲಕ ಘೋರವಾದ ತಪಸ್ಸನ್ನು ಆಚರಿಸಿದನು.

ಪರಮಸಿದ್ಧರಾದ ಕಪಿಲರ ರೂಪದಲ್ಲಿ ಐದನೆಯ ಅವತಾರವು. ಆವಾಗ ತತ್ತ್ವನಿರ್ಣಾಯಕಸಾಂಖ್ಯಶಾಸ್ತ್ರವನ್ನು ಆಸುರೀನಾಮಕ ಬ್ರಾಹ್ಮಣನಿಗೆ ಉಪದೇಶಿಸಿದನು.

ಅತ್ರಿ-ಅನುಸೂಯೆಯರಿಗೆ ವರಪ್ರದನಾಗಿ ಆರನೆಯ ಅವತಾರದಲ್ಲಿ ದತ್ತಾತ್ರೇಯನಾದನು. ಆಗ ಅಲರ್ಕ, ಪ್ರಹ್ಲಾದ ಇತ್ಯಾದಿ ಮಹಾಭಕ್ತರಿಗೆ ಬ್ರಹ್ಮಜ್ಞಾನೋಪದೇಶವನ್ನು ಮಾಡಿದನು.

ಏಳನೆಯ ಬಾರಿ 'ರುಚಿ' ಪ್ರಜಾಪತಿಯ ಪತ್ನಿಯಾದ ಆಕೂತಿಯಲ್ಲಿ ಯಜ್ಞ ನಾಮಕ ಅವತಾರವನ್ನು ಮಾಡಿ ಯಾಮ ಎಂಬ ಅಧಿದೇವತೆಗಳೊಡನೆ ಸ್ವಾಯಂಭುವಮನ್ವಂತರದ ರಕ್ಷಣೆಯನ್ನು ಮಾಡಿದನು.

ರಾಜಾ ನಾಭಿಯ ಪತ್ನಿ ಮೇರುದೇವಿಯ ಗರ್ಭದಿಂದ ಋಷಭದೇವನ ರೂಪದಲ್ಲಿ ಅವತಾರವಾಯಿತು. ಇದು ಪರಮಾತ್ಮನ ಎಂಟನೆಯ ಅವತಾರ. ಈ ಅವತಾರದಲ್ಲಿ ಸರ್ವಾಶ್ರಮಿಗಳಿಂದಲೂ ವಂದನೀಯರಾದ ಪರಮಹಂಸರ ಮಾರ್ಗವನ್ನು ಪ್ರದರ್ಶಿಸಿದನು.

ಋಷಿಗಳ ಪ್ರಾರ್ಥನಾನುಸಾರವಾಗಿ ಒಂಬತ್ತನೆಯ ಬಾರಿ ರಾಜಾ ಪೃಥು

Sri Vidyabharathi Book Centre, Sringeri

 . In Public Domain. Digitized by eGangotri

ವಾಗಿ ಅವತರಿಸಿದನು. ಆಗ ಪೃಥ್ವೀದೋಹನವನ್ನು ನಡೆಸಿದನು. ಈ ಅವತಾರವು ಸರ್ವಕಲ್ಯಾಣಕಾರಿಯಾಗಿದ್ದಿತು.

ಚಾಕ್ಷುಷಮನ್ವಂತರದ ಅಂತ್ಯದಲ್ಲಿ ಸೃಷ್ಟಿಯೆಲ್ಲವೂ ಸಮುದ್ರದಲ್ಲಿ ಮುಳುಗಿದಾಗ ಮತ್ಸ್ಯರೂಪದಲ್ಲಿ ಹತ್ತನೆಯ ಅವತಾರವನ್ನು ಮಾಡಿದನು. ಹಾಗೂ ಪೃಥ್ವೀರೂಪನಾವೆಯಲ್ಲಿ ಕುಳ್ಳಿರಿಸಿಕೊಂಡು ವೈವಸ್ವತಮನ್ವಂತರಾಧಿಪನನ್ನು ರಕ್ಷಿಸಿದನು.

ದೇವಾಸುರರಿಂದ ಸಮುದ್ರಮಥನವು ನಡೆಯುತ್ತಿದ್ದಾಗ ಹನ್ನೊಂದನೆಯ ಬಾರಿ ಕಚ್ಛಪನಾಗಿ ಅವತರಿಸಿ ತನ್ನ ಬೆನ್ನಿನ ಮೇಲೆ ಮಂದರಾಚಲವನ್ನು ಧರಿಸಿದನು.

ಹನ್ನೆರಡನೆಯ ಬಾರಿ ಧನ್ವಂತರಿಯಾಗಿ ಸಮುದ್ರದಿಂದ ಬಂದು ಅಮೃತವನ್ನು ಕೊಟ್ಟನು.

ಹದಿಮೂರನೆಯ ಬಾರಿ ಮೋಹಿನಿಯಾಗಿ ಬಂದು ದೇವತೆಗಳಿಗೆ ಅಮೃತಪಾನವನ್ನು ಮಾಡಿಸಿದನು.

ಹದಿನಾಲ್ಕನೆಯ ಅವತಾರವೇ ನರಸಿಂಹಾವತಾರ. ಭಕ್ತಪ್ರಹ್ಲಾದನನ್ನು ಸಂರಕ್ಷಿಸಲೋಸುಗ ನರಸಿಂಹನಾಗಿ ಬಂದು ಹಿರಣ್ಯಕಶಿಪುವನ್ನು ಸೀಳಿದನು.

ಹದಿನೈದನೆಯ ಬಾರಿ ವಾಮನನಾಗಿ ಬಲಿಯ ಯಜ್ಞಮಂಟಪಕ್ಕೆ ಹೋಗಿ ಮೂರುಹೆಜ್ಜೆ ಭೂಮಿಯನ್ನು ಬೇಡಿದನು.

ಹದಿನಾರನೆಯ ಅವತಾರದಲ್ಲಿ ಪರಶುರಾಮನಾಗಿ ಇಪ್ಪತ್ತೊಂದು ಬಾರಿ ದುಷ್ಟಕ್ಷತ್ರಿಯರ ಸಂಹಾರವನ್ನು ನಡೆಸಿದನು.

ವ್ಯಾಸಾವತಾರವು ಹದಿನೇಳನೆಯದು. ಸತ್ಯವತೀ-ಪರಾಶರರ ಮೂಲಕ ವ್ಯಾಸನಾಗಿ ಬಂದು ವೇದಗಳನ್ನು ವಿಭಜಿಸಿದನು.

ಹದಿನೆಂಟನೆಯ ಬಾರಿ ಶ್ರೀರಾಮಾವತಾರವನ್ನು ಮಾಡಿ ಸೇತುಬಂಧನ ರಾವಣನಿಗ್ರಹ-ಇತ್ಯಾದಿ ಮಹಾಕಾರ್ಯಗಳನ್ನು ನೆರವೇರಿಸಿದನು.

ಯದುವಂಶದಲ್ಲಿ ರಾಮ-ಕೃಷ್ಣರಾಗಿ ಹತ್ತೊಂಬತ್ತು ಮತ್ತು ಇಪತ್ತನೆಯ ಬಾರಿ ಅವತರಿಸಿ ಪೃಥ್ವಿಯ ಭಾರವನ್ನು ಇಳುಹಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಿಯುಗವು ಪ್ರಾಪ್ತವಾಗಲು ಮಗಧದೇಶದಲ್ಲಿ ದೈವದ್ವೇಷಿಗಳಾದ ದೈತ್ಯರನ್ನು ಮೋಹಗೊಳಿಸಲು ಬುದ್ಧಾವತಾರವನ್ನು ಮಾಡಿದನು ಇದು ಇಪ್ಪತ್ತೊಂದನೆಯ ಅವತಾರ.

ಅನಂತರ ಕಲಿಯುಗದಲ್ಲಿ ರಾಜರು ದರೋಡೆಗಾರರಾಗುತ್ತಾರೆ. ಆಗ ವಿಷ್ಣುಯಶನಾಮಕ ಬ್ರಾಹ್ಮಣನ ಮನೆಯಲ್ಲಿ 'ಕಲ್ಕಿ' ಯಾಗಿ ಅವತರಿಸಿದ ೨೨ನೆಯ ಅವತಾರವಿದು.

ಈ ೨೨ ಅವತಾರಗಳಲ್ಲದೇ ಕೆಲವರು ಹಂಸ-ಹಯಗ್ರೀವಾವತಾರಗಳನ್ನೂ ಸೇರಿಸಿ ೨೪ ಅವತಾರಗಳನ್ನು ಹೇಳುತ್ತಾರೆ.

ಹೀಗೆ ಭಗವಂತನ ಅವತಾರಗಳು ಅನಂತ. ಹೇಗೆ ಅಕ್ಷಯ ಸರೋವರದಿಂದ ಅನೇಕ ಝರಿಗಳೂ ನದಿಗಳೂ ಹೊರಡುತ್ತವೆಯೋ-ಅಂತೆಯೇ ಭಗವಂತನ ಅವತಾರಗಳ ಆವಿರ್ಭಾವವಾಗುತ್ತದೆ.

ಈ ಅವತಾರಗಳ ವರ್ಣನೆಯನ್ನು ಇಲ್ಲಿ ಶ್ರೀಕೃಷ್ಣಾವತಾರದ ಮುಖ್ಯತೆಯನ್ನು ಪ್ರತಿಪಾದಿಸಲು ಮಾಡಿದ್ದಾರೆ.

ಏತೇ ಚಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಮ್

ಇದು ಲಕ್ಷಣವಚನವಲ್ಲ. ಲಕ್ಷ್ಯವಚನವು. ಎಲ್ಲ ಅವತಾರಗಳೂ ಅಂಶಗಳು: ಕಲೆಗಳು ಶ್ರೀಕೃಷ್ಣನಾದರೊ ಅಂಶೀ–ಸ್ವಯಂ ಭಗವಂತನೇ ಇದನ್ನು ಚಿಂತಿಸುವವನು ಸಕಲದುಃಖವಿನಿರ್ಮುಕ್ತನಾಗುತ್ತಾನೆ.

ವಸ್ತುತಃ ಪರಮಾತ್ಮನು ಅರೂಪನು, ಚಿದಾತ್ಮನು, ಸಾಕ್ಷಾದ್ಭಗವಂತನು. ಸಂಪೂರ್ಣಸೃಷ್ಟಿಯೂ ಅವನಲ್ಲಿ ಅಧ್ಯಸ್ತವಾಗಿವೆ. ತ್ರಿಗುಣದಿಂದ ಮಹದಾದಿಗಳಿಂದ ಈ ನಿಖಿಲಸೃಷ್ಟಿಯೂ ಅವನಲ್ಲಿ ತೋರುತ್ತದೆ.

ಆಕಾಶದಲ್ಲಿ ಮೋಡಗಳು ತೋರುವಂತೆ_ವಾಯುವಿನಲ್ಲಿ ಧೂಳಿನಕಣಗಳು ತೋರುವಂತೆ_ದೃಙ್ಮಾತ್ರದ್ರಷ್ಟಾ ಭಗವಂತನಲ್ಲಿ ದೃಶ್ಯತ್ವವು ಅಜ್ಞಾನಿಗಳಿಂದ ಆರೋಪಿಸಲ್ಪಟ್ಟಿದೆ.

ಏವಂ ದ್ರಷ್ಟರಿ ದೃಶ್ಯತ್ವ ಮಾರೋಪಿತಮಬುದ್ಧಿ ಭಿಃ ||೩೧||

ಈ ಸ್ಥೂಲದಿಂದ ಪರನಾದ ಭಗವಂತನ ಸೂಕ್ಷ್ಮಾವ್ಯಕ್ತರೂಪದಲ್ಲಿ ಆಕಾರಾದಿ ಗುಣಗಳಿಲ್ಲ. ಅದು ಇಂದ್ರಿಯಗೋಚರವೂ ಅಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮನ ಆರೋಪದಿಂದ ಇದೇ ಜೀವಶಬ್ದವಾಚ್ಯವಾಗಿದೆ. ಇದೇ ಪುನಃ ಹುಟ್ಟು-ಸಾವುಗಳಿಗೆ ಗುರಿಯಾಗುತ್ತದೆ.

ಯತ್ರೇಮೇ ಸದಸದ್ರೂಪೇ ಪ್ರತಿಷಿದ್ಧೇ ಸ್ವಸಂವಿದಾ ।
ಅವಿದ್ಯಯಾತ್ಮನಿಕೃತೇ ಇತಿ ತದ್ಬ್ರಹ್ಮದರ್ಶನಮ್ ॥೩೩॥

ಈ ಸೂಕ್ಷ್ಮ-ಸ್ಥೂಲ ಶರೀರಗಳು ಅವಿದ್ಯೆಯಿಂದ ಆತ್ಮನಲ್ಲಿ ಆರೋಪಿಸಲ್ಪಟ್ಟಿರುತ್ತವೆ ಆತ್ಮಜ್ಞಾನದಿಂದ ಇದು ಬಾಧಿಸಲ್ಪಟ್ಟಾಗ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆ.

ಆತ್ಮಾನುಭೂತಿಯಿಂದ ಕಾರ್ಯ-ಕಾರಣಗಳೆರಡೂ ಬಾಧಿಸಲ್ಪಡುತ್ತವೆ. ಬಂಧಗಳು ವಾಸ್ತವಿಕವಲ್ಲ. ಅವಿದ್ಯೆಯಿಂದ ಕಲ್ಪಿಸಲ್ಪಟ್ಟಿವೆ-ಎಂದು ತಿಳಿದಾಗ ಅವಿದ್ಯೆಯ ನಿವೃತ್ತಿಯಾಗುತ್ತದೆ.

ಸ್ವಸ್ವರೂಪವಾದರೊ ಸಾಕ್ಷಾದ್ಬ್ರಹ್ಮ. ಯಾವಾಗ ಮಾಯೆಯಿಂದ ಬುದ್ಧಿಯು ಬಿಡಲ್ಪಡುವುದೋ ಆಗ

ಸಂಪನ್ನ ಏವೇತಿ ವಿದುಃ ಮಹಿಮ್ನಿ ಸ್ವೇ ಮಹೀಯತೇ ॥೩೪॥

ಜೀವಾತ್ಮನು ಪರಮಾತ್ಮನಲ್ಲಿ ಲೀನನಾಗುತ್ತಾನೆ.

ಮಹಾತ್ಮರು ಅಕರ್ತಾರನ ಕರ್ಮವನ್ನೂ, ಅಜನ್ಮನ ಜನ್ಮವನ್ನೂ ವರ್ಣಿಸುತ್ತಾರೆ. ಕಾರಣವಿಷ್ಟೆ: ಇವುಗಳ ವರ್ಣನೆಯನ್ನು ಕೇಳಿ ಜೀವನು ಬಂಧನಿರ್ಮುಕ್ತನಾಗುತ್ತಾನೆ.

ಇವನು ಸರ್ವಹೃದಯಾಧೀಶ್ವರನು. ಎಲ್ಲದರ ನಿರ್ಮಾಪಕನು. ಎಲ್ಲದರಲ್ಲಿಯೂ ನಿರಾಸಕ್ತನು. ಅವನು ಏನು ಮಾಡುತ್ತಾನೆಂಬುದನ್ನು ಎಲ್ಲರೂ ತಿಳಿಯಲಾರರು. ಕೇವಲ ಭಾಗ್ಯಶಾಲಿಗಳಾದ ಭಕ್ತರು ತಿಳಿಯಬಲ್ಲರು.

ಸೂತರು ಹೇಳುತ್ತಾರೆ.

ಶೌನಕಾದಿಗಳೇ ! ನೀವು ಭಾಗ್ಯಶಾಲಿಗಳು. ಪರಮಾತ್ಮನಲ್ಲಿ ಆತ್ಮಭಾವವನ್ನಿಟ್ಟಿರುವಿರಿ. ಪರಮಾತ್ಮನಲ್ಲಿ ಒಮ್ಮೆ ಮನಸನ್ನಿಟ್ಟುಬಿಟ್ಟರೆ ಯಾವುದೇ ಸಾಂಸಾರಿಕಬಂಧನಗಳಿಗೆ ಸಿಲುಕಿಕೊಳ್ಳುವುದಿಲ್ಲ. ಜನ್ಮ-ಮರಣಗಳಿಂದ ಮುಕ್ತರಾಗಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಂಮಿತಮ್ ।
ಉತ್ತಮಶ್ಲೋಕಚರಿತಂ ಚಕಾರ ಭಗವಾನೃಷಿಃ ॥೪೦॥

ಶ್ರೀಮದ್ಭಾಗವತವು ವೇದಗಳ ಸಾರವನ್ನು ಒಳಗೊಂಡಿರುವುದು. ಭಗವಾನ್ ವೇದವ್ಯಾಸರು ಲೋಕಕಲ್ಯಾಣದೃಷ್ಟಿಯಿಂದ ಇದನ್ನು ಪ್ರಕಟಪಡಿಸಿದ್ದಾರೆ.

ಇದು ಮಹಾಮಂಗಳಕರವಾದುದು. ಇದನ್ನು ವ್ಯಾಸರು-ಆತ್ಮವಿದಾಂ ವರಂ ಸುತಂ ಗ್ರಾಹಯಾಮಾಸ-ಸಂಯಮಿಗಳಲ್ಲಿ ಶ್ರೇಷ್ಠರಾದ ಶುಕದೇವ ಮಹಾಮುನಿಗಳಿಗೆ ಬೋಧಿಸಿದರು. ಇದು ವೇದ-ಪುರಾಣೇತಿಹಾಸಗಳ ಸಾರಭೂತವಾದ ಮಹಾಗ್ರಂಥವಾಗಿದೆ.

ಸರ್ವವೇದೇತಿಹಾಸಾನಾ ಸಾರಂ ಸಾರಂ ಸಮುದ್ಧೃತಮ್ ।

ಈ ಭಾಗವತಮಹಾಪುರಾಣವನ್ನು ರಾಜಾ ಪರೀಕ್ಷಿತನಿಗೆ ಶ್ರೀ ಶುಕದೇವರು ಗಂಗಾತೀರದಲ್ಲಿ ಬೋಧಿಸಿದರು.

ಈ ಕಲಿಯುಗದಲ್ಲಿ ಯಾರ ದೃಷ್ಟಿಯು ಈಶ್ವರಧರ್ಮಗಳಿಂದ ವಿಮುಖವಾಗಿದೆಯೋ - ಅಂತಹ ಅಂಧರಿಗೆ ದೃಷ್ಟಿದಾನ ಮಾಡಲು ಈ ಭಾಗವತ ರೂಪೀ ಸೂರ್ಯನ ಉದಯವಾಗಿದೆ.

ಮಹಾತೇಜಸ್ವೀ ಶ್ರೀ ಶುಕಮಹಾರಾಜರು ಈ ಪುರಾಣವನ್ನು ಶ್ರವಣ ಮಾಡಿಸುವಾಗ ನಾನೂ ಅಲ್ಲಿಯೇ ಇದ್ದೆನು

ಯಥಾಧೀತಂ ಯಥಾಮತಿ-ನಾನು ಅಧ್ಯಯನ ಮಾಡಿದಂತೆ, ನನ್ನ ಬುದ್ಧಿಯು ಗ್ರಹಿಸಿದಂತೆ ನಾನೂ ನಿಮಗೆ ತಿಳಿಸುತ್ತೇನೆ

ಸೂತರ **ಮಾತಿನಲ್ಲಿರುವ** ವಿನಯವನ್ನು ನಾವು ಗ್ರಹಿಸಬೇಕು. ಅವರು ಹೇಳಿದ್ದನ್ನೆಲ್ಲಾ ನಾನು ಹೇಳುವೆನು ಎಂದೇನೂ ಹೇಳಲಿಲ್ಲ. ನನ್ನ ಬುದ್ಧಿಯು ಗ್ರಹಿಸಿರುವಷ್ಟನ್ನು ಮಾತ್ರ ಹೇಳುತ್ತೇನೆ ಎಂದಿದ್ದಾರೆ.

ಇನೆಯ ಅಧ್ಯಾಯವು ಮುಗಿಯಿತು.

ಇಲ್ಲಿಯವರೆಗೆ ಮೂರು ಅಧ್ಯಾಯಗಳಾದುವು. ಪ್ರಥಮಸ್ಕಂಧದಲ್ಲಿ ಮೂರು ಪ್ರಕರಣಗಳಿವೆ. 1) ಸೂತ-ಶೌನಕರ ಸಂವಾದ 2) ನಾರದ-ವ್ಯಾಸ ಸಂವಾದ-ಈ ಎರಡರಲ್ಲಿಯೂ ಮೂರು-ಮೂರು ಅಧ್ಯಾಯಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರನೆಯದು ಶುಕ ಪರೀಕ್ಷಿತರ ಉಪಾಖ್ಯಾನ. ಇದರಲ್ಲಿ 31 ಅಧ್ಯಾಯಗಳಿವೆ. ಪ್ರಥಮಸ್ಕಂಧದಲ್ಲಿ ಒಟ್ಟಾರೆ 19 ಅಧ್ಯಾಯಗಳಿವೆ.

ಎಲ್ಲೆಲ್ಲಿಯೂ ಇರುವ ಆತ್ಮಸತ್ತೆಯು ಒಂದೇ.

ಸ್ಕಂಧೇಽಧ್ಯಾಯೇ ಪ್ರಕರಣೇ ಶ್ಲೋಕೇ ವಾಕ್ಯೇ ಪದೇಽಕ್ಷರೇ ।
ಏಕಾರ್ಥಂ ಸಪ್ತಧಾ ಜಾನನ್ನ ವಿರೋಧೇನ ಮುಚ್ಯತೇ

ಸ್ಕಂಧದ ಅರ್ಥವೇ ಅಧ್ಯಾಯದ ಅರ್ಥವು. ಅಧ್ಯಾಯದ ಅರ್ಥವೇ ಪ್ರಕರಣದ ಅರ್ಥವು. ಪ್ರಕರಣಾರ್ಥವೇ ಶ್ಲೋಕಾರ್ಥವು. ಶ್ಲೋಕಾರ್ಥವೇ ವಾಕ್ಯಾರ್ಥವು ಅದೇ ಪದಾರ್ಥವು. ಪದಾರ್ಥವೇ ಅಕ್ಷರಾರ್ಥವು. ಈ ರೀತಿಯಲ್ಲಿ ಒಂದೊಂದು ಅಕ್ಷರದ ಅರ್ಥದಲ್ಲಿಯೂ ಪರಮಾರ್ಥಬೋಧವಿದೆ.

ಸೂತ-ಶೌನಕರ ಸಂವಾದವು ಧರ್ಮಪ್ರಧಾನವಾದುದು. ಬಹ್ವೃಚ ಬ್ರಾಹ್ಮಣರಾದ ಶೌನಕಾದಿಗಳು ಯಜ್ಞವನ್ನು ಮಾಡುತ್ತಿದ್ದಾರೆ. ಯಜ್ಞವು ಧರ್ಮ. ಯಾಗಮಂಟಪಕ್ಕೆ ಸೂತರು ಬಂದರು. ಧರ್ಮಾಂಗರೂಪದಿಂದ ಭಾಗವತವನ್ನು ಶ್ರವಣಮಾಡಿಸಿದರು.

ಧರ್ಮವು ಮುಖ್ಯ. ಭಾಗವತವು ಗೌಣ. ಅವರು ಧರ್ಮವನ್ನು ಪಾಲಿಸುತ್ತಾರೆ. ಭಾಗವತವನ್ನು ಶ್ರವಣಮಾಡುತ್ತಾರೆ.

ಸೂತರು ಪುರಾಣಹೇಳುವ ವೃತ್ತಿಯವರೇ. ಅವರು ಯಜ್ಞ-ಯಾಗಾದಿಗಳು ನಡೆಯುವಲ್ಲಿಗೆ ಹೋಗುತ್ತಾರೆ. ಪುರಾಣಶ್ರವಣವನ್ನು ಮಾಡಿಸುತ್ತಾರೆ.

ಅನಂತರ ನಾರದರು ವಕ್ತಾ. ವ್ಯಾಸರು ಶ್ರೋತಾ. ನಾರದರು ವೀಣೆಯನ್ನು ಧ್ವನಿಗೈಯುತ್ತಾ ಲೋಕದಲ್ಲಿ ಸಂಚರಿಸುತ್ತಾರೆ. ಒಂದು ಜಾಗದಲ್ಲಿ ನಿಲ್ಲುವುದಿಲ್ಲ. ಶ್ರೀಶುಕರಂತೆ ವೈರಾಗಿಗಳೂ ಅಲ್ಲ ; ಅವಧೂತರೂ ಅಲ್ಲ.

ವ್ಯಾಸರು ಅವತಾರಪುರುಷರು. ಮಹಾಜ್ಞಾನಿಗಳು. ಸದಾ ಲೋಕಹಿತಚಿಂತನೆಯೇ ಅವರಲ್ಲಿ ತುಂಬಿರುತ್ತದೆ.

ನಾರದರು ಸ್ವತಃ ಹೇಳಿದರು-ನೀನು ಭಗವಂತನ ಗುಣಾನುವಾದವನ್ನು ಮಾಡು. ಆದರೂ ವ್ಯಾಸರು ಪ್ರವರ್ತಿಸಲಿಲ್ಲ. ನಾರದರೆಂದರು-ಸಮಾಧಿನಾನುಸ್ಮರ ತದ್ವಿಚೇಷ್ಟಿತಮ್

Sri Vidyabharathi Book Centre, Sringeri

CC-O. In Public Domain. Digitized by eGangotri

'ನೀನು ಮಹಾಪುರುಷ. ಸಮಾಧಿಸ್ಥನಾಗಿ ಭಗವಲ್ಲೀಲೆಯನ್ನು ತಿಳಿದುಕೊ.' ಅಂತೆಯೇ ವ್ಯಾಸರು ಸಮಾಧಿಸ್ಥರಾಗಿ ಭಗವಲ್ಲೀಲೆಗಳನ್ನು ಅರ್ಥಮಾಡಿಕೊಂಡರು.

ಶುಕದೇವರು ನಿರ್ಗುಣ ಅಧಿಕಾರಿಗಳಾದರೆ ಪರೀಕ್ಷಿತನು ನಿರ್ಗುಣ ಶ್ರೋತಾ. ಹದಿಮೂರು ಅಧ್ಯಾಯಗಳಲ್ಲಿ ಶುಕದೇವರ ಮತ್ತು ಪರೀಕ್ಷಿತನ ವರ್ಣನೆಯಿದೆ.

ಪರೀಕ್ಷಿತನ ತಂದೆ ಅಭಿಮನ್ಯು. ಭಗವಾನ್ ಶ್ರೀಕೃಷ್ಣನ ತಂಗಿಯ ಮಗ. ಶ್ರೀಕೃಷ್ಣನ ಮತ್ತೊಂದು ರೂಪವೇ ನರರೂಪೀ ಅರ್ಜುನ.

ಪರೀಕ್ಷಿತನ ಎರಡು ವಂಶಗಳಲ್ಲಿಯೂ ಶ್ರೇಷ್ಠ ಹರಿಭಕ್ತಿಯಿದ್ದಿತು. ಅವನು ಗರ್ಭಸ್ಥನಾಗಿದ್ದಾಗಲೇ ಶ್ರೀಕೃಷ್ಣನ ರಕ್ಷಣೆಗೆ ಒಳಗಾಗಿದ್ದನು ಅವನು ಕಲಿಯನ್ನು ಜಯಿಸಿದ್ದ ಪ್ರಭಾವಶಾಲೀ ರಾಜನು.

ಅವರಿಬ್ಬರೂ ಉತ್ತಮೋತ್ತಮ ಅಧಿಕಾರಿಗಳು. ಅಧಿಕಾರಿವರ್ಣನೆಯನ್ನು ಇಲ್ಲಿ ಮಾಡುವುದರಿಂದ ಪ್ರಥಮ ಸ್ಕಂಧವನ್ನು 'ಅಧಿಕಾರೀ' ಸ್ಕಂಧವೆಂದು ಕರೆಯುತ್ತಾರೆ.

3ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೪

ಶೌನಕರು ಹೇಳುತ್ತಾರೆ :

ಸೂತ ಸೂತ ಮಹಾಭಾಗ ವದ ನೋ ವದತಾಂ ವರ |
ಕಥಾಂ ಭಾಗವತೀಂ ಪುಣ್ಯಾಂ ಯದಾಹ ಭಗವಾನ್ ಶುಕಃ ||

" ಸೂತಪುರಾಣಿಕರೇ ! ನೀವು ಶ್ರೇಷ್ಠವಕ್ತಾರರು. ಮಹಾಭಾಗ್ಯಶಾಲಿಗಳು. ಶ್ರೀಶುಕದೇವರು ವರ್ಣಿಸಿದ ರೀತಿಯಲ್ಲಿ ಶ್ರೀಮದ್ಭಾಗವತ ಕಥೆಯನ್ನು ದಯೆಯಿಟ್ಟು ವರ್ಣಿಸಿರಿ.

ಶುಕನೆಂದರೆ–ಶುದ್ಧಂ ಗಾಯತಿ ಶುಕ್ಲಂ ಗಾಯತಿ । ಕೈ-ಗೈ ಧಾತುಗಳೆರಡಕ್ಕೂ ಗಾನ ಎಂದರ್ಥವು. ಶುಕದೇವರು ಶ್ರೀಗುರುಮುಖದಿಂದ ಕೇಳಿದ ಹಾಗೆಯೇ ಗಾನ ಮಾಡುತ್ತಾರೆ. ಅದರಿಂದಲೇ ಅವರು ಶುಕ. ಗಿಳಿಯ ಸ್ವಭಾವವವು ಕೇಳಿದ್ದನ್ನು ಕೇಳಿದ ಹಾಗೆಯೇ ಹೇಳುವುದಾಗಿದೆ. ತನ್ನದೇನನ್ನೂ ಸೇರಿಸುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾತ್ಮರಾದ ವ್ಯಾಸರು 'ಯಾವಾಗ, ಯಾವ ಸ್ಥಳದಲ್ಲಿ, ಯಾವ ಕಾರಣದಿಂದ ಶ್ರೀಮದ್ಭಾಗವತವನ್ನು ರಚಿಸಿದರು ?

ಅವರ ಪುತ್ರರಾದ ಶುಕರಾದರೋ ಮಹಾಯೋಗಿಗಳು, ಸಮದರ್ಶಿಗಳು, ನಿರ್ವಿಕಲ್ಪರು. ಏಕಾಂತಪ್ರಿಯರು, ಅವರು ಮಾಯಾನಿದ್ರೆಯನ್ನು ಗೆದ್ದು ಅನಿದ್ರರಾಗಿಯೂ ಇರುತ್ತಿದ್ದರು.. ಅವರು ಎಂತಹ ಮಹಾತ್ಮರೆಂದರೆ-

ದೃಷ್ಟ್ವಾನುಯಾಂತಮೃಷಿಮಾತ್ಮಜಮಪ್ಯನಗ್ನಂ
ದೇವ್ಯೋ ಹ್ರಿಯಾ ಪರಿದಧುರ್ನ ಸುತಸ್ಯ ಚಿತ್ರಮ್ ।
ತದ್ವೀಕ್ಷ್ಯ ಪೃಚ್ಛತಿ ಮುನೌ ಜಗದುಸ್ತವಾಸ್ತಿ
ಸ್ತ್ರೀಪುಂಭಿದಾ ನ ತು ಸುತಸ್ಯ ವಿವಿಕ್ತದೃಷ್ಟೇಃ ॥೫॥

ಮಹಾತ್ಮರಾದ ಸಂನ್ಯಾಸೀ ಶುಕರು ನಗ್ನರಾಗಿ ಹೋಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ಕೆಲವರು ದೇವಸ್ತ್ರೀಯರು ಸರೋವರದಲ್ಲಿ ಸ್ನಾನಮಾಡುತ್ತಿದ್ದರು. ಶುಕರನ್ನು ನೋಡುತ್ತಲೇ ಇದ್ದರು. ಶುಕರು ಹೊರಟುಹೋದರು ಅವರ ಹಿಂದೆ ವ್ಯಾಸರು ಪುತ್ರಮೋಹದಿಂದ ಕೂಗುತ್ತಾ ಆ ಕಡೆಯೇ ಬರುತ್ತಿರುವುದನ್ನು ಕಂಡ ದೇವಿಯರು ಲಜ್ಜಾ-ಸಂಕೋಚಗಳಿಂದ ಬೇಗ ಬೇಗ ವಸ್ತ್ರಗಳನ್ನು ಧರಿಸತೊಡಗಿದರು.

ಇದರಿಂದ ವ್ಯಾಸರಿಗೆ ಅವಮಾನವಾದಂತಾಯಿತು. ಅವರು ಕೇಳಿದರು-'ಯುವಕನಾದ ನನ್ನ ಮಗನನ್ನು ನೋಡಿ ಲಜ್ಜಾವಶರಾಗದ ನೀವು ವಯೋವೃದ್ಧನಾದ ನನ್ನನ್ನು ಕಂಡೇಕೆ ವಸ್ತ್ರಧಾರಿಗಳಾಗುತ್ತಿದ್ದೀರಿ ?' ಸ್ತ್ರೀಯರು ಹೇಳಿದರು-'**ತವಾಸ್ತಿ ಸ್ತ್ರೀಪುಂಭಿದಾ, ನ ತು ಸುತಸ್ಯ ವಿವಿಕ್ತದೃಷ್ಟೇಃ**-ಮಹಾತ್ಮರೇ ! ನಿಮಗೆ ಸ್ತ್ರೀ ಪುರುಷ ಭೇದದೃಷ್ಟಿ ಇದೆ. ನಿಮ್ಮ ಮಗನು ವಿವಿಕ್ತದೃಕ್. ಅವನು ಪ್ರಕೃತಿ-ಪುರುಷರನ್ನು ವಿವೇಚಿಸಿ ಆತ್ಮಾನಾತ್ಮ ವಿವೇಕದಿಂದ ಪರಮತತ್ತ್ವ ಗ್ರಾಹಿಯಾಗಿದ್ದಾನೆ. ಅವನು ಅದ್ವೈತದರ್ಶಿ.'

ಇಂತಹ ಮಹಾತ್ಮಾ ಶುಕದೇವರನ್ನು ಜನರು ಹೇಗೆ ಗುರುತಿಸಿದರು ? ಅವರು ಉನ್ಮತ್ತರು, ಮೂಕರು, ಜಡರು. ಅವರು ಪರೀಕ್ಷಿತನನ್ನು ಸಂದರ್ಶಿಸಿದುದು ಹೇಗೆ ಅವರು ನಿತ್ಯವನವಾಸಿಗಳಲ್ಲವೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹಸುವನ್ನು ಕರೆಯುವಷ್ಟು ಹೊತ್ತು ಗ್ರಾಮ-ಸ್ಥರ ಮನೆಬಾಗಿಲಿನಲ್ಲಿ ಉಪಸ್ಥಿತರಿದ್ದು ಆ ಮನೆಯನ್ನು ಪವಿತ್ರಮಾಡುತ್ತಿದ್ದರು.

ಅಭಿಮನ್ಯುಪುತ್ರನಾದ ' ಪರೀಕ್ಷಿತನು ಪರಮಭಾಗವತಶ್ರೇಷ್ಠನು. ಅವನ ಜನ್ಮ-ಕರ್ಮಗಳು ಆಶ್ಚರ್ಯಕರವಾದುವು. ಅವನೇಕೆ ರಾಜ್ಯಲಕ್ಷ್ಮಿಯನ್ನು ಪರಿತ್ಯಾಗಮಾಡಿ ಗಂಗಾತೀರದಲ್ಲಿ ಆಮರಣಪರ್ಯಂತ ಅನಶನವ್ರತವನ್ನು ಕೈಗೊಂಡನು ?

ಆಶ್ರಿತರಾಜರೆಲ್ಲರೂ ರಾಶಿ-ರಾಶಿ ಧನ-ಕನಕಗಳನ್ನು ಅವನ ಪಾದಗಳಲ್ಲಿ ಅರ್ಪಿಸುತ್ತಿದ್ದರು ಹಾಗೂ ನಮಸ್ಕರಿಸುತ್ತಿದ್ದರು. ಯೌವನದಲ್ಲಿಯೇ ಅವನೇಕೆ ಅಪಾರಸಂಪದ್ಭರಿತವಾದ ರಾಜ್ಯಲಕ್ಷ್ಮಿಯನ್ನು ತ್ಯಾಗಮಾಡಿದನು ?

ಮಹಾತ್ಮರ ಜೀವನವೆಂದರೆ ಅವರ ಸ್ವಂತಜೀವನವಲ್ಲ. ಅವರು ತಮ್ಮ ಜೀವನಕ್ಕೆ ಯಜಮಾನರಲ್ಲ. **ಜೀವಂತಿ ನಾತ್ಮಾರ್ಥಂ**—ಅವರು ತನಗಾಗಿ ಜೀವಿಸುವುದಿಲ್ಲ. ಲೋಕಕ್ಕಾಗಿ ಜೀವಿಸುತ್ತಾರೆ.

ಅವರು ತಮ್ಮ ದೇಹವನ್ನು ಬಿಡಲೂ ಅಸ್ವಂತಂತ್ರರು. ಅಂದ ಮೇಲೆ ಪರಿಕ್ಷಿತನೇಕೆ ಮತ್ತೊಬ್ಬರಿಗೆ ಉಪಯೋಗಕರವಾದ ತನ್ನ ಶರೀರವನ್ನು ತ್ಯಾಗಮಾಡಿದನು ?

ಸೂತರೇ ! ತಾವು ಸಕಲವಿದ್ಯಾಪಾರಂಗತರು. ದಯೆಯಿಟ್ಟು ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ "—ಎಂದು ಶೌನಕಾದಿಗಳು ಸೂತರನ್ನು ಪ್ರಶ್ನಿಸಲು, ಸೂತರು ಹೇಳುತ್ತಾರೆ :

"ಶೌನಕರೇ ! ಯಾವಾಗ ಚತುರ್ಯುಗಗಳಲ್ಲಿ ಮೂರನೇ ಯುಗವಾದ ದ್ವಾಪರವು ಸಮಾಪ್ತಿಯಾಗುವುದರಲ್ಲಿದ್ದಿತೋ-ಆಗ ಸತ್ಯವತೀ-ಪರಾಶರರ ಮೂಲಕ ಶ್ರೀಮನ್ನಾರಾಯಣಕಲೆಯು ವ್ಯಾಸರೂಪದಲ್ಲಿ ಪ್ರಕಟವಾಯಿತು.

' ಪಂಚನದ್ಯಃ : **ಸರಸ್ವತೀಮಪಿ ಯಾಂತಿ ಸಸ್ರೋತಸಃ ।**'

ಪಂಚಜ್ಞಾನೇಂದ್ರಿಯಗಳ ಪಂಚಧಾರೆಗಳೇ-ಶ್ರೋತ್ರಧಾರಾ, ತ್ವಗ್ಧಾರಾ, ಚಕ್ಷುಧಾರಾ, ಘ್ರಾಣಧಾರಾ, ರಸಧಾರಾ ಈ ಐದು ಧಾರೆಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊರಗಡೆಯಿಂದ ಜ್ಞಾನವನ್ನು ತೆಗೆದುಕೊಂಡು ಒಳಗಡೆಗೆ ಹೋಗಿ ಅಂತಃ ಸಲಿಲಾ ಸರಸ್ವತಿಯಲ್ಲಿ ಸೇರುತ್ತವೆ.

ಸರಸ್ವತೀನದಿಯ ದಡದಲ್ಲಿ ವ್ಯಾಸರು ಕುಳಿತಿದ್ದಾರೆ. ಏಕಾಂತವಾಗಿದೆ. ಪವಿತ್ರ ಜಲವನ್ನು ಸಂದರ್ಶಿಸಿದರು.

ಅವರು ಯೋಚಿಸಿದರು-'ಪವಿತ್ರಧರ್ಮದ ನಾಶವಾಗುತ್ತಿದೆ' ಶ್ರೋತೃಗಳು ಇದನ್ನು ಗಮನಿಸಿ. ವಸ್ತುತಃ ಪ್ರತಿಯುಗದಲ್ಲಿಯೂ ಧರ್ಮದ ಹ್ರಾಸ-ವಿಕಾಸಗಳು ಆಗುತ್ತಲೇ ಇರುತ್ತವೆ. ವಸ್ತುವು ಇರುವಂತೆ ವಸ್ತುಧರ್ಮದ ನಾಶವಾಗುವುದಿಲ್ಲ. ಅಗ್ನಿಯ ಅಗ್ನಿತ್ವವೂ ಪೃಥ್ವಿಯ ಪೃಥಿವೀತ್ವವೂ ನಾಶವಾಗುವುದಿಲ್ಲ. ಪೃಥಿವೀತ್ವ-ಅಗ್ನಿತ್ವಗಳೇ ನಾಶವಾದರೆ ಪೃಥಿವೀ ಅಗ್ನಿಗಳು ಇರುವುದೆಲ್ಲಿ ? ಮನುಷ್ಯನೂ ಸಹ ಮನುಷ್ಯತ್ವದ ಸಂಪೂರ್ಣನಾಶವಾದ ಮೇಲೆ ಇರಲಾರನು.

ಧರ್ಮದ ಹ್ರಾಸವಾಗಬಹುದೇ ಹೊರತು ಅದರ ಬೀಜನಾಶವಾಗುವುದಿಲ್ಲ. ಅದರಿಂದ ಧರ್ಮವು ಸನಾತನವು.

ವ್ಯಾಸರ ಮನಸ್ಸಿಗೆ ಬಂದಿತು-'ಯುಗಪ್ರಭಾವದಿಂದ ಭೌತಿಕವಸ್ತುಗಳಲ್ಲಿ ಶಕ್ತಿಹ್ರಾಸವಾಗುತ್ತಿದೆ.'

ನೋಡಿ-ಈ ಅವಸ್ಥೆಯು ಇಂದೂ ಇದೆ. ಮೊದಲಿನ ವೃಕ್ಷಗಳು ನೂರು ವರ್ಷ-ಎರಡು ನೂರು ವರ್ಷಗಳು ಬದುಕುತ್ತಿದ್ದುವು. ಫಲವನ್ನೂ ಕೊಡುತ್ತಿದ್ದುವು. ಆದರೆ ಈಗ 15-20 ವರ್ಷಗಳಲ್ಲಿಯೇ ಅವುಗಳ ಆಯುಸ್ಸು ಮುಗಿದುಹೋಗುತ್ತದೆ. ಅವುಗಳನ್ನು ಎಷ್ಟೇ ಪೋಷಿಸಿ-ಗೊಬ್ಬರ ಹಾಕಿದರೂ ಅವುಗಳು ಬಹಳ ಕಾಲ ಬದುಕುವುದಿಲ್ಲ. ಫಲವನ್ನೇನೋ ಅಧಿಕವಾಗಿ ಕೊಡುತ್ತವೆ. ಆದರೆ ಅಲ್ಪಾಯುಗಳು.

ಹಿಂದೆ ಬೆಳೆಯುತ್ತಿದ್ದ ದ್ವಿದಳಧಾನ್ಯಗಳ ಸಾರವು ಈಗಿಲ್ಲ. ಅಂತೆಯೇ ಮನುಷ್ಯರೂ ಸತ್ತ್ವಹೀನರಾಗುತ್ತಿದ್ದಾರೆ. ಅವರು ಶ್ರದ್ಧಾಳುಗಳಲ್ಲ. ಅವರ ದೃಷ್ಟಿಯಲ್ಲಿ ಶ್ರದ್ಧೆಯು ನಿರ್ಬಲರ ವಸ್ತುವು. ವಸ್ತುತಃ ಹಾಗಲ್ಲ. ಆತ್ಮಬಲವಿರುವಾತನೇ ಶ್ರದ್ಧಾಳುವಾಗಲು ಸಾಧ್ಯ. ಶ್ರದ್ಧೆಯು ಆತ್ಮಬಲದ ಲಕ್ಷಣವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆನರು ಯೋಚಿಸಲಾರಂಭಿಸಿದರು-ಈಗ ಲೋಕದ ಹಿತವು ಹೇಗೆ ಸಾಧಿಸಲ್ಪಡುತ್ತದೆ ?

ವೇದೋಕ್ತವಾದ ಕರ್ಮಕಾಂಡದ ಅನುಷ್ಠಾನದಿಂದ ಹೃದಯವು ಶುದ್ಧವಾಗುತ್ತದೆ. ಈ ದೃಷ್ಟಿಯಿಂದ ಅವರು ಒಂದೇ ಆದ ವೇದವಾಣಿಯನ್ನು ನಾಲ್ಕು ಭಾಗಗಳನ್ನಾಗಿ ವಿಭಜಿಸಿದರು. ಋಗ್ವೇದ-ಯಜುರ್ವೇದ ಸಾಮವೇದ-ಅಥರ್ವಣವೇದ-ಹೀಗೆ ನಾಲ್ಕು ವೇದಗಳನ್ನು ಉದ್ಧರಿಸಿದರು.

ಇತಿಹಾಸ-ಪುರಾಣಾದಿಗಳನ್ನು ಐದನೇ ವೇದವೆಂದು ಉದಾಹರಿಸುತ್ತಾರೆ. ಋಗ್ವೇದವನ್ನು ಪೈಲರೂ, ಯಜುರ್ವೇದವನ್ನು ವೈಶಂಪಾಯನರೂ, ಸಾಮವೇದವನ್ನು ಜೈಮಿನಿಗಳೂ, ಅಥರ್ವವೇದವನ್ನು ವರುಣನಂದನರಾದ ಸುಮಂತುವೂ, ಇತಿಹಾಸ-ಪುರಾಣಾದಿಗಳನ್ನೂ ರೋಮಹರ್ಷಣರೂ ಧರಿಸಿದರು. ಇವರುಗಳು ತಮ್ಮ ತಮ್ಮ ವೇದಭಾಗಗಳನ್ನು ಮತ್ತಷ್ಟು ಶಾಖೋಪಶಾಖೆಗಳಾಗಿ ವಿಭಜಿಸಿದರು.

ಶಿಷ್ಯ-ಪ್ರಶಿಷ್ಯರ ಮೂಲಕ ವೇದಗಳು ಅನೇಕಶಾಖೆಗಳಾದುವು. ಮುಂದಿನ ಜನಾಂಗದವರು ಅಲ್ಪಾಯುಗಳು ಎಂದು ತಿಳಿದು ಅವರುಗಳೂ ಧಾರಣೆಮಾಡಲು ಅನುಕೂಲವಾಗುವಂತೆ ಚಿಕ್ಕ ಚಿಕ್ಕ ವಿಭಾಗಗಳನ್ನು ಮಾಡಿದರು. ಆನೋಲೆ ಅವರಿಗೆ ಯೊಚನೆಯು ಬಂದಿತು.

ಸ್ತ್ರೀಶೂದ್ರ ದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ ।

' ಸ್ತ್ರೀ-ಶೂದ್ರ-ಪತಿತದ್ವಿಜಾತಿಯವರಿಗೆ ವೇದಾಭ್ಯಾಸದ ಅಧಿಕಾರವಿಲ್ಲ. ಅವರು ಹೇಗೆ ತಾನೆ ಶಾಸ್ತ್ರೀಯವಿಚಾರಗಳನ್ನು ತಿಳಿದುಕೊಂಡಾರು ? ಅವರಿಗೆ ಹೇಗೆ ಕಲ್ಯಾಣವಾಗುವುದು ? ' ಹೀಗೆ ಯೋಚಿಸಿದ ಮಹಾತ್ಮಾ ವ್ಯಾಸರು ಮಹಾಭಾರತನಾಮಕ ಇತಿಹಾಸವನ್ನು ರಚಿಸಿದರು.

ಹೀಗೆ ಅವರು ಸರ್ವರಿಗೂ ಕಲ್ಯಾಣಕಾರಕರಾಗಿಯೇ ಇದ್ದರು. ಆದರೂ ಅವರಿಗೆ ಸಂತೋಷವೇ ಆಗಲಿಲ್ಲ. ಮನಸ್ಸು ಖಿನ್ನವಾಗಿರುತ್ತಿತ್ತು.

ನೋಡಿ-ಮನುಷ್ಯ ... ಸಿನ್ನ ಕರ್ಮದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಮನಸ್ಸಿಗೆ ಸಂತೋಷವಾಗುವುದಿಲ್ಲವೋ-ಅಲ್ಲಿಯವರೆಗೂ ನೀವು ನಿಮ್ಮ ಧರ್ಮಾಚರಣೆಯಲ್ಲಿ ಏನೋ ತ್ರುಟಿಯಿದೆಯೆಂದೇ ತಿಳಿಯಬೇಕು.'

ನಿಮ್ಮ ಕರ್ಮಾಚರಣೆಯಿಂದ ಆತ್ಮತುಷ್ಟಿಯಾಗದೇ ಆತ್ಮಗ್ಲಾನಿಯಾಗು ವುದಾದರೆ-ಆ ಕರ್ಮಾಚರಣೆಯನ್ನು ಬಿಟ್ಟು ಬಿಡಬೇಕು.

ವ್ಯಾಸರ ಮುಖದಿಂದ ಹೀಗೆ ಉದ್ಗಾರವು ಹೊರಟಿತು.-'ನಾನು' ನಿಷ್ಕಪಟಭಾವದಿಂದ ಬ್ರಹ್ಮಚರ್ಯಾದಿ ವ್ರತಗಳನ್ನು ಧರಿಸಿದ್ದೇನೆ. ವೇದ-ಗುರು ಅಗ್ನಿಗಳನ್ನು ಸಮ್ಮಾನಿಸಿದ್ದೇನೆ. ಅವರ ಆಜ್ಞೆಯನ್ನು ಪಾಲಿಸಿದ್ದೇನೆ.

ಮಹಾಭಾರತದ ಮೂಲಕ ನಾನು ವೇದಾರ್ಥವನ್ನು ಹೊರಗೆಡಹಿದ್ದೇನೆ. ಇದರಿಂದ ಸ್ತ್ರೀ-ಶೂದ್ರಾದಿಗಳು ಧರ್ಮ-ಕರ್ಮ-ಜ್ಞಾನಗಳನ್ನು ಸಂಪಾದಿಸುವಂತಾಗಿದೆ.

ಯದ್ಯಪಿ ನಾನು ಬ್ರಹ್ಮತೇಜಸ್ಸಂಪನ್ನನು, ಸಮರ್ಥನು. ಆದರೂ ನನ್ನ ಹೃದಯವೇಕೆ ದಯನೀಯಸ್ಥಿತಿಯನ್ನು ಹೊಂದುತ್ತಿದೆ.

ಕಿಂ ವಾ ಭಾಗವತಾ ಧರ್ಮಾಃ ನ ಪ್ರಾಯೇಣ ನಿರೂಪಿತಾಃ ।

ನಾನು ಭಾಗವತಧರ್ಮಗಳನ್ನು ಸರಿಯಾಗಿ ವರ್ಣಿಸಲಿಲ್ಲವೇ ? ಭಾಗವತಧರ್ಮಗಳು ಪರಮಹಂಸರಿಗೂ ಭಗವಂತನಿಗೂ ಅಂತ್ಯಂತಪ್ರಿಯವು. ನನ್ನ ಅಸಂತುಷ್ಟಿಗೆ ಇದೇ ಕಾರಣವೇ ?

ನೋಡಿ-ಧರ್ಮವು ಸ್ವಯಂಕೃತ-ಸ್ವಾರ್ಥಸಂಸಿದ್ಧಿಗಾಗಿ ಇದೆ. ಪರಮ ಧರ್ಮವು ಭಗವತ್ಸೇವೆಯಿಂದ-ಭಗವದ್ಗುಣಾನುವಾದದಿಂದ-ಭಗವದ್ಗುಣ ಶ್ರವಣದಿಂದ ಭಗವತ್ಸಂತೋಷಕ್ಕೆ ಕಾರಣವಾಗುತ್ತದೆ.

ಮನ್ವಾದಿಪ್ರೋಕ್ತಧರ್ಮವು 'ತ್ವಂ' ಪದಾರ್ಥಪ್ರಧಾನವಾದುದು. ಭಾಗವತಾದಿ ಗ್ರಂಥಪ್ರೋಕ್ತಧರ್ಮವು 'ತತ್' ಪದಾರ್ಥಪ್ರಧಾನವಾದುದು. ತ್ವಂ ಪದಾರ್ಥನು ಕರ್ತಾ-ತತ್ ಪದಾರ್ಥನು ಪ್ರಭು. ಇವೆರಡರ ಐಕ್ಯಾಭೇದವೇ ಔಪನಿಷದ್ಧರ್ಮ.

'ಭಗವಂತನ ಲೀಲಾವಿಭೂತಿಯನ್ನು ನಾನು ಸಾಕಷ್ಟು ವರ್ಣಿಸಲಿಲ್ಲ.' ಹೀಗೆ ವ್ಯಾಸರು ಚಿಂತಿಸುತ್ತಿರುವಾಗ ದೇವರ್ಷಿಗಳಾದ ನಾರದರು ಅವರ ಮುಂದೆ ಉಪಸ್ಥಿತರಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಷ್ಯನು ಗುರುಗಳ ಸಮೀಪಕ್ಕೆ ಹೋಗಲಿಲ್ಲ. ಗುರುಗಳೇ ಶಿಷ್ಯನ ಸಮೀಪಕ್ಕೆ ಬಂದರು.

ಅಧಿಕಾರೀ ಪುರುಷನಿಗೆ ಯಾವಾಗ ಯಾವುದರ ಆವಶ್ಯಕತೆಯುಂಟಾಗುತ್ತದೆಯೋ-ಆಗ ಅಂತರಿಕ್ಷದಲ್ಲಿ ಸಂಚರಿಸುವ ಭಗವತ್ಸಂಕಲ್ಪವು ಮೂರ್ತಿಮತ್ತಾಗಿ ಅವನ ಬಳಿಗೆ ಬರುತ್ತದೆ. ತಾವಾಗಿ ಬಂದ ನಾರದರನ್ನು ವ್ಯಾಸರು ಆದರದಿಂದ ಸ್ವಾಗತಿಸಿದರು.

ವಿಧಿವತ್ ಪೂಜಾ ಎಂದರೆ ಸ್ವಶಕ್ತಿಗೆ ಅನುಗುಣವಾಗಿ ಮಾಡುವ ಷೋಡಶೋಪಚಾರಪೂಜೆ. ರಾಜೋಪಚಾರ - ದೇವೋಪಚಾರ - ರಾಜರಾಜೋಪಚಾರಪೂಜೆ. ದೇಶ-ಕಾಲ-ಪರಿಸ್ಥಿತಿಗಳಿಗೆ ಅನುಗುಣವಾಗಿ ಪೂಜೆಯು ನಡೆಯುತ್ತದೆ.

4ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೫

ವ್ಯಾಸರಿಂದ ವಿಧಿವತ್ತಾಗಿ ಪೂಜಿಸಲ್ಪಟ್ಟ ನಾರದರು ವಿಶ್ರಾಂತರಾದರು ನಂತರ ವ್ಯಾಸರನ್ನು ಕೇಳಿದರು :

ಪಾರಾಶರ್ಯ ಮಹಾಭಾಗ ಭವತಃ ಕಚ್ಚಿದಾತ್ಮನಾ ।
ಪರಿತುಷ್ಯತಿ ಶಾರೀರ ಆತ್ಮಾ ಮಾನಸ ಏವ ವಾ ।
ಕೃತವಾನ್ ಭಾರತಂ ಯಸ್ತ್ವಂ ಸರ್ವಾರ್ಥಪರಿಬೃಂಹಿತಮ್ ॥

"ವ್ಯಾಸಮಹಾಮುನಿಗಳೇ ! ನಿಮಗೆಆತ್ಮಸಂತೋಷವು ದೊರೆತಿದೆಯಲ್ಲವೇ ? ನೀವು ಬ್ರಹ್ಮಜರು. ಮಹಾಭಾರತದಂತಹ ಮಹಾಗ್ರಂಥವನ್ನು ರಚಿಸಿರುವಿರಿ. ನಿಮಗೇನೂ ಈಗ ಅಸಂತುಷ್ಟಿಯಿಲ್ಲವಷ್ಟೆ ? ಸನಾತನಬ್ರಹ್ಮತತ್ತ್ವವನ್ನು ಚೆನ್ನಾಗಿ ವಿಚಾರಮಾಡಿರುವಿರಿ. ತಿಳಿದೂ ಇರುವಿರಿ. ಆದರೂ ಅಕೃತಾರ್ಥಪುರುಷನಂತೆ, ಶೋಕಾವಿಷ್ಟರಾಗಿರುವಂತೆ ತೋರುವಿರಲ್ಲ ?"

ವ್ಯಾಸರು ಹೇಳುತ್ತಾರೆ - ಪೂಜ್ಯರೇ ನೀವು ಹೇಳುವುದು ಸರಿ.

ಅಸ್ತ್ಯೇವ ಮೇ ಸರ್ವಮಿದಂ ತ್ವಯೋಕ್ತಂ
ತಥಾಪಿ ನಾತ್ಮಾ ಪರಿತುಷ್ಯತೇ ಮೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಷ್ಟು ಮಾಡಿದರೂ ನನಗೆ ಆತ್ಮಸಂತೋಷವಿಲ್ಲ. ಇದಕ್ಕೆ ಕಾರಣ ವೇನಿರಬಹುದು ? ನೀವು ಪರಮಜ್ಞಾನಸಂಪನ್ನರು. ಬ್ರಹ್ಮಮಾನಸಪುತ್ರರು. ನನ್ನ ಅತೃಪ್ತಿಯ ಕಾರಣವನ್ನು ನಿಮ್ಮನ್ನೇ ಕೇಳಬೇಕೆಂದಿದ್ದೇನೆ.

ತಾವು ಎಲ್ಲ ರಹಸ್ಯಾಂಶಗಳನ್ನೂ ತಿಳಿದಿರುವಿರಿ. ಮೇಲಾಗಿ ಪುರಾಣ ಪುರುಷನ ಉಪಾಸಕರು. ಆ ಪುರಾಣಪುರುಷನಾದರೋ ಪ್ರಕೃತಿ-ಪುರುಷ ಎರಡಕ್ಕೂ ಸ್ವಾಮಿಯು. ಅಸಂಗನಾದರೂ ತನ್ನ ಸಂಕಲ್ಪಮಾತ್ರದಿಂದ ಮನಸ್ಸಿನಿಂದಲೇ ಸಂಸಾರದ ಸೃಷ್ಟಿ-ಸ್ಥಿತಿ-ಲಯಗಳನ್ನು ನಡೆಸುತ್ತಾನೆ.

ನೀವು ಸೂರ್ಯನಂತೆ ತ್ರಿಲೋಕಸಂಚಾರಿಗಳು. ಯೋಗಬಲದಿಂದ ಪ್ರಾಣವಾಯುವಿನಂತೆ ಸರ್ವರ ಒಳಗೂ ಅಂತಃಕರಣದ ಸಾಕ್ಷಿಭೂತರಾಗಿರು ವವರು.

ಪರಾವರೇ ಬ್ರಹ್ಮಣಿ ಧರ್ಮತೋ ವ್ರತೈಃ
ಸ್ನಾತಸ್ಯ ಮೇ ನ್ಯೂನಮಲಂ ವಿಚಕ್ಷ್ವ ।

ಯೋಗಾನುಷ್ಠಾನನಿಯಮಗಳ ಮೂಲಕ ಪರಬ್ರಹ್ಮ-ಶಬ್ದಬ್ರಹ್ಮ ಎರಡರ ಪ್ರಾಪ್ತಿಯನ್ನು ಪಡೆದಿದ್ದಾಗ್ಯೂ ನನ್ನ ಈ ಅಸಂತೋಷಕ್ಕೇನು ಕಾರಣ ? ನನ್ನಲ್ಲಿರುವ ನ್ಯೂನತೆಯೇನು ? ದಯೆಯಿಟ್ಟು ತಿಳಿಸಿ."

ಶ್ರೀ ನಾರದರು ಹೇಳುತ್ತಾರೆ :

" ಮಹರ್ಷಿಗಳೇ ! ನೀವು ಭಗವಂತನ ಯಶೋಗಾಥೆಗಳನ್ನು ಅಷ್ಟಾಗಿ ವರ್ಣಿಸಲಿಲ್ಲವೋ ಏನೋ ?

ನೀವು ಧರ್ಮಾದಿ ಪುರುಷಾರ್ಥಗಳನ್ನು ವರ್ಣನೆ ಮಾಡಿರುವಷ್ಟು ಮಟ್ಟಿಗೆ ಶ್ರೀಕೃಷ್ಣ ಮಹಿಮೆಯನ್ನು ನಿರೂಪಿಸಿಲ್ಲವೆಂದು ತೋರುತ್ತದೆ."

ಶ್ರೋತೃಗಳು ಇದನ್ನು ಗಮನಿಸಬೇಕು. ಗುಣಾನುವರ್ಣನೆಯನ್ನು ಮಾಡುವುದು ಮನುಷ್ಯನ ಸ್ವಭಾವ. ಸಂಸಾರದ ಗುಣಾನುವಾದವನ್ನು ಮಾಡಲಿ ಅಥವಾ ತನ್ನ ಗುಣಾನುವಾದವನ್ನೇ ಮಾಡಿಕೊಳ್ಳಲಿ.

ಸಂಸಾರದ ಗುಣಾನುವರ್ಣನೆಯಿಂದ ರಾಗ-ದ್ವೇಷಗಳು ವರ್ಧಿಸುತ್ತವೆ. ಸ್ವಗುಣಾನುವಾದದಿಂದ ಅಸ್ಮಿತಾದೋಷದ ಅಭಿವೃದ್ಧಿಯಾಗುವುದು, ಇದೊಂದು ಕ್ಲಿಷ್ಟವಲ್ಲದ ವಿಚಾರ. ಬಾಲಕರೂ ತಿಳಿದುಕೊಳ್ಳಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಃಕರಣಶುದ್ಧಿಗೆ ಭಗವದ್ ಗುಣಾನುವಾದವನ್ನು ಬಿಟ್ಟರೆ ಉಪಾಯಾಂತರವಿಲ್ಲ. ಅದಿಲ್ಲದೆ ಆತ್ಮತುಷ್ಟಿಯೊದಗುವುದಿಲ್ಲ.

ಆತ್ಮತುಷ್ಟಿಯಿಲ್ಲದಿರುವ ಕಡೆ ಧರ್ಮವಿರುವುದಿಲ್ಲ. ಈ ಅಭಿಪ್ರಾಯಗಳಿಂದ ನಾರದರು ಹೇಳುತ್ತಾರೆ. "ವ್ಯಾಸರೇ ! ಒಂದು ಕವಿತೆಯು ಎಷ್ಟೇ ಚೆನ್ನಾಗಿರಲಿ ; ರಸ-ಭಾವ-ಅಲಂಕಾರಾದಿಗಳಿಂದ ಕೂಡಿರಲಿ ; ಚಿತ್ರಮಯ ಕಾವ್ಯವಾಗಿರಲಿ ; ವಿಚಿತ್ರ ಪದವಿನ್ಯಾಸವಿರಲಿ-ಅದರಲ್ಲಿ-ಭಗವಂತನ ಯಶೋವರ್ಣನೆಯಿಲ್ಲದಿದ್ದರೆ ಅದು ವಾಯಸತೀರ್ಥ.

ತದ್ವಾಯಸಂ ತೀರ್ಥಮುಶಂತಿ ಮಾನಸಾಃ
ನ ಯತ್ರ ಹಂಸಾ ನಿರಮನ್ತ್ಯು ಶಿಕ್ಕ್ಷಯಾಃ ॥

ಮಾನಸಸರೋವರದ ಕಮನೀಯ ಕಮಲವನದಲ್ಲಿ ವಿಹರಿಸುವ ಹಂಸಗಳಂತೆ ಬ್ರಹ್ಮಧಾಮವಿಹಾರಿಗಳಾದ ಭಗವಚ್ಚರಣಾರವಿಂದಾಶ್ರಿತರಾದ ಪರಮಹಂಸಭಕ್ತರು ಅದರಲ್ಲಿ ಆನಂದಪಡುವುದಿಲ್ಲ.

ಆದರೆ ಯಾವ ಕಾವ್ಯದಲ್ಲಿ ಭಗವಂತನ ಗುಣಾನುವಾದವಿರುತ್ತದೋ ಅದರ ರಚನೆಯು ಅಷ್ಟು ಚೆನ್ನಾಗಿಲ್ಲದಿದ್ದರೂ, ವ್ಯಾಕರಣರೀತ್ಯಾ ಅಶುದ್ಧಿ ಇದ್ದರೂ, ಛಂದಸ್ಸೇ ಭಂಗವಾಗಿದ್ದರೂ-ಸಾಧು-ಸಂತರು ಅದನ್ನು ಪ್ರೀತಿಸುತ್ತಾರೆ. ಅವರು ಹೊರಗಡೆಯ ರೂಪುರೇಖೆಗಳನ್ನು ನೋಡುವುದಿಲ್ಲ. ಒಳಗಡೆಯ ಪದಾರ್ಥವನ್ನು ನೋಡುತ್ತಾರೆ. ಅವರು ಸೂಕ್ಷ್ಮದರ್ಶಿಗಳು. ಸ್ಥೂಲದರ್ಶಿಗಳಾದರೆ ಪದಾದಿಗಳನ್ನು ನೋಡುತ್ತಾರೆ, ಮಹಾತ್ಮರು ಪದಾರ್ಥಪ್ರೇಮಿಗಳು. ಪದಪ್ರೇಮಿಗಳಲ್ಲ.

ಪದಪ್ರೇಮವು ಅಪರಾವಿದ್ಯಾಂತರ್ಗತವು. ಪದಾರ್ಥಪ್ರೇಮವು ಪರಾವಿದ್ಯಾಂತರ್ಗತವು. ವೇದದಲ್ಲಿ ಪರಾ ವಿದ್ಯಾ, ಅಪರಾ ವಿದ್ಯಾ ಎಂದು ವಿಭಾಗಿಸಿದ್ದಾರೆ.

ದ್ವೇ ವಿದ್ಯೇ ವೇದಿತವ್ಯೇ–ಪರಾ ಚೈವ ಅಪರಾ ಚ । ತತ್ರಾಪರಾ ಋಗ್ವೇದೋ....ಜ್ಯೋತಿಷಮಿತಿ । ಅಥ ಪರಾ ಯಥಾ ತದಕ್ಷರಂಅಧಿಗಮ್ಯತೇ (ಮು.ಂ-ಉ-1-1-5)

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕ್ಷರ ಜ್ಞಾನವನ್ನು ಮೂಡಿಸುವುದೇ ಪರಾ ವಿದ್ಯಾ. ಅನುಷ್ಠಾನ ನಿರಪೇಕ್ಷಾ ಪರಾ ವಿದ್ಯಾ

"ವ್ಯಾಸರೇ ? ಸತ್ಪುರುಷರು ಪಾಪನಾಶಕವಾದ ಭಗವದ್ವಾಣಿಯ ಶ್ರವಣ-ಗಾನ ಕೀರ್ತನಾದಿಗಳನ್ನು ಅಪೇಕ್ಷಿಸುತ್ತಾರೆ.

ಮೋಕ್ಷಪ್ರಾಪ್ತಿಗೆ ಸಾಕ್ಷಾತ್ ಸಾಧನವಾದ ನಿರ್ಮಲಜ್ಞಾನವೂ ಕೂಡ ಭಗವದ್ಭಕ್ತಿರಹಿತವಾದರೆ ಅದಕ್ಕಾವ ಶೋಭೆಯುಂಟು ? ಇದರ ಮೇಲೆ ಸಾಧನ-ಸಿದ್ಧಿಗಳೆರಡಲ್ಲಿಯೂ ಸದಾ ಅಮಂಗಳರೂಪವಾಗಿರುವ, ಭಗವದರ್ಪಿತ ವಲ್ಲದ ಕಾಮ್ಯಕರ್ಮಗಳು ಹೇಗೆ ಶೋಭಿಸಿಯಾವು ?

ನಿಮ್ಮ ದೃಷ್ಟಿಯು ಅಮೋಘವಾದುದು. ನಿಮ್ಮ ಕೀರ್ತಿಯು ಪವಿತ್ರ ವಾದುದು. ನೀವು ಸತ್ಯಪರಾಯಣರು. ದೃಢವ್ರತಿಗಳು. ಸರ್ವಜೀವಿಗಳ ಬಂಧಮುಕ್ತಿಗಾಗಿ ಸಮಾಧಿಸ್ಥಿತರಾಗಿರಿ. ಹಾಗೂ ಭಗವಂತನ ಲೀಲಾಗುಣ ಗಳನ್ನು ಸ್ಮರಿಸಿರಿ.

ಸಮಾಧಿನಾನುಸ್ಮರ ತದ್ವಿಚೇಷ್ಟಿತಮ್ ||೧೩||

ಭಗವದನ್ಯ 'ಗುಣಾನುವಾದದಲ್ಲಿ ತೊಡಗಿದವನು ನಾಮ-ರೂಪಾತ್ಮಕ ಭ್ರಮೆಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಸಂಸಾರವು ನಾಮ-ರೂಪಾತ್ಮಕವು. ಸಂಸಾರದ ವರ್ಣನೆಯಿಂದ ಶಾಂತಿಯು ದೊರಕುವುದಿಲ್ಲ.

ಸಮುದ್ರದಲ್ಲಿ ನಾವೆಯು ಅಲೆಯುವಂತೆ ಬುದ್ಧಿಯು ಚಂಚಲವಾಗು ವುದು.

ಸಾಂಸಾರಿಕರು ಸ್ವಭಾವತಃ ವಿಷಯಾಸಕ್ತರು. ಧರ್ಮದ ಹೆಸರಿನಲ್ಲಿ ಅವರು ನಿಂದಿತವಾದ ಸಕಾಮಕರ್ಮಗಳನ್ನೂ (ಪಶುಹಿಂಸಾಯುಕ್ತವಾದ) ಮಾಡಲು ಅನುಮತಿಯನ್ನು ಕೊಟ್ಟಿರುವಿರಿ.

ಅಜ್ಞಾನಿಗಳು ಇದನ್ನೇ ಪರಮಧರ್ಮವೆಂದು ತಿಳಿಯುತ್ತಾರೆ. ಕರ್ಮ ನಿಷೇಧಪರವಾದ ಮಾತುಗಳನ್ನು ಗಮನಿಸುವುದೇ ಇಲ್ಲ. ಮಾಂಸಭಕ್ಷಣ-ಸುರಾಪಾನಾದಿಗಳಲ್ಲಿ ಪ್ರವೃತ್ತರಾಗುತ್ತಾರೆ.

ನ ಮನ್ಯತೇ ತಸ್ಯ ನಿವಾರಣಂ ಜನಃ ||೧೫||

ನೀವು ನಿಷೇಧಿಸಿರುವುದನ್ನು ಜನರು ತಿಳಿಯುವುದೇ ಇಲ್ಲ. ನೀವು

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವ ಯಾವ ಸ್ಥಳಗಳಲ್ಲಿ ಹಿಂಸೆಗೆ ಅನುಮತಿಯನ್ನು ಕೊಟ್ಟಿರುವಿರೋ ಅದನ್ನೇ ಜನರೂ ಹಿಡಿದುಕೊಳುತ್ತಾರೆ."

ಇಂದು ಪುಣ್ಯಪರ್ವಕಾಲ-ಯಥಾಶಕ್ತಿ ದಾನಮಾಡಿದರೆ ಭಾರಿ ಫಲವು ದೊರೆಕುವುದು-ಎಂದು ಮಹಾಸಭೆಯಲ್ಲಿಯೇ ಹೇಳಿದರೂ ಯಾರು ಕಿವಿಗೆ ಹಾಕಿಕೊಳ್ಳುವುದಿಲ್ಲ.

ಇಂದು ನೀವು ಮಾಂಸವನ್ನು ಭಕ್ಷಿಸಬಹುದು : ಸುರಾಪಾನಮಾಡ ಬಹುದು-ಎಂದು ಹೇಳಿದರೆ ಅದನ್ನು ಬೇಗ ಗ್ರಹಿಸುತ್ತಾರೆ.

ಅವರ ವಾಸನಾನುಗುಣವಾಗಿ ಧರ್ಮವ್ಯಾಖ್ಯೆಯನ್ನು ಮಾಡಿದರೆ ಒಪ್ಪಿ ಕೊಳ್ಳುತ್ತಾರೆ. ವಾಸನಾವಿರುದ್ಧವಾಗಿ ಏನನ್ನಾದರೂ ಹೇಳಿದರೆ ತಿರಸ್ಕರಿಸು ತ್ತಾರೆ.

ಜ್ಞಾನೀಪುರುಷರು ಮಾತ್ರ ನಿವೃತ್ತಿಮಾರ್ಗದಿಂದ ಪರಮಾತ್ಮಾನುಭವ ವನ್ನು ಹೊಂದುತ್ತಾರೆ. ಪಾರಮಾರ್ಥಿಕಬುದ್ಧಿರಹಿತರಾದವರ ಕಲ್ಯಾಣಕ್ಕಾಗಿ ಭಗವಂತನ ಲೀಲಾಗುಣಗಳನ್ನು ವರ್ಣನೆ ಮಾಡಿರಿ.

ಸ್ವಧರ್ಮಪರಿಪಾಲಕರಲ್ಲದವರೂ ಭಗವಚ್ಚರಣಾರವಿಂದಗಳನ್ನು ಭಜಿಸಿ ದರೆ ಅವರು ಅಮಂಗಳಭಾಗಿಗಳಾಗುವುದಿಲ್ಲ. ಭಗವದ್ಭಕ್ತಿರಹಿತರಾದವರು ಸ್ವಧರ್ಮಪಾಲನೆಯನ್ನು ಮಾಡುತ್ತಿದ್ದರೂ ಕಲ್ಯಾಣಭಾಗಿಗಳಾಗಲಾರರು.

ಕರ್ಮಜಾಲದಿಂದ ಮೇಲಕ್ಕೆತ್ತುವ, ಜನ್ಮ-ಮರಣಾದಿಗಳಿಂದ ಮುಕ್ತ ರನ್ನಾಗಿ ಮಾಡುವ ಶ್ರೇಷ್ಠವಾದ ಭಜನ-ಭಕ್ತಿಗಳನ್ನು ಅಳವಡಿಸಿಕೊಳ್ಳಬೇಕು.

ಪ್ರಪಂಚದಲ್ಲಿ ಹಣಕ್ಕೆ ಕೊರತೆಯಿಲ್ಲ. ಭೋಜನಕ್ಕೆ ಕೊರತೆಯಿಲ್ಲ. ಆದರೂ ವ್ಯಕ್ತಿಯು ದೈನ್ಯದಿಂದ ತಿಳಿದುಕೊಳ್ಳುತ್ತಾನೆ-'ಇದು ನನಗೆ ಸಿಕ್ಕುವು ದಿಲ್ಲ'-ಎಂದು ಸಾಮಾನ್ಯತಃ ಸುಖಪ್ರಾಪ್ತಿಗಾಗಿ ಮನುಷ್ಯನು ಪ್ರಯತ್ನಿಸು ತ್ತಾನೆ. ಅದನ್ನು ನಿಷೇಧಿಸಿದರೆ ಸಂಸಾರಿಗಳಿಗೆ ರುಚಿಸುವುದಿಲ್ಲ.

ಆದರೆ ಮನುಷ್ಯನು ಯೋಚಿಸಬೇಕು. ಸುಖವನ್ನು ಮಾತ್ರ ಬಯಸು ತ್ತಾನೆ. ದುಃಖವನ್ನು ಬಯಸುವುದೇ ಇಲ್ಲ. ಸುಖವು ಬರುವಂತೆಯೇ ದುಃಖವೂ ಬಂದೇಬರುತ್ತದೆ. ದುಃಖವನ್ನು ಅಪೇಕ್ಷಿಸದಿದ್ದರೂ ಅದರ ನಾಶ ಕ್ಕಾಗಿ ಪ್ರಯತ್ನಿಸುತ್ತಿದ್ದರೂ ಕರ್ಮಫಲಾನುಸಾರವಾಗಿ ದುಃಖವು ಬಂದೇ ಬರುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಬೇಡದ ದುಃಖವು ಬರುವಾಗ ಸುಖವೂ ಏಕೆ ಬರುವುದಿಲ್ಲ? ದುಃಖದಾಯಕನೇ ಸುಖದಾಯಕನಲ್ಲವೇ ?

ಆದರೆ ಜನರು ಪಿಷ್ಟಪೇಷಣಮಾಡುತ್ತಾರೆ, ಚರ್ವಿತಚರ್ವಣಮಾಡುತ್ತಾರೆ. ಸಿಕ್ಕುವ ಪದಾರ್ಥಕ್ಕೆ ಕೈಕಾಲು ಬಡಿದು - 'ನಾವು ಸಂಪಾದಿಸಿಬಿಟ್ಟೆವು' ಎನ್ನುತ್ತಾರೆ. ಹರಿಯುವ ಗಂಗಾನದಿಯನ್ನೇ ನೋಡುತ್ತಾ- 'ನಾವೇ ಗಂಗೆಯನ್ನು ಹರಿಯುವಂತೆ ಮಾಡಿದೆವು'-ಎನ್ನುತ್ತಾರೆ.

ಜಗತ್ತಿನಲ್ಲಿ ಕರ್ಮಧಾರಾ, ಸುಖ-ದುಃಖಧಾರಾ, ಪ್ರಕೃತಿಧಾರಾ, ಪ್ರಾರಬ್ಧಧಾರಾ, ಭಾಗವತಧಾರಾ-ಇವುಗಳು ಸಹಜರೂಪದಿಂದ ಪ್ರವಹಿಸುತ್ತಿವೆ.

ಮಹಾತ್ಮರು ಈ ವಿಚಾರವನ್ನು ಚೆನ್ನಾಗಿ ತಿಳಿದಿದ್ದಾರೆ.

ತಲ್ಲಭ್ಯತೇ ದುಃಖವದನ್ಯತಃ ಸುಖಮ್ ||೧೮||

ದುಃಖವು ಮತ್ತೊಬ್ಬರಿಂದ ಬರುವುದಾದರೆ ಸುಖವೂ ಮತ್ತೊಬ್ಬರಿಂದ ಬರುತ್ತದೆ. ಕಾಲಗತಿಯು ಮಹಾಗಂಭೀರವಾದುದು. ಮುಂದಿನ ಕ್ಷಣದಲ್ಲಿ ಏನಾಗುವುದೆಂಬುದನ್ನು ಯಾರೂ ತಿಳಿಯಲಾರರು. ಭಗವಂತನು ಮಾತ್ರ ಭವಿಷ್ಯದ ಗರ್ಭದಲ್ಲಿರುವುದನ್ನು ತಿಳಿಯಬಹುದು.

ಭಗವದ್ಭಕ್ತನು ಎಲ್ಲರಂತೆ ಸಂಸಾರಕ್ಕೆ ಪುನಃ ಮರಳುವುದಿಲ್ಲ. ಆತನಿಗೆ ಭಗವಚ್ಚರಣಾರವಿಂದಗಳ ಸೇವೆಯಲ್ಲಿಯೇ ಆನಂದವು ದೊರಕುವುದು. ಅದನ್ನು ಬಿಟ್ಟು ' ಅವನು ಏನನ್ನೂ ಅಪೇಕ್ಷಿಸುವುದಿಲ್ಲ. **'ರಸಗ್ರಹೋಯತಃ'** ಅವನು ರಸಗ್ರಾಹಿಯು.

ಭಗವಂತನೇ ವಿಶ್ವವ್ಯಾಪಿಯಾಗಿದ್ದಾನೆ. ಮಹಾತ್ಮರು ಹೇಳುವಂತೆ ಅಣು-ರೇಣು-ತೃಣ-ಕಾಷ್ಠವ್ಯಾಪಿಯುವನು. ಯಾರೊಡನೆಯೂ ರಾಗ-ದ್ವೇಷಗಳನ್ನು ತಾಳಬಾರದು.

"ಮಹರ್ಷಿಗಳೇ ! ನಿಮಗೆ ಇವೆಲ್ಲವೂ ತಿಳಿದೇ ಇದೆ.

ಪ್ರಾದೇಶಮಾತ್ರಂ ಭವತಃ ಪ್ರದರ್ಶಿತಮ್ ||೨೦||

ಸಂಕೇತಮಾತ್ರದಿಂದ ತಿಳಿಸಿದ್ದೇನಷ್ಟೆ. ನೀವು ಭಗವಂತನ ಕಲಾವತಾರಿಗಳು. ಸ್ವತಃ ಅಜನ್ಮಾ. ಆದರೂ ಜಗತ್ತಿನ ಕಲ್ಯಾಣಕ್ಕಾಗಿ ಜನ್ಮವನ್ನು ಸ್ವೀಕರಿಸಿರುವಿರಿ. ತಪಸ್ಸು-ಅಧ್ಯಯನ-ಯಜ್ಞ-ಯಾಗ-ಜ್ಞಾನ-ದಾನ ಇವು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳೆಲ್ಲದರ ಮುಖ್ಯಾರ್ಥವೆಂದರೆ : ಉತ್ತಮಶ್ಲೋಕಿಯಾದ ಭಗವಂತನ ಗುಣಾನುವಾದವನ್ನು ಮಾಡಬೇಕು. ಭಗವದ್ಗುಣಗಳು ಭಗವಂತನೊಡನೆ ನಮ್ಮನ್ನು ಬಂಧಿಸುತ್ತವೆ.

ಭಗವಂತನ ಸೌಶೀಲ್ಯ-ಸೌಂದರ್ಯ-ಮಾಧುರ್ಯ-ಔದಾರ್ಯ-ವಾತ್ಸಲ್ಯಾದಿ ಸದ್ಗುಣಗಳ ಅನುಚಿಂತನೆಯಿಂದ ನಮ್ಮ ಹೃದಯದಲ್ಲಿ ಭಗವದಾವಿರ್ಭಾವವಾಗುತ್ತದೆ.

ವಿದ್ವಾಂಸರು ಹೀಗೆ ಅಭಿಪ್ರಾಯಪಡುತ್ತಾರೆ : ಮನುಷ್ಯನ ತಪಸ್ಸು, ವೇದಾಧ್ಯಯನ, ಯಜ್ಞಾನುಷ್ಠಾನ, ಸ್ವಾಧ್ಯಾಯ, ಜ್ಞಾನ-ದಾನಾದಿಗಳಿಗೆ ಏಕಮಾತ್ರ ಮುಖ್ಯಪ್ರಯೋಜನವೆಂದರೆ ಪುಣ್ಯಕೀರ್ತಿಶ್ರೀಕೃಷ್ಣನ ಲೀಲಾ ಗುಣಗಳನ್ನು ವರ್ಣಿಸಬೇಕು.

ನಾರದರು ಮುಂದುವರಿದು ತಮ್ಮ ಉದಾಹರಣೆಯಿಂದ ಸತ್ಸಂಗದ ಮಹಿಮೆಯನ್ನು ಶ್ರುತಪಡಿಸುತ್ತಾರೆ :

"ಮಹರ್ಷಿಗಳೇ ! ನಾನು ಹಿಂದಿನ ಕಲ್ಪದಲ್ಲಿ ವೇದವಾದೀ ಬ್ರಾಹ್ಮಣರ ದಾಸಿಯ ಮಗನಾಗಿದ್ದೆನು. ಆ ದಾಸಿಯು ಬ್ರಾಹ್ಮಣಿಯಲ್ಲ. ಚಾತುರ್ಮಾಸ್ಯ ವ್ರತಾನುಷ್ಠಾನಕಾಲದಲ್ಲಿ ಅವರ ಸೇವೆಗೆ ನಾನು ನಿಯುಕ್ತನಾದೆನು. ನಾನು ಬಾಲಕನಾದರೂ ಚಂಚಲತೆಯನ್ನು ದೂರಮಾಡಿದ್ದೆನು. ಜಿತೇಂದ್ರಿಯನಾಗಿದ್ದೆನು. ಅವರ ಇಚ್ಛೆಗೆ ಅನುಗುಣವಾಗಿ ಆಜ್ಞಾಧಾರಕನಾಗಿ ಸೇವಿಸುತ್ತಿದ್ದೆನು. ನಾನು ಮಿತಭಾಷಿಯಾಗಿದ್ದೆನು."

ಸೇವಕರು ಯಾವಾಗಲೂ ಮಿತಭಾಷಿಗಳಾಗಿರಬೇಕು ಸೇವಕನು ಮಾತಿಗೆ ಮಾತು ಜೋಡಿಸಿದರೆ, ಮನೆಯಲ್ಲಿ ಹಾವು ಸೇರಿದರೆ, ಪತ್ನಿ ವ್ಯಭಿಚಾರಿಣಿಯಾದರೆ, ಮಿತ್ರನು ಅವಿಶ್ವಾಸಿಯಾದರೆ-ಜೀವನವು ದುರ್ಭರವಾಗುವುದು. ಮನೆಗೆ ಮೃತ್ಯುವು ಹೊಕ್ಕಂತೆ.

ನಾರದರು ಹೇಳುತ್ತಾರೆ-'ನಾನು ಮಿತಭಾಷಿಯಾಗಿ ಮನಃಪೂರ್ವಕ ಅವರ ಸೇವೆಯನ್ನು ಮಾಡಿದುದರ ಪರಿಣಾಮವಾಗಿ ನನ್ನ ಅಂತರಂಗವು ಶುದ್ಧವಾಯಿತು. ಅವರ ಹಾಗೆಯೇ ನಾನೂ ಭಜನ-ಕೀರ್ತನಾದಿಗಳಲ್ಲಿ ರತನಾಗಿರಬೇಕೆಂದು ಮನಸಾ ಯೋಚಿಸುತ್ತಿದ್ದೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ಪ್ರತಿನಿತ್ಯವೂ ಮನೋಹರವಾಗಿ ಭಗವಂತನ ಗುಣಕೀರ್ತನೆಗಳನ್ನು ಹಾಡುತ್ತಿದ್ದರು. ನಾನೂ ಶ್ರವಣಮಾಡಿ ಹಾಗೆಯೇ ಹಾಡತೊಡಗಿದೆನು. ಭಗವತ್ಪ್ರೀತಿಯು ಬೆಳೆಯಿತು. ಪ್ರಪಂಚವು ನಿಸ್ಸಾರವಾಗತೊಡಗಿತು

ಉಚ್ಛಿಷ್ಟಲೇಪಾನನುಮೋದಿತೋ ದ್ವಿಜೈಃ
ಸಕೃತ್ಸ್ಮ ಭುಂಜೇ ತದಪಾಸ್ತಕಿಲ್ಬಿಷಃ ॥೨೫॥

ಅವರ ಅನುಮತಿಯನ್ನು ಪಡೆದು ಪಾತ್ರೆಗಳಲ್ಲಿದ್ದ ಅವಶಿಷ್ಟಾನ್ನವನ್ನು ಒಮ್ಮೆ ಭುಂಜಿಸಿದೆನು. ಅದರಿಂದ ನಿರ್ಮಲಮನಸ್ಕನಾದೆನು. ಆಗ ನನಗೆ ಭಗವತ್ತತ್ತ್ವವು ಗೋಚರಿಸಿತು. ಆ ಪರಮಾತ್ಮಸ್ವರೂಪದಲ್ಲಿ ಬ್ರಹ್ಮಸ್ವರೂಪದಲ್ಲಿ ಈ ಸ್ಥೂಲ-ಸೂಕ್ಷ್ಮ-ಕಾರ್ಯ-ಕಾರಣಾತ್ಮಕಪ್ರಪಂಚದ ಸ್ವರೂಪವು ಗೋಚರವಾಯಿತು.

ಈ ರೀತಿ ನಾಲ್ಕು ತಿಂಗಳ ಕಾಲ ಮಹಾತ್ಮರ ಸತ್ಸಂಗ, ಭಗವನ್ನಾಮಸಂಕೀರ್ತನ-ಇವುಗಳಿಂದ ಅಮೋಘವಾದ ಭಕ್ತಿಯು ಹೃದಯದಲ್ಲಿ ಉಂಟಾಯಿತು. ಭಕ್ತಿಯ ಪ್ರಾಬಲ್ಯದಿಂದ ರಜಸ್ತಮೋಗುಣಗಳೂ ಪಾಪ-ತಾಪಗಳೂ ನಿವೃತ್ತವಾದುವು,

ತಸ್ಯೈವಂ ಮೇಽನುರಕ್ತಸ್ಯ ಪ್ರಶ್ರಿತಸ್ಯಹತೈನಸಃ ।
ಶ್ರದ್ಧಧಾನಸ್ಯ ಬಾಲಸ್ಯ ದಾಂತಸ್ಯಾನುಚರಸ್ಯ ಚ ॥೨೯॥

ಈ ಶ್ಲೋಕದಲ್ಲಿ ನಾರದರುಜ್ಞಾನೋಪದೇಶಕ್ಕೆ ಯಾರು ಯೋಗ್ಯರು ಎನ್ನುವುದನ್ನು ನಿರ್ದೇಶಿಸುತ್ತಾರೆ :

"ಗುರುಗಳಲ್ಲಿ ಅನುರಕ್ತನಾಗಿರಬೇಕು. ವಿನಯಶೀಲನಾಗಿರಬೇಕು. ನಿಷ್ಪಾಪಿಯಾಗಿಯೂ, ಶ್ರದ್ಧಾವಂತನಾಗಿಯೂ, ಇಂದ್ರಿಯಸಂಯಮಿಯಾಗಿಯೂ, ಶರೀರ-ವಾಕ್-ಮನಸ್ಸುಗಳಿಂದ ಗುರುಗಳ ಆಜ್ಞಾನುವರ್ತಿಯೂ ಆಗಿರಬೇಕು. ಇಂತಹ ನನಗೆ

ಅನ್ವಮೋಚನ್ ಗಮಿಷ್ಯಂತಃ ಕೃಪಯಾ ದೀನವತ್ಸಲಾಃ ।
ಜ್ಞಾನಂ ಗುಹ್ಯತಮಂ ಯತ್ತತ್ಸಾಕ್ಷಾದ್ಭಗವತೋದಿತಮ್ ॥೩೦॥

ದೀನವತ್ಸಲರಾದ ಆ ಮಹಾತ್ಮರು ಪ್ರಯಾಣಮಾಡುವಾಗ ದಯೆಯಿಟ್ಟು ಸಾಕ್ಷಾತ್ ಭಗವಂತನಿಂದಲೇ ಹೇಳಲ್ಪಟ್ಟಿದ್ದ ಗುಹ್ಯತಮವಾದ ಭಗವತ್ತತ್ತ್ವವನ್ನು ಉಪದೇಶಿಸಿದರು. ಅದರಿಂದ ನಾನು ಭಗವಂತನ ಮಾಯಾಪ್ರಭಾವವನ್ನು ತಿಳಿಯಲು ಸಮರ್ಥನಾದೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೋತೃಗಳೇ ? ಗಮನಿಸಿ-ಮಹಾತ್ಮರು ದೀನವತ್ಸಲರೆಂದು ಪ್ರಸಿದ್ಧ ರಾಗಿದ್ದಾರೆ. ಹಸುವಿಗೆ ಕರುವಿನಲ್ಲಿ ವಾತ್ಸಲ್ಯವಿರುವಂತೆ - ದೀನರ ಬಗೆಗೆ ಮಹಾತ್ಮರು ವಾತ್ಸಲ್ಯವುಳ್ಳವರು. ದೀನ-ಹೀನರನ್ನು ಕಂಡು ಹೆದರುವವರಿಗೆ ಹೆದರಿಸುವವರಿಗೆ ವಾತ್ಸಲ್ಯವೆಲ್ಲಿ ಬಂದೀತು ?

ತುಳಸೀದಾಸರು ಹೇಳುತ್ತಾರೆ :

ಪಾಮರನಿಸೋಪ್ರೀತಿ-ಶ್ರೀರಾಮನಿಗೆ ಪಾಮರರನ್ನು ಕಂಡರೆ ಬಹಳ ಪ್ರೀತಿಯಂತೆ.

ಕೇವಟನಿಾತ್ ರಹೇ, ಬಾನರಬಂಧುಬಡಾಈ - ಆ ಕೇವಟ= (ಗುಹ) ಯಾವ ಉತ್ಕೃಷ್ಟಜಾತಿಯವನು ? ಅವನು ಶ್ರೀರಾಮನ ಪ್ರಿಯ ಮಿತ್ರ. ವಾನರರು ಸ್ಫುರದ್ರೂಪಿಗಳೇನು ? ಅವರು ಶ್ರೀರಾಮನ ಬಂಧುಗಳು.

ಭಗವಂತನದು ಉದಾರಸ್ವಭಾವ. ಅವನ ಸ್ಮರಣೆಯಿಂದ ಪತಿತರಿಗೆ-ದೀನರಿಗೆ ಮಹಾಶ್ರಯವು ದೊರಕುತ್ತದೆ.

ಯಾವ ಧರ್ಮದಲ್ಲಿ, ಯಾವ ಸಮಾಜದಲ್ಲಿ, ಯಾವ ಸಾಧನಾಪದ್ಧತಿಯಲ್ಲಿ-ಪಾಪಿಗಳ ಉದ್ಧಾರದ ಮಾರ್ಗವಿಲ್ಲವೋ, ಪತಿತರನ್ನು ಮೇಲಕ್ಕೆತ್ತುವ ಉಪಾಯವಿಲ್ಲವೋ - ಆ ಧರ್ಮ, ಆ ಸಮಾಜ, ಆ ಸಾಧನೆ - ಎಲ್ಲವೂ ನಿರರ್ಥಕಗಳು.

ನಾರದರು ಹೇಳುತ್ತಾರೆ ; "ಮಹರ್ಷಿಗಳೇ ! ನಾನು ನಿಮಗೆ ಸರ್ವ ತಾಪತ್ರಯಗಳನ್ನೂ ನಿವಾರಿಸತಕ್ಕಂತಹ ಚಿಕಿತ್ಸೆಯನ್ನು ತಿಳಿಸುತ್ತಿದ್ದೇನೆ-ಯಾವುದೇ ಕರ್ಮವನ್ನು ಮಾಡಿದರೂ-ಬ್ರಹ್ಮಾರ್ಪಣಬುದ್ಧಿಯಿಂದ ಮಾಡಿ.

ರೋಗವು ಯಾವ ಕಾರಣದಿಂದ ಉಂಟಾಗುತ್ತದೆ ? ಆ ಕಾರಣವನ್ನು ಶುದ್ಧೀಕರಿಸಿದರೆ ರೋಗವುಂಟಾಗುವುದಿಲ್ಲ.

ಪ್ರಾಣಿಗಳಿಗೆ ಯಾವ ಪದಾರ್ಥದ ಸೇವನೆಯಿಂದ ರೋಗವುಂಟಾಗುವುದೋ ಅದನ್ನೇ ಚಿಕಿತ್ಸಾವಿಧಿಗೆ ಅನುಗುಣವಾಗಿ ಕೊಟ್ಟಲ್ಲಿ ರೋಗವು ಗುಣವಾಗುವುದಿಲ್ಲವೇ ? ಅದರಂತೆ ಯದ್ಯಪಿ ಕರ್ಮಗಳು ಮಾನವರನ್ನು ಜನನ-ಮರಣರೂಪವಾದ ಸಂಸಾರಚಕ್ರಕ್ಕೆತಳ್ಳುತ್ತವೆ. ತಥಾಪಿ ಅವುಗಳನ್ನೇ ಭಗವದರ್ಪಣಮಾಡಿಬಿಟ್ಟರೆ ಬಂಧನಿವೃತ್ತಿಯಾಗುವುದು.

Sri Vidyabharathi Book Centre, Sringeri

CC-0. In Public Domain. Digitized by eGangotri

ನೋಡಿ, ಗೀತೆಯಲ್ಲಿ ಹೇಳುತ್ತಾರೆ :

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥

ಭಗವಂತನ ಘೋಷಣೆಯು ಹೀಗಿದೆ :

ಅಪಿ ಚೇತ್ ಸುದುರಾಚಾರಃ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ

ಹೀಗೆ ಶಾಸ್ತ್ರವಿಹಿತಕರ್ಮಗಳನ್ನು ಭಗವಂತನ ಪ್ರಸನ್ನತೆಗಾಗಿ ಆಚರಿಸುವುದಾದರೆ ಪರಾಭಕ್ತಿಯುತವಾದ ಜ್ಞಾನವು ಪ್ರಾಪ್ತಿಯಾಗುತ್ತದೆ.

ಭಗವದರ್ಥಕರ್ಮಮಾರ್ಗದಲ್ಲಿ ಭಗವಂತನ ಗುಣ-ನಾಮ-ಸಂಕೀರ್ತನೆಗಳು ನಡೆಯುತ್ತವೆ.

ನಮೋ ಭಗವತೇ ತುಭ್ಯಂವಾಸುದೇವಾಯ ಧೀಮಹಿ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ॥

ವಾಸುದೇವ-ಪ್ರದ್ಯುಮ್ನ-ಅನಿರುದ್ಧ-ಸಂಕರ್ಷಣ-ಇವು . ಭಗವಂತನ ಚತುರ್ವ್ಯೂಹ.

ಈ ಚತುರ್ವ್ಯೂಹಾತ್ಮಕ-ಅಪ್ರಾಕೃತ-ಮಂತ್ರಮೂರ್ತಿ ಭಗವಾನ್ ಯಜ್ಞಪುರುಷರನನ್ನು ಪೂಜಿಸುವವರು ಸಮ್ಯಗ್ದರ್ಶಿಗಳಾಗುತ್ತಾರೆ.

ಋಷಿಗಳೇ ! ಭವವಾನ್ ಶ್ರೀಕೃಷ್ಣನು ನನಗೆ ಜ್ಞಾನೈಶ್ವರ್ಯಗಳನ್ನೂ ಭಕ್ತಿಪ್ರೇಮವನ್ನೂ ದಯಪಾಲಿಸಿದನು.

ನೀವು ಪೂರ್ಣಜ್ಞಾನಿಗಳು. ಭಗವಂತನ ಅಮರಕೀರ್ತಿಯನ್ನೂ, ಪ್ರೇಮಲೀಲೆಯನ್ನೂ ವರ್ಣಿಸಿರಿ. ಇವರಿಂದ ಮಹಾಜ್ಞಾನಿಗಳ ಜಿಜ್ಞಾಸೆಯೂ ಪೂರ್ಣ ವಾಗುತ್ತದೆ.

ಪದೇ-ಪದೇ ಯಾರು ದುಃಖಿಗಳಾಗುವರೋ ಅವರ ದುಃಖಶಾಂತಿಯು ಇದರಿಂದ ಆಗುತ್ತದೆ. ಉಪಾಯಾಂತರವಿಲ್ಲ.

5ನೆಯ ಅಧ್ಯಾಯವು ಮುಗಿಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೬

ಸೂತರು ಕಥೆಯನ್ನು ಮುಂದುವರಿಸುತ್ತಾ ಹೇಳುತ್ತಾರೆ ;

"ಶೌನಕಾದಿಗಳೇ ! ನಾರದರಿಂದ ಅವರ ಚರಿತ್ರೆಯನ್ನು ಕೇಳಿದ ಮಹಾತ್ಮರಾದ ವ್ಯಾಸರು ಪ್ರಶ್ನಿಸಿದರು : ಪೂಜ್ಯರೆ ! ಮಹಾತ್ಮರು ನಿಮಗೆ ಉಪದೇಶಿಸಿ ಹೊರಟುಹೋದಾಗ ನಿಮ್ಮ ಪಯಸ್ಸು ಬಹಳ ಚಿಕ್ಕದು. ಆವಾಗ ನೀವೇನು ಮಾಡಿದಿರಿ ? ಯಾವ ರೀತಿ ಜೀವನವನ್ನು ದೂಡಿದಿರಿ ? ನೀವು ಆ ಶರೀರವನ್ನು ತ್ಯಾಗಮಾಡಿದುದು ಹೇಗೆ ? ಅದರ ಸ್ಮರಣೆಯು ನಿಮಗಿನ್ನೂ ಅಳಿಯದೇ ಉಳಿದಿದೆಯಲ್ಲ ! ಕಾರಣವೇನು ?"

ನಾರದರು ಹೇಳಿದರು :

" ಮಹರ್ಷಿಗಳೇ ! ಮಹಾತ್ಮರು ನನಗೆ ಉಪದೇಶಿಸಿದಾಗ ನನಗಿನ್ನೂ ಚಿಕ್ಕ ವಯಸ್ಸು- ನಾನು ನನ್ನ ತಾಯಿಯ ಏಕಮಾತ್ರ ಪುತ್ರನಾಗಿದ್ದೆನು. ಅವಳಾದರೂ ಅಶಿಕ್ಷಿತೆ-ಮೂಢಳು. ಅದರ ಮೇಲೆ ದಾಸಿಯು. ನನ್ನನ್ನು ಬಹಳ ಪ್ರೀತಿಸುತ್ತಿದ್ದಳು.

ನನ್ನ ಯೋಗ-ಕ್ಷೇಮದ ಬಗೆಗೆ ಬಹಳ ಯೋಚಿಸುತ್ತಿದ್ದಳು. ಪರಾಧೀನತೆಯಲಿದ್ದುದರಿಂದ ಏನೂ ಮಾಡಲಾಗಲಿಲ್ಲ. ಅವಳ ಹೊರತು ನನಗೂ ಬೇರೆ ಸಹಾಯಕರಿರಲಿಲ್ಲ. ಮಾತೃಸ್ನೇಹವಶನಾಗಿ ಅವಳೊಡನೆ ಆ ಬ್ರಾಹ್ಮಣರ ಕೇರಿಯಲ್ಲಿಯೇ ಇದ್ದೆನು. ನನ್ನ ವಯಸ್ಸು ಐದು ವರ್ಷ. ದೇಶ-ಕಾಲ-ವಸ್ತು-ಜ್ಞಾನಶೂನ್ಯನಾಗಿದ್ದೆನು.

ಒಂದು ದಿವಸ ನನ್ನ ತಾಯಿಯು ಹಸುವನ್ನು ಕರೆಯಲು ರಾತ್ರಿಯಲ್ಲಿ ಮನೆಯಿಂದ ಹೊರಟಳು. ಕತ್ತಲೆಯಲ್ಲಿ ಒಂದು ಹಾವಿನ ಮೇಲೆ ಕಾಲಿಟ್ಟಳು, ಅದು ಕಚ್ಚಿತು. ಕೂಡಲೇ ಸತ್ತುಹೋದಳು.

ಆಗ ನನಗೆ ಭಗವಂತನು ಒಳ್ಳೆಯದನ್ನೇ ಮಾಡಿದನೆಂದು ತಿಳಿಯಿತು. ಅವನನ್ನೇ ಸ್ಮರಿಸುತ್ತಾ ಉತ್ತರದಿಕ್ಕಿಗೆ ಹೊರಟೆನು.

ಒಂದು ಕಡೆಯಲ್ಲಿ ಹೇಳುತ್ತಾರೆ ;

ಯತೋ ಯತೋ ನಿವರ್ತತೇ ವಿಮುಚ್ಯತೇ ತತಸ್ತತಃ"

Sri Vidyabharathi Book Centre, Sringeri

CC-O. In Public Domain. Digitized by eGangotri

ಕಳಚಿಕೊಳ್ಳುತ್ತಾ ಹೋಗುವುದು ಮಂಗಳದಾಯಕವು. ತಾಯಿಯಾದವಳು ಮಗುವಿಗೆ ಬಿಸಿನೀರಿನಿಂದ ಸ್ನಾನಮಾಡಿಸುತ್ತಾಳೆ. ಆದರೆ ಮಗುವು ತನಗೇನೋ ಅಪರಾಧಮಾಡುತ್ತಿದ್ದಾರೆಂದು ಅಳುತ್ತದೆ. ಅದಕ್ಕೆ ತಾಯಿಯು ವಾತ್ಸಲ್ಯವನ್ನು ಅರಿಯುವ ಸಾಮರ್ಥ್ಯವಿರುವುದಿಲ್ಲ.

ಅಂತೆಯೇ ಅಂತಃಕರಣವು ಮಲಿನವಾಗಿರುವ ಜೀವವನ್ನು ಭಗವಂತನು ನರಕಾಗ್ನಿಯಲ್ಲಿ ಹಾಕಿ ಶುದ್ಧೀಕರಿಸುತ್ತಾನೆ; ಜನರು ಲೋಹಾದಿಗಳನ್ನು ಬೆಂಕಿಗೆ ಹಾಕಿ ಶುದ್ಧೀಕರಿಸುವುದಿಲ್ಲವೇ ಹಾಗೆ.

ತಾಯಿಯು ಸರ್ಪಕಡಿದು ಸತ್ತು ಹೋದರೆ-ಅದರಲ್ಲಿ ಭಗವತ್ಕರುಣೆಯು ನಾರದರಿಗೆ ಗೋಚರಿಸುತ್ತಿದೆ. ಅವರೇ ಮುಂದುವರಿದು ಹೇಳುತ್ತಾರೆ;

ನಾನು ಹೀಗೆ ಅನೇಕ ಪಟ್ಟಣ-ಗ್ರಾಮ-ಹಳ್ಳಿ-ನದೀ-ಬೆಟ್ಟ-ಗುಡ್ಡ-ಎಲ್ಲವನ್ನೂ ದಾಟಿಕೊಂಡು ಹೋಗುತ್ತಿದ್ದೆನು. ಅನೇಕ ಚಿತ್ರ-ವಿಚಿತ್ರತೆಗಳನ್ನು ನೋಡುತ್ತಿದ್ದೆನು. ಅನೇಕವನಗಳು-ಮಹಾಮಹಾವೃಕ್ಷಗಳ ಕೊಂಬೆಗಳನ್ನು ಮದ್ದಾನೆಗಳು ಮುರಿದುಹಾಕಿದ್ದುವು. ಸರೋವರಗಳು ನಿರ್ಮಲೋದಕದಿಂದ ತುಂಬಿದ್ದುವು. ಕಮಲಗಳು ಅರಳಿದ್ದುವು. ಭ್ರಮರಗಳು ಝೇಂಕರಿಸುತ್ತಿದ್ದುವು. ಅವೆಲ್ಲವನ್ನೂ ನೋಡುತ್ತಾ ಮುಂದುವರಿಯುತ್ತಿದ್ದೆನು

ಒಂದು ಗೊಂಡಾರಣ್ಯ. ನನಗೆ ಬಹಳ ಹಸಿವಾಗಿತ್ತು. ಒಂದು ಸರೋವರದಲ್ಲಿ ಸ್ನಾನಮಾಡಿದೆನು. ನೀರು ಕುಡಿದೆನು. ಒಂದು ಅಶ್ವತ್ಥವೃಕ್ಷದಕೆಳಗೆ ಕುಳಿತು ಭಗವಂತನನ್ನು ಚಿಂತಿಸತೊಡಗಿದೆನು.

ಮಹಾತ್ಮರು ನನಗೆ ಬೋಧಿಸಿದ ರೀತಿಯಲ್ಲಿ ಭಗವಂತನನ್ನು ಧ್ಯಾನಿಸತೊಡಗಿದೆನು. ಭಕ್ತಿಭಾವದಿಂದ ಹೃದಯವು ತುಂಬಿಹೋಯಿತು. ಭಗವತ್ಪ್ರಾಪ್ತಿಯ ಉತ್ಕಟೇಚ್ಛೆಯಿಂದ ನೇತ್ರಗಳಲ್ಲಿ ಆನಂದಾಶ್ರುಗಳು ಉದುರಿದವು.

ನಿಧಾನವಾಗಿ ಹೃದಯದಲ್ಲಿ ಭಗವದಾವಿಷ್ಕಾರವಾಯಿತು. ಆಗ ಪ್ರೇಮಭಾವೋದ್ವೇಗದಿಂದ ರೋಮಾಂಚಿತನಾದೆನು. ಹೃದಯವು ತಾಪರಹಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಯಿತು. ಶಾಂತವಾಯಿತು. ಆ ಆನಂದಪ್ರವಾಹದಲ್ಲಿ ಈಜುತ್ತಿದ್ದ ನನಗೆ ಧ್ಯಾನ-ಧ್ಯೇಯವಸ್ತುಗಳ ಸ್ಮರಣೆಯೇ ಇರಲಿಲ್ಲ.

ಭಗವಂತನ ಆ ಅನಿರ್ವಚನೀಯರೂಪವು ಸರ್ವಶೋಕನಾಶಕವು. ಸೃಷ್ಟಿಯೆಲ್ಲವೂ ನಾನೇ ಆಗಿದ್ದೆನು. ಕೂಡಲೇ ಭಗವದ್ರೂಪವು ನನ್ನಿಂದ ದೂರವಾಯಿತು. ಅಮನಸ್ಕನಾಗಿ ಅಲೆದಾಡತೊಡಗಿದೆನು.

ಆ ಸ್ವರೂಪದರ್ಶನಕ್ಕಾಗಿ ಮತ್ತಷ್ಟು ನಾನು ಪ್ರಯತ್ನಿಸಿದೆನು. ಆದರೆ ಸಮಾಹಿತಚಿತ್ತನಾಗಿ ನಾನು ದರ್ಶನಮಾಡಲಾಗಲಿಲ್ಲ. ಅತೃಪ್ತನಂತೆ ಆತುರನಾದೆನು.

ಆಗ ಭಗವಂತನು ಅಶರೀರವಾಣಿಯಿಂದ ನುಡಿದನು :

ಹಂತಾಸ್ಮಿನ್ ಜನ್ಮನಿ ಭವಾನ್ ಮಾ ಮಾಂ ದ್ರಷ್ಟುಮಿಹಾರ್ಹತಿ ।
ಅವಿಪಕ್ವಕಷಾಯಾಣಾಂ ದುರ್ದರ್ಶೋಽಹಂ ಕುಯೋಗಿನಾಮ್ ॥

"ನೀನು ನನ್ನನ್ನು ಈ ಜನ್ಮದಲ್ಲಿ ನೋಡಲಾರೆ. ವಾಸನೆಗಳು ಶಾಂತವಾಗದ ಅರ್ಧಂಬರ್ಧ ಯೋಗಿಗಳಿಗೆ ನನ್ನ ದರ್ಶನಲಾಭವಿಲ್ಲ.

ಅವಿಪಕ್ವಕಷಾಯಾಣಾಂ = ಕಷಾಯವೆಂದರೆ ರಾಗ-ದ್ವೇಷಗಳು. ರಾಗ-ದ್ವೇಷಿಗಳು ಅಶಾಂತರಾಗಿರುತ್ತಾರೆ. ಯಾವುದೇ ಕಾರಣದಿಂದಲೂ ಹೃದಯವು ರಾಗ-ದ್ವೇಷಪೂರಿತವಾಗಲು ಅವಕಾಶವನ್ನು ಕೊಡಬಾರದು. ಅಂದರೆ ಹೃದಯವು ರಾಗ-ದ್ವೇಷಗಳಿಂದ ತುಂಬಿಕೊಂಡರೆ ಭಗವಂತನ ಸ್ವಚ್ಛಪ್ರಕಾಶವು ಅಲ್ಲಿ ಬೀಳಲಾರದು.

ಹಾಗಾದರೆ ಒಂದು ಸಾರಿಯೇಕೆ ಭಗವಂತನು ನಾರದರ ಹೃದಯದಲ್ಲಿ ದರ್ಶನವನ್ನು ಕೊಟ್ಟನು ?-ಎಂದರೆ ಹೇಳುತ್ತಾರೆ ;

ಸಕೃತ್ ಯದ್ದರ್ಶಿತಂ ರೂಪಮೇತತ್ಕಾಮಾಯ ತೇಽನಘ ।
ಮತ್ಕಾಮಃ ಶನಕೈಃ ಸಾಧು ಸರ್ವಾನ್ ಮುಂಚತಿ ಹೃಚ್ಛಯಾನ್ ॥

"ನಿನ್ನಲ್ಲಿ ನನ್ನದರ್ಶನಾಕಾಂಕ್ಷೆಯು ಜಾಗ್ರತವಾಗಲೆಂದು ಒಮ್ಮೆ ನನ್ನ ರೂಪವನ್ನು ತೋರಿಸಿದೆನು. ನನ್ನ ದರ್ಶನಾಕಾಂಕ್ಷೆಯಿಂದ ಸಾಧಕನು ಸರ್ವವಾಸನಾನಿರ್ಮುಕ್ತನಾಗುತ್ತಾನೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇವಲ ಅತ್ಯಲ್ಪಕಾಲ ನಡೆಸಿದ ಸಾಧು-ಸತ್ಪುರುಷರ ಸೇವೆಯಿಂದ ನಿನ್ನ ಚಿತ್ತವೃತ್ತಿಯು ನನ್ನಲ್ಲಿ ಸ್ಥಿರವಾಗಿದೆ. ನೀನು ಈ ನಿನ್ನ ಪ್ರಾಕೃತಮಲಿನ ಶರೀರವನ್ನು ತ್ಯಜಿಸಿದ ನಂತರ ನನ್ನ ಪಾರ್ಷದನಾಗುವೆ. ನನ್ನನ್ನು ಹೊಂದ ಬೇಕೆಂಬ ನಿನ್ನ ದೃಢನಿಶ್ಚಯವು ಎಂದಿಗೂ ಚ್ಯುತವಾಗುವುದಿಲ್ಲ.

ಸರ್ವಸೃಷ್ಟಿಯೂ ಪ್ರಳಯವಾದರೂ ನನ್ನ ದಯೆಯಿಂದ ನಿನ್ನ ಸ್ಮೃತಿಯು ಅಳಿಯುವುದಿಲ್ಲ.

ಹೀಗೆ ಭಗವಂತನು ಹೇಳಿದುದನ್ನು ನಾರದರು ಕೇಳಿ ಭಗವಂತನನ್ನು ಮನಸಾ ವಂದಿಸಿದರು. ಅದು ಮೊದಲುಗೊಂಡು ನಾರದರು ಭಗವಂತನ ಅತ್ಯಂತರಹಸ್ಯಮಯವಾದ ಮಧುರವಾದ ನಾಮ-ಲೀಲೆಗಳನ್ನು ಕೀರ್ತನ ಮಾಡತೊಡಗಿದರು.

ಮದ-ಮಾತ್ಸರ್ಯಗಳಿಂದ ಹೃದಯವು ಮುಕ್ತವಾಗಿತ್ತು. ಆನಂದದಿಂದ ಭಗವಂ ನನ್ನು ಸ್ಮರಿಸುತ್ತಾ ಸಂಚರಣಶೀಲರಾಗಿ ಕಾಲವನ್ನು ಕಳೆಯತೊಡ ಗಿದರು.

ನಾರದರು ಹೇಳುತ್ತಾರೆ ;-"ಮಹರ್ಷಿಗಳೇ ! ನನ್ನ ಹೃದಯವು ಕಾಲಾಂತರದಲ್ಲಿ ಭಗವತ್ಕೃಪೆಯಿಂದ ಶುದ್ಧವಾಯಿತು. ನಿರಾಸಕ್ತಿಯು ಬೆಳೆ ಯಿತು. ಕೃಷ್ಣಪರಾಯಣನಾದೆನು.

ಒಂದು ಸಮಯದಲ್ಲಿ ಮಿಂಚು ಹೊಳೆಯುವಂತೆ ನನ್ನ ಭೌತಿಕದೇಹವು ಬಿದ್ದುಹೋಯಿತು. ನಾರಾಯಣನಲ್ಲಿ ಸೇರಿದೆನು. ಸೃಷ್ಟಿಯಾದಾಗ ಭಗವ ದನುಗ್ರಹದಿಂದ ನಾರದನಾಗಿ ಬಂದೆನು. ನಾರಾಯಣನು ಕೃಪೆಯಿಂದ ತನ್ನ ವೀಣೆಯನ್ನು ಅನುಗ್ರಹಿಸಿ ಕೊಟ್ಟನು. ಅವನ ಲೀಲಾವಿಭೂತಿಗಳನ್ನು ಗಾನ ಮಾಡುತ್ತ ಸಂಚರಣಶೀಲನಾಗಿದ್ದೇನೆ."

ಗಾನದಲ್ಲಿ ನಾದಬ್ರಹ್ಮನಿದ್ದಾನೆ. ಸಂಗೀತವಿದ್ಯೆಯು ಸಾಮಾನ್ಯವಾದು ದ.ಲ್ಲ

ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳುತ್ತಾರೆ :

ವೀಣಾವಾದನತತ್ತ್ವಜ್ಞಃ ಸ್ವರಜಾತಿವಿಶಾರದಃ ।
ತಾಲಜ್ಞಶ್ಚಾಪ್ರಯಾಸೇನ ಮುಕ್ತಿಮಾರ್ಗಂ ನಿಯಚ್ಛತಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವೀಣಾವಾದನವಿಶಾರದನೂ, ಸ್ವರಜಾತಿಯ ಜ್ಞಾನವಿರುವವನೂ, ತಾಳಜ್ಞನೂ (ತಾರಪ್ರಣವಜ್ಞನು) ಪ್ರಯಾಸವಿಲ್ಲದೆಯೇ ಮುಕ್ತಿಮಾರ್ಗವನ್ನು ಹೊಂದುತ್ತಾನೆ.

ವೀಣೆಯ ಮೇಲೆ ಭಗವನ್ನಾಮಗಳನ್ನು ಆಲಾಪನೆಮಾಡುತ್ತಾ ಸಂಚರಿಸತೊಡಗಿದರೆ-ಪ್ರಪಂಚದ ಯಾವುದೇ ವಿಧದ ಜ್ಞಾನವೂ ಇರುವುದಿಲ್ಲ. ಆ ಸ್ಥಿತಿಯಲ್ಲಿ ಭಗವದ್ದರ್ಶನವಾಗುತ್ತದೆ.

ಭೋಗೇಚ್ಛೆಯಿಂದ ವ್ಯಾಕುಲರಾಗಿರುವವರಿಗೆ **ಹರಿಚರ್ಯಾನುವರ್ಣನಂ** – ಭಗವವಲ್ಲೀಲಾನುವರ್ಣನೆಯೇ ಶಾಂತಿದಾಯಕವಾದುದು. ಈ ಮಾರ್ಗದಲ್ಲಿ ಯೋಗಾದಿಗಳೂ ಫಲವನ್ನು ನೀಡಲಾರವು. ನಾರದರು ಹೇಳುತ್ತಾರೆ :

"ಮಹರ್ಷಿಗಳೇ ? ನೀವು ನಿಷ್ಪಾಪರು. ನೀವು ಕೇಳದಂತೆ ನನ್ನ ಜನ್ಮರಹಸ್ಯವನ್ನೂ, ಆತ್ಮತುಷ್ಟಿಯ ಉಪಾಯವನ್ನೂ ತಿಳಿಸಿದ್ದೇನೆ."

ಶ್ರೀಸೂತರು ಹೇಳುತ್ತಾರೆ ;-"ಶೌನಕಾದಿಗಳೇ ನಾರದರು ಹೀಗೆ ಹೇಳಿ ವ್ಯಾಸರಿಂದ ಅನುಮತಿಯನ್ನು ಪಡೆದು ವೀಣೆಯನ್ನು ಧ್ವನಿಗೈಯುತ್ತಾ ಯದೃಚ್ಛಾಗಾಮಿಗಳಾದರು.

ಅಹೋ ದೇವರ್ಷಿರ್ಧನ್ಯೋಽಯಂ ಯತ್ಕೀರ್ತಿಂ ಶಾರ್ಙ್ಗಧನ್ವನಃ ।
ಗಾಯನ್ ಮಾದ್ಯನ್ನಿದಂ ತಂತ್ರ್ಯಾ ರಮಯತ್ಯಾತುರಂ ಜಗತ್ ॥

ದೇವರ್ಷಿ ನಾರದರು ಧನ್ಯರು. ಭಗವಾನ್ ಶಾರ್ಙ್ಗಪಾಣಿಯ ಗುಣಗಾನವನ್ನು ಮಾಡುತ್ತಾ ಆನಂದಮಗ್ನರಾಗಿ ತ್ರಿತಾಪತಪ್ತವಾದ ಜಗತ್ತನ್ನೂ ಆನಂದಗೊಳಿಸುತ್ತಾರೆ."

6ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೭

ಶೌನಕರು ಸೂತರನ್ನು ಕೇಳುತ್ತಾರೆ :

"ಸರ್ವಶಕ್ತಿಮಾನ್ - ಭಗವಾನ್ ವ್ಯಾಸರು ನಾರದರು ಹೊರಟು ಹೋದಮೇಲೆ ಏನು ಮಾಡಿದರು ?"

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಸೂತರು ಹೇಳುತ್ತಾರೆ : "ಬ್ರಹ್ಮನದಿಯಾದ ಸರಸ್ವತೀನದಿಯ ಪಶ್ಚಿಮತಟದಲ್ಲಿ "ಶಮ್ಯಾಪ್ರಾಸ" ನಾಮಕ ಒಂದು ಆಶ್ರಮವಿದೆ. ಅಲ್ಲಿ ಋಷಿ-ಮುನಿಗಳು ಯಜ್ಞಾಚರಣೆಯನ್ನು ನಡೆಸುತ್ತಲೇ ಇರುತ್ತಾರೆ'

ಶಮ್ಯಾಪ್ರಾಸವೆಂದರೆ ಶಮವಂತಪುರುಷರು ವಾಸಮಾಡುವ ಸ್ಥಳ.

ಶಮ-ದಮಾದಿ ಸಂಪದ್ವಿಹೀನರು ಅಲ್ಲಿರಲಾರರು. ಯಜ್ಞೀಯ ಶಮೀ ವೃಕ್ಷಗಳೂ ಅಲ್ಲಿವೆ. ವಿಶೇಷವಾಗಿ ಬದರೀವೃಕ್ಷಗಳಿವೆ. ಬದರೀಫಲಗಳು ಋಷಿ-ಮುನಿಗಳ ಆಹಾರಕ್ಕೆ ಉಪಯೋಗವಾಗುತ್ತವೆ.

ಅಲ್ಲಿ ವ್ಯಾಸಾಶ್ರಮವಿದೆ. ವ್ಯಾಸರು ಶುದ್ಧಾಡಮನವನ್ನು ಮಾಡಿದರು. ಮನಸ್ಸು ಭಕ್ತಿಯೋಗದಿಂದ ಸಮಾಹಿತವಾಯಿತು. ಪರಮಾತ್ಮನನ್ನು ಸಂದರ್ಶಿಸಿದರು.

ಇಲ್ಲಿ ಮನಸ್ಸಿನ ಎರಡು ವೈಶಿಷ್ಟ್ಯಗಳನ್ನು ಹೇಳಿದ್ದಾರೆ : "ಪ್ರಣಿಹಿತೇಽಮಲೇ"

1. ಮನಸ್ಸು ಪ್ರಣಿಹಿತವಾಯಿತು. ಅಂದರೇನು ? ಏಕಾಗ್ರವಾಯಿತು. ತಿಜೋರಿಯಲ್ಲಿ ಹಣವನ್ನು ಭದ್ರಪಡಿಸುವಂತೆ ಮನಸ್ಸು ಭಗವದಾಕಾರವನ್ನು ಹೊಂದಿತು. ಸಮಾಧಿಸ್ಥವಾಯಿತು. ಚಾಂಚಲ್ಯರಹಿತವಾಯಿತು.

ಎರಡನೆಯ ವೈಶಿಷ್ಟ್ಯವೆಂದರೆ : **ಅಮಲೇ** - ಮನಸ್ಸಿನ ಅಮಲತೆಯೆಂದರೆ ನಿರ್ಮಲವಾಗಿರುವುದು, ಉಜ್ವಲವಾಗಿರುವುದು.

ಒಮ್ಮೊಮ್ಮೆ ಜಲಧಾರೆಯು ಸ್ಥಿರವಾಗಿದ್ದರೂ ನಿರ್ಮಲವಾಗಿರುವುದಿಲ್ಲ. ಮತ್ತೊಮ್ಮೆ ನಿರ್ಮಲವಾಗಿದ್ದರೂ ಸ್ಥಿರವಾಗಿರುವುದಿಲ್ಲ.

ವ್ಯಾಸರ ಮಾನಸಸರೋವರದಲ್ಲಿ ಚಂಚಲತಾರೂಪಿಗಳಾದ ತರಂಗಗಳೂ ಇಲ್ಲ, ವಾಸನಾರೂಪಿಯಾದ ಮಲಿನತೆಯೂ ಇಲ್ಲ.

ವ್ಯಾಸರು ಮಾನಸಸರೋವರದಲ್ಲಿ ಪ್ರತಿಬಿಂಬಿತವಾದ ಸ್ವಸ್ವರೂಪವನ್ನು ದರ್ಶನಮಾಡಿದರು. ಮಾಯೆಯನ್ನೂ ನೋಡಿದರು.

ಈ ಮಾಯೆಯಿಂದಲೇ ಜೀವರು ಮೋಹಿತರಾಗುತ್ತಾರೆ. ಅವಿದ್ಯಾ-ಮಾಯಾ-ಇವೆರಡರ ಸ್ವರೂಪವೂ ಬೇರೆ-ಬೇರೆ. ಅವಿದ್ಯೆಯು ಯಾರಲ್ಲಿರುತ್ತದೆಯೋ-ಅದು ಅವನನ್ನು ಮೋಹಿತನನ್ನಾಗಿ ಮಾಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಮಾಯೆಯಾದರೋ ತನ್ನನ್ನು ಯಾರು ನೋಡುವರೋ ಅವರನ್ನು ಮೋಹಿತರನ್ನಾಗಿ ಮಾಡುತ್ತದೆ. ಮಾಯೆಯು ಯಾರಲ್ಲಿರುವುದೋ ಅವರನ್ನು ಮೋಹಗೊಳಿಸುವುದಿಲ್ಲ.

ನೋಡಿ : ಮಾಯೆಯೆಂದರೆ ಇಂದ್ರಜಾಲ. ಅದು ಐಂದ್ರಜಾಲಿಕನನ್ನು ಮೋಹಗೊಳಿಸುವುದಿಲ್ಲ. ಯಾರು ಇಂದ್ರಜಾಲವನ್ನು ನೋಡುತ್ತಾರೋ ಅವರನ್ನು ಮೋಹಗೊಳಿಸುತ್ತದೆ.

ಹಾಗೆಯೇ ಅವಿದ್ಯಾ-ಅಜ್ಞಾನ-ಅವಿವೇಕಾದಿಗಳು ಯಾರಲ್ಲಿರುವುವೋ ಅವರನ್ನು ಮೋಹಗೊಳಿಸುತ್ತವೆ.

ಅವಿದ್ಯಾ = ಆಶ್ರಯವ್ಯಾಮೋಹಿಕಾ.

ಮಾಯಾ = ವಿಷಯವ್ಯಾಮೋಹಿಕಾ.

ಈ ಜೀವನು ಮಾಯಾಜಾಲದಲ್ಲಿ ಸಿಲುಕಿಕೊಂಡು ತನ್ನನ್ನು ತ್ರಿಗುಣಾತ್ಮಕನೆಂದು ತಿಳಿಯುತ್ತಾನೆ. ಒಂದು ಸಾರಿ ತನ್ನನ್ನು ಬಹಳ ಪುಣ್ಯಾತ್ಮನೆಂದೂ ತಿಳಿಯುತ್ತಾನೆ. ಸಮಾಧಿಸ್ಥನಾಗ ತ್ತಾನೆ - ಯೋಗಾನುಷ್ಠಾನರತನಾಗುತ್ತಾನೆ. ಆದರೆ ಇದೆಲ್ಲವೂ ಮಾಯೆಯೇ.

ಸರ್ವಾತ್ಮನಲ್ಲಿ ಸತ್ತ್ವರಜಸ್ತಮಾತ್ಮಕವಾದ ಎಷ್ಟು ವಿಶೇಷಣಗಳನ್ನು ಜೋಡಿಸುತ್ತಾನೆಯೋ ಅವೆಲ್ಲವೂ ಮಾಯೆಯೇ. ಮಾಯೆಯಿಂದ ಪರನು ಪರಮಾತ್ಮನು.

ಜೀವನು ಮಾಯಾದರ್ಶನದಿಂದ ಸುಖಿಯೂ-ದುಃಖಿಯೂ ಆಗುತ್ತಾನೆ. ಭಗವಂತನ ರಕ್ಷಣೆಯು ದೊರಕಿದರೆ ಜೀವನು ಮಾಯೆಯಿಂದ ಪಾರಾಗಬಹುದು.

ಅನರ್ಥೋಪಶಮಂ ಸಾಕ್ಷಾದ್ಭಕ್ತಿಯೋಗಮಧೋಕ್ಷಜೇ ।
ಲೋಕಸ್ಯಾಜಾನತೋ ವಿದ್ವಾಂಶ್ಚಕ್ರೇ ಸಾತ್ವತಸಂಹಿತಾಮ್ ॥

ಭಗವದ್ಭಕ್ತಿಯೋಗವು ಸರ್ವಾನರ್ಥಗಳ ನಿವೃತ್ತಿಗೂ ಸಾಧಕವಾಗಿರುವುದು. ಆದರೇನು ? ಸಾಂಸಾರಿಕರಿಗೆ ಇದು ಅರ್ಥವಾಗಿಲ್ಲ. ಅವರುಗಳಿಗೆ ಅರ್ಥವಾಗುವಂತೆ ಪಾರಮಹಂಸಿಕಭಾಗವತಸಂಹಿತೆಯನ್ನು ರಚಿಸಿದರು.

ಇದರ ವೈಶಿಷ್ಟ್ಯವೆಂದರೆ : ಇದಕ್ಕೆ ಯಾವ ಕರ್ಮಕಾಂಡದ ಅವಶ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಕತೆಯೂ ಇಲ್ಲ. ಹೀಗೆ ಕುಂಡರಚನೆಯಾಗಬೇಕು ; ಹೋಮದ್ರವ್ಯವು ಹೀಗಿರ ಬೇಕು ; ಈ ಪರಿಮಾಣದಲ್ಲಿ ಹೋಮವನ್ನು ಮಾಡಬೇಕು-ಇಂತಹ ನಿರ್ಬಂಧ ಗಳಾವುವೂ ಇಲ್ಲ. ಶ್ರವಣಮಾತ್ರದಿಂದ ಅನರ್ಥಗಳ ನಿವೃತ್ತಿಯಾಗುತ್ತದೆ. ಶ್ರೀಕೃಷ್ಣನ ಪ್ರೇಮಮಯೀಭಕ್ತಿಯು ಮೂಡಿ ಶೋಕ-ಮೋಹಾದಿಗಳು ದೂರವಾಗುತ್ತವೆ.

ಇದು ಭಾಗವತಶ್ರವಣದ ಪ್ರತ್ಯಕ್ಷಫಲ. ಕಥಾಶ್ರವಣವನ್ನು ಮಾಡಿ ದವರ ಸರ್ವವಿಧಸಂಕಟಗಳೂ ದೂರವಾಗುತ್ತವೆ. ಕಥಾಶ್ರವಣಕ್ಕೆ ಮನಸು ಸಜ್ಜಾಗಿಬಿಟ್ಟರೆ ಸಾಕು. ಸರ್ವದುಃಖನಿವೃತ್ತಿಯಾದಂತೆಯೇ. ಸರ್ವಕಲ್ಯಾಣ ಗಳ ಪ್ರಾಪ್ತಿಯಾಗುವುದು. ಭಗವತ್ಕಥಾಶ್ರವಣವು ಪ್ರತ್ಯಕ್ಷ-ಅಪರೋಕ್ಷ ಫಲದಾಯಕವಾಗಿದೆ.

ಅನಂತರ ಅವರು ತಮ್ಮ ರಚನೆಯನ್ನು ಪುನಃ ನಿರೀಕ್ಷಿಸಿದರು.

ವ್ಯಾಸರೇ ತಮ್ಮ ರಚನೆಯನ್ನು ಪುನರ್ನಿರೀಕ್ಷಿಸಿದರು-ಎಂದ ಮೇಲೆ ಯಾರೂ ಈ ವಿಷಯದಲ್ಲಿ ವೃಥಾಭಿಮಾನವನ್ನು ತಾಳಬಾರದು. ಅಭಿಮಾನ ವನ್ನು ತ್ಯಾಗಮಾಡಿ ಪುನರ್ನಿರೀಕ್ಷಣೆಮಾಡಬೇಕು.

ಅನಂತರ ವ್ಯಾಸರು ನಿವೃತ್ತಿಪರಾಯಣನಾದ ತನ್ನ ಪುತ್ರ ಶುಕನಿಗೆ ಈ ಭಾಗವತಸಂಹಿತೆಯನ್ನು ಭೋಧಿಸಿದರು.

ಹೀಗೆ ಸೂತರು ಹೇಳೋಣ. ಶೌನಕರು ಕೇಳುತ್ತಾರೆ.

"ಮಹಾತ್ಮರೇ ! ಶ್ರೀ ಶುಕದೇವರು ನಾವು ಕೇಳಿರುವ ಹಾಗೆ ನಿವೃತ್ತಿ ಪರಾಯಣರು. ಆತ್ಮಾರಾಮರು. ಅಂದ ಮೇಲೆ ಅವರು ಈ ಬೃಹದ್ಗ್ರಂಥ ವನ್ನು ಏತಕ್ಕಾಗಿ ಅಧ್ಯಯನಮಾಡಿದರು ?"

ಶ್ರೀ ಸೂತರು ಹೇಳುತ್ತಾರೆ;-"ಏಕೆಂದರೆ ; ಜ್ಞಾನಿಗಳು ಅವಿದ್ಯಾಗ್ರಂಥಿ ಭೇದಕರು. ಆತ್ಮಾರಾಮರು. ಭಗವಂತನಲ್ಲಿ ಅಹೈತುಕೀಭಕ್ತಿಯನ್ನು ಮಾಡು ತ್ತಾರೆ. ಭಗವದ್ಗುಣಗಳು ಅತಿಮಧುರಗಳು. ಎಲ್ಲರನ್ನೂ ತಮ್ಮ ಕಡೆಗೆ ಸೆಳೆ ಯುತ್ತವೆ. ಶ್ರೀಶುಕರು ಅತ್ಯಂತಭಗವದ್ಭಕ್ತಪ್ರಿಯರು. ಭಗವಾನ್ ವೇದ ವ್ಯಾಸರ ಪುತ್ರರು.

ಭಗವದ್ಗುಣಗಳಿಂದ ಆಕರ್ಷಿತರಾಗಿ ಈ ಬೃಹದ್ಗ್ರಂಥವನ್ನು ಅಧ್ಯಯನ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ಈಗ ರಾಜರ್ಷಿ ಪರೀಕ್ಷಿತನ ಜನ್ಮ-ಕರ್ಮಗಳನ್ನೂ, ಪಾಂಡವರ ಸ್ವರ್ಗಾರೋಹಣವನ್ನೂ ತಿಳಿಸುತ್ತೇನೆ. ಏಕೆಂದರೆ ಕೃಷ್ಣಕಥೋದಯಂ ಕೃಷ್ಣಸಂಬಂಧಿಗಳಾದ ಅನೇಕಕಥೆಗಳು ಇಲ್ಲಿಂದಲೇ ಪ್ರಾರಂಭವಾಗುತ್ತವೆ."

ಇಲ್ಲಿ ನಾವು ವಿಮರ್ಶಿಸಬೇಕು. ವ್ಯಾಸರು ಶುಕರಿಗೆ ಭಾಗವತಸಂಹಿತೆಯನ್ನು ಬೋಧಿಸಿದರೆಂದರೆ ಅರ್ಥವೇನು ?

ಅಧ್ಯಾತ್ಮಕದೃಷ್ಟಿಯಿಂದ ವ್ಯಾಸರೂ ಶುಕರೂ ಒಬ್ಬರೇ. ವ್ಯಾಸರೇ ಶುಕರು. ಶುಕರೇ ವ್ಯಾಸರು. ಇಬ್ಬರೂ ನಾರಾಯಣರೇ.

ವ್ಯಾಸಾಯ ವಿಷ್ಣು ರೂಪಾಯ-ವಿಷ್ಣುವೇ ವ್ಯಾಸಾಭಿಧಾನವನ್ನು ಪಡೆದನು. ಅನಂತರ ಅವನೇ ಶುಕಾಭಿಧಾನವನ್ನೂ ಪಡೆದನು.

ನಾರಾಯಣನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಅವತರಿಸಿದನು.

ಅಂತಃಕರಣದ ನಾಲ್ಕು-ರೂಪಗಳು ಮನೋಬುದ್ಧ್ಯಹಂಕಾರಚಿತ್ತಗಳು. ನಾರದನು ಮನೋರೂಪೀ ಪುತ್ರನು. ವಾಗ್ರೂಪೀಪುತ್ರನು ವ್ಯಾಸ. ಶಬ್ದರೂಪೀ ಪುತ್ರನು ಶುಕ. ಇಲ್ಲಿ ಶಬ್ದರೂಪೀ ಶುಕನಿಗೆ ಪ್ರಾಧಾನ್ಯವು. ಶುಕನು ಶಬ್ದಾತ್ಮಕನು.

ಸರ್ವಶ್ರೇಷ್ಠನಾದ ಅಧಿಕಾರಿಯಾದ ರಾಜಾ ಪರೀಕ್ಷಿತನಿಗೆ ಶುಕನು ಭಾಗವತವನ್ನು ಬೋಧಿಸಿದನು.

ಪರೀಕ್ಷಿತನು ಗರ್ಭಾವಸ್ಥೆಯಲ್ಲಿಯೇ ಪರಮಾತ್ಮನ ರಕ್ಷಣೆಯಲ್ಲಿ ನಿರ್ಭಯನಾಗಿದ್ದವನು. ಬ್ರಹ್ಮಾಸ್ತ್ರದಿಂದಲೂ ಭಯಪಡದವನು. ಅಂತಹವನಿಗೆ ತತ್ತ್ವಜ್ಞಾನವನ್ನು ಶುಕರುಉಪದೇಶಿಸಿದರು.

ಮಹಾತ್ಮರೂ, ಶ್ರೋತ್ರಿಯರೂ, ಬ್ರಹ್ಮನಿಷ್ಠರೂ ಆದ ಅವರ ಮೇಲೆ ಈಶ್ವರನ ನಿಯಮನವೂ ಇರುವುದಿಲ್ಲ. ಏಕೆಂದರೆ ; ಅವರು ಅಂತಃಕರಣ ರಹಿತರು. ಉಪಾಧಿರಹಿತರು.

ಶುಕರು ಆತ್ಮಾರಾಮರು. ಆರಾಮವು ಮನೆಯಲ್ಲಿಲ್ಲ ; ಅಲ್ಲೂ ಇಲ್ಲ ; ಇಲ್ಲೂ ಇಲ್ಲ. ಆತ್ಮನಲ್ಲಿಯೇ ಇದೆ. ಅವರೇಕೆ ಭಾಗವತಸಂಹಿತೆಯನ್ನು ಅಧ್ಯಯನಮಾಡಿದರೆಂದರೆ-ಯದ್ಯಪಿ ಅವರು ಆತ್ಮಾರಾಮರೂ, ಚಿಂತನಾಸಕ್ತರೂ, ನಿರ್ಗ್ರಂಥಿಗಳೂ. ಆದರೂ **'ಅಹೈತುಕೀಂ ಭಕ್ತಿ ಕುರ್ವನ್ತಿ'**

Sri Vidyabharathi Book Centre, Sringeri

CC-O. In Public Domain. Digitized by eGangotri

ಣವುಗಾಗಿ ಅಲ್ಲ. ಲೋಕಕ್ಕಾಗಿ ಪರಮಾತ್ಮನಲ್ಲಿ ಅಹೈತುಕೀಭಕ್ತಿಯನ್ನು ಮಾಡುತ್ತಾರೆ. ಉದ್ದೇಶವೇನೂ ಇಲ್ಲ. ಭಗವದ್ಗುಣಗಳ ವೈಶಿಷ್ಟ್ಯವೇ ಇದು. ಸಾಧು-ಸತ್ಪುರುಷರೂ, ಅವಧೂತರೂ, ನಿರ್ಗ್ರಂಥಿಗಳೂ ಪರಮಾತ್ಮ ನಲ್ಲಿ ಭಕ್ತಿಯಿಡದೇ ಇರಲಾರರು.

'ಇತ್ಥಂ ಭೂತಗುಣೋ ಹರಿಃ'

ಶ್ರೀಚೈತನ್ಯಪ್ರಭುಗಳು **'ನಿಗ್ರಂಥಾ ಅಪಿ'** ಎನ್ನುವುದಕ್ಕೆ ಹೀಗೆ ಅರ್ಥವನ್ನು ಮಾಡುತ್ತಾರೆ-ಯಾರಲ್ಲಿ ಶಿಖಾ-ಯಜ್ಞೋಪವೀತಾದಿ, ಕಾಮ-ಕ್ರೋಧಗಳಾದಿಯಾಗಿ ಯಾವುದೇ ವಿಧವಾದ ಗ್ರಂಥಿಯೂ ಇಲ್ಲವೋ ಅವನು **'ನಿರ್ಗ್ರಂಥಿ'**

ಹೀಗೂ ಅರ್ಥವನ್ನು ಮಾಡುತ್ತಾರೆ :

ಯಾರು ಅವಧೂತರೋ ಅವಿದ್ಯಾನಿವೃತ್ತಿಯನ್ನು ಹೊಂದಿರುವರೋ, ಯಾರಿಗೆ ಗ್ರಂಥದ ಆವಶ್ಯಕತೆಯೇ ಇಲ್ಲವೋಅವರು ನಿರ್ಗ್ರಂಥಿಗಳು.

ಇಂತಹ ಮಹಾತ್ಮರೇಕೆ ಭಗವತ್ಸೇವೆಯನ್ನು ಮಾಡುತ್ತಾರೆಂದರೆ-ಮಾಡುವುದರಲ್ಲಿ ಕಾಮನೆಯಿದ್ದರೆ ಅದು ವೈಯಕ್ತಿಕವಾಗುತ್ತದೆ. ನಿಷ್ಕಾಮನೆಯಿದ್ದರೆ ಸರ್ವಹಿತವಾಗುತ್ತದೆ.

ಭಗವದ್ಗುಣಗಳಿಂದ ಎಲ್ಲರೂ ಮೋಹಿತರಾಗುತ್ತಾರೆ. ಶ್ರವಣಮಾಡಿದ ವಿಧರ್ಮಿಗಳ ಹೃದಯಗಳಲ್ಲಿಯೂ ಭಕ್ತಿಯ ಅಲೆಗಳು ಏಳುತ್ತವೆ.

ಶ್ರೀಶುಕದೇವರು ಭಗವಂತನ ಗುಣಾನುವಾದದಿಂದ ಮೋಹಿತರಾಗಿ ಭಾಗವತವನ್ನ ಅಧ್ಯಯನ ಮಾಡಿದರು.

ಪರೀಕ್ಷಿತನ ಜನ್ಮ ಕರ್ಮಗಳ ವರ್ಣನೆಯಿಂದಲೇ ಶ್ರೀಕೃಷ್ಣನ ಕಥೆಗಳು ಪ್ರಾರಂಭವಾಗುತ್ತವೆ. **'ಕೃಷ್ಣ ಕಥೋಪಚಯಂ'**

-ಸೂತರು ಆಖ್ಯಾನವನ್ನು ಪ್ರಾರಂಭಿಸುತ್ತಾರೆ-

ಮಹಾಭಾರತಯುದ್ಧದಲ್ಲಿ ಉಭಯಪಕ್ಷಗಳ ವೀರರೂ ವೀರಗತಿಯನ್ನು ಹೊಂದಿದ್ದರು. ಭೀಮಸೇನನ ಗದಾಪ್ರಹಾರದಿಂದ ದುರ್ಯೋಧನನ ಊರು ಭಂಗವಾಗಿದ್ದಿತು.

ಆಗ ಸ್ವಾಮಿಹಿತದೃಷ್ಟಿಯಿಂದ ಅಶ್ವತ್ಥಾಮನು ನಿದ್ರಿಸುತ್ತಿದ್ದ ಉಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಂಡವರ ತಲೆಗಳನ್ನು ತಂದು ದುರ್ಯೋಧನನಿಗೆ ಒಪ್ಪಿಸಿದನು. ಆದರಿಂದ ದುರ್ಯೋಧನನು ಸಂತುಷ್ಟನಾಗಲಿಲ್ಲ. ಆ ಹೇಯಕೃತ್ಯವನ್ನು ಖಂಡಿಸಿದನು. ಬಾಲಕರ ತಾಯಿ ದ್ರೌಪದಿಯು ಅತ್ಯಂತದುಃಖಿತೆಯಾದಳು. ಕಣ್ಣುಗಳಿಂದ ಧಾರಾಕಾರವಾಗಿ ದುಃಖಾಶ್ರುಗಳು ಉದುರಿದುವು.

ಆಗ ಅರ್ಜುನನು ಅವಳನ್ನು ಸಮಾಧಾನಪಡಿಸುತ್ತಾ ಪ್ರತಿಜ್ಞಾಬದ್ಧನಾಗಿ ಹೇಳಿದನು.

ತಥಾ ಶುಚಸ್ತೇ ಪ್ರಮೃಜಾಮಿ ಭದ್ರೇ
ಯದ್ಬ್ರಹ್ಮಬಂಧೋಃ ಶಿರ ಆತತಾಯಿನಃ ।
ಗಾಂಡೀವಮುಕ್ತೈರ್ವಿಶಿಖೈರುಪಾಹರೇ
ತ್ವಾಕ್ರಮ್ಯ ಯತ್ಸ್ನಾಸ್ಯಸಿ ದಗ್ಧಪುತ್ರಾ ॥

ಆತತಾಯಿಗಳು ಆರು ವಿಧರಾಗಿರುತ್ತಾರೆ. ಬೆಂಕಿಯಿಡುವವನು, ವಿಷ ನೀಡುವವನು, ಜನಗಳನ್ನು ತೊಂದರೆಪಡಿಸಲು ಶಸ್ತ್ರವನ್ನು ಧರಿಸುವವನು, ಧನವನ್ನು ಲೂಟಿಮಾಡುವವನು, ಪರರ ಸ್ವತ್ತನ್ನೂ-ಪರರಸ್ತ್ರೀಯರನ್ನೂ ಅಪಹರಿಸುವವನು.

ಅರ್ಜುನನು ಹೇಳುತ್ತಾನೆ-'ಆ ಆತತಾಯಿಯ ಶಿರಸ್ಸನ್ನು ಗಾಂಡೀವ ಮುಕ್ತಬಾಣಗಳಿಂದ ಕತ್ತರಿಸಿ ನಿನ್ನ ಮುಂದೆ ಇಡುತ್ತೇನೆ. ನೀನು ಪುತ್ರರನ್ನು ಸಂಸ್ಕರಿಸಿ ಅವನ ತಲೆಯನ್ನು ತುಳಿದು ಸ್ನಾನಮಾಡುವೆಯಂತೆ.'

ಹೀಗೆ ಪ್ರಿಯೆಯನ್ನು ಸಾಂತ್ವನಗೊಳಿಸಿದ ಅರ್ಜುನನು ಭಗವಾನ್ ಶ್ರೀಕೃಷ್ಣನ ಸಲಹೆಯಂತೆ ಅವನನ್ನು ಸಾರಥಿಯನ್ನಾಗಿ ಮಾಡಿಕೊಂಡು ಕವಚಧಾರಿಯಾಗಿ ಭಯಂಕರವಾದ ಗಾಂಡೀವಧನುಸ್ಸನ್ನು ಧರಿಸಿ ರಥಾರೂಢನಾಗಿ ಅಶ್ವತ್ಥಾಮನನ್ನು ಹಿಂಬಾಲಿಸಿದನು.

ಶಿಶುಹತ್ಯೆಯಿಂದ ಉದ್ವಿಗ್ನನಾದ ಅಶ್ವತ್ಥಾಮನು ತನ್ನನ್ನು ಅನುಸರಿಸಿ ಬರುತ್ತಿರುವ ಅರ್ಜುನನನ್ನು ನೋಡಿ ಪ್ರಾಣಭಯದಿಂದ-ರುದ್ರಭಯದಿಂದ ಓಡುವ ಸೂರ್ಯನಂತೆ-ಓಡತೊಡಗಿದನು.

ಅರ್ಜುನನಿಂದ ಪಾರಾಗುವ ಸಾಧ್ಯತೆಯು ತೋರಲಿಲ್ಲ. ನಿರುಪಾಯನಾಗಿ ಬ್ರಹ್ಮಾಸ್ತ್ರವನ್ನು ತುಡುಕಿದನು. ಅದನ್ನು ಹಿಂದಿರುಗಿಸಿಕೊಳ್ಳುವ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಧಿಯು ತಿಳಿಯದಿದ್ದರೂ ಆಪತ್ಕಾಲವೆಂದರಿತು ಅಸ್ತ್ರವನ್ನು ಪ್ರಯೋಗಿಸಿಬಿಟ್ಟನು.

ಮಹಾಜ್ವಾಲೆಯನ್ನು ಉಗುಳುತ್ತಾ ಅಸ್ತ್ರವು ತನ್ನ ಕಡೆಗೆ ಬರುತ್ತಿರುವುದನ್ನು ಅರಿತ ಅರ್ಜುನನು ಕೃಷ್ಣನನ್ನು ಪ್ರಾರ್ಥಿಸಿದನು :

ಕೃಷ್ಣ ಕೃಷ್ಣ ಮಹಾಬಾಹೋ ಭಕ್ತಾನಾಮಭಯಂಕರ ।
ತ್ವಮೇಕೋ ದಹ್ಯಮಾನಾನಾಂ ಅಪವರ್ಗೋಽಸಿ ಸಂಸೃತೇಃ ॥

"ಕೃಷ್ಣ! ನೀನು ಅನಂತಶಕ್ತಿಸಂಪನ್ನನು. ಭಕ್ತರುಗಳಿಗೆ ಅಭಯದಾಯಕನು. ಸಂಸಾರದಾವಾನಲತಪ್ತಜೀವಿಗಳಿಗೆ ಏಕಮಾತ್ರಾಶ್ರಯನು ನೀನೇ.

ನೀನಾದರೋ ಪ್ರಕೃತಿಯಿಂದ ಪರನು. ಆದಿಪುರುಷನು. ಸಾಕ್ಷಾತ್ ಪರಮೇಶ್ವರನು. ನಿನ್ನ ಚಿಚ್ಛಕ್ತಿಯಿಂದ ತ್ರಿಗುಣಮಯೀಮಾಯೆಯನ್ನು ದೂರೀಕರಿಸಿ ನಿನ್ನ ಅದ್ವಿತೀಯವಾದ ಸ್ವಸ್ವರೂಪಸ್ಥಿತಿಯಲ್ಲಿರುವೆ. ನಿನ್ನ ಪ್ರಭಾವದಿಂದ ಮಾಯಾಮೋಹಿತಜೀವರು ಕಲ್ಯಾಣಭಾಗಿಗಳಾಗುತ್ತಾರೆ. ಭೂಭಾರವನ್ನು ಇಳುಹಿ ಭಕ್ತಜನರನ್ನು ಸಂರಕ್ಷಿಸುವುದಕ್ಕಾಗಿ ನೀನು ಅವತರಿಸಿರುವೆ. ಈ ಮಹಾಜ್ವಾಲೆಯು ಎಲ್ಲಿಂದ ಬರುತ್ತಿದೆ ? ಇದರಿಂದ ಪಾರಾಗುವುದು. ಹೇಗೆ ?"

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ :

"ಅರ್ಜುನ ! ಅಶ್ವತ್ಥಾಮನು ಪ್ರಯೋಗಿಸಿರುವ ಬ್ರಹ್ಮಾಸ್ತ್ರವಿದು. ಪ್ರಾಣಸಂಕಟವು ಒದಗಲಾಗಿ ಅವನು ಇದನ್ನು ಪ್ರಯೋಗಿಸಿದ್ದಾನೆ. ಆದರೆ ಅವನಿಗೆ ಉಪಸಂಹರಿಸಿಕೊಳ್ಳಲು ತಿಳಿದಿಲ್ಲ. ಇನ್ನಾವ ಅಸ್ತ್ರವೂ ಅದನ್ನು ನಿಗ್ರಹಿಸುವ ಶಕ್ತಿಯನ್ನು ಹೊಂದಿಲ್ಲ. ನೀನು ಎಲ್ಲ ವಿಧದ ಶಸ್ತ್ರಾಸ್ತ್ರವಿದ್ಯೆಯನ್ನೂ ಅರಿತಿರುವೆ. ಬ್ರಹಾಸ್ತ್ರವನ್ನೇ ಪ್ರಯೋಗಿಸಿ ಇದರ ಪ್ರಚಂಡ ಜ್ವಾಲೆಯನ್ನು ಆರಿಸು "

ವೀರದಮನದಲ್ಲಿ ಶ್ರೇಷ್ಠನಾದ, ಅರ್ಜುನನು ಶ್ರೀಕೃಷ್ಣನ ಬೋಧೆಗೆ ಅನುಗುಣವಾಗಿ ಶುದ್ಧಾಚಮನವನ್ನು ಮಾಡಿದರು. ಭಗವಂತನನ್ನು ಸ್ಮರಿಸಿದನು. ಬ್ರಹ್ಮಾಸ್ತ್ರದ ನಿವಾರಣೆಗಾಗಿ ಬ್ರಹ್ಮಾಸ್ತ್ರವನ್ನೇ ಹೂಡಿದನು.

ಎರಡು ಬ್ರಹ್ಮಾಸ್ತ್ರಗಳ ತೇಜಸ್ಸುಗಳೂ ಪ್ರಳಯಕಾಲದ ಸೂರ್ಯಾಗ್ನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಂತೆ ಪರಸ್ಪರವಾಗಿ ಘರ್ಷಿಸುತ್ತಾ ನಾಲ್ಕು ಕಡೆಗಳಿಗೂ ಜ್ವಾಲೆಯನ್ನು ಉಗುಳುತ್ತಾ ಹೋಗುತ್ತಿದ್ದುವು.

ಆ ಅಸ್ತ್ರಜ್ವಾಲೆಗಳಿಂದ ಪ್ರಜೆಗಳು ತತ್ತರಿಸಿದರು. ಪ್ರಳಯಕಾಲದ ಸಾಂವರ್ತಕಾಗ್ನಿಯ ಪ್ರಕೋಪವೆಂದು ತಿಳಿದರು. ಅನಂತರ ಶ್ರೀಕೃಷ್ಣನ ಸಲಹೆಗೆ ಅನುಗುಣವಾಗಿ ಅರ್ಜುನನು ಎರಡೂ ಅಸ್ತ್ರಗಳನ್ನೂ ಉಪಸಂಹರಿಸಿದನು. ಕೋಪದಿಂದ ಅವನ ಕಣ್ಣುಗಳು ಕಿಡಿಗಳನ್ನು ಉಗುಳುತ್ತಿದ್ದುವು. ನೆಗೆದು ಅಶ್ವತ್ಥಾಮನನ್ನು ಹಿಡಿದನು. ಪಶುವನ್ನು ಹಗ್ಗದಿಂದ ಬಿಗಿಯುವಂತೆ ಅವನನ್ನು ಬಿಗಿದು ಕಟ್ಟಿದನು. ಶಿಬಿರದ ಕಡೆಗೆ ಹೊರಟ ಅರ್ಜುನನೊಡನೆ ಕೃಷ್ಣನು ಹೇಳಿದನು :

ಮೈನಂ ಪಾರ್ಥಾರ್ಹಸಿ ತ್ರಾತುಂ ಬ್ರಹ್ಮಬಂಧುಮಿಮಂ ಜಹಿ ।
ಯೋಽಸಾವನಾಗಸಃ ಸುಪ್ತಾನವಧೀನ್ನಿಶಿ ಬಾಲಕಾನ್ ॥

"ಅರ್ಜುನ ; ಈ ಬ್ರಾಹ್ಮಣಾಧಮನನ್ನು ಬಿಡಬೇಡ. ಇವನು ರಾತ್ರಿ ಮಲಗಿದ್ದ ನಿರಪರಾಧಿಗಳಾದ ಬಾಲಕರನ್ನು ಕೊಂದಿದ್ದಾನೆ. ಯಾವ ವಿವೇಕಶಾಲಿಯೂ ಸಹ :

ಮತ್ತಂ ಪ್ರಮತ್ತಮುನ್ಮತ್ತಂ ಸುಪ್ತಂ ಬಾಲಂ ಸ್ತ್ರಿಯಂ ಜಡಮ್ ।
ಪ್ರಪನ್ನಂ ವಿರಥಂ ಭೀತಂ ನ ರಿಪುಂ ಹಂತಿ ಧರ್ಮವಿತ್

ಅಸಾವಧಾನಿಯನ್ನೂ, ಮದಿಸಿರುವವನನ್ನೂ, ಹುಚ್ಚನನ್ನೂ ಬಾಲಕನನ್ನೂ, ಸ್ತ್ರೀಯನ್ನೂ, ವಿವೇಕಜ್ಞಾನಶೂನ್ಯನನ್ನೂ, ಶರಣಾಗತನನ್ನೂ ರಥಹೀನನನ್ನೂ, ಭಯಭೀತನಾದ ಶತ್ರುವನ್ನೂ-ಕೊಲ್ಲಬಾರದು.

ಯಾವ ಕ್ರೂರಿಯು ಪರರನ್ನು ಹಿಂಸಿಸಿ ತಾನು ಬದುಕಿರಬೇಕೆನ್ನುವನೋ ಅವನನ್ನು ನಿಗ್ರಹಿಸುವುದೇ ಅವನಿಗೂ ಕಲ್ಯಾಣಕಾರಕವು ಏಕೆಂದರೆ : ಅವನು ಪುನಃ ಪುನಃ ಅಂತಹ ಪಾಪಕಾರ್ಯಗಳನ್ನು ಎಸಗುತ್ತಲೆ ಇರುವನು. ಅದರಿಂದ ನರಕವಾಸಿಯಾಗುವನು. ಅಲ್ಲದೇ ನೀನು ದ್ರೌಪದಿಯ ಮುಂದೆ ನನ್ನ ಸಮಕ್ಷದಲ್ಲಿ ಪ್ರತಿಜ್ಞೆಯನ್ನು ಮಾಡಿರುವೆ :

ಆಹರಿಷ್ಯೇ ಶಿರಸ್ತಸ್ಯ ಯಸ್ತೇ ಮಾನಿನಿ ಪುತ್ರಹಾ ।

Sri Vidyabharathi Book Centre, Sringeri

CC-O. In Public Domain. Digitized by eGangotri

'ನಿನ್ನ ಪುತ್ರರನ್ನು ವಧಿಸಿರುವವನ ತಲೆಯನ್ನು ತಂದು ನಿನಗೆ ಒಪ್ಪಿಸುತ್ತೇನೆ.'

ಈ ಪಾಪೀ ಕುಲಕಳಂಕಿ ಆತತಾಯಿಯು ನಿನ್ನ ಪುತ್ರನನ್ನು ವಧಿಸಿದ್ದಾನೆ. ಹಾಗೂ ತನ್ನ ಸ್ವಾಮಿಯಾದ ದುರ್ಯೋಧನನಿಗೂ ದುಃಖವನ್ನುಂಟು ಮಾಡಿದ್ದಾನೆ. ಆದರಿಂದ ಇವನನ್ನು ನೀನು ಕೊಲ್ಲುವುದು ಧರ್ಮವಾಗಿದೆ."

ಕೃಷ್ಣನಿಂದ ಹೀಗೆ ಪ್ರೇರಣೆಯಾದರೂ ಅರ್ಜುನನು ಗುರುಪುತ್ರನನ್ನು ವಧಿಸಲು ಮನಸ್ಸು ಮಾಡಲಿಲ್ಲ. ಅವನ ಹೃದಯವು ಉದಾರವಾದುದು. ಯದ್ಯಪಿ ಅವನು ತನ್ನ ಪುತ್ರರನ್ನು ಕೊಂದಿದ್ದರೂ ತಾನೂ ಗುರುಪುತ್ರನ ವಧೆಗೆ ಮನಸ್ಸು ಕೊಡಲಿಲ್ಲ.

ಅರ್ಜುನನು ಕೃಷ್ಣ-ಅಶ್ವತ್ಥಾಮರೊಡನೆ ದ್ರೌಪದಿಯಲ್ಲಿಗೆ ಹೋದನು. ಅವಳಿಗೆ ಅಶ್ವತ್ಥಾಮನನ್ನು ಒಪ್ಪಿಸಿದನು. ದ್ರೌಪದಿಯು ಪಶುವಿನಂತೆ ಬಂಧಿತನಾಗಿರುವ ಅಶ್ವತ್ಥಾಮನನ್ನು ನೋಡಿದಳು. ಹೇಯಕೃತ್ಯವನ್ನೆಸಗಿದುದರಿಂದ ಮುಖವು ಕೆಳಕ್ಕೆ ಬಿದ್ದುಹೋಗಿದೆ. ತನಗೆ ಇಷ್ಟೊಂದು ದೊಡ್ಡ ಅಪಕಾರವನ್ನು ಮಾಡಿರುವ ಗುರುಪುತ್ರನಸ್ಥಿತಿಯನ್ನು ನೋಡಿ ದ್ರೌಪದಿಯು ಕೋಮಲ ಹೃದಯವು ಕರಗಿಹೋಯಿತು. ಗುರುಪುತ್ರನನ್ನು ಆ ಸ್ಥಿತಿಯಲ್ಲಿಯೂ ನಮಸ್ಕರಿಸಿದಳು. ಆ ದೃಶ್ಯವನ್ನುನೋಡಲಾರದೇ ದ್ರೌಪದಿಯು ಹೇಳಿದಳು.

ಮುಚ್ಯತಾಂ ಮುಚ್ಯತಾಮೇಷಃ ಬ್ರಾಹ್ಮಣೋ ನಿತರಾಂ ಗುರುಃ ।

"ಬಿಟ್ಟು ಬಿಡಿ. ಬಿಟ್ಟು ಬಿಡಿ. ಇವರು ನಮ್ಮಿಂದ ಪೂಜಿಸಲ್ಪಡುವ ಬ್ರಾಹ್ಮಣರು. ಇವರ ಪೂಜ್ಯಜನಕರಾದ ಆಚಾರ್ಯರಿಂದ ಸರಹಸ್ಯ ಧನುರ್ವೇಧವನ್ನು ಅಭ್ಯಾಸಮಾಡಿದ್ದೀರಿ. ಇವರ ತಾಯಿ ಕೃಪಿಯು ಪುತ್ರ ವ್ಯಾಮೋಹದಿಂದಲೇ ಪತಿಯನ್ನನುಸರಿಸಲಿಲ್ಲ. ಆರ್ಯಪುತ್ರ ! ನೀವು ಯಾರನ್ನು ನಿತ್ಯವೂ ಪೂಜಿಸಬೇಕೋ, ವಂದಿಸಬೇಕೋ - ಅಂತಹ ಗುರು ಪತ್ನಿಗೆ ದುಃಖವನ್ನುಂಟುಮಾಡುವುದು ತರವಲ್ಲ. ನಾನು ಪುತ್ರಮರಣ ವ್ಯಥೆಯಿಂದ ತಪ್ತಳಾಗುತ್ತಿರುವುದೇ ಸಾಕು. ಇವಳ ತಾಯಿ ಗೌತಮಿಯೂ ಹಾಗೆ ದುಃಖತಪ್ತಳಾಗುವುದು ಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯೈಃ ಕೋಪಿತಂ ಬ್ರಹ್ಮಕುಲಂ ರಾಜನ್ಯೈರಜಿತಾತ್ಮಭಿಃ ।
ತತ್ಕುಲಂ ಪ್ರದಹತ್ಯಾಶು ಸಾನುಬಂಧಂ ಶುಚಾರ್ಪಿತಮ್ ॥

ಜಿತೇಂದ್ರಿಯರಲ್ಲದ ರಾಜರಿಂದ ಕೋಪಗೊಳಿಸಲ್ಪಟ್ಟ, ದುಃಖಕ್ಕೆ ಗುರಿಯಾದ ಬ್ರಾಹ್ಮಣಕುಲವು-ರಾಜರ ಕುಲವನ್ನು ಪರಿವಾರಸಹಿತವಾಗಿ ಸುಟ್ಟು ಬಿಡುತ್ತದೆ.

ದ್ರೌಪದಿಯ ವಿಚಾರಗಳು ನ್ಯಾಯ-ಧರ್ಮಗಳಿಗೆ ಅನುಗುಣವಾಗಿದ್ದುವು. ಕರುಣಾ-ಸಮತಾಪೂರ್ಣಗಳಾಗಿದ್ದವು. ಲೇಶಮಾತ್ರವೂ ಕಪಟವಿರಲಿಲ್ಲ. ಯುಧಿಷ್ಠಿರನಿಗೂ ಒಪ್ಪಿಗೆಯಾದುವು. ಲೇಶಮಾತ್ರವೂ ಕಪಟವಿರಲಿಲ್ಲ. ಯುಧಿಷ್ಠಿರನಿಗೂಒಪ್ಪಿಗೆಯಾದುವು. ಅಲ್ಲಿದ್ದ ನಕುಲ, ಸಹದೇವ, ಸಾತ್ಯಕಿ, ಅರ್ಜುನ-ಎಲ್ಲರಿಗೂ ಒಪ್ಪಿಗೆಯಾದುವು. ಕೃಷ್ಣನೂ ತಲೆದೂಗಿದನು. ಆದರೆ ಭೀಮನಿಗೆ ತಡೆಯಲಿಲ್ಲ. ಅವನನ್ನು ಕೊಲ್ಲುವುದೇ ನ್ಯಾಯವೆಂದು ಹಟಮಾಡಿದನು.

ಶ್ರೀಕೃಷ್ಣನು ದ್ರೌಪದಿಯ ಹಾಗೂ ಭೀಮನ ಭಾವನೆಗಳನ್ನು ಗ್ರಹಿಸಿದನು. ಅರ್ಜುನನನ್ನು ನೋಡುತ್ತಾ ಹೇಳಿದನು :

ಬ್ರಹ್ಮ ಬಂಧುರ್ನ ಹಂತವ್ಯಃ ಆತತಾಯೀ ವಧಾರ್ಹಣಃ ।
ಮಯೈವೋಭಯಮಾಮ್ನಾತಂ ಪರಿಪಾಹ್ಯನು ಶಾಸನಮ್ ॥

"ಬ್ರಾಹ್ಮಣನು ಪತಿತನಾದರೂ ವಧಾರ್ಹನಲ್ಲ. ಆತತಾಯಿಯು ಬ್ರಾಹ್ಮಣನಾದರೂ ವಧಾರ್ಹನು. ಈ ಎರಡು ವಿಚಾರಗಳನ್ನೂ ನಾನೇ ಹೇಳಿದ್ದೇನೆ. ಈ ಎರಡನ್ನೂ ಪರಿಪಾಲಿಸು. ಹಾಗೂ ದ್ರೌಪದಿ-ಭೀಮಸೇನರೂ ಸಂತುಷ್ಟರಾಗಲಿ.'

ಅರ್ಜುನನು ಭಗವಂತನ ಆಶಯವನ್ನು ಗ್ರಹಿಸಿದನು. ತನ್ನ ಕತ್ತಿಯಿಂದ ಅಶ್ವತ್ಥಾಮನ ತಲೆಯಲ್ಲಿದ್ದ ಮಣಿಯನ್ನು ಕೂದಲುಗಳೊಡನೆ ತೆಗೆದುಬಿಟ್ಟನು.

ಬಾಲಕರ ಹತ್ಯೆಯಿಂದ ಮೊದಲೇ ಅಶ್ವತ್ಥಾಮನು ಶ್ರೀಹೀನನಾಗಿದ್ದನು. ಈಗಂತೂ ಇನ್ನೂ ಕಳೆಗುಂದಿದನು. ಅರ್ಜುನನು ಅವನನ್ನು ಬಂಧಮುಕ್ತನನ್ನಾಗಿ ಮಾಡಿ ಶಿಬಿರದಿಂದ ಓಡಿಸಿಬಿಟ್ಟನು.

ವಪನಂ ದ್ರವಿಣಾದಾನಂ ಸ್ಥಾನಾನ್ನಿರ್ಯಾಪಣಂ ತಥಾ ।
ಏಷ ಹಿ ಬ್ರಹ್ಮಬಂಧೂನಾಂ ವಧೋನಾನ್ಯೋऽಸ್ತಿ ದೈಹಿಕಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣವಧೆಯೆಂದರೆ-ಮುಂಡನ, ಧನಾಪಹರಣ, ಸ್ಥಾನಚ್ಯುತಿ. ಇವುಗಳಿಂದ ಬ್ರಾಹ್ಮಣಾಧಮರ ವಧೆಯಾಗುತ್ತದೆ. ಶರೀರವಧೆಯು ಬ್ರಾಹ್ಮಣರಿಗೆ ಹೇಳಿಲ್ಲ.

ಪುತ್ರಮರಣದಿಂದ ದ್ರೌಪದಿಯೂ-ಪಾಂಡವರೂ ಶೋಕಾತುರರಾಗಿದ್ದರು. ಅವರು ಸತ್ತವರ ಅಂತ್ಯಕ್ರಿಯೆಗಳನ್ನು ನಡೆಸಿದರು.

7ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೮

ಅನಂತರ ಪಾಂಡವರು ಯುದ್ಧದಲ್ಲಿ ಮಡಿದ ಸ್ವಜನರ ಅಂತ್ಯೇಷ್ಟಿಕ್ರಿಯೆಗಳನ್ನು ನಡೆಸಲು ಶ್ರೀಕೃಷ್ಣನೊಡನೆ ಸ್ತ್ರೀಯರನ್ನು ಮುಂದುಮಾಡಿಕೊಂಡು ಗಂಗಾತಟಕ್ಕೆ ಹೋದರು.

ಅಲ್ಲಿ ಮೃತರಾದ ಬಂದು-ಬಾಂಧವರಿಗೆ ತರ್ಪಣಾದಿಗಳನ್ನು ಕೊಟ್ಟರು. ಹಾಗೂ ಅವರ ಗುಣಗಳನ್ನು ಸ್ಮರಿಸಿಕೊಂಡು ದುಃಖಪಟ್ಟರು.

ಭಗವಂತನ ಪಾದಸ್ಪರ್ಶದಿಂದ ಪವಿತ್ರವಾದ ಗಂಗಾಜಲದಲ್ಲಿ ಎಲ್ಲರೂ ಸ್ನಾನಮಾಡಿದರು.

ಯಧಿಷ್ಠಿರಮಹಾರಾಜನು ತನ್ನ ಸಹೋದರರೊಡನೆ ಹಾಗೂ ಧೃತರಾಷ್ಟ್ರ-ಗಾಂಧಾರಿ-ಕುಂತೀ-ದ್ರೌಪದೀ ಎಲ್ಲರೂ ಮೃತಸ್ವಜನರನ್ನು ಕುರಿತು ದುಃಖಿಸಿದರು.

ಭೂತೇಷು ಕಾಲಸ್ಯ ಗತಿಂ ದರ್ಶಯನ್ನಪ್ರತಿಕ್ರಿಯಾಮ್ ||೪||

'ಸಂಸಾರದ ಎಲ್ಲ ಪ್ರಾಣಿಗಳೂ ಕಾಲಾಧೀನವು. ಯಾರನ್ನೂ ಮರಣದಿಂದ ತಪ್ಪಿಸಲಾಗುವುದಿಲ್ಲ.'

ಭಗವಾನ್ ಕೃಷ್ಣನು ಧೌಮ್ಯಾದಿ ಮುನಿಗಳೊಡನೆ ಎಲ್ಲರನ್ನೂ ಸಮಾಧಾನಪಡಿಸಿದನು.

ಹೀಗೆ ಅಜಾತಶತ್ರುವಾದ ಯುಧಿಷ್ಠಿರಮಹಾರಾಜನಿಗೆ ಧೂರ್ತರಿಂದ ಅಪಹೃತವಾದ ಅವನ ರಾಜ್ಯವನ್ನು ಕೊಡಿಸಿಕೊಟ್ಟನು. ಆ ಧೂರ್ತರು ದ್ರೌಪದಿಯ ಕೇಶಪಾಶಗಳ ಸಂಪರ್ಕದಿಂದಲೇ ಹತಶ್ರೀಕರಾಗಿದ್ದರು. ಅದರಿಂದಲೇ ಸುಖವಾಗಿ ಯುದ್ಧದಲ್ಲಿ ನಿಗ್ರಹಿಸಲ್ಪಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಕೃಷ್ಣನು ಧರ್ಮರಾಜನಿಂದ ಉತ್ತಮೋತ್ತಮರೀತಿಯಲ್ಲಿ ಮೂರು ಅಶ್ವಮೇಧಯಾಗಗಳನ್ನು ಮಾಡಿಸಿದನು.

ಶತಾಶ್ವಮೇಧಯಾಜಿಯಾದ ದೇವೇಂದ್ರನ ಯಶಸ್ಸಿನಂತೆ ಧರ್ಮರಾಜನ ಯಶಸ್ಸೂ ಜಗತ್ತಿನಲ್ಲೆಲ್ಲಾ ಪ್ರಸರಿಸಿತು. ಅವನ ಯಜ್ಞಗಳಲ್ಲಿ ಉತ್ತಮೋತ್ತಮವಾದ ಸಾಮಗ್ರಿಗಳು ಉಪಯೋಗಿಸಲ್ಪಟ್ಟಿದ್ದುವು. ಪೌರೋಹಿತ್ಯವು ನಿರ್ದುಷ್ಟವಾಗಿದ್ದಿತು.

ಇಷ್ಟಾದ ಮೇಲೆ ಶ್ರೀಕೃಷ್ಣನು ಅಲ್ಲಿಂದ ಹೊರಡುವ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಪಾಂಡವರಿಗೂ ತಿಳಿಸಿ ವ್ಯಾಸಾದಿ ಬ್ರಾಹ್ಮಣರನ್ನೂ ಸತ್ಕರಿಸಿದನು. ಅವರುಗಳೂ ಶಕ್ತಿಮೀರಿ ಭಗವಂತನನ್ನು ಸನ್ಮಾನಿಸಿದರು. ಅನಂತರ ಸಾತ್ಯಕಿ-ಉದ್ಧವರೊಡನೆ ದ್ವಾರಕೆಗೆ ಹೋಗಲು ಶ್ರೀಕೃಷ್ಣನು ರಥಾರೂಢನಾದನು. ಆಗ ಭಯವಿಹ್ವಲಳಾದ ಉತ್ತರೆಯು ಅವರಲ್ಲಿಗೆ ಓಡೋಡಿ ಬರುತ್ತಾಳೆ.

ಪಾಹಿ ಪಾಹಿ ಮಹಾಯೋಗಿನ್ ದೇವ ದೇವ ಜಗತ್ಪತೇ ।
ನಾನ್ಯಂ ತ್ವದಭಯಂ ಪಶ್ಯೇ ಯತ್ರ ಮೃತ್ಯುಃ ಪರಸ್ಪರಮ್ ॥೯॥

"ದೇವಾಧಿದೇವನೇ ! ಜಗದೀಶ್ವರನೇ ! ನೀನು ಮಹಾಯೋಗೇಶ್ವರನು. ನೀನು ನನ್ನನ್ನು ಉದ್ಧರಿಸು. ನಿನ್ನ ಹೊರತು ನನ್ನನ್ನು ರಕ್ಷಿಸುವವರು ಯಾರೂ ಇಲ್ಲವು. ಏಕೆಂದರೆ **ಯತ್ರ ಮೃತ್ಯುಃ ಪರಸ್ಪರಂ**-ಇಲ್ಲಿ ಎಲ್ಲರೂ ಪರಸ್ಪರ ಒಬ್ಬರ ಮೃತ್ಯುವಿಗೆ ಒಬ್ಬರು ಕಾರಣರಾಗುತ್ತಿದ್ದಾರೆ.

ಅಭಿದ್ರವತಿ ಮಾಮೀಶ ಶರಸ್ತಪ್ತಾಯಸೋ ವಿಭೋ ।
ಕಾಮಂ ದಹತು ಮಾಂ ನಾಥ ಮಾ ಮೇ ಗರ್ಭೋನಿಪಾತ್ಯತಾಮ್ ॥

ಪ್ರಭೋ! ನೀನು ಸರ್ವಶಕ್ತಿಮಂತನು. ಈ ಲೋಹದ ಬಾಣವು ಸುಡುತ್ತಾ ನನ್ನಲ್ಲಿಗೆ ಬರುತ್ತಿದೆ. ಸ್ವಾಮಿನ್ ! ಇದು ನನ್ನನ್ನು ಬೇಕಾದರೆ ಸುಟ್ಟುಬಿಡಲಿ. ಆದರೆ ನನ್ನ ಗರ್ಭವು ನಷ್ಟವಾಗದಿರಲಿ. ಭಗವನ್ ! ದಯೆಯಿಡು."

ಅಶ್ವತ್ಥಾಮನು ಪಾಂಡವರ ವಂಶವನ್ನು ನಿರ್ಬೀಜವನ್ನಾಗಿ ಮಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದಕ್ಕೋಸ್ಕರ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ್ದಾನೆ ಎಂದು ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣನು ಕೂಡಲೆ ತಿಳಿದುಕೊಂಡನು.

ಆ ಸಮಯದಲ್ಲಿ ಪಾಂಡವರ ಕಡೆಗೂ ಐದು ಬಾಣಗಳು ಬರುತ್ತಿದ್ದುವು. ಅವರೂ ಅಸ್ತ್ರಸನ್ನದ್ಧರಾದರು. ಭಕ್ತಪರಾಧೀನನಾದ ಶ್ರೀಕೃಷ್ಣನು ಅಮೋಘವಾದ ಸುದರ್ಶನಚಕ್ರದಿಂದ ಅವರುಗಳನ್ನು ರಕ್ಷಿಸಿದನು.

ಅಂತಸ್ಥಃ ಸರ್ವಭೂತಾನಾಂ ಆತ್ಮಾಯೋಗೇಶ್ವರೋ ಹರಿಃ ।

ಸರ್ವಪ್ರಾಣಿಗಳ ಹೃದಯಾಂತರಾಳದಲ್ಲಿ ವಿರಾಜಮಾನನಾಗಿರುವ ಆತ್ಮಸ್ವರೂಪೀ ಶ್ರೀಕೃಷ್ಣನು ಪಾಂಡವರ ವಂಶಾಭಿವೃದ್ಧಿಗಾಗಿ ಉತ್ತರೆಯ ಗರ್ಭವನ್ನು ಮಾಯಾಕವಚದಿಂದ ಮುಚ್ಚಿಬಿಟ್ಟನು.

ಬ್ರಹ್ಮಾಸ್ತ್ರವೇನೋ ಅಮೋಘವಾದುದೇ. ಆದನ್ನು ನಿವಾರಿಸಲು ಉಪಾಯಾಂತರವೂ ಇಲ್ಲ. ಆದರೂ ಭಗವಾನ್ ಕೃಷ್ಣನ ತೇಜಸ್ಸಿನ ಮುಂದೆ ಆ ಅಸ್ತ್ರವು ಶಾಂತವಾಯಿತು.

ಇದೇನೂ ದೊಡ್ಡ ಆಶ್ಚರ್ಯವಲ್ಲ. ಭಗವಂತನಾದರೋ ಸರ್ವಾಶ್ಚರ್ಯಮಯನು. ಅವನುತನ್ನದೇ ಆದ ಮಾಯಾಶಕ್ತಿಯಿಂದ ತಾನೇ ಅಜನ್ಮನಾದರೂ ಸಂಸಾರದ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ನಡೆಸುತ್ತಾನೆ.

ಭಗವಂತನು ಯಾವಾಗಲೂ ಭಕ್ತರ ಉದ್ಧಾರಕ್ಕಾಗಿ ಸಿದ್ಧನಾಗಿಯೇ ಇದ್ದಾನೆ. ಆದರೂ ಅವನು-ರಕ್ಷಾಪೇಕ್ಷಾಮುಪೇಕ್ಷತೇ-ಅವನು ಆಪೇಕ್ಷಿಸುವುದು ಇಷ್ಟೆ, ಭಕ್ತರು ನನ್ನನ್ನು ಕೂಗಲಿ. ನಾನು ಅವರನ್ನು ರಕ್ಷಿಸುತ್ತೇನೆ.

ಭಗವಂತನು ಎಲ್ಲರನ್ನೂ ರಕ್ಷಿಸುತ್ತಾನೆ. ಯಾರನ್ನೂ ರಕ್ಷಿಸುವುದಿಲ್ಲ. ಅವನ ನಿಯಮವಿಷ್ಟೆ-ಯಾರು ನನ್ನಿಂದ ರಕ್ಷಣೆಯನ್ನು ಬಯಸುವರೋ ಅವರನ್ನು ರಕ್ಷಿಸುತ್ತೇನೆ :

ಮಹಾತ್ಮರು ಹೇಳುತ್ತಾರೆ.

ಸಂತು ನಾಮ ಭುವನೇಷು ದೇವತಾಃ
ಯಾಸ್ತಪೋಭಿರತಿದೂರದರ್ಶನಾಃ ।
ಭಾತಿ ಗರ್ಭಶಿಶುರಕ್ಷಣೇಽಪ್ಯಲಂ
ಯತ್ಕೃಪಾ ತು ನಿರತಾ ಸ ಮೇ ಗತಿಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗತ್ತಿನಲ್ಲಿ ದೇವಿ-ದೇವತೆಗಳ ಸಂಖ್ಯೆಯು ಅಪಾರವಾಗಿದೆ. ಎಷ್ಟು ಕಾಲ ತಪಸ್ಸುಮಾಡಿದರೂ ಪ್ರಸನ್ನರಾಗುವುದೇ ಇಲ್ಲ. ಆದರೆ ಒಬ್ಬ ದೇವ ನಿದ್ದಾನೆ. ಅವನು ಒಂದು ಗರ್ಭಸ್ಥಶಿಶುವಿನ ರಕ್ಷಣೆಗಾಗಿಯೂ ಜಾಗ್ರತ ನಾಗಿರುತ್ತಾನೆ. ಅವನ ಕೃಪೆಯಿಂದ ಪರೀಕ್ಷಿತನ ರಕ್ಷಣೆಯಾಯಿತು.

ಭಗವಂತನು ಹೊರಟನು. ಆಗ ಕುಂತಿಯು ಮಕ್ಕಳು ಹಾಗೂ ಸೊಸೆ ದ್ರೌಪದಿಯೊಡನೆ ಬಂದು ಕೃಷ್ಣನ ಪಾದಕಮಲಗಳಿಗೆ ನಮಸ್ಕರಿಸಿ ಹೀಗೆ ಸ್ತೋತ್ರಮಾಡಿದಳು.

ನೋಡಿ-ಈ ನಮಸ್ಕಾರವಿದೆಯಲ್ಲ-ಇದೇನೂ ಭಕ್ತಿಯ ಪೂರ್ಣರೂಪ ವಲ್ಲ. ಧರ್ಮದ ಪೂರ್ಣರೂಪವೂ ಅಲ್ಲ. ಇದು ಏಕಾಂಗಿ. ಆಶ್ಚರ್ಯವೆಂದರೆ ಇದನ್ನೇ ತೆಗೆದುಕೊಂಡು ಒಂದು ಧರ್ಮವು ಪ್ರಚಲಿತವಾಯಿತು. ನಮಸ್-ನಮಾಂಸಿ-ನಮಾಂಸಿಯೆ-ನಮಾಜಾಯಿತು.

ಪುನಃ ಪುನಃ ತಲೆತಗ್ಗಿಸುವುದು. ನಮ್ಮ ಸನಾತನಧರ್ಮದ ಒಂದು ಭಾಗ ಇದನ್ನೇ ಮುಸಲ್ಮಾನರು ತೆಗೆದುಕೊಂಡಿದ್ದಾರೆ.

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥

ಈ ದೇಶದ ಅಗ್ರವರ್ಣದವರಿಂದ (ಬ್ರಾಹ್ಮಣರಿಂದ) ವಿಶ್ವದ ಸಕಲ ಮಾನವರೂ ಶಿಕ್ಷಣವನ್ನು ಪಡೆಯುತ್ತಾರೆ.

ಪ್ರಾರ್ಥನೆಯೇ 'ಪ್ರೇಯರ್' ಆಗಿದೆ. ಜೈನಧರ್ಮದ ಅಹಿಂಸಾ ಪ್ರಾಧಾನ್ಯ, ಬೌದ್ಧರ ಕರುಣಾಪ್ರಾಧಾನ್ಯ-ಎರಡೂ ಸರ್ವಾಂಗಪರಿಪೂರ್ಣ ವಾದ ಸನಾತನಧರ್ಮದ ಅಂಗಗಳು. ಯಾವ ಅಂಗವನ್ನೂ ಕತ್ತರಿಸ ಬಾರದು. ಎಲ್ಲದರ ಬಾಹಾಭ್ಯಂತರಗಳಲ್ಲಿರುವ ಪ್ರಭುವನ್ನು ನಮಸ್ಕರಿಸ ಬೇಕು. ಮಾಯಾತೆರೆಯ ಹಿಂದೆ ಕುಳಿತಿರುವವನು ಅವನೇ.

ಖೂಬ್ ಜಾನಾ ಹೈ ಅನಜಾನಾ ಬನೇ ಬೈಠೇ ಹೈ ।
ಆಪಮೇ ಆಪ್ ಛಿಪೇ ಪರ್ದಾ ಢಕೇ ಬೈಠೇ ಹೈ ॥

ಸರ್ವಜ್ಞನಾದರೂ ಏನೂ ತಿಳಿಯದವನಂತಿದ್ದಾನೆ. ಮಾಯಾಪರದೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂದೆ ತನ್ನಲ್ಲಿಯೇ ತಾನು ಮುಚ್ಚಿಕೊಂಡಿದ್ದಾನೆ. ನಾಮ-ರೂಪಗಳು ಬೇರೆ-ಬೇರೆ. ಆಭಾಸಗಳು ಬೇರೆ-ಬೇರೆ. ಆದರೆ ಎಲ್ಲದರ ಹಿಂದೆ ಇರುವ ಶಕ್ತಿಯು ಒಂದೇ.

ನಿಪುಣನಟಿಯ ನೃತ್ಯದಂತೆ ವಿಭಿನ್ನ ಭಾವ-ಭಂಗಿಗಳಲ್ಲಿ ಆ ಶಕ್ತಿಯು ಪರಿಲಕ್ಷಿತವಾಗುತ್ತದೆ. ಪರಮಹಂಸಪರಿವ್ರಾಜಕಾಚಾರ್ಯರೂ-ಪರಿಶುದ್ಧಾಂತರಂಗರಾದ ಋಷಿ-ಮುನಿಗಳೂ ಭಗವಂತನಲ್ಲಿ ಭಕ್ತಿಯಿಡಲೆಂಬುದೇ ಈ ಅವತಾರಾದಿಗಳ ಉದ್ದೇಶ.

ಕುಂತಿಯು ಸ್ತೋತ್ರಮಾಡುತ್ತಾಳೆ :

ನಮಸ್ಯೇ ಪುರುಷಂ ತ್ವಾದ್ಯಂ ಈಶ್ವರಂ ಪ್ರಕೃತೇಃ ಪರಮ್ ।
ಅಲಕ್ಷ್ಯಂ ಸರ್ವಭೂತಾನಾಂ ಅಂತರ್ಬಹಿರವಸ್ಥಿತಮ್ ॥೧೮॥

ನೀನು ಸರ್ವಪ್ರಾಣಿಗಳ ಬಾಹ್ಯಾಭ್ಯಂತರಗಳಲ್ಲಿ ಏಕರಸಾತ್ಮಕನಾಗಿರುವೆ' ಆದರೆ ಇಂದ್ರಿಯಗಳಾಗಲಿ-ಇಂದ್ರಿಯವೃತ್ತಿಗಳಾಗಲಿ ನಿನ್ನನ್ನು ನೋಡಲಾರವು. ನೀನು ಪ್ರಕೃತಿಯಿಂದ ಪರನು ; ಆದಿಪುರುಷನು ; ಪರಮೇಶ್ವರನು. ನಿನ್ನನ್ನು ನಮಸ್ಕರಿಸುತ್ತೇನೆ.

ಮಾಯಾಜವನಿಕಾಚ್ಛನ್ನ ಮಜ್ಞಾಧೋಕ್ಷಜಮವ್ಯಯಮ್ ।
ನ ಲಕ್ಷ್ಯಸೇ ಮೂಢದೃಶಾ ನಟೋ ನಾಟ್ಯಧರೋ ಯಥಾ ॥೧೯॥

ಮಾಯಾವೃತನಾದ ಪರಮಾತ್ಮನನ್ನು ಅಜ್ಞರು ತಿಳಿಯಲಾರರು. ಇಂದ್ರಿಯಗಳು ಎಲ್ಲವನ್ನೂ ಗ್ರಹಿಸುತ್ತವೆ. ಆದರೆ ಇಂದ್ರಿಯಗಳಿಗೆ ಯಾರಿಂದ ಗ್ರಹಣಶಕ್ತಿಯಿದೆಯೋ ಅಂತಹವನನ್ನು ಗ್ರಹಿಸಲಾರವು. ವೇಷ-ಭೂಷಣಗಳನ್ನು ಧರಿಸಿರುವ ನಟನನ್ನು ಪ್ರತ್ಯಕ್ಷತಃ ನೋಡಿದ್ದರೂ ಗುರುತಿಸಲಾಗುವುದಿಲ್ಲ.

ಪರಮಾತ್ಮನು ವಿವಿಧರೂಪಗಳಲ್ಲಿ ತೋರುತ್ತಿದ್ದಾನೆ. ಆದರೂ ಪರಮಾತ್ಮನೆಂಬ ಜ್ಞಾನವಿಲ್ಲ.

ತಥಾ ಪರಮಹಂಸಾನಾಂ ಮುನೀನಾಮಮಲಾತ್ಮನಾಮ್ ।
ಭಕ್ತಿಯೋಗವಿಧಾನಾರ್ಥಂ ಕಥಂ ಪಶ್ಯೇಮ ಹಿ ಸ್ತ್ರಿಯಃ ॥೨೦॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶುದ್ಧಾಂತಃಕರಣರಾದ, ವಿಚಾರಶೀಲರಾದ ಪರಮ ಹಂಸರ ಹೃದಯದಲ್ಲಿ ಭಕ್ತಿಯೋಗವಿಧಾನಾರ್ಥವಾಗಿ ಅವತರಿಸಿರುವ ನಿನ್ನನ್ನು ಅಜ್ಞಸ್ತ್ರೀಯರಾದ ನಾವು ಹೇಗೆ ತಿಳಿಯಲಾದೀತು ?

ಕೃಷ್ಣಾಯ ವಾಸುದೇವಾಯ ದೇವಕೀನಂದನಾಯ ಚ
ನಂದಗೋಪಕುಮಾರಾಯ ಗೋವಿಂದಾಯ ನಮೋ ನಮಃ ||೨೧||

ಕೃಷ್ಣ ! ವಾಸುದೇವ ! ದೇವಕಿನಂದನ ! ನಂದಗೋಪಕುಮಾರ ! ಗೋವಿಂದ ! ನಿನಗೆ ಅನಂತಾನಂತನಮಸ್ಕಾರಗಳು.

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ||೨೨||

ನೀನು ಕಮಲನಾಭನು ; ಕಮಲಮಾಲಿಯು ; ಕಮಲಾಕ್ಷನು ; ಕಮಲಪಾದನು-ಇಂತಹ ನಿನಗೆ ಅನಂತಾನಂತನಮಸ್ಕಾರಗಳು.

ಯಥಾ ಹೃಷೀಕೇಶ ಖಲೇನ ದೇವಕೀ
ಕಂಸೇನ ರುದ್ಧಾತಿಚಿರಂ ಶುಚಾರ್ಪಿತಾ ।
ವಿಮೋಚಿತಾಹಂ ಚ ಸಹಾತ್ಮಜಾ ವಿಭೋ
ತ್ವಯೈವ ನಾಥೇನ ಮುಹುರ್ವಿಪದ್ಗಣಾತ್ ||೨೩||
ವಿಷಾನ್ಮಹಾಗ್ನೇಃ ಪುರುಷಾದದರ್ಶನಾ-
ದಸತ್ಸಭಾಯಾ ವನವಾಸಕೃಚ್ಛ್ರತಃ ।
ಮೃತೇ ಮೃಥೇಽನೇಕಮಹಾರಥಾಸ್ತ್ರತೋ
ದ್ರೌಣ್ಯಸ್ತ್ರತಶ್ಚಾಸ್ಮ ಹರೇಽಭಿರಕ್ಷಿತಾಃ ||೨೪||

ಹೇ ಹೃಷೀಕೇಶ ! ದುಷ್ಟಕಂಸನ ಕಾರಾಗಾರದಲ್ಲಿ ಬಂದಿನಿಯಾಗಿದ್ದ ನಿನ್ನ ತಾಯಿ ದೇವಕಿಯನ್ನು ರಕ್ಷಿಸಿದಂತೆ ಪುತ್ರಸಹಿತಳಾದ ನನ್ನನ್ನೂ ಅನೇಕವಿಪತ್ತುಗಳಿಂದ ರಕ್ಷಿಸಿದೆ.

ಒಂದೇ ? ಎರಡೇ ? ಗಣನೆಮಾಡಲು ಸಾಧ್ಯವೇ ಇಲ್ಲ. ವಿಷದಿಂದ ಲಾಕ್ಷಾಗೃಹಾಗ್ನಿಯಿಂದ, ಹಿಡಿಂಬಾದಿ ರಾಕ್ಷಸರಿಂದ, ದುಷ್ಟದುರ್ಯೋಧನಾದಿಗಳ ಸಭೆಯಿಂದ, ವನವಾಸದ ಅತಿದಾರುಣವಾದ ಕಷ್ಟಗಳಿಂದ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾರಥಿಕರೊಡನೆ ನಡೆದ ಯುದ್ಧಗಳಿಂದ-ಕೊನೆಗೆ ಈ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ-ಹೀಗೆ ಎಷ್ಟೊ ಬಾರಿ ನೀನು ನಮ್ಮನ್ನು ರಕ್ಷಿಸಿದೆ.

ಪ್ರಭೋ ! ಈಗೀಗ ವಿಪತ್ತುಗಳೆಂದರೆ ಹೆದರಿಕೆಯೇ ಇಲ್ಲದ ಹಾಗಾಗಿದೆ. ಏಕೆಂದರೆ : ವಿಪತ್ತುಗಳು ಬಂದರೆ ಸಂಪತ್ತುಗಳೊಡನೆ ಬರುತ್ತವೆ.

ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗದ್ಗುರೋ ।
ಭವತೋ ದರ್ಶನಂ ಯತ್ ಸ್ಯಾತ್ ಅಪುನರ್ಭವದರ್ಶನಮ್ ॥೨೫॥

'ಪ್ರಭೋ ? ನಮ್ಮ ಜೀವನದಲ್ಲಿ ಪದೇ ಪದೇ ಕಷ್ಟಗಳು ಬರಲಿ.' ಇದೆಂತಹ ಪ್ರಾರ್ಥನೆ ! ? ಸಂಸಾರದಲ್ಲಿ ಯಾರಾದರೂ ಹೀಗೆ ಕಷ್ಟಗಳನ್ನು ಅಪೇಕ್ಷಿಸುವವರು ಇದ್ದಾರೆಯೇ ? ಈ ವಿಚಾರದಲ್ಲಿ ದಾರ್ಶನಿಕರ ಅಭಿಪ್ರಾಯವು ಹೀಗಿದೆ-

ಸುಖಂ ಮೇ ಭೂಯಾತ್ ದುಃಖಂ ಮೇ ಮಾ ಭೂತ್-ಎಂದು ಸರ್ವರೂ ಸುಖಾಪೇಕ್ಷಿಗಳೇ ಹೊರತು ದುಃಖಾಪೇಕ್ಷಿಗಳಾರೂ ಇಲ್ಲ. ಆದರೆ ಭಕ್ತರು ಬಯಸುವುದೇ ಮತ್ತೊಂದನ್ನು. ಅವರ ದೃಷ್ಟಿಕೋನವೇ ಬೇರೆ.

ಕುಂತಿಯು ಹೇಳಿಕೊಳ್ಳುತ್ತಿದ್ದಾಳೆ ;

'ನಮ್ಮಲ್ಲಿಗೆ ಪ್ರತಿನಿತ್ಯವೂ ವಿಪತ್ತುಗಳು ಬರಲಿ. ಕ್ಷಣೇ ಕ್ಷಣೇ ಬರಲಿ. ಹೆಜ್ಜೆ-ಹೆಜ್ಜೆಗೂ ಬರಲಿ. ಏಕೆಂದರೆ : ವಿಪತ್ತುಗಳು ಬಂದ ಹಾಗೆ ಅವುಗಳಿಂದ ರಕ್ಷಿಸಲು ಭಗವಂತನೇ ಬರುತ್ತಾನೆ. ಭಗವಂತನು ಬಂದನೆಂದರೆ ಸರ್ವಕಷ್ಟಗಳೂ ದೂರ. ದುಃಖಗಳೂ ಮಾಯ. ಯದ್ಯಪಿ ವಿಪತ್ತುಗಳಿಂದ ಮೊದಲು ಕ್ಲೇಶಗಳೊದಗಿದರೂ ಅನಂತರ ಭಗವದ್ದರ್ಶನವಾಗಿ ಜೀವನವು ಸುಪುಷ್ಟವಾಗುತ್ತದೆ.'

ವಸ್ತುತಃ ಜೀವಿಗಳು ಒಂದಲ್ಲ ಒಂದು ಅಭಿಮಾನವನ್ನು ಹೊತ್ತುಕೊಂಡು ಕುಳಿತಿರುತ್ತಾರೆ. ಅಭಿಮಾನವೆಂದರೆ ತಮ್ಮ ಕೈಗಳಿಂದ ತಮ್ಮನ್ನೇ ಬಂಧಿಸಿಕೊಳ್ಳುವ ವಿಧಾನ. ರೇಷ್ಮೆಹುಳುವು ತಾನೇ ರೇಷ್ಮೆಯನ್ನು ನಿರ್ಮಿಸುತ್ತಾ ಅದರೊಳಗೆ ತಾನೇ ಬಂದಿಯಾಗುವಂತೆ-ಜೀವನು ಕುಲದ, ಐಶ್ವರ್ಯದ ಅಧಿಕಾರದ ಅಭಿಮಾನದಲ್ಲಿ ಆಬದ್ಧನಾಗುತ್ತಾನೆ. ಭಗವದ್ದರ್ಶನದಿಂದ ಮುಕ್ತನಾಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಸ್ತ್ರಕಾರರು ನಾಲ್ಕು ವಿಧವಾದ ಮದಾವಿರ್ಭಾವಗಳನ್ನು ಹೇಳುತ್ತಾರೆ.

ಜನ್ಮೈಶ್ವರ್ಯಶ್ರುತಶ್ರೀಭಿಃ ಏಧಮಾನಮದಃ ಪುಮಾನ್ ।
ನೈವಾರ್ಹತ್ಯಭಿಧಾತುಂ ವೈ ತ್ವಾಮಕಿಂಚನಗೋಚರಮ್ ॥

ಕುಲ, ಐಶ್ವರ್ಯ, ವಿದ್ಯೆ, ಸಂಪತ್ತು-ಈ ನಾಲ್ಕರ ಮದಾವಿಷ್ಟನು ಭಗವಂತನ ನಾಮೋಚ್ಚಾರಣೆಯನ್ನು ಮಾಡಲಾರನು. ಅವನು ನಶೆಯಲ್ಲಿರುತ್ತಾನೆ. ಅಂದರೆ-ನ ಶಂ ಯಯಾ, ಯಾವುದರಿಂದ ಶಾಂತಿಯಿರುವುದಿಲ್ಲವೋ ಅದು ನಶೆ.

ಜನರು ಶಾಂತಿಗಾಗಿ ನಶೆಯನ್ನು ಮಾಡುತ್ತಾರೆ. ಆದರೆ ಅಶಾಂತಿಯಲ್ಲಿಯೇ ಇರುತ್ತಾರೆ, ವಿಷವಾದರೆ ಶರೀರವನ್ನು ನಾಶಮಾಡುತ್ತದೆ. ನಶೆಯಾದರೆ ಬುದ್ಧಿಯನ್ನು ನಾಶಮಾಡುತ್ತದೆ.

ಭಗವಂತನ ನಾಮೋಚ್ಚಾರಣೆಯನ್ನು ಮಾಡಲಾರದವನು ಅಶಾಂತನಾಗಿರುತ್ತಾನೆ. ಅವನು ನಶಾರಹಿತನಾದರೆ ಭಗವಂತನನ್ನು ಪ್ರೀತಿಸುತ್ತಾನೆ.

ಭಗವಂತನು ಅಕಿಂಚನಗೋಚರನು. ಅಕಿಂಚನರೆಂದರೆ ನಿರ್ಧನರು, ದುರ್ಮದರು- ಅವರು ಮದಾಂಧರಿಗೆ ಕಾಣುವವನಲ್ಲ.

ನಮೋಽಕಿಂಚನವಿತ್ತಾಯ ನಿವೃತ್ತಗುಣವೃತ್ತಯೇ ।
ಆತ್ಮಾರಾಮಾಯ ಶಾಂತಾಯ ಕೈವಲ್ಯಪತಯೇ ನಮಃ ॥

ಭಗವನ್ ! ನೀನು ನಿರ್ಧನರ ಪರಮಧನವು. (ಅಕಿಂಚನರೇ (ಭಕ್ತರೇ) ವಿತ್ತ (ಐಶ್ವರ್ಯ) ವಾಗಿ ಉಳ್ಳವನು.) ಮಾಯಾಜಗತ್ತು ನಿನ್ನನ್ನು ಮುಟ್ಟಲಾರದು. ನಿನ್ನಲ್ಲಿಯೇ ನೀನು ವಿಹರಿಸುವೆ. ಪರಮಶಾಂತ ಸ್ವರೂಪನು ನೀನು. ನೀನೇ ಕೈವಲ್ಯ. ಮೋಕ್ಷದ ಅಧಿಪತಿಯು. ನಿನಗೆ ಅನಂತನಮಸ್ಕಾರಗಳು.

ಭಗವಂತನು ವೃತ್ತಿರಹಿತನು. ಜೀವಿಗಳು ತಮ್ಮ-ತಮ್ಮಲ್ಲಿ ಜಗಳವಾಡುವುದೂ ಸಹ ಅವನ ಒಂದು ಲೀಲೆ. ಸಂಸಾರಿಗಳು ತಮ್ಮ-ತಮ್ಮಲ್ಲಿ ಜಗಳವಾಡದಿದ್ದರೆ ಮಹಾತ್ಮರು ಅದರಿಂದ ನಿವೃತ್ತರಾಗಿ ಹೇಗೆ ತಾನೇ ಸುಖವಾಗಿರುತ್ತಿದ್ದರು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸಾರದಲ್ಲಿ ಸಂಘರ್ಷವು ಹೆಚ್ಚಿದಾಗ, ವೈಮನಸ್ಯವು ಉಂಟಾದಾಗ ದ್ವಂದ್ವಯುದ್ಧಗಳು ಪ್ರಾರಂಭವಾದಾಗ-ಮಹಾತ್ಮರು ಅದರಿಂದ ವಿಮುಖ ರಾಗಿ ತಮ್ಮ ಹೃದಯಗಹ್ವರದಲ್ಲಿ ಪರಮಾತ್ಮನನ್ನು ಧ್ಯಾನಿಸುತ್ತಾ ಆನಂದ ದಿಂದಿರುತ್ತಾರೆ.

ಈಶ್ವರನೇನು ಮಾಡುವನು ?-ಎನ್ನುವುದನ್ನು ನಾವು ತಿಳಿಯಲಾರೆವು. ಭಗವಂತನೇ ಅನೇಕರೂಪಗಳಲ್ಲಿ ಅನೇಕಕಾರ್ಯಗಳನ್ನು ಮಾಡುತ್ತಾನೆ.

ಮನ್ಯೇ ತ್ವಾಂ ಕಾಲಮೀಶಾನಂ ಅನಾದಿನಿಧನಂ ವಿಭುಮ್ ।
ಸಮಂ ಚರಂತಂ ಸರ್ವತ್ರ ಭೂತಾನಾಂ ಯನ್ಮಿಥಃ ಕಲಿಃ ॥

ಭಗವನ್ ! ನೀನು ಅನಾದಿಯು ; ಅನಂತನು ; ಸರ್ವವ್ಯಾಪಕನು ; ಸರ್ವನಿಯಾಮಕನು ; ಕಾಲರೂಪೀ ಪರಮೇಶ್ವರನು.

ಸಂಸಾರಿಗಳು ಬುದ್ಧಿಯ ವಿಷಮತೆಯಿಂದ ಪರಸ್ಪರ ಸಂಘರ್ಷದಲ್ಲಿಯೇ ನಿರತರಾಗಿರುತ್ತಾರೆ. ನೀನಾದರೋ ಎಲ್ಲದರಲ್ಲಿಯೂ ಸಮನಾಗಿರುವೆ.

ನ ವೇದ ಕಶ್ಚಿದ್ಭಗವಂಶ್ಚಿಕೀರ್ಷಿತಂ
ತವೇಹಮಾನಸ್ಯ ನೃಣಾಂ ವಿಡಂಬನಮ್ ।
ನ ಯಸ್ಯ ಕಶ್ಚಿದ್ದಯಿತೋಽಸ್ತಿ ಕರ್ಹಿಚಿತ್
ದ್ವೇಷ್ಯಶ್ಚ ಯಸ್ಮಿನ್ ವಿಷಮಾ ಮತಿರ್ನೃಣಾಮ್ ॥

ಭಗವನ್ ! ನೀನು ಮಾನವರಂತೆ ನಟಿಸಲು ತೊಡಗಿದಾಗ ನೀನೇನು ಮಾಡುವೆ ಎಂಬುದನ್ನು ಯಾರೂ ತಿಳಿಯಲಾರರು. ನಿನಗೆ ಯಾರೂ ಪ್ರಿಯ ರಿಲ್ಲ. ಯಾರೂ ದ್ವೇಷ್ಯರಿಲ್ಲ.

ಜನರ ಬುದ್ಧಿಯೇ ನಿನ್ನ ವಿಷಯದಲ್ಲಿ ವಿಷಮವಾಗಿರುತ್ತದೆ. ನೀನು ವಿಶ್ವಾತ್ಮನು, ವಿಶ್ವರೂಪನು. ನೀನು ಉತ್ಪನ್ನನಾಗುವವನೂ ಅಲ್ಲ. ಕರ್ಮ ಮಾಡುವವನೂ ಅಲ್ಲ. ಆದರೂ ನೀನು ಪಶು-ಪಕ್ಷಿಗಳಾಗಿ, ಮಾನವನಾಗಿ, ಋಷಿಯಾಗಿ, ಜಲಚರನಾಗಿ ಜನ್ಮವನ್ನು ತಾಳುತ್ತೀಯೆ. ಹಾಗೂ ತತ್ತದನು ಗುಣವಾದ ದಿವ್ಯಕರ್ಮಗಳನ್ನೂ ನಡೆಸುವೆ. ಇದು ನಿನ್ನ ಲೀಲೆಯಷ್ಟೆ.

ಕೃಷ್ಣ ! ನೀನು ಬಾಲ್ಯದಲ್ಲಿ ಒಂದು ದಿನ ಹಾಲಿನ ಮಡಕೆಯನ್ನು ಒಡೆದುಬಿಟ್ಟಿದ್ದೆ. ಯಶೋದೆಗೆ ಸ್ವಭಾವಿಕವಾಗಿಯೇ ಕೋಪ ಬಂದಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನನ್ನು ಕಟ್ಟಿಹಾಕಲು ಕೈಗೆ ಹಗ್ಗವನ್ನೆತ್ತಿಕೊಂಡಳು. ಆಗ ನಿನ್ನ ಕಣ್ಣು ಗಳಲ್ಲಿ ನೀರು ತುಂಬಿಬಂದಿತು. ಕಣ್ಣುಪ್ಪು (ಕಾಡಿಗೆಯು) ಕಪೋಲದ ಮೇಲೆ ಬಂದಿತು. ಅತೀವ ಭಯದಿಂದ ತಲೆಯನ್ನು ತಗ್ಗಿಸಿಬಿಟ್ಟೆ.

ಆದೃಶ್ಯವನ್ನು ನೆನೆಸಿಕೊಂಡರೆ ಭಗವಂತನೂ ಸಹ ಭಕ್ತರ ಮುಂದೆ ಹೇಗೆ ಮುಗ್ಧನಾಗುವನೆಂದು ತಿಳಿಯುತ್ತದೆ. ಯಾರಿಂದ ಭಯವೂ ಭಯ ಪಟ್ಟು ಓಡಿಹೋಗುತ್ತದೆಯೋ-ಅವನಿಗೂ ಇಂತಹ ಸ್ಥಿತಿ ?

ಭಗವಂತನು ಅಜನ್ಮನಾದರೂ ಜನ್ಮವನ್ನೇಕೆ ತಾಳುತ್ತಾನೆ ?-ಇದಕ್ಕೆ ಮಹಾಪುರುಷರು ಹಲವಾರು ಕಾರಣಗಳನ್ನು ಕೊಡುತ್ತಾರೆ-

ಮಲಯಾಚಲದ ಕೀರ್ತಿವಿಸ್ತಾರಕ್ಕಾಗಿ ಅಲ್ಲಿ ಚಂದನವು ಪ್ರಕಟವಾಗುವಂತೆ-ಪುಣ್ಯಶ್ಲೋಕನಾದ ಯದುರಾಜನ ಕೀರ್ತಿವಿಸ್ತಾರಕ್ಕಾಗಿ ನೀನು ಯದುವಂಶಗಲ್ಲಿ ಅವತರಿಸಿದೆ.

ಮತ್ತೊಬ್ಬರು **ಹೇಳುತ್ತಾರೆ** : ವಸುದೇವ-ದೇವಕಿಯರ ಪ್ರಾರ್ಥನೆಗೆ ಅನುಗುಣವಾಗಿ ಜಗತ್ತಿಗೂ ಕಲ್ಯಾಣವಾಗಬೇಕು. ದೈತ್ಯರ ನಾಶವೂ ಆಗಬೇಕು-ಎಂಬುದಾಗಿ ಭಗವಂತನು ಅವತರಿಸಿದನು.

ಇನ್ನೊಬ್ಬರ ಅಭಿಪ್ರಾಯವು ಹೀಗಿದೆ :

ಭೂದೇವಿಯು ದೈತ್ಯರ ವಿಪರೀತಭಾರದಿಂದ ಸಮುದ್ರದಲ್ಲಿ ಮುಳುಗಲಿರುವ ಹಡಗಿನಂತೆ ಅಳ್ಳಾಡುತ್ತಿದ್ದಳು. ಆವಾಗ ಬ್ರಹ್ಮನ ಪ್ರಾರ್ಥನೆಗೆ ಅನುಗುಣವಾಗಿ ಭೂಭಾರವನ್ನಿಳುಹಲು ನೀನು ಆವಿರ್ಭವಿಸಿದೆ.

ಮತ್ತೋರ್ವ ಮಹಾಪುರುಷರ ಅಭಿಪ್ರಾಯವು ಹೀಗಿದೆ ;

ಜೀವಿಗಳು ಸಂಸಾರದಲ್ಲಿ ಅಜ್ಞಾನಕಾಮನಾಕರ್ಮಬಂಧನಾದಿಗಳಲ್ಲಿ ಸಿಲುಕಿಕೊಂಡು ನರಳುತ್ತಿದ್ದಾರೆ. ಅವರು ನಿನ್ನ ಗುಣಕರ್ಮಗಳನ್ನು ಶ್ರವಣ-ಸ್ಮರಣೆಗಳನ್ನು ಮಾಡಿ ಮುಕ್ತರಾಗಲಿ-ಎಂಬುದಕ್ಕಾಗಿ ಅವತಾರವನ್ನೆತ್ತಿರುವೆ.

ಭಕ್ತಜನರು ಪದೇ-ಪದೇ ನಿನ್ನ ಚರಿತ್ರೆಯ ಶ್ರವಣ-ಗಾನ-ಕೀರ್ತನ-ಸ್ಮರಣಾದಿಗಳನ್ನು ಮಾಡುತ್ತಾ ಆನಂದಾನುಭವಿಗಳಾಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನಃ-ಪುನಃ ನಿನ್ನ ಚರಣಕಮಲಗಳನ್ನು ಸಂದರ್ಶಿಸುತ್ತಾ ಜನನ ಮತ್ತು ಮರಣಗಳ ಪ್ರವಾಹದಿಂದ ಪಾರಾಗುತ್ತಾರೆ.

"ಪ್ರಭುವೇ ! ನೀನು ಭಕ್ತವಾಂಛಾಕಲ್ಪತರುವು. ನೀನು ಈಗ ನಿನ್ನ ಆಶ್ರಿತಸಂಬಂಧಿಗಳೂ ಆದ ನಮ್ಮನ್ನು ಬಿಟ್ಟು ಹೋಗುವೆಯಾ ?

ನಿನ್ನ ಪಾದಕಮಲಗಳನ್ನು ಬಿಟ್ಟರೆ ನಮಗೇತರ ಆಸರೆಯೂ ಇಲ್ಲವೆಂಬುದು ತಿಳಿಯದೇ ?

ಪೃಥ್ವಿಯ ಸರ್ವರಾಜರಿಗೂ ನಾವು ವಿರೋಧಿಗಳಾಗಿದ್ದೇವೆ. ಜೀವ ನಿಲ್ಲದಿದ್ದರೆ ಇಂದ್ರಿಯಗಳು ಶಕ್ತಿಹೀನಗಳಾಗುವಂತೆ-ನಿನ್ನ ದರ್ಶನವಿಲ್ಲದಿದ್ದರೆ ಈ ಪಾಂಡವರ ಈ ಅಸ್ತಿತ್ವವು ತಾನೇ ಏನುಳಿದೀತು ?

ನಿನ್ನ ಚರಣಚಪ್ಪೆಗಳಿಂದ ಈ ಕುರುಜಾಂಗಲದೇಶದ ಭೂಮಿಯು ಇಂದು ಅತ್ಯಂತಶೋಭಾಯಮಾನವಾಗಿದೆ. ನೀನು ಹೊರಟುಹೋಗಿಬಿಟ್ಟರೆ ಹೀಗೆಯೇ ಉಳಿದೀತೇ ?

ನಿನ್ನ ದೃಷ್ಟಿಪ್ರಭಾವದಿಂದ ಇಲ್ಲಿ ಫಸಲು ಅಭಿವೃದ್ಧಿಯಾಗುತ್ತದೆ. ಲತಾ-ವೃಕ್ಷಾದಿಗಳು ಫಲ-ಪುಷ್ಪಭರಿತಗಳಾಗಿರುತ್ತವೆ. ವನ-ಪರ್ವತ-ನದೀ-ಸಮುದ್ರಗಳೆಲ್ಲವೂ ಸಮೃದ್ಧವಾಗಿರುತ್ತವೆ.

ನೀನು ವಿಶ್ವೇಶ್ವರನು ; ವಿಶ್ವಾತ್ಮನು ; ವಿಶ್ವರೂಪಿಯು. ಕೃಷ್ಣ! ನನಗೆ ಯದುವಂಶಿಗಳಲ್ಲಿಯೂ ಪಾಂಡವರಲ್ಲಿಯೂ ವಿಶೇಷಮಮತೆಯು ಬೆಳೆದುಬಿಟ್ಟಿದೆ. ದಯೆಯಿಟ್ಟು ಈ ದೇಹಬಂಧನವನ್ನು ಕತ್ತರಿಸಿಬಿಡು.

ಗಂಗಾಪ್ರವಾಹವು ಸಮುದ್ರವನ್ನೇ ಸೇರುವಂತೆ-ನನ್ನ ಬುದ್ಧಿಯು ಯಾವಾಗಲೂ ನಿನ್ನಲ್ಲಿಯೇ ರಮಿಸುತ್ತಿರಲಿ. ಶ್ರೀಕೃಷ್ಣ ! ನೀನು ನರಸಖನು.

ಹೇ ಯದುವಂಶಶಿರೋಮಣಿಯೇ ! ಪೃಥ್ವಿಗೆ ಭಾರರೂಪರಾಗಿರತಕ್ಕ ದೈತ್ಯರನ್ನು ನಿಗ್ರಹಿಸುವುದರಲ್ಲಿ ಕಾಳ್ಗಿಚ್ಚಿನಂತಿರುವೆ. ನೀನು ಸರ್ವಶಕ್ತಿಮಂತನು. ಗೋವಿಂದ ! ನಿನ್ನೀ ಅವತಾರವು ಗೋ-ಬ್ರಾಹ್ಮಣ-ದೇವತೆಗಳ ದುಃಖನಿವಾರಣೆಗಾಗಿ ಇದೆ. ಯೋಗೇಶ್ವರನೇ ! ಚರಾಚರಗುರುವೇ ! ನಿನಗೆ ಅನಂತನಮಸ್ಕಾರಗಳು."

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ರೀತಿ ಕುಂತಿಯು ಅತೀವ ಮಧುರಶಬ್ದಗಳಿಂದ ಭಗವಂತನ ಲೀಲಾವತಾರಗಳನ್ನು ವರ್ಣಿಸಿದಳು.

ಶ್ರೀಕೃಷ್ಣನು ತನ್ನ ಮಧುರಮಂದಹಾಸದಿಂದ ಎಲ್ಲರನ್ನೂ ಆನಂದಗೊಳಿಸುತ್ತಾ ಹಸ್ತಿನಾಪುರಕ್ಕೆ ಹಿಂದಿರುಗಿದನು. ಎಲ್ಲರಿಂದ ಬೀಳ್ಕೊಟ್ಟು ಹೊರಡುವಷ್ಟರಲ್ಲಿ ಯುಧಿಷ್ಠಿರನು ಬಂದು ತಡೆದನು.

ಯುಧಿಷ್ಠಿರನು ಬಾಂಧವರ ಕೊಲೆಯಿಂದ ಬಹಳ ದುಃಖಿಯಾಗಿದ್ದನು. ಭಗವಂತನ ಲೀಲಾಕರ್ಮಗಳ ರಹಸ್ಯವನ್ನರಿತಿದ್ದ ವ್ಯಾಸರೂ-ಸ್ವಯಂ ಭಗವಾನ್ ಕೃಷ್ಣನೂ ಅನೇಕವಾದ ಇತಿಹಾಸಗಳನ್ನು ಹೇಳಿ ಯುಧಿಷ್ಠಿರನನ್ನು ಸಮಾಧಾನಪಡಿಸಲು ಯತ್ನಿಸಿದರು ಆದರೂ ಅವನ ದುಃಖವು ಶಮನವಾಗಲಿಲ್ಲ.

ಬಾಂಧವರ ವಧೆಯಿಂದ ದುಃಖತಪ್ತನಾಗಿಯೇ ಇರುತ್ತಿದ್ದನು. ಸದಾ ಇದೇ ಯೋಚನೆ-"ನಾನೆಂತಹ ಪಾಪಿ? ನಾಯಿ-ನರಿಗಳು ಕಿತ್ತು ತಿನ್ನುವ ಈ ದೇಹಕ್ಕಾಗಿ ಎಷ್ಟೋ ಅಕ್ಷೌಹಿಣೀಸೈನ್ಯವನ್ನು ನಾಶಮಾಡಿದೆನಲ್ಲಾ? ನಾನು ಬಾಲಕರಿಗೆ, ವೃದ್ಧರಿಗೆ, ಬ್ರಾಹ್ಮಣರಿಗೆ, ಸಹೋದರರಿಗೆ, ಗುರುಗಳಿಗೆ ಎಂತಹ ದ್ರೋಹವನ್ನೆಸಗಿದೆ? ಇದರ ಫಲವಾಗಿ ನಾನು ಸಾವಿರಾರು ವರ್ಷಗಳ ಕಾಲ ನರಕವಾಸವನ್ನು ಮಾಡಿದರೂ ನನಗೆ ನಿಷ್ಕೃತಿಯು ದೊರಕುವುದಿಲ್ಲ.

ಶಾಸ್ತ್ರಕಾರರೇನೋ ಹೇಳುತ್ತಾರೆ-'ಪ್ರಜಾಪರಿಪಾಲನಾರ್ಥವಾಗಿ ನಡೆಸಿದ ಯುದ್ಧದಿಂದ ಪಾಪಸಂಘಟನೆಯಾಗುವುದಿಲ್ಲ.' ಎಂದು. ಆದರೆ ಇಷ್ಟು ಮಾತ್ರದಿಂದ ನನಗೆ ಸಂತೋಷವಾಗಲಾರದು.

ಎಷ್ಟು ಜನ ಸ್ತ್ರೀಯರು ಪತಿವಿಹೀನೆಯರಾದರು? ಈ ದೋಷದಿಂದ ಮುಕ್ತನಾಗುವುದು ಹೇಗೆ? ಕೆಸರಿನಿಂದ ಕೆಸರು ಶುದ್ಧವಾಗುವುದೇ? ಮದ್ಯದಿಂದ ಮದ್ಯದ ಅಪವಿತ್ರತೆಯು ದೂರಾಗುವುದೇ? ಯಜ್ಞಾಚರಣೆಯಿಂದ ಈ ನರಹತ್ಯೆಯ ಪ್ರಾಯಶ್ಚಿತ್ತವಾಗುವುದೇ?"-ಹೀಗೆಯೇ ಯೋಚಿಸುತ್ತಾ ಭಯಭೀತನಾಗಿದ್ದನು.

8ನೆಯ ಅಧ್ಯಾಯವು ಮುಗಿಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೀಷ್ಮರಲ್ಲಿಗೆ ಯುಧಿಷ್ಠಿರಾದಿಗಳ ಪ್ರಯಾಣ : ಶ್ರೀಕೃಷ್ಣನನ್ನು ಸ್ತೋತ್ರಮಾಡುತ್ತಾ ಭೀಷ್ಮರ ದೇಹತ್ಯಾಗ

ಸೂತರು ಶೌನಕಾದಿಗಳೊಡನೆ ಹೇಳುತ್ತಾರೆ ;

"ರಾಜಾ ಯುಧಿಷ್ಠಿರನು ಪ್ರಜಾದ್ರೋಹದಿಂದ ಹೀಗೆ ಪೀಡಿತನಾಗಿದ್ದನು. ಸಕಲಧರ್ಮಗಳ ಸಾರವನ್ನೂ ತಿಳಿಯುವ ಇಚ್ಛೆಯಿಂದ ಎಲ್ಲರೂ ರಥಾರೂಢರಾಗಿ ಭೀಷ್ಮರಲ್ಲಿಗೆ ಹೊರಟರು.

ಅರ್ಜುನನೊಡನೆ ಶ್ರೀಕೃಷ್ಣನೂ ಹೊರಟನು. ಈ ಶ್ರೀಕೃಷ್ಣನ ಅದ್ವಿತೀಯತೆಯನ್ನು ನಾವು ಗಮನಿಸಬೇಕು. ಅರ್ಜುನನು ರಥಿಯಾದರೆ ಶ್ರೀಕೃಷ್ಣನು ಸಾರಥಿ. ಇಲ್ಲಿಯ ವೈಶಿಷ್ಟ್ಯವೆಂದರೆ ಅರ್ಜುನನು ಶ್ರೀಕೃಷ್ಣನಿಗೆ ಅಪ್ಪಣೆಮಾಡುತ್ತಾನೆ-**ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ।**

ಎಲ್ಲರೂ ಭೀಷ್ಮರಲ್ಲಿಗೆ ಹೋಗಿ ನಮಸ್ಕರಿಸಿದರು. ಶ್ರೀಕೃಷ್ಣನೂ ನಮಸ್ಕರಿಸಿದ್ದಾನೆ. ಆ ಸಮಯದಲ್ಲಿ ಧೌಮ್ಯ-ವ್ಯಾಸಾದಿ ಮಹಾತ್ಮರೂ ಬಂದಿದ್ದರು. ಆ ಕುರುಕುಲಪಿತಾಮಹನ ದಿವ್ಯಸಂದರ್ಶನಕ್ಕಾಗಿ ಬ್ರಹ್ಮರ್ಷಿ-ದೇವರ್ಷಿ-ರಾಜರ್ಷಿಗಳೇ ಆದಿಯಾಗಿ ಎಲ್ಲರೂ ಬಂದಿದ್ದರು.

ಪಿತಾಮಹರಾದ ಭೀಷ್ಮರು ಮನಸಾ ಎಲ್ಲರನ್ನೂ ಪೂಜಿಸಿದರು. ಸ್ವಾಗತಿಸಿದರು. ಅವರು ಕಾಲ-ದೇಶಗಳಿಗೆ ಅನುಗುಣವಾಗಿ ಯಾವಾಗ ಏನು ಮಾಡಬೇಕೆಂಬುದನ್ನು ತಿಳಿದಿದ್ದರು. ಶ್ರೀಕೃಷ್ಣನ ಪ್ರಭಾವವನ್ನು ಚೆನ್ನಾಗಿ ಅರಿತಿದ್ದರು. ಲೀಲಾವತಾರಿಯಾದ, ಸರ್ವರ ಬಾಹ್ಯಾಭ್ಯಂತರಗಳಲ್ಲಿ ವಿರಾಜಮಾನನಾಗಿರುವ, ಜಗದೀಶ್ವರನಾದ ಶ್ರೀಕೃಷ್ಣನನ್ನು ಯಥಾಯೋಗ್ಯ ರೀತಿಯಲ್ಲಿ ಅರ್ಚಿಸಿದರು.

ಪಾಂಡವರು ಪ್ರೇಮ-ವಿನಯಾನ್ವಿತರಾಗಿ ಭೀಷ್ಮರ ಸಮೀಪದಲ್ಲಿ ಕುಳಿತರು. ಸರ್ವರನ್ನೂ ನೋಡಿ ಅವರ ಕಣ್ಣುಗಳಿಂದ ಆನಂದಾಶ್ರುಗಳು ಉದುರಿದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೀಷ್ಮರ ಆಗಿನ ಸ್ಥಿತಿಯು ಹೀಗಿದ್ದಿತು : ಅವರ ದೇಹಾದ್ಯಂತ ಬಾಣಗಳು ಚುಚ್ಚಿಕೊಂಡಿವೆ. ಬೆನ್ನಿಗೆ ಒಂದೇ ಒಂದು ಬಾಣವೂ ಚುಚ್ಚಿ ಕೊಂಡಿಲ್ಲ. ಮುಂದುಗಡೆಯಿಂದ ದೇಹದೊಳಕ್ಕೆ ನುಗ್ಗಿದ ಬಾಣಗಳು ಬೆನ್ನಿನ ಮೂಲಕ ಹೊರಕ್ಕೆ ಕಾಣುತ್ತಿವೆ. ಅವರು ನೆಲದ ಮೇಲೆ ಬಿದ್ದಾಗ ಬಾಣಾಗ್ರಗಳು ಒಂದು ಸಮನಾದುವು. ಅದೇ ಹಾಸಿಗೆಯಂತಾಯಿತು. ಭೀಷ್ಮರು ಅದರ ಮೇಲೆ ಮಲಗಿದರು ಅವರು ಧರ್ಮರಾಜಾದಿಗಳೊಡನೆ ಹೇಳಿದರು :

ಅಹೋ ಕಷ್ಟ ಮಹೋಽನ್ಯಾಯ್ಯಂ ಯದ್ಯೂಯಂ ಧರ್ಮನಂದನಾಃ।
ಜೀವಿತುಂ ನಾರ್ಹಥ ಕ್ಲಿಷ್ಟಂ ವಿಪ್ರಧರ್ಮಾಚ್ಯುತಾಶ್ರಯಾಃ ॥

ಧರ್ಮಪುತ್ರರೇ ! ಅಯ್ಯೋ ! ನೀವುಗಳು ಬ್ರಾಹ್ಮಣಧರ್ಮದಲ್ಲಿ-ಭಗವಂತನ ಅಧೀನದಲ್ಲಿಯೇ ಇದ್ದರೂ ಇಷ್ಟೊಂದು ಕಷ್ಟಗಳನ್ನು ಅನ ಭವಿಸಬೇಕಾಯಿತು. ಈ ಕಷ್ಟಾನುಭವಕ್ಕೆ ಖಂಡಿತವಾಗಿಯೂ ನೀವು ಯೋಗ್ಯರಲ್ಲ.

ಅತಿರಥನಾದ ಪಾಂಡ-ಮಹಾರಾಜನ ಮರಣಕಾಲದಲ್ಲಿ ನೀವು ಬಹಳ ಚಿಕ್ಕವಯಸ್ಸಿನವರು. ಕುಂತಿಯು ಮಕ್ಕಳಿಗಾಗಿ ಬಹಳ ಕಷ್ಟಗಳನ್ನು ಅನುಭವಿಸಿದಳು

ಮೇಘಗಳು ವಾಯುವಿನ ವಶದಲ್ಲಿರುವಂತೆ-ಲೋಕಪಾಲಕರಾದಿಯಾಗಿ ಎಲ್ಲರೂ ಕಾಲಭಗವಂತನ ಅಧೀನದಲ್ಲಿರುತ್ತಾರೆ.

ನೀವು ಅನುಭವಿಸಿರುವುದೆಲ್ಲವೂ ಆ ಕಾಲರೂಪೀ ಭಗವಂತನ ಲೀಲಾ ವಿಹಾರಗಳಷ್ಟೆ. ನಿಮ್ಮ ಜೀವನದಲ್ಲಿ ಘಟಿಸಿರುವ ಘಟನೆಗಳನ್ನು ನೋಡಿದರೆ ಅತ್ಯಂತ ಆಶ್ಚರ್ಯಕರವಾದುವು. ಸಾಕ್ಷಾತ್ ಧರ್ಮರಾಜ ಯುಧಿಷ್ಠಿರನೂ, ಗದಾಧಾರೀ ಭೀಮಸೇನನೂ, ಗಾಂಡೀವಧಾರೀ ಅರ್ಜುನನೂ ಮೇಲಾಗಿ ಶ್ರೀಕೃಷ್ಣನಂತಹ ಪರಮಸ್ನೇಹಿತನೂ ಇರುವಾಗ ನಿಮಗೆ ಕಷ್ಟಗಳೊದಗುವು ದುಂಟೇ ? ಕಷ್ಟಗಳಿಗೇ ಕಷ್ಟಗಳು ಬರಬೇಕಷ್ಟೆ.

ಈ ಕಾಲರೂಪೀ ಭಗವಾನ್ ಕೃಷ್ಣನು ಏನು ಮಾಡುವನೆಂಬುದನ್ನು ಯಾರೂ ಅರಿಯಲಾರರು. ಜ್ಞಾನಿಗಳೂ ಸಹ ಮೋಹಿತರಾಗುತ್ತಾರೆ. ಸಾಂಸಾರಿಕಘಟನೆಗಳೆಲ್ಲವೂ ಈಶ್ವರೇಚ್ಛೆಗೆ ಅನುಗುಣವಾಗಿಯೇ ನಡೆಯುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮರಾಜ ! ಅದಕ್ಕೆ ಅನುಸಾರವಾಗಿ ನೀನು ಪ್ರಜಾಪಾಲನಕಾರ್ಯವನ್ನು ಕೈಗೊಳ್ಳು. ನೀನೇ ಈಗ ಅದರ ನಾಥನು.

ಈ ಕೃಷ್ಣನು ದಯಾಸಾಗರನು. ಸಾಕ್ಷಾದ್ಭಗವಂತನು. ಸರ್ವರಿಗೂ ಆದಿಕಾರಣ-ಪರಮಪುರುಷ-ನಾರಾಯಣ. ತನ್ನ ಮಾಯೆಯಿಂದ ಜನರನ್ನು ಮೋಹಪರವಶರಾಗುವಂತೆ ಮಾಡುತ್ತಾ ಯದುವಂಶದಲ್ಲಿ ಲೀಲಾವತಾರಿಯಾಗಿದ್ದಾನೆ. ಇವನ ಪ್ರಭಾವವು ಗೂಢವಾದುದು. ರಹಸ್ಯಮಯವಾದುದು.

ಇವನನ್ನು ಭಗವಾನ್ ಶಂಕರ, ದೇವರ್ಷಿ ನಾರದ, ಭಗವಾನ್ ಕಪಿಲ ಇಂತಹವರು ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ.

ಯುಧಿಷ್ಠಿರ ! ಯಾರನ್ನು ನೀನು ನನ್ನ ಮಾತುಲೇಯನೆಂದೂ, ಪ್ರಿಯಮಿತ್ರನೆಂದೂ, ಅತ್ಯಂತಹಿತಕಾರಿಯೆಂಡೂ ತಿಳಿದಿರುವೆಯೋ-ಅವನೇ ನಿನ್ನ ರಾಜದೂತ. ನಿನ್ನ ತಮ್ಮನ ರಥದ ಸಾರಥಿ. ಹೀಗೆ ಹಲವಾರು ರೂಪಗಳಿಂದ ನಿನ್ನ ಬಳಿ ಇರುವ ಇವನು ಸ್ವಯಂ ಪರಮಾತ್ಮನು.

ಈ ಸರ್ವಾತ್ಮಾ-ಸಮದರ್ಶೀ-ಅದ್ವಿತೀಯ-ಅಹಂಕಾರರಹಿತನಾದ ನಿಷ್ಪಾಪ ಪರಮಾತ್ಮನಲ್ಲಿ ಕಾರ್ಯಭೇದದಿಂದ ಯಾವ ವಿಧವಾದ ವಿಷಮತೆಯೂ ಹುಟ್ಟುವುದಿಲ್ಲ.

ಯುಧಿಷ್ಠಿರ ! ಹೀಗೆ ಭಗವಾನ್ ಕೃಷ್ಣನು ಸರ್ವತ್ರ ಸಮದರ್ಶಿಯಾಗಿದ್ದರೂ ತನ್ನ ಅನನ್ಯಪ್ರೇಮಿಗಳಾದ ಭಕ್ತರ ಮೇಲೆ ಎಂತಹ ವಿಶೇಷಾನುಗ್ರಹ ? ನೋಡು-ಅಂತಿಮಾವಸ್ಥೆಯಲ್ಲಿರುವ, ಹೇಗೂ ಚಲಿಸಲಾಗದೇ ಬಿದ್ದುಕೊಂಡಿರುವ ನನ್ನನ್ನು ಉದ್ಧರಿಸಲು ತಾನೇ ಬಂದು ದರ್ಶನವನ್ನು ಕೊಟ್ಟಿದ್ದಾನೆ.

ಭಕ್ತ್ಯಾವೇಶ್ಯ ಮನೋಯಸ್ಮಿನ್ ವಾಚಾ ಯನ್ನಾಮ ಕೀರ್ತಯನ್
ತ್ಯಜನ್ ಕಳೇವರಂ ಯೋಗೀ ಮುಚ್ಯತೇ ಕ ಮಕರ್ಮಭಿಃ ||

ಭಗವತ್ಪರಾಯಣರಾದ ಯೋಗಿಪುರುಷರು ಭಕ್ತಿಭಾವದಿಂದ ಇವನಲ್ಲಿ ಮನಸ್ಸನ್ನಿರಿಸಿ, ಇವನ ನಾಮಸಂಕೀರ್ತನೆಯನ್ನು ನಡೆಸುತ್ತಾ ಶರೀರವನ್ನು ತ್ಯಜಿಸುತ್ತಾರೆ. ಸರ್ವಕರ್ಮವಾಸನಾಬಂಧನಗಳಿಂದ ಮುಕ್ತರಾಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಹ ಪ್ರಸನ್ನವದನಾಂಬುಜನಾದ ಚತುರ್ಭುಜಧಾರೀ-ಶ್ರೀಕೃಷ್ಣನು ನಾನು ದೇಹತ್ಯಾಗಮಾಡುವ ಪರ್ಯಂತರ ನನ್ನ ಕಣ್ಣಮುಂದೆಯೇ ನಿಂತು ಕೊಂಡು ದರ್ಶನವನ್ನೀಯುತ್ತಿರಲಿ."

ಹೀಗೆ ಭೀಷ್ಮರು ಹೇಳಲೊಡನೆ-ಯುಧಿಷ್ಠಿರನು ಅವರನ್ನು ಪ್ರಶ್ನಿಸಿ ಅನೇಕಾನೇಕಧಾರ್ಮಿಕ ಪ್ರಶ್ನೆಗಳಿಗೆಸೂಕ್ತವಾದ ಉತ್ತರಗಳನ್ನು ಅರಿತುಕೊಂಡನು.

ನಿವೃತ್ತಿಧರ್ಮ, ಪ್ರವೃತ್ತಿಧರ್ಮ, ದಾನಧರ್ಮ, ರಾಜಧರ್ಮ, ಮೋಕ್ಷ ಧರ್ಮ, ಸ್ತ್ರೀಧರ್ಮ, ಭಗವದ್ಧರ್ಮ-ಇತ್ಯಾದಿಗಳೆಲ್ಲದರ ವರ್ಣನೆಯನ್ನೂ ತಿಳಿದುಕೊಂಡನು. ಪುರುಷಾರ್ಥಚತುಷ್ಟಯಗಳನ್ನೂ ಉಪಾಖ್ಯಾನಗಳ ಮೂಲಕ ಗ್ರಹಿಸಿದನು.

ಧರ್ಮಂ ಪ್ರವದತಸ್ತಸ್ಯ ಸ ಕಾಲಃ ಪ್ರತ್ಯುಪಸ್ಥಿತಃ ।
ಯೋ ಯೋಗಿನಶ್ಛಂದಮೃತ್ಯೋರ್ವಾಂಛಿತಸ್ತೂತ್ತರಾಯಣಃ ॥

ಹೀಗೆ ಭೀಷ್ಮರು ಧಾರ್ಮಿಕಪ್ರವಚನಗಳನ್ನು ಮಾಡುತ್ತಿದ್ದ ಹಾಗೆಯೇ ಉತ್ತರಾಯಣವು ಪ್ರಾಪ್ತವಾಯಿತು. ಸ್ವಚ್ಛಂದಮರಣಶೀಲರಾದ ಮಹಾತ್ಮರು ಉತ್ತರಾಯಣವನ್ನು ವಿಶೇಷತಃ ಅಪೇಕ್ಷಿಸುತ್ತಾರೆ.

ಆಗ ಪಿತಾಮಹಭೀಷ್ಮರು ವಾಣಿಯನ್ನು ಸಂಯಮಗೊಳಿಸಿ ಸರ್ವ ವಿಷಯಗಳಿಂದಲೂ ಮನಸ್ಸನ್ನು ಆಕರ್ಷಿಸಿ ಪರಮಪುರುಷ-ಪರಮಾತ್ಮನಲ್ಲಿ ಸ್ಥಿರ ಗೊಳಿಸಿದರು.

ಚತುರ್ಭುಜಧಾರಿ-ಸುಂದರಾಂಗ-ಶ್ರೀಕೃಷ್ಣನ ದಿವ್ಯವಿಗ್ರಹದ ಮೇಲೆ ಪೀತಾಂಬರವು ಹಾರಾಡುತ್ತಿದ್ದಿತು. ಆ ದಿವ್ಯವಿಗ್ರಹದಲ್ಲಿಯೇ ಅವರ ದೃಷ್ಟಿಯು ನೆಲೆಸಿತು. ಶ್ರೀಕೃಷ್ಣನ ದಿವ್ಯಸಂದರ್ಶನಮಾತ್ರದಿಂದ ಅವರ ಶಾರೀರಿಕತೊಂದರೆಗಳೆಲ್ಲವೂ ನಿವಾರಣೆಯಾಗಿದ್ದುವು. ಭಗವಂತನ ವಿಶುದ್ಧ ಧಾರಣೆಯಿಂದ ಅವರ ಎಲ್ಲ ಅಶುಭಗಳೂ ನಿರ್ಮೂಲವಾಗಿದ್ದುವು. ಈಗ ಸರ್ವವೃತ್ತಿಗಳನ್ನೂ ನಿರೋಧಿಸಿ ಪ್ರೇಮದಿಂದ ಭಗವಂತನನ್ನು ಸ್ತುತಿಸ ಲಾರಂಭಿಸಿದರು.

ಇತಿ ಮತಿರುಪಕಲ್ಪಿತಾ ವಿತೃಷ್ಣಾ
ಭಗವತಿ ಸಾತ್ವತಪುಂಗವೇ ವಿಭೂಮ್ನಿ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಸುಖಮುಪಗತೇ ಕ್ವಚಿದ್ವಿಹರ್ತುಂ
ಪ್ರಕೃತಿಮುಪೇಯುಷಿ ಯದ್ಭವಪ್ರವಾಹಃ ॥

ಮತಿರುಪಕಲ್ಪಿತಾ ವಿತೃಷ್ಣಾ-ನಾನು ಧರ್ಮವನ್ನು ಮಾಡಿ ಯಜ್ಞಾಚರಣೆಯನ್ನು ನಡೆಸಿದೆನು. ಬ್ರಹ್ಮಚರ್ಯವನ್ನು ಪಾಲಿಸಿದೆನು. ಪ್ರತಿಜ್ಞೆಯನ್ನು ನಡೆಸಿದೆನು. ಈ ಸಾಧನೆಗಳ ಫಲವಾಗಿ ಬುದ್ಧಿಯು 'ವಿತೃಷ್ಣಾ' ಆಯಿತು. ಧಾರಣಾಲಕ್ಷಣಾಮತಿಃ ಉಪಕಲ್ಪಿತಾ ಸಮರ್ಪಿತಾ ಸಾತ್ವತಪುಂಗವೇ ಯದುಶ್ರೇಷ್ಠನಾದ ಶ್ರೀಕೃಷ್ಣನಲ್ಲಿ ಧರ್ಮಾದ್ಯಾಚರಣೆಗಳಿಂದ ಕಾಮನಾರಹಿತವಾದ ನನ್ನ ಬುದ್ಧಿಯನ್ನು ಸಮರ್ಪಿಸುತ್ತೇನೆ.

ಪರಮಾತ್ಮನು ವಿಹರಿಸಲು ಇಚ್ಛಿಸಿದಾಗ ಪ್ರಕೃತಿಯೊಡನೆ ಸಂಬಂಧವನ್ನು ಇಟ್ಟುಕೊಳುತ್ತಾನೆ. ಆವಾಗ ಭವಪ್ರವಾಹವು ಸೃಷ್ಟಿಯಾಗುತ್ತದೆ.

ತ್ರಿಭುವನಕಮನಂ ತಮಾಲವರ್ಣಂ
ರವಿಕರಗೌರವರಾಂ ಬರಂ ದಧಾನೇ ।
ವಪುರಲಕಕುಲಾವೃತಾನನಾಬ್ಜಂ
ವಿಜಯಸಖೇ ರತಿರಸ್ತು ಮೇಽನವದ್ಯಾ ॥

ಈ ಶ್ಲೋಕದಿಂದ ಶ್ರೀಕೃಷ್ಣಮೂರ್ತಿಯನ್ನು ವರ್ಣಿಸುತ್ತಾ ಶ್ರೀಕೃಷ್ಣರತಿಯನ್ನು ಪ್ರಾರ್ಥಿಸುತ್ತಾರೆ.

ತ್ರಿಲೋಕಗಳಲ್ಲಿಯೂ ಅತ್ಯಂತಕಮನೀಯವಾದುದೆಂದರೆ ಶ್ರೀಕೃಷ್ಣನ ಶರೀರವು. ಅವನು ತಮಾಲವರ್ಣದವನು. ಬಾಲಸೂರ್ಯಕಿರಣಗಳಂತೆ ಅತ್ಯಂತ ಶುಭ್ರವಾದ (ಪೀತವಾದ) ವಸ್ತ್ರವನ್ನು ಧರಿಸಿದ್ದಾನೆ. ಅವನ ಕಪೋಲಗಳ ಮೇಲೆ (ಹಣೆಯ ಮೇಲೆ) ಗುಂಗುರು ಕೂದಲುಗಳು ಹಾರಾಡುತ್ತಿವೆ. ಇಂತಹ ಮನೋಹರರೂಪಿ-ಅರ್ಜುನ ಸಖನಲ್ಲಿ ನನಗೆ ಯಾವಾಗಲೂ ಪ್ರೀತಿಯಿರಲಿ.

ಯುಧಿ ತುರಗರಜೋವಿಧೂಮ್ರವಿಷ್ವಕ್-
ಕಚಲುಲಿತಶ್ರಮವಾರ್ಯಲಂಕೃತಾಸ್ಯೇ
ಮಮ ನಿಶಿತಶರೈರ್ವಿಭಿದ್ಯಮಾನ-
ತ್ವಚಿ ವಿಲಸತ್ಕವಚೇಽಸ್ತು ಕೃಷ್ಣ ಆತ್ಮಾ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂದಿನ ಶ್ಲೋಕದಲ್ಲಿ ವಿಜಯಸಖೇ ಎಂದು ಹೇಳಿದುದನ್ನು ಇದರಲ್ಲಿ ವಿವರಿಸುತ್ತಾರೆ.

ಕೃಷ್ಣ ! ಆ ಯುದ್ಧರಂಗದಲ್ಲಿ ನಾನು ಕಾಣುತ್ತಿದ್ದ ನಿನ್ನ ಮುಖ ಕಾಂತಿಯು ನೆನಪಿಗೆ ಬರುತ್ತಿದೆ. ನಿನ್ನ ಮುಖದ ಮೇಲೆ ಹಾರಾಡುತ್ತಿದ್ದ ಗುಂಗುರುಕೂದಲುಗಳು ಕುದುರೆಗಳ ಧೂಳಿನಿಂದ ತುಂಬಿಕೊಂಡಿದುವು. ಹಾಗೂ ಶ್ರಮೋದಕಬಿಂದುಗಳು ಮುಖವನ್ನು ಅಲಂಕರಿಸಿದ್ದುವು. ನಾನು ನಿಶಿಶರಗಳಿಂದ ನಿನ್ನಚರ್ಮವನ್ನೂ ಕವಚವನ್ನೂ ಭೇದಿಸುತ್ತಿದ್ದೆ. ಅಂತಹ ಸುಂದರ ಕವಚಮುಂಡಿತನಾದ ಭಗವಾನ್ ಶ್ರೀಕೃಷ್ಣನಲ್ಲಿ ನನ್ನ ಆತ್ಮಾಂತಃ ಕರಣಗಳು ಸಮರ್ಪಿಸಲ್ಪಡಲಿ.

ಸಪದಿ ಸಖಿವಚೋ ನಿಶಮ್ಯ ಮಧ್ಯೇ
ನಿಜಪರಯೋರ್ಬಲಯೋ ರಥಂ ನಿವೇಶ್ಯ
ಸ್ಥಿತವತಿ ಪರಸೈನಿಕಾಯುರಕ್ಷ್ಣಾ
ಹೃತವತಿ ಪಾರ್ಥಸಖೇ ರತಿರ್ಮಮಾಸ್ತು ॥

ಯುದ್ಧರಂಗದಲ್ಲಿ ಅರ್ಜುನನು ನಿನಗೆ (ಶ್ರೀ ಕೃ ಷ್ಣ ನಿ ಗೆ) ಆಜ್ಞಾಪಿಸಿದನು–

ನಿನ್ನ ಪ್ರಾಣಸಖನ ಆಜ್ಞೆಗೆ ಅನುಗುಣವಾಗಿ ಎರಡು ಸೈನ್ಯಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸಿದೆ. ನೀನು ನಿನ್ನ ತೀಕ್ಷ್ಣ ದೃಷ್ಟಿಯಿಂದಲೇ ಶತ್ರುಸೈನಿಕರ ಆಯುಷ್ಯವನ್ನು ಹೀರತೊಡಗಿದೆ. ನಿನ್ನ ಭಕ್ತ ಪಕ್ಷಪಾತಿತ್ವವನ್ನು ತೋರಿಸಿಯೇಬಿಟ್ಟೆ. ಇಂತಹ ಶ್ರೀಕೃಷ್ಣನಲ್ಲಿ ನನ್ನ ರತಿಯು ಮೂಡಲಿ.'

ಇದನ್ನು ಗಮನಿಸಿ-ಭಗವಂತನೇನೋ ಸಮದರ್ಶಿಯು. ಆದರೂ-**ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್.** ವಸ್ತುತಃ ಭಕ್ತರ ಬಗೆಗೆ ಭಗವಂತನ ಪಕ್ಷಪಾತವಿಲ್ಲದಿದ್ದರೆ ಭಕ್ತಿಯ ಬೆಲೆಯೇ ಹೊರಟುಹೋಗುತ್ತಿತ್ತು. ಯಾರಾದರೂ ಭಕ್ತಿಯನ್ನೇಕೆ ಮಾಡುತ್ತಾರೆ ?

ಲೋಕವಾರ್ತಾಸಕ್ತರೊಡನೆಯೂ - ಭಗವದ್ವಾರ್ತಾಸಕ್ತರೊಡನೆಯೂ ಭಗವಂತನ ವ್ಯವಹಾರವು ಸಮವಾದರೆ ಭಕ್ತಿಯ ವೈಶಿಷ್ಟ್ಯವು ಏನುಳಿಯಿತು? ಭಕ್ತನಿಗೆ ಸ್ವಲ್ಪ ವಿಶಿಷ್ಟತೆಯು ದೊರಕಲೇಬೇಕಷ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯವಹಿತಪೃತನಾಮುಖಂ ನಿರೀಕ್ಷ್ಯ
ಸ್ವಜನವಧಾದ್ವಿಮುಖಸ್ಯ ದೋಷಬುದ್ಧ್ಯಾ ।
ಕುಮತಿಮಹರದಾತ್ಮವಿದ್ಯಯಾ ಯಃ
ಚರಣರತಿಃ ಪರಮಸ್ಯ ತಸ್ಯ ಮೇಽಸ್ತು ॥

'ಅರ್ಜುನನು ಸೇನೆಯ ಮುಂಚೂಣಿಯಲ್ಲಿದ್ದ ಕೌರವಾದಿಗಳನ್ನು ನೋಡಿದನು. ಇವರನ್ನು ಕೊಂದರೆ ಪಾಪಸಂಘಟನೆಯಾಗುವುದೆಂದು ತಿಳಿದನು. ಅವನು ಸ್ವಜನವಧದಿಂದವಿಮುಖನಾಗಲು ಗೀತೆಯ ರೂಪದಲ್ಲಿ ಆತ್ಮವಿದ್ಯೆಯನ್ನು ಉಪದೇಶಿಸಿ ತಾತ್ಕಾಲಿಕವಾಗಿ ಮೂಡಿದ್ದ ಅಜ್ಞಾನವನ್ನು ನಾಶಮಾಡಿದೆ. ಇಂತಹ ಪರಮಪುರುಷ ಶ್ರೀಕೃಷ್ಣನ ಚರಣಕಮಲಗಳಲ್ಲಿ ನನ್ನ ರತಿಯು ಮೂಡಲಿ.

ಸ್ವನಿಗಮಮಪಹಾಯ ಮತ್ಪ್ರತಿಜ್ಞಾಂ
ಋತಮಧಿಕರ್ತುಮವಪ್ಲುತೋ ರಥಸ್ಥಃ ।
ಧೃತರಥಚರಣೋಽಭ್ಯಯಾಚ್ಚಲದ್ಗುಃ
ಹರಿರಿವ ಹಂತುಮಿಭಂ ಗತೋತ್ತರೀಯಃ ॥

ನನಗೆ ನೀನು 'ಮಹಾಂತಮನುಗ್ರಹಂ ಕೃತವಾನ್' ಎಂದು ಎರಡು ಶ್ಲೋಕಗಳಿಂದ ಹೇಳುತ್ತಾರೆ.

ಸ್ವನಿಗಮಮಪಹಾಯ-ನೀನು ಹೇಳುವ ಮೊದಲೇ ಪ್ರತಿಜ್ಞೆ ಮಾಡಿದ್ದೆ. 'ಅಶಸ್ತ್ರ ಏವಾಹಂ ಸಾಹಾಯ್ಯಂ ಕರಿಷ್ಯೆ'.

ಇಂತಹ ನಿನ್ನ ಪ್ರತಿಜ್ಞೆಯನ್ನು ಮುರಿದುಬಿಟ್ಟೆ. ಹಾಗೂ ನಾನೂ ಪ್ರತಿಜ್ಞೆಯನ್ನು ಮಾಡಿದ್ದೆ. ಶ್ರೀಕೃಷ್ಣಂ ಶಸ್ತ್ರಂ ಗ್ರಾಹಯಿಷ್ಯಾಮಿ- ಎಂದು.

ನಿನ್ನ ಭಕ್ತನ ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದಕ್ಕೋಸ್ಕರ ನೀನು ಚಕ್ರಪಾಣಿಯಾಗಿ ರಥದಿಂದ ಕೆಳಕ್ಕೆ ಧುಮುಕಿದೆ. ಆನೆಯನ್ನು ಕೊಲ್ಲಲು ಬರುವ ಸಿಂಹದಂತೆ-ನನ್ನ ಮುಂದೆ ನುಗ್ಗಿಬಂದೆ. ಬರುವ ರಭಸದಲ್ಲಿ ಜಾರಿ ಹೋದ ಉತ್ತರೀಯವನ್ನೂ ಗಮನಿಸಲಿಲ್ಲ. ಪೃಥ್ವಿಯೇ ಆ ರಭಸಕ್ಕೆ ನಡುಗಿಹೋಯಿತು. ನಿನ್ನ ಪ್ರತಿಜ್ಞೆಯು ಭಂಗವಾದರೂ ಭಕ್ತನ ಪ್ರತಿಜ್ಞೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ರಕ್ಷಿಸುವುದಕ್ಕಾಗಿ ರಥದ ಚಕ್ರವನ್ನೇ ಹಿಡಿದುಕೊಂಡು ನನ್ನ ಮೇಲೆ ನುಗ್ಗಿ ಬಂದೆ.

ಜನರೆಲ್ಲರೂ ಶ್ರೀಕೃಷ್ಣನಿಂದ ಭೀಷ್ಮನ ವಧೆಯಾಗಿ ಬಿಡುವುದು-ಎಂದು ಹೇಳಿಕೊಳ್ಳುತ್ತಿದ್ದರು. ವಾಸ್ತವಾಂಶವೇನೆಂದರೆ : ನೀನು ನನ್ನ ಪ್ರತಿಜ್ಞೆಯನ್ನು ಪೂರೈಸಿ ನನಗೆ ದೊಡ್ಡಸ್ತಿಕೆಯನ್ನು ಕೊಡಲು ಬರುತ್ತಿದ್ದೆ.

ಶಿತವಿಶಿಖಹತೋ ವಿಶೀರ್ಣದಂಶಃ
ಕ್ಷತಜಪರಿಪ್ಲುತ ಆತತಾಯಿನೋ ಮೇ
ಪ್ರಸಭಮಭಿಸಸಾರ ಮದ್ವಧಾರ್ಥಂ
ಸ ಭವತು ಮೇ ಭಗವಾನ್ ಗತಿರ್ಮುಕುಂದಃ ॥

ಆಗ ನಿನ್ನ ಶತ್ರುವಾಗಿದ್ದ ನಾನು ನಿಶಿತಬಾಣಗಳಿಂದ ನಿನ್ನನ್ನು ಗಾಯಗೊಳಿಸಿದೆನು. ನಿನ್ನ ಕವಚವನ್ನು ಹರಿದುಹಾಕಿದೆನು. ನಿನ್ನ ದೇಹವು ರಕ್ತಸಿಕ್ತವಾಗಿದ್ದಿತು. ಅರ್ಜುನನು ತಡೆದು ನಿಲ್ಲಿಸಿದರೂ ನನ್ನ ವಧೆಗಾಗಿ ನನ್ನೆಡೆಗೆ ಧಾವಿಸಿಬರುತ್ತಿದ್ದೆ. ಆದರೂ ನನ್ನನ್ನು ಅನುಗ್ರಹಿಸಬೇಕೆಂಬ ಭಕ್ತವಾತ್ಸಲ್ಯವು ನಿನ್ನಲ್ಲಿ ತುಂಬಿದ್ದಿತು. ನನ್ನ ಏಕಮಾತ್ರ ಸಂರಕ್ಷಕನಾದ ಶ್ರೀಕೃಷ್ಣನಲ್ಲಿ ನನ್ನ ಮನಸ್ಸು ರಮಿಸುತ್ತಿರಲಿ. ಸದಾ ಅವನೇ ಏಕಮಾತ್ರ ಶರಣ್ಯನು.

ವಿಜಯರಥಕುಟುಂಬ ಆತ್ತತೋತ್ರೇ
ಧೃತಹಯರಶ್ಮಿನಿ ತಚ್ಛ್ರಿಯೇಕ್ಷಣೀಯೇ ।
ಭಗವತಿ ರತಿರಸ್ತು ಮೇ ಮುಮೂರ್ಷೋಃ
ಯಮಿಹ ನಿರೀಕ್ಷ್ಯ ಹತಾ ಗತಾಃ ಸರೂಪಮ್ ॥

ಶ್ರೀಕೃಷ್ಣನು ಅರ್ಜುನನ ರಥದ ರಕ್ಷಣೆಯಲ್ಲಿ ಅತೀವ ಸಾವಧಾನವಾಗಿದ್ದಾನೆ. ಎಡಗೈಯಲ್ಲಿ ಕುದುರೆಗಳ ಹಗ್ಗವನ್ನು ಹಿಡಿದಿದ್ದಾನೆ. ಬಲಗೈಯ್ಯಲ್ಲಿ ಚಾವುಟಿಯಿದೆ. ಇಂತಹ ಸಾರಥ್ಯರೂಪದಿಂದಲೇ ಶೋಭಿಸುವ, ದಿವ್ಯರೂಪಧಾರೀ ಶ್ರೀಕೃಷ್ಣನನ್ನು ನೋಡುತ್ತಾ ಮಡಿದ ಯೋಧರೆಲ್ಲರೂ ಮೋಕ್ಷವನ್ನೇ ಪಡೆದರು. ಮಹಾಭಾರತಯುದ್ಧದಲ್ಲಿ ಶ್ರೀಕೃಷ್ಣನನ್ನು ಸಂದರ್ಶಿಸುತ್ತಾ ಪ್ರಾಣಬಿಟ್ಟು ತತ್ಸಾಯುಜ್ಯವನ್ನೇ ಪಡೆದರು. ಇಂತಹ **ಶ್ರೀಕೃಷ್ಣೇ ಭಗವತಿ ಮುಮೂರ್ಷೋಃ ಮೇ ರತಿರಸ್ತು.'**

ಈಗ ಭೀಷ್ಮರಿಗೆ ಗೋಪಿಕೆಯರ ವಿಚಾರವು ನೆನಪಿಗೆ ಬಂದಿದೆ. ಇದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಿಂದ ಏನರ್ಥವಾಗುತ್ತದೆ? ಗೋಪಿಕಾರಮಣ-ರಾಧಾರಮಣ ಶ್ರೀಕೃಷ್ಣನು ಭೀಷ್ಮರಂತಹ ಧರ್ಮಜ್ಞರಿಗೂ ಆರಾಧ್ಯದೈವವು.

ಅವರು ಹೇಳುತ್ತಾರೆ :

ಲಲಿತಗತಿ ವಿಲಾಸವಲ್ಗುಹಾಸ-
ಪ್ರಣಯನಿರೀಕ್ಷಣಕಲ್ಪಿತೋರುಮಾನಾಃ।
ಕೃತಮನುಕೃತವತ್ಯ ಉನ್ಮದಾಂಧಾಃ
ಪ್ರಕೃತಿಮಗನ್ ಕಿಲ ಯಸ್ಯ ಗೋಪವಧ್ವಃ ॥

'ಭಗವಾನ್ ಶ್ರೀಕೃಷ್ಣನ ಮುಗುಳುನಗೆ, ಪ್ರೇಮಪೂರಿತ ನೋಟ, ಮಾತು ಹಾಗೂ ಅವನ ಚೇಷ್ಟೆಗಳಲ್ಲಿ ಗೋಪಿಕೆಯರು ತನ್ಮಯರಾಗಿ ಬಿಟ್ಟಿದ್ದರು. ರಾಸಲೀಲೆಯಲ್ಲಿ ಇದ್ದಕ್ಕಿದ್ದಂತೆಯೇ ಶ್ರೀಕೃಷ್ಣನ ಅಂತರ್ಧಾನವಾಯಿತು. ಪ್ರೇಮೋನ್ಮಾದದಿಂದ ಉನ್ಮತ್ತೆಯರಾದ ಗೋಪಿಕೆಯರು ಶ್ರೀಕೃಷ್ಣಲೀಲೆಯನ್ನು ಅನುಕರಿಸುತ್ತಾ ತನ್ಮಯತೆಯನ್ನು ಪಡೆದರು. ಇಂತಹ ಶ್ರೀಕೃಷ್ಣನಲ್ಲಿ ನನ್ನ ಮನಸ್ಸು ರಮಿಸಲಿ.

ಮುನಿಗಣನೃಪವರ್ಯಸಂಕುಲೇಽಂತಃ-
ಸದಸಿ ಯುಧಿಷ್ಠಿರರಾಜಸೂಯ ಏಷಾಮ್ ।
ಅರ್ಹಣಮುಪಪೇದ ಈಕ್ಷಣೀಯೋ
ಮಮ ದೃಷ್ಟಿಗೋಚರ ಏಷ ಆವಿರಾತ್ಮಾ ॥

ಯುಧಿಷ್ಠಿರನ ರಾಜಸೂಯಯಾಗದರು ಸಂದರ್ಭದಲ್ಲಿ ಅನೇಕ ಋಷಿ-ಮುನಿಪುಂಗವರಿಂದ ರಾಜ-ಮಹಾರಾಜರುಗಳಿಂದ ತುಂಬಿದ್ದ ಆ ಮಹಾಸಭೆಯಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆಯು ನಡೆದಿದ್ದುದನ್ನು ಈ ನೇತ್ರಗಳು ಕಂಡು ಆನಂದಿಸಿವ್ವವು. ಈ ನನ್ನ ಅಂತ್ಯಕಾಲದಲ್ಲಿಯೂ ಆ ಮಹನೀಯನು ನನಗೆ ದರ್ಶನವನ್ನು ಕೊಟ್ಟು ಅನುಗ್ರಹಿಸುತ್ತಿದ್ದಾನೆ.

ತಮಿಮಮಹಮಜಂ ಶರೀರಭಾಜಾಂ
ಹೃದಿ ಹೃದಿ ಧಿಷ್ಠಿತಮಾತ್ಮಕಲ್ಪಿತಾನಾಮ್ ।
ಪ್ರತಿದೃಶಮಿವ ನೈಕಧಾರ್ಕಮೇಕಂ
ಸಮಧಿಗತೋಽಸ್ಮಿ ವಿಧೂತಭೇದಮೋಹಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬನೇ ಸೂರ್ಯನು ಹಲವಾರು ಕಣ್ಣುಗಳಲ್ಲಿ ಅನೇಕರೂಪಗಳಲ್ಲಿ ಕಾಣುವಂತೆ ಅಜನ್ಮಾಭಗವಾನ್ ಶ್ರೀಕೃಷ್ಣನು ತನ್ನಿಂದಲೇ ರಚಿತವಾದ ಅನೇಕಶರೀರಧಾರಿಗಳ ಹೃದಯಗಳಲ್ಲಿ ಅನೇಕರೂಪಗಳಿಂದ ತಿಳಿಯಲ್ಪಡುತ್ತಿದ್ದರೂ-ಅವನು ಒಬ್ಬನೇ. ಸರ್ವಾಂತಃಕರಣದಲ್ಲಿಯೂ ವಿರಾಜಮಾನನಾಗಿದ್ದಾನೆ.

ವಿಧೂತಭೇದಮೋಹಃ-ಭೇದ-ಮೋಹಗಳಿಂದ ವಿನಿರ್ಮುಕ್ತರಾದವರು ಭಗವತ್ಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ಸ್ವಸ್ವರೂಪದಲ್ಲಿಯೇ ದರ್ಶನವನ್ನು ಪಡೆಯುತ್ತಾರೆ.

ಹೀಗೆ ಪಿತಾಮಹ ಭೀಷ್ಮರು ಮನಸ್ಸು-ವಾಣೀ-ದೃಷ್ಟಿಗಳ ವೃತ್ತಿಗಳ ಮೂಲಕ ಭಗವಾನ್ ಕೃಷ್ಣನಲ್ಲಿ ತಮ್ಮನ್ನು ತಾವು ಲೀನಮಾಡಿದರು.

ಸಃ ಅಂತಃಶ್ವಾಸ ಉಪಾರಮತ್ ಅವರು ವಾಸನಾರೂಢರಾಗಿ ಲೋಕಾಂತರಗಳಿಗೆ ಹೋಗಲಿಲ್ಲ. ಅಶರೀರಪುರುಷರಾರೂ ಅವರನ್ನು ಕರೆದುಕೊಂಡು ಹೋಗಲು ಬಂದಿರಲಿಲ್ಲ.

ನ ತಸ್ಯ ಪ್ರಾಣಾ ಉತ್ಕ್ರಾಮಂತಿ । ಇಹೈವ ಪ್ರವಿಲೀಯಂತೇ ಎನ್ನುವಂತೆ ಅವರ ಸೂಕ್ಷ್ಮ ಶರೀರವು ಪಂಚಭೂತಗಳಲ್ಲಿ ಐಕ್ಯವಾಯಿತು.

ಅವರ ಉತ್ಕ್ರಾಂತಿಯಾಗಲಿಲ್ಲ. ಅವರಲ್ಲಿ ಗತಿ-ಆಗತಿಗಳೊಂದೂ ನಡೆಯಲಿಲ್ಲ. ಎಲ್ಲರೂ ನೋಡುತ್ತಿದ್ದಂತೆಯೇ ಭೀಷ್ಮರು ನಿಷ್ಕಲಬ್ರಹ್ಮನಲ್ಲಿ ಲೀನವಾದರು.

ಸಂಪದ್ಯಮಾನಮಾಜ್ಞಾಯ ಭೀಷ್ಮಂ ಬ್ರಹ್ಮಣಿ ನಿಷ್ಕಲೇ ।
ಸರ್ವೇಬಭೂವುಸ್ತೇ ತೂಷ್ಣೀಂ ವಯಾಂಸೀವ ದಿನಾತ್ಯಯೇ ॥

ಭೀಷ್ಮರು ಅನಂತಬ್ರಹ್ಮನಲ್ಲಿ ಲೀನರಾದುದನ್ನು ತಿಳಿದು-ಸೂರ್ಯಾಸ್ತವಾದ ಮೇಲೆ ಪಕ್ಷಿಗಳು ಕಲಕಲರವನ್ನು ಮಾಡದೇ ಶಾಂತವಾಗುವಂತೆ-ಎಲ್ಲರೂ ಮೌನವನ್ನು ಧರಿಸಿದರು.

ಆಗ ದೇವತೆಗಳೂ ಮಾನವರೂ ನಗಾರಿಯನ್ನು ಬಾರಿಸತೊಡಗಿದರು. ರಾಜರು ಭೀಷ್ಮರನ್ನು ಪ್ರಶಂಸಿಸಿದರು. ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅತ್ಯಂತ ದುಃಖಿತನಾದ ಯುಧಿಷ್ಠಿರನು ವಿಧಿಗೆ ಅನುಗುಣವಾಗಿ ಅಂತ್ಯಕ್ರಿಯೆಗಳನ್ನು ನಡೆಸಿದನು. ಋಷಿ-ಮುನಿಗಳೆಲ್ಲರೂ ಆನಂದದಿಂದ ಶ್ರೀಕೃಷ್ಣನನ್ನು ಸ್ಮರಿಸುತ್ತಿದ್ದರು. ಪವಿತ್ರಭಾವನಾಮಯರಾಗಿ ಸ್ವಸ್ಥಾನಗಳಿಗೆ ತೆರಳಿದರು.

ಯುಧಿಷ್ಠಿರನು ಶ್ರೀಕೃಷ್ಣನೊಡನೆ ಹಸ್ತಿನಾವತಿಗೆ ಬಂದು ಗಾಂಧಾರೀ-ಧೃತರಾಷ್ಟ್ರರನ್ನು ಸಮಾಧಾನಪಡಿಸಿದನು. ಆವರ ಆಶೀರ್ವಾದ ಹಾಗೂ ಶ್ರೀಕೃಷ್ಣನ ಅನುಮತಿಯಿಂದ ರಾಜಾ ಯುಧಿಷ್ಠಿರನು ಧರ್ಮದಿಂದ ರಾಜ್ಯಭಾರವನ್ನು ನಡೆಯಿಸಿದನು."

9ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೧೦

ಶ್ರೀಕೃಷ್ಣನ ದ್ವಾರಕಾಗಮನ

ಶೌನಕಾದಿಗಳು ಸೂತನನ್ನು ಪ್ರಶ್ನಿಸುತ್ತಾರೆ :

"ಮಹಾತ್ಮರೇ ! ಧಾರ್ಮಿಕಶಿರೋಮಣಿಯಾದ ಯುಧಿಷ್ಠಿರನು ತನ್ನ ಪೈತೃಕಸಂಪತ್ತಿಯನ್ನು ಅಪಹರಿಸಲು ಬಯಸಿದ್ದ ಶತ್ರುಗಳನ್ನು ನಿಗ್ರಹಿಸಿ ತನ್ನ ತಮ್ಮಂದಿರೊಂದೊಡಗೊಂಡು ಹೇಗೆ ರಾಜ್ಯವನ್ನು ಪಾಲಿಸಿದನು ? ಏನೇನು ಕೆಲಸಗಳನ್ನುಮಾಡಿದನು ?

ಸ್ವಭಾವತಃ ಅವನ ಮನಸ್ಸು ಭೋಗಾಸಕ್ತವಾಗಿರಲಿಲ್ಲ."

ಸೂತಪೌರಾಣಿಕರು ಉತ್ತರಿಸುತ್ತಾರೆ :

"ಭಗವಾನ್ ಶ್ರೀಕೃಷ್ಣನು ಸೃಷ್ಟಿಯನ್ನು ಪುನಃಉದ್ಧರಿಸುವ ಇಚ್ಛೆಯಿಂದ ಯುಧಿಷ್ಠಿರನನ್ನು ಸಿಂಹಾಸನದ ಮೇಲೆ ಕೂರಿಸಿದನು.

ಭೀಷ್ಮಪಿತಾಮಹರ ಹಾಗೂ ಶ್ರೀಕೃಷ್ಣನ ಉಪದೇಶಾಮೃತದಿಂದ ಯುಧಿಷ್ಠಿರನ ಮಾನಸಿಕಭ್ರಾಂತಿಯು ಅಳಿದುಹೋಗಿದ್ದಿತು. ಭಗವದಾಶ್ರಯವನ್ನು ಪಡೆದಿದ್ದ ಯುಧಿಷ್ಠಿರನು ಸಾಗರಪರ್ಯಂತವಾದ ಭೂಮಿಯನ್ನು ದೇವೇಂದ್ರನೋಪಾದಿಯಲ್ಲಿ ಪಾಲಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನ ಸೋದರರಾದ ಭೀಮಾದಿಗಳು ತಮ್ಮ ಸಂಪೂರ್ಣಸಹಕಾರವನ್ನು ಕೊಡುತ್ತಾ ಯುಧಿಷ್ಠಿರನ ಆಜ್ಞಾಧಾರಕರಾಗಿದ್ದರು. ರಾಜ್ಯದಲ್ಲಿ ಅವಶ್ಯಕತೆಗಳಿಗೆ ಅನುಗುಣವಾಗಿ ಮಳೆಯಾಗುತ್ತಿದ್ದಿತು. ಅತಿವೃಷ್ಟಿಯೂ ಇಲ್ಲ ; ಅನಾವೃಷ್ಟಿಯೂ ಇಲ್ಲ.

ಭೂದೇವಿಯು ಸಮೃದ್ಧವಾಗಿ ಬೆಳೆಯನ್ನು ಕೊಡುತ್ತಿದ್ದಳು. ಹಸುಗಳು ಸಮೃದ್ಧವಾಗಿ ಹಾಲುಕರೆಯುತ್ತಿದ್ದುವು. ನದೀ-ಸಮುದ್ರಗಳು ಮೇರೆ ತಪ್ಪುತ್ತಿರಲಿಲ್ಲ. ಪರ್ವತಗಳು, ವೃಕ್ಷಗಳು, ಓಷಧಿಗಳು ಚನ್ನಾಗಿ ಫಲವನ್ನು ಕೊಡುತ್ತಿದ್ದುವು. ಆಧಿ-ವ್ಯಾಧಿಗಳಿರಲಿಲ್ಲ. ಆಧಿಭೌತಿಕ-ಆಧಿದೈವಿಕ-ಆಧ್ಯಾತ್ಮಿಕ ಕ್ಲೇಶಗಳೇನೂ ಇರಲಿಲ್ಲ.

ಶ್ರೀಕೃಷ್ಣನು ತನ್ನ ತಂಗಿಯ ಹಾಗೂ ಬಂಧುಗಳ ಶೋಕನಿವಾರಣೆಗಾಗಿ ಕೆಲವು ತಿಂಗಳು ಹಸ್ತಿನಾಪುರದಲ್ಲಿಯೇ ಇದ್ದನು.

ಒಂದು ದಿನ ಕೃಷ್ಣನು ತಾನು ದ್ವಾರಕೆಗೆ ಹೊರಡಬೇಕೆಂದು ಯುಧಿಷ್ಠಿರನ ಅನುಮತಿಯನ್ನು ಕೇಳಿದನು.

ಅತ್ಯಂತ ಪ್ರೇಮ-ವಿಶ್ವಾಸಗಳಿಂದ ಯುಧಿಷ್ಠಿರನು ಕೃಷ್ಣನನ್ನು ಆಲಿಂಗಿಸಿಕೊಂಡು ಆಗಬಹುದೆಂದನು.

ಭಗವಂತನು ಅವನನ್ನಾಲಿಂಗಿಸಿಕೊಂಡ ನಂತರ ರಥಾರೂಢನಾದನು. ಕೆಲವರು ಆಲಿಂಗಿಸಿಕೊಂಡರು. ಕೆಲವರು ನಮಸ್ಕರಿಸಿದರು.

ಸುಭದ್ರಾ-ದ್ರೌಪದೀ-ಕುಂತೀ ಇವರುಗಳೂ, ಧೃತರಾಷ್ಟ್ರ-ಯುಯುತ್ಸು ನಕುಲ-ಸಹದೇವಾದಿಗಳೂ, ಒಟ್ಟಾರೆ ಈ ವಿಷಯವನ್ನು ಕೇಳಿದವರೆಲ್ಲರೂ ಮೂರ್ಛಿತರಾದರು.

ಚಕ್ರಪಾಣಿಯ ವಿರಹವು ಸಹಿಸಲಸಾಧ್ಯವಾದುದು, ಈ ಒಂದು ವಿಷಯವನ್ನು ಮುಖ್ಯವಾಗಿ ಗಮನಿಸಬೇಕು. ಮನುಷ್ಯರು ದುಸ್ಸಂಗವನ್ನು ತ್ಯಜಿಸಿ ಸತ್ಸಂಗಿಗಳಾಗಿ ಬಿಟ್ಟರೆ ನಿಜವಾದ ಸುಖ-ದುಃಖಗಳ ಅರಿವು ಮೂಡುವುದು. ಅನಂತರ ಸತ್ಸಂಗಜನ್ಯಸುಖವನ್ನು ತ್ಯಜಿಸಲು ಮನಸ್ಸು ಬಾರದು.

ಅದರ ಮೇಲೆ ಜೀವನದಲ್ಲಿ ಒಂದೇ ಸಾರಿಯಾಗಲಿ ಭಗವತ್ ಸಾನ್ನಿಧ್ಯವು

Sri Vidyabharathi Book Centre, Sringeri

CC-O. In Public Domain. Digitized by eGangotri

ದೊರಕಿ ಶ್ರೀಚರಣಾರವಿಂದಸೇವಾಸೌಭಾಗ್ಯವು ಪ್ರಾಪ್ತವಾಗಿಬಿಟ್ಟರೆ ಹೇಳುವುದೇನಿದೆ ?

ಪಾಂಡವರಾದರೋ ಪ್ರತಿದಿನವೂ ಭಗವಂತನನ್ನು ಸಂದರ್ಶಿಸುತ್ತಿದ್ದರು. ಸ್ಪರ್ಶಿಸುತ್ತಿದ್ದರು. ಸಲ್ಲಾಪಗಳನ್ನು ನಡೆಸುತ್ತಿದ್ದರು. ಜೊತೆಯಲ್ಲಿಯೇ ಮಲಗುತ್ತಿದ್ದರು. ಭಗವಂತನೊಡನೆ ಊಟಮಾಡುತ್ತಿದ್ದರು. ಇಂತಹವರು ಶ್ರೀಕೃಷ್ಣ ವಿರಹವನ್ನು ಹೇಗೆ ತಾನೆ ಸಹಿಸಿಯಾರು ? ಅವರ ಹೃದಯವು ಕರಗಿ ನೀರಾಗುತ್ತಿತ್ತು. ನಿರ್ನಿಮೇಷನೇತ್ರಗಳಿಂದ ಭ ಗ ವ ಂ ತ ನ ನ್ನು ನೋಡುತ್ತಾ ಸ್ನೇಹಬಂಧನದಿಂದ ಬಂಧಿತರಾಗಿ ಆ ಕಡೆ–ಈ ಕಡೆ ಓಡಾಡುತ್ತಿದ್ದರು.

ಸ್ತ್ರೀಯರು ಕಷ್ಟಪಟ್ಟು ತಮ್ಮ ಕಣ್ಣೀರನ್ನು ತಡೆಯುತ್ತಿದ್ದರು. ಹೊರಡುವ ಸಮಯದಲ್ಲಿ ಅಪಶಕುನವಾಗಬಾರದಲ್ಲ !

ಮಂಗಳವಾದ್ಯಗಳು ಘೋರ್ಗರೆದುವು. ಕುರುವಂಶಸ್ತ್ರೀಯರು ಪ್ರಾಸಾದಗಳನ್ನೇರಿ ತಮ್ಮ ಮನೋಹರವಾದ ನೋಟದಿಂದ ಕೃಷ್ಣನನ್ನು ನೋಡುತ್ತಾ ಪುಷ್ಪವೃಷ್ಟಿಯನ್ನು ಕರೆದರು.

ಅರ್ಜುನನು ಶ್ವೇತಚ್ಛತ್ರಿಯನ್ನು ಹಿಡಿದನು. ಉದ್ಧವನೂ-ಸಾತ್ಯಕಿಯೂ ವ್ಯಜನಗಳನ್ನು ಬೀಸಿದರು. ಬ್ರಾಹ್ಮಣರು ವೇದಾಶೀರ್ವಾದಗಳನ್ನು ಮಾಡುತ್ತಿದ್ದರು.

ಶ್ರೀಕೃಷ್ಣನು ಹಸ್ತಿನಾಪುರದಿಂದ ಹೊರಟಾಗ ಅಲ್ಲಿಯ ಸ್ತ್ರೀಯರು ಶ್ರೀಕೃಷ್ಣನನ್ನು ಸ್ತುತಿಸಿದರು.

ಅದನ್ನು ಕೇಳಿ ಶ್ರುತಿಗಳು ಮೌನಧಾರಣೆಯನ್ನು ಮಾಡಿದುವು. ಏಕೆಂದರೆ : ಶ್ರುತಿಗಳ ದುಃಖಕ್ಕೆ ಕಾರಣವಿಷ್ಟೆ. ನಾವು ನಿರ್ಗುಣಬ್ರಹ್ಮವನ್ನು ವರ್ಣಿಸಿದೆವು. ಸಗುಣಬ್ರಹ್ಮವನ್ನು ವರ್ಣಿಸಲಿಲ್ಲವಲ್ಲ ?

ಹಸ್ತಿನಾಪುರದ ಕುಲೀನರಮಣಿಯರ ಮನಸ್ಸು ಶ್ರೀಕೃಷ್ಣನಲ್ಲಿ ಲೀನವಾಗಿ ಹೋಗಿತ್ತು.

ಅವರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು. ಕೇಳುವವರ ಮನಸ್ಸೂ-ಕಿವಿಗಳೂ ಆಕೃಷ್ಟವಾಗುತ್ತಿದ್ದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಸಖಿಯರೇ ! ಪ್ರಳಯಕಾಲದಲ್ಲಿಯೂ ತನ್ನ ಅದ್ವಿತೀಯ-ನಿರ್ವಿಶೇಷ ಸ್ಥಿತಿಯಲ್ಲಿ ಇರುವ ಪರಮಪುರುಷನೇ ಇವನು.

ಆಗ ಸೃಷ್ಟಿಗೆ ಮೂಲಕಾರಣಗಳಾದ ತ್ರಿಗುಣಗಳೂ ಇರುವುದಿಲ್ಲ. ಜೀವರೆಲ್ಲರೂ ಜಗದಾತ್ಮನಲ್ಲಿ ಲೀನರಾಗುತ್ತಾರೆ. ಮಹತ್ತತ್ತ್ವಾದಿ ಸಮಸ್ತ ಶಕ್ತಿಗಳೂ ತಮ್ಮ ಕಾರಣವಾದ ಅವ್ಯಕ್ತದಲ್ಲಿ ಸುಪ್ತವಾಗುತ್ತವೆ.

ಅನಂತರ ಅವನೇ ನಾಮ-ರೂಪರಹಿತಸ್ವರೂಪದಲ್ಲಿ ನಾಮ-ರೂಪಗಳ ನಿರ್ಮಾಣವಾಗಲೆಂದು ಇಚ್ಛಿಸಿದನು. ಪರಮಾತ್ಮನ ಅಂಶಭೂತಗಳಾದ ಜೀವರನ್ನು ಮೋಹಗೊಳಿಸುವ ಹಾಗೂ ಸೃಷ್ಟಿಯ ರಚನೆಯಲ್ಲಿ ಪ್ರವೃತ್ತವಾಗುವ ಪ್ರಕೃತಿಯನ್ನು ಅನುಸರಿಸಿದನು. ಹಾಗೂ ಜೀವರ ವ್ಯವಹಾರಕ್ಕಾಗಿ ವೇದ-ಶಾಸ್ತ್ರಾದಿಗಳನ್ನು ರಚಿಸಿದನು.

ಈ ಜಗತ್ತಿನಲ್ಲಿ ಯೋಗಿಗಳು ಪ್ರಾಣಜಿತರಾಗಿ ಪ್ರಫುಲ್ಲವಾದ ನಿರ್ಮಲ ಹೃದಯದಲ್ಲಿ ಪರಮಪುರುಷನಾದ ಶ್ರೀಕೃಷ್ಣಪರಬ್ರಹ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾರೆ.

ಭಗವದ್ಭಕ್ತಿಯಿಂದ ಮಾತ್ರ ಅಂತಃಕರಣವು ಸಂಶುದ್ಧವಾಗುವುದು. ಯೋಗಾದಿಗಳಿಂದಾಗುವುದಿಲ್ಲ.

ಸಖಿ ! ವ್ಯಾಸಾದಿ ಮಹರ್ಷಿಗಳು ಶಾಸ್ತ್ರಾದಿಗಳಲ್ಲಿ ಈ ಅದ್ವಿತೀಯ ಈಶ್ವರನ ಲೀಲಾವರ್ಣನೆಗಳನ್ನು ಮಾಡಿದ್ದಾರೆ.

ಕೃಷ್ಣನು ಲೀಲೆಯಿಂದಲೇ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ನಡೆಸುತ್ತಾನೆ. ಆದರೆ ಎಲ್ಲದರಲ್ಲಿಯೂ ನಿರಾಸಕ್ತನಾಗಿರುತ್ತಾನೆ.

ತಾಮಸಬುಧ್ಯಾತ್ಮಕರಾದ ರಾಜ-ಮಹಾರಾಜರು ಅಧರ್ಮಪೋಷಕರಾದಾಗ ಇವನೇ ಸತ್ತ್ವಗುಣಿಯಾಗಿ -ಐಶ್ವರ್ಯ, ಸತ್ಯ, ಋತ, ದಯಾ, ಯಶಸ್ಸುಗಳನ್ನು ಪ್ರಕಟಗೊಳಿಸುತ್ತಾ ಸಂಸಾರದ ಕಲ್ಯಾಣಕ್ಕಾಗಿ ಅನೇಕ ಅವತಾರಗಳನ್ನು ಧರಿಸುತ್ತಾನೆ.

ಅಹೋ ಆಶ್ಚರ್ಯವು ! ಲಕ್ಷ್ಮೀಲೋಲನು ಯದುವಂಶದಲ್ಲಿ ಅವತರಿಸಿ ಇದರ ಹಿರಿಮೆಯನ್ನು ಬೆಳಗಿಸಿದನು. ತನ್ನ ಬಾಲ್ಯದ ಚಟುವಟಿಕೆಗಳಿಂದ ವ್ರಜ (ನಂದಗೋಕಲ)ವನ್ನು ಧನ್ಯತಮವನ್ನಾಗಿಮಾಡಿದ್ದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಾರಕೆಯಾದರೋ ಸ್ವರ್ಗದ ಯಶಸ್ಸನ್ನೂ ತಿರಸ್ಕರಿಸಿ ಪೃಥ್ವಿಯ ಪವಿತ್ರಯಶಸ್ಸನ್ನು ಅಧಿಕಪಡಿಸಿದೆ.

ಅಲ್ಲಿಯ ಪ್ರಜೆಗಳು ಕೃಷ್ಣನ ಮಂದ-ಮಂದಹಾಸಪರಿಶೋಭಿತವಾದ ಮುಖಮಂಡಲವನ್ನು ದರ್ಶನಮಾಡುತ್ತಾ ಧನ್ಯರಾಗುತ್ತಾರೆ.

ಸಖಿ ! ಈ ಮಹನೀಯನನ್ನು ವಿವಾಹವಾಗಿರುವ ಆ ರಮಣೀಮಣಿಯರು ಏನು ಸುಕೃತಶಾಲಿಗಳೋ ? ಹಿಂದಿನ ಜನ್ಮದಲ್ಲಿ ಅದೆಷ್ಟು ವ್ರತೋಪವಾಸದಿಗಳನ್ನು ನಡಸಿದ್ದರೋ ! ಹೇಗೆ ಇವನನ್ನು ಆರಾಧಿಸಿ ಸಂತುಷ್ಟಿಗೊಳಿಸಿದರೋ !

ಇಲ್ಲದಿದ್ದರೆ ಇವನ ಅಧರಸುಧಾಪಾನವು ಅವರಿಗೆ ಹೇಗೆ ತಾನೇ ಪದೇ ಪದೇ ದೊರೆಕುತ್ತಿತ್ತು ?

ಈತನ ಸ್ಮರಣೆಯಿಂದಲೇ ವಜ್ರಾಂಗನೆಯರು ಮೂರ್ಛಿತರಾಗುತ್ತಿದ್ದರು.

ಸ್ವಯಂವರಗಳಲ್ಲಿ ಶಿಶುಪಾಲಾದಿ ಮದಮತ್ತರಾದ ರಾಜರನ್ನು ಮರ್ದಿಸಿ ರುಕ್ಮಿಣ್ಯಾದಿ ಸ್ತ್ರೀಯರನ್ನು ಈ ಮಹಾವ ಹಿಮನು ವಿವಾಹವಾದನು.

ಪ್ರದ್ಯುಮ್ನ, ಸಾಂಬ ಇವರೆಲ್ಲರೂ ಇವನ ಮಕ್ಕಳು.

ಭೌಮಾಸುರನನ್ನು ನಿಗ್ರಹಿಸಿ ಸಾವಿರಾರು ಸುಂದರಸ್ತ್ರೀಯರನ್ನು ವಿವಾಹವಾದನು.

ವಸ್ತುತಃ ಅವರೆಲ್ಲರೂ ಧನ್ಯರು. ಅವರ ಸ್ತ್ರೀತ್ವವು ಸಾರ್ಥಕವಾದುದು.

ಈ ಮಹಾಮಹಿಮನ ಮಹಿಮಾವರ್ಣನೆಯನ್ನು ಯಾರು ತಾನೇ ಮಾಡಲು ಸಾಧ್ಯ ?

ಈ ಕಮಲನಯನ ಭಗವಾನ್ ಕೃಷ್ಣನು ನಾನಾವಿಧವಾದ ಶೃಂಗಾರ ಚೇಷ್ಟೆಗಳಿಂದ ಅವರೆಲ್ಲರನ್ನೂ ರಮಿಸುತ್ತಾ, ಪಾರಿಜಾತಾದಿ ಪ್ರಿಯವಸ್ತುಗಳೆಲ್ಲವನ್ನೂ ತಂದುಕೊಡುತ್ತಾ, ಅವರುಗಳ ಪ್ರೇಮಾನಂದಗಳನ್ನು ಅಭಿವೃದ್ಧಿಪಡಿಸುತ್ತಾ-ಅವರನ್ನು ಒಂದು ಘಳಿಗೆಯೂ ಬಿಟ್ಟಿರುವುದಿಲ್ಲ."

ಹೀಗೆ ಪರಸ್ಪರಸಂಭಾಷಣೆಯಲ್ಲಿ ಮಗ್ನವಾಗಿರುವ ಸ್ತ್ರೀವೃಂದವನ್ನು ಅವಲೋಕಿಸುತ್ತಾ ಮಂದಹಾಸವನ್ನು ಬೀರುತ್ತಾ ಶ್ರೀಕೃಷ್ಣನು ಮುನ್ನಡೆದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಜಾಶತ್ರುವಾದ ಯುಧಿಷ್ಠಿರನು ದಾರಿಯಲ್ಲಿ ಯಾರಾದರೂ ಕೃಷ್ಣನ ಮೇಲೆ ಕೈಮಾಡಿಯಾರೆಂದು ಒಂದು ಸಣ್ಣ ಚತುರಂಗಬಲವನ್ನೇ ಅವನ ಹಿಂದೆ ಕಳುಹಿಸಿದನು.

ಯಾರಿಗೂ ಕೃಷ್ಣನನ್ನು ಬಿಟ್ಟಿರಲು ಮನಸ್ಸಿಲ್ಲ. ವಿರಹವ್ಯಥೆಯಿಂದ ಬಳಲುತ್ತಿದ್ದಾರೆ. ಬಹಳ ದೂರ ಅನುಸರಿಸಿ ಹಿಂದೆ-ಹಿಂದೆಯೇ ಹೋದರು.

ಆಗ ಕೃಷ್ಣನು ಆಗ್ರಹದಿಂದ ಎಲ್ಲರನ್ನೂ ಹಿಂದಕ್ಕೆ ಕಳುಹಿಸಿ ಸಾತ್ಯಕಿ-ಉದ್ಧವಾದಿಗಳೊಡನೆ ದ್ವಾರಕೆಯತ್ತ ಪ್ರಯಾಣಬೆಳೆಸಿದನು.

ಶ್ರೀಕೃಷ್ಣನ ರಥವು ಪಾಂಚಾಲ, ಶೂರಸೇನ, ಬ್ರಹ್ಮಾವರ್ತ, ಕುರುಕ್ಷೇತ್ರ, ಮತ್ಸ್ಯ, ಸಾರಸ್ವತ, ಮರುಧನ್ವಾದಿ ದೇಶಗಳನ್ನು ದಾಟಿಕೊಂಡು ಸೌವೀರ-ಆಭೀರದೇಶಗಳ ಪಶ್ಚಿಮಭಾಗವಾದ ಆನರ್ತದೇಶವನ್ನು ಸೇರಿತು.

ಆಗ ಮಾರ್ಗಾಯಾಸದಿಂದ ರಥದ ಕುದುರೆಗಳು ಬಳಲಿದ್ದುವು. ಮಾರ್ಗಮಧ್ಯದಲ್ಲಿ ರಾಜರೂ ಹಾಗೂ ಪ್ರಜೆಗಳೂ ಉಪಹಾರಾದಿಗಳಿಂದ ಶ್ರೀಕೃಷ್ಣನನ್ನೂ ಶ್ರೀಕೃಷ್ಣನ ಪರಿವಾರದವರನ್ನೂ ಸತ್ಕರಿಸುತ್ತಿದ್ದರು.

ಸಾಯಂಕಾಲದಲ್ಲಿ ರಥದಿಂದಿಳಿದು ಪಕ್ಕದ ಜಲಾಶಯದಲ್ಲಿ ಸಂಧ್ಯಾವಂದನೆಯನ್ನು ನಡೆಸಿ ವಿಶ್ರಮಿಸುತ್ತಿದ್ದರು. ಇದು ಅವರ ದಿನಚರ್ಯೆಯಾಗಿತ್ತು."

10ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೧೧
ದ್ವಾರಕೆಯಲ್ಲಿ ಶ್ರೀಕೃಷ್ಣನಿಗೆ ರಾಜೋಚಿತ ಸ್ವಾಗತ

ಸೂತರು ಪ್ರವಚನವನ್ನು ಮುಂದುವರಿಸುತ್ತಾ ಹೇಳುತ್ತಾರೆ :

"ಆನರ್ತದೇಶವನ್ನು ಸೇರಿದ ಶ್ರೀಕೃಷ್ಣನು ಅಲ್ಲಿಯವರ ವಿರಹವನ್ನು ಶಾಂತಪಡಿಸುತ್ತಾ ತನ್ನ ಪಾಂಚಜನ್ಯನಾಮಕಶಂಖವನ್ನು ಧ್ವನಿಗೈದನು,

ಎರಡು ಕಮಲಪುಷ್ಪಗಳ ಮಧ್ಯೆ ಕುಳಿತಿರುವ ಹಂಸವು ಕೂಗುವಂತೆ ಭಗವಂತನ ಕರಕಮಲಗಳ ಮಧ್ಯೆ ರಾಜಹಂಸವು ಕುಳಿತು ಗಾನಮಾಡುತ್ತಿರುವಂತೆ ಕಾಣುತ್ತಿದ್ದಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಶಂಖಧ್ವನಿಯು ಸಂಸಾರಭಯವನ್ನು ಕಳೆಯುವುದಾಗಿದೆ. ನಾಗರಿಕರೆಲ್ಲರೂ ಶ್ರೀಕೃಷ್ಣದರ್ಶನಾಕಾಂಕ್ಷೆಯಿಂದ ಓಡೋಡಿ ಬಂದರು.

ಕೃಷ್ಣನು ಆತ್ಮಾರಾಮನು, ಆಪ್ತಕಾಮನು. ಸೂರ್ಯನಿಗೆ ದೀಪ ದಾನ ಮಾಡುವಂತೆ ಜನರು ಅನೇಕವಿಧವಾದ ಉಪಾಯನಗಳನ್ನು ಅರ್ಪಿಸಿದರು. ತುಂಬುಮನಸ್ಸಿನಿಂದ ಶ್ರೀಕೃಷ್ಣನನ್ನು ಸ್ವಾಗತಿಸಿದರು. ಎಲ್ಲರ ಮುಖಕಮಲಗಳೂ ಅರಳಿವೆ. ಹರ್ಷಗದ್ಗದವಾಣಿಗಳಿಂದ ಶ್ರೀಕೃಷ್ಣನನ್ನು ಸ್ತೋತ್ರಮಾಡುತ್ತಿದ್ದಾರೆ. ಬಾಲಕರು ತಮ್ಮ ತೊದಲುನುಡಿಗಳಿಂದ ತಂದೆಯನ್ನು ಹೊಗಳುವಂತೆ ಹೊಗಳುತ್ತಿದ್ದಾರೆ.

ನತಾಃ ಸ್ಮ ತೇ ನಾಥ ಸದಾಂಘ್ರಿ ಪಂಕಜಂ
ವಿರಿಂಚವೈರಿಂಚ್ಯಸುರೇಂದ್ರವಂದಿತಮ್
ಪರಾಯಣಂ ಕ್ಷೇಮಮಿಹೇಚ್ಛತಾಂ ಪರಂ
ನ ಯತ್ರ ಕಾಲಃ ಪ್ರಭವೇತ್ ಪರಃ ಪ್ರಭುಃ ||೬||

'ಸ್ವಾಮಿನ್ ! ನಾವು ನಿನ್ನ ಚರಣಕಮಲಗಳನ್ನು ಸದಾ ನಮಸ್ಕರಿಸುತ್ತೇವೆ.

ಬ್ರಹ್ಮ-ಸನಕಾದಿಗಳೂ-ದೇವೇಂದ್ರಾದಿಗಳೂ ಸದಾ ನಿನ್ನ ಚರಣ ಸೇವೆಯಲ್ಲಿ ನಿರತರಾಗಿರುತ್ತಾರೆ. ನಿನ್ನ ಚರಣಗಳು ಕ್ಷೇಮಾಭಿಲಾಷಿಗಳಿಗೆ ಪರಂ ಪರಾಯಣವು.

ನಿನ್ನ ಚರಣಕಮಲಾಸಕ್ತರಾದವರನ್ನು ಕಾಲನೂ ಏನೂ ಮಾಡಲಾರ.

ಹೇ ವಿಶ್ವಭಾವನ ! ನೀನೇ ನಮ್ಮ ತಂದೆ, ತಾಯಿ, ಸುಹೃತ್, ಸಖಾ. ನೀನೇ ನಮ್ಮ ಗುರು, ಆರಾಧ್ಯದೈವ, ನಿನ್ನ ಚರಣಸೇವೆಯಿಂದ ಧನ್ಯರಾಗುತ್ತೇವೆ. ನೀನೇ ನಮ್ಮ ಕಲ್ಯಾಣಕಾರಕನು.

ಪ್ರಭೋ ! ನಿನ್ನನ್ನು ಹೊಂದಿ ನಾವು ಸನಾಥರಾದೆವು. ನಿನ್ನ ರೂಪ ದರ್ಶನದಿಂದ ಕೃತಾರ್ಥರಾದೆವು. ನಿನ್ನ ಸುಂದರವದನ, ಮಂದ-ಮಂದ ಹಾಸವು ದೇವತೆಗಳಿಗೂ ಸುದುರ್ಲಭವು.

ಹೇ ಕಮಲನಯನ ! ನೀನು ನಿನ್ನ ಬಂಧುಗಳನ್ನು ನೋಡಲು ಹಸ್ತಿನಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರ ಹಾಗೂ ವ್ರಜಮಂಡಲಕ್ಕೆ ಹೋದಾಗ ನಿನ್ನನ್ನು ಕಾಣದ ಒಂದೊಂದು ಕ್ಷಣವೂ ಒಂದೊಂದು ಯುಗದಂತಾಗುತ್ತಿದ್ದಿತು.

ಸೂರ್ಯನಿಲ್ಲದಿದ್ದರೆ ಕಣ್ಣುಗಳಿಗೆ ಯಾವ ಸ್ಥಿತಿಯೊದಗುವುದೋ, ನಮ್ಮ ಸ್ಥಿತಿಯೂ ಹಾಗಾಗಿದ್ದಿತು.'

ಹೀಗೆ ಪ್ರಜಾವರ್ಗದ ಉದ್ಗಾರವನ್ನು ಕೇಳುತ್ತಾ ಅವರ ಮೇಲೆ ಅನುಗ್ರಹವರ್ಷಣವನ್ನು ಮಾಡುತ್ತಾ ಶ್ರೀಕೃಷ್ಣನು ದ್ವಾರಕೆಯನ್ನು ಸೇರಿದನು.

ನಾಗಪುರುಷರು ತಮ್ಮ ನಗರಿಯಾದ ಭೋಗವತಿಯನ್ನು ಸಂರಕ್ಷಿಸುವಂತೆ-ಮಧು-ಭೋಜ-ದಾಶಾರ್ಹ-ಅಂಧಕ-ವೃಷ್ಣ್ಯಾದಿಗಳು ದ್ವಾರಕೆಯನ್ನು ರಕ್ಷಿಸುತ್ತಿದ್ದರು.

ದ್ವಾರಕೆಯಲ್ಲಿ ಸದಾ ಸರ್ವರ್ತುಗಳ ವೈಭವವೂ ಇದೆ. ಅಲ್ಲಿಯ ವೃಕ್ಷಗಳು ಹರಿದ್ವರ್ಣವಿಶಿಷ್ಟಗಳಾಗಿವೆ. ಹಸಿರು-ಹಸಿರಾದ ಲತೆಗಳು ಶೋಭಾಯಮಾನವಾಗಿವೆ. ಸುಂದರವಾದ ಉದ್ಯಾನವನಗಳೂ ಆಶ್ರಮಗಳೂ ಇವೆ.

ಮಹಾದ್ವಾರಗಳೆಲ್ಲವೂ ತೋರಣಾಲಂಕೃತವಾಗಿವೆ. ಚಿತ್ರ-ವಿಚಿತ್ರ ಧ್ವಜಗಳು ಹಾರಾಡುತ್ತಿವೆ.

ರಾಜಮಾರ್ಗಗಳೆಲ್ಲವೂ ಸ್ವಚ್ಛತೆಯಿಂದ ಕೂಡಿ ಸುಗಂಧಜಲದಿಂದ ಸಿಂಪಡಿಸಲ್ಪಟ್ಟಿವೆ. ಭಗವಂತನ ಸುಸ್ವಾಗತಕ್ಕೋಸ್ಕರ ಪುಷ್ಪಗಳನ್ನೂ ಅಕ್ಷತಾಂಕುರಗಳನ್ನೂ ಚೆಲ್ಲಿದ್ದಾರೆ.

ಪ್ರತಿ ಮನೆಯ ಬಾಗಿಲುಗಳಲ್ಲಿಯೂ ಮೊಸರು-ಅಕ್ಷತೆ-ಫಲ-ಕಬ್ಬು-ಪೂರ್ಣಜಲಕುಂಭ-ಉಪಹಾರಗಳ ವಸ್ತುಗಳೂ, ಧೂಪ-ದೀಪಾದಿಗಳೂ ಸಿದ್ಧಮಾಡಿ ಇಡಲ್ಪಟ್ಟಿವೆ.

ಅಕ್ರೂರ, ಉಗ್ರಸೇನ, ಬಲರಾಮ, ಪ್ರದ್ಯುಮ್ನ, ಸಾಂಬ-ಇವರುಗಳು ಶ್ರೀಕೃಷ್ಣನು ಬರುತ್ತಿರುವನೆಂದು ಭೋಜನ-ವಿಶ್ರಾಂತ್ಯಾದಿಗಳನ್ನೇ ಮರೆತುಬಿಟ್ಟರು.

ಪ್ರೇಮಾವೇಗದಿಂದ ಅವರ ಹೃದಯಗಳು ಕುಣಿಯತೊಡಗಿದುವು. ಅವರೆಲ್ಲರೂ ಸಾಲಂಕೃತ ಗಜರಾಜನನ್ನು ಮುಂದೆ ಬಿಟ್ಟುಕೊಂಡು, ಮಾಂಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಳಿಕಸಾಮಗ್ರಿಗಳೊಡನೆ, ವೇದಪಾಠಿಗಳಾದ ಬ್ರಾಹ್ಮಣರಿಂದೊಡಗೂಡಿ ಶ್ರೀಕೃಷ್ಣನನ್ನು ಎದರುಗೊಳ್ಳಲು ಹೊರಟರು.

ಶಂಖ. ತುತ್ತೂರಿಗಳು ಧ್ವನಿಗೈಯ್ಯುವು. ವೇದಧ್ವನಿಯು ಉಚ್ಚಸ್ವರದಲ್ಲಿ ಕೇಳಿಬರುತ್ತಿತ್ತು. ಎಲ್ಲರೂ ಸಂತೋಷದಿಂದ ರಥಾರೂಢರಾಗಿ ಶ್ರೀಕೃಷ್ಣನ ಆದರಸತ್ಕಾರಕ್ಕೆ ಹೊರಟರು.

ನೂರಾರು ಸುಂದರವಾರಾಂಗನೆಯರು ಕುಂಡಲಾದ್ಯಾಭರಣಗಳಿಂದ ಅತ್ಯಂತಶೋಭಿತರಾಗಿ ಶ್ರೀಕೃಷ್ಣದರ್ಶನಾಕಾಂಕ್ಷಿಗಳಾಗಿ ಹೊರಟರು

ಬಹುಮಂದಿ ನಟ-ಸೂತ, ಮಾಗಧ-ವಂದಿಜನರು ಭಗವಂತನ ಅದ್ಭುತಚರಿತ್ರೆಗಳನ್ನು ಗಾನಮಾಡುತ್ತಾ ಹೊರಟರು.

ಭಗವಂತನು ಎಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿದನು. ಒಬ್ಬನಿಗೆ ತಲೆಬಾಗಿ ನಮಸ್ಕರಿಸಿದನು. ಒಬ್ಬನನ್ನು ಆಲಿಂಗಿಸಿಕೊಂಡನು. ಒಬ್ಬನ ಕೈಕುಲುಕಿದನು.

ಒಬ್ಬನನ್ನು ನೋಡಿ ನಕ್ಕನು. ಎಷ್ಟೋ ಜನರೊಡನೆ ಮಾತನಾಡಲಾಗಲಿಲ್ಲ. ಆದರೆ-ಅಶ್ವಾಸ್ಯ ಚಾಶ್ವಪಾಕೇಭ್ಯೋ ವರೈಶ್ಚಾಭಿಮತೈರ್ವಿಭುಃ

ದರ್ಶನಕ್ಕಾಗಿ ಬಂದಿದ್ದ ಅಂತ್ಯಜರು, ಚಂಡಾಲರು - ಇವರನ್ನು ಪ್ರೇಮದಿಂದ ಮಾತನಾಡಿಸಿದನು. ಅವರವರ ಅಭೀಷ್ಟಗಳನ್ನು ಸಲ್ಲಿಸಿದನು.

ಹೀಗೆ ಎಲ್ಲರನ್ನೂ ಸನ್ಮಾನಿಸುತ್ತಾ ಹಿರಿಯರ ಆಶೀರ್ವಾದಗಳನ್ನು ಪಡೆದು ಶ್ರೀಕೃಷ್ಣನು ನಗರಪ್ರವೇಶಮಾಡಿದನು.

ದ್ವಾರಕೆಯ ಕುಲಕಾಮಿನಿಯರೆಲ್ಲರೂ ಕೃಷ್ಣನು ರಾಜಮಾರ್ಗದಲ್ಲಿ ಬರುತ್ತಿದ್ದಾಗ ಪ್ರಾಸಾದಾಗ್ರಗಳನ್ನೇರಿ ದರ್ಶನಪಡೆದರು. ಆದರೇನು ! " ನೈವ ತೃಪ್ಯಂತಿ ಹಿ ದೃಶಃ " ಕಣ್ಣುಗಳಿಗೆ ತೃಪ್ತಿಯೇ ಇಲ್ಲ.

ಭಗವಂತನ ವಕ್ಷಸ್ಥಳವು ಸೌಂದರ್ಯಲಕ್ಷ್ಮಿಯ ಆವಾಸಸ್ಥಾನವು. ಅವನ ಮುಖಾರವಿಂದವು ಸೌಂದರ್ಯದ ಸುಧಾಪಾತ್ರೆಯು. ಅವನ ಭುಜದಂಡಗಳು ಲೋಕಪಾಲಕರುಗಳಿಗೂ ಶಕ್ತಿದಾಯಕವು. ಅವನ ಚರಣಕಮಲಗಳು ಪರಮಹಂಸರಿಗೆ ಆಶ್ರಯದಾತಾರಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನ ಪ್ರತಿಯೊಂದು ಅಂಗವೂ ಶೋಭೆಯ ಆಗರ. ಭಗವಂತನ ಈ ಅಸದೃಶರೂಪವನ್ನು ದ್ವಾರಕಾವಾಸಿಗಳು ಕಾಣುತ್ತಲೇ ಇರುತ್ತಾರೆ. ಆದರೂ ಅವರಿಗೆ ತೃಪ್ತಿಯಿಲ್ಲ.

ಶ್ರೀಕೃಷ್ಣನ ತಲೆಯ ಮೇಲೆ ಶ್ವೇತಚ್ಛತ್ರಿಯು ಹಿಡಿಯಲ್ಪಟ್ಟಿದೆ. ಶ್ವೇತ ಚಾಮರಗಳು ಬೀಸಲ್ಪಡುತ್ತಿವೆ. ನಾಲ್ಕು ಕಡೆಗಳಿಂದಲೂ ಪುಷ್ಪವೃಷ್ಟಿ ಯಾಗುತ್ತಿದೆ.

ಆವಾಗ ಶ್ರೀಕೃಷ್ಣನು ಹೇಗೆ ಕಾಣುತ್ತಿದ್ದನೆಂದರೆ-ಒಂದು ಶ್ಯಾಮ ಮೇಘವು ಸೂರ್ಯ-ಚಂದ್ರ-ಇಂದ್ರಧನುಸ್ಸು ವಿದ್ಯುತ್ತಿನಿಂದ ಶೋಭಿಸುತ್ತಿದೆಯೋ ಎನ್ನುವಂತಿತ್ತು.

ಭಗವಾನ್ ಕೃಷ್ಣನು ಮೊದಲು ತನ್ನ ತಾಯಿ-ತಂದೆಗಳ ನಿವಾಸಕ್ಕೆ ತೆರಳಿ ಅವರಿಗೆ ಅಭಿವಾದನಮಾಡಿದನು.

ಇದೊಂದು ಶಿಷ್ಟಸಂಪ್ರದಾಯ. ಲೋಕಸಂಗ್ರಹ. ತಾನು ಸ್ವತಃ ಅಜನ್ಮನಾದರೂ, ಈಶ್ವರನಾದರೂ ಲೋಕರೂಢಿಗೆ ಅನುಸಾರವಾಗಿ ವಸುದೇವ-ದೇವಕಿಯರಿಗೆ ನಮಸ್ಕರಿಸುತ್ತಾನೆ.

ಈಗಿನ ಕಾಲದ ಹುಡುಗರಿಗೆ ಹಿರಿಯರನ್ನು ನಮಸ್ಕರಿಸಬೇಕೆಂಬುದೇ ತಿಳಿಯದು.

ತಾಯಿ-ತಂದೆಗಳು, ಗುರು-ಹಿರಿಯರೆಂದರೇನೇ ಉದಾಸೀನ. ಇದು ಪಾಶ್ಚಾತ್ಯ ಸಭ್ಯತೆಯ ದುಷ್ಪ್ರಭಾವ. ಪಾಶ್ಚಾತ್ಯಸಂಸ್ಕೃತಿಯು ಪತ್ನೀಪ್ರಧಾನವಾದುದು; ಪ್ರೇಯಸೀಪ್ರಧಾನ, ಭೋಗಪ್ರಧಾನವಾದುದು. ವಿವಾಹವಾಯಿತೆಂದರೆ ತಂದೆ-ತಾಯಿಗಗಳನ್ನು ತೊರೆದು ಹೊರಡುವುದು.

ನಮ್ಮ ಸಂಸ್ಕೃತಿಯು ಕಾಮ-ಭೋಗಪ್ರಧಾನವಾದುದಲ್ಲ. ಧರ್ಮ ಪ್ರಧಾನವಾದುದು. ಇಲ್ಲಿ ಮಾತೃದೇವೋ ಭವ-ಪಿತೃದೇವೋಭವ-ಇದೇ ಆದರ್ಶ.

ಭೋಗದೊಡನೆ ಪ್ರೇಮವನ್ನು ಬೆಳೆಸುವುದು ನಮ್ಮ ಧರ್ಮವಲ್ಲ.

ಇಲ್ಲಿ ಜನ್ಮ ಕೊಟ್ಟವರನ್ನು, ಸ್ನೇಹಕೊಟ್ಟವರನ್ನು, ಲಾಲನೆ-ಪಾಲನೆ, ಪೋಷಣೆ ಮಾಡಿದವರನ್ನು ಪ್ರೇಮಿಸುವುದೇ ಧರ್ಮ. ಅಂದರೆ ಈಶ್ವರಪ್ರೇಮವು ಸರ್ವೋತ್ಕೃಷ್ಟವಾದುದು. ತಂತೆ-ತಾಯಿಗಳು ಈಶ್ವರಸ್ವರೂಪರೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಕೃಷ್ಣನು ತಾಯಿ-ತಂದೆಗಳನ್ನು ಅಭಿವಂದಿಸಿ ಸಂಸ್ಕೃತಿಯ ಆದರ್ಶವನ್ನು ಎತ್ತಿಹಿಡಿದಿದ್ದಾನೆ.

ಅವರೂ ಕೃಷ್ಣನನ್ನು ಪ್ರೇಮದಿಂದ ಆಲಿಂಗಿಸಿಕೊಂಡರು. ಆನಂದಾಶ್ರುಗಳು ಉದರಿದುವು.

ಅನಂತರ ಶ್ರೀಕೃಷ್ಣನು ಪತ್ನಿಯರನ್ನು ಕಾಣಲು ಅವರವರ ಅಂತಃಪುರಗಳಿಗೆ ಹೋದನು.

ಹದಿನಾರು ಸಾವಿರ ರಾಣಿಯರ ಅಂತಃಪುರಗಳಿದ್ದುವು. ದೀರ್ಘಕಾಲದ ಪ್ರವಾಸದಿಂದ ಹಿಂತಿರುಗಿದ ಪ್ರಾಣನಾಥನಾದ ಶ್ರೀಕೃಷ್ಣನನ್ನು ಸಂದರ್ಶಿಸಿದ ಪತ್ನಿಯರು ಆನಂದಪರವಶರಾದರು.

ಶ್ರೀಕೃಷ್ಣದರ್ಶನವಾದ ಕೂಡಲೇ ಆಸನವನ್ನು ಬಿಟ್ಟೆದ್ದರು. ಅಷ್ಟೇ ಅಲ್ಲ. ತಮ್ಮ ತಮ್ಮ ನಿಯಮಗಳನ್ನೂ ಗಾಳಿಗೆ ತೂರಿಬಿಟ್ಟರು.

ಪತಿಯು ಪ್ರವಾಸದಲ್ಲಿರುವಾಗ ಪತಿವ್ರತಾಸ್ತ್ರೀಯರು ಕೆಲವು ನಿಯಮಗಳನ್ನು ಪಾಲಿಸುತ್ತಾರೆ.

ಕ್ರೀಡಾಂ ಶರೀರಸಂಸ್ಕಾರಂ ಸಮಾಜೋತ್ಸವದರ್ಶನಮ್ ।
ಹಾಸ್ಯಂ ಪರಗೃಹೇ ಯಾನಂ ತ್ಯಜೇತ್ಪ್ರೋಷಿತಭರ್ತೃಕಾ ॥

ಪತಿಯು ಪರದೇಶಕ್ಕೆ ಹೋದಾಗ ಸ್ತ್ರೀಯಾದವಳು ಆಟ-ಪಾಟಗಳಲ್ಲಿ ಸಾಮಾಜಿಕ ಉತ್ಸವಾದಿಗಳಲ್ಲಿ, ನಗು ಹಾಸ್ಯಾದಿಗಳಲ್ಲಿ ಭಾಗವಹಿಸಬಾರದು. ಹಾಗೂ ಪರಗೃಹಗಳಿಗೆ ಹೋಗಬಾರದು.

ಶಾರೀರಸೌಂದರ್ಯವನ್ನು ಹೊರಸೂಸುವ ಶೃಂಗಾರಾದಿಗಳನ್ನು ಮಾಡಿಕೊಳ್ಳಬಾರದು.

ಈ ನಿಯಮಗಳೆಲ್ಲವನ್ನೂ ಶ್ರೀಕೃಷ್ಣದರ್ಶನವಾಗುತ್ತಿದ್ದ ಹಾಗೆಯೇ ತ್ಯಜಿಸಿಬಿಟ್ಟರು.

ಅವರ ಮುಖನೇತ್ರಗಳು ಲಜ್ಜಾಯುಕ್ತವಾದುವು. ಶ್ರೀಕೃಷ್ಣನ ಬಗೆಗೆ ಅವರುಗಳ ಭಾವವು ಗಂಭೀರಪೂರ್ಣಕವಾಗಿದ್ದಿತು.

ಮೊದಲು ಮನಸ್ಸಿನಿಂದ, ಅನಂತರ ಕಣ್ಣುಗಳಿಂದ, ಆಮೇಲೆ ಪುತ್ರರ ನೆಪದಿಂದ ಭಗವಂತನನ್ನು ಆಲಿಂಗಿಸಿಕೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಸಮಯದಲ್ಲಿ ಅವರ ನೇತ್ರಗಳಲ್ಲಿ ಪ್ರೇಮಾಶ್ರುಗಳು ಎಷ್ಟು ತಡೆದರೂ ಹೊರಡುತ್ತಿದ್ದುವು.

ಯದ್ಯಪಿ ಕೃಷ್ಣನು ಅವರ ಬಳಿ ಯಾವಾಗಲೂ ಇರುತ್ತಾನೆ. ಆದರೂ ಅವನ ಚರಣಕಮಲಗಳು ನಿತ್ಯನೂತನವಾಗಿಯೇ ತೋರುತ್ತವೆ.

ಶ್ರೀಕೃಷ್ಣನ ಮಹಿಮೆಯೇ ಹಾಗೆ.

ಲಕ್ಷ್ಮಿಯು ಯಾವಾಗಲೂ ಅವನನ್ನು ಸೇವಿಸುತ್ತಿರುತ್ತಾಳೆ. ಸ್ವಭಾವತಃ ಲಕ್ಷ್ಮಿಯು ಚಂಚಲೆ. ಇದ್ದಲ್ಲಿ ಇರುವುದಿಲ್ಲ. ಆದರೆ ಮಾತ್ರ ಭಗವಂತನನ್ನು ಅರೆಕ್ಷಣವೂ ಬಿಟ್ಟಿರಲಾರಳು. ಕೃಷ್ಣನ ದಿವ್ಯಸಾನ್ನಿಧ್ಯದಲ್ಲಿ ಸ್ತ್ರೀಯರಿಗೆ ಬೇಸರವೇ ಇಲ್ಲ.

ಒಂದು ಕಡೆ ಶ್ರೀಕೃಷ್ಣನು ಆಯುಧವನ್ನು ಹಿಡಿಯದೆಯೇ ಮಹಾಭಾರತಯುದ್ಧವನ್ನು ಮುಗಿಸಿದನು.

ಇನ್ನೊಂದು ಕಡೆ ಅದೇ ಕೃಷ್ಣನು ಲಲನಾಮಣಿಯರ ಮಧ್ಯೆ ಪ್ರಾಕೃತ ಪುರುಷರಂತೆ ವಿಹರಿಸುತ್ತಾನೆ.

ಶ್ರೀಕೃಷ್ಣನ ಈ ವ್ಯವಹಾರವನ್ನು ನೋಡಿ ಪ್ರಾಕೃತಜನರು ತಮ್ಮ ಮೌಢ್ಯಕ್ಕೆ ಅನುಗುಣವಾಗಿ ಶ್ರೀಕೃಷ್ಣನನ್ನು ತಮ್ಮಂತೆಯೇ ಓರ್ವ ವ್ಯವಹಾರೀ ಪುರುಷನೆಂದು ತಿಳಿಯುತ್ತಾರೆ.

ಆದರೆ ಯೋಚಿಸಬೇಕು-ಕಮನೀಯಕಾಮಿನಿಯರ ಕಾಮವಿಲಾಸಗಳು ಯಾವನ ಮನಸ್ಸನ್ನು ಹರಣಮಾಡಲು ಸಾಧ್ಯವಿಲ್ಲವೋ, ಯಾವನ ಮುಗ್ಧನೋಟದಿಂದ ಪ್ರಜ್ಞಾಹೀನನಾದ ವಿಶ್ವವಿಜಯೀ ಮನ್ಮಥನೂ ಧನುಸ್ಸನ್ನು ಪರಿತ್ಯಾಗಮಾಡಿದನೋ-ಅಂತಹವನು ನಮ್ಮಂತೆ ಸಾಮಾನ್ಯ ಮಾನವನೇ ?

ಹೃದಯಸ್ಥ ಸಾಕ್ಷಿಪುರುಷನ ಮುಂದೆ ವಿವಿಧಲೀಲಾ-ವಿನೋದಗಳಾಗುತ್ತಿದ್ದರೂ ಸಾಕ್ಷಿಪುರುಷನು . ವ್ಯತ್ಯಾಸವನ್ನು ಹೊಂದುವನೋ! ಅಥವಾ ಯಾರೊಡನೆಯಾದರೂ ಸಾಕ್ಷಿಯು ಹೊರಟುಹೋಗಿರುವನೋ ? ಕೃಷ್ಣನು ಯಾವಾಗಲೂ ತಟಸ್ಥನು. ಅಸಂಗನು. ಶ್ರೀಕೃಷ್ಣನನ್ನು ತಿಳಿಯಬೇಕಾದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲು ಸ್ವಾತ್ಮನನ್ನು ತಿಳಿಯಬೇಕು. ಅನಂತರ ಶ್ರೀಕೃಷ್ಣನನ್ನು ತಿಳಿಯಬಹುದು. ಆತ್ಮಸ್ವರೂಪಿಯೇ ಶ್ರೀಕೃಷ್ಣನು.

ಭಗವಾನ್ ಶ್ರೀಕೃಷ್ಣನ ಪತ್ನಿಯರು ರೂಪವತಿಯರು. ಅವರ ನಿರ್ಮಲವಾದ ಮಧುರ-ಮಂದಹಾಸ, ಅವರ ಮಾದಕಲಜ್ಜೆ, ಅವರ ಕುಡಿಗಣ್ಣಿನೋಟ-ಇವುಗಳಿಂದ ಘಾಸಿಯಾದ ಮನ್ಮಥನು ತನ್ನ ಧನುರ್ಬಾಣಗಳನ್ನು ತ್ಯಜಿಸಿಬಿಟ್ಟನು. ಏಕೆಂದರೆ: ಇಂತಹ ಶ್ರೀಮತಿಯರಾದ ಕಾಮಿನಿಯರು ಭೂಲೋಕದಲ್ಲಿರುವಾಗ ಅವನೇಕೆ ಧನುರ್ಬಾಣಗಳನ್ನು ಧರಿಸಬೇಕು ?

ಅಂತಹ ಶ್ರೀಮತಿಯರಾದ ಪ್ರೇಯಸಿಯರೂ ಶ್ರೀಕೃಷ್ಣನ ಮನಸ್ಸಿನಲ್ಲಿ ಯಾವುದೇ ವಿಕಾರವನ್ನುಂಟುಮಾಡಲೂ ಅಸಮರ್ಥರಾದರು.

ಯಸ್ಯೇಂದ್ರಿಯಂ ವಿಮಥಿತುಂ ಕುಹಕೈರ್ನ ಶೇಕುಃ ||

ಅವರು ಎಷ್ಟೇ ಪ್ರಯತ್ನಪಟ್ಟರೂ ಹಾವ-ಭಾವಗಳನ್ನು ಪ್ರದರ್ಶಿಸಿದರೂ ಶ್ರೀಕೃಷ್ಣನ ಮನಸ್ಸು ವಿಕಾರಿಯಾಗಲಿಲ್ಲ.

ಇಂತಹ ಅಸಂಗ ಪರಮಾತ್ಮನನ್ನು ಆಸಕ್ತನೆಂದು ತಿಳಿಯುವಂತಹವರು ಮೂಢರೇ ಸರಿ. ಇದಕ್ಕೆ ಕಾರಣವೇನೆಂದರೆ : ಅವರು ಕೃಷ್ಣನನ್ನು ಸಾಮಾನ್ಯ ನರನೆಂದೇ ತಿಳಿಯುತ್ತಾರೆ.

ಸಾಮಾನ್ಯರು, ಸ್ತ್ರೀಯರ ಹಾವ ಭಾವಗಳಿಂದ ರೂಪಮಾಧುರ್ಯದಿಂದ ಮೋಹಿತರಾಗುವರೆಂದರೆ ಕೃಷ್ಣನೂ ಆಗಿಬಿಡುವನೇ ?

ಹೀಗೆ ತಿಳಿಯುವುದು ಮೂರ್ಖತೆಯ ಪರಮಾವಧಿ.

ಭಗವಂತನನ್ನು ಆಶ್ರಯಿಸಿದವರ ಬುದ್ಧಿಯು ಸಂಸಾರಾಸಕ್ತವಾಗುವುದಿಲ್ಲ. ಅಂದ ಮೇಲೆ ಭಗವಂತನು ಪ್ರಕೃತಿಸ್ಥನಾಗಿದ್ದರೂ ಪ್ರಾಕೃತಿಕ ವಿಚಾರಗಳಿಂದ ವಿಕಾರಿಯನಾಗುವುದಿಲ್ಲವೆಂದರೆ ಆಶ್ಚರ್ಯವೇನು ಬಂತು? ಇದೇ ಈಶ್ವರನ ಈಶ್ವರತೆಯು.

ಭಗವಂತನ ಮಾಯೆಯನ್ನು ನೋಡಿ. ಅವನ ಪತ್ನಿಯರೂ ಸಹ ಅವನನ್ನು ಪೂರ್ಣವಾಗಿ ತಿಳಿದಿರಲಿಲ್ಲ. ಅವರ ಅಭಿಪ್ರಾಯದಲ್ಲಿ-' ಕೃಷ್ಣನು ಓರ್ವ ಕಾಮುಕಪತಿ. ನನ್ನ ಸಹವಾಸವೇ ಅವನಿಗೆ ಬೇಕು. ನನ್ನನ್ನು ಬಿಟ್ಟರೆ ಅವನಿಗೆ ಸುಖವೇ ಇಲ್ಲ.'

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವರು ವೇದಾಂತಿಗಳು ಉಪನಿಷತ್ತನ್ನು ಓದಿಕೊಂಡು 'ನಾನು ಬ್ರಹ್ಮವಿದನು. ನನ್ನ ಸಮಾನರಾರು ?"-ಎಂದು ಹೇಳಿಕೊಳ್ಳುವುದಿಲ್ಲವೇ ?

ಶ್ರುತಿಯು ಹೇಳುತ್ತದೆ-

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ ॥

ಯಸ್ಯ = ಯಾವ ಬ್ರಹ್ಮವಿದನಿಗೆ, **ಅಮತಂ** = ಅವಿಜ್ಞಾತಂ-ತಿಳಿದಿಲ್ಲವೆಂಬುದಾಗಿ **ಮತಂ** =ಅಭಿಪ್ರಾಯವೋ, **ತಸ್ಯ ಮತಂ** =ಅವನಿಗೆ ಬ್ರಹ್ಮಜ್ಞಾನವಾಗಿದೆಯೆಂದು ತಾತ್ಪರ್ಯವು.

ಯಸ್ಯ ಪುನಃ ಮತಂ= ಜ್ಞಾತಂ-ನಾನು ಬ್ರಹ್ಮನನ್ನು ತಿಳಿದಿದ್ದೇನೆ, ನನ್ನಿಂದ ಬ್ರಹ್ಮವು ತಿಳಿಯಲ್ಪಟ್ಟಿತು-ಎಂದು ತಿಳಿದಿರುವನೋ **ಸ ನ ವೇದ** ॥ ಅವನು ಬ್ರಹ್ಮನನ್ನು ತಿಳಿದಿಲ್ಲ.

ವಿಜಾನತಾಂ ಅವಿಜ್ಞಾತಂ ; ಅವಿಜಾನತಾಂ ವಿಜ್ಞಾತಂ

ಇಂದ್ರಿಯಮನೋಬುದ್ಧ್ಯಾದಿಗಳಲ್ಲಿ ಆತ್ಮದರ್ಶನವನ್ನು ಮಾಡಿರುವವರು ಬ್ರಹ್ಮೋಪಾಧಿವಿವೇಕವಿಲ್ಲದಿರುವುದರಿಂದ ಬುದ್ಧ್ಯಾದ್ಯುಪಾಧಿಗಳ ಮೂಲಕ ತಿಳಿದಿರುವುದೇ ಬ್ರಹ್ಮನೆಂದು ಭ್ರಾಂತರಾಗುತ್ತಾರೆ. ಇದು ಸಮ್ಯಗ್ದರ್ಶನವಲ್ಲ. ಅಸಮ್ಯಗ್ದರ್ಶನ.

11ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೧೨

ಪರೀಕ್ಷಿತನ ಜನ್ಮ

ನೈಮಿಷಾರಣ್ಯದಲ್ಲಿ ಶೌನಕಾದಿಗಳು ಸೂತಪೌರಾಣಿಕರನ್ನು ಪ್ರಶ್ನಿಸುತ್ತಾರೆ :

ಅಶ್ವತ್ಥಾಮ್ನೋಪಸೃಷ್ಟೇನ ಬ್ರಹ್ಮಶೀರ್ಷ್ಣೋರುತೇಜಸಾ ।
ಉತ್ತರಾಯಾ ಹತೋ ಗರ್ಭಃ ಈಶೇನಾಜೀವಿತಃ ಪುನಃ ॥

ಮಹಾತ್ಮರೇ ! ಅಶ್ವತ್ಥಾಮನ ಅಸ್ತ್ರದಿಂದ ಉತ್ತರೆಯ ಗರ್ಭವು ನಷ್ಟವಾಗುವುದರಲ್ಲಿದ್ದಿತು. ಆದರೆ ಭಗವಂತನು ಅದನ್ನು ರಕ್ಷಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಜ್ಞಾನಿಯಾದ ಮಹಾತ್ಮನಾದ ಪರೀಕ್ಷಿತನ ಜನನವಾಯಿತು. ಅವನಿಗೆ ಶುಕದೇವರಿಂದ ಭಾಗವತೋಪದೇಶವು ಮಾಡಲ್ಪಟ್ಟಿತು.

ಪಾಂಡವರ ವಂಶವೇ ಶ್ರೀಕೃಷ್ಣಭಕ್ತಿಗೆ ಹೆಸರಾಂತುದು. ಕುಂತೀ-ದ್ರೌಪದಿಯರು ಮಹಾಭಕ್ತರು. ಸುಭದ್ರೆಯಾದರೋ ಭಗವಂತನ ತಂಗಿ. ಉತ್ತರಾ-ಅಭಿಮನ್ಯುಗಳೂ ಪರಮಭಕ್ತರೇ. ಅರ್ಜುನನ ವಿಚಾರವನ್ನು ಹೇಳಬೇಕಾದುದೇ ಇಲ್ಲ.

ಇಂತಹ ಶ್ರೇಷ್ಠವಂಶದಲ್ಲಿ ಜನಿಸಿದ ಪರೀಕ್ಷಿತನು ಪುರುಷಶ್ರೇಷ್ಠನೇ ಸರಿ. ಸರ್ವಶುದ್ಧಿಗಳೂ ಅವನಲ್ಲಿದ್ದುವು. ಅದರಿಂದಲೇ ಅವನು ಭಾಗವತ ಶ್ರವಣಕ್ಕೆ ವಿಶುದ್ಧನಾದ ಅಧಿಕಾರಿಯಾದನು.

ಯಾರನ್ನು ಭಗವಂತನು ಗರ್ಭದಲ್ಲಿಯೇ ಸಂರಕ್ಷಿಸಿದನೋ' ಯಾರಿಗೆ ಗರ್ಭದಲ್ಲಿಯೇ ಭಗವಂತನ ದರ್ಶನವಾಯಿತೋ?-ಅಂತಹ ಮಹಾಪುರುಷನ ಚರಿತ್ರೆಯನ್ನು ನಾವುಗಳು ಶ್ರವಣಮಾಡಲು ಬಯಸುತ್ತೇವೆ.

ನಮಗೆ ಶ್ರವಣಮಾಡಿಸಬಹುದೆಂದು ತಾವೂ ತಿಳಿಯುವಿರಾದರೆ, ಪರೀಕ್ಷಿತನ ಪರಮಪಾವನಕಥೆಯನ್ನು ದಯೆಯಿಟ್ಟು ಶ್ರವಣಮಾಡಿಸಿರಿ. ಅವನ ಜನ್ಮ-ಕರ್ಮ-ಮರಣಗಳನ್ನು ತಿಳಿಸಿರಿ."

ಸೂತರು ಸಂತೋಷದಿಂದ ಹೇಳಲಾರಂಭಿಸಿದರು :

"ಶೌನಕಾದಿಗಳೇ ? ಧರ್ಮರಾಜನು ತನ್ನ ಪ್ರಜೆಗಳನ್ನು - ಪುತ್ರರನ್ನು ತಂದೆಯೋಪಾದಿಯಲ್ಲಿ ಸಂರಕ್ಷಿಸುತ್ತಿದ್ದನು.

ಭಗವಚ್ಚರಣಾರವಿಂದಗಳ ಸೇವನೆಯಿಂದ ಅವನ ಎಲ್ಲ ಕಾಮನೆಗಳೂ ಆವೃತವಾಗಿದ್ದುವು. ಯುಧಿಷ್ಠಿರನಲ್ಲಿ ಸರ್ವವೂ ಇದ್ದಿತು.

ಬಹಳ ದೊಡ್ಡ ಸಾಮ್ರಾಜ್ಯ. ಅಸಾಧಾರಣಸಂಪತ್ತು. ಪತ್ನಿಯರೂ ಸಹೋದರರೂ ಅನುಕೂಲರಾಗಿದ್ದರು.

ಯಜ್ಞ-ಯಾಗಾದಿಗಳ ಆಚರಣೆಯಿಂದ ಅಪೂರ್ವಫಲಗಳನ್ನು ಸಂಪಾದಿಸಿದ್ದನು. ಅವನ ಕೀರ್ತಿಯು ಸ್ವರ್ಗಲೋಕಕ್ಕೂ ಹರಡಿದ್ದಿತು ಸ್ವರ್ಗವಾಸಿಗಳೂ ಸಹ ಅವನ ವೈಭವವನ್ನು ನೋಡಿ ಆಶ್ಚರ್ಯಪಡುತ್ತಿದ್ದರು. ಯುಧಿಷ್ಠಿರನಿಗಾದರೋ ಇದೊಂದೂ ರುಚಿಸುತ್ತಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಸಿದಿರುವ ಮನುಷ್ಯನು ಊಟವನ್ನು ಬಯಸುವನೇ ಹೊರತು ಅನ್ಯ ಭೋಗಪದಾರ್ಥಗಳನ್ನು ಹೇಗೆ ಇಚ್ಛಿಸಿಯಾನು ? ನಿನ್ನ ತಲೆಯ ಮೇಲೆ ಕಿರೀಟವನ್ನಿಡುತ್ತೇವೆ. ರೇಷ್ಮೆ-ಪೀತಾಂಬರಗಳನ್ನು ಹೊದಿಸುತ್ತೇವೆ. ಈ ಅರಮನೆಯಲ್ಲಿ ವಾಸಮಾಡು, ಈ ಮಂಚದ ಮೇಲೆ ಮಲಗು'-ಹೀಗೆಲ್ಲಾ ಹೇಳಿದರೂ ಅವನಿಗೆ ಆಸಕ್ತಿಯು ಮೂಡಿತೇ? ಅಂತೆಯೇ ಭಗವತ್ಸೇವೆ ಯೊಂದನ್ನು ಬಿಟ್ಟು ಯುಧಿಷ್ಠಿರನಿಗೆ ಮತ್ತಾವುದೂ ರುಚಿಸುತ್ತಿರಲಿಲ್ಲ.

ಅವನು ಶ್ರೀಕೃಷ್ಣನಿಗಾಗಿ ಹಂಬಲಿಸುತ್ತಿದ್ದನು. ಅವನ ದರ್ಶನಕ್ಕಾಗಿ ತವಕ ಪಡುತ್ತಿದ್ದನು. ಅವನ ಸೇವೆಗಾಗಿ ಪರದಾಡುತ್ತಿದ್ದನು. ಹೀಗಾಗಿ ಅವನಿಗೆ ರಾಜ್ಯ-ಕೋಶಾದಿಗಳಲ್ಲಿ ಆಸಕ್ತಿಯಿರಲಿಲ್ಲ.

ಶೌನಕಾದಿಗಳೇ ! ಉತ್ತರಾಗರ್ಭಸ್ಥಶಿಶುವಾದ ಪರೀಕ್ಷಿತನು ಅಶ್ವತ್ಥಾಮನ ಬ್ರಹ್ಮಾಸ್ತ್ರತೇಜಸ್ಸಿನಿಂದ ಬಾಧೆಪಡತೊಡಗಿದನಷ್ಟೆ. ಆಗ ಅಂಗುಷ್ಠಪರಿಮಾಣದ ಮುಕುಟಮಂಡಿತ ಪೀತಾಂಬರಧಾರೀ ಪುರುಷೋತ್ತಮನು ಗದೆಯನ್ನು ತಿರುತಿಸುತ್ತಾ ತನ್ನನ್ನು ರಕ್ಷಿಸುತ್ತಿರುವುದನ್ನು ತಿಳಿದನು. ಅವನು ಕೈಯಲ್ಲಿ ತಿರುಗಿಸುತ್ತಿದ್ದ ಗದೆಯಿಂದ ಬ್ರಹ್ಮಾಸ್ತ್ರದ ತೇಜಸ್ಸು ಶಾಂತವಾಗುತ್ತಿತ್ತು. ಆ ಪುರುಷನನ್ನು ಕಂಡು ಶಿಶುವು ಇವನಾರಿರಬಹುದೆಂದು ಚಿಂತಿಸುತ್ತಿದ್ದನು. ಆ ತೇಜಸ್ಸು ಶಾಂತವಾದೊಡನೆಯೇ ಆ ಪುರುಷನೂ ಅಂತರ್ಧಾನನಾದನು.

ಅನಂತರ ಮುಂದೆ ಶುಭತಿಥಿ-ಶುಭನಕ್ಷತ್ರ-ಶುಭಯೋಗದಲ್ಲಿ ಪಾಂಡುವಂಶೋದ್ಧಾರಕನಾದ ಪರೀಕ್ಷಿತನ ಜನ್ಮವಾಯಿತು. ಜನ್ಮಕಾಲದಲ್ಲಿಯೇ ಆ ಬಾಲಕನು ಮಹಾತೇಜಸ್ವಿಯಾಗಿದ್ದು ಪಾಂಡುಮಹಾರಾಜನೇ ಪುನಃ ಜನ್ಮ ತಾಳಿರಬಹುದೆಂದು ತೋರುತ್ತಿದ್ದಿತು.

ಧರ್ಮರಾಜನು ಪೌತ್ರನ ಜನ್ಮವಾರ್ತೆಯನ್ನು ಕೇಳಿ ಬಹಳ ಪ್ರಸನ್ನನಾದನು. ಯಥೇಚ್ಛವಾಗಿ ದಾನ-ಧರ್ಮಾದಿಗಳನ್ನು ನಡೆಸಿದನು. ಧೌಮ್ಯರನ್ನು ಕರೆಯಿಸಿ ಜಾತಕವನ್ನು ಬರೆಯಿಸಿದನು.

ಧೌಮ್ಯ-ಕೃಪಾಚಾರ್ಯ ಇತ್ಯಾದಿ ಶ್ರೇಷ್ಠಬ್ರಾಹ್ಮಣರಿಂದ ಮಂಗಳಾನುಶಾಸನವಾಯಿತು. ಶಿಶುವಿಗೆ ಜಾತಕರ್ಮಸಂಸ್ಕಾರವು ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮರಾಜನು ದಾನದ ಉತ್ಕೃಷ್ಟಕಾಲವನ್ನು ಅರಿತಿದ್ದನು. ಅವನು ಪ್ರಜಾತೀರ್ಥಕಾಲದಲ್ಲಿ ಗೋ-ಭೂ-ಹಿರಣ್ಯದಾನಾದಿಗಳನ್ನು ನಡೆಸಿದನು.

ಪ್ರಜಾತೀರ್ಥಕಾಲವೆಂದರೆ :

ಯಾವನ್ನ ಚ್ಛಿದ್ಯತೇ ನಾಳಂ ತಾವನ್ನಾಪ್ನೋತಿ ಸೂತಕಮ್ ।
ಛಿನ್ನೇ ನಾಳೇ ತತಃ ಪಶ್ಚಾತ್ ಸೂತಕಂ ತು ವಿಧೀಯತೇ ॥

ತಾಯಿಯ ಹೊಟ್ಟೆಯಿಂದ ಹೊರಬಂದ ಶಿಶುವಿನ ಹೊಕ್ಕಳ ಬಳ್ಳಿಯನ್ನು ಕತ್ತರಿಸುವವರೆಗೂ ಆಶೌಚವಿಲ್ಲ. ನಾಳಚ್ಛೇದನವಾದನಂತರ ಆಶೌಚವು ಗಣಿಸಲ್ಪಡುತ್ತದೆ. ಶಿಶುವುಗರ್ಭದಿಂದ ಹೊರಬಂದು ನಾಳಚ್ಛೇದನವಾಗುವವರೆಗಿನ ಕಾಲಕ್ಕೆ ಪ್ರಜಾತೀರ್ಥಕಾಲವೆಂದು ಹೆಸರು.

ಸ್ಮೃತಿಕಾರರು ಹೇಳುತ್ತಾರೆ;

ಪುತ್ರೇ ಜಾತೇ ವ್ಯತೀಪಾತೇ ದತ್ತಂ ಭವತಿ ಚಾಕ್ಷಯಮ್ ।

ನಾಳಚ್ಛೇದನಕ್ಕಿಂತಲೂ ಮೊದಲು ಮಾಡುವ ದಾನ-ಧರ್ಮಾದಿಗಳು ಅಕ್ಷಯಫಲಗಳನ್ನು ಕೊಡುತ್ತವೆ.

ದಾನಾದಿಗಳಿಂದ ಅತಿಸಂತುಷ್ಟರಾದ ಬ್ರಾಹ್ಮಣರು ಯುಧಿಷ್ಠಿರನಿಗೆ ಬಾಲಕನ ಭವಿಷ್ಯವನ್ನು ತಿಳಿಸಿದರು. 'ಮಹಾರಾಜ' ನಿಮ್ಮ ಪವಿತ್ರಕುರುವಂಶವು ನಾಶವಾಗುವುದರಲ್ಲಿತ್ತು. ಆದರೆ-ನಿಮ್ಮ ಮೇಲಿನ ವಿಶೇಷ ಕೃಪೆಯಿಂದ ಶ್ರೀಮನ್ಮಹಾವಿಷ್ಣುವು ಈ ಬಾಲಕನನ್ನು ನಿಮಗೆ ಅನುಗ್ರಹಿಸಿದ್ದಾನೆ.'

ಇವನು ಜಗತ್ತಿನಲ್ಲಿ ಮಹಾಯಶಸ್ವಿಯೂ, ಶ್ರೇಷ್ಠಭಗವದ್ಭಕ್ತನೂ, ಮಹಾಪುರುಷನೂ ಆಗುವನು." ಇದನ್ನು ಕೇಳಿದ ಯುಧಿಷ್ಠಿರನು ಪರಮ ಸಂತುಷ್ಟನಾದನು. ಶಿಶುವು ಸರ್ವಸಂಸ್ಕಾರಗಳಿಂದಲೂ ಪೂತವಾಗಿದ್ದಿತು.

ಗರ್ಭಾಧಾನ, ಸೀಮಂತೋನ್ನಯನ, ಪುಂಸವನ-ಇತ್ಯಾದಿ ಸಂಸ್ಕಾರಗಳಿಂದ ಶಿಶುವು ಪರಿಶುದ್ಧತೆಯನ್ನು ಪಡೆಯುತ್ತದೆ. ಗರ್ಭಾಶಯದ ಶುದ್ಧಿಯೇ ಪೀಠಶುದ್ಧಿ-ಆಧಾರಶುದ್ಧಿ. ಇದನ್ನು ಗರ್ಭಾಧಾನಸಂಸ್ಕಾರವೆಂದು ಕರೆಯುತ್ತಾರೆ. ಇದರಿಂದ ತಾಯಿಯ ಗರ್ಭಾಶಯವು ಶುದ್ಧವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಂಸವನಸಂಸ್ಕಾರದಿಂದ ವೀರಪುರುಷನು ಜನಿಸುತ್ತಾನೆ. ಸೀಮಂತೋನ್ನಯನಸಂಸ್ಕಾರದಿಂದ ಪತಿಯ ಪ್ರೇಮವು ಪತ್ನಿಯ ಬಗೆಗೆ ಪ್ರಕಟವಾಗುವುದು. ಹುಟ್ಟಲಿರುವ ಶಿಶುವಿನ ಲಾಲನೆ-ಪಾಲನೆಗಳ ವಿಷಯದಲ್ಲಿ ಅವಳ ಮನಸ್ಸಿನಲ್ಲಿ ವೃಥಾ ಕಳವಳವು ಮೂಡುವುದಿಲ್ಲ.

ಶಿಶುವಿನ ಜನನವಾದ ಮೇಲೆ ಜಾತಕರ್ಮಸಂಸ್ಕಾರವಾಗುತ್ತದೆ. ಈ ಸಂಸ್ಕಾರಗಳಿಂದ ತಾಯಿ-ತಂದೆಯರ ದೋಷವು ನಿವೃತ್ತವಾಗಿ ಶಿಶುವು ಶುಭ ಸಂಸ್ಕಾರಸಂಪನ್ನವಾಗುತ್ತದೆ.

ಬ್ರಾಹ್ಮಣರು ಶಿಶುವಿನ ಭವಿಷ್ಯವನ್ನು ಹೀಗೆ ತಿಳಿಸಿದರು-"ಮಹಾರಾಜ ! ಈತನು ಮನುವಿನ ಪುತ್ರನಾದ ಇಕ್ಷ್ವಾಕುವಿನಂತೆ ಪ್ರಜೆಗಳನ್ನು ಪಾಲಿಸುವನು. ಭಗವಂತನಾದ ಶ್ರೀರಾಮನಂತೆ ಬ್ರಾಹ್ಮಣಭಕ್ತನೂ, ಸತ್ಯವಂತನೂ ಆಗುವನು. ಉಶೀನರನ ಪುತ್ರನಾಗಿದ್ದ ಶಿಬಿಯಂತೆ ದಾನಿಯೂ, ಶರಣಾಗತವತ್ಸಲನೂ ಆಗುವನು. ಯಾಜ್ಞಿಕರಲ್ಲಿ ಶ್ರೇಷ್ಠನಾದ ದುಷ್ಯಂತಪುತ್ರನಾದ ಭರತನಂತೆ ಯಶೋವಂತನಾಗುವನು.

ಧನುರ್ಧಾರಿಗಳಲ್ಲಿ ಸಹಸ್ರಬಾಹುವಾದ ಅರ್ಜುನನಂತೆ ಹಾಗೂ ಪಾರ್ಥನಂತೆ ಅಗ್ರಗಣ್ಯನಾಗುವನು. ಅಗ್ನಿಯಂತೆ ದುರ್ಧರ್ಷನೂ, ಸಮುದ್ರನಂತೆ ದುಸ್ತರನೂ ಆಗುವನು. ಸಿಂಹದಂತೆ ಪರಾಕ್ರಮಿಯೂ, ಹಿಮಾಲಯನಂತೆ ಆಶ್ರಯದಾತನೂ, ಪೃಥ್ವಿಯಂತೆ ತಿತಿಕ್ಷುವೂ, ಮಾತಾ-ಪಿತೃಗಳಂತೆ ಸಹನಶೀಲನೂ ಆಗುವನು.

ಇವನಲ್ಲಿ ಪಿತಾಮಹಬ್ರಹ್ಮನಂತೆ ಸಹನಶೀಲತೆಯೂ. ಶಂಕರನಂತೆ ಕೃಪಾಳುತೆಯೂ, ಭಗವಾನ್ ವಿಷ್ಣುವಿನಂತೆ ಪ್ರಜಾಪರಿಪಾಲಕತೆಯೂ, ಶ್ರೀಕೃಷ್ಣನಂತೆ ಸಕಲಸದ್ಗುಣಗಳೂ ಇರುವುವು.

ರಂತಿದೇವನಂತೆ ಉದಾರಿಯೂ, ಯಾಯಾತಿಯಂತೆ ಧಾರ್ಮಿಕನು, ಬಲಿಯಂತೆ ಧೈರ್ಯಶಾಲಿಯೂ ಆಗುವನು. ಪ್ರಹ್ಲಾದನಂತೆ ಶ್ರೀಕೃಷ್ಣ ಭಕ್ತಿಯುಳ್ಳವನಾಗಿ-ಅನೇಕಾನೇಕ ಅಶ್ವಮೇಧಾದಿ ಯಾಗಗಳನ್ನು ನಡೆಸುವನು. ಹಾಗೂ ವೃದ್ಧಜನರ ನಮ್ರಸೇವಕನಾಗಿರುವನು.

ರಾಜರ್ಷಿಯಂತಹ ಪುತ್ರನನ್ನು ಪಡೆಯುವನು. ಮರ್ಯಾದಾಭಂಜಕ

Sri Vidyabharathi Book Centre, Sringeri

CC-O. In Public Domain. Digitized by eGangotri

ರನ್ನು ಉಗ್ರವಾಗಿ ದಂಡಿಸುವನು. ಭೂದೇವಿಯ ಹಾಗೂ ಧರ್ಮದ ರಕ್ಷಣೆಗಾಗಿ ಕಲಿನಿಗ್ರಹವನ್ನು ಕೈಕೊಳ್ಳುವನು." ಅಂದರೇನಾಯಿತು ನೋಡಿ-ಸರಿಸ್ಥಿತಿಗಳಿಗೆ ಅನುಗುಣವಾಗಿ ರಾಜನಿರುವನೋ? ರಾಜನಿಗೆ ಅನುಗುಣವಾಗಿ ಪರಿಸ್ಥಿತಿಗಳಿರುವುವೋ ? ಪರಿಸ್ಥಿತಿಗಳು ಜಡ. ರಾಜನು ಚೇತನ. ಆದುದರಿಂದ ರಾಜನಿಗೆ ಅನುಸಾರವಾಗಿ ಪರಿಸ್ಥಿತಿಗಳು ಬದಲಾಯಿಸುತ್ತವೆ. ಕೇವಲ ಪರಿಸ್ಥಿತಿಗಳಿಂದ ಏನೂ ಆಗುವುದಿಲ್ಲ-ಹೋಗುವುದಿಲ್ಲ. ಒಬ್ಬ ಬುದ್ಧನ ಅವತಾರದಿಂದ ಬೌದ್ಧಧರ್ಮವು ದೇಶವ್ಯಾಪಿಯಾಯಿತು.

ಓರ್ವ ಕ್ರಿಸ್ತನಿಂದ ಕೋಟ್ಯಂತರ ಜನರು ಕ್ರಿಸ್ತಧರ್ಮಾವಲಂಬಿಗಳಾದರು. ಶಂಕರಾಚಾರ್ಯರಂತಹ ದಿವ್ಯಾತ್ಮಾನುಭವಿಗಳಿಂದ ಜಗತ್ತೇ ಆತ್ಮಾನಂದವನ್ನು ಕಂಡಿತು. ಪ್ರಬುದ್ಧಚೇತನನು ಏನುತಾನೇ ಮಾಡಲಾರನು ? ಮಹಾಪುರುಷರ ಲೀಲೆಯೇ ವಿಚಿತ್ರ.

ಪರೀಕ್ಷಿತನು ಕಲಿಯನ್ನು ನಿಗ್ರಹಿಸಿ ಧರ್ಮಸ್ಥಾಪನೆಯನ್ನು ಮಾಡುತ್ತಾನೆಂದರೆ 'ರಾಜಾ ಕಾಲಸ್ಯ ಕಾರಣಂ' ಎನ್ನುವ ಉಕ್ತಿಯು ಸಾಧುವಾದುದೆಂದು ಹೇಳಬಹುದಾಗಿದೆ.

ಬ್ರಾಹ್ಮಣರು ಕೊನೆಯಲ್ಲಿ ಹೇಳಿದರು :

"ಇವನು ಬ್ರಾಹ್ಮಣಕುಮಾರನಿಂದ ಶಪ್ತನಾಗಿ ತಕ್ಷಕಸರ್ಪದಂಶನದಿಂದ ವಿಷ್ಣುಪದವನ್ನು ಸೇರುತ್ತಾನೆ. ಹಾಗೂ ಶುಕದೇವರಂತಹ ಮಹಾತ್ಮರ ಮೂಲಕ ಭಾಗವತವನ್ನು ಶ್ರವಣಮಾಡುವ ಮಹಾಪುರುಷನಾಗುತ್ತಾನೆ.

ತಸ್ಮಾನ್ನಾಮ್ನಾ ವಿಷ್ಣುರಾತ ಇತಿ ಲೋಕೇಬ್ಭೃಚ್ಛ್ರವಾಃ ।
ಭವಿಷ್ಯತಿ ನ ಸಂದೇಹೋ ಮಹಾಭಾಗವತೋ ಮಹಾನ್ ॥

ಇವನು 'ವಿಷ್ಣುರಾತ' ಎಂಬ ಹೆಸರಿನಿಂದ ಪ್ರಖ್ಯಾತನಾದ ಮಹಾಪುರುಷನಾಗುತ್ತಾನೆ."

ಹೀಗೆ ಭವಿಷ್ಯವನ್ನು ಹೇಳಿ ಬ್ರಾಹ್ಮಣೋತ್ತಮರು ಮಹಾಸಂಭಾವನೆಗಳನ್ನು ಪಡೆದು ಸ್ವಸ್ಥಾನಗಳಿಗೆ ತೆರಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇವನೇ ಪರೀಕ್ಷಿತನೆಂದು ಪ್ರಸಿದ್ಧನಾದನು. ಯಾರು ಗರ್ಭದಲ್ಲಿರುವಾಗಲೇ ಶ್ರೀಕೃಷ್ಣದರ್ಶನವನ್ನು ಪಡೆದಿದ್ದನೋ, ಎಲ್ಲೆಲ್ಲಿಯೂ ಶ್ರೀಕೃಷ್ಣನನ್ನೇ ಹುಡುಕುತ್ತಿದ್ದನೋ.

ಗರ್ಭೇದೃಷ್ಟಮನುಧ್ಯಾಯನ್ ಪರೀಕ್ಷೇತ ನರೇಷ್ವಿಹ ।

ಅಂತಹವನು ಪರೀಕ್ಷಿತನಾಗಿ ಪ್ರಸಿದ್ಧಿಯನ್ನು ಪಡೆದನು.

ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನೈದುತ್ತಾ ಯುವಕನಾದನು.

ಆವಾಗ ಧರ್ಮರಾಜನು-ಯುದ್ಧದಲ್ಲಿ ಸ್ವಜನವಧೆಯಿಂದುಂಟಾದ ದೋಷಪ್ರಾಯಶ್ಚಿತ್ತಾರ್ಥವಾಗಿ ಅಶ್ವಮೇಧವನ್ನಾಚರಿಸುವಂತೆ ಯೋಚಿಸಿದನು.

ಆದರೆ ಅಷ್ಟು ದ್ರವ್ಯಾನುಕೂಲವಿರಲಿಲ್ಲ. ಪ್ರಜೆಗಳ ಮೇಲೆ ಕರಭಾರವನ್ನು ಹೇರಿ ಸಂಗ್ರಹಿಸಲು ಇಚ್ಛಿಸುತ್ತಿರಲಿಲ್ಲ. ಆದರೆ ದ್ರವ್ಯಾಭಾವದಿಂದಾಗಿ ಯಜ್ಞಾಚರಣೆಯನ್ನೂ ನಿಲ್ಲಿಸುವ ಹಾಗಿರಲಿಲ್ಲ.

ಧರ್ಮರಾಜನ ಅಭಿಪ್ರಾಯವನ್ನು ತಿಳಿದು ಶ್ರೀಕೃಷ್ಣನು, ಭೀಮಾರ್ಜುನರನ್ನು ಕರೆದುಕೊಂಡು ಹೋಗಿ-ಉತ್ತರದಿಕ್ಕಿನಲ್ಲಿ ಮರುತ್ತರಾಯನ ಕಾಲದಲ್ಲಿ ಬ್ರಾಹ್ಮಣರು ಬಿಟ್ಟುಹೋಗಿದ್ದ ಅಪಾರಸಂಪತ್ತನ್ನು ತೆಗೆಸಿಕೊಂಡು ಬಂದನು.

ಆದರಿಂದ ಧರ್ಮರಾಜನು ಮೂರು ಅಶ್ವಮೇಧಗಳನ್ನು ಆಚರಿಸಿದನು. ಶ್ರೀಕೃಷ್ಣನ ದಿವ್ಯಸಾನ್ನಿಧ್ಯದಲ್ಲಿ ಶ್ರೇಷ್ಠಬ್ರಾಹ್ಮಣರು ವಿಧಿಗನುಗುಣವಾಗಿ ಯಾಜ್ಞಿಕವಿಧಿಗಳನ್ನು ಅನುಷ್ಠಾನಮಾಡಿದರು.

ಪಾಂಡವರ ಸಂತೃಪ್ತಿಗಾಗಿ ಶ್ರೀಕೃಷ್ಣನು ಕೆಲವು ತಿಂಗಳುಗಳು ರಾಜಧಾನಿಯಲ್ಲಿದ್ದು ಆನಂತರ ದ್ವಾರಕಿಗೆ ಪ್ರಯಾಣಮಾಡಿದನು.

12ನೆಯ ಅಧ್ಯಾಯವು ಮುಗಿಯಿತು.

— o —

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೧೩

ವಿದುರೋಪದೇಶದಿಂದ ಧೃತರಾಷ್ಟ್ರ-ಗಾಂಧಾರಿಯುವರ ವನಗಮನ

ಸೂತರು ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ :

"ಶೌನಕಾದಿಗಳೇ ! ವಿದುರನು ತೀರ್ಥಯಾತ್ರೆಯನ್ನು ಮಾಡುತ್ತಿದ್ದಾಗ ಮೈತ್ರೇಯಮಹರ್ಷಿಗಳಿಂದ ಆತ್ಮಜ್ಞಾನವನ್ನು ಪಡೆದು ಹಸ್ತಿನಾಪುರಕ್ಕೆ ಬಂದನು.

ವಿದುರನು ತಿಳಿಯಬೇಕಾದ್ದನ್ನ ತಿಳಿದಾಗಿದ್ದಿತು. ಮಾನವನು ತಿಳಿಯ ಬೇಕಾದಷ್ಟನ್ನು ಮಾತ್ರ ತಿಳಿಯಬೇಕು.

ಪಂಡಿತರ ವಿಚಾರವು ಬೇರೆ. ಅವರು ವಾಕ್ಯಾರ್ಥವನ್ನು ಮಾಡಬೇಕು. ಮತ್ತೊಬ್ಬರನ್ನು ಪರಾಜಯಗೊಳಿಸಬೇಕು. ಬಹಳ ಮಟ್ಟಿಗೆ ವಿಷಯಗಳನ್ನು ಸಂಗ್ರಹಿಸಿ ತಲೆಯಲ್ಲಿ ಇಟ್ಟುಕೊಂಡಿರಬೇಕು.

ಮನೆಯಲ್ಲಿ ಕಣಜದಲ್ಲಿ ಧಾನ್ಯಾದಿಗಳನ್ನು ತುಂಬಿಡುವಂತೆ-ಬುದ್ಧಿ ಯಲ್ಲಿ ತರ್ಕ-ವಿತರ್ಕ-ಕುತರ್ಕ-ಯುಕ್ತಿಗಳನ್ನು ಸಂಗ್ರಹಿಸಿರಬೇಕು. ಇದರಿಂದ ವಿಕ್ಷೇಪವುಂಟಾಗುತ್ತದೆ. ಮನಸ್ಸು ಏಕಾಗ್ರತೆಯಲ್ಲಿರುವುದಿಲ್ಲ. ಭಗವಂತನ ಕಡೆಗೆ ಚಲಿಸುವುದಿಲ್ಲ.

ವಿದುರನು ಮೈತ್ರೇಯರನ್ನು ಸಂದರ್ಶಿಸಿ ಪ್ರಶ್ನಿಸುವುದಕ್ಕಿಂತಲೂ ಮೊದಲೇ ಶ್ರೀಕೃಷ್ಣಪರಮಾತ್ಮನ ಅನನ್ಯಭಕ್ತನಾಗಿದ್ದನು. ಮೈತ್ರೇಯರ ಉತ್ತರಶ್ರವಣದಿಂದ ಉಪರತನಾದನು.

ಎಷ್ಟೋ ಪ್ರಶ್ನೆಗಳಿರಲಿ. ಸಂಶಯಗಳಿರಲಿ-ಎಲ್ಲವೂ ಭಗವದ್‌ಜ್ಞಾನದಲ್ಲಿ ಸಮಾಪ್ತಿಯನ್ನು ಹೊಂದುತ್ತವೆ. ಆ ಪರಮಪವಿತ್ರಜ್ಞಾನದಿಂದ ಸರ್ವಜ್ಞಾನ ವುಂಟಾಗುತ್ತದೆ.

ಮುಂಡಕೋಪನಿಷತ್ತು ಹೇಳುತ್ತದೆ.

ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವ ತೀತಿ! ತಸ್ಮೈ ಸ ಹೋವಾಚ! ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ ಯದ್ಬ್ರಹ್ಮವಿದೋ ವದಂತಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದುರನು ಹಸ್ತಿನಾಪುರಕ್ಕೆ ಬಂದುದನ್ನು ಕೇಳಿ ಧರ್ಮರಾಜ-ಧೃತರಾಷ್ಟ್ರಾದಿಗಳೆಲ್ಲರೂ ಸಂಭ್ರಮದಿಂದ ಸಪರಿವಾರರಾಗಿ ಸ್ವಾಗತಿಸಿದರು.

ಪರಸ್ಪರ ಆಲಿಂಗನ-ಪ್ರಣಾಮಾದಿಗಳನ್ನು ಮಾಡಿ ಉಚ್ಚಾಸನದಲ್ಲಿ ಕೂರಿಸಿದರು.

ಎಲ್ಲರೂ ಪ್ರೇಮಾಶ್ರುಪರಿಪೂರ್ಣರಾಗಿದ್ದರು. ಯಥೋಚಿತವಾದ ಪೂಜಾದಿ-ಸತ್ಕಾರಗಳನ್ನು ನಡೆಸಿದರು.

ಭೋಜನಾದಿ-ವಿಶ್ರಾಮಗಳು ಆದಮೇಲೆ ಸುಖಾಸೀನನಾದ ವಿದುರನನ್ನು ಯುಧಿಷ್ಠಿರನು ಕೇಳಿದನು : "ಮಹಾತ್ಮರೇ ! ಪಕ್ಷಿಯು ಹೇಗೆ ತನ್ನ ಪಕ್ಷದೊಳಗೆ ಮೊಟ್ಟೆಯನ್ನಿಟ್ಟುಕೊಂಡು ಮರಿಮಾಡುವುದೋ-ಅದರಂತೆ ನೀವು ನಿಮ್ಮ ಕರಕಮಲಗಳ ಛತ್ರಚ್ಛಾಯೆಯಲ್ಲಿ ನಮ್ಮನ್ನು ಸಾಕಿ ಸಲಹಿದ್ದೀರಿ. ನಮ್ಮನ್ನು ಮಹಾ-ಮಹಾಸಂಕಟಗಳಿಂದ ಪಾರುಮಾಡಿದ್ದೀರಿ."

ಇಲ್ಲಿ ನಾವು ಧರ್ಮರಾಜನ ವಿನಯವನ್ನು ಗಮನಿಸಬೇಕು. ವಿನಯರಹಿತನಾದವನು ಭಗವದ್ಭಕ್ತಿಯನ್ನು ಮಾಡಲಾರನು.

ಕೃತಘ್ನವ್ಯಕ್ತಿಯು ಯಾರ ಬಗ್ಗೆಯೂ ಕೃತಜ್ಞನಾಗಿರಲಾರನು. ತಂದೆ-ತಾಯಿಗಳಲ್ಲಾಗಲೀ, ಗುರು-ಹಿರಿಯರಲ್ಲಾಗಲಿ-ವಿನಯಶೀಲನಾಗಿರಲಾರನು.

ಇನ್ನು ಭಗವಂತನಲ್ಲಿ ತಾನೇ ಹೇಗೆ ನಡೆದುಕೊಂಡಾನು ?

ಇನ್ನೊಂದು ವಿಚಾರ ; ಭಗವಂತನನ್ನು ಕಾಣಬೇಕಾದರೆ ಪಕ್ಷಿಯಾಗಬೇಕು. ಕೆಲವರ ಅಭಿಪ್ರಾಯದಲ್ಲಿ ಆತ್ಮನುಂಟು, ಮತ್ತೆ ಕೆಲವರ ಅಭಿಪ್ರಾಯದಲ್ಲಿ ಆತ್ಮನಿಲ್ಲ. ಈ ಎರಡು ಪಕ್ಷಗಳನ್ನೂ ಬಿಟ್ಟು ನಿಷ್ಪಕ್ಷನಾಗಿರಬೇಕು. ಆದರೆ ನಿಷ್ಪಕ್ಷನಾದರೆ ಭಗವಂತನ ಕಡೆ ಹೋಗಲಾಗುವುದಿಲ್ಲ. ಕಾಕ-ಭುಶುಂಡಾದಿಗಳಂತೆ ಪಕ್ಷಪಾತಿಯಾಗಿಯೇ ಭಗವಂತನ ಕಡೆ ಹೋಗಬೇಕು.

ಒಮ್ಮೆ ಭಗವಂತನ ಕಡೆ ಹೋಗಿಬಿಟ್ಟರೆ ಅನಂತರ ನಿಷ್ಪಕ್ಷರಾಗಿರಬಹುದು. ಭಗವತ್ಪ್ರಾಪ್ತಿಯಾಗುವವರೆಗೆ ಭಗವತ್ಪಕ್ಷನಾಗಿರುವುದು ಅವಶ್ಯಕವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯುಧಿಷ್ಠಿರನು ವಿದುರನನ್ನು ಕೇಳುತ್ತಾನೆ :

"ವಿಷಪಾನ, ಲಾಕ್ಷಾಗೃಹದಹನ ಇತ್ಯಾದಿಗಳಿಂದ ನಮ್ಮನ್ನು ಉದ್ಧರಿಸಿದ ಮಹಾತ್ಮರೇ !

ನೀವು ಎಲ್ಲೆಲ್ಲಿ ಸಂಚಾರಮಾಡಿದಿರಿ ? ಯಾತ್ರಾಸಮಯದಲ್ಲಿ ನಿಮ್ಮ ಜೀವನನಿರ್ವಹಣೆಯು ಹೇಗಾಯಿತು? ನೀವು ಭೂಲೋಕದ ಯಾವ ಯಾವ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ ಬಂದಿರಿ ?

ತಮ್ಮಂತಹ ಭಗವದ್ಭಕ್ತರು ಸ್ವಯಂ ತೀರ್ಥಸ್ವರೂಪರು. ತಮ್ಮಂತಹ ಮಹಾತ್ಮರು ತೀರ್ಥಗಳನ್ನು ಪವಿತ್ರಮಾಡುವುದಕ್ಕಾಗಿಯೇ ಸಂಚರಣಶೀಲರಾಗುತ್ತೀರಿ.

ನೀವು ಯಾತ್ರೆಮಾಡುತ್ತಾ, ಮಾಡುತ್ತಾ ಪುಣ್ಯ ಕ್ಷೇತ್ರವಾದ ದ್ವಾರಕೆಗೆ ಹೋಗಿರಬಹುದು. ನಿಮ್ಮ ಆರಾಧ್ಯದೇವನಾದ, ಸಕಲಯಾದವಸಂರಕ್ಷಕನಾದ ಭಗವಾನ್ ಶ್ರೀಕೃಷ್ಣನು ಕುಶಲಿಯಷ್ಟೆ ? ಅಕಸ್ಮಾತ್ ನೀವು ದ್ವಾರಕೆಗೆ ಹೋಗದಿದ್ದರೂ ಕೇಳಿಯಾದರೂ ತಿಳಿದಿರಬಹುದಲ್ಲವೇ ? ದಯೆಯಿಟ್ಟು ತಿಳಿಸಿರಿ."

ವಿದುರನು ಎಷ್ಟೋ ಸಮಾಚಾರಗಳನ್ನು ತಿಳಿಸಿದನು. ಆದರೆ ಯದುವಂಶಿಗಳ ನಾಶವನ್ನು ತಿಳಿಸಲಿಲ್ಲ. ಏಕೆಂದರೆ: ಅದನ್ನು ಕೇಳಿ ಅವರು ದುಃಖಿಗಳಾಗುತ್ತಾರೆ.

ದುಃಖದಾಯಕಸಮಾಚಾರಗಳನ್ನು ಯಥಾಸಾವಕಾಶವಾಗಿ ತಿಳಿಸಬೇಕು.

ಸಾಧ್ಯವಾದಷ್ಟು ಬೇಗ ನಾವು ಜನರಿಗೆ ಶುಭಸಂದೇಶಗಳನ್ನು ತಿಳಿಸಬೇಕು. ದುಃಖವನ್ನುಂಟುಮಾಡಲು ಕಾರಣರಾಗಬಾರದು. ನಿಧಾನವಾಗಿಯೇ ದುಃಖವಾರ್ತೆಯು ತಿಳಿಯಲಿ.

ಅದಕ್ಕೇಕೆ ಆತುರ ? ಇದೇ ಸತ್ಪುರುಷರ ವರ್ತನೆ.

ಪಾಂಡವರು ವಿದುರನನ್ನು ದೇವೋಪಚಾರದಿಂದ ಉಪಚರಿಸುತ್ತಿದ್ದರು. ಯಾವ ವಿಧವಾದ ಕೊರತೆಯೂ ವಿದುರನಿಗಿರಲಿಲ್ಲ. ವಿದುರನು ಸಾಧ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದಮೇಲೆ ಧೃತರಾಷ್ಟ್ರನನ್ನು ಸಮಾಧಾನಪಡಿಸುತ್ತಾ ಎಲ್ಲರೊಡನೆ ಹಸ್ತಿನಾ ಪುರದಲ್ಲಿ ಸುಖವಾಗಿದ್ದನು.

ವಿದುರನಾದರೋ ಸಾಕ್ಷಾದ್ಧರ್ಮರಾಜನ ಅವತಾರವು. ಯಮಧರ್ಮ ರಾಯನೇ ಮಾಂಡವ್ಯರ ಶಾಪದಿಂದ ವಿದುರನಾಗಿ ಶೂದ್ರಯೋನಿಯಲ್ಲಿ ಜನಿಸಿದ್ದನು.

ಲೋಕಪಾಲರಂತಹ ತಮ್ಮಂದಿರೊಡನೆ ಧರ್ಮರಾಜನು ಪರೀಕ್ಷಿತನ ಅಭ್ಯುದಯವನ್ನು ನೋಡುತ್ತಾ ಅಪಾರವಾದ ಸಾಮ್ರಾಜ್ಯಸುಖಾನುಭವದಲ್ಲಿ ಲೀನನಾಗಿದ್ದನು. ಅವರಿಗೆ ಕಾಲಕಳೆದುದೇ ಗೊತ್ತಾಗಲಿಲ್ಲ. ಮನುಷ್ಯನು ಸುಖಾಸಕ್ತನಾಗಿದ್ದಾಗ ಕಾಲವು ಗತಿಸಿದುದು ತಿಳಿಯುವುದಿಲ್ಲ.

ವಿವಾಹಾದಿ ಸಮಾರಂಭಗಳಲ್ಲಿ ಸಂಗೀತ-ವಾದ್ಯಾದಿ ಗೋಷ್ಠಿಗಳಲ್ಲಿ ಕಾಲಕಳೆಯುವುದೇ ತಿಳಿಯುವುದಿಲ್ಲ. ಆದರೆ ದುಃಖವಾರ್ತೆಯನ್ನು ಕೇಳಿದಾಗ, ಶವದ ಮುಂದೆ ಕುಳಿತಿದ್ದಾಗ ಒಂದೊಂದು ಕ್ಷಣವೂ ಒಂದೊಂದು ಯುಗದಂತೆ ತೋರುತ್ತದೆ.

ಒಂದೇ ರಾತ್ರಿಯು ಸುಖಿಗೆ ಹ್ರಸ್ವವಾದರೆ ದುಃಖಿಗೆ ದೀರ್ಘವು.

ವಿದುರನು ಅಣ್ಣನ ಸ್ಥಿತಿಯನ್ನು ನೋಡಿ ಕಾಲಮಹಿಮೆಯನ್ನರಿತು ಹೇಳಿದನು :

ರಾಜನ್ನಿರ್ಗಮ್ಯತಾಂ ಶೀಘ್ರಂ ಪಶ್ಯೇದಂ ಭಯಮಾಗತಮ್ ।
ಪ್ರತಿಕ್ರಿಯಾ ನ ಯಸ್ಯೇಹ ಕುತಶ್ಚಿತ್ ಕರ್ಹಿಚಿತ್ ಪ್ರಭೋ ॥

"ಮಹರಾಜ ! ಈಗ ಮಹಾಭಯಂಕರಕಾಲವು ಪ್ರಾಪ್ತವಾಗಿದೆ. ಇದಕ್ಕೆ ಪ್ರತಿಕ್ರಿಯೆಯೇ ಇಲ್ಲ. ಕೂಡಲೇ ಇಲ್ಲಿಂದ ಹೊರಡು. ಕಾಲ ಪುರುಷನ ಉಪಟಳದಿಂದ ಯಾರೂ ಹೇಗೂ ತಪ್ಪಿಸಿಕೊಳ್ಳುವ ಹಾಗಿಲ್ಲ.

ಕಾಲಕ್ಕೆ ವಶನಾದ ಪುರುಷನು ತನಗೆ ಅತ್ಯಂತಪ್ರಿಯವಾದ ಪ್ರಾಣಗಳಿಂದಲೂ ವಿಯೋಗವನ್ನು ಹೊಂದುತ್ತಾನೆ. ಇನ್ನು ಧನ-ಜನ-ವಸ್ತುಗಳ ಪಾಡೇನು ?

ನಿನ್ನ ಆಯುಷ್ಯವೂ ಪೂರ್ಣವಾಗುವುದರಲ್ಲಿದೆ. ನೀನು ಪರಗೃಹ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಸಿಯಾಗಿರುವೆ. ನಿನ್ನ ಸಂಬಂಧಿಕರೆಲ್ಲರೂ ಪರಲೋಕವನ್ನೈದಿದರು. ನಿನಗಿನ್ನೂ ಬದುಕಿನ ಆಸೆಯಿದೆಯೇ? ಇಲ್ಲಿಯವರು ನಿನ್ನನ್ನು ಎಷ್ಟು ತಿರಸ್ಕಾರದಿಂದ ಕಾಣುವರೆಂಬ ಅರಿವು ನಿನಗಿಲ್ಲವೇ ?

ಭೀಮಾಪವರ್ಜಿತಂ ಪಿಂಡಂ ಆದತ್ತೇ ಗೃಹಪಾಲವತ್ ।

ನಾಯಿಗೆ ಹಾಕುವ ಅನ್ನದಂತೆ ಭೀಮನಿಂದ ಹಾಕಲ್ಪಡುವ ಪಿಂಡ ವನ್ನು ತಿಂದಕೊಂಡೂ, ಇನ್ನೂ ಶರೀರವನ್ನು ಹೊತ್ತಿರಬೇಕೆಂದು ಬಯ ಸುವೆಯಾ?

ಯಾರನ್ನು ನಿನ್ನ ಮಕ್ಕಳು ಬೆಂಕಿಯಲ್ಲಿ ಬೇಯಿಸಿದರೋ, ಯಾರಿಗೆ ವಿಷವನ್ನುಣಿಸಿದರೋ, ಯಾರ ಪತ್ನಿಯ ಮಾನಭಂಗಕ್ಕೆ ಪ್ರಯತ್ನಿಸಿದರೋ- ಯಾರ ಸಾಮ್ರಾಜ್ಯವನ್ನು ಅಪಹರಿಸಿದ್ದರೋ-ಅವರಿಂದ ಕೊಡಲ್ಪಡುವ ಒಂದು ತುತ್ತು ಕೂಳಿನಿಂದ ಇನ್ನೂ ಬದುಕಬೇಕೆಂಬ ಇಚ್ಛೆಯೇ ?

ಹಾಗೆ ಇಚ್ಛಿಸಿದರೂ ನಿನ್ನ ಇಚ್ಛೆಯು ಕೈಗೂಡುವುದೇ ?

ಹಳೆಯದಾದ, ಜೀರ್ಣ-ಶೀರ್ಣವಾದ ಬಟ್ಟೆಯನ್ನು ಎಸೆಯಲೇಬೇಕಾ ಗಿರುವಂತೆ-ಮುಪ್ಪಿನಿಂದ ಜೀರ್ಣ-ಶೀರ್ಣವಾದ ಈ ದೇಹವನ್ನು ಎಸೆಯಲೇ ಬೇಕು. ಆದರೆ ನಾನು ಹೇಳುವುದಿಷ್ಟೆ-ಸಾರ್ಥಕವಾದ ರೀತಿಯಲ್ಲಿ ಬಿಸುಟುಬಿಡು.

ಅವಿಜ್ಞಾತಗತಿರ್ಜಹ್ಯಾತ್ ಸ ವೈ ಧೀರ ಉದಾಹೃತಃ ।

ಸಂಸಾರದ ಸಂಬಂಧಿಕರಿಂದ ಪೃಥಕ್ಕಾಗಿ ಯಾರು ದೇಹವನ್ನು ತ್ಯಜಿಸು ವರೋ ಅವರೇ ಧೀರರು.

ತನ್ನ ತಿಳುವಳಿಕೆಯಿಂದಲಾಗಲೀ, ಮತ್ತೊಬ್ಬರು ತಿಳಿಯಪಡಿಸುವುದ ರಿಂದಾಗಲೀ-ಸಂಸಾರವು ದು ಖರೂಪಿಯೆಂದು ತಿಳಿದು, ಭಗವಂತನಲ್ಲಿ ಮನ ಸ್ಸಿಟ್ಟು, ಗೃಹವನ್ನು ತ್ಯಜಿಸಿ ಸಂನ್ಯಾಸಿಯಾಗುವವನೇ ಧೀರನು.

ಅಣ್ಣಾ ! ಮುಂದೆ ಬರುವ ಕಾಲವು ಮಹಾಭಯಂಕರವಾದುದು. ನೀನು ನಿನ್ನ ಕುಟುಂಬದೊಡನೆ ಉತ್ತರಖಂಡಕ್ಕೆ ಹೊರಡು. ಹೇಗಾದರೂ ಆಗಲಿ ; ಮನುಷ್ಯನು ಜೀವಿತಕಾಲದಲ್ಲಿ ವೈರಾಗ್ಯಯುತನಾಗಬೇಕು. ಭಗ ವಂತನಲ್ಲಿ ಮನಸ್ಸಿಡಬೇಕು."

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಮಹಾತ್ಮಾ ವಿದುರನು ಅಣ್ಣನಿಗೆ ಬೋಧಿಸೋಣ. ಆವನ ಮೋಹವು ಕಳೆಯಿತು, ಪ್ರಜ್ಞೆಯು ಕಣ್ಣು ತೆರೆಯಿತು. ವಿದುರನು ತಿಳಿಸಿದಂತೆ ಆವನ ಹಿಂದೆ ಉತ್ತರಾಪಥಯಾತ್ರೆಗೆ ಹೊರಟನು. ಸುಬಲನಂದಿನಿಯಾದ ಗಾಂಧಾರಿಯೂ ಪತಿಯನ್ನನುಸರಿಸಿ ಹೊರಟಳು. ಮೂವರೂ ಹಿಮಾಲಯದತ್ತ ಸಾಗಿದರು. ಹಿಮಾಲಯವು ಸಂಸಾರತ್ಯಾಗಿಗಳಿಗೆ ಹರ್ಷವನ್ನುಂಟು ಮಾಡುತ್ತದೆ.

ದಂಡನ್ಯಾಸದ ಅರ್ಥವೆಂದರೆ : ನಾವು ಯಾರನ್ನೂ ಶಿಕ್ಷಿಸಲು ಅಧಿಕಾರಿಗಳಲ್ಲ. ಸಂನ್ಯಾಸವನ್ನು ಸ್ವೀಕರಿಸುವಾಗ ಎಲ್ಲರೂ ನನ್ನಿಂದ ನಿರ್ಭಯರಾಗಿರಬೇಕೆಂದು ಸಂಕಲ್ಪಮಾಡುತ್ತಾನೆ.

ಆವನು ಧರಿಸುವ ದಂಡವು ಅಪರಾಧಿಗಳ ಮೇಲೂ ಉಪಯೋಗಿಸಲು ಅಲ್ಲ. ಯಾರು ದಂಡನ್ಯಾಸಮಾಡಿರುವರೋ-ಅವರಿಗೆ ಹಿಮಾಲಯವು ಒಳ್ಳೆಯ ಸ್ಥಾನವು.

ಯುಧಿಷ್ಠಿರನ ನಿತ್ಯಕರ್ಮವೆಂದರೆ ಪ್ರಾತಃಕಾಲದಲ್ಲಿ ಸಂಧ್ಯಾವಂದನಾದಿ ಕರ್ಮಗಳನ್ನು ಮುಗಿಸಿ, ಅಗ್ನಿಹೋತ್ರವನ್ನು ಮಾಡಿ, ಬ್ರಾಹ್ಮಣರನ್ನು ನಮಸ್ಕರಿಸಿ, ತಿಲ-ಗೋ-ಭೂ-ಹಿರಣ್ಯಾದಿ ದಾನಗಳನ್ನು ಮಾಡಿ, ಗುರುಜನರನ್ನು ವಂದಿಸುತ್ತಿದ್ದನು.

ಅಂದೂ ಸಹ ಧೃತರಾಷ್ಟ್ರನ ಅರಮನೆಗೆ ಹೋದನು. ವಿದುರಾದಿಗಳಲ್ಲೊಬ್ಬರೂ ಅಲ್ಲಿ ಇರಲಿಲ್ಲ.

ಧರ್ಮಜನು ಸಂಜಯನನ್ನು ಕೇಳಿದನು : "ನನ್ನ ಪೂಜ್ಯಮಾತಾಪಿತೃಗಳೆಲ್ಲಿ ? ನನ್ನ ಮೇಲಿನ ಕೋಪದಿಂದ ಗಂಗೆಯಲ್ಲೇನಾದರೂ ಮುಳುಗಿಬಿಟ್ಟರೆ ? ನಮ್ಮ ತಂದೆ ಪಾಂಡುಮಹಾರಾಜನು ಗತಿಸಿದಾಗ ನಾವಿನ್ನೂ ಚಿಕ್ಕವರಾಗಿದ್ದೆವು. ಆಗ ಇವರೇ ನಮ್ಮನ್ನು ಅಕ್ಕರೆಯಿಂದ ಸಾಕಿ-ಸಲಹಿದ್ದರು. ಈಗಲೂ ನಮ್ಮನ್ನು ಪುತ್ರವಾತ್ಸಲ್ಯದಿಂದ ಸಲಹುತ್ತಿದ್ದ ಇವರು ಎಲ್ಲಿಗೆ ಹೋಗಿರುವರು ?"

ವಸ್ತುತಃ ಸಂಜಯನಿಗೂ ಅವರ ವಿಚಾರವು ತಿಳಿದಿರಲಿಲ್ಲ. ಆವನೂ ಆತಂಕಪಡುತ್ತಿದ್ದನು. ಯುಧಿಷ್ಠಿರನು ಉತ್ತರಿಸಲು ಸಮರ್ಥನಾಗಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಸರಲ್ಲಿ ತುಂಬುರರೊಡನೆ ನಾರದರ ಆಗಮನವಾಯಿತು.

ನಾರದರು ಭಗವಂತನ ಸಂಕಲ್ಪರೂಪಿಗಳು. ಎಲ್ಲಿ ಅಂದರೆ ಅಲ್ಲಿ-ಯಾವಾಗ ಅಂದರೆ ಆವಾಗ ಸಂಚರಿಸುವ ಶಕ್ತಿವಂತರು.

ಅವರ ಗತಿಯು ಅಕುಂಠಿತವಾದುದು. ಯುಧಿಷ್ಠಿರನು ಅವರನ್ನು ಸತ್ಕರಿಸಿ ಧೃತರಾಷ್ಟ್ರಾದಿಗಳ ಸಮಾಚಾರವನ್ನು ಕೇಳಿದನು.

ಅವರು ಹೇಳಿದರು :

ಮಾ ಕಂಚನ ಶುಚೋ ರಾಜನ್ ಯದೀಶ್ವರವಶಂ ಜಗತ್ ।
ಲೋಕಾಃ ಸಪಾಲಾ ಯಸ್ಯೇಮೇ ವಹಂತಿ ಬಲಿಮೀಶಿತುಃ ॥

"ಧರ್ಮರಾಜ ! ನೀನು ವೃಥಾ ದುಃಖಿಸಬೇಡ. **ದೈವಾಧೀನಂ ಜಗತ್ಸರ್ವಂ**-ಎನ್ನುವುದನ್ನು ಮರೆತುಬಿಟ್ಟೆಯಾ ?

ಲೋಕಪಾಲಕರೇ ಆದಿಯಾಗಿ ಎಲ್ಲರೂ ಈಶ್ವರಾಜ್ಞಾನುವರ್ತಿಗಳು. ಈಶ್ವರಾಜ್ಞೆಗೆ ಅನುಗುಣವಾಗಿ ಒಬ್ಬರು ಒಬ್ಬರೊಡನೆ ಕೂಡುತ್ತಾರೆ. ಒಬ್ಬರು ಒಬ್ಬರಿಂದ ಅಗಲುತ್ತಾರೆ.

ಮೂಗುದಾರವನ್ನು ಹಾಕಿದ ಪ್ರಾಣಿಗಳು ಯಜಮಾನನ ಎಲ್ಲ ಭಾರವನ್ನೂ ಹೊರುವಂತೆ-ಮನುಷ್ಯರು ವರ್ಣಾಶ್ರಮಾದಿಗಳಿಗೆ ಅನುಗುಣವಾಗಿ ವೇದರೂಪವಾದ ಹಗ್ಗದಿಂದ ಕಟ್ಟಲ್ಪಟ್ಟು ಈಶ್ವರಾಜ್ಞೆಯಂತೆ ನಡೆಯುತ್ತಾರೆ. ಸೂತ್ರಧಾರನ ಇಷ್ಟಾನುಸಾರವಾಗಿ ಬೊಂಬೆಗಳು ಕುಣಿಯುತ್ತವಷ್ಟೆ. ಹಾಗೆಯೇ ಈಶ್ವರೇಚ್ಛೆಗೆ ಅನುಸಾರವಾಗಿ ಮನುಷ್ಯರು ಸೇರುತ್ತಾರೆ; ಅಗಲುತ್ತಾರೆ.

ಸಂಸಾರವು ನಿತ್ಯವೆಂದಾಗಲೀ, ಅನಿತ್ಯವೆಂದಾಗಲೀ, ನಿತ್ಯಾನಿತ್ಯವೆಂದಾಗಲೀ-ವೃಥಾ ಚಿಂತಿಸುತ್ತಾ ಕೂರಬೇಡ.

'ಜೀವಿಗಳು ಅಸಹಾಯಕರು. ನಾವಿಲ್ಲದಿದ್ದರೆ ಅವರು ಬದುಕಲಾರರು. ಅನ್ನಾಹಾರಾದಿಗಳಿಲ್ಲದೆ ಸಾಯುತ್ತಾರೆ'-ಎಂದು ಕೆಲವರು ಯೋಚಿಸುತ್ತಾರೆ. ಇದು ತೀರಾ ಭ್ರಮೆಯೇ ಸರಿ.

ಈ ಪಾಂಚಭೌತಿಕಶರೀರವು ಕಾಲಕರ್ಮಗುಣಗಳ ಅಧೀನದಲ್ಲಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಬ್ಬಾವಿನ ಬಾಯಿಗೆ ಸಿಕ್ಕಿರುವ ಇಲಿಯಂತೆ-ಇವನು ಪರಾಧೀನನು. ಪರಾಧೀನತೆಯಲ್ಲಿರುವವನಿಂದ ಮತ್ತೊಬ್ಬರ ರಕ್ಷಣೆಯು ಸಾಧ್ಯವೇ ?

ಜೀವೋ ಜೀವಸ್ಯ ಜೀವನಂ – ಇದೇ ಪ್ರಪಂಚದ ನಿಯಮ. ಅಭಿಮಾನೀ ಪುರುಷನು ನಾನೇ ಕರ್ತಾ-ಧರ್ತಾ-ಭರ್ತಾ ಎಂದು ತಿಳಿಯುತ್ತಾನೆ. ತನ್ನ ಚಿಂತೆಯೊಂದನ್ನು ಬಿಟ್ಟು ಊರಿನವರಿಗೆಲ್ಲಾ ದೇಶದವರಿಗೆಲ್ಲಾ ಚಿಂತಿಸುತ್ತಾನೆ."

ನಾರದರು ಮುಂದುವರಿದು ಹೇಳುತ್ತಾರೆ :

"ಜೀವಿಗಳ ಅಂತರಂಗ-ಬಹಿರಂಗಗಳೆರಡರಲ್ಲಿಯೂ ಆ ಪರಮಾತ್ಮನೇ ಪ್ರಕಾಶಿಸುತ್ತಿರುವವನು. ಅವನೇ ಸರ್ವಾತ್ಮಕನು. ಅವನನ್ನು ನೀನು ಅನ್ವೇಷಿಸು. ತಿಳಿಯಲು ಪ್ರಯತ್ನಿಸು.

ಸಮಸ್ತಪ್ರಾಣಿಗಳ ಜೀವನಾಧಾರನಾದ ಭಗವಂತನೇ ಭೂಭಾರಹರಣಕ್ಕಾಗಿ ಅವತರಿಸಿದ್ದಾನೆ. ದೇವಕಾರ್ಯಗಳೆಲ್ಲವನ್ನೂ ಪೂರೈಸುತ್ತಾ ಬಂದಿದ್ದಾನೆ; ಅವನ ಅವತಾರಕಾರ್ಯಗಳು ಮುಗಿಯುವುದರಲ್ಲಿವೆ.

ಹಿಮಾಲಯದ ದಕ್ಷಿಣಭಾಗದಲ್ಲಿ ಸಪ್ತರ್ಷಿಗಳ ಸಂತೋಷಕ್ಕಾಗಿ ಗಂಗೆಯು ಸಪ್ತಧಾರೆಯಾಗಿ ಪ್ರವಹಿಸಿದ್ದಾಳೆ. ಆ ಪ್ರದೇಶವನ್ನು ಸಪ್ತಸ್ರೋತವೆಂದೇ ಕರೆಯುತ್ತಾರೆ.

ಅಲ್ಲಿರುವ ಋಷ್ಯಾಶ್ರಮಗಳಲ್ಲಿ ವಿದುರ-ಧೃತರಾಷ್ಟ್ರ-ಗಾಂಧಾರಿಯರು ಇದ್ದಾರೆ.

ಅವರ ಹೃದಯವು ಕಾಮನಾರಹಿತವಾಗಿದೆ. ಕೇವಲ ಜಲಾಹಾರದಿಂದ ಕಾಲಯಾಪನೆಯನ್ನು ಮಾಡುತ್ತಿದ್ದಾರೆ. ಆಸನಜಯಿಗಳಾಗಿ ಪ್ರಾಣಗಳನ್ನು ಜಯಿಸಿ ಷಡಿಂದ್ರಿಯಗಳನ್ನೂ ವಿಷಯಪರಾಙ್ಮುಖಗಳನ್ನಾಗಿ ಮಾಡಿದ್ದಾರೆ. ಭಗವದ್ಭಾವದ ದಿವ್ಯಧಾರಣೆಯಿಂದ ತ್ರಿಗುಣಗಳ ಕಶ್ಮಲವೂ ದೂರವಾಗಿದೆ.

ಅವರು ಅಹಂಕಾರವನ್ನು ಬುದ್ಧಿಯೊಡನೆ ಜೋಡಿಸಿ, ಕ್ಷೇತ್ರಜ್ಞನಾದ ಆತ್ಮನಲ್ಲಿ ಲೀನಮಾಡಿ, ಆತ್ಮನನ್ನು ಮಹಾಕಾಶದಲ್ಲಿ ಘಟಾಕಾಶದಂತೆ ಸರ್ವಾಧಿಷ್ಠಾನಬ್ರಹ್ಮನಲ್ಲಿ ಲೀನಗೊಳಿಸಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಮಾಯಾಗುಣಗಳಿಂದಾಗುವ ಪರಿಣಾಮವು ನಾಶಗೊಳಿಸಲ್ಪಟ್ಟಿದೆ. ಸರ್ವಕಾರ್ಯಗಳನ್ನೂ ಸಂನ್ಯಸಿಸಿ ಸ್ಥಾಣುವಿನಂತೆ ಕುಳಿತಿದ್ದಾರೆ. ನೀನು ಅವರ ಬಗ್ಗೆ ಯೋಚಿಸಬೇಡ. ಯಾವ ವಿಧವಾದ ವಿಘ್ನಗಳನ್ನೂ ಉಂಟುಮಾಡಬೇಡ.

ಇನ್ನು ಐದು ದಿವಸಗಳಲ್ಲಿ ಧೃತರಾಷ್ಟ್ರನು ದೇಹತ್ಯಾಗಿಯಾಗುತ್ತಾನೆ, ಗಾಂಧಾರಿಯೂ ಸತಿಯಾಗುತ್ತಾಳೆ. ಗಾಂಧಾರೀ-ಧೃತರಾಷ್ಟ್ರರ ದೇಹತ್ಯಾಗದಿಂದ ದುಃಖಿಯಾದ ವಿದುರನು ತೀರ್ಥಯಾತ್ರೆಗೆ ಹೊರಟುಹೋಗುತ್ತಾನೆ." ಎಂದು ತಿಳಿಸಿದ ನಾರದರು ತುಂಬುರರೊಡನೆ ಆಕಾಶಗಾಮಿಗಳಾಗಿ ಹೊರಟುಹೋದರು. ಯುಧಿಷ್ಠಿರಾದಿಗಳೂ ನಿರ್ದುಃಖಿಗಳಾದರು.

13ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೧೪

ಅಪಶಕುನಗಳಿಂದ ಯುಧಿಷ್ಠಿರನ ಚಿಂತೆ · ಅರ್ಜುನನ ಪ್ರತ್ಯಾಗಮನ

ಸೂತಪೌರಾಣಿಕರು ಪ್ರವಚನವನ್ನು ಮುಂದುವರಿಸುತ್ತಾ ಹೇಳುತ್ತಾರೆ :

"ಸ್ವಜನರನ್ನು ನೋಡುವ ಹಾಗೂ ಪುಣ್ಯಶ್ಲೋಕನಾದ ಶ್ರೀಕೃಷ್ಣನ ಕರ್ಮಗಳನ್ನೂ ತಿಳಿಯುವ ಆಸೆಯಿಂದ ಅರ್ಜುನನು ದ್ವಾರಕೆಗೆ ಹೋಗಿದ್ದನು.

ಹಲವಾರು ತಿಂಗಳುಗಳು ಕಳೆದುವು. ಆದರೂ ಬರಲಿಲ್ಲ. ಇತ್ತ ಯುಧಿಷ್ಠಿರನು ಅನೇಕಾಪಶಕುನಗಳನ್ನು ಕಾಣಲಾರಂಭಿಸಿದನು.

ಋತುಧರ್ಮಗಳೂ ಬದಲಾಯಿಸುತ್ತಿವೆ. ಜನರು ಕ್ರೋಧಿಗಳೂ, ಲೋಭಿಗಳೂ, ಅಸತ್ಯಪರಾಯಣರೂ ಆಗುತ್ತಿದ್ದಾರೆ. ಜನರು ಜೀವನನಿರ್ವಹಣೆಗಾಗಿ ಪಾಪಿಗಳಾಗುತ್ತಿದ್ದಾರೆ.

ವ್ಯವಹಾರಗಳು ಅಸತ್ಯಮಯವಾಗುತ್ತಿವೆ. ಸ್ನೇಹದಲ್ಲಿಯೂ ಕಾಪಟ್ಯತೆಯು ತೋರುತ್ತಿದೆ. ತಾಯಿ-ತಂದೆಗಳು, ಅಣ್ಣ-ತಮ್ಮಂದಿರ, ಪತಿ-ಪತ್ನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯರು ಪರಸ್ಪರ ಕಲಹಪ್ರಿಯರಾಗುತ್ತಿದ್ದಾರೆ. ಕಲಿಕಾಲವು ಬರುತ್ತಿರುವುದರಿಂದ ಜನರ ಸ್ವಭಾವವು ಲೋಭ-ಮೋಹ-ದಂಭಾವೃತವಾಗುತ್ತಿದೆ. ಪ್ರಕೃತಿಯಲ್ಲಿ ನಿತ್ಯವೂ ಅನಿಷ್ಟ ಸೂಚಕಗಳಾದ ಅಪಶಕುನಗಳು ಕಾಣಲ್ಪಡುತ್ತಿವೆ. ಧರ್ಮಾಚರಣೆಯೂ ಸಹ ಮತ್ತೊಬ್ಬರನ್ನು ತುಳಿಯುವುದಕ್ಕಾಗಿಯೇ ನಡೆಯುತ್ತಿದೆ. ಇವುಗಳನ್ನೆಲ್ಲವನ್ನೂ ನೋಡಿ ಆತಂಕಗೊಂಡ ಯುಧಿಷ್ಠಿರನು ಭೀಮಸೇನನನ್ನು ಕೇಳಿದನು.

"ಭೀಮಸೇನ ! ಶ್ರೀಕೃಷ್ಣನನ್ನು ನೋಡಿಕೊಂಡು ಬರಲು ಹೋಗಿದ್ದ ಅರ್ಜುನನೇಕೆ ಇನ್ನೂ ಬರಲಿಲ್ಲವಲ್ಲ ! ಆಗಲೇ ಏಳು ತಿಂಗಳುಗಳು ಕಳೆದುವು. ಹೀಗೆ ವಿಳಂಬವಾಗಲು ಕಾರಣವೇನಿರಬಹುದು ?

ಹಿಂದೆ ನಾರದರು ಹೇಳಿದ್ದ ಶ್ರೀಕೃಷ್ಣನ ಲೀಲಾವಿಗ್ರಹಸಂವರಣ ಕಾಲವು ಇನ್ನೂ ಪ್ರಾಪ್ತವಾಗಿಲ್ಲವಷ್ಟೆ ! ನಾವು ಶ್ರೀಕೃಷ್ಣನ ಕೃಪಾವಿಶೇಷದಿಂದ ಸಕಲಭೋಗಭಾಗ್ಯಗಳನ್ನೂ ಪಡೆದೆವು.

ಭೀಮ ! ನೀನು ರಿಪುಕುಲಭಯಂಕರನಲ್ಲವೇ ! ನೀನು ನೋಡುತ್ತಿರುವೆಯಷ್ಟೆ ? ಆಕಾಶದಲ್ಲಾಗುವ ಉಲ್ಕಾಪಾತಗಳು, ಭೂಮಿಯಲ್ಲಾಗುವ ಭೂಕಂಪಾದಿಗಳು, ಮನುಷ್ಯರು ಅನುಭವಿಸುವ ಭಯಂಕರರೋಗಾದಿಗಳು- ಇವುಗಳನ್ನು ನೋಡು. ನಮ್ಮ ಕಣ್ಣಮುಂದೆಯೇ ಈ ಭಯಂಕರವಾದ ಅಪಶಕುನಗಳು ಏಕಾಗುತ್ತಿವೆ ? ಬುದ್ಧಿಮೋಹನರೂಪವಾದ ಮಹಾಭಯ ಪ್ರಾಪ್ತಿಯ ಸೂಚನೆಯೇ ಇದು ?

ತಮ್ಮ! ನನ್ನ ಎಡಗಣ್ಣು, ಎಡಭುಜ, ಎಡತೊಡೆಗಳು ಬಾರಿ-ಬಾರಿಗೂ ಅದುರುತ್ತಿವೆ. ಹೃದಯದ ಬಡಿತವು ಜೋರಾಗಿದೆ. ಏನೋದೊಡ್ಡ ಅನಿಷ್ಟವು ಒದಗುವುದರಲ್ಲಿದೆ. ಸೂರ್ಯೋದಯದ ಕಾಲದಲ್ಲಿ ಸೂರ್ಯನಕಡೆಗೆ ಮುಖ ಮಾಡಿಕೊಂಡು ನರಿಗಳು ಗೋಳಿಡುತ್ತಿವೆ.

ನಾಯಿಗಳು ನನ್ನನ್ನು ನೋಡಿ ಗಟ್ಟಿಯಾಗಿ ಬೊಗಳಲಾರಂಭಿಸುತ್ತವೆ. ಹಸುಗಳು ನನ್ನ ಎಡಗಡೆಯಿಂದಲೂ-ಕತ್ತೆಗಳು ಬಲಗಡೆಯಿಂದಲೂ ಸಂಚರಿಸುತ್ತವೆ.

ಕುದುರೆಗಳು ಅಳುತ್ತಿರುವ ಹಾಗೆ ಕಾಣುತ್ತವೆ. ಮೃತ್ಯುದೂತರಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಪೋತ, ಗೂಬೆ, ಕಾಗೆಗಳು ರಾತ್ರಿ ನನ್ನ ಕಿವಿ ಕಿವುಡಾಗುವಂತೆ ಅರಚುತ್ತವೆ. ದಿಕ್ಕುಗಳು ಧೂಮಾವೃತವಾಗಿ ತೋರುತ್ತಿವೆ.

ಸೂರ್ಯ-ಚಂದ್ರರಿಗೆ ಪದೇ-ಪದೇ ಪರಿವೇಶವು ಕಟ್ಟಲ್ಪಡುತ್ತಿದೆ. ಈ ಭೂಮಿಯು ಪರ್ವತಗಳ ಸಹಿತ ನಡುಗುತ್ತಿದೆ. ಮೇಘಗರ್ಜನೆಯು ಬಿರುಸಾಗಿದೆ. ಮಿಂಚುಗಳು ಮಿನುಗುತ್ತಿವೆ. ಬಿರುಗಾಳಿಯು ಬೀಸುತ್ತಿದೆ

ಮೋಡಗಳಿಂದ ರಕ್ತವರ್ಷಣವಾಗುತ್ತಿದೆ. ಸೂರ್ಯಪ್ರಭೆಯು ಮಂದ ವಾಗುತ್ತಿದೆ. ಆಕಾಶದಲ್ಲಿ ಗ್ರಹಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿವೆ.

ನದೀ-ನದ-ತಟಾಕಗಳು ಸ್ತಬ್ದವಾಗಿವೆ. ಹಾಗೆಯೇ ಜನರ ಮನಸ್ಸೂ ಕ್ಷೋಭೆಗೊಂಡಿದೆ. ತುಪ್ಪದಿಂದ (ಆಜ್ಯಾಹುತಿಗಳಿಂದ) ಅಗ್ನಿಯು ಜ್ವಲಿಸು ವುದಿಲ್ಲ.

ಯಾವ ದುಷ್ಟಕಾಲವು ಬರುವುದೋ ತಿಳಿಯದಾಗಿದೆ.

ಕರುಗಳು ಅಕ್ಕರೆಯಿಂದ ಹಾಲುಕುಡಿಯುವುದಿಲ್ಲ. ಹಸುಗಳು ಹಾಲು ಕರೆಯುವಾಗ ಒದೆಯುತ್ತವೆ.

ಅವುಗಳು ಕಣ್ಣೀರು ಹರಿಸುತ್ತಿವೆ. ವೃಷಭಗಳು ಉದಾಸೀನವಾಗಿವೆ.

ದೇವತಾಮೂರ್ತಿಗಳು ಅಳುತ್ತಿರುವಂತೆ ಕಾಣುತ್ತಿವೆ. ಮೂರ್ತಿಗಳ ಮುಖದಿಂದ ಬೆವರು ಹೊರಡುತ್ತಿದೆ. ಅವುಗಳು ಅಳ್ಳಾಡುತ್ತವೆ.

ತಮ್ಮ ! ಪಟ್ಟಣಗಳು, ಗ್ರಾಮಗಳು, ಉದ್ಯಾನವನಗಳೆಲ್ಲ ಶ್ರೀಹೀನ ಗಳಾಗಿವೆ. ಆನಂದರಹಿತಗಳಾಗಿವೆ.

ಇವುಗಳು ಯಾವ ಆಗಾಮಿದುಃಖಸೂಚಕಗಳೋ ತಿಳಿಯದಾಗಿದೆ.

ಪ್ರಾಯಶಃ ಶ್ರೀಕೃಷ್ಣನ ಪಾದಾರವಿಂದಗಳ ದಿವ್ಯಸ್ಪರ್ಶವು ಲೋಪವಾ ಗಿರಬಹುದೇ ?"

ವಾಚಕರು ಗಮನಿಸಬೇಕು :

ಅಪಶಕುನಗಳು ವಿಪತ್ತುಗಳನ್ನು ತರುವುದಿಲ್ಲ. ಅವುಗಳು ಸೂಚಕ ಗಳಷ್ಟೆ. ಮನುಷ್ಯರು ಸಾವಧಾನದಿಂದಿರಬೇಕೆಂದು ಸೂಚಿಸುತ್ತವೆ.

ಅಪಶಕುನಗಳಾದರೆ ಅಸಹಿಷ್ಣುಗಳಾಗಬಾರದು. ಅವುಗಳ ಮೇಲೆ ಕೋಪಗೊಳ್ಳಬಾರದು. ಸಾವಧಾನರಾಗಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೀವು ಶುಭಕಾರ್ಯಕ್ಕಾಗಿ ಮನೆಯಿಂದ ಹೊರಟಾಗ ಬೆಕ್ಕು ಅಡ್ಡಲಾಗಿ ಬಂದರೆ-ಬೆಕ್ಕನ್ನು ಹೊಡೆಯಬೇಕೆಂದು ಯೋಚಿಸಬಾರದು. ಅದು ಈಶ್ವರನ ಸೂಚನೆಯೆಂದು ಸಾವಾಧಾನದಿಂದಿರಬೇಕು.

ಹೀಗೆ ಯುಧಿಷ್ಠಿರನು ಆತಂಕಪಡುತ್ತಿರುವಾಗಲೇ ಅರ್ಜುನನು ದ್ವಾರಕೆಯಿಂದ ಹಿಂದಿರುಗಿದನು.

ಅರ್ಜುನನ ಸ್ಥಿತಿಯು ವಿಚಿತ್ರವಾಗಿದೆ. ಮುಖದಲ್ಲಿ ಕಾತುರತೆಯು ಒಡೆದುಮೂಡುತ್ತಿದೆ. ಅಧೋವದನನಾಗಿ ಕಣ್ಣೀರು ಹರಿಸುತ್ತಿದ್ದಾನೆ. ಮುಖವು ಕಾಂತಿಹೀನವಾಗಿದೆ.

ಯುಧಿಷ್ಠಿರನು ಕೇಳಿದನು ;

"ಅನುಜನೇ ! ದ್ವಾರಕಾಪುರಿಯಲ್ಲಿ ನಮ್ಮ ಸ್ವಜನರಾದ ಮಧು-ಭೋಜ-ದಾಶಾರ್ಹ-ಸಾತ್ವತ-ಅಂಧಕ-ವೃಷ್ಣಿವಂಶಗಳ ಯಾದವರೆಲ್ಲರೂ ಕ್ಷೇಮವೇ ? ವಸುದೇವ-ಶೂರಸೇನರು ಕುಶಲಿಗಳೇ ? ಅವರ ಪತ್ನಿಯರಾದ ದೇವಕಿಯೇ ಆದಿಯಾದ ಸ್ತ್ರೀಯರೆಲ್ಲರೂ ಆನಂದದಿಂದಿರುವರೇ ?

ಕಂಸನ ತಂದೆ ಉಗ್ರಸೇನ, ಅವನ ತಮ್ಮ ದೇವಕರು ದೀರ್ಘಾಯುಷ್ಮಂತರಷ್ಟೆ ? ಬಲರಾಮ-ಪ್ರದ್ಯುಮ್ನ-ಅನಿರುದ್ಧ-ಉದ್ಧವಾದಿಗಳು ನಮ್ಮ ಯೋಗ-ಕ್ಷೇಮಗಳನ್ನು ವಿಚಾರಿಸಿದರೇ ?

ಭಕ್ತವತ್ಸಲನಾದ, ಬ್ರಾಹ್ಮಣಭಕ್ತನಾದ ಭಗವಾನ್ ಶ್ರೀಕೃಷ್ಣನು ದ್ವಾರಕಿಯ ಸುಧರ್ಮಾಸಭೆಯಲ್ಲಿ ಎಂದಿನಂತೆ ರಾರಾಜಿಸುತ್ತಿದ್ದನಷ್ಟೆ ?

ರುಕ್ಮಿಣೀ-ಸತ್ಯಭಾಮಾದಿ ಹದಿನಾರು ಸಾವಿರ ಪತ್ನಿಯರೂ ಶ್ರೀಕೃಷ್ಣನನ್ನು ಸೇವಿಸುತ್ತಾ ಪಾರಿಜಾತಾದಿ ಭೋಗ್ಯವಸ್ತುಗಳ ಭೋಗವನ್ನು ಅನುಭವಿಸುತ್ತಿರುವರಷ್ಟೇ ?

ಅರ್ಜುನ ? ನೀನು ಆರೋಗ್ಯವಾಗಿರುವೆಯಾ ? ನಿನ್ನ ಮುಖವು ಕಳೆಗುಂದಿರುವ ಹಾಗೆ ಕಾಣುತ್ತಿದೆ.

ಅಲ್ಲಿ ನಿನ್ನ ಸ್ವಾಗತ-ಸಮ್ಮಾನಾದಿಗಳು ಸರಿಯಾಗಿ ನಡೆದುವಷ್ಟೆ ? ಅಲ್ಲಿ ಯಾರಾದರೂ ಬಿರುನುಡಿಗಳನ್ನು ನುಡಿದು ನಿನಗೆ ಸಂತಾಪವನ್ನು ಉಂಟುಮಾಡಿರುವರೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥವಾ ಯಾರಿಗಾದರೂ ಅವರು ಬಯಸಿದ-ನೀನು ವಾಗ್ದಾನಮಾಡಿದ-ವಸ್ತುವನ್ನು ಕೊಡದೇ ಬಂದಿರುವೆಯಾ ?

ತಮ್ಮಾ ! ನೀನು ಯಾವಾಗಲೂ ಶರಣಾಗತರಕ್ಷಕನು. ಯಾರಾದರೂ ಬ್ರಾಹ್ಮಣರು, ಗೋವುಗಳು, ಬಾಲಕರು, ಸ್ತ್ರೀಯರು, ಮುದುಕರು, ರೋಗಿಗಳು-ನಿನ್ನ ರಕ್ಷಣೆಗೆ ಬಂದು ನೀನು ಅವರನ್ನು ತ್ಯಾಗಮಾಡಿಲ್ಲವಷ್ಟೆ ? ಮಾರ್ಗದಲ್ಲಿ ಯಾರಿಂದಲಾದರೂ ಅಪಜಯವನ್ನು ಹೊಂದಿರುವೆಯಾ ?

ಇಂತಹ ಯಾವುದೂ ಸಂಭವಿಸಿಲ್ಲದಿರಬಹುದು. ನಿನ್ನ ಪ್ರಿಯಸಖ-ನಿನ್ನ ಅಭಿನ್ನಹೃದಯ-ಭಗವಾನ್ ಶ್ರೀಕೃಷ್ಣನ ವಿರಹವೇನೂ ನಿನ್ನನ್ನು ಕಾಡುತ್ತಿಲ್ಲವಷ್ಟೆ ? ನಿನ್ನ ಮಾನಸಿಕ ತೊಂದರೆಯ ಕಾರಣವನ್ನು ಬೇಗ ವಿವರಿಸು."

14ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೧೫

ಪಾಂಡವರ ಸ್ವರ್ಗಾರೋಹಣ

ಸೂತಪೌರಾಣಿಕರು ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ

"ಶ್ರೀಕೃಷ್ಣನ ಪ್ರೀತಿಯ ಸಖನಾದ ಅರ್ಜುನನು ಶ್ರೀಕೃಷ್ಣವಿರಹದಿಂದ ಕೃಶನಾಗಿದ್ದನು. ಧರ್ಮರಾಜನು ಅವನ ವಿಷಾದಗ್ರಸ್ತಮುಖವನ್ನು ನೋಡಿ ಹಲವು ವಿಧಧ ಶಂಕೆಗಳನ್ನು ಮಾಡುತ್ತಾ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿಬಿಟ್ಟನು.

ಶೋಕಾಕುಲನಾದ ಅರ್ಜುನನಿಗೆ ಅಣ್ಣನ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೂ ಆಗುತ್ತಿರಲಿಲ್ಲ. ಮನಸ್ಸಿನಲ್ಲೆಲ್ಲಾ ಶ್ರೀಕೃಷ್ಣಸ್ಮರಣೆಯೇ ತುಂಬಿದ್ದಿತು. ಶ್ರೀಕೃಷ್ಣನು ಕಣ್ಮರೆಯಾದುದರಿಂದ ಅರ್ಜುನನು ಬಹಳ ಪರವಶನಾಗಿದ್ದನು.

ಶ್ರೀಕೃಷ್ಣನು ರಥವನ್ನು ನಡೆಸುವಾಗ, ಊಟಮಾಡುವಾಗ, ವಿಹಾರದಲ್ಲಿರುವಾಗ-ಯಾವ ರೀತಿ ಪ್ರೇಮದಿಂದ ವ್ಯವಹರಿಸುತ್ತಿದ್ದನು ? ಅದನ್ನು ನೆನೆಸಿಕೊಂಡು ಅರ್ಜುನನು ದುಃಖಿಯಾಗಿದ್ದಾನೆ. ದುಃಖಕ್ಕೆ ಪಾರವೇ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹಳ ಕಷ್ಟದಿಂದ ಶೋಕದ ಆವೇಗವನ್ನು ತಡೆದನು. ಕೈಗಳಿಂದ ಕಣ್ಣೀರು ಒರಸಿಕೊಂಡು ಅವರದ್ಧ ಕಂಠದಿಂದ ಯುಧಿಷ್ಠಿರನೊಡನೆ ಹೇಳಿದನು :

ವಂಚಿತೋಽಹಂ ಮಹರಾಜ ಹರಿಣಾ ಬಂಧುರೂಪಿಣಾ ।
ಯೇನ ಮೇಽಪಹೃತಂ ತೇಜೋ ದೇವವಿಸ್ಮಾಪನಂ ಮಹತ್ ॥

ಅಣ್ಣಾ ! ಪರಮಬಂಧುವಾದ ಶ್ರೀಹರಿಯೇ ನನ್ನನ್ನು ವಂಚಿಸಿ ಹೊರಟುಹೋದನು. ಯಾವ ನನ್ನ ಶೌರ್ಯ-ತೇಜೋ-ಬಲ-ಪರಾಕ್ರಮ ಗಳನ್ನು ನೋಡಿ ದೇವತೆಗಳೂ ವಿಸ್ಮಿತರಾಗುತ್ತಿದ್ದರೋ-ಅವೆಲ್ಲವೂ ಅವ ನೊಡನೆಯೇ ಹೊರಟುಹೋದುವು. ನಾನೀಗ ಉಸಿರಾಡುವ ಶವವಾಗಿ ದ್ದೇನೆ. ಅವನಿಲ್ಲದ ಈ ಸಂಸಾರವು ನಿಸ್ಸಾರವಾಗಿ ಕಾಣುತ್ತಿದೆ.

ಯಾವ ಮಹನೀಯನನ್ನು ಆಶ್ರಯಿಸಿ, ಪಾಂಚಲನಗರಿಗೆ ಬಂದಿದ್ದ ಅಸಂಖ್ಯಾತರಾಜರ ದರ್ಪಭಂಗವನ್ನು ಮಾಡಿದೆನೋ, ಅನ್ಯರಿಂದಾಗದ ಮತ್ಸ್ಯಯಂತ್ರವನ್ನು ಭೇದಿಸಿ. ದ್ರೌಪದಿಯನ್ನು ನಮ್ಮವಳನ್ನಾಗಿಸಿ ಕೊಂಡೆನೋ, ಯಾರ ಶಕ್ತಿಯಿಂದ ಖಾಂಡವವನವನ್ನು ದಹಿಸಿದೆನೋ, ಯಾರಿಂದ ನಾವು ಮಯನಿರ್ಮಿತಸಭಾಮಂಟಪವನ್ನು ಹೊಂದಿದ್ದೆವೋ, ಯಾರ ಶಕ್ತಿ-ಯುಕ್ತಿಗಳಿಂದ ಹತ್ತು ಸಾವಿರ ಆನೆಗಳ ಬಲವಿದ್ದ ಜರಾಸಂಧ ನನ್ನು ಭೀಮನು ಸಿಗಿದು ಬಿಸಾಡಿದನೋ, ಯಾವಮಹಾತ್ಮನು, ತುಂಬಿದ ಸಭೆ ಯಲ್ಲಿ ದ್ರೌಪದಿಯ ಮಾನಭಂಗವಾಗದಂತೆ ಸಂರಕ್ಷಿಸಿದನೋ - ಹಾಗೂ ದೂರ್ವಾಸರ ಶಾಪದಿಂದ ನಾವು ಪಾರಾಗುವಂತೆ ಮಾಡಿದನೋ, ಆ ಮಹ ನೀಯನನ್ನು ಇನ್ನು ಈ ಲೋಕದಲ್ಲಿ ದರ್ಶನಮಾಡುವಹಾಗಿಲ್ಲ.

ಅವನ ದಿವ್ಯಪ್ರತಾಪದಿಂದ ಕಿರಾತರೂಪಿಯಾದ ಶಂಕರನೊಡನೆ ಸೆಣ ಸಾಡಿ ಪಾಶುಪತಾಸ್ತ್ರವನ್ನು ಪಡೆದುಕೊಂಡಿದ್ದೆನು. ಅವನ ದಯೆಯಿಂದ ಇಂದ್ರಲೋಕಕ್ಕೆ ಹೋಗಿ ಇಂದ್ರನ ಅರ್ಧಾಸನಾಸೀನನಾಗಿದ್ದೆನು.

ನಿವಾತಕವಚರನ್ನು ನಿಗ್ರಹಿಸಲು ಅವನ ಮಹಾಕೃಪೆಯಿಂದ ಸಮರ್ಥ ನಾಗಿದ್ದೆನು. ಅಂತಹ ಪುರುಷೋತ್ತಮ ಶ್ರೀಕೃಷ್ಣನು ನಮ್ಮನ್ನು ವಂಚಿಸಿ ಸ್ವಧಾಮಕ್ಕೆ ತೆರಳಿದನು.

ಭೀಷ್ಮ-ದ್ರೋಣಾಭಿರಕ್ಷಿತವಾದ ಅಪಾರಕೌರವಸೈನ್ಯವನ್ನು ಅವನ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶ್ರಯದಿಂದಲೇ ನಿಗ್ರಹಿಸಲು ಸಮರ್ಥನಾಗಿದ್ದೆನು. ಅವನ ಸಹಾಯದಿಂದ ನಾನು ವಿರಾಟನಗರಿಯಲ್ಲಿ ರಾಜನ ಗೋಸಂಪತ್ತನ್ನು ಕೌರವರಿಂದ ಬಿಡಿಸಿ ಕೊಂಡು ಬರಲು ಸಮರ್ಥನಾಗಿದ್ದೆನು. ಅಷ್ಟೇ ಅಲ್ಲ. ಅವರ ಕಿರೀಟಾದ್ಯಾಭರಣಗಳನ್ನು ತೆಗೆದುಕೊಂಡು ಬಂದಿದ್ದೆನು.

ಅಗ್ರೇಚರೋ ಮಮ ವಿಭೋ ರಥಯೂಥಪಾನಾಂ
ಆಯುರ್ಮನಾಂಸಿ ಚ ದೃಶಾ ಸಹ ಓಜ ಆರ್ಚ್ಛತ್ ॥

ಭೀಷ್ಮ - ದ್ರೋಣ - ಜಯದ್ರಥಾದಿ ಮಹಾಯೋಧರು ಯುದ್ಧರಂಗದ ಮುಂಚೂಣಿಯಲ್ಲಿರುವಾಗ ರಥದ ಮುಂಭಾಗದಲ್ಲಿ ಸಾರಥಿಯಾಗಿ ಕುಳಿತಿದ್ದ ಶ್ರೀಕೃಷ್ಣನು ಪ್ರತಿಪಕ್ಷದ ಸೈನಿಕರ ಮನಸ್ಸು-ಬಲ-ಓಜಸ್ಸು-ಆಯುಷ್ಯ-ಎಲ್ಲ ವನ್ನೂ ತನ್ನ ದೃಷ್ಟಿಯಿಂದಲೇ ಸೆಳೆದುಬಿಟ್ಟನು.

ಅವರನ್ನು ನಾನು ನನ್ನ ಬಾಣಗಳಿಂದ ಕೊಲ್ಲಲಿಲ್ಲ. ತನ್ನ ನೇತ್ರ ಗಳಿಂದಲೇ ಅವನು ಅವರನ್ನು ಕೊಂದಿದ್ದನು. ದ್ರೋಣಾಚಾರ್ಯರೇ ಮೊದ ಲಾದ ಮಹಾರಥರು ಪ್ರಯೋಗಿಸುತ್ತಿದ್ದ ಅಸ್ತ್ರ ಶಸ್ತ್ರಗಳು ನನ್ನನ್ನು ಸ್ಪರ್ಶಿ ಸುತ್ತಲೇ ಇರಲಿಲ್ಲ. ಪ್ರಹ್ಲಾದನನ್ನು ಹಿರಣ್ಯ-ಕಶಿಪುವಿನ ಅಸ್ತ್ರ ಶಸ್ತ್ರಗಳು ಮುಟ್ಟದೇ ಇರುವಂತೆ ಅನುಗ್ರಹಿಸಿದ್ದ ಪ್ರಭುವು -ನನ್ನನ್ನೂ ಅದೇ ರೀತಿ ರಕ್ಷಿಸಿದ್ದನು. ಲೋಕದವರೆಲ್ಲರೂ ಯಾರ ಪಾದಕಮಲಗಳನ್ನು ಭಜಿಸಿ ಮುಕ್ತರಾಗಲು ಬಯಸುವರೋ – ಅಂತಹ ಪ್ರಭುವನ್ನು ಸಾರಥಿಯನ್ನಾಗಿ ಮಾಡಿಕೊಂಡ ದುರಾತ್ಮನು ನಾನು.

ಶ್ರೀಕೃಷ್ಣನ ಪ್ರಭಾವದಿಂದ ಬುದ್ಧಿಶೂನ್ಯರಾದ ಶತ್ರುಗಳು—ನನ್ನ ಕುದುರೆಗಳು ಆಯಾಸಗೊಂಡು ನಾನು ನೆಲದ ಮೇಲೆ ನಿಂತುಕೊಂಡಿದ್ದರೂ- ನನ್ನನ್ನು ಅವರು ಪ್ರಹರಿಸುತ್ತಿರಲಿಲ್ಲ. ನಾನು ಅವನೊಡನೆ ಕೂರುತ್ತಿದ್ದೆನು; ಏಳುತ್ತಿದ್ದೆನು ; ಮಲಗುತ್ತಿದ್ದೆನು ; ಭೋಜನಮಾಡುತ್ತಿದ್ದೆನು : ಸಲ್ಲಾಪ ಮಾಡುತ್ತಿದ್ದೆನು.

ನಾನೊಂದು ದಿನ ಕೇಳಿದೆನು "ಕೃಷ್ಣ ! ನೀನು ಸತ್ಯವಾದಿಯಲ್ಲವೇ ? ನೀನು ಅಂದು ಮಣ್ಣನ್ನು ತಿನ್ನುತ್ತಿದ್ದಾಗ ನಿನ್ನ ತಾಯಿ ಯಶೋದೆಯು ಬಂದು, ಬೆತ್ತವನ್ನು ತೋರಿಸುತ್ತಾ ಮಣ್ಣು ತಿಂದೆಯಾ ? ಎಂದು ಕೇಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿಲ್ಲವೇ ! ಆಗ ನೀನು ನಡುಗುತ್ತಾ 'ಇಲ್ಲ ಅಮ್ಮ, ನಾನು ನಿಜವಾಗಿಯೂ ತಿಂದಿಲ್ಲ'-ಎಂದು ಹೇಳಿದೆಯಲ್ಲವೇ ! ಇದೆಂತಹ ನಿನ್ನ ಸತ್ಯವಾದಿತ್ವವು ? ಇಂತಹ ನನ್ನ ಪ್ರಶ್ನೆಗಳನ್ನು ಮಂದಹಾಸಬೀರುತ್ತಾ ಕೇಳಿಸಿಕೊಳ್ಳುತ್ತಲಿದ್ದನು. ಒಂದು ಬಾರಿಯೂ ಕೋಪಗೊಳ್ಳಲ್ಲ. ಅಂತಹ ಪ್ರಭುವನ್ನು ನಾನೆಲ್ಲಿ ಕಾಣುವೆನು ? ಅಂತಹ ಪ್ರಿಯಮಿತ್ರನಿಂದ ರಹಿತನಾದೆನು.

ಅಣ್ಣಾ ! ಶ್ರೀಕೃಷ್ಣಪತ್ನಿಯರನ್ನು ನಾನು ದ್ವಾರಕೆಯಿಂದ ಕರೆನು ಕೊಂಡು ಬರುತ್ತಿದ್ದನು. ಆದರೆ ನಾನು ಅವರನ್ನು ದರೋಡೆಗಾರರಿಂದ ರಕ್ಷಿಸಲಾರದೇ ಹೋದೆನು.

ಯದ್ಯಪಿ ನನ್ನ ಕೈಗಳಲ್ಲಿ ಅದೇ ಧನುರ್ಬಾಣಗಳಿವೆ. ಅದೇ ರಥ ಅದೇ ಕುದುರೆಗಳು, ಆ ಅರ್ಜುನನೇ ನಾನು. ಆದರೇನು ? ಮಹಾ-ಮಹಾ ಪ್ರತಾಪಿಗಳಾದ ರಾಜರುಗಳನ್ನೂ ಪರಾಜಯಗೊಳಿಸಿದ ಈ ಸವ್ಯಸಾಚಿಯು ಸ್ತ್ರೀಯರನ್ನು ರಕ್ಷಿಸಲು ಅಸಮರ್ಥನಾದನು.

ಭಸ್ಮದಲ್ಲಿ ಮಾಡಿದ ಹೋಮದಂತೆ-ಕಪಟಯುಕ್ತವಾದ ಸೇವೆಯಂತೆ-

ಬಂಜರು ಭೂಮಿಯಲ್ಲಿ ಬಿತ್ತಿದ ಬೀಜದಂತೆ-ಅರ್ಜುನನು ನಿಷ್ಫಲನಾದನು.

ಅಣ್ಣಾ ! ನೀನು ಯಾವ ಯಾದವರ ಕುಶಲವನ್ನು ವಿಚಾರಿಸಿದೆಯೋ

ಅವರೆಲ್ಲರೂ ಬ್ರಾಹ್ಮಣಶಾಪಗ್ರಸ್ತರಾಗಿ ವಾರುಣೀಮದ್ಯಸೇವನೆಯಿಂದ ಮದೋನ್ಮತ್ತರಾಗಿ ಜೊಂಡುಹುಲ್ಲುಗಳಿಂದ ಪರಸ್ಪರ ಹೊಡೆದಾಡಿ ಕಾಲವಶರಾದರು. ನಾಲ್ಕಾರು ಜನ ಉಳಿದಿರಬಹುದಷ್ಟೆ.

ಇದೆಲ್ಲವೂ ಸರ್ವಶಕ್ತಿಮಂತನಾದ ಭಗವಂತನ ಲೀಲೆಯೋ ಸರಿ. ಅವನ ಲೀಲೆಗೆ ಅನುಗುಣವಾಗಿ ಪರಸ್ಪರ ರಕ್ಷಕರೂ ಆಗುತ್ತಾರೆ-ಮಾರಕರೂ ಆಗುತ್ತಾರೆ. ದೊಡ್ಡ ಜಲಚರಪ್ರಾಣಿಯು ಚಿಕ್ಕ ಜಲಚರಗಳನ್ನು ತಿಂದು ಮುಗಿಸುವಂತೆ-ಯದುವಂಶಿಗಳ ನಾಶವು ಯದುವಂಶಿಗಳಿಂದಲೇ ಆಯಿತು.

ದೇಶಕಾಲೋಪಯುಕ್ತವಾದ ಭಗವಂತನ ಬೋಧಗಳು ಹೃದಯತಾಪೋಪಶಮಗಳಾಗಿವೆ. ಸ್ಮರಣಮಾತ್ರದಿಂದ ಮನಸ್ಸಿನ ದುಃಖವು ದೂರವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಭಗವಂತನ ದಿವ್ಯಧ್ಯಾನವನ್ನು ಮನಸ್ಸಿಗೆ ತಂದುಕೊಂಡೊಡನೆಯೇ ಅರ್ಜುನನ ಚಿತ್ತ ವೃತ್ತಿಯು ಶಾಂತವಾಯಿತು ; ನಿರ್ಮಲವಾಯಿತು

ಶ್ರೀ ಕೃಷ್ಣನ ಚರಣಕಮಲಗಳ ಸ್ಮರಣೆಯಿಂದ ಅರ್ಜುನನ ಪ್ರೇಮಮಯೀ ಭಕ್ತಿಯು ಅಭಿವೃದ್ಧಿಯನ್ನೈದಿತು.

ಸರ್ವವಿಕಾರರಹಿತನಾದ. ಯುದ್ಧಾರಂಭದಲ್ಲಿ ಪರಮಾತ್ಮನು ಉಪದೇಶಮಾಡಿದ ಗೀತಾದಿವ್ಯಜ್ಞಾನವು ಸ್ಮರಣೆಗೆ ಬಂದಿತು. ಬ್ರಹ್ಮಜ್ಞಾನ ಪ್ರಾಪ್ತಿಯಿಂದ ಮಾಯೆಯ ಆವರಣವು ಭಂಗವಾಗಿ ಗುಣಾತೀತಾವಸ್ಥೆಯು ಪ್ರಾಪ್ತವಾಯಿತು. ದ್ವೈತದ ಸಂಶಯವು ನಿವೃತ್ತವಾಯಿತು. ಸೂಕ್ಷ್ಮ ಶರೀರದ ಭಂಗವಾಯಿತು. ಸಂಸಾರರೂಪವಾದ ಮಾಯಾಚಕ್ರದಿಂದ ಮುಕ್ತನಾದನು.

ಶ್ರೀಕೃಷ್ಣನ ಅಂತರ್ಧಾನ – ಯದುವಂಶದ ಸಂಹಾರ - ಇವುಗಳನ್ನು ಕೇಳಿದ ನಿಶ್ಚಲಮತಿಯಾದ ಯುಧಿಷ್ಠಿರನು ಸ್ವರ್ಗಾರೋಹಣದ ನಿಶ್ಚಯವನ್ನು ಮಾಡಿದನು. ಕುಂತಿಯು ಶ್ರೀಕೃಷ್ಣನ ಅಂತರ್ಧಾನವನ್ನೂ, ಯದುವಂಶಿಗಳ ನಾಶವನ್ನೂ ಕೇಳಿ, ಭಗವಂತನನ್ನು ಸದಾ ಹೃದಯದಲ್ಲಿ ಧ್ಯಾನಿಸುತ್ತಾ, ಜನ್ಮ-ಮೃತ್ಯುರೂಪವಾದ ಸಂಸಾರ ಬಂಧನದಿಂದ ಪಾರಾದಳು.

ಪುರಾಣ ಪುರುಷೋತ್ತಮನು ಯಾವ ಶರೀರವನ್ನು ಧರಿಸಿ ಭೂಭಾರವನ್ನು ಇಳುಹಿದನೋ -ಆ ಶರೀರವನ್ನೂ ತ್ಯಜಿ ಬಿಟ್ಟನು. ಮುಳ್ಳಿನಿಂದ ಮುಳ್ಳನ್ನು ತೆಗೆದು ಎರಡು ಮುಳ್ಳುಗಳನ್ನೂ ಬಿಸಾಡುವಂತೆ-ದೇಹವನ್ನು ತ್ಯಜಿಸಿದನು.

ಶ್ರೀಕೃಷ್ಣನು ದೇಹವನ್ನು ತ್ಯಜಿಸಿದಂದಿನಿಂದ ಕಲಿಯು ಪ್ರವೇಶವಾಯಿತು.

ಯುಧಿಷ್ಠಿರನು ನೋಡಿದನು : ನಗರಗಳಲ್ಲಿ, ಗ್ರಾಮಗಳಲ್ಲಿ, ಹಳ್ಳಿಗಳಲ್ಲಿ ಮನೆ ಮನೆಗಳಲ್ಲಿಯೂ, ಲೋಭ, ಅಸತ್ಯ, ಛಲ, ಕಪಟ, ಹಿಂಸೆ- ಇವೇ ಮುಂತಾದ ಅಧರ್ಮಗಳು ವರ್ಧಿಸುತ್ತಿವೆ.

ಯುಧಿಷ್ಠಿರನು ಮಹಾಪ್ರಸ್ಥಾನಕ್ಕೆ ನಿಶ್ಚಯಿಸಿದನು. ಅವನು ಸರ್ವಸಮರ್ಥನಾದ ಪರೀಕ್ಷಿತನನ್ನು ಅಖಂಡಸಾಮ್ರಾಜ್ಯಾಧಿಪತಿಯಾಗಿ ಅಭಿಷೇಚ

Sri Vidyabharathi Book Centre, Sringeri

CC-0. In Public Domain. Digitized by eGangotri

ಸಿದನು. ಮಥುರಾಪ್ರಾಂತ್ಯಕ್ಕೆ ಅನಿರುದ್ಧನ ಮಗ ವಜ್ರನನ್ನು ಅಧಿಕಾರಿಯನ್ನಾಗಿ ಮಾಡಿದನು.

ಅನಂತರ ಸರ್ವಸಮರ್ಥನಾದ ಯುಧಿಷ್ಠಿರನು ಪ್ರಾಜಾಪತ್ಯನಾಮಕ ಯಜ್ಞವನ್ನು ಮಾಡಿ, ಆಹವನೀಯಾದಿ ಅಗ್ನಿಗಳನ್ನು ಸ್ವಾತ್ಮಾರೋಪಣ ಮಾಡಿಕೊಂಡನು. ಅರ್ಥಾತ್ - ಗೃಹಸ್ಥಾಶ್ರಮಧರ್ಮದಿಂದ ಮುಕ್ತನಾಗಿ ಸಂನ್ಯಾಸಿಯಾದನು. ಸಮಸ್ತವಸ್ತ್ರ - ಭೂಷಣಾದಿಗಳನ್ನೂ ತ್ಯಜಿಸಿ, ಮಮತಾ ಅಹಂಕಾರವರ್ಜಿತನಾಗಿ ಸರ್ವಬಂಧನಿರ್ಮುಕ್ತನಾದನು.

ಅವನು ವಾಣಿಯನ್ನು ಮನಸ್ಸಿನಲ್ಲಿ ಮನಸ್ಸನ್ನು ಪ್ರಾಣದಲ್ಲಿ, ಪ್ರಾಣವನ್ನು ಅಪಾನದಲ್ಲಿ ಅಪಾನವನ್ನು ಮೃತ್ಯುವಿನಲ್ಲಿ, ಮೃತ್ಯುವನ್ನು ಪಂಚಭೂತಮಯವಾದ ಶರೀರದಲ್ಲಿ ಲೀನಗೊಳಿಸಿದನು. ಹೀಗೆ ದೇಹವನ್ನು ಮೃತ್ಯುರೂಪದ ಅನುಭವಕ್ಕೆ ತೆಗೆದುಕೊಂಡು ಅದನ್ನು ತ್ರಿಗುಣದಲ್ಲಿ ಸೇರಿಸಿದನು. ತ್ರಿಗುಣವನ್ನು ಮೂಲಪ್ರಕೃತಿಯುಲ್ಲಿಯೂ, ಪ್ರಕೃತಿಯನ್ನು ಆತ್ಮನಲ್ಲಿಯೂ, ಆತ್ಮನನ್ನು ಅವಿನಾಶಿಯಾದ ಬ್ರಹ್ಮನಲ್ಲಿಯೂ ಲೀನಮಾಡಿದನು. ಸಂಪೂರ್ಣವಿಶ್ವವೂ ಬ್ರಹ್ಮನೆಂಬ ಅನುಭವವು ಅವನಿಗಾಗತೊಡಗಿತು.

ಅನಂತರ ಯುಧಿಷ್ಠಿರನು ನಾರುಮಡಿಯನ್ನುಟ್ಟು ಅನ್ನೋದಕಗಳನ್ನು ತೊರೆದು ಮೌನಿಯಾದನು. ಜಡನಂತೆ, ಪಿಶಾಚದಂತೆ, ಉನ್ಮತ್ತನಂತೆ ಕಾಣತೊಡಗಿದನು. ಕಿವುಡನಂತೆ ಯಾರ ಮಾತನ್ನೂ ಕೇಳಿಸಿಕೊಳ್ಳದೇ ಯಾರನ್ನೂ ನಿರೀಕ್ಷಿಸದೇ, ಅರಮನೆಯಿಂದ ಹೊರಟುಬಿಟ್ಟನು. ಹೃದಯದಲ್ಲಿ ಪರಬ್ರಹ್ಮನನ್ನು ಚಿಂತಿಸುತ್ತಾ ಉತ್ತರಾಭಿಮುಖವಾಗಿ ಹೊರಟನು. ಅವನ ತಮ್ಮಂದಿರೂ ಕಲಿಯುಗದ ಪ್ರಭಾವವನ್ನರಿತು ಶ್ರೀಕೃಷ್ಣಚರಣಾಂಭೋಜಗಳನ್ನು ಸ್ಮರಿಸುತ್ತಾ ಅಣ್ಣನನ್ನು ಹಿಂಬಾಲಿಸಿದರು.

ಅವರು ಪಡೆಯಬೇಕಾದ್ದನ್ನೆಲ್ಲಾ ಪಡೆದಾಗಿತ್ತು. ನಿಶ್ಚಿಂತರಾಗಿ ಭಗವಂತನನ್ನು ಸ್ಮರಣೆಮಾಡುತ್ತಾ ನಡೆದರು. ಯಾರೂ ಅವರನ್ನು ಗುರುತಿಸಲಿಲ್ಲ, ಯಾರೂ ತಡೆಯಲಿಲ್ಲ, ಯಾರೂ ನೋಡಲೂ ಬಯಸಲಿಲ್ಲ. ವಿಷಯಾಪೇಕ್ಷಿಗಳಾದ ಜನರಿಗೆ ದುರ್ಲಭವಾದ ಗತಿಯನ್ನು ಅವರು ಹೊಂದಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಯಮಿಯಾದ ವಿದುರನೂ ಪ್ರಭಾಸಕ್ಷೇತ್ರದಲ್ಲಿ ದೇಹವನ್ನು ತ್ಯಜಿಸಿ ಯಮಲೋಕಕ್ಕೆ ಹೊರಟುಹೋದನು.

ಎಲ್ಲರೂ ತನ್ನನ್ನು ಉಪೇಕ್ಷಿಸಿರುವರೆಂದು ದ್ರೌಪದಿಯು ಅರಿತಳು. ವಸ್ತುತಃ ಯಾರಿಗೂ ಯಾರ ಅಪೇಕ್ಷೆಯೂ ಇಲ್ಲ. ಸುಮ್ಮನೆ ಭ್ರಮೆ. ನಾನಿಲ್ಲದೇ ಈ ಕೆಲಸವಾಗುವುದಿಲ್ಲ. ನಾನಿಲ್ಲದೇ ಇವರು ಬದುಕಲಾರರು.

ಒಬ್ಬನಿಲ್ಲದಿದ್ದರೆ ಮತ್ತೊಬ್ಬನ ಕೆಲಸವು ನಿಂತುಹೋಗಿಬಿಡುವುದೇ ? ಸಂಸಾರದಲ್ಲಿ ನಡೆಯುವುದೆಲ್ಲವೂ ನಡೆದೇ ನಡೆಯುತ್ತದೆ. ಯಾರಿಗಾಗಿಯೂ ಯಾವುದೂ ನಿಲ್ಲುವುದಿಲ್ಲ. ಯಾರಿಗಾಗಿಯೂ ಯಾವುದೂ ಹೋಗುವುದಿಲ್ಲ.

ಭಗವಾನ್ ಶ್ರೀಕೃಷ್ಣನನ್ನು ಬಿಟ್ಟರೆ ಮತ್ತಾರೂ ರಕ್ಷಕರಿಲ್ಲವೆಂದು ತಿಳಿದ ದ್ರೌಪದಿಯು-ಕೃಷ್ಣನನ್ನು ಬುದ್ಧಿಸ್ಥನನ್ನಾಗಿ ಮಾಡಿಕೊಂಡು ಉತ್ತಮ ಗತಿಯನ್ನು ಪಡೆದಳು.

ಭಗವಂತನ ಪ್ರಿಯಭಕ್ತರಾದ ಪಾಂಡವರ ಮಹಾಪ್ರಯಾಣದ ಈ ಪವಿತ್ರಕಥೆಯನ್ನು ಶ್ರದ್ಧೆಯಿಂದ ಕೇಳುವವರು ಭಗವದ್ಭಕ್ತಿಯುತರೂ. ಮುಕ್ತರೂ ಆಗುತ್ತಾರೆ.

ಓಂ ತತ್ಸದಿತ್ಯೇವಂ ಪಂಚದಶೋಽಧ್ಯಾಯಃ
ಶ್ರೀಕೃಷ್ಣಾರ್ಪಣಮಸ್ತು

— o —

ಅಧ್ಯಾಯ ೧೬

ಪೃಥ್ವೀ-ಧರ್ಮರೊಡನೆ ಪರೀಕ್ಷಿತನ ಸಂವಾದ

ಸೂತರು ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ :

"ಪಾಂಡವರ ಮಹಾಪ್ರಸ್ಥಾನಾನಂತರ ಪರಮಭಾಗವತೋತ್ತಮನಾದ ಪರೀಕ್ಷಿತನು, ಶ್ರೇಷ್ಠಬ್ರಾಹ್ಮಣರ ಶಿಕ್ಷಣಾನುಗುಣವಾಗಿ ಭೂಮಿಯನ್ನು ಪಾಲಿಸತೊಡಗಿದನು.

ಅವನ ಜನ್ಮಕಾದಲ್ಲಿ ಜ್ಯೋತಿಷಿಗಳು ಹೇಳಿದ ಗುಣಗಳೆಲ್ಲವೂ ಅವನಲ್ಲಿದ್ದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತರಕುಮಾರನ ಪುತ್ರೀ ಇರಾವತಿಯೊಡನೆ ಅವನ ವಿವಾಹವಾಯಿತು.

ಅವಳಲ್ಲಿ ಜನಮೇಜಯನೇ ಆದಿಯಾಗಿ ನಾಲ್ವರು ಪುತ್ರರು ಜನಿಸಿದರು. ಕೃಪಾಚಾರ್ಯರ ಆಚಾರ್ಯತ್ವದಲ್ಲಿ ಗಂಗಾತೀರದಲ್ಲಿ ಮೂರು ಅಶ್ವಮೇಧಯಾಗಗಳನ್ನು ಮಾಡಿದನು. ಬ್ರಾಹ್ಮಣರಿಗೆ ವಿಪುಲವಾಗಿ ದಕ್ಷಿಣಾದಿಗಳನ್ನು ಕೊಟ್ಟನು: ದೇವತೆಗಳು ಸ್ವಸ್ವರೂಪದಿಂದ ಯಜ್ಞಶಾಲೆಗೆ ಬಂದು ಹವಿರ್ಭಾಗಗಳನ್ನು ಸ್ವೀಕರಿಸಿದರು.

ಪರೀಕ್ಷಿತನು ಒಂದು ಬಾರಿ ದಿಗ್ವಿಜಯಮಾಡುತ್ತಿದ್ದಾಗ - ರಾಜವೇಷಧಾರಿಯಾದ ಶೂದ್ರನಾದ ಕಲಿಪುರುಷನು ಒಂದು ನಿರ್ಬಲವಾದ ಗೋಮಿಥುನವನ್ನು ಕಾಲಿನಿಂದ ಒದೆದು ಹಿಂಸಿಸುತ್ತಿದ್ದದನ್ನು ಕಂಡನು. ಆಗ ರಾಜನು ಅವನನ್ನು ಹಿಡಿದು ದಂಡಿಸಿದನು.

ಶೌನಕರು ಕೇಳಿದರು :

"ಮಹಾಭಾಗ್ಯಶಾಲಿಗಳಾದ ಸೂತರೇ ! ದಿಗ್ವಿಜಯದ ಸಮಯದಲ್ಲಿ ಮಹಾರಾಜನಾದ ಪರೀಕ್ಷಿತನು ಕಲಿಯನ್ನು ದಂಡಿಸಿದನಷ್ಟೆ? ಕೊಲ್ಲಲಿಲ್ಲವೇಕೆ ? ಕಲಿಯು ರಾಜವೇಷಧಾರಿಯಾದ ಶೂದ್ರನಷ್ಟೆ. ಅವನ ಗೋವನ್ನು ಹಿಂಸಿಸುತ್ತಿದ್ದನು. ಅಂದಮೇಲೆ ವಧಾರ್ಹನೆ ಅಲ್ಲವೇ ?

ಪರೀಕ್ಷಿತನ ಪ್ರಭಾವವು ಅಪರಿಮಿತವಾದುದು. ಅವನಲ್ಲಿ ಆಧಿದೈವಿಕ ಪ್ರಭಾವವೂ ಇದ್ದಿತು. ಅವನು ಕಲಿಯನ್ನು ಕೊಲ್ಲದೇ ಅವನ ಒಂದು ಅಂಗವನ್ನು ಊನಗೊಳಿಸಿದನೆಂದು ಕೇಳಿದ್ದೇವೆ.

ಈ ಪ್ರಸಂಗವು ಶ್ರೀಕೃಷ್ಣಕಥೆಗೆ ಸಂಬಂಧಪಟ್ಟಿರುವುದಾದರೆ ಮಾತ್ರ ತಿಳಿಸಿ. ಕೇವಲ ಸಾಂಸಾರಿಕಕಥೆಗಳನ್ನು ಕೇಳಲು ನಾವು ಇಷ್ಟಪಡುವುದಿಲ್ಲ.

ಕ್ಷಣ-ಕ್ಷಣವೂ ಅಮೂಲ್ಯವಾದುದು. ಶ್ರೀಕೃಷ್ಣ ಕಥಾಶ್ರವಣವಿಲ್ಲದೇ ಕಾಲವನ್ನು ಕಳೆಯಬಾರದು.

ಆಯುಸ್ಸಿನ ಅರ್ಧವು ರಾತ್ರಿ ನಿದ್ರೆಯಲ್ಲಿಯೇ ಕಳೆದುಹೋಗಿಬಿಡುತ್ತದೆ ಇನ್ನರ್ಧವು ವ್ಯರ್ಥವಾದ ಕೆಲಸ-ಕಾರ್ಯಗಳಲ್ಲಿ ವೃಥಾಲಾಪಾದಿಗಳಲ್ಲಿ ಕಳೆದು ಹೋಗುತ್ತದೆ. ಪರಿಸ್ಥಿತಿಯು ಹೀಗಿರುವಾಗ ನಾವು ಸಾಧ್ಯವಾದಷ್ಟೂ ಭಗವತ್ಕಥಾಶ್ರವಣದಿಂದ ಪಾವನರಾಗಬೇಕು. ರಾಗ ದ್ವೇಷಾದಿಗಳಿಂದ ದೂರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರಬೇಕು. ಮಂದಮತಿಗಳಂತೆ ವ್ಯರ್ಥವಾಗಿ ಆಯುಸ್ಸನ್ನು ಕಳೆಯ ಬಾರದು.

ಸೂತರು ಹೇಳುತ್ತಾರೆ :

"ಪರೀಕ್ಷಿದ್ರಾಜನು ಕುರು - ಜಾಂಗಲಗಳಲ್ಲಿರುವಾಗ- ತನ್ನ ಸುರಕ್ಷಿತ ಸಾಮ್ರಾಜ್ಯದಲ್ಲಿ ದುಷ್ಟಕಲಿಯ ಪ್ರವೇಶವಾಗಿದೆಯೆಂದು ಸೈನಿಕರ ಮೂಲಕ ಕೇಳಿದನು.

ಅದರಿಂದ ಕೋಪಗೊಂಡ ರಾಜನು. ಧನುರ್ಧಾರಿಯಾಗಿ ಶ್ಯಾಮವರ್ಣದ ಕುದುರೆಗಳನ್ನು ಹೂಡಿದ, ಸಿಂಹಧ್ವಜದಿಂದ ಅಲಂಕೃತವಾದ ಸುಸಜ್ಜಿತವಾದ ರಥವನ್ನಾರೋಹಣಮಾಡಿ ದಿಗ್ವಿಜಯಕ್ಕಾಗಿ ನಗರದಿಂದ ಹೊರಟನು.

ಆನೆ-ಕುದುರೆ-ಕಾಲಾಳುಗಳ ದೊಡ್ಡ ಸೈನ್ಯವು ಅವನನ್ನು ಹಿಂಬಾಲಿಸು ತ್ತಿತ್ತು. ಅವನು ಭದ್ರಾಶ್ವ-ಕೇತುಮಾಲ-ಭಾರತ-ಉತ್ತರ ಕುರು-ಕಿಂಪುರುಷ-ಮುಂತಾದ ಎಲ್ಲ ದೇಶಗಳನ್ನೂ ಗೆದ್ದು ಅವರಿಂದ ಬಳುವಳಿಗಳನ್ನು ಸ್ವೀಕರಿಸಿ ದನು.

ಹೋದ ಕಡೆಯಲ್ಲೆಲ್ಲಾ ಜನರು ತನ್ನ ವಂಶೀಯರ ವೀರಗಾಥೆಗಳನ್ನು ಹೇಳುತ್ತಿದ್ದುದನ್ನು ಕೇಳಿದನು. ಹೆಜ್ಜೆ-ಹೆಜ್ಜೆಗೂ ಶ್ರೀಕೃಷ್ಣಸ್ತುತಿಯನ್ನು ಕೇಳುತ್ತಿದ್ದನು.

ಶ್ರೀಕೃಷ್ಣನೇ ಗರ್ಭಾವಸ್ಥೆಯಲ್ಲಿ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ತನ್ನನ್ನು ರಕ್ಷಿಸಿದನೆಂಬುವುದನ್ನೂ ಜನರಿಂದ ಕೇಳಿ ಅರಿತುಕೊಂಡನು.

ಪಾಂಡವರಲ್ಲಿಯೂ-ಯದುವಂಶಿಗಳಲ್ಲಿಯೂ ಇದ್ದ ಪ್ರೇಮ, ಪಾಂಡವ ರಿಗೆ ಶ್ರೀಕೃಷ್ಣನಲ್ಲಿದ್ದ ಭಕ್ತಿ,-ಇವುಗಳನ್ನು ಜನರು ಹಾಡಿ-ಹಾಡಿ ಕೇಳಿಸು ತ್ತಿದ್ದರೆ ಪರೀಕ್ಷಿತನು ತನ್ನನ್ನು ತಾನು ಮರೆತು ಆನಂದೋದ್ರೇಕದಿಂದ ಬಹು ಮೂಲ್ಯ ವಸ್ತ್ರಾಭರಣಗಳನ್ನು ಉಪಹಾರರೂಪದಲ್ಲಿ ಹಂಚುತ್ತಿದ್ದನು

ಜನರು ಅವನಿಗೆ ಹೇಳುತ್ತಿದ್ದರು :

" ಪ್ರೇಮಪರವಶನಾದ ಶ್ರೀಕೃಷ್ಣನು ಮಧ್ಯಮಪಾಂಡವನಿಗೆ ಸಾರಥಿ ಯಾಗಿದ್ದನು. ಅವರ ಸಭಾಸದಸ್ಯನಾಗಿದ್ದನು. ಅವರ ಇಷ್ಟದಂತೆ ಕೆಲಸ ಮಾಡುತ್ತಾ ಅವರ ಸೇವೆಯನ್ನು ಮಾಡಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಂಡವರ ಮಿತ್ರನಾಗಿದ್ದುದಷ್ಟೇ ಅಲ್ಲ. ಅವರ ದೂತನೂ ಆದನು." ಹೀಗೆ ಹೋದ ಕಡೆಗಳಲ್ಲೆಲ್ಲಾ ಜನರು ತನ್ನ ವಂಶೀಯರ ವೀರಗಾಥೆಗಳನ್ನು ಹೇಳುತ್ತಿದ್ದುದನ್ನು ಕೇಳಿದನು. ಹೆಜ್ಜೆ-ಹೆಜ್ಜೆಗೂ ಶ್ರೀಕೃಷ್ಣಸ್ತುತಿಯನ್ನು ಕೇಳುತ್ತಿದ್ದನು.

ಗರ್ಭಾವಸ್ಥೆಯಲ್ಲಿ ತನ್ನನ್ನು ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ಶ್ರೀಕೃಷ್ಣನೇ ರಕ್ಷಿಸಿದನೆಂಬುದನ್ನೂ ಜನರಿಂದ ಕೇಳಿ ಅರಿತುಕೊಂಡನು.

ಪಾಂಡವರಲ್ಲಿಯೂ ಯದುವಂಶೀಯರಲ್ಲಿಯೂ ಇದ್ದ ಪ್ರೇಮ, ಪಾಂಡವರಿಗೆ ಶ್ರೀಕೃಷ್ಣನಲ್ಲಿದ್ದ ಭಕ್ತಿ-ಇವುಗಳನ್ನು ಜನರು ಹಾಡಿ-ಹಾಡಿ ಕೇಳಿಸುತ್ತಿದ್ದರೆ-ಪರೀಕ್ಷಿತನು ತನ್ನನ್ನು ತಾನು ಮರೆತು ಆನಂದೋದ್ರೇಕದಿಂದ ಬಹುಮೂಲ್ಯವಸ್ತ್ರಾಭರಣಗಳನ್ನು ಉಪಹಾರರೂಪದಲ್ಲಿ ಹಂಚುತ್ತಿದ್ದನು.

ಜನರು ಅವನಿಗೆ ಹೇಳುತ್ತಿದ್ದರು :

" ಮಹಾರಾಜ! ಪ್ರೇಮಪರವಶನಾದ ಶ್ರೀಕೃಷ್ಣನು ಮಧ್ಯಮ ಪಾಂಡವನಿಗೆ ಸಾರಥಿಯಾಗಿದ್ದನು. ಪಾಂಡವರ ಸಭಾಸದಸ್ಯನಾಗಿದ್ದನು

ಅವರ ಇಷ್ಟದಂತೆ ಕೆಲಸ ಮಾಡುತ್ತ ಅವರ ಸೇವೆಯನ್ನೂ ಮಾಡಿದನು. ಪಾಂಡವರ ಮಿತ್ರನಾಗಿದ್ದುದಷ್ಟೇ ಅಲ್ಲ. ಅವರ ದೂತನೂ ಆದನು. ರಾತ್ರಿಯ ಕಾಲದಲ್ಲಿ ಶಸ್ತ್ರಧಾರಿಯಾಗಿ ವೀರಾಸನದಲ್ಲಿ ಕುಳಿತು ಪಾಂಡವರ ಶಿಬಿರಸಂರಕ್ಷಣೆಯನ್ನು ಮಾಡುತ್ತಿದ್ದನು. ಅವರ ಹಿಂದೆ-ಹಿಂದೆ ಹೋಗುತಿದ್ದನು.

ಧರ್ಮರಾಜನನ್ನು ನಮಸ್ಕರಿಸುತ್ತಲೂ ಇದ್ದನು. ಅಷ್ಟೇ ಅಲ್ಲ. ತನ್ನ ಭಕ್ತರಾದ ಪಾಂಡವರ ಚರಣಗಳನ್ನು ಸಕಲಲೋಕದವರೂ ಸೇವಿಸುವಂತೆ ಮಾಡಿದನು."

ಇವೆಲ್ಲವನ್ನೂ ಜನರ ಬಾಯಿಂದ ಕೇಳುತ್ತಿದ್ದ ಪರೀಕ್ಷಿತನಿಗೆ ತನ್ನ ವಂಶದ ವಿಷಯದಲ್ಲಿ ಮತ್ತು ಶ್ರೀಕೃಷ್ಣನ ವಿಷಯದಲ್ಲಿ ಬಹಳ ಭಕ್ತ್ಯಾದರಗಳು ಹುಟ್ಟಿದುವು. ಮಹಾತ್ಮರಾದ ಪಾಂಡವರ ಆದರ್ಶಗಳನ್ನೇ ಅನುಸರಿಸುತ್ತಾ ದಿಗ್ವಿಜಯವನಡುತ್ತಿದ್ದನು.

ಆಗ ಒಂದು ದಿನ ತನ್ನ ಶಿಬಿರಕ್ಕೆ ಸ್ವಲ್ಪ ದೂರದಲ್ಲಿ ಒಂದು ಆಶ್ಚರ್ಯಕರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ಘಟನೆಯು ನಡೆದುದನ್ನು ನೋಡಿದನು. ಧರ್ಮನು ಎತ್ತಿನ ರೂಪದಲ್ಲಿ ಒಂದೇ ಕಾಲಿನಿಂದ ನಡೆಯುತ್ತಿದ್ದನು.

ಒಂದು ಸ್ಥಳದಲ್ಲಿ ಗೋರೂಪಧಾರಿಣಿಯಾದ ಪೃಥ್ವಿಯನ್ನು ಧರ್ಮನು ಕಂಡನು.

ಪೃಥ್ವೀದೇವಿಯಾದರೋ ಪುತ್ರಮರಣದಿಂದ ದುಃಖಿಸಿಯಾದ ತಾಯಿ ಯಂತೆ-ಕಣ್ಣೀರು ಹರಿಸುತ್ತಾ ದುಃಖಿಸುತ್ತಿದ್ದಳು. ಅವಳ ದೇಹವು ಕಾಂತಿ ಹೀನವಾಗಿದ್ದಿತು.

ಧರ್ಮನನ್ನೂ, ಪೃಥ್ವಿಯನ್ನೂ ನೋಡುವ ಶಕ್ತಿಯು ಎಲ್ಲರಿಗೂ ಇರು ವುದಿಲ್ಲ. ಯಾರ ಹೃದಯವು ಶುದ್ಧವಾಗಿರುವುದೋ, ಯಾರಿಗೆ ಭಗವಂತ ನಲ್ಲಿ ಭಕ್ತಿಯಿರುವುದೋ ಅವರು ಮಾತ್ರ ಅಲೌಕಿಕವಸ್ತುಗಳ ಸಾಕ್ಷಾತ್ಕಾರ ವನ್ನು ಮಾಡುತ್ತಾರೆ ಹಾಗೂ ಅವರ ಸಂವಾದವನ್ನು ಕೇಳುವ ಯೋಗ್ಯತೆ ಯನ್ನು ಪಡೆಯುತ್ತಾರೆ.

ಪರೀಕ್ಷಿತನು ನೋಡಿದನು-ಧರ್ಮನಿಗಿರುವುದು ಒಂದೇ ಕಾಲು. ಗೋ ರೂಪಧಾರಿಣೀ ಪೃಥ್ವಿಮಾತೆಯು ಕಾಂತಿಹೀನಳಾಗಿದ್ದಾಳೆ. ಅವಳ ಕಣ್ಣು ಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿದೆ. ಪುತ್ರಮರಣದಿಂದ ದುಃಖಿ ಸುತ್ತಿರುವಳಂತೆ ತೋರುತ್ತಿದೆ.

ಧರ್ಮನು ಪೃಥ್ವಿಯನ್ನು ಕೇಳಿದನು :

"ಕಲ್ಯಾಣಿ! ನೀನು ಕುಶಲಿಯೆ ? ನಿನ್ನ ಮುಖವು ಬಾಡಿದೆ ; ಕಾಂತಿ ಹೀನವಾಗಿದೆ. ನಿನ್ನ ಹೃದಯವು ದುಃಖತಪ್ತವಾಗಿರುವಂತೆ ತೋರುತ್ತಿದೆ. ನಿನ್ನ ಸಂಬಂಧಿಕರಾರಾದರೂ ಪರದೇಶಕ್ಕೆ ಹೋಗಿರುವರೇ ? ನೀನೇಕೆ ಇಷ್ಟು ಚಿಂತಾಮಗ್ನಳಾಗಿರುವೆ ? ಅಥವಾ ನೀನು ನನ್ನ ವಿಚಾರವಾಗಿ ಯೋಚಿಸು ತ್ತಿರುವೆಯಾ ? ನಾನು ಮೂರು ಕಾಲುಗಳನ್ನು ಕಳೆದುಕೊಂಡು ಒಂದೇ ಕಾಲಿನಿಂದ ನಡೆಯುತ್ತಿರುವೆನಲ್ಲಾ ? ಇದಕ್ಕಾಗಿ ಚಿಂತಿಸುವೆಯಾ ?

ನಿನ್ನನ್ನಿನ್ನು ಶೂದ್ರರು ಪಾಲಿಸುವರಲ್ಲಾ ಎಂಬ ದುಃಖವೇ ? ಸ್ವಾಹಾ ಕಾರ-ಸ್ವಾಧಾಕಾರಗಳಿಲ್ಲದ ದೇವತೆಗಳನ್ನು ಕುರಿತು ಯೋಚಿಸುವೆಯಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅತಿವೃಷ್ಟಿ - ಅನಾವೃಷ್ಟಿಗಳಿಂದ ಪೀಡಿತರಾಗಿರುವ ಗ್ರಾಮ-ಧಾಮರಗಳಿಗೆ ತುತ್ತಾಗಿರುವ ಪ್ರಜೆಗಳ ಬಗೆಗೆ ಸಂಕಟಪಡುವೆಯಾ ?

ದೇವಿ ! ರಾಕ್ಷಸಜನರಿಂದ ತೊಂದರೆಗೊಳಗಾಗಿರುವ ಅರಕ್ಷಿತ ಸ್ತ್ರೀಯರ ಹಾಗೂ ಬಾಲಕ-ಬಾಲಕಿಯರ ವಿಚಾರವಾಗಿ ದುಃಖವೇ ? ಅಥವಾ ಬ್ರಾಹ್ಮಣರು ವಿಪ್ರದ್ರೋಹಿಗಳಾದ ರಾಜಾಧಿಕಾರಿಗಳನ್ನು ಸೇವಿಸುವರಲ್ಲಾ ? ದೈವೀಭಾಷೆಯಾದ ಸಂಸ್ಕೃತಾಧ್ಯಯನವನ್ನು ಬಿಟ್ಟು ಹೂಣಭಾಷಾಪ್ರೇಮಿಗಳಾಗುವರಲ್ಲಾ ಎಂಬ ದುಃಖವೇ ? ಅವರು ಸತ್ಕರ್ಮಾಚರಣೆಯಿಂದ ವಿಮುಖರಾಗಿ ದುಷ್ಕರ್ಮಿಗಳಾಗುವರೆಂಬ ದುಗುಡವೇ ? ದುಷ್ಟರಾಜರಿಂದ ನಿರ್ಮೂಲವಾಗುವ ರಾಷ್ಟ್ರಗಳ ಬಗೆಗೆ ಚಿಂತಿಸುವೆಯಾ ?

ಕಲಿಯುಗದ ಜನರು ಅನ್ನ-ಪಾನೀಯಗಳಲ್ಲಿ ವಸ್ತ್ರಧಾರಣೆಯಲ್ಲಿ, ಸ್ನಾನಾದಿಗಳಲ್ಲಿ, ಸ್ತ್ರೀಸಹವಾಸದಲ್ಲಿ ಶಾಸ್ತ್ರೀಯನಿಯಮಗಳನ್ನು ಪಾಲಿಸುವುದಿಲ್ಲವಲ್ಲ-ಎಂಬ ವ್ಯಥೆಯೋ ?

ಅಥವಾ ನಿನಗೆ ಶ್ರೀಕೃಷ್ಣನ ದಿವ್ಯಸ್ಮರಣೆಯು ಬರುತ್ತಿರಬಹುದಲ್ಲವೇ ? ಅವನು ಭೂಭಾರಹರಣಕ್ಕಾಗಿಯೇ ಅವತರಿಸಿದ್ದನು. ಅನೇಕಲೀಲಾವಿಭೂತಿಗಳನ್ನು ತೋರಿಸಿ ಸ್ವಧಾಮಕ್ಕೆ ತೆರಳಿದನು. ಮೋಕ್ಷಾನಂದದಾಯಕಗಳಾದ ಅವನ ಲೀಲಾವಿಭೂತಿಗಳನ್ನು ಉಪಸಂಹರಿಸಿಕೊಂಡು ಗೋಲೋಕವಾಸಿಯಾದ ಮೇಲೆ ಅವುಗಳೆಲ್ಲವನ್ನೂ ಸ್ಮರಿಸುತ್ತಾ ನೀನು ದುಃಖಿಸುತ್ತಿರುವೆಯಾ ?

ದೇವಿ ? ನೀನು ವಸುಂಧರೆಯು. ನಿನ್ನ ಕ್ಲೇಶಕ್ಕೆ ಕಾರಣವೇನೆಂಬುದನ್ನು ನನಗೆ ತಿಳಿಸು. ನಿನ್ನ ಸೌಭಾಗ್ಯವೆಲ್ಲವನ್ನೂ ಕಾಲಪುರುಷನು ಅಪಹರಿಸಿಬಿಟ್ಟಿರುವನೆಂದು ತೋರುವುದು."

ಹೀಗೆ ಧರ್ಮಪುರುಷನು ಪೃಥ್ವೀದೇವಿಯನ್ನು ಪ್ರಶ್ನಿಸಿದಾಗ ಅವಳು ಹೇಳಿದಳು. ಅಂದರೆ ಪೃಥ್ವಿಗೆ ಮೂರು ರೂಪಗಳಿವೆ. ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ. ದೇವತೆಯ ರೂಪದಲ್ಲಿ ಪೃಥ್ವಿಯನ್ನು ವರ್ಣಿಸುವಾಗ ಅವಳನ್ನು ಆಧಿದೈವಿಕಸ್ವರೂಪದಿಂದ ವರ್ಣಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪೃಥ್ವೀಮಾತೆಯು ಹೇಳುತ್ತಾಳೆ :

"ಧರ್ಮಪುರುಷನೇ ! ನಿನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರವು ನಿನಗೆ ತಿಳಿದಿದೆ. ಭಗವಂತನ ಗುಣಗಳನ್ನು ತಿಳಿದಿರುವೆಯಷ್ಟೆ. ನಾಲ್ಕು ಕಾಲುಗಳಿಂದ ಸಂಚರಿಸುತ್ತಿದ್ದ ನೀನು ಜಗತ್ತಿಗೆ ಆನಂದದಾಯಕನಾಗಿದ್ದೆ."

ಧರ್ಮದೇವತೆಗೆ ಹೇಳುವ ನೆಪದಿಂದ ಪೃಥ್ವೀದೇವಿಯು ಸಾಮಾನ್ಯರೂ ತಿಳಿದುಕೊಳ್ಳಲಿ-ಎಂಬ ದೃಷ್ಟಿಯಿಂದ ಭಗವಂತನ ಮೂವತ್ತೊಂಭತ್ತು ಗುಣಗಳನ್ನು ಹೇಳುತ್ತಾಳೆ.

ಭಗವಂತನ ಉತ್ಕೃಷ್ಟಗುಣಗಳಿವು :–ಸತ್ಯ, ಶೌಚ, ದಯಾ, ಕ್ಷಾಂತಿ, ತ್ಯಾಗ. ಸಂತೋಷ, ಆರ್ಜವ, ಶಮ, ದಮ, ತಪಸ್ಸು, ಸೌಮ್ಯತೆ, ತಿತಿಕ್ಷಾ, ಉಪರತಿ, ಶ್ರುತ, ಜ್ಞಾನ, ವಿರಕ್ತಿ, ಐಶ್ವರ್ಯ, ಶೌರ್ಯ, ತೇಜಸ್ಸು, ಬಲ, ಸ್ಮೃತಿ, ಸ್ವಾತಂತ್ರ್ಯ, ಕೌಶಲ, ಕಾಂತಿ. ಧೈರ್ಯ, ಮಾರ್ದವ, ಪ್ರಾಗಲ್ಭ್ಯ, ಪ್ರಶ್ರಯ, ಶೀಲ, ಸಹನೆ, ಓಜಸ್ಸು, ಬಲ, ಭಗ, ಗಾಂಭೀರ್ಯ, ಸ್ಥೈರ್ಯ, ಆಸ್ತಿಕ್ಯ, ಕೀರ್ತಿ, ಮಾನ ಮತ್ತು ಅನಹಂಕೃತಿ.

ಇವುಗಳು ಪರಮಾತ್ಮನ ಉತ್ಕೃಷ್ಟಗುಣಗಳು. ಇವುಗಳಲ್ಲಿ ಒಂದೊಂದು ಗುಣವನ್ನು ಹೊಂದಿರುವವರೇ ಲೋಕೋತ್ತರಾಗಿ ಬೆಳಗುವುದನ್ನು ನಾವು ನೋಡುತ್ತಿದ್ದೇವೆ. ಈ ಗುಣಗಳೇ ಅಲ್ಲದೇ ಮತ್ತಷ್ಟು ಮಹಾಗುಣಗಳನ್ನೂ ಹೊಂದಿದ್ದ ಪುರಾಣಪುಣ್ಯಪುರುಷನ ಅಗಲುವಿಕೆಯೆಂದರೆ ಅದೆಷ್ಟು ದುಃಖದಾಯಕವೆಂಬುದು ಊಹೆಗೂ ನಿಲುಕದ ವಿಚಾರವಾಗಿದೆ.

ಈ 39 ಗುಣಗಳ ವಿವರಗಳನ್ನು ಹೀಗೆ ಕೊಡುತ್ತಾರೆ.

1) ಸತ್ಯ—ಯಥಾರ್ಥಭಾಷಣ.

2) ಶೌಚ—ಶುದ್ಧಿ.

3) ದಯಾ— ಪರದುಃಖಾಸಹನೆ.

4) ಕ್ಷಾಂತಿ – ಕ್ರೋಧದಲ್ಲಿಯೂ ಚಿತ್ತಸಂಯಮನ.

5) ತ್ಯಾಗ—ಅರ್ಥಿಗಳಿಗೆ ಮುಕ್ತಹಸ್ತದಿಂದ ಕೊಡುವುದು.

6) ಸಂತೋಷ—ಪಡೆದಿದ್ದರಲ್ಲಿ ಸಾಕೆಂಬ ತೃಪ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

7) ಆರ್ಜವ —ವಕ್ರವಾಗಿರದೇ ಸರಳವಾಗಿರುವುದು.

8) ಶಮ —ಮನಸ್ಸಿನ ನಿಶ್ಚಲತೆ.

9) ದಮ —ಬಾಹ್ಯೇಂದ್ರಿಯಗಳ ನಿಶ್ಚಲತೆ.

10) ತಪಸ್ಸು—ಸ್ವಧರ್ಮಾಚರಣೆ.

11) ಸೌಮ್ಯತೆ —ಶತ್ರು-ಮಿತ್ರ ಎಂದು ಭಾವಿಸದಿರುವುದು.

12) ತಿತಿಕ್ಷಾ —ಪರಾಪರಾಧಸಹನೆ.

13) ಉಪರತಿ —ಲಾಭಾವಾಗದಿದ್ದರೂ ಸಮಧಾನ.

14) ಶ್ರುತ—ಶಾಸ್ತ್ರವಿಚಾರ.

15) ಜ್ಞಾನಿ—ಆತ್ಮವಿಷಯಕವಾದ ತಿಳಿವಳಿಕೆ.

15) ವಿರಕ್ತಿ—ಯಾವುದಕ್ಕೂ ಬಾಯಿ-ಬಾಯಿ ಬಿಡದಿರುವುದು.

17) ಐಶ್ವರ್ಯ—ನಿಯಂತೃತ್ವ.

18) ಶೌರ್ಯ—ಸಂಗ್ರಾಮೋತ್ಸಾಹ.

19) ತೇಜಸ್ಸು—ಪ್ರಭಾವ.

20) ಬಲ—ದಕ್ಷತೆ.

21) ಸ್ಮೃತಿ—ಕರ್ತವ್ಯಾರ್ಥಾನುಸಂಧಾನ.

22) ಸ್ವಾತಂತ್ರ್ಯ—ಪರಾಧೀನತೆಯಿಲ್ಲದಿರುವುದು.

23) ಕೌಶಲ್ಯ—ಕಾರ್ಯನಿಪುಣತೆ.

24) ಕಾಂತಿ—ಸೌಂದರ್ಯ.

25) ಧೈರ್ಯ—ವ್ಯಾಕುಲತೆಯಿಲ್ಲದಿರುವುದು.

26) ಮಾರ್ಧವ—ಕಾಠಿಣ್ಯರಾಹಿತ್ಯ.

27) ಪ್ರಾಗಲ್ಭ್ಯ—ಅತಿಶಯಪ್ರತಿಭೆ.

28) ಪ್ರಶ್ರಯ—ವಿನಯ

29) ಶೀಲ—ಒಳ್ಳೆಯ ಸ್ವಭಾವ.

30) ಸಹನೆ—ಮನಸ್ಸಿನ ಪಾಟವ.

32) ಬಲ—ಕರ್ಮೇಂದ್ರಿಯಗಳ ಪಾಟವ.

33) ಭಗ—ಭೋಗ

Sri Vidyabharathi Book Centre, Sringeri

CC-O. In Public Domain. Digitized by eGangotri

34) ಗಾಂಭೀರ್ಯ—ಕ್ಷೋಭೆಗೆ ಒಳಗಾಗದಿರುವುದು.
35) ಸ್ಥೈರ್ಯ—ಚಂಚಲನಾಗದಿರುವುದು.
36) ಆಸ್ತಿಕ್ಯ—ಶ್ರದ್ಧೆ.
37) ಕೀರ್ತಿ—ಯಶಸ್ಸು.
38) ಮಾನ—ಪೂಜ್ಯತೆ
39) ಅನಹಂಕೃತಿ—ಸಮಭಾವ

ಈ ಭಗವದ್ಗುಣಗಳು ಮಹಾಪುರುಷರುಷರಿಂದ ಇಚ್ಛಿಸಲ್ಪಡುವುವು. ಇವುಗಳಲ್ಲದೇ ಇನ್ನೂ ಎಷ್ಟೋ ಮಹಾಗುಣಗಳು ಪುರಷೋತ್ತಮನಲ್ಲಿ ನಿತ್ಯ-ನಿರಂತರವಾಗಿ ನಿವಾಸಮಾಡುತ್ತಿದ್ದುವು.

ಭೂದೇವಿಯು ಹೇಳುತ್ತಾಳೆ - "ಇಂತಹ ಗುಣಧಾಮ-ಸೌಂದರ್ಯ ಧಾಮ-ಆನಂದಧಾಮನಾದ ಶ್ರೀಕೃಷ್ಣನು ಸ್ವಧಾಮಕ್ಕೆ ತೆರಳಿದ ಮೇಲೆ ಪಾಪಿಯಾದ ಕಲಿಯ ಕುದೃಷ್ಟಿಗೆ ಲೋಕವು ತುತ್ತಾಯಿತು. ಧರ್ಮಪುರುಷನೇ! ನಾನು ನನಗಾಗಿ, ನಿನಗಾಗಿ, ದೇವ-ಪಿತೃದೇವತೆಗಳಿಗಾಗಿ, ಸರ್ವವರ್ಣಾಶ್ರಮಿ ಸಾಧು-ಸತ್ಪುರುಷರಿಗಾಗಿ ದುಃಖಿಸುತ್ತಿದ್ದೇನೆ.

ಯಾರ ಕೃಪಾಕಟಾಕ್ಷಪ್ರಾಪ್ತಿಗಾಗಿ ಬ್ರಹ್ಮಾದಿ ದೇವತೆಗಳೂ ತಪಸ್ಸು ಮಾಡುವರೋ, ಎಲ್ಲರಿಗೂ ಪ್ರಿಯಳಾದ ಲಕ್ಷ್ಮೀದೇವಿಯು ಸ್ವಸ್ಥಾನವಾದ ಕಮಲವನವನ್ನು ಬಿಟ್ಟು ಯಾರ ಚರಣಸೇವಕಿಯಾಗಿರುವಳೋ-ಅಂತಹ ಪರಮಾತ್ಮನ ಚರಣಸ್ಪರ್ಶದಿಂದ ನಾನು ಪೂತಳಾಗುತ್ತಿದ್ದೆನು. ಸರ್ವಶ್ರೇಷ್ಠಳಾಗಿದ್ದೆನು. ಭಗವಂತನು ನನ್ನನ್ನು ತ್ಯಜಿಸಿ ಹತಭಾಗ್ಯಳನ್ನಾಗಿ ಮಾಡಿದನು. ಭಗವಂತನು ಆ ಗರ್ವವನ್ನು ಭಂಜಿಸಿದನು.

ನಿನ್ನ ನಾಲ್ಕು ಪಾದಗಳೂ ಸಮವಾಗಿರಬೇಕು ; ಹಾಗೂ ನೀನು ಸಂಪೂರ್ಣಸ್ವಸ್ಥನಾಗಿರಬೇಕೆಂದು ಭಗವಾನ್ ಶ್ಯಾಮಸುಂದರನು ನನಗೆ ಭಾರರೂಪದಲ್ಲಿದ್ದ ನೂರಾರು ಅಲ್ಲ-ಲಕ್ಷಾಂತರ ಅಸುರರಾಜರನ್ನು ನಿಗ್ರಹಿಸಿದನು.

ಯಾರು ತನ್ನ ಮೃದು-ಮಧುರ-ಮನೋಹರಮಂದಹಾಸದಿಂದ ಸತ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾವಾದಿ ಮಧುರವಾಯಾವಾಸಿನಿಯರ ಮಾನ-ಗರ್ವ-ಧೈರ್ಯಹರಣ ಮಾಡಿದನೋ, ಯಾರ ಚರಣಕಮಲಗಳ ಸ್ಪರ್ಶದಿಂದ ನಾನು ಆನಂದಪುಲಕಾಂಗಿಯಾಗುತ್ತಿದ್ದೆನೋ-ಆ ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣನ ವಿರಹವನ್ನು ಹೇಗೆ ತಾನೇ ಸಹಿಸಲಿ !"

ಹೀಗೆ ಪೃಥ್ವೀ-ಧರ್ಮಪುರುಷರ ಸಂವಾದವು ನಡೆಯುತ್ತಿದ್ದಿತು. ರಾಜರ್ಷಿಯಾದ ಪರೀಕ್ಷಿತನು ಪೂರ್ವವಾಹಿನಿಯಾದ ಸರಸ್ವತೀತೀರಕ್ಕೆ ಬಂದನು.

ಓಂ ತತ್ಸದಿತಿ ಶ್ರೀಮದ್ಭಾಗವತೇ ಪ್ರಥಮಸ್ಕಂಧೇ ಷೋಡಶೋಽಧ್ಯಾಯಃ

ಶ್ರೀ ಕೃಷ್ಣಾರ್ಪಣಮಸ್ತು

16ನೆಯ ಅಧ್ಯಾಯವು ಮುಗಿಯಿತು.

ಅಧ್ಯಾಯ ೧೭
ಪರೀಕ್ಷಿತನಿಂದ ಕಲಿಯ ದಮನ

ರಾಜಾ ಪರೀಕ್ಷಿತನು ಅಲ್ಲಿಗೆ ಹೋಗಿ ನೋಡಿದನು. ಎತ್ತಿನ ರೂಪದಲ್ಲಿರುವ ಧರ್ಮ. ಹಸುವಿನ ರೂಪದಲ್ಲಿರುವ ಪೃಥ್ವೀ. ರಾಜವೇಷಧಾರಿಯಾದ ಶೂದ್ರನು ದಂಡಪಾಣಿಯಾಗಿ ಆ ಹಸು-ಎತ್ತುಗಳನ್ನು ದಂಡಿಸುತ್ತಿದ್ದಾನೆ.

ಅವುಗಳಿಗೆ ಯಜಮಾನರೇ ಇಲ್ಲ. ಹೇಳಿ-ಕೇಳುವವರಾರೂ ಇಲ್ಲವೆಂದು ತೋರುತ್ತಿದೆ.

ಕಮಲತಂತುವಿನಂತೆ ಶುಭ್ರವರ್ಣದ ಆ ಎತ್ತು ಒಂದೇ ಕಾಲಿನಿಂದ ನಿಂತುಕೊಂಡು ನಡುಗುತ್ತಿದೆ. ಶೂದ್ರನ ಹೊಡೆತದಿಂದ ದುಃಖಗೊಂಡು ಭಯದಿಂದ ಮೂತ್ರ ವಿಸರ್ಜನೆಮಾಡುತ್ತಿದೆ.

ಧರ್ಮಾಚರಣೆಗೆ ಉಪಯುಕ್ತವಾದ ಹಾಲು, ಮೊಸರು, ತುಪ್ಪ-ಇವುಗಳನ್ನು ಒದಗಿಸುವ ಹಸುವು ಶೂದ್ರನ ಒದೆತಗಳನ್ನು ತಾಳಲಾರದೇ ಹೋಗಿದೆ. (ಮೊದಲೇ ಅದರ ದೇಹವು ಕೃಶವಾಗಿತ್ತು.) ಕರುವೂ ಈಗ ಪಕ್ಕದಲ್ಲಿಲ್ಲದಿರುವುದರಿಂದ ಧಾರಾಕಾರವಾಗಿ ಕಣ್ಣೀರು ಹರಿಸುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುವರ್ಣಮಯವಾದ ರಥವನ್ನೇರಿದ್ದ ಪರೀಕ್ಷಿತನು ಧನುಷ್ಟಂಕಾರವನ್ನು ಮಾಡುತ್ತಾ ಮೇಘಗರ್ಜನೆಯಂತೆ ಗರ್ಜನೆಮಾಡುತ್ತಾ ಶೂದ್ರನನ್ನು ಕುರಿತು ಕೂಗಿ ಹೇಳಿದನು :

ಕಸ್ತ್ವಂ ಮಚ್ಛರಣೇ ಲೋಕೇ ಬಲಾದ್ಧಂಸ್ಯಬಲಾನ್ ಬಲೀ ।
ನರದೇವೋಽಸಿ ವೇಷೇಣ ನಟವತ್ಕರ್ಮಣಾದ್ವಿಜಃ ॥೫॥

"ಯಾರು ನೀನು ? ಅತಿಬಲಿಷ್ಠನಾಗಿ ಕಾಣುತ್ತಿರುವೆ. ನನ್ನ ರಾಜ್ಯದಲ್ಲಿ ಈ ದುರ್ಬಲಪ್ರಾಣಿಗಳ ಮೇಲೆ ಆಕ್ರಮಣವನ್ನು ನಡೆಸುತ್ತಿರುವೆ. ರಾಜವೇಷಧಾರಿಯಾದ ನಟನಿರಬಹುದು ನೀನು. ಕರ್ಮದಿಂದ ಶೂದ್ರನಾಗಿ ಕಾಣುವೆ.

ಗಾಂಡೀವಿಯೊಡನೆ ಶ್ರೀಕೃಷ್ಣನು ಗೋಲೋಕವಾಸಿಯಾದ ಮೇಲೆ ಹೀಗೆ ನಿರ್ಜನಸ್ಥಾನದಲ್ಲಿ ನಿರಪರಾಧಿಗಳನ್ನು ಪ್ರಹರಿಸುತ್ತಿರುವ ನೀನು ನಿಜವಾಗಿಯೂ ಅಪರಾಧಿಯೇ ಸರಿ. ಅದರಿಂದ **'ವಧಮರ್ಹಸಿ'** (ವಧಾರ್ಹನಾಗಿರುವೆ.)"

ಶೂದ್ರನೊಡನೆ ಹೀಗೆ ಹೇಳಿ ರಾಜನು ವೃಷಭರೂಪಿಯಾದ ಧರ್ಮನನ್ನು ಕೇಳುತ್ತಾನೆ :

ಧೇನುಪುತ್ರನೇ ! ಕಮಲನಾಳದಂತೆ ಶ್ವೇತವರ್ಣೀಯನಾದ ಒಂದೇ ಕಾಲಿನಿಂದ ಸಂಚರಿಸುವ ನೀನು ಯಾವ ದೇವತೆಯಾಗಿರುವೆ ?

ನಿನ್ನನ್ನು ನೋಡಿ ನನಗೆ ಬಹಳ ದುಃಖವಾಗುತ್ತಿದೆ. ಇನ್ನೂ ಈ ಭೂಮಂಡಲವು ಕುರುವಂಶೀಯರಾದ ರಾಜರ ಬಾಹುಬಲದಿಂದ ಸುರಕ್ಷಿತವಾಗಿದೆ. ನಿನ್ನ ಹೊರತು ಕಣ್ಣೀರು ಸುರಿಸುವ ಯಾವ ಪ್ರಾಣಿಯನ್ನೂ ನಾನು ಕಂಡಿಲ್ಲ. ವೃಷಭದೇವನೇ ! ದುಃಖಿಸಬೇಡ. ಈ ಶೂದ್ರನಿಂದ ನಿರ್ಭಯನಾಗಿರು.

ಗೋಮಾತೆಯೇ ! ದುಃಖಿಸಬೇಡ. ದುಷ್ಟರನ್ನು ನಿಗ್ರಹಿಸುತ್ತೇನೆ. ಯಾವ ರಾಜನ ರಾಜ್ಯದಲ್ಲಿ ದುಷ್ಟರ ಉಪದ್ರವಗಳಿಂದ ಪ್ರಜೆಗಳು ತ್ರಸ್ತರಾಗುವರೋ-ಅಂತಹ ಮದಾಂಧರಾಜನ ಕೀರ್ತಿ-ಆಯುಷ್ಯ-ಐಶ್ವರ್ಯ-ಪರಲೋಕಾದಿಗಳು ನಷ್ಟವಾಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದುಃಖಿಗಳ ದುಃಖನಿರಸನವೇ ರಾಜ್ಯದ ಪ್ರಥಮಕರ್ತವ್ಯವು. ಈ ಮಹಾದುಷ್ಟನು ಪ್ರಾಣಿಹಿಂಸಕನಾದುದರಿಂದ ಇವನನ್ನು ಈಗಲೇ ವಧಿಸುತ್ತೇನೆ. ಸುರಭಿನಂದನನೇ ! ನಿನಗೆ ನಾಲ್ಕು ಪಾದಗಳಲ್ಲವೇಇದ್ದುದು ನಿನ್ನ ಮೂರು ಪಾದಗಳನ್ನು ಭಂಜಿಸಿದವರಾರು ? ಹೇಳು. ನಾನು ಶ್ರೀಕೃಷ್ಣ ಭಕ್ತನು. ನನ್ನ ರಾಜ್ಯದಲ್ಲಿ ಹೀಗಾಗಬಾರದು. ನೀನು ನಿರಪರಾಧಿಯು. ನೀನು ದುಃಖಪಟ್ಟರೆ ನನ್ನ ಕೀರ್ತಿಗೆ ಕಳಂಕವು ತಟ್ಟಿದಂತೆ. ನಿನಗೆ ಮಂಗಳ ವಾಗಲಿ.

ಆಖ್ಯಾಹಿ ವೃಷ ಭದ್ರಂ ವಃ ಸಾಧೂನಾಮಕೃತಾಗಸಾಮ್ ।
ಆತ್ಮವೈರೂಪ್ಯಕರ್ತಾರಂ ಪಾರ್ಥಾನಾಂ ಕೀರ್ತಿದೂಷಣಮ್ ॥೧೨॥

ಹೇಳು ! ನಿನ್ನಂತಹ ನಿರಪರಾಧಿಗಳಾದ ಸಾಧುಪ್ರಾಣಿಗಳ ಅಂಗಭಂಗ ವನ್ನು ಮಾಡಿದ ಆ ದುಷ್ಟನು ಪಾಂಡವರ ಕುಲಕ್ಕೇ ಕಳಂಕವನ್ನು ಬಳಯುವವನು. ಅಂತಹವನು ಯಾರೇ ಆಗಿರಲಿ, ಅವನನ್ನು ವಧಿಸುತ್ತೇನೆ

ದುಷ್ಟನಿಗ್ರಹದಿಂದ ಸಾಧು-ಸತ್ಪುರುಷರ ಕಲ್ಯಾಣವಾಗುವುದು. ನಿರಪ ರಾಧಿಗಳಾದ ಪ್ರಾಣಿಗಳನ್ನು ದುಃಖಪಡಿಸುವ ಆ ದುಷ್ಟನು ಎಷ್ಟೇ ಉದ್ದಂಡ ನಾಗಿರಲಿ ! ದೇವತೆಯೇ ಯಾಕಾಗಿರಬಾರದು ? ಅವನ ಭುಜದಂಡವನ್ನು ಕತ್ತರಿಸಿಯೇನು !

ಮರ್ಯಾದೆಯನ್ನು ಉಲ್ಲಂಘಿಸುವವರಿಗೆ ಶಾಸ್ತ್ರಾನುಸಾರವಾಗಿ ದಂಡ ವನ್ನು ವಿಧಿಸಿ, ಧರ್ಮಾತ್ಮರನ್ನು ರಕ್ಷಿಸುವುದು ರಾಜರ ಪರಮಧರ್ಮವು."

ರಾಜನ ಮಾತುಗಳಿಂದ ಸಾಂತ್ವನ ಗೊಂಡ ಧರ್ಮನು ಹೇಳಿದನು.

"ರಾಜನೇ ! ನೀನು ಪಾಂಡವವಂಶೋತ್ಪನ್ನನಲ್ಲವೇ ? ನೀನು ಹೀಗೆ ದುಃಖಿಗಳನ್ನು ಸಮಾಧಾನಪಡಿಸುವುದು ಯುಕ್ತವೇ ಆಗಿದೆ. ನಿನ್ನ ಪೂರ್ವ ಜರ ಶ್ರೇಷ್ಠಗುಣಗಳಿಂದ ಸಂತುಷ್ಟನಾದ ಭಗವಂತನು ನಿನ್ನ ಅಜ್ಜನಿಗೆ ಸಾರ ಥಿಯೂ, ದೂತನೂ ಆಗಿದ್ದನು. ಆದರೆ ಒಂದು ವಿಚಾರ-ಜೀವನದಲ್ಲಿ ದುಃಖವು ಏತಕ್ಕಾಗಿ ಬರುತ್ತದೆ? ಅದಕ್ಕೆ ಕಾರಣಗಳೇನು ? ಇದನ್ನು ತಿಳಿಯ ಲಾರೆವು.

ಶಾಸ್ತ್ರವಚನಗಳೂ ಬೇರೆ-ಬೇರೆಯಾಗಿವೆ. ಯಾರಿಂದ ಕ್ಲೇಶಗಳೊದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುವುವೋ- ಆ ಪುರುಷನನ್ನು ನಾವು ತಿಳಿದಿಲ್ಲ. ವಾಕ್ಯಭೇದವಿಮೋಹಿತ ರಾಗಿದ್ದೇವೆ.

ಸರ್ವಥಾ ದ್ವೈತವನ್ನು ಒಪ್ಪದೇ ಇರುವವರು ತಮ್ಮ ದುಃಖಕ್ಕೆ ತಾವೇ ಕಾರಣರೆಂದೂ ಹೇಳಿಕೊಳ್ಳುತ್ತಾರೆ. ಒಬ್ಬರು ಪ್ರಾರಬ್ಧವೇ ದುಃಖಕ್ಕೆ ಕಾರಣವೆಂದೂ ಕೆಲವರು ಕರ್ಮವೇ ಕಾರಣವೆಂದೂ, ಮತ್ತೆ ಕೆಲವರು ಈಶ್ವರನೇ ಕಾರಣನೆಂದೂ ಹೇಳುತ್ತಾರೆ,

ದುಃಖದ ಕಾರಣವು ತರ್ಕದಿಂದ ತಿಳಿಯುವುದಿಲ್ಲ, ಹಾಗೂ ಮಾತಿನಿಂದ ಹೇಳಲಾಗುವುದಿಲ್ಲ. ಇದು ನಿರ್ದೇಶ್ಯವಲ್ಲ. ಅನಿರ್ವಚನೀಯವು .ಹೀಗಿರುವಲ್ಲಿ ನನ್ನ ದುಃಖಕ್ಕೆ ಕಾರಣವನ್ನು ನೀನೇ ವಿಮರ್ಶಿಸಿ, ವಿಚಾರಿಸಿ ತಿಳಿದುಕೊ."

ಧರ್ಮನ ವ್ಯಾಖ್ಯಾನದಿಂದ ಅತ್ಯಂತಸಂತುಷ್ಟನಾದ ಮಹಾರಾಜನು ಹೇಳಿದನು.

"ತಿಳಿಯಿತು. ನೀನು ವೃಷಭರೂಪವನ್ನು ಧರಿಸಿರುವ ಧರ್ಮಪುರುಷನು. ಧರ್ಮಜ್ಞನಾದ ನೀನು ಯುಕ್ತಿಯುಕ್ತವಾದುದನ್ನೇ ಹೇಳುತ್ತಿರುವೆ. ದುಃಖದಾಯಕರ ಹೆಸರುಗಳನ್ನು ಪ್ರಕಟಗೊಳಿಸುತ್ತಿಲ್ಲ. ಇದು ಧರ್ಮವೇ. ಮತ್ತೊಬ್ಬರ ಮೇಲೆ ದೋಷಾರೋಪಣೆಯನ್ನು ಮಾಡುವವರೂ ಅಧರ್ಮಿಗಳು ಹೊಂದುವ ನರಕಗಳನ್ನೇ ಹೊಂದುತ್ತಾರೆನ್ನುವುದು ಧರ್ಮಸಾರವಾಗಿದೆ. ಅಂದಮೇಲೆ ಧರ್ಮಜ್ಞನಾದ ನೀನು ಮತ್ತೊಬ್ಬರನ್ನು ಹೇಗೆ ತಾನೇ ಬೆರಳಿನಿಂದ ತೋರಿಸುವೆ?"

ವಾಚಕರು ಗಮನಿಸಬೇಕು : ಈಗ ಸಂಸಾರದ ಸ್ವಭಾವವು ಹೇಗಿದೆ ಎಂದರೆ ತಮ್ಮನ್ನೇ ಸರ್ವಕರ್ತಾ, ಸರ್ವಧರ್ತಾ ಎಂದು ತಿಳಿದಿರುವ ಅಜ್ಞಾನಿಗಳು ಮತ್ತೊಬ್ಬರ ಮೇಲೆ ದೋಷಾರೋಪಣೆಯನ್ನು ಮಾಡುತ್ತಾ ಅವರಿಂದಲೇ ತಾವು ದುಃಖಿಗಳು ಎಂದು ನಿರ್ದೇಶಿಸಿ ಹೇಳುತ್ತಾರೆ.

ವಾಸ್ತವಾಂಶವೇನೆಂದರೆ ; ಯಾರ ಹೃದಯದಲ್ಲಿ ದುಃಖದ ಉದಯವಾಗುತ್ತದೋ-ಅಲ್ಲಿಯೇ ಅವರ ಉಪಾದಾನಕಾರಣವೂ ಇರುತ್ತದೆ. ಇದನ್ನು ಅಜ್ಞಾನಿಗಳು ತಿಳಿಯದೇ ಮತ್ತೊಬ್ಬರನ್ನು ದೋಷಿಗಳೆಂದು ತೆಗಳುತ್ತಾ ವೃಥಾ ನರಕವಾಸಿಗಳಾಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜಾ ಪರೀಕ್ಷಿತನು ಹೇಳಿದನು :

" ಧರ್ಮಪುರುಷನೇ ! ನಾನು ತಿಳಿದುಕೊಂಡೆನು. ನೀನು ಧರ್ಮದೇವತೆಯು. ನಿನ್ನ ನಾಲ್ಕು ಪಾದಗಳಲ್ಲಿ ಮೂರು ಪಾದಗಳು ಭಂಗವಾಗಿವೆ.

ಅಭಿಮಾನದಿಂದ ' ತಪಸ್ಸಿನ' ಭಂಗವಾಯಿತು. ಅಸಕ್ತಿಯಿಂದ 'ಪವಿತ್ರತೆಯು' ನಷ್ಟವಾಯಿತು. ಮದದಿಂದ 'ದಯೆಯು' ಸಮಾಪ್ತಿಯಾಯಿತು. ಈಗ ಸತ್ಯರೂಪಿಯಾದ ಪಾದವೊಂದು ಉಳಿದಿದೆ ಅದನ್ನು ಕಲಿಪುರುಷನು ತುಂಡರಿಸಲು ನೋಡುತ್ತಿದ್ದಾನೆ.

ತಪಸ್ಸು. ಶೌಚ, ದಯೆ, ಸತ್ಯ-ಈ ನಾಲ್ಕು ಧರ್ಮಪುರುಷನ ನಾಲ್ಕು ಪಾದಗಳು. ಕಲಿಯ ಆಕ್ರಮಣದಿಂದ ಮೂರು ಪಾದಗಳು ನಷ್ಟವಾದವು. ನಾಲ್ಕನೆಯದೊಂದು ಉಳಿದಿದೆ.

ಧರ್ಮ-ಪೃಥ್ವಿಯರ ನಿರ್ಭಾಗ್ಯತೆಗೆ ಮುಖ್ಯಕಾರಣನಾದ. ಅಧರ್ಮಸ್ವರೂಪಿಯಾದ ಈ ಕಲಿಯನ್ನು ಈಗಲೇ ಸಂಹರಿಸುವೆನೆಂದು ರಾಜನು ಕತ್ತಿಯನ್ನು ಒರೆಯಿಂದ ಹಿರಿದನು.

ಕಲಿಯು ಹೆದರಿ ಕೂಡಲೇ ರಾಜಚಿಹ್ನೆಗಳನ್ನು ಕಿತ್ತು ಬಿಸಾಡಿದನು. ಪರೀಕ್ಷಿತನ ಕಾಲುಗಳ ಮೇಲೆ ಶರಣಾಗತನಾಗಿ ಬಿದ್ದನು. ಆಗ-ದೀನವತ್ಸಲನಾದ, ಶರಣಾಗತರಕ್ಷಕನಾದ ಪರೀಕ್ಷಿದ್ರಾಜನು ಕಲಿಯ ಸಂಹಾರಕ್ಕೆ ಎತ್ತಿದ ಖಡ್ಗವನ್ನು ಕೆಳಕ್ಕಿಳಿಸಿದನು. ನಗುತ್ತಾ ಕಲಿಯೊಡನೆ ಹೇಳಿದನು:

"ಭಯಗ್ರಸ್ತನೇ ! ಕೈ ಜೋಡಿಸಿ ಶರಣಾಗತರಾದವರಿಗೆ ಅರ್ಜುನವಂಶೀಯರಿಂದ ಯಾವ ಹೆದರಿಕೆಯೂ ಇಲ್ಲ. ನಿರ್ಭಯನಾಗಿರು. ಆದರೆ, ನೀನು ಅಧರ್ಮನ ಸಹಾಯಕ. ನೀನಿರುವೆಡೆಯಲ್ಲಿ ಛಲ-ಕಪಟ-ಕಲಹಾದಿಗಳು ಒದಗುತ್ತವೆ. ದುರ್ಗುಣಗಳು ಅಭಿವೃದ್ಧಿಯಾಗುತ್ತವೆ.

ಬ್ರಹ್ಮಾವರ್ತದಲ್ಲಿ ನೀನು ಖಂಡಿತ ಇರಬಾರದು. ಭಾರತವರ್ಷವು ಭಗವಂತನ ಆರಾಧನಾಸ್ಥಾನವು. ವಿಧಿಗೆ ಅನುಗುಣವಾಗಿ ಇಲ್ಲಿ ಯಜ್ಞಪುರುಷನ ಆರಾಧನೆಯು ನಡೆಯುತ್ತದೆ. ನೀನು ಖಂಡಿತ ಇಲ್ಲಿರಬಾರದು."

ರಾಜಾಜ್ಞೆಯನ್ನು ಕೇಳಿದ ಕಲಿಯು ತಲೆಯನ್ನು ಮೇಲಕ್ಕೆತ್ತಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಕ್ಷಾತ್ ಯಮನಂತೆ ಮುಂದೆ ನಿಂತಿರುವ ರಾಜನನ್ನು ಕಂಡು ನಡುಗಹತ್ತಿದನು. ಕೈಮುಗಿದುಕೊಂಡು ಹೇಳಿದನು.

"ಮಹಾರಾಜ! ನಿನ್ನ ಆಜ್ಞಾನುಸಾರವಾಗಿ ನೀನು ಹೇಳಿದ ಕಡೆ ಇರುವೆನು. ಆದರೆ ಎಲ್ಲಿದ್ದರೂ ನೀನು ಆಯುಧಪಾಣಿಯಾಗಿ ಉಪಸ್ಥಿತನಾಗುವೆ ನಾನೇನು ಮಾಡಲಿ? ನಾನೆಲ್ಲಿರಲಿ? ನಿರ್ದಿಷ್ಟಸ್ಥಳವನ್ನು ತೋರಿಸಿಬಿಡು. ಅಲ್ಲಿ ನಾನು ನಿರಾತಂಕವಾಗಿ ಇದ್ದುಕೊಂಡಿರುವೆನು."

ರಾಜನು ಯೋಚಿಸಿದನು – ಯಾರಾದರೂ ತನ್ನ ರಾಜ್ಯದಲ್ಲಿಸಬೇಕೆಂದು ಕೇಳಕೊಂಡರೆ ಸೂಕ್ತವ್ಯವಸ್ಥೆಯನ್ನು ಮಾಡುವುದು ರಾಜನ ಕರ್ತವ್ಯವಾಗಿದೆ. ಶರಣಾಗತರನ್ನು ದೂರೀಕರಿಸುವುದು ರಾಜಧರ್ಮವಲ್ಲ ......ಆದರೆ ಈ ದುಷ್ಟನಿಗೆ ಎಲ್ಲಿರಲು ಸ್ಥಳವನ್ನು ಕೊಟ್ಟರೂ ಮಹಾವಿಪತ್ತೇ ಕಾದಿದೆ, ಏನು ಮಾಡಲಿ? —ಎಂದು ಯೋಚಿಸಿ ಹೇಳಿದನು; ದ್ಯೂತ, ಪಾನ, ವ್ಯಭಿಚಾರ, ಹಿಂಸೆ, ಈ ನಾಲ್ಕು ಸ್ಥಾನಗಳಲ್ಲಿರು ಎಂದು ಹೇಳಿದನು.

ಆ ನಾಲ್ಕು ಸ್ಥಾನಗಳಲ್ಲಿ ಅಸತ್ಯ, ಮದ ಆಸಕ್ತಿ ನಿರ್ದಯತೆ – ಈ ನಾಲ್ಕು ಅಧರ್ಮಗಳು ನಿವಾಸಮಾಡುತ್ತವೆ. ಸಾಲದು-ಮತ್ತೊಂದು ಸ್ಥಾನವನ್ನೂ ತೋರಿಸುವಂತೆ ಕಲಿಯು ಪ್ರಾರ್ಥಿಸಿದಾಗ-ಸುವರ್ಣವನ್ನು ತೋರಿಸಿದನು. ಆ ಐದು ಸ್ಥಾನಗಳಲ್ಲಿ ಅಧರ್ಮಕ್ಕೆ ಮೂಲಕಾರಣನಾದ ಕಲಿಯು ರಾಜಾಜ್ಞೆಯಂತೆ ವಾಸಿಸತೊಡಗಿದನು.

ಧಾರ್ಮಿಕಪುರುಷರು ಈ ಐದರ ವಿಚಾರದಲ್ಲಿ ಅವಧಾನತೆಯಿಂದಿರಬೇಕು ರಾಜಾ ಪರೀಕ್ಷಿತನು ಹೀಗೆ ಕಲಿಯನ್ನು ನಿಗ್ರಹಿಸಿ ವೃಷಭರೂಪಿಯಾದ ಧರ್ಮನ ತಪಸ್ಸು - ಶೌಚ - ದಯಾರೂಪಗಳಾದ ಮೂರು ಪಾದಗಳನ್ನೂ ಜೋಡಿಸಿ ಸಮಾಧಾನಪಡಿಸಿ ಪೃಥ್ವೀದೇವಿಯನ್ನೂ ಸಂತುಷ್ಟಿಗೊಳಿಸಿದನು.

ಸೂತರು ಹೇಳಿದರು;

"ಶೌನಕಾದಿಗಳೇ! ಆ ರಾಜಾ ಪರೀಕ್ಷಿತನೇ ಈಗ ರಾಜಸಿಂಹಾಸನಾರೂಢನಾಗಿದ್ದಾನೆ. ಕೌರವಕುಲರಾಜ್ಯಲಕ್ಷ್ಮಿಯಿಂದ ಪರಿಶೋಭಿಸುತ್ತಿದ್ದಾನೆ ಅವನ ಶಾಸನಾವಧಿಯಲ್ಲಿಯೇ ನೀವುಗಳು ದೀರ್ಘಕಾಲೀನ ಯಜ್ಞಾಚರಣೆಯಲ್ಲಿ ನಿರತರಾಗಿರುವಿರಿ."

ಓಂ ತತ್ಸದಿತ್ಯೇವಂ ಸಪ್ತದಶೋಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮಸ್ಕಂಧ-ಅಧ್ಯಾಯ 18

ರಾಜ ಪರೀಕ್ಷಿತನಿಗೆ ಶೃಂಗಿಋಷಿಯ ಶಾಪ

ಶ್ರೀ ಸೂತಪೌರಾಣಿಕರು ಶೌನಕಾದಿಗಳಿಗೆ ಹೇಳುತ್ತಾರೆ :

" ಶ್ರೀಷ್ಠ ಕರ್ಮಯೋಗಿಯಾದ ಶ್ರೀ ಕೃಷ್ಣನ ಅನುಗ್ರಹದಿಂದ ಪರೀಕ್ಷಿತನು ಅಶ್ವತ್ಥಾಮನ ಬ್ರಹ್ಮಾಸ್ತ್ರದ ಅಘಾತಕ್ಕೂ ಒಳಗಾಗಲಿಲ್ಲ. ಬ್ರಾಹ್ಮಣನ ಶಾಪಾನುಗುಣವಾಗಿ ತಕ್ಷಕನು ಮೃತ್ಯುರೂಪದಲ್ಲಿ ಬಂದಾಗಲೂ ಭಯಭೀತನಾಗಲಿಲ್ಲ. ಅವನು ತನ್ನ ಮನಸ್ಸನ್ನು ಭಗವಂತನ ಚರಣಾರವಿಂದಗಳಲ್ಲಿ ಅರ್ಪಿಸಿಬಿಟ್ಟಿದ್ದನು.

ಅವನು ಸಂಸಾರಾಸಕ್ತಿಯನ್ನು ಸಂಪೂರ್ಣವಾಗಿ ತೊರೆದು ಗಂಗಾತಟದಲ್ಲಿ ಶುಕದೇವರಿಂದ ಭಾಗವತೋಪದೇಶವನ್ನು ಪಡೆದನು. ಭಗವಂತನ ಸ್ವರೂಪಧ್ಯಾನದಲ್ಲಿ ಶರೀರವನ್ನು ತ್ಯಾಗಮಾಡಿದನು.

ಯಾರು ಭಗವದ್ಭಕ್ತರೋ, ಭಗವಂತನ ಚರಣಾರವಿಂದಗಳನ್ನು ಸ್ಮರಿಸುತ್ತಿರುವರೋ-ಅವರು ಯಾವುದರಿಂದಲೂ ದು:ಖಿಗಳಾಗುವುದಿಲ್ಲ. ಭೂಮಿಯ ಮೇಲೆ ಅಭಿಮನ್ಯುನಂದನನಾದ ಪರೀಕ್ಷಿತನು ಇರುವವರೆಗೂ ಕಲಿಯ ಪ್ರಭಾವವು ಇರಲಿಲ್ಲ.

ಶ್ರೀ ಕೃಷ್ಣನು ಲೀಲಾಧಾಮವಾಸಿಯಾದಂದಿನಿಂದಲೇ ಕಲಿಪುರುಷನು ತನ್ನ ಪ್ರಭಾವವನ್ನು ಬೀರಲು ಪ್ರಾರಂಭಿಸಿದ್ದನು.

ರಾಜಾ ಪರೀಕ್ಷಿತನು ಭ್ರಮರದಂತೆ ಸಾರಗ್ರಾಹಿಯಾಗಿದ್ದನು. ಅವನು ಕಲಿಯನ್ನು ದ್ವೇಷಿಸುತ್ತಿರಲಿಲ್ಲ. ಪುಣ್ಯಕರ್ಮಗಳಾದರೋ ಸಂಕಲ್ಪಮಾತ್ರದಿಂದ ಫಲಿಸುತ್ತವೆ. ಪಾಪಕರ್ಮಗಳು ದೇಹೇಂದ್ರಿಯಗಳಿಂದ ಆಚರಿಸಲ್ಪಟ್ಟರೆ ಫಲವನ್ನು ಕೊಡುತ್ತವೆ.

ಯಾರು ಮೂರ್ಖರೋ, ಬಾಲಕರೋ ಪ್ರಮಾದಿಗಳೋ-ಅಂತಹವರ ಮೇಲೆ ಕಲಿಯ ಪ್ರಭಾವವು ಬೀಳುತ್ತದೆ. ಭಗವದಾಶ್ರಯದಲ್ಲಿರುವವರಿಗೆ ಕಲಿಯಿಂದ ಯಥವ ತೊಂದರೆಯೂ ಇಲ್ಲ.

ಶೌನಕಾದಿಗಳೇ ! ನೀವು ಕೇಳಿದಂತೆ ಪರೀಕ್ಷಿತನ ಕೃಷ್ಣಭಕ್ತಿಯುಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ಆಖ್ಯಾನವನ್ನು ತಿಳಿಸಿದ್ದೇನೆ. ಶ್ರೀಕೃಷ್ಣನ ಗುಣ - ಕಥನಲೀಲಾ ವರ್ಣನೆಗಳೆಲ್ಲವೂ ಕಲ್ಯಾಣಕಾರಕಗಳು."

ಆಖ್ಯಾನಶ್ರವಣದಿಂದ ಸಂತುಷ್ಟರಾದ ಶೌನಕರು ಹೇಳಿದರು ;

ಸೂತ ಜೀವ ಸಮಾ; ಸೌಮ್ಯ ಶಾಶ್ವತೀರ್ವಿಶದಂ ಯಶ;

ಶೌನಕಾದಿ ಮಹಾಬ್ರಾಹ್ಮಣರು ಸೂತಪೌರಾಣಿಕರಿಗೆ ಆಶೀರ್ವದಿಸುತ್ತಾರೆ ;

"ಮಹಾಭಾಗರೇ ! ಯುಗ-ಯುಗಗಳವರೆಗೂ ನಿಮ್ಮ ಆಯುಷ್ಯವು ಅಭಿವೃದ್ಧಿಯಾಗಲಿ. ಯಶಸ್ಸು ಪ್ರಸರಿಸಲಿ. ಮೃತ್ಯುಪ್ರವಾಹದಲ್ಲಿ ತೇಲುತ್ತಿರುವ ನಮ್ಮೆಲ್ಲರಿಗೂ ಶ್ರೀಕೃಷ್ಣಾಮೃತವನ್ನು ಕೇಳಿಸುತ್ತಿದ್ದೀರಿ.

ನಾವು ಆಚರಿಸುವ ಕರ್ಮಕಾಂಡದಲ್ಲಿ ಯಾವ ವಿಧವಾದ ಆಶ್ವಾಸನೆಯೂ ನಮಗಿಲ್ಲ.

ಧೂಮ - ಧೂಮ್ರಾತ್ಮನಾಂ ಭವಾನ್ ಹೋಮಧೂಮದಿಂದ ನಮ್ಮ ಶರೀರವೆಲ್ಲವೂ ಧೂಮ್ರವರ್ಣವಾಗಿದೆ. ನೀವು ಶ್ರೀಕೃಷ್ಣನ ಚರಣ ಕಮಲಗಳ ಮಧುಪಾನವನ್ನು ಮಾಡಿಸುತ್ತಿರುವಿರಿ.

ಒಂದು ಕ್ಷಣವಾದರೂ ಇಂತಹ ಅವಸರವು ದೊರಕಿದರೆ - ಸ್ವರ್ಗ - ಮೋಕ್ಷಗಳಿಗಿಂತಲೂ ಅದು ಅಧಿಕವಾದದು. ಭಗವತ್ಪ್ರೇಮಿಗಳಾದ ಸಂತರ ಒಂದು ಕ್ಷಣಕಾಲದ ಸಹವಾಸವೂ ಅಪರಿಮಿತಲಾಭವನ್ನುಂಟುಮಾಡುತ್ತದೆ.

ಕ್ಷಣಿಕಸಾಂಸಾರಿಕಭೋಗಗಳ ವಿಚಾರವನ್ನು ಏನು ಹೇಳೋಣ ? ಅವುಗಳಿಂದ ಸಿಕ್ಕುವ ತೃಪ್ತಿಯು ಎಷ್ಟರದು ? ಯಾವ ರಸಜ್ಞನು ತಾನೇ ಭಗವಂತನ ಕಥಾಮೃತಸೇವನೆಯಿಂದ ಪೂರ್ಣತೃಪ್ತನಾದಾನು ? ಭಗವಂತನ ಕಲ್ಯಾಣಮಯಗುಣಗಳನ್ನು ಬ್ರಹ್ಮ-ಶಂಕರರೂ ಇಷ್ಟೆಂದು ಹೇಳಲಾರರು.

ವಿದ್ವಾಂಸರೇ ! ನೀವು ಭಗವಂತನನ್ನೇ ನಿಮ್ಮ ಜೀವನದ ಧ್ರುವತಾರೆಯನ್ನಾಗಿ ತಿಳಿದಿದ್ದೀರಿ ! ನೀವು ಸತ್ಪುರುಷರ ಏಕಮಾತ್ರಾಶ್ರಯರು. ಆದರಿಂದ ಭಗವಂತನ ಉದಾರವಾದ, ವಿಶುದ್ಧಚರಿತ್ರೆಗಳನ್ನು ಶ್ರದ್ಧಾಳುಗಳಾದ ನಮಗೆ ವಿಸ್ತರಿಸಿ ಹೇಳಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಭಗವತ್ಪ್ರೇಮಿಯಾದ ಪರೀಕ್ಷಿತನು ಶುಕದೇವರ ಜ್ಞಾನೋಪದೇಶದಿಂದ ಮೋಕ್ಷವನ್ನು ಪಡೆದ ಉಪಾಖ್ಯಾನವನ್ನು ವಿಸ್ತರಿಸಿ ಹೇಳಿರಿ. ಆ ಉಪಾಖ್ಯಾನದಲ್ಲಿ ಭಗವತ್ಪ್ರೇಮದ ಯೋಗನಿಷ್ಠೆಯು ಚೆನ್ನಾಗಿ ವರ್ಣಿಸಲ್ಪಟ್ಟಿದೆ. ಪದೇ-ಪದೇ ಕೃಷ್ಣಲೀಲಾವರ್ಣನೆಗಳು ಬರುತ್ತವೆ. ಭಗವದ್ಭಕ್ತರಿಗೆ ಇದಕ್ಕಿಂತಲೂ ಮತ್ತೊಂದು ಭಾಗ್ಯವೇನಿದೆ?

ಶೌನಕರ ಮಾತುಗಳಿಂದ ಸಂತೋಷಗೊಂಡ ಶ್ರೀಸೂತರು ಹೇಳಿದರು ;

“ಅದ್ಭುತ-ಆಶ್ಚರ್ಯ! ನನ್ನ ಜನ್ಮವು ಸಾರ್ಥಕವಾಯಿತು. ನಾನು ವಿಲೋಮಜಾತಿಯಲ್ಲಿ ಜನಿಸಿದ್ದರೂ (ಬ್ರಾಹ್ಮಣೀ ತಾಯಿ-ಕ್ಷತ್ರಿಯ ತಂದೆ) ನನಗೆ ದುಃಖವಿಲ್ಲ. ಕಾರಣವಿಷ್ಟೆ ತಮ್ಮಂತಹ ಪುಣ್ಯಾತ್ಮರೊಡನೆ ಮಾತನಾಡುವ ಸೌಭಾಗ್ಯವು ದೊರಕಿದೆ. ಇದಕ್ಕಿಂತಲೂ ಪರಮಸೌಭಾಗ್ಯವು ಮತ್ತೇನಿದೆ? ಅದರಲ್ಲಿಯೂ ಭಗವತ್ಕಥಾಸಂದರ್ಭಕ್ಕಿಂತಲೂ ವಿಶೇಷವಾದ ಸಂದರ್ಭವಿದೆಯೆ ?

ಭಗವನ್ನಾಮವು ಸತ್ಪುರುಷರ ಏಕಮಾತ್ರಾವಲಂಬನವಾಗಿದೆ.

ಅನಂತರೂಪಿ ಭಗವಂತನ ಶಕ್ತಿಯೂ ಅನಂತ. ಅನಂತಗುಣಗಳಿಂದಲೇ ಅವನು ಅನಂತನಾಗಿದ್ದಾನೆ. ಅವನ ಗುಣಗಳ ಸಮತೆಯನ್ನು ಯಾರೂ ಮಾಡಲಾರರು. ಅಂದಮೇಲೆ ಅವನಿಗಿಂತಲೂ ಅಧಿಕರು ಯಾರಿರುವರು ?

ಮಹಾಲಕ್ಷ್ಮಿಯು ಎಲ್ಲರನ್ನೂ ತಿರಸ್ಕರಿಸಿ ಪರಮಾತ್ಮನ ಚರಣಸೇವಕಿಯಾಗಿಲ್ಲವೇ ? ಬ್ರಹ್ಮನು ಭಗವಂತನ ಚರಣಾರವಿಂದಗಳನ್ನು ತೊಳೆಯಲು ಉಪಯೋಗಿಸಿದ ಜಲವೇ ಪರಮಾತ್ಮನ ಚರಣನಖಗಳಿಂದ ಹೊರಟು ಗಂಗೆಯ ರೂಪದಲ್ಲಿ ಪ್ರವಹಿಸಿತು.

ಮಹಾದೇವನು ಗಂಗೆಯನ್ನು ತಲೆಯಲ್ಲಿ ಧರಿಸಿ ಗಂಗಾಧರನಾದನು. ಮುಕುಂದನನ್ನು ಬಿಟ್ಟರೆ ಮತ್ತಾವುದು ಭಗವತ್ಪದಾರ್ಥವಾಗಲು ಸಾಧ್ಯ ?

ಮುಕುಂದಶಬ್ದಾರ್ಥವನ್ನು ನೋಡಿ : ಮುಕ್ತಿಂದದಾತೀತಿ ಮುಕುಂದಃ
ಮುಖೇ ಕುಂದಂ ಹಾಸೋ ಯಸ್ಯ ಸಃ-ಮುಕುಂದಃ

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ನಂದನಂದನ-ಶ್ಯಾಮಸುಂದರ-ಮುರಳೀಮನೋಹರ ಪೀತಾಂಬರಧಾರಿಯನ್ನು ಬಿಟ್ಟರೆ ಮತ್ತಾರೂ ಮುಕುಂದಶಬ್ದಕ್ಕೆ ಅರ್ಹರಲ್ಲ. ಇವನೊಡನೆ ಪ್ರೇಮವನ್ನಿಡಲು ಭಕ್ತರು ಪಾರಮಹಂಸ್ಯಾಶ್ರಮಾವಲಂಬಿಗಳಾಗುತ್ತಾರೆ. ಪರಮಹಂಸಿಗಳಿಗೆ ಅಹಿಂಸಾ - ಶಾಂತಿಗಳೇ ಧರ್ಮಗಳು. ಮಹಾತ್ಮರೇ ! ನೀವು ಕೇಳಿರುವಂತೆ ಯಥಾಮತಿ ಪರಮಾತ್ಮನ ಗುಣಾನುವರ್ಣನೆಯನ್ನು ಮಾಡುತ್ತೇನೆ.

ಪಕ್ಷಿಗಳು ಸ್ವಸಾಮರ್ಥ್ಯಕ್ಕೆ ಅನುಗುಣವಾಗಿ ಅಂತರಿಕ್ಷದಲ್ಲಿ ಹಾರುತ್ತವಷ್ಟೆ. ಹಾಗೆಯೇ ಪರಮಹಂಸ-ಪರಮಾತ್ಮನ ಗುಣವರ್ಣನೆಯನ್ನು ನನ್ನ ಶಕ್ತಿಗೆ ಅನುಗುಣವಾಗಿ ಮಾಡುತ್ತೇನೆ.

ಒಂದು ಬಾರಿ ರಾಜಾಪರೀಕ್ಷಿತನು ಧನುರ್ಧಾರಿಯಾಗಿ ಬೇಟೆಯಾಡಲು ಕಾಡಿಗೆ ಹೋದನು. ಜಿಂಕೆಗಳ ಹಿಂದೆ - ಹಿಂದೆ ಓಡುತ್ತಾ-ಓಡುತ್ತಾ ರಾಜನಿಗೆ ಬಹಳ ಹಸಿವು - ಬಾಯಾರಿಕೆಗಳಾದುವು.

ಎಲ್ಲಿಯೂ ಯಾವ ಜಲಾಶಯವೂ ದೊರಕಲಿಲ್ಲ. ಸಮೀಪದಲ್ಲಿ ಒಂದು ಋಷ್ಯಾಶ್ರಮವು ಕಂಡಿತು. ಅಲ್ಲಿ ಓರ್ವ ಋಷಿಗಳು ಪದ್ಮಾಸನಾಸೀನರಾಗಿ, ಮನೋಬುದ್ಧೀಂದ್ರಿಯಗಳನ್ನು ನಿಗ್ರಹಿಸಿ, ಬ್ರಹ್ಮಾನಂದದಲ್ಲಿ ನಿಮಗ್ನರಾಗಿದ್ದರು.

ದೀರ್ಘಜಟಾವೃತವಾದ ಅವರ ಶರೀರವು ಮೃಗಚರ್ಮದಿಂದ ಮುಚ್ಚಲ್ಪಟ್ಟಿತ್ತು. ಋಷಿಗಳಾದರೋ ಜಾಗ್ರತ್ - ಸ್ವಪ್ನ-ಸುಪ್ತ್ಯವಸ್ಥಾತೀತರಾಗಿ ಸತ್ತ್ವ-ರಜ-ಸ್ತಮೋಗುಣಹೀನರಾಗಿ, ವೈಶ್ವ - ತೈಜಸ - ಪ್ರಾಜ್ಞಭಾವವನ್ನು ತ್ಯಜಿಸಿ ತುರೀಯಾವಸ್ಥೆಯನ್ನು ತಲುಪಿದ್ದರು.

ತುಂಬ ಬಾಯಾರಿದ್ದ ರಾಜನು ಆ ಋಷಿಗಳನ್ನು ಜಲವನ್ನು ಕೇಳಿದನು. ಋಷಿಗಳಿಂದ ಪ್ರತ್ಯುತ್ತರವು ಬರಲಿಲ್ಲ. ರಾಜನು ಬಂದಿರುವನೆಂಬ ಸ್ವಾಗತ-ಸತ್ಕಾರಾದಿಗಳೂ ಇಲ್ಲ. ಋಷಿಗಳು ಬೇಕೆಂದೇ ತನ್ನನ್ನು ಅಪಮಾನಗೊಳಿಸುತ್ತಿದ್ದಾರೆಂದು ರಾಜನು ತಿಳಿದನು. ಅವರೊಬ್ಬ ದಾಂಭಿಕಮುನಿಗಳೆಂದು ಅರಿತನು. ಅವರ ವ್ಯವಹಾರದಿಂದ ರಾಜನು ಕೋಪಗೊಂಡನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪರೀಕ್ಷಿತನ ಜೀವನದಲ್ಲಿ ಇಂತಹ ಸಮಯವು ಬಂದಿರುವುದು ಮೊಟ್ಟ ಮೊದಲನೆಯದು. ಆಶ್ರಮದಿಂದ ಹಿಂದಿರುಗುವಾಗ ಅಲ್ಲೊಂದು ಮೃತ ಸರ್ಪವು ಬಿದ್ದಿರುವುದನ್ನು ಕಂಡನು. ಧನುಸ್ಸಿನ ತುದಿಯಿಂದ ಅದನ್ನು ತೆಗೆದು ಋಷಿಯ ಕುತ್ತಿಗೆಗೆ ಸುತ್ತಿದನು. ರಾಜಧಾನಿಯ ಕಡೆಗೆ ಹೊರಟನು. ಕೊನೆಯವರೆಗೂ-ಇವನೊಬ್ಬ ದಾಂಭಿಕ ಋಷಿ. ರಾಜನಾದ ತನ್ನನ್ನು ಅಪಮಾನಗೊಳಿಸಿದ್ದಾನೆಂದೇ ಭಾವಿಸಿದನು.

ಪರೀಕ್ಷಿತನು ಕಲಿಗೆ ಚಿನ್ನದಲ್ಲಿರಲು ಆಶ್ರಯವನ್ನು ಕೊಟ್ಟಿದ್ದನಷ್ಟೆ. ಆದರಲ್ಲಿ ಆಶ್ರಯ ಪಡೆದ ಕಲಿಯ ಪ್ರಭಾವದಿಂದ ರಾಜನು ಋಷಿಯಿಂದ ನಾನು ಅಪಮಾನಿತನಾದೆನು-ಎಂದು ತಿಳಿಯುವ ಹಾಗಾಯಿತು.

ಆ ಶಮೀಕಮುನಿಯ ಪುತ್ರನಾದ ಶೃಂಗಿಯು ಅಲ್ಲಿಯೇ ಸಮೀಪದಲ್ಲಿ ಸಂಗಡಿಗರೊಡನೆ ಆಟವಾಡುತ್ತಿದ್ದನು. ಆವನಾದರೋ ಮಹಾತೇಜಸ್ವಿಯು ಓರ್ವ ಬಾಲಕನು ಬಂದು ಅವನಿಗೆ ರಾಜನ ದುರ್ವ್ಯವಹಾರವನ್ನು ತಿಳಿಸಿದನು. ಕೇಳಿದ ಕೂಡಲೇ ಬಾಲಕನು ಕುಪಿತನಾದನು.

ಅಹೋ ಅಧರ್ಮಃ ಪಾಲಾನಾಂ ಪೀವ್ನಾಂ ಬಲಿಭುಜಾಮಿವ ।
ಸ್ವಾಮಿನ್ಯಘಂ ಯದ್ದಾಸಾನಾಂ ದ್ವಾರಪಾನಾಂ ಶುನಾಮಿವ ॥೩೩॥

" ರಾಜರೆಂದು ಹೇಳಸಿಕೊಳ್ಳುವ ಈ ಜನರು ಉಚ್ಛಿಷ್ಟಭೋಜಿಗಳಾದ ಕಾಗೆಗಳಂತೆ ಎಷ್ಟು ಅನ್ಯಾಯಮಾಡುತ್ತಾರೆ ?

ಬ್ರಾಹ್ಮಣರ ದಾಸರಾಗಿ ಬಾಗಿಲು ಕಾಯುವ ನಾಯಿಗಳಂತಿದ್ದರೂ ಇವರಿಗೆ ಯಜಮಾನನನ್ನೇ ತಿರಸ್ಕರಿಸುವಷ್ಟು ಸೊಕ್ಕೆ ?

ಬ್ರಾಹ್ಮಣರ ದ್ವಾರಪಾಲಕರಾದ ಕ್ಷತ್ರಿಯರು ಸರಿಯಾಗಿ ದ್ವಾರರಕ್ಷಣೆಯನ್ನು ಮಾಡುತ್ತಿರಬೇಕೇ ಹೊರತು ಮನೆಯೊಳಕ್ಕೆ ನುಗ್ಗಿ ಯಜಮಾನನ ಪಾತ್ರೆಯಲ್ಲಿ ಊಟಮಾಡುವ ಧಾರ್ಷ್ಟ್ಯವನ್ನು ಮಾಡಬಾರದು.

ಶ್ರೀಕೃಷ್ಣನ ಅಂತರ್ಧಾನವಾದ ಮೇಲೆ ಇವರು ಉನ್ಮಾರ್ಗಗಾಮಿಗಳಾಗಿದ್ದಾರೆ. ಮರ್ಯಾದಾಭಂಜಕನಾದ ಈತನನ್ನು ನಾನು ಶಪಿಸುತ್ತೇನೆ. ನನ್ನ ತೇಜೋಬಲವನ್ನಾದರೂ ನೋಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಸಂಗಡಿಗರೊಡನೆ ಹೇಳಿ ಕೌಶಿಕೀನದಿಯ ಪವಿತ್ರೋದಕದಿಂದ ಆಚಮನಮಾಡಿದನು.

ಇತಿ ಲಂಘಿತಮರ್ಯಾದಂ ತಕ್ಷಕಃ ಸಪ್ತಮೇಽಹನಿ।
ದಂಕ್ಷ್ಯತಿ ಸ್ಮ ಕುಲಾಂಗಾರಂ ಚೋದಿತೋ ಮೇ ತತದ್ರುಹಮ್॥

"ಕುಲಕಳಂಕಿಯಾದ ಪರೀಕ್ಷಿತನು ನನ್ನ ತಂದೆಯನ್ನು ಅಪಮಾನ ಗೊಳಿಸಿ ಮರ್ಯಾದೋಲ್ಲಂಘನೆಯನ್ನು ಮಾಡಿದ್ದಾನೆ. ಇನ್ನು ಏಳನೆಯ ದಿವಸದಲ್ಲಿ ನನ್ನಿಂದ ಪ್ರೇರಿತನಾದ ತಕ್ಷಕನು ಅವನನ್ನು ಕಚ್ಚುವನು."

ಅನಂತರ ಬಾಲಕನು ಆಶ್ರಮದೊಳಕ್ಕೆ ಬಂದನು. ತನ್ನ ತಂದೆಯ ಕೊರಳಿನಲ್ಲಿ ಸತ್ತ ಸರ್ಪವನ್ನು ನೋಡಿ ಗಟ್ಟಿಯಾಗಿ ರೋದಿಸತೊಡಗಿದನು. ಆ ರೋದನಧ್ವನಿಯಿಂದ ಶಮೀಕಮುನಿಯು ಬಹಿರ್ಮುಖನಾದನು. ತನ್ನ ಕುತ್ತಿಗೆಯಲ್ಲಿ ಸರ್ಪವಿರುವುದೂ ಅವನಿಗೆ ಆಗ ತಿಳಿಯಿತು. ಅದನ್ನು ತೆಗೆದು ಬಿಸಾಡಿ ಮಗನನ್ನು ಕೇಳಿದನು.

ವತ್ಸ ಕಸ್ಮಾದ್ಧಿ ರೋದಿಷಿ ? ಕೇನ ವಾ ತೇ ಅಪಕೃತಮ್ ?

"ಮಗು ! ಏಕೆ ಅಳುವೆ ? ಯಾರಿಂದ ಅಪಮಾನಿತನಾದೆ? "

ಬಾಲಕನು ತಂದೆಗೆ ಎಲ್ಲವನ್ನೂ ತಿಳಿಸಿದನು. ಬ್ರಹ್ಮರ್ಷಿಯಾದ ಶಮೀಕನು ಅದನ್ನು ಕೇಳಿ ಪುತ್ರನನ್ನು ಅಭಿನಂದಿಸಲಿಲ್ಲ. ಅವನ ದೃಷ್ಟಿಯಲ್ಲಿ ರಾಜನು ನಿರ್ದೋಷಿಯು.

ಮಗನೊಡನೆ ಹೇಳಿದನು :

"ಮೂರ್ಖನೆ ! ನೀನು ಮಾಡಬಾರದುದನ್ನು ಮಾಡಿರುವೆ. ಪಾಪಕೃತ್ಯವನ್ನೆಸಗಿದೆ. ಸ್ವಲ್ಪಾಪರಾಧಕ್ಕೆ ಮಹಾದಂಡವನ್ನು ವಿಧಿಸಿದೆಯಲ್ಲ ? ನಿನ್ನ ಬುದ್ಧಿಯಿನ್ನೂ ಪರಿಪಕ್ವವಾಗಿಲ್ಲ. ನೀನು ಭಗವತ್‌ಸ್ವರೂಪನಾದ ರಾಜನನ್ನು ಸಾಮಾನ್ಯನೆಂದು ತಿಳಿದುಬಿಟ್ಟೆಯಲ್ಲಾ ? ಯಾವ ರಾಜನ ದುರ್ದಮ್ಯ ತೇಜಸ್ಸಿನಿಂದ ಪ್ರಜೆಗಳು ಸುರಕ್ಷಿತರಾಗಿಯೂ, ನಿರ್ಭಯರಾಗಿಯೂ, ಸನ್ಮಾರ್ಗ ಪ್ರವರ್ತಕರಾಗಿಯೂ ಇರುವರೊ-ಅಂತಹ ರಾಜನನ್ನು ಶಪಿಸುವುದೇ ?

ಭಗವಂತನು ರಾಜರೂಪದಿಂದ ಭೂಮಿಯ ಮೇಲೆ ಇಲ್ಲದೇ ಹೋದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದರೋಡೆಗಾರರು, ಲೂಟಿಗಾರರು ಹೆಚ್ಚುತ್ತಾರೆ. ಯಜಮಾನನಿಲ್ಲದ ಕುರಿಗಳು ನಷ್ಟವಾಗುವಂತೆ ಬಹಳ ಬೇಗ ನಾಶವನ್ನು ಹೊಂದುತ್ತಾರೆ

ರಾಜನಿಲ್ಲದಿರುವಾಗ ದೇಶದಲ್ಲಿ ನಡೆಯುವ ಚೌರ್ಯಾದಿ ಮಹ ಪಾಪ ಕೃತ್ಯಗಳಿಗೆ ಸಂಬಂಧವಿಲ್ಲದ ನಾವುಗಳೂ ಭಾಗಿಗಳಾಗಬೇಕಾಗುತ್ತದೆ ಲೂಟಿಗಾರರು ಹೆಚ್ಚುತ್ತಾರೆ. ತಮ್ಮ-ತಮ್ಮಲ್ಲಿ ಹೊಡೆದಾಟ-ಬಡಿದಾಟಗಳು ಹೆಚ್ಚುತ್ತವೆ. ಹಾಗೂ ಸ್ತ್ರೀ-ಧನ-ಪಶು-ಸಂಪತ್ತುಗಳ ರಕ್ಷಕರೇ ಇಲ್ಲದಂತಾಗುವುದು. ಮಾನವರ ವರ್ಣಾಶ್ರಮಾಚಾರಯುಕ್ತವಾದ ವೈದಿಕಧರ್ಮವೇ ಲೋಪಗೊಳ್ಳುವುದು.

ಜನರು ಅರ್ಥಲೋಭಿಗಳಾಗಿ, ಕಾಮಪಿಶಾಚರಾಗಿ, ವಾನರ - ಶ್ವಾನರಂತೆ ವರ್ಣಸಾಂಕರ್ಯವನ್ನು ಹೊಂದುತ್ತಾರೆ.

ಸಮ್ರಾಟ್ ಪರೀಕ್ಷಿತನಾದರೋ ಯಶೋವಂತನೂ, ಧರ್ಮಧುರಂಧರನೂ, ಅಪ್ರತಿಮಸಾಹಸಿಯೂ ಆಗಿದ್ದಾನೆ. ಅವನು ಹಲವು ಅಶ್ವಮೇಧ ಯಾಗಗಳನ್ನು ಮಾಡಿದ್ದಾನೆ. ಹಸಿವು - ಬಾಯಾರಿಕೆಗಳಿಂದ ಪೀಡಿತನಾಗಿ ನಮ್ಮ ಆಶ್ರಮಕ್ಕೆ ಬಂದಿದ್ದನು. ಅವನು ಸರ್ವಥಾ ಶಾಪಕ್ಕೆ ಅರ್ಹನಲ್ಲ ಭಗವಂತನೇ ! ಈ ಅಬೋಧಬಾಲಕನ ದುಸ್ಸಾಹಸವನ್ನು ಕ್ಷಮಿಸು. ಜನ ಸೇವಕನಾದ ರಾಜನಿಗೆ ಮಹಾಪರಾಧವನ್ನೆಸಗಿದ್ದಾನೆ.

ನೋಡಿ–ಭಗವದ್ಭಕ್ತರಲ್ಲಿಯೂ ಪ್ರತೀಕಾರಮಾಡುವ ಶಕ್ತಿಯಿರುತ್ತದೆ. ಆದರೂ ಮತ್ತೊಬ್ಬರಿಂದ ತಮಗೊದಗುವ ಅವಮಾನ. ಮೋಸ, ಆಕ್ಷೇಪ ಪ್ರತಿಭಟನೆ – ಇತ್ಯಾದಿಗಳಿಗೆ ಪ್ರತೀಕಾರಮಾಡಲು ಇಚ್ಛಿಸುವುದಿಲ್ಲ.

ಮಹಾಮುನಿ ಶಮೀಕನಿಗೆ ಪುತ್ರನು ಮಾಡಿದ ಅಪರಾಧದಿಂದ ಬಹಳ ದುಃಖವಾಯಿತು. ತನಗೆ ರಾಜನಿಂದಾದ ಅಪಮಾನವನ್ನು ಮರೆತೇ ಬಿಟ್ಟನು.

ಮಹಾತ್ಮರ ಸ್ವಭಾವವೇ ಹೀಗೆ. ಮತ್ತೊಬ್ಬರಿಂದ ತಮಗೊದಗುವ ಸುಖ - ದುಃಖಗಳ ಬಗೆಗೆ ಯೋಚಿಸುವುದೇ ಇಲ್ಲ. ಆದರಿಂದ ಹರ್ಷಿತರೂ ಆಗುವುದಿಲ್ಲ. ದುಃಖಿಗಳೂ ಆಗುವುದಿಲ್ಲ. ಯಾವಾಗಲೂ ಆತ್ಮಸ್ವರೂಪಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಭವನಲ್ಲಿಯೇ ಇರುತ್ತಾರೆ. ಆತ್ಮನು ನಿರ್ಗುಣನು. ಅವನಲ್ಲಿ ವಿಷಯವಿಲ್ಲ; ಇಂದ್ರಿಯವಿಲ್ಲ; ಅಂತಃಕರಣವಿಲ್ಲ. ಅವನು ಗುಣಾಶ್ರಯನಲ್ಲ.

18ನೆಯ ಅಧ್ಯಾಯವು ಮುಗಿಯಿತು.

—

ಅಧ್ಯಾಯ ೧೯

ಪರೀಕ್ಷಿದ್ರಾಜನ ಪ್ರಾಯೋಪವೇಶ : ಶ್ರೀ ಶುಕದೇವರ ಆಗಮನ

ಶ್ರೀಸೂತರು ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ:

"ರಾಜಧಾನಿಯನ್ನು ಸೇರಿದ ಮೇಲೆ ಪರೀಕ್ಷಿನ್ನಿಗೆ ತಾನೆಸಗಿದ ನಿಂದ್ಯ ಕರ್ಮದಿಂದ ಬಹಳ ಪಶ್ಚಾತ್ತಾಪವಾಯಿತು. ಉದಾಸೀನನಾಗಿ ಯೋಚಿಸುತ್ತಿದ್ದನು. 'ನಾನು ನಿರಪರಾಧಿಯಾದ ಬ್ರಾಹ್ಮಣನಿಗೇಕೆ ಅಪರಾಧವನ್ನೆಸಗಿದೆ? ಅನಾರ್ಯರು - ಕುತ್ಸಿತಪುರುಷರು ನಡೆದುಕೊಳ್ಳುವಂತೆ ನಡೆದುಕೊಂಡೆನಲ್ಲ ?

ಮಹಾತ್ಮರಿಗೆ ಮಾಡಿದ ಅಪಮಾನವು ಶೀಘ್ರಾತಿಶೀಘ್ರವಾಗಿ ಫಲವನ್ನು ಕೊಟ್ಟೇಕೊಡುತ್ತದೆ. ಆದರಿಂದ ಘೋರವಿಪತ್ಪ್ರಾಪ್ತಿಯಾಗುವುದು ಖಂಡಿತ. ಅದನ್ನೇ ನಾನು ಇಚ್ಛಿಸುತ್ತೇನೆ. ಏಕೆಂದರೆ; ಇಲ್ಲಿಯೇ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಬಿಟ್ಟರೆ ಪುನಃ ಆ ತಪ್ಪನ್ನು ಮಾಡುವ ಸಾಹಸವು ಬರುವುದಿಲ್ಲ.

ಬ್ರಾಹ್ಮಣನ ಕ್ರೋಧಾಗ್ನಿಯು ಇಂದೇ ನನ್ನ ರಾಜ್ಯ - ಕೋಶಾದಿಗಳನ್ನು ದಹಿಸಲಿ. ಅದರಿಂದ ನನ್ನಂತಹ ರಾಜನಾರೂ ಬ್ರಾಹ್ಮಣರ ಬಗೆಗೆ ಅನುಚಿತವಾದ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ.

ಹೀಗೆ ರಾಜನು ಯೋಚಿಸುತ್ತಿರುವಾಗಲೇ ಶಾಪದ ಸಮಾಚಾರವನ್ನು ಕೇಳಿದನು. ತಾನು ಮಾಡಿದ ತಪ್ಪಿಗಾಗಿ, ಇಂದಿನಿಂದ ಮುಂದೆ ಇನ್ನು ಏಳನೆಯ ದಿವಸದಲ್ಲಿ ತನಗೆ ತಕ್ಷಕನಿಂದ ಮರಣಪ್ರಾಪ್ತವಾಗುವುದೆಂಬ ವಿಷಯವನ್ನು ಕೇಳಿದ ರಾಜನು ಒಳ್ಳೆಯದೇ ಆಯಿತು ಎಂದುಕೊಂಡನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಘೋರವಿಪತ್ತು ವೈರಾಗ್ಯಕ್ಕೆ ಜನಕವೆಂದೇ ತಿಳಿದನು. ಬಹಳ ವರ್ಷಗಳಿಂದ ರಾಜೋಪಭೋಗಗಳಲ್ಲಿಯೇ ಮಗ್ನನಾಗಿರುವ ತಾನು ಈಗ ಲಾದರೂ ವೈರಾಗ್ಯಶೀಲನಾಗಬಹುದಲ್ಲ-ಎಂದು ತಿಳಿದನು. ಇದೂ ಭಗವಂತನ ಕರುಣೆಯಿಂದೇ ತೋರಿತು.

ಮೊದಲಿನಿಂದಲೂ ಕೃಷ್ಣಭಕ್ತನಾದ ರಾಜನು ಇಹ-ಪರಗಳ ಭೋಗ ಗಳನ್ನು ತುಚ್ಛ-ತ್ಯಾಜ್ಯಗಳೆಂದೇ ತಿಳಿದಿದ್ದನು. ಈಗ ಸ್ವರೂಪತಃ ಅವು ಗಳನ್ನು ತ್ಯಾಗಮಾಡಿ ಪುತ್ರನಾದ ಜನಮೇಜಯನಿಗೆ ರಾಜ್ಯವನ್ನೊಪ್ಪಿಸಿ ಮರಣಪರ್ಯಂತ ಅನಶನವ್ರತವನ್ನು ಅಂಗೀಕರಿಸಿದನು. ಶ್ರೀಕೃಷ್ಣಚರಣಾರ ವಿಂದಗಳನ್ನು ಧ್ಯಾನಮಾಡುತ್ತಾ ಗಂಗಾತಟವಾಸಿಯಾದನು.

ಗಂಗೆಯು ಶ್ರೀಕೃಷ್ಣಪಾದೋದ್ಭವೆಯಾಗಿ ಪ್ರವಹಿಸುತ್ತಿದ್ದಾಳೆ. ತುಲಸೀಗಂಧದಿಂದ ಮಿಶ್ರಿತಳಾಗಿದ್ದಾಳೆ. ಲೋಕಗಳನ್ನೂ - ಲೋಕಪಾಲಕ ರನ್ನೂ ಪವಿತ್ರಗೊಳಿಸುತ್ತಿದ್ದಾಳೆ. ಯಾವ ಮರಣಾಸನ್ನಪುರುಷನು ತಾನೇ ಅವಳನ್ನು ಸೇವಿಸುವುದಿಲ್ಲ !

ರಾಜನು ಗಂಗಾತಟವನ್ನು ಸೇರಿ ಆಮರಣೋಪವಾಸದ ನಿಶ್ಚಯವನ್ನು ಮಾಡಿ ಸಮಸ್ತಹಿತಾಸಕ್ತಿಗಳನ್ನೂ ಪರಿತ್ಯಜಿಸಿ ಮುನಿವ್ರತಧಾರಿಯಾಗಿ ಶ್ರೀಕೃಷ್ಣನ ಪಾದಕಮಲಗಳನ್ನು ಧ್ಯಾನಮಾಡತೊಡಗಿದನು.

ಆ ಸಮಾಚಾರವು ಜಗತ್ತಿನ ಮೂಲೆ-ಮೂಲೆಗೂ ಹರಡಿತು. ತೀರ್ಥ ಯಾತ್ರೆಗಾಗಿ ಜನರು ತಂಡ-ತಂಡವಾಗಿ ಬರತೊಡಗಿದರು. ಋಷಿ - ಮುನಿ ಗಳೂ, ಸಾಧು-ಸಂತರೂ ತಮ್ಮ ತಮ್ಮ ಶಿಷ್ಯರಿಂದೊಡಗೂಡಿ ತೀರ್ಥಯಾತ್ರಾ ವ್ಯಾಜದಿಂದ ಬಂದು ಸೇರಿದರು.

ಸಾಧು-ಸಂತರ ಆಗಮನದಿಂದ ತೀರ್ಥಗಳು ಪವಿತ್ರವಾಗುತ್ತವೆ. ಅತ್ರಿ-ವಸಿಷ್ಠ-ಚ್ಯವನಾದಿ ದೇವರ್ಷಿ-ಬ್ರಹ್ಮರ್ಷಿಗಳೆಲ್ಲರೂ ತಮ್ಮ ತಮ್ಮ ಬಳಗದವ ರೊಡನೆ ಬಂದರು. ರಾಜನು ಎಲ್ಲರನ್ನೂ ಉಚಿತರೀತಿಯಲ್ಲಿ ಸತ್ಕರಿಸಿದನು. ಎಲ್ಲರ ಚರಣಾಭಿವಾದನವನ್ನು ಮಾಡಿದನು. ಸುಖಾಸೀನರಾದ ಋಷಿಗಳ ಮುಂದೆ ಕೈಜೋಡಿಸಿ ನಿಂತುಕೊಂಡು ರಾಜನು ಕೇಳಿದನು :

Sri Vidyabharathi Book Centre, Sringeri

CC-O. In Public Domain. Digitized by eGangotri

ಅಹೋ ವಯಂ ಧನ್ಯತಮಾ ನೃಪಾಣಾಂ
ಮಹತ್ತಮಾನುಗ್ರಹಣೀಯಶೀಲಾಃ ।
ರಾಜ್ಞಾಂ ಕುಲಂ ಬ್ರಾಹ್ಮಣಪಾದಶೌಚಾತ್
ದೂರಾದ್ವಿಸೃಷ್ಟಂ ಬತ ಗರ್ಹ್ಯಕರ್ಮ ॥೧೩॥

"ಮಹಾತ್ಮರೇ! ನಾನಿಂದು ಧನ್ಯನು; ಧನ್ಯತಮನು. ತಮ್ಮ ಕೃಪೆಗೆ ಪಾತ್ರನಾಗಿದ್ದೇನೆ. ಪ್ರಾಯಶಃ ರಾಜರು ನಿಂದಿತಕರ್ಮಗಳನ್ನು ಮಾಡಿಯೂ ಬ್ರಾಹ್ಮಣಪಾದಸ್ಪರ್ಶದಿಂದ ದೂರವಿರುತ್ತಾರೆ. ಅವರು ಶೋಚ್ಯರು.

ನಾನೂ ರಾಜನಾಗಿ ದೇಹ-ಗೇಹ-ಆರಾಮಾದಿಗಳಲ್ಲಿ ಆಸಕ್ತನಾಗಿ ಪಾಪಾಚಾರಿಯಾಗಿದ್ದೇನೆ. ಆದರೆ ಸ್ವಯಂ ಭಗವಂತನು ಬ್ರಾಹ್ಮಣಶಾಪ ರೂಪದಿಂದ ನನ್ನ ಮೇಲೆ ದಯೆತೋರಿದ್ದಾನೆ. ಈ ಶಾಪವು ವೈರಾಗ್ಯಕ್ಕೆ ಕಾರಣವಾಗಿದೆ.

ಈ ವಿಧವ ಶಾಪದಿಂದ ಸಂಸಾರಾಸಕ್ತ ಪುರುಷನು ಭಯಭೀತನಾಗಿ ವಿರಕ್ತನಾಗುತ್ತಾನೆ. ಪೂಜ್ಯರಾದ ಬ್ರಾಹ್ಮಣಬಂಧುಗಳೆ! ನಾನು ನನ್ನ ಚಿತ್ತವನ್ನು ಭಗವಂತನ ಚರಣಕಮಲಗಳಲ್ಲಿ ಸಮರ್ಪಿಸಿದ್ದೇನೆ. ತಾವೂ ಗಂಗಾಮಾತೆಯೂ ನನ್ನನ್ನು ಶರಣಾಗತನೆಂದು ತಿಳಿದು ಅನುಗ್ರಹಿಸಿರಿ.

ಬ್ರಾಹ್ಮಣಕುಮಾರನ ಶಾಪದಿಂದ ಪ್ರೇರಿತನಾದ ತಕ್ಷಕನು ಸ್ವಸ್ವರೂಪ ದಿಂದಾಗಲಿ - ರೂಪಾಂತರದಿಂದಾಗಲಿ ನನ್ನನ್ನು ಕಚ್ಚಲಿ. ನಾನು ಅದಕ್ಕಾಗಿ ಖೇದಗೊಳ್ಳುವುದಿಲ್ಲ. ತಾವು ದಯವಿಟ್ಟು ಭಗವಂತನ 'ಲೀಲಾಗುಣಗಳನ್ನು ವರ್ಣಿಸಿರಿ.

ತಮ್ಮ ಪವಿತ್ರಚರಣಕಮಲಗಳನ್ನು ನಮಸ್ಕರಿಸುತ್ತಾ ನಾನು ಪ್ರಾರ್ಥಿಸುವುದಿಷ್ಟೆ; ಕರ್ಮಗತಿಗೆ ಅನುಗುಣವಾಗಿ ಯಾವ ಜನ್ಮವು ಬೇಕಾದರೂ ನನಗೆ ಬರಲಿ. ಶ್ರೀಕೃಷ್ಣಪಾದಾರವಿಂದಗಳಲ್ಲಿ ನನ್ನ ಭಕ್ತಿಯು ಚಲಿಸದಿರಲಿ. ಎಲ್ಲ ಪ್ರಾಣಿಗಳಲ್ಲಿಯೂ ಮೈತ್ರಭಾವವಿರಲಿ. ತಮಗೆಲ್ಲರಿಗೂ ಅನಂತ ನಮಸ್ಕಾರಗಳು. ನನ್ನನ್ನು ಆಶೀರ್ವದಿಸಿರಿ."

ದೃಢನಿಶ್ಚಯಿ, ಮಹಾಧೀರನಾದ ರಾಜಾ ಪರೀಕ್ಷಿತನು ಗಂಗೆಯ ದಕ್ಷಿಣ

Sri Vidyabharathi Book Centre, Sringeri

CC-O. In Public Domain. Digitized by eGangotri

ತೀರದಲ್ಲಿ ಪೂರ್ವಾಗ್ರಗಳಾಗಿ ಕುಶಗಳನ್ನು ಹಾಸಿದನು. ಕುಶಾಸನದ ಮೇಲೆ ಉತ್ತರಾಭಿಮುಖವಾಗಿ ಕುಳಿತುಕೊಂಡನು. ಅವನು ರಾಜ್ಯಾಧಿಕಾರವನ್ನು ಮೊದಲೇ ಪುತ್ರನಿಗೆ ವಹಿಸಿಯಾಗಿದ್ದಿತು.

ಅಖಂಡಭೂಮಂಡಲಾಧಿಪತಿಯಾದ ಸಮ್ರಾಟ್ ಪರೀಕ್ಷಿತನು ಹೀಗೆ ಮರಣಾಂತೋಪವಾಸದ ನಿಶ್ಚಯವನ್ನು ಮಾಡಿರಲು, ಆಕಾಶದಲ್ಲಿ ದೇವತೆಗಳು ಆನಂದದಿಂದ ಅವನನ್ನು ಹೊಗಳುತ್ತಾ ಪುಷ್ಪವೃಷ್ಟಿಯನ್ನು ಕರೆದರು. ದೇವದುಂದುಭಿಗಳು ಮೊಳಗಿದುವು. ಉಪಸ್ಥಿತರಿದ್ದ ಎಲ್ಲ ಮಹರ್ಷಿಗಳೂ ಪರೀಕ್ಷಿತನ ನಿಶ್ಚಯವನ್ನು ಪ್ರಶಂಸಿಸಿದರು. 'ಸಾಧು - ಸಾಧು' ಎಂದು ಅಭಿನಂದಿಸಿದರು. ಸ್ವಭಾವತಃ ಋಷಿ - ಮುನಿಗಳು ದೀನರನ್ನೂ ಆರ್ತರನ್ನೂ ಅನುಗ್ರಹಿಸುತ್ತಾರೆ. ಅಷ್ಟೇ ಅಲ್ಲ, ಅವರ ಶಕ್ತಿ ಸಾಮರ್ಥ್ಯಗಳೆಲ್ಲವೂ ಲೋಕಾನುಗ್ರಹಕ್ಕೋಸ್ಕರವಾಗಿ ಮಾತ್ರ ಇವೆ. ಅವರು ಶ್ರೀಕೃಷ್ಣನಗುಣಾನುರಾಗಿಯಾದ ಪರೀಕ್ಷಿತನೊಡನೆ ಹೇಳಿದರು.

"ರಾಜರ್ಷಿಶಿರೋಮಣಿಯೇ! ಶ್ರೀಕೃಷ್ಣನ ಸೇವಕರೂ ಅವನ ಅನುಯಾಯಿಗಳೂ ಆದ ಪಾಂಡವರ ವಂಶದಲ್ಲಿ ಜನಿಸಿರುವ ನಿನ್ನೀ ವರ್ತನೆಯು ಸರ್ವಶ್ರೇಷ್ಠವಾದುದು. ಭಗವತ್ಕೃಪೆಗೆ ಪಾತ್ರನಾಗಬೇಕೆಂದು ಕ್ಷಣಾರ್ಧದಲ್ಲಿ ಸಿಂಹಾಸನವನ್ನು ತ್ಯಜಿಸಿದೆಯಲ್ಲವೆ? ನೀನು ಭಗವತ್ಸಾಯುಜ್ಯವನ್ನು ಪಡೆಯುವವರೆಗೂ ನಾವುಗಳು ಇಲ್ಲಿಯೇ ಇರುತ್ತೇವೆ." ಆ ಋಷಿವಾಕ್ಯಗಳು ಮಧುರವಾಗಿಯೂ, ಗಂಭೀರವಾಗಿಯೂ, ಸತ್ಯಯುಕ್ತಗಳಾಗಿಯೂ, ಸಮತಾಯುಕ್ತಗಳಾಗಿಯೂ ಇದ್ದುವು. ಕೇಳಿದ ರಾಜನು ಆನಂದದಿಂದ ಅವರನ್ನು ಅಭಿನಂದಿಸಿದನು. ಭಗವಂತನ ದಿವ್ಯಚರಿತ್ರೆಗಳನ್ನು ಕೇಳುವ ಇಚ್ಛೆಯಿಂದ ಋಷಿ - ಮುನಿಗಳನ್ನು ಪ್ರಾರ್ಥಿಸಿದನು.

"ಮಹಾತ್ಮರೇ! ತಾವು ವಿವಿಧಭೂಭಾಗಗಳಿಂದ ಇಲ್ಲಿಗೆ ದಯಮಾಡಿಸಿದ್ದೀರಿ. ತಾವು ಬ್ರಹ್ಮಲೋಕನಿವಾಸಿಗಳಾದ ವೇದಪುರುಷರಿಗೆ ಸಮಾನರು. ತಾವು ಪರಾನುಗ್ರಹಾಪೇಕ್ಷಿಗಳೇ ಹೊರತು ಇಹಲೋಕದ ಹಾಗೂ ಪರಲೋಕದ ಯಾವ ಸ್ವಾರ್ಥವೂ ತಮ್ಮಲ್ಲಿಲ್ಲ. ನನಗೆ ತಮ್ಮಲ್ಲಿ ಪೂರ್ಣ ಭರವಸೆಯಿದೆ. ಕರ್ತವ್ಯದ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಬಯಸುತ್ತೇನೆ.

Sri Vidyabharathi Book Centre, Sringeri

ಮರಣಾಸನ್ನವಕ್ತಿಯು ಏನು ಮಾಡಬೇಕು? ಜೀವನು ಸದಾ ಸರ್ವದಾ ಹೇಗೆ ಕರ್ತವ್ಯವನ್ನು ಪಾಲಿಸಬೇಕು?"

ರಾಜನು ಬ್ರಾಹ್ಮಣರನ್ನು ಈ ಎರಡು ಪ್ರಶ್ನೆಗಳನ್ನು ಕೇಳುತ್ತಿರುವಾಗಲೇ -

ತತ್ರಾಭವದ್ಭಗವಾನ್ ವ್ಯಾಸಪುತ್ರೋ
ಯದೃಚ್ಛಯಾ ಗಾಮಟಮಾನೋಽನಪೇಕ್ಷಃ ।
ಅಲಕ್ಷ್ಯಲಿಂಗೋ ನಿಜಲಾಭತುಷ್ಟೋ
ವೃತಶ್ಚ ಬಾಲೈರವಧೂತವೇಷಃ ॥೨೫॥

ಪೃಥ್ವಿಯ ಮೇಲೆ ಸ್ವೇಚ್ಛೆಯಿಂದ ನಿರಪೇಕ್ಷಿಯಾಗಿ ಸಂಚರಿಸುವ, ವ್ಯಾಸನಂದನರಾದ - ಭಗವಾನ್ ಶುಕದೇವರು ಅಲ್ಲಿ ಪ್ರಕಟರಾದರು. ಅವರಲ್ಲಿ ವರ್ಣದ, ಆಶ್ರಮದ ಯಾವ ಬಾಹ್ಯಚಿಹ್ನೆಗಳೂ ಇರಲಿಲ್ಲ. ಆತ್ಮಾನುಭೂತಿಯಿಂದ ಸಂತುಷ್ಟರಾಗಿದ್ದರು. ಅವರು ಅವಧೂತವೇಷಿಗಳಾಗಿದ್ದರು.

ಇಲ್ಲಿ ಭಗವಾನ್ ವ್ಯಾಸಪುತ್ರಃ ತತ್ರಾಜಗಾಮ — ಎಂದು ಹೇಳಲಿಲ್ಲ; ತತ್ರಾಭವತ್ — ಎಂದು ಹೇಳಿದ್ದಾರೆ. ಇದರ ಸ್ವಾರಸ್ಯವನ್ನು ಗಮನಿಸಬೇಕು.

ಭಗವಂತನು ಗರ್ಭಸ್ಥ ಪರೀಕ್ಷಿತನನ್ನು ಕಾಪಾಡಲು ಗರ್ಭದಲ್ಲಿಯೇ ಪ್ರಕಟನಾಗಿದ್ದನು. ಇಂದು ಅದೇ ಪರೀಕ್ಷಿತನನ್ನು ಬ್ರಾಹ್ಮಣಶಾಪರೂಪವಾದ ಬ್ರಹ್ಮಾಸ್ತ್ರದಿಂದ ರಕ್ಷಿಸಲು ಸ್ವಯಂ ಶುಕದೇವನ ರೂಪದಲ್ಲಿ ಆವಿರ್ಭವಿಸಿದ್ದಾನೆ. ಭಗವಂತನಲ್ಲಿ ಮೂವತ್ತು ಗುಣಗಳಿದ್ದರೆ ಶುಕದೇವರಲ್ಲಿ ಮೂವತ್ತೆಂಟು ಗುಣಗಳಿದ್ದುವೆಂದು ಹೇಳುತ್ತಾರೆ. ಗೋವಿಂದನಿಗಿಂತಲೂ ಗುರುವು ದೊಡ್ಡವನೆಂಬುವುದು ತಜ್ಞರ ಮತವಾಗಿದೆ. ಕೂರ್ಮಪುರಾಣದಲ್ಲಿ ಸ್ವಯಂ ಭಗವಾನ್ ಶಂಕರನೇ ಪರೀಕ್ಷಿತನನ್ನು ಉದ್ಧರಿಸಲು ಶುಕರೂಪದಲ್ಲಿ ಆವಿರ್ಭವಿಸಿದನೆಂದು ಹೇಳುತ್ತಾರೆ. ಶುಕದೇವರ ದರ್ಶನದಿಂದ ಎಲ್ಲರೂ ಆನಂದಪುಲಕಿತರಾದರು, ಆಸನಗಳಿಂದೆದ್ದು ಸ್ವಾಗತಿಸಿದರು, ರಾಜಾ ಪರೀಕ್ಷಿತನು ಅತಿಥಿ ರೂಪದಿಂದ ಬಂದಿರುವ ಶುಕದೇವರಿಗೆ ತಲೆಬಾಗಿ ನಮಸ್ಕರಿಸಿದನು ಅಂಜಲಿ ಬದ್ಧನಾಗಿ ಪ್ರಾರ್ಥಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮನ್ ನಾನಿಂದು ಮಹಾಭಾಗ್ಯಶಾಲಿಯು. ನಾನೊಬ್ಬ ಅಪರಾಧಿ ಸಾಮಾನ್ಯ ಕ್ಷತ್ರಿಯನ್ನಾದರೂ ಸತ್ಸಮಾಗಮಕ್ಕೆ ಅಧಿಕಾರಿಯೆಂದು ತಿಳಿಯ ಲ್ಪಟ್ಟೆನು. ಭಗವಾನ್ ಮಹಾವಿಷ್ಣುವಿನ ಮುಂದೆ ರಾಕ್ಷಸರಾರೂ ನಿಲ್ಲಲಾ ರರು. ಅಂತೆಯೇ ತಮ್ಮ ಮುಂದೆ ಪಾಪಗಳಾವುವೂ ನಿಲ್ಲಲಾರವು. ಯೋಗಿ ನಾಂ ಪರಮಂಗುರುವಾದ ತಮ್ಮನ್ನು ಸಾಧನೆಯ ಬಗ್ಗೆ ಪ್ರಶ್ನಿಸುತ್ತೇನೆ — ಮರಣಾಸನ್ನ ಪುರುಷನ ಕರ್ತವ್ಯವೇನು? ಯಾರ ಸ್ಮರಣೆ' ಭಜನೆ, ತಪಾದಿಗ ಳನ್ನು ನಡೆಸಬೇಕು ? ಯಾವುದನ್ನು ತ್ಯಾಗಮಾಡಬೇಕು ? ಯಾವುದನ್ನು ಸ್ವೀಕರಿಸಬೇಕು ? ದಯವಿಟ್ಟು ತಿಳಿಸಿರಿ

ಹೀಗೆ ರಾಜನು ಶ್ರೀ ಶುಕದೇವರನ್ನು ಪ್ರಾರ್ಥಿಸಲು ಸರ್ವ ಧರ್ಮಗಳ ಮರ್ಮಜ್ಞರಾದ ವ್ಯಾಸ ನಂದನರಾದ ಶ್ರೀ ಶುಕದೇವರು ಉತ್ತರಿಸತೊಡಗಿ ದರು.

ಓಂ ತತ್ಸದಿತ್ಯೇವಂ ಪ್ರಥಮ ಸ್ಕಂಧೇ
ಏಕೋನವಿಂಶ ಃ
ಸಮಾಪ್ತ ಃ ಪ್ರಥಮ ಸ್ಕಂಧ ಃ
ಶ್ರೀಕೃಷ್ಣಾರ್ಪಣಮಸ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ಭಾಗವತ ದರ್ಶನ

-ದ್ವಿತೀಯಸ್ಕಂಧ-ಪ್ರಸ್ತಾವನಾ

ಭಾಗವತದ ಪ್ರಥಮಸ್ಕಂಧದಲ್ಲಿ ಅಧಿಕಾರನಿರೂಪಣೆಯನ್ನು ಮಾಡಿದ್ದಾರೆ-ಶ್ರೋತಾ ಹೇಗಿರಬೇಕು? ವಕ್ತಾ ಹೇಗಿರಬೇಕು? ಈಗ ಪ್ರಾರಂಭವಾಗುವ ದ್ವಿತೀಯಸ್ಕಂಧವು ಸಾಧನಾಪ್ರಧಾನವಾದುದು. ಈ ಸ್ಕಂಧದಲ್ಲಿ ಹತ್ತು ಅಧ್ಯಾಯಗಳು ಮಾತ್ರ ಇವೆ. ಇವುಗಳಲ್ಲಿ ಪರಮಾತ್ಮಪ್ರಾಪ್ತಿಯ ಸಾಧನೆಯನ್ನು ಹೇಳಿದ್ದಾರೆ.

ನಮ್ಮ ದೇಹೇಂದ್ರಿಯಾದಿಗಳಿಂದ, ಪೂರ್ಣನಾದ ಪರಬ್ರಹ್ಮನನ್ನು ಗ್ರಹಿಸಲಾಗುವುದಿಲ್ಲ. ಈ ವಿಚಾರವನ್ನು ಪ್ರಾಪಂಚಿಕರು ಬೇಗ ಬಿಡಲಾರರು. ಚಕ್ಷುವು ರೂಪಗ್ರಾಹಿಯು ಮಾತ್ರ. ನಾಸಿಕವು ಕೇವಲ ಗಂಧಗ್ರಾಹಿ, ತ್ವಕ್ಕು ಸ್ಪರ್ಶಗ್ರಾಹಿ. ಇವುಗಳು ಪೂರ್ಣತೆಯನ್ನು ಹೇಗೆ ಗ್ರಹಿಸಿಯಾವು? ಇವುಗಳಿಗೆ ಮತ್ತೊಂದರ ವಿಷಯಗಳನ್ನು ಗ್ರಹಿಸುವ ಯೋಗ್ಯತೆಯೆ ಇಲ್ಲ. ಅಷ್ಟೇ ಅಲ್ಲ. ತಮ್ಮ ವಿಷಯಗಳನ್ನೇ ಪೂರ್ಣರೂಪದಿಂದ ಗ್ರಹಿಸಲಾರವು. ಇಂತಹ ಇಂದ್ರಿಯಗಳು ಪರಿಪೂರ್ಣಪರಮಾತ್ಮನನ್ನು ಗ್ರಹಿಸುತ್ತವೆಂದು ಆಶಿಸಲು ಸಾಧ್ಯವಿದೆಯೆ ?

ಇಂದ್ರಿಯಾತೀತವಸ್ತುವು ಒಂದು ಇಂದ್ರಿಯದ ಗ್ರಹಣಕ್ಕೆ ಒಳಪಡುವುದಿಲ್ಲ. ಅನುಮಾನವು ಪ್ರತ್ಯಕ್ಷದ ತಮ್ಮ ಇಂದ್ರಿಯಗಳು ಪ್ರತ್ಯಕ್ಷವಾಗಿ ಗ್ರಹಿಸಿದುದನ್ನೇ ಅನುಮಾನದಿಂದಲೂ ಹೇಳುತ್ತಾರೆ.

ನ್ಯಾಯಸೂತ್ರಕಾರರು ಹೇಳುತ್ತಾರೆ- ತತ್‌ಪೂರ್ವಕಮನುಮಾನಂ ತ್ರಿವಿಧಂ, ತತ್‌ಪೂರ್ವಕವೆಂದರೆ-ಪ್ರತ್ಯಕ್ಷಪೂರ್ವಕಂ. ಪೂರ್ವವತ್ - ಶೇಷವತ್ – ಸಾಮಾನ್ಯತೋದೃಷ್ಟಂ. ಈ ಮೂರು ಅನುಮಾನಗಳೂ ಪ್ರತ್ಯಕ್ಷಪೂರ್ವಕಗಳೇ.

ಪರಮಾತ್ಮನ ಪೂರ್ಣತೆಗೆ. ಉಪಮಾನವು ಪ್ರಪಂಚದಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಥಾಪತ್ತಿ-ಅನುಪಲಬ್ಧಿಗಳು ಅನುಮಾನದ ಅವಾಂತರಭೇದಗಳಷ್ಟೆ.

ಈಶ್ವರನು ಐತಿಹಾಸಿಕ-ಭೌಗೋಳಿಕ ಒಂದು ವಸ್ತುವಲ್ಲ. ಆವನನ್ನು ಒಂದು ಕಾಲ-ಒಂದು ದೇಶದಲ್ಲಿ ನಾವು ನೋಡಲಾರೆವು, ತಿಳಿಯಲಾರೆವು. ಇಂದ್ರಿಯಗಳು ಈಶ್ವರಸಾಕ್ಷಾತ್ಕಾರವನ್ನು ಮಾಡಿಸಲಾರವು. ಈಶ್ವರನ ಪ್ರಾಪ್ತಿಗೆ ಶ್ರವಣವೇ ಸಾಧನವು.

ಶ್ರವಣದಿಂದಲೇ ಈಶ್ವರನು ಹೃದಯದಲ್ಲಿ ಪ್ರಕಟನಾಗುತ್ತಾನೆ.

ಇಂದ್ರಿಯಾತೀತವಸ್ತುವಿನ ಜ್ಞಾನಕ್ಕೆ ಶ್ರದ್ಧೆಯೂ ಅತಿಮುಖ್ಯವಾದುದು. ಮೊದಲು ಶ್ರದ್ಧಾವಂತನಾಗಬೇಕು.

"ಶ್ರದ್ಧಾವಿತ್ತೋಭೂತ್ವಾ ಆತ್ಮನ್ಯೇವ ಆತ್ಮಾನಂ ಪಶ್ಯೇತ್." ಶ್ರಧ್ಧಾವಂತನಾಗಿ ಪರಮಾತ್ಮಮಾರ್ಗದಲ್ಲಿ ಹೋಗಬೇಕು. ಸಾಕ್ಷಾತ್ಕಾರವಾದ ಮೇಲೆ ಆವಶ್ಯಕತೆಯಿಲ್ಲವು.

ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿಧಿಧ್ಯಾಸಿತವ್ಯಃ

ಪರಮಾತ್ಮಪ್ರಾಪ್ತಿಗೆ ಶ್ರವಣಮಾಡಬೇಕು. ಬಹಳ ಮಂದಿ ಕೇಳುತ್ತಾರೆ. ಆದರೆ ಗ್ರಹಿಸುವುದಿಲ್ಲ. ಇದರಿಂದ ಶ್ರವಣಕ್ಕೆ ಮೊದಲು ಮತ್ತೊಂದರ ಆವಶ್ಯಕತೆಯಿದೆಯೆಂದು ತೋರುತ್ತದೆ. ಮೊದಲು ನಾವು ಹೊಂದಬೇಕಾಗಿರುವುದನ್ನು ಯಥಾಶಕ್ತಿ ಧ್ಯಾನಿಸಬೇಕು. ಧ್ಯಾನದಿಂದ ಹೃದಯವು ನಿರ್ಮಲವಾಗುವುದು. ನಮ್ಮ ಮನೋವೃತ್ತಿಯು ಧ್ಯೇಯದ ಕಡೆಗೆ ಪ್ರವಹಿಸುತ್ತದೆ. ಹೃದಯದಲ್ಲಿ ಮತ್ತೊಂದು ಪದಾರ್ಥವಿರುವುದಿಲ್ಲ.

ಇದನ್ನೇ ತಿಳಿದವರು ನಿರ್ಮಲತಾಹೃತ್ಪ್ರಸಾದವೆಂದು ಕರೆಯುತ್ತಾರೆ.

"ನಿರ್ಮಲತಾ" ಎಂದರೆ ಹೃದಯದ ಪ್ರಸನ್ನತೆ. ಮಾನಸವೆಂದರೆ ಪಮಾತ್ಮವಿಷಯಕಚಿಂತನ. ಧ್ಯಾನದಿಂದಲೇ ಇವೆರಡೂ ಸಿದ್ಧಿಸುತ್ತವೆ. ಹೃದ

Sri Vidyabharathi Book Centre, Sringeri

CC-O. In Public Domain. Digitized by eGangotri

ದುವು ನಿರ್ಮೂಲವಾಗಿ ಚಿಂತನವು ಪ್ರಾರಂಭವಾದರೆ ಶ್ರವಣವು ತತ್ಕಾಲ ದಲ್ಲಿಯೇ ಫಲವನ್ನು ಕೊಡುತ್ತದೆ. ಪ್ರತಿಬಂಧ-ಸಂಶಯ-ವಿಪರ್ಯಯಗಳಿಂದ ರಹಿತವಾದ ಶ್ರವಣವು ಕಾರ್ಯಸಿದ್ಧಿಯನ್ನುಂಟು ಮಾಡುತ್ತದೆ.

ಸಂಶಯರಹಿತನಾಗಲು ಭಾವರೂಪ ಶ್ರದ್ಧೆಯೂ ವಿಚಾರ ರೂಪ ಮನನವೂ ಆವಶ್ಯಕವು,

ವಿಪರ್ಯಯದಿಂದ ಮುಕ್ತನಾಗಲೂ ಭಾವರೂಪವಾದ ಆತ್ಮಾಕಾರ ವೃತ್ತಿಯೂ ಬೋಧವೂ ಆವಶ್ಯಕ.

ಶ್ರೀ ಶುಕದೇವರು ದ್ವಿತೀಯಸ್ಕಂಧದಲ್ಲಿ ಈ ಪ್ರಸಂಗಗಳನ್ನೇ ವಿವೇಚಿ ಸಿದ್ದಾರೆ. ಇದರಲ್ಲಿರುವ ಹತ್ತು ಅಧ್ಯಾಯಗಳಲ್ಲಿ ಮೊದಲಿನ ಎರಡು ಅಧ್ಯಾಯಗಳಲ್ಲಿ ಧ್ಯಾನವನ್ನೂ, ನಂತರ ಎರಡರಲ್ಲಿ ಹೃತ್ಪ್ರಸಾದವನ್ನೂ ಹಾಗೂ ವಕ್ತಾ-ಶ್ರೋತಾರರ ಶ್ರದ್ಧೆಯ ವರ್ಣನೆಯನ್ನೂ ಮಾಡಿದ್ದಾರೆ.

ಉಳಿಕೆ ಆರು ಅಧ್ಯಾಯಗಳಲ್ಲಿ ಮನನದ ವರ್ಣನೆಯಿದೆ. ಈ ಆರು ಅಧ್ಯಾಯಗಳ ಪೈಕಿ ಮೊದಲಿನ ಮೂರು ಅಧ್ಯಾಯಗಳಲ್ಲಿ ಉತ್ಪತ್ತಿದ್ವಾರಾ ವರ್ಣನೆಯೂ ಉಳಿಕೆ ಮೂರು ಅಧ್ಯಾಯಗಳಲ್ಲಿ ಉಪಪತ್ತಿದ್ವಾರಾ ವರ್ಣನೆಯೂ ಇದೆ.

ಉತ್ಪತ್ತಿ-ಎಂದರೆ ಸೃಷ್ಟಿಯ ಉತ್ಪತ್ತಿ.

ಉಪಪತ್ತಿ-ಎಂದರೆ ಯುಕ್ತಿ.

ಉತ್ಪತ್ತಿಯಲ್ಲಿ ಅನಿತ್ಯವಸ್ತುವಿನ ಜನನವಾಗುತ್ತದೆ. ಯಾವುದು ನಿತ್ಯ ಪರಿಚ್ಛಿನ್ನವಸ್ತುವೊ- ಅದರಲ್ಲಿ ಸಂಯೋಗವಾಗುತ್ತದೆ. ಹಾಗೂ ನಿತ್ಯ-ಅಪರಿ ಚ್ಛಿನ್ನ ವಸ್ತುವು ಪ್ರಕಟವಾಗುತ್ತದೆ.

ಉತ್ಪತ್ತಿಯು ಮೂರು ವಿಧವಾಗಿದೆ.

೧. ಜಗತ್ತಿನ ಪದಾರ್ಥಗಳು ಹುಟ್ಟುವುದು.
೨. ಜೀವ ಮೊದಲಾದ ಪದಾರ್ಥಗಳ ಸಂಯೋಗವಾಗುವುದು.
೩. ಆಗಾಗ್ಗೆ ಈಶ್ವರನ ಆವಿರ್ಭಾವವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂದರೇನಾಯಿತು ? **ಈಶ್ವರನ ಆವಿರ್ಭಾವ, ಜೀವ ದೇಹಾದಿಗಳ** ಸಂಯೋಗ, ದೇಹಾದಿ ಜಡವಸ್ತುಗಳ ಜನ್ಮ- ಈ ಮೂರರ ಬಗ್ಗೆ ವಿಚಾರಿಸ ಬೇಕು.

ಉಪಪತ್ತಿ-ಯುಕ್ತಿಯು ಮೂರು ವಿಧವಾಗಿರುತ್ತದೆ. ಈ ಮೂರರ ಮೂಲಕ ವಿಚಾರಮಾಡುವುದರ ಫಲವೆಂದರೆ ಪರಮಾತ್ಮನ ಹೊರತು ಮತ್ತೊಂದು ವಸ್ತುವಿಲ್ಲ ಎಂದು ತಿಳಿಯುವುದೇ ಆಗಿದೆ.

ಏತಾವದೇವ ಜಿಜ್ಞಾಸ್ಯಂ, ತತ್ತ್ವಂ ಜಿಜ್ಞಾಸುನಾತ್ಮನ :
ಅನ್ವಯ-ವ್ಯತಿರೇಕಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವದಾ

ಯಾವ ಪರವಸ್ತುವು ಅನ್ವಯ- ವ್ಯತಿರೇಕಗಳಿಂದ ಸರ್ವತ್ರ ಸರ್ವದಾ ಪರಿಪೂರ್ಣವಾಗಿದೆಯೊ ಅದರಿಂದಲೇ ಎಲ್ಲಾ ವಸ್ತುಗಳೂ ಪ್ರಕಾಶಿಸುತ್ತವೆ. **ತಸ್ಯ ಭಾಸಾ ಸರ್ವಮಿದಂ ವಿಭಾತಿ.** ಆ ಪ್ರಕಾಶವಿಲ್ಲದೇ ಯಾವುದೂ ಪ್ರಕಾಶಿಸುವುದಿಲ್ಲ, ಯಾವುದೂ ಪ್ರಕಾಶಿಸದಿದ್ದರೂ ಅದು ಪ್ರಕಾಶಿಸಿಯೆ ಪ್ರಕಾಶಿಸುತ್ತದೆ.

ಅನ್ವಯ–ವ್ಯತಿರೇಕಗಳಿಂದ, ಸರ್ವರೂಪದಲ್ಲಿ ಯಾವ ಆತ್ಮವಸ್ತುವಿನ ಜ್ಞಾನ ವಿದೆಯೋ ಆ ಜ್ಞಾನವಾಗುವುದೇ ಸಾಧನೆಯ ಫಲವು.

ಹೀಗೆ ಎರಡನೆಯ ಸ್ಕಂಧದ ಹತ್ತು ಅಧ್ಯಾಯಗಳಲ್ಲಿ ಧ್ಯಾನ-ಶ್ರದ್ಧಾ-ಶ್ರವಣ–ಮನನಗಳನ್ನು ನಿರೂಪಿಸುತ್ತಾ ಈ ಸಾಧನೆಗಳ ಮೂಲಕ ಭಗವಂತನನ್ನು ಪಡೆಯಬೇಕೆಂದು ಹೇಳುತ್ತಾರೆ.

ಮುಂದಿನ ಸ್ಕಂಧಗಳಲ್ಲಿ ಸರ್ಗ-ವಿಸರ್ಗಗಳ ವರ್ಣನೆಯು ಬರುವುದು. ಅದರಿಂದ ಶ್ರೀಶುಕದೇವರು ಮೊದಲು ಅಧಿಕಾರಸಾಧನೆಗಳನ್ನು ನಿರ್ಣಯಾತ್ಮಕವಾಗಿ ತಿಳಿಸುತ್ತಾರೆ. ಇನ್ನು ಅಧ್ಯಾಯಗಳ ಕ್ರಮಾನುಸಾರವಾಗಿ ವಿಷಯಗಳನ್ನು ಪರಿಶೀಲಿಸೋಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ

ಶ್ರೀ ಮದ್ಭಾಗವತ ದರ್ಶನ
ದ್ವಿತೀಯಸ್ಕಂಧ - ಅಧ್ಯಾಯ ೧

ಧ್ಯಾನವಿಧಿ - ಭಗವಂತನ ವಿರಾಡ್ರೂಪವರ್ಣನೆ.

ಓಂ ನಮೋ ಭಗವತೇ ವಾಸುದೇವಾಯ

ಶ್ರೀಶುಕದೇವರು ಪರೀಕ್ಷಿತನೊಡನೆ ಹೇಳುತ್ತಾರೆ -
ರಾಜನ್ ! ನೀನು ಲೋಕಹಿತದೃಷ್ಟಿಯಿಂದ ಮಾಡಿರುವ ಪ್ರಶ್ನೆಯು ಬಹಳ ಉತ್ತಮವಾದುದು. ನೀನು-ರಾಜಾ ರಂಜನಾದ್ಪ್ರಜಾ, ನೃಪನು-ನೄನ್ ಪಾತೀತಿ ನೃಪ ಃ ಜನತಾರಕ್ಷಕನೆಂದರ್ಥವು.

ಮನುಷ್ಯರು ಎಷ್ಟನ್ನು ಕೇಳುವರೊ, ಸ್ಮರಿಸುವರೊ, ಕೀರ್ತನ ಮಾಡುವರೊ- ಅವುಗಳೆಲ್ಲೆಲ್ಲಾ ಈ ಪ್ರಶ್ನೆಯು ಉತ್ತಮವಾದುದು. ಆತ್ಮ ಜ್ಞಾನಿಗಳು ಇಂತಹ ಪ್ರಶ್ನೆಗಳನ್ನು ಆದರಿಸುತ್ತಾರೆ ವರಿಯಾನ್ - ಎಂಬ ಪದಕ್ಕೆ ಗಾಯತ್ರೀಮಂತ್ರದಲ್ಲಿರುವ ವರೇಣ್ಯಶಬ್ದಕ್ಕೆ ಯಾವ ಅರ್ಥವೋ ಅದೇ ಅರ್ಥವು.

ಈ ಪ್ರಶ್ನೆಯೂ ವರೇಣ್ಯ-ಕೇಳಬೇಕಾದವುಗಳಲ್ಲಿ ಶ್ರೇಷ್ಠವಾದುದು.

ರಾಜೇಂದ್ರ ! ಗೃಹಸ್ಥರು ಸಾಂಸಾರಿಕ ಕೆಲಸ-ಕಾರ್ಯಗಳಲ್ಲಿ ತತ್ಪರರಾಗಿರುತ್ತಾರೆ. ಸ್ವರೂಪಜ್ಞಾನಾನಭಿಜ್ಞರಾಗಿರುತ್ತಾರೆ. ಅವರಿಗೆ ಸಾವಿರಾರು ವಿಚಾರಗಳು ಹೇಳಲೂ ಕೇಳಲೂ ಯೋಚಿಸಲೂ ಇರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಆಯುಷ್ಯವೆಲ್ಲವೂ ಹೀಗೆಯೆ ಕಳೆಯುತ್ತದೆ. ರಾತ್ರಿಯಾಯಿತೆಂದರೆ: ನಿದ್ರೆ-ಸ್ತ್ರೀಸುಖಗಳಲ್ಲಿ ಕಾಲವನ್ನು ಕಳೆಯುತ್ತಾರೆ.

ಹಗಲಲ್ಲಿ ಹಣ-ಹಣ, ಹಣದ ಚಿಂತೆ ಹಾಗೂ ಕುಟುಂಬದ ಭರಣ ಪೋಷಣಗಳಲ್ಲಿ ಕಳೆಯುತ್ತಾರೆ.

ಸಾಂಸಾರಿಕರು ದೇಹವನ್ನೂ ಸ್ತ್ರೀ-ಪುತ್ರರನ್ನೂ ಅತ್ಯಂತಘನಿಷ್ಠ ಸಂಬಂಧಿಗಳೆಂದು ತಿಳಿಯುತ್ತಾರೆ. ಇವುಗಳು ಅಸತ್ತುಗಳು. ವಸ್ತುತಃ ಇಲ್ಲದೇ ತೋರುತ್ತಿವೆ. ಅವರ ಮೋಹದಲ್ಲಿ ಮನುಷ್ಯನು ಹುಚ್ಚನಂತಾಗುತ್ತಾನೆ. ಕ್ಷಣೇ-ಕ್ಷಣೇ ಲೋಕವು ಮೃತ್ಯುವಶವಾಗುತ್ತಿದ್ದರೂ ಪಾಠವನ್ನು ಕಲಿಯುವುದೇ ಇಲ್ಲ, ಎಚ್ಚರಿಕೆ ವಹಿಸುವುದೇ ಇಲ್ಲ. ತನ್ನ ಮೃತ್ಯುವನ್ನು ಮರೆತು ಕುಳಿತುಕೊಳ್ಳುತ್ತಾನೆ ಮುಂದಿನ ಕ್ಷಣದಲ್ಲಿಯೆ ಬರುವ ತನ್ನ ಮೃತ್ಯುವನ್ನು ತಿಳಿಯಲಾರ. ಇನ್ನೂ ಸಹಸ್ರಾಬ್ದಗಳು ಬದುಕಿರುತ್ತೇನೆಂದೇ ತಿಳಿಯುತ್ತಾನೆ. ಆದರಿಂದ ಯಾರು ಅಭಯಪದವನ್ನು ಪಡೆಯಲಿಚ್ಛಿಸುವರೊ ಅವರು ಸರ್ವಾತ್ಮರು, ಸರ್ವಶಕ್ತಿಮಾನ್ ಭಗವಂತನ ಶ್ರೀ ಲೀಲಾವಿಭೂತಿಗಳನ್ನು ಶ್ರವಣ ಮಾಡಬೇಕು - ಸ್ಮರಿಸಬೇಕು. ಕೀರ್ತನ ಮಾಡಬೇಕು.

ಮನುಷ್ಯಜನ್ಮದ ಪರಮಲಾಭವೆಂದರೆ - ಜ್ಞಾನದಿಂದ, ಭಕ್ತಿಯಿಂದ, ಧರ್ಮನಿಷ್ಠೆಯಿಂದ, ಮರಣಕಾಲದಲ್ಲಿ ಭಗವಂತನ ಸ್ಮರಣೆಯು ತಪ್ಪದಿರುವಂತೆ ಮಾಡಿಕೊಳ್ಳಬೇಕು.

ಜನ್ಮಲಾಭಃ ಪರಃ ಪುಸಾಂ ಅಂತೇ ನಾರಾಯಣಸ್ಮೃತಿಃ
ಎಂದು ಹೇಳುತ್ತಾರೆ.

ವಸ್ತುತಃ ಆತ್ಮನು ಅಜರನು, ಅಮರನು, ಅವನು ಸಾಯುವವನೂ ಅಲ್ಲ; ಹುಟ್ಟುವವನೂ ಅಲ್ಲ,

'ಅಹಂ' ಪದದ ಮುಖ್ಯಾರ್ಥವೇ ಆತ್ಮನು. ಈ ಅಹಾಂಭಾವವು

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹದಲ್ಲಿ ಮೂಡಿದೆ. ಆತ್ಮನ ಅಮರತೆಯು ದೇಹದಲ್ಲಿ ಆರೋಪಿಸಲ್ಪಟ್ಟಿರುವುದರಿಂದ ಜನರಿಗೆ ಅವರ ಮರಣವು ತೋರುವುದಿಲ್ಲ.

ದೇಹದಿಂದ ಆತ್ಮನು ಬೇರೆ ಎಂದು ತಿಳಿದಾಗ - ಎಂದಿದ್ದರೂ ದೇಹವು ಹೋಗುವುದೇ, ಆತ್ಮನು ಹೋಗುವುದಿಲ್ಲ. ಆತ್ಮಸ್ವರೂಪಿಯು ನಾನು ಎಂದು ತಿಳಿಯುತ್ತಾನೆ.

ಆದರಿಂದ ಸರ್ವಶಕ್ತಿಮಾನ್ ಶ್ರೀ ಹರಿಯ ಗುಣಕಥಾಶ್ರವಣವನ್ನು ಮಾಡುತ್ತಿರಬೇಕು.

ಶ್ರವಣದೊಡನೆ ಕೀರ್ತನೆಯನ್ನೂ ಮಾಡಬೇಕು. ಜೀವನದ ಅಂತಿಮ ಘಳಿಗೆಯಲ್ಲಿ ನಾರಾಯಣಸ್ಮರಣೆಯಾಗಬೇಕು. ಇದೇ ಸಾಧನೆಯ ಮಹಾ ಫಲವೆಂದು ಧರ್ಮ-ಸಾಂಖ್ಯ-ಯೋಗ ಸಿಧ್ಧಾಂತಗಳು ತಿಳಿಸುತ್ತವೆ. ಸರ್ವವಿಧಿ ನಿಷೇಧರಹಿತರಾದ ನಿರ್ಗುಣ ಬ್ರಹ್ಮೋಪಾಸಕರಾದ ಮಹಾಪುರುಷರೂ ಸಹ ಭಗವಂತನ ಗುಣಾನುಕಥನಗಳಲ್ಲಿ ಆಸಕ್ತರಾಗಿರುತ್ತಾರೆ.

ಯೋಗಿಗಳು ಸಾಂಖ್ಯರ ಅಭಿಪ್ರಾಯದಂತೆ ಗುಣಗಳೆಲ್ಲವೂ ಪ್ರಕೃತಿಗೆ ಸಂಬಂಧಪಟ್ಟವು. ಆತ್ಮನು ನಿರ್ಗುಣನು.

ಮಹಾತ್ಮರುಗಳು ಹೇಳುತ್ತಾರೆ - ಆತ್ಮನೇನೋ ನಿರ್ಗುಣನು ಆದರೆ ಗುಣಗಳು ಪರಮೇಶ್ವರನಿಗೆ ಸಂಬಂಧಪಟ್ಟವು.
ಶುಕರು ಹೇಳುತ್ತಾರೆ ;

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಂಮಿತಮ್। ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಮ್॥

ಶ್ರೀ ಮಧ್ಭಾಗವತವು ಸಾಕ್ಷಾದ್ವೇದ ಸ್ವರೂಪವು. ಇದನ್ನು ನಾನು ದ್ವಾಪರಾಂತ್ಯದಲ್ಲಿ ದ್ವೈತಪಾಯನರಿಂದ ಶ್ರವಣಮಾಡಿದೆನು. ಶ್ಲೋಕದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರುವ ದ್ವಾಪರಾದೌ- ಶಬ್ದಕ್ಕೆ ದ್ವಾಪರಾಂತ್ಯವೆಂದು ಅರ್ಥವು. ದ್ವಾಪರಃ ಆದಿಃ ಯಸ್ಯಸ: ದ್ವಾಪರಾದಿಃ ಕಲಿಯುಗಃ ದ್ವಾಪರಸ್ಯ- ಆದಿಃ ಎಂದು ಸಮಾಸವನ್ನು ಮಾಡಬಾರದು. ಶ್ರೀಮದ್ಭಾಗವತಪುರಾಣವು ಭಗವದ್ರೂಪವೇ ಆಗಿದೆ. ನಾನು ಯದ್ಯಪಿ ನಿರ್ಗುಣೋಪಾಸಕನು. ಆದರೂ ಶ್ರೀ ಕೃಷ್ಣನ ಲೀಲಾಮಾಧುರ್ಯದಿಂದ ನನ್ನ ಮನಸ್ಸು ಆಕರ್ಷಿಸಲ್ಪಟ್ಟಿತು. ಆತ್ಮನಿಷ್ಠರಾದ ಮಹಾತ್ಮರು ನಿಸ್ಸಂಕೋಚವಾಗಿ ಹೇಳುತ್ತಾರೆ. ನಮ್ಮ ಮನಸ್ಸು ಆತ್ಮನಿಷ್ಠೆಯನ್ನು ಬಿಡುವ ಭಗವಂತನ ಗುಣಾನು ವರ್ಣನೆಗೆ ತೊಡಗಿಬಿಟ್ಟಿತು. ಭಗವದ್ಗುಣಾನುವಾದದಲ್ಲಿ ತೊಡಗಿದ ಯಾವ ನಿರ್ಗುಣೀ ಮಹಾತ್ಮನೂ ನಾನು ಆತ್ಮನಿಷ್ಠೆಯಿಂದ ಚ್ಯುತನಾಗಿಬಿಟ್ಟೆ ಎಂದು ಮರುಗುವುದಿಲ್ಲ.

ರಾಜನ್! ನೀನು ಭಗವಂತನ ಪರಮಭಕ್ತನು. ನಿನಗೆ ನಾನು ಶ್ರೀಮದ್ಭಾಗವತಮಹಾಪುರಾಣದ ಶ್ರವಣವನ್ನು ಮಾಡಿಸುತ್ತೇನೆ.

ಶ್ರದ್ಧಾಳುಗಳಾದವರ ಚಿತ್ತವೃತ್ತಿಯು ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಲೀನವಾಗುತ್ತದೆ. ಪತಿವ್ರತಾಸ್ತ್ರೀಯು ತನ್ನ ಪತಿಯೊಡನೆ ಸೇರೆಯಾಗುವಂತೆ ನಮ್ಮ ಮತಿಯು ಮುಕುಂದನೊಡನೆ ಸೇರೆಯಾಗಬೇಕು. ಭಗವಂತನ ಗುಣಾನುಕೀರ್ತನವು ವೈರಾಗಿಗಳಿಗೆ ಲೌಕಿಕಕಾಮನೆಯಿರುವವರಿಗೆ ತತ್ತ್ವಜ್ಞಾನಿಗಳಿಗೆ ಎಲ್ಲರಿಗೂ ಶ್ರೇಷ್ಠವಾದುದು

'ಹರೇರ್ನಾಮಾನುಕೀರ್ತನಂ' ಎಂದು ಹೇಳುತ್ತಾರೆ ಇದರ ಅಭಿಪ್ರಾಯವೇನೆಂದರೆ – ಕೀರ್ತನೆಯು ಅನುಕೀರ್ತನೆಯಾಗಬೇಕು. ಎಂದರೆ - ಮಹಾತ್ಮರು ಮಾಡುವ ಕೀರ್ತನೆಗೆ ಅನುಗುಣವಾಗಿ ಕೀರ್ತನೆ ಮಾಡಬೇಕು,

ನಾವು ನಮ್ಮ ನಮ್ಮ ಹೊಸ-ಹೊಸ ಪದ್ಧತಿಗಳನ್ನು ಅನುಸರಿಸ ತೊಡಗಿದರೆ ಭಗವಂತನು ಕಣ್ಮರೆಯಾಗುತ್ತಾನೆ, ಅಹಂಕಾರದ ಪ್ರವೇಶವಾಗುವುದು.

ಋಷಿ-ಮುನಿಗಳ ಮಾರ್ಗವನ್ನನುಸರಿಸಿ ಕೀರ್ತನಮಾಡಬೇಕು. ಈ ಪದ್ಧತಿಯು ಶ್ರೇಷ್ಠವಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದರಿಂದ ಅಹಂಕಾರದ ವೃದ್ಧಿಯಾಗುವುದಿಲ್ಲ. ವ್ಯರ್ಥವಾಗಿ ಎಷ್ಟೋ ಕಾಲಗಳನ್ನು ಕಳೆದಾಯಿತು, ಕಳೆಯುತ್ತಲೂ ಇದ್ದೇವೆ. ಜೀವನದಲ್ಲಿ ಉಳಿದಿರುವ ಅಲ್ಪ-ಸ್ವಲ್ಪ ಕಾಲವನ್ನಾದರೂ ಭಗವಂತನ ಗುಣಾನು ಕೀರ್ತನೆಯಲ್ಲಿ ಕಳೆಯೋಣ.

ರಾಜಾಖಟ್ವಾಂಗನು ತನ್ನ ಜೀವನದಲ್ಲಿ ಕೇವಲ ಎರಡು ಮುಹೂರ್ತಗಳಿವೆಯೆಂದು ತಿಳಿದು, ಆಗಲೇ ಸರ್ವತ್ಯಾಗಿಯಾಗಿ ಭಗವಂತನ ಅಭಯದಾಯಕ ಪದವನ್ನು ಸೇರಿದನು.

ಶ್ರೀ ಶುಕದೇವರು ಹೇಳುತ್ತಾರೆ-ರಾಜನ್ ನಿನ್ನ ಜೀವನದ ಅವಧಿಯು ಇನ್ನೂ ಏಳು ದಿವಸಗಳಿವೆ. ಬೇಕಾದಷ್ಟನ್ನು ಸಾಧಿಸಬಹುದು.

ಆಸನ್ನ ಮರಣಕಾಲದಲ್ಲಿ ಏನೇನು ಮಾಡಬೇಕಾಗಿದೆಯೊ ಎಲ್ಲವನ್ನೂ ಮಾಡಿಬಿಡು.

ಮೂರ್ಖರು ಮರಣಾನಂತರ ಏನಾಗುವುದೆಂಬುವುದನ್ನು ತಿಳಿಯಲಾರರು ಜ್ಞಾನಿಗಳು ತಿಳಿದುಕೊಂಡಿರುತ್ತಾರೆ. ನೀನು ನಿರ್ಭಯನಾಗಿರು.

ಮರಣಾನಂತರ ಪ್ರಾಪ್ತವಾಗುವ ದುರ್ಗತಿಯ ಬಗ್ಗೆ ವೃಥಾ ಚಿಂತಿಸಬೇಡ. ಮರಣಕಾಲದಲ್ಲಿ ಮನುಷ್ಯನು ಹೆದರಬಾರದು. ವೈರಾಗ್ಯವೆಂಬ ಶಸ್ತ್ರದಿಂದ ಶಾರೀರಿಕ ಮಮತೆಯನ್ನು ಛೇದಿಸಬೇಕು.

ಜನಗಳ ಮೇಲೆ ಮೂಡಿರುವ ಆಸಕ್ತಿಯನ್ನು ದೂರಮಾಡಬೇಕು. ಯಾರು ಮರಣ ಹೊಂದಿದರೂ ಯಾರ ಕೆಲಸ ಕಾರ್ಯಗಳೂ ನಿಂತು ಹೋಗುವುದಿಲ್ಲ.

ಪೃಥು - ಮಾಂಧಾತಾದಿ ಮಹಾ ಪುರುಷರುಗಳು ಅಂತರ್ಧಾನ ಹೊಂದಿದರು. ಸೃಷ್ಟಿಯು ಮುಂದುವರಿಯುತ್ತಲೇ ಇದೆ. ಮರಣಾಸನ್ನ ಮನುಷ್ಯನು ಧೈರ್ಯವಾಗಿ ನದಿಗೆ ಹೋಗಿ ಸ್ನಾನಮಾಡಬೇಕು. ಪವಿತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ಏಕಾಂತ ಸ್ಥಾನದಲ್ಲಿ ಆಸನಾರೂಢನಾಗಬೇಕು. ನಂತರ ಮನಸಾ ಪ್ರಣವ ಜಪವನ್ನು ಮಾಡಬೇಕು. ಪ್ರಾಣವಾಯುವನ್ನು ವಶಕ್ಕೆ ತೆಗೆದು ಕೊಂಡು ನಿಮಿಷಾರ್ಧವೂ ಪ್ರಣವವನ್ನು ಮರೆಯಬಾರದು. ಮನೋ ಬುದ್ಧಿಗಳ ಸಹಾಯದಿಂದ ಇಂದ್ರಿಯಗಳನ್ನು ವಿಷಯ ಪರಾಙ್ಮುಖಗಳನ್ನಾಗಿ ಮಾಡಬೇಕು.

ನಮ್ಮ ವಾಸನೆಗಳಿಂದ ಚಂಚಲವಾದ ಮನಸ್ಸನ್ನು ವಿಚಾರದಿಂದ ನಿಗ್ರಹಿಸಿ ಪರಮಾತ್ಮನಲ್ಲಿ ಲೀನಗೊಳಿಸಬೇಕು. ಪರಮಾತ್ಮನ ಒಂದೊಂದಂ ಗವನ್ನೇ ಧ್ಯಾನಿಸಬೇಕು. ಧ್ಯಾನಾವಸ್ಥೆಯಲ್ಲಿ ಮನಸ್ಸು ಮೂಢವಾಗುತ್ತದೆ ಅಥವಾ ವಿಕ್ಷಿಪ್ತವಾಗುತ್ತದೆ. ಆದರೆ ಇದರಿಂದ ಹೆದರಬಾರದು.

ಧೈರ್ಯವಾಗಿ ಯೋಗಧಾರಣೆಯಿಂದ ಅಧೀನಕ್ಕೆ ತೆಗೆದುಕೊಳ್ಳಬೇಕು. ಧಾರಣೆಯಿಂದ ಸರ್ವದೋಷಗಳೂ ನಿವಾರಣೆಯಾಗುತ್ತವೆ.

ಧಾರಣೆಯು ಸ್ಥಿರವಾದರೆ ಧ್ಯಾನದಲ್ಲಿ ಪರಮಾತ್ಮನ ದಿವ್ಯ ಮಂಗಳ ವಿಗ್ರಹದ ದರ್ಶನವಾಗುವುದು. ಆ ಮೇಲೆ ಭಕ್ತಿಯೋಗದ ಪ್ರಾಪ್ತಿ ಯಾಗುವುದು.

ಹೀಗೆ ಶುಕದೇವರು ಸಂಕ್ಷೇಪವಾಗಿ ಧ್ಯಾನ-ಧಾರಣೆಗಳನ್ನು ತಿಳಿಸಿದ್ದಾರೆ ಮಹಾತ್ಮರ ರೀತಿಯೆ ಹೀಗೆ – ಸಂಕ್ಷೇಪವಾಗಿ ಮೊದಲು ತಿಳಿಸಿ ಜಿಜ್ಞಾಸುವಿನ ಅಭಿಪ್ರಾಯವನ್ನು ತಿಳಿದುಕೊಂಡು ನಂತರ ವಿಸ್ತರಿಸಿ ಹೇಳುತ್ತಾರೆ.

ರಾಜಾ ಪರೀಕ್ಷಿತನು ಕೇಳಿದನು
ಪೂಜ್ಯರೇ- ಧಾರಣೆಯನ್ನು ಸಾಧಿಸುವುದು ಹೇಗೆ? ಯಾವ ವಸ್ತುವಿನಲ್ಲಿ ಯಾವ ರೀತಿಯಾಗುತ್ತದೆ? ಅದು ಹೇಗೆ ಸಾಧಕನ ಮನಸ್ಸಿನ ಕಶ್ಮಲವನ್ನು ದೂರಿಕರಿಸುತ್ತದೆ? ಶ್ರೀ ಶುಕರು ಹೇಳುತ್ತಾರೆ–ಮೊದಲು ಆಸನದ್ವಾರಾಶರೀ ರದಲ್ಲಿ ಸ್ಥಿರತೆಯು ಬರಬೇಕು. ಶ್ವಾಸವನ್ನು ಜಯಿಸಬೇಕು. ಇಂದ್ರಿಯ ಗಳನ್ನು ಅಧೀನಕ್ಕೆ ತೆಗೆದುಕೊಳ್ಳಬೇಕು. ಸರ್ವಾಸಕ್ತಿಯನ್ನು ತೊರೆದು ಮನಸ್ಸನ್ನು ಭಗವಂತನ ಸ್ಥೂಲರೂಪದಲ್ಲಿ ಸ್ಥಿರವಾಗಿರಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸ್ಥಿತಿಯಲ್ಲಿರಲು ಕೆಲವರು ಯೋಚಿಸುತ್ತಾರೆ.- ಮೊದಲು ಚೆನ್ನಾದ ಕುಟೀರವೊಂದನ್ನು ನಿರ್ಮಿಸಿಕೊಂಡು ನಂತರ ಭಗವಧ್ಯಾನವನ್ನು ಮಾಡೋಣ

ವೃಧ್ಧಾಪ್ಯದಲ್ಲಿ ಪೆನ್ಷನ್ನಿನ ವ್ಯವಸ್ಥೆಯಾಗಲಿ, ನಂತರ ಆಶ್ರಮವಾಸಿ ಯಾಗೋಣ. ಈ ಯೋಚನೆಗಳು ಮನಸ್ಸಿನಲ್ಲಿ ಮೂಡಿಬಿಟ್ಟರೆ ಈಶ್ವರನು ಕೈ ಬಿಟ್ಟುಹೋಗುತ್ತಾನೆ.

ಸಂಪೂರ್ಣ ವಿಶ್ವವೇ ಭಗವಂತನ ವಿರಾಟ ಶರೀರವು, ಇದರಲ್ಲಿಯೇ ತೋರುತ್ತಿರುವುದು. ಇಲ್ಲಿ ತೋರುವ ಸಮಸ್ತ ಸ್ಥೂಲ ಸೂಕ್ಷ್ಮ ಪ್ರಾಣಿಗಳೆಲ್ಲವೂ ಭಗವಂತನೇ, ಬ್ರಹ್ಮಾ, ವಿಷ್ಣು, ಮಹೇಶ್ವರ, ಋಷಿಮುನಿಗಳು, ಮಹಾಪುರುಷರೆಲ್ಲರೂ ವಿಶ್ವರೂಪೀ ಭಗವಂತನೇ.

"ಯತ್ರೇದಂ ದೃಶ್ಯತೇ ವಿಶ್ವಂ, ಭೂತಂ ಭವ್ಯಂ ಭವಚ್ಚಸತ್" ಸರ್ವಾಸಕ್ತಿಯನ್ನೂ ತೊರೆಯುವುದೆಂದರೆ ಶಯ್ಯಾ-ಭೋಜನ ವಸ್ತ್ರ ಇತ್ಯಾದಿ ಸರ್ವಾಸಕ್ತಿಗಳನ್ನೂ ತೊರೆದು ಭಗವಂತನ ಸ್ಥೂಲರೂಪವನ್ನು ಚಿಂತಿಸಬೇಕು.

ವಿರಾಟಪುರುಷನೇ ಧಾರಣೆಗೆ ಆಶ್ರಯನು. ಜಲ-ಅಗ್ನಿ-ವಾಯು ಆಕಾಶ-ಅಹಂಕಾರ-ಮಹತ್ತತ್ತ್ವ ಪ್ರಕೃತಿ ಇವು ಏಳೂ ವಿರಾಟಪುರುಷನ ಆವರಣಗಳು.

ತತ್ತ್ವಜ್ಞರು ಸಪ್ತಾವರಣಯುಕ್ತನಾದ ವಿರಾಟಪುರುಷನನ್ನು ಹೀಗೆ ವರ್ಣಿಸುತ್ತಾರೆ.

ಪಾತಾಳವು ಇವನ ಪಾದ ಮೂಲ

ಪಾರ್ಷ್ಣಿ - ಪ್ರಪದಗಳು - ರಸಾತಲ

ಗುಲ್ಫ ಪ್ರದೇಶಗಳು – ಮಹಾತಲ

ಜಂಘಾ ಪ್ರದೇಶಗಳು - ತಲಾತಲ

ಜಾನು ಪ್ರದೇಶಗಳು – ಸುತಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಊರುದ್ವಯುಗಳು – ಅತಲ-ವಿತಲ

ಜಘನಪ್ರದೇಶವು - ಮಹೀತಲ

ನಾಭಿಸರವು - ನಭಸ್ತಲ

ಅವನ ಉರ: ಸ್ಥಲವೇ ಸ್ವರ್ಗಲೋಕ

ಗ್ರೀವಾ ಪ್ರದೇಶವು - ಮಹರ್ಲೋಕ

ಮುಖವು - ಜನೋಲೋಕ

ಲಲಾಟವು - ತಪೋಲೋಕ

ಸಹಸ್ರಶೀರ್ಷನಾದ ಭಗವಂತನ ಶಿರೋಭಾಗವೇಸತ್ಯಲೋಕ. ಇಂದ್ರಾದಿ ದೇವತೆಗಳು ಅವನ ಭುಜಗಳು, ದಿಕ್ಕುಗಳು ಶ್ರೋತ್ರ, ಶ್ರವಣೇಂದ್ರಿಯವೇಶಬ್ದ ಎರಡು ನಾಸಿಕಾ ಛಿದ್ರಗಳೇ ಅಶ್ವಿನೀಕುಮಾರರು. ಘ್ರಾಣವೇ ಗಂಧವು, ಮುಖವೇ ಅಗ್ನಿ, ನೇತ್ರಗಳೇ ಅಂತರಿಕ್ಷ, ಸೂರ್ಯನೇ ದರ್ಶನಶಕ್ತಿ, ಹಗಲು ರಾತ್ರಿಗಳೆರಡೂ ಎರಡುರೆಪ್ಪೆಗಳು, ಭ್ರೂವಿಲಾಸವೇ ಬ್ರಹ್ಮಲೋಕವು. ತಾಲು-ಜಲವಾದರೆ ಜಿಹ್ವಾ-ರಸ. ವೇದಗಳು ಭಗವಂತನ ಬ್ರಹ್ಮರಂಧ್ರಗಳು ಯಮನು ಕೋರೆದಾಡೆ ಎಲ್ಲಾ ವಿಧದ ಸ್ನೇಹಗಳೂ ಹಲ್ಲುಗಳು ಅವನ ಮುಗುಳು ನಗೆಯೇ ಜಗನ್ಮೋಹಿನೀ ಮಾಯಾ.

ಈ ಅನಂತಸೃಷ್ಟಿಯು ಮಾಯೆಯ ಕಟಾಕ್ಷವಿಕ್ಷೇಪ. ಲಜ್ಜೆಯು ಮೇಲಿನತುಟಿ. ಲೋಭವು ಕೆಳಗಿನ ತುಟಿ. ಧರ್ಮವುಸ್ತನ-ಅಧರ್ಮವು ಬೆನ್ನು. ಪ್ರಜಾಪತಿಯು ಮೂತ್ರೇಂದ್ರಿಯ. ಮಿತ್ರಾವರುಣರು-ಅಂಡಕೋಶಗಳು. ಕುಕ್ಷಿಯು ಸಮುದ್ರ. ಪರ್ವತಗಳು ಮೂಳೆಗಳು. ನದಿಗಳು-ವಿಶ್ವಮೂರ್ತಿ ವಿರಾಟ್ ಪುರುಶನ ನಾಡಿಗಳು. ವೃಕ್ಷಗಳು-ರೋಮಗಳು. ಪ್ರಬಲವಾಯುವೇ ಶ್ವಾಸ, ಕಾಲವೇ ಚಲನೆ, ಗುಣಗಳೇ ಕರ್ಮ, ಮೇಘಗಳು ಕೇಶಗಳು ಸಂಧ್ಯೆಯು ಅವನ ವಸ್ತ್ರ, ಅವ್ಯಕ್ತಮೂಲ ಪ್ರಕೃತಿಯೆ ಅವನ ಹೃದಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ್ರನು ಅವನ ಮನಸ್ಸು ಮಹತ್ತತ್ವವು-ಭಗವಂತನ ಚಿತ್ತ. ರುದ್ರನು-ಅಹಂಕಾರ. ಕುದುರೆ–ಹೇಸರಕತ್ತೆ–ಒಂಟೆ–ಆನೆಗಳು ಅವನ ಉಗುರುಗಳು. ವನಸ್ಥಸರ್ವ ಪ್ರಾಣಿಗಳೂ ಅವನ ಕಟಿ ಪ್ರದೇಶದಲ್ಲಿವೆ, ಪಕ್ಷಿಗಳೆಲ್ಲವೂ ಅವನ ರಚನಾಕೌಶಲಗಳು ಸ್ವಾಯಂಭುವ ಮನುವು ಅವನ ಬುದ್ಧಿ· ಮನು ಪುತ್ರರಾದ ಮಾನವರು ಅವನ ನಿವಾಸಸ್ಥಾನ, ಗಂಧರ್ವಾದಿಗಳು ಅವನ ಸ್ವರಗಳು, ದೈತ್ಯರು ಅವನ ವೀರ್ಯ.

ಬ್ರಾಹ್ಮಣರು ಅವನ ಮುಖ - ಕ್ಷತ್ರಿಯರು-ಬಾಹುಗಳು ವೈಶ್ಯರು ತೊಡೆಗಳು. ಶೂದ್ರರು ವಿರಾಟಪುರುಷನ ಚರಣಗಳು, ವಿವಿಧ ದೇವತೆಗಳ ಹೆಸರಿನಿಂದ ನಡೆಸುವ ದ್ರವ್ಯಮಯ ಯಜ್ಞಗಳೆಲ್ಲವೂ ವಿರಾಟಪುರುಷನ ಕರ್ಮಗಳು. ಎಲೈರಾಜನೇ-ಇದು ವಿರಾಡ್ರೂಪೀ ಭಗವಂತನ ಸ್ಥೂಲ ಶರೀರದ ಸ್ವರೂಪವು

ಈ ಸ್ವರೂಪದಲ್ಲಿಯೇ ಮುಮುಕ್ಷು ಪುರುಷರು ಬುದ್ಧಿಯನ್ನು ಸ್ಥಿರಗೊಳಿಸುತ್ತಾರೆ.

ಯಾವರೀತಿ ಸ್ವಪ್ನದ್ರಷ್ಟಾ - ಸ್ವಪ್ನದಲ್ಲಿ ತನ್ನನ್ನೇ ವಿವಿಧರೂಪದಲ್ಲಿ ನೋಡುವನೊ ಅಂತೆಯೆ ಎಲ್ಲಾ ಬುದ್ಧಿ ವೃತ್ತಿಗಳ ಮೂಲಕವೂ, ಎಲ್ಲಾ ಅನುಭವವನ್ನು ಪಡೆಯುವವನು ಸರ್ವಾಂತರ್ಯಾಮಿ ಪರಮಾತ್ಮನೇ. ಆ ಸತ್ಯ ಸ್ವರೂಪೀ ಆನಂದನಿಧಿ ಭಗವಂತನನ್ನೇ ಸ್ಮರಿಸಬೇಕು. ಪದಾರ್ಥಾಂತರದಲ್ಲಿ ಆಸಕ್ತಿಯನ್ನಿಡಬಾಗದು. ಆ ಸಕ್ತಿಯು ಜೀವನ ಅಧ:ಪತನಕ್ಕೆ ಕಾರಣವು. ಚಿಕ್ಕದರಲ್ಲಿ ಮೂಡುವ ಆಸಕ್ತಿಯು ನಮ್ಮನ್ನು ಚಿಕ್ಕವರನ್ನಾಗಿಯೆ ಮಾಡುತ್ತದೆ.

ಓಂ ತತ್ಸದಿತ್ಯೇವಂ ದ್ವಿತೀಯಸ್ಕಂಧೇ ಪ್ರಥಮೋಧ್ಯಾಯ :

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತದರ್ಶನ ಸ್ಕಂಧ ೨ ಅ – ೨

ಓಂ ನಮೋ ಭಗವತೇ ವಾಸುದೇವಾಯ

ಕ್ರಮಮುಕ್ತಿ ಸದ್ಯೋಮುಕ್ತಿಗಳ ವರ್ಣನೆ.

ಶ್ರೀ ಶುಕದೇವರು ಹೇಳುತ್ತಾರೆ ಸೃಷ್ಟಿಯ ಪ್ರಾರಂಭದಲ್ಲಿ ಬ್ರಹ್ಮನು ಇದೇರೀತಿ ಧ್ಯಾನಮಾಡಿದನು.

ಪ್ರಳಯಕಾಲದಲ್ಲಿ ಪರಮಾತ್ಮ ಸ್ವರೂಪದಲ್ಲಿ ಸುಪ್ತವಾಗಿದ್ದ ಬ್ರಹ್ಮನ ಈ ಸ್ಮೃತಿಯು ಜಾಗೃತವಾಯಿತು. ನಂತರ ಅವನು ಅಮೋಘ ದೃಷ್ಟಿಯುಳ್ಳವನಾಗಿ ಈ ಸೃಷ್ಟಿಯನ್ನು ನಿರ್ಮಾಣ ಮಾಡಿದನು.

ಪಂಚ ಭೂತಗಳ ನಿರ್ಮಾಪಕನು ಹಿರಣ್ಯಗರ್ಭನು ಆದರೆ ಪಂಚ ಭೂತಗಳ ಒಳಗೆ ಇರುವ ಚಿಕ್ಕ-ಚಿಕ್ಕ ಬ್ರಹ್ಮಾಂಡಗಳಲ್ಲಿ ಕುಳಿತುಕೊಂಡು ಪ್ರಾಣಿಗಳ ಶರೀರ ನಿರ್ಮಾಪಕನೂ, ಹಾಗೂ ಮನುಷ್ಯ ಪಶು-ಪಕ್ಷಿಗಳ ನಿರ್ಮಾಪಕನೂ ಬ್ರಹ್ಮನು.

ಹಿರಣ್ಯಗರ್ಭನಿಂದ ಪಂಚಭೂತಗಳು ಹೊರಡುತ್ತವೆ. ಹಿರಣ್ಯಗರ್ಭನು ಈಶ್ವರನಿಂದ ಹೊರಡುತ್ತಾನೆ.

ಈಶ್ವರನು ಮಾಯೆಯಿಂದ ಪರಮ ಪುರುಷ ಪರಬ್ರಹ್ಮನಲ್ಲಿ ತೋರುತ್ತಾನೆ.

ಮನುಷ್ಯನ ಬುದ್ಧಿಯು ಸಾಂಸಾರಿಕ ವಿಚಾರಗಳನ್ನು ಕೇಳಿ–ಕೇಳಿ ಅಲ್ಲಿ-ಇಲ್ಲಿ ಪರಿ ಭ್ರಮಣ ಮಾಡುತ್ತದೆ.

ಪರಿ ಭ್ರಮಣೆಯಿಂದ ಅವನಿಗೇನೂ ಉಪಲಬ್ಧವಾಗುವುದಿಲ್ಲ.

ಅದರಿಂದ ವಿದ್ವಾಂಸರು ಆವಶ್ಯಕತೆಗನುಸಾರವಾಗಿ ನಾಮ-ರೂಪಾತ್ಮಕ ಪದಾರ್ಥಗಳೊಡನೆ ವ್ಯವಹಾರವನ್ನಿಟ್ಟುಕೊಳ್ಳಬೇಕು. ಶಬ್ದಜಾಲದಲ್ಲಿ ರೂಪ ಮೋಹದಲ್ಲಿ ಸಿಲುಕಿಕೊಳ್ಳಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಲಭವಾಗಿ ಪ್ರಾಪ್ತವಾಗುವ ಪದಾರ್ಥಗಳಿಗಾಗಿ ತಪಸ್ಸನ್ನಾಚರಿಸುವ ಆವಶ್ಯಕತೆಯಿಲ್ಲ.

ನಿದ್ರೆಯು ನೆಲದಮೇಲೂ ಬರುವುದಾದರೆ ಪಲಂಗಗಳನ್ನು ಜೋಡಿಸಿ ಕೊಳ್ಳುವ ಆವಶ್ಯಕತೆಯಿಲ್ಲ. ತೋಳುಗಳಿಂದ ದಿಂಬುಗಳ ಕೆಲಸವಾಗುವುದಾದರೆ ಬೇರೆ ದಿಂಬುಗಳ ಆವಶ್ಯಕತೆಯೇನಿದೆ? ಕೈ ಬೊಗಸೆಯಿಂದ ನೀರು ಕುಡಿಯಲು ಆಗುವಾಗ ವಿವಿಧ ಪಾತ್ರೆಗಳನ್ನೇಕೆ ಜೋಡಿಸಿಕೊಳ್ಳಬೇಕು? ಮರದ ತೊಗಟೆಗಳನ್ನು ಧರಿಸಿಕೊಂಡು ಅಥವಾ ಕಾಪೀನಧಾರಿಯಾಗಿಯೆ ಇರಬಹುದಾದಲ್ಲಿ ಬೆಲೆಬಾಳುವ ವಸ್ತ್ರಗಳೇಕೆ ಬೇಕು?

ಚೀರಾಣಿಕಿಂ ಪಥಿ ನಸಂತಿ ದಿಶಂತಿ ಭಿಕ್ಷಾಂ
ನೈವಾಂಘ್ರಿಪಾಃ ಪರಭೃತಃ ಸರಿತೊ ಪ್ಯಶುಶ್ಯನ್
ರುದ್ಧಾ ಗುಹಾಃ ಕಿಮಜಿತೋವತಿ ನೋಪಸನ್ನಾನ್
ಕಸ್ಮಾತ್ ಭಜಂತಿ ಕವಯೋ ಧನದುರ್ಮದಾಂಧಾನ್

ಈಶ್ಲೋಕದಲ್ಲಿ ಹಣಕ್ಕಾಗಿ ಸಾಹುಕಾರರನ್ನು-ಅಧಿಕಾರಿಗಳನ್ನೂ ಖಂಡಿಸುತ್ತಾ ಹೇಳುತ್ತಾರೆ.

ನಿಮಗೆ ಹೊದೆದು ಕೊಳ್ಳಲು ದಾರಿಯಲ್ಲಿ ಚಿಂದಿಬಟ್ಟೆಗಳು ಸಿಕ್ಕುವುದಿಲ್ಲವೆ? ನಿಮಗೆ ಹಸಿವಾದರೆ ಪರೋಪಕಾರಾರ್ಥವಾಗಿಯೆ ಜನ್ಮತಾಳಿರುವ ವೃಕ್ಷಗಳು ಫಲ-ಪುಷ್ಪಗಳ ಭಿಕ್ಷೆಯನ್ನು ಕೊಡುವುದಿಲ್ಲವೆ? ಬಾಯಾರಿದಾಗ ನೀರು ಕುಡಿಯಲು ಸರೋವರಗಳೆಲ್ಲವೂ ಒಣಗಿ ಹೋಗಿವೆಯೇನು?

ವಾಸಮಾಡಲು ಪರ್ವತಗುಹೆಗಳೆಲ್ಲವೂ ಮುಚ್ಚಿ ಹೋಗಿಬಿಟ್ಟವೇ?

ಏನೂ ಇಲ್ಲವೇ ಇಲ್ಲವೆಂದು ತಿಳಿಯೋಣ-ಆದರೆ ಶರಣಾಗತ ರಕ್ಷಕನಾದ ಭಗವಂತನೂ ಭಕ್ತರನ್ನು ಕಾಪಾಡಲು ಮರೆತು ಕುಳಿತಿರುವನೇ?

ಏತಕ್ಕಾಗಿ ಬುದ್ಧಿವಂತರೂ ಸಹ ಧನಮದದಿಂದ ಮದಿಸಿರುವ, ಕಪ್ಪು ವ್ಯಾಪಾರ, ನಂಬಿಕೆಯಲ್ಲಿ ದ್ರೋಹ ಮಾಡುವ, ಮತ್ತೊಬ್ಬರ ಅಧಿಕಾರಕ್ಕೆ ಆಸೆಪಡುವ ಸಮಾಜದಲ್ಲಿ ಧರ್ಮಾಲಂಕಾರ, ಧರ್ಮ ಧುರೀಣ, ಧರ್ಮಾಧು

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಧರ, ಎಂದು ಮೆರೆಯುವ ದುರ್ಮದಾಂಧರ ಸೇವೆಯನ್ನು ಸ್ತುತಿಯನ್ನೂ ಮಾಡಲಿಚ್ಛಿಸುತ್ತಾರೆ?

ಅವರು ಹೀಗೆ ಮಾಡಬಾರದು-ತಮ್ಮ ಹೃದಯದಲ್ಲಿಯೇ ನಿತ್ಯವಿರಾಜಮಾನ ನಾದ, ಸ್ವತಃ ಸಿಧ್ಧನಾದ, ಆತ್ಮಸ್ವರೂಪನಾದ, ಸರ್ವಪ್ರಿಯನೂ, ಸತ್ಯ ಸ್ವರೂಪಿಯೂ, ಆದ ಭಗವಂತನಿರುವನೆಂದು ತಿಳಿದುಕೊಂಡು ಅವನನ್ನೇ ಭಜಿಸಬೇಕು, ಧ್ಯಾನಿಸಬೇಕು. ಜನ್ಮಮೃತ್ಯು ಪ್ರವಾಹದಿಂದ ಮುಕ್ತನಾಗಿ ಅಜ್ಞಾನವನ್ನು ನಾಶಮಾಡಿಕೊಳ್ಳಬೇಕು.

ಪಶುಪ್ರಾಣಿಗಳ ವಿಚಾರವು ಬೇರೆ—ಮನುಷ್ಯರಾಗಿ, ಬುಧ್ಧಿವಂತರಾಗಿ, ಈ ಸಂಸಾರ ರೂಪವೈತರಣಿಯಲ್ಲಿ ಬಿದ್ದು ಕರ್ಮಜನ್ಯದುಃಖಗಳನ್ನು ಅನುಭವಿಸುತ್ತಾ, ಭಗವಂತನ ಮಂಗಳ ಮಯ ಚಿಂತನೆಯನ್ನು ಮಾಡದೆ, ಸಾಂಸಾರಿಕ ವಿಷಯ ಭೋಗಗಳಲ್ಲಿ ಲೀನರಾಗಿರುವುದು ಎಷ್ಟರಮಟ್ಟಿಗೂ ಸಲ್ಲದು.

ಸಾಧಕರು, ತಮ್ಮ ಹೃದಯಾಂತರಾಳದಲ್ಲಿ ವಿರಾಜಮಾನನಾದ, ಪ್ರಾದೇಶಮಾತ್ರದ ಪರಮ ಪುರುಷನನ್ನು ಚತುರ್ಭುಜನರೂಪದಲ್ಲ, ಪದ್ಮ-ಶಂಖ-ಚಕ್ರ-ಗದಾ-ಪಾಣಿಯರೂಪದಲ್ಲಿ ಧಾರಣಾವಿಧಿಯಿಂದ ಸ್ಮರಿಸುತ್ತಾರೆ.

ಹೃದಯಾಧಿಷ್ಠಿತ ಪರಮಾತ್ಮನು ಅಂಗುಷ್ಠ ಮಾತ್ರದವನೆಂದು ಹೇಳುತ್ತಾರೆ.

ಅಂಗುಷ್ಠಮಾತ್ರಃ ಪುರುಷಃ ಅಂಗುಷ್ಠಂಚಸಮಾಶ್ರಿತಃ ಎಂದು ಶ್ರುತಿಯು ಹೇಳುತ್ತದೆ.

ಈ ಅಂಗುಷ್ಠ ಮಾತ್ರ ಪುರುಶನ ಕಥೆಯು ಪುರಾಣೋಪನಿಷತ್ತುಗಳಲ್ಲಿ ಬರುತ್ತದೆ.

ಕಠೋಪನಿಷತ್ತಿನಲ್ಲಿ ಹೇಳುತ್ತಾರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿತಿಷ್ಠತಿ

ಹೃದಯಸ್ಥನಾದ ಅಂಗುಷ್ಠಮಾತ್ರ ಪುರುಷನ ಆಕಾರವು ಧ್ಯಾನಕ್ಕೋಸ್ಕರ ವಾಗಿದೆ. ಧ್ಯಾನವು ಹೀಗೆ ನಡೆಯುತ್ತದೆ. ಪರಮಾತ್ಮನು ಮುಗುಳು ನಗು ತ್ತಿದ್ದಾನೆ-ಪ್ರಸನ್ನನಾಗಿದ್ದಾನೆ. ಕಮಲದಂತೆ ಅವನ ಕಣ್ಣುಗಳು ಅರಳಿವೆ. ಕೇಸರೀ ಬಣ್ಣದ ವಸ್ತ್ರಗಳನ್ನು ಧರಿಸಿದ್ದಾನೆ. ಸರ್ವಾಲಂಕಾರ ಭೂಷಿತನಾಗಿ ದ್ದಾನೆ. ಮುಕುಟಾಲಂಕೃತ ಶಿರಸ್ಸು, ಕುಂಡಲ ಮಂಡಿತವಾದ ಕರ್ಣಗಳು, ಅವನ ವಕ್ಷಃಸ್ಥಳದಲ್ಲಿ ಲಕ್ಷ್ಮಿಯು ಶೋಭಿಸುತ್ತಿದ್ದಾಳೆ. ಕಂಠವು ಕೌಸ್ತು ಭಾಲಂಕೃತವಾಗಿದೆ.

ಬಾಡದಿರುವ ವನಮಾಲಿಕೆಯಿಂದ ವಕ್ಷಃಸ್ಥಳವು ಶೋಭಾಯಮಾನ ವಾಗಿದೆ. ಮಧ್ಯಭಾಗದಲ್ಲಿ ಮೇಖಲೆಯು ಶೋಭಿಸುತ್ತಿದೆ. ಅಂಗುಳಿಗಳಲ್ಲಿ ಚಿನ್ನದ ಉಂಗುರುಗಳು, ಚರಣಗಳಲ್ಲಿ ನೂಪುರಗಳು, ಕೈಗಳಲ್ಲಿ ಬಳೆಗಳು ಹೀಗೆ ಸರ್ವಾಲಂಕಾರ ಭೂಷಿತನಾದ ಭಗವಂತನನ್ನು ಪದೇ ಪದೇ ಧ್ಯಾನಿಸ ಬೇಕು. ಇದರಿಂದ ಮನಸ್ಸು ಏಕಾಗ್ರವಾಗುವುದು. ಸಂಪೂರ್ಣ ಭಕ್ತಿ ಯೋಗಕ್ಕೆ ಅಧಿಕಾರಿಯಾಗದಿರುವವರೆಗೆ ಸಾಧಕನು ಹೀಗೆ ಭಗವಂತನ ಸ್ಥೂಲ ರೂಪವನ್ನು ಚಿಂತಿಸುತ್ತಿರಬೇಕು.

ಆಧುನಿಕರಿಗೆ ಸಂದೇಹ - ನಮ್ಮ ಹೃದಯದಲ್ಲಿ ಭಗವಂತನೆಲ್ಲಿದ್ದಾನೆ ? ಭಗವಂತನಿಲ್ಲದಿದ್ದರೆ ಮತ್ತಾರಿರಬಹುದು ? ಅಂತೂ ಯಾರಾದರೂ ಇರಬೇಕ ಷ್ಟೆ? ಅವನು ಭಗವಂತನೆಂದೇ ತಾಳಿದರೆ ನಿಮಗೆ ನಷ್ಟವೇನು?

ಶ್ರೀ ಶುಕದೇವರು ಮುಂದುವರೆದು ಹೇಳುತ್ತಾರೆ - ಯೋಗಿಗಳು ಈ ಈ ದೇಹವನ್ನು ಬಿಡುವಾಗ ದೇಶ-ಕಾಲ ವಸ್ತುಗಳಲ್ಲಿ ಮನಸ್ಸನ್ನಿರಿಸಬಾರದು.

ಸ್ಥಿರಾಸನಾಸೀನನಾಗಿ ಕುಳಿತುಕೊಂಡು ಪ್ರಾಣಗಳನ್ನು ಗೆದ್ದು ಮನಸಾ ಇಂದ್ರಿಯಗಳನ್ನು ಸಂಯಮನ ಗೊಳಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನಸ್ಸನ್ನು ನಿರ್ಮಲ ಬುದ್ಧಿಯಿಂದ ಸಂಯಮಗೊಳಿಸಿ. ಮನಸ್ಸಿನೊಡನೆ ಬುದ್ಧಿಯನ್ನು ಕ್ಷೇತ್ರಜ್ಞನಲ್ಲಿ, ಕ್ಷೇತ್ರಜ್ಞನನ್ನು ಅಂತರಾತ್ಮನಲ್ಲಿ ಲೀನಗೊಳಿಸಬೇಕು. ಅಂತರಾತ್ಮನನ್ನೂ ಪರಮಾತ್ಮನಲ್ಲಿ ಲೀನಗೊಳಿಸಿ, ಧೀರ ಪುರುಷನಾದವನು ಆ ಶಾಂತಿದಾಯಕ ಅವಸ್ಥೆಯಲ್ಲಿರಬೇಕು. ಇಂತಹವನಿಗೆ ಯಾವ ಕರ್ತವ್ಯವೂ ಇರುವುದಿಲ್ಲ.

ಈ ಅವಸ್ಥೆಯಲ್ಲಿ ಯಾವ ಸತ್ವಾದಿಗುಣಗಳಾಗಲಿ ಅಹಂಕಾರ ತತ್ತ್ವ ಪ್ರಕೃತಿಯಾಗಲಿ ದೇಶ-ಕಾಲ ದೇವತಾಶಕ್ತಿಗಳಾಗಲಿ ಇರುವುದಿಲ್ಲ.

ಯೋಗಿಜನರು ನೇತಿ, ನೇತಿ ಎಂದು ಪರಮಾತ್ಮಭಿನ್ನಪದಾರ್ಥಗಳನ್ನು ತ್ಯಾಗಮಾಡಿ, ಶರೀರ ಹಾಗೂ ಶರೀರಸಂಬಂಧೀ ಪದಾರ್ಥಗಳಲ್ಲಿಯೂ ಆತ್ಮಬುದ್ಧಿಯನ್ನು ತ್ಯಜಿಸಿ ಹೃದಯದಿಂದ ಪರಮಾತ್ಮಾನಂದವನ್ನು ಅನುಭವಿಸುತ್ತಾ ಅನನ್ಯ ಪ್ರೇಮ ಪರಿಪೂರ್ಣರಾಗಿರುತ್ತಾರೆ "ಇದೇ ವೈಷ್ಣವ ಪದ"

ಪರಂಪದಂ ವೈಷ್ಣವ ಮಾಮನಂತಿ

ಇಲ್ಲಿ ಒುದು ವಿಚಾರವನ್ನು ವೈಷ್ಣವರೂ, ವೇದಾಂತಿಗಳೂ ಚೆನ್ನಾಗಿ ಗಮನಿಸಬೇಕು, ಇದು ವೈಷ್ಣವಪದ. "ಯನ್ನೇತಿನೇತೀತ್ಯತದುತ್ಸಿಸೃಕ್ಷವ : " ಇದಲ್ಲ-ಇದಲ್ಲ ಎಂದು ಅನಾತ್ಮವನ್ನು ನಿಷೇಧಿಸಿದಾಗ ಈ ವೈಷ್ಣವ ಪದದ ಪ್ರಾಪ್ತಿಯಾಗುವುದು. (ಅತತ್-ಆತ್ಮವ್ಯತಿರಿಕ್ತಂ) ಈ ಪರಮಪದವು ಶಬ್ದವೇ ತಿಳಿಸುವಂತೆ ಬಹಳ ವ್ಯಾಪಕವಾದುದು. ಅಂದರೇನಾಯಿತು? ವಾದ ವಿವಾದಗಳ ಭ್ರಮಣೆಯಲ್ಲಿ ಬೀಳಬಾರದು. ಮನಸಾದುರಾ ಗ್ರಹಗಳನ್ನು ದೂರೀಕರಿಸಿ ಪ್ರೇಮದಿಂದ ಭಗವಂತನ ಚರಣಾರವಿಂದಗಳನ್ನು ಧ್ಯಾನಮಾಡಬೇಕು. ವಿಜ್ಞಾನ ದೃಷ್ಟಿಯುಳ್ಳವನಾಗಬೇಕು. ಈ ರೀತಿಯ ಸಾಧನೆಯಿಂದ ಹೃದಯವು ಶುದ್ಧವಾಗುವುದು. ಅಂತಃ ಕರಣದ ವಾಸನೆಗಳು ನಷ್ಟವಾಗುವುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಚಿತ್ತವಾಸನೆಯು ನಷ್ಟವಾಗಿರುವ ಬ್ರಹ್ಮನಿಷ್ಠಯೋಗಿಯ ದೇಹ ತ್ಯಾಗದ ವಿಚಾರವನ್ನೇ ತಿಳಿಸುತ್ತಾರೆ.

ಬ್ರಹ್ಮ ನಿಷ್ಠಯತಿಯು ಸ್ಥಿರಾಸನದಲ್ಲಿ ಕುಳಿತು, ಪಾರ್ಷ್ಣಿಯಿಂದ ಗುದ ಸ್ಥಾನವನ್ನು ಒತ್ತಿ, ನಾಭಿಯ ಮೂಲಕ ಷಟ್ಚಕ್ರಗಳನ್ನು ಭೇದಿಸಿ (ಮೂಲಧಾರ-ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುಧ್ಧ ಆಜ್ಞಾ) ನೇತ್ರಾದಿ ಇಂದ್ರಿಯಗೋಳಕಗಳನ್ನು ಬಂಧಿಸಿ, ಬ್ರಹ್ಮರಂಧ್ರ ಭೇದನದ ಮೂಲಕ ದೇಹವನ್ನು ಪರಿತ್ಯಜಿಸಬೇಕು. ಇದು ಸದ್ಯೋಮುಕ್ತಿಯು.

ಕ್ರಮ ಮುಕ್ತಿಯು ಹೀಗಿದೆ

ಮುಕ್ತನಾಗುವುದೇನೋ ಸರಿ, ಒಂದು ಸಾರಿ ಬ್ರಹ್ಮಲೋಕಾದಿಗಳನ್ನು ತಿರುಗಿಕೊಂಡು ಬರೋಣವೆಂದು ಯೋಗಿಯು ಇಚ್ಛಿಸಬಹುದು.

ಮಹಾತ್ಮರು ಒಮ್ಮೊಮ್ಮೆ ಇಚ್ಛಿಸುವುದಿಲ್ಲವೇ ? ದೇಹವನ್ನು ಬಿಡು ವುದಂತೂ ಸರಿ, ಒಂದು ಸಾರಿ ಗಂಗಾತೀರದಲ್ಲಿ ಸಂಚರಿಸಿ ಬರೋಣ, ಗಂಗೋ ತ್ರಿಯಿಂದ ಗಂಗಾ ಸಾಗರದವರಗೂ ಹೋಗಿ ಬರೋಣ,

ಈ ರೀತಿಯಲ್ಲಿ ಯೋಗಿಯೂ ಇಚ್ಛಿಸಬಹುದು ಅಷ್ಟ ಸಿಧ್ಧಿಗಳನ್ನು ಪಡೆದು ಆಕಾಶ ಚಾರೀ ಸಿಧ್ಧರೊಡನೆ ಸಂಚರಿಸೋಣ, ತ್ರಿಗುಣಮಯ ಬ್ರಹ್ಮಾಂಡದಲ್ಲಿ ಸಂಚರಿಸೋಣ.

ಹೀಗೆ ಯೋಚಿಸಿದ ಯೋಗಿಯು, ಇಂದ್ರಿಯ ಮನಸ್ಸಗಳೊಡನೆ ಸ್ಥೂಲ ಶರೀರದಿಂದ ಬೇರ್ಪಡಬೇಕು. ಯೋಗಿಗಳ ಶರೀರವು ವಾಯುವಿನಂತೆ ಸೂಕ್ಷ್ಮವಾದುದು ಉಪಾಸನಾ, ಯೋಗ. ತಪಸ್ಸು, ಜ್ಞಾನ, ಮಾರ್ಗಗಳಲ್ಲಿ ಸಾಧನೆ ಮಾಡಿ ಸಿಧ್ಧರಾಗಿರುವವರಿಗೆ, ತ್ರಿಲೋಕಗಳ ಒಳಗೆ-ಹೊರಗೆ ಸರ್ವತ್ರ ಸ್ವಚ್ಛಂದ ರೂಪದಿಂದ ಸಂಚರಿಸುವ ಯೋಗ್ಯತೆಯು ಬಂದಿರುತ್ತದೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇವಲ ಕರ್ಮಾಚರಣೆಯಿಂದ ಇಂತಹ ಯೋಗ್ಯತೆಯನ್ನು ಹೊಂದಲು ಸಾಧ್ಯವಿಲ್ಲ.

ರಾಜನ್ - ಯೋಗಿಯು ಜ್ಯೋತಿರ್ಮಯವಾದ ಸುಷುಮ್ನಾಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗುವಾಗ ಮೊದಲು ಆಕಾಶ ಮಾರ್ಗದಿಂದ ಅಗ್ನಿ ಲೋಕಕ್ಕೆ ಹೋಗುತ್ತಾನೆ. ಅಲ್ಲಿ ಅವನ ಉಳಿದ ಅಲ್ಪ-ಸ್ವಲ್ಪ ಮಲವೂ ನಷ್ಟವಾಗುತ್ತದೆ.

ಅಲ್ಲಿಂದ ಮೇಲೆ ಭಗವಾನ್ ಶ್ರೀ ಹರಿಯು ಶಿಶುಮಾರ ಚಕ್ರಕ್ಕೆ ಹೋಗುತ್ತಾನೆ. ಇದು ವಿಷ್ಣುವಿನ ವಿಶ್ವ ಬ್ರಹ್ಮಾಂಡದ ಭ್ರಮಣ ಕೇಂದ್ರವು.

ಅದನ್ನು ಅತಿಕ್ರಮಿಸಿ ಅತ್ಯಂತ ಸೂಕ್ಷ್ಮವಾದ ನಿರ್ಮಲವಾದ ದೇಹದಿಂದ ಮಹರ್ಲೋಕಕ್ಕೆ ಹೋಗುತ್ತಾನೆ.

ಬ್ರಹ್ಮವಿದರೂ ಆ ಲೋಕವನ್ನು ನಮಸ್ಕರಿಸುತ್ತಾರೆ. ಅದರಲ್ಲಿ ಆಕಲ್ಪ ಪರ್ಯಂತರ ದೇವತೆಗಳು ವಿಹರಿಸುತ್ತಿರುತ್ತಾರೆ.

ಪ್ರಳಯವು ಸಮೀಪಿಸಿದಾಗ ಸಂಕರ್ಷಣನ ಮುಖಾಗ್ನಿಯಿಂದ ಕೆಳಗಿನ ಲೋಕಗಳು ದಗ್ಧವಾಗುವುದನ್ನು ನೋಡಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ಬ್ರಹ್ಮಲೋಕದಲ್ಲಿ ಮಹಾ-ಮಹಾ ಸಿದ್ಧೇಶ್ವರರು ವಿಮಾನಾರೂಢರಾಗಿ ವಿಹರಿಸುತ್ತಿರುತ್ತಾರೆ.

ಬ್ರಹ್ಮಲೋಕದ ಆಯುಷ್ಯವೂ ಬ್ರಹ್ಮನ ಆಯುಷ್ಯದಂತೆ ಎರಡು ಪರಾರ್ಧವು.

ಅಲ್ಲಿಯ ವೈಶಿಷ್ಟ್ಯವೆಂದರೆ ದು:ಖವಿಲ್ಲ ಶೋಕವಿಲ್ಲ. ಮುಪ್ಪಿಲ್ಲ, ಮರಣವಿಲ್ಲ. ಅಲ್ಲಿಯಾವ ವಿಧವಾದ ಉದ್ವೇಗ ಭಯಾದಿಗಳೂ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೂ ಅಲ್ಲಿ ಒಂದರ ದು:ಖವಿದೆ. ಒಂದೊಂದು ಬಾರಿ ಬ್ರಹ್ಮಲೋಕದಿಂದ ವಿಮಾನದ ಮೂಲಕ ಭೂಲೋಕವನ್ನು ಇಣಕಿ ನೋಡಿದಾಗ ಇಲ್ಲಿಯ ಜನರ ಭವಣೆಯನ್ನು ಕಂಡು, ಆ ಮಹಾತ್ಮಾ ಜ್ಞಾನಿಗಳ ಮನಸ್ಸೂ ದು:ಖದಿಂದ ಡೋಲಾಯಮಾನವಾಗುವುದು.

ಬ್ರಹ್ಮಲೋಕನಿವಾಸಿಗಳು, ಅಜ್ಞಾನದಿಂದ ಅತ್ಯಂತ ದು:ಖಿಗಳಾಗಿರುವ ಸಾಂಸಾರಿಕರನ್ನುನೋಡಿ, ಚಿತ್ತಕ್ಷೋಭೆಯನ್ನು ಹೊಂದಿ ದು:ಖಿಗಳಾಗುತ್ತಾರೆ.

ಯಾರಾದರೂ ತಮ್ಮನ್ನು ಹೊಡೆಯುತ್ತಿರುವರೊ ಎಂಬಂತೆ ಪೀಡಿತರಾಗುತ್ತಾರೆ.

ಅಜ್ಞಾನೀಬಾಲಕನು ಒಬ್ಬನಿಂದ ತಯಾರಿಸಲ್ಪಟ್ಟ ಬೊಂಬೆಯನ್ನು ಭೂತವೆಂದು ತಿಳಿದೊ, ಕಳ್ಳನೆಂದು ತಿಳಿದೊ ಕೂಗಾಡ ತೊಡಗಿದರೆ, ಅಳ ತೊಡಗಿದರೆ, ಅದು ಬೊಂಬೆಮಾತ್ರವೆಂದು ತಿಳಿದ ಮನುಷ್ಯನಿಗೆ ದು:ಖವಾಗುವುದಿಲ್ಲವೆ? ಕಷ್ಟವಾಗುವುದಿಲ್ಲವೇ?

ವಸ್ತುತ ; ಇಲ್ಲಿ ಭೂತವೂಇಲ್ಲ ಕಳ್ಳಕಾಕರೂ ಇಲ್ಲ. ಸುಮ್ಮನೆ ಈ ಬಾಲಕನು ಬೊಂಬೆಯನ್ನು ನೋಡಿ ಇಷ್ಟೊಂದು ಭಯಭೀತನಾಗಿದ್ದಾನಲ್ಲ ಎಂದು ಬ್ರಹ್ಮಲೋಕನಿವಾಸಿಗಳು ದು:ಖಿಗಳಾಗುತ್ತಾರೆ.

ವಸ್ತುತ ಃ ಮಾನವನು ಭಗವಂತನ ಮಧ್ಯೆ ಇದ್ದಾನೆ. ಆದರೇನು ಅವರು ಅವನನ್ನು ಗುರುತಿಸಿಲ್ಲ.

ಜಗತ್ ಪರಮಾತ್ಮರಲ್ಲಿ ಭೇದವಿಷ್ಟೆ–ನಾವು ಜಗತ್ತನ್ನೇ ನೋಡುತ್ತೇವೆ ಭಗವಂತನನ್ನು ನೋಡುವುದೇಇಲ್ಲ. ಜಗತ್ತನ್ನು ಪರಮಾತ್ಮನನ್ನಾಗಿ ನೋಡತೊಡಗಿದರೆ ಜಗತ್ತು ಜಗತ್ತಾಗಿ ಉಳಿಯದೇ ಪರಮಾತ್ಮನಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾತ್ಮರು - ಬ್ರಹ್ಮಲೋಕ ನಿವಾಸಿಗಳು ಸಾಂಸಾರಿಕರ ಈ ವರ್ತನೆ ಯಿಂದ ದು:ಖಿಗಳಾಗಿ ನಾವು ಇಲ್ಲಿಗೆ ಬಂದುದು ಸರಿಯಾಗಲಿಲ್ಲವೆಂದು ವ್ಯಾಕುಲರಾಗುತ್ತಾರೆ.

ಇದನ್ನು ಮತ್ತೊಂದು ರೀತಿಯಲ್ಲಿಯೂ ಹೇಳುತ್ತಾರೆ. ಬ್ರಹ್ಮಲೋಕ ನಿವಾಸಿಗಳು, ಪ್ರಾಪಂಚಿಕರ ದುಃಖದಿಂದ ದುಃಖಿಗಳಾಗಿ ಹೀಗೆ ಯೋಚಿಸು ತ್ತಾರೆ- ನಾವೇನೊ ಆವಾಗ ಹೇಳುತ್ತಿದ್ದೆವು, ಪರಮಾನಂದವು ಭೂಮಿಯಲ್ಲಿಲ್ಲ ಬ್ರಹ್ಮಲೋಕದಲ್ಲಿದೆ. ಪರಮೇಶ್ವರನನ್ನು ಪಡೆಯ ಬೇಕಾದರೆ **ಬಹೂನಾಂ ಜನ್ಮನಾಮಂತೇ** ಎಂದೂ ಹೇಳಿದ್ದೆವು. ಆದರೆ ಹಾಗೆ ಮಾಡು – ಹೀಗೆಬೇಡ ಎಂದು ವಿಧಿ ನೀಷೇಧಗಳನ್ನು ತಿಳಿಸಿದ್ದೆವು. ನಾವೇನೋ ಹಾಗೆ ಆಚರಿಸಿ ಬ್ರಹ್ಮಲೋಕಕ್ಕೆ ಬಂದೆವು. ಆದರೆ ಜನರ ಕಷ್ಟವು ದೂರವಾಗಲಿಲ್ಲ. ಬ್ರಹ್ಮ ಲೋಕದಲ್ಲಿಯಾದರೋ

ನಯತ್ರ ಶೋಕೋ ನಜರಾ ನಮೃತ್ಯು :
ನಾರ್ತಿರ್ನಚೋದ್ವೇಗಋತೇಕುತಶ್ಚಿತ್
ಯಚ್ಚಿತ್ತತೋದ: ಕೃಪಯಾನಿದಂವಿದಾಂ
ದುರಂತ ದು:ಖ ಪ್ರಭವಾನುದರ್ಶನಾತ್

ಶೋಕವಿಲ್ಲ-ಮುಪ್ಪಿಲ್ಲ-ಮರಣವಿಲ್ಲ - ದುಃಖವಿಲ್ಲ ಭಯವಿಲ್ಲ-ಸರ್ವ ದುಃಖಿಗಳಿಗೂ ಮೂಲವಾದ ಚಿತ್ತವಿದ್ದರೆ ತಾನೇ? ಹಾಗಾದರೆ ಅವರಿಗೇತರ ದುಃಖ? ಒಂದೇ ಒಂದು ವಿಚಾರದಲ್ಲಿ ದುಃಖಿಗಳಾಗಿದ್ದಾರೆ

ಅನಿದಂವಿದಾಂ ದುರಂತ ದುಃಖ ಪ್ರಭವಾನುದರ್ಶನಾತ್
ಭಗವಧ್ಯಾನವನ್ನು ತಿಳಿಯದೇ ಇರುವುದರಿಂದ ಸರ್ವದಾ ಸಾಂಸಾರಿಕರು ದುಃಖ ಪರಂಪರೆಗಳನ್ನು ಅನುಭವಿಸುತ್ತಿರುವರಲ್ಲಾ? ಎಂದು ದುಃಖಿಗಳಾ ಗಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮಲೋಕ ನಿವಾಸಿಗಳಿಗೆ ಮೂರು ವಿಧಗತಿಯನ್ನು ಹೇಳುತ್ತಾರೆ. ತಮ್ಮ ತಮ್ಮ ಪುಣ್ಯೋತ್ಕರ್ಷದಿಂದ ಹೋದವರು ಕಲ್ಪಾಂತರದಲ್ಲಿ ಪುಣ್ಯ ತಾರತಮ್ಯತೆಗನುಗುಣವಾಗಿ ಅಲ್ಲಿಯ ಅಧಿಕಾರಿಗಳಾಗುತ್ತಾರೆ.

2- ಹಿರಣ್ಯಗರ್ಭಾದ್ಯುಪಾಸನಾ ಬಲದಿಂದ ಹೋದವರು ಬ್ರಹ್ಮನೊಡನೇ ಅವರೂ ಮುಕ್ತರಾಗುತ್ತಾರೆ.

3- ಭಗವದುಪಾಸಕರಾದರೊ ಸ್ವೇಚ್ಛೆಯಿಂದ ಬ್ರಂಹ್ಮಾಂಡವನ್ನು ಭೇದಿಸಿ ವೈಷ್ಣವ ಪದವನ್ನು ಹೊಂದುತ್ತಾರೆ.

ಭಗವದು ಪಾಸಕನ ಬ್ರಹ್ಮಾಂಡ ಭೇದನ ಪ್ರಕಾರವು ಹೀಗಿದೆ,

ಈಶ್ವರಾಧಿಷ್ಠಿತ ಪ್ರಕೃತಿಯ ಅಂಶದಿಂದ ಮಹತ್ತತ್ತ್ವವುಂಟಾಗುತ್ತದೆ ಮಹತ್ತತ್ವದ ಅಂಶದಿಂದ ಅಹಂಕಾರವು ಅಹಂಕಾರಾಂಶದಿಂದ ಶಬ್ದತನ್ಮಾತ್ರೆಯೂ,

ಶಬ್ದತನ್ಮಾತ್ರೆಯಿಂದ- ನಭ : ತದಂಶದಿಂದ ಸ್ಪರ್ಶತನ್ಮಾತ್ರೆಯು, ಸ್ಪರ್ಶತನ್ಮಾತ್ರೆಯಿಂದ ವಾಯುವು, ತದಂಶದಿಂದ - ರೂಪತನ್ಮಾತ್ರೆಯು.

ರೂಪತನ್ಮಾತ್ರೆಯಿಂದ ತೇಜಸ್ಸು ತನ್ಮಾತ್ರಾಂಶದಿಂದ ರಸತನ್ಮಾತ್ರೆಯು ರಸತನ್ಮಾತ್ರೆಯಿಂದ ಆಪ: ತದಂಶದಿಂದ ಗಂಧತನ್ಮಾತ್ರೆಯು ಅದರ ಮೂಲಕ ಪೃಥಿವೀ.

ಇವುಗಳಿಂದ ಕೂಡಿರುವುದೇ ಚತುರ್ದಶ ಭುವನಾತ್ಮಕವಾದ, ಭಗವಂತನ ವಿಸ್ತೃತವಾದ ಪೃಥಿವಿಯೆ, ಅಂಡ ಕಟಾಹ ಶಬ್ದದಿಂದ ಹೇಳಲ್ಪಡುತ್ತದೆ. ಅಬಾದಿಗಳ ರೂಪದಲ್ಲಿ ಪರಿಣತಗಳಾದ ಅಂಶಗಳು ಉತ್ತರೋತ್ತರ ದಶ ಗುಣಾಧಿಕಗಳೆಂದು ಹೇಳುತ್ತಾರೆ.

ಪ್ರಾಪಂಚಿಕರದು:ಖದಿಂದ ದು:ಖಿಯಾದ ಮಹಾತ್ಮನು ನಿರ್ಭಯನಾಗಿ ತನ್ನ ಸೂಕ್ಷ್ಮ ಶರೀರವನ್ನು ಪೃಥ್ವಿಯೊಡನೆ ಸೇರಿಸುತ್ತಾನೆ. ನಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಪ್ತಾವರಣಗಳನ್ನೂ ಭೇದಿಸುತ್ತಾನೆ. ಪೃಥ್ವಿರೂಪದಿಂದ ಜಲರೂಪವನ್ನೂ ಜಲರೂಪದಿಂದ ಅಗ್ನಿಮಯ ಆವರಣವನ್ನು ಹೊಂದಿ ಜ್ಯೋತಿರೂಪದಿಂದ ವಾಯುರೂಪ ಆವರಣಕ್ಕೆ ಬರುತ್ತಾನೆ.

ಹೀಗೆ ಸ್ಥೂಲ ಆವರಣಗಳನ್ನು ದಾಟುತ್ತಿರುವಾಗ ಅವನ ಇಂದ್ರಿಯಗಳೂ ಸೂಕ್ಷ್ಮಾಧಿಷ್ಠಾನದಲ್ಲಿ ಲೀನವಾಗುತ್ತವೆ.

ಘ್ರಾಣೇಂದ್ರಿಯವು ಗಂಧ ತನ್ಮಾತ್ರೆಯಲ್ಲಿ,
ರಸನೇಂದ್ರಿಯವು ರಸತನ್ಮಾತ್ರೆಯಲ್ಲಿ,
ನೇತ್ರವು ರೂಪತನ್ಮಾತ್ರೆಯಲ್ಲಿ

ತ್ವಗಿಂದ್ರಿಯವು ಸ್ಪರ್ಶತನ್ಮಾತ್ರೆಯಲ್ಲಿ, ಶ್ರೋತ್ರವು ಶಬ್ದತನ್ಮಾತ್ರೆಯಲ್ಲಿ ಕರ್ಮೇಂದ್ರಿಯಗಳು ತಮ್ಮ ತಮ್ಮ ಕ್ರಿಯಾಶಕ್ತಿಗಳಲ್ಲಿ ಸೇರಿ ಸೂಕ್ಷ್ಮರೂಪವನ್ನು ಹೊಂದುತ್ತವೆ.

ಹೀಗೆ ಯೋಗಿಯು ಪಂಚಭೂತಗಳ ಸ್ಥೂಲ–ಸೂಕ್ಷ್ಮ ಆವರಣಗಳನ್ನು ದಾಟಿ ಅಹಂಕಾರದಲ್ಲಿ ಪ್ರವೇಶಿಸುತ್ತಾನೆ. ಅಲ್ಲಿ ಸೂಕ್ಷ್ಮಭೂತಗಳನ್ನು ಇಂದ್ರಿಯಗಳನ್ನು ರಾಜಸಾಹಂಕಾರದಲ್ಲಿ, ಹಾಗೂ ಮನಸ್ಸನ್ನೂ ಇಂದ್ರಿಯಾಧಿಷ್ಠಾತೃದೇವತೆಗಳನ್ನೂ ಸ್ವಾತ್ವಿಕಾಹಂಕಾರದಲ್ಲಿಯೂ ಲೀನಮಾಡುತ್ತಾನೆ.

ಅಹಂಕಾರದ ಲಯವಾದ ಮೇಲೆ ಮಹತ್ತತ್ತ್ವದಲ್ಲಿ ಪ್ರವೇಶಿಸಿ, ಕೊನೆಯಲ್ಲಿ ಸರ್ವಗುಣಗಳ ಲಯಸ್ಥಾನವಾದ ಪ್ರಕೃತಿರೂಪ ಆವರಣದಲ್ಲಿ ಸೇರುತ್ತಾನೆ.

ರಾಜನ್ - ಮಹಾಪ್ರಳಯದಲ್ಲಿ ಪ್ರಕೃತಿರೂಪ ಆವಗಣದ ಲಯವೂ ಆದಾಗ, ಯೋಗಿಯು ಸ್ವಯಂ ಆನಂದ ಸ್ವರೂಪನಾಗಿ, ತನ್ನ ನಿರಾವರಣ ರೂಪದಿಂದ ಆನಂದ ಸ್ವರೂಪಿಯಾದ ಶಾಂತ ಪರಮಾತ್ಮನನ್ನು ಹೊಂದುತ್ತಾನೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಹೀಗೆ ಭಾಗವತೀ ಗತಿಯನ್ನು ಹೊಂದಿದವನು ಪುನಃ ಸಂಸಾರಕ್ಕೆ ಬರುವುದಿಲ್ಲ.

ರಾಜನ್ – ಹೀಗೆ ನಾನು – ಹಿಂದೆ ವಾಸುದೇವನಿಂದ ಬ್ರಹ್ಮನಿಗೆ ಉಪದೇಶವಾದ ರೀತಿಯಲ್ಲಿ ಸದ್ಯೋಮುಕ್ತಿ – ಕ್ರಮಮುಕ್ತಿಗಳನ್ನು ವರ್ಣಿಸಿದ್ದೇನೆ.

ಸಂಸಾರಸಾಗರ ಮಗ್ನನಾದ ಮನುಷ್ಯನಿಗೆ ಶ್ರೀ ಕೃಷ್ಣನ ಅನನ್ಯ ಪ್ರೇಮಮಯೀ ಭಕ್ತಿಯ ಪ್ರಾಪ್ತಿಗಿಂತ ಕಲ್ಯಾಣಕಾರೀ ಮಾರ್ಗವೊಂದಿಲ್ಲ. ಭಗವಂತನು ಸದಾ ನಮ್ಮ ಹೃದಯಸ್ಥನಾಗಿದ್ದಾನೆ. **ಸತ್ವಂ ವಿಶುದ್ಧಂ ವಸುದೇವ ಶಬ್ದಿತಂ** ಎಂದು ಹೇಳುವಂತೆ, ನಮ್ಮ ಶುದ್ಧ ಸತ್ವಾತ್ಮಕ ಅಂತಃಕರಣದಲ್ಲಿ ಮೂಡುವ ಭಗವದನುಭೂತಿಯೇ ಸರ್ವೋತ್ತಮವಾದುದು.

ಬ್ರಹ್ಮನು ಮೂರು ಬಾರಿ ವೇದಾರ್ಥಗಳನ್ನು ಚಿಂತಿಸಿದನು, ಅನ್ವೇಷಿಸಿದನು, ಮನನ ಮಾಡಿದನು, ಕೊನೆಗೆ ಒಂದು ನಿಶ್ಚಯಕ್ಕೆ ಬಂದನು.

ಯಾವ ಸಾಧನೆಯಿಂದ ಪರಮಾತ್ಮನಲ್ಲಿ ಪ್ರೀತಿ-ರತಿಯುಂಟಾಗುವುದೋ ಅದೇ ಶ್ರೇಷ್ಠತಮವು.

ಸ್ತ್ರೀ-ಪುರುಷರ ರತಿ ಒಂದು ವಿಧವಾದುದು, ಕರ್ಮರತಿಯು ಮತ್ತೊಂದು **ವಿಧ.** ಶ್ರೀ ಹರಿಯ ರತಿಯು ಅದ್ಭುತವು. ಅಸದೃಶವು-ಅಸಾಧಾರಣವು ನಮ್ಮ ರತಿ-ಪ್ರೀತಿಗಳೆಲ್ಲವೂ ಪರಮಾತ್ಮನಲ್ಲಿರಬೇಕು. ಭಕ್ತ ತುಳಸೀದಾಸರು ಹೇಳುತ್ತಾರೆ =

ಸೀತಾರಾಮ ಚರಣರತಿ ಮೋರೇ

ಅನುದಿನ ಬಢಉ ಅನುಗ್ರಹತೋರೇ

ಇಷ್ಟು ಸಾಕು, ನಮ್ಮ ರತಿ, ಪ್ರೀತಿಗಳು ಎಲ್ಲಿವೆ? ನಮಗೆ ರಸಾನಂದಗಳು ಎಲ್ಲಿಂದ ದೊರಕುತ್ತಿವೆ? ಎಂದು ಸದಾ ಪರಿಶೀಲಿಸುತ್ತಿರಬೇಕು.

ಸಾವಧಾನತೆಯಿಂದ ಪರಿಶೀಲಿಸುವುದಾದರೆ ಅವನು ತಿಳಿದು ಕೊಳ್ಳುತ್ತಾನೆ. ಪರಮಾತ್ಮನು ಯಾವಾಗಲೂ ನನ್ನ ಹೃದಯಸ್ಥನಾಗಿಯೇ ಇದ್ದಾನೆ. ಅವನಿಂದಲೇ ನನಗೆ ರಸಾನಂದ ಪ್ರಾಪ್ತಿಯಾಗುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಪ್ರಶ್ನೆಯೇಳುತ್ತದೆ. ಎಲ್ಲರ ಹೃದಯದಲ್ಲಿ ಯಾವ ಪರಮಾತ್ಮ ಇದ್ದಾನೆ. ಅವನು ಸರ್ವ ಹೃದಯಾಧಿಷ್ಠಿತನು. ಎಂದು ಹೇಗೆ ತಿಳಿಯು ವುದು ?

ಉತ್ತರವಿಷ್ಟೆ. ಅದು ತನ್ನಿಂದಲೇ ತಿಳಿಯಲ್ಪಡಬೇಕು. ಉಪಾಯಾಂತರ ವಿಲ್ಲ. ದೃಶ್ಯಾದಿಗಳೆಲ್ಲವೂ ಅನಾತ್ಮಾ. ಅವುಗಳುದೃಶ್ಯ. ಆತ್ಮನು ಅಸಂಗ ಚೈತನ್ಯಾತ್ಮಕನು.

ದೇಶ ಕಾಲವಸ್ತುಪರಿಚ್ಛಿನ್ನನಾದ. ಪರಮಾತ್ಮನೇ ಜ್ಞಾನ-ಧ್ಯಾನಗಳಿಗೆ ವಿಷಯನಾಗುತ್ತಾನೆ

ಅದರಿಂದ ಹೇ ರಾಜನ್.

ತಸ್ಮಾತ್ಸರ್ವಾತ್ಮನಾ ರಾಜನ್, ಹರಿ : ಸರ್ವತ್ರಸರ್ವದಾ
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ
ಭಗವಾನ್ನೃಣಾಮ್

ಸರ್ವತ್ರ-ಸರ್ವದಾ-ಸರ್ವಾತ್ಮನಾ ಭಗವಂತನ ಗುಣಕಥನಗಳನ್ನು ಕೇಳಬೇಕು. ಮುಖದಿಂದ ಕೀರ್ತನ ಮಾಡಬೇಕು. ಮನಸಾಸ್ಮರಣೆ ಮಾಡಬೇಕು. ಇದೇ ಮಹತ್ತರ ಸಾಧನೆಯು.

ವಸ್ತುತಃ ಆತ್ಮ-ಪರಮಾತ್ಮರು ಬೇರೆ ಅಲ್ಲ, ಆತ್ಮನೇ ಭಗವಂತನು ಭಗವಂತನೇ ಆತ್ಮ ಸತ್ಪುರುಷರು ಭಗವತ್ಕಥಾಮೃತವನ್ನು ಕಿವಿಗಳಲ್ಲಿ ಹಾಕಿ ಕೊಂಡು ಪ್ರೀತಿಯಿಂದ ಪಾನ ಮಾಡುತ್ತಾರೆ. ಅದರಿಂದ ಅವರ ಹೃದಯವು ವಿಷಯ-ವಾಸನಾ ವಿಷದಿಂದ ನಿರ್ಮುಕ್ತವಾಗುತ್ತದೆ.

ಅವರಿಗೆ ಭಗವಚ್ಚರಣಾರವಿಂದಗಳ ಪ್ರಾಪ್ತಿಯಾಗುತ್ತದೆ.

ಓಂ ತತ್ಸದಿತ್ಯೇವಂ ದ್ವಿತೀಯಸ್ಕಂಧೇ
ದ್ವಿತೀಯೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತ ದರ್ಶನ. ಸ್ಕಂ-೨. ಅ-೩
ಓಂ ನಮೋ ಭಗವತೇ ವಾಸುದೇವಾಯ
"ಭಿನ್ನ-ಭಿನ್ನ ದೇವತೆಗಳ ಉಪಾಸನೆ – ಭಗವದ್ಭಕ್ತಿ" ಪ್ರಾಧಾನ್ಯತೆಯು ನಿರೂಪಣೆ

ಶ್ರೀ ಶುಕ ದೇವರು ಆಖ್ಯಾನವನ್ನು ಮುಂದುವರೆಸುತ್ತಾ ಹೇಳುತ್ತಾರೆ. ರಾಜನ್ - ನೀನು ಕೇಳಿದಂತೆ ಮ್ರಿಯಮಾಣರ ವಿಚಾರವನ್ನು ತಿಳಿಸಿದ್ದೇನೆ. ವಸ್ತುತಃ ಎಲ್ಲರೂ ಮ್ರಿಯಮಾಣರೇ. ಎಲ್ಲರೂ ತಮ್ಮ - ತಮ್ಮ ಬಗ್ಗೆ ಯಾವಾಗಲೂ ಯೋಚಿಸುತ್ತಿರಬೇಕು.

ಮಾನವನು ಕಾಮನಾವಶನಾಗಿ, ಕಾಮನಾ ವೈವಿಧ್ಯತೆಗನುಗುಣವಾಗಿ ವಿವಿಧ ದೇವತೆಗಳನ್ನು ಭಜಿಸುತ್ತಾನೆ.

ಬ್ರಹ್ಮತೇಜೋಭಿವೃದ್ಧಿಗಾಗಿ-ಬೃಹಸ್ಪತಿಯನ್ನೂ, ಐಂದ್ರಿಯಕ ಶಕ್ತಿ ಪ್ರಾಪ್ತಿಗಾಗಿ-ಇಂದ್ರನನ್ನೂ. ಸಂತಾನಪ್ರಾಪ್ತಿಗಾಗಿ-ಪ್ರಜಾಪತಿಯನ್ನೂ, ಲಕ್ಷ್ಮೀ ಪ್ರಾಪ್ತಿಗಾಗಿ ಮಾಯಾದೇವಿಯನ್ನೂ, ತೇಜಸ್ವಿಯಾಗಬೇಕೆಂಬುವವನು-ಅಗ್ನಿಯನ್ನೂ. ವೀರನಾಗಬೇಕೆಂಬ ಅಭಿಲಾಷೆಯವನು-ರುದ್ರನನ್ನೂ ಭಜಿಸುತ್ತಾರೆ – ಆರಾಧಿಸುತ್ತಾರೆ

ಹಾಗೆಯೇ ಅನ್ನಕಾಮನು ಅದಿತಿಯನ್ನೂ, ಸ್ವರ್ಗಕಾಮನು-ದೇವತೆಗಳನ್ನು, ರಾಜ್ಯಕಾಮನು-ವಿಶ್ವೇದೇವರನ್ನೂ. ಪ್ರಜಾಪಾಲಕನಾಗಬೇಕೆಂಬುವವನು–ಸಾಧ್ಯರನ್ನೂ, ಆರಾಧಿಸುತ್ತಾರೆ.

ಅಲ್ಲದೆ-ಆಯುಷ್ಕಾಮನು-ಅಶ್ವಿನೀಕುಮಾರರನ್ನೂ, ಪುಷ್ಟಿಕಾಮಿಯು ಪೃಥ್ವಿಯನ್ನೂ, ಪ್ರತಿಷ್ಠಾಕಾಮಿಯು ಲೋಕಮಾತೆಯನ್ನೂ, ಸೌಂದರ್ಯಕಾಮಿಯು ಗಂಧರ್ವರನ್ನೂ, ಪತ್ನೀಕಾಮನು ಊರ್ವಶಿಯನ್ನೂ. ಸರ್ವಾಧಿಪತಿಯಾಗಬೇಗಂಬುವವನು ಬ್ರಹ್ಮನನ್ನೂ ಆರಾಧಿಸಬೇಕು. ಯಶಃಕಾಮಿಯಾದವನು ಯಜ್ಞ ಪುರುಷನನ್ನೂ. ಕೋಪಕಾಮಿಯು ವರುಣನನ್ನೂ, ವಿದ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಮಿಯು ಶಂಕರನನ್ನೂ. ದಾಂಪತ್ಯಸುಖವನ್ನು ಬಯಸುವವನು ಶಂಕರ ನನ್ನೂ ಆರಾಧಿಸಬೇಕು.

ಧರ್ಮಾರ್ಜನೆಯನ್ನು ಮಾಡುವವನು-ವಿಷ್ಣುವನ್ನೂ ವಂಶಪರಂಪರೆಯ ರಕ್ಷಕನು ಪಿತರರನ್ನೂ, ಬಂಧನಿರ್ಮುಕ್ತನಾಗಬೇಕೆನ್ನುವವನು ಯಕ್ಷರನ್ನೂ ಬಲಿಷ್ಠನಾಗಲು ಮರುದ್ಗಣದವರನ್ನೂ ಆರಾಧಿಸಬೇಕು. ರಾಜ್ಯಪ್ರಾಪ್ತಿಗೆ ಮನ್ವಂತರಾಧಿಪರನ್ನೂ. ಅಭಿಚಾರಕ್ಕೆ ನೈಋತ್ಯನನ್ನೂ, ಭೋಗಕ್ಕೆ ಚಂದ್ರ ನನ್ನೂ. ನಿಷ್ಕಾಮತೆಗೆ ನಾರಾಯಣನನ್ನೂ ಭಜಿಸಬೇಕು.

ಆದರೆ ಯಾವುದೇ ಕಾಮನಾಪೂರ್ತಿಗಾಗಿ ಭಗವದ್ಭಜನೆಯನ್ನು ಮಾಡು ವುದು ಅಷ್ಟಾಗಿ ಸರಿಯಲ್ಲ. ಅಂದರೆ ಭಗವದ್ಭಜನೆಯಿಂದ ಕಾಮನಾಪೂರ್ತಿಯು ಆಗುವುದಿಲ್ಲ ಎಂದಲ್ಲ ಹೇಳುತ್ತಾರೆ.

> ಅಕಾಮಃ ಸರ್ವಕಾಮೋವಾ, ಮೋಕ್ಷಕಾಮ
> ಉದಾರಧೀ
> ತೀವ್ರೇಣ ಭಕ್ತಿಯೋಗೇನ, ಯಜೇತ ಪುರುಷಂ ಪರಂ

ಬುದ್ಧಿವಂತನಾದವನು, ನಿಷ್ಕಾಮನಾಗಲಿ, ಸಕಾಮನಾಗಲಿ, ಮೋಕ್ಷಕಾಮ ನಾಗಲಿ ತೀವ್ರವಾದ ಭಕ್ತಿಯೋಗದ ಮೂಲಕ ಭಗವಂತನನ್ನು ಆರಾಧಿಸಬೇಕು.

ಆದರೆ–ಆನೆಯಿಂದ ನೇಗಿಲನ್ನು ಎಳೆಸುವುದು ಸರಿಯಲ್ಲ. ಪರಮೇಶ್ವರ ನನ್ನು ಭಜಿಸುವುದು. ವಿಷಯ ಭೋಗಗಳನ್ನು ಅಪೇಕ್ಷಿಸುವುದು ಸರಿಯಲ್ಲ- ಶ್ರೇಯಸ್ಕರವಲ್ಲ. ಭಗವದಾರಾಧನೆಯನ್ನು ಮಾಡುವವನಿಗೆ ಭಾಗವತ- ಸಂಗಮವೇನಿಃ ಶ್ರೇಯಸ ಫಲವು. ಇದು ಬೇರೆ-ಬೇರೆ ದೇವತೆಗಳ ಉಪಾಸನೆ ಗಿಂತಲೂ ಶ್ರೇಷ್ಠವಾದುದು. ಯಾರಾದರೂ ಸತ್ಸಂಗವನ್ನು, ಭಗವತ್ಕಥಾ ಶ್ರವಣವನ್ನು ಬಿಟ್ಟು ಯಾತ್ರಾದಿಗಳಿಗೆ ಹೋಗುವುದಾದರೆ ಅವನಿಗೆ ಕಥಾ ಸತ್ಸಂಗದಲ್ಲಿ ರುಚಿಯಿಲ್ಲವೆಂದು ತೋರಿತು.

ಭಗವದ್ಭಕ್ತರ ಸಂಗವು ಮಹಾ ಸಾಧನೆಯು ಸತ್ಸಂಗದಿಂದಲೇ ಭಗವ ತ್ಪ್ರೇಮವು ವರ್ಧಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧನವು ಧನವಂತನಿಂದ ದೊರಕುವುದೇ ಹೊರತು ಭಿಕ್ಷಾರಿಯಿಂದ ದೊರಕುವುದಿಲ್ಲ. ಭಕ್ತಿಯು ಬೇಕಾದರೆ ಭಕ್ತರಿಂದಲೇ ದೊರಕಬೇಕು.

ಭಗವಂತನೂ ಸಹ ಭಕ್ತಿಗಾಗಿ ಅಲ್ಲಿ-ಇಲ್ಲಿ ಅಲೆದಾಡುತ್ತಾನೆ. ಭಗವಂತನೊಡನೆ ಭಕ್ತಿಯನ್ನೂ ಕೇಳಿಕೊಳ್ಳಬಾರದು ಭಕ್ತರಿಂದ ಭಕ್ತಿಯನ್ನು ಯಾಚಿಸಬೇಕು,

ಭಗವಂತನು ಭಕ್ತಿಯ ಪ್ರೇಮಿ-ಭಕ್ತಿಗಾಗಿ ವ್ಯಾಕುಲನಾಗುತ್ತಾನೆ.

ಆನಂದಮಯಿ ಮಾತಾ ಹೇಳುತ್ತಿದ್ದರು. **"ಹರಿಕಥಾ ಕಥಾ ಔರ್ ಸಬ್ ವೃಥಾವ್ಯಥಾ"**

ಯಾವ ದಿವ್ಯ ಜ್ಞಾನದಿಂದ ಸಾಂಸಾರಿಕ ಕ್ಲೇಶಗಳು ದೂರವಾಗಿ ಆನಂದಾನುಭವವಾಗುವುದೊ ಆ ಜ್ಞಾನವು ಭಗವದ್ಭಕ್ತರ ಸತ್ಸಂಗದಿಂದ ಮಾತ್ರ ಲಬ್ಧವಾಗುತ್ತದೆ. ಇಂದ್ರಿಯಾಸಕ್ತಿಯು ಅಳಿಯುತ್ತದೆ.

"ಕೈವಲ್ಯ ಸಮ್ಮತಪಥ ಸ್ತ್ವಥ ಭಕ್ತಿಯೋಗ:"

ಕೈವಲ್ಯಪ್ರಾಪ್ತಿಗೆ ಸರ್ವಸಮ್ಮತ ಮಾರ್ಗವೆಂದರೆ "ಭಕ್ತಿಯೋಗವು."

ಹರಿಕಥಾ ಶ್ರವಣಾಸಕ್ತಿಯನ್ನು ಮೂಡಿಸಿಕೊಂಡವನು ಎಂದಿಗೂ ಅದನ್ನು ಬಿಡುವುದಿಲ್ಲ.

ಈಗೊಂದು ಪ್ರಶ್ನೆ. ಪ್ರಾಪಂಚಿಕರು ಸುಖಿಗಳೇ? ಉತ್ತರವಿಷ್ಟೆ. ಭಗವಂತನು ಪ್ರಪಂಚವನ್ನು ಸುಖಮಯವನ್ನಾಗಿ ಮಾಡಿಯೇ ಇಲ್ಲವಲ್ಲ? ಇಲ್ಲಿ ತೋರುವುದೆಲ್ಲ ಸುಖಾಭಾಸಗಳೇ. ಏಕೆಂದರೆ-ಪ್ರಪಂಚವು ಸುಖಮಯವಾಗಿ ಇದ್ದುಬಿಟ್ಟಿದ್ದರೆ ಎಲ್ಲರೂ ಭಗವಂತನನ್ನು ಸಂಪೂರ್ಣವಾಗಿ ಮರೆತುಬಿಡುತ್ತಿದ್ದರು ಅವರಲ್ಲಿ ಜ್ಞಾನವೈರಾಗ್ಯಾದಿಗಳು ಮೂಡುವ ಸಂಭವವೇ ಇರಲಿಲ್ಲ. ಅದರಿಂದ ಭಗವಂತನು ಪ್ರಪಂಚವನ್ನು ದುಃಖಮಯವನ್ನಾಗಿಯೇ ಮಾಡಿದ್ದಾನೆ. ಇಲ್ಲಿ ಹುಟ್ಟಿದವರಾರೂ ಅಮರರಾಗಿರಲಾರರು. ತ್ರಿಮೂರ್ತಿಗಳ ಆಯುಷ್ಯವನ್ನೂ ನಿಗದಿ ಪಡಿಸಿದ್ದಾರೆ. ವಿವೇಕಿಯು ಭಗವದ್ಭಕ್ತಿಯನ್ನು ಮಾಡಿಯೇ ಮಾಡುತ್ತಾನೆ

Sri Vidyabharathi Book Centre, Sringeri

CC-O. In Public Domain. Digitized by eGangotri

"ಕೋ ನಿವೃತೋ ಹರಿಕಥಾಸುರತಿಂ ನ ಕುರ್ಯಾತ್,"

ಹರಿಕಥಾರತಿಯನ್ನು ಬೆಳೆಸಿಕೊಳ್ಳದಿರುವ ವಿವೇಕಿಯು ಯಾರಿರುವನು ?

ಬುದ್ಧಿಯು ನಿರಾವರಣವಾದಮೇಲೆ ಯಾರೂ ಹರಿಕಥಾ ಶ್ರವಣವನ್ನು ತಿರಸ್ಕರಿಸುವುದಿಲ್ಲ.

ಭಕ್ತ ತುಳಸಿದಾಸರು ಹೇಳುತ್ತಾರೆ.

"ಜೀವನ್ಮುಕ್ತ ಬ್ರಹ್ಮಪರ ಚರಿತ ಸುನಹಿ

ತಜಧ್ಯಾನ್"

ಜೀವನ್ಮುಕ್ತ ಬ್ರಹ್ಮಪರಾಯಣ ಪುರುಷರು ಧ್ಯಾನವನ್ನೂ ಬಿಟ್ಟು ಭಗವಚ್ಚರಿತ್ರೆಯನ್ನು ಶ್ರವಣ ಮಾಡುತ್ತಾರೆ.

ನೈಮಿಷಾರಣ್ಯದಲ್ಲಿ ಆಖ್ಯಾನವನ್ನು ಕೇಳುತ್ತಿದ್ದ ಶೌನಕಾದಿಗಳು ಸೂತ ಪೌರಾಣಿಕರನ್ನು ಕೇಳುತ್ತಾರೆ. ಪೂಜ್ಯರೇ-ಪರೀಕ್ಷಿದ್ರಾಜನು ಶ್ರೀ ಶುಕದೇವರನ್ನು ಮತ್ತೇನು ಪ್ರಶ್ನಿಸಿದನು? ನಮಗೆ ಕೇಳಬೇಕೆಂಬ ಕುತೂಹಲವಿದೆ.

ತಾವು ಸರ್ವಜ್ಞರು. ಮೃದು-ಮಧುರವರ್ಣನೆಯಲ್ಲಿ ಸಮರ್ಥರು. ಪರೀಕ್ಷಿತನಾದರೊ ಶ್ರೀ ಮಹಾ ಕೃಷ್ಣ ಭಕ್ತನು.

ಬಾಲ್ಯದಲ್ಲಿಯೂ ಶ್ರೀ ಕೃಷ್ಣ ಲೀಲೆಗಳಿಂದಲೇ ಆಟವಾಡುತ್ತಿದ್ದನು.

ಶ್ರೀ ಶುಕದೇವರಾದರೋ ವ್ಯಾಸಪುತ್ರರು. ವಾಸುದೇವ ಪರಾಯಣರು. ಸಾಕ್ಷಾದ್ಭಗವತ್ಸ್ವರೂಪಿಗಳು. ಇಬ್ಬರು ಸತ್ಪುರುಷರು ಸೇರಿದಾಗ ಭಗವತ್ಕಥಾ ಪ್ರಸಂಗವು ನಡೆದೇ ನಡೆಯುತ್ತವೆ.

ಅವರಲ್ಲಿ ರಾಗ ದ್ವೇಷಾತ್ಮಕ ಚರ್ಚೆಯು ನಡೆಯುವುದಿಲ್ಲ.

ಯಾವಾಗಲೂ ಮಾನವನು ಕುಸಂಗಿಯಾಗ ಬಾರದು. ಯಾವಾಗಲೂ ಯಾರಾದರೂ. ನಮ್ಮ ಹೃದಯದಲ್ಲಿ ಏನನ್ನಾದರೂ ತುಂಬುತ್ತಿರುವರೇ? ಎಂದು ಎಚ್ಚರಿಕೆಯಿಂದ ನೋಡುತ್ತಿರಬೇಕು. ಯಾರ ಮೂಲಕವೂ ನಮ್ಮ ಹೃದಯದಲ್ಲಿ ಅಶ್ರದ್ಧಾ-ವಾಸನಾ-ಮೋಹಾದಿಗಳು ತುಂಬಿಕೊಳ್ಳುತ್ತಿಲ್ಲವಷ್ಟೆ. ಈ ವಿಚಾರದಲ್ಲಿ ಜಾಗರೂಕರಾಗಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರ ಸಮಯವು ಭಗವತ್ಕಥಾ ಶ್ರವಣದಲ್ಲಿ ವಿನಿಯೋಗವಾಗುತ್ತಿದೆಯೋ ಅವರೇ ಶ್ರೇಷ್ಠರು.

ಮನುಷ್ಯರ ಆಯುಷ್ಯವು ವೃಥಾ ಕಳೆದು ಹೋಗುತ್ತಿದೆ.

ಆಯುರ್ಹರತಿ ವೈ ಪುಂಸಾಂ, ಉದ್ಯನ್ನಸ್ತಂಚ
ಯನ್ನಸೌ

ಪ್ರತಿದಿನವೂ ಸೂರ್ಯೋದಯ ಸೂರ್ಯಾಸ್ತಗಳಿಂದ ಆಯುಷ್ಯವು ಕ್ಷಯಿಸುತ್ತಿದೆ.

ತರವಃ ಕಿಂ ನ ಜೀವಂತಿ ಭಸ್ತ್ರಾಃ ಕಿ ನಶ್ವಸಂತ್ಯುತ
ನ ಖಾದಂತಿ ನಮೇಹಂತಿ ಕಿಂ ಗ್ರಾಮ ಪಶುವೋಽ ಪರೇ

ವೃಕ್ಷಗಳು ಜೀವಿಸುತ್ತಿಲ್ಲವೇ? ಕಮ್ಮಾರನ ಮನೆಯ ತಿದಿಯು ಉಸಿರಾಡುವುದಿಲ್ಲವೆ? ಗ್ರಾಮ ಪಶು-ಸಿಂಹಗಳು ಆಹಾರವನ್ನು ತಿನ್ನುವುದಿಲ್ಲವೇ? ಮಕ್ಕಳು ಮರಿಗಳನ್ನು ಪಡೆಯುವುದಿಲ್ಲವೇ?

ಶ್ವವಿಟ್ ವರಾಹೋಷ್ಟ್ರ ಖರೈಃ ಸಂಸ್ತುತಃ ಪಶುಃ
ಪುರುಷಃ ಪಶು.
ಯತ್ಕರ್ಣ ಪಥೋಪೇತೋ ಜಾತುನಾಮಗದಾಗ್ರಜಃ

ಭಗವತ್ಕಥಾಮೃತ ಸೇವೆಯನ್ನು ಮಾಡದವನು ಗರ್ದಭಾದಿಗಳಿಗಿಂತಲೂ ಕಡೆ.

ಭಗವತ್ಕಥೆಯನ್ನು ಕೇಳದಿರುವ ಕಿವಿಗಳು ಬಿಲಕ್ಕೆ ಸಮಾನವು.

ಭಗವಲ್ಲೀಲೆಯನ್ನು ಗಾನ ಮಾಡದ ನಾಲಗೆಯು ಕಪ್ಪೆಯ ನಾಲಿಗೆಯಂತೆ ವಟಗುಟ್ಟುತ್ತದಷ್ಟೆ.

ಭಗವಂತನ ಚರಣಾರವಿಂದಗಳಲ್ಲಿ ಮಣಿಯದ ಶಿರಸ್ಸು ಭಾರ ಮಾತ್ರಕ್ಕೆ ಇದೆ. ಆ ತಲೆಯ ಮೇಲೆ ರತ್ನ ಕಿರೀಟವಿದ್ದರೂ ವ್ಯರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಸೇವಾ ಪೂಜೆಗಳನ್ನು ಮಾಡದ ಕೈಗಳು ಮರಗೈಗಳೇ ಸರಿ.

ಭಗವಂತನ ಲೀಲಾ ಮೂರ್ತಿಗಳನ್ನು ನೋಡದ ಕಣ್ಣುಗಳು ನವಿಲು ಕಣ್ಣುಗಳು.

ಭಗವದಾಲಯಗಳಿಗೆ ಹೋಗದ ಕಾಲುಗಳು ಮರದ ಕೊಂಬೆಗಳು. ಭಗವತ್ ಪ್ರೇಮಿಗಳ ಚರಣ ಧೂಳಿಯನ್ನು ಹೊಂದಲಾರದ ತಲೆಯು ಶವದ ಶರಾವೆಯು. ತುಳಸೀ ಗಂಧವನ್ನು ಆಘ್ರಾಣಿಸದ ಮೂಗು ಹುತ್ತದ ದ್ವಾರಗಳು. ಭಗವತ್ ಸಂಕೀರ್ತನದಿಂದ ಕರಗಿ ನೀರಾಗದ ಹೃದಯವು ಕಬ್ಬಿಣವು.

ಅಂದಮೇಲೆ ಪರೀಕ್ಷಿತನಿಗೆ ಶ್ರೀ ಶುಕದೇವರು ಹೇಳಿದ ಉತ್ಕೃಷ್ಟ ವಿಚಾರಗಳನ್ನು ತಿಳಿಸಿ ಕೃತಾರ್ಥರನ್ನಾಗಿ ಮಾಡಿ ಎಂದು ಶೌನಕರು ಸೂತರನ್ನು ಪ್ರಾರ್ಥಿಸಿದರು.

ಓಂ ತತ್ಸದಿತ್ಯೇವಂ ದ್ವಿತೀಯಸ್ಕಂಧೇ ತೃತೀಯೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತದರ್ಶನ
ದ್ವಿತೀಯ ಸ್ಕಂಧ – ಅಧ್ಯಾಯ ೪.

ರಾಜನಿಂದ ಸೃಷ್ಟಿ ವಿಷಯಕ ಪ್ರಶ್ನೆ, ಶ್ರೀ ಶುಕ ದೇವರಿಂದ ಕಥಾರಂಭ. ಓಂ ನಮೋ ಭಗವತೇ ವಾಸುದೇವಾಯ

ಸೂತ ಪೌರಾಣಿಕರು ಹೇಳುತ್ತಾರೆ. ಶ್ರೀ ಶುಕದೇವರ ವಚನಗಳು ಭಗವತ್ತತ್ತ್ವ ನಿಶ್ಚಯಾತ್ಮಕಗಳು, ಉತ್ತರಾನಂದನನಾದ ಪರೀಕ್ಷಿತನು ಅವುಗಳನ್ನು ಕೇಳಿ ತನ್ನ ನಿರ್ಮಲ ಮತಿಯನ್ನು ಶ್ರೀ ಕೃಷ್ಣನ ಚರಣಾರವಿಂದಗಳಲ್ಲಿ ಅನನ್ಯ ಭಾವದಿಂದ ಸಮರ್ಪಿಸಿದನು

"ಉಪಧಾರ್ಯ ಮತಿಂ ಕೃಷ್ಣೇ, ಔತ್ತರೇಯಃ ಸತೀಂ ವ್ಯಧಾತ್

ಎಂದು ಹೇಳುತ್ತಾರೆ.

'ಸತೀ' ಶಬ್ದದ ಪ್ರಯೋಗವು ಭಾಗವತದಲ್ಲಿ ಪದೇ ಪದೇ ಬರುತ್ತದೆ. ಇದರ ಅರ್ಥವನ್ನು ನಾವು ಚೆನ್ನಾಗಿ ಮನನ ಮಾಡಬೇಕು.

ಸ್ತ್ರೀಯು ತನ್ನ "ಸತೀತ್ವ"ದ ಬಗ್ಗೆ ಬಹಳ ಅಭಿಮಾನವನ್ನು ಇಟ್ಟುಕೊಂಡಿರುತ್ತಾಳೆ. ಇಟ್ಟುಕೊಳ್ಳಲೂಬೇಕು. ಇದೇ ಅವಳ ಧರ್ಮ.

ಸತ್ತಿನಿಂದ ಒಂದಾಗಲು ನಿಷ್ಠೆಯು ಬೇಕು. ಸತ್ತೇ ಸ್ವಸ್ವರೂಪವು. ಪುರುಷರು ಕೇಳಬಹುದು-ಸ್ತ್ರೀಯು ಸತಿಯಾದರೆ ನಾವು ಸತಿಯಾಗುವುದು ಹೇಗೆ ?

ಪುರುಷರು ಸತಿಯಾಗಬೇಕೆಂದರೆ-ಅವರ ಬುದ್ಧಿಯನ್ನು ಸತಿಯನ್ನಾಗಿ ಮಾಡಿ ಬಿಟ್ಟರೆ ಸಾಕು. ಬುದ್ಧಿಯನ್ನು ಸತಿಯನ್ನಾಗಿ ಮಾಡುವ ವಿಧಾನವು ಹೀಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಭೋಜ್ಯ ಭೋಕ್ತೃತ್ವಗಳೆಲ್ಲವನ್ನೂ ಭಗವಂತನೆಂದೇ ತಿಳಿಯು ವುದು. ನಾವು ಮತ್ತೊಂದನ್ನು ಭೋಗಿಸಬಾರದು. ನಾವು ಸಹ ಮತ್ತೊಬ್ಬರ ಭೋಜ್ಯವಾಗಬಾರದು.

ಈ ನಿರ್ಣಯವನ್ನು ಜೀವನದಲ್ಲಿ ಮಾಡಿಕೊಂಡರೆ ನಮ್ಮ ಬುದ್ಧಿಯು ಭಗವಂತನೊಡನೆ ಸತಿಯಾಯಿತೆಂದರ್ಥವು.

ಶ್ರೀ ಯಾಮುನಾಚಾರ್ಯರು ಹೇಳುತ್ತಾರೆ.

"ಕೃಪಯೈವಮನನ್ಯ ಭೋಗ್ಯತಾಂ
ಭಗವನ್ ಭಕ್ತಿಮಪಿ ಪ್ರಯಚ್ಛಮೇ"

ನಮಗೆ ಅನನ್ಯ ಭೋಗ್ಯವಾದ ಭಕ್ತಿಯನ್ನು ಕೊಡು. ಅಂದರೆ ಮತ್ತೊಬ್ಬರು ನಮ್ಮರತಿ-ಪ್ರೀತಿಗಳನ್ನು ಭೋಗಿಸದಿರಲಿ. ಕೇವಲ ಭಗವಂತ ನೊಬ್ಬನೇ ಭೋಗಿಸಲಿ.

ಪರೀಕ್ಷಿತನು ತನ್ನ ಮತಿಯನ್ನು "ಸತಿ" ಮಾಡಿದ್ದನು. ತನ್ನ ರಾಜ್ಯದ ಬಗ್ಗೆ ಪರಂಪರಾಗತವಾದ ಮಮತೆಯನ್ನು ಕ್ಷಣಾರ್ಧದಲ್ಲಿ ತ್ಯಾಗಮಾಡಿದನು.

ಮಹಾ ಮನಸ್ವಿಯಾದ ಪರೀಕ್ಷಿತನಿಗೆ ತನ್ನ ಮೃತ್ಯು ಕಾಲವು ಚೆನ್ನಾಗಿ ತಿಳಿದು ಹೋಗಿತ್ತು, ಅವನು ಧರ್ಮಾರ್ಥ ಕಾಮುಗಳಿಗೆ ಸಂಬಂಧ ಪಟ್ಟ ಸಮಸ್ತ ಕರ್ಮಗಳನ್ನು ಸನ್ಯಸ್ತ ಮಾಡಿದನು.

ಸಂನ್ಯಾಸವು ಎರಡು ವಿಧವಾಗಿರುತ್ತದೆ. ಒಂದು ದಂಡಾತ್ಮಕ– ಮತ್ತೊಂದು ತ್ಯಾಗಾತ್ಮಕ.

ವಿಧಿ ಪೂರ್ವಕವಾದ ದಂಡಾತ್ಮಕ ಸಂನ್ಯಾಸವು ಬ್ರಾಹ್ಮಣರಿಗೆ ಮಾತ್ರ ವಿರುತ್ತದೆ. ವಿಧಿಪೂರ್ವಕವಾಗಿ ಯಜ್ಞೋಪವೀತಾದಿಗಳನ್ನು ಧಾರಣೆ ಮಾಡಿದ ವರು ವಿಧಿ ಪೂರ್ವಕವಾಗಿಯೆ ತ್ಯಾಗಮಾಡಬೇಕು.

ಪರೀಕ್ಷಿತನು ತ್ಯಾಗಾತ್ಮಕ ಸಂನ್ಯಾಸವನ್ನು ಸ್ವೀಕರಿಸಿದನು. ಆಗ ಅವನು ಕೆಂಪು ಬಟ್ಟೆಯನ್ನು ಹಾಕಿಕೊಳ್ಳಲಿಲ್ಲ. ದಂಡ ಗ್ರಹಣೆಯನ್ನು ಮಾಡಲಿಲ್ಲ.

ಅವನು ತ್ರೈವರ್ಗಿಕ ಸಂನ್ಯಸವನ್ನು ಮಾಡಿದನು. ತ್ರೈವರ್ಗಿಕವೆಂದರೆ- ಧರ್ಮಾರ್ಥ ಕಾಮಪ್ರಧಾನವಾದುದು. "ಯಜ್ಞವನ್ನೂ ಮಾಡುವುದಿಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಧನವನ್ನು ಅರ್ಜಿಸುವುದಿಲ್ಲ. ಭೋಗಗಳನ್ನು ಭೋಗಿಸುವುದಿಲ್ಲ." ಇದೇ ತ್ರೈವರ್ಗಿಕ ಸಂನ್ಯಾಸ.

ನಾನು – ನನ್ನದು ಎನ್ನುವುದು ಏನಿದೆಯೋ ಎಲ್ಲವೂ ಭಗವಂತನೇ ಭಗವಂತನಲ್ಲದೆ ನನಗಿನ್ನಾರೂ ಇಲ್ಲ. ರಾಜನು ಹೀಗೆ ನಿಶ್ಚಯಿಸಿಕೊಂಡು ಶ್ರೀ ಶುಕದೇವರನ್ನು ಪ್ರಾರ್ಥಿಸಿದನು.

ಮಹಾತ್ಮನ್ ತಾವು ಭಗವದ್ಗುಣವನ್ನು ಗಾನ ಮಾಡುತ್ತಿದ್ದ ಹಾಗೆಯೇ ನನ್ನ ಹೃದಯಾಂಧಕಾರವು ದೂರವಾಗುತ್ತಿದೆ. ನಾನು ತಮ್ಮನ್ನು ಕೇಳಲು ಇಚ್ಛಿಸುತ್ತೇನೆ. ಭಗವಂತನು ಸೃಷ್ಟಿಯನ್ನು ಹೇಗೆ ಮಾಡಿದನು? ಹೇಗೆ ಪಾಲಿಸುವನು ? ಮತ್ತು ಹೇಗೆ ಸಂಹರಿಸುವನು ?

ಅನಂತ ಶಕ್ತಿ ಸ್ವರೂಪೀ ಪರಮಾತ್ಮನು ಯಾವ-ಯಾವ ಶಕ್ತಿಗಳನ್ನು ಆಶ್ರಯಿಸಿ, ತನ್ನನ್ನು ತಾನೇ ಬೊಂಬೆಗಳನ್ನಾಗಿ ಮಾಡಿಕೊಂಡು ಕುಣಿಸುತ್ತಾನೆ?

ಮಕ್ಕಳು ಬೊಂಬೆಗಳನ್ನು ತಯಾರಿಸುವಂತೆ ಪರಮಾತ್ಮನು ಬ್ರಹ್ಮಾಂಡ ಗಳನ್ನು ರಚಿಸಿ ಹೇಗೆ ಲಯಗೊಳಿಸುತ್ತಾನೆ ?

ಶ್ರೀ ಹರಿಯ ಲೀಲೆಗಳು ಅದ್ಭುತ, ಅಚಿಂತ್ಯ. ಮಹಾವಿದ್ವಾಂಸರೂ ಸಹ ಅವನ ಲೀಲಾರಹಸ್ಯವನ್ನು ಅರಿಯಲಾರರು. ಭಗವಂತನು ಬಹಳ ಕರ್ಮ ಗಳನ್ನು ಮಾಡಬೇಕಾಗಿದೆ. ಅವನು ಪುರುಷರೂಪದಿಂದ ಪ್ರಕೃತಿಯ ವಿಭಿನ್ನ ಗುಣಗಳನ್ನು ಒಂದೇ ಸಾರಿ ಗ್ರಹಿಸುವನೋ ? ಅಥವಾ ಅನೇಕ ಅವತಾರಗಳನ್ನು ಮಾಡಿ ಕ್ರಮಶಃ ಗ್ರಹಿಸುವನೋ ? ನೀವು ವೇದ–ಸಾಂಖ್ಯ ಎರಡರ ಮಹತ್ವ ವನ್ನೂ ಅರಿತಿರುವಿರಿ. ದಯವಿಟ್ಟು ನನ್ನ ಸಂದೇಹಗಳನ್ನು ನಿವಾರಣೆ ಮಾಡಿರಿ.

ಹೀಗೆ ಪರೀಕ್ಷಿತನು ಪ್ರಶ್ನಿಸಲು ರಾಜನ ಭಗವತ್‌ಕಥಾ ಶ್ರವಣದ ಆಗ್ರಹ ವನ್ನು ನೋಡಿ ಶುಕದೇವರು ಭಗವಂತನನ್ನು ಸ್ಮರಿಸುತ್ತಾ ಮಂಗಳಾಚರಣೆ ಯನ್ನು ಮಾಡಿದರು.

ಮಂಗಳಾಚರಣೆಯಿಂದ–ಪುರುಷನು ಪ್ರಾರಂಭಿಸಿದ ಕಾರ್ಯದಲ್ಲಿ ಪ್ರಗತಿ ಯನ್ನು ಕಾಣುತ್ತಾನೆ. ವಿಘ್ನಗಳೆಲ್ಲವೂ ನಿವಾರಣೆಯಾಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಂಥಾರಂಭದಲ್ಲಿ ಮಂಗಳಾಚರಣೆಯು ಅವಶ್ಯಕವೇ ಎಂಬ ವಿಚಾರವಾಗಿ ಮುಕ್ತಾವಳೀ ಗ್ರಂಥದಲ್ಲಿ ವಿಸ್ತಾರವಾಗಿ ವಿವೇಚನೆ ಮಾಡಿದ್ದಾರೆ. ಮಂಗಳಾಚರಣೆಗೆ ವಿಘ್ನಧ್ವಂಸವು ಫಲವೋ ? ಗ್ರಂಥ ಪರಿಸಮಾಪ್ತಿಯು ಫಲವೋ ಎಂದು ವಿಚಾರ ಮಾಡಿ. ಮಂಗಳಾಚರಣೆಗೆ ವಿಘ್ನಧ್ವಂಸವೇ ಫಲವು. ಸಮಾಪ್ತಿಯಾದರೋ ಅವನ ವಿದ್ವತ್ತನ್ನು ಅವಲಂಬಿಸಿರುತ್ತದೆ ಎಂದು ಹೇಳುತ್ತಾರೆ.

ಮಂಗಳಾದೀನಿ – ಮಂಗಳಮಧ್ಯಾನಿ – ಮಂಗಳಾಂತಾನಿ ಶಾಸ್ತ್ರಾಣಿ ಪ್ರಥಂತೇ ಎಂದು ಆದಿ-ಮಧ್ಯಾಂತಗಳಲ್ಲಿ ಮಂಗಳಾಚರಣೆಯ ಅವಶ್ಯಕತೆಯನ್ನು ಹೇಳುತ್ತಾರೆ.

ಮಂಗಳ-ಕಲ್ಯಾಣ ಈ ಎರಡು ಪದಗಳೂ ಶ್ರೀಮದ್ಭಾಗವತದಲ್ಲಿ ಪ್ರಯೋಗದಲ್ಲಿವೆ. ಕಲ್ಯಾಣವೆಂದರೆ ಫಲ. ಫಲದಿಂದ ಸುಖವು ದೊರಕುವುದು. ಸುಖಾತ್ಮಕವಾದುದು ಕಲ್ಯಾಣ.

ನಮಃ ಪರಮ ಕಲ್ಯಾಣ-ನಮಃ ಪರಮ ಮಂಗಳ

ಶ್ರೀ ಶುಕದೇವರು ಮುಂದಿನ ಶ್ಲೋಕದಿಂದ ಮಂಗಳಾಚರಣೆಯನ್ನು ಮಾಡುತ್ತಾರೆ.

ನಮಃ ಪರಸ್ಮೈ ಪುರುಷಾಯ ಭೂಯಸೇ
ಸದುದ್ಭವ ಸ್ಥಾನ ನಿರೋಧ ಲೀಲಯಾ
ಗೃಹೀತ ಶಕ್ತಿ ತ್ರಿತಯಾಯ ದೇಹಿನಾಂ
ಅಂತರ್ಭವಾಯಾನುಪ ಲಕ್ಷ್ಯ ವರ್ತ್ಮನೇ
ಭೂಯಸೇ ಪರಸ್ಮೈ ಪುರುಷಾಯ ನಮಃ

ಅಪರಿಮಿತ ಮಹಿಮಾನ್ವಿತನಾದ-ಸರ್ವೋತ್ತಮ ಪುರುಷನಿಗೆ ನಮಸ್ಕಾರವು.

ಆ ಪುರುಷನ ಸರ್ವೋತ್ತಮತ್ವ-ಅಪರಿಮಿತ ಮಹಿಮಾನ್ವಿತತ್ವವು ಹೇಗೆಂದರೆ, ಅವನು ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗಾಗಿ, ಸತ್ತ್ವರಜಸ್ತಮೋ ಗುಣರೂಪಿಯಾಗಿ, ಬ್ರಹ್ಮ-ವಿಷ್ಣು-ಶಿವಾತ್ಮಕನಾಗಿ ರೂಪವನ್ನು ಧರಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

(ಅಸತಃ – ಪ್ರಪಂಚಸ್ಯ ಉದ್ಭವಾದಿಷು ನಿಮಿತ್ತಭೂತಯಾ ಲೀಲಯಾ ಗೃಹೀತಂ ಬ್ರಹ್ಮಾದಿರೂಪೇಣ ರಜ ಆದಿಶಕ್ತಿತ್ರಯಂ ಯೇನ ತಸ್ಮೈ

ಅಂತರ್ಭಾವಾಯ-ಅಂತರ್ಯಾಮಿಣೇ ಅಂತರ್ಯಾಮಿಯಾದ. ಆದರಿಂದಲೇ ಅನುಪಲಬ್ಧಿವರ್ತ್ಮನೇ. ಇವನ ದಾರಿಯು ಯಾರಿಗೂ ಅರ್ಥವಾಗುವುದಿಲ್ಲ. ಚರಾಚರ ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಅಂತರ್ಯಾಮೀ ರೂಪದಿಂದ ವಿರಾಜಮಾನನಾಗಿದ್ದಾನೆ. ಯಾರು ಪುರುಷನೊ, ಚಿಕ್ಕವನಾಗಿ ಕುಳಿತಿರುವನೊ, ಅಥವಾ-ಪುರುಷನಲ್ಲಿದ್ದರೂ ಪುರುಷನಂತೆ ಚಿಕ್ಕವನಲ್ಲವೋ ಅನಂತನೊ. ಅವನು ಸೃಷ್ಟಿ-ಸ್ಥಿತಿ-ಪ್ರಳಯಾತ್ಮಕ ಲೀಲೆಯನ್ನು ಮನುಷ್ಯನ ಅಂತರಂಗಸ್ಥನಾಗಿಯೆ ಇದ್ದುಕೊಂಡು ನಡೆಸುತ್ತಾನೆ. ಸಾಧು-ಸತ್ಪುರುಷರ ದುಃಖವನ್ನೂ ದೂರ ಮಾಡುತ್ತಾನೆ. ಅಸಂತರಿಗೂ ಮುಕ್ತಿದಾನ ಮಾಡುತ್ತಾನೆ. ಇದೆಲ್ಲವನ್ನೂ ಪರಮಹಂಸಾಶ್ರಮದಲ್ಲಿ ಇದ್ದುಕೊಂಡೇ ನಡೆಸುತ್ತಾನೆ.

ಸಂನ್ಯಾಸವು ಒಂದು ಆಶ್ರಮ. ಅದೊಂದು ಪಂಥವಲ್ಲ. ಮತಧರ್ಮವಲ್ಲ. ಶ್ರೌತ-ಸ್ಮಾರ್ತೋಕ್ತವಾದ ಆಶ್ರಮವು. ಈ ಆಶ್ರಮಿಯು ಪರಮಾತ್ಮನನ್ನು ಅನ್ವೇಷಿಸಿ ತನ್ನಲ್ಲಿಯೆ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

ಅಂತಃಕರಣ ಶುದ್ಧಿಯಿಲ್ಲದವರು ಪರಮಾತ್ಮನನ್ನು ಹೊಂದಲಾರರು.

ಪರಮಾತ್ಮನು ತನ್ನಲ್ಲಿಯೆ ತನ್ನಿಂದ ತಾನೇ ಕ್ರೀಡಿಸುತ್ತಾನೆ.

ಆತ್ಮಕ್ರೀಡ : ಆತ್ಮರತಿ :

ಭಗವಂತನಿಗೆ ಸಮಾನವಾದ ಐಶ್ವರ್ಯವನ್ನು ಮತ್ತಾರೂ ಪಡೆದಿಲ್ಲ. ಅವನಿಗಿಂತ ಅಧಿಕವಾಗಿ ಪಡೆಯುವುದಲ್ಲಿ ಬಂತು ? ಇಂತಹ ಸರ್ವೈಶ್ವರ್ಯ ಸಂಪನ್ನನಾದ, ನಿರಂತರ ಬ್ರಹ್ಮ ಸ್ವರೂಪಿಯಾದ, ಸದಾ ತನ್ನ ಪರ ಬ್ರಹ್ಮ ಸ್ವರೂಪದಲ್ಲಿಯೆ ರಮಿಸುವ ಶ್ರೀ ಕೃಷ್ಣಪರಮಾತ್ಮನಿಗೆ ನಮಸ್ಕಾರವು.

ಶ್ರೀ ಶುಕದೇವರು ಹೇಳುತ್ತಾರೆ.

ಯತ್ಕೀರ್ತನಂ ಯತ್ ಸ್ಮರಣಂ ಯದೀಕ್ಷಣಂ
ಯದ್ವಂದನಂ ಯಚ್ಛ್ರವಣಂ ಯದರ್ಹಣಂ
ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಶಂ
ತಸ್ಮೈ ಸುಭದ್ರ ಶ್ರವಸೇ ನಮೋ ನಮಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಕಥಾ ಕೀರ್ತನ, ಸ್ಮರಣ, ದರ್ಶನ, ವಂದನ, ಶ್ರವಣ, ಪೂಜನಾದಿಗಳು ಜನರ ಪಾಪ ತಾಪಗಳನ್ನು ತತ್ಕಾಲದಲ್ಲಿಯೇ ನಿವಾರಿಸುತ್ತವೆ. ಸದ್ಯೋ ವಿಧುನೋತಿ. ಇದಕ್ಕೆ ಕಾಲಾವಕಾಶವು ಬೇಕಾಗಿಲ್ಲ.

ಕೆಲವರು ಸನಾತನ ಧರ್ಮದ ಮೇಲೆ ಆಕ್ಷೇಪಣೆಯನ್ನು ಮಾಡುತ್ತಾರೆ. ವಿಧರ್ಮೀಯರನ್ನು ಮುಟ್ಟಿದರೆ, ನೋಡಿದರೆ, ಕೂಡಿದರೆ ದೋಷ. ಇದೆಂತಹ ಧರ್ಮ ?

ಆದರೆ ಈ ಧರ್ಮದಲ್ಲಿ ಹೇಳಿರುವ ಪಾಪನಿವೃತ್ತಿಯ ಉಪಾಯವನ್ನೂ ಮನಗಾಣಬೇಕು. ಸೂರ್ಯನನ್ನು ಒಮ್ಮೆ ನೋಡಿದರೆ, ನಮ್ಮ ಬಲಗಿವಿಯನ್ನು ಮುಟ್ಟಿಕೊಂಡರೆ, ಜಲಸ್ಪರ್ಶ ಮಾಡಿದರೆ, ಭಗವನ್ನಾಮವನ್ನು ನೆನೆದರೆ ತತ್ಕಾಲದಲ್ಲಿಯೇ ಪಾಪ ನಿವೃತ್ತಿಯಾಗುವುದು.

ಇಂತಹ ಸುಲಭೋಪಾಯಗಳು ಯಾವ ಧರ್ಮದಲ್ಲಿಯೂ ಇಲ್ಲ.

ಸುಭದ್ರ ಶ್ರವಸೇ ನಮಃ : ಕಿವಿಯಿಂದ ಭದ್ರವನ್ನು ಶ್ರವಣ ಮಾಡಬೇಕು. ಕಣ್ಣುಗಳಿಂದ ಭದ್ರವನ್ನು ನೋಡಬೇಕು. **ಭದ್ರಂ ಕರ್ಣೇಭಿ : ಶೃಣುಯಾಮ ಭದ್ರಂ ಪಶ್ಯೇ ಮಾಕ್ಷಭಿ :**

ಇಲ್ಲಿ "ಸುಭದ್ರ ಶ್ರವಸೇ" ಎಂದು ಹೇಳುತ್ತಾರೆ. ಭದ್ರಕ್ಕಿಂತಲೂ ಮೇಲಿನದು, ಸುಭದ್ರಂ-ಶ್ರವ : ಯಶ : ಭಗವಂತನ ಚರಣಾರವಿಂದಗಳಲ್ಲಿ ಸೇರಿದ ಸತ್ಪುರುಷರು ಬ್ರಹ್ಮಭಾವವನ್ನು ಪಡೆಯುತ್ತಾರೆ. ಭಗವಂತನು ಧರ್ಮಾತ್ಮರನ್ನೂ, ಪುಣ್ಯಾತ್ಮರನ್ನೂ ಉದ್ಧರಿಸುತ್ತಾನೆ. ಇಂತಹ ಕಲ್ಯಾಣಮಯೀ ಕೀರ್ತಿಯುಳ್ಳ ಶ್ರೀ ಕೃಷ್ಣನಿಗೆ ನಮಸ್ಕಾರವು.

ವಿವೇಕಿಗಳಾದವರು ಪರಮಾತ್ಮನ ದಿವ್ಯ ಚರಣಾರವಿಂದಗಳನ್ನು ಆಶ್ರಯಿಸಿ, ಇಹಲೋಕದ ಹಾಗೂ ಪರಲೋಕದ ಆಸಕ್ತಿಯನ್ನು ತೊರೆದು, ಯಾವುದೇ ವಿಧದ ಪರಿಶ್ರಮವನ್ನೂ ಹೊಂದದೆ, ಬ್ರಹ್ಮಭಾವವನ್ನು ಹೊಂದುತ್ತಾರೆ.

ತಪಸ್ವಿಗಳಾಗಲಿ, ದಾನಿಗಳಾಗಲಿ, ಯಶಸ್ವಿಗಳಾಗಲಿ, ಮನಸ್ವಿಗಳಾಗಲಿ, ಸದಾಚಾರಿಗಳಾಗಲಿ, ಅಥವಾ ಮಂತ್ರವಿದರಾಗಲಿ, ತಮ್ಮನ್ನೂ, ತಮ್ಮ ಸಾಧನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನೂ ಭಗವಂತನಲ್ಲಿ ಅರ್ಪಣೆ ಮಾಡಿದ ಹೊರತು, ಕಲ್ಯಾಣಭಾಗಿಗಳಾಗ ುದಿಲ್ಲ.

ಕಿರಾತರು, ಹೂಣರು, ಪುಳಿಂದರು, ಪುಲ್ಕಸರು (ಕಟುಕರು) ಆಭೀರ, ಕಂಕ, ಯವನ, ಖಸ, ಇಂತಹವರೂ ಸಹ ಭಗವದ್ಭಕ್ತರ ಆಶ್ರಯದಿಂದ ಪವಿತ್ರರಾಗುತ್ತಾರೆ. ಇಂತಹವರ ಉದ್ಧಾರಕ್ಕಾಗಿಯೇ ಭಗವದ್ಭಕ್ತರು ಆವಿರ್ಭವಿಸುತ್ತಾರೆ.

ಭಗವಂತನು ಜ್ಞಾನಿಗಳ ಆತ್ಮ.

"ಜ್ಞಾನೀತ್ವಾತ್ಮೈವ ಮೇ ಮತಂ" ಭಕ್ತರುಗಳ ಸ್ವಾಮೀ, ಕರ್ಮಕಾಂಡಿಗಳಿಗೆ ವೇದಮೂರ್ತಿ, ಧಾರ್ಮಿಕರಿಗೆ ಧರ್ಮಮೂರ್ತಿ, ತಪಸ್ವಿಗಳ ತಪಃಸ್ವರೂಪವೇ. ವಿಧಿಶಂಕರಾದಿಗಳೆಲ್ಲರೂ ಆ ಪುರಾಣಪುರುಷನ ದಿವ್ಯಸ್ವರೂಪವನ್ನು ಶುದ್ಧ ಹೃದಯದಿಂದ ಸ್ಮರಿಸುತ್ತಾ, ಆಶ್ಚರ್ಯಚಕಿತರಾಗಿ ಅವನನ್ನು ನೋಡುತ್ತಾರೆ. ಇಂತಹ ಮಂಗಳಮೂರ್ತಿಯು ನಮ್ಮ ಮೇಲೆ ಪ್ರಸನ್ನನಾಗಲಿ.

ಅವನು ಶ್ರೀಯ : ಪತಿಯು, ಸರ್ವಸಂಪತ್ತ್ಯಧಿಷ್ಠಾತ್ರಿಯಾದ ಲಕ್ಷ್ಮೀದೇವಿಯ ಪತಿಯು.

ಯಜ್ಞಪತಿ : ಯಜ್ಞಗಳ ಭೋಕ್ತಾ ಹಾಗೂ ಫಲದಾತಾ. ಪ್ರಜಾಪತಿ : ಪ್ರಜೆಗಳ ಸಂರಕ್ಷಕನು, ಅಂತರ್ಯಾಮಿಯು. ಲೋಕಗಳ ಸಂರಕ್ಷಕನು. ಪೃಥ್ವೀಪತಿಯು. ಇಂತಹವನು ಯದುವಂಶದಲ್ಲಿ ಅವತರಿಸಿ ಅವರ ಸಂರಕ್ಷಕನಾದನು. ಇಂತಹ ಭಕ್ತವತ್ಸಲನಾದ, ಆಶ್ರಿತಸಂರಕ್ಷಕನಾದ ಶ್ರೀ ಕೃಷ್ಣನು ನಮ್ಮ ಮೇಲೆ ಪ್ರಸನ್ನನಾಗಲಿ

ವಿದ್ವಾಂಸರಾದ ಪುರುಷರು ಭಗವಂತನ ಶ್ರೀ ಚರಣಗಳನ್ನು ಚಿಂತಿಸುತ್ತಾ, ಸಮಾಧ್ಯಾದಿ ಅಭ್ಯಾಸಗಳಿಂದ ಪರಿಶುದ್ಧವಾದ ಬುದ್ಧಿಯ ಮೂಲಕ ಆತ್ಮ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.

ಆತ್ಮ ತತ್ತ್ವದರ್ಶಿಗಳಾದಮೇಲೆ ತಮ್ಮ ತಮ್ಮ ಬುದ್ಧಿ-ರುಚಿಗನುಸಾರವಾಗಿ ಆತ್ಮಸ್ವರೂಪವನ್ನು ವರ್ಣಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತುತಃ ಆತ್ಮತತ್ವ್ತ ಭಗವತ್ತತ್ವ್ತ ಎರಡೂ ಒಂದೇ. ಕೆಲವರು ಭಕ್ತರು ಭಗವತ್ತತ್ವ್ತವೆಂದೇ ಹೇಳಬೇಕೆಂದು ಆಗ್ರಹ ಮಾಡುತ್ತಾರೆ.

ಈ ಆಗ್ರಹವು ಸಲ್ಲದು. ಆತ್ಮತತ್ವ್ತವೇ ಭಗವತ್ತತ್ವ್ತವು. ಭಗವತ್ತತ್ವ್ತವೇ ಆತ್ಮತತ್ವ್ತವು.

ತ್ವಂ ಪದಾರ್ಥ ದೃಷ್ಟಿಯಲ್ಲಿ ಆತ್ಮತತ್ವ್ತವು.
ತತ್‌ಪದಾರ್ಥ ದೃಷ್ಟಿಯಲ್ಲಿ ಭಗವತ್ತತ್ವ್ತವು.
ತತ್ತ್ವದೃಷ್ಟಿಯಿಂದ ಎರಡೂ ಒಂದೇ.

ನಮ್ಮಲ್ಲಿ ಪರಿಷ್ಕಾರಾತ್ಮಕ ಶಾಸ್ತ್ರಾರ್ಥಗಳು ನಡೆಯುತ್ತಿರುತ್ತವೆ. ಈ ವಾಕ್ಯಾರ್ಥಗಳಿಂದ ಬುದ್ಧಿಯು ಪರಿಷ್ಕಾರವಾಗುತ್ತದೆ.

ವಸ್ತುವಿನ ಸತ್ಯಜ್ಞಾನವಾದಮೇಲೆ ಪರಿಷ್ಕಾರವು ಬೇಕಿಲ್ಲ. ಪರಿಷ್ಕಾರದಲ್ಲಿಯೇ ಜೀವನವನ್ನು ಕಳೆಯಬಾರದು. ವ್ಯುತ್ಪತ್ತಿವಾದವೇ ಸರ್ವೋತ್ಕೃಷ್ಟವಲ್ಲ.

ಪರಮೇಶ್ವರನ ಜ್ಞಾನವಾದ ಮೇಲೆ ಅವನ ಅನುಭವವಾದ ಮೇಲೆ **"ವದಂತಿ ಚೈತತ್ ಕವಯೋ ಯಥಾರುಚಂ"** ಅವರವರ ರುಚಿಗನುಗುಣವಾಗಿ ವರ್ಣಿಸುತ್ತಾರೆ.

ಸ್ತಂಭವೂ ಬ್ರಹ್ಮ—ಸ್ಥಾವರವೂ ಬ್ರಹ್ಮ, ಸ್ತ್ರೀಯೂ ಬ್ರಹ್ಮ, ಪುರುಷನೂ ಬ್ರಹ್ಮ. ಅವನು ವರ್ಣಿಸಿದ ರೀತಿಯೇ ಪರಮಾತ್ಮನ ವರ್ಣನೆಯಾಗುತ್ತದೆ.

ಅವನಿಗೆ ಪೃಥ್ವಿಯೆಲ್ಲವೂ ಕಾಶಿಯೇ. ಅವನಿಗೆ ಕಾಶಿಯಲ್ಲದ ಧರೆಯು ಇಲ್ಲವೇ ಇಲ್ಲ.

ಎಲ್ಲಾ ನೀರೂ ಗಂಗಾಜಲವೇ. ಅವನು ಹೇಗೆ ಬೇಕಾದರೂ ವರ್ಣಿಸಬಹುದು. ಇಂತಹ ಸರ್ವವ್ಯಾಪೀ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲಿ.

ಪ್ರಚೋದಿತಾ ಯೇನ ಪುರಾ ಸರಸ್ವತೀ
ವಿತನ್ವತಾ ಜಸ್ಯಸತೀಂ ಸ್ಮೃತಿಂಹೃದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಲಕ್ಷಣಾ ಪ್ರಾದುರಭೂತ್ ಕಿಲಾಸ್ಯತಃ
ಸಮೇ ಋಷೀಣಾಂ ಋಷಭಃ ಪ್ರಸೀದತಾಂ

ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಗೆ ವೇದಗಳು ಮರೆತುಹೋಗಿದ್ದುವು. ಆಗ ನಾರಾಯಣನು ಪೂರ್ವಕಲ್ಪದಂತೆ ಅವನಿಗೆ ವೇದಜ್ಞಾನವು ಬರುವುದಕ್ಕೋಸ್ಕರ ವಾಗಧಿಷ್ಠಾತ್ರೀದೇವಿಯನ್ನು ಪ್ರೇರಿಸಿದನು.

ಆಗ ಬ್ರಹ್ಮನ ಮುಖದಿಂದ ಅಂಗೋಪಾಂಗ ಸಹಿತಗಳಾದ ವೇದಗಳು ಹೊರಟವು. ಇದನ್ನೇ ಮೊದಲಿನ ಮಂಗಳಶ್ಲೋಕದಲ್ಲಿಯೂ ಹೇಳಿದ್ದಾರೆ.

"ತೇನೇ ಬ್ರಹ್ಮ ಹೃದಾಯ ಆದಿಕವಯೇ
ಇಂತಹ ಋಷೀಣಾಂ_ಜ್ಞಾನಪ್ರದಾನಾಂ, ಋಷಭಃ
ಶ್ರೇಷ್ಠಃ ಭಗವಾನ್ ಪ್ರಸೀದತಾಂ

ಋಷೀಣಾಂ ಋಷಭ: ನರ-ನಾರಯಣರೂಪ ಎಂದೂ ಅರ್ಥವನ್ನು ಹೇಳುತ್ತಾರೆ.

ಈಗ ಮುಂದಿನ ಶ್ಲೋಕದಿಂದ ಮಹಾತ್ಮಾ ಶುಕರು ತಮ್ಮ ವಾಕ್ಕು ಶ್ರೋತೃ ತ್ವಜನಾ ಹ್ಲಾದಿನಿಯಾಗಿ-ಶೃಂಗಾರ_ಕರುಣಾದಿ ರಸಭರಿತವಾಗಿರ ಬೇಕೆಂದು ಪ್ರಾರ್ಥಿಸುತ್ತಾರೆ.

ಭೂತೈರ್ಮಹದ್ಭಿಃ ಯಇಮಾಃ ಪುರೋವಿಭುಃ
ಭುಜ್ತೇ ಗುಣಾದ್ ಷೋಡಶ ಷೋಡಷಾತ್ಮಕಃ
ಸೋಲಂ ಕೃಷೀಷ್ಟ ಭಗವಾನ್ ವಚಾಂಸಿಮೇ

ಭಗವಂತನು ನನ್ನ ವಾಕ್ಕನ್ನು ಅಲಂಕರಿಸಲಿ ಮತ್ತೊಬ್ಬರು ಮತ್ತೊಬ್ಬರ ವಚನನ್ನು ಅಲಂಕರಿಸುವುದು ಹೇಗೆ ಎಂದರೆ-ಅಂತರ್ಯಾಮಿಯು ಭಗವಾನ್:

ಪಂಚ ಭೂತಾತ್ಮಕವಾದ ಈ ಶರೀರವನ್ನು ಭಗವಂತನು ನಿರ್ಮಿಸಿ, ಇದರಲ್ಲಿ ಜೀವರೂಪದಿಂದ ಭಗವಂತನೇ ವಾಸಮಾಡುತ್ತಿದ್ದಾನೆ. ಹಾಗೂ ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯ, ಪಂಚಪ್ರಾಣ. ಹಾಗೂ ಮನಸ್ಸು ಈ ಹದಿನಾರು ಕಲೆಗಳಿಂದ ಯುಕ್ತನಾಗಿ ಹದಿನಾರು ವಿಷಯಗಳನ್ನು ಭೋಗಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಹ ಸರ್ವ ಭೂತಮಯನಾದ ಭಗವಂತನು ನನ್ನ ವಾಣಿಯನ್ನು ಅಲಂಕರಿಸಲಿ.

ಈಗ ಮಹಾತ್ಮಾವೇದವ್ಯಾಸರನ್ನು ನಮಸ್ಕರಿಸುತ್ತಾರೆ.

ನಮಸ್ತಸ್ಮೈ ಭಗವತೇ ವಾಸುದೇವಾಯ ವೇಧಸೇ
ಪಪುರ್ಜ್ಞಾನಮಯಂ ಸೌಮ್ಯಾಯನ್ಮುಖಾಂಬು
ರುಹಾಸವಂ

ಸತ್ಪುರುಷರು ಯಾರ ಮುಖ ಕಮಲದಿಂದ ಹೊರಟ, ಮಕರಂದಕ್ಕೆ ಸಮಾನವಾದ ಜ್ಞಾನಾಮೃತವನ್ನು ಸೇವಿಸುವರೋ ಆ ವಾಸುದೇವಾವತಾರಿ ಸರ್ವಜ್ಞ ಭಗವಾನ್ ವೇದವ್ಯಾಸರ ಚರಣಾರವಿಂದಗಳಲ್ಲಿ ನನ್ನ ಅನಂತ ನಮಸ್ಕಾರಗಳು. ಅಂಬುರುಹಾಸವಂ–ಕಮಲಮಕರದಂ.

ರಾಜನ್–ವೇದಗರ್ಭ ಸ್ವಯಂಭೂಬ್ರಹ್ಮನು ಭಗವಾನ್ ನಾರಾಯಣನಿಂದ ತನಗೆ ಉಪದೇಶಿಸಲ್ಪಟ್ಟ ಪ್ರಕಾರ ನಾರದರ ಪ್ರಶ್ನೆಗಳಿಗೆ ಉತ್ತರಿಸಿದ ರೀತಿಯಲ್ಲಿ ನಾನೂ ನಿನಗೆ ಉತ್ತರಿಸುತ್ತಿದ್ದೇನೆ. ನಿನಗೆ ನಾನು ಉತ್ತರಿಸುವ ರೀತಿಯಲ್ಲಿಯೇ ನಾನೂ ವ್ಯಾಸರಿಂದ ಉಪದೇಶಿಸಲ್ಪಟ್ಟಿದ್ದೇನೆ.

ಓಂ ತತ್ಸದಿತ್ಯೇವಂದ್ವಿತೀಯ ಸ್ಕಂಧೇ
ಚತುರ್ಥೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ದರ್ಶನ

ಸೃಷ್ಟಿವರ್ಣನೆ

ಓಂ ನಮೋ ಭಗವತೇ ವಾಸುದೇವಾಯ

ದ್ವಿತೀಯ ಸ್ಕಂಧ ಐದನೆಯ ಅಧ್ಯಾಯ

ಒಂದು ಸಾರಿ ದೇವರ್ಷಿನಾರದರು ಬ್ರಹ್ಮನನ್ನು ಕೇಳಿದರು. ನೀನು ನನ್ನ ಜನಕನು ಮಾತ್ರನಲ್ಲ. ಸಕಲದೇವತೆಗಳಲ್ಲಿಯೂ ಶ್ರೇಷ್ಠನು. ಅಲ್ಲದೆ ಸೃಷ್ಟಿಕರ್ತನು, ನಿನಗೆ ಅನಂತ ನಮಸ್ಕಾರಗಳು. ನೀನು ಕೃಪೆಯಿಟ್ಟು ನನಗೆ ಸ್ವಸ್ವರೂಪ ಜ್ಞಾನವನ್ನು ತಿಳಿಸು.

ಯದ್ರೂಪಂ ಯದಧಿಷ್ಠಾನಂ ಯತಃ ಸೃಷ್ಟಮಿದಂ ಪ್ರಭೋ
ಯತ್ ಸಂಸ್ಥಂ ಯತ್ಪರಂ ಯಚ್ಚ ತತ್ತತ್ತ್ವಂವದ ತತ್ತ್ವತಃ

ಈ ಸಂಸಾರದ ಲಕ್ಷಣವೇನು? ಇದರ ಅಧಾರವು ಯಾವುದು? ಇದು ಯಾರಿಂದ ಹುಟ್ಟಿತು? ಇದು ಯಾರ ಅಧೀನದಲ್ಲಿದೆ? ಯಾರಲ್ಲಿ ಲಯವನ್ನು ಹೊಂದುವುದು? ಇದರ ಸ್ವರೂಪವೇನು.

ನೀನು ಇದೆಲ್ಲವನ್ನೂ ತಿಳಿದಿರುವೆ. **ಭೂತ ಭವ್ಯ ಭವತ್ಪ್ರಭುಃ** ಏನಾಗಿದೆಯೋ, ಏನಾಗುತ್ತಿದೆಯೋ ಏನಾಗುವುದೋ ಅದೆಲ್ಲವರ ಸ್ವಾಮಿಯೂ ನೀನೇ ಅಂಗೈನಲ್ಲಿರುವ ಆಮಲಕದಂತೆ ನೀನು ಎಲ್ಲವನ್ನು ತಿಳಿದಿರುವೆ.

ನಿನಗೆ ಈ ಸೃಷ್ಟಿ ಜ್ಞಾನವು ಹೇಗೆ ಬಂದಿತು? ನಿನ್ನ ಆಧಾರವು ಯಾವುದು? ನಿನ್ನ ಪ್ರಭು ಯಾರು? ನಿನ್ನ ಸ್ವರೂಪವೇನು? ನೀನೊಬ್ಬನೇ ಪಂಚ ಭೂತಾತ್ಮಕವಾದ ಈ ಸೃಷ್ಟಿಯನ್ನು ಮಾಡುವೆಯಲ್ಲ? ಇದು ಮಹಾದ್ಭುತವಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜೇಡರ ಹುಳುವು ತನ್ನಿಂದಲೇ ಉತ್ಪನ್ನವಾದ ಬಲೆಯಿಂದ ತಾನು ಕ್ರೀಡಿಸುವಂತೆ, ಜೀವಿಗಳನ್ನು ನೀನೇ ಉತ್ಪನ್ನಮಾಡಿ ನೀನು ಮಾತ್ರ ಅವಿಕಾರಿಯಾಗಿರುವೆಯಲ್ಲ ?

ಜಗತ್ತಿನಲ್ಲಿ ನಾಮರೂಪ ಗುಣಾದಿಗಳಿಂದ ತಿಳಿಯಲ್ಪಡುವ ಸರ್ವವೂ ಉತ್ತಮ – ಮಧ್ಯಮ–ಅಧಮ, ಸತ್–ಅಸತ್ ಯಾವುದೇ ಆಗಿರಲಿ ನಿನ್ನ ಹೊರತು ಯಾರಿಂದಲೂ ಉತ್ಪನ್ನವಾಗಿಲ್ಲ.

ಹೀಗೆ ಸರ್ವೇಶ್ವರನಾಗಿದ್ದಾಗ್ಯೂ, ನೀನು ಏಕಾಗ್ರತೆಯಿಂದ ತಪಸ್ಸಿಗೆ ಕೂರುವೆ? ನಿನಗಿಂತಲೂ ದೊಡ್ಡವರೊಬ್ಬರೂ ಇರುವರೇ ? ಈ ಸಂದೇಹವು ನನ್ನನ್ನು ಕಾಡುತ್ತಿದೆ. ಸರ್ವಜ್ಞನೂ, ಸರ್ವೇಶ್ವರನೂ ಆದ ನೀನು ನಾನು, ಸರಿಯಾಗಿ ತಿಳಿದುಕೊಳ್ಳುವಂತೆ ನನ್ನ ಪ್ರಶ್ನೆಗಳಿಗೆ ಉತ್ತರಿಸು.

ನೋಡಿ ಮನುಷ್ಯನು ಸ್ವಾತ್ಮಭಿನ್ನವಸ್ತುವೊಂದಿದೆಯೆಂಬುದನ್ನು ತಿಳಿದಾಗ ಉದ್ವಿಗ್ನನಾಗುತ್ತಾನೆ.

ಯಾವಾಗ ತನ್ನ ಧ್ಯೇಯವಸ್ತುವೇ ಅನೇಕ ರೂಪಗಳನ್ನು ಧರಿಸಿದೆ ಇದೆಲ್ಲವೂ ಅದರ ನಾಟಕವೇ ಎಂದು ತಿಳಿಯುವನೋ ಆವಾಗ ಆನಂದಿತನಾಗುತ್ತಾನೆ.

"ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತವಾ ಕುಮಾರೀ" ನೀನೇ ಸ್ತ್ರೀಯು, ನೀನೇ ಪುರುಷನು, ನೀನೇ ಕುಮಾರನು, ನೀನೇ ಕುಮಾರಿಯು ಎಂದು ತಿಳಿದಾಗ ಯಾವುದೇ ಭ್ರಮೆಯಾಗಲಿ, ಭೇದ ಭಾವವಾಗಲಿ ಇರುವುದಿಲ್ಲ.

ನಾರದರ ಪ್ರಶ್ನೆಗಳಿಂದ ಆನಂದಿತನಾದ ಬ್ರಹ್ಮನು ಹೇಳಿದನು. ವತ್ಸ, ನೀನು, ಜೀವಿಗಳಲ್ಲಿ ನಿನಗಿರುವ ಕರುಣಾಭಾವನೆಗೆ ಅನುಗುಣವಾಗಿ ನನ್ನನ್ನು ನೀನು ಪ್ರಶ್ನಿಸುತ್ತಿರುವೆ. ಇದರಿಂದ ಭಗವದ್ಗುಣಾನುವಾದ ಪ್ರೇರಣೆಯು ಪ್ರಾಪ್ತವಾಯಿತು.

ನೀನು ನನ್ನ ವಿಷಯದಲ್ಲಿ ಏನು ತಿಳಿದು ಹೇಳಿರುವೆ. ಅದೂ ಸತ್ಯಕ್ಕೆ ದೂರವಾದುದಲ್ಲ. ಏಕೆಂದರೆ ಭಗವತ್ತತ್ತ್ವವನ್ನು ತಿಳಿಯದಿರುವವನಿಗೆ ಹೀಗೆ ತಿಳಿಯುವುದು ಸಾಧುವಾಗಿಯೆ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂರ್ಯ, ಚಂದ್ರ, ಗ್ರಹ, ನಕ್ಷತ್ರಾದಿಗಳು ಯಾರ ತೇಜಸ್ಸಿನಿಂದ ತೇಜಸ್ವಿಗಳಾಗಿ ಬೆಳಗುತ್ತಿರುವರೊ, ಆ ಸ್ವಯಂಪ್ರಕಾಶ ಭಗವಾನ್ ಚಿನ್ಮಯನ ಪ್ರಕಾಶದಿಂದ ನಾನು ಪ್ರಕಾಶಿತನಾಗಿ ಸಂಸಾರವನ್ನು ಪ್ರಕಾಶಿಸುತ್ತಿದ್ದೇನೆ.

ತಸ್ಮೈ ನಮೋ ಭಗವತೇ, ವಾಸುದೇವಾಯ ಧೀಮಹಿ,
ಯನ್ಮಾಯಯಾ ದುರ್ಜಯಯಾ, ಮಾಂ ವದಂತಿ ಜಗದ್ಗುರುಂ.

ಯಾವ ಮಹಾತ್ಮನ ದುರ್ಜಯವಾದ ಮಾಯೆಯಿಂದ ಮೋಹಿತರಾದ ಜನರು, ನನ್ನನ್ನು ಜಗದ್ಗುರುವೆಂದು ತಿಳಿಯುತ್ತಾರೆಯೊ ಅಂತಹ ಭಗವಾನ್ ವಾಸುದೇವನಿಗೆ ನನ್ನ ನಮಸ್ಕಾರವು.

ಈ ಮಾಯೆಯು ಪರಮಾತ್ಮನ ಬಳಿ ಸುಳಿಯುವುದೂ ಇಲ್ಲ. ದೂರ ಓಡಿಹೋಗುತ್ತದೆ.

ಆದರಿಂದ ಮೋಹಿತರಾದ ಸಾಂಸಾರಿಕರು ನಾನು-ನನ್ನದು ಎಂಬ ಭ್ರಾಂತಿಗೆ ಬಿದ್ದು ಒದ್ದಾಡುತ್ತಾರೆ.

ವಸ್ತುತಃ ದ್ರವ್ಯ, ಕಾಲ, ಕರ್ಮ, ಸ್ವಭಾವ, ಜೀವರು ಭಗವಂತನಿಂದ ಭಿನ್ನರಲ್ಲ.

ನಾರಾಯಣ ಪರಾವೇದಾ ದೇವಾ ನಾರಾಯಣಾಂಗಜಾಃ
ನಾರಾಯಣ ಪರಾಲೋಕಾಃ ನಾರಾಯಣ ಪರಾಮುಖಾಃ
ನರಾಯಣ ಪರೋ ಯೋಗೋ ನಾರಾಯಣ ಪರಂತಪಃ
ನಾರಾಯಣ ಪರಂಜ್ಞಾನಂ ನಾರಾಯಣ ಪರಾಗತಿಃ

ವೇದಗಳು ನಾರಾಯಣ ಪರಗಳು. ದೇವತೆಗಳು ನಾರಾಯಣಾಂಗಜರು, ಲೋಕಗಳೆಲ್ಲವೂ ನಾರಾಯಣಪರಗಳು. ಯಜ್ಞ ಯಾಗಾದಿಗಳೆಲ್ಲವೂ ನಾರಾಯಣನ ಪ್ರಸನ್ನತೆಗಾಗಿ ಇವೆ. ಯೋಗ, ತಪಸ್ಸು, ಜ್ಞಾನ ಎಲ್ಲವೂ ನಾರಾಯಣನನ್ನು ತಿಳಿಯುವುದಕ್ಕಾಗಿ. ನಾರಾಯಣನೇ ಶ್ರೇಷ್ಠ ಗತಿಯು.

ಅವನು ದ್ರಷ್ಟೃವಾದರೂ ಈಶ್ವರನು. ನಿರ್ವಿಕಾರನಾದರೂ ಸರ್ವಸ್ವರೂಪನು. ಅವನಿಂದ ನಿರ್ಮಿತನಾದ ನಾನು, ಅವನ ದೃಷ್ಟ್ಯಾನುಗುಣವಾಗಿ, ಅವನ ಇಚ್ಛಾನುಸಾರ ಸೃಷ್ಟಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನು ಮಾಯಾಗುಣಗಳಿಂದ ರಹಿತನು ಹಾಗೂ ಅನಂತನು ಸೃಷ್ಟಿ, ಸ್ಥಿತಿ, ಪ್ರಳಯಗಳಿಗಾಗಿ ಗುಣತ್ರಯಗಳನ್ನೂ ಮಾಯೆಯಿಂದಲೇ ಸ್ವೀಕರಿಸುತ್ತಾನೆ ಗುಣ, ದ್ರವ್ಯ, ಕ್ರಿಯಾಶ್ರಯದಿಂದ, ಮಾಯಾತೀತನಾದರೂ ಮಾಯೆಯಲ್ಲಿರುವಂತೆ, ಕಾರ್ಯ, ಕಾರಣ, ಕರ್ತೃತ್ವಗಳ ಅಭಿಮಾನಿಯಂತೆ ತೋರುತ್ತಾನೆ. ಸಿದ್ಧಪುರುಷರು ಸಂಸಾರದಲ್ಲಿರುವುದಿಲ್ಲವೇ ಹಾಗೆ

ಗುಣಗಳ ಆವರಣಗಳಿಂದ ಆವೃತನಾಗಿರುವ ಭಗವಂತನನ್ನು ಜನರು ತಿಳಿಯಲಾರರು. ಜಗತ್ತಿನ ಹಾಗೂ ನನ್ನ ಏಕಮಾತ್ರ ಸ್ವಾಮಿಯು ಅವನೇ. ಮಾಯಾಧೀಶ್ವರನಾದ ಭಗವಂತನು.

"ಬಹುಸ್ಯಾಂ ಪ್ರಜಾಯೇ ಯೇತಿ" ಎಂದು ಇಚ್ಛಿಸಿದಾಗ ಸ್ವ – ಸ್ವರೂಪದಲ್ಲಿಯೇ ಸ್ವಯಂ ಪ್ರಾಪ್ತವಾದ ಕಾಲ, ಕರ್ಮ, ಸ್ವಭಾವಗಳನ್ನು ಸ್ವೀಕರಿಸಿದನು.

ಭಗವಚ್ಛಕ್ತಿಯಿಂದಲೇ ತ್ರಿಗುಣಗಳಲ್ಲಿ ಕಾಲನು ಕ್ಷೋಭೆಯನ್ನುಂಟು ಮಾಡಿದನು. ಸ್ವಭಾವವು ರೂಪಾಂತರ ಮಾಡಿತು. ಕರ್ಮವು ಮಹತ್ತತ್ತ್ವಕ್ಕೆ ಜನ್ಮವನ್ನು ಕೊಟ್ಟಿತು.

ರಜೋಗುಣ–ತಮೋಗುಣಗಳ ವೃದ್ಧಿಯ ನಂತರ–ಮಹತ್ತತ್ತ್ವದಲ್ಲಿ ವಿಕಾರವುಂಟಾಯಿತು. ಆ ವಿಕಾರದಿಂದ ಜ್ಞಾನ–ಕ್ರಿಯಾ–ದ್ರವ್ಯರೂಪವಾದ ತಮಃಪ್ರಧಾನವಾದ "ಅಹಂಕಾರ"ದ ಉತ್ಪತ್ತಿಯಾಯಿತು. ಅಹಂಕಾರವು ಮೂರು ವಿಧವಾಗಿದೆ. ವೈಕಾರಿಕ, ತೈಜಸ, ತಾಮಸ. ಇವುಗಳು ಕ್ರಮಶಃ ಜ್ಞಾನಶಕ್ತಿ, ಕ್ರಿಯಾಶಕ್ತಿ, ದ್ರವ್ಯಶಕ್ತಿ ಪ್ರಧಾನಗಳಾಗಿವೆ.

ಪಂಚ ಮಹಾಭೂತಗಳಿಗೆ ಕಾರಣರೂಪವಾದ ತಾಮಸಾಹಂಕಾರದಲ್ಲಿ ವಿಕಾರವುಂಟಾಗಿ "ಆಕಾಶ"ದ ಉತ್ಪತ್ತಿಯಾಯಿತು

ಆಕಾಶವು ಶಬ್ದಗುಣಕವು. ಶಬ್ದ ತನ್ಮಾತ್ರೆಯುಳ್ಳದ್ದು. ಶಬ್ದದಿಂದ ದೃಷ್ಟಾ–ದೃಶ್ಯದ ಬೋಧವಾಗುವುದು.

ಆಕಾಶದಲ್ಲಿ ವಿಕಾರವಾಗಿ ಸ್ಪರ್ಶಗುಣಕ ವಾಯುವಿನ ಉತ್ಪತ್ತಿಯಾಯಿತು ಕಾರಣದ ಗುಣವೂ ಇದರಲ್ಲಿ ಬಂದಿತು. ಆದರಿಂದ ವಾಯುವಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಲ್ಲಿ ಶಬ್ದವೂ ಉಂಟು. ಇಂದ್ರಿಯ ಸ್ಫೂರ್ತಿ, ಶರೀರವಲ್ಲಿ ಜೀವನೀಶಕ್ತಿ, ಓಜಸ್ಸು, ಬಲ, ಇವೆಲ್ಲವೂ ವಾಯುವಿನ ರೂಪಗಳು.

ಕಾಲ, ಕರ್ಮ, ಸ್ವಭಾವಕ್ಕನುಗುಣವಾಗಿ ವಾಯುವಿನ ವಿಕಾರದಿಂದ ತೇಜಸ್ಸಿನ ಉತ್ಪತ್ತಿಯಾಯಿತು.

ಇದರ ಪ್ರಧಾನ ಗುಣವು ರೂಪ. ಆಕಾಶ, ವಾಯುಗಳ ಶಬ್ದಸ್ಪರ್ಶಗಳೂ ಇದರಲ್ಲಿವೆ.

ತೇಜಸ್ಸಿನ ವಿಕಾರದಿಂದ ಜಲದ ಉತ್ಪತ್ತಿಯಾಯಿತು. ಜಲದ ಗುಣವು ರಸ. ಕಾರಣತತ್ತ್ವದ ಗುಣಗಳಾದ ಶಬ್ದ, ಸ್ಪರ್ಶ, ರೂಪಗಳೂ ಇದರಲ್ಲಿವೆ.

ಜಲದ ವಿಕಾರದಿಂದ ಪೃಥ್ವಿಯ ಉತ್ಪತ್ತಿಯಾಯಿತು. ಇದರ ಗುಣ ಗಂಧ. **ಕಾರಣ ಗುಣಾ: ಕಾರ್ಯೇ ಸಂಕ್ರಾಮಂತಿ** ಎಂಬ ನ್ಯಾಯದಂತೆ ಶಬ್ದ, ಸ್ಪರ್ಶ, ರೂಪ, ರಸಗಳೂ ಇದರಲ್ಲಿವೆ,

ವೈಕಾರಿಕ ಅಹಂಕಾರದಿಂದ ಮನಸ್ಸು, ಇಂದ್ರಿಯಗಳು, ಇಂದ್ರಿಯಾಧಿಷ್ಠಾತೃ ದೇವತೆಗಳೂ ಉತ್ಪನ್ನರಾದರು. ಅವರ ಹೆಸರುಗಳು ಹೀಗಿವೆ. ದಿಕ್, ವಾಯು, ಸೂರ್ಯ, ವರುಣ, ಅಶ್ವಿನೀಕುಮಾರ, ಅಗ್ನಿ, ಇಂದ್ರ, ವಿಷ್ಣು, ಮಿತ್ರ, ಪ್ರಜಾಪತಿ.

ತೈಜಸಾಹಂಕಾರದಿಂದ ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ, ಘ್ರಾಣ, ವಾಕ್, ಹಸ್ತ, ಪಾದ, ಗುದಾ, ಜನನೇಂದ್ರಿಯ, ಈ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು ಹುಟ್ಟಿದುವು. ಹಾಗೂ ಜ್ಞಾನಶಕ್ತಿರೂಪ ಬುದ್ಧಿಯೂ, ಕ್ರಿಯಾಶಕ್ತಿರೂಪ ಪ್ರಾಣವೂ ತೈಜಸಾಹಂಕಾರದಿಂದ ಹುಟ್ಟಿದುವು.

ಒಂದು ಸಮಯದವರೆಗೂ ಪಂಚಭೂತಗಳೂ, ಇಂದ್ರಿಯಗಳೂ, ಮನಸ್ಸೂ, ಸತ್ತ್ವಾದಿ ತ್ರಿಗುಣಗಳೂ, ಪರಸ್ಪರ ಸಂಘಟಿತಗಳಾಗಲಿಲ್ಲ. ಆದರಿಂದ ಭೋಗಾಯತನವಾದ ಈ ಶರೀರದ ಉತ್ಪತ್ತಿಯು ಸಾಧ್ಯವಾಗಲಿಲ್ಲ.

ಭಗವಚ್ಛಕ್ತಿಯ ಪ್ರೇರಣೆಯಿಂದ ಇವುಗಳು ಒಂದರೊಡನೊಂದು ಸೇರಿ ಕೊಂಡವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಸ್ಪರ ಕಾರ್ಯಕಾರಣಭಾವವನ್ನು ಸ್ವೀಕರಿಸಿ ವ್ಯಷ್ಟಿರೂಪವಾದ ಪಿಂಡವನ್ನೂ, ಸಮಷ್ಟಿರೂಪವಾದ ಬ್ರಹ್ಮಾಂಡವನ್ನೂ ರಚಿಸಿದುವು.

ಬ್ರಹ್ಮಾಂಡರೂಪವಾದ ಈ ಅಂಡವು ಸಹಸ್ರ ವರ್ಷಗಳ ಕಾಲ ನಿರ್ಜೀವ ರೂಪದಿಂದ ಜಲದಲ್ಲಿ ಬಿದ್ದಿದ್ದಿತು.

ನಂತರ ಕಾಲ, ಕರ್ಮ, ಸ್ವಭಾವವನ್ನು ಸ್ವೀಕರಿಸಿದ ಭಗವಂತನು ಅದನ್ನು ಉಜ್ಜೀವಗೊಳಿಸಿದನು. ಕಾಲಕ್ರಮದಲ್ಲಿ ಆ ಅಂಡವನ್ನು ಭೇದಿಸಿಕೊಂಡು ವಿರಾಟ್‌ಪುರುಷನ ಆವಿರ್ಭಾವವಾಯಿತು. ಅವನ ಊರೂ, ಬಾಹೂ, ಅಂಘ್ರಿ, ನೇತ್ರ, ಮುಖ, ತಲೆಗಳು ಸಹಸ್ರ ಸಂಖ್ಯೆಯಲ್ಲಿದ್ದುವು. ಅವನ ಒಂದೊಂದು ಅಂಗದಲ್ಲಿಯೂ ಚತುರ್ದಶ ಭುವನಗಳ ಕಲ್ಪನೆಯನ್ನು ಮಾಡುತ್ತಾರೆ.

ಬ್ರಾಹ್ಮಣನು ವಿರಾಟಪುರುಷನ ಮುಖವಾದರೆ. ಕ್ಷತ್ರಿಯರು ಭುಜ ಗಳು, ವೈಶ್ಯರು ಊರುಗಳು, ಶೂದ್ರರು ಕಾಲುಗಳು.

ಕಾಲಿನಿಂದ ಸೊಂಟದವರೆಗೆ ಅತಲಾದಿ ಏಳು ಲೋಕಗಳು. ಸೊಂಟದಲ್ಲಿ ಭೂಲೋಕ, ನಾಭಿಯಲ್ಲಿ ಭುವರ್ಲೋಕ, ಹೃದಯದಲ್ಲಿ ಸ್ವರ್ಗಲೋಕ, ವಕ್ಷ ಸ್ಥಳದಲ್ಲಿ ಮಹರ್ಲೋಕ, ಕುತ್ತಿಗೆಯಲ್ಲಿ ಜನಲೋಕ, ಸ್ತನಪ್ರದೇಶದಲ್ಲಿ ತಪೋ ಲೋಕ, ಮಸ್ತಕದಲ್ಲಿ ಬ್ರಹ್ಮನ ನಿವಾಸವಾದ ಸತ್ಯಲೋಕ ಹೀಗೆ ಕಲ್ಪಿಸುತ್ತಾರೆ.

ಹೀಗೆ ವರ್ಣಿಸಿ ಹೇಳುವುದರ ತಾತ್ಪರ್ಯವೇನೆಂದರೆ. ಜಗತ್ತಿನ ಮೂಲವು ಪರಮಾತ್ಮಾ. ಈ ಸೃಷ್ಟಿಯು ರೂಪಾಭಾಸ ಮಾತ್ರ. ಅವನಿಂದಲೇ ಆಗಿದೆ. ಅಥವಾ ಅವನಲ್ಲಿ ತೋರುತ್ತಿದೆ. ಯದ್ಯಪಿ ಈ ವರ್ಣನೆಗಳಿಂದ ಏನೂ ಪ್ರಯೋಜನವಿಲ್ಲ. ಇವುಗಳ ಬಗ್ಗೆ ಅಲ್ಲಿ ಹಾಗೆ, ಇಲ್ಲಿ ಹೀಗೆ ಎಂಬ ವಾದ ವಿವಾದಗಳೂ ಸಲ್ಲದು.

ಎಲ್ಲವೂ ಪರಮೇಶ್ವರನ ಶರೀರವೇ ಎಂದು ತಿಳಿದು ಅಖಂಡ ಪರಮಾತ್ಮ ನನ್ನು ಧ್ಯಾನಿಸಬೇಕು. ಇದೇ ಮುಖ್ಯ ತಾತ್ಪರ್ಯವು.

ಓಂ ತತ್ಸದಿತ್ಯೇ ವಂ ದ್ವಿತೀಯ ಸ್ಕಂಧೇ

ಪಂಚಮೋಧ್ಯಾಯ :

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತದರ್ಶನ

ದ್ವಿತೀಯ ಸ್ಕಂಧ – ಅಧ್ಯಾಯ ೬.

ವಿರಾಟ್‌ಪುರುಷನ ವಿಭೂತಿ ವರ್ಣನೆ

ಓಂ ನಮೋ ಭಗವತೇ ವಾಸುದೇವಾಯ

ಬ್ರಹ್ಮದೇವನು ಆಖ್ಯಾನವನ್ನು ಮುಂದುವರಿಸುತ್ತಿದ್ದಾನೆ. ಪುರುಷ ಸೂಕ್ತರೀತ್ಯಾ ಈ ಅಧ್ಯಾಯದಲ್ಲಿ ವೈರಾಜ್ಯ ವಿಭೂತಿಯನ್ನು ನಿರೂಪಿಸುತ್ತಾರೆ.

ವಿರಾಟ್‌ಪುರುಷನ ಮುಖದಿಂದ ವಾಣೀ-ವಾಣಿಯ ಅಧಿಷ್ಠಾತಾ ಅಗ್ನಿಯ ಉತ್ಪತ್ತಿಯಾಯಿತು.

ಅವನ ತ್ವಗಾದಿ ಸಪ್ತಧಾತುಗಳಿಂದ ಗಾಯತ್ರೀ, ತ್ರಿಷ್ಟುಪ್. ಅನುಷ್ಟುಪ್, ಉಷ್ಣಿಕ್, ಬೃಹತೀ, ಪಂಙ್ಕ್ತಿ, ಜಗತೀ, ಸಪ್ತಛಂದಸ್ಸುಗಳು ಉತ್ಪನ್ನವಾದುವು.

ವಿರಾಟ್‌ಪುರುಷನ ಜಿಹ್ವೆಯಿಂದ ಮನುಷ್ಯರು, ಪಿತೃದೇವತೆಗಳು, ದೇವತೆಗಳ ಅನ್ನ, ಎಲ್ಲಾ ವಿಧದ ರಸಗಳು, ರಸನೇಂದ್ರಿಯ ಹಾಗೂ ತದಧಿಷ್ಠಾತೃದೇವತೆಯಾದ ವರುಣನ ಉತ್ಪತ್ತಿಯಾಯಿತು.

ಅವನ ನಾಸಾಛಿದ್ರಗಳಿಂದ ಪಂಚಪ್ರಾಣಗಳೂ, ವಾಯುವೂ, ಘ್ರಾಣೇಂದ್ರಿಯದಿಂದ ಅಶ್ವಿನೀಕುಮಾರರೂ ಸರ್ವೌಷಧಿಗಳೂ, ಸಾಧಾರಣ ಹಾಗೂ ವಿಶೇಷವಾದ ಗಂಧವೂ ಉತ್ಪನ್ನವಾದುವು. ಅವನ ನೇತ್ರಗಳಿಂದ ರೂಪ-ತೇಜಸ್ಸುಗಳೂ, ಸೂರ್ಯ-ಚಂದ್ರರೂ ಜನಿಸಿದರು. ಕಿವಿಗಳಿಂದ ಸರ್ವದಿಕ್ಕುಗಳೂ, ಆಕಾಶಶಬ್ದಗಳೂ ಹುಟ್ಟಿದವು.

ಸಾಂಸಾರಿಕ ಸರ್ವವಸ್ತುಗಳ ಸಾರಕ್ಕೂ, ಸೌಂದರ್ಯಕ್ಕೂ ಅವನ ದೇಹವು ಭಂಡಾರದಂತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲಾ ಯಜ್ಞಗಳೂ, ಸ್ಪರ್ಶ - ವಾಯುಗಳೂ ಅವನ ಚರ್ಮದಿಂದ ಹೊರಟವು.

ಅವನ ರೋಮಗಳು ಎಲ್ಲಾ ಉದ್ಭಿಜ ಪದಾರ್ಥಗಳ ಜನ್ಮಸ್ಥಾನಗಳು.

ಅವನ ಕೇಶ, ಶ್ಮಶ್ರು, ನಖಗಳು ಮೇಘ, ವಿದ್ಯುತ್, ಶಿಲಾ ಲೋಹಾದಿ ಧಾತುಗಳ ಜನ್ಮಸ್ಥಾನಗಳು.

ಅವನ ಭುಜಗಳಿಂದ ಲೋಕರಕ್ಷಕರಾದ ಲೋಕಪಾಲಕರ ಉತ್ಪತ್ತಿಯಾಯಿತು. ಭೂ : ಭುವ : ಸುವ : ಈ ಮೂರು ಲೋಕಗಳಿಗೂ ಅವನ ಚಲನವಲನೆಯೇ ಆಶ್ರಯವು. ಅವನ ಚರಣಕಮಲಗಳು ಪ್ರಾಪ್ತಿರಕ್ಷಕಗಳು, ಭಯನಿವಾರಕಗಳು, ಸರ್ವಕಾಮನಾಪೂರಕಗಳು.

ವಿರಾಟ್‌ಪುರುಷನ ಲಿಂಗವು ಜಲ, ವೀರ್ಯ, ಸೃಷ್ಟಿ, ಮೇಘ ಹಾಗೂ ಪ್ರಜಾಪತಿಗೆ ಆಧಾರವು. ಹಾಗೂ ಮೈಥುನಜನಿತ ಆನಂದದ ಉದ್ಗಮಸ್ಥಾನವು.

ಅವನ ಪಾಯು ಇಂದ್ರಿಯವು ಯಮ-ಮಿತ್ರರ ಮಲತ್ಯಾಗದ, ನಿರಋತಿ ಮೃತ್ಯು, ನರಕಗಳ ಉತ್ಪತ್ತಿ ಸ್ಥಾನವು. ಅವನ ಹಿಂಭಾಗದಿಂದ ಪರಾಜಯವೂ, ಅಧರ್ಮವೂ, ಅಜ್ಞಾನಗಳೂ ಹುಟ್ಟಿದುವು.

ನಾಡಿಗಳಿಂದ ನದೀ-ನದಗಳೂ, ಮೂಳೆಗಳಿಂದ ಪರ್ವತಗಳೂ, ನಿರ್ಮಾಣವಾದುವು.

ಅವನ ಉದರದಲ್ಲಿ ಮೂಲಪ್ರಕೃತಿಯೂ, ರಸನಾಮಕ ಧಾತುವೂ, ಸಮುದ್ರಗಳೂ, ಸರ್ವಪ್ರಾಣಿಗಳ ಮೃತ್ಯುವೂ ವಾಸವಾಗಿವೆ.

ಅವನ ಹೃದಯವು ಮನಸ್ಸಿನ ಜನ್ಮಭೂಮಿ. ನಾನು, ನೀನು, ಧರ್ಮ, ಸನಕಾದಿಗಳು, ಶಂಕರ, ವಿಜ್ಞಾನ, ಅಂತಃಕರಣಗಳೆಲ್ಲವೂ ಅವನ ಚಿತ್ತಾಶ್ರಿತಗಳು. ಅವನಿಂದಲೇ ಈ ಬ್ರಹ್ಮಾಂಡಗಳೆಲ್ಲವೂ ಹುಟ್ಟಿವೆ. ಎಲ್ಲವನ್ನೂ ಅವನು ವ್ಯಾಪಿಸಿದ್ದಾನೆ.

ಅವನಲ್ಲಿ ಈ ವಿಶ್ವವು ದಶಾಂಗುಲ ಪರಿಮಾಣದಲ್ಲಿ ವ್ಯಾಪ್ತವಾಗಿದೆ.

ದಶಾಂಗುಲ ಪರಿಮಾಣವೆಂದರೆ, ಬ್ರಹ್ಮಾಂಡದ ಸಪ್ತಾವರಣಗಳನ್ನೂ ವರ್ಣಿಸುತ್ತಾ ವೇದಾಂತ ಪ್ರಕ್ರಿಯಾಕಾರರು ಹೇಳುತ್ತಾರೆ, ಪೃಥ್ವಿಗೆ ಹತ್ತರಷ್ಟು

Sri Vidyabharathi Book Centre, Sringeri

 CC-O. In Public Domain. Digitized by eGangotri

ಜಲ, ಜಲಕ್ಕೆ ಹತ್ತರಷ್ಟು ಅಗ್ನಿ, ಅಗ್ನಿಗೆ ಹತ್ತರಷ್ಟು ವಾಯು, ವಾಯುವಿಗೆ ಹತ್ತರಷ್ಟು ಆಕಾಶ, ಅದಕ್ಕೆ ಹತ್ತರಷ್ಟು ಅಹಂಕಾರ, ಅಹಂಕಾರಕ್ಕೆ ಹತ್ತರಷ್ಟು ಮಹತ್ತತ್ತ್ವ. ಅದಕ್ಕೆ ಹತ್ತರಷ್ಟು ಮೂಲಪ್ರಕೃತಿ. ಈ ಮೂಲಪ್ರಕೃತಿಯು ಭಗವಂತನ ಒಂದು ಪಾದ. ಹೀಗೆ ಭಗವಂತನ ಮಹತ್ತ್ವವು ಹೇಳಲ್ಪಟ್ಟಿದೆ.

ಇದನ್ನು ದಶಾಂಗುಲ ನ್ಯಾಯವೆಂದು ಕರೆಯುತ್ತಾರೆ. ಸೂರ್ಯನು ಸೂರ್ಯಮಂಡಲವನ್ನು ಪ್ರಕಾಶಿಸುತ್ತಲೇ ಹೊರಗಡೆಯು ಪ್ರಕಾಶಕನೂ ಆಗಿರುವಂತೆ, ಪುರಾಣಪುರುಷ ಪರಮಾತ್ಮನು ಸಂಪೂರ್ಣ ವಿರಾಟ್‌ವಿಗ್ರಹವನ್ನು ಪ್ರಕಾಶಿಸುತ್ತಾ ಅದರ ಒಳಗೂ ಹೊರಗೂ ಏಕರಸನಾಗಿದ್ದಾನೆ.

ಮಾನವನ ಸಂಕಲ್ಪ, ವಿಕಲ್ಪ, ಕ್ರಿಯಾದಿಗಳಿಂದ ಏನೇನಾಗುವುದೊ ಅವೆಲ್ಲಕ್ಕಿಂತಲೂ ಪರನು. ಅವನು ಮೋಕ್ಷಸ್ವಾಮಿಯು. ಯಾರೂ ಅವನ ಮಹಿಮೆಯನ್ನು ತಿಳಿಯಲಾರರು. ಸಂಪೂರ್ಣ ಲೋಕಗಳೆಲ್ಲವೂ ಅವನ ಅಂಶ ಮಾತ್ರಗಳು. ಅವುಗಳಲ್ಲಿ ಸರ್ವಪ್ರಾಣಿಗಳೂ ವಾಸಮಾಡುತ್ತವೆ.

ಭೂಲೋಕ, ಭುವರ್ಲೋಕ, ಸುವರ್ಲೋಕಗಳ ಮೇಲೆ ಮಹರ್ಲೋಕ ವಿದೆ. ಅದರ ಮೇಲೆ ಜನೋಲೋಕ, ತಪೋಲೋಕ, ಸತ್ಯಲೋಕಗಳೂ ಇವೆ. ಅವುಗಳು ಅಮೃತ, ಕ್ಷೇಮ, ಅಭ್ಯುದಯಗಳ ವಾಸಸ್ಥಾನವಾಗಿವೆ.

ಆ ಮೂರು ಲೋಕಗಳಲ್ಲಿ ಬ್ರಹ್ಮಚಾರಿಗಳು, ವಾನಪ್ರಸ್ಥರು, ಸನ್ಯಾಸಿಗಳು ವಾಸ ಮಾಡುತ್ತಾರೆ.

ದೀರ್ಘಕಾಲ ಬ್ರಹ್ಮಚರ್ಯವನ್ನು ಪಾಲಿಸದಿರುವವರು ಭೂಲೋಕ, ಭುವರ್ಲೋಕ, ಸುವರ್ಲೋಕಗಳಲ್ಲಿ ವಾಸಮಾಡುತ್ತಾರೆ.

ಶಾಸ್ತ್ರಗಳಲ್ಲಿ ಎರಡು ವಿಧವಾದ ಮಾರ್ಗಗಳನ್ನು ಹೇಳಿದ್ದಾರೆ. ಒಂದು ಅವಿದ್ಯಾರೂಪವಾದ ಕರ್ಮಮಾರ್ಗ. ಇದು ಸಕಾಮ ಪುರುಷರಿಗಾಗಿ. ಎರಡನೆಯದು ಉಪಾಸನಾರೂಪ ವಿದ್ಯಾಮಾರ್ಗವು. ಇದು ನಿಷ್ಕಾಮ ಉಪಾಸಕರಿಗಾಗಿ ಇದೆ.

ಮಾನವರು ಈ ಎರಡರಲ್ಲಿ ಒಂದನ್ನು ಆಶ್ರಯಿಸಿ ಭೋಗದಾಯಕವಾದ ದಕ್ಷಿಣ ಮಾರ್ಗದಲ್ಲಿ, ಅಥವಾ ಮೋಕ್ಷದಾಯಕವಾದ ಉತ್ತರ ಮಾರ್ಗದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಯಾಣ ಮಾಡುತ್ತಾರೆ. ಆದರೆ-ಪುರುಷೋತ್ತಮನಾದ ನಾರಾಯಣನೇ ಎರಡು ಮಾರ್ಗಗಳ ಆಧಾರ ಭೂತನೆಂಬುವುದನ್ನು ತಿಳಿದುಕೊಂಡಿರಬೇಕು.

ಸೂರ್ಯನು ತನ್ನ ಕಿರಣಗಳಿಂದ ಎಲ್ಲವನ್ನು ಪ್ರಕಾಶಗೊಳಿಸಿದರೂ. ತಾನು ಮಾತ್ರ ಪೃಥಕ್ಕಾಗಿರುವಂತೆ. ಪರಮಾತ್ಮನು ಬ್ರಹ್ಮಾಂಡಗಳ ಹಾಗೂ ವಿರಾಟನ ಉತ್ಪತ್ತಿಗೆ ಕಾರಣನಾಗಿ. ಪಂಚ ಭೂತಗಳು. ಏಕಾದಶೇಂದ್ರಿಯಗಳು, ಹಾಗೂ ತ್ರಿಗುಣಾತ್ಮಿಕಾ ಪ್ರಕೃತಿಯ ಪ್ರಕಾಶಕನಾಗಿದ್ದರೂ ಅವುಗಳಿಂದ ಪೃಥಕ್ಕಾಗಿರುತ್ತಾನೆ.

ನಾರದ – ನಾನು ಈ ವಿರಾಟ್‌ಪುರುಷನ ನಾಭಿಕಮಲದಿಂದ ಹುಟ್ಟಿದಾಗ, ಈ ವಿರಾಟ್‌ಪುರುಷನ ಅಂಗಗಳ ಹೊರತು ಬೇರೆ ಯಾವ ಯಾಜ್ಞಿಕ ಸಾಮಗ್ರಿಗಳೂ ನನಗೆ ದೊರೆಯಲಿಲ್ಲ.

ಆಗ ನಾನು ಅವನ ಅಂಗಗಳಿಂದಲೇ. ಯಜ್ಞಪಶು, ಯೂಪಸ್ತಂಭ, ಕುಶ. ಯಜ್ಞಭೂಮಿ. ಯಜ್ಞದ ಉತ್ತಮಕಾಲ ಇವುಗಳೆಲ್ಲವನ್ನೂ ಕಲ್ಪಿಸಿಕೊಂಡೆನು. ಹಾಗೂ ಯಾಜ್ಞಿಕ ಪಾತ್ರೆಗಳು. ಯವಾದಿ ಔಷಧಿಗಳು. ಘೃತ ಆದಿ ಸ್ನೇಹ ಪದಾರ್ಥಗಳು, ಷಡ್ರಸಗಳು, ಲೋಹಗಳು, ಮಣ್ಣು, ಜಲ, ಋಕ್ಕು, ಯಜುಸ್ಸು. ಸಾಮ. ಚಾತುರ್ಹೋತ್ರ. ಯಾಜ್ಞಿಕ ಹೆಸರುಗಳು. ಮಂತ್ರ, ದಕ್ಷಿಣಾ, ವ್ರತ. ದೇವತೆಗಳ ಹೆಸರುಗಳು, ನಿಯಮಗಳು. ಸಂಕಲ್ಪ, ಅನುಷ್ಠಾನದ ರೀತಿಗಳು. ಗತಿ - ಮತಿ, ಶ್ರದ್ಧಾ, ಪ್ರಾಯಶ್ಚಿತ್ತ, ಸಮರ್ಪಣ ಇತ್ಯಾದಿ ಸಕಲ ಯಜ್ಞಸಾಮಗ್ರಿಗಳನ್ನೂ ವಿರಾಟ್‌ಪುರುಷನ ಅಂಗಗಳಿಂದಲೇ ಕಲೆ ಹಾಕಿದನು.

ನಂತರ ಯಜ್ಞರೂಪೀ ಭಗವಂತನನ್ನು ಯಜ್ಞದ ಉಪಕರಣಗಳಿಂದ ಅರ್ಚಿಸಿದೆನು.

ನಂತರ ನಿನ್ನ ಹಿರಿಯ ಸಹೋದರರಾದ ಒಂಭತ್ತು ಪ್ರಜಾಪತಿಗಳೂ. ಚಿತ್ತೈಕಾಗ್ರತೆಯಿಂದ ಅಂತರ್ಯಾಮಿ ವಿರಾಟ್ ಪುರುಷನನ್ನು ಆರಾಧಿಸಿದರು.

ಆಮೇಲೆ ಆಗಾಗ್ಗೆ ಮನುಗಳೂ. ಋಷಿಗಳೂ, ಪಿತೃದೇವತೆಗಳೂ, ಇಂದ್ರಾದಿಗಳೂ. ದೈತ್ಯರು ಮನುಷ್ಯರು ಎಲ್ಲರೂ ಯಜ್ಞಾಚರಣೆಯಿಂದ ಅವನನ್ನು ಆರಾಧಿಸಿದರು,

Sri Vidyabharathi Book Centre, Sringeri

 CC-O. In Public Domain. Digitized by eGangotri

ಈ ಸಂಪೂರ್ಣ ವಿಶ್ವವು ಭಗವಾನ್ ನಾರಾಯಣನಲ್ಲಿದೆ. ಅವನೇನೋ ಸ್ವಭಾವತಃ ಪ್ರಾಕೃತಗುಣಾತೀತನು ಆದರೆ ಮಾಯೆಯಿಂದ ಗುಣವಂತನಂತೆ ಕಾಣಿಸುತ್ತಾನೆ. ನನ್ನ ಸಂಸಾರ ರಚನೆಗೆ ಅವನೇ ಪ್ರೇರಕನು.

ಅವನ ಆಜ್ಞಾನುಸಾರವಾಗಿರುದ್ರನು ಇದನ್ನು ಉಪ ಸಂಹರಿಸುತ್ತಾನೆ. ವಿಷ್ಣುವು ಪರಿಪಾಲಕನಾಗಿದ್ದಾನೆ.

ಅವನು ತ್ರಿಗುಣಾತೀತನಾದರೂ ತ್ರಿಗುಣಾತ್ಮಕನು.

ನಾನ್ಯದ್ಭಗವತಃ ಕಿಂಚಿತ್,
ಭಾವ್ಯಂಸದಸದಾತ್ಮಕಂ

ಭಾವಾಽಭಾವಗಳಲ್ಲಿಯೂ, ಕಾರ್ಯಕಾರಣ ರೂಪದಲ್ಲಿಯೂ ಭಗವದ್ಭಿನ್ನವಾದುದು ಮತ್ತೊಂದಿಲ್ಲ.

ನೋಡಿ. ಮತಾಂತರದವರು ನಮ್ಮ ಈಶ್ವರನ ಗುಣವರ್ಣನೆಯನ್ನು ಕೇಳಿ ಆಶ್ಚರ್ಯ ಚಕಿತರಾಗುತ್ತಾರೆ.

ಸಾಂಸಾರಿಕರು ಸತ್ತನ್ನು ಈಶ್ವರನೆಂದು ಒಪ್ಪುತ್ತಾರೆ. ಆದರೆ ಅಸತ್ತನ್ನು ಈಶ್ವರನೆಂದು ಒಪ್ಪುವುದಿಲ್ಲ. ಭಗವಂತನು ಎದೆ ತಟ್ಟಿಕೊಂಡು ಹೇಳುತ್ತಾನೆ.

"ಅಮೃತಂ ಚೈವಮೃತ್ಯುಶ್ಚ-ಸದಸಚ್ಚಾಹ ಮರ್ಜುನ"

ಅಮೃತವೂ ನಾನೇ. ಮೃತ್ಯುವೂ ನಾನೇ ಸತ್ತೂ ನಾನೇ ಅಸತ್ತೂ ನಾನೇ.

ಇಂತಹ ಭಗವಂತನು ಆರ್ಯ ಸಂಸ್ಕೃತಿಯಲ್ಲಿ ಮಾತ್ರ ದೊರಕುವನೇ ಹೊರತು ಮತ್ತೆಲ್ಲಿಯೂ ದೊರಕುವುದಿಲ್ಲ.

ಬ್ರಹ್ಮನು ನಾರದರಿಗೆ ಹೇಳುತ್ತಾನೆ.

ನ ಭಾರತೀ ಮೇಽಙ್ಗ ಮೃಷೋಪ ಲಕ್ಷ್ಯತೇ
ನವೈಕ್ವಚಿನ್ಮೇ ಮನಸೋ ಮೃಷಾಗತಿ:
ನಮೇ ಹೃಷೀಕಾಣಿ ಪತಂತ್ಯ ಸತ್ಪಥೇ
ಯನ್ಮೇ ಹೃದೌತ್ಕಂಠ್ಯ ವತಾಧೃತೋಹರಿ:

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಶ್ಲೋಕದಲ್ಲಿ ಭಗವದ್ಭಕ್ತರ ಉತ್ಕೃಷ್ಟತೆಯನ್ನು ಆತ್ಮೋದಾಹರಣೆಯಿಂದ ತಿಳಿಸುತ್ತಾನೆ.

ನಾರದ, ನಾನು ಯಾವಾಗಲೂ ಪ್ರೇಮದಿಂದ ನನ್ನ ಹೃದಯದಲ್ಲಿ ಭಗವಂತನನ್ನು ಧ್ಯಾನಿಸುತ್ತಿರುತ್ತೇನೆ. ಆದರಿಂದ ನನ್ನ ಮಾತು ಅಸತ್ಯವಾಗುವುದಿಲ್ಲ.

ಆದರೆ ಭಗವಧ್ಯಾನಿಗಳು ಸುಳ್ಳಾಡುವುದಿಲ್ಲ. ಸುಳ್ಳಾಡುವವರು ಭಗವಧ್ಯಾನಿಗಳಾಗಲು ಸಾಧ್ಯವಿಲ್ಲ. ನನ್ನ ಮನಸ್ಸಂಕಲ್ಪವು ಅಸತ್ಯವಾಗುವುದಿಲ್ಲ. ನನ್ನ ಇಂದ್ರಿಯಗಳು ದುರ್ಮಾರ್ಗದಲ್ಲಿ ಪ್ರವರ್ತಿಸುವುದಿಲ್ಲ.

ನಾನು ವೇದಮೂರ್ತಿಯು. ನನ್ನ ಜೀವನವು ತಪಸ್ಯಾಮಯವಾದುದು. ಎಲ್ಲಾ ಪ್ರಜಾಪತಿಗಳೂ ನನ್ನನ್ನು ವಂದಿಸುತ್ತಾರೆ. ನಾನು ಅವರ ಸ್ವಾಮಿಯು.

ಆದರೆ ನಾನು ಮೊದಲು ಯೋಗಾನುಷ್ಠಾನ ಸಂಪನ್ನನಾಗಿದ್ದರೂ, ಮೂಲಕಾರಣನಾದ ಭಗವಂತನ ಸ್ವರೂಪವನ್ನು ತಿಳಿಯಲಾರದೆ ಹೋದೆ. ಅವನು ಭಕ್ತಿಮಾತ್ರ ಗಮ್ಯನು.

ನಾನು ಸದಾ ಆ ಪರಮ ಮಂಗಳಮಯನಾದ ಶರಣಾಗತ ರಕ್ಷಕನಾದ ಭಗವಂತನ ಚರಣಕಮಲಗಳನ್ನು ನಮಸ್ಕರಿಸುತ್ತಿರುತ್ತೇನೆ.

ಅವನ ಮಾಯಾಶಕ್ತಿಯು ಅಪಾರವಾದುದು. ಆಕಾಶಕ್ಕೆ ತನ್ನ ಅಂತವು ತಿಳಿಯದಿರುವಂತೆ ಭಗವಂತನಿಗೂ ತನ್ನ ಮಹಿಮೆಯ ವಿಸ್ತಾರವು ತಿಳಿಯದು.

ಈ ಸ್ಥಿತಿಯಿರುವಾಗ ಸಾಮಾನ್ಯರು ಅವನನ್ನು ತಿಳಿಯುವುದು ಹೇಗೆ ?

ನಾನಾಗಲಿ, ನೀವುಗಳಾಗಲಿ, ಸಾಕ್ಷಾತ್ ಶಂಕರನೂ ಸಹ ಅವನ ಸತ್ಯಸ್ವರೂಪವನ್ನು ತಿಳಿಯಲಾರರು. ಅಂದಮೇಲೆ ಬೇರೆ ದೇವತೆಗಳು ಹೇಗೆ ತಾನೇ ತಿಳಿದಾರು ?

ಅವನ ಮಾಯೆಯಿಂದ ನಾವುಗಳು ಎಷ್ಟು ಮೋಹಿತರಾಗಿದ್ದೇವೆಂದರೆ ಅವನಿಂದ ರಚಿಸಲ್ಪಟ್ಟ ಈ ಜಗತ್ತನ್ನೇ ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿದ್ದೇವೆ.

ಕೇವಲ ನಮ್ಮ ನಮ್ಮ ಬುದ್ಧಿಶಕ್ತಿಗನುಗುಣವಾಗಿ ಸ್ವಲ್ಪ ಸ್ವಲ್ಪ ತಿಳಿಯುತ್ತೇವಷ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಅವನ ಲೀಲಾವತಾರಗಳನ್ನು ವರ್ಣಿಸುತ್ತೇವೆ. ಅವನನ್ನು ತತ್ವಶಃ ತಿಳಿಯಲಾರೆವು.

ಇಂತಹ ಶ್ರೀ ಹರಿಯ ಚರಣ ಕಮಲಗಳಿಗೆ ನಮಸ್ಕಾರಗಳು.

ಆ ಪುರುಷೋತ್ತಮನು ಜನ್ಮಾದಿರಹಿತನು. ಪ್ರತಿಕಲ್ಪದಲ್ಲಿಯೂ ತಾನೇ ತನ್ನಲ್ಲಿಯೆ ತನ್ನನ್ನು ಸೃಷ್ಟಿಸಿಕೊಳ್ಳುತ್ತಾನೆ. ಪಾಲಿಸುತ್ತಾನೆ. ಸಂಹರಿಸುತ್ತಾನೆ. ಅವನು ಮಾಯಾರಹಿತನು. ಜ್ಞಾನ ಸ್ವರೂಪಿಯು. ಅಂತರಾತ್ಮನ ರೂಪದಲ್ಲಿ ಸರ್ವ ಹೃದಯಾಧಿಷ್ಠಿತನು. ಅವನು ತ್ರಿಕಾಲಾಬಾಧಿತ ಸತ್ಯ ಸ್ವರೂಪನು.

ಆದಿ ಮಧ್ಯಾಂತರಹಿತನು, ನಿರ್ಗುಣನು, ನಿರಾಕಾರನು, ಸನಾತನನು ಅದ್ವಿತೀಯನು.

ಮಹಾತ್ಮರು ಅಂತರಂಗ ಶುದ್ಧಿಯನ್ನು ಪಡೆದು, ದೇಹೇಂದ್ರಿಯಗಳನ್ನು ಸಂಯಮಗೊಳಿಸಿ, ಅವನ ಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ಆದರೆ ಆ ಸತ್ಪುರುಷರು ತಮ್ಮ-ತಮ್ಮ ಕುತರ್ಕಗಳ ಜಾಲದಲ್ಲಿ ಮುಚ್ಚಲ್ಪಟ್ಟಿರುವುದರಿಂದ ಅವರಿಗೆ ಸಾಕ್ಷಾತ್ಕಾರವಾಗುವುದಿಲ್ಲ. ಅಭಿಪ್ರಾಯವಿಷ್ಟೆ. ಅವನ ಸ್ವರೂಪವು ಸಾಕ್ಷಿಗೂ ವಿಷಯವಾಗುವುದಿಲ್ಲ. ಏಕೆಂದರೆ ಅವನೇ ಸಾಕ್ಷಿಯು.

ಇನ್ನು ಇಂದ್ರಿಯ ಮನಸ್ಸುಗಳು ಅವನನ್ನು ಅರಿಯಲಾರವೆಂದು ಹೇಳಿ, ದರೆ, ಅತಿಶಯವೇನು ಬಂತು ?

ಭಗವಂತನ ಅವತಾರಾದಿಗಳನ್ನು ತಟಸ್ಥ ಲಕ್ಷಣದಿಂದಲೇ ನಿರೂಪಿಸುತ್ತೇವೆ.

ವಿರಾಟ್ ಪುರುಷನೇ ಪರಮಾತ್ಮನ ಮೊದಲನೆಯ ಅವತಾರವು. ಕಾಲ, ಸ್ವಭಾವ, ಕಾರ್ಯ, ಕಾರಣ, ಮನಸ್ಸು, ಪಂಚಭೂತಗಳು, ಅಹಂಕಾರ ತ್ರಿಗುಣಗಳು, ಇಂದ್ರಿಯಗಳು, ಬ್ರಹ್ಮಾಂಡ, ಶರೀರ, ಇದರ ಅಭಿಮಾನಿಗಳು. ಸ್ಥಾವರ ಜಂಗಮಾತ್ಮಕವಾದೀ ಪ್ರಪಂಚ ಎಲ್ಲವೂ ಆ ಅನಂತ ರೂಪೀ ಭಗವಂತನ ರೂಪಗಳೇ.

ನಾನು, ಶಂಕರ, ವಿಷ್ಣು, ದಕ್ಷಾದಿ ಪ್ರಜಾಪತಿಗಳು, ನೀನು, ನಿನ್ನಂತಹ ಬೇರೆ ಭಕ್ತರು, ಸ್ವರ್ಗಾದಿ ಲೋಕಪಾಲಕರು, ಪಕ್ಷಿರಾಜರು, ಮಾನವಾಧಿಪತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು, ಪಾತಾಳದ ರಾಜರು ಗಂಧರ್ವರು, ವಿದ್ಯಾಧರರು, ಚಾರಣರು, ಯಕ್ಷ ರಾಕ್ಷಸರು ಸರ್ಪಗಳು, ಋಷಿ-ಮಹರ್ಷಿಗಳು, ಪಿತೃಪತಿಗಳು, ದೈತ್ಯೇಂದ್ರರು, ಸಿದ್ಧೇಶ್ವರರು, ದಾನವರಾಜರು, ಭೂತ, ಪ್ರೇತ, ಪಿಶಾಚಿ, ಕೂಷ್ಮಾಂಡ, ಜಲ ತಂತುಗಳು, ಮೃಗಪಕ್ಷಿಗಳು, ಇಂದ್ರಿಯಬಲ, ದೇಹಬಲ, ಮನೋಬಲಗಳು, ಕ್ಷಮಾ, ಧೃತಿ, ದಾಕ್ಷಿಣ್ಯಾದಿಗಳು, ಸೌಂದರ್ಯ, ಲಜ್ಜಾ, ಹಾವ, ಭಾವ, ವೈಭವಗಳು, ರೂಪವಾನ್, ಅರೂಪವಾನ್, ಎಲ್ಲವೂ ಭಗವತ್ ಸ್ವರೂಪಗಳೇ. ಅವನ ವಿಭೂತಿಯೆ.

ಇಷ್ಟೆ ಅಲ್ಲದೆ ಆ ಪರಮಪಿತ ಪರಮೇಶ್ವರನ ಪವಿತ್ರ ಲೀಲಾವತಾರಗಳೂ ವರ್ಣಿಸಲ್ಪಟ್ಟಿವೆ. ಅವುಗಳನ್ನು ಯಥಾಕ್ರಮವಾಗಿ ನಿನಗೆ ವರ್ಣಿಸಿ ಹೇಳುತ್ತೇನೆ.

ಇವುಗಳ ಶ್ರವಣದಿಂದ ಶ್ರವಣೇಂದ್ರಿಯಗಳ ದೋಷಗಳು ನಿವೃತ್ತವಾಗುತ್ತವೆ. ನೀನು ಸಾವಧಾನ ಮನಸ್ಕನಾಗಿ ರಸಾಸ್ವಾದನೆಯನ್ನು ಮಾಡು.

ಎಂಬುದಾಗಿ ಪೂಜ್ಯ ನಾರದರಿಗೆ ಬ್ರಹ್ಮದೇವನು ಉಪದೇಶ ಮಾಡಿದನು.

ಓಂ ತತ್ಸದಿತ್ಯೇವಂ ದ್ವಿತೀಯ ಸ್ಕಂಧೇ ಷಷ್ಠೋಽಧ್ಯಾಯಃ

ಶ್ರೀಭಾಗವತ ದರ್ಶನ

ದ್ವಿತೀಯ ಸ್ಕಂಧ ಏಳನೆಯ ಅಧ್ಯಾಯ

ಭಗವಂತನ ಲೀಲಾವತಾರದ ಕಥೆಗಳು

ಓಂ ನಮೋ ಭಗವತೇ ವಾಸುದೇವಾಯ

ತತ್ತ್ವದಲ್ಲಿ ಆಕೃತಿಯ - ನಾಮದ ಆಗ್ರಹವಿಲ್ಲ. ಚಿನ್ನದಿಂದ ಹಂದಿಯನ್ನು ಮಾಡಿ, ಆನೆಯನ್ನು ಮಾಡಿ, ಆಭರಣಗಳನ್ನು ಮಾಡಿ ಹಾಕಿಕೊಳ್ಳಿ. ಚಿನ್ನದ್ದೇನೂ ಆಗ್ರಹವಿಲ್ಲ. ಯಾವ ಆಕಾರದಲ್ಲಿದ್ದರೂ, ಯಾವ ಯಾವ ಹೆಸರಿನಿಂದ ಕರೆದರೂ ನಾನು ನಾನಾಗಿಯೇ ಇರುತ್ತೇನೆಂಬುದು ಅದಕ್ಕೆ ಗೊತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೆಯೆ ಮಣ್ಣು, ನೀರು, ತೇಜಸ್ಸು, ಅಗ್ನಿ, ವಾಯು ಯಾವುದಕ್ಕೂ ಇದೇ ಆಕಾರ, ಇದೇ ಹೆಸರಿನಿಂದ ಇರಬೇಕೆಂಬ ಆಗ್ರಹವಿಲ್ಲ.

ಪರಮಾತ್ಮನು ಭಾವನಾತ್ಮಕನಷ್ಟೆ ಅಲ್ಲ, ವಸ್ತ್ವಾತ್ಮಕನೂ ಸಹ. ಯಾವ ಹೆಸರಾಗಲಿ, ಯಾವ ಆಕಾರವಾಗಲಿ, ಯಾವ ಆಭಾಸವಾಗಲಿ ಸ್ವ ಸ್ವರೂಪದಲ್ಲಿಯೇ ಇರುತ್ತಾನೆ.

ನಿಮಗೆಲ್ಲರಿಗೂ ತಿಳಿದಿದೆ. ಚಾರ್ವಾಕ ಮತದಲ್ಲಿ ಚೇತನತತ್ತ್ವವಿಲ್ಲ. ಅವರ ತತ್ತ್ವವು ಜಡ. ಅಲ್ಲಿ ಅವತಾರದ ಪ್ರಶ್ನೆಯೇ ಇಲ್ಲ.

ಜೈನಮತದಲ್ಲಿ ತತ್ಪದಾರ್ಥರೂಪ ಪರಮಾತ್ಮನಿಲ್ಲ. ಅಲ್ಲಿ ಕೇವಲ ತ್ವಂ ಪದಾರ್ಥರೂಪ ಜೀವನೇ. ಅವರಲ್ಲಿಯೂ ಅವತಾರಗಳ ಪ್ರಶ್ನೆಯೇ ಇಲ್ಲ. ಅವರಲ್ಲಿ ಜೀವನು ತನ್ನ ಶುದ್ಧಿಯಿಂದ ತೀರ್ಥಂಕರ, ವೀತರಾಗ, ಮಹಾಪುರುಷ ಪದವಿಯನ್ನು ಹೊಂದುತ್ತಾನೆ,

ಬೌದ್ಧಮತದಲ್ಲಿಯೂ ತತ್ಪದಾರ್ಥರೂಪ ಪರಮೇಶ್ವರನಿಲ್ಲ. ಅಂದ ಮೇಲೆ ಅವರಲ್ಲಿ ತಾನೇ ಅವತಾರವು ಹೇಗೆ ?

ಮುಸಲ್ಮಾನರು, ಕ್ರಿಶ್ಚಿಯನ್ನರು, ಆರ್ಯಸಮಾಜಿಗಳಲ್ಲಿ ಈಶ್ವರನೇನೋ ಇದ್ದಾನೆ. ಆದರೆ ಅವನು ನಿರಾಕಾರತೆಯಲ್ಲಿ ಸಿಕ್ಕಿಕೊಂಡುಬಿಟ್ಟಿದ್ದಾನೆ. ಸಾಕಾರ ನಾಗುವ ಸಾಮರ್ಥ್ಯವು ಅವನಲ್ಲಿಲ್ಲ. ಇನ್ನು ಅವತಾರಿಯಾಗುವುದು ಹೇಗೆ ?

ಆದರೆ ಯಾರ ಪರಮೇಶ್ವರನು ಸರ್ವವೂ, ಸರ್ವಸ್ವರೂಪಿಯೂ ಆಗಿರುವನೊ ಅವನು ಅವತಾರವನ್ನು ತಾಳುತ್ತಾನೆ. ಅವನಲ್ಲದ ವಸ್ತುವೊಂದು ಇಲ್ಲವೇ ಇಲ್ಲ.

ಈಗ ಬ್ರಹ್ಮದೇವನು ನಾರದರಿಗೆ ಪರಮಾತ್ಮನ ಅವತಾರಗಳನ್ನು ವರ್ಣಿಸಿ ಹೇಳುತ್ತಾನೆ.

ಅವತಾರಗಳಲ್ಲಿ ಮೊದಲನೆಯದು ವರಾಹವತಾರವು.

ಯತ್ರೋದ್ಯತಃ ಕ್ಷಿತಿತಲೋದ್ಧರಣಾಯ ಬಿಭ್ರತ್
ಕ್ರೌಡೀಂ ತನುಂ ಸಕಲಯಜ್ಞಮಯೀಮನಂತಃ
ಅಂತರ್ಮಹಾರ್ಣವ ಉಪಾಗತ ಮಾದಿದೈತ್ಯಂ
ತಂ ದಂಷ್ಟ್ರಯಾದ್ರಿಮಿವ ವಜ್ರಧರೋ ದದಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಂತರೂಪೀ ಭಗವಂತನು ಪ್ರಳಯಕಾಲದಲ್ಲಿ ಜಲದೊಳಗೆ ಮುಳುಗಿ ಹೋಗಿದ್ದ ಭೂದೇವಿಯ ಉದ್ಧರಣಕ್ಕಾಗಿ ಯಜ್ಞಮಯವಾದ ವರಾಹ ಶರೀರ ವನ್ನು ಧರಿಸಿದನು. ಆದಿದೈತ್ಯನಾದ ಹಿರಣ್ಯಾಕ್ಷನು ಜಲದೊಳಗೇ ಯುದ್ಧ ಮಾಡುವುದಕ್ಕೋಸ್ಕರ ಬರಲು ಇಂದ್ರನು ವಜ್ರಾಯುಧದಿಂದ ಪರ್ವತಗಳ ರೆಕ್ಕೆಗಳನ್ನು ಕತ್ತರಿಸುವಂತೆ ವರಾಹರೂಪೀ ಭಗವಂತನು ತನ್ನ ಕೋರೆ ದವಡೆ ಗಳಿಂದ ದೈತ್ಯನನ್ನು ಸಿಗಿದು ಹಾಕಿದನು.

ಲೋಕದಲ್ಲಿ ಭೂಮಿಯು ಅತಿ ಪ್ರೇಮಿಯೆಂದರೆ ವರಾಹ. ಯಾವಾಗಲೂ ಅದರ ಮುಸುಡಿಯು ಭೂಮಿಯಲ್ಲಿಯೇ ಇರುತ್ತದೆ. ಮಳೆಗಾಲದಲ್ಲಿ ಚಿಕ್ಕ ಚಿಕ್ಕ ನೀರಿನ ಹಳ್ಳಗಳಿರುತ್ತವಲ್ಲ-ಹಂದಿಗಳು ಶರದೃತುವಿನಲ್ಲಿ ಅದರ ಮಣ್ಣನ್ನು ಮೇಲಕ್ಕೆ ತರುತ್ತವೆ. ಯಾವಾಗಲೂ ಸುಣಗುಟ್ಟುತ್ತಾ ಭೂಮಿಯನ್ನು ಮೂಸುತ್ತಿರುತ್ತವೆ. ಎಂತಹ ಕೆಸರು ಹೊಂಡಗಳಲ್ಲಿಯೂ ಬಿದ್ದು ಮೈಯ್ಯಿಗೆ ಕೆಸರು ಬಳಿದುಕೊಂಡು ಆನಂದಿಸುತ್ತವೆ. ಇನ್ನೊಂದು ವಿಚಾರವೆಂದರೆ, ಯಾರು ಯಾವುದನ್ನು ಪ್ರೀತಿಸುತ್ತಾರೋ ಅವರಿಗೆ ಅದರ ಕೊಳೆಯು ಅಸಹ್ಯವಾಗು ವುದಿಲ್ಲ. ಪೃಥ್ವಿಯ ಅತಿ ಕೊಳಕು ಪ್ರದೇಶವನ್ನೂ ಹಂದಿಯು ತನ್ನ ಭೋಜ್ಯ ವನ್ನಾಗಿ ಮಾಡಿಕೊಳ್ಳುತ್ತದೆ. ಪೃಥ್ವಿಯ ಉದ್ಧಾರಕ್ಕಾಗಿ ಭಗವಂತನು ವರಾಹ ನಾಗಿ ಭೂ - ಪತಿಯಾಗುತ್ತಾನೆ.

ಭಗವಂತನು ಎರಡನೆಯದಾಗಿ ಹರಿಯ ಅವತಾರವನ್ನು ಮಾಡಿದನು ಅವತಾರಗಳು ಅನೇಕ ವಿಧವಾಗಿರುತ್ತವೆ. ಒಂದು ಕ್ರಿಯಾಪ್ರಧಾನವಾದರೆ, ಮತ್ತೊಂದು ವಿವೇಕಪ್ರಧಾನವಾದುದು. ಇನ್ನೊಂದು ಧರ್ಮಪ್ರಧಾನವಾದರೆ ಮತ್ತೊಂದು ಜ್ಞಾನಪ್ರಧಾನವಾದುದು. ಹೀಗೆ ಭಗವಂತನ ಅನೇಕ ಅವತಾರ ಗಳಿವೆ.

ಪ್ರಭುವು 'ರುಚಿ' ನಾಮಕ ಪ್ರಜಾಪತಿಯ ಪತ್ನೀ ಆಕೂತಿಯ ಗರ್ಭ ದಿಂದ 'ಸುಯಜ್ಞ'ನ ರೂಪದಲ್ಲಿ ಅವತರಿಸಿದನು. ಅವನ ಪತ್ನೀ 'ದಕ್ಷಿಣಾ' ಅವರಿಂದ ಸುಯಮ ಇತ್ಯಾದಿ ಪುತ್ರರು ಜನಿಸಿದರು.

ತ್ರಿಲೋಕಗಳ ತಾಪವನ್ನು ಇವನು ಹರಣ ಮಾಡಿದುದರಿಂದ ಸ್ವಾಯಂ ಭುವ ಮನುವು ಇವನನ್ನು 'ಹರಿ' ಎಂದು ಕರೆದನು.

Sri Vidyabharathi Book Centre, Sringeri

 CC-O. In Public Domain. Digitized by eGangotri

"ಮೂರನೆಯ" ಅವತಾರವೇ "ಕಪಿಲಾವತಾರ." ಕರ್ದಮ–ದೇವಹೂತಿಯರಲ್ಲಿ "ಕಪಿಲ"ನಾಗಿ ಅವತರಿಸಿದನು. ಆಗ ಇವನಿಗೆ ಒಂಭತ್ತು ಮಂದಿ ಸಹೋದರಿಯರಿದ್ದರು. ಕಪಿಲನು ತಾಯಿಗೆ ಆತ್ಮಜ್ಞಾನವನ್ನು ಉಪದೇಶಿಸಿದನು. ದೇವಹೂತಿಯು ಅದೇ ಜನ್ಮದಲ್ಲಿ ತ್ರಿಗುಣಾಸಕ್ತಿಯನ್ನು ಕಳೆದುಕೊಂಡು ಭಗವತ್ಸ್ವರೂಪವನ್ನು ಪಡೆದಳು.

ದತ್ತಾತ್ರೇಯಾವತಾರವು ಭಗವಂತನ 'ನಾಲ್ಕನೆಯ' ಅವತಾರವಾಗಿದೆ. ಅನುಸೂಯಾ–ಅತ್ರಿಗಳ ತಪಸ್ಸನ್ನು ಸಾರ್ಥಕಗೊಳಿಸಲು ತನ್ನನ್ನೇ ತಾನು ಅವರಿಗೆ ಅರ್ಪಿಸಿಕೊಂಡನು. ಆದರಿಂದ ಅವರ ಪುತ್ರನ ಹೆಸರು 'ದತ್ತ'.

ಮಹಾಬಲಶಾಲಿ ಕಾರ್ತವೀರ್ಯ, ರಾಜಾಯದು ಇವರುಗಳು ಇವನ ಚರಣಕಮಲಗಳನ್ನು ಸೇವಿಸಿ ಭೋಗಸಿದ್ಧಿಯನ್ನೂ, ಮೋಕ್ಷಸಿದ್ಧಿಯನ್ನೂ ಪಡೆದರು.

ನಾರದ, ಸೃಷ್ಟಿಯ ಪ್ರಾರಂಭದಲ್ಲಿ ನಾನು ಲೋಕಸಿಸೃಕ್ಷೆಯಿಂದ ತಪಸ್ಸು ಮಾಡಿದೆನು. ತಪಸ್ಸಿನಿಂದ ಸಂತುಷ್ಟಗೊಂಡ ಭಗವಂತನು 'ತಪ' ಎಂಬ ಅರ್ಥವುಳ್ಳ ಸನ ಎಂಬ ಶಬ್ದದಿಂದ ನಾಲ್ಕು ರೂಪಗಳಲ್ಲಿ ಪ್ರಕಟನಾದನು. ಸನಕ, ಸನಂದನ, ಸನಾತನ, ಸನತ್ಕುಮಾರ ಎಂಬ ನಾಮಗಳನ್ನು ಧರಿಸಿದನು. ಈ ಅವತಾರದಲ್ಲಿ ಪ್ರಳಯ ಕಾಲದಲ್ಲಿ ಲೋಪ ಹೊಂದಿದ್ದ ಆತ್ಮಜ್ಞಾನವನ್ನು ಋಷಿಮುನಿಗಳಿಗೆ ಯಥಾವತ್ ಉಪದೇಶಿಸಿದನು. ಅವರು ತತ್ಕಾಲದಲ್ಲಿಯೇ ತತ್ತ್ವಸಾಕ್ಷಾತ್ಕಾರವನ್ನು ಪಡೆದರು. ಕುಮಾರಾವತಾರವು ಐದನೆಯದು.

ನರ-ನಾರಾಯಣಾವತಾರವು 'ಆರನೆಯದು'. ಧರ್ಮನ ಪತ್ನೀ ದಕ್ಷ ಕನ್ಯಾಮೂರ್ತಿಯ ಗರ್ಭದಿಂದ ನರ-ನಾರಾಯಣನ ರೂಪದಲ್ಲಿ ಅವತರಿಸಿದನು. ಅವರು ಅಸಾಧಾರಣ ತಪಃಪ್ರಭಾವವುಳ್ಳವರು. ಇಂದ್ರನಿಂದ ಕಳುಹಿಸಲ್ಪಟ್ಟ ಕಾಮನ ಸೇನಾನಿಯರಾದ ಅಪ್ಸರೆಯರು ನಾರಾಯಣನನ್ನು ಕಂಡೊಡನೆ ತಮ್ಮ ಸ್ವಭಾವವನ್ನೇ ಮರೆತುಬಿಟ್ಟರು. ತಮ್ಮ ಹಾವ, ಭಾವ, ವಿಲಾಸ ಚೇಷ್ಟೆಗಳಿಂದ ಆತ್ಮಸ್ವರೂಪಿ ನಾರಾಯಣನ ತಪಸ್ಸಿಗೆ ವಿಘ್ನವನ್ನುಂಟು ಮಾಡಲಾರದೇ ಹೋದರು. ಮಹಾತ್ಮರು ತಮ್ಮ ರೋಷದೃಷ್ಟಿಯಿಂದ ಕಾಮವನ್ನು ಸುಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಕುತ್ತಾರೆ. ರೋಷವಾದರೋ ಅವರನ್ನೇ ಆಶ್ರಯಿಸಿ ಸುಡತೊಡಗುತ್ತದೆ. ಆ ರೋಷವನ್ನು ಸುಡಲು ಕೆಲವರು ಮಾತ್ರ ಸಮರ್ಥರಾಗಿರುತ್ತಾರೆ. ನಾರಾಯಣನಂತಹ ತಪಸ್ವಿಯನ್ನು ಆಕ್ರಮಿಸಲು ರೋಷ, ಕ್ರೋಧಗಳು ಭೆಯ ಪಡುತ್ತವೆ. ರೋಷ, ಕ್ರೋಧಗಳಿಲ್ಲದಮೇಲೆ ಕಾಮನ ಪ್ರವೇಶವು ಹೇಗಾದೀತು ?

ಬಾಲಕನಾದ ಧ್ರುವನ ಅನುಗ್ರಹಾರ್ಥವಾಗಿ ಭಗವಂತನು 'ಏಳನೆಯ' ಬಾರಿ ಅವತರಿಸಿದನು.

ರಾಜಾ ಉತ್ತಾನಪಾದರಾಯನ ಬಳಿಯಲ್ಲಿ ಐದು ವರ್ಷದ ಬಾಲಕನಾದ ಧ್ರುವನು ಕುಳಿತಿದ್ದನು. ಸವತಿ ತಾಯಿಯಾದ ಸುರುಚಿಯು ಕಠೋರ ಮಾತುಗಳಿಂದ ಬಾಲಕನನ್ನು ನೋಯಿಸಿದಳು. ವಯಸ್ಸು ಚಿಕ್ಕದಾಗಿದ್ದರೂ ಧ್ರುವನು ನೊಂದವನಾಗಿ ಕಾಡಿಗೆ ಹೊರಟುಹೋದನು. ತಪಸ್ಸು ಮಾಡಿದನು.

ಭಗವಂತನು ಪ್ರಸನ್ನನಾಗಿ ಧ್ರುವನಿಗೆ ಧ್ರುವಪದವನ್ನೇ ದಯಪಾಲಿಸಿದನು. ಇಂದೂ ಸಹ ಮಹರ್ಷಿಗಳು ಧ್ರುವಮಂಡಲವನ್ನು ಪ್ರದಕ್ಷಿಣೆ ಮಾಡುತ್ತಾರೆ.

"ಪೃಥ್ವವತಾರವು" ಭಗವಂತನ "ಎಂಟನೆಯ" ಅವತಾರವು. ಬ್ರಾಹ್ಮಣರ ಹುಂಕಾರ ರೂಪೀ ವಜ್ರದಿಂದ ಕುಪಥಗಾಮಿಯಾದ ವೇನನ ಐಶ್ವರ್ಯ, ಬಲ, ಪರಾಕ್ರಮಗಳು ಭಸ್ಮವಾದುವು. ಅವನು ನರಕಭಾಗಿಯಾದನು. ಋಷಿ-ಮುನಿಗಳ ಪ್ರಾರ್ಥನೆಗೆ ಅನುಗುಣವಾಗಿ ಭಗವಂತನು ಅವನ ಶರೀರ ಮಂಥನದಿಂದ 'ರಾಜಾಪೃಥು' ರೂಪದಲ್ಲಿ ಅವತರಿಸಿದನು. ವೇನನನ್ನು ನರಕದಿಂದ ಉದ್ಧರಿಸಿದನು. ಪುತ್ರಶಬ್ದವನ್ನು ಸಾರ್ಥಕ ಪಡಿಸಿದನು.

ಪೃಥುವು ಗೋರೂಪಿಣೀ ಪೃಥ್ವಿಯಿಂದ ಲೋಕಕಲ್ಯಾಣಕ್ಕಾಗಿ ಸರ್ವೌಷಧಿಗಳ ದೋಹನ ಮಾಡಿದನು.

'ಋಷಭಾವತಾರ'ವು ಭಗವಂತನ 'ಒಂಭತ್ತನೆಯ ಅವತಾರವು. ರಾಜಾ ನಾಭಿಯ ಪತ್ನೀ ಸುದೇವಿಯ ಗರ್ಭದಿಂದ ಭಗವಂತನು 'ಋಷಭಾ'ವತಾರವನ್ನು ಮಾಡಿದನು. ಋಷಭನು ಜಡನಂತಿದ್ದು ಸದಾ ಯೋಗಚರ್ಯೆಯಲ್ಲಿದ್ದನು.

Sri Vidyabharathi Book Centre, Sringeri

 CC-0. In Public Domain. Digitized by eGangotri

ದೇಹೇಂದ್ರಿಯ, ಮನಸ್ಸುಗಳನ್ನು ವಶೀಕರಿಸಿಕೊಂಡು ನಿರಾಸಕ್ತನಾಗಿದ್ದನು. ಸ್ವ ಸ್ವರೂಪಸ್ಥಿತನಾಗಿ ಸಮದರ್ಶಿಯಾಗಿದ್ದನು.

ಭಗವಂತನ ಈ ಸ್ಥಿತಿಯನ್ನು ಮಹರ್ಷಿಗಳು 'ಪರಮಹಂಸ' ಪದ ಎಂದೂ, 'ಅವಧೂತ ಚರ್ಯಾ' ಎಂದೂ ಕರೆಯುತ್ತಾರೆ.

ಹಯಗ್ರೀವಾವತಾರವು ಹತ್ತನೆಯದು.

ಆ ಯಜ್ಞಪುರುಷನಾದ ಭಗವಂತನು ಬ್ರಹ್ಮನ ಯಜ್ಞದಲ್ಲಿ ಸ್ವರ್ಣ ಸಮಾನ ಕಾಂತಿಯುಳ್ಳ ಹಯಗ್ರೀವನ ರೂಪದಲ್ಲಿ ಅವತರಿಸಿದನು.

ಹಯಗ್ರೀವನ ಆ ದೇಹವು ವೇದಮಯವಾಗಿತ್ತು, ಯಜ್ಞಮಯ ವಾಗಿತ್ತು ಹಾಗೂ ಸರ್ವದೇವಮಯವಾಗಿತ್ತು. ಅವನ ಶ್ವಾಸದಿಂದ ವೇದ ವಾಣಿಯು ಪ್ರಕಟವಾಯಿತು.

ಮತ್ಸ್ಯಾವತಾರವು ಹನ್ನೊಂದನೆಯದು.

ಚಾಕ್ಷುಷ ಮನ್ವಂತರದ ಅಂತ್ಯದಲ್ಲಿ, ಮನು ಸತ್ಯವ್ರತನು ಮತ್ಸ್ಯರೂಪ ದಲ್ಲಿ ಭಗವಂತನನ್ನು ಪಡೆದನು. ಆಗ ಪೃಥ್ವೀರೂಪದ ನೌಕೆಗೆ ಭಗವಂತನೇ ಆಶ್ರಯನಾದುದರಿಂದ ಸರ್ವಜೀವಿಗಳ ಆಶ್ರಯನೂ ಆದನು. ಪ್ರಳಯ ಕಾಲ ದಲ್ಲಿ ಬ್ರಹ್ಮನ ಮುಖದಿಂದ ನೀರಿನಲ್ಲಿ ಬಿದ್ದ ವೇದಗಳೊಡನೆ ಅವನು ವಿಹರಿಸು ತ್ತಿದ್ದನು.

ಕಚ್ಛಪಾವತಾರವು ಹನ್ನೆರಡನೆಯದು. ದೇವದಾನವರು ಅಮೃತಪ್ರಾಪ್ತಿ ಗಾಗಿ ಸಮುದ್ರವನ್ನು ಮಥಿಸಿದರು. ಆಗ ಭಗವಂತನು ಕಚ್ಛಪನಾಗಿ ತನ್ನ ಬೆನ್ನಿನ ಮೇಲೆ ಮಂದರಾಚಲವನ್ನು ಧರಿಸಿದನು. ಮಂದರಾಚಲದ ತಿರುಗು ವಿಕೆಯಿಂದ ಬೆನ್ನಿನ ನವೆಯು ಕಮ್ಮಿಯಾಗಿ ಸುಖನಿದ್ರೆಯನ್ನು ಮಾಡಿದನು.

ಶ್ರೀ ನರಸಿಂಹಾವತಾರವು ಹದಿಮೂರನೆಯದು.

ದೇವತೆಗಳಿಗೊದಗಿದ ಮಹದ್ಭಯವನ್ನು ನಿವಾರಿಸಲು ಬಾಲಕ ಪ್ರಹ್ಲಾದನ ಮಾತನ್ನು ಸತ್ಯವಾಗಿಸಲು ಭಗವಂತನು ನರಸಿಂಹನಾಗಿ ಅವತರಿಸಿ ದನು. ಅವನ 'ಭ್ರಮದ್ಭ್ರುಕುಟಿ ದಂಷ್ಟ್ರಕರಾಳ ವಕ್ತ್ರವನ್ನು' ನೋಡಿದವ ರೆಲ್ಲರೂ ಹೆದರಿ ಓಡುತ್ತಿದ್ದರು. ಹಿರಣ್ಯಕಶಿಪುವು ಕೂಡಲೆ ಗದಾಪಾಣಿಯಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನ ಮೇಲೆ ನುಗ್ಗಿ ಹೋಗಲು, ನರಸಿಂಹನು ಅವನನ್ನು ದೂರದಿಂದಲೇ ಬರ ಸೆಳೆದು ತೊಡೆಗಳ ಮೇಲೆ ಮಲಗಿಸಿಕೊಂಡು ಅವನ ಹೊಟ್ಟೆಯನ್ನು ಬಗೆದು ಬಿಟ್ಟನು.

ಹಿರಣ್ಯ ಅಂದರೆ ಚಿನ್ನ "ಹಿತಂ-ರಮಣಂಚ ಭವಿಷ್ಯತೀತಿ ಹಿರಣ್ಯಂ" ಜನಗಳಿಗೆ ಹಿತಕಾರಿಯೂ-ರಮಣೀಯವಾದುದೂ ಆದುದರಿಂದ ಅದರ ಹೆಸರು ಹಿರಣ್ಯ "ಹರ್ಯತೇ ಜನಾತ್ ಜನಂಪ್ರತಿ ಇತಿ ಹಿರಣ್ಯಂ" ಇದು ಆಮನೆ-ಈ ಮನೆ ಎಂದು ಎಲ್ಲಿಯೂ ಸ್ಥಾಯಿಯಾಗಿ ನಿಲ್ಲದೆ ಹೋಗುತ್ತಿರುತ್ತದೆ ಎಂಬ ಅರ್ಥದಿಂದಲೂ ಹಿರಣ್ಯ. ಹಿರಣ್ಯದ ಮೇಲೆ ಕಣ್ಣಿಟ್ಟಿರುವವನು ಹಿರಣ್ಯಾಕ್ಷ ಹಿರಣ್ಯಾಕ್ಷನಿಗೆ ಈಶ್ವರನೂ ಇಲ್ಲ. ಧರ್ಮವೂ ಇಲ್ಲ. ಆತ್ಮನೂ ಇಲ್ಲ. ವರಾಹನು ಅವನನ್ನು ಸಂಹರಿಸಿದನು.

ಅವನ ಸಹೋದರನೇ ಹಿರಣ್ಯಕಶಿಪು ಅಂದರೆ ಮಹಾ ಭೋಗಿ. ಕಶಿಪು ಶಯ್ಯಾ. ಮೆತ್ತೆ. ಚಿನ್ನವೇ ಶಯ್ಯಾ ಎಂದರೆ ಮಹಾ ಭೋಗಿ. ಇವನನ್ನು ನರಸಿಂಹನು ಸಂಹರಿಸಿದನು.

ಗಜೇಂದ್ರನ ಸಂರಕ್ಷಣೆಗಾಗಿ ಹರಿಯ ಅವತಾರವು ಹದಿನಾಲ್ಕನೆಯದು, ಸರೋವರದಲ್ಲಿ ಮಹಾ ಶಕ್ತಿಶಾಲಿಯಾದ ಮೊಸಳೆಯು ಗಜೇಂದ್ರನ ಕಾಲನ್ನು ಹಿಡಿದುಕೊಂಡು ಬಿಟ್ಟಿತು. ಸುಸ್ತಾದ ಆನೆಯು ಪ್ರಾಣ ಭಯದಿಂದ ತನ್ನ ಸೊಂಡಿಲಿನಿಂದ ಒಂದು ಕಮಲವನ್ನು ತೆಗೆದುಕೊಂಡು ಭಗವಂತನಿಗೆ ಅರ್ಪಿಸಿ ಪ್ರಾರ್ಥಿಸಿತು.

ಆದಿ ಪುರುಷಾ ಖಿಲ ಲೋಕನಾಥ
ತೀರ್ಥಶ್ರವಃ ಶ್ರವಣ ಮಂಗಳ ನಾಮಧೇಯ

ಪ್ರಾರ್ಥನೆಯನ್ನು ಕೇಳಿದ ಭಗವಂತನು ಗರುಡಾರೂಢನಾಗಿ ಚಕ್ರಪಾಣಿಯಾಗಿ ಬಂದು, ಮೊಸಳೆಯನ್ನು ಕೊಂದು ಗಜೇಂದ್ರನನ್ನು ಉದ್ಧರಿಸಿದನು.

ವಾಮನಾವತಾರವು ಭಗವಂತನ ಹದಿನಾರನೆಯದು. ಭಗವಾನ್ ವಾಮನನು ಅದಿತಿಯ ಮಕ್ಕಳುಗಳಲ್ಲಿ ಎಲ್ಲರಿಗಿಂತ ಚಿಕ್ಕವನು. ಗುಣದಲ್ಲಿ ಎಲ್ಲರಿಗಿಂತಲೂ ದೊಡ್ಡವನು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಗವಂತನು ವಾಮನಾವತಾರದ ಮೂಲಕ ಲೋಕಕ್ಕೆ ಈ ಶಿಕ್ಷಣವನ್ನು ಕೊಟ್ಟಿದ್ದಾನೆ. ಬೇಡುವವನು ಎಷ್ಟು ದೊಡ್ಡವನಾಗಿದ್ದರೂ ಅವನು ಚಿಕ್ಕವನಾಗಲೇಬೇಕಾಗುತ್ತದೆ. ಹಾಗೂ ಯಜ್ಞಾಚರಣೆಯಲ್ಲಿರುವವರನ್ನೂ, ಧರ್ಮಿಷ್ಠರನ್ನೂ, ದಾನಿಗಳನ್ನೂ ದೇಹಬಲದಿಂದ ಜಯಿಸಲಾಗುವುದಿಲ್ಲ ಎಂಬುವುದನ್ನೂ ತೋರಿಸಿದ್ದಾನೆ. ಬಲಿಯಂತಹವನಿಗೆ ಇಂದ್ರಪದವಿಯನ್ನಿತ್ತರೂ ಸಾಲದೆಂದು ತಿಳಿದ ವಾಮನನು ಅವನ ದ್ವಾರಪಾಲಕನಾದನು.

ವಾಮನಾವತಾರದಲ್ಲಿ ಭಗವಂತನು ಬಲಿಯು ಸಂಕಲ್ಪಿಸಿದೊಡನೆ, ತನ್ನ ದಿವ್ಯ ಚರಣಗಳಿಂದ ಯಾವತ್ ಪೃಥ್ವೀ-ಸ್ವರ್ಗಗಳನ್ನು ಅಳೆದುಕೊಂಡು ಬಿಟ್ಟನು. ಹಾಗೂ ಒಂದು ವಿಚಾರವನ್ನು ಸಿದ್ಧಪಡಿಸಿದನು. ಸನ್ಮಾರ್ಗಾವಲಂಬಿಗಳನ್ನು ಯಾಚಿಸದೇ ಯಾವ ಉಪಾಯದಿಂದಲೂ, ಅವರನ್ನು ಸ್ಥಾನಭ್ರಷ್ಟರನ್ನಾಗಿ ಮಾಡಲಾಗುವುದಿಲ್ಲ. ಬಲಿಯು ಭಗವಂತನ ಚರಣಾಮೃತವನ್ನು ತನ್ನ ತಲೆಯ ಮೇಲೆ ಧರಿಸಿದನು. ಅಂತಹವನಿಗೆ ಇಂದ್ರಪದವಿಯನ್ನು ಕೊಟ್ಟರೂ ಸಾಲದು. ತನ್ನ ಪ್ರತಿಜ್ಞಾನುಸಾರವಾಗಿ ಮತ್ತೇನನ್ನೂ ಕೊಡಲು ಇಲ್ಲದಿದ್ದಾಗ, ಪ್ರತಿಜ್ಞಾಪೂರ್ತಿಗಾಗಿ ತನ್ನನ್ನೇ ತಾನು ಸಮರ್ಪಿಸಿಕೊಂಡನು.

ಹಂಸಾವತಾರವು ಭಗವಂತನ ಹದಿನೇಳನೆಯ ಅವತಾರವು. ಮಹಾತ್ಮಾ ನಾರದರ ಮೇಲಿನ ಪ್ರೇಮದಿಂದ ಭಗವಂತನು ಹಂಸಾವತಾರವನ್ನು ಮಾಡಿ, ಯೋಗ – ಜ್ಞಾನ–ಆತ್ಮ ತ್ರತತ್ವಗಳನ್ನು ಪ್ರಕಾಶ ಪಡಿಸುವ ಭಾಗವತ ಧರ್ಮವನ್ನು ಉಪದೇಶ ಮಾಡಿದನು. ಭಗವಂತನ ಶರಣಾಗತ ಭಕ್ತರಿಗೆ ಮಾತ್ರ ಇಂತಹ ಯೋಗವು ಲಭಿಸುತ್ತದೆ.

ಭಗವಂತನು ಹದಿನೆಂಟನೆಯ ಅವತಾರವಾಗಿ ಸ್ವಾಯಂಭುವಾದಿ ಮನ್ವಂತರಗಳಲ್ಲಿ 'ಮನು'ವಿನ ರೂಪದಲ್ಲಿ ಅವತರಿಸಿ, ಮನುವಂಶವನ್ನು ರಕ್ಷಿಸುತ್ತಾ ಹತ್ತು ದಿಕ್ಕುಗಳಲ್ಲಿಯೂ ತನ್ನ ಸುದರ್ಶನ ಚಕ್ರ ಪ್ರತಾಪವು ಪ್ರಸರಿಸುವಂತೆ ಮಾಡುತ್ತಾನೆ.

ಸತ್ಯಲೋಕದವರೆಗೂ ಭಗವಂತನ ಕೀರ್ತಿಯು ಪ್ರಸರಿಸುತ್ತದೆ. ಅದೇ ರೀತಿಯಲ್ಲಿ ಆಗ್ಗಾಗ್ಗೆ ದುಷ್ಟ ರಾಜರ ದಮನಕ್ಕಾಗಿ ಪ್ರಕಟನಾಗುತ್ತಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುತ್ತಾನೆ. ಧನ್ವಂತರಿಯ ಅವತಾರವು ಹತ್ತೊಂಭತ್ತನೆಯದು. ಧನ್ವಂತರಿಯಾಗಿ ಅವತರಿಸಿ ರೋಗಿ ಜನರ ರೋಗ ಶಮನವನ್ನು ಮಾಡುತ್ತಾನೆ.

ಇಪ್ಪತ್ತನೆಯ ಬಾರಿ ಮೋಹಿನಿಯಾಗಿ ಅವತರಿಸಿ ದೇವತೆಗಳು ಅಮೃತಪಾಯಿಗಳಾಗುವಂತೆ ಮಾಡುತ್ತಾನೆ. ಹಾಗೂ ದೇವತೆಗಳ ಯಜ್ಞಭಾಗವನ್ನು ರಾಕ್ಷಸರು ಅಪಹರಿಸಲು ಪುನಃ ದೇವತೆಗಳಿಗೆ ಯಜ್ಞಭಾಗವು ದೊರಕುವಂತೆ ಮಾಡುತ್ತಾನೆ.

ಇಪ್ಪತ್ತೊಂದನೆಯ ಅವತಾರವು 'ಪರಶುರಾಮಾವತಾರ'. ಕ್ಷತ್ರಿಯರು–ಬ್ರಾಹ್ಮಣರು ಮಿಲಿತರಾಗಿ ಲೋಕಕಲ್ಯಾಣ ದೃಷ್ಟಿಯಿಂದ ಕೆಲಸ ಮಾಡಿದರೆ ಸರ್ವರ ಉನ್ನತಿಯಾಗುತ್ತದೆ. ಕ್ಷತ್ರಿಯ ಶಕ್ತಿಯಿಂದ ಬ್ರಹ್ಮಶಕ್ತಿಯು ವರ್ಧಿಸಬೇಕು. ಬ್ರಹ್ಮಶಕ್ತಿಯಿಂದ ಕ್ಷತ್ರಿಯ ಶಕ್ತಿಯು ವರ್ಧಿಸಬೇಕು. ಎರಡೂ ಸಮನ್ವಯ ದೃಷ್ಟಿಯಿಂದ ಕೆಲಸ ಮಾಡಬೇಕು.

ಲೋಕದಲ್ಲಿ ಬ್ರಹ್ಮದ್ವೇಷಿಗಳಿಂದ ಧರ್ಮಮರ್ಯಾದೆಯನ್ನು ಉಲ್ಲಂಘಿಸುವ ನಾರಕೀಯ ಕ್ಷತ್ರಿಯರು ಲೋಕಕಂಟಕರಾದಾಗ ಭಗವಂತನು ಪರಶುರಾಮನಾಗಿ ಬಂದು ಇಪ್ಪತ್ತೊಂದು ಬಾರಿ ದುಷ್ಟಕ್ಷತ್ರಿಯ ಕುಲನಾಶವನ್ನು ಮಾಡುತ್ತಾನೆ.

ಮಾಯಾಧೀಶ್ವರನಾದ ಭಗವಂತನು ಲೋಕಾನುಗ್ರಹಾರ್ಥವಾಗಿ ತನ್ನ ವಿಶಿಷ್ಟ ಕಲಾಸ್ವರೂಪರಾದ ಲಕ್ಷ್ಮಣ, ಭರತ, ಶತ್ರುಘ್ನರೊಡನೆ ಶ್ರೀರಾಮನಾಗಿ ಇಕ್ಷ್ವಾಕು ವಂಶದಲ್ಲಿ ಅವತರಿಸುತ್ತಾನೆ. ಇದು ಇಪ್ಪತ್ತೆರಡನೆಯ ಅವತಾರ.

ಪಿತ್ರಾಜ್ಞಾಪರಿಪಾಲನಾರ್ಥವಾಗಿ ಪತ್ನಿಯಾದ ಸೀತೆಯೊಡನೆ ತಮ್ಮನಾದ ಲಕ್ಷ್ಮಣನೊಡನೆ ವನವಾಸಿಯಾಗುತ್ತಾನೆ. ಆವಾಗ ದಶಕಂಧರನು ಶ್ರೀರಾಮನನ್ನು ವಿರೋಧಿಸಿ ಅವನಿಂದ ಮರಣವನ್ನು ಹೊಂದುತ್ತಾನೆ.

ತ್ರಿಪುರಸಂಹಾರೋದ್ಯುಕ್ತನಾದ ಪರಶಿವನಂತೆ ಲಂಕಾಧೀಶನ ಸಂಹಾರಕ್ಕಾಗಿ ಶ್ರೀರಾಮನು ಸಮುದ್ರ ದಡವನ್ನು ಸೇರಿದನು. ಸೀತಾವಿಯೋಗದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ತಪ್ತನಾಗಿದ್ದ ಶ್ರೀರಾಮನ ಕ್ರೋಧಾಗ್ನಿ ಜ್ವಾಲೆಯಿಂದ ಸಮುದ್ರ ಜಲಚರಗಳೆಲ್ಲವೂ ಬೆಂದು ಹೋಗತೊಡಗುತ್ತವೆ. ಆಗ ಸಮುದ್ರ ರಾಜನು ಲಂಕಾ ಪ್ರವೇಶಕ್ಕೆ ಅವಕಾಶವನ್ನು ಕೊಡುತ್ತಾನೆ. ರಾವಣನು ಸಾಮಾನ್ಯನಲ್ಲ, ಮಹಾಶೂರನು. ಅವನ ವಕ್ಷ: ಸ್ಥಳದ ತಾಡನದಿಂದ ಐರಾವತದಂತಗಳು ಪುಡಿ-ಪುಡಿಯಾಗಿ ಹೋಗಿದ್ದುವು. ವಿಜಯದ ಅಟ್ಟಹಾಸದಿಂದ ಗರ್ವಿಷ್ಠ ರಾವಣನು ಉಬ್ಬಿ ಹೋಗಿದ್ದನು. ಅಂತಹವನಿಂದ ಸೀತಾಪಹರಣವಾಯಿತು. ಯುದ್ಧರಂಗದಲ್ಲಿ ಅವನ ಗರ್ವಭಂಗ ಪ್ರಾಣಹರಣಗಳೆರಡೂ ಆದುವು.

ಶ್ರೀ ಕೃಷ್ಣಾವತಾರವು ಇಪತ್ತಮೂರನೆಯದು,

ಭೂಮೇಃ ಸುರೇತರ ವರೂಥ ವಿಮರ್ದಿತಾಯಾಃ
ಕ್ಲೇಶವ್ಯಯಾಯ ಕಲಯಾ ಸಿತಕೃಷ್ಣ ಕೇಶಃ
ಜಾತಃ ಕರಿಷ್ಯತಿ ಜನಾನುಪಲಕ್ಷ್ಯ-ಮಾರ್ಗಃ
ಕರ್ಮಾಣಿ ಚಾತ್ಮ ಮಹಿಮೋಪ ನಿಬಂಧನಾನಿ

ಪೃಥ್ವೀದೇವಿಯು ಕ್ರೂರರಾಕ್ಷಸರ ಧಾಳಿಯಿಂದ ತತ್ತರಿಸಿ ಹೋಗುತ್ತಾಳೆ. ಆಗ ಪೃಥ್ವಿಯ, ಭಾರಾವತರಣಕ್ಕಾಗಿ ಭಗವಂತನು ಸಿತ-ಕೃಷ್ಣ ಕೇಶನಾಗಿ ಅಂದರೆ ಬಲರಾಮ-ಕೃಷ್ಣರೂಪದಲ್ಲಿ ಅವತಾರವೆತ್ತುತ್ತಾನೆ.

ಬ್ರಹ್ಮಾದಿ ದೇವತೆಗಳಿಂದ ಧರ್ಮಹಾನಿಯ ವಿಚಾರವನ್ನು ತಿಳಿದ ನಾರಾಯಣನಿಗೆ ಬಹಳ ಕೋಪ ಬರುತ್ತದೆ. ಆಗ ಅವನು ಕೋಪವಶದಿಂದ ಎರಡು ಕೂದಲುಗಳನ್ನು ಕಿತ್ತು ಹಾಕುತ್ತಾನೆ, ಒಂದು ಬಿಳಿ ಕೂದಲು, ಒಂದು ಕಪ್ಪುಕೂದಲೂ ಕೆಳಕ್ಕೆ ಬಿದ್ದಿತು

ಬಿಳಿಯಕೂದಲು ಬಲರಾಮನ ರೂಪವನ್ನು ತಾಳಿತು. ಕಪ್ಪು ಕೂದಲು ಕೃಷ್ಣ ರೂಪವನ್ನು ತಾಳಿತು.

ಅಂದರೆ, ನಾರಾಯಣನ ಕೂದಲುಗಳಲ್ಲಿಯೆ ಇಂತಹ ಅಮೋಘ ಶಕ್ತಿಯಿರುವಾಗ ನಾರಾಯಣನ ಶಕ್ತಿಗೆ ಮಿತಿಯುಂಟೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವರಿಗೆ ಈ ವ್ಯಾಖ್ಯಾನವು ಅಷ್ಟಾಗಿ ರುಚಿಸುವುದಿಲ್ಲ. ರಾಮ ಕೃಷ್ಣರು ಕೇಶಾವತಾರಿಗಳೆಂದು ಹೇಳಲು ಅವರು ಸಿದ್ಧರಿಲ್ಲ. ಸಿತ-ಕೃಷ್ಣ ಕೇಶಪದಕ್ಕೆ ಬೇರೆ ವಿಧದ ವ್ಯಾಖ್ಯಾನವನ್ನು ಮಾಡುತ್ತಾರೆ.

ಸಿತ ಎಂದರೆ ಬದ್ಧ. ಅಂದರೆ ತಲೆ ಕೂದಲನ್ನು ಮೇಲಕ್ಕೆ ಕಟ್ಟಿ ಶತ್ರು ಸಂಹಾರಕಾರ್ಯಕ್ಕೆ ತೊಡಗಿದನು. ಭಗವಂತನು ಕೃಷ್ಣಾವತಾರಿಯಾಗಿ ಅದ್ಭುತ ಕೆಲಸಗಳನ್ನು ಮಾಡಿದನು. ಬಾಲ್ಯದಲ್ಲಿಯೇ ಪೂತನಾಸಂಹಾರವಾಯಿತು. ಮೂರನೇ ತಿಂಗಳು ನಡೆಯುತ್ತಿದ್ದಹಾಗೆಯೆ ಶಕಟಾಸುರನ ಭಂಜನವಾಯಿತು. ಮುಂಡಿ ಹೂಡುವಾಗಲೆ ಯಮಳಾರ್ಜುನ ವೃಕ್ಷಗಳನ್ನು ಕೆಳಕ್ಕೆ ಕೆಡವಿದನು. ಇಂತಹ ಕೆಲಸಗಳು ಭಗವಂತನಿಂದ ಹೊರತು ಮತ್ತಾರಿಂದ ಸಾಧ್ಯ ?

ಯಮುನಾ ಜಲವು ಕಾಳೀಯ ನಾಗನಿಂದ ವಿಷಪೂರಿತವಾಗಿತ್ತು. ಆ ನೀರನ್ನು ಕುಡಿದು ಗೋಪಾಲಕರೂ ಗೋವುಗಳೂ ಪ್ರಾಣಕಳೆದುಕೊಂಡರು. ಆಗ ದಯಾಮಯನಾದ ಕೃಷ್ಣನು ತನ್ನ ಅಮೃತಮಯಿಾ ದೃಷ್ಟಿಯಿಂದ ಅವರನ್ನು ಬದುಕಿಸಿದನು. ಹಾಗೂ ಕಾಳೀಯ ನಾಗನನ್ನು ನಿಗ್ರಹಿಸಿ ಯಮುನಾ ಜಲವು ಸರ್ವಗ್ರಾಹ್ಯವಾಗುವಂತೆ ಮಾಡಿದನು.

ಅಂದು ರಾತ್ರಿ ಯಮುನಾ ತಟದಲ್ಲಿಯೇ ಎಲ್ಲರೂ ಮಲಗಿ ನಿದ್ರಿಸುತ್ತಿದ್ದರು. ಆಗ ನಾಲ್ಕು ಕಡೆಗಳಲ್ಲಿಯೂ ಕಾಡು ಕಿಚ್ಚು ಹತ್ತಿ ಉರಿಯಲಾರಂಭಿಸಿತು. ಆಗ ಸರ್ವರ ಸಂಕಟಹಾರಿಯಾದ ಕೃಷ್ಣನು ಎಲ್ಲರ ಕಣ್ಣು ಮುಚ್ಚಿಸಿ ದಾವಾಗ್ನಿ ಜ್ವಾಲೆಯನ್ನು ಕುಡಿದು ಬಿಡುತ್ತಾನೆ. ಅವನ ಶಕ್ತಿಯು ಅಚಿಂತ್ಯವು. ಒಂದು ಸಾರಿ ಯಶೋದೆಯು ಕೃಷ್ಣನನು ಕಟ್ಟಲುಹಗ್ಗವನ್ನು ತರುತ್ತಾಳೆ, ಕಟ್ಟಲು ತೊಡಗಿದರೆ ಎರಡಂಗುಲವು ಕಮ್ಮಿಯಾಗುತ್ತದೆ. ಎಷ್ಟು ಗಂಟು ಹಾಕಿದರೂ ಮತ್ತೂ-ಮತ್ತೂ ಎರಡಂಗುಲ ನ್ಯೂನವಾಗುತ್ತದೆ. ಕೃಷ್ಣನು ಆಕಳಿಸಿದಾಗ ಯಶೋದೆಯು ಕೃಷ್ಣನ ಮುಖದೊಳಗೆ ಚತುರ್ದಶಬ್ರಹ್ಮಾಂಡಗಳನ್ನೇ ಕಾಣುತ್ತಾಳೆ. ನಂದಗೋಪನನ್ನು ಘಟಸರ್ಪದ ಭಯದಿಂದ_ವರುಣ ಪಾಶದಿಂದ ಬಿಡಿಸುತ್ತಾನೆ. ಮಯದಾನವ ಪುತ್ರನಾದ ವ್ಯೋಮಾಸುರನು ಗೋಪಬಾಲಕರನ್ನು ಪರ್ವತ ಗುಹೆಗಳಲ್ಲಿ ಮುಚ್ಚಿಟ್ಟಾಗ ಕೃಷ್ಣನು ಅವರನ್ನು ಬಿಡಿಸಿಕೊಂಡು ಬರುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿ, ರಾತ್ರಿ ಸುಖವಾಗಿ ನಿದ್ರಿಸುತ್ತಿದ್ದ. ಯಾವ ವಿಧದ ಸಾಧನಾ ಬಲವೂ ಇಲ್ಲದ ಗೋಕುಲದ ಗೋಪರನ್ನು ತನ್ನ ಪರಮಧಾಮಕ್ಕೆ ಕಳುಹಿಸುತ್ತಾನೆ. ಗೋಪರು ಇಂದ್ರ ಯಜ್ಞಕ್ಕೆ ಪ್ರಾರಂಭಿಸೋಣ, ಶ್ರೀ ಕೃಷ್ಣನು ಇಂದ್ರ ಯಜ್ಞವನ್ನು ನಡೆಸಬಾರದೆಂದು ತಡೆಯುತ್ತಾನೆ. ಶ್ರೀ ಕೃಷ್ಣನು ವ್ರಜವಾಸಿಗಳೊಡನೆ ಹೇಳುತ್ತಾನೆ:- ವ್ರಜ ಭೂಮಿಯ ಮಹಿಮೆಯನ್ನು ನೀವರಿತಿಲ್ಲ, ಇಲ್ಲಿ ಬೀದಿಯಲ್ಲಿ ಬಿದ್ದಿರುವ ಒಂದೊಂದು ಕಲ್ಲನ್ನು ಪೂಜಿಸಿದರೂ ಇಂದ್ರ ಪೂಜೆಗಿಂತ ಶ್ರೇಷ್ಠ ಫಲವನ್ನು ಪಡೆಯಬಹುದು. ಇಂದ್ರಪೂಜೆಯನ್ನು ನಿಲ್ಲಿಸಿ ವ್ರಜ ಭೂಮಿಯನ್ನೇ ಪೂಜಿಸಿರಿ. ಕುಪಿತನಾದ ಇಂದ್ರನು ಅವಿಚ್ಛಿನ್ನವಾದ ಜಲಧಾರೆಯನ್ನು ಸುರಿಸುತ್ತಾನೆ. ವ್ರಜವಾಸಿಗಳ ರಕ್ಷಣೆಗಾಗಿ ಏಳು ವರ್ಷದ ಬಾಲ ಕೃಷ್ಣನು ಏಳು ದಿನಗಳವರೆಗೆ ಗೋವರ್ಧನ ಪರ್ವತವನ್ನು ಕೈ ಬೆರಳಿನಿಂದ ಎತ್ತಿ ಹಿಡಿಯುತ್ತಾನೆ. ಶ್ರೀ ಕೃಷ್ಣನು ವೃಂದಾವನ ವಿಹಾರಿಯಾಗಿದ್ದಾಗ ಗೋಪಿಕೆಯರೊಡನೆ ರಾಸ ಕ್ರೀಡೆಯನ್ನಾಡುತ್ತಾನೆ. ರಾತ್ರಿ ಚಂದ್ರೋದಯದ ಕಾಲದಲ್ಲಿ ಬೆಳದಿಂಗಳು ಎಲ್ಲೆಡೆಯಲ್ಲಿಯೂ ಹರಡಿರುವಾಗ, ಮಧುರ ವೇಣುನಾದದಿಂದ ಮುಗ್ಧಗೊಂಡ ಗೋಪಿಯರು ಕೃಷ್ಣನನ್ನು ಸುತ್ತುವರಿಯುತ್ತಾರೆ. ಆಗ ಶಂಖ ಚೂಡನೆಂಬ ಕುಬೇರನ ಸೇವಕನು ಅವರನ್ನು ಅಪಹರಿಸುತ್ತಾನೆ. ಕೃಷ್ಣನು ನಿಗ್ರಹಿಸಿ ಎಲ್ಲರನ್ನೂ ಸುರಕ್ಷಿತವಾಗಿ ಕರೆದುಕೊಂಡು ಬರುತ್ತಾನೆ.

ಅದೆಷ್ಟೋ ಮಹಾರಾಕ್ಷಸರು ಕೃಷ್ಣನಿಂದ ಹತರಾಗುತ್ತಾರೆ. ಪ್ರಲಂಬಾಸುರ-ಧೇನುಕಾಸುರ, ಬಕಾಸುರ ಕೇಶೀ ಅರಿಷ್ಟಾಸುರ ಇತ್ಯಾದಿ ಮಹಾ ಪರಾಕ್ರಮಿಗಳನ್ನು ನಿಗ್ರಹಿಸುತ್ತಾನೆ. ಕುವಲಯಾಪೀಡವೆಂಬ ಆನೆಯನ್ನು, ಕಂಸ-ಚಾಣೂರರನ್ನೂ ನಿಗ್ರಹಿಸಿ ತನ್ನ ಅಪೂರ್ವ ಬಲವನ್ನು ಪ್ರದರ್ಶಿಸುತ್ತಾನೆ. ಮಹಾಭಾರತ ಯುದ್ಧದಲ್ಲಿ ಭೀಮಾರ್ಜುನರ ಮೂಲಕ ಕೌರವರನ್ನು ನಾಶ ಪಡಿಸುತ್ತಾನೆ. ಶ್ರೀ ಕೃಷ್ಣನ ಚರಿತ್ರೆಯ ಅವಲೋಕನದಿಂದ ಅವನಂತಹ ಆಚಾರ್ಯನಿಲ್ಲವೆಂಬುದನ್ನು ತಿಳಿದುಕೊಳ್ಳಬಹುದು.

ವ್ಯಾಸಾವತಾರವು ಭಗವಂತನ ಇಪ್ಪತ್ತನಾಲ್ಕನೆಯ ಅವತಾರವು. ಕಾಲ ಮಹಿಮೆಯಿಂದ ಜನಗಳ ಧಾರಣಾ ಶಕ್ತಿಯು ಕಮ್ಮಿಯಾಯಿತು. ಕ್ಷೀಣಾಯುಷಿಗಳಾದರು. ವೇದಾಭ್ಯಾಸದಲ್ಲಿ ಅಸಮರ್ಥರಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆವಾಗ ಭಗವಂತನು ವ್ಯಾಸನಾಗಿ ಅವತರಿಸಿ ವೇದವಿಭಾಗವನ್ನು ಮಾಡಿ ಧರ್ಮವನ್ನು ಸಂರಕ್ಷಿಸುತ್ತಾನೆ.

ಬುದ್ಧಾವತಾರವು ಭಗವಂತನ ಇಪ್ಪತ್ತೈದನೆಯ ಅವತಾರವು. ದೇವತೆಗಳ ಶತ್ರುಗಳಾದ ದೈತ್ಯರು ವೇದ ಮಾರ್ಗಾವಲಂಬಿಗಳಾಗಿ, ಮಯದಾನವ ನಿರ್ಮಿತವಾದ ನಗರಗಳಲ್ಲಿ ವಾಸಮಾಡುತ್ತಾ ಜನಗಳನ್ನು ಪೀಡಿಸತೊಡಗೋಣ, ಆಗ ಭಗವಂತನು ಬುದ್ಧನಾಗಿ ಅವತರಿಸಿ, ಮತಿ ವಿವೇಕಹರಗಳಾದ, ಅತಿ ಪ್ರಲೋಭನಕಾರಿಗಳದ ಉಪ ಧರ್ಮಗಳನ್ನು ಬೋಧಿಸುತ್ತಾನೆ.

ಕಲ್ಕ್ಯವತಾರವು ಭಗವಂತನ ಇಪ್ಪತ್ತಾರನೆಯ ಅವತಾರವು.

ಯರ್ಹ್ಯಾಲಯೇಷ್ವಪಿ ಸತಾಂನಹರೇಃ ಕಥಾಃ ಸ್ಯುಃ
ಪಾಂಖಂಡಿನೋ ದ್ವಿಜ ಜನಾಃ ವೃಷಲಾನೃದೇವಾಃ
ಸ್ವಾಹಾ ಸ್ವಧಾ ವಷಡಿತಿ ಸ್ಮಗಿರೋ ನಯತ್ರ
ಶಾಸ್ತಾ ಭವಿಷ್ಯತಿ ಕಲೇರ್ಭಗವಾನ್ ಯುಗಾಂತೇ

ಕಲಿಯುಗಾಂತ್ಯದಲ್ಲಿ ಸತ್ಪುರುಷರ ಮನೆಯಲ್ಲಿಯೂ ಭಗವತ್ಕಥೆಗಳು ನಡೆಯಲು ತೊಂದರೆಗಳೊದಗುತ್ತವೆ. ಬ್ರಾಹ್ಮಣಾದಿವರ್ಣಗಳವರು ಪಾಂಖಂಡಿಗಳಾಗುತ್ತಾರೆ. ಶೂದ್ರರು ರಾಜ್ಯಭಾರವನ್ನು ಮಾಡುತ್ತಾರೆ. ಸ್ವಾಹಾ—ಸ್ವಧಾ-ವಷಟ್ಕಾರಗಳು ಲುಪ್ತವಾಗುತ್ತವೆ ದೇವಯಜ್ಞಗಳನ್ನು ಯಾರೂ ಆಚರಿಸುವುದಿಲ್ಲ. ಆಗ ಭಗವಂತನು ಕಲ್ಕ್ಯವತಾರವನ್ನು ಮಾಡಿ ಅಧರ್ಮ ಕಲಿಯನ್ನು ನಿಗ್ರಹಿಸುತ್ತಾನೆ. ಸೃಷ್ಟಿಯ ಕಾಲದಲ್ಲಿ—ತಪಸ್ಸು—ನವ ಪ್ರಜಾಪತಿಗಳು ಮರೀಚ್ಯಾದಿ ಮಹರ್ಷಿಗಳು ಇವರ ರೂಪದಲ್ಲಿಯೂ, ಪಾಲನೆಯ ಕಾಲದಲ್ಲಿ ಧರ್ಮ ವಿಷ್ಣು ಮನು ದೇವತಾ ಮಹಾತ್ಮಾ-ರಾಜರುಗಳ ರೂಪದಲ್ಲಿಯೂ· ಪ್ರಳಯಕಾಲದಲ್ಲಿ ಅಧರ್ಮ, ರುದ್ರ, ಕ್ರೋಧ, ಸರ್ಪ, ದೈತ್ಯ ಇತ್ಯಾದಿಗಳ ರೂಪದಲ್ಲಿಯೂ. ಸರ್ವ ಶಕ್ತಿಮಾನ್ ಭಗವಂತನ ಮಾಯಾವಿಭೂತಿಗಳೇ ಪ್ರಕಟವಾಗುತ್ತವೆ. ನಾರದ-ಭೂಕಣಗಳನ್ನಾದರೂ ಎಣಿಸಬಹುದು. ಆದರೆ ಪರಮಾತ್ಮನ ಶಕ್ತಿಗಳನ್ನು ಎಣಿಸಲು ಸಾಧ್ಯವಿಲ್ಲ ಭಗವಂತನು ತ್ರಿವಿಕ್ರಮನಾಗಿ ಭೂಮಿಯನ್ನು ಅಳೆಯುತ್ತಿದ್ದಾಗ ಅವನ ಚರಣಾಘಾತದಿಂದ,

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಲೋಕದಿಂದ ಹಿಡಿದು ಸತ್ಯಲೋಕದವರೆಗೂ ಇರುವ ಎಲ್ಲಾ ಬ್ರಹ್ಮಾಂಡ ಗಳೂ ಅಲ್ಲಾಡುತ್ತಲಿದ್ದುವು. ಆಗ ಭಗವಂತನೇ ತನ್ನ ಅಮೋಘ ಶಕ್ತಿಯಿಂದ ಭೂರಾದಿಲೋಕಗಳನ್ನು ಸ್ಥಿರವಾಗಿರಿಸಿದನು. ಅವನ ಒಂದು ಮಾಯಾಶಕ್ತಿ ಯಿಂದ ಸೃಷ್ಟಿ. ಸ್ಥಿತಿ. ಸಂಹಾರಗಳಾಗುತ್ತವೆ. ಇಂತಹ ಅನೇಕ ಶಕ್ತಿಗಳುಳ್ಳ ಆ ಭಗವತ್ ಸ್ವರೂಪವನ್ನು, ನಾನಾಗಲಿ (ಬ್ರಹ್ಮನಾಗಲಿ) ಸನಕಾದಿಗಳಾಗಲಿ ಯಾರೂ ತಿಳಿದಿಲ್ಲ. ಸಹಸ್ರ ಮುಖಗಳಿಂದ ಆದಿಶೇಷನು ಅವನ ಗುಣಗಾನ ವನ್ನು ಮಾಡುತ್ತಿದ್ದಾನೆ. ಆದರೂ ಅದಕ್ಕೆ ಅಂತ್ಯವಿಲ್ಲ.

ಯಾರು ನಿಷ್ಕಪಟ ಭಾವದಿಂದ ಭಗವಂತನ ಚರಣ ಕಮಲಗಳಲ್ಲಿ ಯಾವತ್ ಸರ್ವಸ್ವವನ್ನೂ ಅರ್ಪಿಸುವರೊ, ಅವರು ಭಗವತ್ಕೃಪೆಗೆ ಪಾತ್ರರಾಗಿ ಅವನ ಮಾಯಾಸ್ವರೂಪವನ್ನು ತಿಳಿಯುತ್ತಾರೆ. ಅಂದರೆ ನಾನು-ನನ್ನದು ಎಂಬ ಕ್ಷುಲ್ಲಕಾಭಿಮಾನದಿಂದ ಪಾರಾಗುತ್ತಾರೆ, ಈ ಅಭಿಮಾನವು ಕೇವಲ ನಾಯಿ-ನರಿ ಗಳಿಗೆ ಮಾತ್ರ ಯೋಗ್ಯವಾಗಿರುತ್ತದೆ.

ಪ್ರಿಯಪುತ್ರ ನಾರದ, ಆ ಪರಮಪುರುಷನ ಯೋಗಮಾಯೆಯನ್ನು ನಾನು ತಿಳಿದಿದ್ದೇನೆ. ಹಾಗೂ ನನ್ನ ಪ್ರಿಯಪುತ್ರರಾದ ನೀವುಗಳೂ ತಿಳಿದಿದ್ದೀರಿ. ಭಗವಾನ್ ಶಂಕರ. ದೈತ್ಯಕುಲ ಭೂಷಣನಾದ ಪ್ರಹ್ಲಾದ, ಶತರೂಪಾ, ಮನು, ಮನುಪುತ್ರರಾದ ಪ್ರಿಯವ್ರತಾದಿಗಳು, ಪ್ರಾಚೀನ ಬರ್ಹಿ, ಋಭು, ಧ್ರುವ ಇವರುಗಳೂ ತಿಳಿದಿದ್ದಾರೆ.

ಇಕ್ಷ್ವಾಕು, ಪುರೂರವ, ಮುಚುಕುಂದ, ಜನಕ, ಗಾಧಿ, ರಘು, ಅಂಬರೀಷ, ಸಗರ, ಗಯ, ಯಯಾತಿ ಇವರುಗಳೂ, ಮಾಂಧಾತಾ, ಅಲರ್ಕ, ಶತಧನ್ವಾ, ಅನು, ರಂತಿದೇವ, ಭೀಷ್ಮ, ಬಲಿ, ಅಮೂರ್ತರಯ, ದಿಲೀಪ, ಸೌಭರಿ, ಉತ್ತಂಕ, ಶಿಬಿ, ದೇವಲ, ಪಿಪ್ಪಲಾದ, ಸಾರಸ್ವತ, ಉದ್ಧವ, ಪರಾಶರ, ಭೂರಿಷೇಣ, ವಿಭೀಷಣ, ಹನುಮಾನ್, ಶುಕದೇವ, ಅರ್ಜುನ, ಆರ್ಷ್ಟಿಷೇಣ, ವಿದುರ, ಶ್ರುತದೇವ ಈ ಮಹಾತ್ಮರುಗಳೂ ಭಗವನ್ಮಾಯೆ ಯನ್ನು ತಿಳಿದಿದ್ದಾರೆ.

ಭಕ್ತರ ಸತ್ಸಂಗ ಫಲವನ್ನು ಅನುಭವಿಸುವ ಶೂದ್ರ, ಹೂಣ- ಶಬರಾದಿ ಪಾಪ ಜೀವಿಗಳೂ, ಪಶು ಪಕ್ಷ್ಯಾದಿಯೋನಿಗಳಲ್ಲಿ ಹುಟ್ಟಿರುವವರೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಮಾಯಾ ರಹಸ್ಯವನ್ನು ತಿಳಿಯುತ್ತಾರೆ. ಹಾಗೂ ಸಂಸಾರ ಸಾಗರದಿಂದ ಉತ್ತೀರ್ಣರಾಗುತ್ತಾರೆ. ಇನ್ನು ವೈದಿಕ ಸದಾಚಾರಿಗಳ ವಿಷಯ ದಲ್ಲಿ ಹೇಳುವುದೇನಿದೆ? ಪರಮಾತ್ಮನ ಸ್ವರೂಪವು ಏಕರಸ-ಶಾಂತ-ಅಭಯ ಕೇವಲ ಜ್ಞಾನ ಸ್ವರೂಪ. ಮಾಯಾ ದೂರವಾದುದು. ಸರ್ವ ಕಶ್ಮಲರಹಿತ ವಾದದು. ಸದಸತ್ತಿಗಿಂತ ಪರವಾದುದು. ಯಾವ ವೈದಿಕ- ಲೌಕಿಕ ಶಬ್ದ ಗಳೂ ಅವನನ್ನು ತಲಪಲಾರವು ಯಾವ ಕರ್ಮ ಫಲವೂ ಅವನನ್ನು ಮುಟ್ಟ ಲಾರದು. ಮಾಯೆಯೂ ಸಹ ಅವನನ್ನು ಮುಟ್ಟಲಾರದೆ ಲಜ್ಜೆಯಿಂದ ಹಿಂತಿರುಗುತ್ತದೆ.

ಮಹಾತ್ಮರಾದರೂ-ಅಶೋಕರಹಿತವಾದ, ಆನಂದ ಸ್ವರೂಪವಾದ ಪರಬ್ರಹ್ಮ ಪರಮ ಪುರುಷನ ಪರಮ ಪದವನ್ನು ಸಾಕ್ಷಾತ್ಕರಿಸಿ ಕೊಳ್ಳುತ್ತಾರೆ. ಸಮಯವಿೂ ಪುರುಷರು ತಮ್ಮ ಸಮಾಹಿತ ಮನಸ್ಸಿನಿಂದ ಆ ಪರಮ ಪದ ದಲ್ಲಿಯೆ ಸ್ಥಿರರಾಗಿರುತ್ತಾರೆ.

ಬಾಯಾರಿದ ಮನುಷ್ಯನಿಗೆ ಕುಡಿಯಲು ನೀರೇ ಸಿಕ್ಕಿ ಬಿಟ್ಟರೆ ಹೇಗೆ ಭಾವಿ ತೆಗೆಯುವ ಕೆಲಸವನ್ನು ಬಿಟ್ಟು ಬಿಡುವನೊ ಅಂತೆಯೆ ಸಾಧಕರು ಎಲಾ ಸಾಧನೆಗಳನ್ನೂ ದೂರಮಾಡಿ ಭಗವಂತನ ಚರಣಕಮಲಗಳನ್ನು ಭಜಿಸುತ್ತ ಜನ್ಮದ ಸಾರ್ಥಕತೆಯನ್ನು ಪಡೆಯುತ್ತಾರೆ.

ಜೀವಿಗೆ ಸರ್ವಕರ್ಮ ಫಲವನ್ನು ಕೊಡುವವನೂ ಭಗವಂತನೇ ಜೀವಿಯು ಸ್ವಭಾವಾನುಗುಣವಾಗಿ ನಡೆಸುವ ಶುಭಕರ್ಮವು ಭಗವಂತನ ಪ್ರೇರಣೆಯಿಂದಲೇ ನಡೆಯುತ್ತದೆ. ಶರೀರಸ್ಥ ಪಂಚಭೂತಗಳು ಬೇರೆ-ಬೇರೆಯಾದ ಮೇಲೆ ಶರೀರವು ನಷ್ಟವಾಗುತ್ತದೆ. ಆದರೆ ಜೀವನು ನಷ್ಟವಾಗುವುದಿಲ್ಲ, ಅವನು ಅಜನ್ಮನು-ಆಕಾಶದಂತೆ ಸರ್ವ ವ್ಯಾಪಿಯು. ಬ್ರಹ್ಮನು ಇಲ್ಲಿಯವರೆಗೆ ಹೇಳಿದ ಸಾರಾಂಶವನ್ನು ತಿಳಿಸುತ್ತಾನೆ.

ಸೋಽಯಂತೇಽಭಿಹಿತಸ್ತಾತ, ಭಗವಾನ್ ವಿಶ್ವಭಾವನಃ
ಸಮಾಸೇನ ಹರೇರ್ನಾನ್ಯತ್ ಅನ್ಯಸ್ಮಿನ್ ಸದಸಚ್ಚ ಯತ್

Sri Vidyabharathi Book Centre, Sringeri

CC-0. In Public Domain. Digitized by eGangotri

ನಾರದ ಹೆಚ್ಚು ಹೇಳುವುದರಿಂದೇನು? ವಿಶ್ವಕರ್ತಾರನಾದ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಹರಿಯವರ್ಣನೆಯನ್ನು ಸಂಕ್ಷೇಪವಾಗಿ ನಿನ್ನ ಮುಂದೆ ಮಾಡಿದ್ದೇನೆ. ಎಲ್ಲಾ ಕಾರ್ಯಾಕಾರಣಗಳೂ ಭಾವಾಽಭಾವಗಳೂ ಪರಮಾತ್ಮನಿಂದ ಬೇರೆಯಲ್ಲ. ಪರಮಾತ್ಮನು ಮಾತ್ರ ಇವುಗಳಿಂದ ಬೇರೆಯೆ ಇದ್ದಾನೆ.

ಇದಂ ಭಾಗವತಂನಾಮ ಯನ್ಮೇ ಭಗವತೋದಿತಮ್
ಸಂಗ್ರಹೋಽಯಂ ವಿಭೂತೀನಾಂ ತ್ವಮೇತ ದ್ವಿಪುಲೀಕುರು

ಈ ಭಾಗವತವನ್ನು ಭಗವಂತನು ನನಗೆ ಉಪದೇಶ ಮಾಡಿದನು. ಇದರಲ್ಲಿ ಭಗವಂತನ ವಿಭೂತಿಗಳ ಸಂಕ್ಷೇಪ ವರ್ಣನೆಯಿದೆ. ನೀನಿದನ್ನು ವಿಸ್ತಾರ ಪಡಿಸು.

ಯಥಾಹರೌ ಭಗವತೀ, ನೃಣಾಂ ಭಕ್ತಿರ್ಭವಿಷ್ಯತಿ
ಸರ್ವಾತ್ಮನ್ಯ ಖಿಲಾಧಾರೇ, ಇತಿ ಸಂಕಲ್ಪ್ಯ ವರ್ಣಯ

ಸರ್ವಾಶ್ರಯನಾದ, ಸರ್ವಸ್ವರೂಪಿಯಾದ, ಭಗವಾನ್ ಶ್ರೀ ಹರಿಯಲ್ಲಿ ಜನಗಳಿಗೆ ಪ್ರೇಮಪೂರ್ವಿಕಾ ಭಕ್ತಿಯುಂಟಾಗಲಿ ಎಂದು ಸಂಕಲ್ಪಿಸಿ ಭಗವಂತನನ್ನು ವರ್ಣಿಸು.

ನೋಡಿ. ಮನಸ್ಸಿನಲ್ಲಿ ಸಂಕಲ್ಪವಿರಬೇಕು. ಇಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಧರ್ಮಶಾಸ್ತ್ರಕಾರರ ಅಭಿಪ್ರಾಯದಂತೆ ಸಂಕಲ್ಪಹೀನ ಕರ್ಮವು ಫಲವನ್ನು ಕೊಡುವುದಿಲ್ಲ. ಇಲ್ಲಿ ಏನು ಸಂಕಲ್ಪವೆಂದರೆ, ಸರ್ವರಿಗೂ ಶ್ರೀ ಹರಿಯಲ್ಲಿ ಪ್ರೀತಿಯುಂಟಾಗಲಿ. ಭೋಗಾಸಕ್ತಿ, ಧ್ಯಾನಾಸಕ್ತಿ, ಕರ್ಮಾಸಕ್ತಿಗಳನ್ನು ತ್ಯಜಿಸಿ ಭಗವದ್ಭಕ್ತಿರತರಾಗಲಿ. ಸರ್ವವ್ಯಾಪೀ ಪರಮಾತ್ಮನನ್ನು ಪರಿಚ್ಛಿನ್ನತೆಗೆ ಒಳಪಡಿಸಬಾರದು.

ಬ್ರಹ್ಮನು ಹೇಳುತ್ತಾನೆ. ನಾರದ ಮತ್ತೊಂದು ವಿಷಯವನ್ನು ನೆನಪಿನಲ್ಲಿಡು.

ಮಾಯಾಂವರ್ಣಯತೋಽಮುಷ್ಯ, ಈಶ್ವರಸ್ಯಾನು ಮೋದತಃ,
ಶೃಣ್ವತಃ ಶ್ರದ್ಧಯಾನಿತ್ಯಂ ಮಾಯಯಾತ್ಮಾನ ಮುಹ್ಯತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಮಾಯಾವರ್ಣನೆಯನ್ನು ಮಾಡುವವನೂ, ಕೇಳುವವನೂ, ಮಾಯಾಮುಕ್ತನಾಗುತ್ತಾನೆ. ಅವನ ಚಿತ್ತವು ಮಾಯಾವೃತವಾಗಿ ಮೋಹ ತಾಳುವುದಿಲ್ಲ.

ಓಂ ತತ್ಸದಿತ್ಯೇವಂ ದ್ವಿತೀಯ ಸ್ಕಂಧೇ
ಸಪ್ತಮೋಽಧ್ಯಾಯಃ

ದ್ವಿತೀಯ ಸ್ಕಂಧ ಎಂಟನೆಯ ಅಧ್ಯಾಯ
ಪರೀಕ್ಷಿದ್ರಾಜನ ವಿವಿಧ ಪ್ರಶ್ನೆಗಳು
ಓಂ ನಮೋ ಭಗವತೇ ವಾಸುದೇವಾಯ

ರಾಜಾ ಪರೀಕ್ಷಿತನು ಕೇಳುತ್ತಾನೆ. ಮಹಾತ್ಮರೇ,

ಬ್ರಹ್ಮನು ನಾರದರಿಗೆ ನಿರ್ಗುಣ ಬ್ರಹ್ಮನ ವರ್ಣನೆಯನ್ನು ಮಾಡಿದ ಮೇಲೆ, ನಾರದರು ಯಾರ್ಯಾರಿಗೆ ಯಾವ ಯಾವ ರೀತಿಯಲ್ಲಿ ಉಪದೇಶಿಸಿದರು ?

ಅಚಿಂತ್ಯ ಶಕ್ತಿಮಂತನಾದ ಭಗವಂತನ ಕಥೆಗಳು ಜನರಿಗೆ ಪರಮ ಮಂಗಳ ದಾಯಕಗಳು ಎಲ್ಲರಿಗೂ ಭಗವದ್ದರ್ಶನ ಮಾಡಿಸಬೇಕೆಂಬುವುದೇ ನಾರದರ ಇಷ್ಟವಾಗಿದೆ. ಮಹಾಭಾಗ್ಯಶಾಲಿಗಳಾದ ಶುಕಮುನಿಗಳೇ, ನಾನು ತಮ್ಮ ಉಪದೇಶದಿಂದ ಆಸಕ್ತಿರಹಿತವಾದ ಮನಸ್ಸನ್ನು ಭಗವಂತನಲ್ಲಿರಿಸಿ ತನ್ಮಯತೆಯಿಂದ ದೇಹತ್ಯಾಗ ಮಾಡುವಂತೆ ಅನುಗ್ರಹಿಸಿರಿ.

ನೋಡಿ:– ಪರೀಕ್ಷಿತನು ಶ್ರವಣದಲ್ಲಿ ಎಂತಹ ತೀವ್ರ ಆಸಕ್ತಿಯನ್ನು ತಾಳುತ್ತಿದ್ದಾನೆ? ಇದು ಶ್ರದ್ಧಾದ್ಯೋತಕವು. ಇಂದ್ರಿಯಾತೀತವಾದ ವಸ್ತುವಿನ ಬಗ್ಗೆ ಶ್ರದ್ಧೆಯಿಲ್ಲದಿದ್ದರೆ ನಾವು ತತ್ಪ್ರಾಪ್ತಿಗೆ ಪ್ರಯತ್ನವನ್ನೇ ಮಾಡಲಾರೆವು.

Sri Vidyabharathi Book Centre, Sringeri

 CC-O. In Public Domain. Digitized by eGangotri

ವಸ್ತುಪ್ರಾಪ್ತಿಯಾದಮೇಲೆ ಶ್ರದ್ಧೆ ಇರಬಹುದು-ಬಿಡಬಹುದು. ವಸ್ತು ಪ್ರಾಪ್ತಿಯಾಗುವವರೆಗೆ ಅತೀಂದ್ರಿಯ ಪದಾರ್ಥದ ಬಗ್ಗೆ ಶ್ರದ್ಧೆಯಿಲ್ಲದಿದ್ದರೆ ಆ ಮಾರ್ಗವನ್ನು ಅವಲಂಬಿಸುವುದು ಹೇಗೆ ?

ಶ್ರದ್ಧಾಸೂಕ್ತದಲ್ಲಿ ಹೇಳುತ್ತಾರೆ. **"ಶ್ರದ್ಧಾಂಪ್ರಾತರ್ಹವಾಮಹೇ, ಶ್ರದ್ಧಾಂ ಮಧ್ಯಂ ದಿನಪರಿ."** ಶ್ರದ್ಧಾವಂತನಾಗು, ಸದಾ ಶ್ರದ್ಧಾವಂತನಾಗಿರು. **"ಯೋ ಯ ಚ್ಛ್ರದ್ಧಃ ಸಏವಸಃ."** ನಿನಗೆ ಭಗವಂತನಲ್ಲಿ ಶ್ರದ್ಧೆಯು ಮೂಡಿದರೆ ನೀನೇ ಭಗವಂತನಾಗುವೆ. ಭಗವಂತನ ಲೀಲಾವಿಭೂತಿಗಳನ್ನು ಶ್ರದ್ಧೆಯಿಂದ ಕೇಳಬೇಕು. ಶ್ರದ್ಧೆಯಿಂದ ಮನನ ಮಾಡಬೇಕು. ಹಾಗಾದರೆ ಭಗವಂತನು ಕ್ಷಿಪ್ರದಲ್ಲಿಯೇ ನಿನ್ನ ಹೃದಯವಾಸಿಯಾಗುತ್ತಾನೆ.

ಶ್ರದ್ಧಾಳು ಸಾಧಕನ ಕರ್ಣರಂಧ್ರದ ಮೂಲಕ ಹೃದಯ ಕಮಲವಾಸಿಯಾದ ಭಗವಂತನು, ಶರದೃತುವು ನೀರಿನ ಕೊಳೆಯನ್ನು ತೊಳೆಯುವಂತೆ ಭಕ್ತರ ಮನಸ್ಸಿನ ಕಶ್ಮಲವನ್ನು ತೊಳೆಯುತ್ತಾನೆ. ಹೃದಯ ಶುದ್ಧಿಯಾದ ಮೇಲೆ ಶ್ರೀ ಕೃಷ್ಣನ ದಿವ್ಯಪಾದ ಕಮಲಗಳನ್ನು ಒಂದು ಘಳಿಗೆಯೂ ಮರೆಯುವುದಿಲ್ಲ. ಮಾರ್ಗಾಯಾಸದಿಂದ ಬಳಲಿಬಂದ ಯಜಮಾನನು ಮನೆಯನ್ನು ಬಿಡದಿರುವಂತೆ ಸಾಧಕನು ಸದಾ ಭಗವಧ್ಯಾನದಲ್ಲಿಯೇ ಇರುವನು.

ನೋಡಿ, ಓರ್ವ ಮಿತ್ರನು ತನ್ನ ಮಿತ್ರನ ಮನೆಗೆ ಹೋದನು. ಬಾಗಿಲು ಒಳಗಡೆಯಿಂದ ಹಾಕಿತ್ತು. ಕೂಗಿದ, ತಟ್ಟಿದ, ಬಾಗಿಲು ತೆರೆಯಲಿಲ್ಲ; ಮಿತ್ರನು ಯೋಚಿಸಿದನು. ಅಕಸ್ಮಾತ್ ಯಾರಾದರೂ ಕಳ್ಳರು ಪ್ರವೇಶಿಸಿರಬಹುದೇ? ಅಥವಾ ಸ್ನೇಹಿತನು ಜ್ಞಾನಶೂನ್ಯನಾಗಿರುವನೊ ? ಮೇಲಿನ ಗವಾಕ್ಷದಿಂದ ಒಳಕ್ಕೆ ಇಳಿದನು. ಮಿತ್ರನು ಜ್ಞಾನ ತಪ್ಪಿ ಬಿದ್ದಿದ್ದನು. ನೀರು ತಂದು ಚಿಕಿತ್ಸೆ ಮಾಡಿ ಎಚ್ಚರಗೊಳಿಸಿದನು. ಅವನೂ ಮಿತ್ರನ ಉಪಕಾರಕ್ಕೆ ಕೃತಜ್ಞತೆಯನ್ನು ಅರ್ಪಿಸಿದನು.

ಹೀಗೆಯೆ ಭಗವಂತನು ನೋಡುತ್ತಾನೆ. ಜೀವರೂಪೀ ಮಿತ್ರನ ಮನೆಯೊಳಕ್ಕೆ ಹೋಗೋಣವೆಂದರೆ ಬಾಗಿಲು ಹಾಕಿದೆ. ಏನು ಮಾಡೋಣವೆಂದು ಯೋಚಿಸಿ,

ಪ್ರವಿಷ್ಟಃ ಕರ್ಣ ರಂಧ್ರೇಣ.

Sri Vidyabharathi Book Centre, Sringeri

ಕರ್ಣರಂಧ್ರದಿಂದ ಒಳಕ್ಕೆ ಪ್ರವೇಶ ಮಾಡಿದನು. ಕರ್ಣರಂಧ್ರದಿಂದಲೇ ರಾಗದ್ವೇಷಗಳೂ ಒಳಕ್ಕೆ ಹೋಗುತ್ತವೆ. ಸ್ವಭಾವತಃ ಒಳಗಡೆಯೂ ಇರುತ್ತವೆ.

ಪ್ರಪಂಚದಲ್ಲಿ ನಾವು ಎಷ್ಟು ಜನರ ಬಗ್ಗೆ ಬಂಧುಗಳು, ಸ್ನೇಹಿತರು, ವ್ಯಭಿಚಾರಿಗಳು, ದುಷ್ಟರು, ಕುಡುಕರು ಎಂದು ವಿಧವಿಧ ರಾಗದ್ವೇಷಗಳನ್ನು ಬೆಳೆಯಿಸಿಕೊಂಡಿರುತ್ತೇವೆ. ಅವುಗಳೆಲ್ಲವೂ ಕರ್ಣರಂಧ್ರದಿಂದಲೇ ಪ್ರವೇಶ ಮಾಡಿರುತ್ತವೆ. ಅತೀಂದ್ರಿಯ ಪರಮಾತ್ಮಾನುಭವವಾಗಿಬಿಟ್ಟರೆ ಹೃದಯವು ರಾಗದ್ವೇಷರಹಿತವಾಗುತ್ತದೆ. ತನ್ನ ಮನೆಯು ಶುಚಿಯಾಗಿದ್ದರೆ ಮತ್ತೊಬ್ಬರ ಮನೆಗೆ ಹೋಗಿ ಏಕೆ ಕೂರಬೇಕು ?

ಪರೀಕ್ಷಿದ್ರಾಜನು ಕೇಳುತ್ತಾನೆ. ಭಗವಾನ್, ಜೀವನಿಗೂ ಪಂಚಭೂತ ಗಳಿಗೂ ಯಾವ ಸಂಬಂಧವೂ ಇಲ್ಲವಷ್ಟೆ. ಆದರೂ ಜೀವನ ಶರೀರವು ಪಂಚ ಭೂತಗಳಿಂದ ನಿರ್ಮಿಸಲ್ಪಟ್ಟಿದೆ. ಇದಕ್ಕೇನು ಸ್ವಭಾವವು ಕಾರಣವೊ ಅಥವಾ ಬೇರೆ ಕಾರಣವುಂಟೋ?

ನೀವು ಭಗವಂತನ ನಾಭಿಯಿಂದ ಕಮಲದ ಆವಿರ್ಭಾವವಾಯಿತೆಂದು ಹೇಳಿದಿರಲ್ಲ. ಜೀವನು ಹೇಗೆ ಪರಿಚ್ಛಿನ್ನನೋ ಹಾಗೆ ಪರಮಾತ್ಮನನ್ನೂ ಪರಿಚ್ಛಿನ್ನನನ್ನಾಗಿ ವರ್ಣಿಸುವುದೇ ? ಭಗವತ್ ಕೃಪೆಯಿಂದ ಬ್ರಹ್ಮನು ಸೃಷ್ಟಿ ಕರ್ತನಾಗುತ್ತಾನೆ. ಅವನ ಕೃಪೆಯಿಂದಲೇ ಬ್ರಹ್ಮನೂ ಪರಮಾತ್ಮನನ್ನು ಕಾಣು ತ್ತಾನೆ. ಆ ಮಾಯಾಧೀಶನಾದ ಪರಮಾತ್ಮನು ಮಾಯೆಯನ್ನು ತ್ಯಜಿಸಿ ಎಲ್ಲಿ ಯಾವ ರೂಪದಲ್ಲಿರುವನು? ವಿರಾಟ್ ಪುರುಷನ ಅಂಗಗಳಿಂದ ಲೋಕ – ಲೋಕಪಾಲಕರ ಆವಿರ್ಭಾವ. ಲೋಕ–ಲೋಕಪಾಲಕರ ರೂಪದಲ್ಲಿ ಅವನ ಅಂಗಗಳ ಕಲ್ಪನೆ. ಇವುಗಳಸಮನ್ವಯವು ಹೇಗೆ? ಮಹಾಕಲ್ಪಗಳೆಷ್ಟು ? ಅವಾಂತರ ಕಲ್ಪಗಳೆಷ್ಟು? ಭೂತ–ಭವಿಷ್ಯ ವರ್ತಮಾನಗಳ ಕಾಲಮಾನವು ಹೇಗೆ? ಜೀವಿಗಳ ಆಯುಃಪ್ರಮಾಣವು ಹೇಗೆ ನಿಶ್ಚಯಿಸಲ್ಪಟ್ಟಿದೆ? ಕಾಲದ ಸೂಕ್ಷ್ಮಗತಿ ತ್ರುಟಿ ಸ್ಥೂಲಗತಿ ವರ್ಷಗಳನ್ನು ಹೇಗೆ ತಿಳಿದುಕೊಳ್ಳುವುದು ? ಕರ್ಮಾನುಸಾರವಾಗಿ ಜೀವರಗತಿಯು ಹೇಗಾಗುವುದು ? ಸತ್ವ–ರಜ–ಸ್ತಮೊ ಗುಣಗಳಿಗನುಗುಣವಾಗಿ ದೇವ-ಮನುಷ್ಯ-ತಿರ್ಯಗಾದಿಗಳ ಜನನವಾಗುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಷ್ಟೆ. ತ್ರಿಗುಣಾಪೇಕ್ಷಿಗಳಾದ ಜೀವಿಗಳಿಂದ ಹೇಗೆ ಯಾವ-ಯಾವ ಕರ್ಮಗಳು ಮಾಡಲ್ಪಟ್ಟು ಯಾವ ಯಾವ ಯೋನಿಯಲ್ಲಿ ಹೋಗುತ್ತಾರೆ ? ಪೃಥ್ವೀ ಪಾತಾಳ, ದಿಕ್ಕು, ಆಕಾಶ, ಗ್ರಹ, ನಕ್ಷತ್ರ, ಪರ್ವತ, ನದೀ, ಸಮುದ್ರದ್ವೀಪಗಳ ಹಾಗೂ ಅಲ್ಲಿರುವ ಜೀವಿಗಳ ಉತ್ಪತ್ತಿಯು ಹೇಗಾಯಿತು ?

ಬ್ರಹ್ಮಾಂಡದ ಪರಿಮಾಣವು ಒಳಗೆಷ್ಟು ? ಹೊರಗೆಷ್ಟು ? ಮಹಾಪುರುಷರ ಚರಿತ್ರೆಗಳು, ವರ್ಣಾಶ್ರಮ ಭೇದಗಳು, ಅವರ ಧರ್ಮ ಸ್ವರೂಪವೇನು ? ತಿಳಿಸಿರಿ. ಯುಗಭೇದ, ಯುಗ ಪರಿಮಾಣ, ಯುಗಧರ್ಮಗಳನ್ನು ತಿಳಿಸಿ. ಭಗವದವತಾರಗಳ ಆಶ್ಚರ್ಯಕರ ಘಟನೆಗಳನ್ನು ತಿಳಿಸಿರಿ.

ಮಾನವರ ವಿಶೇಷ ಸಾಧಾರಣ ಧರ್ಮಗಳಾವುವು ? ವಿಭಿನ್ನ ವ್ಯವಸಾಯಿಗಳ, ರಾಜರ್ಷಿಗಳ, ಹಾಗೂ ಕಷ್ಟಜೀವಿಗಳ ಧರ್ಮಗಳೇನು ? ತತ್ತ್ವಗಳೆಷ್ಟು ? ತತ್ತ್ವಸ್ವರೂಪಗಳೇನು ? ತತ್ತ್ವಲಕ್ಷಣಗಳೇನು ? ಭಗವಧಾರಾಧನೆಯ-ಭಗವದಧ್ಯಾತ್ಮ ಯೋಗದ ವಿಧಿಯೇನು ?

ಯೋಗೇಶ್ವರರು ಪಡೆಯುವ ಐಶ್ವರ್ಯಗಳಾವುವು ? ಅವರು ಕೊನೆಯಲ್ಲಿ ಹೊಂದುವ ಗತಿ ಯಾವುದು ? ಯೋಗಿಗಳ ಲಿಂಗಶರೀರದ ಭೇದನವು ಹೇಗಾಗುವುದು ? ವೇದ, ಉಪವೇದ, ಧರ್ಮಶಾಸ್ತ್ರ, ಇತಿಹಾಸ, ಪುರಾಣಾದಿಗಳ ಸ್ವರೂಪವೇನು ? ತಾತ್ಪರ್ಯವೇನು ? ಸರ್ವಪ್ರಾಣಿಗಳ ಉತ್ಪತ್ತಿ, ಸ್ಥಿತಿ, ಲಯಗಳು ಹೇಗಾಗುತ್ತವೆ ? ಭಾವಿ, ಕೆರೆ, ಕುಂಟೆ ಇತ್ಯಾದಿ ಇಷ್ಟಾಪೂರ್ತಗಳ ಯಜ್ಞ-ಯಾಗಾದಿಗಳ, ಕಾಮ್ಯ ಕರ್ಮಗಳ, ಪುರುಷಾರ್ಥಗಳ ಸಾಧನೆಯು ಹೇಗೆ ?

ಪ್ರಳಯಕಾಲದಲ್ಲಿ ಪ್ರಕೃತಿಯಲ್ಲಿ ಲೀನವಾದ ಜೀವಿಗಳ ಉತ್ಪತ್ತಿಯು ಹೇಗೆ ? ಪಾಖಂಡಿಗಳು ಹೇಗೆ ಜನಿಸುವರು ? ಆತ್ಮನ ಬಂಧ ಮೋಕ್ಷಗಳ ಸ್ವರೂಪವೇನು ? ಆತ್ಮನು ಆತ್ಮಸ್ವರೂಪದಲ್ಲಿರುವುದು ಹೇಗೆ ?

ಭಗವಂತನು ಸರ್ವತಂತ್ರ ಸ್ವತಂತ್ರನು. ಅವನು ಮಾಯೆಯೊಡನೆ ಹೇಗೆ ಕ್ರೀಡಿಸುತ್ತಾನೆ ? ಮಾಯಾರಹಿತನಾಗಿ ಸಾಕ್ಷಿ-ಉದಾಸೀನನಾಗಿ ಹೇಗಿರುವನು ?

ಮಹಾತ್ಮರೇ – ನನ್ನೀ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸಿರಿ. ಈ ಈ ವಿಚಾರಗಳಲ್ಲಿ ತಾವು ಸ್ವಯಂ ಭೂ ಬ್ರಹ್ಮರು, ಪರಮ ಪ್ರಮಾಣ ಭೂತ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾದವರು. ಸ್ವಾಮಿನ್ – ತಾವು ದಯೆಯಿಟ್ಟು ನನ್ನ ನಿರಶನದ ಬಗ್ಗೆ ಯೋಚಿಸಬೇಡಿ. ಬ್ರಹ್ಮಶಾಪಾನುಗುಣವಾಗಿ ಈ ದೇಹದಿಂದ ಬಿಡುಗಡೆಯಾಗ ಬೇಕೇ ಹೊರತು ಬೇರೆ ಕಾರಣಗಳಿಲ್ಲ. ತಮ್ಮ ವದನಾರವಿಂದದಿಂದ ಭಗವತ್ಕಥಾ ಮೃತವನ್ನು ಪಾನ ಮಾಡುತ್ತಿರುವ ನನಗೆ ಯಾವ ವಿಧದ ಚಿತೆಯೂ ಇಲ್ಲ.

ಹೀಗೆ ರಾಜನು ಆ ಸತ್ಪುರುಷರ ಮಹಾಸಭೆಯಲ್ಲಿ ಭಗವಂತನ ಲೀಲಾ ಕಥಾಶ್ರವಣಕ್ಕಾಗಿ ಶ್ರೀ ಶುಕದೇವರನ್ನು ಪ್ರಾರ್ಥಿಸೋಣ. ಅವರು ಅತ್ಯಂತ ಸಂತುಷ್ಟ ಮನಸ್ಕರಾಗಿ, ವೇದ ಸಮಾನವಾದ ಶ್ರೀ ಮದ್ಭಾಗವತ ಮಹಾಪುರಾಣ ವನ್ನು ಉಪದೇಶಿಸಿದರು. ಇದನ್ನೇ ಬ್ರಾಹ್ಮಕಲ್ಪದಲ್ಲಿ ಸ್ವಯಂ ಭಗವಂತನು ಬ್ರಹ್ಮನಿಗೆ ಹೇಳಿದ್ದನು. ಅದರಂತೆ ಸೂತರೂ ಶೌನಕಾದಿಗಳಿಗೆ ತಿಳಿಸುತ್ತಿದ್ದಾರೆ. ಪಾಂಡುವಂಶ ಶಿರೋಮಣಿಯಾದ ಪರೀಕ್ಷಿತನು ಪ್ರಶ್ನೆ ಮಾಡಿದ ರೀತಿಗೆ ಅನು ಗುಣವಾಗಿ ಶ್ರೀ ಶುಕದೇವರು ಉತ್ತರಿಸಲು ಪ್ರಾರಂಭಿಸಿದರು.

ಓಂ ತತ್ಸದಿತ್ಯೇವಂ ದ್ವಿತೀಯ ಸ್ಕಂಧೇ
ಅಷ್ಟಮೋಽಧ್ಯಾಯಃ

ದ್ವಿತೀಯ ಸ್ಕಂಧ – ಅಧ್ಯಾಯ ೯.

ಭಗವಂತನಿಂದ ಬ್ರಹ್ಮನಿಗೆ ಚತುಃ ಶ್ಲೋಕೀ ಭಾಗವತದ ಉಪದೇಶ

ಶ್ರೀ ಶುಕದೇವರು ಹೇಳುತ್ತಾರೆ. ರಾಜನ್ ಸ್ವಪ್ನದಲ್ಲಿ ಕಾಣುವ ಪದಾರ್ಥಗಳೊಡನೆ, ಸ್ವಾಪ್ನಿಕನ್ಗ ಸಂಬಂಧವಿಲ್ಲದಿರುವಂತೆ ದೇಹಾದ್ಯತೀತನಾದ. ಕೇವಲ ಅನುಭವ ಸ್ವರೂಪನಾದ ಆತ್ಮನಿಗೆ ದೃಶ್ಯಪದಾರ್ಥಗಳೊಡನೆ ಅವಿದ್ಯಾ (ಮಾಯಾ) ದೋಷವೊಂದನ್ನು ಬಿಟ್ಟರೆ ಮತ್ತಾವ ಸಂಬಂಧವೂ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯೆಯು ಕಾರಣದಿಂದ ಭಗವಂತನೂ ವಿವಿಧ ರೂಪವುಳ್ಳವನಾಗಿ ಕಾಣು ತ್ತಾನೆ ಹಾಗೂ ಗುಣಾಸಕ್ತಿಯೂ ಮೂಡಿದಾಗ ನಾನು ನನ್ನದು ಎಂಬ ಭಾವನೆ ಮೂಡುವುದು. ಅಹಂಕಾರ ತ್ಯಾಗಿಯಾಗಿ ತತ್ವದಾರ್ಥನುಸಂಧಾನ ವನ್ನು ಮಾಡಿದರೆ, ಪರಮಾತ್ಮನಲ್ಲಿ ಭಕ್ತಿಯಿಟ್ಟರೆ, ಪರಮಾತ್ಮನ ಸ್ವರೂಪಾನು ಭವವು ಉಂಟಾಗುವುದು. ಹೀಗೆ ಆತ್ಮಾರಾಮನಾದಾಗ "ನಾನು ನನ್ನದು" ಎಂಬ ಭಾವವು ದೂರವಾಗಿ ಪೂರ್ಣ ಉದಾಸೀನನಾಗಿ ಗುಣಾತೀತನಾಗುವನು. ಬ್ರಹ್ಮನ ನಿಷ್ಕಪಟ ತಪಸ್ಸಿನಿಂದ ಪ್ರಸನ್ನನಾದ ಭಗವಂತನು ತನ್ನ ಸ್ವರೂಪ ದರ್ಶನವನ್ನು ಕೊಟ್ಟನು. ಆತ್ಮ ತತ್ತ್ವ ಜ್ಞಾನಕ್ಕಾಗಿ, ಪರಮ ಸತ್ಯ ಪರಮಾರ್ಥ ವಸ್ತುವನ್ನು ಉಪದೇಶಿಸಿದನು.

ತ್ರಿಲೋಕಗಳಿಗೂ ಗುರುವಾದ ಆದಿದೇವ ಬ್ರಹ್ಮನು ತನ್ನ ಜನ್ಮ ಸ್ಥಳವಾದ ಕಮಲದಲ್ಲಿ ಕುಳಿತುಕೊಂಡು ಸೃಷ್ಟಿಯ ಬಗ್ಗೆ ವಿಚಾರಿಸ ತೊಡಗಿದನು. ಆದರೆ ಬ್ರಹ್ಮನಿಗೆ ಸೃಷ್ಟಿ ನಿರ್ಮಾಣ ಮಾಡುವ ಜ್ಞಾನ ದೃಷ್ಟಿಯು ಬರಲಿಲ್ಲ. ಸೃಷ್ಟಿ ವ್ಯಾಪಾರಕ್ಕೆ ಬೇಕಾದ ಜ್ಞಾನವೂ ಮೂಡಲಿಲ್ಲ.

ಹೀಗೆ ಯೋಚಿಸುತ್ತಿರಲು ಒಂದು ದಿನ 'ತಪ-ತಪ' ಎಂದು ಕೇಳಿಸಿತು. ವ್ಯಂಜನಗಳಲ್ಲಿ ೧೬ ನೇ ಅಕ್ಷರವು 'ತ' ೨೧ ನೇ ಅಕ್ಷರವು 'ಪ' ಅಂದರೆ ಅರ್ಥ ವೇನು? ಷೋಡಶ ಕಳಾ ಪರಿಪೂರ್ಣನಾದ, ಜೀವೇಶ್ವರ ರೂಪದಲ್ಲಿ ತೋರುತ್ತಿರುವ ಆ ಪರಮ ಪುರುಷ ಪರಮಾತ್ಮನನ್ನು ಧ್ಯಾನಿಸು.

ಬ್ರಹ್ಮನು ಈ ಶಬ್ದವು ಎಲ್ಲಿಂದ ಕೇಳಿಸಿತೆಂದು ಹುಡುಕಾಡಿದರೂ ಪತ್ತೆ ಯಾಗಲಿಲ್ಲ. ಆಗ ಕಮಲಾಸನಾಸೀನನಾಗಿಯೆ ಇದ್ದುಕೊಂಡು ನನಗೆ ತಪಸ್ಸು ಮಾಡೆಂದು ಆಜ್ಞೆಯಾಗಿದೆ. ಇದರಲ್ಲಿಯೆ ನನಗೆ ಪರಮ ಹಿತವು ಎಂದು ತಿಳಿದ ಬ್ರಹ್ಮನು ನಿಶ್ಚಲಮನಸ್ಸಿನಿಂದ ತಪಸ್ಸಿನಲ್ಲಿ ನಿರತನಾದನು. ತಪಸ್ವಿ ಗಳಲ್ಲಿ ಬ್ರಹ್ಮನು ಶ್ರೇಷ್ಠನಾದವನು.

ಒಂದು ಸಹಸ್ರ ದಿವ್ಯ ವರ್ಷಗಳಕಾಲ ಏಕಾಗ್ರತೆಯಿಂದ ಪ್ರಾಣ ಮನಸ್ಸು ಕರ್ಮೇಂದ್ರಿಯ-ಜ್ಞಾನೇಂದ್ರಿಯಗಳನ್ನು ಅಧೀನಕ್ಕೆ ತೆಗೆದುಕೊಂಡು ಲೋಕವು ಆಶ್ಚರ್ಯ ಪಡುವಂತೆ ತಪಸ್ಸು ಮಾಡಿದನು. ಸರ್ವಲೋಕಗಳನ್ನೂ ಪ್ರಕಾಶ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊಳಿಸುವ ಸಾಮರ್ಥ್ಯವು ಅವನಿಗೆ ಬಂದಿತು. ಅವನ ತಪಸ್ಸಿನಿಂದ ಪ್ರಸನ್ನನಾದ ಭಗವಂತನು ತನ್ನ ಅತಿ ಶ್ರೇಷ್ಠವಾದ ಪರಮ ಧಾಮವನ್ನು ತೋರಿಸಿದನು. ಅದು ಸರ್ವ ಶ್ರೇಷ್ಠವಾದ ಲೋಕವು. ಅದಕ್ಕಿಂತ ಶ್ರೇಷ್ಠವಾದ ಲೋಕವಿಲ್ಲ. ಆ ಲೋಕದಲ್ಲಿ ಯಾವುದೇ ವಿಧವಾದ ಶೋಕ-ಮೋಹ-ಭಯಾದಿಗಳೂ ಇಲ್ಲ. ಅದನ್ನು ಒಂದು ಸಾರಿ ದರ್ಶನ ಮಾಡಿದವರು ಸಕಲ ಸೌಭಾಗ್ಯವಂತರಾಗಿ ಪದೇ-ಪದೇ ಆ ಲೋಕವನ್ನು ಸ್ತುತಿಸುತ್ತಿರುತ್ತಾರೆ. ಅದು ತ್ರಿಗುಣಾತೀತವಾದುದು. ಮಾಯಾತೀತವಾದುದು. ಕಾಲನ ಪ್ರಭಾವಕ್ಕೆ ಒಳಗಾಗದಿರುವುದು. ದೇವ-ರಾಕ್ಷಸರಿಂದ ಪೂಜಿಸಲ್ಪಡುವ ಭಗತ್ಪಾರ್ಷದರು ಅಲ್ಲಿ ವಾಸ ಮಾಡುತ್ತಾರೆ. ಅವರೆಲ್ಲರೂ ನಾರಾಯಣ ಸಮಾನರು, ನಾರಾಯಣ ರೂಪಧಾರಿಗಳು. ಅವರ ಉಜ್ವಲ ಕಾಂತಿಯುಕ್ತವಾದ ಶ್ಯಾಮ ಶರೀರವು ಮನೋಹರವಾಗಿದೆ. ಅವರೆಲ್ಲರೂ ಶತಪತ್ರಲೋಚನರು ಪಿಶಂಗ ವಸ್ತ್ರರು ಸೌಂದರ್ಯಖನಿಗಳು. ಕೋಮಲ ಮೂರ್ತಿಗಳು, ಚತುರ್ಭುಜಧಾರಿಗಳು, ಮಹಾತೇಜಸ್ವೀಗಳು ಅದರ ಮೇಲೆ ವಜ್ರಖಚಿತ ಸುವರ್ಣಾಭರಣಗಳಿಂದ ಪರಿಶೋಭಿತರಾಗಿದ್ದಾರೆ. ಅವರ ಕರ್ಣ ಕುಂಡಲಗಳು ಮಸ್ತಕ ಮುಕುಟ ಕಂಠಹಾರಗಳು ಅತೀವ ಶೋಭಿತವಾಗಿವೆ.

ವಿದ್ಯುಲ್ಲಸಿತ ಮೇಘಗಳಿಂದ ಪರಿಶೋಭಿತವಾದ ಆಕಾಶದಂತೆ ಆ ದಿವ್ಯ ಧಾಮವು ಮಹಾತ್ಮರ ತೇಜೋಮಯ ವಿಮಾನಗಳಿಂದ ಪರಿಶೋಭಿತವಾಗಿದೆ.

ಮಹಾಲಕ್ಷ್ಮಿಯು ತನ್ನ ಸಕಲ ವಿಭೂತಿಗಳೊಡನೆ ಭಗವಂತನ ಪಾದಾರವಿಂದಗಳನ್ನು ಸೇವಿಸುತ್ತಿದ್ದಾಳೆ,

ಆಗಾಗ್ಗೆ ಡೋಲಾರೂಢಳಾಗಿ, ಭಗವಂತನ ಲೀಲಾವಿಭೂತಿಗಳನ್ನು ಗಾನ ಮಾಡತೊಡಗಿದರೆ, ಅವಳ ಸೌಂದರ್ಯ ಸೌರಭ್ಯಗಳಿಂದ ಉನ್ಮತ್ತಗಳಾದ ಭ್ರಮರಗಳು ಲಕ್ಷ್ಮಿಯ ಗುಣಗಾನಗಳಲ್ಲಿ ತೊಡಗುತ್ತವೆ. ಆದಿವ್ಯಲೋಕದಲ್ಲಿ ಸರ್ವಭಕ್ತ ಸಂರಕ್ಷಕನೂ ಲಕ್ಷ್ಮೀಪತಿಯೂ, ಯಜ್ಞಪತಿಯೂ, ವಿಶ್ವಪತಿಯೂ ಆದ ಪರಮಾತ್ಮನು ವಿರಾಜಮಾನನಾಗಿರುವುದನ್ನು ಬ್ರಹ್ಮನು ನೋಡಿದನು,

Sri Vidyabharathi Book Centre, Sringeri

CC-O. In Public Domain. Digitized by eGangotri

ನಂದ, ಸುನಂದ, ಪ್ರಬಲ ಅರ್ಹಣ ಇತ್ಯಾದಿ ಮುಖ್ಯ ಮುಖ್ಯ ಪಾರ್ಶದರಿಂದ ಪ್ರಭುವಿನ ಸೇವೆಯು ಮಾಡಲ್ಪಡುತ್ತಿದೆ. ಭಗವಂತನ ಮುಖ ಕಮಲವು ಪ್ರಸಾದಮಯವಾದ, ಮಧುರ ಮಂದಹಾಸದಿಂದ ಯುಕ್ತವಾಗಿದೆ. ಮೃದು ಮಧುರ ಮೋಹಕವಾದ ದೃಷ್ಟಿ, ಭಕ್ತರಿಗೆ ಕೇಳಿದ್ದನ್ನೆಲ್ಲ ಕೊಟ್ಟುಬಿಡುವೆ ನೆಂಬ ಭಾವನೆ, ಶಿರಸ್ಸಿನಲ್ಲಿ ಕಿರೀಟ, ಕಿವಿಗಳಲ್ಲಿ ಕುಂಡಲಗಳು, ವಕ್ಷಸ್ಥಳದಲ್ಲಿ ಲಕ್ಷ್ಮಿಯ ನಿವಾಸ, ದೇಹದ ಮೇಲೆ ಪೀತಾಂಬರ, ಚತುರ್ಭುಜಗಳು, ಇಂತಹ ಅಸದೃಶರೂಪದಿಂದ ನಾರಾಯಣನು ದಿವ್ಯಾಸನಾಸೀನನಾಗಿದ್ದಾನೆ.

ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಮನಸ್ಸು, ದಶೇಂದ್ರಿಯ ಗಳು, ಶಬ್ದಾದಿ ಪಂಚತನ್ಮಾತ್ರೆಗಳು, ಹಾಗೂ ಪಂಚಭೂತಗಳು ಈಇಪ್ಪತ್ತೈದು ಶಕ್ತಿಗಳೂ ಮೂರ್ತಿಮತ್ತಾಗಿ ಭಗವಂತನ ಸುತ್ತಲೂ ನಿಂತಿವೆ.

ಐಶ್ವರ್ಯ, ಧರ್ಮ, ಕೀರ್ತಿ, ಶ್ರೀ, ಜ್ಞಾನ, ವೈರಾಗ್ಯ, ಈ ನಿತ್ಯ ಷಟ್ ಶಕ್ತಿಗಳಿಂದ ಸರ್ವದಾ ಪರಿಪೂರ್ಣನಾಗಿದ್ದಾನೆ. ಇವುಗಳು ಮತ್ತೆಲ್ಲಿಯೂ ನಿತ್ಯರೂಪದಿಂದ ವಾಸ ಮಾಡುವುದಿಲ್ಲ. ಈ ಸರ್ವೇಶ್ವರನು ಯಾವಾಗಲೂ ನಿತ್ಯಾನಂದಮಯನಾಗಿ, ನಿತ್ಯ-ನಿರಂತರ-ನಿಜ ಸ್ವರೂಪದಲ್ಲಿ ನಿಮಗ್ನನಾಗಿರು ತ್ತಾನೆ.

ದರ್ಶನ ಮಾತ್ರದಿಂದ ಬ್ರಹ್ಮನ ಹೃದಯವು ಆನಂದ ಪರಿಪೂರ್ಣ ವಾಯಿತು, ಶರೀರವು ರೋಮಾಂಚಿತವಾಯಿತು. ನೇತ್ರಗಳು ಆನಂದಾಶ್ರು ಪರಿಪೂರ್ಣಗಳಾದುವು.

ನಿವೃತ್ತಿ ಮಾರ್ಗಾವಲಂಬಿಗಳಾದ ಪರಮಹಂಸರು ಮಾತ್ರ ದರ್ಶನ ಮಾಡಬಹುದಾದಂತಹ ಭಗವಂತನ ಚರಣ ಕಮಲಗಳಲ್ಲಿ ಬ್ರಹ್ಮನು ತಲೆಬಾಗಿ ನಮಸ್ಕರಿಸಿದನು.

ಭಗವಂತನು ತನ್ನ ಅತ್ಯಂತ ಪ್ರೇಮಾಸ್ಪದನಾದ, ದರ್ಶನಾನಂದ ತುಂದಿಲ ನಾದ, ಶರಣಾಗತನಾದ ಬ್ರಹ್ಮನನ್ನು ನೋಡಿ ಸಂತೋಷಗೊಂಡನು. ಸೃಷ್ಟಿ ಜ್ಞಾನವನ್ನು ಕೊಡಲು ಯೋಗ್ಯನೆಂದು ತಿಳಿದು ಕೈ ಹಿಡಿದು ಪ್ರೀತಿಯಿಂದ ನುಡಿದನು:—

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ:- ಹಿಂದೆ ಕಾಶಿಯ ಹತ್ತಿರ ಒಂದು ಹಳ್ಳಿಯಲ್ಲಿ ಒಬ್ಬರು ಠಾಕೂರರಿದ್ದರು. ಪಂಚಮ ಜಾರ್ಜ್ ಭಾರತಕ್ಕೆ ಬಂದಾಗ ಅವರ ಕೈ ಕುಲುಕಿದ್ದರು. ಅವರು ಅದನ್ನು ವೃದ್ಧಾಪ್ಯದಲ್ಲಿಯೂ ನೆನೆಸಿಕೊಳ್ಳುತ್ತಾ, ನನ್ನ ಸಮಾನರಾರು ಉಂಟು ? ಪಂಚಮ ಜಾರ್ಜ್ ನನ್ನ ಕೈ ಕುಲುಕಿದ್ದರು. ಎಂದು ಹೇಳುತ್ತಾ ಹುಕ್ಕಾ ಎಳೆಯುತ್ತಿದ್ದರಂತೆ. ಅವರ ದೃಷ್ಟಿಯಲ್ಲಿ ಪಂಚಮ ಜಾರ್ಜ್ ಎಂದರೆ ದೈವಕ್ಕಿಂತಲೂ ಹೆಚ್ಚು.

ಸನ್ಮಾನ್ಯ ಮಹಾತ್ಮ ಉಡಿಯಾ ಬಾಬಾ ಅವರು ಹೇಳುತ್ತಿದ್ದರು:- ಇಡೀ ದಿವಸದಲ್ಲಿ ಒಂದು ಕ್ಷಣವಾದರೂ ಜೀವನು ಭಗವಂತನೊಡನಿದ್ದರೂ ಆ ದಿವಸವೆಲ್ಲವೂ ಆನಂದದಿಂದಿರಬಹುದು.

ಇಲ್ಲಿ ಭಗವಂತನು ಬ್ರಹ್ಮನ ಕೈಹಿಡಿದು ಹೇಳುತ್ತಾನೆ. ವೇದಗರ್ಭ, ನಿನ್ನ ತಪಸ್ಸಿನಿಂದ ಸಂತುಷ್ಟನಾಗಿದ್ದೇನೆ. ಸೃಷ್ಟಿ ವಿಷಯಕ ಜ್ಞಾನ ಪ್ರಾಪ್ತಿಗಾಗಿ ಬಹಳ ಕಾಲ ನನ್ನನ್ನು ಧ್ಯಾನಿಸಿರುವೆ. ನಾನು ಕಪಟಯೋಗಿಗಳಿಗೆ ಅಪ್ರಾಪ್ಯನು. ನಿನಗೆ ಮಂಗಳವಾಗಲಿ. ನೀನು ಅಪೇಕ್ಷಿಸುವುದನ್ನು ಕೊಡುವೆನು ಜೀವಿಗಳ ಸಮಸ್ತ ಕಲ್ಯಾಣಕಾರಿ ಸಾಧನೆಗಳ ಪರ್ಯವಸಾನವು ನನ್ನ ದರ್ಶನದಲ್ಲಿಯೇ ಆಗುವುದು.

ಜೀವನದ ಸಫಲತೆಯೆಂದರೆ, ಸರ್ವ ಹೃದಯಾಂತರ್ಯಾಮಿಯನ್ನು ಸಂದರ್ಶಿಸುವುದು. ಅಶರೀರವಾಣಿಯನ್ನು ಕೇಳಿ ನೀನು ಘೋರ ತಪಸ್ಸನ್ನು ಆಚರಿಸಿರುವೆ. ನನ್ನ ಇಚ್ಛೆಗೆ ಅನುಗುಣವಾಗಿ ನಿನಗೆ ನನ್ನ ದರ್ಶನವಾಗಿದೆ.

ನಾರಾಯಣನೆಂದರೆ,

ನರಸ್ಯ ಹೃದಯಂ ನಾರಂ,
ನಾರಂ ಅಯನಂ ಯಸ್ಯ ಸಃ ನಾರಾಯಣಃ
ನರಾಃ ಆಪಃ ಅಯನಂ ಯಸ್ಯ ಸಃ ನಾರಾಯಣಃ

ಈ ನಾರಾಯಣನೇ ಬ್ರಹ್ಮನಿಗೆ ತಪಸ್ಸು ಮಾಡಲು ಆಜ್ಞೆ ಮಾಡಿದ್ದನು. ತಪಸ್ಸು ಭಗವಂತನ ಹೃದಯ, ತಪಸ್ಸೇ ಅವನ ಆತ್ಮಾ, ತಪಸ್ಸಿನಿಂದಲೇ ಭಗವಂತನು ಸೃಷ್ಟಿ, ಸ್ಥಿತಿ, ಲಯಗಳನ್ನು ನಡೆಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರಾಯಣನ ಸಂದರ್ಶನದಿಂದ ಆಹ್ಲಾದಿತನಾದ ಬ್ರಹ್ಮನು ಹೇಳಿದನು:- ಭಗವನ್, ನೀನು ಸರ್ವಭೂತಾಶಯಸ್ಥಿತನು. ಸರ್ವರಲ್ಲಿಯೂ ಸಾಕ್ಷಿರೂಪದಿಂದ ವಿರಾಜಿಸುವವನು. ನನ್ನ ಅಪೇಕ್ಷೆಯು ನಿನಗೆ ತಿಳಿದಿದೆ. ಆದರೂ:-

ತಥಾಪಿ ನಾಥ ಮಾನಸ್ಯ, ನಾಥ ನಾಥಯ ನಾಥಿತಮ್,
ಪರಾವರೇ ಯಥಾರೂಪೇ, ಜಾನೀಯಾಂತೇ ತ್ವರೂಪಿಣಃ

ಪ್ರಾರ್ಥಿಸುತ್ತಿರುವ ನನ್ನ ಪ್ರಾರ್ಥನೆಯನ್ನು ನಡೆಸಿಕೊಡು. ರೂಪರಹಿತನಾದ ನಿನ್ನ ಸಗುಣ-ನಿರ್ಗುಣ ರೂಪಗಳನ್ನು ತಿಳಿಯಲು ಸಮರ್ಥನಾಗುವಂತೆ ಮಾಡು.

ನೋಡಿ. ಭಗವಂತನಾದರೊ ಅರೂಪನು. ಅವನನ್ನು ಕೆಲವರು ನಿರ್ಗುಣನೆನ್ನುತ್ತಾರೆ, ಕೆಲವರು ಸಗುಣನೆನ್ನುತ್ತಾರೆ. ವಸ್ತುತಃ ಭಗವಂತನಲ್ಲಿ ಸಗುಣತೆಯೂ ಇಲ್ಲ, ನಿರ್ಗುಣತೆಯೂ ಇಲ್ಲ. ಎರಡೂ ಉಂಟು. ಎರಡರಿಂದಲೂ ಅವನು ವಿಲಕ್ಷಣನು.

ಬ್ರಹ್ಮನು ಹೇಳುತ್ತಾನೆ. ನೀನು ಮಾಯಾಧೀಶನು. ನಿನ್ನ ಸಂಕಲ್ಪವು ಅಮೋಘವು. ನೀನು ಮಾಯೆಯಿಂದ ಊರ್ಣನಾಭಿಯಂತೆ, ಸಕಲ ಸೃಷ್ಟಿಯನ್ನೂ ಸೃಜಿಸಿ, ಪಾಲಿಸಿ, ಸಂಹರಿಸುವೆ. ಇದರ ರಹಸ್ಯವನ್ನು ನಾನು ತಿಳಿಯುವಂತೆ ಅನುಗ್ರಹಿಸು.

ಕೇನೋಪನಿಷತ್ತು ಭಗವಂತನ ರೂಪವನ್ನು ಹೀಗೆ ವರ್ಣಿಸುತ್ತದೆ.

ಯಸ್ಯಾಮತಂ ತಸ್ಯಮತಂ, ಮತಂಯಸ್ಯ ನವೇದಸಃ
ಅವಿಜ್ಞಾತಂ ವಿಜಾನತಾಂ, ವಿಜ್ಞಾತಮ ವಿಜಾನತಾಂ

ಬ್ರಹ್ಮನನ್ನು ತಿಳಿದಿದ್ದೇನೆ ಎಂದು ಹೇಳುವವನು ತಿಳಿದಿಲ್ಲ, ತಿಳಿದಿಲ್ಲ ಎಂದು ಹೇಳುವವನು ತಿಳಿದಿದ್ದಾನೆ. ಇದೇ ಭಗವದ್ರಹಸ್ಯವು.

ಕಠೋಪನಿಷತ್ತಿನಲ್ಲಿಯೂ ಹೇಳುತ್ತಾರೆ.

ಅನ್ಯತ್ರ ಧರ್ಮಾದನ್ಯತ್ರಾ ಧರ್ಮಾತ್
ಅನ್ಯತ್ರಾ ಸ್ಮಾತ್ಕೃತಾ ಕೃತಾತ್.

ಹೀಗೆ ಧರ್ಮಾಧರ್ಮಗಳಿಂದ-ಕೃತಾಕೃತಗಳಿಂದ ಬೇರೆಯಾಗಿರುವ ಭಗವಂತನ ರಹಸ್ಯವನ್ನು ಭಗವಂತನೇ ತಿಳಿಸಬೇಕು. ಅದರಿಂದ ಬ್ರಹ್ಮನು ಪ್ರಾರ್ಥಿಸ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಾನೆ. ನಿನ್ನಾಜ್ಞಾಪಾಲಕನಾಗುವಂತೆ ಅನುಗ್ರಹಿಸು. ಹಾಗೂ ಕರ್ತೃತ್ವಾಭಿಮಾನವು ನನ್ನಲ್ಲಿ ಮೂಡದಿರಲಿ. ಸ್ನೇಹಿತನು ತನ್ನ ಮಿತ್ರನ ಕೈ ಹಿಡಿಯುವಂತೆ ನನ್ನ ಕೈ ಹಿಡಿದು ನನ್ನನ್ನು ಪುತ್ರನನ್ನಾಗಿ ಸ್ವೀಕರಿಸಿರುವೆ.

ವಸ್ತುತಃ ಎಲ್ಲರ ಪರಮಾಪ್ತ ಮಿತ್ರನೂ ಪರಮಾತ್ಮನೊಬ್ಬನೇ. ಎಲ್ಲಾ ನಾಮರೂಪಗಳೂ ಅವನೇ ಆಗಿರುವಾಗ ಅವನ ಹೊರತು ನಮ್ಮ ಮಿತ್ರರಾಗಲು ಯಾರು ಸಾಧ್ಯ ? ಅವನು ಅಖಂಡಾನಂದ ಸ್ವರೂಪಿ.

ಬ್ರಹ್ಮನ ಪ್ರಾರ್ಥನೆಯಿಷ್ಟೆ. ಸೃಷ್ಟಿರೂಪ ಕಾರ್ಯವನ್ನು ಕೈಕೊಂಡರೂ ನಾನು ಸೃಷ್ಟಿಕರ್ತಾ ಎಂಬ ಅಭಿಮಾನವು ನನ್ನಲ್ಲಿ ಮೂಡದಂತೆ ಅನುಗ್ರಹಿಸು.

ಭಗವಂತನು ಹೇಳುತ್ತಾನೆ.

ಜ್ಞಾನಂ ಪರಮ ಗುಹ್ಯಂಮೇ, ಯದ್ವಿಜ್ಞಾನ ಸಮನ್ವಿತಂ
ಸರಹಸ್ಯಂ ತದಂಗಂ ಚ, ಗೃಹಾಣ ಗದಿತಂ ಮಯಾ

ನಾನು ನಿನಗೆ ವಿಜ್ಞಾನ ಸಮನ್ವಿತವಾದ, ಅತ್ಯಂತ ಗೋಪನೀಯವಾದ ಜ್ಞಾನವನ್ನು ನೀಡುತ್ತೇನೆ.

ಜ್ಞಾನಂ:- ಶಾಸ್ತ್ರೋಕ್ತವಾದುದು, ವಿಜ್ಞಾನಂ:- ಅನುಭವಾತ್ಮಕವಾದುದು, ಸಭಕ್ತಿಕವಾದುದು. ಇಂತಹ ಜ್ಞಾನವು ಗೋಪನೀಯವಾದರೂ, ನನ್ನಿಂದ ನೀನು ಸಾಂಗೋಪಾಂಗವಾಗಿ ಸ್ವೀಕರಿಸು. ಗೃಹಾಣ ಗದಿತಂ ಮಯಾ:- ಉಪದೇಶ ಮಾಡುತ್ತಿದ್ದ ಹಾಗೆಯೇ ವಸ್ತು ಸಾಕ್ಷಾತ್ಕಾರವಾಗಬೇಕು. ಸಂಶಯ, ವಿಪರ್ಯಯಗಳು ಮೂಡಬಾರದು. ಹಾಗಾಗದಿದ್ದರೆ ಉಪದೇಶವು ಸಾರ್ಥಕವಾಗಲಿಲ್ಲವೆಂದು ತಿಳಿಯಬೇಕು.

ಇದೇ ತತ್ತ್ವಜ್ಞಾನದ ವೈಶಿಷ್ಟ್ಯವು. ಮುಂಡಕೋಪನಿಷತ್ತಿನಲ್ಲಿ ಬ್ರಹ್ಮನು ಚತುಷ್ಪಾತ್ ಎಂದು ಹೇಳಿದೆ. "ಅಯಮಾತ್ಮಾ ಚತುಷ್ಪಾತ್".

ಆತ್ಮನ ಅವಸ್ಥೆಗಳು ನಾಲ್ಕು. ವಿಶ್ವ, ತೈಜಸ, ಪ್ರಾಜ್ಞ, ತುರೀಯ.

ವೇದಾಂತದಲ್ಲಿ ನಾಲ್ಕು ಸಂಖ್ಯೆಯ ಮಹಿಮೆಯು ಬಹಳವಾಗಿದೆ. ಬ್ರಹ್ಮಸೂತ್ರದಲ್ಲಿ ನಾಲ್ಕು ಅಧ್ಯಾಯಗಳು. ಪ್ರತಿಯೊಂದರಲ್ಲೂ ನಾಲ್ಕು ಪಾದಗಳು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಾಗವತದಲ್ಲಿ ನಾಲ್ಕು ಶ್ಲೋಕಗಳಿಂದ ಭಾಗವತದ ಉಪದೇಶವಾಗಿದೆ. ಬ್ರಹ್ಮನು ಚತುರ್ಮುಖನು, ಚತುರ್ವೇದಗಳು, ಭಾಗವತವು ಚತುರ್ವೇದಾತ್ಮಕವು. ಇದರಲ್ಲಿ ನಾಲ್ಕು ತತ್ತ್ವಗಳಿವೆ.

೧. ಪರಮಾತ್ಮ ತತ್ತ್ವದ ವಿವರಣೆ
೨. ಮಾಯಾತತ್ತ್ವದ ವಿವರಣೆ
೩. ಜಗತ್ತತ್ತ್ವದ ವರ್ಣನೆ
೪. ಆತ್ಮತತ್ತ್ವದ ವರ್ಣನೆ

ಈ ನಾಲ್ಕರ ವರ್ಣನೆಯು ನಾಲ್ಕು ಶ್ಲೋಕಗಳಲ್ಲಿದೆ.

ಅಹಮೇವಾಸ ಮೇವಾಗ್ರೇ,
ನಾನ್ಯದ್ಯತ್ ಸದಸತ್ಪರಂ.
ಪಶ್ಚಾದಹಂ ಯದೇತಚ್ಚ ಯೋವಶಿಷ್ಯೇತ ಸೋಸ್ಮ್ಯಹಂ
ಅಹಮೇಕ ಏವಾಗ್ರೇ :–

ಸೃಷ್ಟಿಗಿಂತ ಮೊದಲು ನಾನೊಬ್ಬನೇ ಆಸಂ ಇದ್ದೆನು. ಈ ಇರುವಿಕೆಯಲ್ಲಿ ಕಾಲವು ವಿವಕ್ಷಿತವಲ್ಲ. ಪರಮಾತ್ಮನೊಡನೆ ಕಾಲವು ಹೋಗುವುದಿಲ್ಲ, ಬರುವುದಿಲ್ಲ, ಕ್ರಿಯಾಪ್ರಾಣಾದಿಗಳೊಂದೂ ಇಲ್ಲ. ಇಲ್ಲಿ "**ಅಹಮೇವಾಸಮೇವಾಗ್ರೇ**" ಎಂದು ಎರಡು ಏವಕಾರಗಳ ಪ್ರಯೋಗವಿದೆ. ಒಂದು 'ಏವ' ಪದಕ್ಕೆ ಸೃಷ್ಟಿಯ ಪ್ರಾರಂಭದಲ್ಲಿ ಎಂದರ್ಥವು. ಎರಡನೆಯ ಏವ ಪದಕ್ಕೆ ಕರ್ತಾ–ಧರ್ತಾ ಬೇರೆ ಯಾರೂ ಇಲ್ಲ. ಕೇವಲ ಸತ್ತಾ ಮಾತ್ರವಿದ್ದಿತು ಎಂದರ್ಥವು.

"**ಅಹಮೇವಾಸಂ**" ಎಂದು ಅದ್ವಿತೀಯತೆಯನ್ನು ತೋರಿಸಿದ್ದಾರೆ. **ನಾನ್ಯತ್ ಯತ್ ಸದಸತ್ ಪರಂ:–** ಸ್ಥೂಲ, ಸೂಕ್ಷ್ಮಾತ್ಮಕ ಬೇರೆ ವಸ್ತುಗಳು ಯಾವುದೂ ಇಲ್ಲ. ಸೃಷ್ಟಿಗಿಂತ ಮೊದಲೂ ನಾನೇ, ಸೃಷ್ಟಿಯೂ ನಾನೇ. ಅಭಿಪ್ರಾಯವಿಷ್ಟೆ. ಪರಮಾತ್ಮ ಸ್ವರೂಪವು ಅದ್ವಿತೀಯವಾದುದು. ಎಲ್ಲವೂ ನಾನೇ ಆದಮೇಲೆ ಲಯವೂ ನನ್ನಲ್ಲಿಯೆ. ಆವಾಗಲೂ ನಾನು ಇದ್ದೇ ಇರುವೆನೆಂದರ್ಥವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಶ್ಚಾತ್‌ಸೃಷ್ಟೇಃ ಅನಂತರಮಪಿ ಅಹಮೇವಾಸ್ಮಿ,
ಯದೇತತ್ ವಿಶ್ವಂ ತದಪ್ಯಹಮಸ್ಮಿ
ಪ್ರಳಯೇಯೋವಶಿಷ್ಯೇತ ಸೋಽಪ್ಯಹಮೇವ

ಹೀಗೆ ಹೇಳಿದುದರಿಂದ ನಾನು ಆದ್ಯಂತರಹಿತನು, ಅದ್ವಿತೀಯನು, ಪರಿಪೂರ್ಣನು ಎಂದು ಹೇಳಿದ ಹಾಗಾಯಿತು.

ಇಲ್ಲಿಯು ವಿಲಕ್ಷಣ ವಿಚಾರವನ್ನು ಗಮನಿಸಬೇಕು. ಪರಮಾತ್ಮನು ನಮ್ಮಿಂದ ಬೇರೆಯೆಂದರೆ, ಅವನು ಎರಡು ಗತಿಗಳುಳ್ಳವನಾಗುತ್ತಾನೆ. ಅಥವಾ ಕಲ್ಪಿತನಾಗುತ್ತಾನೆ. ಹಾಗೂ ದೃಶ್ಯನಾಗುತ್ತಾನೆ. ಅದರಿಂದ ಸ್ವಾತ್ಮಾಭಿನ್ನ ರೂಪದಿಂದಲೇ ಪರಮಾತ್ಮನ ಸಾಕ್ಷಾತ್ಕಾರವಾಗಬೇಕು. ಹೀಗಾದರೇನೇ ಪರಮಾತ್ಮನು ಚೈತನ್ಯನೂ, ಅಕಲ್ಪಿತನೂ ಆಗುವನು.

ರೂಪಾಂತರದಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾದರೆ ಅವನು ಪರೋಕ್ಷನಾಗುವನು. ಇದು ವೇದಾಂತ ಶಾಸ್ತ್ರದ ಗೂಢರಹಸ್ಯವು. ಅದರಿಂದ 'ಅಹಂ' ಪದದಿಂದ ಅವನನ್ನು ವರ್ಣಿಸುತ್ತಿದ್ದಾರೆ. ಈ ಶ್ಲೋಕದ ಆದಿಯಲ್ಲಿಯೂ ಅಹಂ ಪದವಿದೆ. ಅಂತ್ಯದಲ್ಲಿಯೂ ಇದೆ. ಅಹಂ ಪದದ ಸಂಪುಟೀಕರಣದಿಂದ ಈ ಮಂತ್ರಾತ್ಮಕ ಶ್ಲೋಕದಲ್ಲಿ ಪರಮಾತ್ಮನ ನಿರೂಪಣೆಯು ಮಾಡಲ್ಪಟ್ಟಿದೆ.

"ಅಹಂ" ಎನ್ನುವುದು ವ್ಯಾಕರಣಶಾಸ್ತ್ರರೀತ್ಯಾ ಪ್ರತ್ಯಾಹಾರವು. ಅಕಾರದಿಂದ ಹಕಾರದವರೆಗೆ ಇರುವ ಅಕ್ಷರಗಳಿಗೆಲ್ಲಾ ಬೋಧಕವಾಗುವುದು. ಅಂದರೆ ಸಕಲ ವಾಙ್ಮಯರೂಪನೂ ಪರಮಾತ್ಮನೇ ಎಂದು ಹೇಳಿದ ಹಾಗಾಯಿತು.

ಈ ಮುಂದಿನ ಶ್ಲೋಕದಿಂದ ಪರಮಾತ್ಮನ ಮಾಯಾತತ್ತ್ವವನ್ನು ವರ್ಣಿಸುತ್ತಾರೆ.

ಋತೇಽರ್ಥಂ ಯತ್ಪ್ರತೀಯೇತ,
ನ ಪ್ರತೀಯೇತ ಚಾತ್ಮನಿ
ತದ್ವಿದ್ಯಾದಾತ್ಮನೋ ಮಾಯಾಂ
ಯಥಾಭಾಸೋ ಯಥಾ ತಮಃ

ಇಲ್ಲದಿದ್ದರೂ ತೋರುವುದು. ಇದ್ದರೂ ತೋರದಿರುವುದು ಇದೇ ಮಾಯೆ. ಯಥಾ ಆಕಾಶ [illegible] ಇಲ್ಲದಿದ್ದರೂ ತೋರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಥಾ ತಮ :- ರಾಹು : ಗ್ರಹಮಂಡಲದಲ್ಲಿ ರಾಹುವಿದ್ದರೂ ತೋರುವುದಿಲ್ಲ. ಐಂದ್ರಜಾಲಿಕನ ಆಟದಂತೆ, ಈ ದೃಶ್ಯವು ಪ್ರಪಂಚವು ವಸ್ತುತಃ ಇಲ್ಲದಿದ್ದರೂ ತೋರುತ್ತದೆ. ಸ್ವಾತ್ಮನು ಇದ್ದರೂ ತೋರುವುದಿಲ್ಲ.

ಹೀಗೂ ಅರ್ಥವನ್ನು ಹೇಳುತ್ತಾರೆ. ಪ್ರಪಂಚೋತ್ಪತ್ತಿ, ಸ್ಥಿತಿ, ಲಯಗಳಲ್ಲಿ ಪ್ರಕೃತಿ ತತ್ತ್ವವೇ ಉಪಾದಾನತಯಾ ಕಾಣುತ್ತದೆ. ಅದೇ ಆತ್ಮನ ಮಾಯೆ.

"**ಮಾಯಾಂತು ಪ್ರಕೃತಿಂ ವಿದ್ಯಾತ್,**
ಮಾಯಿನಂತು ಮಹೇಶ್ವರಂ," ಎಂದು ಶ್ರುತಿಯು ಹೇಳುತ್ತದೆ,

ಹಾಗಾದರೆ. **ಆತ್ಮಸ್ವರೂಪಂ ಕೀದೃಶಂ,**
ಪ್ರಕೃತಿತತ್ತ್ವಂ ಕೀದೃಶಂ ಎಂದರೆ – **ಯಥಾ ಭಾಸಃ ಯಥಾ ತಮಃ**

ಎಂದರೆ ಪ್ರಕಾಶವು ಹೇಗೋ ಹಾಗೇ ಆತ್ಮಾ. ಮಾಯಾಶಬ್ದ ವಾಚ್ಯಾ ಪ್ರಕೃತಿಯು ಜಡವಾದುದರಿಂದ ತಮಸ್ತುಲ್ಯಾ,

ಆತ್ಮಾ ಸ್ವಯಂ ಪ್ರಕಾಶತ್ವಾತ್ ತೇಜಸ್ತುಲ್ಯಃ

ಈಗ ಜಗತ್ತತ್ತ್ವವನ್ನು ವರ್ಣಿಸುತ್ತಾರೆ.

ಯಥಾ ಮಹಾಂತಿ ಭೂತಾನಿ,
ಭೂತೇಷೂಚ್ಚಾವಚೇಷ್ವನು,
ಪ್ರವಿಷ್ಟಾನ್ಯ ಪ್ರವಿಷ್ಟಾನಿ,
ತಥಾತೇಷು ನತೇಷ್ವಹಂ.

ಜಗತ್ತಿನಲ್ಲಿ ಕಾರ್ಯಕಾರಣಭಾವಗಳು ಕಾಣಲ್ಪಡುತ್ತವೆ. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದ ಪೃಥ್ವೀ, ಪೃಥ್ವಿಯಿಂದ ಔಷಧಿಗಳು ಹೀಗೆ.

ಮಣ್ಣಿನಿಂದ ಗಡಿಗೆಯಾಗುತ್ತದೆ. ಗಡಿಗೆಯಾದ ಮೇಲೆ ಅದರಲ್ಲಿ ಮಣ್ಣು ಪ್ರವೇಶಿಸುವುದೂ ಅಥವಾ ಮಣ್ಣು ಮೊದಲಿನಿಂದಲೂ ಅಲ್ಲಿರುವುದೋ?

Sri Vidyabharathi Book Centre, Sringeri

CC-O. In Public Domain. Digitized by eGangotri

ಗಡಿಗೆಯಾದ ಮೇಲೆ ಮಣ್ಣು ಪ್ರವೇಶಿಸುವುದಿಲ್ಲ, ಮಣ್ಣು ಮೊದಲಿನಿಂದಲೂ ಇದ್ದಿತು. ಘಟನಷ್ಟವಾದರೂ ಮಣ್ಣು ನಷ್ಟವಾಗುವುದಿಲ್ಲ.

ಜಗತ್ತೆಲ್ಲವೂ ಪರಮಾತ್ಮನಲ್ಲಿದೆ, ಪರಮಾತ್ಮನು ಜಗತ್ತಿನಲ್ಲಿದ್ದಾನೆ. ಹಾಗೂ ಜಗತ್ತು ಪರಮಾತ್ಮನಲ್ಲಿಲ್ಲ, ಪರಮಾತ್ಮನು ಜಗತ್ತಿನಲ್ಲಿಲ್ಲ. ವಸ್ತುತಃ ವಸ್ತುದ್ವಯಗಳಿಲ್ಲ.

ಗೀತೆಯಲ್ಲಿ ಭಗವಂತನು ಸ್ಪಷ್ಟವಾಗಿ ಹೇಳುತ್ತಾನೆ.

ಮತ್‌ಸ್ಥಾನಿ, ಸರ್ವಭೂತಾನಿ, ನಚಾಹಂತೇಷ್ವವಸ್ಥಿತಃ

ಸರ್ವಪ್ರಾಣಿಗಳೂ ನನ್ನಲ್ಲಿವೆ. ನಾನು ಅವುಗಳಲ್ಲಿಲ್ಲ. ಮುಂದುವರೆದು ಹೇಳುತ್ತಾನೆ:- ನನ್ನಲ್ಲಿ ಏನೂ ಇಲ್ಲ.

"ನಚಮತ್ ಸ್ಥಾನಿ ಭೂತಾನಿ,
ಪಶ್ಯಮೇ ಯೋಗಮೈಶ್ವರಂ"

ಗುರುಮುಖೇನ ಗೀತೆಯನ್ನು ಓದದವರು ಇದು ಹುಚ್ಚನ ಪ್ರಲಾಪವೆನ್ನುತ್ತಾರೆ. ಏಕೆಂದರೆ, ಒಂದು ಸಾರಿ ಹೇಳುತ್ತಾನೆ, ನನ್ನಲ್ಲಿ ಎಲ್ಲವೂ ಇವೆ. ಮತ್ತೊಂದು ಬಾರಿ ಹೇಳುತ್ತಾನೆ, ನನ್ನಲ್ಲಿ ಏನೂ ಇಲ್ಲ.

ಪರಮಾತ್ಮನ ದೃಷ್ಟಿಯಲ್ಲಿ ಈ ಜಗತ್ತು ಎಂದರೇನು ?

ಘಟವು ಮಣ್ಣಿನಲ್ಲಿ ಪ್ರವೇಶಿಸುವುದಿಲ್ಲ, ಮಣ್ಣು ಘಟದಲ್ಲಿ ಪ್ರವೇಶಿಸುವುದಿಲ್ಲ. ಪ್ರವೇಶಿಸದಿದ್ದರೂ ಪ್ರವೇಶಿಸಿದಂತೆ ತೋರುವುದೇ ಇದರ ವೈಶಿಷ್ಟ್ಯವು.

ಯಥಾ ಮಹಾಂತಿ ಭೂತಾನಿ :- ಪ್ರಾಣಿಗಳ ಪಂಚಭೂತಾತ್ಮಕ ಶರೀರಗಳಲ್ಲಿ – ಶರೀರಗಳು ಪಂಚಭೂತಗಳಿಂದ ನಿರ್ಮಿಸಲ್ಪಟ್ಟಿರುವುದರಿಂದ, ಕಾರ್ಯರೂಪದಿಂದ ದೇಹಗಳಲ್ಲಿ ಪಂಚಭೂತಗಳು ಪ್ರವೇಶಿಸಲ್ಪಟ್ಟಿವೆ. ಹಾಗೂ ಪಂಚಭೂತಗಳು ಕಾರಣರೂಪದಿಂದ ಮೊದಲಿನಿಂದಲೂ ಅಲ್ಲಿಯೇ ಇರುವುದರಿಂದ ಹೊಸದಾಗಿ ಪ್ರವೇಶಿಸಬೇಕಾಗಿಲ್ಲ. ಹಾಗೆಯೆ ಭಗವಂತನು ಶರೀರದೃಷ್ಟಿಯಿಂದ ಹೇಳುವುದಾದರೆ, ಆತ್ಮರೂಪದಿಂದ ಪ್ರಾಣಿಗಳ ದೇಹದಲ್ಲಿ ಪ್ರವೇಶ ಮಾಡಿದನು.

Sri Vidyabharathi Book Centre, Sringeri

ಆತ್ಮದೃಷ್ಟಿಯಿಂದ ಹೇಳುವುದಾದರೆ, ಆತ್ಮಾತಿರಿಕ್ತ ವಸ್ತುವೊಂದು ಇಲ್ಲದಿರುವುದರಿಂದ ಪ್ರವಿಷ್ಟನೂ ಆಗಿಲ್ಲ.

ಪ್ರವಿಷ್ಟಾನ್ಯ ಪ್ರವಿಷ್ಟಾನಿ :- ಪ್ರವಿಷ್ಟನಾದರೂ ಅಪ್ರವಿಷ್ಟನಂತೆ, ಎನ್ನುವುದಕ್ಕೂ ಹೀಗೆ ಅರ್ಥವನ್ನು ಹೇಳುತ್ತಾರೆ.

ತೇಷಾಂಭೇದನ, ದಹನ, ಕ್ಲೇದನ, ಶೋಷಣಾದಿ ಸದ್ಭಾವೇಪಿ ತದಂತಃ ಪ್ರವೇಶ ಪ್ರಯುಕ್ತ ತಾದೃಶ ದೋಷರಾಹಿತ್ಯಂ, ಯಥಾ ಆಕಾಶಾದಿಕಂ

ಈಗ ಆತ್ಮತತ್ತ್ವವನ್ನು ವಿವರಿಸುತ್ತಾರೆ :-

ಏತಾವದೇವ ಜಿಜ್ಞಾಸ್ಯಂ, ತತ್ತ್ವಜಿಜ್ಞಾಸುನಾತ್ಮನ :,
ಅನ್ವಯವ್ಯತಿರೇಕಾಭ್ಯಾಂ,
ಯತ್ ಸ್ಯಾತ್ ಸರ್ವತ್ರ ಸರ್ವದಾ

ತತ್ತ್ವಜಿಜ್ಞಾಸುವಾದವನು ಅನ್ವಯ-ವ್ಯತಿರೇಕಗಳಿಂದ ಸರ್ವತ್ರ, ಸರ್ವದಾ ವಿದ್ಯಮಾನವಾದ ಸದ್ವಸ್ತುವನ್ನು ಜಿಜ್ಞಾಸೆ ಮಾಡಿ ತಿಳಿದುಕೊಳ್ಳಬೇಕು.

ಇದಂನ-ಇದಂನ, ಎನ್ನುವ ನಿಷೇಧ ಪದ್ಧತಿಯಿಂದಲಾಗಲಿ, ಇದಮಸ್ತಿ, ಇದಮಸ್ತಿ ಎನ್ನುವ ಅನ್ವಯ ಪದ್ಧತಿಯಿಂದಲಾಗಲಿ ಸರ್ವಾತೀತನಾದ, ಸರ್ವಸ್ವರೂಪನಾದ ಭಗವಂತನು ಸರ್ವದಾ ಸರ್ವತ್ರ ವಿದ್ಯಮಾನನು, ಎಂಬ ವಾಸ್ತವಿಕ ತತ್ತ್ವವನ್ನು ಮನನ ಮಾಡಬೇಕು. ಇಲ್ಲಿ ಯುಕ್ತಿಯೇನೆಂದರೆ, ಘಟನಿರ್ಮಾಣಕ್ಕಿಂತ ಮೊದಲೂ ಮೃತ್ತು ಇದ್ದಿತು. ಘಟನಿರ್ಮಾಣಾನಂತರವೂ ಮೃತ್ತಿದ್ದಿತು. ಘಟನಾಶಾ ನಂತರವೂ ಇರುತ್ತದೆ. ಘಟದ ಸರ್ವಾವಸ್ಥೆಗಳಲ್ಲಿಯೂ ಅನ್ವಯ ರೂಪದಿಂದ ಮೃತ್ತು ಇರುತ್ತದೆ. ಮೃತ್ತಿನ ಅಸ್ತಿತ್ವದಿಂದಲೇ ಘಟ ನಿರ್ಮಾಣವು. ಘಟವಿಲ್ಲದಿದ್ದರೂ ಮೃತ್ತು ಪೃಥಕ್ಕಾಗಿ ಇರುತ್ತದೆ. ಮೃತ್ತಿಲ್ಲದಿದ್ದರೆ ಘಟವಿಲ್ಲವೇ ಇಲ್ಲ. ನೈಯ್ಯಾಯಿಕರ ಅನ್ವಯ ವ್ಯತಿರೇಕವನ್ನು ಇಲ್ಲಿ ಹೇಳಿಲ್ಲ. ಇಲ್ಲಿ ಅನುವೃತ್ತಿಗಾಗಿ "ಅನ್ವಯ" ಶಬ್ದವು ಬಂದಿದೆ. ಪಂಚದಶಿಯಲ್ಲಿ ಹೇಳುತ್ತಾರೆ. ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುವ ದೃಕ್‌ತತ್ತ್ವವು ಅನುವೃತ, ಅನ್ವಿತ, ಎಲ್ಲಾ ಅವಸ್ಥೆಗಳಲ್ಲಿಯೂ ಸಂವಿತ್ತು ವ್ಯಾವೃತ್ತವು. ಅಂತೆಯೆ ಅನ್ವಯ, ವ್ಯಾವೃತ್ತಿಗಳ ಯುಕ್ತಿಯಿಂದ ಸರ್ವದೇಶ, ಸರ್ವಕಾಲ, ಸರ್ವವಸ್ತುವಿನಲ್ಲಿಯೂ ಆತ್ಮ-ವಸ್ತುವಿನ ಪ್ರತೀತಿ ಯಾಗುತ್ತದೆ. ಅವುಗಳಿಲ್ಲದಿದ್ದರೂ ಸ್ವಸ್ವರೂಪೀ ಆತ್ಮನು ಇದ್ದೇ ಇರುತ್ತಾನೆ.

ಏತನ್ಮತಂ ಸಮಾತಿಷ್ಠ, ಪರಮೇಣ ಸಮಾಧಿನಾ,
ಭವಾನ್ ಕಲ್ಪವಿಕಲ್ಪೇಷು, ನ ವಿಮುಹ್ಯತಿ ಕರ್ಹಿಚಿತ್

ನೀನು ಅವಿಚಲ ಸಮಾಧಿಯಿಂದ ನನ್ನೀ ಸಿದ್ಧಾಂತದಲ್ಲಿ ಪೂರ್ಣ ನಿಷ್ಠನಾಗಿರು. ಇದರಿಂದ ನೀನು ಪ್ರತಿ ಕಲ್ಪದಲ್ಲಿಯೂ, ಸೃಷ್ಟಿರಚನೆಯನ್ನು ಮಾಡುತ್ತಿದ್ದರೂ ಮೋಹಾವಿಷ್ಟನಾಗದೇ ಇರಬಹುದು. ಅಂದರೆ ಪರಮನಿಷ್ಠೆಯಿಂದ ನೀನು ಕಾರ್ಯತತ್ಪರನಾಗಿದ್ದಲ್ಲಿ ಸರ್ವವೂ ಬ್ರಹ್ಮಮಯವಾದುದರಿಂದ ನೀನು ಮೋಹಿ ಯಾಗುವುದಿಲ್ಲ. ಈ ರೀತಿ ಲೋಕಪಿತಾಮಹನಿಗೆ ನಾರಾಯಣನು ಉಪದೇಶಿಸಿ ಅವನು ನೋಡುತ್ತಿದ್ದ ಹಾಗೆಯೇ ಅಂತರ್ಧಾನವನ್ನು ಪಡೆದನು. ನಂತರ ಬ್ರಹ್ಮನೂ "**ಯಥಾಪೂರ್ವ ಮಕಲ್ಪಯತ್**" ಹಿಂದಿನಂತೆ ಸೃಷ್ಟಿಯನ್ನು ಮಾಡಿದನು.

ಒಂದು ಸಾರಿ ಧರ್ಮಪತಿ, ಪ್ರಜಾಪತಿಯಾದ ಬ್ರಹ್ಮನೂ ಸಹ ಜನತಾ ಕಲ್ಯಾಣಾಕಾಂಕ್ಷಿಯಾಗಿ ಯಮಾದಿ ನಿಯಮಗಳನ್ನು ಧಾರಣೆ ಮಾಡಿದನು.

ಆಗ ಬ್ರಹ್ಮಪುತ್ರರಾದ ನಾರದರು ಭಗವತ್ತತ್ತ್ವವನ್ನು ತಿಳಿಯುವ ಅಪೇಕ್ಷೆಯಿಂದ, ನಿಯಮ, ವಿನಯ, ಸಂಯಮ ಸಂಪನ್ನರಾಗಿ ಬ್ರಹ್ಮನನ್ನು ಪ್ರಶ್ನಿಸಿದರು.

ರಾಜನ್-ನೀನು ನನ್ನೊಡನೆ ಕೇಳಿದ ಪ್ರಶ್ನೆಗಳನ್ನೇ ನಾರದರು ಬ್ರಹ್ಮ ನನ್ನು ಕೇಳಲು, ಸಂತೋಷದಿಂದ ಬ್ರಹ್ಮನು ಹತ್ತು ಲಕ್ಷಣಗಳಿಂದ ಯುಕ್ತವಾದ ಭಾಗವತ ಮಹಾಪುರಾಣವನ್ನು ನಾರದರಿಗೆ ಶ್ರವಣ ಮಾಡಿಸಿದನು.

ನನ್ನ ತಂದೆ ಪರಮರ್ಷಿ ವೇದವ್ಯಾಸರು ಸರಸ್ವತೀ ನದೀ ದಡದಲ್ಲಿ ಧ್ಯಾನ ಸಕ್ತರಾಗಿದ್ದಾಗ, ದೇವರ್ಷಿಗಳಾದ ನಾರದರು ತಾವು ಬ್ರಹ್ಮನಿಂದ ಕೇಳಲ್ಪಟ್ಟಂತೆ ಭಾಗವತವನ್ನು ವ್ಯಾಸರಿಗೆ ಉಪದೇಶಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಸರಿಂದ ಉಪದಿಷ್ಟನಾದ ನಾನು ಸೃಷ್ಟಿ ವಿಷಯವಾಗಿ ಹಾಗೂ ಭಗವದ್ವಿಷಯಕವಾಗಿ ನೀನೇನು ಕೇಳಿರುವೆ, ಆ ಪ್ರಶ್ನೆಗಳನ್ನು ಭಾಗವತ ಮಹಾ ಪುರಾಣ ರೂಪದಲ್ಲಿ ತಿಳಿಸುತ್ತೇನೆ.

ಇದರ ಅರ್ಥವೇನೆಂದರೆ ಸಂಪ್ರದಾಯಾನುಸಾರವಾಗಿಯೆ ಭಾಗವತವನು ತಿಳಿಯಬೇಕು, ಭಾಗವತ ವ್ಯಾಖ್ಯಾನದಿಂದಲೇ ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತೇನೆ,

ಓಂ ತತ್ಸದಿತ್ಯೇವಂ ದ್ವಿತೀಯ ಸ್ಕಂಧೇ
ನವಮೋಽಧ್ಯಾಯಃ

ದ್ವಿತೀಯ ಸ್ಕಂಧ – ಅಧ್ಯಾಯ ೧೦.
ಭಾಗವತದ ಹತ್ತು ಲಕ್ಷಣಗಳು

ಶ್ರೀ ಶುಕದೇವರು ಆ ಖ್ಯಾನವನ್ನು ಮುಂದುವರೆಸುತ್ತಾ ಹೇಳುತ್ತಾರೆ.

ಅತ್ರ ಸರ್ಗೋವಿಸರ್ಗಶ್ಚ ಸ್ಥಾನಂ ಪೋಷಣಮೂತಯಃ
ಮನ್ವಂತರೇಶಾನು ಕಥಾ, ನಿರೋಧೋ
ಮುಕ್ತಿರಾಶ್ರಯಃ

ಇದರಲ್ಲಿ ಭಾಗವತದ ಹತ್ತು ಲಕ್ಷಗಳನ್ನು ತಿಳಿಸುತ್ತಾರೆ.

ಸರ್ಗ, ವಿಸರ್ಗ, ಸ್ಥಾನ ಪೋಷಣ, ಊತಿ, ಮನ್ವಂತರ
ಈ ಶಾನುಕಥಾ, ನಿರೋಧ, ಮುಕ್ತಿ, ಆಶ್ರಯಃ

ಭಾಗವತದಲ್ಲಿ ಈ ಹತ್ತು ವಿಷಯಗಳ ವರ್ಣನೆಯಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ವೈತ ವೇದಾಂತದಲ್ಲಿ ಯಾವುದನ್ನು ಅಧಿಷ್ಠಾನವೆಂದು ಹೇಳುತ್ತಾರೆ, ಭಾಗವತದಲ್ಲಿ ಅದನ್ನೇ 'ಆಶ್ರಯ'ವೆಂದು ಕರೆದಿದ್ದಾರೆ. ಅಧಿಷ್ಠಾನ ವಸ್ತು ಸ್ವರೂಪದ ಪರಿಶೋಧನೆಗಾಗಿ ಒಂಭತ್ತು ಲಕ್ಷಣಗಳಿವೆ. ಆ ಪರಿಶೋಧನೆಯ ಫಲವೇ ಆಶ್ರಯವು.

"ದಶಮಸ್ಯ ವಿಶುದ್ಧ್ಯರ್ಥಂ, ನವಾನಾಮಿಹ ಲಕ್ಷಣಮ್॥

ಹತ್ತನೆಯದಾದ ಆಶ್ರಯ ತತ್ತ್ವವನ್ನು ನಿಶ್ಚಯಿಸುವುದಕ್ಕಾಗಿ ಶ್ರುತಿ ತಾತ್ಪರ್ಯ ಅನುಭವದಿಂದ ಮಹಾತ್ಮರು ಸರ್ಗಾದಿ ಒಂಭತ್ತು ವಿಷಯಗಳ ವರ್ಣನೆಯನ್ನು ಮಾಡಿದ್ದಾರೆ.

ಕೆಲವರ ಅಭಿಪ್ರಾಯವು ಹೀಗಿದೆ. ಈ ಸರ್ಗಾದಿಗಳ ಒಂಭತ್ತು ವಿಷಯಗಳನ್ನು ವಿವೇಚಿಸಿ ತಿಳಿದರೆ ಭಗವಂತನ ಆಶ್ರಯದಲ್ಲಿ ಸೇರಿಕೊಳ್ಳುತ್ತೇವೆ.

"ಆಶ್ರಯ ತತ್ತ್ವದ ಅನುಭವಕ್ಕಾಗಿಯೇ, ಸರ್ಗಾದಿಗಳ ವರ್ಣನೆಯಿದೆ" ಎಂಬುವುದು ವೇದಾಂತಿಗಳ ಅಭಿಪ್ರಾಯವು.

ಸರ್ಗ: ಈಶ್ವರ ಪ್ರೇರಣೆಯಿಂದ, ಗುಣಗಳಲ್ಲಿ ಕ್ಷೋಭೆಯುಂಟಾಗಿ, ರೂಪಾಂತರವಾಗುವುದರಿಂದ, ಆಕಾಶಾದಿ, ಪಂಚಭೂತಗಳು. ಶಬ್ದಾದಿತನ್ಮಾತ್ರೆಗಳೂ, ಏಕಾದಶೇಂದ್ರಿಯಗಳು, ಅಹಂಕಾರ, ಮಹತ್ತತ್ತ್ವಗಳ ಉತ್ಪತ್ತಿಯೂ ಸಹ ಆಯಿತು.

ವಿಸರ್ಗ: ವಿರಾಟ್ ಪುರುಷನಿಂದ ಉತ್ಪನ್ನನಾದ ಬ್ರಹ್ಮನ ಮೂಲಕ ಆದ ಚರಾಚರ ಸೃಷ್ಟಿಯನ್ನು "ವಿಸರ್ಗ" ಎಂದು ಕರೆಯುತ್ತಾರೆ.

ಸ್ಥಾನ: ಹೆಜ್ಜೆ-ಹೆಜ್ಜೆಗೂ ನಾಶದತ್ತ ಮುನ್ನಡೆಯುವ ಸೃಷ್ಟಿಯನ್ನು ಭಗವಂತನು ಹೇಗೆ ಇಡುತ್ತಾನೆ?

ಭೂಗೋಳ-ಖಗೋಳಗಳು ಹೇಗೆ ಇವೆ? ಎಂಬುದನ್ನು ತಿಳಿಸುವುದು ಸ್ಥಾನ ಅಥವಾ ಸ್ಥಿತಿ.

ಪೋಷಣ: ಭಗವಂತನಿಂದ ಸುರಕ್ಷಿತವಾದ ಸೃಷ್ಟಿಯಲ್ಲಿ ಭಕ್ತರ ಮೇಲೆ ಬೀರುವ ಭಗವತ್ಕೃಪೆಯ ಹೆಸರು "ಪೋಷಣ."

ಊತಿ: ಜೀವಿಗಳನ್ನು ಬಂಧನದಲ್ಲಿ ಸಿಕ್ಕಿಸುವ ಜೀವಿಗಳ ಕರ್ಮವಾಸನೆಗಳನ್ನು ಊತಿ ಎಂದು ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನ್ವಂತರ : ಭಗವಂತನ ಸದ್ಧರ್ಮ ಸ್ಥಾಪನೆಯನ್ನು ಅವನ ಪ್ರಜಾ ಪಾಲನ ರೂಪ ಸದ್ಧರ್ಮಾನುಷ್ಠಾನವನ್ನು ಮನ್ವಂತರ ಎಂದು ಹೇಳುತ್ತಾರೆ.

ಈಶಾನುಕಥಾ : ಇದರಲ್ಲಿ ಭಗವದವತಾರಗಳ, ಭಗವದ್ಭಕ್ತರ ವಿವಿಧ ಆಖ್ಯಾನಗಳನ್ನು ತಿಳಿಸುತ್ತಾರೆ.

ನಿರೋಧ : ಭಗವಂತನು ಯೋಗ ನಿದ್ರಾಶಾಯಿಯಾದಾಗ ಜೀವರು ತಮ್ಮ ತಮ್ಮ ಉಪಾಧಿಗಳೊಡನೆ ಅವನಲ್ಲಿ ಲೀನವಾಗುವುದನ್ನು 'ನಿರೋಧ' ಎನ್ನುತ್ತಾರೆ.

ಮುಕ್ತಿ : ಅಜ್ಞಾನದಿಂದ ಕಲ್ಪಿತವಾದ ಕರ್ತೃತ್ವ-ಭೋಕ್ತೃತ್ವವನ್ನು ತ್ಯಜಿಸಿ ವಾಸ್ತವಿಕ ಸ್ವಸ್ವರೂಪಾತ್ಮ ಭಾವದಲ್ಲಿರುವುದನ್ನು 'ಮುಕ್ತಿ' ಎನ್ನುತ್ತಾರೆ.

ಆಶ್ರಯ : ಈ ಚರಾಚರ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳು ಯಾವ ಭಗವತ್ತತ್ತ್ವದಿಂದ ಪ್ರಕಾಶಿತಗೊಳ್ಳಲ್ಪಡುತ್ತವೊ ಆ ಭಗವಂತನೇ 'ಆಶ್ರಯನು.'

ಜಾಗ್ರದವಸ್ಥೆಯಲ್ಲಿ ಒಂದು ವಸ್ತುವು ತೋರುತ್ತದೆ. ಸುಷುಪ್ತಿಯಲ್ಲಿ ಅದು ತೋರುವುದಿಲ್ಲ. ತೋರುವುದು-ತೋರದಿರುವುದು, ಈ ಎರಡರಿಂದಲೂ ಹೊರತಾಗಿರುವವನು 'ಆಶ್ರಯನು', ಅವನೇ ಪರಮಾತ್ಮನು, ಆಧ್ಯಾತ್ಮಿಕ ಪುರುಷನು, ಆಧಿದೈವಿಕನು, ಆಧಿಭೌತಿಕನೂ ಸಹ. ಹಿರಣ್ಯಗರ್ಭನೂ ಅವನೇ, ಇವರುಗಳನ್ನು ಬೇರ್ಪಡಿಸುವವನೂ ಅವನೇ.

ಅಧ್ಯಾತ್ಮ, ಆಧಿದೈವ, ಅಧಿಭೂತ ಈ ಮೂರರಲ್ಲಿರುವವನೂ ಅವನೇ. ಒಂದಿಲ್ಲದಿದ್ದರೆ ಮೂರೂ ಇಲ್ಲ. ಈ ಮೂರರ ಜ್ಞಾತಾ ಅಧಿಷ್ಠಾನ ಸ್ವರೂಪನು 'ಆಶ್ರಯನು', ಸ್ವಾಶ್ರಯನಾದರೋ 'ಸ್ವಯಂ' ವಿರಾಟ್‌ಪುರುಷನು ಬ್ರಹ್ಮಾಂಡ ವನ್ನು ಭೇದಿಸಿಕೊಂಡು ಹೊರಟಾಗ, ತಾನಿರುವುದಕ್ಕಾಗಿ ಪವಿತ್ರವಾದ ಜಲ ವನ್ನು ಸೃಷ್ಟಿಸಿದನು. ವಿರಾಡ್ರೂಪ ನರನಿಂದ ಹುಟ್ಟಿದುದರಿಂದ ಜಲದ ಹೆಸರು 'ನಾರ' ವೆಂದಾಯಿತು. ಅನೇಕ ಕಾಲ ಜಲದಲ್ಲಿ ಇದ್ದುದರಿಂದ 'ನಾರಾಯಣ' ನಾದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಾನ್ ನಾರಾಯಣನ ಕೃಪೆಯಿಂದ ದ್ರವ್ಯ, ಕಾಲ, ಸ್ವಭಾವ, ಜೀವಾದಿಗಳು ಸತ್ತಾವಂತಗಳಾಗಿವೆ. ಅವನನ್ನು ಉಪೇಕ್ಷಿಸಿದಾಗ ಸತ್ತಾಹೀನ ಗಳಾಗುತ್ತವ. **"ಬಹುಸ್ಯಾಂ ಪ್ರಜಾಯೇಯೇತಿ"** ಎಂಬ ಭಗವದಿಚ್ಛೆಯೇ ಸೃಷ್ಟಿಗೆ ಮೂಲವು.

ಭಗವಂತನು ತನ್ನ ಮಾಯೆಯಿಂದ ಅಖಿಲ ಬ್ರಹ್ಮಾಂಡಗಳ ಬೀಜ ಸ್ವರೂಪವಾದ ತನ್ನ ಸುವರ್ಣಮಯ ವೀರ್ಯವನ್ನು ಮೂರು ಭಾಗಗಳಾಗಿ ವಿಭಜಿಸಿದನು. ಅಧಿದೈವ, ಅಧ್ಯಾತ್ಮ, ಅಧಿಭೂತ ಇದರ ವಿಭಾಗವು ಹೇಗಾ ಯಿತೆಂಬುದನ್ನು ನೋಡಿ.

ವಿರಾಟ್‌ಪುರುಷನ ಚೇಷ್ಟೆಯಿಂದ ಅವನ ಶರೀರಾಂತಸ್ಥ ಆಕಾಶದಿಂದ, ಇಂದ್ರಿಯ ಬಲ- ಮನೋಬಲ, ಶರೀರಬಲಗಳ ಉತ್ಪತ್ತಿಯಾಯಿತು.

ಅವುಗಳಿಂದ ಸರ್ವರಾಜನಾದ ಪ್ರಾಣನ ಉತ್ಪತ್ತಿಯಾಯಿತು. ಸೇವಕರು ರಾಜನ ಹಿಂದೆ ನಡೆಯುವಂತೆ, ಶರೀರದಲ್ಲಿ ಪ್ರಾಣದ ಪ್ರಾಬಲ್ಯತೆಯಿಂದ ಸರ್ವೇಂದ್ರಿಯಗಳೂ ಪ್ರಬಲಗಳಾಗಿರುತ್ತವೆ, ಪ್ರಾಣನು ದುರ್ಬಲನಾದರೆ, ಎಲ್ಲಾ ಇಂದ್ರಿಯಗಳೂ ದುರ್ಬಲಗಳಾಗುತ್ತವೆ, ಪ್ರಾಣನ ಆಗಮನ, ನಿರ್ಗಮನ ದಿಂದ ವಿರಾಟ್ ಪುರುಷನಿಗೆ ಹಸಿವು-ಬಾಯಾರಿಕೆಗಳು ತೋರಿದುವು, ಆಹಾರ ಪಾನೀಯಗಳ ಇಚ್ಛೆಯು ಮೂಡಿತು, ಪ್ರಥಮತಃ ಮುಖದ ಆವಿರ್ಭಾವ ವಾಯಿತು.

ಮುಖದಿಂದ ತಾಲು. ತಾಲುವಿನಿಂದ ರಸನೇಂದ್ರಿಯವು ಪ್ರಕಟವಾಯಿತು, ನಂತರ ರಸನಾಗ್ರಾಹಿಗಳಾದ ಅನೇಕ ರಸಗಳು ಆವಿರ್ಭವಿಸಿದುವು. ಮಾತ ನಾಡುವ ಇಚ್ಛೆಯು ಮೂಡಿದೊಡನೆ ವಾಗಿಂದ್ರಿಯವೂ, ವಾಗಧಿಷ್ಠಾತೃ ದೇವತಾ ಅಗ್ನಿಯೂ, ವಾಗ್ವಿಷಯಗಳೂ ಪ್ರಕಟವಾದವು.

ಬಹಳ ದಿವಸಗಳವರೆಗೆ ಜಲವಾಸಿಯೇ ಆಗಿದ್ದನು. ಶ್ವಾಸದ ವೇಗದಿಂದ ನಾಸಾರಂಧ್ರಗಳಾದುವು, ವಾಸನೇಚ್ಛೆಯಿಂದ ಘ್ರಾಣೇಂದ್ರಿಯವಾಯಿತು. ತದಧಿಷ್ಠಾತೃ ದೇವತಾ ವಾಯುವೂ ಪ್ರಕಟವಾದನು. ಅವನ ಶರೀರದಲ್ಲಿ ಪ್ರಕಾಶವಿರಲಿಲ್ಲ. ಅವನಿಗೆ ತನ್ನನ್ನು ತಾನು ನೋಡಿಕೊಳ್ಳುವ ಹಾಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತ್ವಂತರಗಳನ್ನು ತಿಳಿಯುವ ಇಚ್ಛೆಯುಂಟಾದಾಗ, ನೇತ್ರೇಂದ್ರಿಯಗಳೂ, ತದಧಿಷ್ಠಾತಾ ಸೂರ್ಯನೂ ಪ್ರಕಟನಾದನು,

ವೇದರೂಪ ಋಷಿಗಳು ವಿರಾಟ್ ಪುರಷನನ್ನು ಸ್ತೋತ್ರಗಳಿಂದ ಸ್ತುತಿಸಿದಾಗ ಅದನ್ನು ಕೇಳುವ ಇಚ್ಛೆಯುಂಟಾಯಿತು. ಆವಾಗ ಶ್ರವಣೇಂದ್ರಿಯವೂ. ತದಧಿಷ್ಠಾತೃ ದೇವತಾ ದಿಕ್ಕುಗಳೂ ಪ್ರಕಟರಾದರು.

ಅವನು ವಸ್ತುಗಳ ಕೋಮಲತಾ. ಕಠಿಣತಾ. ಹಗುರ, ಭಾರ, ಉಷ್ಣತಾ ಶೀತಲತಾ ಇವುಗಳನ್ನು ತಿಳಿಯಲು ಇಚ್ಛಿಸಿದಾಗ ಅವನಲ್ಲಿ ತ್ವಗಿಂದ್ರಿಯವು ಪ್ರಕಟವಾಯಿತು.

ಭೂಮಿಯಲ್ಲಿ ವೃಕ್ಷಾಂಕುರಗಳು ಹೊರಡುವಂತೆ ರೋಮಗಳು ಹುಟ್ಟಿದುವು. ತ್ವಗಿಂದ್ರಿಯದಿಂದ ಅವನಿಗೆ ಸ್ಪರ್ಶಾನುಭವವಾಗ ತೊಡಗಿತು. ಅವನ ಕರ್ಮ ಮಾಡಬೇಕೆಂಬ ಇಚ್ಛೆಯಿಂದ ಕೈಗಳು ಹುಟ್ಟಿದುವು, ಹಸ್ತಗಳಲ್ಲಿ ಗ್ರಹಣಶಕ್ತಿಯೂ, ತದಧಿದೇವತಾ ಇಂದ್ರನೂ, ಗ್ರಹಣರೂಪ ಕರ್ಮವೂ ಪ್ರಕಟವಾದುವು.

ಇಚ್ಛಿತ ಸ್ಥಳಕ್ಕೆ ಹೋಗಬೇಕೆಂಬ ಇಚ್ಛೆಯಿಂದ ಕಾಲುಗಳು ಹುಟ್ಟಿದುವು. ತದಧಿಷ್ಠಾತೃ ರೂಪದಲ್ಲಿ ಯಜ್ಞಪುರುಷನಾದ "ವಿಷ್ಣುವಿನ" ಪ್ರಾದುರ್ಭಾವವಾಯಿತು, ಯಜ್ಞ ಸಾಮಗ್ರಿಗಳ ಸಂಗ್ರಹಣಕ್ಕಾಗಿ ಚರಣೇಂದ್ರಿಯಗಳು ಚಲಿಸತೊಡಗಿದವು. ಸಂತಾನ-ರತಿ-ಸ್ವರ್ಗ ಭೋಗಗಳ ಕಾಮನೆಯಿಂದ "ಲಿಂಗದ" ಉತ್ಪತ್ತಿಯಾಯಿತು. ತದಧಿಷ್ಠಾತೃದೇವತೆ ಪ್ರಜಾಪತಿ ಹಾಗೂ ಕಾಮ ಸುಖದ ಆವಿರ್ಭಾವಗಳಾದುವು.

ಮಲತ್ಯಾಗದ ಇಚ್ಛೆಯಿಂದ ಗುದಾ ದ್ವಾರವಾಯಿತು. ನಂತರ ಪಾಯು ಇಂದ್ರಿಯ, ಮಿತ್ರ ದೇವತೆಗಳ ಪ್ರಾದುರ್ಭಾವವಾಯಿತು. ಇವುಗಳಿಂದ ಮಲ ತ್ಯಾಗದ ಕ್ರಿಯೆಯಾಗುತ್ತದೆ. ಅಪಾನದ ಮೂಲಕ ಶರೀರದಿಂದ ಶರೀರಾಂತರಕ್ಕೆ ಹೋಗುವ ಇಚ್ಛೆಯು ಬಂದಾಗ ನಾಭಿ ದ್ವಾರವು ಪ್ರಕಟವಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರಿಂದ ಅಪಾನವೂ, ಮೃತ್ಯುವೂ ಪ್ರಕಟವಾಯಿತು. ಪ್ರಾಣಾಪಾನಗಳು ಬೇರ್ಪಡುವುದರಿಂದ ಮರಣವುಂಟಾಗುತ್ತದೆ. ವಿರಾಟ್ ಪುರುಷನ ಅನ್ನ–ಜಲ ಗ್ರಹಣೇಚ್ಛೆಯಿಂದ ಹೊಟ್ಟೆ ಕರುಳು, ನಾಡಿಗಳುಂಟಾದುವು, ಹಾಗೆಯೆ ಕುಕ್ಷಿದೇವತಾ ಸಮುದ್ರ ನಾಡಿದೇವತಾನದಿಗಳು, ತುಷ್ಟಿ ಪುಷ್ಟಿಗಳು ಆವಿರ್ಭವಿಸಿದುವು.

ಅವನು ತನ್ನ ಮಾಯಾರಚನೆಯ ಮೇಲೆ ವಿಚಾರಿಸಲು ತೊಡಗಿದಾಗ "ಹೃದಯ"ದ ಉತ್ಪತ್ತಿಯಾಯಿತು, ಅದರಿಂದ ಮನೋರೂಪ ಇಂದ್ರಿಯವೂ ಮನಸ್ಸಿನಿಂದ ತದ್ದೇವತಾ ಚಂದ್ರನೂ, ವಿಷಯ ಕಾಮನೆಗಳೂ, ಸಂಕಲ್ಪಗಳೂ ಪ್ರಕಟವಾದುವು.

ವಿರಾಟ್ ಪುರುಷನ ಶರೀರದಲ್ಲಿ ಪೃಥ್ವಿ, ಜಲ, ತೇಜಸ್ಸುಗಳಿಂದ, ತ್ವಕ್ ಚರ್ಮ, ಮಾಂಸ, ರುಧಿರ, ಮೇಧಸ್ಸು, ಮಜ್ಜಾ ಅಸ್ಥಿರೂಪ ಸಪ್ತಧಾತುಗಳು ಹುಟ್ಟಿದುವು. ಹಾಗೂ ಆಕಾಶ, ಜಲ, ವಾಯುಗಳಿಂದ ಪ್ರಾಣಗಳ ಉತ್ಪತ್ತಿಯಾಯಿತು.

ಶ್ರೋತ್ರೇಂದ್ರಿಯಗಳು ಶಬ್ದಾದಿ ವಿಷಯಗಳನ್ನು ಗ್ರಹಿಸುತ್ತವೆ. ಅಹಂಕಾರದಿಂದ ವಿಷಯಗಳು ಉತ್ಪನ್ನವಾಗಿವೆ.

ಎಲ್ಲಾ ವಿಕಾರಗಳ ಉತ್ಪತ್ತಿ ಸ್ಥಾನವೂ ಮನಸ್ಸು, ಸರ್ವ ಪದಾರ್ಥಗಳ ಬೋಧವೂ ಬುದ್ಧಿಯಿಂದಾಗುತ್ತದೆ.

ರಾಜನ್-ನಾನು ಭಗವಂತನ ಸ್ಥೂಲರೂಪವನ್ನು ಹೀಗೆ ವರ್ಣಿಸಿದ್ದೇನೆ. ಈ ಸ್ಥೂಲರೂಪವು ಪೃಥಿವೀ, ಜಲ, ತೇಜಸ್ಸು ವಾಯು, ಆಕಾಶ, ಅಹಂಕಾರ ಮಹತ್ತತ್ತ್ವ, ಪ್ರಕೃತಿ, ಈ ಅಷ್ಟಾವರಣಗಳಿಂದ ಆವೃತವಾಗಿವೆ.

ಸ್ಥೂಲಕ್ಕಿಂತ ಪರರೂಪವು ಸೂಕ್ಷ್ಮ. ಭಗವಂತನ ಸೂಕ್ಷ್ಮರೂಪವು ಅವ್ಯಕ್ತ, ನಿರ್ವಿಶೇಷ, ಆದಿಮಧ್ಯಾಂತ ರಹಿತ ಹಾಗೂ ನಿತ್ಯವು. ಮನಸ್ಸು ವಾಣಿಗೂ ಅಲ್ಲಿ ಪ್ರವೇಶವಿಲ್ಲ,

ನಾನು ಹೇಳಿರುವ ಸ್ಥೂಲ ಸೂಕ್ಷ್ಮ ರೂಪಗಳೆರಡೂ ಭಗವಂತನ ಮಾಯಿಕ ರೂಪಗಳು. ಪಂಡಿತರು ಇವೆರಡನ್ನೂ ಸ್ವೀಕರಿಸುವುದಿಲ್ಲ, ವಸ್ತುತಃ

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಗವಂತನು ನಿಷ್ಕ್ರಿಯನು. ಸ್ವಶಕ್ತಿಯಿಂದಲೇ ಸಕ್ರಿಯನಾಗುತ್ತಾನೆ. ಆಗ ಬ್ರಹ್ಮ ವಿರಾಟ ರೂಪಗಳನ್ನು ಧರಿಸಿ, ವಾಚ್ಯ ವಾಚಕ ರೂಪದಲ್ಲಿ, ಶಬ್ದ ಅರ್ಥ ಗಳ ರೂಪದಲ್ಲಿ ಪ್ರಕಟವಾಗುತ್ತಾನೆ. ಹಾಗೂ ಅನೇಕ ನಾಮ-ರೂಪ ಕ್ರಿಯಾದಿ ಗಳನ್ನು ಸ್ವೀಕರಿಸುತ್ತಾನೆ.

ಭಗವಂತನು ಹೇಳುತ್ತಾನೆ: ಅಂತಃಕರಣಾವಚ್ಛಿನ್ನ ಪ್ರಮಾತಾ ಆಗಲಿ ಅಂತಂಕರಣಾಭಾವಾವಚ್ಛಿನ್ನ ಪರಮಾತ್ಮನಾಗಲಿ, ಅವಚ್ಛಿನ್ನಾನವಚ್ಛಿನ್ನ ಏಕತಾ ಬೋಧವಾಗಲಿ, ಅಂತಃಕರಣವಾಗಲಿ, ದೇಹೇಂದ್ರಿಯಗಳಾಗಲಿ, ಎಲ್ಲವೂ ನಾನೇ.

ಸೃಷ್ಟಿಗೆ ಮೊದಲು, ಸೃಷ್ಟ್ಯನಂತರವೂ ಮದನ್ಯ ವಸ್ತುವೊಂದಿಲ್ಲ. ನನ್ನಿಂದಲೇ ಸೃಷ್ಟಿಯೆಲ್ಲವೂ ಪ್ರಕಟವಾಗಿದೆ. ಆಧ್ಯಾತ್ಮ, ಆಧಿದೈವ, ಆಧಿಭೂತ ರೂಪ ಎಲ್ಲಾ ಆವರಣಗಳೊಡನೆ ಇರುವ ಕಾರಣ ಸೃಷ್ಟಿಯೂ ನನ್ನ ಸ್ವರೂಪವೇ. ಕಾರ್ಯಸೃಷ್ಟಿಯೂ ನನ್ನ ಸ್ವರೂಪವೇ.

ಶ್ರೀ ಶುಕದೇವರು ಹೇಳುತ್ತಾರೆ. ರಾಜನ್, ಇದಕ್ಕಿಂತ ಹೆಚ್ಚಿಗೆ ಹೇಳು ವುದೇನಿದ? ಕಾರ್ಯ, ಕಾರಣಾತ್ಮಕ ದೃಶ್ಯ ಪ್ರಪಂಚವೆಲ್ಲವೂ ಭಗವಂತನ ರೂಪಗಳೇ. ಕೆಲವು ಮಾಯಾಸೃಷ್ಟಗಳಾದರೆ, ಕೆಲವು ಅವಿದ್ಯಾಸೃಷ್ಟಗಳು. ಜೀವಾತ್ಮ ದೃಷ್ಟಿಯಿಂದ ಯಾವುದನ್ನು 'ಅವಿದ್ಯಾ' ಎಂದು ಕರೆಯುತ್ತೇವೆಯೋ ಪರಮಾತ್ಮ ದೃಷ್ಟಿಯಿಂದ ಅದನ್ನೇ 'ಮಾಯಾ' ಎನ್ನುತ್ತೇವೆ. ಜೀವನು ಅವಿದ್ಯೆಯಿಂದ ಮೋಹಿತನಾಗುತ್ತಾನೆ, ಆದರೆ ಪರಮಾತ್ಮನು ಮಾಯೆಯಿಂದ ಮೋಹಿತನಾಗುವುದಿಲ್ಲ. ಇರುವ ಕಾರ್ಯ-ಕಾರಣಗಳೆಲ್ಲವೂ ಮಾಯಾಸೃಷ್ಟ ಗಳೇ. ಮನು, ಪ್ರಜಾಪತಿ, ಋಷಿ, ದೇವತಾ, ರಾಕ್ಷಸರು, ಪಿಶಾಚರು ಎಲ್ಲವೂ ಪರಮಾತ್ಮ ಸ್ವರೂಪಿಗಳೇ. ಪರಮಾತ್ಮನೇ ಕಾಲಾಗ್ನಿ ರುದ್ರನಾಗಿ ಸೃಷ್ಟಿಯನ್ನು ಸಂಹರಿಸುತ್ತಾನೆ.

ರಾಜನ್, ಈ ರೀತಿಯಾಗಿ ಭಗವದ್ರೂಪವನ್ನು ವರ್ಣಿಸಿದ್ದೇನೆ. ಆದರೆ ತತ್ತ್ವಜ್ಞರು ಈ ರೂಪದಲ್ಲಿ ಕಾಣಲು ಭಗವಂತನನ್ನು ಇಷ್ಟ ಪಡುವುದಿಲ್ಲ. ಏತಕ್ಕೆಂದರೆ, ಸೃಷ್ಟಿ ರಚನಾದಿ ಕರ್ಮಗಳ ನಿರೂಪಣೆಯು, ಪರಮಾತ್ಮನೊಡನೆ ಕರ್ತೃ, ಕರ್ಮ, ಕ್ರಿಯಾ ಸಂಬಂಧವನ್ನು ಬೆಳೆಸುವುದಕ್ಕಾಗಿ ಮಾಡಲ್ಪಟ್ಟಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೃಷ್ಟಿಯ ವಿಷಯದಲ್ಲಿ ಪಂಡಿತರ ಅಭಿಪ್ರಾಯವು ಭಿನ್ನ ಭಿನ್ನವಾಗಿದೆ. ಪ್ರಕೃತಿ ಮಾಯಾ, ಅಜ್ಞಾನ,ಚಿತ್ತ ಪರಮಾಣುಗಳು ಸೃಷ್ಟಿಕಾರಕಗಳೆಂದು ಪ್ರತಿ ಪಾದಿಸುತ್ತಾರೆ ಅದೆಲ್ಲವನ್ನೂ ನಿವಾರಣೆ ಮಾಡಲು ಪರಮಾತ್ಮನಲ್ಲಿ ಸೃಷ್ಟಿ ಕರ್ತೃತ್ವವನ್ನೂ ಆರೋಪಿಸಿದ್ದೇವೆ. ಇಲ್ಲದಿದ್ದರೆ ಜನರು ನಾವೇ ಸೃಷ್ಟಿ ಕರ್ತ ರೆಂದು ಘೋಷಿಸಿ ಕೊಳ್ಳುತ್ತಿದ್ದರು, "ನಾವೇ ಬ್ರಹ್ಮನ ಜನಕರೆಂದು ಹೇಳಿ ಕೊಳ್ಳುವವರು" ಅಲ್ಲಲ್ಲಿ ಈಗಲೂ ಇದ್ದಾರೆ.

"ಕರ್ತೃತ್ವ ಪ್ರತಿಷೇಧಾರ್ಥಂ,

ಮಾಯಯಾರೋಪಿತಂ ಹಿತತ್"

ಭಗವಂತನ ವಿನಾ ಸೃಷ್ಟಿಕರ್ತೃ ಮತ್ತೊಬ್ಬನಿಲ್ಲ ಎಂದು ತಿಳಿಸಲು ಈ ಯುಕ್ತಿಯು ಮಾಡಲ್ಪಟ್ಟಿದೆ. ಅನ್ಯ ಕರ್ತೃತ್ವ ನಿಷೇಧಕ್ಕಾಗಿಯೇ ಈ ಆರೋಪವು ಭಗವಂತನಿಂದ ಮಾಡಲ್ಪಟ್ಟಿದೆ.

ಈ ರೀತಿ ನಾನು ಬ್ರಾಹ್ಮ ಕಲ್ಪವನ್ನು ವರ್ಣಿಸಿದ್ದೇನೆ. ಸಾಮಾನ್ಯವಾಗಿ ಎಲ್ಲಾ ಕಲ್ಪಗಳಲ್ಲಿಯೂ ಸೃಷ್ಟಿ ಕ್ರಮವರ್ಣನೆಯು ಒಂದೇ ವಿಧವಾಗಿರುತ್ತದೆ.

ವ್ಯತ್ಯಾಸವೆಂದರೆ, ಮಹಾಕಲ್ಪದ ಪ್ರಾರಂಭದಲ್ಲಿ ಪ್ರಕೃತಿಯಿಂದ ಕ್ರಮ ವಾಗಿ ಮಹತ್ತತ್ತ್ವಾದಿಗಳ ಉತ್ಪತ್ತಿಯಾಗುತ್ತದೆ. ಕಲ್ಪಗಳ ಪ್ರಾರಂಭದಲ್ಲಿ ಪ್ರಾಕೃತ ಸೃಷ್ಟಿಯು ಇದ್ದೇ ಇರುತ್ತದೆ. ಚರಾಚರ ಪ್ರಾಣಿಗಳು ವೈಕೃತ ಸೃಷ್ಟಿಯು ನವೀನರೂಪದಲ್ಲಾಗುತ್ತದೆ.

ರಾಜನ್, ಕಾಲ, ಪರಿಮಾಣ, ಕಲ್ಪ, ಮನ್ವಂತರಗಳ ವರ್ಣನೆಯನ್ನು ಮುಂದೆ ಮಾಡುತ್ತೇನೆ. ಪಾದ್ಮಕಲ್ಪದ ವರ್ಣನೆಯನ್ನು ಆಲಿಸು.

ಓಂ ತತ್ಸದಿತ್ಯೇವಂ ದ್ವಿತೀಯ ಸ್ಕಂದೇ ದಶಮೋಽಧ್ಯಾಯಃ
ದ್ವಿತೀಯ ಸ್ಕಂಧಃ ಸಮಾಪ್ತಃ
(ಶ್ರೀ ವಾಸುದೇವಾರ್ಪಣಮಸ್ತು)

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತದರ್ಶನ ಸ್ಕಂದ ೩

ಪ್ರಸ್ತಾವನಾ

ಸರ್ಗ: ಸೃಷ್ಟಿ ಅಥವಾ ಈಕ್ಷಣ,

ಶ್ರೀಮದ್ಭಾಗವತದ ಪ್ರಥಮ ಸ್ಕಂಧದಲ್ಲಿ ವಕ್ತಾ - ಶ್ರೋತಾರರ ಸಂಬಂಧವು ನಿರೂಪಿಸಲ್ಪಟ್ಟಿತು. ದ್ವಿತೀಯ ಸ್ಕಂಧದಲ್ಲಿ ಧ್ಯಾನ, ಶ್ರದ್ಧಾ, ಮನನಗಳಿಂದ ಶ್ರವಣದ ವಿಧಾನವು ಮಾಡಲ್ಪಟ್ಟಿದೆ.

ತೃತೀಯ ಸ್ಕಂಧದಲ್ಲಿ "ಶ್ರೋತವ್ಯ" ವಿಷಯದ ಪ್ರತಿಪಾದನೆಯಿದೆ. ಭಗವಂತನಿಂದ ಕಾರಣ ತತ್ತ್ವಗಳ ಉದಯವು ಹೇಗಾಗುತ್ತದೆಂಬುವುದನ್ನು ೩೩ ಅಧ್ಯಾಯಗಳಿಂದ ವರ್ಣಿಸಿದ್ದಾರೆ.

ಅಲೌಕಿಕ ಸೃಷ್ಟಿಯ ದೃಷ್ಟಿಯಿಂದ ಅಗ್ನಿ, ಪೃಥ್ವೀ, ವಾಯ್ವಾದಿ ೩೩ ದೇವತೆಗಳ ಸೃಷ್ಟಿಯಾಗಿದೆ. ಲೌಕಿಕ ದೃಷ್ಟಿಯಿಂದ ೨೮ ತತ್ತ್ವಗಳು, ನಾಲ್ಕು ಪ್ರಕಾರದ ಪ್ರಾಣಿಗಳ ಬೀಜಗಳು, ಹಾಗೂ ಕಾಲ ಇವುಗಳ ಸಂಖ್ಯೆಯೂ ೩೩ ಆಗುತ್ತದೆ.

ಸೃಷ್ಟಿಯು ಎರಡು ವಿಧವಾಗಿ ಆಗುತ್ತದೆ.

ಬಾಹ್ಯತಃ : ಸ್ವರೂಪತಃ :

ಬಾಹ್ಯ ಸೃಷ್ಟಿಯು ಲೋಕದಲ್ಲಿ ಪ್ರಸಿದ್ಧವಾಗಿದೆ. ಅದರ ಪ್ರಳಯವೂ ಉಂಟು, ಮೋಕ್ಷವು ಮುಖ್ಯ ಸೃಷ್ಟಿಯು. (ಸ್ವ-ಸ್ವರೂಪಪ್ರಾಪ್ತಿ)

ಭಗವತ್ಕೃಪೆಯಿಂದ ವಿರಕ್ತರೂ, ಗೃಹಸ್ಥರೂ, ಎಲ್ಲರೂ ಮೋಕ್ಷವನ್ನು ಹೊಂದುತ್ತಾರೆ.

ಭಗವಂತನಲ್ಲಿ ಯಾವುದೇ ವಿಧವಾದ ಸೃಷ್ಟಿಯ ವಿಷಮತೆಯೂ ಉಂಟಾಗುವುದಿಲ್ಲವು ಅವನು ರೂಪಾಂತರದಿಂದ ಸೃಷ್ಟಿಯನ್ನು ಮಾಡುವುದಿಲ್ಲ ತನ್ನನ್ನೇ ಸ್ವರೂಪತಃ ಪ್ರಕಟಿಸಿಕೊಳ್ಳುತ್ತಾನೆ. ಅವನಲ್ಲಿ ಪಕ್ಷಪಾತವಾಗಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರೌರ್ಯವಾಗಲಿ ಇಲ್ಲವೇ ಇಲ್ಲ. ಇದನ್ನು ಮಾಯೆಯೆಂದು ಕರೆಯಿರಿ, ಶಕ್ತಿಯೆಂದು ಕರೆಯಿರಿ, ಯಾವ ಭೇದವೂ ಇಲ್ಲ.

ಶ್ರುತಿಯಲ್ಲಿ ಇದನ್ನೇ "ಈಕ್ಷಣ"ವೆಂದು ಕರೆದಿದ್ದಾರೆ. ಇದನ್ನು ವಿವರ್ತ, ಪರಿಣಾಮ, ಅವಿಕೃತ ಪರಿಣಾಮ, ಉಲ್ಲಾಸ, ಸಂಕಲ್ಪ ಹೇಗೆ ಬೇಕಾದರೂ ಕರೆಯಿರಿ.

ಶ್ರುತಿಯಲ್ಲಿ ಹೇಳಿರುವ ಈಕ್ಷಣ ಶಬ್ದಕ್ಕೆ ತನ್ನನ್ನು ತಾನೇ ತೇಜೋಬನ್ನಾದಿ ರೂಪದಲ್ಲಿ ನೋಡುವುದು ಎಂದರ್ಥವು. ಇದೇ ತ್ರಿಗುಣಮಯೀ ಸೃಷ್ಟಿ.

:– ಭಗವತ್ ಸಂಕಲ್ಪವೇ ವ್ಯವಸ್ಥಾಪಕ –:

ತೃತೀಯ ಸ್ಕಂಧದಲ್ಲಿ ಎರಡು ಭಾಗಗಳಿವೆ.

೧. ಕ್ರಿಯಾಶಕ್ತಿ ಪ್ರಾಧಾನ್ಯತೆಯಿಂದ ವರಾಹಾವತಾರ.

೨. ಜ್ಞಾನಶಕ್ತಿ ಪ್ರಾಧಾನ್ಯತೆಯಿಂದ ಕಪಿಲಾವತಾರ.

ಭಗವಂತನು ಸೃಷ್ಟಿ, ಕ್ರಿಯಾಜ್ಞಾನ, ರೂಪದಲ್ಲಿ ಅವತಾರಿಯಾಗದಿದ್ದರೆ ಎಲ್ಲವೂ ಕರ್ಮಾಧೀನವೆಂದು ಒಪ್ಪಬೇಕಾಗಿದ್ದಿತು. ಆಗ ಭಗವಾನ್, ಭಗವದ್ಭಕ್ತಿ ಪರಮಾತ್ಮ ತತ್ತ್ವ ಜ್ಞಾನಕ್ಕೆ ಅವಕಾಶವೇ ಇರುತ್ತಿರಲಿಲ್ಲ.

ಸನತ್ ಕುಮಾರಾದಿಗಳು ನಿತ್ಯಮುಕ್ತರು. ಅವರು ಮಹಾವಾಕ್ಯ ಶ್ರವಣವನ್ನು ಮಾಡಬೇಕಾದ್ದಿಲ್ಲ. ಆದರೆ ಅವರಿಗೂ ಜನ್ಮವುಂಟು. ಜಯ-ವಿಜಯರೂ ನಿತ್ಯಮುಕ್ತರು, ಅವರಿಗೂ ಜನ್ಮವುಂಟು.

ಬದ್ಧಜೀವಿಗಳೂ ಸಹ ಮುಕ್ತಿಯನ್ನು ಪಡೆಯುತ್ತಾರೆ. ಇವುಗಳೆಲ್ಲದರ ಅಭಿಪ್ರಾಯವೇನೆಂದರೆ. ಸೃಷ್ಟಿ, ಬಂಧನ, ಮೃತ್ಯು ಈ ಎಲ್ಲದರ ವ್ಯವಸ್ಥೆಯೂ ಭಗವತ್‌ಸಂಕಲ್ಪದಿಂದಾಗುತ್ತದೆ.

ಭಗವತ್ಕೃಪಾ – ವಿದುರ ಚರಿತ್ರೆ

ಮೊದಲನೆಯ ಅಧ್ಯಾಯದಲ್ಲಿ ವಿದುರನ ಚರಿತ್ರೆಯು ಬರುತ್ತದೆ. ವಿದುರನು ಧೃತರಾಷ್ಟ್ರನ ಸಹೋದರ. ವಿದುರನು ಧೃತರಾಷ್ಟ್ರನಿಗೆ - ಪಾಂಡವರೊಡನೆ ಯುದ್ಧ ಮಾಡಬಾರದೆಂದು ಹಲವು ಬಾರಿ ಸೂಕ್ತ ಸಲಹೆಯನು

Sri Vidyabharathi Book Centre, Sringeri

CC-0. In Public Domain. Digitized by eGangotri

ಕೊಡುತ್ತಾನೆ. ಅವನ ಸಲಹೆಯು ಹೀಗಿರುತ್ತದೆ. ಭಗವಾನ್ ಶ್ರೀಕೃಷ್ಣನು ಪಾಂಡವರನ್ನು ತನ್ನವರನ್ನಾಗಿ ಮಾಡಿಕೊಂಡಿದ್ದಾನೆ. ನಿನ್ನ ಮಗ ದುರ್ಯೋಧನನು ಶ್ರೀ ಕೃಷ್ಣನಿಂದ ವಿಮುಖನು. ಅವನ ದ್ವೇಷಿಯು, ಇಂತಹವನ ಬಗ್ಗೆ ನೀನು ಅಧಿಕ ಆಸಕ್ತಿಯನ್ನು ತಾಳುವುದು ಸರಿಯಲ್ಲ.

ವಿದುರನ ಈ ಸಲಹೆಯು ಧೃತರಾಷ್ಟ್ರನಿಗೆ ಸರಿಬೀಳಲಿಲ್ಲ. ಆಗ ವಿದುರನು ತಾನು ಯುದ್ಧದಲ್ಲಿ ಪಾತ್ರವಹಿಸುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿ. ಧನುರ್ಬಾಣಗಳನ್ನು ತ್ಯಾಗಮಾಡಿ. ವಿರಕ್ತತೆಯಿಂದ ಅವಧೂತ ವೇಷದಲ್ಲಿ ಹೊರಟು ಬಿಡುತ್ತಾನೆ.

ಈ ಸಂದರ್ಭದಲ್ಲಿ ನಾವು ನೋಡಬೇಕು. ವಿದುರನ ಮನೆಯು ಸಾಮಾನ್ಯವಾದುದಲ್ಲ. ವಿದುರನ ಮನೆಗೆ ಭಗವಾನ್ ಶ್ರೀಕೃಷ್ಣನು ಆಮಂತ್ರಣವಿಲ್ಲದೆಯೆ ಬಂದಿದ್ದನು. ಅವನ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಿದ್ದನು. ಅಂತಹ ಪವಿತ್ರ ಮನೆಯನ್ನು ತ್ಯಾಗಮಾಡುವುದು ಭಕ್ತನಾದವನಿಗೆ ಬಹಳ ಕಷ್ಟವಾದುದು.

ನೋಡಿ. ನಾವು ಯಾತ್ರಾಕಾಲದಲ್ಲಿ ಓರ್ವ ಗೃಹಸ್ಥರ ಮನೆಗೆ ಹೋಗಿದ್ದೆವು. ಅವರು ದೇವರ ಮನೆಯಲ್ಲಿ ಒಂದು ತಾಮ್ರದ ಬಿಂದಿಗೆಯನ್ನು ಶುಭ್ರವಾಗಿ ಬೆಳಗಿ ನೀರು ತುಂಬಿ ಇಟ್ಟಿದ್ದರು. ಯಾರಿಗೂ ನೀರನ್ನು ಅದರಿಂದ ಹಾಕಿಕೊಡುತ್ತಿರಲಿಲ್ಲ. ಇದೇನು ಹೀಗೆ? ಎಂದು ನಾವು ಕೇಳಲಾಗಿ ಅವರು ಹೇಳಿದರು, ನಾಲ್ಕು ವರ್ಷಗಳ ಹಿಂದೆ ನಮ್ಮ ಮನೆಗೆ ಗುರುಗಳು ದಯಮಾಡಿಸಿದ್ದರು. ಅವರ ಉಪಯೋಗಕ್ಕೆ ಈ ಬಿಂದಿಗೆಯನ್ನು ಕೊಟ್ಟಿದ್ದೆವು. ಅವರ ನೆನಪು ಅಳಿಯದಿರಲೆಂದು ಇಂದಿಗೂ ಇದರಲ್ಲಿ ನೀರು ತುಂಬಿ ದೇವರ ಮುಂದೆ ಇಡುತ್ತೇವೆ. ಕೇಳಿದ ನಮ್ಮ ಕಣ್ಣುಗಳೂ ನೀರಾಡಿದುವು. ಇಂತಹ ಶ್ರದ್ಧೆಯೆ ಭಗವತ್ ಸಾಕ್ಷಾತ್ಕಾರಕ್ಕೆ ಕಾರಣವಾಗುವುದು.

ಸಾಕ್ಷಾತ್ ಭಗವಂತನು ಆತಿಥ್ಯವನ್ನು ಸ್ವೀಕರಿಸಿದ ಪವಿತ್ರ ಮನೆಯನ್ನು ವಿದುರನು ತ್ಯಾಗಮಾಡಿದನೆಂದರೆ ಅವನಿಗೆ ಎಷ್ಟು ಕಷ್ಟವಾಗಿರಬಹುದು ? ಆದರೆ ಅಲ್ಲಿರುವುದರಿಂದ ಭಗವದ್ಭಕ್ತಿಗೆ ತೊಂದರೆ ಬರುತ್ತಿತ್ತು. ಅದರಿಂದ ತೀರ್ಥಯಾತ್ರೆಗಾಗಿ ಹೊರಟುಬಿಟ್ಟನು. ಈ ಹೊರಡುವಿಕೆಯಿಂದ ಬಾಹ್ಯ ಪ್ರತಿಬಂಧದ ನಿವೃತ್ತಿಯಾಯಿತು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಆಂತರಿಕ ಪ್ರತಿ ಬಂಧದ ನಿವೃತ್ತಿಯಾದರೋ ಭಗವತ್ಕಥಾ ಶ್ರವಣದಿಂದಲೇ ಆಗಬೇಕು. ಭಗತ್ಕೃಪಾ ಪ್ರಾಪ್ತಿಯ ನಂತರ ಯಾವ ವಿಧದ ಪ್ರತಿ ಬಂಧಕಗಳೂ ಇರುವುದಿಲ್ಲ.

ವಿದುರನಾದರೊ ಯಮದೇವತಾ ಸ್ವರೂಪದವನು. ಶಾಪದ ಕಾರಣ ದಿಂದ ಶೂದ್ರಾಣೀ ತಾಯಿಯಲ್ಲಿ ಜನ್ಮವನ್ನು ತಾಳಬೇಕಾಯಿತು. ಒಂದುನೂರು ವರ್ಷಗಳ ಕಾಲದ ಶಾಪದ ನಿವೃತ್ತಿಯಾದ ಮೇಲೂ ವಿದುರನು, ಶ್ರೀಕೃಷ್ಣ ಪ್ರೇಮಾಮೃತಪಾಯಿಯಾಗಿ ಭೂಲೋಕದಲ್ಲಿಯೆ ಇದ್ದನು.

ಶ್ರೀಕೃಷ್ಣನು ಗೋಲೋಕಕ್ಕೆ ಪ್ರಯಾಣ ಮಾಡುವಾಗ ವಿದುರನನ್ನು ಸ್ಮರಿಸಿಕೊಂಡು ಉದ್ಧವನೊಡನೆ ಹೇಳಿದನು. ಉದ್ಧವ, ನಾನು ಮೈತ್ರೇಯರಿಗೆ ಉಪದೇಶಿಸಿರುವ ಶುದ್ಧ ಜ್ಞಾನವನ್ನು ವಿದುರನಿಗೆ ಉಪದೇಶಿಸುವಂತೆ ನೀನು ಮೈತ್ರೇಯರಿಗೆ ಹೇಳು. ಇದರಿಂದ ವಿದುರನು ಶ್ರೀ ಕೃಷ್ಣನ ಪರಮ ಭಕ್ತನು ಎಂಬುವುದು ತಿಳಿದಹಾಗಾಯಿತು.

ವಿದುರನು ಶ್ರೀಕೃಷ್ಣನ ಅಜ್ಞಾನುಸಾರವಾಗಿ ಪಾಂಡವರನ್ನು ರಕ್ಷಿಸಿದ್ದನು, ಅವನು ಶ್ರೀಕೃಷ್ಣಮಹಿಮೆಯನ್ನು ಕೇಳುವುದಷ್ಟೇ ಅಲ್ಲ. ಕಣ್ಣಾರೆ ಕಂಡು ಆನಂದಿಸಿದ್ದನು.

ಈ ಪ್ರಸಂಗದಲ್ಲಿ ಉದ್ಧವನ ವರ್ಣನೆಯೂ ಬರುತ್ತದೆ. ಉದ್ಧವನು ಐದು ವರ್ಷದವನಾಗಿದ್ದಾಗಲೇ ಶ್ರೀಕೃಷ್ಣನನ್ನು ಪೂಜಿಸದೆ ಆಹಾರವನ್ನು ಸೇವಿಸು ತ್ತಿರಲಿಲ್ಲ. ಉದ್ಧವನು ತನ್ನ ಇಡೀ ಜೀವನವನ್ನೇ ಶ್ರೀ ಕೃಷ್ಣ ಸೇವೆಯಲ್ಲಿ ಸವೆಸಿದನು.

ಹೃದಯದಲ್ಲಿ ಆನಂದ, ಪ್ರೇಮಧಾರೆ, ಶರೀರದಲ್ಲಿ ರೋಮಾಂಚನ, ಕಣ್ಣುಗಳಲ್ಲಿ ಆನಂದಾಶ್ರುಗಳು, ಪ್ರೇಮಮಯವಾದ ಹೃದಯದಲ್ಲಿ ತನ್ಮ ಯತೆಯು ಮೂಡುತ್ತಿತ್ತು,

"ಭಗವತ್ಕೃಪಾ- ಭಗವದ್ವಿಜ್ಞಾನ"

ವಿದುರನು ಹರಿದ್ವಾರಕ್ಕೆ ಬಂದು ಮೈತ್ರೇಯರೊಡನೆ ಅನೇಕ ಪ್ರಶ್ನೆ ಗಳನ್ನು ಮಾಡಿದನು. ಹಾಗೂ ಭಗವತ್ಕಥಾ ಶ್ರವಣದಲ್ಲಿ ತನಗಿರುವ ಅಭಿರುಚಿ ಯನ್ನು ಪ್ರಕಟಿಸಿದನು.

Sri Vidyabharathi Book Centre, Sringeri

CC-0. In Public Domain. Digitized by eGangotri

ವಿದುರನ ಪ್ರಶ್ನೆಗಳು ಹೇಗಿವೆ ನೋಡಿ. ನಿರ್ವಿಕಾರಿ, ನಿರ್ಗುಣೀ ಪರಮಾತ್ಮನೇಕೆ ಸೃಷ್ಟಿಯ ಉತ್ಪತ್ತಿ-ಸ್ಥಿತಿ. ಸಂಹಾರಗಳನ್ನು ನಡೆಸುತ್ತಾನೆ?

ಬಾಲಕರು ಕಾಮನಾವೃತರಾಗಿರುತ್ತಾರೆ. ಆತ್ಮಾನಂದ ಮಗ್ನನಾದ, ಅದ್ವಿತೀಯ ಪರಮಾತ್ಮನಲ್ಲಿ ಕಾಮನೆಗಳು ಹೇಗೆ ಉಂಟಾದುವು? ನಿತ್ಯ ಜ್ಞಾನಿಯೊಡನೆ ಮಾಯಾ ಸಂಬಂಧ ಉಂಟೇ? ಸರ್ವಾಂತರ್ಯಾಮಿಯು ಪರಾಧೀನನೂ, ದುಃಖಿಯೂ ಆಗುವನೇ? ಕರ್ಮಗಳು ಹೇಗೆ ಅವನನ್ನು ಸ್ಪರ್ಶಿಸುತ್ತವೆ?

ವಿದುರನ ಈ ವಿಧದ ಪ್ರಶ್ನೆಗಳಿಗೆಲ್ಲಾ ಮೈತ್ರೇಯರು ಉತ್ತರವನ್ನು ಕೊಡುತ್ತಾರೆ.

ಇದೇ ಭಗವಂತನ ಮಾಯೆಯ ಭೂಷಣವು, ದೂಷಣವಲ್ಲ. ಇಲ್ಲದೇ ಇರುವುದನ್ನು ತೋರಿಸುವುದು ಇರುವುದನ್ನು ತೋರಿಸದಿರುವುದು. ಇದೇ ಮಾಯೆ – ಅಜ್ಞಾನ. ಜ್ಞಾನದ ದೃಷ್ಟಿಯಿಂದ ನೋಡಿದರೆ ಅದು ಇಲ್ಲವೇ ಇಲ್ಲ.

ಒಂದು ದೃಷ್ಟಿಯಿಂದ ಸತ್ತಾಗಿ ತೋರುವುದೇ ಮತ್ತೊಂದು ದೃಷ್ಟಿಯಿಂದ ಅಸತ್ತಾಗಿ ತೋರುವುದು. ಆದರಿಂದಲೇ ಅನಿರ್ವಚನೀಯ. ಇದು ಪಂಚಭೂತಗಳ ಹಾಗೂ ಪಂಚಭೂತಾತ್ಮಕ ಪದಾರ್ಥಗಳ ರೂಪದಲ್ಲಿ ಕಾಣುತ್ತದೆ. ಇದೇ ಅದರ 'ಅಧಿಭೂತ' ರೂಪ. 'ಅಧ್ಯಾತ್ಮ' ದೃಷ್ಟಿಯಿಂದ ಆತ್ಮನ ಅಜ್ಞಾನರೂಪ ಕಾರ್ಯದಲ್ಲಿ ತೋರುತ್ತದೆ. ಪರಮೇಶ್ವರನೇ ಇದರ 'ಅಧಿದೈವವು'. ಈ ಮೂರರಲ್ಲಿಯೂ ಸ್ವಪ್ರಕಾಶಕ ಅಧಿಷ್ಠಾನ ತತ್ತ್ವವೇನುಂಟು ಅದೇ ಪರಮಸತ್ಯ-ಪರಮಾರ್ಥ. ಭಗವದ್ಗುಣಾನುವಾದದಿಂದ ಸರ್ವಕ್ಲೇಶಗಳೂ ದೂರವಾಗುತ್ತವೆ. ಭಗವಂತನ ಚರಣಾರವಿಂದಗಳಲ್ಲಿ ಭಕ್ತಿ ಮಾಡುವುದರಿಂದ ಎಲ್ಲಾ ವಿಷಯಾಸಕ್ತಿಗಳೂ ನಾಶವಾಗುತ್ತವೆ. ಸತ್ಯ ವಿಚಾರವೇನೆಂದರೆ ಪರಮಾತ್ಮಾತಿರಿಕ್ತವಾಗಿ ಕಾಣುವುದೆಲ್ಲವೂ ನಿರ್ಮೂಲ, ಅರ್ಥಶೂನ್ಯ.

ಐಂದ್ರಜಾಲಿಕನ ಆಟದಲ್ಲಿ ವಸ್ತುದರ್ಶನ-ಅದರ್ಶನಗಳಲ್ಲಿ ಕ್ರಮವಾಗಲಿ, ಯುಕ್ತಿಯಾಗಲಿ, ಸಂಗತಿಗಳಾಗಲಿ ಇರುವುದಿಲ್ಲ. ಅಂತೆಯೆ ಈ ಮಾಯಾಸೃಷ್ಟಿಯಲ್ಲಿ ಕ್ರಮ, ಯುಕ್ತಿ, ಸಂಗತಿಗಳ ಅಪೇಕ್ಷೆಯಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಗಳು ಮಾಯಾರೂಪದಲ್ಲಿ, ಇಂದ್ರಜಾಲರೂಪದಲ್ಲಿ ಸೃಷ್ಟಿಯನ್ನು ವರ್ಣಿಸಿವೆ. ಮಾಯಾರಚನೆಯನ್ನು ವೈಚಾರಿಕ ರಂಗಕ್ಕೆ ಎಳೆಯುವುದು ಉಚಿತ ವಲ್ಲ. ಅದರಿಂದ ಕಲ್ಪಭೇದಕ್ಕನುಗುಣವಾಗಿ ಕಥೆಯಲ್ಲಿಯೂ ಭಿನ್ನತೆಯು ತೋರುತ್ತದೆ.

ಕಲ್ಪವೆಂದರೇನು ? ಆ ಮಾಯಾಕಾರನ ಸಂಕಲ್ಪದ ಕಲ್ಪಿತ ಕಾಲವಿಭಾಗ.

ಬ್ರಾಹ್ಮಕಲ್ಪದಲ್ಲಿ ಪೃಥ್ವಿಯನ್ನು ವಿರಾಟ್‌ಪುರುಷನ ಮೊಣಕಾಲೆಂದು ಹೇಳಿದೆ. ಪಾದ್ಮಕಲ್ಪದಲ್ಲಿ ನಾಭಿಪದ್ಮವೆಂದು ಹೇಳಿದೆ. ವಾರಾಹಕಲ್ಪದಲ್ಲಿ ಪೃಥ್ವಿಯು ಜಲಮಗ್ನವಾಗಿದ್ದಿತೆಂದು ಹೇಳಿದೆ. ಜಲಮಗ್ನ ಪೃಥ್ವಿಯ ಉದ್ಧಾರಕ್ಕಾಗಿ ಬ್ರಹ್ಮನ ಮನಸ್ಸು ಸಂಕಲ್ಪಮಯವಾಯಿತು. ಆಗ ಅವನ ಮೂಗಿನಿಂದ ಆದಿವರಾಹನು ಪ್ರಕಟನಾದನು. ಇದೇ ಭಗವಂತನ "ವರಾಹಾವತಾರ."

ವರಾಹಾವತಾರದ ವಿಮರ್ಶೆ

ಗಂಧಗುಣವತೀ ಪೃಥ್ವೀ. ಅಥವಾ ಗಂಧತನ್ಮಾತ್ರೆಯ ಕಾರ್ಯವು ಪೃಥ್ವೀ. ಗಂಧಗ್ರಹಣವು ನಾಸಿಕದಿಂದಾಗುತ್ತದೆ. ಪೃಥ್ವಿಯನ್ನು ಉದ್ಧರಿಸಲು ನಾಸಿಕದಿಂದ ವರಾಹಾವತಾರವಾಯಿತು. ಗಂಧವು 'ಅದಿಭೂತ'. ನಾಸಿಕವು "ಅಧ್ಯಾತ್ಮ" ವರಾಹನು "ಅಧಿದೈವ".

ವರಾಹನು ಲೌಕಿಕ ರೀತಿಯಿಂದಲೂ ಭೂಪ್ರೇಮಿ. ಪೃಥ್ವಿಯ ಅತಿ ಕೊಳಕು ಭಾಗವನ್ನೂ ತನ್ನ ಭೋಜ್ಯವನ್ನಾಗಿ ಮಾಡಿಕೊಳ್ಳುತ್ತಾನೆ. ಅವನ ಸರ್ವೇಂದ್ರಿಯಗಳ ಗಮನವೂ ಪೃಥ್ವಿಯ ಕಡೆಗೇ ಇರುತ್ತದೆ. ಅದರಿಂದ ವರಾಹನ ಮೂಲಕ ಪೃಥ್ವಿಯ ಉದ್ಧಾರ, ವರಾಹನೊಡನೆ ಪೃಥ್ವಿಯ ವಿವಾಹ-ವಿಹಾರ-ನಿವಾಸಗಳು ಅಸಂಗತಗಳೇನಲ್ಲ.

ಭೂಮ್ಯುದ್ಧಾರದ ಪ್ರಸಂಗದಲ್ಲಿ ಒಂದು ವಿಚಾರವನ್ನು ಗಮನಿಸಬೇಕು. ಆ ಕಾಲದಲ್ಲಿ ಭೂಮಿಗೆ ತೊಂದರೆ ಕೊಡುವ ಹಿರಣ್ಯಾಕ್ಷನು ಎಲ್ಲಿಂದ ಬಂದನು ? ಪೃಥ್ವಿಯು ಜಲಮಗ್ನವಾಗಿತ್ತು. ಹಾಗಾದರೆ ದಿತಿ-ಕಶ್ಯಪರು ಎಲ್ಲಿದ್ದರು ? ಅವರಿಗೆ ಯಾವಾಗ ಹಿರಣ್ಯಾಕ್ಷ, ಹಿರಣ್ಯಕಶಿಪರು ಪುತ್ರರಾದರು ? ಪ್ರಳಯಕಾಲ ದಲ್ಲಿ ಅವರೆಲ್ಲಿದ್ದರು ?

Sri Vidyabharathi Book Centre, Sringeri

 CC-0. In Public Domain. Digitized by eGangotri

ಈ ಪ್ರಶ್ನೆಗಳಿಗೆ ಸಮಾಧಾನವು ಹೀಗಿದೆ. ದಿತಿ-ಕಶ್ಯಪರು ವರಾಹ ಕಲ್ಪದವರಲ್ಲ. ಅದಕ್ಕಿಂತ ಪೂರ್ವಕಲ್ಪದವರು.

ಹಿಂದಿನ ಕಲ್ಪದಲ್ಲಿಯೇ ಹಿರಣ್ಯಾಕ್ಷ, ಹಿರಣ್ಯಕಶಿಪರ ಜನ್ಮವಾಗಿತ್ತು. ಮಹಾಪ್ರಳಯ ಕಾಲದಲ್ಲಿ ರಸಾತಲದಲ್ಲಿದ್ದರು. ದಿತಿ-ಕಶ್ಯಪರು ಊರ್ಧ್ವಲೋಕ ವಾಸಿಗಳಾಗಿದ್ದರು. ದೈತ್ಯರ ಜಲವಿಹಾರವೇ, ಭೂದೇವಿಯ ಉದ್ಧಾರಕ್ಕೆ ಬಾಧೆಯನ್ನು ಒಡ್ಡಿತ್ತು. ಪರಮಾತ್ಮನ ಕಾರ್ಯದಲ್ಲಿ ಬಾಧೆಯನ್ನೊಡ್ಡುವುದು ಆಸುರೀ ಭಾವದ ಸಂಕೇತ. ಆ ದೈತ್ಯರಿಬ್ಬರ ಆಯುಷ್ಯ, ಬಲ, ಐಶ್ವರ್ಯ, ಸಂಪತ್ತು, ಭೋಗಗಳು ಅಪರಿಮಿತ. ಮತ್ತೊರ್ವ ವ್ಯಕ್ತಿಗೆ ದುರ್ಲಭವಾದುವು.

ಇವರಿಬ್ಬರೂ ಹಿಂದಿನ ಜನ್ಮದಲ್ಲಿ ವೈಕುಂಠದ ದ್ವಾರಪಾಲಕರಾಗಿದ್ದರು. ಸನಕಾದಿಗಳನ್ನು ತಡೆದ ಫಲವಾಗಿ ಶಪ್ತರಾದ ಅವರು ದೈತ್ಯರಾಗಿ ಹುಟ್ಟಿದರು.

ಇಲ್ಲಿ ಏಳುವ ಹಲವಾರು ಪ್ರಶ್ನೆಗಳಿಗೆ "ಭಗವದಿಚ್ಛೆ" ಎಂಬುವುದೇ ಉತ್ತರವಾಗಿದೆ. ಆಜ್ಞಾ ಪರಿಪಾಲನೆಯೇ ಪರಮಧರ್ಮ. ಇದರ ಫಲ– 'ನಿಶ್ರೇಯಸಪ್ರಾಪ್ತಿ'.

ಶಾಸ್ತ್ರಾನುಸಾರೀ ಕರ್ಮವು ಧರ್ಮವಾದರೆ ವಾಸನಾನುಸಾರೀ ಕರ್ಮವು 'ಅಧರ್ಮವು'.

ಕಶ್ಯಪಪತ್ನೀ ದಿತಿಯು ತನ್ನ ವಾಸನಾ ಪ್ರಾಬಲ್ಯದಿಂದ ಕ್ರೂರದೈತ್ಯರ ಜನ್ಮಕ್ಕೆ ಕಾರಣಳಾಗುತ್ತಾಳೆ.

ಇಲ್ಲದಿದ್ದರೆ ಋಷಿಪತ್ನಿಯಾಗಿ, ಸಂಧ್ಯಾಕಾಲದಲ್ಲಿ, ಅಗ್ನಿಹೋತ್ರದ ಸಮಯದಲ್ಲಿ, ರುದ್ರದೇವತೆಯನ್ನು ತಿರಸ್ಕರಿಸಿ ತನ್ನ ವಾಸನಾಪೂರ್ತಿಗೆ ಪ್ರಯತ್ನಿಸುತ್ತಿರಲಿಲ್ಲ.

ಹಿರಣ್ಯಾಕ್ಷನು ಅರ್ಥಪ್ರಧಾನನಾದರೆ ಹಿರಣ್ಯಕಶಿಪುವು ಭೋಗಪ್ರಧಾನನು. ಧರ್ಮೋಲ್ಲಂಘನೆಯನ್ನು ಮಾಡುವ ಪುತ್ರರು ಅರ್ಥ-ಕಾಮ ಪ್ರಧಾನರಾಗುತ್ತಾರೆ. ಭಗವಂತನೊಡನೆಯೆ ಯುದ್ಧ ಮಾಡುತ್ತಾರೆ. ತೃತೀಯ ಸ್ಕಂಧದ ೧೯ನೆಯ ಅಧ್ಯಾಯದವರೆಗೆ ಈ ಕಥಾವರ್ಣನೆಯು ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಪಿಲಾವತಾರ

ಸ್ವಾಯಂಭುವ ಮನು ತತ್ಪತ್ನೀ ಶತರೂಪಾ, ಮನನ ಹಾಗೂ ಶ್ರದ್ಧೆಯ ಮೂರ್ತಿಗಳು. ಧರ್ಮಾನುಷ್ಠಾನದಲ್ಲಿ ಇಬ್ಬರ ಆವಶ್ಯಕತೆಯೂ ಉಂಟು. ಇವರಿಬ್ಬರೂ ಪ್ರಜಾಪತಿ ಬ್ರಹ್ಮನ ಶರೀರದ ಭಾಗಗಳು.

ಒಬ್ಬರನ್ನು ಬಿಟ್ಟು ಮತ್ತೊಬ್ಬರಿರುವುದಿಲ್ಲ. ಇವರಿಗೆ ಲೋಕಕ್ಕೇ ಪಿತಾಮಹನಾದ ಪ್ರಜಾಪತಿ ಬ್ರಹ್ಮನ ಬಗ್ಗೆ ಅತ್ಯಂತ ಶ್ರದ್ಧೆ - ವಿನಯ. ಅವನ ಆಜ್ಞಾಪಾಲನೆಯೇ ಇವರ ಧರ್ಮ. ಇವರು ಸರ್ವೋತ್ತಮ ಧರ್ಮಜ್ಞರು. ಬ್ರಹ್ಮನ ಆಜ್ಞಾನುಸಾರವಾಗಿ ಸಂತಾನೋತ್ಪತ್ತಿಯನ್ನು ಮಾಡಿದರು. ಇವರ ಪುತ್ರ-ಪುತ್ರಿಯರೆಲ್ಲರೂ ಧರ್ಮಸ್ಥಾಪಕರು, ಧರ್ಮಪಾಲಕರು.

ಪ್ರಜಾಪತಿಯ ಪುತ್ರನಾದ ಕರ್ದಮನು ಶ್ರೇಷ್ಠ ಪವಿತ್ರಾತ್ಮನು. ಪ್ರಜಾಪತಿಯ ಆಜ್ಞಾನುಸಾರ ದೀರ್ಘಕಾಲ ಬ್ರಹ್ಮಚರ್ಯವನ್ನು ಪಾಲಿಸುತ್ತ ತಪಸ್ಸು ಮಾಡಿದನು

ಭಗವದ್ದರ್ಶನ ಪರ್ಯಂತ ತಪಸ್ವಿಯಾಗಿದ್ದ ಕರ್ದಮನು ಪ್ರಜಾಪತಿಯ ಆಜ್ಞೆಗನುಗುಣವಾಗಿ ಶತರೂಪಾ–ಮನುವಿನ ಸಂತಾನವಾದ ದೇವಹೂತಿಯೊಡನೆ ವಿವಾಹವಾದನು.

ದೇವಹೂತಿಯು ಧರ್ಮನಿಷ್ಠಳು. ಮಹಾತಪಸ್ವಿನಿಯು. ಪತಿಯ ಅನುಗ್ರಹದಿಂದ ಮಹಾತ್ಮಾ ಕಪಿಲನಿಗೆ ಜನ್ಮವನ್ನು ಕೊಡುತ್ತಾಳೆ.

ದಿತಿಯು ವಾಸನಾಮಯಿ. ದೇವಹೂತಿಯು ವಾಸನಾ ರಹಿತಳು.

ವಾಸನಾವಾಸಿತ ಮನಸ್ಸು ಸಂಸಾರಕ್ಕೆ ಕಾರಣ. ನಿರ್ವಾಸನಾವಾಸಿತ ಮನಸ್ಸು ಮುಕ್ತಿಗೆ ಕಾರಣ.

ಭಗವಂತನಿಗಿಂತಲೂ ಭಾಗವತದ ಮಹಿಮೆಯು ಅಧಿಕವಾದುದೆಂಬುವುದನ್ನು ಭಾಗವತದ ಎಲ್ಲಾ ಕಡೆಗಳಲ್ಲಿಯೂ ಪ್ರತಿಪಾದಿಸಿದ್ದಾರೆ.

"ಶ್ರೀಮದ್ಭಾಗವತಾಖ್ಯೋಽಯಂ ಪ್ರತ್ಯಕ್ಷಃ ಕೃಷ್ಣ ಏವಹಿ" :– ಎಂದು ಹೇಳಿರುವುದರಿಂದ ಕೃಷ್ಣನೆಂದರೂ ಒಂದೇ, ಭಾಗವತವೆಂದರೂ ಒಂದೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ದಮ-ದೇವಹೂತಿಯರ ಸಂಯೋಗದಿಂದ ಮಹಾತ್ಮಾ ಕಪಿಲರ ಅವತಾರವಾಯಿತು. ಕಪಿಲರು ಭಗವಂತನ ಜ್ಞಾನಾವತಾರಿಗಳು. ಭಗವಂತನು ಕಪಿಲನಾಗಿ ಅವತರಿಸಿದ ಮೇಲೆ ಕರ್ದಮರು, ಬ್ರಹಾತ್ಮೈಕ್ಯಾನುಭವದಿಂದ ಪರಿಪೂರ್ಣರಾಗಿ, ನಿಸ್ಸಂಗರಾಗಿ ಸಂಚರಿಸಲು ಹೊರಟರು.

ಅಧಿಕಾರಸಂಪನ್ನನು ಜ್ಞಾನೋದಯ ಮಾತ್ರದಿಂದ ಕೃತಾರ್ಥನಾಗುತ್ತಾನೆ. ಅವನಿಗೆ ಯಾವ ಜ್ಞಾನವೃತ್ತಿಯ ಆವಶ್ಯಕತೆಯೂ ಇಲ್ಲ. ಕರ್ದಮನ ಚರಿತ್ರೆಯಿಂದ ಇದನ್ನು ತಿಳಿದುಕೊಳ್ಳಬಹುದು.

ಧರ್ಮಾನುಷ್ಠಾನ ತತ್ಪರಳಾದ ಹಾಗೂ ಪರಮತಪಸ್ವಿನಿಯಾದ ದೇವಹೂತಿಯು ಪುತ್ರನ ಬಳಿಯಲ್ಲಿಯೆ ಇರುತ್ತಾಳೆ. ಅವಳು ಪುತ್ರನಿಂದ ಪ್ರಕೃತಿ, ಪುರುಷರ ವಿವೇಕವನ್ನೂ, ಭಾಗವದ್ಭಕ್ತಿ-ಭಗವದಾರಾಧನಾ ಸಂಬಂಧಿ ಜ್ಞಾನವನ್ನೂ ಪಡೆಯುತ್ತಾಳೆ.

ವಿವೇಕೋದಯದಿಂದ ಪ್ರಕೃತಿಯು ಕ್ಷಯವಾಗುತ್ತದೆ. ಪುರುಷನ ಮುಂದೆ ಸತ್ತ್ವಹೀನವಾಗುತ್ತದೆ. ಪುರುಷನಿಗೆ ಯಾವ ವಿಧಧ ಅಪಕಾರವನ್ನೂ ಮಾಡುವುದಿಲ್ಲ. ಪುರುಷನು ಸ್ವ-ಸ್ವರೂಪಸ್ಥಿತನಾಗುತ್ತಾನೆ. ಭಕ್ತಿಯ ಅಂತಿಮ ಫಲವು ಇದೇ ವಿವೇಕದಿಂದ ಸ್ವ-ಸ್ವರೂಪವನ್ನು ತಾಳಿದಮೇಲೆ ಭಗವದ್ಭಕ್ತಿಯಿಂದ ಚಿತ್ತವು ನಿರ್ವಾಣರೂಪವನ್ನು ತಾಳುತ್ತದೆ.

ಚಿತ್ತವು ಆಶ್ರಯ, ವಿಷಯ, ರಾಗ ದ್ವೇಷಾದಿಗಳಿಂದ ಮುಕ್ತವಾದಾಗ, ಇಂಧನ ರಹಿತವಾದ ಅಗ್ನಿಯಂತೆ ಶಾಂತವಾಗುತ್ತದೆ. ಆಗ ಆತ್ಮಾಪರಮಾತ್ಮರ ಮಧ್ಯೆ ಯಾವ ಭೇದವೂ ಇರುವುದಿಲ್ಲ.

ತೃತೀಯ ಸ್ಕಂದದಲ್ಲಿ ಪ್ರತಿಪಾದಿತವಾಗಿರುವ ಸಾಂಖ್ಯಯೋಗವು, ಸಾಂಖ್ಯಕಾರಿಕಾ, ಇತ್ಯಾದಿಗಳಿಂದ ವರ್ಣಿತವಾಗಿರುವ ಸಾಂಖ್ಯ ಶಾಸ್ತ್ರವಲ್ಲ; ಇದು ಆತ್ಮಾ-ಪರಮಾತ್ಮರ ಐಕ್ಯವನ್ನು ಪ್ರತಿಪಾದಿಸುತ್ತದೆ. ಭಕ್ತಿಯೋಗದ ಮೂಲಕ ಚಿತ್ತ ಶುದ್ಧಿಯನ್ನುಂಟುಮಾಡುತ್ತದೆ.

ಶ್ರೀಮದ್ಭಾಗವತದಲ್ಲಿ ಪ್ರತಿಪಾದಿತವಾಗಿರುವುದು 'ಸೇಶ್ವರ ಸಾಂಖ್ಯವು' ಪುರುಷಾರ್ಥ ರೂಪಿಯು ಭಗವಂತನೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಪಿಲನು ಎಲ್ಲಾ ಶಾಸ್ತ್ರಗಳನ್ನೂ ಆದರಿಸುತ್ತಾನೆ. ಅವನ ಅಭಿಪ್ರಾಯ ವಿಷ್ಟೆ = ವಸ್ತು ಒಂದೇ ಇರುವುದು, ದ್ರಷ್ಟಾ ಒಬ್ಬನೇ. ಇಂದ್ರಿಯದ್ವಾರಗಳು ಮಾತ್ರ ಬೇರೆ_ಬೇರೆ. ಅದರಿಂದ ಒಂದೇ ಆದ ವಸ್ತುವು ನಾನಾ ರೂಪಗಳಲ್ಲಿ ಕಾಣುತ್ತದೆ.

ಗುಲಾಬಿಯು ಒಂದೇ ಆದರೂ ಅದರ ಬಗ್ಗೆ ಇಂದ್ರಿಯಗಳ ಅನುಭವವು ಬೇರೆ-ಬೇರೆ,

ಒಬ್ಬನೇ ಆದ ಭಗವಂತನು ಶಾಸ್ತ್ರ ಅನುಷ್ಠಾನ ಭೇದದಿಂದ ನಾನಾ ರೂಪಗಳಲ್ಲಿ ತೋರುತ್ತಾನೆ, ದರ್ಶನ ಜ್ಞಾನದಿಂದ ಅವನಲ್ಲಿ ಭೇದವುಂಟಾಗು ವುದಿಲ್ಲ. ಇಲ್ಲಿಯ ಸಮನ್ವಯ ದೃಷ್ಟಿಯು ಅದ್ಭುತವಾದುದು. ಶಾಸ್ತ್ರಗಳ ಬಗ್ಗೆ ಶ್ರದ್ಧೆಯನ್ನು ಉತ್ಪನ್ನ ಮಾಡುತ್ತದೆ,

ಕಪಿಲರು ಜನ್ಮ-ಮರಣಗಳು ವಾಸ್ತವವೆಂದು ಒಪ್ಪುವುದಿಲ್ಲ. ಅವರು ಹೇಳುತ್ತಾರೆ.

ಅಂತಃಕರಣದಲ್ಲಿ ಪದಾರ್ಥೋಪಲಬ್ಧಿಯಾಗುತ್ತದೆ. ಅಹಂಭಾವವಿರುವವ ರೆಗೆ, ದೇಹಾಧ್ಯಾಸವಿರುವವರೆಗೆ, ಜೀವನಿಗೆ ಜನ್ಮಪ್ರಾಪ್ತಿಯಾಗುತ್ತದೆ. ಅಂತಃ ಕರಣದಲ್ಲಿ ಪದಾರ್ಥಗ್ರಹಣಶಕ್ತಿಯು ಲುಪ್ತವಾದಾಗ – ದೇಹತಾದಾತ್ಮ್ಯತೆಯು ಬಿಟ್ಟುಹೋದಾಗ ಮರಣಪ್ರಾಪ್ತಿಯಾಗುತ್ತದೆ.

ಆತ್ಮನಿಗಾದರೂ ಜನ್ಮವೂ ಇಲ್ಲ, ಮರಣವೂ ಇಲ್ಲ. ಅಂತಃಕರಣ ಸಂಬಂಧದಿಂದಲೇ ಜನ್ಮ-ಮರಣಗಳು ತೋರುತ್ತವೆ. ನಾನು ನನ್ನದು ಎಂಬ ಅಭಿಮಾನವೂ ತೋರುತ್ತದೆ. ತನ್ನಿ ವೃತ್ತಿಯೆ ಮೋಕ್ಷವು.

ಭಗವದಾರಾಧನೆಯ ವಿಲಕ್ಷಣತೆ

ಕಪಿಲನು ಭಗವದಾರಾಧನೆಯ, ಪ್ರಕಾರವನ್ನೂ ವಿಲಕ್ಷಣ ರೀತಿಯಲ್ಲಿ ಪ್ರತಿಪಾದಿಸಿದ್ದಾನೆ. ಸರ್ವಪ್ರಾಣಿಗಳ ಹೃದಯವೂ ಭಗವನ್ಮಂದಿರವೇ. ದಾನ, ಮಾನ, ಮೈತ್ರೀ ಹಾಗೂ ಅಭೇದ ದರ್ಶನದ ಮೂಲಕ, ಸರ್ವ ಪ್ರಾಣಿಗಳ ಲ್ಲಿಯೂ, ಸರ್ವ ಪದಾರ್ಥಗಳಲ್ಲಿಯೂ ಭಗವಂತನ ದರ್ಶನವಾಗುತ್ತದೆ. ಅನ್ಯ ಶರೀರಗಳಲ್ಲಿ ವಿದ್ಯಮಾನನಾದ ಭಗವಂತನನ್ನು ತಿರಸ್ಕರಿಸಿ ಎಲ್ಲೋ ಒಂದು ಕಡೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಈಶ್ವರನನ್ನು ಆರಾಧಿಸುವವನು ಭಗವಂತನನ್ನು ಕಾಣಲಾರ. ಅವನ ಆರಾಧನೆಯು ವಿಡಂಬನ ಮಾತ್ರ.

"ಸರ್ಗದ ಮೂಲಕ ಭಗವಂತನೇ ಅನುಸಂಧೇಯನು"

ಮುಕ್ತಿಯು ಸ್ವಾರ್ತಸ್ವರೂಪವೇ. ಸ್ವ-ಸ್ವರೂಪೋಪಲಬ್ಧಿಗೆ ಯಾರೂ ಅನಧಿಕಾರಿಗಳಲ್ಲ. ಅದರಲ್ಲಿ ಸಮಯ, ದೇಶ, ಜಾತಿ, ಲಿಂಗ ಇತ್ಯಾದಿ ಯಾವ ಪ್ರತಿಬಂಧಕವೂ ಇಲ್ಲ. ಮತ್ತೊಬ್ಬರ ಮನೆಯನ್ನು ಪ್ರವೇಶಿಸಬೇಕಾದರೆ ಅಧಿಕಾರದ ಪ್ರಶ್ನೆಯೇಳುತ್ತದೆ. ಸ್ವ-ಗೃಹಪ್ರವೇಶದಲ್ಲಿ ಆ ಪ್ರಶ್ನೆಯು ಏಳುವುದಿಲ್ಲ. ಆದರೂ ಪವಿತ್ರನಾಗಿ ಕೈಕಾಲು ತೊಳೆದುಕೊಂಡು ಪ್ರವೇಶಿಸುವುದು ಯೋಗ್ಯವು.

ಸ್ತ್ರೀಯಾದ ದೇವಹೂತಿಗೆ ಜೀವನ್ಮುಕ್ತಳಾಗುವ ಜ್ಞಾನಾಧಿಕಾರವನ್ನು ಕೊಟ್ಟಿರುವ ಕಪಿಲಯೋಗವು ಎಂದೆಂದಿಗೂ ಆದರ್ಶಭೂತವಾಮದು. "ಸ್ತ್ರೀಯು ಜ್ಞಾನಕ್ಕೆ ಅನಧಿಕಾರಿಣಿ" ಎಂದು ಈಗಲೂ ಕೆಲವರು ಅಭಿಪ್ರಾಯ ಪಡುತ್ತಾರೆ. ಅಂತಹವರು ಕಪಿಲಯೋಗವನ್ನು ಅಭ್ಯಸಿಸಿದರೆ ಒಳ್ಳೆಯದು.

ಈ ರೀತಿಯಲ್ಲಿ, **ತೃತೀಯ ಸ್ಕಂಧದಲ್ಲಿ ಕ್ರಿಯಾಶಕ್ತಿ ಪ್ರಧಾನವಾದ ವರಾಹಾವತಾರದ ವರ್ಣನೆಯೂ, ಜ್ಞಾನಶಕ್ತಿ ಪ್ರಧಾನವಾದ ಕಪಿಲಾವತಾರದ ವರ್ಣನೆಯೂ** ಇದೆ.

ಗೀತೆಯಲ್ಲಿ ಆಸುರ ಸರ್ಗ-ದೈವಸರ್ಗ ಎಂದು ಹೇಳಿರುವಂತೆ, ತೃತೀಯ ಸ್ಕಂಧದ ಪೂರ್ವಾರ್ಧದಲ್ಲಿ ಆಸುರಸರ್ಗವೂ. ಉತ್ತರಾರ್ಧದಲ್ಲಿ ದೈವಸರ್ಗವೂ ಹೇಳಲ್ಪಟ್ಟಿದೆ.

ಎರಡು ವಿಧದಲ್ಲಿ ಸರ್ಗ ವರ್ಣನೆಯಿಂದಲೂ ಪರಮಾತ್ಮನನ್ನು ವರ್ಣಿಸುವುದೇ ಅಭೀಷ್ಟವಾಗಿದೆ.

(ಶ್ರೀ ಶ್ರೀ ಅಖಂಡಾನಂದ ಸರಸ್ವತಿಗಳು ಅನುಗ್ರಹಿಸಿರುವ ಪ್ರಕಾರ)

Sri Vidyabharathi Book Centre, Sringeri

CC-O. In Public Domain. Digitized by eGangotri

ತೃತೀಯ ಸ್ಕಂಧ ಮೊದಲನೆಯ ಅಧ್ಯಾಯ

ಓಂ ನಮೋ ಭಗವತೇ ವಾಸುದೇವಾಯ

ವಿದುರ–ಉದ್ಧವರ ಮಿಲನ

ಪೀಠಿಕೆ : ಶ್ರೀಮದ್ಭಾಗವತವು ಕಲ್ಪವೃಕ್ಷದಂತೆ ವೃಕ್ಷದಲ್ಲಿ ಕೊಂಬೆಗಳಿರವಂತೆ, ಇದರಲ್ಲಿ ೧೨ ಸ್ಕಂಧದಿಂದ ಸರ್ಗವಿಸರ್ಗಾದಿ ಒಂಭತ್ತು ಲಕ್ಷಣಗಳಿಂದ ಕೂಡಿದ-ಆಶ್ರಯ ತತ್ತ್ವದ–ಪರಮಾತ್ಮನ ವರ್ಣನೆಯನ್ನು ಪ್ರಾರಂಭಿಸುತ್ತಾರೆ.

ಸರ್ಗ ಶಬ್ದಕ್ಕೆ **ಸರ್ಜನಂ ಸರ್ಗಃ** ಎಂದು ಸೃಷ್ಟಿ ಎಂಬುದಾಗಿ ಅರ್ಥವನ್ನು ಹೇಳಿದೆ. ಸೃಷ್ಟಿಯು ಎರಡು ಪ್ರಕಾರವಾಗಿ ಆಗುತ್ತದೆ.

ಒಂದು– ತತ್ತ್ವ ಕ್ರಮದಿಂದ. ಮತ್ತೊಂದು ಕರ್ಮಾನುಸಾರವಾಗಿ. ವ್ಯಕ್ತಿಗಳ ಆಕೃತಿ-ಜಾತಿ-ಆಯುಷ್ಯ ಜನ್ಮ. ಇವೆಲ್ಲದರಲ್ಲಿಯೂ ಭಗವಂತನ ಪ್ರಭಾವವಿದೆ. ಸೃಷ್ಟಿಯ ಅಮೋಘ ಅಂಚಿತ್ಯ ರಚನೆಯು ಪರಮಾತ್ಮನ ವಿನಾ ಸಿದ್ಧಿಸುವುದಿಲ್ಲ.

ಇದರಲ್ಲಿ ಮಹಾರಹಸ್ಯಗಳಿವೆ. ಅವುಗಳನ್ನು ತಿಳಿದುಕೊಳ್ಳಲು, ಸರ್ಗ-ವಿಸರ್ಗಾದಿಗಳ ಮೂಲಕ ಪರಮಾತ್ಮ ಸ್ವರೂಪವನ್ನು ವಿವೇಚಿಸುವುದು ಅನಿವಾರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀನಾರಾಯಣ-ಬ್ರಹ್ಮಸಂವಾದದಿಂದ ಚತುಃ ಶ್ಲೋಕಾತ್ಮಕ ಭಾಗವತವು ನಿರೂಪಿಸಲ್ಪಟ್ಟಿತು,

ಅದನ್ನೇ ಸ್ವಲ್ಪ ವಿಸ್ತರಿಸಿ ಬ್ರಹ್ಮ-ನಾರದ ಸಂವಾದ ರೂಪದಲ್ಲಿ ದಶಲಕ್ಷಣಾತ್ಮಕವನ್ನಾಗಿ ತಿಳಿಸಿದರು. ಅದನ್ನೇ ಶೇಷನು ವಿಸ್ತಾರ ಪಡಿಸಿದನು. ತೃತೀಯ ಸ್ಕಂಧದ ಮೊದಲನೆಯ ಅಧ್ಯಾಯದಲ್ಲಿ ವಿದುರ-ಮೈತ್ರೇಯರ ಸಂಗಮವನ್ನು ತಿಳಿಸುತ್ತಾರೆ,

ರಾಜಾ ಪರೀಕ್ಷಿತನು ಶ್ರೀ ಶುಕದೇವರನ್ನು ಮೈತ್ರೀಯರಿಂದ ವಿದುರನು ಉಪದಿಷ್ಟನಾದ ರೀತಿಯನ್ನು ವಿವರಿಸಬೇಕೆಂದು ಪ್ರಾರ್ಥಿಸೋಣ ಶ್ರೀಶುಕ ಮಹಾಮುನಿಗಳು ಹೇಳುತ್ತಾರೆ.

ರಾಜನ್ ವಿದುರನು ತನ್ನ ಮನೆಯನ್ನು ತ್ಯಾಗ ಮಾಡಿದನು. ಅವನೇಕೆ ಗೃಹತ್ಯಾಗಿಯಾದನು? ಅವನದು ಮುರುಕಲುಮನೆಯೆ? ಸಾಂಸಾರಿಕ ಪದಾರ್ಥಗಳಿರಲಿಲ್ಲವೆ? ಎಂದರೆ ಹಾಗಲ್ಲ ಅವನ ಮನೆಯಲ್ಲಿ ಋದ್ಧಿ-ಸಮೃದ್ಧಿ ಸಂಪಗಳುತ್ತು ತುಂಬಿದ್ದುವು. ಮಹಾಭಾರತದಲ್ಲಿ ಹೇಳಿರುವಂತೆ ಅವನ ಮನೆಯೂ ದುರ್ಯೋಧನನ ಮನೆಗೆ ಸದೃಶವಾಗಿತ್ತು. ಧೃತರಾಷ್ಟ್ರನಂತೆಯೇ ಅವನೂ ಸಂಪತ್-ಸಮೃದ್ಧನಾಗಿದ್ದನು,

"ತ್ಯಕ್ತ್ವಾ ಸ್ವಗೃಹಮೃದ್ಧಿಮತ್" ಎಂದು ಹೇಳಿದ್ದಾರೆ, ಅವನ ಗೃಹತ್ಯಾಗಕ್ಕೆಯಾವ ಸಾಂಸಾರಿಕ ವಸ್ತುಗಳ ಅಭಾವವೂ ಕಾರಣವಲ್ಲ. ಅದ್ಭುತ ವೈರಾಗ್ಯವೇಕಾರಣವು.

ದುರ್ಯೋಧನನ ಮನೆಗಿಂತಲೂ ಇವನ ಮನೆಯಲ್ಲಿ ಒಂದು ವೈಶಿಷ್ಟ್ಯ ವಿದ್ದಿತು.

ಸರ್ವೇಶ್ವರನಾದ ಭಗವಂತನು ಪಾಂಡವರ ದೂತನಾಗಿ ಹಸ್ತಿನಾಪುರಕ್ಕೆ ಬಂದಿದ್ದನಷ್ಟೆ. ಆವಾಗ ದುರ್ಯೋಧನನು ಆಮಂತ್ರಿಸಿದರೂ ಕೃಷ್ಣನು ಅವನ ಮನೆಗೆ ಹೋಗಲಿಲ್ಲ - ಆಹ್ವಾನವಿಲ್ಲದಿದ್ದರೂ ವಿದುರನ ಮನೆಗೆ ತಾನಾಗಿ ಹೋದನು. ಕಾರಣವಿಷ್ಟೆ **"ಭಕ್ತರ ಮನೆಯೆಂದರೆ, ಭಗವಂತನ ಮನೆ ತಾನೇ"** ವಿದುರನ ಮನೆಯನ್ನು ತನ್ನ ಮನೆಯೆಂದೇ ಭಗವಂತನು ತಿಳಿದಿದ್ದನು, ತಾನಾಗಿ ಹೋಗಿ ಆತಿಥ್ಯವನ್ನು ಸ್ವೀಕರಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧಾರಣ ಮನೆಯನ್ನು ಬಿಡುವುದು ಒಂದು ವಿಷಯವಲ್ಲ. ಭಗವಂತನು ಯಾವ ಮನೆಯನ್ನು ತನ್ನದೆಂದು ತಿಳಿದಿದ್ದನೋ, ಎಲ್ಲಿ ಆತಿಥ್ಯವನ್ನು ಸ್ವೀಕರಿಸಿದ್ದನೋ, ಅಂತಹ ಪವಿತ್ರಪ್ರೇಮಸೂಚಕವಾದ ಮನೆಯನ್ನು ಬಿಡುವುದೆಂದರೆ ಅದೊಂದು ದುಃಖಕರವಾದ ವಿಚಾರ.

ನೋಡಿ, ಮಾನವನು ಮನೆಗಾಗಿ ಹುಟ್ಟಿಲ್ಲ. ಅವನ ಜನ್ಮವಾದರೊ, ಭಗವದ್ಭಜನೆಗಾಗಿ. ಭಗವದ್ದರ್ಶನಕ್ಕಾಗಿ ಆಗಿದೆ. ಹಾಗಾದರೇನೇ ಮಾನವನ ಸಾರ್ಥಕತೆಯು.

ಛಳಿ, ಗಾಳಿ, ಮಳೆ, ಬಿಸಿಲು ಇವುಗಳಿಂದ ರಕ್ಷಿತನಾಗಿ. ಭಗವತ್ಸೇವೆಯನ್ನು ನಡೆಸಿದರೆ "ಗೃಹವು" ಸಾರ್ಥಕವಾದಂತೆ. **(ಶರಣಂ ಗೃಹ ರಕ್ಷಿತ್ರೋಃ)**

ಕೇವಲ ಗೃಹಾಲಂಕಾರಗಳಲ್ಲಿಯೇ ಮಗ್ನನಾಗಿ ಭಗವಂತನನ್ನು ಮರೆತು ಬಿಟ್ಟರೆ ಆ ಗೃಹದ ಸಾರ್ಥಕತೆಯು ಹೇಗಾದೀತು ? ಅದು ಕೇವಲ ಬಂಧನ – ನರಕ.

"ನಿರಾತಂಕವಾಗಿ ಭಗವದ್ಭಜನೆಯನ್ನು ಮಾಡೋಣ" ಎಂದು ಮಹಾತ್ಮರೂ ಸಹ ಗೃಹ ನಿರ್ಮಾಣದಲ್ಲಿ ಆಸಕ್ತರಾಗುತ್ತಾರೆ.

ವಿಷಯ ಭೋಗಾಪೇಕ್ಷೆಯಿಂದ ಅವರು ಗೃಹನಿರ್ಮಾಣಕ್ಕೆ ಕೈ ಹಾಕುವುದಿಲ್ಲ.

ಪರೀಕ್ಷಿತನು ಕೇಳುತ್ತಾನೆ. ಮಹಾತ್ಮರೇ ವಿದುರನು ಭಗವಾನ್ ಮೈತ್ರೇಯರನ್ನು ಎಲ್ಲಿ ಯಾವಾಗ ಕಂಡನು ?

ನಹ್ಯಲ್ಪಾರ್ಥೋದಯಸ್ತಸ್ಯ, ವಿದುರಸ್ಯಾಮಲಾತ್ಮನಃ

ಮಹಾತ್ಮಾ ವಿದುರನು ಮೈತ್ರೇಯರನ್ನು ಕೇಳಿದ ಪ್ರಶ್ನೆ ಸಾಮಾನ್ಯವಾದುದಲ್ಲ.

ತಸ್ಮಿನ್ ವರೀಯಸಿ ಪ್ರಶ್ನ : ಸಾಧುವಾದೋ ಪಬೃಂ ಹಿತ :

ಅವನ ಪ್ರಶ್ನೆಗೆ ಸಾಧುಶಿರೋಮಣಿ ಮೈತ್ರೇಯನು ಉತ್ತರಿಸಿದನೆಂದರೆ ವಿದುರನ ಪ್ರಶ್ನೆಯು ಅಸಾಮಾನ್ಯವಾದುದಾಗಿರಬೇಕು.

ನೋಡಿ, ಇಬ್ಬರು ಮಹಾತ್ಮರು ಕಲೆತರೆ ಲೌಕಿಕ ವಾರ್ತೆಗಳನ್ನಾಡುವುದಿಲ್ಲ. ಅವರು ಆಕಾರ, ರೂಪ, ಆಭಾಸದ ಚರ್ಚೆಯನ್ನು ಮಾಡುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರ ತತ್ತ್ವವನ್ನು ವಿಚಾರಿಸುತ್ತಾರೆ. ಜಗದ್ವ್ಯಾಪಾರಗಳೊಡನೆ ಅವರ ಸಂಬಂಧವಿರುವುದಿಲ್ಲ. ಅವರ ಬುದ್ಧಿಯು ಸಂಪೂರ್ಣವಾಗಿ ತತ್ತ್ವಗ್ರಾಹಿಣಿ ಯಾಗಿರುತ್ತದೆ.

ಪರೀಕ್ಷಿತನ ಪ್ರಶ್ನೆಯಿಂದ ಶ್ರೀ ಶುಕದೇವರಿಗೆ ಬಹಳ ಸಂತೋಷವಾಯಿತು. ಉತ್ತರಿಸತೊಡಗಿದರು.

ರಾಜನ್, ಅಂಧ ಧೃತರಾಷ್ಟ್ರನು ತನ್ನ ಮಕ್ಕಳು ದುರ್ಮಾರ್ಗಿಗಳೆಂದು ತಿಳಿದರೂ ಅವರನ್ನು ನಿಗ್ರಹಿಸಲು ಪ್ರಯತ್ನಿಸಲಿಲ್ಲ. ನನ್ನವರು ಎಂಬ ಮೋಹ ದಲ್ಲಿ ಬಿದ್ದು ದುಷ್ಟಪುತ್ರರ ಪಕ್ಷವನ್ನೇ ಪೋಷಿಸುತ್ತಿದ್ದನು.

ನಾವುಗಳೂ ಸಹ ಇಂದು ಪಾರ್ಟಿ, ಪಕ್ಷ, ಪ್ರತಿಪಕ್ಷಗಳ ದುರವಸ್ಥೆಯನ್ನು ಕಾಣುತ್ತಿದ್ದೇವೆ. ನಮ್ಮವನು ಎಂದರೆ ಸಾಕು, ಏನು ಮಾಡಿದರೂ ಕೇಳುವವ ರಿಲ್ಲ. ಮತ್ತೊಬ್ಬನು ಎಷ್ಟೇ ಯೋಗ್ಯನಾಗಿದ್ದರೂ ಅವನಿಗೆ ತಿರಸ್ಕಾರವೇ ಹೊರತು ಪುರಸ್ಕಾರವಿಲ್ಲ. ಈ ಸ್ವಜನ ಪಕ್ಷಪಾತವು ಇಂದಿನದಲ್ಲ. ಅನಾದಿ ಕಾಲದಿಂದಲೂ ಬಂದಿದೆ.

ಧೃತರಾಷ್ಟ್ರನು ಎಷ್ಟೇ ಶಕ್ತಿಸಂಪನ್ನನಾದರೂ ಅತ್ಯಾಚಾರೀ ಪುತ್ರರನ್ನು ನಿಗ್ರಹಿಸಲು ಅಸಮರ್ಥನಾದನು. ಪಾಂಡವರು ಅನಾಥರೆಂದು ತಿಳಿದು ಲಾಕ್ಷಾ ಗೃಹದಲ್ಲಿ ಸುಡಿಸಿದನು. ಅಷ್ಟೇ ಅಲ್ಲ. ಪಾಂಡವರ ಧರ್ಮಪತ್ನಿಯಾದ ದ್ರೌಪದಿಯ ವಸ್ತ್ರಾಪಹಾರವು ತುಂಬಿದ ಸಭೆಯಲ್ಲಾಯಿತು. ಅವಳ ಕಣ್ಣೀರಿ ನಿಂದ ಅವಳು ಉಟ್ಟಿದ್ದ ಬಟ್ಟೆಗಳು ತೊಯ್ದುಹೋಗಿದ್ದುವು. ಆದರೂ ಧೃತ ರಾಷ್ಟ್ರನು ಈ ಕುತ್ಸಿತ ಕೆಲಸದಿಂದ ಮಗನನ್ನು ತಡೆಯಲಿಲ್ಲ.

ದುರ್ಯೋಧನನು ಕಪಟ ದ್ಯೂತವಾಡಿ, ಸತ್ಯವಂತರಾದ ಪಾಂಡವರನ್ನು ವನವಾಸಕ್ಕಟ್ಟಿದನು. ವನವಾಸದಿಂದ ಹಿಂತಿರುಗಿದ ಯುಧಿಷ್ಠಿರಾದಿಗಳಿಗೆ ಪ್ರತಿಜ್ಞಾನುಸಾರವಾಗಿ ಕೊಡಬೇಕಾಗಿದ್ದ ಅರ್ಧರಾಜ್ಯವನ್ನು ಕೊಡಲಿಲ್ಲ.

ಪಾಂಡವರ ಪರವಾಗಿ, ಪುರುಷೋತ್ತಮನೇ ರಾಜದೂತನಾಗಿ ಬಂದು, "ಪಾಂಡವರಿಗೆ ರಾಜ್ಯವನ್ನು ಕೊಟ್ಟು ಸುಖವಾಗಿರು" ಎಂದು ಬೋಧಿಸಿದರೂ ದುಷ್ಟ ದುರ್ಯೋಧನಾದಿಗಳು ಅವನ ಮಾತನ್ನು ಪುರಸ್ಕರಿಸಲಿಲ್ಲ. ಭಗವಂತನ ವಚನಾಮೃತವನ್ನು ಸೇವಿಸುವಷ್ಟು ಅಲ್ಪ ಪುಣ್ಯವೂ ಅವನಲ್ಲಿ ಉಳಿದಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲಹೆಗಾಗಿ ವಿದುರನು ಕರೆಸಲ್ಪಟ್ಟನು.

ನೀತಿಶಾಸ್ತ್ರದಲ್ಲಿ ನಿಪುಣನಾದ ವಿದುರನು, ಅತ್ಯುಪಯುಕ್ತವಾದ, ಶಾಸ್ತ್ರ ಸಮ್ಮತವಾದ ಸಲಹೆಯನ್ನು ಕೊಟ್ಟನು. ಅದು 'ವಿದುರನೀತಿ' ಎಂದು ಇಂದೂ ಸಹ ಪ್ರಸಿದ್ಧಿಯಲ್ಲಿದೆ.

ವಿದುರನು ಹೇಳಿದನು :-

ಅಜಾತಶತ್ರೋಃ ಪ್ರತಿಯಚ್ಛದಾಯಂ
ತಿತಿಕ್ಷತೋ ದುರ್ವಿಷಹಂ ತವಾಗ :
ಸಹಾನುಜೋ ಯತ್ರ ವೃಕೋದರಾಹಿಃ
ಶ್ವಸನ್ ರುಷಾ ಯತ್ತ್ವಮಲಂ ಬಿಭೇಷಿ||

ಮಹಾರಾಜ, ನೀನು ಧರ್ಮಕ್ಕನುಗುಣವಾಗಿ ಅಜಾತಶತ್ರುವಾದ ಯುಧಿಷ್ಠಿರನಿಗೆ, ಅವನ ರಾಜ್ಯವನ್ನು ಕೊಟ್ಟುಬಿಡು. ನೀವುಗಳು ಮಾಡಿರುವ ಅನಂತ ಅಪರಾಧಗಳನ್ನೂ ಅವನು ಕ್ಷಮಿಸಿ ಬಿಡುವನು.

ಆ ಭೀಮರೂಪೀ ಘಟಸರ್ಪದಿಂದ, ನೀವುಗಳೂ ಹೆದರುತ್ತಿರುವಿರಿ. ನಿಮ್ಮೊಡನೆ ಸೇಡು ತೀರಿಸಿಕೊಳ್ಳಲು ಅವನು ತಮ್ಮಂದಿರೊಡನೆ ಸಮಯವನ್ನು ಕಾಯುತ್ತಾ ಭುಸುಗುಟ್ಟುತ್ತಿರುವನು.

ಅಷ್ಟೇ ಅಲ್ಲ, ಭಗವಾನ್ ಪುರುಷೋತ್ತಮನು,

ಆಸ್ತೇ ಸ್ವಪುರ್ಯಾಂ ಯದು ದೇವದೇವೋ
ವಿನಿರ್ಜಿತಾಶೇಷ ನೃದೇವ ದೇವಃ

ಅವರ ಪಕ್ಷಪಾತಿಯಾಗಿ, ಮಮ "ಪಂಚಪ್ರಾಣಾಹಿ ಪಾಂಡವಾಃ" ಎಂದು ಅವರನ್ನು ರಕ್ಷಿಸಲು, ಬದ್ಧಕಂಕಣನಾಗಿ ಕೃಷ್ಣನು ದ್ವಾರಕಾಪುರದಲ್ಲಿ ವಿರಾಜಮಾನನಾಗಿದ್ದಾನೆ. ಸಕಲ ರಾಜ-ಮಹಾರಾಜರೆಲ್ಲರೂ ಅವನ ಅಧೀನದಲ್ಲಿದ್ದಾರೆ. ದೇವ-ಬ್ರಾಹ್ಮಣರೆಲ್ಲರೂ ಅವನ ಪಕ್ಷದಲ್ಲಿದ್ದಾರೆ.

ಯಾರನ್ನು ನೀನು ಮಗನೆಂದು ತಿಳಿದುಕೊಂಡು ಪೋಷಿಸುತ್ತಿರುವೆಯೋ, ಯಾರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಿರುವೆಯೋ, ಆ ದುಷ್ಟ, ದುರ್ಮದ, ದುಶ್ಕೃತ, ದುರ್ಯೋಧನನ ರೂಪದಲ್ಲಿ, ಮೂರ್ತಿಮಾನ್ ಮೃತ್ಯುವೇ ನಿನ್ನ

Sri Vidyabharathi Book Centre, Sringeri

 CC-O. In Public Domain. Digitized by eGangotri

ಮನೆಯಲ್ಲಿ ಕುಳಿತಿದೆ ಎಂದು ತಿಳಿದುಕೊ. ಏಕೆಂದರೆ ಅವನು ಶ್ರೀ ಕೃಷ್ಣ ದ್ವೇಷಿಯು, ಆದರಿಂದಲೇ ಶ್ರೀಹೀನನು. ನೀನು ಸ್ವಕುಲ-ರಕ್ಷಣೆಯನ್ನು ಬಯಸುವೆಯಾದರೆ ಈ ಅಮಂಗಳನನ್ನು ಬೇಗ ದೂರಮಾಡು.

ಯದ್ಯಪಿ ವಿದುರನ ಸಲಹೆಯು, ಸಾಧು ಜನರೆಲ್ಲರಿಗೂ ಮಾನ್ಯವಾಗಿದ್ದಿತು. ಆದರೆ ದುರ್ಯೋಧನ, ದುಶ್ಶಾಸನ, ಕರ್ಣಾದಿಗಳಿಂದ ಕೇಳಲೂ ಆಗದೆ ಉರಿದದ್ದರು. ದುರ್ಯೋಧನನ ಕಣ್ಣುಗಳಿಂದ ಕಿಡಿಗಳು ಹಾರಿದುವು. ತುಟಿಗಳು ಅದುರಿದುವು. ಎದ್ದುನಿಂತು ವಿದುರನನ್ನು ತಿರಸ್ಕರಿಸುತ್ತಾ ಹೇಳಿದನು.

ಕಏನ ಮತ್ರೋಪ ಜುಹಾವ ಜಿಹ್ಮಂ
ದಾಸ್ಯಾಃ ಸುತಂ ಯದ್ಬಲಿನೈವ ಪುಷ್ಟ :

ಯಾರು ಈ ದಾಸೀಪುತ್ರನನ್ನು ಕಪಟಿಯನ್ನು ಇಲ್ಲಿಗೆ ಕರೆದವರು ? ನಮ್ಮ ಬಲಿರೂಪ ಅನ್ನದಾನದಿಂದ ಪುಷ್ಟನಾಗಿ ನಮಗೇ ವಿರುದ್ಧವಾಗಿ ನಡಯಲಿಚ್ಛಿಸುತ್ತಾನೆ... ಇವನು ಯಾರೇ ಆಗಿರಲಿ ವಧಾರ್ಹನು. ಹೋಗಲಿ, ಪಟ್ಟಣದಿಂದ ನಿರ್ವಾಸಿತನನ್ನಾಗಿ ಮಾಡಿ.

ತನ್ನ ಹಿರಿಯ ಸಹೋದರನ ಮುಂದೆಯೇ ಇಂತಹ ಮರ್ಮಭೇದಕ ನುಡಿಗಳನ್ನು ಕೇಳಬೇಕಾಗಿ ಬಂದರೂ ವಿದುರನು ಖತಿಗೊಳ್ಳಲಿಲ್ಲ. ಧೃತರಾಷ್ಟ್ರನು ಪ್ರತಿಭಟಿಸಲೂ ಇಲ್ಲ. ಇದೆಲ್ಲವೂ ಮಾಯೆಯ ಆಟವೆಂದೇ ತಿಳಿದ ವಿದುರನು ಧನುರ್ಬಾಣಗಳನ್ನು ಅಲ್ಲಿಯೇ ಬಾಗಿಲಿನಲ್ಲಿ ಬಿಸಾಕಿ ಹಸ್ತಿನಾಪುರದಿಂದ ಹೊರಟು ಬಿಟ್ಟನು.

ಅವನು ಇಚ್ಛಿಸಿದ್ದರೆ ಪಾಂಡವರ ಪಕ್ಷವನ್ನು ಸೇರಿ ಯುದ್ಧ ಮಾಡಬಹುದಾಗಿದ್ದಿತು. ಯೋಗ್ಯ ಸ್ಥಾನ-ಮಾನಗಳೂ ದೊರಕುತ್ತಿದ್ದವು "ನಾನು ಹಾಗೆ ಮಾಡುವವನಲ್ಲ" ಎಂಬುವುದನ್ನು ತೋರಿಸುವುದಕ್ಕಾಗಿಯೇ ಧನುರ್ಬಾಣಗಳನ್ನು ಬಿಸಾಕಿ ಹೊರಟನು.

ವಿದುರನಂತಹ ಪವಿತ್ರಾತ್ಮರು ಎಲ್ಲರಿಗೂ ದೊರಕಲಾರರು. ಪೂರ್ವ ಪುಣ್ಯದಿಂದ ದುರ್ಯೋಧನನಿಗೆ ದೊರಕಿದ್ದರೂ ವಿದುರನನ್ನು ಉಪಯೋಗಿಸಿ ಕೊಳ್ಳಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದುರನು ಹಸ್ತಿನಾಪುರದಿಂದ ಹೊರಟು ಪುಣ್ಯಸಂಚಯಕ್ಕಾಗಿ, ತೀರ್ಥಾಟನೆಯನ್ನು ಮಾಡುತ್ತಾ, ಭಗವಂತನ ವಿವಿಧ ರೂಪಗಳನ್ನು ಸಂದರ್ಶಿಸುತ್ತಾ, ತೀರ್ಥಯಾತ್ರಾಮಗ್ನನಾದನು.

ನೋಡಿ, ತೀರ್ಥಗಳ ವಿಲಕ್ಷಣತೆಯೆಂದರೆ, ಅಲ್ಲಿಗೆ ಹೋದರೆ ಭಗವಂತನ ನೆನಪು ಬರುತ್ತದೆ. ಪೇಟೆಗಳಲ್ಲಿ ಅಲೆದಾಡಿದರೆ, ವಿಷಯ ಭೋಗಗಳ ಆಕಾಂಕ್ಷೆಯು ಉದಯಿಸುತ್ತದೆ. ಭಗವಂತನ ಸ್ಮರಣೆಯು ಬರುವುದಿಲ್ಲ ಭಗವಂತನ ಲೀಲಾವಿಭೂತಿಗಳನ್ನು ಮನನ ಮಾಡುವುದರಿಂದ, ಭಗವಂತನಲ್ಲಿ ಮನಸ್ಸು ಲೀನವಾಗುತ್ತದೆ.

ಗಂಗಾದರ್ಶನ, ಹಿಮಾಲಯ ದರ್ಶನದಿಂದ ನೇರವಾಗಿ ಮನಸ್ಸು ಭಗವಂತನಲ್ಲಿಗೆ ನುಗ್ಗುತ್ತದೆ. ಏಕಾದಶೀ, ಶಿವರಾತ್ರಿ, ಜನ್ಮಾಷ್ಟಮೀ ಇಂತಹ ಪರ್ವಕಾಲಗಳು ಭಗವಂತನ ಸ್ಮರಣೆಯನ್ನು ಮಾಡಿಸುತ್ತವೆ. ದೇವತಾಮೂರ್ತಿಗಳ, ಮಹಾಭಕ್ತರ ಸಂದರ್ಶನದಿಂದ ಮಮತೆಯು ದೂರ ಸರಿಯುತ್ತದೆ. ಭಗವಂತನ ಭಜನ-ಚಿಂತನೆಗಳು ನಡೆದು ಅಂತಃಕರಣವು ಶುದ್ಧವಾಗುತ್ತದೆ. ಮಹಾತ್ಮರೂ ಸಹ ತೀರ್ಥಯಾತ್ರೆಯನ್ನು ಮಾಡುತ್ತಾರೆ. ತೀರ್ಥಯಾತ್ರೆ ಮಾಡುವುದಕ್ಕೂ ನಿಯಮಗಳುಂಟು. ಶಾಸ್ತ್ರಕಾರರು ಹೇಳುತ್ತಾರೆ :–

> ಯಸ್ಯ ಹಸ್ತೌಚ ಪಾದೌಚ ಮನಶ್ಚೈವ ಸುಸಂಯುತಂ
> ದಾನಂ ತಪಶ್ಚ ಕೀರ್ತಿಶ್ಚ ಸತೀರ್ಥ ಫಲಮಶ್ನುತೇ ||

ಯಾರ ಹಸ್ತ-ಪಾದಗಳು ಶುದ್ಧವಾಗಿವೆಯೊ, ಮನಸ್ಸು ಸ್ವಾಧೀನದಲ್ಲಿದೆಯೋ, ಕೀರ್ತನಕಾರನೊ ಅವನು ತೀರ್ಥಯಾತ್ರೆಯ ಉತ್ತಮ ಫಲವನ್ನು ಹೊಂದುತ್ತಾನೆ.

ಉತ್ತಮ ತೀರ್ಥಯಾತ್ರಿಯಾದ ವಿದುರನೂ ಸಹ, ಅನೇಕ ತೀರ್ಥಸ್ಥಾನಗಳನ್ನೂ, ನದೀ-ಸರೋವರಗಳನ್ನೂ, ದೇವೀ-ದೇವಾಲಯಗಳನ್ನೂ, ವನ ಪರ್ವತಗಳನ್ನೂ ಸುತ್ತುತ್ತಾ, ತೀರ್ಥವಿಧಿಗಳನ್ನುನಡೆಸುತ್ತಾ ಸಂಚರಣಶೀಲನಾದನು. ವಿದುರನು ಅವಧೂತ ವೇಷದಲ್ಲಿ ಸ್ವಚ್ಛಂದತೆಯಿಂದ ಸಂಚರಿಸುತ್ತಿದ್ದನು. ಯಾರೂ ಅವನನ್ನು ಗುರುತಿಸಲಾಗುತ್ತಿರಲಿಲ್ಲ. ಯಾವ ಆಕರ್ಷಕ

Sri Vidyabharathi Book Centre, Sringeri

 CC-O. In Public Domain. Digitized by eGangotri

ವಸ್ತ್ರಾದಿಗಳೂ ಇರಲಿಲ್ಲ. ಸಿಕ್ಕಿದ ಆಹಾರದಲ್ಲಿ ಸಂತೃಪ್ತನಾಗುತ್ತಿದ್ದನು. ಭೂಶಾಯಿಯಾಗಿದ್ದುಕೊಂಡು ವ್ರತಪರಿಪಾಲನೆಯಲ್ಲಿ ನಿರತನಾಗಿದ್ದನು.

ವಿದುರನು ಅವಧೂತ ವೇಷದಲ್ಲಿ ಸುತ್ತುತ್ತಾ ಸುತ್ತುತ್ತಾ ಪ್ರಭಾಸ ಕ್ಷೇತ್ರವನ್ನು ತಲಪಿದನು.

ಅವಧೂತ ಶಬ್ದಕ್ಕೆ ಭಗವಾನ್ ದತ್ತಾತ್ರೇಯರು ಹೀಗೆ ಅರ್ಥವನ್ನು ಹೇಳುತ್ತಾರೆ.

ಅ:– ಆಶಾಪಾಶ ವಿನಿರ್ಮುಕ್ತನು, ಆದಿಮಧ್ಯಾಂತ ನಿರ್ಮಲನು, ಸದಾನಂದ ಸ್ಥಿತನು.

ವ:– ವಾಸನಾವರ್ಜಿತನು, ವಿಷ್ಣುತತ್ತ್ವ ಪ್ರತಿಪಾದಕನು, ಕೇವಲ ವರ್ತಮಾನ ಸ್ಥಿತನು.

ಧೂ:– ಧೂಳೀಧೂಸರ ಗಾತ್ರನು, ಪವಿತ್ರಮನಸ್ಕನು, ನಿರಾಮಯನು, ಧಾರಣಾ-ಧ್ಯಾನ ನಿರ್ಮುಕ್ತನು.

ತ:– ತತ್ತ್ವಚಿಂತಾನಿಮಗ್ನನು, ಚಿಂತಾಚೇಷ್ಟಾ ವಿವರ್ಜಿತನು, ತಮೋಽಹಂಕಾರ ನಿರ್ಮುಕ್ತನು.

ಅವಧೂತ ಶಬ್ದಕ್ಕೆ "ತಿರಸ್ಕೃತ" ಎಂಬ ಅರ್ಥವನ್ನೂ ಹೇಳುತ್ತಾರೆ. ಗ್ರಾಮದಿಂದ, ಮನೆಯಿಂದ ತಿರಸ್ಕರಿಸಿ; ಯಾರನ್ನು ಓಡಿಸುವರೊ ಅವನು ಅವಧೂತನು. ಅಸಂಸ್ಕೃತ ದೇಹ :– ವಲ್ಕಲಾಜಿನಧಾರೀ.

ವಿದುರನು ಪ್ರಭಾಸಕ್ಷೇತ್ರಕ್ಕೆ ಬರುವ ಹೊತ್ತಿಗೆ, ಭಗವಾನ್ ಶ್ರೀಕೃಷ್ಣನ ಅನುಗ್ರಹದಿಂದ ಪಾಂಡವರು ಏಕಛತ್ರ ಸಾಮ್ರಾಜ್ಯಾಧಿಪತಿಗಳಾಗಿದ್ದರು. ಅಲ್ಲಿ ವಿದುರನು ಕೌರವರ ನಾಶವಾರ್ತೆಯನ್ನು ಕೇಳಿದನು. ತಮ್ಮಿಂದಲೇ ಹುಟ್ಟಿದ ಕಿಚ್ಚಿನಿಂದ, ಬಿದಿರುಮೆಳೆಗಳು ನಾಶವಾಗುವಂತೆ ಎಲ್ಲಾ ಕೌರವ ಬಂಧುಗಳೂ ಪರಲೋಕವನ್ನೈದಿದ್ದರು. ವಿದುರನಿಗೆ ಕೇಳಿ ಬಹಳ ದುಃಖವಾಯಿತು. ಸರಸ್ವತೀ ನದೀ ದಡಕ್ಕೆ ಬಂದನು.

ಅಲ್ಲಿ ತ್ರಿತ, ಮನು, ಉಶನಾ, ಪೃಥು, ಅಗ್ನಿ, ಅಸಿತ, ವಾಯು, ಸುದಾಸ, ಗಾ, ಗುಹ, ಶ್ರಾದ್ಧದೇವ ನಾಮಗಳಿಂದ ಪ್ರಸಿದ್ಧಿ ಪಡೆದಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹನ್ನೊಂದು ದಿವ್ಯ ಕ್ಷೇತ್ರಗಳನ್ನೂ ಸಂದರ್ಶಿಸಿದನು. ಹಾಗೂ ಅನೇಕ ವೈಷ್ಣವ ಕ್ಷೇತ್ರಗಳನ್ನೂ ಸಂದರ್ಶಿಸಿದನು

ಅಲ್ಲಿಂದ ಧನ, ಧಾನ್ಯಪೂರ್ಣವಾದ ಸೌರಾಷ್ಟ್ರ, ಸೌವೀರ, ಮತ್ಸ್ಯ, ಕುರು, ಜಾಂಗಲಾದಿ ದೇಶಗಳ ಮೂಲಕ, ಯಮುನಾ ತಟವನ್ನು ಸೇರಿದನು. ಅಲ್ಲಿ ಪರಮ ಭಾಗವತೋತ್ತಮನಾದ ಉದ್ಧವನ ದರ್ಶನವಾಯಿತು.

ಉದ್ಧವನು ಶ್ರೀ ಕೃಷ್ಣನ ಪರಮಸೇವಕನು, ಭಕ್ತನು, ಹಾಗೂ ಶಾಂತ ಸ್ವಭಾವದವನು. ಅವನು ಮೊದಲು ಬೃಹಸ್ಪತಿಗಳ ಶಿಷ್ಯನಾಗಿದ್ದನು. ಇಂತಹ ಉದ್ಧವನನ್ನು ಕಾಣುತ್ತಲೇ ವಿದುರನು ಪರಮ ಪ್ರೇಮಾದರಗಳಿಂದ ಗಾಢಾಲಿಂಗನ ಮಾಡಿಕೊಂಡನು. ಹಾಗೂ ತನ್ನ ಪರಮ ಸ್ನೇಹಿತನಾದ ಶ್ರೀಕೃಷ್ಣನ ಹಾಗೂ ಅವನ ಅನುಯಾಯಿಗಳ ಕ್ಷೇಮ ಸಮಾಚಾರವನ್ನು ಕೇಳಿದನು.

ಕ್ಷೇಮ ಸಮಾಚಾರವನ್ನು ಕೇಳುವ ವೈಖರಿಯನ್ನು ಇಲ್ಲಿ ನೋಡಿ. ಎಷ್ಟು ವಿಚಾರಗಳು ತಿಳಿಯುತ್ತವೆ ? ಎಂತಹ ಆತ್ಮೀಯತೆ ?

ವಿದುರನು ಕೇಳುತ್ತಾನೆ. ಪ್ರಿಯ ಉದ್ಧವ, ಪುರಾಣಪುರುಷರಾದ ಬಲರಾಮ-ಶ್ರೀಕೃಷ್ಣರು ಬ್ರಹ್ಮಾದಿಗಳ ಪ್ರಾರ್ಥನೆಗನುಗುಣವಾಗಿ ಭೂಭಾರವನ್ನು ಇಳುಹಲು ಅವತಾರ ಮಾಡಿರುವರಷ್ಟೆ. ಅವರು ಸರ್ವರಿಗೂ ಆನಂದದಾಯಕವಾಗಿ ವಸುದೇವನ ಮನೆಯಲ್ಲಿ ಕುಶಲಿಗಳಾಗಿರುವರೆ ?

ನಮ್ಮ ಕುರುವಂಶಿಗಳಿಗೆ ಪ್ರಿಯ ಸ್ನೇಹಿತನಾದ ವಸುದೇವನು, ತನ್ನ ಸಹೋದರಿಯರಾದ ಕುಂತೀ ಆದಿಯವರಿಗೆ ಬೇಕಾದ್ದನ್ನೆಲ್ಲವನ್ನೂ ಕೊಡುತ್ತಿರುವನಲ್ಲವೇ ?

ಯಾದವ ಸೇನಾಪತಿಯಾದ ಪ್ರದ್ಯುಮ್ನನು ಕುಶಲಿಯೇ? ರುಕ್ಮಿಣಿಯು ಕಾಮದೇವನನ್ನೇ ಬ್ರಾಹ್ಮಣರ ಆಶೀರ್ವಾದ ಬಲದಿಂದ ಪುತ್ರನನ್ನಾಗಿ ಪಡೆದಳು.

ಶ್ರೀ ಕೃಷ್ಣನ ಕೃಪಾ ವಿಶೇಷದಿಂದ ಪುನಃ ಸಿಂಹಾಸನವನ್ನು ಪಡೆದ ಉಗ್ರಸೇನ ಮಹಾರಾಜನು ಸಾತ್ವತರು ವೃಷ್ಣಿಗಳು, ದಾಶಾರ್ಹರು, ಯಾದವರೊಡನೆ ಸುಖವಾಗಿರುವನೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕೃಷ್ಣನಂತೆಯೇ ಬಲ-ಪರಾಕ್ರಮ ಸಂಪನ್ನನಾದ ಶ್ರೇಷ್ಠ ರಥಿಯಾದ ಸಾಂಬನು ಕ್ಷೇಮವೇ ? ಇವನು ಪಾರ್ವತಿಯ ಗರ್ಭಸಂಭೂತನಾದ ಕಾರ್ತಿಕೇಯನು. ಅನೇಕ ವ್ರತಾಚರಣೆಗಳ ಪುಣ್ಯದಿಂದ ಜಾಂಬವತಿಯು ಅವನನ್ನು ಪುತ್ರನನ್ನಾಗಿ ಪಡೆದಿದ್ದಳು. ಇವನು ಅರ್ಜುನನಿಂದ ಧನುರ್ವಿದ್ಯಾ ರಹಸ್ಯವನ್ನೆಲ್ಲವನ್ನೂ ಅರಿತಿದ್ದನು. ಸಾತ್ಯಕಿಯು ಕುಶಲಿಯೆ ? ಶ್ರೀ ಕೃಷ್ಣ ಸೇವೆಯಿಂದ ಧನ್ಯರಾದ ಭಾಗವತರಲ್ಲಿ ಶ್ರೇಷ್ಠನಿವನು. ಶ್ರೀಕೃಷ್ಣನ ಚರಣ ಧೂಳಿಧೂಸರವಾದ ವ್ರಜಮಾರ್ಗಗಳಲ್ಲಿ ಬಿದ್ದು ಹೊರಳಾಡುತ್ತಿದ್ದ ಆ ಪರಮ ಕೃಷ್ಣಪ್ರೇಮಿ ಅಕ್ರೂರನು ಆನಂದದಿಂದಿರುವನೇ ?

ದೇವಮಾತಾ ಅದಿತಿಗೆ ಸಮಾನಳಾದ ಭೋಜವಂಶೀಯ ದೇವಕನ ಪುತ್ರೀ ದೇವಕಿಯು ಚೆನ್ನಾಗಿರುವಳೇ ? ಇವಳು ಗಾಯತ್ರಿಯು ವೇದಾರ್ಥವನ್ನು ಧರಿಸಿರುವಂತೆ ಶ್ರೀ ಕೃಷ್ಣನನ್ನು ತನ್ನ ದಿವ್ಯ ಗರ್ಭದಲ್ಲಿ ಧರಿಸಿದ್ದಳು.

ಭಕ್ತಜನೇಚ್ಛಾ ಪರಿಪೂರಕನಾದ ಭಗವಾನ್ ಅನಿರುದ್ಧನು ಆರೋಗ್ಯವೇ? ಅನಿರುದ್ಧನು ಶಾಸ್ತ್ರಯೋನಿಯೆಂದು ಹೇಳುತ್ತಾರೆ. ಏಕೆಂದರೆ-ಇವನು ಮನೋಮಯನು. ಮನಸ್ಸಿನ ಅದಿದೇವತೆ.

ಚಿತ್ತ – ಅಹಂಕಾರ – ಬುದ್ಧಿ–ಮನಸ್ಸು, ಇವುಗಳನ್ನು ಅಂತಃಕರಣ ಚತುಷ್ಟಯವೆಂದು ಕರೆಯುತ್ತಾರೆ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಇವರು ಅಂತಃಕರಣ ಚತುಷ್ಟಯದ ಅಧಿದೇವತೆಗಳು.

ಮನಸ್ಸಿಗೆ ಶಬ್ದಯೋನಿತ್ವವು ಪ್ರಸಿದ್ಧವಾಗಿದೆ. ಶ್ರುತಿಯು ಹೇಳುತ್ತದೆ

"ಮನಃಪೂರ್ವಂ, ವಾಗುತ್ತರ ರೂಪಂ, ಮನಸಾವಾ
ಅಗ್ರೇ ಸಂಕಲ್ಪಯತಿ, ಅಥವಾ ಜಾವ್ಯವಹರತಿ."
ಅನ್ಯೋಂತರ ಆತ್ಮಾ ಮನೋಮಯ :...
ತಸ್ಯಯು ಜುರೇವ ಶಿರ:
ಋುಗ್ದಕ್ಷಿಣ : ಪಕ್ಷ : ಸಾಮೋತ್ತರೆ : ಪಕ್ಷ :,

ಶಿಕ್ಷೆಯಲ್ಲಿಯೂ ಹೀಗೆ ಹೇಳುತ್ತಾರೆ.

ಆತ್ಮಾಬುಧ್ಯಾ ಸಮೇತ್ಯರ್ಥಾನ್ ಮನೋಯುಂಕ್ತೇ ವಿವಕ್ಷಯಾ।
ಮನ: ಕಾಯಾಗ್ನಿ ಮಾಹಂತಿ, ಸಪ್ರೇರಯತಿ ಮಾರುತಂ
ಮಾರುತ ಸ್ತೂರಸಿ ಚರನ್, ಮಂದ್ರಂ ಜನಯತಿ ಸ್ವರಂ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹೃದಯೇಶ್ವರನಾದ ಶ್ರೀಕೃಷ್ಣನನ್ನು ಅನನ್ಯ ಭಾವದಿಂದ ಅನುಸರಿಸುವ, ಹೃದೀಕ, ಸತ್ಯಭಾಮಾನಂದನನಾದ ಚಾರುದೇಷ್ಣ-ಗದ ಇವರುಗಳೆಲ್ಲರೂ ಕುಶಲಿಗಳೇ ? ಮಹಾರಾಜ ಯುಧಿಷ್ಠಿರನು ಅರ್ಜುನ ಹಾಗೂ ಶ್ರೀಕೃಷ್ಣರೆಂಬ ಎರಡು ಭುಜಗಳಿಂದ ಧರ್ಮ ಮರ್ಯಾದೆಯನ್ನು ರಕ್ಷಿಸುತ್ತಿರುವನಲ್ಲವೇ ?

ಮಯನಿರ್ಮಿತ ರಾಜಸಭೆಯಲ್ಲಿ ಧರ್ಮರಾಜನ ರಾಜ್ಯವೈಭವವನ್ನು ನೋಡಿ, ದುರ್ಯೋಧನನು ಸಹನೆಯನ್ನು ಕಳೆದುಕೊಂಡಿದ್ದನು. ಅಪರಾಧಿಗಳ ಬಗ್ಗೆ ಸದಾ ಬುಸುಗುಟ್ಟುವ ಭೀಮಸೇನನ ಕೋಪವು ಈಗ ಸ್ವಲ್ಪ ಮಟ್ಟಿಗಾದರೂ ಕಮ್ಮಿಯಾಗಿರುವುದೇ ? ಗದಾಯುದ್ಧದಲ್ಲಿ ಅವನ ಪಾದಘಾತವನ್ನು ಭೂದೇವಿಯು ಸಹಿಸಲಾರಳು.

ಯಾರ ಬಾಣಾಘಾತಗಳಿಂದ ಕಿರಾತರೂಪೀ ಶಂಕರನೂ ಪ್ರಸನ್ನನಾಗಿದ್ದನೊ, ಆ ಗಾಂಡೀವಧಾರೀ ಅರ್ಜುನನು ಪ್ರಸನ್ನನಾಗಿರುವನೇ ? ಈಗ ಅವನ ಶತ್ರುಗಳೆಲ್ಲರೂ ಶಾಂತರಾಗಿರಬಹುದು. ರೆಪ್ಪೆಗಳು ಕಣ್ಣುಗಳ ರಕ್ಷಣೆಯನ್ನು ಮಾಡುವಂತೆ, ಕುಂತೀಪುತ್ರ ಯುಧಿಷ್ಠಿರನು ಸದಾ ಎಚ್ಚರಿಕೆಯಿಂದ ಸುರಕ್ಷಿಸುವ ಮಾದ್ರೀಸುತರಾದ ನಕುಲ-ಸಹದೇವರು ಕ್ಷೇಮವೇ ? ಅವರು ಯುದ್ಧದಲ್ಲಿ ಇಂದ್ರನಿಂದ ಗರುಡನು ಅಮೃತವನ್ನು ವಶಪಡಿಸಿಕೊಂಡಂತೆ ರಾಜ್ಯವನ್ನು ವಶಪಡಿಸಿಕೊಂಡರು.

ಅಹೋ - ನಿರ್ಭಾಗ್ಯಳಾದ ಕುಂತೀದೇವಿಯು ರಾಜರ್ಷಿ ಪಾಂಡುವಿನ ವಿಯೋಗಾನಂತರ ಮೃತಪ್ರಾಯಳಾಗಿದ್ದರೂ, ಈ ಬಾಲಕರಿಗಾಗಿ ಪ್ರಾಣಧಾರಣೆಯನ್ನು ಮಾಡಿಕೊಂಡಿದ್ದಳು. ಮಹಾರಥಿಕನಾದ ಮಹಾತ್ಮಾ ಪಾಂಡುವು ಸಾಮಾನ್ಯ ವೀರನೇ ? ಕೇವಲ ಒಂದೇಒಂದು ಧನುಸ್ಸಿನ ಬಲದಿಂದ ಚತುರ್ದಿಕ್ಕುಗಳನ್ನೂ ಗೆದ್ದುಕೊಂಡು ಬಂದಿದ್ದನು.

ಸೌಮ್ಯ ಉದ್ಧವ, ಧೃತರಾಷ್ಟ್ರನ ಅಧಃಪತನವನ್ನು ನೆನೆಸಿಕೊಂಡರೆ ಬಾರಿಬಾರಿಗೂ ದುಃಖವುಂಟಾಗುತ್ತದೆ. ಪಾಂಡವರಿಗೆ ದ್ರೋಹವೆಸಗುವ ಮೂಲಕ ತನ್ನ ತಮ್ಮನಾದ ಪಾಂಡುವಿಗೇ ದ್ರೋಹ ಮಾಡಿದನು. ದುಷ್ಟಪುತ್ರರ ದೌಷ್ಟ್ಯಕ್ಕೆ ಬೆಂಬಲಕೊಟ್ಟು, ಹಿತಕಾರಿಯಾದ ನನ್ನನ್ನೂ ಹೊರಕ್ಕಟ್ಟಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೂ–ಮಿತ್ರ, ನಾನಿದಕ್ಕಾಗಿ ದುಃಖಿಸುವುದಿಲ್ಲ. ಆಶ್ಚರ್ಯಗೊಳ್ಳುವುದೂ ಇಲ್ಲ. ಜಗದ್ವಿಧಾತಾ ಶ್ರೀಕೃಷ್ಣನ ಲೀಲೆಗೆ ತಕ್ಕಂತೆ ಜನಗಳ ಮನೋವೃತ್ತಿಗಳು ವ್ಯತ್ಯಾಸವಾಗುತ್ತವೆ. ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ಎಲ್ಲೆಡೆಯಲ್ಲಿಯೂ ಸಂಚರಿಸುತ್ತಿದ್ದೇನೆ

ಯದ್ಯಪಿ, ಕೌರವರು ಭಗವಂತನಿಗೆ ಮಹಾಪರಾಧಗಳನ್ನೇ ಮಾಡಿದರು. ಆದರೂ ಭಗವಂತನು ಕ್ಷಮಿಸುತ್ತಲೇ ಬಂದನು. ಏಕೆಂದರೆ ಅವರೊಡನೆ ಭೂಭಾರಕರಾಗಿದ್ದ ಕುಮಾರ್ಗಿ ಅನೇಕಾನೇಕ ರಾಜರುಗಳ ಸಂಹಾರವಾಗಬೇಕಾಗಿದ್ದಿತು.

ಭಗವಂತನೇ ಜನ್ಮಕರ್ಮರಹಿತನು. ಆದರೂ ದುಷ್ಟನಾಶಕ್ಕಾಗಿ, ಭಕ್ತರುಗಳ ಸಂತೋಷಕ್ಕಾಗಿ, ಶ್ರೀಕೃಷ್ಣನಿಗೂ ಜನ್ಮಕರ್ಮಗಳುಂಟು. ಇಲ್ಲದಿದ್ದರೆ ಯಾರು ತಾನೇ ಭಗವಂತನಿರಲಿ, ಸಾಮಾನ್ಯರೂ ಸಹ ದೇಹಬಂಧನಕ್ಕೆ ಸಿಲುಕಿಕೊಳ್ಳುವುದಿಲ್ಲ. ಅಂದಮೇಲೆ ಕೃಷ್ಣನೇಕೆ ಸಿಲುಕಿಕೊಂಡಾನು ?

ಪ್ರಿಯ ಮಿತ್ರ. ಹೀಗೆ ಅಜನ್ಮನಾದರೂ ಶರಣಾಗತ ರಕ್ಷಣೆಗಾಗಿ, ಯದುಕುಲಾವತಾರಿಯಾದ ಶ್ರೀಕೃಷ್ಣನ ದಿವ್ಯವಾರ್ತೆಗಳನ್ನು ತಿಳಿಸು.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ಪ್ರಥಮೋಽಧ್ಯಾಯ

ತೃತೀಯ ಸ್ಕಂಧ, ಎರಡನೆಯ ಅಧ್ಯಾಯ
ಓಂ ನಮೋ ಭಗವತೇ ವಾಸುದೇವಾಯ
ಉದ್ಧವನಿಂದ ಭಗವಂತನ ಬಾಲಲೀಲಾವರ್ಣನೆ

ಶ್ರೀ ಶುಕದೇವರು ರಾಜಾ ಪರೀಕ್ಷಿತನಿಗೆ ವಿವರಿಸುತ್ತಿದ್ದಾರೆ.

ವಿದುರನ ಪ್ರಶ್ನೆಗಳಿಂದ ಉದ್ಧವನ ಹೃದಯವು ಶ್ರೀಕೃಷ್ಣಪ್ರೇಮದಿಂದ ತುಂಬಿಹೋಯಿತು. ಅವನ ಬಾಲ್ಯಸ್ಮೃತಿಗಳು ಹೃದಯಪಟಲದ ಮೇಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೇಲತೊಡಗಿದವು. ಹೃದಯವು ತುಂಬಿಬಂದಿತು. ಏನನ್ನೂ ಉತ್ತರಿಸ ಲಾಗಲಿಲ್ಲ.

ಉದ್ಧವನು ಐದು ವರ್ಷದವನಿದ್ದಾಗಲೇ ಶ್ರೀಕೃಷ್ಣಮೂರ್ತಿಯನ್ನು ಪೂಜಿಸುತ್ತಾ ತನ್ಮಯನಾಗುತ್ತಿದ್ದನು. ತಾಯಿಯು ಊಟಕ್ಕೆ ಕರೆದರೂ ಪೂಜೆಯಲ್ಲಿಯೇ ತತ್ಪರನಾಗಿರುತ್ತಿದ್ದನು. ಈಗಲಾದರೂ ವಯಸ್ಸಾಗಿದೆ. ಶ್ರೀಕೃಷ್ಣಸೇವೆಯಲ್ಲಿಯೇ ಆಯುಷ್ಯವನ್ನು ಕಳೆದಿದ್ದಾನೆ. ವಿದುರನ ಪ್ರಶ್ನಾವಳಿ ಗಳಿಂದ ಅವನ ಹೃದಯವು ಕಲಕಿಹೋಗಿದೆ. ಶ್ರೀಕೃಷ್ಣವಿರಹದಿಂದ ಪೀಡಿತ ನಾಗಿದ್ದಾನೆ. ಹೇಗೆ ತಾನೇ ಉತ್ತರಿಸಿಯಾನು ? ಬಾಲ್ಯದಿಂದಲೂ ಶ್ರೀಕೃಷ್ಣ ನೊಡನೆ ಆಟವಾಡಿದವನು, ಮುಹೂರ್ತಕಾಲ ಬಾಯಿನಿಂದ ಶಬ್ದಗಳು ಹೊರಡ ಲಿಲ್ಲ. ಶ್ರೀಕೃಷ್ಣ - ಚರಣಾರವಿಂದ - ಮಕರಂದ - ಪಾನಾದರದಲ್ಲಿ ಮಗ್ನನಾಗಿ ಬಿಟ್ಟನು. ಕೃಷ್ಣಸ್ಮರಣೆಯಿಂದ ಆನಂದಿತನಾದನು. ಶರೀರವು ರೋಮಾಂಚಿತ ವಾಯಿತು. ಆನಂದಾಶ್ರುಗಳು ಉದುರತೊಡಗಿದುವು. ಈ ರೀತಿ ಪ್ರೇಮ ಪ್ರವಾಹದಲ್ಲಿ ಮುಳುಗಿರುವ ಉದ್ಧವನನ್ನು ನೋಡಿ ವಿದುರನು ಆನಂದಿತ ನಾದನು, ಕೃತಕೃತ್ಯತೆಯನ್ನು ಪಡೆದನು. ಉದ್ಧವನು ನಿಧಾನವಾಗಿ ಭಗವಂತನ ಪ್ರೇಮಧಾಮದಿಂದ ಇಳಿದುಬಂದನು. ಕಣ್ಣುಗಳನ್ನೊರೆಸಿಕೊಂಡು ಭಗವಲ್ಲೀಲೆ ಗಳನ್ನು ಸ್ಮರಿಸುತ್ತಾ ಹೇಳಿದನು.

ಕೃಷ್ಣದ್ಯುಮಣಿ ನಿಮ್ಲೋಚೇ, ಗೀರ್ಣೇಷ್ವಜಗರೇಣಹ,
ಕಿಂನುನಃ ಕುಶಲಂ ಬ್ರೂಯಾಂ, ಗತಶ್ರೀಷು ಗೃಹೇಷ್ವಹಮ್॥

ವಿದುರ, ಕೃಷ್ಣರೂಪೀ ಸೂರ್ಯನು ಅಸ್ತಂಗತನಾದನು, ಕಾಲರೂಪೀ ಘಟಸರ್ಪವು ಸರ್ವವನ್ನೂ ಭಕ್ಷಿಸಿಬಿಟ್ಟಿತು ` ಎಲ್ಲರೂ ಶ್ರೀಹೀನರಾದರು. ಇನ್ನು ಯಾರ ಕುಶಲ-ಮಂಗಳಗಳನ್ನು ಹೇಳಲಿ ? ಈ ಮಾನವಲೋಕವು ಮಹಾ ದುರ್ಭಾಗ್ಯಶಾಲಿಯು, ಅದರಲ್ಲಿಯೂ ಈ ಯಾದವರು ಹತಭಾಗ್ಯರು. ಅಮೃತಮಯ ಸಮುದ್ರದಲ್ಲಿದ್ದರೂ, ಮೀನುಗಳು ಚಂದ್ರನನ್ನು ಗುರುತಿಸ ದಂತೆ, ತಮ್ಮೊಡನೆಯೇ ಇದ್ದರೂ ಯಾದವರು ಕೃಷ್ಣನನ್ನು ಗುರುತಿಸಲಿಲ್ಲ. ಯಾದವರೇನು ಬುದ್ಧಿಹೀನರೇ ? ಬಾಲ್ಯದಿಂದಲೂ ಶ್ರೀಕೃಷ್ಣನೊಡನೆ ಇರಲಿ ಲ್ಲವೇ ? ಅವರು ಪರೇಂಗಿತಜ್ಞರಲ್ಲವೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ವಿಶ್ವಾಶ್ರಯಿ, ಸರ್ವಾಂತರ್ಯಾಮಿ ಶ್ರೀಕೃಷ್ಣನನ್ನು ಓರ್ವ ಯಾವವ ಶ್ರೇಷ್ಠನೆಂದು ಮಾತ್ರ ತಿಳಿದರೇ ಹೊರತು, ಪರಮಾತ್ಮನನ್ನಾಗಿ ತಿಳಿಯಲಿಲ್ಲ.

ಇದೂ ಶ್ರೀಕೃಷ್ಣನ ಮಾಯೆಯೆ ಸರಿ. ಇಲ್ಲದಿದ್ದರೆ ಶ್ರೀಕೃಷ್ಣನ ಚಿರ ವೈರಿಗಳಾದ, ಶಿಶುಪಾಲ-ಜರಾಸಂಧಾದಿಗಳು ಕೃಷ್ಣನನ್ನೇಕೆ ಭಗವಂತನೆಂದು ತಿಳಿಯಬಾರದಾಗಿತ್ತು ?

ಯಾವಾಗಲೂ ಭಗವದರ್ಥವಾಗಿ ತಪಸ್ಸನ್ನೇ ಮಾಡದ ಯಾದವರಿಗೆ, ಇಲ್ಲಿಯತನಕ ದರ್ಶನಸೌಭಾಗ್ಯವನ್ನು ಕೊಟ್ಟು, ಅವರ ದರ್ಶನಾಕಾಂಕ್ಷೆಯು ಅಳಿಯುವ ಮೊದಲೇ ಕೃಷ್ಣನು ತನ್ನ ತ್ರಿಭುವನ ಮೋಹಕವಾದ ಸ್ವರೂಪವನ್ನು ಅಂತರ್ಹಿತ ಮಾಡಿಕೊಂಡನು. ಸಕಲ ಯಾದವರ ನೇತ್ರಗಳನ್ನು ಅಪಹರಿಸಿ ಕೊಂಡು ಹೋದನು.

ಭಗವಂತನು ತನ್ನ ಯೋಗಮಾಯೆಯ ಪ್ರಭಾವವನ್ನು ವ್ಯಕ್ತಗೊಳಿಸು ವದಕ್ಕಾಗಿ, ಮಾನವಲೀಲೆಗೆ ಅನುಗುಣವಾಗಿ ತನ್ನ ಶ್ರೀ ವಿಗ್ರಹವನ್ನು ಪ್ರಕಟ ಗೊಳಿಸಿದ್ದನು. ಅವನ ಅದ್ಭುತ ಸೌಂದರ್ಯವು ಹೇಗಿತ್ತೆಂದರೆ, ತ್ರಿಲೋಕಗಳು ಮೋಹಗೊಳ್ಳುವದಿರಲಿ, ಸ್ವಯಂ ಭಗವಂತನೂ ವಿಸ್ಮಯಗೊಳ್ಳುತ್ತಿದ್ದನು. ಹೇಳುತ್ತಾರೆ :

"ವಿಸ್ಮಾಪನಂ ಸ್ವಸ್ಯ ಚ ಸೌಭಾಗರ್ದೇಃ
ಪರಂ ಪದಂ ಭೂಷಣ-ಭೂಷಣಾಂಗಮ್."

ಭೂಷಣಗಳು ಅವನ ಅಂಗಗಳನ್ನು ಭೂಷಿಸುವದಿರಲಿ, ಅವನ ಅಂಗಶೋಭೆ ಯಿಂದ ಭೂಷಣಗಳೇ ಭೂಷಿತವಾಗುತ್ತಿದ್ದವು.

ಶ್ರೀರೂಪ ಗೋಸ್ವಾಮೀಜಿಯವರು ಶ್ರೀಕೃಷ್ಣನ ರೂಪಮಾಧುರ್ಯ ವನ್ನು ಹೀಗೆ ವರ್ಣಿಸುತ್ತಾರೆ :-

ಅಪರಿಕಲಿತಪೂರ್ವ ; ಕಶ್ಚಮತ್ಕಾರಕಾರೀ,
ಸ್ಫುರತಿ ಮಮಗರೀಯಾನೇಷ ಮಾಧುರ್ಯಪೂರಃ।
ಅಯಮಹಮಪಿ ಹಂತಪ್ರೇಕ್ಷ್ಯಯಂ ಲುಬ್ಧಚೇತಾ :
ಸರಭಸ ಮುಪಭೋಕ್ತುಂ ಕಾಮಯೇ ರಾಧಿಕೇವ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಾಲಂಕಾರ ಭೂಷಿತನಾದ ಶ್ರೀಕೃಷ್ಣನು ದರ್ಪಣದ ಮುಂದೆ ನಿಂತಿದ್ದಾನೆ. ಪ್ರತಿಬಿಂಬವನ್ನು ನೋಡಿ ಆಶ್ಚರ್ಯಚಕಿತನಾಗಿದ್ದಾನೆ ಅರೇ ಯಾರಿರಬಹುದು ಇವನು ? ಇವನನ್ನು ನಾನೆಲ್ಲಿಯೂ ನೋಡಿಲ್ಲವಲ್ಲ ? ಆಹಾ ಏನು ಸೌಂದರ್ಯ ? ಏನು ಲಾವಣ್ಯ ? ನಾನು ರಾಧೆಯಾಗಿದ್ದಿದ್ದರೆ ಇವನನ್ನು ಖಂಡಿತ ವಿವಾಹವಾಗುತ್ತಿದ್ದೆ. ಪ್ರೇಮದಿಂದ ಆಲಿಂಗಿಸಿಕೊಳ್ಳುತ್ತಿದ್ದೆ.

ಭಗವಂತನ ಸೌಂದರ್ಯವನ್ನು ಕಂಡು ಭಗವಂತನೇ ಆಶ್ಚರ್ಯ ಪಡುತ್ತಾನೆ. ರಾಧೆಯಾಗಿ ಆಲಂಗಿಸಿಕೊಳ್ಳಲು ಬಯಸುತ್ತಾನೆ. ಅಂದಮೇಲೆ ಸಾಮಾನ್ಯವಾಗಿ ಮಾನವರ ಸ್ಥಿತಿಯೇನು ?

ಧರ್ಮರಾಜನ ರಾಜಸೂಯ ಯಜ್ಞದಲ್ಲಿ ಭಗವಾನ್ ಕೃಷ್ಣನ ದಿವ್ಯ ರೂಪವನ್ನು ಸಂದರ್ಶಿಸಿದವರು ಹೇಳುತ್ತಿದ್ದರು. ಪಿತಾಮಹನ ಸೃಷ್ಟಿ ರಚನಾ ಕೌಶಲ್ಯವು ಇವನಲ್ಲಿ ಪರ್ಯವಸಾನಗೊಂಡಿದೆ. ಸಾರ್ಥಕತೆಯನ್ನು ಪಡೆದಿದೆ.

ಅವನ ಪ್ರೇಮಮಯ ಹಾಸ್ಯ–ವಿನೋದಗಳಿಂದ, ಮಧುರಮಯ ಮುಗ್ಧ ದೃಷ್ಟಿಯಿಂದ, ಸಮ್ಮಾನಿತರಾದ ವ್ರಜಾಂಗನೆಯರು ಅವನಿಂದ ಆಕರ್ಷಿತರಾಗಿ ಮನೆಯ ಕೆಲಸ ಕಾರ್ಯಗಳೆಲ್ಲವನ್ನೂ ತೊರೆದು. ಬೊಂಬೆಗಳಂತೆ ಅವನ ಧ್ಯಾನದಲ್ಲಿ ನಿರತರಾಗಿರುತ್ತಿದ್ದರು.

ಈ ಚರಾಚರಾತ್ಮಕ ಜಗತ್ತಿನ ಏಕಮಾತ್ರ ಸ್ವಾಮಿಯಾದ ಭಗವಂತನು, ಶಾಂತ ಮಹಾತ್ಮರಿಗೆ ಘೋರ ರಾಕ್ಷಸರಿಂದ ತೊಂದರೆಯಾಗುತ್ತಿದೆಯೆಂದು ತಿಳಿದು. ಆ ಜನ್ಮನಾದರೂ ಬಲರಾಮನೊಡನೆ ಯದುಕುಲದಲ್ಲಿ ಅವತರಿಸಿದನು.

ಶಮಿಯಲ್ಲಿರುವ ಅಗ್ನಿಯು ಪ್ರಕಟವಾಗುವಂತೆ ಕರುಣಾ ಪಾರಾವಾರನಾದ ಭಗವಂತನು ಪ್ರಕಟವಾದನು. ವಿದುರ-ವಸ್ತುತಃ ಭಗವಂತನು ಅಜನಲ್ಲವೆ ? ಆದರೂ ವಸುದೇವ ದೇವಕಿಯರಲ್ಲಿ ಜನ್ಮವೆತ್ತಿದನು. ಸರ್ವರಿಗೂ ಅಭಯ ಪ್ರದನಾದರೂ, ಕಂಸನ ಭಯದಿಂದ ವ್ರಜಕ್ಕೆ ಹೋಗಿ ಮುಚ್ಚಿಟ್ಟುಕೊಂಡನು.

Sri Vidyabharathi Book Centre, Sringeri

CC-0. In Public Domain. Digitized by eGangotri

ಅನಂತ ಪರಾಕ್ರಮಿಯಾದರೂ, ಶತ್ರು ಭಯದೀದ ಮಥುರೆಯನ್ನು ಬಿಟ್ಟು ದ್ವಾರಕಿಗೆ ಓಡಿ ಹೋದನು. ಅವನ ಈ ಲೀಲೆಗಳೆಲ್ಲವನ್ನೂ ಸ್ಮರಿಸಿ ಕೊಂಡರೆ ಯಾರ ಚಿತ್ತವು ತಾನೇ ಮಥಿಸಲ್ಪಡುವುದಿಲ್ಲ?

ಭಗವಾನ್ ಕೃಷ್ಣನು, ವಸುದೇವ, ದೇವಕಿಯರ ಪಾದಾಭಿವಂದನವನ್ನು ಮಾಡುತ್ತಾ ಹೇಳುತ್ತಿದ್ದನು. ಪೂಜ್ಯರೇ ಕಂಸನ ಮಹಾ ಭಯದಿಂದ ನಿಮ್ಮ ಸೇವೆಯನ್ನು ಸರಿಯಾಗಿ ಮಾಡಲಾಗಲಿಲ್ಲ. ನನ್ನ ಈ ಮಹಾಪರಾಧವನ್ನು ಮನ್ನಿಸಿ ಪ್ರಸನ್ನರಾಗಿರಿ. ಇದನ್ನು ಸ್ಮರಿಸಿಕೊಂಡರೆ ಹೃದಯವು ಇಬ್ಭಾಗ ವಾಗುತ್ತದೆ.

ಯಾವ ಮಹನೀಯನು ತನ್ನ ಭ್ರುಕುಟಿವಿಕ್ಷೇಪ ಮಾತ್ರದಿಂದ ಸಕಲ ಭೂಭಾರವನ್ನೂ ಇಳುಹಲು ಸಮರ್ಥನೊ, ಅಂತಹ ಶ್ರೀಕೃಷ್ಣನ ಪಾದ ಪದ್ಮಗಳನ್ನು ಭಜಿಸುವವರು ಎಂದಿಗೂ ಅವನ ಲೀಲೆಗಳನ್ನು ಮರೆಯಲಾರರು. ವಿದುರ, ನೀವುಗಳು ರ ಜಸೂಯ ಯಜ್ಞದಲ್ಲಿ ಕಣ್ಣಾರೆ ಕಾಣಲಿಲ್ಲವೇ? ಶ್ರೀಕೃಷ್ಣನ ಪರಮದ್ವೇಷಿಯಾದ ಶಿಶುಪಾಲನಿಗೂ ಸಹ, ಮಹಾಯೋಗಿಗಳಿಗೆ ದೊರಕುವ ಮಹಾ ಸಿದ್ಧಿಯು ದೊರಕಿತಲ್ಲವೇ? ಇಂತಹ ಮಹಾಪ್ರಭುವನ್ನು ಮರೆಯುವುದು ಹೇಗೆ?

ಮಹಾ ಭಾರತದ ಯುದ್ಧದಲ್ಲಿ, ಶ್ರೀಕೃಷ್ಣನಲ್ಲಿಯದಶ್ಯ ಚಿತ್ತರಾದ ವೀರ ಯೋಧರು, ಅರ್ಜುನನ ಬಾಣಗಳಿಂದ ಹತರಾಗಿ ಶ್ರೀಕೃಷ್ಣ ಸಾಯುಜ್ಯವನ್ನು ಪಡೆಯುತ್ತಿದ್ದರು.

ಸದಾ ಅಷ್ಟೈಶ್ವರ್ಯಗಳಿಂದ ಪರಿಪೂರ್ಣನಾದ ಶ್ರೀ ಕೃಷ್ಣನ ಚರಣಾರ ವಿಂದಗಳನ್ನು ಇಂದ್ರಾದಿಗಳೆಲ್ಲರೂ ನಮಸ್ಕರಿಸಿ ಧನ್ಯರಾಗುತ್ತಾರೆ. ಅಂತಹವನು ಉಗ್ರಸೇನ ಮಹಾರಾಜನ ಮುಂದೆ ಕೈ ಕಟ್ಟಿ ನಿಂತುಕೊಂಡು ಹೇಳುತ್ತಿದ್ದನು.

"ಪ್ರಭುಗಳು ನಮ್ಮ ಪ್ರಾರ್ಥನೆಯನ್ನು ಆಲಿಸಬೇಕು. ತಾವು ಉಚಿತ ರೀತಿಯಲ್ಲಿ ಆಜ್ಞಾಪಿಸಬೇಕು.

ಅವನ ಈ ಸೇವಾಭಾವವನ್ನು ಸ್ಮರಿಸೆಕೊಂಡರೆ ನನ್ನಂತಹ ಸೇವಕನ ಚಿತ್ತವು ದುಃಖಿಗೊಳ್ಳುವುದು. ವಿಷನ್ನೂಡಿಸಲು ಬಂದ ಪೂತನಿಗೂ ಸದ್ಗತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನಿತ್ತನೆಂದರೆ ವನ ವಾತ್ಸಲ್ಯವನ್ನು ಎಷ್ಟು ಹೇಳುವುದು? ನನ್ನ ದೃಷ್ಟಿಯಲ್ಲಿ ರಾಕ್ಷಸರೂ ಭಗವಂತನ ಮಹಾಭಕ್ತರು. ಇಲ್ಲದಿದ್ದರೆ ಅವನ ದಿವ್ಯ ಸನ್ನಿಧಿಯಲ್ಲಿ ಅವನ ಅಮೃತಹಸ್ತದಿಂದ ಮರಣವನ್ನು ಪಡೆದು ದಿವ್ಯಲೋಕವನ್ನು ಹೊಂದಲು ಸಾಧ್ಯವಿತ್ತೇ ?

ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಗನುಗುಣವಾಗಿ ಭೂಭಾರವನ್ನು ಇಳುಹಲು ವಸುದೇವ-ದೇವಕಿಯರಲ್ಲಿ ಅವತಾರ ಮಾಡಿದನು ಅವತರಿಸಲು ಮಹಾಕ್ಷೇತ್ರಗಳನ್ನು ಹುಡುಕಿದನೇ ? ಇಲ್ಲ. ಕಂಸನ ಕಾರಾಗರವನ್ನು ಆರಿಸಿಕೊಂಡನು. ಅಲ್ಲಿ ಜನ್ಮ ತಾಳಲು ಧೈರ್ಯ ಮಾಡಿದ ಭಗವಂತನು ಕಂಸನ ಹೆದರಿಕೆಯಿಂದ ಗೋಕುಲಕ್ಕೆ ಓಡಿಹೋದನು. ಅದೇಕೆ ? ಶಂಕ–ಚಕ್ರ–ಗದಾಧಾರಿಯಾಗಿ ಆಗಲೇ ಕಂಸನನ್ನು ನಿಗ್ರಹಿಸಲಾಗುತ್ತಿರಲಿಲ್ಲವೇ ? ಅವನನ್ನು ಯಾರಾದರೂ ಎದುರಿಸಲಾಗುತ್ತಿತ್ತೇ ? ಇಲ್ಲ, ಆದರೂ ಅವನು ಗೋಕುಲಕ್ಕೆ ಹೋಗಿ ಮುಚ್ಚಿಟ್ಟುಕೊಂಡನು. ಆಲ್ಲಿ ಹನ್ನೊಂದು ವರ್ಷಗಳ ಕಾಲ ಬಲರಾಮಾದಿಗಳೊಡನೆ ವಿವಿಧ ಆಟಗಳನ್ನು ಆಡಿದನು. ಯಾರಿಗೂ ಇವನು ಕಂಸಾಂತಿಕನೆಂಬುವುದು ತಿಳಿದೇ ಇರಲಿಲ್ಲ.

ಯಮುನಾ ತೀರದ ಉಪವನಗಳಲ್ಲಿ, ಮರಗಳ ಮೇಲಿನ ಪಕ್ಷಿಗಳ ಕಲಕಲ ಧ್ವನಿಯಿಂದ ಶೋಭಾಯಮಾನವಾದ ಆ ಪ್ರದೇಶಗಳಲ್ಲಿ ಶ್ರೀಕೃಷ್ಣನು ಕರುಗಳನ್ನು ಮೇಯಿಸುತ್ತಾ ಗೋಪಬಾಲಕರೊಡನೆ ವಿಹರಿಸುತ್ತಿದ್ದನು. ಪ್ರಜಾವಾಸಿಗಳ ದೃಷ್ಟಿಯನ್ನು ತನ್ನ ಕಡೆಗೆ ಸೆಳೆಯಲು ಅನೇಕ ವಿಧವಾದ ಬಾಲಲೀಲೆಗಳನ್ನು ತೋರಿಸುತ್ತಿದ್ದನು. ಅವನ ನಗು, ಅಳುವು, ಚೆಲ್ಲಾಟ ಎಲ್ಲವೂ ಮೋಹಕರವಾಗಿಯೇ ಇದ್ದುವು.

ಕೃಷ್ಣನಿಗೆ ವಯಸ್ಸಾದ ಹಾಗೆಲ್ಲ · ಹಸು-ಕರುಗಳನ್ನು ಮೇಯಿಸಲು ಹೋಗುತ್ತಿದ್ದನು. ತನ್ನ ಮುರಳೀನಾದದಿಂದ ಗೋಪರನ್ನು ಮುಗ್ಧಗೊಳಿಸುತ್ತಿದ್ದನು.

ಆಗ ಕೃಷ್ಣನ ಸಂಹಾರಕ್ಕಾಗಿ ಕಂಸನು ಕಳುಹಿಸಿದ ಎಲ್ಲಾ ರಾಕ್ಷಸರನ್ನೂ ಆಟವಾಡುತ್ತಲೇ ಯಮಪುರಿಗೆ ಕಳುಹಿಸಿಬಿಟ್ಟನು. ಅದೂ ಒಂದು ಬೊಂಬೆಯಾಟವಂತೆ.

Sri Vidyabharathi Book Centre, Sringeri

 In Public Domain. Digitized by eGangotri

ನೋಡು ವಿದುರ, ಯಮುನಾಜಲವು ಪಾನಕ್ಕೆ ಅಯೋಗ್ಯವಾಗಿದ್ದಿತು. ಒಂದುದಿನ ಆ ನೀರನ್ನು ಕುಡಿದು ಗೋಪಾಲಕರೂ-ಹಸುಕರುಗಳೂ ಎಲ್ಲರೂ ಮೂರ್ಛಿತರಾಗಿ ಬಿದ್ದುಬಿಟ್ಟರು. ಕೃಷ್ಣನಾದರೊ ಆ ಕೂಡಲೆ ನೀರಿಗೆ ಧುಮುಕಿ ಜಲವು ವಿಷಮಯವಾಗಲು ಕಾರಣನಾದ ಕಾಳೀಯ ನಾಗನನ್ನು ನಿಗ್ರಹಿಸಿ, ಯಮುನಾ ಜಲವು ಸರ್ವಗ್ರಾಹ್ಯವಾಗುವಂತೆ ಮಾಡಿದನು.

ಆರ್ಜಿಸಿದ ಧನದ ಸದ್ವಿತರಣೆಯ ದೃಷ್ಟಿಯಿಂದ ಯಜ್ಞ-ಯಾಗಾದಿಗಳನ್ನು ನಡೆಸುವುದು ಅನಾದಿ ಕಾಲದಿಂದ ನಮ್ಮ ದೇಶದಲ್ಲಿ ಬಂದಿರುವ ವಾಡಿಕೆ. ಅದಕ್ಕನುಸಾರವಾಗಿ ಗೋಪಾಲಕರು ಇಂದ್ರಯಜ್ಞದ ಸಿದ್ಧತೆಗೆ ತೊಡಗಿದರು. ಆದರೆ ಕೃಷ್ಣನು ಒಪ್ಪಲಿಲ್ಲ. ಕೃಷ್ಣನು ಒಪ್ಪದಿದ್ದ ಮೇಲೆ ಇಂದ್ರಯಜ್ಞವು ನಡೆಯುವುದೆಂತು ? ಅದರ ಜಾಗದಲ್ಲಿ ಗೋವರ್ಧನ ಪ್ರಜಾರೂಪವಾದ ಗೋ ಯಜ್ಞವೇ ನಡೆಯಿತು. ಇದರಿಂದ ಕೋಪಗೊಂಡ ಇಂದ್ರನು ಸಂವರ್ತಕಾದಿ ಮೇಘಗಳಿಗೆ ವ್ರಜವನ್ನು ಮುಳುಗಿಸುವಂತೆ ಆಜ್ಞೆ ಮಾಡಿಬಿಟ್ಟನು

ಕೃಷ್ಣನಾದರೊ ಗೋವರ್ಧನ ಪರ್ವತವನ್ನೇ ಛತ್ರಿಯಂತೆ ಕೈಯ್ಯಿನಲ್ಲಿ ಎತ್ತಿ ಧರಿಸಿದನು. ವ್ರಜವಾಸಿಗಳೆಲ್ಲರೂ ಅದರ ತಳದಲ್ಲಿ ರಕ್ಷಣೆಯನ್ನು ಪಡೆದರು. ಪರಾಜಿತನಾದ ಇಂದ್ರನು ಕೃಷ್ಣನಿಗೆ ಶರಣಾಗತನಾದನು.

ಶರತ್ಪೂರ್ಣಿಮಾ ಚಂದ್ರಕಾಂತಿಯಿಂದ ಆಹ್ಲಾದಕರವಾದ ರಾತ್ರಿಯಲ್ಲಿ ಗೋಪಿಕೆಯರೊಡನೆ ರಾಸಕ್ರೀಡೆಯನ್ನು ನಡೆಸಿದನು.

ಇದೆಲ್ಲವನ್ನೂ ನೆನೆಸಿಕೊಂಡರೆ ಮನಸ್ಸು ಶ್ರೀ ಕೃಷ್ಣ ವಿರಹದಿಂದ ತಪ್ತವಾಗುತ್ತದೆ.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ

ದ್ವಿತೀಯೋಽಧ್ಯಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ತೃತೀಯ ಸ್ಕಂಧ, ಮೂರನೆಯ ಅಧ್ಯಾಯ
ಓಂ ನಮೋ ಭಗವತೇ ವಾಸುದೇವಾಯ
ಶ್ರೀಕೃಷ್ಣನ ಲೀಲಾವರ್ಣನೆ

ಉದ್ಧವನು ವಿದುರನೊಡನೆ ಶ್ರೀಕೃಷ್ಣನ ಲೀಲೆಯನ್ನು ವರ್ಣಿಸುತ್ತಾನೆ.

ಭಾಗವಾನ್ ಶ್ರೀ ಕೃಷ್ಣನು ತಾಯಿ ತಂದೆಗಳನ್ನು ಸುಖಿಗಳನ್ನಾಗಿ ಮಾಡುವ ಯೋಜನೆಯಿಂದ ಮಥುರೆಗೆ ಬರುತ್ತಾನೆ.

ಬಂದರೆ ಯಾರನ್ನು ನೋಡಿದನು? ಯಾರಲ್ಲಿ ಇಳಿದು ಕೊಂಡನು? ಶಾಂಡಿಲ್ಯ ಮುನಿಯ ಆಶ್ರಮಕ್ಕೆ ಹೋದನೇ? ಅಥವಾ ದೇವಕೀ–ವಸುದೇವರ ಮನೆಗೆ ಹೋದನೇ? ಸೋದರ ಮಾವಂದಿರ ಮನೆ? ಅಥವಾ ಸೋದರತ್ತೆಯರ ಮನೆಗೆ ಹೋದನೇ?

ಇಲ್ಲ ಇವನ ಮೊಟ್ಟಮೊದನೆಯ ಕೆಲಸವೆಂದರೆ ಕುಬ್ಜೆಯ ಉದ್ಧಾರ, ಎಲ್ಲಿಗೆ ಹೋದರೂ ಕೃಷ್ಣನಿಗೆ ದಿನೋದ್ಧಾರ ಕಾರ್ಯದಲ್ಲಿಯೇ ಆಸಕ್ತಿ, ಅದಕ್ಕೆ ಆದ್ಯತೆ, ಸ್ಪರ್ಶಮಾತ್ರದಿಂದ ಕುಬ್ಜೆಯನ್ನು ಪರಮ ಸುಂದರಿಯನ್ನಾಗಿ ಮಾಡಿದನು. ಹೂವಾಡಿಗನೊಬ್ಬನನ್ನು ತನ್ನ ಕೃಪಾ ಪಾತ್ರನನ್ನಾಗಿ ಮಾಡಿಕೊಂಡನ್ನು.

ಅವನ ಲೀಲೆಯು ವಿಚಿತ್ರ, ಸಾಮಾನ್ಯರಿಗೆ ಅರ್ಥವಾಗುವುದೇ ಇಲ್ಲ. ಹೇಳುತ್ತಾರಲ್ಲ :-

"ಕೇವಟಮೀತಕಹೇ ಸುಖಮಾನತ,
ವಾನರ ಬಂಧು ಬಡಾಈ"

ಇವನಿಗೆ ಮಿತ್ರನೆಂದರೆ ಬೆಸ್ತ, ಸ್ನೇಹಿತರೆಂದರೆ ಕಪಿಗಳು, ಏನು ವಿಚಿತ್ರತೆ? ಮಧುರೆಯಲ್ಲಿದ್ದ ಕೃಷ್ಣನ ಮಾವನಾದ ಕಂಸನು ಮಹಾಕ್ರೂರಿ. ಎಲ್ಲರನ್ನೂ ಹಿಂಸಿಸುವವನು – ಕತ್ತರಿಸುವವನೇ "ಕಂಸ."

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಶಮಾನ, ಕಾಲಮಾನ, ವಸ್ತುಮಾನಗಳನ್ನು ಕತ್ತರಿಸಿ ಅಭಿಮಾನಿಯಾಗುವವನೇ "ಕಂಸನು." ಅವನು ಉಚ್ಚ ಸಿಂಹಾಸನದಲ್ಲಿ ಕುಳಿತಿದ್ದನು. ಬಲ-ಪರಾಕ್ರಮ ಸಂಪೂರ್ಣರಾದ ರಾಕ್ಷಸವೀರರಿಂದ ಕೃಷ್ಣನನ್ನು ಮುಗಿಸಿಬಿಡಲು ಯೋಚಿಸಿದ್ದನು.

ಕೃಷ್ಣನು ಮುಷ್ಟಿಕ ಚಾಣೂರರನ್ನು ನಿಗ್ರಹಿಸಿ ಕಂಸನನ್ನು ಸಿಂಹಾಸನದಿಂದ ಕೆಳಕ್ಕೆ ಎಳೆದನು. ಕೃಷ್ಣನ ದರ್ಶನಮಾತ್ರದಿಂದ ಶವನಾಗಿದ್ದ ಕಂಸನನ್ನು ಭೂಮಿಯ ಮೇಲೆ ಎಳೆದಾಡಿದನು.

ನೋಡು ವಿದುರ, ಇದು ಆಶ್ಚರ್ಯವಲ್ಲವೇ? ವ್ರಜದಲ್ಲಿ ಕೃಷ್ಣನು ಯಾರ ಮೇಲೂ ಆಯುಧವನ್ನು ಉಪಯೋಗಿಸಲಿಲ್ಲ. ಪೂತನಿಯನ್ನು ತುಟಿಗಳಿಂದ ಊಪಿಬಿಟ್ಟ, ಶಕಟಾಸುರನನ್ನು ಕಾಲಿನಿಂದ ಒದೆದ, ತೃಣಾವರ್ತನನ್ನು ಕೈಗಳಿಂದ ಹಿಸುಕಿದ, ಅಘಾಸುರನ ಹೊಟ್ಟೆಯನ್ನು ಸೀಳಿದ, ಬಕಾಸುರನನ್ನು ಸಿಗಿದು ಹಾಕಿದ.

ಕಂಸನಿಗ್ರಹವಾದಮೇಲೆ ಕೃಷ್ಣನು ಸಾಂದೀಪ ಮಹಾಮುನಿಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿದನು. ಶ್ರವಣಮಾತ್ರದಿಂದ ಸಕಲವಿದ್ಯೆಗಳನ್ನೂ ಗ್ರಹಿಸಿದನು. ಗುರುದಕ್ಷಿಣಾರೂಪದಲ್ಲಿ ಅವರ ಮರಣ ಹೊಂದಿದ್ದ ಪುತ್ರನನ್ನೇ ತಂದು ಒಪ್ಪಿಸಿದನು.

ಇವನು ರುಕ್ಮಿಣಿಯೊಡನೆ ವಿವಾಹವಾದುದೂ ಒಂದು ಅದ್ಭುತ ರೀತಿಯಿಂದ.

ರುಕ್ಮಿಯು ಶಿಶುಪಾಲನಿಗೆ ರುಕ್ಮಿಣಿಯನ್ನು ಕೊಡಬೇಕೆಂದು ನಿಶ್ಚಯಿಸಿದ್ದನು. ಪರಿವಾರಸಮೇತ ಶಿಶುಪಾಲನೂ ಬಂದುಬಿಟ್ಟಿದ್ದನು. ಶ್ರೀಕೃಷ್ಣನಾದರೊ ಗರುಡನು ಅಮೃತಕಲಶವನ್ನು ಅಪಹರಿಸಿದಂತೆ, ಶತ್ರುಪಕ್ಷದವರು ನೋಡುತ್ತಿರುವ ಹಾಗೆಯೆ ರುಕ್ಮಿಣಿಯನ್ನು ಅಪಹರಿಸಿಕೊಂಡು ಹೋಗಿ ವಿವಾಹವಾದನು.

ಏಳು ಗೂಳಿಗಳನ್ನೂ ಏಕಕಾಲದಲ್ಲಿ ನಿಗ್ರಹಿಸಿ ನಾಗ್ನಜಿತಿಯನ್ನು ವಿವಾಹವಾದನು. ಆಗ ಪ್ರತಿಭಟಿಸಿದವರನ್ನೆಲ್ಲಾ ಯಮಪುರಿಗೆ ಕಳುಹಿಸಿದನು. ತಾನು ಮಾತ್ರ ಯಾವುದೇ ವಿಧದ ಆಘಾತರ್ಕ್ಕೂ ಒಳಗಾಗಲಿಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಲಂಪಟರಾದ ಪುರುಷರಂತೆ, ಸತ್ಯಭಾಮೆಯ ಪ್ರೀತಿಗಾಗಿ ಸ್ವರ್ಗಲೋಕದಿಂದ ಪಾರಿಜಾತ ವೃಕ್ಷವನ್ನು ತಂದುಕೊಟ್ಟನು. ಪ್ರತಿಭಟಿಸಿದ ಇಂದ್ರನ ಗರ್ವಹರಣ ಮಾಡಿದನು.

ಮಹಾಬಲ ಪರಾಕ್ರಮಶಾಲಿಯಾದ ಭೌಮಾಸುರನು ಕೃಷ್ಣನಿಂದ ನಿಗ್ರಹಿಸಲ್ಪಡಲು ಭೂದೇವಿಯು ಪುತ್ರವಿರಹ ತಪ್ತಳಾಗಿ ಕೃಷ್ಣನನ್ನು ಪ್ರಾರ್ಥಿಸೋಣ. ಭೌಮಾಸುರನ ಪುತ್ರನಾದ ಭಗದತ್ತನಿಗೆ ರಾಜ್ಯವನ್ನು ಕೊಟ್ಟನು.

ಭೌಮಾಸುರನ ಅಂತಃಪುರದಲ್ಲಿ ನಾನಾದೇಶದ ಸುಂದರೀ ರಾಜಕನ್ಯೆಯರಿದ್ದರು. ಅವರುಗಳು ಶ್ರೀಕೃಷ್ಣದರ್ಶನ ಮಾತ್ರದಿಂದ ಸಂತುಷ್ಟರಾಗಿ, ಸಂತೃಪ್ತರಾಗಿ, ತಮ್ಮ ತನು-ಮನ-ಧನಗಳನ್ನು ಕೃಷ್ಣನ ಪಾದಾರವಿಂದಗಳಲ್ಲಿ ಅರ್ಪಿಸಿಬಿಟ್ಟರು. ಅವರೆಲ್ಲರನ್ನೂ ಕೃಷ್ಣನು ಪತ್ನಿಯರ ರೂಪದಲ್ಲಿ ಪರಿಗ್ರಹಿಸಿ ಅವರ ಇಷ್ಟಾರ್ಥಗಳನ್ನು ಪೂರೈಸಿದನು. ತಾನೂ ಅಷ್ಟೇ ರೂಪಗಳನ್ನು ಧರಿಸಿ ಪ್ರತ್ಯೇಕ ಅಂತಃಪುರಗಳಲ್ಲಿ ಅವರೊಡನೆ ರಮಿಸುತ್ತಿದ್ದನು.

ಭಗವಂತನ ಲೀಲೆಯು ಅತ್ಯದ್ಭುತವಾದುದು. ಏಕಕಾಲದಲ್ಲಿ ಕೋಟ್ಯಾಂತರ ಹೃದಯಗಳಲ್ಲಿ ಅಧಿಷ್ಠಿತನಾಗುತ್ತಾನೆ. ಅವರೊಡನೆ ನರ್ತಿಸುತ್ತಾನೆ, ಕ್ರೀಡಿಸುತ್ತಾನೆ, ಸಂತೋಷಗೊಳಿಸುತ್ತಾನೆ, ಸಂತೋಷಗೊಳ್ಳುತ್ತಾನೆ.

ಪ್ರತಿ ಓರ್ವಳಲ್ಲೂ ಅಸಮಾನ ಶೂರರಾದ ಹತ್ತುಹತ್ತು ಪುತ್ರರನ್ನು ಪಡೆದನು. ಅವನು ಕಾಲಯವನ, ಜರಾಸಂಧ, ಶಾಲ್ವ, ಆದಿಮರಾತ್ಮರಿಗೂ ಸದ್ಗತಿಯನ್ನೇ ಕೊಟ್ಟನು.

ಶಂಬರ, ದ್ವಿವಿದ, ಬಾಣಾಸುರ, ಮುರ, ಬಿಲ್ವಲ, ದಂತವಕ್ತ್ರ ಇತ್ಯಾದಿ ಅನೇಕ ದುಷ್ಟರ ಬಾಧೆಯಿಂದ ಭೂದೇವಿಯನ್ನು ಮುಕ್ತಗೊಳಿಸಿದನು.

ನಂತರ ಕೌರವ-ಪಾಂಡವರ ಅದ್ಭುತವಾದ ಹದಿನೆಂಟು ಅಕ್ಷೌಹಿಣೀ ಸೈನ್ಯವನ್ನೂ ಧೂಳೀಪಟಲ ಮಾಡಿದನು. ಅವರ ಭಾರವನ್ನು ಸಹಿಸಲಾರದ ಭೂದೇವಿಯು ತೂಗಾಡಹತ್ತಿದಳು.

ಕರ್ಣ, ದುಶ್ಶಾಸನ, ಶಕುನಿ ಇವರುಗಳ ಅಯೋಗ್ಯ ಸಲಹೆಯಿಂದ ಹತಶ್ರೀಕನಾಗಿದ್ದ ದುರ್ಯೋಧನನು, ಭೀಮಸೇನನ ಚಂಡಗದಾಘಾತದಿಂದ

Sri Vidyabharathi Book Centre, Sringeri

 CC-0. In Public Domain. Digitized by eGangotri

ಭಗ್ನೋರುವಾಗಿ ನೆಲಕ್ಕುರುಳಿದನು. ಅಷ್ಟು ಹೊತ್ತಿಗೆ ಭೀಷ್ಮ-ದ್ರೋಣಾದಿ ಮಹಾರಥಿಕರೊಡನೆ ಹದಿನೆಂಟು ಅಕ್ಷೌಹಿಣೀ ಸೈನ್ಯದ ಸಂಹಾರ ಕಾರ್ಯವು ಪೂರೈಸಿದ್ದಿತು.

ಆದರೂ ಶ್ರೀ ಕೃಷ್ಣನು ಚಿಂತಾಮುಕ್ತನಾಗಿರಲಿಲ್ಲ. ಪ್ರದುಮ್ನಾದಿ ಮಹಾವೀರ ಯೋಧರ ಸಮೂಹವೂ ಅಳಿಯಬೇಕಾಗಿದ್ದಿತು. ಅದಕ್ಕೂ ಉಪಾಯವನ್ನು ಮನಸಾ ಕಲ್ಪಿಸಿಯೆ ಇದ್ದನು.

ಯುಧಿಷ್ಠಿರನು ಸಾರ್ವಭೌಮನಾಗಿ ಸಿಂಹಾಸನಾಸೀನನಾದನು. ಎಲ್ಲರಿಗೂ ಸನ್ಮಾರ್ಗವನ್ನು ಉಪದೇಶಿಸಿದನು, ಅಭಿಮನ್ಯುವಿನ ಪತ್ನೀ ಉತ್ತರೆಯ ಗರ್ಭವು ಅಶ್ವತ್ಥಾಮನ ಬ್ರಹ್ಮಾಸ್ತ್ರಕ್ಕೆ ಬಲಿಯಾಗಬೇಕಿತ್ತು ಆದರೆ ಕೃಷ್ಣನು ತನ್ನ ಅತುಲ ಪ್ರಭಾವದಿಂದ ರಕ್ಷಿಸಿದನು।

ಶ್ರೀ ಕೃಷ್ಣನ ಪ್ರೇರಣೆಗನುಗುಣವಾಗಿ ಧರ್ಮರಾಜನು ಮೂರು ಅಶ್ವ ಮೇಧಗಳನ್ನು ನಡೆಸಿದನು. ಶ್ರೀಕೃಷ್ಣನ ಮಾರ್ಗಾವಲಂಬಿಯಾಗಿ ತಮ್ಮಂದಿ ರೊಡನೆ ಆನಂದದಿಂದ ಸಾಮ್ರಾಜ್ಯವನ್ನು ಪಾಲಿಸುತ್ತಿದ್ದನು.

ವಿಶ್ವಾತ್ಮನಾದ ಭಗವಂತನು ದ್ವಾರಕೆಯಲ್ಲಿವೇದ ಲೋಕ ಮಾರ್ಗಾನು ಸಾರವಾಗಿ ದಿವ್ಯಭೋಗಗಳನ್ನು ಉಪಭೋಗಿಸಿದನು.

ಅವನ ಸ್ನೇಹ ಪೂರ್ಣವಾದ ಮಧುರ ಮುಗುಳು ನಗೆ, ಅಮೃತವರ್ಷಿಣೀ ವಾಕ್ಕು, ಅತಿ ಪವಿತ್ರವಾದ ಚಾರಿತ್ರ್ಯ ಇವುಗಳು ಅವಿಸ್ಮರಣೀಯಗಳು,

ಭಗವಂತನ ಹೃದಯದಲ್ಲಿ ಲಕ್ಷ್ಮೀದೇವಿಯು ಯಾವಾಗಲೂ ವಾಸಿಸು ತ್ತಾಳೆ.

ಸ್ತ್ರೀಯಾದವಳಿಗೆ ತನ್ನ ಪತಿಯು ಅನ್ಯಾಕ್ರಾಂತನಾಗಬಾರದೆಂಬ ಮೋಹವು ಸಹಜವಾಗಿಯೆ ಇರುತ್ತದೆ. ಭಗವಂತನ ಅಂಗಗಳೆಂದರೆ- ಯಾರಾ ದರೂ ಹಿಡಿದುಕೊಳ್ಳೋಣವೆಂಬ ಮೋಹವು ಕವಿಯುತ್ತದೆ. ಅದರಿಂದ ಲಕ್ಷ್ಮಿ ಯಾದರೂ ಬಹಳ ಎಚ್ಚರಿಕೆಯಿಂದಿರುತ್ತಾಳೆ.

ಈ ರೀತಿ ಭೂಲೋಕದವರನ್ನೂ ಸ್ವರ್ಗ ಲೋಕದವರನ್ನೂ ವಿಶಿಷ್ಟ ಯಾದವರನ್ನೂ ಬಹಳಮಟ್ಟಿಗೆ ಸಂತೋಷ ಪಡಿಸಿದನು. ರಾತ್ರಿಕಾಲದಲ್ಲಿ ತನ್ನ ಪ್ರಿಯ ರಾಣಿಯವರೊಂದಿಗೆ ವಿಹರಿಸುತ್ತಾ, ತನ್ನ ಗೃಹಸ್ಥ ಧರ್ಮದ ಆದರ್ಶತೆ ಯನ್ನು ಬೆಳಗಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಅನೇಕ ವರ್ಷಗಳು ಕಳೆಯೋಣ.

ತಸ್ಯೈವಂರಮಮಾಣಸ್ಯ, ಸಂವತ್ಸರಗಣಾನ್ ಬಹೂನ್
ಗೃಹಮೇಧೇಷು ಯೋಗೇಷು, ವಿರಾಗಃ ಸಮಜಾಯತ

ಶ್ರೀ ಕೃಷ್ಣನೂ ಸಹ ವಿರಾಗಿಯಾದನು. ಹದಿನಾರು ಸಾವಿರದ ನೂರೆಂಟು ಅಂತಃ ಪುರಗಳಿದ್ದುವು, ಸರ್ವ ಸಂಪತ್ ಸಮೃದ್ಧಿಯಿದ್ದಿತು, ಎಂದೂ ಕ್ಷಯಿಸದ ಯೌವನವಿದ್ದಿತು, ಆದರೂ ಕೃಷ್ಣನಿಗೆ ವೈರಾಗ್ಯವುಂಟಾ ಯಿತು.

"ದೈವಾಧೀನೇಷು ಕಾಮೇಷು, ದೈವಾಧೀನಃ ಸ್ವಯಂ ಪುಮಾನ್
ಕೋವಿಸ್ರಂಭೇತ ಯೋಗೇನ ಯೋಗೇಶ್ವರಮನುವ್ರತಃ

ಈ ಸಾಂಸಾರಿಕ ಭೋಗ ಸಾಮಗ್ರಿಗಳೆಲ್ಲವೂ ಈಶ್ವರಾಧೀನಗಳು. ಎಲ್ಲಾ ಸ್ತ್ರೀ–ಪುರುಷರೂ ಭಗವದಧೀನರೇ ಯೋಗೇಶ್ವರನಾದ ಶ್ರೀ ಕೃಷ್ಣನು ಭೋಗಗಳಿಂದ ವಿರಾಗಿಯಾದನೆಂದರೆ– ನಮ್ಮಂತಹ ಸಾಮಾನ್ಯರು ಈ ಕ್ಷಣಿಕ ಭೋಗಗಳಲ್ಲಿಯೆ ಆಸಕ್ತರಾಗಿದ್ದರೆ ನಮ್ಮ ಗತಿ ಏನಾಗುವುದು ?

ಒಂದು ಸಾರಿ ದ್ವಾರಕೆಯಲ್ಲಿ ಸಕಲ ಯಾದವರೂ ಕ್ರೀಡಾ ಸಕ್ತರಾಗಿದ್ದರು. ಆಗ ಸೌಭರಿ ಋಷಿಗಳನ್ನು ಹಾಸ್ಯ ಮಾಡಿ ಅವರ ಶಾಪಕ್ಕೆ ತುತ್ತಾದರು. ದೈವೇಚ್ಛೆಯು ಪ್ರಬಲವಾದುದು.

ಒಂದು ದಿವಸ ವೃಷ್ಣಿಗಳು, ಭೋಜರು, ಅಂಧಕರು, ಯಾದವರು ಎಲ್ಲರೂ ಸಂತೋಷದಿಂದ ರಥಾರೂಢರಾಗಿ ಪ್ರಭಾಸಕ್ಷೇತ್ರಕ್ಕೆ ಹೋದರು. ಅಲ್ಲಿ ಸ್ನಾನಾದಿಗಳನ್ನು ನೆರವೇರಿಸಿ, ತರ್ಪಣಾದಿಗಳಿಂದ ದೇವರ್ಷಿ ಪಿತೃದೇವತೆಗಳನ್ನು ತೃಪ್ತಿಪಡಿಸಿದರು. ಸದ್ಬ್ರಾಹ್ಮಣರಿಗೆ ಗೋವುಗಳನ್ನು ದಾನ ಮಾಡಿ, ದೀರ್ಘದಂಡ ನಮಸ್ಕಾರ ಮಾಡಿದರು.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ
ತೃತೀಯೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ತೃತೀಯ ಸ್ಕಂಧ, ನಾಲ್ಕನೆಯ ಅಧ್ಯಾಯ
ಉದ್ಧವನಿಂದ ಬೀಳ್ಕೊಟ್ಟ ವಿದುರನಿಂದ ಮೈತ್ರೇಯರ ಸಂದರ್ಶನ

ಬ್ರಾಹ್ಮಣರ ಆಜ್ಞಾನುಸಾರವಾಗಿ ಸರ್ವರೂ ಭೋಜನವನ್ನು ಮಾಡಿದರು. ಹಾಗೂ ವಾರುಣಿಯನ್ನು ಸೇವಿಸಿದರು, ಮದ್ಯದ ಅಮಲೇರಿತು, ಕಟು ಭಾಷಣಗಳಿಂದ ಒಬ್ಬಬ್ಬರನ್ನೊಬ್ಬರು ನಿಂದಿಸತೊಡಗಿದರು, ಇದೇ ಕಲಿಯುಗದ ಮಹಿಮೆ, ಕಲಿಯ ತಾಯಿ ಯಾರು ? "ದುರುಕ್ತೋ ಕಲಿ ಮಾಥತ್ತೇ" ದುರುಕ್ತಿಯೇ ಕಲಿಯ ತಾಯಿಯು.

ಜನಗಳ ಅಶ್ಲೀಲ, ಅಸಹಜ, ನಡೆ, ನುಡಿಗಳಿಂದ ಕಲಿಯ ಪ್ರಾದುರ್ಭಾವವಾಗುತ್ತದೆ,

ಯಾದವಾದಿಗಳ ಪಾರಸ್ಪರಿಕ ಮರ್ಮ ಸ್ಪರ್ಶಿ ಭಾಷಣದಿಂದ ಅವರ ಚಿತ್ತವು ವಿಷಮ ಸ್ಥಿತಿಯನ್ನು ಪಡೆಯಿತು. ಬಿದಿರು ಮೆಳೆಗಳ ಪರಸ್ಪರ ಸಂಘರ್ಷದಿಂದ ಅಗ್ನಿಯು ಹುಟ್ಟುವಂತೆ, ಯಾದವರ ಹೃದಯದಲ್ಲಿ ಕೋಪಾಗ್ನಿಯು ಭುಗ್ಗೆಂದು ಜ್ವಲಿಸತೊಡಗಿತು.

ಭಗವಾನ್ ಶ್ರೀ ಕೃಷ್ಣನು ಮಾಯೆಯ ಈ ವಿಚಿತ್ರತೆಯನ್ನರಿತು. ಸರಸ್ವತೀ ನದೀ ಜಲದಿಂದ ಶುದ್ಧಾಚಮನವನ್ನು ಮಾಡಿ ಒಂದು ಅಶ್ವತ್ಥ ವೃಕ್ಷದ ಕೆಳಗೆ ಕುಳಿತು ಬಿಟ್ಟನು.

ಅಂದರೇನು ?

"ಊರ್ಧ್ವ ಮೂಲಮಧಃ ಶಾಖಂ ಅಶ್ವತ್ಥಂ ಪ್ರಾಹುರವ್ಯಯಂ"

ಸಂಸಾರ ರೂಪೀ ವೃಕ್ಷದ ಮೂಲಕ್ಕೆ ಹೋಗಿ, ಊರ್ಧ್ವ ಮೂಲನಾದ ಪರಮಾತ್ಮನು ಸ್ವಸ್ವರೂಪದಲ್ಲಿ ಕುಳಿತು ಬಿಟ್ಟನು... ವಿದುರ ಮೊದಲೇ ನನ್ನೊಡನೆ ಶ್ರೀ ಕೃಷ್ಣನು ಹೇಳಿದ್ದನು– ಉದ್ಧವ ಬದರಿಕಾಶ್ರಮಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊರಟು ಹೋಗು. ನನಗೆ ಆವನ ಅಭಿಪ್ರಾಯವೇನೆಂಬುವುದು ತಿಳಿದಿದ್ದಿತು. ಇವನಿಗೆ ಯಾದವ ಕುಲ ಸಂಹಾರೇಚ್ಛೆಯು ಉಂಟಾಗಿದೆ. ಆದರೂ ಅವನ ವಿಯೋಗವನ್ನು ಸಹಿಸಲಾರದೆ ಅವನೊಡನೆ ಪ್ರಭಾಸ ಕ್ಷೇತ್ರಕ್ಕೆ ಹೋದೆನು?

ಅದ್ರಾಕ್ಷ ಮೇಕ ಮಾಸೀನಂ, ವಿಚಿನ್ವನ್ ದಯಿತಂಪತಿಂ,
ಶ್ರೀನಿಕೇತಂ ಸರಸ್ವತ್ಯಾಂ ಕೃತ ಕೇತ ಮಕೇತನಮ್

ಅಲ್ಲಿ ನಾನು ಪ್ರಭುವನ್ನು ಸಂದರ್ಶಿಸಿದೆನು. ಸರ್ವಾಶ್ರಯನಾಗಿದ್ದರೂ, ವಿಶ್ವರೂಪಿಯಾದರೂ ಒಂಟಿಯಾಗಿ ನದೀ ಸರಸ್ವತೀ ತೀರದಲ್ಲಿ ಕುಳಿತಿದ್ದಾನೆ.

ಶೋಭಾಧಾಮ, ಶ್ಯಾಮ ಸುಂದರನ ಸುಂದರ ಶ್ಯಾಮ ಶರೀರವು ವಿಶುದ್ಧ ಸತ್ತ್ವಮಯವಾದುದು. ಪ್ರಶಾಂತಾರುಣ ಲೋಚನನು. ಚತುರ್ಭುಜಧಾರೀ, ಪೀತ ಕೌಶೇಯಾಂಬರಾ ವೃತನು ವೃಕ್ಷದ ಒಂದು ಕೊಂಬೆಯನ್ನಾಗಿ ಶ್ರಯಿಸಿ ದ್ದಾನೆ.

ಎಡಗಾಲಿನ ಮೇಲೆ ಬಲಗಾಲನ್ನು ಹಾಕಿಕೊಂಡಿದ್ದಾನೆ. ಆಹಾರಾದಿಗಳ ಸೇವನೆಯಿಲ್ಲದಿದ್ದರೂ ಆನಂದದಿಂದ ಪ್ರಫುಲ್ಲಿತನಾಗಿದ್ದಾನೆ. ಆವಾಗ ವ್ಯಾಸರ ಪರಮ ಮಿತ್ರರಾದ, ಪರಮ ಭಾಗವತೋತ್ತಮರೂ, ಸ್ವಚ್ಛಂದಚಾರಿಗಳೂ ಆದ ಮೈತ್ರೇಯರು ಅಲ್ಲಿಗೆ ಬಂದರು.

ಅವರು ಭಗವಂತನು ಅನುರಾಗೀ ಅಂತರಂಗ ಭಕ್ತರು ಭಕ್ತಿಯ ಆನಂದ ದಿಂದ ಅವರ ಕುತ್ತಿಗೆಯು ಬಗ್ಗಿ ಹೋಗಿದ್ದಿತು. ಅವರ ಸನ್ನಿಧಿಯಲ್ಲಿ ತನ್ನ ಸಹಜ ಮುಗ್ಧಮನೋಹರ ದೃಷ್ಟಿಯಿಂದ ನನ್ನನ್ನು ಆನಂದಗೊಳಿಸುತ್ತಾ ಶ್ರೀ ಕೃಷ್ಣನು ಹೇಳಿದನು.

ಪ್ರಿಯ ಭಕ್ತ; ನಾನು ನಿನ್ನ ಆಂತರಂಗಿಕ ಅಭಿಲಾಷೆಯನ್ನು ತಿಳಿದಿದ್ದೇನೆ. ಅನ್ಯರಿಗೆ ದುರ್ಲಭವಾದಂತಹ ಸಾಧನೆಯನ್ನು ನಿನಗೆ ಕೊಡುತ್ತೇನೆ,

ನೀನು ಹಿಂದೆ ವಸುಗಳಲ್ಲಿ ಒಬ್ಬನಾಗಿದ್ದೆ. ಹಿಂದೆ ಪ್ರಜಾಪತಿಗಳೂ ವಸುಗಳೂ ಮಾಡಿದ ಯಜ್ಞದಲ್ಲಿ ನನ್ನ ಪ್ರಾಪ್ತಿಗಾಗಿಯೆ ನೀನು ನನ್ನನ್ನು ಆರಾಧಿಸಿದ್ದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಾಧೂತ್ತಮ ಇದು ನಿನ್ನ ಅಂತಿಮ ಜನ್ಮವು ನನ್ನ ಪೂರ್ಣಾನುಗ್ರಹಕ್ಕೆ ಪಾತ್ರನಾಗಿರುವೆ.

ನಾನೀಲೋಕವನ್ನು ತ್ಯಜಿಸಿ ಸ್ವಧಾಮಕ್ಕೆ ತೆರಳಲು ಅಪೇಕ್ಷಿಸಿದ್ದೇನೆ. ನಿನ್ನ ಅನನ್ಯ ಭಕ್ತಿಯಿಂದಲೇ ಈ ಏಕಾಂತ ಸ್ಥಿತಿಯಲ್ಲಿಯೂ ನೀನು ನನ್ನನ್ನು ಸಂದರ್ಶಿಸಿರುವೆ, ಹಿಂದೆ ಪಾದ್ಮಕಲ್ಪಾರಂಭದಲ್ಲಿ ನನ್ನ ನಾಭಿ ಕಮಲೋತ್ಪನ್ನನಾದ ಬ್ರಹ್ಮನಿಗೆ, ಸಂಪೂರ್ಣ ನನ್ನ ಮಹಿಮಾ ಪ್ರತಿಪಾದಕವಾದ ಶ್ರೇಷ್ಠ ಜ್ಞಾನವನ್ನು ಉಪದೇಶಿಸಿದ್ದೆನು. ವಿವೇಕೀ ಸತ್ಪುರುಷರು ಆ ಜ್ಞಾನ ಭಂಡಾರವನ್ನು "**ಭಾಗವತ**"ವೆಂದು ಕರೆಯುತ್ತಾರೆ. ಅದನ್ನೇ ನಿನಗೆ ಕೊಡುತ್ತೇನೆ.

ಭಗವಂತನ ಈ ಮಾತುಗಳನ್ನು ಕೇಳಿ ನನಗೆ ರೋಮಾಂಚನವಾಯಿತು. ಕಂಠವು ಗದ್ಗದಿತವಾಯಿತು. ಆನಂದಾಶ್ರುಗಳು ಹರಿಯತೊಡಗಿದವು. ಆಗ ಬದ್ಧಾಂಜಲಿ ಪುಟನಾಗಿ ನಾನು ಹೇಳಿದನು, ಸ್ವಾಮಿನ್- ಈ ಲೋಕದಲ್ಲಿ ನಿನ್ನ ಕೃಪಾ ಪಾತ್ರನಾದವನು ಸರ್ವವನ್ನೂ ಪಡೆಯುತ್ತಾನೆ. ಧರ್ಮಾರ್ಥ ಕಾಮ ಮೋಕ್ಷಗಳಲ್ಲಿ ಅವನಿಗೆ ಯಾವುದೂ ದುರ್ಲಭವಲ್ಲ. ಆದರೆ ನನಗೆ ಅದಾವುದೂ ಬೇಕಾಗಿಲ್ಲ. ಕೇವಲ ನಿನ್ನ ಪಾದಕಮಲ ಸೇವೆಯನ್ನು ಮಾತ್ರ ಬಯಸುತ್ತೇನೆ. ನೀನೆ ಅಜನ್ಮನಾದರೂ ಜನ್ಮವನ್ನು ತಾಳುವೆ. ನಿಸ್ಪೃಹನಾದರೂ ಕರ್ಮವನ್ನು ಮಾಡುವೆ,

ಕಾಲನಿಗೂ ಕಾಲನಾದ ನೀನು ಶತ್ರುಭಯದಿಂದ ಓಡಿಹೋಗಿ, ದ್ವಾರಕಿಯ ಭದ್ರಕೋಟೆಯಲ್ಲಿ ರಕ್ಷಣೆಯನ್ನು ಪಡೆಯುವೆ. ಯದ್ಯಪಿ ನೀನು ಸ್ವಾತ್ಮಾರಾಮನು. ಅದರೂ ಹದಿನಾರು ಸಾವಿರ ಪತ್ನಿಯರು ನಿನಗಿರುವರು. ನಿನ್ನ ಚರಿತ್ರೆಗಳ ವಿಚಿತ್ರತೆಯಿಂದ ವಿದ್ವಾಂಸರ ಬುದ್ಧಿಯೂ ಭ್ರಮಿಸುವುದು.

ನಿನ್ನ ಸ್ವಸ್ವರೂಪ ಜ್ಞಾನವು ಅಬಾಧಿತ-ಅಖಂಡಿತ, ಆದರೂ ಸಲಹೆಗಾಗಿ ನನ್ನನ್ನು ಕರೆಯಿಸಿ, ನನ್ನ ಅಭಿಪ್ರಾಯವನ್ನು ಸಾವಧಾನತೆಯಿಂದ ಆಲಿಸುತ್ತಿದ್ದೆ. ಇದು ನಿನ್ನ ಲೀಲೆಯ ಮನೋಹರತೆಯು, ಪ್ರಭೋ = ನಿನ್ನ ಸ್ವರೂಪವನ್ನು ಪ್ರಕಟಿಸುವ ಬ್ರಹ್ಮನಿಗೆ ಉಪದೇಶಿಸಿದ ಶ್ರೇಷ್ಠಜ್ಞಾನವನ್ನು ನಾನೂ ಪಡೆಯಲು ಯೋಗ್ಯನಾಗಿದ್ದರೆ ದಯೆಯಿಟ್ಟು ಉಪದೇಶಿಸು. ನಿನ್ನ ಕೃಪಾಪಾತ್ರಿಯಾದರೆ ಸಂಸಾರ ದುಃಖದಿಂದ ನಿವೃತ್ತನಾಗುವೆನು. ವಿದುಃಕ

Sri Vidyabharathi Book Centre, Sringeri

ನಾನು ಹೀಗೆ ಪ್ರಾರ್ಥಿಸಲು ಕಮಲ ನಯನನಾದ ಪರಮ ಪುರುಷನು ಸ್ವಸ್ವರೂಪ ಜ್ಞಾನವನ್ನು ಉಪದೇಶಿಸಿದನು.

ಈ ರೀತಿ ಶ್ರೀಕೃಷ್ಣನಿಂದ ಆತ್ಮತತ್ತ್ವ ಪ್ರಾಪ್ತಿಯನ್ನು ಹೊಂದಿ ಅವನ ಚರಣ ಕಮಲಗಳನ್ನು ವಂದಿಸಿ ಇಲ್ಲಿಗೆ ಹೊರಟು ಬಂದಿದ್ದೇನೆ.

ಅವನ ವಿರಹ ತಾಪದಿಂದ ನನ್ನ ಚಿತ್ತವು ವ್ಯಾಕುಲಗೊಂಡಿದೆ. ಅವನ ದಿವ್ಯ ದರ್ಶನದಿಂದ ಆನಂದಿತವಾಗಿದ್ದ ನನ್ನ ಹೃದಯವು ವಿರಹವ್ಯಥೆಯಿಂದ ಪೀಡಿತವಾಗಿದೆ, ವಿದುರ ನಾನೀಗ ಅವನ ಅಜ್ಞಾನುಸಾರವಾಗಿ ಬದರಿಕಾ ಆಶ್ರಮಕ್ಕೆ ಹೋಗುತ್ತಿದ್ದೇನೆ.

ಯತ್ರ ನಾರಾಯಣೋ ದೇವೋ, ನರಶ್ಚ ಭಗವಾನ್ಯಷಿಃ
ವ್ಮೃದು ತೀವ್ರವಂ ತಪೋ ದೀರ್ಘಂ, ತೇಪಾತೇ ಲೋಕ
ಭಾವನೌ

ಬದರೀಕ್ಷೇತ್ರದಲ್ಲಿ ನಾರಾಯಣನು ನರನೊಡನೆ ಲೋಕಸಂಗ್ರಹಾರ್ಥ ವಾಗಿ, ದೀರ್ಘ ಕಾಲೀನ ತಪಸ್ಸಿನಲ್ಲಿ ನಿರತನಾಗಿದ್ದಾನೆ.

ಶ್ರೀ ಶುಕದೇವರು ಹೇಳುತ್ತಾರೆ.

ರಾಜನ್, ಉದ್ಧವನಿಂದ ಬಂಧು ಜನರ ವಿಯೋಗ ವಾರ್ತೆಯನ್ನು ಆಲಿಸಿದ ವಿದುರನು ಅತ್ಯಂತ ಶೋಕಾಕುಲನಾದನು ಆದರೆ ತನ್ನ ದಿವ್ಯ ಜ್ಞಾನ ದಿಂದ ಶೋಕವನ್ನು ನಿಗ್ರಹಿಸಿದನು.

ಮಹಾ ಬಾಗವತೋತ್ತಮನಾದ ಉದ್ಧವನು ಬದರಿಕಾಶ್ರಮಕ್ಕೆ ಹೊರ ಡಲು. ಕುರುಶ್ರೇಷ್ಠನಾದ ವಿದುರನು ಶ್ರದ್ಧೆಯಿಂದ ಕೇಳಿದನು.

ಪರಮ ಭಾಗವತೋತ್ತಮನೇ ಭಗವಾನ್ ಶ್ರೀಕೃಷ್ಣನು ಸ್ವಸ್ವರೂಪದ ಶ್ರೇಷ್ಠ ರಹಸ್ಯವನ್ನು ನಿನಗೆ ತಿಳಿಸಿದನಷ್ಟೆ. ಅದನ್ನು ದಯೆಯಿಟ್ಟು ನನಗೂ ತಿಳಿಸು. ಏಕೆಂದರೆ ಭಗವದ್ಭಕ್ತರು ಭಕ್ತರ ಕಾರ್ಯ ನಿರ್ವಹಣೆಗಾಗಿಯೆ ಸಂಚರಣಶೀಲರಾಗಿರುತ್ತಾರಷ್ಟೆ.

ಉದ್ಧವನು ಹೇಳಿದನು. ನಿಷ್ಪಾಪನೇ. ನೀನು ಆ ಜ್ಞಾನ ಪ್ರಾಪ್ತಿ ಗಾಗಿ, ಮೈತ್ರೇಯರನ್ನು ವಿಧಿವತ್ತಾಗಿ ಸೇವಿಸು. ಈ ಮರ್ತ್ಯ ಲೋಕವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣನು ಬಿಡುವಾಗ ಅವನೇ ನಿನಗೆ ಜ್ಞಾನೋಪದೇಶ ಮಾಡುವಂತೆ ಪೂಜ್ಯ ಮೈತ್ರೇಯರಿಗೆ ಆಜ್ಞಾಪಿಸಿದ್ದಾನೆ,

ಈ ರೀತಿ ವಿದುರನೊಡನೆ ಮಾಡಿದ ಸಂವಾದದಿಂದ ಉದ್ಧವನ ವಿರಹ ತಾಪವು ಶಾಂತವಾಯಿತು. ಅಂದು ರಾತ್ರಿಯನ್ನು ಅಲ್ಲಿಯೆ ಕಳೆದು, ಮಾರನೇ ದಿವಸ ಪ್ರಾತಃಕಾಲದಲ್ಲಿ ಅಲ್ಲಿಂದ ಉದ್ಧವನು ಪ್ರಯಾಣ ಮಾಡಿದನು.

ರಾಜಾ ಪರೀಕ್ಷಿತನು ಕೇಳುತ್ತಾನೆ, ಭಗವನ್, ಇಡೀ ಯಾದವ ಕುಲವೇ ನಷ್ಟವಾಯಿತು. ಶ್ರೀಹರಿಯೂ ಸ್ವಧಾಮ ವಾಸಿಯಾದನು. ಉದ್ಧವನು ಹೇಗೆ ತಾನೇ ಉಳಿದುಕೊಂಡನು ?

ಶ್ರೀ ಶುಕದೇವರು ಹೇಳಿದರು. ಭಗವತ್ಸಂಕಲ್ಪವು ಅಕಾಟ್ಯವಾದುದು. ಅವನ ಇಚ್ಛೆಯು ವ್ಯರ್ಥವಾಗುವುದಿಲ್ಲ. ಶ್ರೀ ಹರಿಯು ಬ್ರಾಹ್ಮಣ ಶಾಪ ರೂಪ ನೆವದಿಂದ ತನ್ನ ಕುಲವನ್ನು ಸಂಹರಿಸಿ ತಾನೂ ಸ್ವಧಾಮಕ್ಕೆ ತೆರಳುವ ಮುನ್ನ ವಿಚಾರಿಸಿದನು.

ಈಗ ನಾನೂ ಹೊರಟು ಹೋಗುವೆನು. ನನ್ನ ಅಮೋಘ ಜ್ಞಾನವನ್ನು ಹೊಂದಲು ಸಂಯಮಿ ಉದ್ಧವನೊಬ್ಬನನ್ನು ಬಿಟ್ಟರೆ ಮತ್ತಾರೂ ಯೋಗ್ಯರಲ್ಲ. ಅವನು ನನಗೆ ಸರಿಸಮಾನನು. ಅವನು ಆತ್ಮಜಯಿ ಸಾಂಸಾರಿಕ ವಿಷಯ ವಿಮುಖನು. ಜನಗಳಿಗೆ ಜ್ಞಾನ ಶಿಕ್ಷಣವನ್ನು ಕೊಡುವುದಕ್ಕಾಗಿ ಅವನು ಇಲ್ಲಿಯೆ ಇರಬೇಕು.

ಹೀಗೆ ಯೋಚಿಸಿದ ಶ್ರೀಕೃಷ್ಣನು ಬದರಿಗೆ ಹೋಗುವಂತೆ ಉದ್ಧವನಿಗೆ ಆಜ್ಞಾಪಿಸಿದನು,

ಉದ್ಧವನು ಬದರಿಕಾಶ್ರಮಕ್ಕೆ ಹೋಗಿ ಸಮಾಧಿಯೋಗದಿಂದ ಶ್ರೀ ಹರಿಯ ಆರಾಧನೆಗೆ ತೊಡಗಿದನು. ಅವನು ಸಾಮಾನ್ಯನಲ್ಲಿ, ಸ್ವಯಂ ಈಶ್ವರನು ಪ್ರಭುವು, ಜ್ಞಾನಾಧಿಕಾರಿಯು.

ದೇವ ಮಂದಿರಗಳಲ್ಲಿ ಪ್ರತಿಷ್ಠಿತ ಮೂರ್ತಿಯೊಂದಿಗೆ ಉತ್ಸವ ಮೂರ್ತಿಯೂ ಇರುತ್ತದೆ. ಅದೂ ಸಹ ಪ್ರತಿಷ್ಠಿತ ಮೂರ್ತಿಯಂತೆಯೆ ಮಹಿಮಾಯುತವಾದುದು. ಉದ್ಧವನು ಶ್ರೀಕೃಷ್ಣನ ಉತ್ಸವ ಮೂರ್ತಿಯು,

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರಿಂದಲೇ ಶ್ರೀ ಕೃಷ್ಣನು ಹಿಂದೆ ವ್ರಜಕ್ಕೆ ಉದ್ಧವನನ್ನು ತನ್ನ ಪ್ರತಿನಿಧಿಯನ್ನಾಗಿ ಕಳುಹಿಸಿದ್ದನು.

ಉದ್ಧವ ಶಬ್ದಾರ್ಥವನ್ನು ನೋಡಿ, ಉತ್ ಉತ್ಕೃಷ್ಟ, ಹವಾತ್ ಹವನಾತ್ ಇತಿ ಉದ್ಧವಃ ಅಂದರೆ ಹೋಮ-ಹವನಾದಿಗಳಿಂದ ಪ್ರಾಪ್ತವಾಗುವ ಉತ್-ಪರಮಾತ್ಮ. ಸತ್ಯ. ಧವ ಎಂದರೆ ಸ್ವಾಮಿ. ಉತ್ಕೃಷ್ಟನಾದ ಸತ್ಯರೂಪೀ ಪರಮಾತ್ಮ ಶ್ರೀ ಕೃಷ್ಣನು ಯಾರಿಗೆ ಸ್ವಾಮಿಯೋ ಅವನ ಉದ್ಧವ. ಇವನು ಶ್ರೀ ಕೃಷ್ಣನ ಜ್ಞಾನಾಧಿಕಾರಿಯಾಗಿ ಉಳಿದುಕೊಂಡಿದ್ದಾನೆ. ಹಾಗೂ. ಶ್ರೀಕೃಷ್ಣನ ಆಜ್ಞಾನುಸಾರವಾಗಿ ಬದರಿಗೆ ಹೋಗಿ ಧ್ಯಾನತತ್ಪರನಾಗಿದ್ದಾನೆ.

ಭಗವಾನ್ ಶ್ರೀ ಕೃಷ್ಣನು ಸ್ವಲೀಲೆಯಿಂದ ದೇಹಧಾರಿಯಾಗಿದ್ದನು. ಸ್ವಲೀಲೆಯಿಂದಲೇ ದೇಹತ್ಯಾಗಿಯಾದನು. ಶ್ರೀ ಕೃಷ್ಣನು ಇಚ್ಛಿಸಿದ್ದರೆ ಆ ದೇಹವನ್ನೇ ಕಲ್ಪ ಪೂರ್ತಿ ಇಟ್ಟುಕೊಳ್ಳಬಹುದಾಗಿದ್ದಿತು. ಹಾಗೆ ಮಾಡಿದ್ದರೆ ಎಲ್ಲರಿಗೂ ದೇಹ ರಕ್ಷಣೆಯಲ್ಲಿಯೆ ಆಸ್ಥೆಯು ಹೆಚ್ಚುತ್ತಲಿದ್ದಿತು ವೈರಾಗ್ಯವು ಹುಟ್ಟುತ್ತಲೇ ಇರಲಿಲ್ಲ. ಶ್ರೀ ಕೃಷ್ಣನು ತನ್ನದೇ ಆದ ಉದಾಹರಣೆಯಿಂದ ಲೋಕಕ್ಕೆ ಬೋಧಿಸಿದ್ದಾನೆ.

ಈ ದೇಹವು ಸ್ಥಿರವಲ್ಲ. ಈ ದೇಹದ ಸ್ಥಿರತೆಗೆ ಪ್ರಯತ್ನಿಸಬಾರದು

ಬ್ರಹ್ಮನ ಶರೀರವೂ ಒಂದು ದಿವಸ ಬಿದ್ದು ಹೋಗುವುದೇ ಆಗಿವೆ ಅಂದ ಮೇಲೆ ಉಳಿದವರ ವಿಚಾರವೇನು? ಶ್ರೀಕೃಷ್ಣನ ದೇಹ ತ್ಯಾಗದಿಂದಲೂ ಧೀರರು ವಿವೇಕವನ್ನು ಕಂಡುಕೊಳ್ಳಬೇಕು.

"ಶ್ರೀ ಕೃಷ್ಣನು ಅಂತ್ಯಕಾಲದಲ್ಲಿ ನಿನ್ನನ್ನು ಜ್ಞಾಪಿಸಿಕೊಂಡನು" ಎಂದು ಉದ್ಧವನಿಂದ ಕೇಳಿದ ವಿದುರನು ಗಳಗಳನೆ ಅತ್ತು ಬಿಟ್ಟನು. ನಂತರ ಅಲ್ಲಿಂದ ಹೊರಟು ಗಂಗಾತೀರಕ್ಕೆ ತಲಪಿದನು. ಅಲ್ಲಿಯೆ ಮಹರ್ಷಿಗಳಿಂದ ಮೈತ್ರೇಯರು ಇರುತ್ತಿದ್ದರು.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ

ಚತುರ್ಥೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ತೃತೀಯ ಸ್ಕಂಧ, ಐದನೆಯ ಅಧ್ಯಾಯ
ವಿದುರ ಪ್ರಶ್ನೆ–ಮೈತ್ರೇಯರಿಂದ
ಸೃಷ್ಟಿಕ್ರಮವರ್ಣನೆ

ಶ್ರೀ ಶುಕದೇವರು ಪರೀಕ್ಷಿದ್ರಾಜನಿಗೆ ಹೇಳುತ್ತಿದ್ದಾರೆ. ರಾಜನ್-ಪರಮ ಶ್ರೇಷ್ಠ ಮುನಿಗಳಾದ ಮೈತ್ರೇಯರು ಹರಿದ್ವಾರ ಕ್ಷೇತ್ರದಲ್ಲಿ ವಿರಾಜಮಾನರಾಗಿದ್ದರು,

ಭಗವದ್ಭಕ್ತಿಯಿಂದ ಶುದ್ಧಾಂತಃಕರಣನಾದ ವಿದುರನು ಅವರಲ್ಲಿಗೆ ಹೋದನು. ತನ್ನ ಸೌಶೀಲ್ಯಾದಿ ಗುಣಗಳಿಂದ ಸುಶೋಭಿತನಾದ ವಿದುರನು ನಮ್ರತೆಯಿಂದಅವರನ್ನು ಕೇಳಿದನು.

ನೋಡಿ, ಹರಿದ್ವಾರ ಶಬ್ದದ ಮೇಲೆ ಹಿಂದೆ ಬಹಳ ವಾಕ್ಯಾರ್ಥಗಳು ನಡದಿವೆ. ಹರಿದ್ವಾರವೋ ? ಹರದ್ವಾರವೋ ? ವೈಷ್ಣವ-ಶೈವರಿಬ್ಬರೂ ವಾಕ್ಯಾರ್ಥಗಳನ್ನು ಮಾಡಿದರು.

ಬದರೀನಾಥಕ್ಕೆ ಹೋಗುವ ದಾರಿಯಾದುದರಿಂದ "ಹರಿದ್ವಾರ" ಕೇದಾರೆ ನಾಥಕ್ಕೆ ಹೋಗುವ ದಾರಿಯಾದುದರಿಂದ "ಹರದ್ವಾರ" ಈ ಮುಕದ್ದಮೆಯು ಇಂಗ್ಲೀಷರ ಕೋರ್ಟಿಗೆ ಹೊಂದರೆ ಏನು ತೀರ್ಮಾನ ಕೊಡುವರು? ಹರಿದ್ವಾರವೂ ಅಲ್ಲ ಹರದ್ವಾವೂ ಅಲ್ಲ, "ಹಡದ್ವಾರ" ಎಂದರೆ ಮೂಳೆಗಳನ್ನು ಹಾಕುವ ಸ್ಥಳ.

ಹಿಂದೊಮ್ಮೆ ವೃಂದಾವನದಲ್ಲಿ ಇಂತಹ ಮುಕದ್ದಮೆಯೊಂದು ಕೋರ್ಟಿನಲ್ಲಿತ್ತು. ಕೃಷ್ಣನ ಕಿರೀಟವು ಎಡಭಾಗಕ್ಕೆ ವಾಲಬೇಕೇ? ಬಲ ಭಾಗಕ್ಕೆ ವಾಲಬೇಕೋ?

ವಲ್ಲಭ ಸಂಪ್ರದಾಯದವರಿಗೂ. ನಿಂಬಾರ್ಕ ಸಂಪ್ರದಾಯದವರಿಗೂ ಜಗಳವು ಪ್ರಾರಂಭವಾಯಿತು, ವಾದ-ವಿವಾದಗಳಾದ ಮೇಲೆ ಯಾವ ಕಡೆಗೂ ವಾಲಿಸಬಾರದು, ನೆಟ್ಟಗಿರಬೇಕು" ಎಂದು ಕೋರ್ಟು ತಿರ್ಮಾನವನ್ನು ಕೊಟ್ಟಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಚಿ ಕ್ಷೇತ್ರದಲ್ಲಿ ಆನೆಗೆ ನಾಮದ ಕೆಳಗೆ ಗೂಟವಿರಬೇಕೊ. ಬೇಡವೊ ಎಂಬ ಮೊಕದ್ದಮೆಯೂ, ಆ ಆನೆಯೂ ಸತ್ತು ಹೋದರೂ ಇನ್ನೂ ಜೀವಂತ ವಾಗಿದೆಯೆಂಬುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ.

ಹೀಗೆ ಸಂಪ್ರದಾಯ ವಾದಿಗಳ ಹಣೇಬರಹವಿದೆ. ಭಾಗವತಕಾರರು ಇದಾವುದಕ್ಕೂ ಅವಕಾಶ ಕೊಡದಂತೆ- "ದ್ವಾರಿದ್ಯುಸದ್ಯಾಃ" ಎಂದು ಹೇಳಿ ಬಿಟ್ಟರು.

ಇಲ್ಲಿ ಮೈತ್ರೇಯರನ್ನು ಕಂಡು ವಿದುರನು ಪ್ರಾರ್ಥಿಸುತ್ತಾನೆ.

ಪೂಜ್ಯರೇ,

ಸುಖಾಯ ಕರ್ಮಾಣಿ ಕರೋತಿ ಲೋಕಃ
ನತೈಃ ಸುಖಂ ವಾನ್ಯದುಪಾರಮಂವಾ

ಲೋಕವು ಸುಖಪ್ರಾಪ್ತಿಗಾಗಿ ಯಾವಜ್ಜೀವವೂ ಕರ್ಮಗಳನ್ನು ಆಚರಿಸುತ್ತದೆ. ಆದರೆ ಅವರಿಗೆ ಈ ಕರ್ಮಾ ಚರಣೆಯಿಂದ ಸುಖ ಪ್ರಾಪ್ತಿಯೂ ಇಲ್ಲ ದುಃಖ ನಿವೃತ್ತಿಯೂ ಇಲ್ಲ.

ವಿಂದೇತ ಭೂಯ ಸ್ತತ ಏವ ದುಃಖಂ
ಯದತ್ರ ಯುಕ್ತಂ ಭಗವಾನ್ ವದೇನ್ನಃ

ಪ್ರತ್ಯುತ ದುಃಖ ಪ್ರಾಪ್ತಿಯೇ ಆಗುತ್ತದೆ. ಈ ವಿಚಾರದಲ್ಲಿ ದಯೆಯಿಟ್ಟು ತಾವು ಯೋಗ್ಯವಾದ ಸಲಹೆಯನ್ನು ಕೊಡಿರಿ.

ನೋಡಿ-ಇದೇ ಎಲ್ಲರೂ ವಿಚಾರಿಸಬೇಕಾದ ವಿಷಯ, ಮನುಷ್ಯನಿಗೆ ಸುಖ-ದುಃಖಗಳು ಹೇಗೆ ಒದಗುತ್ತವೆ? ಎರಡರಲ್ಲಿಯೂ "ಖ" ಒಂದೇ ಸು-ದು.ಗಳು ಆಗಂತುಕಗಳು. ಅಂತರಿಕ್ಷದಲ್ಲಿ ಮೋಡಗಳು ಬರುತ್ತವೆ ಹೋಗುತ್ತವೆ. ಯಾರ ಜೀವನದಲ್ಲಿಯಾಗಲಿ ಸುಖ-ದುಃಖಗಳು ಶಾಶ್ವತಗಳಲ್ಲ, ನಮ್ಮ-ನಮ್ಮ ಕರ್ಮಾಚರಣೆಗಳೇ ಸುಖ-ದುಃಖ ಜನಕಗಳು.

ಸಾಂಸಾರಿಕರು ಮಾಯಾವೇಷ್ಟಿತರಾಗಿ ಭಗವಂತನಿಂದ ವಿಮುಖರಾಗುತ್ತಿದ್ದಾರೆ.

ಅಧರ್ಮಾಚರಣೆಯಲ್ಲಿ ಆಸಕ್ತರಾಗುತ್ತಿದ್ದಾರೆ. ಬೆಂಕಿಯ ಮುಂದೆಯೂ ಇರೋಣ, ಶೀತದ ಅನುಭವವನ್ನೂ ಪಡೆಯೋಣ, ಎಂದರೆ ಹೇಗೆ ಸಾಧ್ಯ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತೆಯೆ ಅಧರ್ಮಾಸಕ್ತಿಯು ಮೂಡಿದ ಮೇಲೆ ದುಃಖವು ಅವಶ್ಯವಾಗಿ ಒದಗಬೇಕಷ್ಟೆ.

ದುಃಖೀ ಮನುಷ್ಯನ ಪರದಾಟಕ್ಕೆ ಮಿತಿಯುಂಟೇ? ಅದರ ಪರಿಜ್ಞಾನವು ಮೊದಲೇ ಇದ್ದಿದ್ದರೆ ದುಃಖದಾಯಕ ಕರ್ಮಗಳನ್ನೇಕೆ ಮಾಡುತ್ತಿದ್ದನು? ಕಳ್ಳತನ ಮಾಡುವಾಗ ಹೆದರದ ಕಳ್ಳನು ಶಿಕ್ಷೆಯನ್ನು ಅನುಭವಿಸುವಾಗ ಹೆದರಿದರೆ ಲಾಭವೇನು? ದುಃಖಿಗಳಾಗದಿರಬೇಕಾದರೆ ದುಃಖದಾಯಕ ಕರ್ಮಗಳನ್ನು ಆಚರಿಸಬಾರದು.

ವಿದುರನು ಮೈತ್ರೇಯರನ್ನು ಪ್ರಶ್ನಿಸುತ್ತಾನೆ. ಮಹರ್ಷಿಗಳೇ, ದೌರ್ಭಾಗ್ಯದಿಂದ ಶ್ರೀ ಕೃಷ್ಣ ವಿಮುಖರಾದ, ಅಧರ್ಮಪರಾಯಣರಾದ ದುಃಖಿಗಳನ್ನು ಅನುಗ್ರಹಿಸುವುದಕ್ಕಾಗಿಯೇ ತಮ್ಮಂತಹ ಭಾಗ್ಯಶಾಲೀ ಶ್ರೀ ಕೃಷ್ಣ ಭಕ್ತರು ಲೋಕದಲ್ಲಿ ಸಂಚರಣ ಶೀಲರಾಗಿರುತ್ತಾರೆ.

ಸಾಧುವರೇಣ್ಯರೇ, ತಾವುದಯೆಯಿಟ್ಟು ತಿಳಿಸಿರಿ, ಯಾವ ರೀತಿ ಆರಾಧಿಸಿದರೆ ಭಗವಂತನು ನಮ್ಮ ಹೃದಯಾದಿಷ್ಠಿತನಾಗುವನು? ಹಾಗೂ ಸ್ವ-ಸ್ವರೂಪ ಭೂತವಾದ, ಅಪರೋಕ್ಷಾನುಭವ ದಾಯಕವಾದ ಸನಾತನ ಜ್ಞಾನವನ್ನು ಅನುಗ್ರಹಿಸುವನು? ಆ ಸನ್ಮಾರ್ಗವಾವುದು? ಆ ಶಾಂತಿ ದಾಯಕ ಸಾಧನವಾವುದು?

ಸರ್ವತಂತ್ರ ಸ್ವಂತತ್ರನಾದ ಶ್ರೀ ಹರಿಯು ತ್ರಿಲೋಕಾಧೀಶನು ಅವತಾರಗಳನ್ನೆತ್ತಿ ಲೀಲೆಗಳನ್ನು ಪ್ರದರ್ಶಿಸುತ್ತಾನೆ. ಅಕರ್ತನಾದರೂ ಕಲ್ಪಾರಂಭದಲ್ಲಿ ಸೃಷ್ಟಿಯನ್ನು ರಚಿಸುತ್ತಾನೆ.

ಸ್ಥಿತಿಯಲ್ಲಿ ಪಾಲಕನಾಗಿಯೂ, ಕೊನೆಯಲ್ಲಿ ಸಂಹಾರಕನಾಗಿ ವೃತ್ತಿ ಶೂನ್ಯನಾಗಿ, ಹೃದಯಾಕಾಶದಲ್ಲಿ ಯೋಗಮಾಯಾ ಸಮಾವಿಷ್ಟನಾಗಿ ಬಿಡುವನು. ಅವನು ಏಕಮೇವಾದ್ವಿತೀಯನಾದರೂ ಅಂತರ್ಯಾಮಿ ರೂಪದಿಂದ ಬ್ರಹ್ಮಾಂಡದಲ್ಲಿ ಪ್ರವೇಶಿಸಿ ಅನೇಕ ರೂಪಗಳಲ್ಲಿ ಪ್ರಕಟನಾಗುವನು. ಇದರ ರಹಸ್ಯವೇನು?

ಅವನು ಅವತಾರಗಳನ್ನೆತ್ತಿ, ದೇವ – ಗೋಬ್ರಾಹ್ಮಣರ ಸಂರಕ್ಷಣಾರ್ಥವಾಗಿ ಲೀಲೆಯಿಂದಲೇ ನಾನಾ ವಿಧ ದಿವ್ಯ ಕರ್ಮಗಳನ್ನು ಆಚರಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನ ಗುಣಕರ್ಮಗಳನ್ನು ಎಷ್ಟು ಕೇಳಿದರೂ ನಮಗಳಿಗೆ ತೃಪ್ತಿಯೇ ಇಲ್ಲವು. ಸಕಲ ಲೋಕನಾಥನಾದ ಶ್ರೀಹರಿಯು ಯಾವ ತತ್ತ್ವಗಳಿಂದ ಅಖಿಲ ಲೋಕಗಳನ್ನು, ಲೋಕ ಪಾಲಕರನ್ನೂ ಲೋಕಾಲೋಕ ಪರ್ವತಗಳನ್ನೂ ಅವುಗಳ ಹೊರ ಭಾಗಗಳನ್ನೂ, ವಿವಿಧ ಪ್ರಾಣಿಗಳ ಭೋಗಗಳನ್ನೂ ರಚಿಸು ವನು? ಬ್ರಾಹ್ಮಣೋತ್ತಮರೇ ಆ ವಿಶ್ವಕರ್ತಾ ಸ್ವಯಂಭೂ ನಾರಾಯಣನು ಸಕಲ ಪ್ರಜೆಗಳ ನಾಮ ರೂಪ–ಗುಣ–ಕರ್ಮ–ಸ್ವಭಾವವನ್ನು ಹೇಗೆ ರಚಿಸಿ ದನು?

ಯದ್ಯಪಿ ನಾನು ಶ್ರೀ ವ್ಯಾಸರ ಮುಖಾರವಿಂದದಿಂದ ಎಷ್ಟೋ ಬಾರಿ ವರ್ಣಾಶ್ರಮ ಧರ್ಮಾದಿಗಳನ್ನು ಕೇಳಿರುವೆನು, ಆದರೆ ಶ್ರೀ ಕೃಷ್ಣ ಕಥಾಮೃತ ರಸಾ ಸ್ವಾದವನ್ನು ಬಿಟ್ಟರೆ ಮತ್ತೇನೂ ನನಗೆ ರುಚಿಸದು.

ಅಲ್ಪ ಸುಖದಾಯಕವಾದ ಧರ್ಮ ಶ್ರವಣದಿಂದ ಏನು ತಾನೇ ಪ್ರಯೋಜನವು?

ಆ ಪುಣ್ಯ ತೀರ್ಥ ಪಾದನಾದ ಶ್ರೀಹರಿಯ ಗುಣಾನುವಾದದಿಂದ ಯಾರಿಗೆ ತಾನೇ ತೃಪ್ತಿಯುಲಭಿಸುತ್ತದೆ?

ನಾರದಾದಿ ಮಹಾತ್ಮರು - ತಮ್ಮಂತಹರಿರುವ ಸಾಧು ಸಮಾಜಗಳಲ್ಲಿ ಭಗವಂತನ ಗುಣ-ಸಂಕೀರ್ತನೆಯನ್ನು ಮಾಡುತ್ತಾರೆ, ಆ ಕೀರ್ತನಗಳು ಮನುಷ್ಯರ ಕರ್ಣ ರಂಧ್ರಗಳನ್ನು ಪ್ರವೇಶಿಸಿ, ಅಲ್ಲಿ ಮನೆ ಮಾಡಿಕೊಂಡಿರುವ ಸಂಸಾರಾಸಕ್ತಿಯನ್ನು ನಾಶ ಮಾಡುತ್ತವೆ.

ಇದೇ ಭಗವದ್ಗುಣಾನುವಾದದ ಮಹಿಮೆ. ಸೃಷ್ಟಿಯಲ್ಲಿರುವ ನಿಯಮ ವೇನೆಂದರೆ, ಧರ್ಮದ ಫಲವು ಕರ್ತೃವಿಗೆ ದೊರಕಬೇಕು.

ನೋಡಿ, ನಾನು ನಿಮಗೆ ಭಾಗವತವನ್ನು ಹೇಳುತ್ತಿದ್ದೇನೆಂದರೆ ಇದೊಂದು ಕರ್ಮವಷ್ಟೆ. ವಾಕ್ಕು ಕರ್ಮೇಂದ್ರಿಯವಾದರೆ ಕಿವಿಯು ಜ್ಞಾನೇಂದ್ರಿಯವು.

ಭಾಗವತ ಶ್ರವಣ ಮಾಡಿಸಿದ ಫಲವು ವಕ್ತೃವಿಗೇ ಅಲ್ಲ ಶ್ರೋತೃವಿಗೆ ದೊರಕುತ್ತದೆ. ಶ್ರೋತೃವು ಇದಕ್ಕಾಗಿ ಧನವ್ಯಯವನ್ನು ಮಾಡ ಬೇಕಾದ್ದಿಲ್ಲ. ವ್ರತವನ್ನು ಆಚರಿಸಬೇಕಾದ್ದಿಲ್ಲ. ದಾನ ಧರ್ಮಾದಿಗಳನ್ನು ನಡೆಸಬೇಕಾದ್ದಿಲ್ಲ,

Sri Vidyabharathi Book Centre, Sringeri

 CC-0. In Public Domain. Digitized by eGangotri

ಯಾವುದೇ ವಿಧದ ಪ್ರಯಾಸವೂ ಇಲ್ಲದೆ ಸಹಸ್ರಾರು ಮಂದಿ ಶ್ರೋತೃಗಳು ಈ ಶ್ರವಣ ಫಲವನ್ನು ಅನುಭವಿಸುತ್ತಾರೆ.

ಕರ್ಣ ರಂಧ್ರಗಳ ಮೂಲಕ ಭಗವತ್ಕಥಾಮೃತವು ಒಳ ಹೊಕ್ಕು, ಮನುಷ್ಯನಲ್ಲಿ ಮೂಡಿಕೊಂಡಿರುವ ಗೃಹದಾರಾಸಕ್ತಿಗಳನ್ನು ದೂರಮಾಡುತ್ತದೆ.

ಭಗವಾನ್ ವೇದವ್ಯಾಸರು ಭಗವಂತನ ಗುಣ ಸಂಕೀರ್ತನ ದೃಷ್ಟಿಯಿಂದ ಮಹಾ ಭಾರತವನ್ನು ರಚಿಸಿದರು. ಅದರಲ್ಲಿಯೂ ವಿಷಯ ಸುಖಗಳನ್ನು ಉಲ್ಲೇಖಿಸುತ್ತಾ, ಮನುಷ್ಯರ ಬುದ್ಧಿಯು ಭಗವತ್ಕಥಾಭಿಮುಖವಾಗಿಯೆ ಹೋಗಬೇಕೆಂದು ಪ್ರಯತ್ನಿಸಿ ತಿಳಿಯಪಡಿಸಿದ್ದಾರೆ. ಸನ್ಮಾನ್ಯ ಶ್ರೀ ಸದಾನಂದ ಯತಿಗಳು "ಮಹಾ ಭಾರತ ತಾತ್ಪರ್ಯ ಪ್ರಕಾಶ" ಎಂಬ ಗ್ರಂಥವನ್ನು ರಚಿಸಿದ್ದಾರೆ. ಅದರಲ್ಲಿ ಅವರು ವಿವೇಚಿಸುತ್ತ ಹೇಳುತ್ತಾರೆ. ಮಹಾ ಭಾರತದ ಪ್ರತ್ಯೇಕ ಕಥೆಯ ಅಭಿಪ್ರಾಯವೂ, ಶ್ರೀ ಕೃಷ್ಣ ಭಕ್ತಿ ಪ್ರತಿಪಾದನೆಯಷ್ಟೆ. ಭಗವತ್ಕಥಾ ಶ್ರವಣದಿಂದ ವಿರಕ್ತಿಯುಂಟಾಗುತ್ತದೆ. ಭಗವಚ್ಚರಣಾರವಿಂದಗಳ ಚಿಂತನೆಯಿಂದ ಆನಂದಿತನಾಗುತ್ತಾನೆ. ಕೂಡಲೆ ಸಕಲ ದುಃಖ ನಿವೃತ್ತಿಯೂ ಆಗುತ್ತದೆ.

ವಸ್ತು ಸ್ಥಿತಿಯು ಹೀಗಿದ್ದರೂ ಅಜ್ಞಾನಿಗಳು ಕಥಾ ಶ್ರವಣದಲ್ಲಿ ಅನಾಸಕ್ತರಾಗಿರುತ್ತಾರೆ. ಇದು ಅವರ ಜನ್ಮಾಂತರ ಕೃತ ಕರ್ಮಫಲ. ಮೃತ್ಯು ದೇವತೆಯು ಅವರ ಅಮೂಲ್ಯ ಜೀವನವನ್ನು ನುಂಗಿ ಹಾಕುತ್ತಿದ್ದಾನೆ. ಅವರಿಗೆ ಮಾತ್ರ ಅದರ ಅರಿವಾಗಿಲ್ಲ. ತಮ್ಮ ಮನೋವಾಕ್ಕಾಯಗಳನ್ನು ವ್ಯರ್ಥವಾದ ವಿವಾದದಲ್ಲಿ, ನಿರರ್ಥಕ ಕರ್ಮ ಚಿಂತನೆಯಲ್ಲಿ ಕಳೆಯುತ್ತಾರೆ.

ವಿದುರನು ಮೈತ್ರೇಯರನ್ನು ಪ್ರಾರ್ಥಿಸುತ್ತಾನೆ = ಪೂಜ್ಯರೇ, ತಾವು ದೀನರನ್ನು ಉದ್ಧರಿಸಲಿಚ್ಛಿಸುವವರು, ದುಂಬಿಯು ಪುಷ್ಪಸಾರವನ್ನು ಹೀರುವಂತೆ ಸರ್ವಸಾರ ಭೂತವಾದ ಹರಿಕಥಾಮೃತವನ್ನು ಸರ್ವ ಜನ ಕಲ್ಯಾಣಕ್ಕಾಗಿ ಹೇಳಿರಿ.

ಸರ್ವೇಶ್ವರನು ರಾಮ – ಕೃಷ್ಣಾದ್ಯವತಾರಗಳಿಂದ ಮಾಡಿದ ಅಲೌಕಿಕ ಲೀಲೆಗಳನ್ನು ವರ್ಣಿಸಿರಿ. ತೃಪ್ತರಾದ ಮೈತ್ರೇಯರು ಪ್ರಸನ್ನರಾಗಿ ವಿದುರನನ್ನು ಶ್ಲಾಘಿಸುತ್ತಾ ಹೇಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧುಪೃಷ್ಟಂ ತ್ವಯಾ ಸಾಧೋ,
ಲೋಕಾನ್‌ಸಾಧ್ವನು ಗೃಹ್ಣತಾ,
ಕೀರ್ತಿಂ ವಿತನ್ವತಾ ಲೋಕೇ,
ಆತ್ಮನೋಧೋಕ್ಷ ಜಾತ್ಮನಃ॥

ಸಾಧುಶಿರೋಮಣಿಯಾದ ವಿದುರನೇ, ನೀನು ಜೀವಾನುಗ್ರಹಾಪೇಕ್ಷೆಯಿಂದ ಒಳ್ಳೆಯ ಪ್ರಶ್ನೆಗಳನ್ನು ಮಾಡಿರುವೆ. ನೀನು ಸದಾ ಭಗವಚ್ಚಿಂತನೆಯಲ್ಲಿಯೇ ಇರುವೆ. ನಿನ್ನ ಕೀರ್ತಿಯು ಲೋಕವಿಖ್ಯಾತವಾದುನು.

ಈ ಶ್ಲೋಕದ ಪೂರ್ವಾರ್ಧದಲ್ಲಿ "ಸಾಧು" ಶಬ್ದವು ಮೂರು ಬಾರಿ ಬಂದಿರುವುದು. ಅಂದರೆ, ನೀನು ಸಾಧು, ನಿನ್ನ ಪ್ರಶ್ನೆಯೂ ಸಾಧು, ನಿನ್ನ ಅನುಗ್ರಹವೂ ಸಾಧು. ವ್ಯಾಸರ ಜಾರಸಪುತ್ರನಾದ ನೀನು ಹೀಗೆ ಪ್ರಶ್ನಿಸುವುದರಲ್ಲಿ ಆಶ್ಚರ್ಯವೇನಿಲ್ಲ. ನೀನು ಅನನ್ಯಭಾವದಿಂದ ಶ್ರೀಹರಿಯ ಆಶ್ರಯವನ್ನು ಪಡೆದಿರುವವನು. ಮಹಾ ಭಾಗವತೋತ್ತಮನಾಗಿರುವೆ. ನೀನು ಸಾಕ್ಷಾದ್ಧರ್ಮರಾಯನು. ಮಾಂಡವ್ಯನ ಶಾಪದಿಂದ ವಿದುರನ ರೂಪದಲ್ಲಿ ಅವತರಿಸಿರುವೆ. ನೀನು ಭಗವಂತನಿಗೆ ಅತ್ಯಂತ ಪ್ರಿಯನಾದುದರಿಂದಲೇ, ಶ್ರೀಕೃಷ್ಣನು ಮಹಾಪ್ರಸ್ಥಾನವನ್ನು ಮಾಡುವಾಗ – ನನಗೆ, ನೀನು ವಿದುರನಿಗೆ ಜ್ಞಾನವನ್ನು ಉಪದೇಶಿಸಬೇಕೆಂದು ತಿಳಿಸಿ ಹೋದನು. ಭಕ್ತಾಗ್ರೇಸರ, ನಾನು ನಿನಗೆ ಭಗವಲ್ಲೀಲೆಗಳನ್ನು ವರ್ಣಿಸಿ ಹೇಳುತ್ತೇನೆ. ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳನ್ನೂ, ಯೋಗ ಮಾಯಾಪ್ರಭಾವವನ್ನೂ ತಿಳಿಸುತ್ತೇನೆ.

ಹೀಗೆ ಮೈತ್ರೇಯರು ಹೇಳಿರುವುದನ್ನು ನಾವು ಚೆನ್ನಾಗಿ ವಿಮರ್ಶಿಸಿ ತಿಳಿದುಕೊಳ್ಳಬೇಕು. ಪರಮಾತ್ಮನು ಜ್ಞಾನಸ್ವರೂಪನು. ಅವನ ವಿಲಾಸವೇ ಈ ದೃಶ್ಯಪ್ರಪಂಚವು. ಜಡದಿಂದ ಜ್ಞಾನೋತ್ಪತ್ತಿಯಾಗುವುದಿಲ್ಲವಷ್ಟೆ, ಜಡದಿಂದ ಜ್ಞಾನೋತ್ಪತ್ತಿಯಾಗುವುದಾದರೆ, ಜ್ಞಾನೋತ್ಪತ್ತಿಗಿಂತ ಮೊದಲು, ಜಡವಿದ್ದಿತೆಂದು ಸಾಧಿಸಲು ಸಾಧ್ಯವಿಲ್ಲ ಏಕೆಂದರೆ ಜ್ಞಾನಾಭಾವ ಸ್ಥಿತಿಯಲ್ಲಿ 'ಇದು ಜಡ' ಎಂದು ಸಾಧಿಸುವುದು ಹೇಗೆ? ಜಡವು ಸಿದ್ಧಿಸಲ್ಪಡಬೇಕಾದರೂ ಜ್ಞಾನವಿದ್ದೇ ಇರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನವು ಈಶ್ವರ ಕರ್ತೃಕವೇ ಅಲ್ಲವೇ ? ಈಶ್ವರ - ಕರ್ತೃಕ, ಎನ್ನುವುದಾದರೆ ಜ್ಞಾನೋತ್ಪತ್ತೇ: ಪೂರ್ವಂ ಈಶ್ವರನಲ್ಲಿ ಜ್ಞಾನವಿತ್ತೋ ಇಲ್ಲವೋ ?

ಜ್ಞಾನವಿರಲಿಲ್ಲವೆನ್ನುವುದಾದರೆ ಈಶ್ವರನೇ ಅಜ್ಞಾನಿಯಾದನಲ್ಲಾ ? ಅಜ್ಞಾನಿ ಈಶ್ವರನಿಂದ ಜ್ಞಾನೋತ್ಪತ್ತಿಯು ಸಾಧ್ಯವೇ ? ಆದರಿಂದ ಜ್ಞಾನವು ಈಶ್ವರ ಕರ್ತೃಕವಲ್ಲ, ಜ್ಞಾನವು ಈಶ್ವರ ಸ್ವರೂಪವೇ. ಚೈತನ್ಯಾತ್ಮಕ ಜ್ಞಾನವನ್ನು ಈಶ್ವರನು ಸೃಷ್ಟಿಸಲಿಲ್ಲ. ಚೈತನ್ಯವೇ ಇಲ್ಲದಿದ್ದಾಗ ಈಶ್ವರ ಸಿದ್ಧಿಯು ತಾನೇ ಹೇಗಾದೀತು ? "ಅಜ್ಞಾನದಿಂದಲೇ ಈಶ್ವರನು ಜ್ಞಾನವನ್ನು ಸೃಷ್ಟಿಸಿದನು. ಎನ್ನುವುದೂ ಸಹ ಜ್ಞಾನವಿಲ್ಲದೇ ತಿಳಿಯಲ್ಪಡುವುದಿಲ್ಲ.

ಇದರಿಂದ ವೈದಿಕರು ಜ್ಞಾನವು "ಅಪೌರುಷೇಯುವೆಂದು" ಹೇಳುತ್ತಾರೆ. ಅಪೌರುಷೇಯವೆಂದರೆ ಅರ್ಥವಿಷ್ಟೆ. ಪುರುಷಕರ್ತೃವೂ ಅಲ್ಲ, ಈಶ್ವರಕರ್ತೃಕವೂ ಅಲ್ಲ. ಜ್ಞಾನವು ಅನಾದಿ, ಅನಂತ, ಸ್ವತಃಸಿದ್ಧ. ಈ ಸಿದ್ಧಾಂತಕ್ಕೆ ಮಾನ್ಯತೆಯನ್ನು ಕೊಡದಿರುವವರು ವೇದದ ಅಪೌರುಷೇಯುತೆಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ.

ಕುರಾನ್-ಬೈಬಲ್‌ಗಳಿಗೂ, ವೇದಕ್ಕೂ ಇರುವ ವ್ಯತ್ಯಾಸವಿಷ್ಟೆ. ಕುರಾನ್-ಬೈಬಲ್‌ಗಳನ್ನು ಈಶ್ವರನು ಮಾಡಿದ್ದಾನೆ. ಆದರಿಂದ ಅವುಗಳಿಗೆ ಪ್ರಾಮಾಣ್ಯವು. ಆದರೆ ವೇದವು ಈಶ್ವರ ಕರ್ತೃಕವಲ್ಲ. ಜ್ಞಾನಸ್ವರೂಪನಾದ ಈಶ್ವರನ ಹೆಸರೇ "ವೇದ". ವೇದದಲ್ಲಿ ಭ್ರಮೆ. ಪ್ರಮಾದ, ವಿಪ್ರಲಿಪ್ಸಾ, ಕರಣಾಪಾಟವ ಇತ್ಯಾದಿ ದೋಷಗಳೊಂದೂ ಇಲ್ಲ.

ಆದರಿಂದ ಮೈತ್ರೇಯರು ಹೇಳುತ್ತಾರೆ.

ಭಗವಾನೇಕ ಆಸೇದ ಮಗ್ರ ಆತ್ಮಾತ್ಮನಾಂ ವಿಭುಃ
ಆತ್ಮೇಚ್ಛಾನು ಗತಾವಾತ್ಮಾ, ನಾನಾ ಮತ್ಯುಪಲಕ್ಷಣಃ"

ಭಗವಾನ್ ಮೈತ್ರೇಯರು. ವಿದುರನಿಗೆ ಸೃಷ್ಟಿಲೀಲೆಯನ್ನು ತಿಳಿಸುವುದಕ್ಕೋಸ್ಕರ, ಸೃಷ್ಟಿಯ ಪೂರ್ವಾವಸ್ಥೆಯನ್ನು ಹೇಳುತ್ತಿದ್ದಾರೆ.

ಈ ವಿಶ್ವದ ಸೃಷ್ಟಿಗಿಂತ ಮೊದಲು, ಸರ್ವಜೀವಾತ್ಮನಾದ ಭಗವಂತನು ಇದ್ದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮನಾಂ-ಆತ್ಮಾ, ವಿಭು: ಎಂದು ಹೇಳಿದ್ದಾರೆ. ವಿಭುಃ ಸ್ವಾಮೀ ಎಂದು ಅರ್ಥವು, ಭಗವಂತನು ಆತ್ಮಾ ಸ್ವಸ್ವರೂಪನೂ, ವಿಭುವೂಸಹ, ಏಕ ಆಸ, ಎಂದರೆ ದೃಶ್ಯ ಭೇದವಿರಲಿಲ್ಲ.

ಏಕೆಂದರೆ, ಕಾರಣಾತ್ಮನಾ ಇದ್ದರೂ ಪೃಥಕ್ಪ್ರತೀತಿಯಿರಲಿಲ್ಲ. ನಾನಾ ದ್ರಷ್ಟೃ- ದೃಶ್ಯಾದಿ ಮತಿಗಳಿಂದ ಇವನು ಉಪಲಕ್ಷಿತನಲ್ಲ, ಸೃಷ್ಟಿಕಾಲದಲ್ಲಿ ನಾನಾ ಮತಿಗಳಿಂದ ಉಪಲಕ್ಷಿಸಲ್ಪಡುವವನೂ ಇವನೇ, ಅದರಿಂದ ಏಕ ಏವಾ ಸೀತ್, ಏಕೆಂದರೆ, ಆತ್ಮೇಚ್ಛಾನುಗತಾ, ಏಕಾಕಿಯಾಗಿರಬೇಕಾದರೆ ಅವನ ಇಚ್ಛೆಯೇ ಅದಕ್ಕೆ ಕಾರಣವು. ಆತ್ಮೇಚ್ಛಾ-ಮಾಯಾ, ಅಸ್ಯಾ ಅನುಗತಾ-ಲಯೆ ಸತಿ, ಎಂದೂ ಹೇಳಬಹುದು.

ಸವಾ ಏಷ ತದಾ ದ್ರಷ್ಟಾ,
ನಾಪಶ್ಯತ ದೃಶ್ಯ ಮೇಕರಾಟ್,
ಮೇನೇಸಂತ ಮಿವಾತ್ಮಾನಂ,
ಸುಪ್ತ ಶಕ್ತಿ ರಸುಪ್ತದೃಕ್.

ಅವನೇ ದ್ರಷ್ಟೃವಾಗಿ ನೋಡತೊಡಗಿದನು, ಆದರೆ ದೃಶ್ಯವಾವುದೂ ಇರಲೇ ಇಲ್ಲ. ಏಕೆಂದರೆ ಅವನೇ ಆಗ ಅದ್ವಿತೀಯ ರೂಪದಿಂದ ಪ್ರಕಾಶಿಸುತ್ತಿದ್ದನು. ಏಕರಾಟ್ = ಏಕಏವತದಾ ಪ್ರಕಾಶತೇ ಇತ್ಯೇ ಕರಾಟ್. ದೃಶ್ಯಾಭಾವದಿಂದ ದ್ರಷ್ಟೃತ್ವಾಭಾವವುಂಟಾಗೋಣ. ಆಗ ಆತ್ಮಾನಂ ಅಸಂತಮಿವ ಮೇನೇ ವಸ್ತುತಃ ಅವನು ಅಸತ್ತಲ್ಲ, ಅವನು 'ಅಸುಪ್ತದೃಕ್', ಆದರೆ "ಸುಪ್ತಶಕ್ತಿ." ಅವನ ಶಕ್ತಿಗಳೆಲ್ಲವೂ ಸುಪ್ತವಾಗಿದ್ದುವು.

ಸಾವಾ ಏತಸ್ಯ ಸದ್ರಷ್ಟು;
ಶಕ್ತಿಃ ಸದಾತ್ಮಿಕಾ,
ಮಾಯಾ ನಾಮ ಮಹಾ ಭಾಗ,
ಯಯೇದಂ ನಿರ್ಮಮೇವಿಭುಃ

ಅವನ ಜ್ಞಾನವು ಲುಪ್ತವಾಗಿರಲಿಲ್ಲ. ಅವನು ಸದಸದಾತ್ಮಿಕಾ ಮಾಯೆಯನ್ನು ಸೃಷ್ಟಿಸಿ ಅದರಲ್ಲಿ ತನ್ನ ಚಿದಂಶದ – ಚಿದಾಭಾಸದ ಆಧಾನವನ್ನು ಮಾಡಿದನು.

Sri Vidyabharathi Book Centre, Sringeri

 CC-0. In Public Domain. Digitized by eGangotri

ಸುದ್ದಷ್ಟು :, ಸಾದೃಶಾನು ಸಂಧಾನರೂಪಾ,
ಸದಸದಾತ್ಮಿಕಾ – ಕಾರ್ಯಕಾರಣರೂಪಾ,
ಅಥವಾ-ಸದ್ದೃಶ್ಯಂ-ಆತ್ಮಸ್ವರೂಪಂ, ಅಸತ್-ಅದೃಶ್ಯಂ,
ಅನಾತ್ಮ ಸ್ವರೂಪಂ, ತಯೋಶ್ಚಾತ್ಮಾ,
ಅಂದರೆ ತದುಭಯಾನು ಸಂಧಾನರೂಪತ್ವಾತ್.

ಇಂದ್ರಿಯಾತೀತ ಚಿನ್ಮಯ ಪರಮಾತ್ಮನು ತನ್ನಿಂದ ಪ್ರಕಟವಾದ ಮಾಯೆಯಲ್ಲಿ ತನ್ನಂಶವಾದ ಪುರುಷರೂಪದಿಂದ ಚಿದಾಭಾಸರೂಪವಾದ ಬೀಜವನ್ನು ಸ್ಥಾಪಿಸಿದನು. ಕಾಲಪ್ರೇರಣೆಗೆ ಅನುಗುಣವಾಗಿ ಅವ್ಯಕ್ತ ಮಾಯೆಯಿಂದ ಮಹತ್ತತ್ತ್ವವು ಪ್ರಕಟವಾಯಿತು.

ಅದನ್ನು ಜಡತಾ ಪ್ರಾಧಾನ್ಯತೆಯಿಂದ ಮಹತ್ತತ್ತ್ವವೆಂದೂ, ಚೇತನತಾ ಪ್ರಾಧಾನ್ಯತೆಯಿಂದ ಹಿರಣ್ಯಗರ್ಭನೆಂದೂ ಜಡ-ಚೇತನಗಳೆರಡರ ಮಧ್ಯವರ್ತಿ ಪ್ರಾಧಾನ್ಯತೆಯಿಂದ ಮಾಯೆಯೆಂದೂ ಕರೆಯುತ್ತಾರೆ.

ವಿಷ್ಣೋಸ್ತು ತ್ರೀಣಿ ರೂಪಾಣಿ, ಪುರುಷಾಖ್ಯಾನತೋವಿದು :
ಪ್ರಥಮಂ ಮಹತೋ ರೂಪಂ, ದ್ವಿತೀಯಂ ತ್ವಂಡ
ಸಂಸ್ಥಿತಮ್ ।
ತೃತೀಯಂ ಸರ್ವಭೂತಸ್ಥಂ, ತಾನಿಜ್ಞಾತ್ವಾ ವಿಮುಚ್ಯತೇ ॥

ಹಾಗೂ ಬೀಜ. ಲೇಶ, ಕಳಂಕ, ಪಂಕರಹಿತ, ನಿತ್ಯ, ಶುದ್ಧ, ಬುದ್ಧ, ಮುಕ್ತ ಚೈತನ್ಯವನ್ನು ಬ್ರಹ್ಮನೆಂದೂ ಕರೆಯುತ್ತಾರೆ.

ನೋಡಿ. ಇದು ಸರ್ಗದ ವರ್ಣನೆ. ಜ್ಞಾನವಿಲ್ಲದೇ ಜಡದ ಸಿದ್ಧಿಯಾಗುವದಿಲ್ಲ. ಅನುಭೂತಿಯಲ್ಲಿ ಜ್ಞಾನಕ್ಕೇ ಸರ್ವೋಪರಿ ಮಹತ್ತ್ವವುಂಟು.

ಯಾಂತ್ರಿಕ ಪರೀಕ್ಷೆಯಲ್ಲಿ ಜಡತೆಗೇ ಹೆಚ್ಚಿನ ಮಹತ್ತ್ವವು. ಮಿಷಿನರೀ ಪರೀಕ್ಷೆಯಲ್ಲಿ ತನ್ನನ್ನು ತಾನು ನೋಡಲಾರ. ಮತ್ತೊಬ್ಬರನ್ನು ನೋಡಬಲ್ಲನು.

ಮಹತ್ತತ್ತ್ವದ ವಿಕಾರದಿಂದ ಅಹಂಕಾರಗಳ ಉತ್ಪತ್ತಿಯಾಯಿತು. ಅಹಂಕಾರವೇ ಅಧಿಭೂತ (ಕಾರ್ಯ) ಅಧ್ಯಾತ್ಮ (ಕಾರಣ) ಅಧಿದೈವ (ಕರ್ತಾ) ರೂಪದಿಂದ ಭೂತೇಂದ್ರಿಯ ಮನಸ್ಸುಗಳಿಗೆ ಕಾರಣವಾಯಿತು. ಅಹಂಕಾರವು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರು ವಿಧವಾಗಿದೆ. ವೈಕಾರಿಕ (ಸಾತ್ವಿಕ) ತೈಜಸ (ರಾಜಸ) ತಾಮಸ, ಸಾತ್ವಿಕಾಹಂಕಾರದಿಂದ ಮನಸ್ಸು, ಇಂದ್ರಿಯಾಧಿಷ್ಠಾತೃ ದೇವತೆಗಳ ಉತ್ಪತ್ತಿಯೂ ಸಹ ಆಯಿತು. ಈ ದೇವತಾಶಕ್ತಿಗಳಿಂದ ವಿಷಯ ಜ್ಞಾನವಾಗುತ್ತದೆ. ಕರ್ಮೇಂದ್ರಿಯ-ಜ್ಞಾನೇಂದ್ರಿಯಗಳು ತೈಜಸಾಹಂಕಾರದಿಂದ ಹುಟ್ಟಿದುವು.

ತಾಮಸಾಹಂಕಾರದಿಂದ ಸೂಕ್ಷ್ಮಭೂತಗಳಿಗೆ ಕಾರಣವಾದ ಶಬ್ದ ತನ್ಮಾತ್ರೆಗಳುಂಟಾದುವು. ಹಾಗೂ ಆಕಾಶವು ಉತ್ಪನ್ನವಾಯಿತು, ಆಕಾಶದ ದೃಷ್ಟಾಂತದಿಂದ ಆತ್ಮಬೋಧೆಯು ಮಾಡಲ್ಪಡುತ್ತದೆ.

ಈಗ ಭಗವದ್ದೃಷ್ಟಿಯು ಆಕಾಶದ ಮೇಲೆ ಬಿದ್ದಿತು. ಕಾಲ, ಮಾಯಾ, ಅಂಶಯೋಗದಿಂದ ಸ್ಪರ್ಶ ತನ್ಮಾತ್ರೆಯುಂಟಾಯಿತು. ಅದರ ವಿಕಾರದಿಂದ ವಾಯುವಿನ ಉತ್ಪತ್ತಿಯಾಯಿತು. ವಾಯುವಿನ ವಿಕಾರದಿಂದ ರೂಪ ತನ್ಮಾತ್ರೆಯುಂಟಾಯಿತು. ಹಾಗೂ ಸಂಸಾರವನ್ನು ಪ್ರಕಾಶಿಸುವ ತೇಜಸ್ಸು ಉತ್ಪನ್ನವಾಯಿತು.

ಪುನಃ ತೇಜಸ್ಸಿನಿಂದ ರಸ ತನ್ಮಾತ್ರೆಯ ಕಾರ್ಯವಾದ ಜಲದ ಉತ್ಪತ್ತಿಯಾಯಿತು. ಜಲದಿಂದ ಗಂಧಗುಣಮಯೀ ಪೃಥ್ವಿಯ ಉತ್ಪತ್ತಿಯಾಯಿತು.

ಆಕಾಶಾದಿ ಭೂತಗಳಲ್ಲಿ ಉತ್ತರೋತ್ತರ, ಪೂರ್ವಪೂರ್ವ ಭೂತಗಳ ಗುಣಗಳು ಅನುಗತಗಳಾಗಿರುತ್ತವೆ. ಇಷ್ಟು ಮಾತ್ರದಿಂದ ಬ್ರಹ್ಮಾಂಡಗಳ ಉತ್ಪತ್ತಿಯಾಗಲಿಲ್ಲ. ಆಗ ತತ್ತ್ವಾಭಿಮಾನೀ ಚೇತನಾಂಶ ವಿಶಿಷ್ಟ ದೇವತೆಗಳು ಭಗವಂತನನ್ನು ನಮ್ರತೆಯಿಂದ ಪ್ರಾರ್ಥಿಸಿದರು. ಈ ಮಹದಾದ್ಯಭಿಮಾನಿ ದೇವತೆಗಳು ವಿಷ್ಣುಕಲೆಗಳೇ, ಕಾಲಲಿಂಗವು – ವಿಕೃತಿ, ಮಾಯಾಲಿಂಗವು – ವಿಕ್ಷೇಪ, ಅಂಶಲಿಂಗವು ಚೇತನಾ. ಇದನ್ನೇ "**ಕಾಲಮಾಯಾಂಶಲಿಂಗಿನ**" ಎಂದು ಹೇಳಿದರು.

ದೇವತೆಗಳು ಹೀಗೆ ಭಗವಂತನನ್ನು ಪ್ರಾರ್ಥಿಸುತ್ತಾರೆ. ಪ್ರಭೋ, ನಿನ್ನ ಪಾದಾರವಿಂದಗಳನ್ನು ನಮಸ್ಕರಿಸುತ್ತೇವೆ. ನಿನ್ನ ಶರಣಾಗತರ ತಾಪೋಪಶಮನದಲ್ಲಿ ನಿನ್ನ ಚರಣಗಳು ಆತಪತ್ರದಂತೆ. ಯತಿಗಳಿಗೆ ನಿನ್ನ ಪಾದಾರವಿಂದಗಳೇ ಆಶ್ರಯಗಳು. ಅವುಗಳನ್ನು ಆಶ್ರಯಿಸಿ ಅಪಾರ ಸಂಸಾರ ದುಃಖದಿಂದ ಮುಕ್ತರಾಗುತ್ತಾರೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ದಾರಿಗನು ಸ್ವಗೃಹವನ್ನು ಸೇರಿ ಶ್ರಮವನ್ನು ಕಳೆದುಕೊಳ್ಳುವಂತೆ, ಭಗವನ್-ಅನೇಕ ತಾಪತ್ರಯಗಳಿಂದ ಪೀಡಿತರಾದ ಜೀವಿಗಳು ನಿನ್ನನ್ನಾಶ್ರಯಿಸಿ ಸುಖಿಗಳಾಗುತ್ತಾರೆ. ಸುಖಿಗಳಾಗಬೇಕಾದರೆ ನಿನ್ನನ್ನೇ ಆಶ್ರಯಿಸಬೇಕು. ಉಪಾಯಾಂತರವಿಲ್ಲ.

ಪವಿತ್ರಾಂತಃಕರಣದವರಾದ ಋಷಿಮುನಿಗಳು ಸರ್ವಸಂಗ ಪರಿತ್ಯಾಗಿಗಳಾಗಿ, ಏಕಾಂತವಾಸಿಗಳಾಗಿ ನಿನ್ನ ಮುಖಕಮಲವನ್ನು ಆಶ್ರಯಿಸಿರುವ ವೇದ ಮಂತ್ರರೂಪೀ ಪಕ್ಷಿಗಳ ಮೂಲಕ ನಿನ್ನನ್ನು ಅನುಸಂಧಾನ ಮಾಡುತ್ತಾರೆ. ಪಾಪನಾಶಿನೀ ತೀರ್ಥಗಳಲ್ಲಿ ಗಂಗೆಯು ಸರ್ವಶ್ರೇಷ್ಠಳಾದಳು. ನಿನ್ನ ಚರಣ ಕಮಲಗಳಲ್ಲಿ ಗಂಗೋದ್ಭವವಾಯಿತು.

ಪಕ್ಷಿಗಳು ತಮ್ಮ ಗೂಡನ್ನು ಬಿಟ್ಟು ಅಲ್ಲಿ-ಇಲ್ಲಿ ಸಂಚರಿಸಿ ಕೊನೆಗೆ ಗೂಡನ್ನೇ ಸೇರುವಂತೆ, ವೇದರೂಪೀ ಪಕ್ಷಿಗಳು ನಿನ್ನಿಂದಲೇ ಹೊರಬಂದು ನಿನ್ನಲ್ಲಿಯೇ ಅಂತರ್ಹಿತಗಳಾಗುತ್ತವೆ. ಇಂತಹ ವೇದಗಳ ಮೂಲಕ ನಿನ್ನ ಪಾದಕಮಲಗಳನ್ನು ಋಷಿ-ಮಹಾತ್ಮರು ಅನ್ವೇಷಿಸುತ್ತಾರೆ.

ವಿಷಯಾಕೃಷ್ಟ ಚಿತ್ತರಾದ ನಿನ್ನ ಭಕ್ತರು ಭಗವದ್ಗುಣ, ಶ್ರವಣ, ಕೀರ್ತನಾದಿಗಳಿಂದ ಪರಿಶುದ್ಧಾಂತಃಕರಣರಾಗುತ್ತಾರೆ. ನಂತರ ಇತರರಿಗೆ ದುರ್ಲಭವಾದ ವೈರಾಗ್ಯವನ್ನು ಪಡೆಯುತ್ತಾರೆ.

"ವೈರಾಗ್ಯಮೇವಾಭಯಂ", ಜೀವನದಲ್ಲಿ ವೈರಾಗ್ಯಶಾಲಿಯೆ ಧೀರನು, ಧೀರನು ಮಾತ್ರ ಪ್ರತ್ಯಗಾತ್ಮಾವಲೋಕಿಯಾಗುತ್ತಾನೆ.

ಸರ್ವಾಂತರ್ಯಾಮಿಯಾದ ನಿನ್ನನ್ನು - ದೇಹ, ಗೇಹ, ಸುಖಾರಾಮಾಸಕ್ತರಾಗಿರುವವರು ನೋಡಲಾರರು. ಆಸಕ್ತಿಯನ್ನು ಕಳೆಯಬೇಕಾದರೆ ಹರಿಕಥಾ ಶ್ರವಣವನ್ನು ಮಾಡಬೇಕು. ಹರಿಕಥಾ ಶ್ರವಣವಾಗಬೇಕಾದರೆ ಸತ್ಸಂಗವು ದೊರಕಬೇಕು.

ಯಾವಾಗಲೂ ಇಂದ್ರಿಯಗಳು ವಿಷಯಾಭಿಮುಖಗಳಾಗಿರುತ್ತವೆ. ಅವುಗಳ ಸಂಸಾರಭ್ರಮಣವು ನಿಲ್ಲಬೇಕಾದರೆ ನಿನ್ನ ಅಂತರಂಗ ಭಕ್ತರ ದರ್ಶನವಾಗಬೇಕು. ಭಕ್ತರ ಮುಖದಿಂದ ಅವತಾರ ಕಥಾಮೃತವನ್ನು ಪಾನ ಮಾಡುವುದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಿಂದ ಭಕ್ತಿಯು ವರ್ಧಿಸುತ್ತದೆ. ಅದರಿಂದ ಅಂತಃಕರಣವು ನಿರ್ಮಲವಾಗುತ್ತದೆ. ವೈರಾಗ್ಯವು ಮೂಡಿ ಆತ್ಮಜ್ಞಾನಿಗಳಾಗುತ್ತಾರೆ.

ಇನ್ನು ಕೆಲವರು ಚಿತ್ತನಿರೋಧರೂಪವಾದ ಸಮಾಧಿಯೋಗವನ್ನು ಆಶ್ರಯಿಸಿ ನಿನ್ನ ಪ್ರಾಪ್ತಿಗಾಗಿ ಶ್ರಮಿಸುತ್ತಾರೆ. ಈ ಮಾರ್ಗವು ಕಷ್ಟಸಾಧ್ಯವಾದುದು. ಭಕ್ತಿಪೂರ್ವಕವಾದ ನಿನ್ನ ಸೇವಾಮಾರ್ಗದಲ್ಲಿ ಶ್ರಮವು ಇಲ್ಲವೇ ಇಲ್ಲ.

ದೇವ, ಸೃಷ್ಟಿರಚನೆಯ ಉದ್ದೇಶದಿಂದ ನಮ್ಮನ್ನು ತ್ರಿಗುಣಮಯರನ್ನಾಗಿ ಸೃಷ್ಟಿಸಿರುವೆ. ಆದರೆ ನಾವು ಭಿನ್ನ-ಭಿನ್ನ ಸ್ವಭಾವದವರು. ಪರಸ್ಪರ ಬೆಳೆಯಲಾರೆವು. ಅಂತೆಯೇ ಬ್ರಹ್ಮಾಂಡವನ್ನು ರಚಿಸಿ ನಿನಗೆ ಕೊಡಲು ಅಸಮರ್ಥರಾಗಿದ್ದೇವೆ.

ಭಗವನ್, ನಾವು ಬ್ರಹ್ಮಾಂಡವನ್ನು ರಚಿಸಿ, ಕಾಲಾನುಗುಣವಾದ ಸರ್ವಭೋಗಗಳನ್ನೂ ನಿನಗೆ ಅರ್ಪಿಸುವಂತೆ, ನಾವೂ ಸುರಕ್ಷಿತ ಸ್ಥಳವಾಸಿಗಳಾಗಿ ಅನ್ನ ಗ್ರಹಣವನ್ನು ಮಾಡುವಂತೆ, ಜೀವಿಗಳೂ ಸಹ, ಸರ್ವವಿಘ್ನ ಬಾಧೆಗಳನ್ನೂ ದೂರೀಕರಿಸಿಕೊಂಡು, ನಮಗಳಿಗೂ, ನಿನಗೂ ಭೋಗಗಳನ್ನು ಅರ್ಪಿಸುತ್ತಾ, ಸ್ವಯಂಭೋಗಿಸುತ್ತಾ ಸುಖವಾಗಿರುವಂತೆ ಅನುಗ್ರಹಿಸು.

ಶ್ರುತಿಯು ಈ ಅರ್ಥವನ್ನು ಸ್ಪಷ್ಟೀಕರಿಸುತ್ತಾ ಹೇಳುತ್ತದೆ.

ತಾ ಏತಾ ದೇವತಾಸ್ಸೃಷ್ಟಾ ಅಸ್ಮಿನ್ ಮಹತ್ಯರ್ಣವೇ ಪ್ರಾಪ್ತಂ ತಮಶನಾ ಪಿಪಾಸಾಭ್ಯಾಂ ಅನ್ವವಾರ್ಜತ್, ತಾ ಏವಮಬ್ರುವನ್ನ್, ಆಯತನಂ ನಃ ಪ್ರಜಾನೀಹೀತಿ, ಯಸ್ಮಿನ್ ಪ್ರತಿಷ್ಠಿತಾ ಅನ್ನಮದಾಮೇತಿ.

ದೇವತೆಗಳು ಹೇಳುತ್ತಾರೆ. ಭಗವನ್, ನಮಗಳೆಲ್ಲರಿಗೂ ನೀನೇ ಆದಿ ಕಾರಣನು. ಅಜನ್ಮನಾದರೂ ತ್ರಿಗುಣಾತ್ಮಕನಾಗಿ, ಜನ್ಮಾದಿಗಳಿಗೆ ಕಾರಣವಾದ ಮಾಯಾಶಕ್ತಿಯಲ್ಲಿ ಚಿದಾಭಾಸರೂಪವಾದ ವೀರ್ಯವನ್ನು ಆಧಾನ ಮಾಡಿದೆ. ಮಹದಾದಿ ರೂಪಗಳಾದ ನಾವುಗಳು ಏಕೆ ಉತ್ಪನ್ನರಾಗಿದ್ದೇವೆ ? ನಾವೇನು ಮಾಡಬೇಕು ? ಎಲ್ಲವನ್ನು ತಿಳಿಸಿ ನಮಗಳನ್ನು ಉದ್ಧರಿಸು.

Sri Vidyabharathi Book Centre, Sringeri

CC-0. In Public Domain. Digitized by eGangotri

ಕ್ರಿಯಾಶಕ್ತಿಯೊಡನೆ ಜ್ಞಾನಶಕ್ತಿಯನ್ನೂ ನೀನು ಅನುಗ್ರಹಿಸದಿದ್ದರೆ, ನಾವು, ಹೇಗೆತಾನೇ ಬ್ರಹ್ಮಾಂಡವನ್ನು ರಚಿಸಬಲ್ಲೆವು ? ಎಂದು ದೇವತೆಗಳು ಭಗವಂತನನ್ನು ಸ್ತುತಿಸಿದರು.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ

ಪಂಚಮೋಽಧ್ಯಾಯಃ

ತೃತೀಯ ಸ್ಕಂಧ, ಆರನೆಯ ಅಧ್ಯಾಯ
ವಿರಾಟ್ ಶರೀರದ ಉತ್ಪತ್ತಿ

ಮೈತ್ರೇಯರು ಹೇಳುತ್ತಾರೆ.

ಸರ್ವಶಕ್ತಿಮಾನ್ ಭಗವಂತನು ತಮ್ಮಲ್ಲಿ ಪರಸ್ಪರ ಸಮ್ಮಿಲನವಾಗದಿರುವುದರಿಂದ, ಮಹದಾದಿ ಶಕ್ತಿಗಳು, ಸೃಷ್ಟಿರಚನೆಯಲ್ಲಿ ಅಸಮರ್ಥಗಳಾಗಿರುವುದನ್ನು ನೋಡಿದನು.

ಆಗ ಕಾಲಶಕ್ತಿಯನ್ನು ಸ್ವೀಕರಿಸಿ ಇಪ್ಪತ್ಮೂರು ತತ್ತ್ವಗಳ ಸಮೂಹವನ್ನು ಏಕಕಾಲದಲ್ಲಿ ಪ್ರವೇಶಿಸಿದನು. ೧. ಮಹತ್ತತ್ತ್ವ, ೨, ಅಹಂಕಾರ, ೩. ಪಂಚಭೂತಗಳು, ೪. ಪಂಚತನ್ಮಾತ್ರೆಗಳು, ೫. ಮನಸಹಿತ ಹನ್ನೊಂದು ಇಂದ್ರಿಯಗಳು. (ಇವುಗಳು ೨೩ ತತ್ತ್ವಗಳು) ಭಗವಂತನು ಹೀಗೆ ಪ್ರವಿಷ್ಟನಾಗಿ ಜೀವರ ಸುಪ್ತ ಅದೃಷ್ಟಗಳನ್ನು ಜಾಗೃತಗೊಳಿಸಿದನು. ಪೃಥಕ್-ಪೃಥಕ್ ಆಗಿ ಇದ್ದ ತತ್ತ್ವಸಮೂಹವನ್ನು ತನ್ನ ಕ್ರಿಯಾಶಕ್ತಿಯ ಮೂಲಕ ಒಂದುಗೂಡಿಸಿದನು,

ಹೀಗೆ ಅದೃಷ್ಟವನ್ನು ಕಾರ್ಯೋನ್ಮುಖವನ್ನಾಗಿ ಮಾಡಿದಮೇಲೆ, ಆ ೨೩ ತತ್ತ್ವಗಳೂ ಭಗವತ್ಪ್ರೇರಣೆಗನುಗುಣವಾಗಿ ತಮ್ಮ ಅಂಶಾಂಶಗಳಿಂದ ಅಧಿಪುರುಷನಾದ ವಿರಾಟನನ್ನು ಉತ್ಪನ್ನ ಮಾಡಿದುವು. ಅಂದರೆ, ಭಗವಂತನು ಅಂಶರೂಪದಿಂದ ತನ್ನ ಆ ವಿರಾಟ್‌ಶರೀರದಲ್ಲಿ ಪ್ರವೇಶ ಮಾಡಿದನು. ವಿಶ್ವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೃಷ್ಟಿ ಮಾಡುವ ಮಹತ್ತತ್ತ್ವಾದಿಗಳ ಸಮುದಾಯವು ಒಂದು ಮತ್ತೊಂದರೊಡನೆ ಸೇರಿ ಪರಿಣಾಮವನ್ನು ಹೊಂದಿತು : ಈ ತತ್ತ್ವಗಳ ಪರಿಣಾಮವೇ ವಿರಾಟ್‌ಪುರುಷನು. ಇವನಲ್ಲಿ ಚರಾಚರ ಜಗತ್ತೂ ಇದೆ.

ಸಂಪೂರ್ಣ ಜೀವಿಗಳನ್ನೂ ತನ್ನೊಡನೆ ತೆಗೆದುಕೊಂಡ ವಿರಾಟ್‌ಪುರುಷನು ಅಂಡರೂಪ ಆಶ್ರಯಸ್ಥಾನವಾದ ಜಲದಲ್ಲಿ ಒಂದು ಸಹಸ್ರ ವರ್ಷ ಕಾಲ ಇದ್ದನು.

ಅವನು ವಿಶ್ವವನ್ನು ರಚಿಸುವ ೨೩ ತತ್ತ್ವಗಳ ಕಾರ್ಯರೂಪವಾಗಿದ್ದನು. ಹಾಗೂ ಶಕ್ತಿತ್ರಯ ಸಂಪನ್ನನಾಗಿದ್ದನು. ಜ್ಞಾನಶಕ್ತಿ, ಕ್ರಿಯಾಶಕ್ತಿ, ಆತ್ಮಶಕ್ತಿ ಇವುಗಳನ್ನೇ ಶಕ್ತಿತ್ರಯವೆಂದು ಕರೆಯುತ್ತಾರೆ. ಈ ಶಕ್ತಿಗಳಿಂದ ೧-೧೦-೩ ಹೀಗೆ ಮೂರು ವಿಭಾಗಗಳನ್ನು ಮಾಡಿದನು. ಒಂದು ಹೃದಯ, ಹತ್ತು ಪ್ರಾಣಗಳು, ಮೂರು-ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ. ಈ ವಿರಾಟ್ ಪುರುಷನು ಪ್ರಥಮ ಜೀವನಾದುದರಿಂದ ಸರ್ವಜೀವಿಗಳ ಆತ್ಮನು. ಜೀವರೂಪನಾದುದರಿಂದ ಪರಮಾತ್ಮನ ಅಂಶನು. ಪ್ರಥಮತಃ ಅಭಿವ್ಯಕ್ತನಾದುದರಿಂದ ಭಗವಂತನ ಆದಿ ಅವತಾರವು. ಇವನಿಂದಲೇ ಸಂಪೂರ್ಣ ಭೂತಗ್ರಾಮವೂ ಪ್ರವೇಶಿಸಲ್ಪಡುತ್ತದೆ. ಇವನು ಅಧ್ಯಾತ್ಮ, ಅಧಿಭೂತ, ಅಧಿದೈವ ರೂಪದಿಂದ ಮೂರು ವಿಧವು. ಪ್ರಾಣರೂಪದಿಂದ ಹತ್ತು ಪ್ರಕಾರವು. ಹೃದಯರೂಪದಿಂದ ಒಂದಾಗಿಯೂ ಇರುವನು.

ವಿಶ್ವರಚನಾ ಕರ್ತಾರರಾದ ಮಹದಾದಿಗಳ ಅಧಿಪತಿಯಾದ ಭಗವಂತನು ಅವುಗಳ ಪ್ರಾರ್ಥನಾನುಗುಣವಾಗಿ ವೃತ್ತಿಗಳನ್ನು ಜಾಗೃತಗೊಳಿಸಲು ತನ್ನ ಚೇತನಾರೂಪ ತೇಜಸ್ಸಿನಿಂದ ವಿರಾಟ್‌ಪುರುಷನನ್ನು ಪ್ರಕಾಶಿತಗೊಳಿಸಿದನು. ಅವನನ್ನು ಎಚ್ಚರಿಸಿದನು. ಅವನು ಎಚ್ಚರಗೊಂಡಮೇಲೆ ದೇವತಾಸ್ಥಾನಗಳು ಪ್ರಕಟಗಳಾದುವು. ಮೊದಲು ವಿರಾಟ್‌ಪುರುಷನ ಮುಖವು ಪ್ರಕಟವಾಯಿತು. ಆದರಲ್ಲಿ ಲೋಕಪಾಲನಾದ ಅಗ್ನಿಯು ತನ್ನ ಅಂಶವಾದ ವಾಗಿಂದ್ರಿಯದೊಡನೆ ಪ್ರವೇಶ ಮಾಡಿದನು. ಅದರಿಂದ ಇವನು ಜೀವಸಂಜ್ಞೆಯನ್ನು ಹೊಂದಿದನು. ವಿರಾಟ್‌ಪುರುಷನ ತಾಲು ಪ್ರದೇಶವು ಉತ್ಪನ್ನವಾಯಿತು. ಅದರಲ್ಲಿ ಲೋಕಪಾಲ ವರುಣನು ತನ್ನ ಅಂಶಭೂತವಾದ ರಸನೇಂದ್ರಿಯದೊಡನೆ ಪ್ರವೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದನು. ಆದರಿಂದ ಜೀವನು ರಸಗ್ರಾಹಿಯಾದನು. ಹೀಗೆಯೇ ವಿರಾಟನ ದೇಹದಲ್ಲಿ ಕಣ್ಣುಗಳು ಪ್ರಕಟಗಳಾದುವು. ಅವುಗಳಲ್ಲಿ ನೇತ್ರೇಂದ್ರಿಯಗಳೊಡನೆ ಸೂರ್ಯನು ಪ್ರವೇಶ ಮಾಡಿದನು. ಇದರಿಂದ ಜೀವನು ವಿವಿಧ ರೂಪಗ್ರಾಹಿಯಾದನು.

ವಿರಾಟನ ಚರ್ಮದಲ್ಲಿ ತ್ವಗಿಂದ್ರಿಯದೊಡನೆ ವಾಯುವು ಪ್ರವೇಶಿಸಲು ಜೀವನಿಗೆ ಸ್ಪರ್ಶದ ಅನುಭವವಾಗತೊಡಗಿತು. ಅವನ ಕರ್ಣಛಿದ್ರಗಳಲ್ಲಿ ಶ್ರವಣೇಂದ್ರಿಯದೊಡನೆ ದಿಗ್ದೇವತೆಗಳು ಪ್ರವೇಶಿಸಲು ಜೀವನಿಗೆ ಶ್ರವಣದ ಅನುಭವವಾಯಿತು. ಅವನ ರೋಮಗಳಲ್ಲಿ ಔಷಧಿಗಳ ಪ್ರವೇಶವಾಗಲು ಕಂಡೂವಿನ ಅನುಭವವಾಯಿತು. ಅವನ ಲಿಂಗದಲ್ಲಿ ಪ್ರಜಾಪತಿಯು ತನ್ನ ಅಂಶವಾದ ವೀರ್ಯದೊಡನೆ ಪ್ರವೇಶ ಮಾಡಲು ಜೀವನಿಗೆ ಆನಂದದ ಅನುಭವವಾಯಿತು. ವಿರಾಟ್‌ಪುರುಷನ ಗುದಾದ್ವಾರದಲ್ಲಿ ಲೋಕಪಾಲ ಮಿತ್ರನು ಪಾಯೂ ಇಂದ್ರಿಯದೊಡನೆ ಪ್ರವೇಶಿಸಲು ಮಲತ್ಯಾಗದ ಇಚ್ಛೆಯು ಹುಟ್ಟಿತು. ಅವನ ಕೈಗಳಲ್ಲಿ ತ್ಯಾಗರೂಪ ಶಕ್ತಿಗಳೊಡನೆ ದೇವರಾಜ-ಇಂದ್ರನು ಪ್ರವೇಶಿಸಿದನು. ಇದರಿಂದ ಜೀವನು ಜೀವಿಕೆಯನ್ನು ನಡೆಸುತ್ತಾನೆ.

ಅವನ ಪಾದಗಳಲ್ಲಿ ಲೋಕೇಶ್ವರ ವಿಷ್ಣುವು ತನ್ನ ಶಕ್ತಿ-ಗತಿಯೊಡನೆ ಪ್ರವೇಶಿಸಿದನು. ಆದರಿಂದ ಜೀವನು ಗಂತವ್ಯ ಸ್ಥಾನಕ್ಕೆ ಹೋಗುತ್ತಾನೆ.

ಬುದ್ಧಿಯಲ್ಲಿ ಬುದ್ಧಿಶಕ್ತಿಯೊಡನೆ ವಾಕ್ಪತಿಯು ಪ್ರವೇಶಿಸಲು, ಜೀವನು ಬುದ್ಧಿಶಕ್ತಿಯಿಂದ ಜ್ಞಾತವ್ಯ ವಿಷಯಗಳನ್ನು ಗ್ರಹಿಸುತ್ತಾನೆ. ಅವನ ಹೃದಯದಲ್ಲಿ ಮನಸ್ಸಿನೊಡನೆ ಚಂದ್ರಮನು ನೆಲೆಸಲು, ಮನಃಶಕ್ತಿಯ ಮೂಲಕ ಜೀವನು ಸಂಕಲ್ಪ-ವಿಕಲ್ಪಾದಿ ರೂಪ ವಿಕಾರಗಳನ್ನು ಹೊಂದುತ್ತಾನೆ.

ವಿರಾಟ್ ಪುರುಷನ ಅಹಂಕಾರದಲ್ಲಿ ಕ್ರಿಯಾಶಕ್ತಿಯ ಅಭಿಮಾನೀ ರುದ್ರನ ಪ್ರವೇಶವಾಯಿತು. ಇದರಿಂದ ಜೀವನು ಕರ್ತವ್ಯವನ್ನು ಸ್ವೀಕರಿಸುತ್ತಾನೆ.

ಅವನ ಚಿತ್ತದಲ್ಲಿ ಚಿಚ್ಛಕ್ತಿಯೊಡನೆ ಮಹತ್ತತ್ತ್ವದ (ಬ್ರಹ್ಮನ) ಪ್ರವೇಶವಾಯಿತು. ಇದರಿಂದ ಜೀವನು ವಿಜ್ಞಾನೋಪಲಬ್ಧಿಯನ್ನು ಪಡೆಯುತ್ತಾನೆ. ಅವನ ಶಿರಸ್ಸಿನಿಂದ ಸ್ವರ್ಗಲೋಕ, ಕಾಲುಗಳಿಂದ ಪೃಥ್ವೀ, ನಾಭಿಯಿಂದ ಅಂತರಿಕ್ಷಗಳು ಉತ್ಪನ್ನವಾದುವು. ಇವುಗಳಲ್ಲಿ ಸತ್ತ್ವ, ರಜ, ತಮೋಗುಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಣಾಮರೂಪಿಗಳಾದ ದೇವತಾ-ಮನುಷ್ಯರು-ಪ್ರೇತಾದಿಗಳು ಕಾಣಲ್ಪಡುತ್ತಾರೆ. ಸತ್ತ್ವಗುಣ ಪ್ರಧಾನರಾದ ದೇವತೆಗಳು ಸ್ವರ್ಗದಲ್ಲಿರುತ್ತಾರೆ. ಮನುಷ್ಯರೂ ಅವರಿಗೆ ಉಪಯೋಗಿಗಳಾದ ಚತುಷ್ಪಾದಿಗಳೂ ರಜೋಗುಣಿಗಳಾದುದರಿಂದ ಭೂಲೋಕದಲ್ಲಿರುತ್ತಾರೆ.

ರುದ್ರನ ಪಾರ್ಷದ ಗಣಗಳು, ಭೂತ-ಪ್ರೇತಾದಿಗಳು, ನಾಭಿಸ್ಥಾನೀಯವಾದ ಅಂತರಿಕ್ಷದಲ್ಲಿರುತ್ತಾರೆ.

ಅವನ ಮುಖದಿಂದ ಬ್ರಾಹ್ಮಣರು ಹುಟ್ಟಿದರು. ಇವರು ಸರ್ವವರ್ಣಶ್ರೇಷ್ಠರು. ಸರ್ವರಿಗೂ ಗುರುಗಳು. ಅವನ ಬಾಹುಗಳಿಂದ ಕ್ಷತ್ರಿಯರು ಹುಟ್ಟಿದರು. ಇವರು ಸಕಲ ವರ್ಣೀಯರನ್ನೂ ತಸ್ಕರಾದಿ ಬಾಧೆಗಳಿಂದ ರಕ್ಷಿಸುತ್ತಾರೆ. ಊರು ಪ್ರದೇಶದಿಂದ ಹುಟ್ಟಿದ ವೈಶ್ಯರು ತಮ್ಮ ವ್ಯಾಪಾರಾತ್ಮಿಕಾ ವ್ಯವಸಾಯಾತ್ಮಿಕಾ ವೃತ್ತಿಯಿಂದ ಲೋಕವನ್ನು ರಕ್ಷಿಸುತ್ತಾರೆ. ಸರ್ವಧರ್ಮ ಸಂರಕ್ಷಣಾರ್ಥವಾಗಿ ಭಗವಂತನ ಕಾಲುಗಳಿಂದ ಸೇವಾವೃತ್ತಿಕಾರರಾದ ಶೂದ್ರರು ಉತ್ಪನ್ನರಾದರು. ಸೇವಾವೃತ್ತಿಯಿಂದ ಶ್ರೀ ಹರಿಯೂ ಸಂತುಷ್ಟನಾಗುತ್ತಾನೆ.

ಈ ನಾಲ್ಕು ವರ್ಣದವರೂ ತಮ್ಮ ತಮ್ಮ ವೃತ್ತಿಗಳಿಂದ ಶ್ರೀಹರಿಯನ್ನು ಪೂಜಿಸಿ ಚಿತ್ತಶುದ್ಧಿಯನ್ನು ಪಡೆಯುತ್ತಾರೆ. ವಿದುರ, ಈ ವಿರಾಟ್‌ಪುರುಷನು ಭಗವಂತನ ಯೋಗಮಾಯೆಯ ಪ್ರಭಾವವನ್ನು ಪ್ರಕಟಗೊಳಿಸುತ್ತಾನೆ.

ಭಗವಂತನು ಕಾಲ-ಕರ್ಮ-ಸ್ವಭಾವ ಶಕ್ತಿಯುತನು. ಇವನ ಸ್ವರೂಪವನ್ನು ಯಾರು ತಾನೇ ವರ್ಣಿಸಿಯಾರು? ಆದರೂ ವ್ಯಾವಹಾರಿಕ ಚರ್ಚೆಗಳಿಂದ ಅಪವಿತ್ರವಾದ ವಾಣಿಯನ್ನು ಪವಿತ್ರಗೊಳಿಸಲು ನನ್ನ ಬುಧ್ಯನುಸಾರ ಗುರೂಪದಿಷ್ಟ ರೀತ್ಯಾ ಶ್ರೀ ಹರಿಯ ಯಶೋ ವರ್ಣನೆಯನ್ನು ಮಾಡುತ್ತೇನೆ. ಮಹಾಪುರುಷರ ಅಭಿಪ್ರಾಯವೇನೆಂದರೆ, ಶ್ರೀಹರಿಯ ಆ ಪುಣ್ಯಶ್ಲೋಕನ ಗುಣಗಾನ ಮಾಡುವುದೇ ಮಾನವವಾಣಿಯ ಸಾರ್ಥಕತೆಯು. ವಿದ್ವಾಂಸರ ಮುಖದಿಂದ ಭಗವತ್ಕಥಾಮೃತವನ್ನು ಸೇವಿಸುವುದೇ ಕಿವಿಗಳ ಸಾರ್ಥಕತೆಯು. ನಾವಿರಲಿ, ಬ್ರಹ್ಮನೂ ಸಹ ಒಂದುಸಾವಿರ ದಿವ್ಯ ವರ್ಷಗಳ ಕಾಲ ಯೋಗ ಪರಿಪಕ್ವ ಬುದ್ಧಿಯಿಂದ ವಿಚಾರ ಮಾಡಿದನು. ಆದರೂ ಭಗವಂತನ ಮಹಿಮೆಯನ್ನು ಅರಿಯಲಾಗಲಿಲ್ಲ. ಭಗವಂತನ ಮಾಯೆಯು ಮಹಾ ಮಾಯಾವಿಗಳನ್ನೂ

Sri Vidyabharathi Book Centre, Sringeri

. In Public Domain. Digitized by eGangotri

ಮೋಹಿತರನ್ನಾಗಿ ಮಾಡುತ್ತದೆ, ಭಗವಂತನೇ ದಿಗ್ಭ್ರಾಂತನಾಗುತ್ತಾನೆ ಎಂದರೆ ಮಿಕ್ಕವರ ಪಾಡೇನು?

ಯತೋಽಪ್ರಾಪ್ಯನ್ಯವರ್ತಂತ, ವಾಚಶ್ಚ ಮನಸಾಸಹ,
ಅಹಂಚಾನ್ಯ ಇಮೇ ದೇವಾಃ, ತಸ್ಮೈತ ಭಗವತೇ ನಮಃ

ವಾಣಿಯಿಂದ – ಮನಸ್ಸಿನಿಂದ ಭಗವಂತನನ್ನು ಸ್ಪರ್ಶಿಸಲಾಗುವುದಿಲ್ಲ. ಮಾಯೆಯಿಂದ ಪಾರಾಗಲು ಯಾರೂ ಸಮರ್ಥರಲ್ಲ. ಅಂತಹ ಮಾಯಾಧೀಶನಾದ ಭಗವಂತನಿಗೆ ನಮಸ್ಕಾರೆಗಳು

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ
ಷಷ್ಠೋಽಧ್ಯಾಯಃ

ತೃತೀಯ ಸ್ಕಂಧ, ಏಳನೆಯ ಅಧ್ಯಾಯ
ವಿದುರ ಪ್ರಶ್ನೆ

ಹೀಗೆ ಹೇಳಿದ ಮೈತ್ರೇಯರನ್ನು ಅಭಿನಂದಿಸುತ್ತಾ ವ್ಯಾಸಸುತನಾದ ವಿದುರನು ಹೇಳಿದನು.

ಒಂದೊಂದು ಸಾರಿ ಶ್ರೋತೃವೂ ವಕ್ತೃವಿಗೆ ಅತ್ಯಾನಂದವಾಗುವಂತೆ ಮಾತನಾಡುತ್ತಾನೆ. ನಾನು ಹೇಳಿದುದಕ್ಕಿಂತಲೂ ಹೆಚ್ಚಿಗೆ ತಿಳಿದುಕೊಂಡಿದ್ದಾನೆಂದು ವಕ್ತಾ ಸಂತೋಷ ಪಡುತ್ತಾನೆ. ವಿದುರನು ಹೇಳಿದನು. ಮಹಾತ್ಮನ್, ಪರಮಾತ್ಮನು ಚಿತ್ಮಾತ್ರನು, ಹಾಗೂ ಸಾಕ್ಷಿ ಸ್ವರೂಪನು. ಅವನು ವಿಕಾರಿಯಾಗುವುದಿಲ್ಲ. ವಿಕಾರಿಯಾಗುವವನು ಸಾಕ್ಷಿಯಾಗಲಾರ. ಜ್ಞಾನ ಸ್ವರೂಪೀ ಪರಮಾತ್ಮನ ಸ್ವರೂಪವು, ನಿರ್ವಿಕಾರಿಯು ಅವನು ನಿರ್ಗುಣನು,

Sri Vidyabharathi Book Centre, Sringeri

 CC-O. In Public Domain. Digitized by eGangotri

ಅವನಲ್ಲಿ ವಿಷಯುಗಳಿಲ್ಲ, ಇಂದ್ರಿಯಗಳಿಲ್ಲ, ವೃತ್ತಿಗಳಿಲ್ಲ ವೃತ್ತ್ಯಭಿವ್ಯಂಜಕ ಅಂತಃಕರಣವಿಲ್ಲ. ನಿರ್ಗುಣನೆಂದ ಮೇಲೆ ತ್ರಿಗುಣಮಯಿಯಾ ಪ್ರಕೃತಿಯು ಎಲ್ಲಿಂದ ಬಂದಿತು? ಇಂತಹವನು ಸೃಷ್ಟಿಕರ್ತನು ಹೇಗಾದಾನು,

ಬಾಲಕನಲ್ಲಿ ಕಾಮನೆಯಿರುತ್ತದೆ. ಮತ್ತೊಬ್ಬರೊಡನೆ ಕ್ರೀಡಿಸ ಬೇಕೆಂಬ ಇಚ್ಛೆಯುಂಟಾಗುತ್ತದೆ. ಸ್ವತಃ ಭಗವಂತನು ನಿತ್ಯತೃಪ್ತನು, ಪೂರ್ಣ ಕಾಮನು. ಸರ್ವಥಾ ಅಸಂಗನು. ಇವನು ಕ್ರೀಡೆಗಾಗಿಯಾದರೂ ಏಕೆ ಸಂಕಲ್ಪಿಸುತ್ತಾನೆ? ಈ ಕ್ರೀಡೆಯೂ ಒಂದು ವಿಧದ ಕಾಮನೆಯೇ ಅಲ್ಲವೇ?

ಸ್ವತಸ್ತೃಪ್ತಸ್ಯಚ ಕಥಂ, ನಿವೃತ್ತಸ್ಯ ಸದಾನ್ಯತಃ

ಸ್ವತಃ ತೃಪ್ತನಾದ, ಅನ್ಯತಃ ನಿವೃತ್ತನಾದ ಪರಮಾತ್ಮನಿಗೆ ಕ್ರೀಡಿಸುವ ಇಚ್ಛೆಯು ಹೇಗೆ ಬಂದೀತು? ಭಗವಂತನು ತನ್ನ ತ್ರಿಗುಣಾತ್ಮಿಕಾಮಾಯೆ ಯಿಂದ ಜಗತ್ ಸೃಷ್ಟಿಯನ್ನೂ, ಪಾಲನೆಯನ್ನೂ, ಸಂಹಾರವನ್ನೂ ಮಾಡು ತ್ತಾನೆ, ಜ್ಞಾನ ಸ್ವರೂಪೀ ಭಗವಂತನ ಜ್ಞಾನವು ಸ್ವತಃ ಆಗಲೀ ನಿಮಿತ್ತಾಂತರ ಗಳಿಂದಾಗಲಿ, ಲೋಪವಾಗುವುದಿಲ್ಲ. ಅಂತಹವನಿಗೆ ಮಾಯಾ ಸಂಬಂಧವು ಹೇಗುಂಟಾಗುವುದು?

ಇವನು ಸಾಕ್ಷಿ ಸ್ವರೂಪದಿಂದ, ಸರ್ವಕ್ಷೇತ್ರವಾಸಿಯು ಇವನಿಗೆ ದೌರ್ಭಾಗ್ಯಾದಿ ಕರ್ಮಕ್ಲೇಷಗಳು ಹೇಗೆ ಸಂಬಂಧಿಸುತ್ತವೆ?

ಒಂದೊಂದು ಸಾರಿ ಎರಡು ಪದಾರ್ಥಗಳು ಒಂದಾಗಿ ತೋರುತ್ತವೆ. "ದೇಹೋಽಹಂ" ಇದು ಅಧ್ಯಾಸ, "ಬ್ರಹ್ಮೈವೇದಂ ವಿಶ್ವಂವರಿಷ್ಠಂ" ಬ್ರಹ್ಮನೂ ವಿಶ್ವವೂ ಒಂದು. ಇನು ಬಾಧಸಾಮಾನಾಧಿಕರಣ್ಯ. ವಿಶ್ವವು ಬಾಧಿತ ಪರಮಾತ್ಮನು ಸತ್ಯ, ಏಕಧಾ ಭವತಿ, ತ್ರಿಧಾ ಭವತಿ. ಪಂಚಧಾ ಭವತಿ, ಇದು ಕಾರ್ಯ-ಕಾರಣ ಸಾಮಾನಾಧಿಕರಣ್ಯ ವಾಗುತ್ತದೆ.]

ಪರಮಾತ್ಮನಲ್ಲಿ ಈ ವಿಶ್ವಸೃಷ್ಟಿಯು ಹೇಗೆ ಬಂದಿತು? ಯಾರಜ್ಞಾನವು ಯಾವಾಗಲೂ ಲುಪ್ತವಾಗುವುದಿಲ್ಲವೋ ಅವನಿಗೆ ಮಾಯಾ ಸಂಬಂಧವು ಹೇಗೆ? ಅವಿದ್ಯೆಯು ಎಲ್ಲಿಂದ ಬಂದಿತು? ಪರಮಾತ್ಮನೇ ಎಲ್ಲೆಲ್ಲಿಯೂ ಇರುವಾಗ ಒಂದು ಕಡೆ ಸುಖ ಒಂದು ಕಡೆ ದುಃಖ ತೋರಿಸಲು ಹೇಗೆ ಸಾಧ್ಯ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾತ್ಮರೇ ಈ ಸಂಶಯಗಳಿಂದ ನನ್ನ ಮನಸ್ಸು ವ್ಯಾಕುಲವಾಗಿದೆ. ನನಗಾದರೋ ಗೃಹಾರಾಮಾದಿಗಳ ಚಿಂತೆಯಿಲ್ಲ, ಬಂಧು-ಬಾಂಧವರು ಕೈ ಬಿಟ್ಟರಲ್ಲ ಎಂಬ ದುಃಖವಿಲ್ಲ, ಸರಿಯಾಗಿ ಪರಮಾತ್ಮ ಜ್ಞಾನವು ಮೂಡುತ್ತಿಲ್ಲವಲ್ಲ ಎಂದು ದುಃಖವಾಗುತ್ತಿದೆ. ದಯೆಯಿಟ್ಟು ತಾವು ಈ ಮೋಹವನ್ನು ದೂರೀಕರಿಸಿ.

ಮೈತ್ರೇಯರು ಹೇಳುತ್ತಾರೆ. "ಸೇಯಂ ಭಗವತೋ ಮಾಯಾ" ವಿದುರ-ಇದೇ ಭಗವಂತನ ಮಾಯೆ. ಯುಕ್ತಿ-ವಿಚಾರಗಳಿಂದ ಸಿದ್ಧವಾಗುವುದಿಲ್ಲ. ಆದರೆ ಸ್ಪಷ್ಟವಾಗಿ ಕಾಣುತ್ತದೆ. ಐಂದ್ರ ಜಾಲಿಕನ ಮಾಯೆಯಂತೆ ಕಣ್ಣಿಗೆ ಕಾಣುತ್ತಿದೆ, ಆದರೆ ಬುದ್ಧಿಯುಯೋಚನೆಗೆ ನಿಲುಕುವುದಿಲ್ಲ. ಮಾಯೆಯು ಅನಿರ್ವಚನೀಯ, ಆವರಣವನ್ನು ಕಲ್ಪಿಸುತ್ತದೆ.

ಯುಕ್ತಿಯಿಂದ ಸಿದ್ಧವಾಗುವುದಿಲ್ಲವಾದರೂ ಜ್ಞಾನದಿಂದ ನಿವೃತ್ತವಾಗುತ್ತದೆ. ಈಶ್ವರನು ನಿತ್ಯ-ಶುದ್ಧ-ಬುದ್ಧ-ಮುಕ್ತನು. ಅವನದ ಕಾರ್ಪಣ್ಯವಾಗಲಿ, ಬಂಧನವಾಗಲಿ, ಇಲ್ಲ. ಕಾರ್ಪಣ್ಯವಿಲ್ಲದೆ, ಬಂಧನವಿಲ್ಲದೆ, ಕಾರ್ಪಣ್ಯದ-ಬಂಧನದ ಪ್ರತೀತಿಯಾಗುತ್ತಿದೆಯಲ್ಲ, ಇದೇ ಮಾಯಾ.

ಯದರ್ಥೇನ ವಿನಾಮುಷ್ಯ, ಪುಂಸ ಆತ್ಮಾಪರ್ಯಯಃ
ಪ್ರತೀಯತ ಉಪದ್ರಷ್ಟುಃ ಸ್ವಶಿರಶ್ಛೇದನಾದಿಕಃ

ಸ್ವಪ್ನದಲ್ಲಿ ನಮ್ಮ ತಲೆಯು ಕತ್ತರಿಸಿ ಹೋಗಿರುವುದನ್ನು ಕಾಣುತ್ತೇವೆ. ತಲೆಯೆ ಹೋದ ಮೇಲೆ ನೋಡುವುದು ಹೇಗೆ? ನೋಡುವವರು ಯಾರು? ಮಲಗಿರುವವನೇ ನೋಡುತ್ತಾನೆ. ಸ್ವಶಿರಚ್ಛೇದನವು ಯುಕ್ತಿಯಿಂದ ಸಾಧಿಸಲ್ಪಡುವುದಿಲ್ಲ. ಆದರೆ ಕಾಣುತ್ತಿದೆ. ಇದೇ ನಿದ್ರಾ ದೋಷದಿಂದ ಸ್ವಪ್ನದಲ್ಲಿ ಕಾಣುವ ಮಾಯೆಯು ಇಲ್ಲದೇ ಇರುವುದು ಇರುವಂತೆ, ಆಗದೇ ಇರುವುದು ಆಗಿರುವಂತೆ ಕಾಣುವುದೇ ಮಾಯೆಯು. ಜೀವನಿಗೆ ಯದ್ಯಪಿ ಬಂಧನಾದಿಗಳಿಂದೂ ಇಲ್ಲ, ಆದರೂ ಇರುವಂತೆ ಕಾಣುತ್ತದೆ. ಈಶ್ವರನಲ್ಲಿ ಈ ಮಾಯಾ ಪ್ರತೀತಿಯೇಕಾಗುವುದಿಲ್ಲ ಅಂದರೆ, ಜಲದಲ್ಲಾಗುವ ಕಂಪನಾದಿಗಳು, ಜಲದಲ್ಲಿ ಕಾಣುವ ಚಂದ್ರನಿಗೆ ಸಂಬಂಧ ಪಡದಿದ್ದರೂ ಸಂಬಂಧಿಸಿದಂತೆ ತೋರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕಾಶಸ್ಥ ಚಂದ್ರನಲ್ಲಿ ಕಾಣುವುದಿಲ್ಲ. ಅದೇ ರೀತಿ ದೇಹಾಭಿಮಾನೀ ಜೀವ ನಲ್ಲಿಯೇ ದೇಹಸ್ಥ ಮಿಥ್ಯಾಧರ್ಮದ ಪ್ರತೀತಿಯು ತೋರುತ್ತದೆ. ಪರಮಾತ್ಮ ನಲ್ಲಿ ತೋರುವುದಿಲ್ಲ. ಇದನ್ನು ದೂರ ಮಾಡಲು ಒಂದು ಕ್ರಮವಿದೆ. ಒಂದು ಪ್ರಕ್ರಿಯೆಯಿದೆ. ಒಂದು ಸಂಪ್ರದಾಯವಿದೆ, ಸ್ವೇಚ್ಛಾ ವಿಹಾರದಿಂದ ಇದು ದೂರವಾಗುವುದಿಲ್ಲ. ಆಗ ಅಹಂಕಾರವು ಮಾತ್ರ ವರ್ಧಿಸುತ್ತದೆ. ಭಗವತ್ಕೃಪೆಯಿಂದ ನಿವೃತ್ತಿ ಧರ್ಮದಲ್ಲಿ ಆಸಕ್ತಿಯು ಉಂಟಾದರೆ ಇದರ ಲೋಪವುಂಟಾಗುತ್ತದೆ. ನಿಷ್ಕಾಮ ಭಾವದಿಂದ ಧರ್ಮಾಚರಣೆಯನ್ನು ಮಾಡಿ ದರೆ, ಭಗವತ್ಕೃಪೆಯಿಂದ ಭಕ್ತಿಯೋಗವು ಪ್ರಾಪ್ತವಾಗುತ್ತದೆ. ಆಗ ಈ ಮಿಥ್ಯಾ ಪ್ರತೀತಿಯು ದೂರವಾಗುತ್ತದೆ.

ವಿಷಯ ಪರಾಙ್ಮುಖಗಳಾದ ಸರ್ವೇಂದ್ರಿಯಗಳೂ, ಸಾಕ್ಷೀ ಪರಮಾತ್ಮಾ ಶ್ರೀ ಹರಿಯಲ್ಲಿ,, ನಿಶ್ಚಲ ಭಾವದಿಂದ ಇರತೊಡಗಿದರೆ, ನಿದ್ರಿತ ಪುರುಷನು ಸರ್ವ ಕಷ್ಟಗಳೂ ನಿವಾರಣೆಯಾಗುವಂತೆ, ಜೀವಿಯ ರಾಗ ದ್ವೇಷಾದಿ ಕ್ಲೇಷ ಗಳೆಲ್ಲವೂ ದೂರವಾಗುತ್ತವೆ.

ಮುರಾರಿಯ ಗುಣಾನುವಾದ ಶ್ರವಣದಿಂದ ಅಶೇಷ ಸಂಕ್ಲೇಶ-ತಾಪೋಪ ಶಮನವುಂಟಾಗುವುದು. ಪ್ರಾಪಂಚಿಕರು ಎಷ್ಟು ವಿಧ ಕ್ಲೇಶಗಳನ್ನು ಅನುಭವಿ ಸುವರೊ ತಿಳಿಯದು.

ಯೋಗ ಶಾಸ್ತ್ರಕಾರರು ಐದು ವಿಧ ಕ್ಲೇಶಗಳನ್ನು ಹೇಳುತ್ತಾರೆ, ಅವಿದ್ಯಾ. ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ. ಅಂದರೆ, ಅಜ್ಞಾನ. ಅಭಿಮಾನ ಪ್ರೀತಿ. ದ್ವೇಷ ಮರಣಭೀತಿ. ಇವುಗಳ ನಿವಾರಣೆಗೆ ಉಪಾಯ ವೆಂದರೆ ಶ್ರೀಹರಿಯ ಗುಣಾನುವಾದ ಶ್ರವಣ "ಮುರಾರೇಃ ಗುಣಾನುವಾದ ಶ್ರವಣಂ" ಎಂದು ಮುರಾರಿ ಶಬ್ದವನ್ನು ಪ್ರಯೋಗಿಸಿದ್ದಾರೆ. ಅಂದರೆ = ಹೃದಯಸ್ಥ ನಾನಾ ವಾಸನೆಗಳ. ಮುಳ್ಳಿನಂತೆ ಸದಾ ವ್ಯಥೆಗೊಳಿಸುವ ಕ್ಲೇಶ ಗಳ ಶತ್ರುವು "ಮುರಾರಿ" ಅವನ ಗುಣ ಕಥಾನುವಾದವನ್ನು ಕೇಳಬೇಕು. ಅದರಿಂದ ಸಕಲ ಕ್ಲೇಶಗಳೂ ದೂರವಾಗುತ್ತವೆ. ಭಗವಂತನ ಪಾದಾರವಿಂದ ಗಳಲ್ಲಿ ಪ್ರೀತಿಯುಂಟಾಗುತ್ತದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ವಿದುರನು ಹೇಳುತ್ತಾನೆ. ಭಗವನ್, ನಿಮ್ಮ ಒಂದೇ ಒಂದು ಕತ್ತಿಯ ಹೊಡೆತದಿಂದ ನನ್ನ ಸಂಶಯಗಳೆಲ್ಲವೂ ನಿರ್ಮೂಲವಾದುವು. ನಿಮ್ಮ ಯುಕ್ತಿ ಯುಕ್ತ ವಚನಗಳಿಂದ ಸಂಶಯರಹಿತನಾದೆನು.

ಜೀವನ ಪರತಂತ್ರತೆ, ಪರಮೇಶ್ವರನ ಸ್ವತಂತ್ರತೆ ಎರಡರಲ್ಲಿಯೂ ನನ್ನ ಮನಸ್ಸು ಪ್ರವೇಶಿಸುತ್ತಿದೆ. ತಾವು ಹೇಳಿದುದನ್ನು ಹೀಗೆ ಗ್ರಹಿಸಿದ್ದೇನೆ,

ಭಗವನ್ಮಾಯೆಯಿಂದಲೇ ಜೀವನಿಗೆ ಕ್ಲೇಷಾದಿಗಳ ಅನುಭವವುಂಟಾಗುತ್ತದೆ. ವಸ್ತುತಃ ಕ್ಲೇಷಾದಿಗಳು ಮಿಥ್ಯಾ. ನಿರ್ಮೂಲಕಗಳು. ಈ ಪರಿದೃಶ್ಯಮಾನ ಜಗತ್ತಿಗೆ ಮಾಯೆಯೊಂದನ್ನು ಬಿಟ್ಟರೆ ಮತ್ತೊಂದರ ಕಾರಣವಿಲ್ಲ. ನೋಡಿ_ ಈ ತತ್ತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ ಸಂಸಾರ ತ್ಯಾಗಿಗಳಾಗಬೇಕಾದ್ದಿಲ್ಲ. ಸಂಸಾರವನ್ನು ತ್ಯಾಗಮಾಡಿದವನಿಗೇ ತತ್ತ್ವಪ್ರಾಪ್ತಿಯೆಂಬ ನಿಯಮವೂ ಇಲ್ಲ ಘಟವನ್ನು ಒಡೆದು ಹಾಕಿ ಮೃತ್ತಿನ ಜ್ಞಾನವನ್ನು ಪಡೆಯಬೇಕಾದ್ದಿಲ್ಲ. ಆಭರಣಗಳನ್ನು ಕರಗಿಸದೇ ಅವುಗಳ ಮೂಲವಾದ ಸುವರ್ಣದ ಜ್ಞಾನವನ್ನು ಪಡೆಯಬಹುದು,

ಪ್ರಪಂಚವು ತನ್ನಷ್ಟಕ್ಕೆ ತಾನು ಕಾಣುತ್ತಿರಲಿ ಇದರ ಪರಮಾತ್ಮ ಸ್ವರೂಪವನ್ನು ಅರ್ಥಮಾಡಿಕೊಂಡರ ಸಾಕು. ಇದೇ ಜ್ಞಾನ.

ಅಜ್ಞಾನಿಯ ಸ್ಥಿತಿಯಲ್ಲಿ ಸಮಾಧಿಯೇನು ಬಂತು? ಪ್ರಳಯದಲ್ಲಿ ತಿಳಿಯಲು ಸಾಧ್ಯವೇ? ಆಗ ಏನನ್ನು ತಿಳಿಯುವುದು? ತಿಳಿಯುವುದರಿಂದ ಪ್ರಯೋಜನವೇನು? ಅದು ಪುರುಷಾರ್ಥವಾಗಲಾರದು. ಈಗ ಇಲ್ಲಿಯೆ ಹೀಗೆಯೆ ತಿಳಿಯಲು ಪ್ರಯತ್ನ ಪಟ್ಟು ಸಫಲನಾಗುವುದೇ "ಪುರುಷಾರ್ಥ"ವು.

ಸಂಸಾರದಲ್ಲಿ ಎರಡು ಬಗೆಯ ಜನರಿದ್ದಾರೆ- ಒಬ್ಬರು ಅಜ್ಞಾನಿಗಳು ಮತ್ತೊಬ್ಬರು ಭಗವಂತನನ್ನು ತಿಳಿದವರು. ಇವರಿಬ್ಬರೂ ಸುಖಿಗಳು. ಆದರೆ ಮಧ್ಯವರ್ತೀ ಸಂಶಯಾಪನ್ನ ಜನರು ಮಹಾ ದುಃಖ ಭಾಗಿಗಳಾಗಿದ್ದಾರೆ.

ಮಹಾತ್ಮರೇ ತಮ್ಮ ಬೋಧೆಯಿಂದ ಅನಾತ್ಮವಸ್ತುಗಳಿಲ್ಲಿ ಕೇವಲ ತೋರುತ್ತಿವೆ. ಎಂದು ತಿಳಿದೆನು. ತಮ್ಮ ಆಶೀರ್ವಾದ ಬಲದಿಂದ ಆ ಪ್ರತೀತಿಯನ್ನೂ ದೂರ ಮಾಡುವೆನು. ತಮ್ಮಂತಹವರ ಪಾದ ಸೇವಾ ಫಲದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನಲ್ಲಿ ಅಖಂಡ ಪ್ರೇಮಾನಂದಗಳು ವರ್ಧಿಸುವುವು. ಈ ಆವಾಗಮನ ರೂಪೀ ಕ್ಲೇಶದ ನಾಶವಾಗುತ್ತದೆ. ಭಗವದ್ಭಕ್ತಿಯು ಸರ್ವ ಕ್ಲೇಶನಾಶಕವು. ಮಹಾತ್ಮಾ ಭಕ್ತರು ಭಗವತ್ಪ್ರಾಪ್ತಿ ಸಾಧಕವಾದ ಮಾರ್ಗವನ್ನು ತೋರಿಸುತ್ತಾರೆ. ಆದರೆ ಅಕೃತಾತ್ಮರಿಗೆ ಮಹಾತ್ಮರ ಸೇವಾ ಭಾಗ್ಯವು ದೊರಕುವುದಿಲ್ಲ.

ಭಗವನ್, ತಾವು ಹೇಳಿದಿರಿ ಸೃಷ್ಟಿಯ ಪ್ರಾರಂಭದಲ್ಲಿ ಭಗವಂತನು ಮಹದಾದಿ ತತ್ತ್ವಗಳನ್ನು ರಚಿಸಿದನು. ಅವುಗಳ ಅಂಶಗಳಿಂದ ವಿರಾಟ್ ಪುರುಷನ ಉತ್ಪತ್ತಿಯಾಯಿತು, ಅವನಲ್ಲಿ ಭಗವಂತನೇ ಸೇರಿಕೊಂಡನು. ಅವನಿಗೆ ಸಾವಿರಾರು ಕಾಲುಗಳು, ಸಾವಿರಾರು ಕೈಗಳು, ವೇದಗಳು ಅವನನ್ನು ಆದಿಪುರುಷನೆಂದು ಹೊಳುತ್ತವೆ.

ಅವನಲ್ಲಿಯೆ ವೇದಗಳು, ಈ ಲೋಕಗಳೆಲ್ಲವೂ ಇವೆ. ಹಾಗೂ, ಇಂದ್ರಿಯಗಳು, ವಿಷಯಗಳು, ಇಂದ್ರಿಯಾಭಿಮಾನೀ ದೇವತೆಗಳು, ದಶಪ್ರಾಣಗಳು ಇಂದ್ರಿಯಬಲ ಮನೋಬಲ, ಶಾರೀರಕ ಬಲಗಳೆಲ್ಲವೂ ಇವೆ ಅವನಿಂದಲೇ ಬ್ರಾಹ್ಮಣಾದಿ ವರ್ಣಗಳೆಲ್ಲವೂ ಹುಟ್ಟಿದುವು.

ತಾವು ದಯೆಯಿಟ್ಟು ತಿಳಿಸಿರಿ. ಬಹ್ಮಾದಿ ವಿಭೂತಿಗಳು ಅವನಿಂದ ಹೇಗೆ ಪ್ರಕಟವಾದುವು? ಅವರ ವಂಶ ವಂಶಾನು ಚರಿತೆಗಳೇನು? ಬ್ರಹ್ಮಾದಿ ಪ್ರಜಾಪತಿಗಳ ಪ್ರಭುವಾದ ವಿರಾಟ್ ಪುರುಷನಿಂದ ಯಾವ ಯಾವ ಪ್ರಜಾಪತಿಗಳು ಉತ್ಪನ್ನರಾದರು? ಸರ್ಗ-ಅನುಸರ್ಗ-ಮನ್ವಂತರ ಆಧಿಪತಿಗಳಾದ ಮನುಗಳು ಹೇಗೆ ಅವತರಿಸಿದರು? ಮನು ವಂಶೀಯ ರಾಜರುಗಳ, ದೇವ-ಮನುಷ್ಯ ಸರ್ಪಾದಿ ಪ್ರಾಣಿಗಳ ಉತ್ಪತ್ತಿಯು ಹೇಗಾಯಿತು? ಪೃಥಿವ್ಯಾದಿ ಲೋಕಗಳ ವಿಸ್ತಾರವು ಹೇಗಿದೆ?

ಶ್ರೀಹರಿಯು ಬ್ರಹ್ಮ-ವಿಷ್ಣು-ಶಿವಾತ್ಮಕನಾಗಿ ಸೃಷ್ಟಿ ಸ್ಥಿತಿ- ಲಯಗಳನ್ನು ಹೇಗೆ ನಡೆಸುವನು? ಜರಾಯುಜ ಅಂಡಜ-ಸ್ವೇದಜ ಉದ್ಭಿಜಾದಿ ಪ್ರಾಣಿಗಳ ಉತ್ಪತ್ತಿಯು ಹೇಗಾಯಿತು? ವರ್ಣಾಶ್ರಮ ವಿಭಾಗಗಳು. ಜ್ಞಾನಕಾಂಡ ಕರ್ಮಕಾಂಡಗಳು ಪಾಂಖಂಡಿಗಳ ವಿಷಮತೆ, ಇವುಗಳೆಲ್ಲವನ್ನೂ ದಯೆಯಿಟ್ಟು ವರ್ಣಿಸಿರಿ.

ಬ್ರಹ್ಮನ್ ಧರ್ಮಾರ್ಥ ಕಾಮಮೋಕ್ಷ ಪ್ರಾಪ್ತಿಗಾಗಿ ಮಾಡುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಿರೋಧಿ ಸಾಧನೆಗಳೇನು? ವಾಣಿಜ್ಯ ದಂಡನೀತಿ - ಶಾಸ್ತ್ರ ಶ್ರವಣ ವಿಧಿ ಶ್ರಾದ್ಧವಿಧಿ. ಪಿತೃಗಣಗಳ ಸೃಷ್ಟಿ ಕಾಲಚಕ್ರದಲ್ಲಿ ಗ್ರಹ ನಕ್ಷತ್ರಗಳ ಗತಿ, ಇವುಗಳನ್ನೂ ವರ್ಣಿಸಿರಿ. ದಾನ– ತಪಸ್ಸು–ಇಷ್ಟ-ಪೂರ್ತ-ಕರ್ಮ ಫಲ ಪ್ರವಾಸದಲ್ಲಿ ಹಾಗೂ ಆಪತ್ಕಾಲದಲ್ಲಿ ಮನುಷ್ಯನ ಧರ್ಮ ಸೇವನೆ. ಧರ್ಮಾಚಾರ್ಯನಾದ ನಾರಾಯಣನು ಯಾವ ಆಚರಣೆಯಿಂದ ಸಂತುಷ್ಟಗೊಳ್ಳುವನು ? ಯಾರನ್ನೂ ಅನುಗ್ರಹಿಸುವನು? ಈ ಎಲ್ಲಾ ವಿಚಾರಗಳನ್ನೂ ದಯೆಯಿಟ್ಟು ತಿಳಿಸಿರಿ ಗುರುಗಳು ದೀನವತ್ಸಲರು, ತಮ್ಮ ಪ್ರಿಯ ಶಿಷ್ಯರಿಗೆ–ಪುತ್ರರಿಗೆ ಅವರು ಪ್ರಶ್ನಿಸದಿದ್ದರೂ ಹಿತವಾದುದನ್ನೂ ಪ್ರಿಯವಾದುದನ್ನೂ ತಿಳಿಸುತ್ತಾರೆ. ಮಹದಾದಿ ತತ್ತ್ವಗಳು ಹೇಗೆ ಪ್ರಳಯವನ್ನು ಹೊಂದುವುವು? ಭಗವಂತನು ಯೋಗ ನಿದ್ರೆಯಲ್ಲಿರುವಾಗ ಯಾವ ತತ್ತ್ವಗಳು ಅವನಲ್ಲಿ ಲೀನವಾಗುವುವು?

ಭಗವಂತನ ಸೇವೆಯಲ್ಲಿ ಯಾವ ತತ್ತ್ವಗಳಿರುವುವು? ಜೀವತತ್ತ್ವ, ಪರಮೇಶ್ವರ ಸ್ವರೂಪ ಉಪನಿಷತ್ ಪ್ರತಿಪಾದಿತ ಜ್ಞಾನ ಗುರುಶಿಷ್ಯರ ಸಂಬಂಧ ಇವುಗಳನ್ನೂ ವಿವರಿಸಿ.

ಪವಿತ್ರಾತ್ಮರೇ, ವಿದ್ವಾಂಸರು ಜ್ಞಾನ ಪ್ರಾಪ್ತಿಗಾಗಿ ಹೇಳಿರುವ ಉಪಾಯವನ್ನು ತಿಳಿಸಿರಿ. ಸಾಮಾನ್ಯವಾಗಿ ಮಾನವರಿಗೆ ಜ್ಞಾನ ಭಕ್ತಿ ವೈರಾಗ್ಯಗಳು ತಾವಾಗಿ ಲಭಿಸುವುದಿಲ್ಲವಲ್ಲ? ಪೂಜ್ಯರೇ ನನಾದರೋ ಅಜ್ಞನು, ಮಾಯಾ ಮೋಹ ಪರವಶನು ಇಷ್ಟಾದರೂ ತಮ್ಮ ಪರಮ ಸುಹೃತ್, ಶ್ರೀಹರಿಲೀಲಾ ಜ್ಞಾನ ಪ್ರಾಪ್ತಿಗಾಗಿ ನಾನು ಮಾಡಿರುವ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸಿರಿ,

ಯದ್ಯಪಿ ವೇದಾಧ್ಯಯನ, ಯಜ್ಞ ತಪಸ್ಸು ದಾನಾದಿಗಳಿಂದ ಪುಣ್ಯ ಪ್ರಾಪ್ತಿಯಾಗುತ್ತದೆ. ಆದರೆ ಜೀವನಿಗೆ ಅಭಯ ಪ್ರದಾನ ಮಾಡುವುದು ಮಹಾ ಶ್ರೇಯಸ್ಕರವಾದುದು.

ನೋಡಿ = ಲೋಕದಲ್ಲಿ ಮಹಾ-ಮಹಾ ದಾನಿಗಳಿದ್ದಾರೆ, ಹಸಿವನ್ನು ಅಡಗಿಸುವ, ಛಳಿಯನ್ನು ನೀಗಿಸುವ, ರೋಗವನ್ನು ಗುಣಪಡಿಸುವ, ಬಡತನವನ್ನು ನಾಶ ಪಡಿಸುವ ಮಹಾ ಮಹಿಮರಿದ್ದಾರೆ. ಆದರೆ ಭಗವಂತನ ಕಥಾಶ್ರವಣ ದಾನವನ್ನು ಮಾಡುವವನು ಮಹಾದಾನಿಯು, ಅವನು ಭಗವಂತನ ರಸದೌತಣವನ್ನೇ ಬಡಿಸುತ್ತಾನೆ. ಜೀವಿಯ ಹೃದಯ ಭಯವನ್ನು ನಾಶಪಡಿಸುತ್ತಾನೆ, "ನಿರ್ಭಯೋಂ ಜಾಯತೇ ಮರ್ತ್ಯಃ ಭಗವತ್ತತ್ತ್ವವನ್ನು ತಿಳಿದವನು ನಿರ್ಭಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಗಿರುತ್ತಾನೆ, ಒಬ್ಬರಿಂದ ಭಯಪಡುವುದಿಲ್ಲ. ಒಬ್ಬರನ್ನು ಭಯ ಪಡಿಸುವುದೂ ಇಲ್ಲ ಸರ್ವವೂ ಭಗವಂತನೇ.

ಹೇಳುತ್ತಾರೆ = ಒಂದು ದಿವಸ ನಾಮದೇವನನ್ನು ಪರೀಕ್ಷಿಸಲು ಪಾಂಡುರಂಗ ನೇಪಿಶಾಚಿಯಾಗಿ ಬಂದನಂತೆ. ನಾಮದೇವನು ಹೇಳಿದನು= ಪಾಂಡುರಂಗ ಇದೇಕೆ ಈ ಉಡುಪನ್ನು ಹಾಕಿಕೊಂಡೆ? ಪೀತಾಂಬರವನ್ನುಟ್ಟು ಬೇಸರವಾಯಿತೇ? ಅಥವಾ, ನಾಮನು ಹೆದರುವನೋ ಇಲ್ಲವೋ? ಎಂದು ನೋಡಲು ಬಂದೆಯಾ? ವಿಟ್ಠಲ ಪ್ರಿಯತಮನ ಕೈಯ್ಯಿನಲ್ಲಿ ಚಾಕುವನ್ನು ಕಂಡು ಪ್ರಿಯೆಯು ಹೆದರುವಳೇ?

ನನ್ನ ಆರಾಧ್ಯ ದೇವನು ಯಾವ ಉಡುಪಿನಲ್ಲಿದ್ದರೇನು? ಯಾವ ರೂಪದಲ್ಲಿದ್ದರೇನು? ೮೪ ಲಕ್ಷ ಜೀವಿಗಳ ರೂಪದಲ್ಲಿರುವವನೂ ನೀನೇ ಅಲ್ಲವೇ? ವಿಟ್ಠಲ, ವಿಟ್ಠಲ–ಎನ್ನುತ್ತಾ ಭಾವ ಸಮಾಧಿಸ್ಥನಾದ ನಂತೆ. ಹೀಗೆ ಭಗವದ್ಭಕ್ತರ ವರ್ತನೆಯು ಲೋಕವರ್ತನೆಗಿಂತ ವಿಚಿತ್ರವಾಗಿರುತ್ತದೆ.

ವಿದುರನ ಪ್ರಶ್ನಾವಳಿಗಳಿಂದ ಮೈತ್ರೇಯರೂ ಸಂತುಷ್ಟರಾಗಿದ್ದಾರೆ. ಭಗವವತ್ಕಥಾ ಶ್ರವಣವನ್ನು ಮಾಡಿಸಬೇಕೆಂಬ ಪ್ರೇರಣೆಗೆ ಒಳಗಾಗಿದ್ದಾರೆ,

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ

ಸಪ್ತಮೋಽಧ್ಯಾಯಃ

ಶ್ರೀ ಭಾಗವತ ದರ್ಶನ
ತೃತೀಯ ಸ್ಕಂಧ ಎಂಟನೇ ಅಧ್ಯಾಯ
ಬ್ರಹ್ಮನ ಉತ್ಪತ್ತಿ

ಮೈತ್ರೇಯರು ಹೇಳುತ್ತಾರೆ,

ವಿದುರ ನೀನು ಮಹಾ ಭಾಗವತೋತ್ತಮನು ಲೋಕ ಪಾಲಕನಾದ

Sri Vidyabharathi Book Centre, Sringeri

CC-0. In Public Domain. Digitized by eGangotri

ಯುಮಧರ್ಮರಾಯನ ಅಂಶವಲ್ಲವೇ ನೀನು ? ನಿನ್ನಂತಹವನ ಜನ್ಮದಿಂದ ಕುರುವಂಶವು ಸಾಧು ಜನಸೇವಿತವಾಯಿತು. ನೀನು ಕ್ಷಣೇ-ಕ್ಷಣೇ ಶ್ರೀ ಹರಿಕಥಾಸ್ಮರಣೆಯನ್ನು ನಿತ್ಯ ನೂತನವನ್ನಾಗಿ ಮಾಡುತ್ತಿರುವೆ. ಮಾನವ ಪ್ರಾಣಿಗಳು ತಮ್ಮ ಪುಣ್ಯಫಲಗಳಿಗನುಗುಣವಾಗಿ ಸಾಂಸಾರಿಕ ಸುಖವನ್ನನುಭವಿಸಲು ಭೂಮಿಗೆ ಬಂದರು. ಆದರೆ ಬಂದ ಮೇಲೆ ಅವರ ದುಃಖಕ್ಕೆ ಅಂತ್ಯವೇ ಇಲ್ಲ. ಅಲ್ಪಸುಖ ಬೇಕು-ಬೇಕು ಎಂಬ ಹಸಿವು ಇಂಗುವುದೇ ಇಲ್ಲ.

ಕ್ಷುದ್ರ ಸುಖಾಭಿಲಾಷೆಯಿಂದ ಮಹಾದುಃಖಿಗಳಾಗಿರುವ ಜೀವಿಗಳ ದುಃಖ ನಿವಾರಣೆಗ ಗಿ ಶ್ರೀ ಮಧ್ಭಾಗವತ ಮಹಾಪುರಾಣವನ್ನು ಪ್ರಾರಂಭಿಸುತ್ತಿದ್ದೇನೆ. ಇದನ್ನು ಭಗವಾನ್ ಸಂಕರ್ಷಣನು, ಸನಕಾದಿಗಳಿಗೆ ಶ್ರವಣ ಮಾಡಿಸಿದ್ದನು. ಅಖಂಡ ಜ್ಞಾನ ಸಂಪನ್ನನಾದ ಆದಿದೇವ ಭಗವಾನ್ ಸಂಕರ್ಷಣನು ಪಾತಾಳಲೋಕದಲ್ಲಿ ವಿರಾಜಮಾನನಾಗಿದ್ದಾನೆ. ಸನಕಾದಿ ಋಷಿಗಳು ಪರಬ್ರಹ್ಮ ತತ್ವವನ್ನು ತಿಳಿಯುವುದಕ್ಕಾಗಿ ಅವನನ್ನು ಪ್ರಶ್ನಿಸಿದರು. ನೋಡಿ : ನಮ್ಮ ಹೃದಯದಲ್ಲಿ ಅನೇಕ ವಿಧದ ವೃತ್ತಿಗಳಿವೆ. ಅವುಗಳಲ್ಲಿ ಶುದ್ಧ ಸಾತ್ವಿಕ-ಚೈತನ್ಯ ಸ್ವರೂಪ ವೃತ್ತಿಗಳನ್ನು ಸನಕಾದಿಗಳೆಂದು ಕರೆಯುತ್ತಾರೆ. ಇವರು ನಮ್ಮಂತೆ ಸ್ಥೂಲ-ಪಾಂಚಭೌತಿಕ ಶರೀರಗಳನ್ನು ಧರಿಸಿರುವವರಲ್ಲ.

ಸನಕಾದಿಗಳು ಪಾತಾಳಕ್ಕೆ ಹೋದರು. ಅಲ್ಲಿ ಎಲ್ಲರೂ ಭಗವಾನ್ ಸಂಕರ್ಷಣನನ್ನು ಪೂಜಿಸುತ್ತಿದ್ದಾರೆ. ನಾಗಕುಮಾರಿಯರು ಭಗವತ್ಸೇವೆಯಲ್ಲಿ ನಿರತರಾಗಿದ್ದಾರೆ, ಮಹಾತ್ಮರು ಸ್ತೋತ್ರ ಮಾಡುತ್ತಿದ ್ದರೆ. ಭಗವಾನ್ ಸಂಕರ್ಷಣನು ಸರ್ವಾಶ್ರಯಭೂತನಾದ ಪರಮಾತ್ಮನ ಮಾನ-ಕ ಪೂಜಾ ಧ್ಯಾನದಲ್ಲಿ ಮಗ್ನನಾಗಿದ್ದಾನೆ.

ಆ ಸರ್ವರೂಪೀ ಪರಮಾತ್ಮನನ್ನೇ ವೇದಗಳು 'ವಾಸುದೇವ' ನಾಮದಿಂದ ನಿರೂಪಿಸುತ್ತವೆ. -ವನ ಕಮಲ ನಯನಗಳು ಅರ್ಧ ನಿಮೀಲಿತವಾಗಿದ್ದುವು. ಸನಕಾದಿಗಳು ಮಂದಾಕಿನಿಯಲ್ಲಿ ಸ್ನಾನಮಾಡಿ ತಮ್ಮ ಜಟೆಗಳನ್ನು ಬಂಧಿಸಿದ್ದರು. ತಮ್ಮ-ತಮ್ಮ ಮನೋಭೀಷ್ಟಗಳನ್ನು ಪೂರೈಸಿಕೊಳ್ಳಲು ನಾಗ ಕನ್ನಿಕೆಯರು ಸದಾ ಭಗವತ್ಸೇವೆಯಲ್ಲಿ ನಿರತರಾಗಿದ್ದು ಕೊಂಡು, ಭಗವಂತನ ಪಾದಾಭಿವಂದನವನ್ನು ಮಾಡುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಚರಣಕಮಲಗಳನ್ನು ಸನಕಾದಿಗಳೂ ಅಭಿವಂದಿಸಿದರು. ಭಗವಂತನ ರಹಸ್ಯ ಲೀಲಾ ಮರ್ಮಜ್ಞರಾದ ಸನಕಾದಿಗಳು ಪ್ರೇಮಗದ್ಗದಿತವಾಣಿಯಿಂದ ಭಗವಂತನನ್ನು ಸ್ತುತಿಸಿದರು.

ಆವಾಗ ಸಹಸ್ರಫಣಾನ್ವಿತನಾದ ರತ್ನ-ಖಚಿತ ವಜ್ರಕಿರೀಟಗಳ ಅಪೂರ್ವ ಶೋಭೆಯಿಂದ ಶೋಭಾಯಮಾನನಾದ ಸಂಕರ್ಷಣನು ನಿವೃತ್ತಿಪರಾಯಣರಾದ ಸನಕಾದಿಗಳಿಗೆ ಶ್ರೀ ಮದ್ಭಾಗವತವನ್ನು ಶ್ರವಣಮಾಡಿಸಿದನು

ಪರಮ ವ್ರತಶೀಲರಾದ ಸಾಂಖ್ಯಾಯನರು ಸನತ್ಕುಮಾರರಿಂದ ಭಾಗವತವನ್ನು ಶ್ರವಣಮಾಡಿದರು. ಪರಮಹಂಸ ಪ್ರಧಾನರಾದ ಸಾಂಖ್ಯಾಯನರು ಭಗವದ್ವಿಭೂತಿಗಳನ್ನು ವರ್ಣಿಸಲು ಬಯಸಿದರು. ಆಗ ಅವರಿಂದ ಪರಾಶರರೂ, ಭರದ್ವಾಜರೂ ಶ್ರವಣ ಮಾಡಿದರು. ನಂತರ ಪರಮ ದಯಾಳುಗಳಾದ ಪರಾಶರರು ಪುಲಸ್ತ್ಯ ಮುನಿಗಳ ಪ್ರೇರಣೆಗನುಗುಣವಾಗಿ ಈ ಆದಿಪುರಾಣವನ್ನು ನನಗೆ (ಮೈತ್ರೇಯರಿಗೆ) ಶ್ರವಣ ಮಾಡಿಸಿದರು.

ವತ್ಸ-ವಿದುರ ಅದೇ ಪುರಾಣವನ್ನು ನಾನು ನಿನಗೆ ಶ್ರವಣ ಮಾಡಿಸುತ್ತೇನೆ, ನೀನು ನನಗೆ ಪ್ರಿಯನಷ್ಟೇ ಅಲ್ಲ ಶ್ರದ್ಧಾಳುವೂ ಆಗಿರುವೆ.

ಸೃಷ್ಟೇಃ ಪೂರ್ವಂ, ಈಸಂಪೂರ್ಣ ವಿಶ್ವವೆಲ್ಲವೂ ಜಲಾವೃತವಾಗಿದ್ದಿತು.

ಶ್ರೀ ಮನ್ನಾರಾಯಣನು ಶೇಷ ಶಯ್ಯಾಸೀನನಾಗಿ, ತನ್ನ ಅಕ್ಷುಣ್ಣವಾದ ಜ್ಞಾನಶಕ್ತಿಯೊಡನೆ ಯೋಗ ನಿದ್ರಾರೂಢನಾಗಿದ್ದಾನೆ. ಕಣ್ಣುಗಳು ಮುಚ್ಚಲ್ಪಟ್ಟಿವೆ. ಸೃಷ್ಟಿಕಾರ್ಯದಿಂದ ವಿರತನಾಗಿ, ಆತ್ಮಾನಂದ ಮಗ್ನನಾಗಿದ್ದಾನೆ, ಸರ್ವಕ್ರಿಯಾರಹಿತನಾಗಿದ್ದಾನೆ. ಅಗ್ನಿಯು ತನ್ನ ಸರ್ವದಾಹಕಾಶಕ್ತಿಗಳನ್ನೂ ಒಳಗಿಟ್ಟುಕೊಂಡು ಕಾಷ್ಠದಲ್ಲಿ ವ್ಯಾಪಿಸಿರುವಂತೆ, ಭಗವಂತನು ಸರ್ವ ಪ್ರಾಣಿಗಳ ಸೂಕ್ಷ್ಮ ಶರೀರ ಗಳನ್ನೂ ತನ್ನಲ್ಲಿಟ್ಟುಕೊಂಡು ಆಧಾರ ಭೂತವಾದ ಜಲದಲ್ಲಿ ಮಲಗಿದ್ದಾನೆ. ಕೇವಲ ಕಾಲ ಶಕ್ತಿಯೊಂದು ಜಾಗೃತಾವಸ್ಥೆಯಲ್ಲಿದೆ. ಸಮಯವು ಬಂದಾಗ ಅದು ಭಗವಂತನನ್ನು ಎಚ್ಚರಗೊಳಿಸುತ್ತದೆ. ಹೀಗೆ ಭಗವಂತನು ಸ್ವ-ಸ್ವರೂಪ ಭೂತಚಿಚ್ಛಕ್ತಿಯೊಡನೆ, ಒಂದು ಸಹಸ್ರ ಚತುರ್ಯುಗ ಪರ್ಯಂತ ಜಲದಲ್ಲಿ ಶಯನಮಾಡಲು, ಕಾಲಶಕ್ತಿಯು, ಜೀವಿಯ ಕರ್ಮಪ್ರವೃತ್ತಿಗಾಗಿ ಭಗವಂತನ ಇಚ್ಛೆಯಂತೆ ಭಗವಂತನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೇರೇಪಿಸಿತು. ಆಗ ಭಗವಂತನು ತನ್ನಲ್ಲಿ ಲೀನವಾಗಿರುವ ಅನೇಕ ಲೋಕಗಳನ್ನು ನೋಡಿದನು. ಆಗ ಭಗವಂತನ ದೃಷ್ಟಿಯು ತನ್ನಲ್ಲಿಯೇ ಇದ್ದ ಲಿಂಗ ಶರೀರಾದಿ ತತ್ವಗಳ ಮೇಲೆ ಬಿದ್ದಿತು.ಆಗ ಕಾಲಾಶ್ರಿತ ರಜೋಗುಣದಿಂದ ಕ್ಷುಭಿತನಾಗಿ, ಸೃಷ್ಟಿರಚನೆ ಗೋಸ್ಕರ ತನ್ನ ನಾಭಿ ಪ್ರದೇಶದಿಂದಹೊರಕ್ಕೆ ಹೊರಟನು. ನಾಭಿ ಪ್ರದೇಶದಿಂದ ಒಂದು ಕಮಲವು ಹುಟ್ಟಿತು. ಕಮಲವೆಂದರೇನು? ಅದು ಜಲದ ಮಲವೇ.

ಕಮಲದ ಕಾಂತಿಯು ಸೂರ್ಯ ಕಾಂತಿಗೆ ಸಮಾನವಾಗಿದ್ದಿತು. ಅದರಿಂದ ಅಗಾಧ ಜಲರಾಶಿಯೂ ಪ್ರಕಾಶಿತವಾಗಿದ್ದಿತು. ಸರ್ವ ಗುಣ ಪ್ರಕಾಶಕವಾದ, ಸರ್ವಲೋಕಮಯವಾದ ಆ ಕಮಲದಲ್ಲಿ ವಿಷ್ಣು ಭಗವಂತನು ಅಂತರ್ಯಾಮಿರೂಪದಿಂದ ಪ್ರವಿಷ್ಟನಾದನು. ಅದರಿಂದ ಸರ್ವವೇದಜ್ಞನಾದ, ವೇದರೂಪೀ ಬ್ರಹ್ಮನ ಆವಿರ್ಭಾವವಾಯಿತು. ಇವನೇ "ಸ್ವಯಂಭೂ" ಶಯನ ಮಾಡುತ್ತಿದ್ದವನೂ ಪರಮಾತ್ಮನೇ, ನಾಭಿಯೂ ಪರಮಾತ್ಮನೇ ಕಮಲವೂ ಪರಮಾತ್ಮನೇ. ಹಾಗೂ ಬ್ರಹ್ಮನೂ ಪರಮಾತ್ಮನೇ.

ಕಮಲದಿಂದ ಪ್ರಾದುರ್ಭವಿಸಿದ ಪರಮಾತ್ಮ ಬ್ರಹ್ಮನು ಲೋಕಗಳೊಂದನ್ನೂ ಕಾಣದೆ ಅರಳಿಸಿದ ಕಣ್ಣುಗಳಿಂದ ನಾಲ್ಕು ಕಡೆಗೂ ನೋಡಿದನು. ಇದರಿಂದ ನಾಲ್ಕು ಮುಖಗಳುಳ್ಳವನಾದನು.

ಬ್ರಹ್ಮನು ಅನ್ವೇಷಿಸತೊಡಗಿದನು-ಈ ಕಮಲವು ಎಲ್ಲಿಂದ ಬಂದಿತು ? ಇದರ ಕೆಳಕ್ಕೆ ಏನಾದರೂ ಇದೆಯೆ ? ಕೆಳಗೆ ಇನ್ನೂ ಕೆಳಗೆ ಹೋಗಿ ನೋಡಿದನು. ಏನೂ ಕಾಣಲಿಲ್ಲ. ಅಖಂಡ ಜಲರಾಶಿಯು ತರಂಗಗಳು ಒಂದರ ಮೇಲೊಂದು ಏಳುತ್ತಿವೆ. ಕಮಲದ ಮೇಲೆ ವಿರಾಜಮಾನನಾದ ಬ್ರಹ್ಮನಿಗೆ ಲೋಕತತ್ವರೂಪವಾದ ಆ ಕಮಲದ ರಹಸ್ಯವು ಏನೂ ತಿಳಿಯಲಿಲ್ಲ. ಯೋಚಿಸತೊಡಗಿದನು ನಾನಾರು ? ಆಧಾರವಿಲ್ಲದೇ ಈ ಕಮಲವು ಉತ್ಪನ್ನವಾದುದು ಹೇಗೆ ? ಕಮಲವಿರಬೇಕಾದರೆ ಒಂದು ಆಧಾರದ ಮೇಲೆಯೇ ಇರಬೇಕಲ್ಲವೇ ? ಆ ಆಧಾರವಾವುದು ? ಪುನಃ ಕಮಲದ ಸೂಕ್ಷ್ಮ ಛಿದ್ರಗಳಲ್ಲಿ ಪ್ರವೇಶಿಸಿ ನಾಳದ ಆಧಾರವನ್ನು ಹುಡುಕುತ್ತ-ಹುಡುಕುತ್ತ ನಾಭಿ ಪ್ರದೇಶವನ್ನು ತಲಪಿದರೂ ಏನೂ ಸಿಕ್ಕಲಿಲ್ಲ ಈ ಅನ್ವೇಷಣೆಯಲ್ಲಿ ಬಹಳ ಕಾಲವು ಕಳೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊನೆಗೆ ವಿಫಲಮನೋರಥನಾಗಿ, ಪುನಃ ಆಧಾರಭೂತವಾದ ಕಮಲದ ಮೇಲೆ ಕುಳಿತುಕೊಂಡು. ಪ್ರಾಣವಾಯುವನ್ನು ಜಯಿಸಿ ಚಿತ್ತವನ್ನು ನಿಸ್ಸಂಕಲ್ಪನ್ನಾಗಿ ಮಾಡಿ, ಸಮಾಧಿಸ್ಥನಾದನು. ನೋಡಿ-ಕೆಳಗೆ-ಮೇಲೆ-ಅಲ್ಲಿ-ಇಲ್ಲಿ ಹುಡುಕುವುದರಿಂದ ಭಗವಂತನು ದೊರಕಲಾರನು. ಕೆಲವರು ಹೇಳುತ್ತಾರೆ ವೈಖರೀವಾಣಿ, ಮಧ್ಯಮಾವಾಣೀ, ಪಶ್ಯಂತೀ ಪರಾವಾಣಿಯ ಮೂಲಕ ಮೂಲಾಧಾರಕ್ಕೆ ಹೋಗಿ ಪರಮಾತ್ಮಾನುಭವವನ್ನು ಪಡೆಯಬೇಕು.

ಮತ್ತೆ ಕೆಲವರ ಅಭಿಪ್ರಾಯದಂತೆ-ಮೂಲಾಧಾರದಿಂದ ಸ್ವಾಧಿಷ್ಠಾನಕ್ಕೆ, ಸ್ವಾಧಿಷ್ಠಾನದಿಂದ ಮಣಿಪೂರಕ್ಕೆ, ಮಣಿಪೂರದಿಂದ ಅನಾಹತಕ್ಕೆ, ಅನಾಹತದಿಂದ ಆಜ್ಞಾಚಕ್ರಕ್ಕೆ, ಅಲ್ಲಿಂದಲೂ ಸಹಸ್ರಾರಕ್ಕೆ ಹೋಗಿ ಪರಮಾತ್ಮಾನುಭವವನ್ನು ಪಡೆಯಬೇಕು.

ಪರಮಾತ್ಮನು ಕೆಳಗಿರುವನೊ ? ಮೇಲಿರುವನೊ ? ಶ್ರೀ ಗುರುಗಳು ತಿಳಿಸಿದ ಪ್ರಕಾರದಿಂದ ಧ್ಯಾನ ಮಾಡುವವರಿಗೆ ಪರಮಾತ್ಮನ ದರ್ಶನವಾಗುವುದು. ಅವನು ಸರ್ವವ್ಯಾಪಿಯು, ಸುಮ್ಮನೆ ಅವನನ್ನು ಕೆಳಕ್ಕೊ-ಮೇಲಕ್ಕೊ ಎಳೆದಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿರುವನು-ಇಲ್ಲಿರುವನು ಎಂದು ಹೇಳುವುದೆಲ್ಲವೂ ಒಂದೊಂದು ಸಾಧನಾ ಪ್ರಕ್ರಿಯೆಯಷ್ಟೆ, ಹೀಗೆ ಬ್ರಹ್ಮನು ದಿವ್ಯ ನೂರು ವರ್ಷಗಳ ಕಾಲ ಧ್ಯಾನಮಾಡಲು ಅವನಿಗೆ ಜ್ಞಾನಪ್ರಾಪ್ತಿಯಾಯಿತು. ಮೊದಲು ಎಷ್ಟು ಹುಡುಕಿದರೂ ತಿಳಿಯದಿದ್ದ ಅಧಿಷ್ಠಾನವನ್ನು ತನ್ನ ಅಂತಃಕರಣದಲ್ಲಿಯೇ ತಿಳಿದುಕೊಂಡನು.

ಅವನು ಆ ಅಖಂಡ ಜಲರಾಶಿಯಲ್ಲಿ ಶೇಷಶಾಯಿಯಾಗಿರುವ ಭಗವಂತನನ್ನು ಕಂಡನು. ಶೇಷನ ಹತ್ತುಸಾವಿರ ಹೆಡೆಗಳು ಛತ್ರಿಯಂತೆ ಹರಡಿವೆ. ತಲೆಗಳ ಮೇಲೆ ವಿರಾಜಿಸುತ್ತಿರುವ ಕಿರೀಟಗಳ, ಮುತ್ತುಮಣಿಗಳ ಪ್ರಕಾಶವು ಸರ್ವತ್ರವ್ಯಾಪಿಸಿದೆ. ಅವನ ನೀಲಮೇಘಶ್ಯಾಮ ದೇಹದ ಕಾಂತಿಯು ಮರಕತ ಮಣಿ ಪರ್ವತದ ಶೋಭೆಯನ್ನೂ ತಿರಸ್ಕರಿಸುವಂತಿದೆ. ಅವನ ಕಟಿ ಪ್ರದೇಶದ ಪೀತಪಟವು, ಪರ್ವತ ಪ್ರಾಂತ್ಯಗಳಲ್ಲಿ ಸಾಯಂಕಾಲ ಸಮಯದಲ್ಲಿ ಹರಡುವ ಮೇಘಕಾಂತಿಯನ್ನೂ ತಿರಸ್ಕರಿಸುವಂತಿದೆ. ಶಿರಸ್ಸಿನಲ್ಲಿ ಶೋಭಾಯಮಾನವಾದ ಸುವರ್ಣಮುಕುಟವು ಸುವರ್ಣಮಯ ಶಿಖರಗಳ ಮಾನಮರ್ದನವನ್ನು ಮಾಡುವಂತಿದೆ. ಕಂಠದಲ್ಲಿ ಧರಿಸಿರುವ ವನಮಾಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯ ಶೋಭೆಯಿಂದ, ಪರ್ವತರತ್ನಗಳ ಜಲಪ್ರಪಾತ ಔಷಧಿ ಪುಷ್ಪಾದಿಗಳ ಶೋಭೆಯೂ ಪರಾಜಿತವಾಗಿದೆ.

ಅವನ ಭುಜದಂಡಗಳು, ವೇಣುದಂಡಗಳನ್ನೂ, ಚರಣಗಳು ವೃಕ್ಷಗಳನ್ನೂ ತಿರಸ್ಕರಿಸಿವೆ. ಅವನ ಕಾಂತಿಯಿಂದ ಸರ್ವವಸ್ತ್ರಭೂಷಣಾದಿಗಳೂ ಸುಶೋಭಿಸುತ್ತಿವೆ. ಆದರೂ ಪೀತಾಂಬರಾದಿ ವೇಷ-ಭೂಷಣಾದಿಗಳಿಂದ ಭೂಷಿತನಾಗಿದ್ದಾನೆ.

ತನ್ನ ತನ್ನ ಅಭಿಲಾಷಾಪೂರ್ತಿಗಾಗಿ, ಭಿನ್ನ-ಭಿನ್ನ ಮಾರ್ಗದಿಂದ ಪೂಜಿಸುವ, ಸರ್ವಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸುವ, ತನ್ನ ಚರಣ ಕಮಲಗಳ ದಿವ್ಯದರ್ಶನವನ್ನು ಭಕ್ತರಿಗೆ ಮಾಡಿಸುತ್ತಿದ್ದಾನೆ. ಚರಣಾಂಗುಲಿಗಳ ನಖಕಾಂತಿಯು ಚಂದ್ರಿಕೆಗಳಿನಂತೆ, ಎಲ್ಲೆಡೆಯಲ್ಲಿಯೂ ಸ್ಪಷ್ಟವಾಗಿ ಪ್ರಸರಿಸಿದೆ.

ಸುಂದರ ನಾಸಿಕಾ-ಅನುಗ್ರಹವರ್ಷಿಗಳಾದ ಭ್ರುಕುಟಿಗಳು ಅಮೋಘ ಕರ್ಣಕುಂಡಲಗಳ ಶೋಭೆ ಬಿಂಬ ಫಲ ಸದೃಶಗಳಾದ ರಕ್ತಾಧರಗಳ ಕಾಂತಿ ಲೋಕಾರ್ತಿಹರವಾದ ಮುಗುಳು ನಗೆಯಿಂದ ಕೂಡಿದ ಮುಖಾರವಿಂದದ ಮೂಲಕ ಉಪಾಸಕರ ಸಮ್ಮಾನ ಅಭಿನಂದನೆಗಳನ್ನು ಮಾಡುತ್ತಿದ್ದಾನೆ.

ವತ್ಸ-ವಿದುರ, ಅವನ ನಿತಂಬ ಪ್ರದೇಶದಲ್ಲಿ ಕದಂಬ ಕುಸುಮದ ಕೇಸರದಂತಿರುವ ಪೀತವಸ್ತ್ರವೂ, ಸುವರ್ಣಮಯಿ ಮೇಖಲೆಯೂ ಪರಿಶೋಭಿಸುತ್ತಿದೆ. ವಕ್ಷ: ಸ್ಥಳದಲ್ಲಿ ಅಮೂಲ್ಯವಾದ ಹಾರಗಳೂ, ಸುವರ್ಣ ರೇಖಾಯುಕ್ತವಾದ ಶ್ರೀ ವತ್ಸ ಲಾಂಛನವೂ, ಶೋಭಿಸುತ್ತಿದೆ. ಅವನು ಅವ್ಯಕ್ತ ಮೂಲ ಚಂದನವೃಕ್ಷದೋಪಾಥೆಯಲ್ಲಿದ್ದಾನೆ. ಅವನ ವಿಸ್ತೃತ ಭುಜದಂಡಗಳು, ಕೇಯೂರ ಕಟಕಾದ್ಯಾಭರಣಾದಿಗಳಿಂದ ಅಲಂಕೃತವಾಗಿವೆ. ಆಭುಜಗಳು ವೃಕ್ಷ ಶಾಖೆಗಳಂತಿವೆ ಚಂದನ ವೃಕ್ಷಕ್ಕೆ ಹಾವುಗಳು ಸುತ್ತಿಕೊಂಡಿರುವಂತೆ, ಅವನ ಕಂಠ ಪ್ರದೇಶವು. ಶೇಷನ ಸಹಾಸ್ರಾರು ಫಣಗಳಿಂದ ಆವೃತವಾಗಿದೆ. ಆದಿ ಶೇಷನ ಬಂಧುವಾದ ನಾರಾಯಣನು ಜಲದಲ್ಲಿ ಮುಳುಗಿರುವ ಪರ್ವತ ರಾಜನಂತೆ ಶೋಭಿಸುತ್ತಿದ್ದಾನೆ. ಪರ್ವತದ ಮೇಲೆ ಅನೇಕ ಜೀವಿಗಳಿರುತ್ತವೆ. ನಾರಾಯಣನಾದರೋ ಚರಾಚರಕ್ಕೆ ಆಶ್ರಯ ಭೂತನಾಗಿದ್ದಾನೆ. ಪರ್ವತದ ಸುವರ್ಣಮಯ ಶಿಖರಗಳಂತೆ ನಾಗರಾಜನ ಫಣಗಳಲ್ಲಿ ಕಿರೀಟಗಳು ವಿರಾಜಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುತ್ತಿವೆ. ಪರ್ವತಗರ್ಭದಲ್ಲಿರುವ ರತ್ನದಂತೆ ವಕ್ಷಃಸ್ಥಳದಲ್ಲಿ ಕೌಸ್ತುಭಮಣಿಯು ಪ್ರಕಾಶಿಸುತ್ತಿದೆ. ಸರ್ವೇಶ್ವರನ ಕುತ್ತಿಗೆಯಲ್ಲಿ ವನಮಾಲೆಯು ಶೋಭಿಸುತ್ತಿದ್ದರೆ ವೇದರೂಪಿ ಭ್ರಮರಗಳು ಇವನ ಕೀರ್ತಿಯನ್ನು ಗಾನಮಾಡುತ್ತಿವೆಯೋ ಎಂಬಂತೆ ತೋರುತ್ತಿದೆ.

ಸೂರ್ಯ-ಚಂದ್ರಾದಿಗಳೂ ಇವನ ಸಮೀಪದಲ್ಲಿ ಕಾಂತಿ ಹೀನರಾಗುತ್ತಾರೆ. ವಿಶ್ವ ಸಂಚಾರಿ ಸುದರ್ಶನ ಚಕ್ರವೂ ಸಹ ಪ್ರಭುವಿನ ಸುತ್ತ-ಸುತ್ತು ಹಾಕುತ್ತಿದೆ. ವಿಶ್ವ ಸೃಷ್ಟಿಯನ್ನು ಮಾಡಲಿಚ್ಛಿಸುವ ಬ್ರಹ್ಮನು ಭಗವಂತನ ನಾಭಿ ಪ್ರದೇಶದಿಂದ ಪ್ರಕಟನಾದನಷ್ಟೆ: ಅವನಿಗೆ ಕಮಲ-ಜಲ-ವಾಯು ಆಕಾಶ-ತನ್ನ ಶರೀರ ಇಷ್ಟು ಗೋಚರವಾದುವೇ ಹೊರತು ಮತ್ತೇನೂ ಗೋಚರಿಸಲಿಲ್ಲ. ರಜೋಗುಣಿಯಾದ ಬ್ರಹ್ಮನು ಪ್ರಜಾಸೃಷ್ಟಿಯನ್ನು ಮಾಡಲು ಬಯಸುತ್ತಿದ್ದನು.

ಅವನು ಅಚಿಂತ್ಯಗತಿ ಶ್ರೀಹರಿಯಲ್ಲಿ ದತ್ತಚಿತ್ತನಾಗಿ ಪರಮ ಪೂಜನೀಯ ಪ್ರಭುವನ್ನು ಸ್ತೋತ್ರ ಮಾಡತೊಡಗಿದನು.

ಓಂ –ತತ್ಸದಿತ್ಯೇವಂ ತೃತೀಯಸ್ಕಂಧೇ ಅಷ್ಟಮೋಧ್ಯಾಯಃ

ಅಧ್ಯಾಯ-9 ಬ್ರಹ್ಮನಿಂದ ಭಗವಂತನ ಸ್ತುತಿ.

ಬ್ರಹ್ಮನು ಭಗವಂತನನ್ನು ಸ್ತೋತ್ರ ಮಾಡುತ್ತಾನೆ ನೋಡಿ ವಸ್ತುವು (ವಿಷಯುವು) ಮನಸ್ಸಿಗೆ ಬಂದೊಡನೆಯೆ ಶಬ್ದವೂ ಬರುತ್ತದೆ. ಒಂದೊಂದು ಸಾರಿ ವಸ್ತುವಿರುತ್ತದೆ. ಶಬ್ದವಿರುವುದಿಲ್ಲ. ಶಾಬ್ದಿಕಗತಿಯು ಸಗುಣ ಬ್ರಹ್ಮ ಸಾಕ್ಷಾತ್ಕಾರ ಪರ್ಯಂತವಷ್ಟೆ. ಸ್ತೋತ್ರಗಳು–ಶಬ್ದಗಳೂ ಬ್ರಹ್ಮವಾಚಕಗಳು. ಬ್ರಹ್ಮನು ಭಗವಂತನನ್ನು ತಿಳಿದನು ಗುರುತಿಸಿದನು. ಸ್ತೋತ್ರ ಮಾಡತೊಡಗಿದನು.

ಪ್ರಭೋ-ದೀರ್ಘಕಾಲ ಉಪಾಸನೆ ಮಾಡಿದ ಮೇಲೆ ನಿನ್ನ ದರ್ಶನವಾಗಿದೆ. ನೀನು ಅದ್ವಯನು ಆದರೂ ಮಾಯೆಯಿಂದ ಅನೇಕ ರೂಪಗಳಲ್ಲಿ ತೋರುವೆ. ನಿನ್ನ ಬಹು ರೂಪಿತವು ಉಪಾಸಕರನ್ನು ಅನುಗ್ರಹಿಸುವುದಕ್ಕಾಗಿ ಇದೆ. ನೀನು ಸದಾ ಚಿಚ್ಛಕ್ತಿಯ ಪ್ರಕಾಶಕನು. ನಿನ್ನಿಂದ ಅಜ್ಞಾನವು ದೂರವಾಗಿರುತ್ತದೆ. ನಿನ್ನ ನಾಭಿಕಮಲದಿಂದ ನನ್ನ ಆವತಾರವಾಗಿರು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದು. ಮುಂದೆ ಆಗಬೇಕಾಗಿರುವ ಎಲ್ಲಾ ನಿನ್ನ ಅವತಾರಗಳಿಗೂ ಇದು ಮೂಲಕಾರಣವು. ಸತ್ಪುರುಷರ ಮೇಲಿರುವ ನಿನ್ನ ಕೃಪೆಯು ಅಗಾಧವಾದುದು, ನಿನ್ನ ಅಖಂಡ ಅದ್ವಯ ತೇಜೋಮಯ ಸ್ವರೂಪವು ಇದಕ್ಕಿಂತ ಪೃಥಕ್ಕಾದದಲ್ಲ. ನಾನು ವಿಶ್ವಕರ್ತನಾದರೂ ವಿಶ್ವಾತೀತನಾದ ನಿನ್ನ ರಕ್ಷಣೆಯನ್ನು ಬಯಸುತ್ತೇನೆ.

ನಿನ್ನೀ ರೂಪವು ಸರ್ವ-ಭೂತೇಂದ್ರಿಯಗಳ ಅಧಿಷ್ಠಾನವು ಕೆಲವರು ಭಗವಂತನ ಸಗುಣರೂಪವನ್ನು ತಿರಸ್ಕರಿಸುತ್ತಾರೆ. ಅಂತಹವರಿಗೊದಗುವ ಸ್ಥಿತಿಯನ್ನು ವರ್ಣಿಸಲು ಸಾಧ್ಯವಿಲ್ಲ.

ಹೇ ವಿಶ್ವಕಲ್ಯಾಣಮಯ, ನಿನ್ನ ಉಪಾಸಕರನ್ನು ಅನುಗ್ರಹಿಸುವುದಕ್ಕಾಗಿ, ನಿನ್ನ ದಿವ್ಯರೂಪದ ದರ್ಶನವನ್ನು ಮಾಡಿಸಿರುವೆ. ಪಾಪಿಗಳು ವಿಷಯಾಸಕ್ತ ಜೀವರು ಈ ನಿನ್ನ ಸಗುಣರೂಪವನ್ನು ತಿರಸ್ಕರಿಸುತ್ತಾರೆ. ಅವರು ನರಕಭಾಗಿಗಳಾಗುತ್ತಾರೆ. ಅವರು ದುಸ್ಸಂಗಿಗಳೆಂಬುವುದು ಅರ್ಥವಾಯಿತು. ನಿನಗೆ ಅನಂತ ವಂದನೆಗಳು.

ಪ್ರಭೋ-ಲೋಕದಲ್ಲಿ ವೇದ-ವೇದಾಂತಗಳ ಮಂದಮಾರುತವೊಂದು ಬೀಸುತ್ತಿದೆ. ಅದರಿಂದ ನಿನ್ನ ಚರಣಕಮಲಗಳ ಸುಗಂಧವು ಎಲ್ಲೆಡೆಯೂ ಹಬ್ಬುತ್ತದೆ. ಶ್ರುತಿವಾತ ನೀತವಾದ ಈ ಸುಗಂಧವನ್ನು ಯಾರು ತಮ್ಮ **ಕರ್ಣವಿವರೈಃ** ಜಿಘ್ರುತಿ ಕಿವಿಗಳಿಂದ ಆಘ್ರಾಣಿಸುವರೋ (ಅಂದರೆ ಕೇಳುವರೋ ಅವರ ಹೃದಯಗಳು ಭಗವಂತನ ಆವಾಸಸ್ಥಾನಗಳಾಗುತ್ತವೆ, ಭಕ್ತರ ಹೃದಯದಿಂದ ಅವನು ಯಾವಾಗಲೂ ಕಣ್ಮರೆಯಾಗುವುದಿಲ್ಲ. ಭಕ್ತರು ಕೂಡಲೆ ಭಗವಂತನ ದಿವ್ಯಪಾದ ಪದ್ಮಗಳನ್ನು ಹಿಡಿದುಕೊಂಡು ಬಿಡುತ್ತಾರೆ. ಭಗವಂತನು ಭಕ್ತಿರೂಪಿ ಹಗ್ಗದಿಂದ ಕಟ್ಟಲ್ಪಡುತ್ತಾನೆ.

ಮನುಷ್ಯನು, ಎಲ್ಲಿಯವರೆಗೆ ಲೋಕಗಳಿಗೆ ಅಭಯ ಪ್ರದಾನ ಮಾಡುವ ಭಗವಂತನ ದಿವ್ಯಚರಣಗಳನ್ನು ಆಶ್ರಯಿಸುವುದಿಲ್ಲವೋ ಅಲ್ಲಿಯವರೆಗೆ, ಧನ-ಗೃಹ-ದಾರಾ-ಬಂಧು ಜನಭಯ - ಲಾಲಸಾ-ದೀನತಾ- ಲೋಭಾದಿಗಳು ಪೀಡಿಸುತ್ತಿರುತ್ತವೆ. ನಾನು ನನ್ನದು ಎಂಬ ದುರಾಗ್ರಹದಲ್ಲಿ ಸಿಕ್ಕಿ ನರಳುತ್ತಿರುತ್ತಾನೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಶ್ರವಣ-ಕೀರ್ತನಾದಿಗಳು ಸಕಲ ಅಮಂಗಳಗಳನ್ನೂ ನಾಶಮಾ ಡುತ್ತವೆ. ದುರ್ಬುದ್ಧಿಯುವನು ಇದನ್ನು ತಿಳಿಯದೆ ಶ್ರವಣಾದಿಗಳಿಂದ ದೂರವಿರುತ್ತಾನೆ. ವಿಷಯ ಸುಖಾಪೇಕ್ಷೆಯಿಂದ ನಿರಂತರವೂ ದುಷ್ಕರ್ಮಾ ಚರಣೆಯಲ್ಲಿ ನಿರತನಾಗಿರುತ್ತಾನೆ. ಇಂತಹವನು ಹತಭಾಗ್ಯನೇ ಸರಿ ಹೇ ಅಚ್ಯುತ ಉರುಕ್ರಮ ಸಂಸ ರದ ಸ್ಥಿತಿಯು ಬಹಳ ವಿಚಿತ್ರವಾಗಿದೆ. ಎಲ್ಲರೂ ಕ್ಷುತ್‌ತೃಷ್ಣಾ ಪೀಡಿತರಾಗಿದ್ದಾರೆ. ಕಾಮಾಗ್ನಿದಗ್ಧರಾಗಿದ್ದಾರೆ. ಎಲ್ಲರ ಒಳಗೂ ಕಫ-ವಾತ-ಪಿತ್ತಗಳ ರಾಜ್ಯಭಾರವು ನಡೆಯುತ್ತಿದೆ. ಶೀತೋಷ್ಣಗಳಿಂದ ಪೀಡಿತರಾಗಿದ್ದಾರೆ. ಸರ್ವಾನರ್ಥಗಳಿಗೂ ಮೂಲವಾದ ಕ್ರೋಧದಿಂದ ಆಕ್ರಾಂತರಾಗಿದ್ದಾರೆ. ಇಂತಹವರನ್ನು ನೋಡಿ ನನ್ನ ಮನ ಸ್ಸು ಉದ್ವಿಗ್ನವಾಗುತ್ತದೆ.

ಸ್ವಾಮಿನ್ ಮನುಷ್ಯನು ತನ್ನನ್ನು ಇಂದ್ರಿಯರೂಪೀ ವಿಷಯರೂಪೀ ಮಾಯಾ ಪ್ರಭಾವದಿಂದ ಪರಮಾತ್ಮ ಭಿನ್ನನನ್ನಾಗಿ ತಿಳಿಯುತ್ತಾನೆ. ಇಂತಹ ವನು ಸಂಸಾರ ಚಕ್ರದಿಂದ ಹೇಗೆ ತಾನೇ ನಿವೃತ್ತನಾದಾನು?

ಯದ್ಯಪಿ ಸಂಸಾರವು ಮಿಥ್ಯಾ ಆದರೂ ಕರ್ಮ-ಫಲಭೋಗ ಕ್ಷೇತ್ರ ವಾದುದರಿಂದ ಭೇದದರ್ಶಿಯು ನಾನಾ ವಿಧ ದುಃಖಭಾಗಿಯಾಗುತ್ತಾನೆ. ಬೇರೆಯವರ ವಿಚಾರವಿರಲಿ, ಋಷಿಮುನಿಗಳೂ ಸಹ, ಭಗವಂತನ ಕಥಾ ಪ್ರಸಂಗದಿಂದ ವಿಮುಖರಾದರೆ ಸಂಸಾರ ದುಃಖಭಾಗಿಗಳಾಗಬೇಕಾಗುತ್ತದೆ.

ಸಂಸಾರಿಗರು ಹಗಲಿನಲ್ಲಿ ದ್ರವ್ಯಾರ್ಜನಾದಿ ವ್ಯಾಪಾರಗಳಲ್ಲಿ ತೊಡಗಿರು ತ್ತಾರೆ. ರಾತ್ರಿಯಾಯಿತೆಂದರೆ ಪ್ರಜ್ಞಾಹೀನರಾಗಿ ಬಿದ್ದು ಬಿಡುತ್ತಾರೆ. ಆಗಲೂ ಹಲವಾರು ಆಸೆ-ಆಕಾಂಕ್ಷೆಗಳಿಂದ ವಿಕ್ಷಿಪ್ತರಾದ ಅವರು ಶಾಂತ ನಿದ್ರೆ ಯನ್ನು ಮಾಡಲಾರರು. ಮಧ್ಯೆ-ಮಧ್ಯೆ ಎಚ್ಚರಗೊಳ್ಳುತ್ತಾರೆ. ಅವರ ದ್ರವ್ಯಾರ್ಜನೆಯ ಉದ್ಯೋಗಗಳೆಲ್ಲವು ನಾಶವಾಗುತ್ತವೆ. ಒಟ್ಟನಲ್ಲಿ ಭಗವ ದ್ವಿಮುಖರಾದವರಿಗೆ ಸಾಂಸಾರಿಕ ತೊಂದರೆಗಳು ತಪ್ಪಿದ್ದಲ್ಲ. ಸ್ವಾಮಿನ್-ನಿನ್ನ ಮಾರ್ಗವನ್ನು ತಿಳಿಯಬೇಕಾದರೆ ನಿನ್ನ ಗುಣ ಶ್ರವಣದಿಂದ ಸಾಧ್ಯವೇ ಹೊರ ತು ಉಪಾಯಾಂತರವಿಲ್ಲ.

ಮಾನವನ ಹೃದಯವು ಪರಿಶುದ್ಧವಾದಾಗ ಅಲ್ಲಿ ವಿರಾಜಿಸುವೆ. ಭಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಜನರನ್ನು ಉದ್ಧರಿಸುವುದಕ್ಕಾಗಿ, ಅವರ ಚಿಂತನೆ–ಪ್ರಾರ್ಥನೆಗನುಗುಣವಾಗಿ ನೀನು ರೂಪಗಳನ್ನು ಧರಿಸಿರುವೆ. ನಾವು ನಾಟಕಗಳಲ್ಲಿ ನೋಡುತ್ತೇವೆ. ರಾಜಮಹಾರಾಜರು ಹೊರಟರೆ ಹೀಗೆ ದಯಮಾಡಿಸಬೇಕು, ಹೀಗೆ ದಯ ಮಾಡಿಸಬೇಕು ಎಂದು ಹೇಳಲು ಮಾರ್ಗದರ್ಶಕರು ಇರುತ್ತಾರೆ.

ಶ್ರವಣವೇ ಭಗವಂತನಿಗೆ ನಮ್ಮ ಹೃದಯವನ್ನು ತೋರಿಸುತ್ತದೆ. ಅದೇ ಮಾರ್ಗದರ್ಶಕ ನಮ್ಮ ಶ್ರವಣವೇ ಭಗವಂತನಿಗೆ ಮಾರ್ಗವನ್ನು ತೋರಿ ಸುತ್ತಾ ಪ್ರಭೋ ಹೀಗೆ ಬನ್ನಿ. ಹೀಗೆ ಬನ್ನಿ, ನಾವು ಪ್ರವೇಶಿಸಿರುವ ಕರ್ಣ ರಂಧ್ರಗಳಿಂದಲೇ ನೀವೂ ಸಹ ಪ್ರವೇಶಿಸಿ ಎಂದು ಹೇಳುತ್ತದೆ

ಭಗವಂತನು ಯಾವಾಗಲೂ ವಿಪುಲ ಭೋಗದಿಂದ ಸಂತುಷ್ಟನಾಗುವು ದಿಲ್ಲ. ಕಾಮನಾಪರಿಪೂರ್ತಿಗಾಗಿ ಭಗವಂತನಿಗೆ ಸಲ್ಲಿಸುವ ಉಪಚಾರಗಳಿಂದ ಅವನು ಪ್ರಸನ್ನನಾಗುವುದಿಲ್ಲ.

ಭಗವಂತನು ಪ್ರಸನ್ನನಾಗಬೇಕಾದರೆ ಒಂದೇ ಒಂದು ಉಪಾಯ **"ಯತ್ಸರ್ವ ಭೂತದಯಯಾಸದಲಭ್ಯಯೈಕಃ"** ಪ್ರಾಣಿ ಸಾಮಾನ್ಯದಲ್ಲಿ ದಯೆಯಿಡಬೇಕು, ಮತ್ತೊಬ್ಬರ ಹೃದಯವೇದನೆಯಿಂದ ನಾವು ವೇದನೆಯ ನ್ನು ಅನುಭವಿಸುವುದಾದರೆ, ನಮ್ಮ ಹೃದಯವು ಪರಮಾತ್ಮನ ವಾಸಕ್ಕೆ ಯೋಗ್ಯವಾದುದೆಂದು ತಿಳಿಯಬೇಕು. ದುಷ್ಟನು ಸರ್ವಭೂತ ದಯಾಪರ ನಾಗಲಾರ ಅದರಿಂದ ಹೇಳಿದರು **" ಅಸದಲಭ್ಯಯಾ "**.

ಸರ್ವಭೂತದಯೆಯಿಂದ, ಭಗವಂತನು ಹೇಗೆ ಪ್ರಸನ್ನನಾಗುತ್ತಾ ನೆಂದರೆ-ಭಗವಂತನು,ಬಡವರು, ರೋಗಿಗಳು, ದುಃಖಿಗಳು, ಅಶಿಕ್ಷಿತರು, ಇವರೆಲ್ಲರ ಹೃದಯದಲ್ಲಿಯೂ ನಿವಾಸಿಯಾಗಿದ್ದಾನೆ.

ನಮ್ಮ ಪ್ರೇಮ ದಯೆಗಳಿಂದ ದುಃಖಿಗಳ ದುಃಖವು ದೂರವಾಗುತ್ತಿದೆ ಯೆಂದು ಅವನು ತಿಳಿದರೆ ಪ್ರಸನ್ನನಾಗುತ್ತಾನೆ. ಎಲ್ಲರ ಪರಮಾಪ್ತ ಮಿತ್ರ ನೂ ಏಕೈಕ ಬಂಧುವೂ ಅವನೊಬ್ಬನೆ.

" ನಾರಾಯಣಾಯೇತಿ ಸಮರ್ಪಯಾಮಿ " ಭಗವದರ್ಪಣ ಮಾಡಿದ ಕರ್ಮವು ನಾಶವಾಗುವುದಿಲ್ಲ. ಅದು ಅಕ್ಷಯವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವನ್ ಯಜ್ಞ-ದಾನ-ಕಠಿಣ ತಪಸ್ಸು ವ್ರತಾದಿ ಅನೇಕ ಸತ್ಕರ್ಮಗಳು ಎಲ್ಲದರಿಂದಲೂ ನಿನ್ನ ಪ್ರಸನ್ನತೆಯುನ್ನು ಗಳಿಸುವುವೇ ಮಾನವ ಜೀವನದ ಮುಖ್ಯ ಧ್ಯೇಯವಾಗಿದೆ. ಭಗವಂತನು ಪ್ರಸನ್ನನಾದನೆಂದರೆ ಏನು ತಾನೇ ದುರ್ಲಭವು ?

“ ಕಿಂದುರ್ಲಭಂ ಶ್ರೀನಿಕೇತನೇ ಪ್ರಸನ್ನೇ ” ಪ್ರಭೋ-ನೀನು ಸ್ವ-ಸ್ವರೂಪ ಪ್ರಕಾಶದಿಂದಲೇ ಸರ್ವ ಪ್ರಾಣಿಗಳ ಭೇದ-ಭ್ರಮರೂಪವಾದ ಅಂಧಕಾರವನ್ನು ನಾಶಪಡಿಸುವೆ. ಜ್ಞಾನಾಧಿಷ್ಠಾತೃನಾದ ಪರಮ ಪುರುಷನಾದ ನಿನಗೆ ಅನಂತ ನಮಸ್ಕಾರಗಳು. ಬ್ರಹಾಂಡಗಳ ಸೃಷ್ಟಿ-ಸ್ಥಿತಿ-ಲಯಗಳೆಲ್ಲವೂ ನಿನ್ನ ಮಾಯಾ ವಿಲಾಸ ಮಾತ್ರವಷ್ಟೆ. ಇಂತಹ ಪರಮೇಶ್ವರನನ್ನು **“ ಭೂಯೋ-ಭೂಯೋ ನಮಾಮ್ಯಹಂ ”.**

ಪ್ರಾಣ ತ್ಯಾಗದ ಸಮಯದಲ್ಲಿ ಯಾರು ನಿನ್ನ ಅವತಾರ-ಗುಣ-ಕರ್ಮಗಳ ಸೂಚಕಗಳಾದ ಕೃಷ್ಣ-ರಾಮ-ದೇವಕೀ-ನಂದನ-ಕಂಸನಿಷೂದನ-ಜನಾರ್ದನ-ನಾರಾಯಣ, ಇತ್ಯಾದಿ ನಾಮಗಳನ್ನು ಅಜ್ಞಾನದಿಂದಲಾಗಲಿ ಉಚ್ಚರಿಸಿದರೆ ಜನ್ಮ-ಜನ್ಮಾಂತರಕೃತ ಪಾಪಗಳಿಂದ ಮುಕ್ತರಾಗಿ, ಆವರಣರಹಿತರಾಗಿ ಬ್ರಹ್ಮ ಪದಭಾಗಿಗಳಾಗುತ್ತಾರೆ. ಅಜನ್ಮನಾದ-ನಿರ್ವಿಕಾರಿಯಾದ ನೀನೇ ಸಕಲ ಸಂರಕ್ಷಕನು.

ಭಗವನ್-ಈ ದೃಶ್ಯಮಾನ ವಿಶ್ವರೂಪವೃಕ್ಷವು ನಿನ್ನ ಸ್ವರೂಪವೇ ಆಗಿದೆ. ಸೃಷ್ಟಿ-ಸ್ಥಿತ್ಯಂತಕಾರಿಗಳಾದ ನಾವು ಮೂವರು ಆ ವೃಕ್ಷದ ಪ್ರಧಾನ ಕೊಂಬೆಗಳು. ನಿನ್ನ ಆರಾಧನೆಯು ಲೋಕಕ್ಕೆ ಕಲ್ಯಾಣಕಾರಿಯಾದ ಸ್ವಧರ್ಮವೆಂದು ಅನೇಕ ಬಾರಿ ಹೇಳಿರುವೆ. ಆದರೆ ಪಾಪಾಚರಣೆಯಲ್ಲಿಯೆ ನಿರತರಾಗಿರುವ ಸಾಂಸಾರಿಕರು ಅದನ್ನು ಕೇಳಿಸಿಕೊಳ್ಳುವುದೇ ಇಲ್ಲವು. ತಮ್ಮ-ತಮ್ಮ ಕೆಲಸ ಕಾರ್ಯಗಳಲ್ಲಿಯೋ ಆನಂದವನ್ನು ಕಾಣುತ್ತಾರೆ. ಹಾಗೂ ನಿನ್ನ ಭಜನ ಸ್ತವನಾದಿಗಳಲ್ಲಿ ಪ್ರಮಾದಿಗಳಾಗುತ್ತಾರೆ.

ಇದರ ಫಲವೇನೆಂದರೆ ಕಾಲಪುರುಷನು ಅವರ ಆಶಾಲತೆಗಳೆಲ್ಲವನ್ನೂ ಕತ್ತರಿಸಿ ಬಿಡುತ್ತಾನೆ. ಕಾಲಪುರುಷನೂ ನಿನ್ನರೂಪಿಯೇ, ಯದ್ಯಪಿ ನಾನೂ ಸತ್ಯ ಲೋಕದ ಅಧಿಷ್ಠಾತಾ ಆದರೂ ನಾನೂ ಸಹ ಕಾಲನಿಂದ ಹೆದರುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಅಂತ್ಯವು ಹತ್ತಿರದಲ್ಲಿದೆ ಎಂದು ತಿಳಿಯುತ್ತೇನೆ. ನನ್ನ ಆಯುಷ್ಯವೂ ಎರಡು ಪರಾರ್ಧವಷ್ಟೇ. ಅದರಿಂದ-ನಿನ್ನನ್ನು ಪಡೆಯಲು ಬಹಳ ಕಾಲ ತಪಸ್ಸು ಮಾಡಿದೆನು. ಅಧಿಯಜ್ಞರೂಪಿಯಾದ ನೀನೇ ನನ್ನ ತಪಸ್ಸಿಗೆ ಸಾಕ್ಷಿಯು. ನೀನು ಪೂರ್ಣಕಾಮನು, ನಿನಗೆ ಯಾವುದೇ ವಿಧದ ವಿಷಯ ಸುಖಾಪೇಕ್ಷೆಯೂ ಇಲ್ಲ. ಆದರೂ ನೀನೇ ಮಾಡಿದ ಧರ್ಮ-ಮರ್ಯಾದಾ ರಕ್ಷಣೆಗಾಗಿ, ಪಶು-ಪಕ್ಷಿ-ಮನುಷ್ಯ-ದೇವತಾದಿ ಜೀವಯೋನಿಗಳಲ್ಲಿ ಸ್ವೇಚ್ಛೆಯಿಂದ ಶರೀರಧಾರಿಯಾಗಿ ಅನೇಕ ಲೀಲೆಗಳನ್ನು ನಡೆಸುವೆ.

ಪ್ರಭೋ ನೀನು ಯಾವುದೇ ವಿಧವಾದ ಅವಿದ್ಯಾ-ಅಸ್ಮಿತಾ, ರಾಗ-ದ್ವೇಷ ಅಭಿನಿವೇಶ ಇತ್ಯಾದಿ ಕ್ಲೇಷಗಳಿಗೆ ಅಧೀನನಾದವನಲ್ಲ. ಆದರೂ ನೀನು ಈಗ ಶೇಷ ಶಯ್ಯಾಶಾಯಿಯಾಗಿರುವೆ. ಕಲ್ಪಾಂತರದ ಕರ್ಮ ಪರಂಪರಾನುಗುಣವಾಗಿ, ಕರ್ಮ ಮಾಡಿ ಬಳಲಿರುವ ಜೀವಿಗಳಿಗೆ ವಿಶ್ರಾಂತಿಯು ದೊರಕಬೇಕಾಗಿದೆ.

ಅದಕ್ಕಾಗಿ ಇಡೀ ಸೃಷ್ಟಿಯನ್ನೇ ನಿನ್ನುದರಲ್ಲಿಟ್ಟುಕೊಂಡು ಭಯಂಕರ ತರಂಗಾವಳಿಗಳಿಂದ ವಿಕ್ಷುಬ್ಧವಾದ ಈ ಅಗಾಧ ಜಲರಾಶಿಯಲ್ಲಿ ಶೇಷ ಶಯ್ಯಾಶಾಯಿಯಾಗಿರುವೆ.

ನಿನ್ನ ನಾಭಿಕಮಲದಿಂದ ನನ್ನ ಜನ್ಮವಾಗಿದೆ. ಸಂಪೂರ್ಣ ವಿಶ್ವವೂ ನಿನ್ನ ಉದರದಲ್ಲಡಗಿದೆ. ನಿನ್ನ ಕೃಪಾವಿಶೇಷದಿಂದ ಸೃಷ್ಟಿ ರಚನೆಯಲ್ಲಿ ಪ್ರವೃತ್ತನಾಗಿದ್ದೇನೆ.

ಯೋಗನಿದ್ರಾವಿಮುಕ್ತನಾದ ನಿನ್ನ ಕಮಲ ನಯನಗಳು ಪ್ರಕಾಶಿಸುತ್ತಿವೆ. ನೀನು ಸಂಪೂರ್ಣಜಗತ್ತಿನ ಏಕಮಾತ್ರ ಸುಹೃತ್ ಹಾಗೂ ಸರ್ವಾತ್ಮನು ಶರಣಾಗತರಕ್ಷಕನು.

ನಿನ್ನ ಜ್ಞಾನೈಶ್ವರ್ಯಗಳಿಂದ ವಿಶ್ವವನ್ನು ಪ್ರಕಾಶಿಸುವಂತೆ ನನ್ನ ಬುದ್ಧಿಯನ್ನೂ ಪ್ರಕಾಶಿಸು. ಪೂರ್ವಕಲ್ಪದ ಸೃಷ್ಟಿಯಂತೆ ಸೃಷ್ಟಿಸಲು ಸಮರ್ಥನಾಗುವೆನು

ನೀನು ಭಕ್ತವಾಂಛಾಕಲ್ಪತರುವು. ನೀನು ನಿನ್ನ ಮಹಾಶಕ್ತಿ ಸ್ವರೂಪಿಣಿಯಾದ ಲಕ್ಷ್ಮಿಯೊಡನೆ ಅನೇಕ ಗುಣಾವತರಗಳನ್ನೆತ್ತಿ ಅದ್ಭುತ ಕರ್ಮಗಳನ್ನು ನಡೆಸುವೆ. ಅಂತೆಯೇ ಈ ಸೃಷ್ಟಿ ರಚನಾ ಪ್ರಯತ್ನವು ನಿನ್ನ ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಪ ಪ್ರಯತ್ನವು. ನಿನ್ನ ಅನುಗ್ರಹದಿಂದ ನಾನು ಅದರಲ್ಲಿ ಸಫಲನಾಗುವಂತೆಯೂ, ಅಭಿಮಾನದ ರೂಪ ಕಶ್ಮಲದಿಂದ ದೂರವಿರುವಂತೆಯೂ ಅನುಗ್ರಹಿಸು. ಅನಂತ ಶಕ್ತಿ ಸಂಪನ್ನನಾದ ನಿನ್ನ ನಾಭಿಕಮಲದಿಂದ ಹುಟ್ಟಿರುವ ನನಗೆ ಯಾವಾಗಲೂ ವೇದವಾಣಿಯು ಮರೆಯದಿರುವಂತೆ ಅನುಗ್ರಹಿಸು. ಪುರಾಣ ಪುರುಷನಾದ-ಅಪಾರ ಕರುಣಾಮಯಿಯಾದ ನಿನ್ನ ಮೃದು-ಮಧುರ-ಮಂದ ಹಾಸದಿಂದ, ನಿನ್ನ ನೇತ್ರಕಮಲಗಳನ್ನು ತೆರೆದು ಶೇಷ ಶಯ್ಯಾ ತ್ಯಾಗಿಯಾಗಿ, ವಿಶ್ವೋದ್ಭವಕ್ಕಾಗಿ ಸುಕೋಮಲ ವಾಣಿಯಿಂದ ನನ್ನ ವಿಷಾದವನ್ನು ಪರಿಹರಿಸು.

ಈ ರೀತಿಯಾಗಿ ಬ್ರಹ್ಮನು ತನ್ನ ತಪೋವಿದ್ಯಾ ಸಮಾಧಿಯ ಮೂಲಕ ತನ್ನ ಜನ್ಮದಾತನಾದ ಭಗವಂತನನ್ನು ಯಥಾಶಕ್ತಿ ಸ್ತುತಿಸಿ, ಬಳಲಿದವನಾಗಿ ಮೌನಿಯಾದನು.

ಎಲ್ಲಿ ಮನಸ್ಸು-ವಾಣಿಯೂ ಪ್ರವೇಶಿಸುವುದಿಲ್ಲವೋ ಅಲ್ಲಿ ಭಗವಂತನೇ ಮಾತನಾಡಬೇಕು. ನಾವಾಡಿದ ಮಾತಿನ ಪ್ರಭಾವದಿಂದ ಅವನು ಮಾತನಾಡುವುದಿಲ್ಲ. ನಮ್ಮ ಮೌನದ ಪ್ರಭಾವದಿಂದ ಮಾತನಾಡುತ್ತಾನೆ. ಇದೇ ಮಾಯೆಯು.

ಶ್ರೀ ಯಾಮುನಾಚಾರ್ಯರು ಭಗವಂತನೊಡನೆ ಹೇಳುತ್ತಾರೆ — ಪ್ರಭೋ ಬ್ರಹ್ಮನು ನಾಲ್ಕು ಮುಖಗಳಿಂದ ನಿನ್ನನ್ನು ಸ್ತುತಿಸುತ್ತಾನೆ. ನಾನಾದರೋ ಒಂದು ಮುಖದಿಂದ ಸ್ತೋತ್ರ ಮಾಡುತ್ತೇನೆ.

ನೀನು ಯಾರಿಗೆ ಮೊದಲು ಪ್ರಸನ್ನನಾಗುವೆ ? ನನಗೇ ಮೊದಲು ನಿನ್ನ ಅನುಗ್ರಹ ಪ್ರಾಪ್ತಿಯು, ಏಕೆಂದರೆ ಬ್ರಹ್ಮನ ಆಯುಷ್ಯವು ಬಹಳ ದೀರ್ಘವಾದುದು. ಅವನ ಭಕ್ತಿ-ಜ್ಞಾನ-ವೈರಾಗ್ಯಗಳೂ ಶ್ರೇಷ್ಠವಾದುವು. ಅವನು ಎಲ್ಲಿಯವರೆಗೆ ಭಗವಂತನನ್ನು ಸ್ಮರಿಸುತ್ತಿರುವನೊ ತಿಳಿಯದು. ನಾನಾದರೋ ಸ್ವಲ್ಪದರಲ್ಲಿಯೇ ಬಳಲಿ ಕೆಳಕ್ಕೆ ಬಿದ್ದು ಹೋಗುವೆನು. ಆವಾಗ ನೀನೇ ಓಡಿ ಬಂದು ನನ್ನನ್ನು ಸಂತೈಸುವೆ. ಆಲಿಂಗಿಸಿಕೊಳ್ಳುವೆ. ನನಗೆ ಮೊದಲು ಭಗವತ್ಪ್ರಾಪ್ತಿ ನಂತರ ಬ್ರಹ್ಮನ ವಿಚಾರವು.

ಆಳವಂದಾರ ಸ್ತೋತ್ರದಲ್ಲಿಯೂ ಹೇಳುತ್ತಾರೆ " **ಶಕ್ತ್ಯತಿಶಯೇನ ನತೇ ಅನುಕಂಪ್ಯಃ** " ತುಂಬ ಶಕ್ತಿವಂತನೆಂದು ಭಗವಂತನು ಅನುಗ್ರಹಿಸುವುದಿಲ್ಲ. **'ಅಪಿತು ಸ್ತುತಿಕೃತೇನ ಪರಿಶ್ರಮೇಣ'** ಸ್ತುತಿ ಕೃತ ಪರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರಮದಿಂದಲೇ ಭಗವಂತನು ಪ್ರಸನ್ನನಾಗುತ್ತಾನೆ.

ಅಂತೆಯೇ ಭಗವಂತನು ಪ್ರಸನ್ನನಾದನು. ಅವನಿಗೆ ಬ್ರಹ್ಮನ ಸ್ಥಿತಿಯು ಅರಿವಾಗಿದೆ. ಬ್ರಹ್ಮನು ಪ್ರಳಯಕಾಲೀನ ಜಲರಾಶಿಯಿಂದ ಬಹಳ ಗಾಬರಿಗೊಂಡಿದ್ದಾನೆ. ಲೋಕರಚನಾ ವಿಷಯದಲ್ಲಿ ನಿಶ್ಚಿತ-ಬುಧ್ಧಿಯಿಲ್ಲದಿರುವುದರಿಂದ ಬಹಳ ಖಿನ್ನನಾಗಿದ್ದಾನೆ. ಅವನ ಖೇದವನ್ನು ಪರಿಹರಿಸುತ್ತಾ, ಗಂಭೀರ ವಾಣಿಯಿಂದ ಭಗವಂತನು ನುಡಿದನು.

'ಮಾ ವೇದಗರ್ಭಗಾಸ್ತಂದ್ರೀಂ, ಸರ್ಗಉದ್ಯಮಮಾವಹ।
ತನ್ಮಯಾಽಽಪಾದಿತಂಹ್ಯ ಗ್ರೇಯನ್ಮಾಂಪ್ರಾರ್ಥಯತೇ ಭವಾನ್'

ಹೇ ವೇದಗರ್ಭ-ತಂದ್ರೀಂಮಾಗಾ ; ನಿದ್ರಾಲಸ್ಯಗಳನ್ನು ಹೊಂದಬೇಡ. ಸೃಷ್ಟಿ ರಚನಾ ಕಾರ್ಯದಲ್ಲಿ ತತ್ಪರನಾಗು. ನೀನು ಅಪೇಕ್ಷಿಸುವುದನ್ನೆಲ್ಲವನ್ನೂ ನಾನು ನಿನಗೆ ಕೊಟ್ಟು ಬಿಟ್ಟಿರುವೆನು. ನೀನು ಮತ್ತೊಮ್ಮೆ ತಪಸ್ಸನ್ನಾಚರಿಸು. ಭಾಗವತ ಜ್ಞಾನದ ಅನುಷ್ಠಾನವನ್ನು ಮಾಡು. ಅದರಿಂದ ಸರ್ವಲೋಕ ವಿಷಯಕ ಜ್ಞಾನವೂ ನಿನ್ನಲ್ಲಿಯೆ ನಿನಗೆ ಉಂಟಾಗುವುದು. ಅನಂತರ ಭಕ್ತಿಯೋಗದಿಂದ ಸಮಾಹಿತಚಿತ್ತನಾಗಿ, ಸರ್ವಲೋಕಗಳಲ್ಲಿಯೂ ನಿನ್ನಲ್ಲಿಯೂ ವ್ಯಾಪಿಸಿರುವ ನನ್ನನ್ನು ಕಾಣುವೆ. ಹಾಗೂ ನನ್ನಲ್ಲಿಯೆ ಸರ್ವಲೋಕಗಳನ್ನೂ ನಿನ್ನನ್ನೂ ಕಾಣುವೆ.

ಯಾವಾಗ ಜೀವಿಯು ಕಾಷ್ಠದಲ್ಲಿ ವ್ಯಾಪಿಸಿರುವ ಅಗ್ನಿಯಂತೆ, ನನ್ನನ್ನು ಸರ್ವಭೂತಾಧಿಷ್ಠಿತನನ್ನಾಗಿ ಕಾಣುವನೊ, ಆಗ ಅವನು ಅಜ್ಞಾನರೂಪೀ ಮಲದಿಂದ ಮುಕ್ತನಾಗುವನು.

ಜೀವಿಯು ತನ್ನನ್ನು ಮನೋ-ದೇಹೇದ್ರಿಂಯಗುಣ ರಹಿತನನ್ನಾಗಿ ತಿಳಿದು ಸ್ವರೂಪತಃ ಮದಭಿನ್ನನೆಂದು ತಿಳಿದರೆ ಮುಕ್ತನಾಗುವನು.

ನೀನು ಕರ್ಮಾನುಸಾರವಾಗಿ ಅನೇಕ ವಿಧ ಜೀವ ಸೃಷ್ಟಿಯನ್ನು ಮಾಡಿದರೂ, ನಿನ್ನಚಿತ್ತವು ಮೋಹಾ ಕ್ರಾಂತವಾಗುವುದಿಲ್ಲ. ಇದು ನನ್ನ ಅತಿಶಯ ಕೃಪಾಫಲವು. ನೀನು ಪ್ರಥಮ ಮಂತ್ರದ್ರಷ್ಟಾ. ಪ್ರಜೋತ್ಪತ್ತಿಯ ಕಾಲದಲ್ಲಿಯೂ, ನಿನ್ನ ಮನಸ್ಸು ನನ್ನಲ್ಲಿಯೇ ಇರುತ್ತದೆ. ಆದರಿಂದ ರಜೋಗುಣದ ಪ್ರಭಾವಕ್ಕೆ ನೀನು ಒಳಗಾಗುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೀನು ನನ್ನನ್ನು ಸರ್ವಭೂತೇಂದ್ರಿಯ-ಗುಣಾಂತಃಕರಣ ರಹಿತನೆಂದು ತಿಳಿದಿರುವುದರಿಂದ ಸಾಧಾರಣರಿಗೆ ಅಲಭ್ಯನಾದ ನನ್ನನ್ನು ಸಂದರ್ಶಿಸಿದೆ.

ನನ್ನ ಆಶ್ರಯವು ಏನಾದರೂ ಇದೆಯೋ ಇಲ್ಲವೋ ಎಂದು ಕಮಲನಾಳದ ಮೂಲಕ ಜಲದಲ್ಲಿ ಮೂಲವನ್ನು ಹುಡುಕುತ್ತಿದೆ. ನಾನು ನಿನಗೆ ನನ್ನ ಸ್ವರೂಪವನ್ನು ನಿನ್ನ ಅಂತಃಕರಣದಲ್ಲಿಯೇ ತೋರಿಸಿರುವೆನು. ವೈಭವೋಪೇತವಾಗಿ ನನ್ನನ್ನು ಸ್ತುತಿಸಿರುವೆ. ತಪಸ್ಸಿನಲ್ಲಿನನ್ನ ಕೃಪಾ ವಿಶೇಷದಿಂದಲೇ ಪ್ರೀತಿಯಿರುವುದು.

ಲೋಕವನ್ನು ಸೃಷ್ಟಿಸುವ ಇಚ್ಛೆಯಿಂದ, ಸದ್ಗುಣನಾಗಿದ್ದರೂ ನಿರ್ಗುಣ ರೂಪದಿಂದ ನೀನು ಸ್ತೋತ್ರ ಮಾಡಿರುವೆ. ಇದರಿಂದ ನನಗೆ ಬಹಳ ಸಂತೋಷವಾಗಿದೆ. ನಿನಗೆ ಕಲ್ಯಾಣವಾಗಲಿ.

ಸರ್ವರ ಸರ್ವವಿಧದ ಮನೋರಥಗಳನ್ನೂ ಪೂರ್ಣಗೊಳಿಸುವುದರಲ್ಲಿ ನಾನು ಸಮರ್ಥನು. ನಿತ್ಯವೂ ಈ ಸ್ತೋತ್ರದಿಂದ ನನ್ನನ್ನು ಸಂತೋಷಪಡಿಸುವವನು ಸರ್ವೇಷ್ಟಾರ್ಥಗಳನ್ನೂ ಪಡೆಯುತ್ತಾನೆ.

ತತ್ವವಿದರ ಅಭಿಪ್ರಾಯಾನುಸಾರವಾಗಿ ಪೂರ್ತ ತಪಸ್ಸು-ಯಜ್ಞ-ದಾನ-ಯೋಗ-ಸಮಾಧಿ ಈ ಸಾಧನೆಗಳಿಂದ ಪಡೆಯಬೇಕಾದ ಫಲವೆಂದರೆ

ನನ್ನ "ಅನುಗ್ರಹ"

ನಾನು ಸರ್ವಾತ್ಮರ ಆತ್ಮನು. ಸ್ತ್ರೀ ಪುತ್ರಾದಿಗಳಿಗಿಂತಲೂ ಅತ್ಯಂತ ಪ್ರಿಯನು. ದೇಹೇಂದ್ರಿಯಾದಿಗಳ ಅತಿ ಪ್ರಿಯತೆಗೂ ನಾನೇ ಕಾರಣನು. ನನ್ನನ್ನು ಪ್ರೀತಿಸುವುದೇ ಪರಮ ಧರ್ಮವು. ನೀನು ಪೂರ್ವ ಕಲ್ಪಾನುಸಾರವಾಗಿ, ನನ್ನಲ್ಲಿಯೇ ಲೀನವಾಗಿರುವ, ನನ್ನಿಂದಲೇ ಉತ್ಪನ್ನವಾಗುವ ಸೃಷ್ಟಿಯನ್ನು ಸರ್ವವೇದಮಯ ಸ್ವರೂಪದಿಂದ ರಚಿಸು.

ಶ್ರೀ ಶುಕದೇವರು ರಾಜಾ ಪರೀಕ್ಷಿತನೊಡನೆ ಹೇಳುತ್ತಾರೆ ರಾಜನ್-ಈ ರೀತಿ ಭಾಗವಂತನು ಬ್ರಹ್ಮದೇವನಿಗೆ ನಿರೂಪಿಸಿ ತನ್ನ ಅಪ್ರಕಟರೂಪದಿಂದ ಅಂತರ್ಹಿತನಾದನು.

ಓಂ ತತ್ಸದಿತಿ ಶ್ರೀಮದ್ಭಾಗವತೇ ದ್ವಿತೀಯ ಸ್ಕಂಧೇ ನವಮೋಧ್ಯಾಯ :

Sri Vidyabharathi Book Centre, Sringeri

CC-O. In Public Domain. Digitized by eGangotri

ದಶವಿಧಸೃಷ್ಟಿಯ ವರ್ಣನೆ

ವಿದುರನಿಗೆ ಮಹಾತ್ಮಾ ಮೈತ್ರೇಯರು, ಆಖ್ಯಾನವನ್ನು ಮುಂದುವರೆಸುತ್ತಾ ತಿಳಿಸುತ್ತಾರೆ. ವಿದುರ-ಅಜನ್ಮಾ ಭಗವಂತನು ನಿರೂಪಿಸಿದ ಪ್ರಕಾರ ಬ್ರಹ್ಮನು ಒಂದು ನೂರು ದಿವ್ಯ ವರ್ಷಗಳ ಕಾಲ ತಪಸ್ಸು ಮಾಡಿದನು. ಪ್ರಳಯ ಕಾಲಿನ ಪ್ರಬಲವಾದ ಜುಂ ಜುಂವಾತದ ಹೊಡೆತದಿಂದ ಬ್ರಹ್ಮನು ಕುಳಿತಿದ್ದ ಕಮಲವು ಅಳ್ಳಾಡುತ್ತಲಿದೆ. ನೀರೂ ಅಳ್ಳಾಡುತ್ತಲಿದೆ. ಪ್ರಬಲವಾದ ತಪಸ್ಸಿನಿಂದ-ಹೃದಯ ಸ್ಥಿತ ಆತ್ಮಜ್ಞಾನದಿಂದ ಬ್ರಹ್ಮನ ವಿಜ್ಞಾನಬಲವು ಹೆಚ್ಚಾಯಿತು. ಅವನು ಜಲದೊಡನೆ ವಾಯುವನ್ನೂ ಕುಡಿದುಬಿಟ್ಟನು. ನಂತರ ತಾನು ಕುಳಿತಿದ್ದ ಆ ಆಕಾಶ ವ್ಯಾಪಿ ಕಮಲವನ್ನು ನೋಡಿ ವಿಚಾರಿಸಿದನು:- ಪೂರ್ವಕಲ್ಪದಲ್ಲಿ ಲೀನವಾಗಿರುವ ಲೋಕಗಳನ್ನು ಇದರಿಂದಲೇ ರಚಿಸುತ್ತೇನೆ. ಹೀಗೆ ವಿಚಾರಿಸಿ ಆ ಕಮಲಕೋಷದಲ್ಲಿ ಪ್ರವೇಶಿಸಿದನು. ಅದನ್ನು **ಭೂ:-ಭುವ:-ಸುವ:** ಎಂದು ಮೂರು ಭಾಗಗಳನ್ನಾಗಿ ಮಾಡಿದನು. ಅದು ಎಷ್ಟು ವಿಶಾಲವಾಗಿತ್ತೆಂದರೆ ಅದರಲ್ಲಿಯೇ ಹದಿನಾಲ್ಕು ಲೋಕಗಳನ್ನೂ ವಿಭಾಗಿಸಬಹುದಾಗಿದ್ದಿತು.

ಶಾಸ್ತ್ರತ: ಈ ಮೂರು ಲೋಕಗಳು ದೇವರ ವಾಸ ಸ್ಥಾನಗಳು ನಿಷ್ಕಾಮ ಕರ್ಮಿಗಳಿಗೆ ಮಹರ್ಲೋಕ-ಜನೋಲೋಕ-ತಪೋಲೋಕ-ಸತ್ಯಲೋಕಗಳ ಪ್ರಾಪ್ತಿಯಾಗುತ್ತದೆ.

ವಿದುರನ ಪ್ರಶ್ನೆಗನುಸಾರವಾಗಿ, ಮೈತ್ರೇಯರು ಶ್ರೀ ಹರಿಯ ಕಾಲ ಶಕ್ತಿಯ ವರ್ಣನೆಯನ್ನು ಮಾಡುತ್ತಾರೆ. = ವಿಷಯಗಳ ರೂಪಾಂತರವೇ ಕಾಲದ ಆಕಾರವು. ಕಾಲವಾದರೋ ಸ್ವಯಂನಿರ್ವಿಶೇಷ-ಅನಾದಿ-ಅನಂತ, ಅದನ್ನೇ ನಿಮಿತ್ತೀಕರಿಸಿಕೊಂಡು ಭಗವಂತನ. ಲೀಲೆಯಿಂದಲೇ ತನ್ನನ್ನು ಸೃಷ್ಟಿಯ ರೂಪದಲ್ಲಿ ಪ್ರಕಟಿಸಿ ಕೊಳ್ಳುತ್ತಾನೆ. ಮೊದಲು-ಭಗವಂತನ ಮಾಯೆಯಿಂದ ವಿಶ್ವವೆಲ್ಲವೂ ಲೀನವಾಗಿ ಬ್ರಹ್ಮರೂಪದಲ್ಲಿದ್ದಿತು. ಅದನೇ ಅವ್ಯಕ್ತ ಮೂರ್ತಿ. ಕಾಲನ ಮೂಲಕ ಭಗವಂತನು ಪೃಥಕರಿಸಿದ್ದಾನೆ. ಈ ಜಗತ್ತು ಈಗ ಇರುವಂತೆಯೆ ಹಿಂದೆಯೂ ಇದ್ದಿತು. ಮುಂದೆಯೂ ಇರುತ್ತದೆ.

ಇದರ ಸೃಷ್ಟಿಯು ಒಂಬತ್ತು ವಿಧದಲ್ಲಾಗುತ್ತದೆ. ಹಾಗೂ ಪ್ರಾಕೃತ-ವೈಕೃತ ಭೇಧದಿಂದ ಹತ್ತನೆ ಸೃಷ್ಟಿಯೂ ಆಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲವು ನಿರ್ವಿಶೇಷವಾದುದು ಅದರಲ್ಲಿ ದಿನ-ರಾತ್ರಿ-ಘಂಟೆ - ನಿಮಿಷ ಉತ್ತರಾಯಣ-ದಕ್ಷಿಣ ಯನ-ಸಂವತ್ಸರ ಯುಗಮನ್ವಂತರ ಕಲ್ಪಾದಿಗಳೊಂದೂ ಇಲ್ಲ ಇವು ಕಾಲದ ಅವಯುವಗಳಲ್ಲ. ವಸ್ತುಗಳಲ್ಲಾಗುವ ಕ್ರಿಯೆಯು ಆಧಾರದ ಮೇಲೆ ಕಾಲದಲ್ಲಿ ಕಲ್ಪತವಾಗಿವೆ.

ವಸ್ತುತ ; ಕಾಲವು ಪರಮಾತ್ಮನಲ್ಲಿ ಅಧ್ಯಸ್ತ ಅಧ್ಯಸ್ತದಲ್ಲಿ ಲೌಕಿಕ ದೃಷ್ಟಿಯಿಂದ ಆದರ ಅವಯುವಗಳು ಕಲ್ಪಿತವಾಗಿವೆ. ಪರಮಾತ್ಮನಿಂದ ಪೃಥಕ್ಕಾದ ಕಾಲವಿಲ್ಲ. ಪ್ರಪಂಚದ ದೃಷ್ಟಿಯಿಂದ ನೋಡಿದರೆ ಪರಮಾತ್ಮನಲ್ಲಿ ಕಾಲವು ಗೋಚರಿಸುತ್ತದೆ. ಗುಣಗಳ ಪರಿಣಾಮವೇ ಇದಕ್ಕೆ ಕಾರಣವು. ವಸ್ತುವು ಬದಲಾವಣೆಯನ್ನು ಹೊಂದಿದಾಗ, ವಸ್ತುವಿನಲ್ಲಿ, ಒಂದನೇ, ಎರಡನೇ, ಮೂರನೇ ಅವಸ್ಥೆಗಳು ತೋರುತ್ತವೆ. ಘಟ ಶಬ್ದವನ್ನು ಉಚ್ಚರಿಸಿದಾಗ ಮೊದಲನೆಯ ಕ್ಷಣದಲ್ಲಿ ಘ ವನ್ನು ಉಚ್ಚರಿಸಿ ಎರಡನೆಯ ಕ್ಷಣದಲ್ಲಿ ಟ ವನ್ನು ಉಚ್ಚರಿಸುತ್ತೇವೆ. ಈ ಎರಡು ಕ್ಷಣಗಳು ಎಲ್ಲಿಂದ ಬಂದುವು ? ಘ ಟ ಎರಡಕ್ಷರಗಳು ಸೇರುವುದರಿಂದ, ವಾಸ್ತವಾಂಶವೇನೆಂದರೆ –ಕಾಲವು ಅನಂತ ಪರಬ್ರಹ್ಮ ಪರಮಾತ್ಮನೇ. ಆದನ್ನೇ **ಗುಣವ್ಯತಿಕರಾಕಾರೇ ನಿರ್ವಿಶೇಷಃ** ಎಂದು ಹೇಳುತ್ತಾರೆ.

ಈಗ ಮೈತ್ರೇಯರು ಹತ್ತು ವಿಧ ಸೃಷಿವಯನ್ನು ವರ್ಣಿಸುತ್ತಾರೆ ಭಗವತ್ಪ್ರೇರಣೆಗನುಗುಣವಾಗಿ ಸತ್ವಾದಿ ಗುಣಗಳಲ್ಲಿ ಕ್ಷೋಭೆಯುಂಟಾಗುವುದರಿಂದ ಮುಹತ್ತತ್ವದ ಸೃಷ್ಟಿಯಾಗುತ್ತದೆ.

① ಹರೇಸ್ಸಕಾಶಾತ್, ಗುಣಾನಾಂ ವೈಷಮ್ಯ – ಮೇತನ್ಮಹತೋ ಲಕ್ಷಣಂ ಅಹಂಕಾರದ ಸೃಷ್ಟಿಯು ಎರಡನೆಯದು **ದ್ರವ್ಯ ಜ್ಞಾನ-ಕ್ರಿಯಾತ್ಮಕತ್ವಂ ಅಹಂಕಾರಸ್ಯ ಲಕ್ಷಣಂ.** ಅಹಂಕಾರದಿಂದಲೇ ಪೃಥಿವ್ಯಾದಿ ಪಂಚಭೂತಗಳ ದಶೇಂದ್ರಿಯಗಳ ಉತ್ಪತ್ತಿಯಾಗುತ್ತದೆ ನಾವು ಪ್ರಗಾಢ ಸುಷುಪ್ತಿಯಿಂದ ಎದ್ದಾಗ ಕಾಲದೇಶ-ವಸ್ತುಗಳ ಯಾವ ವಿಧದ ಜ್ಞಾನವೂ ಇರುವುದಿಲ್ಲ. ದಿನರಾತ್ರಿಗಳ ಅರಿವೂ ಇರುವುದಿಲ್ಲ ಆದರೆ ಪ್ರಜ್ಞೆಯಿರುತ್ತದೆ. ಸಾತ್ವಿಕಾದ್ಯಹಂಕಾರಗಳೊದೂ ಇರುವುದಿಲ್ಲಾ. ಹೀಗೆ ಮೈತ್ರೇಯರು ಸೃಷ್ಟಿಯನ್ನು ವರ್ಣಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇವುಗಳಿಗೆ ಆಘ್ರಾಣ ಮಾತ್ರದಿಂದ ವಸ್ತು ಜ್ಞಾನವಾಗುತ್ತದೆ. ವಿಚಾರ ಶಕ್ತಿಯಾಗಲಿ- ದೂರ ದರ್ಶಿತ್ವವಾಗಲಿ ಇವುಗಳಲ್ಲಿರುವುದಿಲ್ಲ. ಈ ತಿರ್ಯಕ್ ಪ್ರಾಣಿಗಳಲ್ಲಿ – ಗೋವು- ಆಡು- ಕುರಿ- ಎಮ್ಮೆ- ಹಂದಿ- ಕೃಷ್ಣ ಮೃಗ- ಒಂಟೆ ಇವುಗಳು ಚತುಷ್ಪಾದಿಗಳು- ದ್ವಿಶಫಗಳು- ಕತ್ತೆ- ಕುದುರೆ- ಶರಭ- ಚಮರೀ ಇವುಗಳು. ನಾಯಿ- ನರಿ- ತೋಳ- ಹುಲಿ- ಮೊಲ- ಸಿಂಹ ಕಪಿ- ಆಮೆ- ಮೊಸಳೆ ಇವುಗಳು ಪಂಚನಖಗಳು. ಬಗಲಾ- ಹದ್ದು-ಗಿಡುಗ ಭಲ್ಲೂಕ- ನವಿಲು- ಹಂಸ- ಚಕ್ರವಾಕ- ಕಾಗೆ ಇವುಗಳು ಹಾರುವ ಪಕ್ಷಿಗಳು.

ಮಾನವ ಸೃಷ್ಟಿಯು ಒಂಭತ್ತನೆಯದು. ಇದು ಒಂದೇ ವಿಧ. ಇದ ರಲ್ಲಿ ಆಹಾರವು ಮೇಲಿನಿಂದ ಕೆಳಮುಖವಾಗಿ ಹೋಗುತ್ತದೆ. ಮಾನವರು ರಜೋಗುಣ ಪ್ರಧಾನದವರು- ಕರ್ಮ ಪರಾಯಣರು. ದು:ಖೀ ವಿಷಯ ಗಳಲ್ಲಿಯೆ ಸುಖವನ್ನು ಕಾಣುವವರು- ಮನುಷ್ಯ ಶಬ್ದಕ್ಕೆ ವ್ಯುತ್ಪತ್ತಿಯನ್ನು ಹೀಗೆ ಹೇಳುತ್ತಾರೆ— **ಮತ್ವಾ ಕರ್ಮಾಣಿ ಸೀವ್ಯತೀತಿ ಮನುಷ್ಯ:** ಬಟ್ಟೆಯನ್ನು ಒಂದಕ್ಕೊಂದು ಸೇರಿಸಿ ಹೊಲಿಯುವಂತೆ ಮನುಷ್ಯನು ಪರಸ್ಪರ ತನ್ನನ್ನು ತಾನು ಸಂಬಂಧಿಸಿ ಕೊಳ್ಳುತ್ತಾನೆ. ರಜೋಗುಣದ ಸ್ವಭಾವವೇ ಸಂಬಂಧವನ್ನು ಬೆಳೆಸುವುದು. ನೋಡಿ – ಘ್ರಾಣಕ್ಕೆ ವಿಧ ವಿಧ ಅತ್ತರು ಗಳನ್ನು ತಯಾರಿಸಿಕೊಳ್ಳಲು, ಮನುಷ್ಯರಿಗಲ್ಲದೆ ಮತ್ತಾರಿಗೆ ಸಾಧ್ಯವು? ರಸನಾತೃಪ್ತಿಗಾಗಿ ವಿವಿಧ ಭೋಜನಗಳನ್ನು ನಿರ್ಮಿಸಿಕೊಳ್ಳುವುದು ಇವನಿಗೆ ಮಾತ್ರ ಸಾಧ್ಯ. ವಿವಿಧ ಚಿತ್ರ ನಿರ್ಮಾಣವೂ, ರಾಗ ವೈಭವ ಪ್ರದರ್ಶನವೂ ಮತ್ತೊಬ್ಬರಿಂದ ಸಾಧ್ಯವಿದೆಯೆ? ಈ ವಿಚಾರಗಳಲ್ಲಿ ಮನುಷ್ಯನು ಈಶ್ವರ ನನ್ನೂ ಮೀರಿಸಿ ಬಿಟ್ಟಿದ್ದಾನೆ. ತುಂಬಾ ಶ್ರಮ ಪಡುವುದು, ಬಹಳ ಮಾತ ನಾಡುವುದು, ದು:ಖದಲ್ಲಿಯೇ ಸುಖವನ್ನು ಕಾಣುವುದು, ಮನುಷ್ಯನನ್ನು ಬಿಟ್ಟರೆ ಮತ್ಯಾರಿಂದ ಸಾಧ್ಯ? ಈ ಮೂರು ವಿಧದ ಸೃಷ್ಟಿಯೂ ಮುಂದೆ ಹೇಳುವ ದೇವ ಸರ್ಗವೂ "ವೈಕೃತ ಸೃಷ್ಟಿ". ಅಲ್ಲದೆ - ಋಷಿಗಳ ಹಾಗೂ ಕುಮಾರರ ಸರ್ಗವು ಪ್ರಾಕೃತ- ವೈಕೃತ ಎಂದು ಎರಡು ವಿಧವಾಗಿಯೂ ಇದೆ. ದೇವ ಸೃಷ್ಟಿಯು ಎಂಟು ಬಗೆಯಾಗಿದೆ. ದೇವತೆಗಳು- ಪಿತೃ ದೇವತೆಗಳು–

Sri Vidyabharathi Book Centre, Sringeri

CC-O. In Public Domain. Digitized by eGangotri

ಅಸುರರು, ಗಂಧರ್ವರು, ಅಪ್ಸರೆಯರು, ಯಕ್ಷ ರಾಕ್ಷಸರು, ಸಿದ್ಧ ಚಾರಣ. ವಿದ್ಯಾಧರರು ಭೂತ ಪ್ರೇತ ಪಿಶಾಚರು, ಇತ್ಯಾದಿ. ಈ ರೀತಿಯಾಗಿ ಭಗವಂತನು ಬ್ರಹ್ಮರೂಪವನ್ನು ತಾಳಿ, ಸೃಷ್ಟಿ ಕಾರ್ಯವನ್ನು ನಡೆಸುತ್ತಾನೆ.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ದಶಮೋಽಧ್ಯಾಯಃ

ಶ್ರೀಭಾಗವತ ದರ್ಶನ ಸ್ಕಂಧ ೩ ಅ.೧೧
"ಮನ್ವಂತರ ಕಾಲವಿಭಾಗ".

ಮನ್ವಂತರಗಳ ವರ್ಣನೆಯನ್ನು ಪ್ರಾರಂಭಿಸುವ ಮೊದಲು, ಮೈತ್ರೇಯರು, ಪರಮಾಣು ವ್ಯಾಖ್ಯೆಯನ್ನು ಮಾಡುತ್ತಿದ್ದಾರೆ ... ಪರಮಾಣು ವೆಂದರೇನು? **"ಚರಮಃ ಸದ್ವಿಶೇಷಾಣಾಂ,"** ಪೃಥಿವ್ಯಾದಿ ಕಾರ್ಯವರ್ಗದ ಸೂಕ್ಷ್ಮತಮಾಂಶವು ಪರಮಾಣುವೆಂದು ಹೇಳಿಸಿಕೊಳ್ಳಲ್ಪಡುತ್ತದೆ. ಅದನ್ನು ಪುನಃ ವಿಭಾಗಿಸಲಾಗುವುದಿಲ್ಲ. ಇದು ಕಾರ್ಯ ರೂಪವನ್ನೂ ಹೊಂದುವುದಿಲ್ಲ. ಇವುಗಳು ಸಂಯುಕ್ತಗಳಾಗಿರುವುದಿಲ್ಲ. ಇವುಗಳ ಸಮುದಾಯವನ್ನು ಮನುಷ್ಯರು ಕಲ್ಪಿಸಿ ಕೊಳ್ಳುವುದು ಭ್ರಮೆಯೇ ಸರಿ. **'ನೃಣಾಂ ಐಕ್ಯ ಭ್ರಮೋಽಯುತಃ'** ಎಂದು ಹೇಳುತ್ತಾರೆ. ಈ ಪರಮಾಣುವಿನಿಂದ ಹಿಡಿದು, ಪರಮ ಮಹಾನ್ ವರೆಗೆ ಸೃಷ್ಟಿಯು ನಡೆಯುತ್ತದೆ. ಆ ಸಮಯದಲ್ಲಿ ಆಭೂತದಲ್ಲಿ ಪ್ರಳಯಾದ್ಯವಸ್ಥಾ ಭೇದಗಳ ಸ್ಫೂರ್ತಿಯಿರುವುದಿಲ್ಲ. ನವೀನ ಪ್ರಾಚೀನಗಳ ಕಾಲ ಭೇದವೂ ಇರುವುದಿಲ್ಲ. ಹೀಗೆಯೇ ಅವ್ಯಕ್ತ ಸ್ವರೂಪನಾದ ಕಾಲ ರೂಪೀ ಭಗವಂತನ ಸೂಕ್ಷ್ಮತೆಯನ್ನೂ, ಸ್ಥೂಲತೆಯನ್ನೂ ಅನುಮಾನದಿಂದ ತಿಳಿಯ ಬಹುದು. ಭಗವಂತನೇ ಪರಮಾಣ್ವಾದ್ಯವಸ್ಥೆಗಳಲ್ಲಿಯೂ ವ್ಯಾಪಿಸಿ, ವ್ಯಕ್ತ ಪದಾರ್ಥಗಳನ್ನು ಭೋಗಿಸುತ್ತಾನೆ. ಪ್ರಪಂಚದ ಪರಮಾಣುವಿನಂತಹ ಸೂಕ್ಷ್ಮಾವಸ್ಥೆಯಲ್ಲಿ ವ್ಯಾಪಿಸಿರುವ ಕಾಲವು ಅತ್ಯಂತ ಸೂಕ್ಷ್ಮವು. ಹಾಗೂ ಸೃಷ್ಟಿಯಿಂದ ಹಿಡಿದು ಪ್ರಳಯದ ವರೆಗೆ ಎಲ್ಲಾ ಅವಸ್ಥೆಗಳಲ್ಲಿಯೂ ಭೋಗಿಸುವವನು "ಪರಮ[illegible]ಾನ್" ಎರಡು ಪರಮಾಣುಗಳಿಗೆ. ಒಂದು "ಅಣು" ಮೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಣುಗಳಿಗೆ ಒಂದು "ತ್ರ್ಯಸರೇಣು" ಗವಾಕ್ಷದ ಕಿಂಡಿಗಳಲ್ಲಿ ಸೂರ್ಯ ಪ್ರಕಾಶದಲ್ಲಿ "ತ್ರ್ಯಸರೇಣು"ವನ್ನು ನೋಡಬಹುದು. ಮೂರು ತ್ರ್ಯಸರೇಣು ಗಳನ್ನು ಸೂರ್ಯನು ದಾಟುವ ಅವಧಿಗೆ "ತ್ರುಟಿ" ಎನ್ನುತ್ತಾರೆ. ನೂರು ತ್ರುಟಿಗಳಿಗೆ ಒಂದು ವೇಧ. ಮೂರುವೇಧಗಳಿಗೆ ಒಂದು "ಲವ"ಮೂರು ಲವಕ್ಕೆ ಒಂದು "ನಿಮೇಶ" ಮೂರುನಿಮೇಶಗಳಿಗೆ ಒಂದು "ಕ್ಷಣ" ಐದು ಕ್ಷಣಗಳಿಗೆಒಂದು"ಕಾಷ್ಠಾ"ಹದಿನೈದು ಕಾಷ್ಠಗಳಿಗೆ ಒಂದು"ಲಘು"ಹದಿನೈದು ಲಘುಗಳಿಗೆ ಒಂದು "ನಾಡಿಕಾ"ಎರಡು ನಾಡಿಕೆಗಳಿಗೆ ಒಂದು "ಮುಹೂರ್ತ" ಆರು ನಾಡಿಕೆಗಳಿಗೆ ಒಂದು ಪ್ರಹರ, (ಯಾಮ, ದಿನ - ಅಥವಾ ರಾತ್ರಿಯ ನಾಲ್ಕನೇ ಭಾಗ.) ಹದಿನೈದು ದಿವಸಗಳಿಗೆ ಒಂದು ಪಕ್ಷ.ಒಂದು ತಿಂಗಳಿಗೆ ಎರಡು ಪಕ್ಷಗಳು (ಶುಕ್ಲ - ಕೃಷ್ಣ) ಎರಡು ಪಕ್ಷಗಳಿಗೆ ಒಂದು "ಮಾಸ". ಎರಡು ಮಾಸಗಳಿಗೆ ಒಂದು "ಋತು" ಮೂರು ಋತುಗಳಿಗೆ ಒಂದು ಅಯನ ಎರಡು ಅಯನಗಳಿಗೆ ಒಂದು "ವರ್ಷ"- ದೇವತೆಗಳಿಗೆ ಇದೊಂದು ದಿವಸವು ಇಂತಹ ನೂರು ವರ್ಷಗಳು ಪುರುಷನ ಆಯುಷ್ಯವು. ಚಂದ್ರಾದಿಗ್ರಹಗಳು, ಅಶ್ವಿನ್ಯಾದಿ ನಕ್ಷತ್ರಗಳು, ಸರ್ವಗ್ರಹಾಧಿಪತಿಯಾದ ಕಾಲ ಸ್ವರೂಪೀ ಭಗ ವಾನ್ ಸೂರ್ಯನೂ ಪರಮಾಣುವಿನಿಂದ ಹಿಡಿದು ಸಂವತ್ಸರ ಪರ್ಯಂತರ ಕಾಲದಲ್ಲಿ, ದ್ವಾದಶ ರಾಶಿರೂಪದ ಸಂಪೂರ್ಣ ಭುವನ ಕೋಶವನ್ನು ಸುತ್ತು ತ್ತಾರೆ. ಸೂರ್ಯ-ಬೃಹಸ್ಪತಿ, ಸವನ. ಚಂದ್ರ- ನಕ್ಷತ್ರ ಸಂಬಂಧೀ ತಿಂಗಳು ಗಳ ಭೇದದಿಂದ ಈ ವರ್ಷವನ್ನೆ ಸಂವತ್ಸರ- ಪರಿವತ್ಸರ,ಇಡಾವತ್ಸರ - ಅನು ವತ್ಸರ- ವತ್ಸರ. ಎಂದು ಕರೆಯುತ್ತಾರೆ.

ಯುಗಗಳು ನಾಲ್ಕು - "ಸತ್ಯ - ತ್ರೇತಾ- ದ್ವಾಪರ- ಕಲಿ". ಇವು ಗಳು ದೇವತೆಗಳ ಹನ್ನೆರಡು ಸಹಸ್ರ ವರ್ಶಗಳಿಗೆ ಸಮವೆಂದು ಹೇಳುತ್ತಾರೆ. ಸತ್ಯ ಯುಗದಲ್ಲಿನಾಲ್ಕು ಸಹಸ್ರದಿವ್ಯ ವರ್ಷಗಳು.ತ್ರೇತಾಯುಗದಲ್ಲಿಮೂರು, ದ್ವಾಪರಯುಗದಲ್ಲಿ ಎರಡು, ಕಲಿಯುಗದಲ್ಲಿ ಒಂದು,ಸಂಧ್ಯಾ-ಸಂಧ್ಯಾಂಶಗಳೂ ಸೇರಿ ಸತ್ಯಯುಗದಲ್ಲಿ 4800 ವರ್ಷಗಳು.ತ್ರೇತೆಯಲ್ಲಿ 3600ವರ್ಷಗಳು. ದ್ವಾಪರದಲ್ಲಿ 2400 ವರ್ಷಗಳು. ಕಲಿಯುಗದಲ್ಲಿ 1200 ದಿವ್ಯ ವರ್ಷಗಳು. ಮಾನವರ ಒಂದು ವರ್ಷವು ದೇವತೆಗಳ ಒಂದು ದಿವಸವು. ದೇವತೆಗಳಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ಷವು ಮನುಷ್ಯರ 360 ವರ್ಷಗಳಿಗೆ ಸಮವು. ಈ ಲೆಕ್ಕಾಚಾರದಂತೆ ಮಾನವೀಯ ಮಾನ ರೀತ್ಯಾ ಕಲಿಯುಗದಲ್ಲಿ ನಲವತ್ಮೂರು ಲಕ್ಷದ ಮೂವತ್ತೆರಡು ಸಾವಿರ ವರ್ಷಗಳು. ಇದಕ್ಕೆರಡು ದ್ವಾಪರ, ಮೂರರಷ್ಟು ತ್ರೇತಾ, ನಾಲ್ಕರಷ್ಟು ಕೃತ.

ಚತುರ್ಯುಗ ಸಹಸ್ರಾಣಿ ಬ್ರಹ್ಮಣೋದಿನಮುಚ್ಯತೇ

ಚತುರ್ಯುಗ ಸಹಸ್ರಗಳು ಕಳೆದರೆ ಬ್ರಹ್ಮನಿಗೆ ಒಂದು ಹಗಲು ಅಷ್ಟೇ ಪರಿಮಾಣದ ಒಂದು ರಾತ್ರಿ. ಇಂತಹ ಒಂದು ನೂರು ವರ್ಷಗಳು ಬ್ರಹ್ಮನ ಆಯುಃ ಪರಿಮಾಣ. ರಾತ್ರಿಯಲ್ಲಿ ಜಗತ್ಕರ್ತಾ ಬ್ರಹ್ಮನು ಶಯನಮಾಡುತ್ತಾನೆ. ರಾತ್ರಿಯ ಅಂತ್ಯವಾದ ಮೇಲೆ ಲೋಕದ ಕಲ್ಪವು ಯಥಾಸ್ಥಿತಿ ಪ್ರಾರಂಭವಾಗುತ್ತದೆ. ಒಂದು ಕಲ್ಪದಲ್ಲಿ ಹದಿನಾಲ್ಕು ಮನುಗಳಾಗುತ್ತಾರೆ. ಪ್ರತಿಮನುವೂ ಎಪ್ಪತ್ತೊಂದು ಚತುರ್ಯುಗಕ್ಕೆ ಸ್ವಲ್ಪ ಹೆಚ್ಚುಕಾಲ ಅಧಿಕಾರವನ್ನು ನಡೆಸುತ್ತಾನೆ. ಪ್ರತಿ ಮನ್ವಂತರದಲ್ಲಿಯೂ ಮನುವಂಶೀ ರಾಜರು, ಸಪ್ತರ್ಷಿಗಳು, ದೇವಗಣಗಳು, ಇಂದ್ರಾದಿಗಳೆಲ್ಲರೂ ಅಧಿಕಾರವನ್ನು ಭೋಗಿಸುತ್ತಾರೆ. ಇದು ಬ್ರಹ್ಮನ ಪ್ರತಿದಿನದ ಸೃಷ್ಟಿ ಕ್ರಮವು. ಇದರಲ್ಲಿ ಸರ್ವಜೀವಿಗಳೂ ತಮ್ಮ ತಮ್ಮ ಕರ್ಮಾನುಸಾರ ಫಲವನ್ನು ಭೋಗಿಸುತ್ತಾರೆ. ಈ ಮನ್ವಂತರಗಳಲ್ಲಿ ಭಗವಂತನು ಸತ್ವಗುಣಾಶ್ರಯಿಯಾಗಿ ಮನು ಇತ್ಯಾದಿಗಳ ರೂಪದಲ್ಲಿ ಅವತರಿಸಿ ವಿಶ್ವವನ್ನು ಸಂರಕ್ಷಿಸುತ್ತಾನೆ. ಬ್ರಹ್ಮನ ಹಗಲು ಪೂರೈಸಿದ ಮೇಲೆ ಅವನು ತಮೋಗುಣವನ್ನಾಶ್ರಯಿಸಿ ನಿಶ್ಚೇಷ್ಟ ಭಾವದಿಂದ ಇರುತ್ತಾನೆ. ಆಗ ವಿಶ್ವವೆಲ್ಲವೂ ಅವನಲ್ಲಿ ಲೀನವಾಗಿರುತ್ತದೆ. ಸೂರ್ಯ ಚಂದ್ರರಿಂದ ರಹಿತವಾದ ಆ ಪ್ರಳಯ ರಾತ್ರಿಯು ಬರುತ್ತದೆ.

"ಭೂಃ ಭುವಃ ಸುವಃ" ಈ ಮೂರು ಲೋಕಗಳೂ ಅವನಲ್ಲಿ ಸುಪ್ತವಾಗುತ್ತವೆ. ಎಲ್ಲಾ ಲೋಕಗಳೂ ಶೇಷನ ಮುಖಾಗ್ನಿಯಿಂದ ಉರಿಯ ತೊಡಗುತ್ತವೆ. ಆ ತಾಪದಿಂದ ವ್ಯಾಕುಲಗೊಂಡ ಭೃಗ್ವಾದಿ ಋಷಿಗಣಗಳು- ಮಹರ್ಲೋಕದಿಂದ ಜನೋ ಲೋಕಕ್ಕೆ ಹೊರಟು ಹೋಗುತ್ತಾರೆ ಆಗ ಪ್ರಚಂಡ ಪವನಾಘಾತದಿಂದ ಸಮುದ್ರಗಳು ಉಕ್ಕೇರಿ ಬಂದು ತ್ರಿಲೋಕವನ್ನೂ ಮುಳಗಿಸುತ್ತವೆ, ಆ ಜಲರಾಶಿಯ ಮಧ್ಯೆ ಭಗವಾನ್ ಶೇಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಯಿಯು ಯೋಗನಿದ್ರಾಧೀನನಾಗುತ್ತಾನೆ. ಆಗ ಜನೋಲೋಕನಿವಾಸಿಗಳಾದ ಋಷಿಗಣಗಳು ಅವನನ್ನು ಸ್ತುತಿಸುತ್ತಾರೆ. ಹೀಗೆ ಕಾಲಗತಿಗನುಸಾರವಾಗಿ ಬ್ರಹ್ಮನ ಒಂದು ನೂರು ವರ್ಷಗಳ ಆಯುಷ್ಯವೂ ಕಳೆಯುತ್ತದೆ. ಬ್ರಹ್ಮನ ಆಯುಷ್ಯದ ಅರ್ಧಭಾಗವನ್ನು ಪರಾರ್ಧವೆಂದು ಕರೆಯುತ್ತಾರೆ. ಈ ಒಂದು ಪರಾರ್ಧವು ಕಳೆದು ಎರಡನೇ ಪರಾರ್ಧವು ಪ್ರಾರಂಭವಾಗಿದೆ. ಪೂರ್ವ ಪರಾರ್ಧದ ಪ್ರಾರಂಭದಲ್ಲಿ "ಬ್ರಾಹ್ಮಕಲ್ಪವು" ನಡೆಯಿತು. ಬ್ರಾಹ್ಮಕಲ್ಪದಲ್ಲಿ ಬ್ರಹ್ಮನ ಪ್ರಾದುರ್ಭಾವವಾಯಿತು. ಪಂಡಿತರು ಇವನನ್ನು "ಶಬ್ದಬ್ರಹ್ಮ" ನೆಂದು ಕರೆಯುತ್ತಾರೆ. ಆ ಪರಾರ್ಧದ ಅಂತ್ಯದಲ್ಲಿ ಪಾದ್ಮಕಲ್ಪವು ಪ್ರಾರಂಭವಾಯಿತು. ಆಗ ಭಗವಂತನ ನಾಭಿಪ್ರದೇಶದಿಂದ "ಸರ್ವಲೋಕಮಯ" ಕಮಲವು ಪ್ರಕಟವಾಯಿತು. ಈಗ ಪ್ರಾರಂಭವಾಗಿರುವುದು ವಾರಾಹಕಲ್ಪ. ದ್ವಿತಿಯ ಪರಾರ್ಧದ ಆರಂಭಕಲ್ಪ, ಈ ಕಲ್ಪದಲ್ಲಿ ಭಗವಂತನು ವಾರಾಹರೂಪವನ್ನು ತಾಳಿದ್ದನು. ಈ ಎರಡು ಪರಾರ್ಧದ ಕಾಲವೂ ಅವ್ಯಕ್ತ ಅನಾದಿ ಅನಂತ, ವಿಶ್ವಾತ್ಮಾ ಶ್ರೀಹರಿಯ ಒಂದು ನಿಮೇಷಕಾಲ. ಪರಮಾಣುವಿನಿಂದ ಹಿಡಿದು ದ್ವಿಪರಾರ್ಧ ಪರ್ಯಂತರ ಹರಡಿರುವ ಕಾಲವೂ ಸರ್ವ ಸಮರ್ಥನಾದ ಶ್ರೀಹರಿಯ ಮೇಲೆ ಯಾವ ಪ್ರಭಾವವನ್ನೂ ಬೀರಲಾರದು. ದೇಹಾಭಿಮಾನಿಗಳ ಮೇಲೆ ಕಾಲನ ಪ್ರಭಾವವಷ್ಟೆ.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ಏಕಾದಶೋಧ್ಯಾಯಃ

ಶ್ರೀ ಭಾಗವತದರ್ಶನ, ಸ್ಕಂಧ. ೩-ಅ-೧೨
ಸೃಷ್ಟಿಯ ವಿಸ್ತಾರ

ಮೈತ್ರೇಯರು ವಿದುರನಿಗೆ ಕಾಲರೂಪೀ ಭಗವಂತನ ಮಹಿಮೆಯನ್ನು ತಿಳಿಸಿದ ಮೇಲೆ ಅವನು ಜಗತ್ತನ್ನು ಸೃಷ್ಟಿಸಿದ ವಿಚಾರವನ್ನು ತಿಳಿಸುತ್ತಾರೆ– ಬ್ರಹ್ಮನು ಮೊದಲು ಪಂಚಪರ್ವಾತ್ಮಿಕಾ ಅವಿದ್ಯೆಯನ್ನು ಸೃಷ್ಟಿಸಿದನು. ತಮಸ್ಸು-(ಅವಿದ್ಯಾ) ಮೋಹ (ಅಸ್ಮಿತಾ) ಮಹಾಮೋಹ (ರಾಗ) ತಾಮಿಸ್ರ (ದ್ವೇಷ) ಅಂಧತಾಮಿಸ್ರ (ಅಭಿನಿವೇಶ) ಈ ಪಾಪಮಯಿ ಸೃಷ್ಟಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ ಬ್ರಹ್ಮನಿಗೆ ಆಶ್ಚರ್ಯವಾಯಿತು-ಅಸಹ್ಯವಾಯಿತು. ಭಗವಂತನನ್ನು ಧ್ಯಾನಿಸಿದನು. ಬೇರೆ ಸೃಷ್ಟಿಕಾರ್ಯವನ್ನು ಕೈಕೊಂಡನು. ನಿವೃತ್ತಿ ಪರಾಯಣರಾದ ಸನಕ - ಸನಂದನ . ಸನಾತನ - ಸತ್ಕುಮಾರರ ಸೃಷ್ಟಿಯಾಯಿತು. ಅವರನ್ನು ಸೃಷ್ಟಿ ಕಾರ್ಯ ಮುಂದುವರಿಸ ಬೇಕೆಂದು ಕೇಳಿದನು. ಅವರು ಅದಕ್ಕೊಪ್ಪದೆ ಭಗವಧ್ಯಾನದಲ್ಲಿ ತತ್ಪರರಾದರು. ಬ್ರಹ್ಮನಿಗೆ ಮಕ್ಕಳ ಈ ತಿರಸ್ಕಾರದಿಂದ ಬಹಳ ಕೋಪವು ಬಂದಿತು. ಅವನ ಭ್ರೂಮಧ್ಯದಿಂದ ನೀಲ ಲೋಹಿತನ ಆವಿರ್ಭಾವವಾಯಿತು. ಅವನು ಭವನು, ರುದ್ರನು, ಅಳುತ್ತಾ ಅವನು ತನ್ನ ಹೆಸರನ್ನೂ, ವಾಸಸ್ಥಾನವನ್ನೂ ಕೇಳಿದನು. ಕಮಲಯೋನಿ ಭಗವಾನ್ ಬ್ರಹ್ಮನು ಬಾಲಕನ ಪ್ರಾರ್ಥನೆಯನ್ನು ಕೇಳಿ ಹೇಳಿದನು- ಅಳಬೇಡ, ನಿನ್ನನ್ನು ಲೋಕವು ರುದ್ರನೆಂದು ಕರೆಯುತ್ತದೆ. ನೀನಿರಲು - ಹೃದಯ -ಇಂದ್ರಿಯ-ಪ್ರಾಣ - ಆಕಾಶ - ವಾಯು - ಅಗ್ನಿ - ಜಲ - ಪೃಥ್ವೀ - ಸೂರ್ಯ -ಚಂದ್ರ-ತಪಸ್ಸು ಇಷ್ಟು ವಾಸಸ್ಥಾನಗಳನ್ನು ಕಲ್ಪಿಸಿದ್ದೇನೆ. ನಿನ್ನ ಹೆಸರುಗಳು ಹೀಗಿವೆ-ಮನ್ಯು ಮನು, ಮಹೀನಸ, ಮಹಾನ್. ಶಿವ-ಋತಧ್ವಜ, ಉಗ್ರರೇತಾ ಭವ-ಕಾಲ-ವಾಮದೇವ-ಧೃತವ್ರತ, ಪತ್ನಿಯರಹೆಸರುಗಳು ಹೀಗಿವೆ–ಧೀ-ವೃತ್ತಿ, ಉಶನಾ, ಉಮಾ. ನಿಯುತ್, ಸರ್ಪಿ, ಇಳಾ, ಅಂಬಿಕಾ, ಇರಾವತೀ ಸುಧಾ, ದೀಕ್ಷಾ. ನೀನು, ಈ ಹೆಸರುಗಳನ್ನೂ ಸ್ತ್ರೀಯರನ್ನೂ ಸ್ವೀಕರಿಸು. ನೀನು ಪ್ರಜಾಪತಿಯಾದುದರಿಂದ ಸಂತಾನೋತ್ಪತ್ತಿಯನ್ನು ಮಾಡು. ಲೋಕ ಪಿತಾಮಹನಾದ ಬ್ರಹ್ಮನ ಆಜ್ಞೆಯಂತೆ ನೀಲಲೋಹಿತನು ಬಲ, ಆಕಾರ ಸ್ವಭಾವದಲ್ಲಿ ತನಗೆ ಸದೃಶರಾದ ಸಂತಾನಗಳನ್ನು ಸೃಷ್ಟಿಸಿದನು. ಈ ಅಸಂಖ್ಯಾತರುದ್ರರ ಸಮೂಹವನ್ನು ನೋಡಿ ಬ್ರಹ್ಮನಿಗೂ ಆಶ್ಚರ್ಯವಾಯಿತು. ಅವನು ರುದ್ರನಿಗೆ ಹೇಳಿದನು- ದೇವೋತ್ತಮ ನಿನ್ನ ಭಯಂಕರ ಸಂತಾನಗಳು ನನ್ನನ್ನೂ ಅಸಂಖ್ಯಾತ ಲೋಕಗಳನ್ನೂ ಸುಟ್ಟು ಹಾಕಿಬಿಡುತ್ತವೆ. ಇನ್ನು ಮುಂದೆ ಸೃಷ್ಟಿಕಾರ್ಯವನ್ನು ನಿಲ್ಲಿಸಿಬಿಡು. ಸರ್ವಪ್ರಾಣಿಗಳಿಗೂ ಸುಖದಾಯಕವಾದ ತಪಸ್ಸನ್ನಾಚರಿಸು. ನಂತರ ತಪಃಪ್ರಭಾವದಿಂದ ಮುಂದೆ ಸಂಸಾರವನ್ನು ಸೃಷ್ಟಿಸುವೆಯಂತೆ. ಪುರುಷನು ತಪಸ್ಸಿನಿಂದ ಇಂದ್ರಿಯಾತೀತನೂ, ಸರ್ವಾಂತರ್ಯಾಮಿಯೂ. ಜ್ಯೋತಿಃಸ್ವರೂಪನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ ಶ್ರೀಹರಿಯನ್ನು ತಿಳಿಯುತ್ತಾನೆ. ಬ್ರಹ್ಮನ ಆಜ್ಞಾನುಸಾರವಾಗಿ ರುದ್ರನು ತಪಸ್ಸಿಗೆ ಹೊರಟುಹೋದನು. ಭಗವಚ್ಛಕ್ತಿಸಂಪನ್ನನಾದ ಬ್ರಹ್ಮನು ಸೃಷ್ಟಿಗೆ ಸಂಕಲ್ಪವನ್ನು ಮಾಡಿದನು. ಅವನಿಂದ ಹತ್ತುಪುತ್ರರು ಉತ್ಪನ್ನರಾದರು. ಮರೀಚಿ, ಅತ್ರಿ, ಅಂಗಿರಾ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ, ದಕ್ಷ, ನಾರದ, ದಶೇಂದ್ರಿಯಗಳಂತೆ ದಶ ಆಧ್ಯಾತ್ಮಿಕ ಋಷಿಗಳು. ಬ್ರಹ್ಮನ ಉತ್ಸಂಗದಿಂದ ನಾರದರು, ಅಂಗುಷ್ಠದಿಂದ ದಕ್ಷನು ಪ್ರಾಣದಿಂದ ವಸಿಷ್ಠರು, ತ್ವಕ್ಕಿನಿಂದ ಭೃಗು, ಹಸ್ತದಿಂದ ಕ್ರತು, ನಾಭಿಯಿಂದ ಪುಲಹ, ಕಿವಿಗಳಿಂದ ಪುಲಸ್ತ್ಯ, ಮುಖದಿಂದ ಅಂಗಿರಾ, ನೇತ್ರಗಳಿಂದ ಅತ್ರಿ, ಮನಸ್ಸಿನಿಂದ ಮರೀಚಿಗಳ ಉತ್ಪತ್ತಿಯಾಯಿತು. ಅವನ ಬಲಭಾಗದ ಸ್ತನದಿಂದ ಧರ್ಮನು ಜನಿಸಿದನು. ಅವನ ಪತ್ನಿ "ಮೂರ್ತಿ" ಇವರಲ್ಲಿ ನಾರಾಯಣನು ಅವತರಿಸಿದನು. ಬ್ರಹ್ಮನ ಬೆನ್ನಿನಿಂದ ಅಧರ್ಮನ ಉತ್ಪತ್ತಿಯಾಯಿತು. ಹಾಗೂ ಸಂಸಾರಕ್ಕೆ ಭಯದಾಯಕನಾದ ಮೃತ್ಯುವಿನ ಉತ್ಪತ್ತಿಯಾಯಿತು. ಬ್ರಹ್ಮನ ಹೃದಯದಿಂದ ಕಾಮನೂ, ಭೃಕುಟಿಗಳಿಂದ ಕ್ರೋಧವೂ, ಅಧರೋಷ್ಠದಿಂದ ಲೋಭವೂ, ಮುಖದಿಂದ ಸರಸ್ವತಿಯೂ, ಲಿಂಗದಿಂದ ಸಮುದ್ರವೂ, ಗುದಾ ಪ್ರದೇಶದಿಂದ ಪಾಪಗಳ ನಿವಾಸಸ್ಥಾನನಾದ ರಾಕ್ಷಾಸಾಧಿಪತಿ ನಿರ್‌ಋತಿಯೂ ಹುಟ್ಟಿದರು. ಅವನ ಛಾಯೆಯಿಂದ ಕರ್ದಮ ಪ್ರಜಾಪತಿಯ ಅವತಾರವಾಯಿತು. ಹೀಗೆ ಜಗತ್ತೆಲ್ಲವೂ, ಬ್ರಹ್ಮನ ಶರೀರದಿಂದ ಮನಸ್ಸಿನಿಂದ ಉತ್ಪನ್ನವಾಯಿತು. ಬ್ರಹ್ಮನು ತನ್ನ ಕನ್ಯೆಪರಮ ರೂಪವತಿ ಸರಸ್ವತಿಯನ್ನು ಕಂಡು, ಸ್ವತಃವಾಸನಾರಹಿತನಾದರೂ ಮೋಹಾವೃತನಾದನು. ಋಷಿಮುನಿಗಳೆಲ್ಲರೂ ಬೋಧಿಸಿದರು. ತನ್ನ ನೀಚಕೃತ್ಯಕ್ಕೆ ತಾನೇ ಲಜ್ಜಿತನಾದನು. ಬ್ರಹ್ಮನು ತನ್ನ ಆಶರೀರವನ್ನು ಬಿಟ್ಟು ಬಿಟ್ಟನು. ಅದೇ ಅಂಧಕಾರವಾಯಿತು. ದಿಕ್ಕುಗಳು ಅದನ್ನು ತೆಗೆದುಕೊಂಡರು. ಬ್ರಹ್ಮನು ಪುನಃಯೋಚಿಸ ತೊಡಗಿದನು. ಹಿಂದಿನ ಕಲ್ಪದಂತೆ ಸುವ್ಯವಸ್ಥಿತ ಸೃಷ್ಟಿಯನ್ನು ರಚಿಸುವುದು ಹೇಗೆ? ಆಗ ಅವನ ನಾಲ್ಕು ಮುಖ ಗಳಿಂದ ನಾಲ್ಕು ವೇದಗಳು, ಹುಟ್ಟಿದುವು. ಹಾಗೂ ಉಪವೇದಗಳು ನ್ಯಾಯಶಾಸ್ತ್ರ, ಹೋತಾ, ಉದ್ಗಾತಾ, ಅಧ್ವರ್ಯು, ಬ್ರಹ್ಮಾ, ಋತ್ವಿಜರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಮಗಳು, ಯಜ್ಞಗಳ ವಿಸ್ತಾರ ಕ್ರಮ, ಧರ್ಮದ ನಾಲ್ಕು ಪಾದಗಳು, ನಾಲ್ಕು ಆಶ್ರಮಗಳು, ನಾಲ್ಕುವೃತ್ತಿಗಳು, ಎಲ್ಲವೂ ಬ್ರಹ್ಮನಮುಖಗಳಿಂದ ಹೊರಟವು. ಬ್ರಹ್ಮನ ಪೂರ್ವ-ದಕ್ಷಿಣ-ಪಶ್ಚಿಮ-ಉತ್ತರ ಮುಖಗಳಿಂದ ಋಗ್ವೇದ-ಯಜುರ್ವೇದ-ಸಾಮವೇದ, ಅಥರ್ವಣವೇದಗಳು ಹುಟ್ಟಿದುವು, ಹಾಗೂ 'ಶಸ್ತ್ರ' (ಹೋತೃವಿನಕರ್ಮ) ಇಜ್ಯಾ (ಅಧ್ವರ್ಯುವಿನಕರ್ಮ) ಸ್ತುತಿಸ್ತೋಮ (ಉದ್ಗಾತೃವಿನಕರ್ಮ) ಪ್ರಾಯಶ್ಚಿತ್ತ (ಬ್ರಹ್ಮನ ಕರ್ಮ) ಈ ನಾಲ್ಕರ ಉತ್ಪತ್ತಿಯಾಯಿತು, ಆಯುರ್ವೇದ, ಧನುರ್ವೇದ, ಗಾಂಧರ್ವ ವೇದ. ಸ್ಥಾಪತ್ಯವೇದ, (ಶಿಲ್ಪಶಾಸ್ತ್ರ) ಈ ನಾಲ್ಕೂ ಉತ್ಪನ್ನವಾದವು ಸರ್ವದರ್ಶಿ ಭಗವಾನ್ ಬ್ರಹ್ಮನು ನಾಲ್ಕು ಮುಖಗಳಿಂದಲೂ ಇತಿಹಾಸ ಪುರಾಣಾದಿರೂಪ ಐದನೆಯ ವೇದವನ್ನು ಉತ್ಪನ್ನಮಾಡಿದನು. ನಂತರ ಷೋಡಶೀ,ಉಕ್ಥ, ಚಯನ, ಅಗ್ನಿಷ್ಟೋಮ, ಆಪ್ತೋರ್ಯಾಮ, ಅತಿರಾತ್ರ, ವಾಜಪೇಯ, ಗೋಸವ, ಒಂದೊಂದು ಮುಖದಿಂದ ಎರಡೆರಡಂತೆ ಇವುಗಳ ಉತ್ಪತ್ತಿಯಾಯಿತು. ವಿದ್ಯಾ, ದಾನ, ತಪಸ್ಸು, ಸತ್ಯ, ಈ ಧರ್ಮದ ನಾಲ್ಕುಪಾದಗಳೂ.ವೃತ್ತಿಗಳೊಡನೆ ನಾಲ್ಕು ಆಶ್ರಮಗಳೂ ಪ್ರಕಟಗಳಾದುವು ಸಾವಿತ್ರ, ಪ್ರಾಜಾಪತ್ಯ, ಬ್ರಾಹ್ಮ. ಬೃಹತ್ ಈ ನಾಲಕ್ಕೂ ಬ್ರಹ್ಮಚಾರಿಯ ವೃತ್ತಿಗಳು. ವಾರ್ತಾ, ಸಂಚಯ,ಶಾಲೀನ, ಶಿಲೋಂಛ, ಈ ನಾಲ್ಕು ಗೃಹಸ್ಥರವೃತ್ತಿಗಳು, ವಾನಪ್ರಸ್ಥರನಾಲ್ಕುವೃತ್ತಿಗಳು-ವೈಖಾನಸ,ವಾಲಖಿಲ್ಯ, ಔದುಂಬರ, ಫೇನಪ. ಕುಟೀಚಕ, ಬಹೂದಕ, ಹಂಸ, ಪರಮಹಂಸ ಇವು ನಾಲ್ಕು ಪರಮಹಂಸರ ವೃತ್ತಿಗಳು, ಆನ್ವೀಕ್ಷಕೀ, ತ್ರಯೀ, ವಾರ್ತಾ, ದಂಡನೀತಿ, ಇವು ನಾಲ್ಕುವಿದ್ಯೆಗಳು. ಭೂಃ ಭುವಃ ಸುವಃ. ಮಹಃ ಇವು ನಾಲ್ಕು ವ್ಯಾಹೃತಿಗಳು, ಪ್ರಿಯವ್ರತ ಉತ್ತಾನಪಾದರು ಶತರೂಪ ಸ್ವಾಯಂಭುವರಪುತ್ರರು, ಆಕೂತಿ, ದೇವಹೂತಿ,ಪ್ರಸೂತಿಯರೂ ಅವರ ಪುತ್ರಿಯರು ರುಚಿಯಪತ್ನಿ ಆಕೂತಿ, ಕರ್ದಮರಪತ್ನೀ ದೇವಹೂತಿ, ದಕ್ಷನಪತ್ನಿ ಪ್ರಸೂತಿ ಇವರ ಸಂತಾನ ಪರಂಪರೆಯಿಂದ ಜಗತ್ತು ತುಂಬಿಹೋಯಿತು. ಎಂದು ಮೈತ್ರೇಯರು ಸೃಷ್ಟಿಯ ವಿಸ್ತಾರವನ್ನು ತಿಳಿಸಿದರು

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ದ್ವಾದಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ದರ್ಶನ, ಸ್ಕಂಧ ೩. ಅ.೧೩
ಕ್ರಿಯಾಯೋಗ "ವರಾಹಾವತಾರದ ಕಥೆ"

ಶ್ರೀ ಶುಕದೇವರು ಪರೀಕ್ಷಿತನೊಡನೆ ಹೇಳುತ್ತಾರೆ- ರಾಜನ್-ಹೀಗೆ ಮೈತ್ರೇಯರಿಂದ ಭಗವತ್ಕಥೆಯನ್ನು ಶ್ರವಣ ಮಾಡಿದ ವಿದುರನು ಅತ್ಯಂತ ಆದರ ಭಾವದಿಂದ ಕೇಳಿದನು-ನೋಡಿ-ಭಗವತ್ಕಥಾಶ್ರವಣದಲ್ಲಿ ಆದರ ಬುದ್ಧಿಯಿರಬೇಕು. ಶ್ರೋತೃಗಳಲ್ಲಿರುವ ಆದರ ಬುದ್ಧಿಯೇ ಕಥಾಶ್ರವಣಕ್ಕಿರುವ ಭದ್ರ ಬುನಾದಿ, ಆಧಾರ ಸಿಂಹಾಸನ. ಅದಿಲ್ಲದಿದ್ದರೆ ಶ್ರವಣವು ಬಂದದಾರಿಯಿಂದಲೇ ಹಿಂತಿರುಗಿ ಹೋಗಿ ಬಿಡುತ್ತದೆ. ವಿದುರನಾದರೂ ವಾಸುದೇವ ಕಥಾವೃತನಾಗಿದ್ದನು. ಎಷ್ಟು ಕೇಳಿದರು ಸಾಕು ಎಂದು ಅವನಿಗನಿಸುತ್ತಿರಲಿಲ್ಲ. ಅವನು ಕೇಳಿದನು-ಮುನಿವರ್ಯರೇ-ಸ್ವಯಂ ಭೂ ಬ್ರಹ್ಮನ ಪ್ರಿಯ ಪುತ್ರನಾದ ಮಹಾರಾಜ ಸ್ವಾಯಂಭುವ ಮನುವು ಶತರೂಪೆಯನ್ನು ಪತ್ನಿಯನ್ನಾಗಿ ಪಡೆದು ಏನು ಮಾಡಿದನು? ನೀವಾದರೋ ಸಾಧುಶಿರೋಮಣಿಗಳು. ರಾಜರ್ಷಿ ಆದಿರಾಜನಾದ ಸ್ವಾಯಂಭುವ ಮನುವಿನ ದಿವ್ಯ ಚರಿತ್ರೆಯನ್ನು ತಿಳಿಸಿರಿ. ಅವನು ವಿಶ್ವಕ್ಸೇನಾಶ್ರಯನು. ನಾರಾಯಣ ಶರಣಾಗತನು, ಅವನ ಚರಿತ್ರೆಯನ್ನು ಶ್ರವಣ ಮಾಡಲು ನನಗೆ ಬಹಳ ಕುತೂಹಲವು.

ಶ್ರೀ ಮುಕುಂದನ ಚರಣಾರವಿಂದಗಳಲ್ಲಿ ಭಕ್ತಿಯಿಟ್ಟಿರುವ ಭಕ್ತಜನರ ಗುಣಕಥನವನ್ನು ಕೇಳುವುದೇ ಬಹುದಿನ ಮಾಡಿದ ಶಾಸ್ತ್ರಾಭ್ಯಾಸಕ್ಕೆ ಮುಖ್ಯ ಫಲವೆಂದು ವಿದ್ವಾಂಸರು ಹೇಳುತ್ತಾರೆ. ಶ್ರೀಶುಕರು ಹೇಳುತ್ತಾರೆ-ರಾಜನ್ ವಿದುರನೇನು ಸಾಮಾನ್ಯನೇ ? ಸಹಸ್ರಶೀರ್ಷ ಭಗವಾನ್ ಶ್ರೀಹರಿಯ ಚರಣಾರವಿಂದ ಭಕ್ತನು. ಅಂತಹವನು ಭಕ್ತಿಯಿಂದ ಶ್ರೀಹರಿ ಕಥಾಶ್ರವಣವನ್ನು ಪ್ರಾರ್ಥಿಸುತ್ತಿರೋಣ. ಮುನಿವರ್ಯರಾದ ಮೈತ್ರೇಯರಿಗೆ ರೋಮಾಂಚನವಾಯಿತು. ಆನಂದದಿಂದ ಹೇಳತೊಡಗಿದರು-ವಿದುರ-ಶತರೂಪಾ-ಸ್ವಾಯಂಭುವ ಮನುಗಳ ಆವಿರ್ಭಾವವಾದ ಮೇಲೆ ಮನುವು ನಮ್ರತೆಯಿಂದ ಕೈಜೋಡಿಸಿಕೊಂಡು ಬ್ರಹ್ಮನೊಡನೆ ಹೇಳಿದನು ಭಗವನ್-ನೀವು ಸರ್ವ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವಿಗಳ ಜನ್ಮದಾತಾ, ಹಾಗೂ ಜೀವಿಕಾ ಪ್ರದಾತಾ. ನಿಮ್ಮ ಸಂತಾನಗಳಾದ ನಾವು ಹೇಗೆ ನಡೆದುಕೊಂಡರೆ ನಿಮಗೆ ಸಂತೋಷವಾಗುವುದು? ಪೂಜ್ಯ ಪಾದರೇ, ತಮ್ಮನ್ನು ಪುನಃ-ಪುನಃ ನಮಸ್ಕರಿಸುತ್ತೇವೆ. ನಮ್ಮಿಂದ ಸಾಧ್ಯವಾದ, ಹಾಗೂ ನಮಗೆ ಯೋಗ್ಯವಾದ ಕೆಲಸವನ್ನು ಆಜ್ಞಾಪಿಸಿರಿ. ಅದರಿಂದ ಇಹ ಲೋಕದಲ್ಲಿ ಕೀರ್ತಿಯೂ, ಪರಲೋಕದಲ್ಲಿ ಸದ್ಗತಿಯೂ ದೊರಕುವಂತಾಗಲಿ, ಮನುವಿನ ಪ್ರಾರ್ಥನೆಯಿಂದ ಬ್ರಹ್ಮನಿಗೆ ಬಹಳ ಸಂತೋಷವಾಯಿತು-ಹೇಳಿದನು-ಪುತ್ರ ನಿಮ್ಮಿಬ್ಬರಿಗೂ ಮಂಗಳವಾಗಲಿ. ನಿಮಗಳಲ್ಲಿ ನಾನು ಪ್ರಸನ್ನನಾಗಿದ್ದೇನೆ. ನೀನು ನಿಷ್ಕಪಟ ಭಾವದಿಂದ ಆತ್ಮಸಮರ್ಪಣೆಯನ್ನು ಮಾಡಿ ನನ್ನ ಆಜ್ಞಾಧಾರಕನಾಗಲು ಕಾತುರನಾಗಿರುವೆ. ಪುತ್ರರು ತಂದೆಯ ವಿಷಯದಲ್ಲಿ ಯಾವಾಗಲೂ ಹೀಗೆಯೆ ನಡೆದು ಕೊಳ್ಳಬೇಕು. ಸಂತಾನದ ಪ್ರಥಮ ಕರ್ತವ್ಯವೇ ಇದು-ತನ್ನ ಶಕ್ತ್ಯನುಸಾರ ಪ್ರಮಾದಾದಿ ದೋಷರಹಿತನಾಗಿ ಆದರದಿಂದ ಪಿತ್ರಾಜ್ಞೆಯನ್ನು ಪಾಲಿಸ ಬೇಕು.

ನೀನು ನಿನ್ನ ಈ ಪತ್ನಿಯೊಡಗೂಡಿ ಧರ್ಮಪೂರ್ವಕವಾಗಿ ಪೃಥ್ವಿಯನ್ನು ಪಾಲಿಸುತ್ತಾ ತ್ವತ್ಸದೃಶರಾದ ಸಂತಾನಗಳನ್ನು ಪಡೆದು, ಯಜ್ಞಾದ್ಯಾಚರಣೆಗಳಿಂದ ಶ್ರೀಹರಿಯನ್ನು ಆರಾಧಿಸು. ಇದರಿಂದ ನನ್ನ ಸೇವೆಯೂ ಆಗುವುದು ಹಾಗೂ ಶ್ರೀಹರಿಯೂ ಪ್ರಸನ್ನ ಗೊಳ್ಳುವನು. ಯಾರ ವಿಷಯದಲ್ಲಿ ಯಜ್ಞ ಮೂರ್ತಿ ಜನಾರ್ದನನು ಪ್ರಸನ್ನ ನಾಗುವುದಿಲ್ಲವೊ ಅವರ ಸರ್ವವಿಧದ ಶ್ರಮವೂ ವ್ಯರ್ಥವಾದಂತೆಯೆ, ಅವರು ಸ್ವಾತ್ಮನನ್ನೇ ಆದರಿಸುವುದಿಲ್ಲ. **"ತೇಷಾಂ ಶ್ರಮೋಹ್ಯಪಾರ್ಥಾಯ"** ಅವರ ಶ್ರಮವು ಪಾರ್ಥವಲ್ಲ, ಅಪಾರ್ಥ, ಪಾರ್ಥ ಎಂದರೆ ಪಃಪರಮೇಶ್ವರ; ಅರ್ಥ; ಪ್ರಯೋಜನಂ ಯಸ್ಯಸ; ಪಾರ್ಥ; , ಅದಿಲ್ಲದಿರುವುದು ಅಪಾರ್ಥ, ಅಪಗತಾರ್ಥ. ಕುಂತೀ ಪುತ್ರನಾದ ಪಾರ್ಥನುಬೇರೆ, ಪರಮೇಶ್ವರಾರ್ಥಕವಾದ ಈ ಪಾರ್ಥ ಶಬ್ದವು ಬೇರೆ, ಮನುವು ಕೇಳುತ್ತಾನೆ-ಪೂಜ್ಯರೇ ನಿಮ್ಮಾಜ್ಞೆಯಂತೆ ಅವಶ್ಯವಾಗಿ ವರ್ತಿಸುತ್ತೇನೆ. ಆದರೆತಾವು ಮೊದಲು ನನಗೂ, ನನ್ನ ಭಾವೀ ಸಂತಾನಕ್ಕೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥಳವನ್ನು ನಿರ್ದೇಶಿಸಿರಿ. ದೇವ-ಸರ್ವಧಾತ್ರಿಯಾದ ಪೃಥ್ವಿಯು ಈವಾಗ ಜಲಮಗ್ನಳಾಗಿದ್ದಾಳೆ. ಅವಳ ಉದ್ಧಾರದ ಬಗ್ಗೆ ತಾವು ಯೋಚಿಸಬೇಕು. ಇದನ್ನು ಕೇಳಿದ ಬ್ರಹ್ಮನಿಗೂ ಯೋಚನೆಯಾಯಿತು. ಪೃಥ್ವಿಯ ಉದ್ಧರಣಕ್ಕೇನು ಮಾಡಲಿ? ನಾನು ಲೋಕರಚನೆಯಲ್ಲಿ ತೊಡಗಿದ್ದಾಗ ಜಲಮಗ್ನಳಾದ ಪೃಥ್ವಿಯು ರಸಾತಳಕ್ಕೆ ಹೊರಟು ಹೋಗಿದ್ದಾಳೆ. ಹೇಗೆ ಮೇಲೆಕ್ಕೆತ್ತುವುದು? ಸೃಷ್ಟಿಕಾರ್ಯದಲ್ಲಿ ನಿರತನಾಗಿರುವ ನಾನು ಏನು ಮಾಡಬೇಕು? ಯಾರ ಸಂಕಲ್ಪಮಾತ್ರದಿಂದ ನಾನು ಜನ್ಮ ತಾಳಿರುವೆನೊ ಆ ಶ್ರೀಹರಿಯೇ ಈ ಸಮಸ್ಯೆಯನ್ನು ಬಿಡಿಸ ಬೇಕು.

ಹೀಗೆ ಬ್ರಹ್ಮನು ಚಿಂತಿಸುತ್ತಿರುವಾಗಲೇ ಅವನ ನಾಸಾಛಿದ್ರದಿಂದ ಹೆಬ್ಬೆರಳಿನಗಾತ್ರದ ಒಂದು ವರಾಹಶಿಶುವು ಆವಿರ್ಭವಿಸಿತು. ಬ್ರಹ್ಮನು ಆಶ್ಚರ್ಯದಿಂದ ನೋಡುತ್ತಿದ್ದ ಹಾಗೆಯೇ ಆನೆಯಗಾತ್ರವಾಯಿತು. ಆ ವಿಶಾಲ ವರಾಹಮೂರ್ತಿಯನ್ನು ಮರೀಚ್ಯಾದಿ ಮುನಿಗಳೂ, ಸನಕಾದಿಗಳೂ, ಮನು-ಶತರೂಪೆಯರೂ ಸಂದರ್ಶಿಸಿದರು. ತಮ್ಮ-ತಮ್ಮಲ್ಲಿಯೆ ವಿಮರ್ಶಿಸುತ್ತಾರೆ, ಇವನಾರಿರಬಹುದು? ಈಗಿನ್ನೂ ನಾಸಾಛಿದ್ರದಿಂದ ಹೊರಬಂದ ಈ ಪ್ರಾಣಿಯು ಪರ್ವತಾಕಾರವನ್ನು ತಾಳಿರುವುದಲ್ಲ ? ಇವನು ಯಜ್ಞಮೂರ್ತಿ ಭಗವಂತನೇಸರಿ, ಹೀಗೆ ಬ್ರಹ್ಮಾದಿಗಳು ವಿಚಾರಿಸುತ್ತಿರುವಲ್ಲಿ ಮಹಾಪರ್ವತಾಕಾರಿಯಾದ ವರಾಹನು ಘನಗಂಭೀರ ಗರ್ಜನೆಯನ್ನು ಮಾಡಿದನು. ದಶ ದಿಕ್ಕುಗಳೂ ಪ್ರತಿಧ್ವನಿತಗಳಾದುವು. ಬ್ರಹ್ಮಾದಿಗಳ ಸಂತೋಷವು ಮಿತಿಮೀರಿತು.

ತಮ್ಮ ಸಂತಾಪಹಾರಕನಾದ ಮಾಯಾಮಯ ವರಾಹ 'ಭಗವಂತನ ಗರ್ಜನೆಯನ್ನು ಕೇಳಿ, ಜನೋಲೋಕ, ತಪೋಲೋಕ, ಸತ್ಯಲೋಕ ನಿವಾಸಿಗಳೆಲ್ಲರೂ ಪರಮ ಹರ್ಷಯುಕ್ತರಾಗಿ, ಪವಿತ್ರವೇದ ಮಂತ್ರಗಳಿಂದ ಭಗವಂತನನ್ನು ಸ್ತುತಿಸತೊಡಗಿದರು. ಸ್ತೋತ್ರದಿಂದ ವರಾಹರೂಪೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನು ಅತ್ಯಂತ ಸುಪ್ರಸನ್ನನಾದನು. ಮತ್ತೊಮ್ಮೆ ಗರ್ಜಿಸಿ ದೇವತೆಗಳಿಗೆ ಹರ್ಷವನ್ನುಂಟು ಮಾಡುವುದಕ್ಕಾಗಿ ಅದ್ಭುತ ಲೀಲಾಧಾರಿಯಾದ ಭಗವಂತನು ಜಲವನ್ನು ಪ್ರವೇಶಿಸಿದನು. ನೋಡಿ-- ಬ್ರಹ್ಮನ ನಾಸಾರಂಧ್ರದಿಂದ ವರಾಹನು ಹೊರಬಂದನು, ಗಂಧಗ್ರಾಹೀ ಇಂದ್ರಿಯವು 'ನಾಸಿಕಾ' ಗಂಧವತೀ ಪೃಥಿವೀ, ಪೃಥ್ವಿಯನ್ನುದ್ಧರಿಸುವವನು-ನಾಸಿಕಾದಿಂದ ಹೊರಬರುವುದು ಸಮಂಜಸವಾಗಿದೆ. ಜಲದಿಂದ ಪೃಥ್ವಿಯು ಉತ್ಪತ್ತಿಯು, ಜಲದಲ್ಲಿಯೆ ಪೃಥ್ವಿಯು ಲಯವು. ಲಯವಾಗಿರುವ ಪೃಥ್ವಿಯ ಉದ್ಧಾರಕ್ಕಾಗಿ ಜಲವಲ್ಲಿ ಪ್ರವೇಶಿಸಿದ್ದಾನೆ.

ಈ ಯಜ್ಞವರಾಹನ ಅಪಾರ ಶೋಭಾಕಾಂತಿಗಳನ್ನೊಮ್ಮೆ ಸಂದರ್ಶಿಸಿರಿ-

ಉತ್ಕ್ಷಿಪ್ತ ಬಾಲ; ಖಚರ; ಕಠೋರ;
ಸಟಾವಿಧುನ್ವನ್ ಖರರೋಮಶತ್ವಕ್।
ಖುರಾಹತಾಭ್ರ; ಸಿತದಂಷ್ಟ್ರ ಈಕ್ಷಾ
ಜ್ಯೋತಿರ್ಬಭಾಸೆಭಗವಾನ್ ಮಹೀಧ್ರಃ ॥

ವರಾಹರೂಪೀ ಭಗವಂತನು ಬಾಲವನ್ನು ಎತ್ತಿಕೊಂಡು ವೇಗದಿಂದ ಆಕಾಶಕ್ಕೆ ಹಾರಿದ್ದಾನೆ. ತನ್ನಕುತ್ತಿಗೆಯ ಕೂದಲುಗಳನ್ನು ಬಡಿಯುತ್ತಾ, ಖುರಾಘಾತಗಳಿಂದ ಮೋಡಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದಾನೆ. ಬಹಳ ಕಠಿಣವಾದ ದೇಹ, ಮೈಮೇಲಿನ ಕೂದಲುಗಳು ಮುಳ್ಳಿನಂತಿವೆ. ಕಣ್ಣುಗಳು ಅಪೂರ್ವಕಾಂತಿಯನ್ನು ಹೊರಸೂಸುತ್ತಿವೆ. ಈಕ್ಷಾ ಜ್ಯೋತಿಃ ನಿರೀಕ್ಷಣೆಯೆ ಪ್ರಕಾಶವು.

ಹೀಗೆ ಪ್ರಕಾಶಮಾನನಾದ ಭಗವಾನ್ ಯಜ್ಞಪುರುಷನು, ವರಾಹರೂಪವನ್ನು ಧರಿಸಿರುವುದರಿಂದ ಭೂಮಿಯನ್ನು ಮೂಸಿ-ಮೂಸಿ ಪತ್ತೆ ಮಾಡುತ್ತಿದ್ದಾನೆ. ಅವನ ರೂಪವಾದರೋ ಭಯಂಕರವಾಗಿಯೇ ಇದೆ. ಆದರೂ ಮರೀಚ್ಯಾದಿ ಮುನಿಗಳನ್ನು ಅಭಯಪ್ರದಾನ ದೃಷ್ಟಿಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡುತ್ತಾ ಜಲದೊಳಗೆ ಪ್ರವೇಶಿಸಿದನು. ಪರ್ವತಾಕಾರಿಯಾದ ವರಾಹನ ದೇಹವು ನೀರಿನೊಳಕ್ಕೆ ಬಿದ್ದ ಕೂಡಲೆ ಸಮುದ್ರನ ಹೊಟ್ಟೆಯು ಒಡೆಯು ವಂತಾಯಿತು. ಮೇಘಗಳ ಗರ್ಜನೆಯಂತೆ ಭೀಷಣಶಬ್ದವು ಕೇಳಿಸಿತು. ಪ್ರಾಯಶಃ ಅವನು-'ನನ್ನನ್ನು ಉದ್ಧರಿಸೆಂದು' ವರಾಹನನ್ನು ಆರ್ತಸ್ವರದಿಂದ ಪ್ರಾರ್ಥಿಸುತ್ತಿರುವನೋ ? ಎಂಬಂತಿತ್ತು. ಭಗವಾನ್ ಯಜ್ಞಮೂರ್ತಿಯು ತನ್ನ ಖುರಾಘಾತಗಳಿಂದ ಜಲರಾಶಿಯನ್ನು ಸೀಳುತ್ತಾ ರಸಾತಲವನ್ನು ಮುಟ್ಟಿದನು. ಅಲ್ಲಿಸರ್ವಜೀವಿಗಳಿಗೂ ಆಶ್ರಯಭೂತಳಾದ ಪೃಥ್ವಿದೇವಿ ಯನ್ನು ಕಂಡನು. ರಸಾತಲದಿಂದ ಪೃಥ್ವಿಯನ್ನು ಎತ್ತಿ ಕೋರೆ ದಾಡೆಗಳ ಮೇಲೆ ಕೂರಿಸಿಕೊಂಡು ಜಲದಿಂದ ಹೊರಕ್ಕೆ ಬರಲಾರಂಭಿಸಿದನು. ಆಗ ಮಹಾಪರಾಕ್ರಮಿ ಹಿರಣ್ಯಾಕ್ಷನು ಗದಾಪಾಣಿಯಾಗಿ ಬಂದು ಅವನನ್ನು ಆಕ್ರಮಿಸಿದನು. ಈ ಆಕ್ರಮಣದಿಂದ ಕೃದ್ಧಗೊಂಡ ವರಾಹನು ಸಿಂಹವು ಆನೆಯನ್ನು ಸುಲಭವಾಗಿ ಸಂಹರಿಸುವ ತೆರದಲ್ಲಿ ಹಿರಣ್ಯಾಕ್ಷನನ್ನು ಸಂಹರಿಸಿ ದನು. ರಕ್ತಸಿಕ್ತನಾಗ ವರಾಹನು ಕೆಂಪುಮಣ್ಣನ್ನು ಬಳಿದು ಕೊಂಡು ಬಂದಿರುವ ಆನೆಯಂತೆ ಪರಿಶೋಭಿಸುತ್ತಿದ್ದನು. ಗಜರಾಜನು ದಂತಗಳ ಮೇಲೆ ಕಮಲ ಪುಷ್ಪವನ್ನು ಧರಿಸಿ ಬರುವಂತೆ, ವರಾಹಸ್ವಾಮಿಯು ಭೂ -ದೇವಿಯನ್ನು ಕೋರೆದಾಡೆಗಳ ಮೆಲೆ ಕೂರಿಸಿ ಕೊಂಡು ಬರಲು, ತಮಾಲ ಸಮಾನ-ನೀಲವರ್ಣವರಾಹ ಭಗವಂತನನ್ನು ಬ್ರಹ್ಮಾ-ಮರೀಚ್ಯಾದಿಗಳೆಲ್ಲರೂ ಭಕ್ತಿಭಾವದಿಂದ ಸ್ತೋತ್ರಮಾಡಿದರು-

> ಜಿತಂ ಜಿತಂ ತೇಽಜಿತ ಯಜ್ಞ ಭಾವನ
> ತ್ರಯೀಂ ತನುಂಸ್ವಾಂ ಪರಿಧುನ್ವತೇ ನಮಃ ।
> ಯದ್ರೋಮಗರ್ತೇಷು ನಿಲಿಲ್ಯುರಧ್ವರಾಃ
> ತಸ್ಮೈನಮಃ ಕಾರಣ ಸೂಕರಾಯತೇ ॥

ಋಷಿಗಳು ಹೇಳುತ್ತಾರೆ– ಹೇ ಅಜಿತ ನಿನಗೆ ಜಯವಾಗಲಿ-ಜಯವಾಗಲಿ, ನೀನು ಯಜ್ಞಾಧೀಶ್ವರನು. ವೇದತ್ರಯೀರೂಪವಾದ ನಿನ್ನ ವಿಗ್ರಹವನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿರಸ್ಕರಿಸಿರುವೆ. ದಿವ್ಯಮೂರ್ತಿಯಾದ ನಿನಗೆ ಅನಂತ ನಮಸ್ಕಾರಗಳು. ನಿನ್ನ ರೋಮಕೂಪಗಳಲ್ಲಿ ಬೃಹದ್ಯಜ್ಞಗಳು ಪ್ರತಿಷ್ಠಿತವಾಗಿವೆ. ನೀನು ಸಾಧಾರಣ ಸೂಕರನಲ್ಲ ಕಾರಣ ಸೂಕರನು. ಅಂದರೆ ಜಗತ್ತಿಗೆ ಕಾರಣ ಭೂತನಾದ ಸೂಕರ. ಆದಿಪರಮೇಶ್ವರನು. ಮತ್ತೊಂದು ಅರ್ಥವೆಂದರೆ ಕಾರಣವಶಾತ್ ಸೂಕರನಾಗಿದ್ದಾನೆ. ಅಂದರೆ ಒಂದು ವಿಶಿಷ್ಟ ಪ್ರಯೋಜನಕ್ಕಾಗಿ ಸೂಕರನಾಗಿದ್ದಾನಷ್ಟೆ. ಸೂಕರ ಎಂದರೆ-ಸೂ-ಸೂ ಕರೋತೀತಿ ಸೂಕರಃ ಇದು ನಡೆಯುವಾಗ ನೆಲವನ್ನು ಮೂಸಿ-ಮೂಸಿ ನೋಡುತ್ತಾ ಸೂ-ಸೂ ಎಂದು ಶಬ್ದಮಾಡುತ್ತದೆ. ಆ ಧ್ವನಿಯನ್ನನುಕರಿಸಿ ಸೂಕರವಾಗಿದೆ.

ಇಂತಹ ಆದಿ ವರಾಹಮೂರ್ತಿಗೆ ನಮಸ್ಕಾರವು, ನೋಡಿ-ವರಾಹನಿಗೂ ಭೂಮಿಗೂ ಯಾವಾಗಲೂ ನಿಕಟ ಸಂಬಂಧವಿದೆ. ಕಾರ್ಯಾನುಗುಣವಾಗಿ ಹತ್ತಾರು ಅವತಾರವನ್ನು ಭಗವಂತನು ಮಾಡುತ್ತಾನೆ. ಆಯಾಯಾ ಅವತಾರದ ಲೀಲೆಗಳು ಅಲ್ಲಲ್ಲಿಗೇ ಮುಗಿದರೂ, ಅದರ ಪ್ರಭಾವವು ಮುಂದಿನ ಅವತಾರಗಳಲ್ಲಿಯೂ ಕಾಣುತ್ತದೆ. ವೇಷ-ಭೂಷಣಗಳು ಬೇರೆ ಬೇರೆಯೇ ಹೊರತು ನಟನೊಬ್ಬನೇ, ಶ್ರೀಕೃಷ್ಣಾವತಾರದಲ್ಲಿ ಎಲ್ಲಾ ಅವತಾರಗಳ ವೈಶಿಷ್ಟ್ಯಗಳನ್ನೂ ಕಾಣಬಹುದು. ಭಗವಾನ್ ಕೃಷ್ಣನು ಮಣ್ಣಿನಲ್ಲಿ ಆಟವಾಡಿಕೊಂಡು ತಾಯಿ ಯಶೋದೆಯ ಬಳಿಗೆ ಬರುತ್ತಾನೆ.ಯಶೋದೆಯು ಹೇಳುತ್ತಾಳೆ-**ಪಂಕಾಭಿಷಿಕ್ತ ಸಕಲಾವಯವಂ ನಿರೀಕ್ಷ್ಯದಾವೋದರಂ ವದತಿ ಕೋಪವಶಾದ್ಯಶೋದಾ. ತ್ವಂಸೂಕರೋಸಿ ಗತಜನ್ಮನಿ ಪೂತನಾರೇ** ಕೆಸರನ್ನು ದೇಹಕ್ಕೆಲ್ಲಾ ಬಳಿದು ಕೊಂಡು ಬಂದ ಕೃಷ್ಣನನ್ನು ನೋಡಿ ತಾಯಿ ಯಶೋದೆಯು ಹೇಳುತ್ತಾಳೆ-ಓ ಕೃಷ್ಣ-ಇದೇನು ನಿನ್ನ ರೂಪ? ನೀನೇನು ಹಿಂದಿನಜನ್ಮದಲ್ಲಿ ಸೂಕರನಾಗಿ ಹುಟ್ಟಿದ್ದೆಯಾ? ಪೂತನಾರಿಯಾದ ನೀನು ಏನೇನಾಗಲಾರೆ ತಾಯಿಯ ಕೋಪದಲ್ಲಿಯೂ! ಎಂತಹ ತತ್ವವಿದೆ ವರಾಹನಾಗಿದ್ದವನೇ ಕೃಷ್ಣನಾಗಿ ಬಂದಿರುವನು ಎನ್ನುವ ವಿಚಾರ ಪ್ರಾಜ್ಞರುಗಳಿಗೆ ಗೊತ್ತು ತಾಯಿಗೆ ಅದನ್ನೆಲ್ಲವನ್ನೂ ವಿಚಾರಿಸಲು ವೇಳೆಯಿಲ್ಲ? ಚೇಷ್ಟೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಮಾಡಿದಾಗ ಕೆಲವು ಕಟುಶಬ್ದಗಳನ್ನುಪಯೋಗಿಸಿ, ಬುದ್ಧಿ ಕಲಿಸಲು ಪ್ರಯತ್ನಿಸುತ್ತಾಳೆ. ಕೃಷ್ಣನ ಜಲಕೇಳಿಯಿಂದ ಮುಗ್ಧಳಾದ ಯಶೋದೆಯು ಏನೋ ಕೃಷ್ಣ-ಇಷ್ಟುಚೆನ್ನಾಗಿ ಈಜುವೆಯಲ್ಲ ?ಹಿಂದಿನ ಜನ್ಮದಲ್ಲಿ ಮೀನಾಗಿ ಹುಟ್ಟಿದ್ದೆಯಾ? ಆಟದಲ್ಲಿ ಹುಡುಗರನ್ನು ಲೀಲಾಜಾಲವಾಗಿ ಹೊತ್ತು ಕೊಂಡು ಹೋಗುವುದನ್ನು ಕಂಡು ಕೇಳುತ್ತಾಳೆ-ನೀನೇನು ಕುದುರೆಯಾಗಿ ಹುಟ್ಟಿದ್ದೆಯಾ ? ಹೀಗೆ ಕೃಷ್ಣನಬಗ್ಗೆ ಯಶೋದೆಯು ಏನೇನು ಆರೋಪಿಸಿ ದರೂ ಅವೆಲ್ಲವೂ ಸತ್ಯವಾಗಿಯೆ ಇದ್ದಿತು.

ಮುಂದಿನ ನಾಲ್ಕು ಶ್ಲೋಕಗಳಿಂದ ಭಗವಾನ್ ವರಾಹಸ್ವಾಮಿಯು ಯಜ್ಞಾ ತ್ಮತೆಯನ್ನು ಪ್ರಕಟಗೊಳಿಸುತ್ತಾ, ಋಷಿಗಳು ಸ್ತೋತ್ರ ಮಾಡುತ್ತಾರೆ.

ರೂಪಂ ತವೈತನ್ನನು ದುಷ್ಕೃತಾತ್ಮನಾಂ
ದುರ್ದರ್ಶನಂ ದೇವಯದಧ್ವರಾತ್ಮಕಂ
ಛಂದಾಸಿಯಸ್ಯ ತ್ವಚಿಬರ್ಹಿರ್ಲೋಮ
ಸ್ವಾಜ್ಯಂ ದೃಶಿತ್ವಂಘ್ರಿಷು ಚಾತೃಹೋತ್ರಂ

ದೇವ— ನಿನ್ನೀಅದ್ಭುತ ರೂಪವನ್ನು ಅಪುಣ್ಯವಂತರು ದರ್ಶನ ಮಾಡ ಲಾರರು. ನಿನ್ನ ತ್ವಕ್ಕಿನಲ್ಲಿ ಗಾಯತ್ರ್ಯಾದಿ ಛಂದಸ್ಸುಗಳಿವೆ! ರೋಮಾ ವಳಿಯಲ್ಲಿ ಕುಶಗಳು, ನೇತ್ರಗಳಲ್ಲಿ ಘೃತ, ನಾಲ್ಕು ಚರಣಗಳಲ್ಲಿಯೂ ಹೋತಾ, ಅಧ್ವರ್ಯು, ಉದ್ಗಾತಾ, ಬ್ರಹ್ಮಾ ಈನಾಲ್ಕು ಋತ್ವಿಜರ ಕರ್ಮಗಳಿವೆ. ಭಗವಾನ್ ವರಾಹನನ್ನು ಯಜ್ಞ ಮೂರ್ತಿಯನ್ನಾಗಿ, ಋಷಿ ಮುನಿಗಳು ವರ್ಣಿಸಿದ್ದಾರೆ.

ಸ್ರುಕ್ತುಂಡ ಆಸೀತ್ಸ್ರುವ ಈಶನಾಸಯೋ
ರಿಡೋದರೇ ಚಮಸಾಃ ಕರ್ಣರಂಧ್ರೇ
ಪ್ರಾಶಿತ್ರಮಾಸ್ಯೇ ಗ್ರಸನೇ ಗ್ರಹಾಸ್ತುತೇ
ಯಚ್ಚರ್ವಣಂತೇ ಭಗವನ್ನಗ್ನಿಹೋತ್ರಮ್

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಮುಖಾಗ್ರಭಾಗದಲ್ಲಿ ಸ್ರುಕ್, ನಾಸಿಕಾ ಛಿದ್ರಗಳಲ್ಲಿ ಸ್ರುವಾ, ಉದರದಲ್ಲಿ ಇಡಾ, (ಯಜ್ಞೀಯ ಭಕ್ಷಣಪಾತ್ರ) ಕಿವಿಗಳಲ್ಲಿ ಚಮಸ್ಸು ಮುಖದಲ್ಲಿ ಪ್ರಾಶಿತ್ರ (ಬ್ರಹ್ಮಭಾಗಪಾತ್ರ) ಕಂಠಛಿದ್ರದಲ್ಲಿ ಗ್ರಹ (ಸೋಮಪಾತ್ರ) ಗಳುಇವೆ. ನಿನ್ನ ಚರ್ವಣವೇ ಅಗ್ನಿಹೋತ್ರವು.

ದೀಕ್ಷಾಸು ಜನ್ಮೋಪಸದ: ಶಿರೋಧರಂ
ತ್ವಂ ಪ್ರಾಯಣೀಯೋದಯನೀಯದಂಷ್ಟ್ರಃ
ಜಹ್ವಾಪ್ರವರ್ಗ್ಯಸ್ತವ ಶೀರ್ಷಕಂ ಕ್ರತೋ
ಸಭ್ಯಾವಸಥಂ ಚಿತಯೋಽಸವೋಹಿತೇ

ಪದೇ ಪದೇ ಅವತಾರ ಮಾಡುವುದೇ ಯಜ್ಞಸ್ವರೂಪನಾದ ನಿನ್ನ ದೀಕ್ಷಣೀಯ ಇಷ್ಟಿಯು, ನಿನ್ನ ಕುತ್ತಿಗೆಯೆ'ಉಪಸದ' (ಇಷ್ಟಿತ್ರಯಗಳು)ಎರಡು ಕೋರದಾಡೆಗಳು ಪ್ರಾಯಣೀಯ ಉದಯನೀಯ,(ಪ್ರಾಯಣೀಯ-ದೀಕ್ಷಾನಂತರ ಇಷ್ಟಿ, ಉದಯನೀಯ, ಯಜ್ಞಾಂತ ಇಷ್ಟಿ) ಜಿಹ್ವಾ-ಪ್ರವರ್ಗ್ಯವು, ಪ್ರತ್ಯೇಕ ಉಪಸದಾ .ತ್ಪೂರ್ವದಲ್ಲಿ ಮಾಡುವ ಮಹಾವೀರ ನಾಮಕ ಕರ್ಮ ನಿನ್ನ ಶಿರಸ್ಸು 'ಸಭ್ಯ' (ಹೋಮರಹಿತಾಗ್ನಿ) "ಆವಸಥ" (ಔಪಾಸನಾಗ್ನಿ) ಚಿತಯೋಽಸವೋಹಿತೇ.ನಿನ್ನ ಪ್ರಾಣಿಗಳು ಚಿತಿ. (ಇಷ್ಟಕಾಚಯನ)

ಸೋಮಸ್ತು ರೇತ; ಸವನಾನ್ಯವಸ್ಥಿತಿಃ
ಸಂಸ್ಥಾವಿಭೇದಾಸ್ತವ ದೇವಧಾತವಃ ।
ಸತ್ರಾಣಿ ಸರ್ವಾಣಿ ಶರೀರಸಂಧಿಃ
ತ್ವಂ ಸರ್ವಯಜ್ಞ ಕ್ರತುರಿಷ್ಟಿ ಬಂಧನಃ॥

ದೇವ-ನಿನ್ನ ವೀರ್ಯವೇ ಸೋಮವು. ನಿನ್ನ ಆಸನವೇ ಪ್ರಾತಃಸವನಾದಿ ಮೂರು ಸವನಗಳು ನಿನ್ನ ಸಪ್ತಧಾತುಗಳೇ ಸಪ್ತಸಂಸ್ಥಾ ಭೇದಗಳು. (ಅಗ್ನಿಷ್ಟೋಮ - ಅತ್ಯಗ್ನಿಷ್ಟೋಮ- ಉಕ್ಥ – ಷೋಡಶೀ – ವಾಜಪೇಯ- ಅತಿರಾತ್ರ - ಆಪ್ತೋರ್ಯಾಮ.) ನಿನ್ನ ಶರೀರದ ಸಂಧಿ ಸ್ಥಳಗಳೇ ಸಂಪೂರ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಜ್ಞ-ಕ್ರತು ಸ್ವರೂಪವಾಗಿರುವೆ. ಕ್ರತುವೆಂದರೆ ಸೋಮಸಹಿತ ಯಾಗವು. ಯಜ್ಞವೆಂದರೆ ಸೋಮ ರಹಿತ ಯಾಗವು. ಎಲ್ಲಾ ಮಂತ್ರಗಳು, ದೇವತೆಗಳೂ, ದ್ರವ್ಯಗಳೂ ಯಜ್ಞಗಳೂ, ಹಾಗೂ ಕರ್ಮಗಳೂ ನಿನ್ನ ರೂಪವೇ ನಿನಗೆ ನಮೋ ನಮಃ , ವೈರಾಗ್ಯ-ಭಕ್ತಿಗಳಿಂದ,ಮನಸ್ಸಿನ ಏಕಾಗ್ರತೆಯಿಂದ ಯಾವ ಜ್ಞಾನಾನುಭವವು ಉಂಟಾಗುವುದೋ ಅದೋ ನಿನ್ನ ಸ್ವರೂಪವೇ. ನೀನೇ ಸಕಲ ವಿದ್ಯೆಗಳಿಗೂ ಆದಿಗುರುವು. ನಿನಗೆ ಪುನಃ ಪುನಃ ನಮಸ್ಕಾರಗಳು.

ನಿನ್ನ ಕೋರೆದಾಡೆಗಳಲ್ಲಿ ನೀನು ಧರಿಸಿರುವ ಈ ಪೃಥ್ವಿಯು, ಗಜರಾಜನು ದಂತಗಳಲ್ಲಿ ಧರಿಸಿರುವ ಕಮಲ ಪುಷ್ಪದಂತೆ ಶೋಭಿಸುತ್ತಿದ್ದಾಳೆ. ಹೀಗೆ ಭೂಧಾರಕನಾದ ನಿನ್ನ ಶ್ರೀವಿಗ್ರಹವು ಮೇಘಮಾಲೆಯಿಂದ ಆವೃತವಾದ ಶಿಖರ ಗಳಿಂದ ಕೂಡಿದ ಕುಲ ಪರ್ವತದಂತೆ ಶೋಭಾಯಮಾನವಾಗಿದೆ. ಚರಾಚರ ಜೀವಿಗಳು ಸುಖಪೂರ್ವಕ ನೆಲಸುವುದಕ್ಕಾಗಿ ಜಗನ್ಮಾತೆಯಾದ, ನಿನ್ನ ಪತ್ನಿಯಾದ ಪೃಥ್ವಿಯನ್ನು ಜಲದ ಮೇಲೆ ಸ್ಥಾಪಿಸು, ನೀನು ಸಕಲ ಲೋಕಪಿತನು. ಅರಣಿಯಲ್ಲಿ ಅಗ್ನಿ ಸ್ಥಾಪನೆ ಮಾಡುವಂತೆ,ಪೃಥ್ವಿಯಲ್ಲಿ ನಿನ್ನ ಧಾರಣಾಶಕ್ತಿಯನ್ನು ಸ್ಥಾಪನೆಮಾಡು ನಿನಗೂ, ಪೃಥ್ವೀ ಮಾತೆಗೂ ಅನಂತ ನಮಸ್ಕಾರಗಳು. ರಸಾತಳ ಮಗ್ನಳಾದ ಈ ಭೂದೇವಿಯನ್ನು ನಿನ ವಿನಾ ಯಾರು ಉದ್ಧರಿಸಲು ಸಾಧ್ಯವಿತ್ತು? ನೀನು ಸಂಪೂರ್ಣ ಆಶ್ಚರ್ಯಗಳಿಗೆಲ್ಲ ಆಶ್ರಯನು. ನೀನು ಈ ಕೆಲಸವನ್ನು ಮಾಡಿದೆ ಯೆಂದರೆ ಏನೂ ಆಶ್ಚರ್ಯವಿಲ್ಲ. ನಿನ್ನ ಮಾಯೆಯಿಂದ ವಿಶ್ವವು ಸೃಜಸಲ್ಪಟ್ಟಿದೆ. ನಿನ್ನ ದೇಹದಿಂದ ಜಾರಿದ ಜಲಬಿಂದುಗಳಿಂದ, ಜನೋಲೋಕ-ತಪೋಲೋಕ-ಸತ್ಯಲೋಕದವರೆಲ್ಲರೂ ಪುನೀತರಾದರು ನಿನ್ನ ಕರ್ಮಗತಿಯನ್ನು ಯಾರೂ ಅರ್ಥಮಾಡಿಕೊಳ್ಳಲಾರರು ಹಾಗೆಯಾರಾದರೂ ಯೋಚಿಸಿದರೆ ಅವರಬುದ್ಧಿಯು ನಷ್ಟವಾದಂತೆಯೆ.ನಿನ್ನ ಯೋಗಮಾಯೆಯಾದ ಜಗತ್ತೆಲ್ಲವೂ ಮೋಹಾಕ್ರಾಂತವಾಗಿದೆ. ನೀನು ಎಲ್ಲರಿಗೂ ಕಲ್ಯಾಣ ಕಾರಕನಾಗು ಹೀಗೆ ಬ್ರಹ್ಮಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಂದ ಸ್ತುತಿಸಲ್ಪಟ್ಟ ಆದಿವರಾಹಸ್ವಾಮಿಯು ತನ್ನ ಪಾದಖುರಗಳಿಂದ ಜಲವನ್ನು ಸ್ಥಂಭಿಸಿ ಪೃಥ್ವಿಯನ್ನು ಸ್ಥಾಪಿಸಿದನು. ಈ ರೀತಿ ಆದಿವರಾಹನಿಂದ ಭೂಮ್ಯುದ್ಧರಣ ಕಾರ್ಯವು ನಡೆಯಿತು. ನಂತರ ವರಾಹರೂಪೀ ಭಗವಾನ್ ಶ್ರೀಹರಿಯು ಅಂತರ್ಧಾನನಾದನು.

ವಿದುರ-ಭಗವಂತನ ಲೀಲಾಮಯ ಚರಿತ್ರೆಗಳು ಸರ್ವ ವಿಧದ ಪಾಪ-ತಾಪಗಳನ್ನು ದೂರೀ ಕರಿಸುತ್ತವೆ, ಈ ಮಂಗಳ ಮಯೀಕಥೆಯನ್ನು ಕೇಳುವವರು ಕೇಳಿಸುವವರು ಭಗವದ್ಭಕ್ತಿ ಸಂಪನ್ನರಾಗುತ್ತಾರೆ. ಭಗವಂತನು ಸರ್ವಕಾಮ ಪರಿಪೂರಕನು "ಕಿಂದುರ್ಲಭಂ ಮನುಷ್ಯಾಣಾಂ ಪ್ರಸನ್ನೇ ಶ್ರೀನಿಕೇತನೇ" ಅವನು ಪ್ರಸನ್ನನಾದರೆ ದುರ್ಲಭವಾದುದು ಮತ್ತೊಂದಿಲ್ಲವು. ಅನನ್ಯ ಭಕ್ತರಿಗೆ ದುರ್ಲಭವಾದ ತನ್ನ ಪರಮಪದವನ್ನೇ ಅನುಗ್ರಹಿಸುತ್ತಾನೆ. ಒಮ್ಮೆ ಭಗವತ್ಕಥಾಮೃತವನ್ನು ಪಾನಮಾಡಿ ಪುನಃ ಅದನ್ನು ತಿರಸ್ಕರಿಸುವ ಮಾನವನು ಜಗತ್ತಿನಲ್ಲಿರುವನೇ ? ಕೇವಲ ಪಶುಗಳಾದರೆ ಅವುಗಳಿಗೆ ಪುರುಷಾರ್ಥ ಸಾಧನೆಯಿಲ್ಲದಿರುವುದರಿಂದ, ಸಂಸಾರ ದುಃಖವನ್ನು ಕಳೆಯುವ ಭಗವತ್ಕಥೆಯನ್ನು ಆಲಿಸುವ ಯೋಗವೂ ಇರುವುದಿಲ್ಲ. ಕಥಾಶ್ರವಣದಿಂದ ಭಗವಂತನು ಪ್ರಸನ್ನನಾದರೆ, ಸಾಂಸಾರಿಕ ವಿಚಾರಗಳಲ್ಲಿ ರುಚಿಯು ಹೇಗೆ ತಾನೇ ಉಂಟಾದೀತು? ಭಗವದ್ ಕಥಾ ಸ್ವಾದನೆಯಲ್ಲಿ ಯಾರಿಗೂ ವೈರಾಗ್ಯವು ಹುಟ್ಟಬಾರದು.

ಓಂ ತತ್ಸದಿತ್ಯೇವಂ ತೃತೀಯಸ್ಕಂಧೇ ತ್ರಯೋದಶೋಽಧ್ಯಾಯಃ

ಶ್ರೀ ಮದ್ಭಾಗವತ ದರ್ಶನ, ಸ್ಕಂಧ ೩. ಅ. ೧೪

"ದಿತಿಯ ಗರ್ಭಧಾರಣೆ"

ಪೂಜ್ಯಮೈತ್ರೇಯರಿಂದ ವರಾಹಾವತಾರದ ಕಥೆಯನ್ನು ಕೇಳಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದುರನು ಪ್ರಶ್ನಿಸಿದನು-ಪೂಜ್ಯರೇ-ಆದಿವರಾಹನು ಹಿರಣ್ಯಾಕ್ಷನನ್ನು ಸಂಹರಿಸಿದನೆಂದು ಹೇಳಿದಿರಿ. ಆದರೆ ನನಗೊಂದು ಸಂದೇಹವಿದೆ.ವರಾಹ ಸ್ವಾಮಿಯು ಯಾವುದೇ ವಿಧದ ಶ್ರಮವೂ ಇಲ್ಲದೆ ಭೂದೇವಿಯನ್ನು ಕೋರೆದಾಡೆಗಳ ಮೇಲೆ ಕೂರಿಸಿಕೊಂಡು ಬರುವಾಗ, ದೈತ್ಯರಾಜನಾದ ಹಿರಣ್ಯಾಕ್ಷನು ಹೇಗೆ ಅವನಿಗೆ ಎದುರಾದನು? ಮೈತ್ರೇಯರು ಹೇಳಿದರು-ಭಕ್ತ ವಿದುರ ನಿನ್ನ ಪ್ರಶ್ನೆಯು ಸುಂದರವಾದುದು-ಸಮೀಚೀನವಾದುದು. ನೀನು ಶ್ರೀಹರಿಯ ಅವತಾರದ ವಿಚಾರವಾಗಿಯೆ ಕೇಳುತ್ತಿರುವೆ. ಶ್ರೀಹರಿಕಥಾಶ್ರವಣವು ಮನುಷ್ಯರ ಮೃತ್ಯುಪಾಶವನ್ನೇ ಛೇದಿಸುವುದು. ನೋಡು-ಉತ್ತಾನಪಾದರಾಯನ ಪುತ್ರನಾದಧ್ರುವನು, ಅತ್ಯಂತ ಬಾಲ್ಯದಲ್ಲಿಯೇ, ನಾರದರಿಂದ ಉಪದಿಷ್ಟವಾದ ಹರಿಕಥಾ ಪ್ರಭಾವದಿಂದ ಮೃತ್ಯುವಿನ ತಲೆಯ ಮೇಲೆ ಕಾಲಿಟ್ಟುಕೊಂಡು ಪರಮ ಪದದಲ್ಲಿ ಪ್ರತಿಷ್ಠಿತನಾಗಿದ್ದನು. ಪೂರ್ವಕಾಲದಲಿ ಬ್ರಹ್ಮನನ್ನು ದೇವತೆಗಳು ಹಿರಣ್ಯಾಕ್ಷನ ಯುಧ್ಧದ ವಿಚಾರದಲ್ಲಿ ಪ್ರಶ್ನಿಸಿದ್ದರು. ಬ್ರಹ್ಮನು ಅವರಿಗೆ ಈ ಇತಿಹಾಸವನ್ನು ಹೇಳಿದ ಪ್ರಕಾರ, ನಾನೂ ನಿನಗೆ ತಿಳಿಸುತ್ತೇನೆ. ನೋಡಿ-ಇತಿಹಾಸವೆಂದರೆ ಘಟನೆ. ಇತಿ-ಹೀಗೆ ಹ-ಖಂಡಿತವಾಗಿಯು, ಆಸ-ನಡೆದಿದ್ದಿತು. ಇದು ನಿಶ್ಚಯವಾಗಿಯೂ ನಡೆದ ಘಟನೆಯಾಗಿದ್ದಿತು. ಮಹಾತ್ಮ ವಿರಕ್ತರು ಇತಿಹಾಸ ಶಬ್ದಕ್ಕೆ ಬೇರೆ ವಿಧದ ಅರ್ಥವನ್ನೇ ಮಾಡುತ್ತಾರೆ. ಇತಿ ಎಂದರೆ ಸಮಾಪ್ತಿ, ಇತಿ ಶ್ರೀಮದ್ಭಗವದ್ಗೀತಾಸು ಎಂದು ಬರುತ್ತದಲ್ಲ-ಇತಿ ಎನ್ನುವುದು ಮೃತ್ಯುಬೋಧಕ ಶಬ್ದವು. ಹಾಸ ಎಂದರೆ ನಗು. ಅಂದರೆ ಮೃತ್ಯುವನ್ನೂ ಜಗತ್ತನ್ನೂ ನಗೆಗೇಡುಮಾಡಿದೆ. ಇಲ್ಲಿರುವುದು ಕಾಲಾತೀತ ಭಗವಂತನ ಇತಿಹಾಸವು. ಇಲ್ಲಿ ಹಿಂದಿನ ಕಲ್ಪದ ಕಥೆಯನ್ನು ತಂದು ಜೋಡಿಸಿದ್ದಾರೆ. ಭೂಮಿಯೇ ಇಲ್ಲದಿರುವಾಗ ಹಿರಣ್ಯಾಕ್ಷನೆಲ್ಲಿಂದ ಬಂದನು? ಹಿಂದಿನ ಕಲ್ಪದಲ್ಲಿಯೇ ಹಿರಣ್ಯಾಕ್ಷ ಹಿರಣ್ಯಕಶಿಪುಗಳು ಹುಟ್ಟಿದ್ದರು. ಪ್ರಳಯದಲ್ಲಿಯೂ ಅವರು ಮರಣವನ್ನು ಹೊಂದಿರಲಿಲ್ಲ. ಏಕೆಂದರೆ ಅವರು ಭಗವದಾರಾಧನೆಯಿಂದ ಪುಷ್ಟರಾಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ದಕ್ಷ ಪುತ್ರಿಯಾದ ದಿತಿಯು ಒಂದು ದಿವಸ ಪುತ್ರ ಪ್ರಾಪ್ತೀಚ್ಛೆಯಿಂದ ಕಾತುರಳಾಗಿ ಸಾಯಂಕಾಲದ ಸಮಯದಲ್ಲಿ ತನ್ನ ಪತಿ ಕಶ್ಯಪ ಬ್ರಹ್ಮರನ್ನು ಪ್ರಾರ್ಥಿಸಿದಳು. ನೋಡಿ—ಈ ವಿಚಾರಗಳಲ್ಲಿ ದೇಶ ಕಾಲಗಳನ್ನು ಗಮನಿಸಬೇಕು. ಏಕಾದಶೀ - ಪೂರ್ಣಿಮಾ - ಗ್ರಹಣ - ಸಂಧ್ಯಾಕಾಲ - ಪ್ರಾತಃಕಾಲಗಳಲ್ಲಿ ಸಂಯಮದಿಂದಿರಬೇಕು. ಇಲ್ಲದಿದ್ದರೆ ಅಸತ್ ಸಂತಾನವಾಗುವುದು. ಆ ಸಂತಾನದಿಂದ ಧರ್ಮ ಶಾಸ್ತ್ರ ಮರ್ಯಾದೆಗಳ ರಕ್ಷಣೆಯಾಗುವುದಿಲ್ಲ. ದಿತಿಯು ಧರ್ಮತಃ ಅಲ್ಲ, ಕಾಮತಃ ಸಂತಾನವನ್ನು ಬಯಸಿದ್ದಳು. ಕಶ್ಯಪರು ಅಗ್ನ್ಯಾಗಾರದಲ್ಲಿ ಯಜ್ಞೇಶ್ವರನನ್ನು ಆರಾಧಿಸುತ್ತಾ ಧ್ಯಾನಸ್ಥರಾಗಿದ್ದರು. ದಿತಿಯು ಅವರನ್ನು ಪ್ರಾರ್ಥಿಸಿದಳು.

ಏಷಮಾಂ ತ್ವತ್ಕೃತೇ ವಿದ್ವನ್ 'ಕಾಮ ಆತ್ತಶರಾಸನಃ
ದುನೋತಿದೀನಾಂ ವಿಕ್ರಮ್ಯ, ರಂಭಾಮಿವ ಮತಂಗಜಃ

ಭಗವನ್—ನಾನು ಪ್ರಬಲವಾಗಿ ಕಾಮ ಪೀಡಿತಳಾಗಿದ್ದೇನೆ. ಜೊತೆಗೆ ಸವತಿಯರ ಪುತ್ರ ಸುಖ ಸಂವೃದ್ಧಿಯಿಂದ ನನ್ನ ಹೃದಯವು ಬೆಂದುಹೋಗುತ್ತಿದೆ. ನಿನ್ನಂತಹ ಪತಿಯಿಂದ ಪುತ್ರವತಿಯಾದವರು ನಿಜವಾಗಿಯೂ ಭಾಗ್ಯಶಾಲಿಯರು. ಅವರು ಸೃಷ್ಟಿಯಲ್ಲಿ ಸುಯಶೋಭಾಗಿಗಳಾಗುತ್ತಾರೆ. ನಮ್ಮ ತಂದೆಯಾದ ದಕ್ಷ ಪ್ರಜಾಪತಿಗೆ ತನ್ನ ಪುತ್ರಿಯರ ಮೇಲೆ ಅತ್ಯಂತ ಸ್ನೇಹವಿದ್ದಿತು. ಆವನು ನಮಗಳನ್ನು ಕೇಳಿದನು—**ಕಂವೃಣೀತ ವರಂ ವತ್ಸಾಃ** ನೀವುಗಳು ಯಾರನ್ನು ಪತಿಯನ್ನಾಗಿ ವರಿಸುವಿರಿ? ನಮಗಳ ಅಭಿಪ್ರಾಯವನ್ನು ತಿಳಿದ ನಮ್ಮ ತಂದೆಯು ತನ್ನ ಹದಿಮೂರು ಜನ ಪುತ್ರಿಯರನ್ನೂ ನಿಮಗೆ ವಿವಾಹ ಮಾಡಿಕೊಟ್ಟನು. ಮಂಗಳಾಂಗ-ಕಮಲನಯನ-ನನ್ನ ಬಯಕೆಯನ್ನು ಪೂರ್ಣಗೊಳಿಸು, ಯಾವಾಗಲೂ ಮಹಾಪುರುಷರು ದೀನರ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

ಹೀಗೆ ದಿತಿಯು ಅತ್ಯಂತದೈನ್ಯದಿಂದ ಪತಿ ಕಶ್ಯಪರನ್ನು ಪ್ರಾರ್ಥಿಸಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ಹೇಳಿದರು—ಏಷ ತೇಽಹಂವಿಧಾಸ್ಯಾಮಿ, ಪ್ರಿಯಂ ಭೀರು ಯದಿಚ್ಛಸಿ. ದೇವಿ ನಿನ್ನ ಇಚ್ಛೆಯನ್ನು ಅಗತ್ಯವಾಗಿ ಪೂರೈಸುತ್ತೇನೆ. ಧರ್ಮಾರ್ಥಕಾಮಗಳ ಸಿದ್ಧಿದಾತ್ರಿಯಾದ ಪತ್ನಿಯ ಇಷ್ಟವನ್ನು ಯಾರು ತಾನೇ ಪೂರ್ಣಗೊಳಿಸಲಾರರು? ಹೇಗೆ ಹಡಗಿನಲ್ಲಿ ಕುಳಿತವರು ಸುಖವಾಗಿ ಸಮುದ್ರವನ್ನು ದಾಟುವರೊ ಹಾಗೆಯೆ ಗೃಹಸ್ಥಾಶ್ರಮಿಗಳು, ಪತ್ನಿಯ ಆಶ್ರಯದಿಂದ ಆಶ್ರಮಾಂತರದವರನ್ನೂ ರಕ್ಷಿಸಿ ತಾವೂ ಸಂಸಾರದಿಂದ ಪಾರಾಗುತ್ತಾರೆ.

ಮಾನಿನಿ ಪುರುಷಾರ್ಥ ತ್ರಯಗಳನ್ನು ಅಪೇಕ್ಷಿಸುವ ಪುರುಷರ ಅರ್ಧ ದೇಹವು "ಸ್ತ್ರೀ"ಯೆಂದು ಹೇಳುತ್ತಾರೆ. ಪುರುಷರು ಅವಳಮೇಲೆ ಗಾರ್ಹಸ್ಥ್ಯ ಭಾರವನ್ನಿಟ್ಟು ಸ್ವಚ್ಛಂದವಾಗಿ ತಿರುಗುತ್ತಾರೆ. ಅನ್ಯಾ ಶ್ರಮಿಗಳಿಗೆ ಇಂದ್ರಿಯರೂಪೀ ಶತ್ರುಗಳನ್ನು ಗೆಲ್ಲಲು ಮಹಾಕಷ್ಟವಾಗುವುದು ಗೃಹಸ್ಥ ನಾದರೊ ಪತ್ನಿಯ ಆಶ್ರಯದಿಂದ ಇಂದ್ರಿಯರೂಪೀ ಶತ್ರುಗಳನ್ನು ಜಯಿಸು ತ್ತಾನೆ. ಗೃಹೇಶ್ವರಿ—ನವಯಂ ಪ್ರಭವಸ್ತಾಂ ಶ್ವಾಮುನು ಕರ್ತುಂ ಗೃಹೇಷ್ವರಿ. ಅಪ್ಯಾಯುಷೋವಾ ಕಾತ್ಸ್ನೇನ ಯೇಚಾನ್ಯೇ ಗುಣ ಗೃಧ್ನವಃ, ನಿನ್ನಂತಹ ಭಾರ್ಯೆಯ ಉಪಕಾರಕ್ಕೆ ಪ್ರತಿಯಾಗಿ ಯಾವ ಪುರುಷನು ತಾನೇ ಪ್ರತ್ಯುಪಕಾರವನ್ನು ಮಾಡಿ ತೀರಿಸಲಾದೀತು? ನೀನು ಕೇಳುವ ಸಂತಾನಪ್ರಾಪ್ತೀಚ್ಛೆಯನ್ನು ನಾನು ಪೂರ್ಣಗೊಳಿಸುತ್ತೇನೆ. ಆದರೆ ಕೇವಲ ಒಂದು ಮುಹೂರ್ತ ಮಾತ್ರ ತಡೆ. ಜನರು ನನ್ನನ್ನು ಅಪಹಾಸ್ಯ ಮಾಡದಿರಲಿ, ಇದು ಭಯಂಕರ ಸಮಯ. ಘೋರರೂಪೀ ರಾಕ್ಷಸರು ಸಂಚರಿಸುತ್ತಾರೆ. ಭಗವಾನ್ ಭೂತನಾಥನ ಭೂತಪ್ರೇತಾದಿ ಗಣಗಳು ಸುತ್ತುತ್ತಿರುತ್ತಾರೆ. ಸಾಧ್ವಿ-ಈ ವೇಳೆಯಲ್ಲಿ ಭಗವಾನ್ ಭೂತ ನಾಥನು ಪರಿವಾರ ಸಮೇತ ವೃಷಭಾರೂಢನಾಗಿ ಸಂಚರಿಸುತ್ತಿರುತ್ತಾನೆ. ನೋಡು-

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ಮಶಾನ ಚಕ್ರಾನಿಲಧೂಳಿ ಧೂಮ್ರ
ವಿಕೀರ್ಣ ವಿದ್ಯೋತ ಜಟಾಕಲಾಪಃ
ಭಸ್ಮಾವ ಗುಂಠಾಮಲ ರುಕ್ಮದೇಹೋ
ದೇವಸ್ತ್ರಿಭಿಃ ಪಶ್ಯತಿ ದೇವರಸ್ತೇ

ಶಂಕರನ ಜಟಾಜೂಟಗಳು ಸ್ಮಶಾನ ಭೂಮಿಯಿಂದ ಎದ್ದ ಧೂಳಿಯಿಂದ ಧೂಸರಿತವಾಗಿ ಪ್ರಕಾಶಮಾನವಾಗಿವೆ. ಅವನ ಸುವರ್ಣಮಯಶುಭ್ರ ದೇಹವು ಭಸ್ಮಾವಲೇಪಿತವಾಗಿದೆ. ಸೂರ್ಯ ಚಂದ್ರ ಅಗ್ನಿರೂಪ ತ್ರಿನೇತ್ರಗಳಿಂದ ನಿನ್ನ ದೇವರನಾದ ಶಂಕರನು ಎಲ್ಲರನ್ನೂ ನೋಡುತ್ತಿರುತ್ತಾನೆ. ಅವನಿಗೆ ಪ್ರಪಂಚದಲ್ಲಿ ತನ್ನವರು, ಪರಕೀಯರು ಎನ್ನುವ ಭೇದಭಾವವಿಲ್ಲವು. ಅವನಿಗೆ ಆದರ ಪಾತ್ರರಾದವರೂ ಇಲ್ಲ. ನಿಂದಾಪಾತ್ರರಾದವರೂ ಇಲ್ಲ. ನಾವುಗಳು ತಪಸ್ಸುಮಾಡಿ ಅವನಿಂದ ಹೊರಬಂದಿರುವ ಮಾಯೆಯನ್ನೇ ಗ್ರಹಿಸಲು ಇಷ್ಟಪಡುತ್ತೇವೆ.

ವಿವೇಕಿಗಳು ಅವಿದ್ಯಾ ಆವರಣ ಭಂಗಕ್ಕಾಗಿ ಅವನ ನಿರ್ಮಲ ಚರಿತ್ರೆಯನ್ನು ಗಾನ ಮಾಡುತ್ತಾರೆ. ಅವನಿಂದ ಹೆಚ್ಚು ಪ್ರಭಾವಶಾಲಿಯಿರಲಿ, ಅವನಷ್ಟೇ ಪ್ರಭಾವಯುತನಾದ ಮತ್ತೊಬ್ಬ ದೇವನಿಲ್ಲವು. ಸತ್ಪುರುಷರು ಮಾತ್ರ ಅವನನ್ನು ತಿಳಿಯಲು ಸಮರ್ಥರಾಗುತ್ತಾರೆ. ಇಂತಹದೇವೋತ್ತಮನು ಪಿಶಾಚಿಗಳಂತೆ ವರ್ತಿಸುತ್ತಾನೆ. ಈ ನರದೇಹವಾದರೋ ನಾಯಿಗಳಿಗೆ ಆಹಾರವಾಗಲು ಯೋಗ್ಯವಾದುದು. ಅವಿವೇಕಿಗಳು ಈದೇಹವನ್ನು ಸ್ರಕ್ ಚಂದನಾದಿಗಳಿಂದ ಅಲಂಕರಿಸುತ್ತಾರೆ. ಇಂತಹ ಅಜ್ಞಾನಿಗಳು ಆತ್ಮಾರಾಮನಾದ ಶಂಕರನ ಆಚರಣೆಯನ್ನು ನೋಡಿ ಹಾಸ್ಯಮಾಡುತ್ತಾರೆ. ಬರೀನಾವುಗಳೇ ಅಲ್ಲ, ಬ್ರಹ್ಮಾದಿಲೋಕಪಾಲಕರೆಲ್ಲರೂ ಅವನು ನಿರ್ಮಿಸಿರುವ ಧರ್ಮ ಮರ್ಯಾದೆಯನ್ನು ಪಾಲಿಸುತ್ತಾರೆ. ಶಂಕರನು ವಿಶ್ವದ ಅಧಿಷ್ಠಾನ ಭೂತನು. ಮಾಯೆಯೂ ಅವನ ಆಜ್ಞಾನುವರ್ತಿಯಾಗಿರುತ್ತದೆ. ಆ ಪ್ರಭುವಿನ ಲೀಲೆಯನ್ನು ಯಾರೂ ಅರ್ಥಮಾಡಿ ಕೊಳ್ಳಲಾರರು ಹೀಗೆ ಕಶ್ಯಪರು ಬೋಧಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದರೂ ದಿತಿಯು ಒಪ್ಪಲಿಲ್ಲ. ಕಾಮಾತುರತೆಯಿಂದ ವಸ್ತ್ರವನ್ನು ಹಿಡಿದೆಳೆದಳು. ಕಶ್ಯಪರು ಈ ಕೃತ್ಯದಿಂದ ಬೇಸರ ಗೊಂಡರೂ ಪತ್ನಿಯ ಹಟಮಾರಿತನಕ್ಕೆ ಮಾರು ಹೋಗಿ, ದೈವಲೀಲೆಯನ್ನು ಸ್ಮರಿಸುತ್ತಾ ಅವಳೊಡನೆ ಏಕಾಂತಕ್ಕೆ ತೆರಳಿದರು. ನಂತರ ಸ್ನಾನ-ಶುದ್ಧಾಚಮನಗಳನ್ನು ನಡೆಸಿ ಬ್ರಹ್ಮಧ್ಯಾನದಲ್ಲಿ ರತರಾದರು. ಈಗ ದಿತಿಗೂ ಯೋಚನೆಯಾಯಿತು ಕುತ್ಸಿತಕಾರ್ಯವು ಅವಳಿಂದ ನಡೆಯಲ್ಪಟ್ಟಿತ್ತು.

ಪತಿಯ ಮುಂದೆ ಲಜ್ಜಾವನತ ಮುಖಿಯಾಗಿ ನಿಂತು ಕೊಂಡು ಹೇಳಿದಳು- ಭಗವನ್-ನಾನು ರುದ್ರದೇವರಿಗೆ ಅಪರಾಧವನ್ನೆಸಗಿದ್ದೇನೆ. ಅವನು ನನ್ನನ್ನು ದಂಡಿಸದಿರಲಿ, ಹಾಗೂ ನನ್ನ ಗರ್ಭವು ನಷ್ಟವಾಗದಿರಲಿ, ಆ ಭಕ್ತವಾಂಛಾ ಕಲ್ಪತರುವಾದ ರುದ್ರದೇವರಿಗೆ ನನ್ನ ಅನಂತ ನಮಸ್ಕಾರಗಳು. ಅವನು ಶಿವನು, ಮಂಗಳ ಸ್ವರೂಪನು, ಸತ್ಪುರುಷರನ್ನು ಸರ್ವ ರೂಪದಿಂದಲೂ ರಕ್ಷಿಸುವವನು. ದುಷ್ಟರ ವಿಷಯದಲ್ಲಿ ಉಗ್ರಕೋಪಿಯು ದಂಡಪಾಣಿಯು ಕಟುಕರು ಸಹ ಸ್ತ್ರೀಯರ ಮೇಲೆ ದಯೆತೋರುತ್ತಾರೆ. ಶಿವನಾದರೋ ಸತೀ ಪತಿಯು, ಕೃಪಾಶಾಲಿ ಅವನು ನನ್ನನ್ನು ಶಪಿಸದಿರಲಿ. ಕಶ್ಯಪರು ಸಂಧ್ಯಾದಿ ಕರ್ಮಗಳಿಂದ ನಿವೃತ್ತರಾಗಿ ದಿತಿಯನ್ನು ನೋಡಿದರು, ನಡುಗುತ್ತಿದ್ದಾಳೆ. ಸಂತಾನದ ಲೌಕಿಕ-ಪಾರಲೌಕಿಕ ಉನ್ನತಿಗಾಗಿ ಪ್ರಾರ್ಥಿಸುತ್ತಿದ್ದಾಳೆ ಕಶ್ಯಪರು ಹೇಳಿದರು ದೇವಿ-ನಿನ್ನ ಚಿತ್ತವು ಕಾಮವಾಸನಾ ಕಲುಷಿತವಾಗಿತ್ತು. ಸಮಯವೂ ಶುಭಕರವಾಗಿರಲಿಲ್ಲ. ನನ್ನ ಬೋಧೆಯನ್ನೂ ತಿರಸ್ಕರಿಸಿದೆ. ದೇವತೆಗಳಿಗೂ ಅಪಮಾನವೆಸಗಿದೆ. ಭವಿಷ್ಯತಸ್ತವಾ ಭದ್ರಾವಭದ್ರೇ ಜಾತರಾಧಮೌ । ಲೋಕಾನ್‌ಸಪಾಲಾಸ್ತ್ರೀಶ್ಚಂಡಿ ಮು ಹುರಾಕ್ರಂದ ಯಿಷ್ಯತಃ ॥ ಅಮಂಗಳ ಸ್ವರೂಪಿಣಿ-ಚಂಡಿಕೇ, ನಿನ್ನ ಗರ್ಭದಿಂದ ಅಮಂಗಳಮಯರಾದ ಅಧರ್ಮ ಪುತ್ರರ ಜನನವಾಗುತ್ತದೆ. ಅವರುಗಳ ಅತ್ಯಾಚಾರದಿಂದ ಸಕಲ ಲೋಕಗಳೂ, ಲೋಕಪಾಲಕರೂ ಸಹ ಅಳುತ್ತಾರೆ. ಅವರಿಂದ ನಿರಪರಾಧಿಗಳೂ,ದೀನರೂ ಮರಣಕ್ಕೆ ತುತ್ತಾಗುತ್ತಾರೆ. ಸ್ತ್ರೀಯರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಅತ್ಯಾಚಾರಕ್ಕೆ ಬಲಿಯಾಗುತ್ತಾರೆ. ಮಹಾತ್ಮರು ಕ್ಷುಭ್ಧಗೊಳ್ಳುತ್ತಾರೆ. ಆಗ ಸಕಲಲೋಕಸಂರಕ್ಷಕನಾದ ಶ್ರೀಹರಿಯು ಅವತರಿಸಿ ಇಂದ್ರನು ಪರ್ವತಗಳನ್ನು ಮರ್ದಿಸಿದಂತೆ ಅವರನ್ನು ನಿಗ್ರಹಿಸುತ್ತಾನೆ.

ದಿತಿಯು ಹೇಳಿದಳು - ಸ್ವಾಮಿನ್ - ನನ್ನ ಮಕ್ಕಳಿಗೆ ಚಕ್ರಪಾಣಿಯಿಂದಮರಣವೊದಗುವುದು ಸಂತೋಷಕರವಾದ ವಿಚಾರವು. ಸದ್ಯ ಕುಪಿತ ಬ್ರಾಹ್ಮಣನ ಬ್ರಹ್ಮದಂಡಕ್ಕೆ ಒಳಗಾಗದಿದ್ದರೆ ಸಾಕು.

ನ ಬ್ರಹ್ಮ ದಂಡದಗ್ಧಸ್ಯ, ನಭೂತಭಯದಸ್ಯಚ.
ನಾರಕಾಶ್ಚಾನುಗೃಹ್ಣಂತಿ, ಯಾಂ ಯಾಂ ಯೋನಿಮ ಸೌಗತಃ

ಬ್ರಹ್ಮಶಾಪದಗ್ಧನಾದವನನ್ನು, ಪ್ರಾಣಿಗಳಿಗೆ ಭಯದಾಯಕನಾದವನನ್ನು ಯಾವ ನಾರಕೀ ಜೀವಿಯೂ ಅನುಗ್ರಹಿಸುವುದಿಲ್ಲ. ಕಶ್ಯಪರು ಹೇಳಿದರು- ದೇವಿ - ನೀನು ನಿನ್ನ ಕೃತ್ಯಕ್ಕೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸುತ್ತಿರುವೆ. ಯುಕ್ತಾಯುಕ್ತತೆಯನ್ನು ತಿಳಿದಿರುವೆ. ವಿಷ್ಣು ಶಿವರ ಮೇಲೆ ಹಾಗೂ ನನ್ನ ಮೇಲೆ ನಿನಗೆ ತುಂಬ ಆದರ ಬುದ್ಧಿಯಿದೆ.

ನಿನ್ನ ನಾಲ್ಕು ಜನ ಪೌತ್ರರಲ್ಲಿ ಒಬ್ಬನು ಮಹಾ ಭಕ್ತ ಸಂತನಾಗುವನು ಸಾಧು ಸತ್ಪುರುಷರು ಅವನನ್ನು ಗೌರವಿಸುತ್ತಾರೆ. ಭಕ್ತ ಮಹಾಶಯರು ಅವನ ಯಶೋಗಾಥೆಗಳನ್ನು ಗಾನಮಾಡುತ್ತಾರೆ. ಅವನಂತಾಗಲು ಸಾಧು ಸತ್ಪುರುಷರು ಅಂತಃಕರಣ ಶುದ್ಧಿಯನ್ನು ಬಯಸುತ್ತಾರೆ. ಚಿನ್ನವು ಪುಟಕ್ಕೆ ಹಾಕಿದರೇನೇ ಸ್ವಚ್ಛವಾಗುವುದು. ಯಾರ ಕೃಪೆಯಿಂದ ಈ ಜಗತ್ತು ಆನಂದಿತವಾಗುವುದೋ ಅವನ ಸ್ವರೂಪವೇ ಈ ಜಗತ್ತು. ಆ ಸ್ವಯಂ ಪ್ರಕಾಶ ಭಗವಂತನು ಭಕ್ತಿಯಿಂದ ಸಂತುಷ್ಟನಾಗುತ್ತಾನೆ. ಆ ಬಾಲಕನು ಭಾಗವತೋತ್ತಮನು.ಉದಾರ ಹೃದಯಿ. ಪ್ರಭಾವಶಾಲಿ. ಮಹಾ ಪುರುಷರಿಂದಲೂ ಪೂಜ್ಯನು. ಅನನ್ಯ ಭಕ್ತಿ ಭಾವದಿಂದ ಭಗವಂತನನ್ನು ಹೃದಯದಲ್ಲಿ ಧರಿಸಿ ದೇಹಾಭಿಮಾನ ತ್ಯಾಗಿಯಾಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ-ಕಶ್ಯಪರಿಗೆ ಪೌತ್ರನನ್ನು ಎಷ್ಟುಹೊಗಳಿದರೂ ಸಾಲದು. ಪ್ರಹ್ಲಾದನ ಸ್ಮರಣೆಯು ಬರುವುದೇ ತಡ ಅವರ ಸದ್ಭಾವನೆಗಳು ಕೆರಳಿಬಿಡುತ್ತವೆ. ಅವನ ಗುಣಗಳನ್ನು ಎಷ್ಟುವರ್ಣಿಸಿದರೂ ಸಾಲದು.

ಅಲಂಪಟಃ ಶೀಲಧರೋ ಗುಣಾಢ್ಯ
ಹೃಷ್ಟಃ ಪರರ್ಧ್ಯಾವ್ಯಥಿತೋ ದುಃಖಿತೇಷು.
ಅಭೂತಶತ್ರುಃ ಜಗತಃ ಶೋಕಹರ್ತಾ
ನೈದಾಘಿಕಂ ತಾಪಮಿವೋಡುರಾಜಃ

ಅವನು ವಿಷಯಗಳಲ್ಲಿ ಅನಾಸಕ್ತನು, ಶೀಲ ವಂತನು, ಸದ್ಗುಣಭಂಡಾರಿಯು. ಮತ್ತೊಬ್ಬರ ಸುಖ ದುಃಖಗಳಲ್ಲಿಯೇ ಸುಖ ದುಃಖವನ್ನು ಕಾಣುವವನು. ಸದಾಹೃಷ್ಟನು. ಅವನು ಅಜಾತಶತ್ರುವು. ಚಂದ್ರನಿಂದ ಗ್ರೀಷ್ಮತಾಪವು ನಾಶವಾಗುವಂತೆ ಅವನಿಂದ ಸಾಂಸಾರಿಕ ಸುಖದುಃಖಗಳು ನಾಶವಾಗುವುವು. ಜಗತ್ತಿನ ಒಳಗೂ, ಹೊರಗೂ ಪ್ರಕಾಶಕನಾಗಿರುವ ಭಕ್ತರ ಇಚ್ಛಾನುಸಾರವಾಗಿ, ಆಗಾಗ್ಗೆ ಅವತಾರಗಳನ್ನೆತ್ತುವ, ಲಕ್ಷ್ಮಿಯ ಮನೋಹರ ಮೂರ್ತಿಗೂ ಶೋಭೆಯನ್ನು ಕೊಡುವ- ಅವರನು ಪವಿತ್ರ ಕಮಲ ನಯನ ಶ್ರೀಹರಿಯು ನಿನ್ನ ಪೌತ್ರನಿಗೆ ಪ್ರತ್ಯಕ್ಷದರ್ಶನವನ್ನು ಕೊಡುತ್ತಾನೆ. ಈ ವಿಚಾರಗಳನ್ನು ಕೇಳಿದ ದಿತಿಗೆ ಪರಮಾನಂದವಾಯಿತು.

ಓಂ-ತತ್ಸದಿತ್ಯೇಽಹಂ ತೃತೀಯಸ್ಕಂಧೇ ಚತುರ್ದಶೋಽಧ್ಯಾಯಃ-||

ಶ್ರೀಮದ್ಭಾಗವತ ದರ್ಶನ, ಸ್ಕಂಧ ೩-ಅ-೧೫
"ಜಯವಿಜಯರಿಗೆ ಸನಕಾದಿಗಳಿಂದ ಶಾಪ"

ಮೈತ್ರೇಯರು ವಿದುರನಿಗೆ ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ.ದೇವತೆಗಳಿಗೆ ತನ್ನ ಮಕ್ಕಳಿಂದ ಕಷ್ಟವು ಒದಗಬಹುದೆಂಬ ಶಂಕೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ದಿತಿಗೆ ಇದ್ದೇ ಇದ್ದಿತು. ಮತ್ತೊಬ್ಬರ ತೇಜಸ್ಸನ್ನು ಹರಣಮಾಡಲು ಸಮರ್ಥ ವಾದ ಕಶ್ಯಪರ ತೇಜಸ್ಸನ್ನು ದಿತಿಯು ಒಂದು ನೂರು ವರ್ಷಗಳ ಕಾಲ ತನ್ನ ಉದರದಲ್ಲಿಯೆ ಇಟ್ಟುಕೊಂಡು ರಕ್ಷಿಸಿದಳು.

ಗರ್ಭಸ್ಥ ಪಿಂಡದ ತೇಜಸ್ಸಿನಿಂದಲೇ ಸೂರ್ಯಾದಿಗಳ ತೇಜಸ್ಸೂ ಕ್ಷೀಣವಾಗ ತೊಡಗಿತು. ಇಂದ್ರಾದಿ ಲೋಕಪಾಲಕರೂ ತೇಜೋಹೀನ ರಾದರು. ಆಗ ಅವರುಗಳು ಬ್ರಹ್ಮನಲ್ಲಿಗೆ ಹೋಗಿ ಜಗತ್ತೆಲ್ಲವೂ ಅಂಧಕಾರ ಮಯವಾಗುತ್ತಿರುವುದನ್ನು ತಿಳಿಸಿದರು. ಭಗವನ್ ಯಾವಕಾಲದಲ್ಲಿಯೂ ನಿನ್ನ ಜ್ಞಾನಶಕ್ತಿಯು ಕುಂಠಿತವಾಗುವುದಿಲ್ಲ. ನಿನಗೆ ತಿಳಿಯದಿರುವುದು ಒಂದೂ ಇಲ್ಲವು. ಜಗತ್ತು ಅಂಧಕಾರಾವೃತ ವಾಗುತ್ತಿರುವುದನ್ನು ನೋಡುತ್ತಿರುವೆ. ನಾವೇನೊ ಇದರಿಂದ ಬಹಳ ಭಯ ಭೀತರಾಗಿದ್ದೇವೆ. ದೇವಾದಿ ದೇವ-ನೀನು ಜಗತ್ತಿನ ಸೃಷ್ಟಿಕರ್ತನು. ಹಾಗೂ ಸರ್ವಲೋಕ ಪಾಲಕರುಗಳ ಮುಕುಟ ಮಣಿಯಾಗಿರುವೆ. ನೀನು ಸರ್ವಜೀವಿಗಳ ಭಾವವಿದನು. ನೀನು ಬಲ ವಿಜ್ಞಾನ ಸಂಪನ್ನನು. ನೀನು ಮಾಯೆಯಿಂದ ಚತುರ್ಮುಖ ಸ್ವರೂಪ ವನ್ನೂ, ರಜೋಗುಣವನ್ನೂ ಸ್ವೀಕರಿಸಿರುವೆ, ನಿನ್ನ ಉತ್ಪತ್ತಿಗೆ ಕಾರಣ ವೇನೆಂಬುವುದನ್ನು ಯಾರೂ ತಿಳಿಯಲಾರರು. ನಿನಗೆ ನಮಗಳ ಅನಂತ ನಮಸ್ಕಾರಗಳು. ನಿನ್ನಲ್ಲಿ ಸರ್ವಬ್ರಹ್ಮಾಂಡಗಳೂ ಇವೆ. ಈ ಪರಿದೃಶ್ಯ ಮಾನಕಾರ್ಯಕಾರಣರೂಪವಾದ ಜಗತ್ತೆಲ್ಲವೂ ನಿನ್ನ ಶರೀರವೆ ಆಗಿದೆ. ಆದರೂ ನೀನು ಇದರಿಂದ ಪೃಥಕ್ಕಾಗಿರುವೆ. ಸರ್ವಜೀವೋತ್ಪತ್ತಿಸ್ಥಾನನಾದ ನಿನ್ನನ್ನು ಅನನ್ಯ ಭಾವದಿಂದ ಧ್ಯಾನಿಸುವವರು, ನಿಜವಾಗಿಯೂ ಸಿದ್ಧ ಯೋಗಿಗಳು ಅವರು ಯಾವುದರಿಂದಲೂ ಚ್ಯುತರಾಗುವುದಿಲ್ಲ. ನಿನ್ನ -ಕೃಪಾಕಟಾಕ್ಷದಿಂದ ಕೃತ ಕೃತ್ಯರಾಗುವರು. ಅವರು ಪ್ರಾಣ-ಮನೋ ಬುಧ್ಧೀಂದ್ರಿಯಾದಿಗಳನ್ನು ಗೆದ್ದವರಾದುದರಿಂದ ಅವರ ಯೋಗವೂ, ಪರಿ ಪಕ್ವಾವಸ್ಥೆಯನ್ನು ಮುಟ್ಟುವುದು. ಹಗ್ಗಗಳಿಂದ ಬಂಧಿಸಲ್ಪಟ್ಟ ವೃಷಭ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಂತೆ, ವೇದಿವಾಣಿಯಿಂದ ಬಂಧಿಸಲ್ಪಟ್ಟ ಸಕಲ ಪ್ರಜೆಗಳೂ ನಿನ್ನ ಅಧೀನರಾಗಿದ್ದು ಕೊಂಡು, ಕರ್ಮಾನುಷ್ಠಾನವನ್ನು ಮಾಡುತ್ತಾ ನಿನಗೆ ಬಲಿಯನ್ನು ಸಮರ್ಪಿಸುತ್ತಾರೆ. ನೀನು ಸರ್ವನಿಯಂತಾ, ಸರ್ವಪ್ರಾಣ ಭೂತನು ನಿನಗೆ ಅನಂತ ನಮಸ್ಕಾರಗಳು. ಭೂಮನ್-ಈಅಂಧಕಾರವನ್ನು ಜಗತ್ತು ವ್ಯಾಪಿಸುತ್ತಿರುವುದರಿಂದ.ದಿನ-ರಾತ್ರಿಯ ವಿಭಾಗವು ಅಸ್ಪಷ್ಟವಾಗಿದೆ. ಲೋಕದಲ್ಲಿ ಕರ್ಮಗಳು ಲುಪ್ತವಾಗುತ್ತಿವೆ. ಇದರಿಂದ ಎಲ್ಲರೂ ದು:ಖಿಗಳಾಗುತ್ತಿದ್ದಾರೆ. ಎಲ್ಲರಿಗೂ ಕಲ್ಯಾಣವಾಗಲಿ, ಶರಣಾಗತರಾದ ನಮ್ಮನ್ನು ಕೃಪಾ ದೃಷ್ಟಿಯಿಂದ ನೋಡು. ಕಟ್ಟಿಗೆಗಳ ಮಧ್ಯದಲ್ಲಿ ಅಗ್ನಿಯು ವರ್ಧಿಸುವಂತೆ, ಕಶ್ಯಪರ ದಿವ್ಯ ತೇಜ ಸ್ಸಂಪನ್ನವಾದ ದಿತಿಯ ಗರ್ಭವು ದಿನ ಕಳೆದಂತೆ ವರ್ಧಿಸುತ್ತಿದೆ. ಅವರ ತೇಜಸ್ಸಿನಿಂದ ದಿಕ್ಕುಗಳು ಅಂಧಕಾರ ಮಯವಾಗುತ್ತಿವೆ.

ಈ ರೀತಿದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಲು ಬ್ರಹ್ಮನು ಮಂದ ಹಾಸವನ್ನು ಬೀರುತ್ತಾ ಮಧುರವಾಣಿಯಿಂದ ದೇವತೆಗಳನ್ನು ಸಂತೋಷ ಪಡಿಸುತ್ತಾ ಹೇಳಿದನು– ದೇವತೆಗಳೇ-ನಿಮ್ಮ ಪೂರ್ವಜರಾದ, ನನ್ನ ಮಾನಸ ಪುತ್ರರಾದ ಸನಕಾದಿಗಳು ಲೋಕಸಂಬಂಧನಲ್ಲಿ ನಿರಾಸಕ್ತರಾಗಿ ಆಕಾಶಮಾರ್ಗದಿಂದ ಎಲ್ಲೆಲ್ಲಿಯೂ ಸಂಚರಿಸುತ್ತಿದ್ದರು. ಒಮ್ಮೆಸಾರಿ ಅವರು ಎಲ್ಲಾ ಲೋಕಗಳ ಮೇಲುಭಾಗದಲ್ಲಿರುವ, ಶುಧ್ಧ ಸತ್ವಮಯವಾದ ವೈಕುಠ ಧಾಮಕ್ಕೆ ಹೋದರು. ಅಲ್ಲಿರುವವರೆಲ್ಲರೂ ವಿಷ್ಣುರೂಪಿಗಳೇ, ಹಾಗೂ ಸರ್ವವಿಧ ಕಾಮನೆಗಳನ್ನೂ ತೊರೆದು ಭಗವಚ್ಚರಣ ಪ್ರಾಪ್ತಿಗಾಗಿ ಧರ್ಮದಿಂದ ಶ್ರೀಹರಿಯನ್ನು ಆರಾಧಿಸುತ್ತಾರೆ. ಅಲ್ಲಿ ವೇದ ವೇದಾಂತ ಪ್ರತಿಪಾದ್ಯನಾದ, ಧರ್ಮಮೂರ್ತಿ ಶ್ರೀ ಆದಿನಾರಾಯಣನು ನಮಗಳೆಲ್ಲರನ್ನೂ ಸುಖಿಗಳನ್ನಾಗಿ ಮಾಡಲು ಶುಧ್ಧಸ್ವರೂಪದಿಂದ ವಿರಾಜಮಾನನಾಗಿದ್ದಾನೆ. ವೈಕುಂಠಲೋಕದಲ್ಲಿ ನೈಶ್ರೇಯಸನಾಮಕ ವನವಿದೆ. ಆ ವನವು ಕೈವಲ್ಯದಂತೆಯೆ ಪರಮ ಶೋಭಾಯಮಾನವಾಗಿದೆ. ಎಲ್ಲಾವಿಧದ ಕಲ್ಪವೃಕ್ಷಗಳಿಂದಲೂ ಪರಿಶೋಭಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿದೆ. ಷಡೃತುಗಳೂ ಸದಾ ಶೋಭಿಸುತ್ತಿರುತ್ತವೆ. ವಿಮಾನ ಚಾರೀ ಗಂಧರ್ವರು ತಮ್ಮ-ತಮ್ಮ ಪ್ರಿಯೆಯರೊಡನೆ ಪ್ರಭುವಿನ ಪವಿತ್ರಲೀಲೆ ಗಳನ್ನು ಗಾನಮಾಡುತ್ತಿರುತ್ತಾರೆ. ಪರಮಾತ್ಮನ ಲೀಲಾಗುಣಗಾನವೆಂದರೆ ಅದರಿಂದ ಸರ್ವಪಾಪರಾಶಿಗಳೂ ಭಸ್ಮವಾಗಿ ಹೋಗುತ್ತವೆ. ಅಲ್ಲಿಯ ಸರೋವರಗಳಲ್ಲಿ ಅರಳಿರುವ ಮಕರಂದ ಪರಿಪೂರ್ಣವಾದ, ವಾಸಂತಿಕ ಮಾಧವಿಲತೆಯ ಸುಮಧುರ ಗಂಧವು ಅವರ ಚಿತ್ತವನ್ನಾಕರ್ಷಿಸುತ್ತದೆ. ಆದರೆ ಅದರ ಗಮನವು ಅವರ ಕಡೆ ಬೀಳದೆ ಆಗಂಧವಾಹಿಯಾದ ವಾಯುವನ್ನೇ ದೋಷಿಯನ್ನಾಗಿ ಮಾಡುತ್ತಾರೆ. ಭ್ರಮರ ಸಮೂಹಗಳು ಗುಞುಗುಟ್ಟುತ್ತಾ ಹರಿಕಥಾಗಾನವವನ್ನು ಮಾಡುತ್ತವೆ.

ಆಗ ಅಲ್ಲಿರುವ ಪಾರಿವಾಳಗಳು-ಕೋಗಿಲೆ-ನವಿಲು ಇತ್ಯಾದಿ ಪಕ್ಷಿಗಳ ಕೋಲಾಹಲವೂ ನಿಂತು ಹೋಗುತ್ತದೆ. ಅವುಗಳೂ ಕೀರ್ತನಾನಂದದಲ್ಲಿ ಪ್ರಜ್ಞಾಹೀನಗಳಾಗಿರುವಂತೆ ತೋರುತ್ತವೆ. ಶ್ರೀಹರಿಗೆ ತುಳಸೀಮಾಲೆಯು ಬಹಳ ಇಷ್ಟವಾದುದು ತುಳಸೀಗಂಧವು ಅತ್ಯಂತ ಪ್ರಿಯವಾದದು. ಇದರಿಂದ ಖತಿ ಗೊಂಡ ಮಂದಾರ ಪಾರಿಜಾತಾದಿ ವೃಕ್ಷಗಳು, ತುಳಸಿಯ ತಪೋಭಾಗ್ಯ ವನ್ನೇ ಹೊಗಳುತ್ತವೆ. ಆಲೋಕವು ಮರಕತ- ವೈಡೂರ್ಯ ಸುವರ್ಣಾದಿ ಗಳಿಂದ ನಿರ್ಮಿತವಾದ ವಿಮಾನಗಳಿಂದ ತುಂಬಲ್ಪಟ್ಟಿದೆ. ಇವುಗಳು ಕೇವಲ ಕರ್ಮ ಫಲಗಳಿಂದ ದೊರಕುವವಲ್ಲ. ಕೇವಲ ಶ್ರೀಹರಿಯ ಪಾದ ಪದ್ಮಾರಾಧನೆಯಿಂದ ಮಾತ್ರ ದೊರಕ ತಕ್ಕವು. ಆ ಸುರಸುಂದರಿಯರೂ ಅಲ್ಲಿರುವ ಭಗವಧ್ಭಕ್ತರನ್ನು ಕಾಮಮೋಹಿತರನ್ನಾಗಿ ಮಾಡಲಾರರು. ಶ್ರೀ ಹರಿಯಭವನದಲ್ಲಿ ಸರ್ವರಿಂದಲೂ ಅಪೇಕ್ಷಣೀಯಳಾದ ಲಕ್ಷ್ಮೀದೇವಿಯು ತನ್ನ ಸ್ವಭಾವಸಿಧ್ಧ ಚಾಪಲತೆಯನ್ನು ತೊರೆದು ಸ್ಥಿರಳಾಗಿದ್ದಾಳೆ. ಅವಳು ತನ್ನ ಚರಣ ಕಮಲಗಳ ನೂಪುರಗಳನ್ನು ಧ್ವನಿಸೈಯುತ್ತಾ, ಲೀಲಾಕಮ ಲನ್ನು ತಿರುಗಿಸುತ್ತಾ, ಓಡಾಡುತ್ತಿದ್ದರೆ-ಕನಕಭವನದಸ್ಫಟಿಕ ಮಯಗೋಡೆ ಗಳಲ್ಲಿ ಅವಳ ಛಾಯೆಯು ಬಿದ್ದು ಅವಳಿಗೇಭ್ರಾಂತಿಯುಂಟಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವತೆಗಳೇ-ಲಕ್ಷ್ಮೀದೇವಿಯು ಅಸಂಖ್ಯಾತ ದಾಸಿಯರೊಡನೆ ತನ್ನ ಕ್ರೀಡಾ ವನದಲ್ಲಿ ತುಳಸೀದಳಗಳಿಂದ ಭಗವಂತನನ್ನು ಪೂಜಿಸುತ್ತಾಳೆ. ಆವಾಗ ಅಲ್ಲಿಯ ಜಲಪೂರ್ಣ ಸರೋವರಗಳಲ್ಲಿ ತನ್ನ ಸುಂದರ ಅಳಕಾವಳಿಗಳನ್ನು, ಚಂಪಕನಾಸಿಕಾದಿಂದ ಶೋಭಾಯಮಾನವಾದ ಮುಖಾರವಿಂದವನ್ನು ನೋಡಿ "ಇವುಗಳು ಭಗವಂತನ ಚುಂಬನಕ್ಕೆ ಪಾತ್ರವಾದುವುಗಳು" ಎಂದು ಅವುಗಳ ಸೌಭಾಗ್ಯಕ್ಕೆ ಹಿರಿಹಿರಿ ಹಿಗ್ಗುತ್ತಾಳೆ. ಯಾರು ಭಗವಂತನ ಪಾಪಹಾರಿಣೀ ಲೀಲಾಕಥಾಶ್ರವಣವನ್ನು ಬಿಟ್ಟು, ಬುದ್ಧಿನಾಶಕಗಳಾದ, ಅರ್ಥ ಕಾಮ ಸಂಬಂಧಿನೀ ನಿಂದಿತ ಕಥೆಗಳನ್ನು ಕೇಳುತ್ತಾರೋ ಅಂತಹವರು ವೈಕುಂಠ ಲೋಕಕ್ಕೆ ಹೋಗಲಾರರು.

ಆ ನಿರ್ಭಾಗ್ಯಜನರು ಈಸಾರಹೀನಮಾತುಗಳನ್ನು ಕೇಳಿ, ಪುಣ್ಯಹೀನರಾಗಿ, ಭಗವದಾಶ್ರಯವನ್ನು ಕಳೆದುಕೊಂಡು ನರಕವಾಸಿಗಳಾಗುತ್ತಾರೆ. ಮಾನವ ಜನ್ಮವು ಅತ್ಯಂತ ಶ್ರೇಷ್ಠನಾದುದು. ದೇವತೆಗಳೂಸಹ ಇದನ್ನು ಅಪೇಕ್ಷಿಸು ತ್ತಾರೆ. ಈ ಜನ್ಮದಲ್ಲಿ ತತ್ವಜ್ಞಾನ, ಹಾಗೂ ಧರ್ಮಜ್ಞಾನಗಳ ಪ್ರಾಪ್ತಿ ಯಾಗುತ್ತದೆ. ಇಂತಹ ಶ್ರೇಷ್ಠಜನ್ಮವನ್ನು ಪಡೆದರೂ ಯಾರು ಭಗವದಾರಾಧನೆ ಯಿಂದ ವಿಮುಖರಾಗುತ್ತಾರೋ ಅವರು ಮಾಯಾ ಮೋಹಿತರೆಂದೇ ತಿಳಿಯ ಬೇಕು. ಪರಮ ಭಾಗವತೋತ್ತಮರು ಹೇಗಿರುತ್ತಾರೆಂದರೆ ಸದಾ ದೇವಾಧಿ ದೇವನಾದ ಶ್ರೀಹರಿಯ ಚಿಂತನೆಯಲ್ಲಿರುತ್ತಾರೆ. ಅವರು ಯಮರಾಜನ ದೃಷ್ಟಿಗೆಬೀಳುವುದಿಲ್ಲ. ತಮ್ಮ-ತಮ್ಮಲ್ಲಿ ಭಗವಂತನಗುಣಗಳನ್ನು ವರ್ಣಿಸುತ್ತಾ, ಆನಂದಾಶ್ರುಧಾರೆಗಳನ್ನು ಸುರಿಸುತ್ತಾರೆ. ರೋಮಾಂಚಿತ ರಾಗುತ್ತಾರೆ. ಅವರ ಶೀಲ ಸ್ವಭಾವಾದಿಗಳನ್ನು ದೇವತೆಗಳೂ ಅಪೇಕ್ಷಿಸುತ್ತಾರೆ. ಇಂತಹ ಪರಮ ಧನ್ಯವಂತರು ವೈಕುಂಠದಲ್ಲಿ ಪ್ರವೇಶವನ್ನು ಹೊಂದುತ್ತಾರೆ. ಶ್ರೀ ಹರಿಯ ನಿವಾಸ ಸ್ಥಾನವಾದ, ಸರ್ವಲೋಕನಿವಾಸಿಗಳಿಂದ ವಂದಿಸಲ್ಪಡುವ ಶ್ರೇಷ್ಠದೇವತೆಗಳ ವಿಚಿತ್ರತರ ವಿಮಾನಗಳಿಂದ ವಿಭೂಷಿತವಾದ, ಪರಮ ದಿವ್ಯವಾದ ಆ ಅದ್ಭುತ ವೈಕುಂಠಧಾಮವನ್ನು. ಸನಕಾದಿಗಳು ಸಂದರ್ಶಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅತೀವ ಆನಂದಿತರಾದರು. ಭಗವದ್ದರ್ಶನದ ಲಾಲಸೆಯಿಂದ ದೃಶ್ಯಾಂತರಗಳನ್ನುಪೇಕ್ಷಿಸಿ, ವೈಕುಂಠಧಾಮದ ಆರು ಕಕ್ಷೆಗಳನ್ನು ದಾಟಿ ಏಳನೆಯ ಕಕ್ಷೆಯನ್ನು ತಲಪಿದರು ಆಗಅಲ್ಲಿಗದಾಪಾಣಿಗಳಾದ ಸಮಾನ ವಯಸ್ಕರಾದ ಇಬ್ಬರು ದೇವೋತ್ತಮರು ಕಂಡರು. ಅವರು ಹಾರಕೇಯೂರ ಕಟಕ-ಕಿರೀಟ ಕುಂಡಲಾದಿಗಳಿಂದ ಅಲಕೃತರಾಗಿದ್ದರು. ಅವರ ವಕ್ಷಃ ಸ್ಥಳಗಳು ವನಮಾಲೆಗಳಿಂದ ಪರಿಶೋಭಿಸುತ್ತಿದ್ದುವು, ಮಧುಕರಗಳು ಅವುಗಳ ಮಕರಂದಾಸ್ವಾದನೆಗಾಗಿ ಗುಞಾಗುಟ್ಟುತ್ತಾ ಸುತ್ತುವರೆದಿದ್ದುವು. ಅವರ ಭ್ರುಕುಟಿಗಳು ಬಧ್ಧವಾಗಿದ್ಧುವು. ನಾಸಿಕರಂಧ್ರಗಳೂ, ನೇತ್ರಗಳೂ, ಅರುಣವರ್ಣವಾಗಿದ್ದುವು. ಮುಖವು ಗಂಭೀರವಾಗಿದ್ದಿತು. ದುರಮುರನೆ ಋಷಿಗಳನ್ನು ನೋಡುತ್ತಿದ್ದರು.ಇವರುಗಳಾದರೊ ಅವರನ್ನು ನಿರ್ಲಕ್ಷಿಸಿ ಹಿಂದಿನ ಬಾಗಿಲುಗಳಲ್ಲಿ ನುಗ್ಗಿಬಂದಂತೆ ಈ ಬಾಗಿಲಿನಲ್ಲಿಯೂ ನುಗ್ಗಿದರು.

ಅವರು ಸಮದೃಷ್ಟಿವುಳ್ಳವರು ಅವರ ಸಂಚಾರಕ್ಕೆ ಎಲ್ಲಿಯೂ ಯಾರ ನಿರ್ಬಂಧವೂಇಲ್ಲ. ಆ ಕುಮಾರರು ಮಹಾತತ್ವಜ್ಞರು. ಬ್ರಹ್ಮಸೃಷ್ಟಿಯಲ್ಲಿಯೆ ಅಧಿಕ ವಯಸ್ಸಾದವರಾದರೂ, ಯಾವಾಗಲೂ ಐದುವರ್ಷದ ಹುಡುಗರಂತೆ ತೋರುತ್ತಿದ್ದರು. ದಿಗಂಬರರಾಗಿಯೆ ಇರುತ್ತಿದ್ದರು. ಹೀಗೆ ನಿಃಶ್ಶಂಕರಾಗಿ ಸನಕಾದಿಗಳು ಒಳಕ್ಕೆ ಪ್ರವೇಶಿಸುತ್ತಿರುವುದನ್ನು ಕಂಡು ದ್ವಾರಪಾಲಕರು ಅವರನ್ನು ಹಾಸ್ಯಮಾಡುತ್ತಾ. ಭಗವಂತನ ಶೀಲ ಸ್ವಭಾವಗಳಿಗೆ ವಿರುಧ್ಧವಾಗಿ ದಂಡವನ್ನು ಅಡ್ಡಲಾಗಿ ಹಿಡಿದು ಅವರನ್ನು ತಡೆದರು. ಯದ್ಯಪಿ ಇಂತಹ ವ್ಯವಹಾರಕ್ಕೆ ಅವರು ತಕ್ಕವರಾಗಿರಲಿಲ್ಲ ಸರ್ವದೇವತೆಗಳಿಗೂ ಪೂಜ್ಯರಾದ ಸನಕಾದಿಗಳನ್ನು ಈರೀತಿ ದ್ವಾರಪಾಲಕರು ತಡೆಯೋಣ, ಆರಾಧ್ಯದೇವನ ದರ್ಶನಕ್ಕೆ ಅಡ್ಡಿ ಉಂಟಾದುದರಿಂದ ಅವರ ಕಣ್ಣುಗಳು ಕೆಂಪಾದವು. ಹೇಳಿದರು-ಭಗವದ್ದರ್ಶನಕ್ಕಾಗಿ ಬಂದಿರುವ ನಮ್ಮನ್ನು ತಡೆಯಲು ನೀವಾರು ? ಇಲ್ಲಿರುವವರೆಲ್ಲರೂ ಸಮದರ್ಶಿಗಳು, ನಿಮ್ಮಲ್ಲಿ ತೋರುವ ವಿಷಮತೆಗೆ ಕಾರಣವೇನು?ಭಗವಂತನಿಗೊದರೊ ಯಾರೊಡನೆಯೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರೋಧವಿಲ್ಲ, ಅವನು ಪರಮಶಾಂತಸ್ವಭಾವದವನು. ನೀವು ಕಪಟಗಳಾಗಿರುವಿರಿ, ಅದರಿಂದಲೇ ಸಂದೇಹದೃಷ್ಟಿಯಿಂದ ಇನ್ನೊಬ್ಬರನ್ನೂ ನೋಡುತ್ತಿರುವಿರಿ.

ಭಗವಂತನ ಉದರದಲ್ಲಿ ಇಡೀ ಬ್ರಹ್ಮಾಂಡವೇ ಇದೆ. ಇಲ್ಲಿರುವ ಜ್ಞಾನಿಗಳಾರೂ ಶ್ರೀ ಹರಿಯೊಡನೆ ಯಾವುದೇ ವಿಧವಾದ ಭೇದಬುದ್ಧಿಯನ್ನೂ ಇಡುವುದಿಲ್ಲ. ಮಹಾಕಾಶದಲ್ಲಿ ಘಟಾಕಾಶವಿರುವಂತೆ. ತಮ್ಮಲ್ಲಿಯೇ ಭಗವಂತನನ್ನು ಕಾಣುತ್ತಾರೆ. ನೀವೇನೊ ದೇವರೂ ಪಥಾರಿಗಳು, ನಿಮಗೇಕೆ ಭಗವಂತನೊಡನೆ, ಈ ಭೇದ- ಬುದ್ಧಿಯ ಭಯ ಕಲ್ಪನೆಯು ಮೂಡಿದೆ. ನೀವುಗಳು ಭಗವಾನ್ ಶ್ರೀ ಹರಿಯ ಪಾರ್ಷದರಾದರೂ ನಿಮ್ಮ ಬುದ್ಧಿಯು ಬಹಳ ಮಂದವಾಗಿದೆ. ನಿಮಗೆ ಕಲ್ಯಾಣವಾಗಲೆಂಬ ದೃಷ್ಟಿಯಿಂದ ನಿಮ್ಮ ಅಪರಾಧಕ್ಕೆ ತಕ್ಕ ದಂಡವನ್ನು ವಿಧಿಸುವವರಾಗಿದ್ದೇವೆ. ವೈಕುಂಠ ಲೊಕದಲ್ಲಿರಲು ಅಯೋಗ್ಯರಾದ ನೀವು ಕಾಮ - ಕ್ರೋಧ. ಲೋಭ - ಭೂಯಿಷ್ಠವಾದ ಪಾಪಯೋನಿಗಳಲ್ಲಿ ಜನ್ಮವನ್ನು ತಾಳಿರಿ. ದ್ವಾರಪಾಲಕರು ಸನಕಾದಿಗಳ ಕಠೋರವಚನಗಳನ್ನು ಕೇಳಿದರು. ಬ್ರಾಹ್ಮಣರ ಶಾಪವು ಅಕಾಟ್ಯವು, ಅಚ್ಛೇದ್ಯವು, ಯಾವುದರಿಂದಲೂ ನಿವಾರಿಸಲಾಗುವುದಿಲ್ಲವೆಂಬುದನ್ನು ಅರಿತಿದ್ದರು. ಶ್ರೀಹರಿಯೂ ಬ್ರಾಹ್ಮಣ ಪಕ್ಷಪಾತಿಯೆಂಬುದನ್ನೂ ಸಹ ಅರಿತಿದ್ದರು. ಅಂತೆಯೇ ದೈನ್ಯದಿಂದ ಅವರ ಕಾಲುಗಳನ್ನು ಹಿಡಿದುಕೊಂಡು ನೆಲದ ಮೇಲೆ ಬಿದ್ದು ಹೊರಳಾಡುತ್ತಾ ಕೇಳಿ ಕೊಂಡರು ಮಹಾತ್ಮರೇ - ನಿಮಗೆ ನಾವು ಮಹಾ ಅಪರಾಧವನ್ನೆಸಗಿದ್ದೇವೆ. ತಾವು ನಮ್ಮನ್ನು ದಂಡಿಸಿದುದು ಯೋಗ್ಯವಾಗಿದೆ.

ಭಗವದಭಿಪ್ರಾಯಕ್ಕೆ ವಿರುದ್ಧವಾಗಿ ಭಗವಂತನ ಆಜ್ಞೋಲ್ಲಂಘನೆಯು ನಮ್ಮಿಂದ ಮಾಡಲ್ಪಟ್ಟಿದೆ. ತಮ್ಮ ದಂಡವಿಧಾನದಿಂದ ನಮ್ಮ ಸಕಲಪಾಪಗಳೂ ನಿವೃತ್ತವಾಗುವುವು. ತಮ್ಮಲ್ಲಿ ಇಷ್ಟುಮಾತ್ರ ಪ್ರಾರ್ಥಿಸುತ್ತೇವೆ- ಅಧಮಾಧಮ ಯೋನಿಗಳಲ್ಲಿ ನಾವು ಜನಿಸಿದರೂ ಶ್ರೀಹರಿಸ್ಮರಣೆಯ ವಿಸ್ಮರಣೆಯಾಗದಂತೆ ಅನುಗ್ರಹಿಸಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಾರಪಾಲಕರಿಂದ ಸನಕಾದಿಗಳಿಗೆ ಅನಾದರವಾಗಿದೆ ಎಂಬುವುದನ್ನು ತಿಳಿದ ನಾರಾಯಣನು ಲಕ್ಷ್ಮೀಸಮೇತನಾಗಿ ಅಲ್ಲಿಗೆ ಬಂದನು. ಪರಮಹಂಸರೂ ಸಹ ಯಾವಾಗಲೂ ಅನ್ವೇಷಿಸುವ ದಿವ್ಯರೂಪಧಾರಿಯಾಗಿ ಬಂದ ಶ್ರೀಹರಿಯನ್ನು ಸನಕಾದಿಗಳು ಸಂದರ್ಶಿಸಿದರು. ಯಾರದರ್ಶನಕ್ಕಾಗಿ ಅನೇಕಕಾಲ, ಸಮಾಧಿಸ್ಥರಾಗುತ್ತಿದ್ದರೊ.ಆ ವೈಕುಂಠಪತಿಯು ದೃಷ್ಟಿಗೋಚರನಾಗಿದ್ದಾನೆ, ಅವನೊಡನೆ ಅವನ ಪಾರ್ಷದರು ಛತ್ರ-ಚಾಮರಗಳನ್ನು ಧರಿಸಿ ಬರುತ್ತಿದ್ದಾರೆ ಅವನ ಎರಡು ಕಡೆಗಳಿಂದಲೂ, ರಾಜಹಂಸದಂತೆ ಶೋಭಾಯಮಾನವಾದ ಶುಭ್ರಚಾಮರಗಳಿಂದ ಬೀಸುತ್ತಿದ್ದರು.

ಆ ಶೀತಲ ಗಾಳಿಯಿಂದ ಶ್ವೇತ ಛತ್ರಿಯ ಮುತ್ತುಗಳು ಅಲ್ಲಾಡುತ್ತಲಿದ್ದುವು. ಚಂದ್ರಕಿರಣಗಳಿಂದ ಅಮೃತ ಹನಿಗಳು ಬೀಳುತ್ತಲಿವೆಯೋ ಎಂಬಂತೆ. ಪ್ರಭುವು ಸಮಸ್ತ ಗುಣಗಳಿಗೂ ಆಶ್ರಯ ಭೂತನು. ಅವನ ಸೌಮ್ಯಮುಖ ಮುದ್ರೆಯನ್ನು ನೋಡಿದರೇನೇ ಎಲ್ಲರ ಮೇಲೂ ಸುಧಾವರ್ಷಣವನ್ನು ಮಾಡುತ್ತಿರುವನೆಂದು ತೋರುವುದು. ತನ್ನ ಸ್ನೇಹ ಮಯಿಾ ದಿವ್ಯ ದೃಷ್ಟಿಯಿಂದ ಭಕ್ತರ ಹೃದಯವನ್ನು ಸ್ಪರ್ಶಿಸುವಂತ ತೋರುತ್ತಿದ್ದಾನೆ. ಆ ಶ್ಯಾಮಲಾಂಗನ ವಿಶಾಲ ವೃಕ್ಷ: ಸ್ಥಳದಲ್ಲಿ ಸ್ವರ್ಣ ರೇಖೆಯಂತೆ ಮಹಾಲಕ್ಷ್ಮಿಯು ವಿರಾಜಮಾನಳಾಗಿದ್ದಾಳೆ. ದಿವ್ಯಲೋಕಗಳಿಗೆಲ್ಲ ಚೂಡಾಮಣಿಯಂತಿರುವ ವೈಕುಂಠಧಾಮವು ಅವಳಿಂದ ಪರಿಶೋಭಿಸುತ್ತಿದೆ.

ಪೀತಾಂಬರಧಾರೀ ಪದ್ಮನಾಭನ ನಿತಂಬ ಪ್ರದೇಶವು ಕಾಂಚ್ಯಾಳಿಗಳಿಂದ ವಿರಾಜಮಾನವಾಗಿದೆ, ಕಂಠದಲ್ಲಿ ಭ್ರಮರಗಳಿಂದಾವೃತವಾದ ವನಮಾಲೆಯು ಶೋಭಿಸುತ್ತಿದೆ. ಸುಂದರ ಕಡಗಗಳಿಂದ ಪ್ರಕೋಷ್ಠಗಳು ಹೊಳೆಯುತ್ತಲಿವೆ. ಒಂದು ಕೈಯ್ಯನ್ನು ಗರುಡನ ಮೇಲಿಟ್ಟಿದ್ದಾನೆ ಮತ್ತೊಂದರಿಂದ ಲೀಲಾಕಮಲವನ್ನು ಅಲ್ಲಾಡಿಸುತ್ತಿದ್ದಾನೆ. ವಿದ್ಯುತ್ ಪ್ರಭೆಯನ್ನೂ ತಿರಸ್ಕರಿಸುವಂತಹ, ಮಕರ ಕುಂಡಲಗಳ ಶೋಭೆಯು, ಕಪೋಲಗಳ ಕಾಂತಿಯನ್ನು ಹೆಚ್ಚಿಸುತ್ತಿದ್ದುವು. ಆ ಮನೋಹರವಾದ,

Sri Vidyabharathi Book Centre, Sringeri

CC-0. In Public Domain. Digitized by eGangotri

ಮೂಗು, ಸುಂದರವದನ, ಮಣಿಮಯಕಿರೀಟದಿಂದ ಶಿರಸ್ಸು ವಿರಾಜಿಸುತ್ತಿತ್ತು. ನಾಲ್ಕು ಭುಜಗಳ ಮಧ್ಯೆ ಮನೋಹರ ಹಾರವೂ ಕೌಸ್ತುಭಮಣಿಯೂ ಪ್ರಕಾಶಿಸುತ್ತಿದ್ದುವು. ಅವನ ಶ್ರೀ ವಿಗ್ರಹ ಸೌಂದರ್ಯವು ಅವರ್ಣನೀಯ ವಾದುದು. ನೋಡಿದ ಭಕ್ತರು ಹೇಳುತ್ತಿದ್ದರು – ಭಗವಂತನ ಸೌಂದರ್ಯ ದಿಂದ ಲಕ್ಷ್ಮಿಯ ಸೌಂದರ್ಯಾಭಿಮಾನವೂ ಅಳಿದು ಹೋಗಿದೆ. ಇಂತಹ ಅದ್ಭುತ ರೂಪರಾಶಿಯನ್ನು ಕಂಡ ಸನಕಾದಿಗಳು ತಲೆಯನ್ನು ತಗ್ಗಿಸಿ ಪ್ರಣಾಮ ಮಾಡಿದರು. ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ.

ಯದ್ಯಪಿ ಸನಕಾದಿಗಳು ಯಾವಾಗಲೂ ನಿರ್ಗುಣ ಬ್ರಹ್ಮಾನಂದದಲ್ಲಿ ಮಗ್ನರಾಗಿರುತ್ತಿದ್ದರು. ಆದರೂ ಅರವಿಂದನಾಭನಾದ, ಭಗವಂತನ ಪಾದಾ ರವಿಂದ ಕಿಂಜಲ್ಕದಿಂದ ಮಿಶ್ರಿತವಾದ ತುಳಸೀ ಮಕರಂದವಾಯುವು ನಾಸಿಕಾ ರಂಧ್ರದಿಂದ ಸನಕಾದಿಗಳ ಒಳಗೆ ಪ್ರವೇಶಿಸಿತು. ಆಗ ಅವರ ಚಿತ್ತವು ಕರಗಿ ಹೋಯಿತು. ಶರೀರವು ರೋಮಾಂಚಿತವಾಯಿತು. ಭಗವಂತನ ಮುಖಾ ರವಿಂದವು ನೀಲ ಕಮಲದಂತಿದ್ದಿತು. ಅತಿಸುಂದರವಾದ ಅಧರ, ಕುಂದ– ಹಾಸಕ್ಕೆ ಸಮಾನವಾದ ಮಂದಹಾಸ, ಅಹರ ದರ್ಶನದಿಂದ ಅವರುಗಳು ಕೃತ ಕೃತ್ಯರಾದರು. ಪದ್ಮರಾಗದಂತೆ ಶೋಭಾಯಮಾನಗಳಾದ, ರಕ್ತ ನಖಗಳಿಂದ ಸುಶೋಭಿತವಾದ, ಭಗವಚ್ಚರಣಕಮಲಗಳನ್ನು ನೋಡಿ ಅವುಗಳನ್ನೇ ಧ್ಯಾನಿಸತೊಡಗಿದರು. ನಂತರ ಸಾಧನಾಂತರಗಳಿಂದ ಸಾಧ್ಯನಾಗದ, ಸ್ವಾಭಾವಿಕ ಅಷ್ಟಸಿದ್ಧಿಗಳಿಂದ ಸಂಪನ್ನನಾದ ಶ್ರೀಹರಿ ಯನ್ನು ಸ್ತುತಿಸತೊಡಗಿದರು-ಮಹಾಯೋಗಿಗಳು ಯೋಗಾಭ್ಯಾಸದ ಮೂಲಕ ಶ್ರೀಹರಿಯನ್ನು ನೋಡಲು ಬಯಸುತ್ತಾರೆ. ಮಾನವಶರೀರಧಾರೀ ಭಗವಂತ ನನ್ನು ಕಂಡು ಇವರಿಗಾದ ಆನಂದವೆಷ್ಟೋ! ಹೇಳಿದರು ಸ್ವಾಮಿನ್-ನೀನು ಸರ್ವರಲ್ಲಿಯೂ ಅಂತರ್ಯಾಮಿ ಸ್ವರೂಪಿಯಾಗಿರುವೆ. ಇಂದು ನಮ್ಮ ಭಾಗ್ಯವಿಶೇಷದಿಂದ ಪ್ರಕಟನಾಗಿರುವೆ. ಒಡೆಯ ನಮ್ಮ ತಂದೆಯಾದ ಬ್ರಹ್ಮನಿಂದ ನಿನ್ನ ರಹಸ್ಯದ ವರ್ಣನೆಯು ಮಾಡಲ್ಪಟ್ಟಿತ್ತು. ಅದು ಶ್ರವಣಗಳ ಮೂಲಕ ನಮ್ಮ ಹೃದಯವನ್ನು ಪ್ರವೇಶಿಸಿತ್ತು. ಆದರೆ ಇಂದು ನಿನ್ನ ಪ್ರತ್ಯಕ್ಷದರ್ಶನದ ಮಹಾಸೌಭಾಗ್ಯವು ಲಭಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ-ಭಗವಂತನು ಪ್ರಕಟನಾಗುವ ಪ್ರಕ್ರಿಯೆಯೆ ಇದು ಮೊದಲು ಅವನು ಕರ್ಣರಂಧ್ರಗಳ ಮೂಲಕ ಹೃದಯವನ್ನು ಪ್ರವೇಶಿಸುತ್ತಾನೆ. ಹೃದಯವು ತುಂಬಿದ ಮೇಲೆ ಕಣ್ಣುಗಳ ಮೂಲಕ ಕಾಣಲ್ಪಡುತ್ತಾನೆ. ಮೊದಲು ಕಿವಿಗಳ ಮೂಲಕ ಪ್ರವೇಶಿಸದಿದ್ದಲ್ಲಿ ಎಷ್ಟುಹುಡುಕಿದರೂ ದುರ್ಲಭನೇ ಹುಡುಕುವುದರಿಂದ ಭಗನತ್ಪ್ರಾಪ್ತಿಯಾಗುವುದೇ? ಮೊದಲು ಹೃದಯದಲ್ಲಿದ್ದರೆ ನಂತರ ಕಾಣಲ್ಪಡುವನು. ಸನಕಾದಿಗಳು ಹೇಳುತ್ತಾರೆ- ಭಗವನ್-ನಿನ್ನನ್ನು ನಾವುಸಾಕ್ಷಾತ್ ಭಗವತ್ತತ್ವವೆಂದು ತಿಳಿಯುತ್ತೇವೆ. ಈಗನೀನು ವಿಶುಧ್ಧ ಸತ್ವಮಯವಿಗ್ರಹದಿಂದ ನಮಗಳಿಗೆ ಆನಂದದಾಯಕನಾಗಿರುವೆ. ರಾಗ ದ್ವೇಷಗಳಿಂದ ಮುಕ್ತರಾದ ಮುನಿಗಳು ನಿನ್ನ ಈ ಸಗುಣ ಸಾಕಾರ ಮೂರ್ತಿಯನ್ನ ಭಕ್ತಿಯೋಗದಿಂದಲೇ ತಮ್ಮ ಹೃದಯಾನುಭವಕ್ಕೆ ತೆಗೆದುಕೊಳ್ಳುತ್ತಾರೆ. ನಿನ್ನ ಪಾದಸೇವಕರಾದ ಭಕ್ತರು ನಿನ್ನಗುಣಶ್ರವಣದಲ್ಲಿ ಕಥನದಲ್ಲಿ ರಸಿಕರಾಗಿರುತ್ತಾರೆ. ಸಂಸಾರದ ದುಃಖನಾಶಕಗಳಾದ ನಿನ್ನ ಯಶೋಗಾಥೆಗಳನ್ನು ಸದಾಕೀರ್ತನೆಮಾಡುತ್ತಿರುತ್ತಾರೆ. ಅವರಿಗೆ ನೀನು ಕೊಡುವ ಶ್ರೇಷ್ಠಮೋಕ್ಷಪದವಿಯೂ ಬೇಕಾಗಿಲ್ಲ. ನಿನ್ನ ಭ್ರೂವಿಕ್ಷೇಪಮಾತ್ರದಿಂದ ಅಳ್ಳಾಡಿಹೋಗತಕ್ಕ ಇಂದ್ರಾದಿ ಪದೆಗಳನ್ನು ಗಮನಿಸುವುದೇ ಇಲ್ಲ. ಭಗವನ್-ನಮ್ಮ ಚಿತ್ತಭ್ರಮರವು-ನಿನ್ನ ಪಾದ ಕಮಲ ಮಕರಂದರಸಾಸ್ವಾದನೆಯಲ್ಲಿಯೆ ರಮಿಸುತ್ತಿರುವುದಾದರೆ, ನಮ್ಮವಾಣಿಯು-ನಿನ್ನ ನಾಮಾಮೃತ ಕಥಾಸ್ವಾದನೆಯಲ್ಲಿ ತತ್ಪರತೆಯಿಂದಿರುವುದಾದರೆ, ನಮ್ಮ ಶ್ರವಣೇಂದ್ರಿಯಗಳು. ನಿನ್ನ ಕಥಾಶ್ರವಣದಲ್ಲಿಯೆ ಮಗ್ನವಾಗಿರುವುದಾದರೆ, ನಾವು ನಮ್ಮ ಪಾಪಕರ್ಮಗಳ ಕಾರಣದಿಂದ ಯಾವುದೇ ನರಕಾದಿಯೋನಿಗಳಲ್ಲಿರಲಿ. ನಾವು ಅದಕ್ಕಾಗಿ ಚಿಂತಿಸಲಾರೆವು. ವಿಪುಲಕೀರ್ತಿಮನ್ ಪ್ರಭೋ ನೀನು ಕೃಪೆಯಿಟ್ಟು ನಿನ್ನ ಮನೋಹರ ರೂಪವನ್ನು ನಮ್ಮ ಮುಂದೆ ಪ್ರಕಟಿಸಿರುವೆ, ನಮ್ಮ ನೇತ್ರಗಳು ಮಹಾಸುಖಿಗಳಾಗಿವೆ, ವಿಷಯಾಸಕ್ತ ಅಜಿತೇಂದ್ರಿಯ ಪುರುಷರು ಇಂತಹ ರೂಪದರ್ಶನವನ್ನು ಮಾಡಲಾರರು. ಈ ಅಮೋಘ ದರ್ಶನದಿಂದ ಕೃತಾರ್ಥರಾದೆವು. ನಿನಗೆ ಅನಂತ ನಮಸ್ಕಾರಗಳು.

ಓಂ ತತ್ಸದಿತ್ಯೇವಂ ತೃತೀಯಸ್ಕಂಥೆ ಪಂಚದಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

"ಜಯವಿಜಯರ ವೈಕುಂಠಪತನ"

ಯೋಗನಿಷ್ಠ ಸನಕಾದಿಗಳು ಹೀಗೆ ಭಗವಂತನನ್ನು ಸ್ತೋತ್ರ ಮಾಡೋಣ, ವೈಕುಂಠನಿವಾಸಿ ಶ್ರೀಹರಿಯು ಅವರನ್ನು ಪ್ರಶಂಸಿಸುತ್ತಾ ಹೇಳಿದನು-:ಮಹಾತ್ಮರೇ-ಈ ನನ್ನ ಪಾರ್ಶದರಾದ ಜಯ ವಿಜಯರುನಿಮ್ಮನ್ನು ತಿರಸ್ಕರಿಸಿರುವುದರ ಮೂಲಕ ಮಹದಪರಾಧವನ್ನು ಮಾಡಿದ್ದಾರೆ. ನೀವುಗಳು ನನ್ನ ಅಂತರಂಗ ಭಕ್ತರು. ನಿಮಗೆ ಅಪರಾಧಿಗಳಾದ ಇವರು ನನಗೂ ಅಪರಾಧಿಗಳೇ ಸರಿ, ನೀವು ಇವರಿಗೆ ವಿಧಿಸಿರುವ ದಂಡವು ನನಗೂ ಸಮ್ಮತವೇ ಆಗಿದೆ.

"ಬ್ರಹ್ಮದೈವಂ ಪರಂಹಿವೋ" ಬ್ರಾಹ್ಮಣರು ನನ್ನ ಆರಾಧ್ಯರು, ನಿಮಗಾಗಿರುವ ಈಅಪಚಾರವು ನನಗೇ ಆಗಿದೆಯೆನ್ನುವಷ್ಟರ ಮಟ್ಟಿಗೆ ನಾನು ಭಾವಿಸುತ್ತೇನೆ- ತಾವು ಪ್ರಸನ್ನರಾಗಬೇಕೆಂದು ಪ್ರಾರ್ಥಿಸುತ್ತೇನೆ.ಸೇವಕರು ಮಾಡುವ ಅಪರಾಧಕ್ಕೆ ಯಜಮಾನನೇ ಬಾಧ್ಯನೆಂಬುವುದು ನನ್ನ ಮತವು, ದೇಹದ ಚರ್ಮವನ್ನು ಅಂಟುಜಾಡ್ಯಗಳು ಆವರಿಸುವಂತೆ, ಈ ಅಪಯಶಸ್ಸು. ಯಜಮಾನನ ಕೀರ್ತಿಯನ್ನುನಾಶಪಡಿಸುತ್ತದೆ. **ಸದ್ಯಃ ಪುನಾತಿ ಜಗದಾ ಶ್ವಪಚಾದ್ವಿಕುಂಠಃ** ನನ್ನ ಯಶೋಗಾಥೆಯುಲ್ಲಿ ಮುಳುಗಿದ ಚಂಡಾಲನೂ ಸಹ ಕೂಡಲೆ ಪವಿತ್ರನಾಗುತ್ತಾನೆ. ಅದರಿದಲೇ ನಾನು "ವಿಕುಂಠನು" **ಸೋಽಹಂಭವದ್ಭ್ಯ ಉಪಲಭ್ದ ಸುತೀರ್ಥಕೀರ್ತಿ;** , ಈ ಕೀರ್ತಿಯಶಸ್ಸು ಗಳು ತಮ್ಮಂತಹವರಿಂದಲೇ ಪ್ರಾಪ್ತವಾಗಿವೆ. **ಛಿಂಧ್ಯಾಂ ಸ್ವಭಾಹುಮಪಿವಃ ಪ್ರತಿಕೂಲವೃತ್ತಿಮ್** ನಿಮುಗಳಿಗೆ ಪ್ರತಿಕೂಲವಾಗಿ ನಡೆದುಕೊಂಡ ವರು ಯಾರೇ ಅಗಲಿ, ನನ್ನ ಭುಜದಂಡವೇ ಆದರೂ, ಕತ್ತರಿಸಿಹಾಕುತ್ತೇನೆ. ನಿಮುಗಳ ಸೇವೆಯಿಂದಲೇ ನನ್ನ ಚರಣಧೂಳಿಗೆ ಪವಿತ್ರತೆಯು ದೊರಕಿರು ವುದು. ಹಾಗೂ ಸರ್ವಪಾಪಹಾರಕ ಶಕ್ತಿಯೂ ಪ್ರಾಪ್ತವಾಗಿರುವುದು. ಬ್ರಹ್ಮಾದಿದೇವತೆಗಳೂ ಸಹ ಲಕ್ಷ್ಮಿಯ ಕೃಪಾಕಟಾಕ್ಷ ಪ್ರಾಪ್ತಿಗಾಗಿ ಅನೇಕ ವ್ರತಾದಿಗಳನ್ನು ಆಚರಿಸುತ್ತಾರೆ. ಆ ಲಕ್ಷ್ಮೀದೇವಿಯು ನಾನು ವಿರಕ್ತನಾ ದರೂ ನನ್ನಲ್ಲಿ ಅನುರಾಗಿಣಿಯಾಗಿದ್ದಾಳೆ ಅಂದರೆ ಇದು ನಿಮ್ಮಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಗ್ರಹದ ಫಲವು. ನಾನು ಅಗ್ನಿಮುಖದಿಂದ ಭೋಜನವನ್ನು ಮಾಡುವುದಿಲ್ಲ. ಬ್ರಾಹ್ಮಣಮುಖದಿಂದ ಭೋಜನವನ್ನು ಮಾಡುತ್ತೇನೆ. ಕ್ಷುಧಿತ ಬ್ರಾಹ್ಮಣನಿಗೆ ನೀಡುವ ಮೃಷ್ಟಾನ್ನದಿಂದ ನನಗೆ ತೃಪ್ತಿಯಾಗುವಹಾಗೆ ಅಗ್ನಿಯಲ್ಲಿ ಕೊಡುವ ಹವಿರ್ಭಾಗಗಳಿಂದ ತೃಪ್ತಿಯಾಗುವುದಿಲ್ಲ. ಯೋಗಮಾಯೆಯ ಅಖಂಡ ಅಸೀಮ ಐಶ್ವರ್ಯವೂ ನನ್ನ ಅಧೀನದಲ್ಲಿದೆ. ನನ್ನ ಚರಣೋದಕ ರೂಪಿಣಿ ಗಂಗೆಯುಭವಳ ಚಂದ್ರಕಲಾಧರನಾದ ಶಂಕರನ ಶಿರೋಧಾರಿಣಿಯಾಗಿದ್ದಾಳೆ, ಹಾಗೂ ಲೋಕಪಾವನಿಯಾಗಿದ್ದಾಳೆ.

ಇಂತಹ ಪರಮ ಪವಿತ್ರನಾದ, ಪರಮೇಶ್ವರನಾದಾಗ್ಯೂ, ಯಾವ ಬ್ರಾಹ್ಮಣರ ಪವಿತ್ರ ಚರಣಧೂಳಿಯನ್ನು ಶಿರಸ್ಸಿನಲ್ಲಿ ಧರಿಸುತ್ತೇನೆಯೋ ಅಂತಹಬ್ರಾಹ್ಮಣರಿಗೆ ಯಾರು ತಾನೇ ಮಾನ್ಯತೆಯನ್ನು ಕೊಡುವುದಿಲ್ಲ? **ಬ್ರಾಹ್ಮಣ ಕ್ಷೀರದಾತ್ರೀಗೌಃ ಅನಾಥಪ್ರಾಣಿಗಳು,** ಇವರೆಲ್ಲರೂ ನನ್ನ ಶರೀರವೇ ವಿವೇಕ ದೃಷ್ಟಿಹೀನರಾದ ಯಾವ ಪಾಪಿಗಳು ಇವರುಗಳನ್ನು ಮದ್ಭಿನ್ನರನ್ನಾಗಿ ತಿಳಿಯುವರೋ ಅಂತಹವರನ್ನು ಪ್ರಚಂಡ ಕೋಪಿಗಳಾದ ಯಮದೂತರು ಘೋರರೂಪದಿಂದ ದಂಡಿಸುತ್ತಾರೆ. ಗೃಧ್ರ ಪಕ್ಷಿಗಳ ರೂಪದಲ್ಲಿ ಅವರ ಮೈಯನ್ನು ಚುಚ್ಚುತ್ತಾರೆ. ಬ್ರಾಹ್ಮಣನು ಕಟುಭಾಷಿಯಾದರೂ ಸಹ ಅವನನ್ನು ಭಗವದ್ಭಾವನೆಯಿಂದ, ನಗುಮುಖದಿಂದ ಆದರಿಸಬೇಕು ಪ್ರೇಮ-ವಿನಮ್ರವಚನಗಳಿಂದ ಪ್ರಾರ್ಥಿಸಿ ಶಾಂತನನ್ನಾಗಿಮಾಡಬೇಕು. ಇಂತಹವರು ನನಗೆ ಅತ್ಯಂತ ಪ್ರಿಯರು, ಅವರು ನನ್ನನ್ನೇ ಹೊಂದುತ್ತಾರೆ ನನ್ನ ಅಭಿಪ್ರಾಯವನ್ನು ತಿಳಿಯದ ಸೇವಕರು ನಿಮ್ಮನ್ನು ಅಪಮಾನಗೊಳಿಸಿದ್ದಾರೆ. ನೀವು ದಯೆಯಿಟ್ಟು ಇವರ ನಿರ್ವಾಸನ ಕಾಲವು ಬೇಗಮುಗಿದು ಹೋಗುವಂತೆ ಅನುಗ್ರಹಿಸಿರಿ. ಅಪರಾಧಾನುರೂಪವಾದ ಶಿಕ್ಷೆಯನ್ನು ಬೇಗ ಅನುಭವಿಸಿ ನನ್ನಲ್ಲಿಗೆ ಬರುವಂತಾಗಲಿ ಹೀಗೆ ಪ್ರಭುವು ಸನಕಾದಿಗಳಿಗೆ ಹೇಳೋಣ-ಯದ್ಯಪಿ ಸನಕಾದಿಗಳು ಕ್ರೋಧವಶರಾಗಿದ್ದರು. ಭಗವಂತನ ಸುಮಧುರವಾಣಿಯಿಂದ ಮೋಹಿತರಾಗಿ ಹೋಗಿದ್ದರು. ಭಗವದುಕ್ತಿಯು ಸಾರ ಗರ್ಭಿತವೂ, ಸಂಕ್ಷಿಪ್ತವಾದುದೂ ಆಗಿದ್ದಿತು. ಅದು ಬಹಳ ಅರ್ಥಪೂರ್ಣವೂ, ಸಾರಯುಕ್ತವೂ, ದುರ್ವಿಜ್ಞೇಯವೂ ಆಗಿದ್ದಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನಪೂರ್ವಕ ಬಹಳ ಯೋಚಿಸಿದರೂ, ವಿಚಾರಿಸಿದರೂ, ಭಗವಂತನ ಅಭಿಪ್ರಾಯವೇನು? ಅವನೇನು ಮಾಡಲು ಇಚ್ಛಿಸುವನು? ಎಂಬುದನ್ನು ತಿಳಿಯಲಾರದೇ ಹೋದರು. ಭಗವಂತನ ಈ ಅಧ್ಭುತ ಉದಾರತೆಯಿಂದ ಸನಕಾದಿಗಳ ಅಂಗಾಂಗಗಳೂ ರೋಮಾಂಚಗೊಂಡವು. ಯೋಗಮಾಯಾ ಪ್ರಭಾವದಿಂದ ತನ್ನ ಪರಮೈಶ್ವರ್ಯದ ಪ್ರಭಾವವನ್ನು ಪ್ರಕಟಿಸುವ ಪ್ರಭುವಿನೊಡನೆ ಕೈಮುಗಿದುಕೊಂಡು ಹೇಳಿದರು

ನವಯಂ ಭಗವನ್ ವಿದ್ಮಃ ತವದೇವಚಿಕೀರ್ಷಿತಮ್
ಕೃತೋಮೇಽನುಗ್ರಹತಶ್ಚೇತಿ, ಯದಧ್ಯಕ್ಷಃಪ್ರಭಾಷಸೇ

ಸ್ವಪ್ರಕಾಶರೂಪೀ ಭಗವನ್–ನೀನು ಸರ್ವೇಶ್ವರನು, ಸರ್ವಾಧ್ಯಕ್ಷನು. ಆದರೂ ಹೇಳುತ್ತಲಿರುವೆ–'ನನ್ನ ಮೇಲೆ ಅನುಗ್ರಹ ಮಾಡಿದಿರಿ'. ಇದಕ್ಕೇನು ಅಭಿಪ್ರಾಯವೆಂದು ನಾವುಗಳು ತಿಳಿಯಲಾರೆವು. ಪ್ರಭೋ-

ಬ್ರಹ್ಮಣ್ಯಸ್ಯಪರಂದೈವಂ, ಬ್ರಾಹ್ಮಣಾಃಕಿಲತೇಪ್ರಭೋ
ವಿಪ್ರಾಣಾಂ ದೇವ ದೇವಾನಾಂ ಭಗವಾನಾತ್ಮದೈವತಮ್

ನೀನು ಬ್ರಾಹ್ಮಣರ ಪರಮಹಿತಕಾರಿ. ನೀನು ಲೋಕ ಶಿಕ್ಷಣಾರ್ಥವಾಗಿ "ಬ್ರಾಹ್ಮಣರು ನನ್ನ ಆರಾಧ್ಯ ದೈವರು" ಎಂದು ಹೇಳುವುದೇನೋ ಸರಿ. ಆದರೆ ಬ್ರಾಹ್ಮಣರಿಗೂ ಬ್ರಹ್ಮಾದಿ ದೇವತೆಗಳಿಗೂ ನೀನು ಆತ್ಮಸ್ವರೂಪನು ಹಾಗೂ ಆರಾಧ್ಯದೇವನು. ಶಾಸ್ತ್ರಗಳ ಸಿಧ್ಧಾಂತವೂ ಹಾಗೆಯೇ ಇದೆ–

ತ್ವತ್ತಃ ಸನಾತನೋಧರ್ಮಃರಕ್ಷ್ಯತೇತನುಭಿಸ್ತವ
ಧರ್ಮಸ್ಯಪರಮೋಗುಹ್ಯೋ, ನಿರ್ವಿಕಾರೋಭವಾನ್ಮತಮ್ಃ

ಸನಾತನ ಧರ್ಮವು ನಿನ್ನಿಂದಲೇ ಉತ್ಪನ್ನವಾಗಿದೆ. ನೀನು ಆಗಾಗ್ಗೆ ಅವತರಿಸಿ ಅದನ್ನು ರಕ್ಷಿಸುತ್ತೀಯ. ನಿರ್ವಿಕಾರ ಸ್ವರೂಪನಾದ ನೀನೇ ಧರ್ಮದ ಗುಹ್ಯ ರಹಸ್ಯವಾಗಿರುವೆ. ನಿನ್ನ ದಯೆಯಿಂದ ನಿವೃತ್ತಿ ಪರಾಯಣರಾದ, ಯೋಗಿಗಳು ಸಹಜವಾಗಿ ಮೃತ್ಯುರೂಪ ಸಂಸಾರ ಸಾಗರವನ್ನು ದಾಟುತ್ತಾರೆ. ಹೀಗಿರುವಾಗ ನಿನ್ನ ಮೇಲೆ ಯಾರಾದರೂ ಅನುಗ್ರಹವಿಡುವುದು ಹೇಗೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲಾ ಅರ್ಥಾರ್ಥಿಗಳೂ ನಿನ್ನ ಪಾದಧೂಳಿಯನ್ನು ಶಿರಸ್ಸಿನಲ್ಲಿ ಧಾರಣೆ ಮಾಡುತ್ತಾರೆ. ಶ್ರೀ ಲಕ್ಷ್ಮೀದೇವಿಯು ಸದಾ ನಿನ್ನ ಪಾದ ಸೇವಕಿಯಾಗಿದ್ದಾಳೆ. ಭಾಗ್ಯ ಶಾಲಿಗಳಾದ ಭಕ್ತರು ತರುಣ ತುಳಸೀ ಮಾಲೆಯನ್ನು ನಿನ್ನ ಪಾದ ಕಮಲಗಳ ಮೇಲೆ ಅರ್ಪಿಸುತ್ತಾರೆ. ಆದನ್ನಾಶ್ರಯಿಸಿರುವ ಭ್ರಮರಗಳೂ, ನಿನ್ನ ಪಾದಕಮಲಗಳಲ್ಲಿಯೇ ಇರಬೇಕೆಂದು ಬಯಸುತ್ತವೆ ಅಂತಹ ನಿನ್ನ ಪಾದಕಮಲಗಳನ್ನು ಲಕ್ಷ್ಮಿಯು ಯಾವಾಗಲೂ ತ್ಯಜಿಸುವುದಿಲ್ಲ. ಆದರೂ ಲಕ್ಷ್ಮೀ ದೇವಿಯನ್ನು ಅಷ್ಟಾಗಿ ನೀನು ಆದರಿಸಲಾರೆ ಅವಳೇನೊ ತನ್ನ ಪವಿತ್ರ ಚರಿತ್ರೆಗಳಿಂದ ನಿನ್ನಲ್ಲಿಯೆ ತತ್ಪರಳಾಗಿದ್ದಾಳೆ. ಆದರೂ, ನಿನ್ನ ಪ್ರೇಮವಾದರೊ ನಿನ್ನ ಭಕ್ತರ ಮೇಲೆಯೆ ವಿಶೇಷವಾಗಿರುತ್ತದೆ. ನೀನೇ ಭಜನೀಯ ಸಂಪೂರ್ಣ ಗುಣಗಳ ಆಶ್ರಯನು.

'ಸತ್ವಂ ದ್ವಿಜಾನು ಪಥ ಪುಣ್ಯ ರಜ: ಪುನೀತ':

ಇಂತಹ ನಿನ್ನನ್ನು ಬ್ರಾಹ್ಮಣರ ಪಾದ ಧೂಳಿಯಾಗಲಿ, ಶ್ರೀ ವತ್ಸಲಾಂಛನವಾಗಲಿ, ಪವಿತ್ರಗೊಳಿಸಲು ಸಾಧ್ಯವಿದೆಯೇ? ಇದರಿಂದ ನಿನ್ನ ಕಾಂತಿಯು ಅಧಿಕವಾಗಿ ಪ್ರಕಾಶಿಸುವುದೇ? ಭಗವನ್ ನೀನು ಸಾಕ್ಷಾದ್ಧರ್ಮ ಸ್ವರೂಪನು. ನೀನು ಸತ್ಯಾದಿ ಯುಗಗಳಲ್ಲಿ ಪ್ರತ್ಯಕ್ಷ ರೂಪದಿಂದಿರುವ ತಪಸ್ಸು. ಶೌಚ - ದಯಾ. ಈ ಮೂರು ಚರಣಗಳಿಂದ ಚರಾಚರ ಜಗತ್ತಿನ ರಕ್ಷಣೆಯನ್ನು ಮಾಡುವೆ. ಇದರಿಂದ ಬ್ರಾಹ್ಮಣರೂ ದೇವತೆಗಳೂ ರಕ್ಷಿಸಲ್ಪಡುತ್ತಾರೆ. ಈಗ ನೀನು ನಿನ್ನ ಶುಧ್ಧ ಸತ್ವಮಯಿಾ ವರದಾಯಿನೀ ಮೂರ್ತಿಯಿಂದ ನಮ್ಮ ರಜಸ್ತಮೋಗುಣಗಳನ್ನು ನಿಗ್ರಹಿಸು. ಪ್ರಭೋ– ಬ್ರಾಹ್ಮಣ ಕುಲದ ಪ್ರಧಾನ ರಕ್ಷಕನು ನೀನೇ. ನೀನು ಧರ್ಮರೂಪಿಯಾಗಿ, ನಿನ್ನ ಸುಮಧುರವಾಣಿಯಿಂದ ನಿನ್ನ ಪೂಜಾದಿಗಳಿಂದ ಈ ಶ್ರೇಷ್ಠ ಬ್ರಾಹ್ಮಣ್ಯವನ್ನು ರಕ್ಷಿಸದಿದ್ದರೆ ನೀನು ಬಯಸುವ ಕಲ್ಯಾಣ ಮಾರ್ಗವು ನಷ್ಟವಾಗುವುದು. ಶ್ರೇಷ್ಠ ಪುರುಷರ ಆಚರಣೆಯನ್ನೇ ಪ್ರಮಾಣವೆಂದು ಜನತೆಯು ತಿಳಿಯುತ್ತದೆ. ನೀನು ಸಂಪೂರ್ಣ ಸತ್ವಗುಣಿಯು, ನಿನ್ನಲ್ಲಿ ಎಲ್ಲಾ ಜೀವಿಗಳಿಗೂ ಕಲ್ಯಾಣವಾಗಲೆಂಬ ಉದ್ದೇಶವಿದೆ. ನೀನು ರಾಜ ಮಹಾರಾಜರ ಮೂಲಕ

Sri Vidyabharathi Book Centre, Sringeri

CC-0. In Public Domain. Digitized by eGangotri

ಧಾರ್ಮಿಕ ಶತ್ರುಗಳನ್ನು ನಿಗ್ರಹಿಸುವೆ. ವೇದ ಮಾರ್ಗದ ಅವನತಿಯನ್ನು ನೀನು ಅಪೇಕ್ಷಿಸುವುದಿಲ್ಲ. ನೀನು ತ್ರಿಲೋಕಾಧಿಪನು, ಜಗತ್ಪ್ರತಿಪಾಲಕನು ಬ್ರಾಹ್ಮಣರ ಬಗ್ಗೆ ಬಹಳ ವಿನೀತನಾಗಿರುವೆ. ಇದೆಲ್ಲವೂನಿನ್ನ ಲೀಲಾ ಮಾತ್ರವು. ಪ್ರಭೋ ನಾವೇನೋ ನಿನ್ನ ಪಾರ್ಷದರನ್ನು ಶಪಿಸಿದ್ದೇವೆ. ಇವರ ವಿಚಾರದಲ್ಲಿ ನೀನುಯಾವ ರೀತಿ ಬೇಕಾದರೂ ವರ್ತಿಸಲು ಸಮರ್ಥನು. ಶಾಪ ಮುಕ್ತರನ್ನಾಗಿಮಾಡಿ ಅವರಿಗೆ ಪುರಸ್ಕಾರವನ್ನುಕೊಡಲೂ ಸಮರ್ಥನಾಗಿರುವೆ

ನಾವು ನಿಷ್ಕಾಪಟ್ಯತೆಯಿಂದ ಹೇಳುತ್ತಿದ್ದೇವೆ – ನೀನು ಹೇಗೆ ವರ್ತಿಸಿದರೂ ನಮಗೆ ಸಮ್ಮತವು. ನಿನಗೆ ನಿನ್ನ ಅನುಚರರು ನಿರಪರಾಧಿಗಳೆಂದು ಕಂಡು ಬಂದರೆ ಅಂತಹವರನ್ನು ಶಪಿಸಿದುದಕ್ಕಾಗಿ ನಮಗೇ ದಂಡವನ್ನು ವಿಧಿಸು. ನಾವು ಒಪ್ಪಿಕೊಳ್ಳುತ್ತೇವೆ. ನೋಡಿ – ಈ ಪ್ರಶ್ನೋತ್ತರಗಳು ಎಷ್ಟು ಸ್ವಾರಸ್ಯವಾಗಿವೆ? ಭಗವಂತನು ಹೇಳುತ್ತಾನೆ - ನಾನು ನಿಮ್ಮ ಪಾದ ಸೇವಕ, ನಿಮ್ಮಿಂದ ನನಗೆ ಗೌರವ.

ಸನಕಾದಿಗಳು ಭಗವದ್ದರ್ಶನಕ್ಕಾಗಿ ಬಂದಿದ್ದರು. ಪಾರ್ಷದರದರ್ಶನವಾಯಿತು. ಕಾಮಾನುಜನನ್ನು ಆಹ್ವಾನಿಸಿ ಕೊಂಡರು, (ಕಾಮಾನುಜ-ಕ್ರೋಧ) ವಸ್ತುತಃ ರಾಮಾನುಜನನ್ನು ಆಹ್ವಾನಿಸಬೇಕಿತ್ತು. ಇಲ್ಲಿ ಸನಕಾದಿಗಳು– ಅಪರಾಧವಾಗಿದ್ದರೆ ಕ್ಷಮಿಸು ಎಂದು ಕೇಳುತ್ತಿಲ್ಲ ವಸ್ತುತಃ ಹೀಗೆ ಕೇಳುವವರು ಅಪರಾಧವನ್ನು ಒಪ್ಪಿಕೊಳ್ಳುವವರಲ್ಲ. ಸನಕಾದಿಗಳು ಸ್ಪಷ್ಟವಾಗಿ ಹೇಳುತ್ತಾರೆ–**ಯೋನಾಗಸಾವಯುನುಯುಕ್ಷ್ಮಹಿ ಕಿಲ್ಬಿಷೇಣ** ನಿನ್ನ ನಿರಪರಾಧಿ ಸೇವಕರಿಗೆ ಶಾಪವನ್ನಿತ್ತಿದ್ದೇವೆ. ಅವರು ಇಲ್ಲಿಯ ದ್ವಾರ ಪಾಲಕರು, ಇಲ್ಲಿಯ ಮರ್ಯಾದಾರಕ್ಷಕರು, ಅಂದಮೇಲೆ ಅವರನ್ನು ಪ್ರವೇಶಾವಕಾಶದ ಬಗ್ಗೆ ಕೇಳಬಹುದಿತ್ತು. ನಮ್ಮನ್ನು ಅವರು ತಡೆದು ಇಲ್ಲಿಯ ಮರ್ಯಾದೆಯನ್ನು ರಕ್ಷಿಸಿದ್ದಾರೆ. ಅಂತೆಯೆ ನಿರಪರಾಧಿಗಳು. ಅವರನ್ನು ಪ್ರವೇಶಿಸುವ ಮುನ್ನ ಕೇಳಬೇಕಾಗಿದ್ದುದು ನಮ್ಮ ಧರ್ಮ. ಈಗ ಇದೆಲ್ಲವನ್ನೂ ಕೇಳಿರುವ ಭಗವಂತನು ಏನು ಹೇಳುವನೆಂಬುದನ್ನು ಕೇಳೋಣ ಭಗವಂತನುಹೇಳುತ್ತಾನೆ ಮಹಾತ್ಮರೆ.ನೀವು ನನ್ನ ಪ್ರೇರಣೆಗನುಗುಣವಾಗಿಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇವರನ್ನು ಶಪಿಸಿದ್ದೀರಿ. ಇವರು ಶೀಘ್ರವಾಗಿಯೆ ದೈತ್ಯಯೋನಿಯಲ್ಲಿ ಜನ್ಮವನ್ನೆತ್ತುತ್ತಾರೆ. ಕ್ರೋಧಾಧಿಕ್ಯದಿಂದ ಕೂಡಿದ ಏಕಾಗ್ರತೆಯಿಂದ (ವೈರಯೋಗವು) ಯೋಗ ಸಂಪನ್ನರಾಗಿ ಶೀಘ್ರವೇ ನನ್ನ ಬಳಿಗೆ ಬರುತ್ತಾರೆ ನಂತರ ಸನಕಾದಿಗಳು ಭಗವಂತನಿಗೆ ಪ್ರದಕ್ಷಿಣಾ ನಮಸ್ಕಾರಾದಿಗಳನ್ನರ್ಪಿಸಿದರು. ನಯನ ಮನೋಹರವಾದ ವೈಕುಂಠಲೋಕವನ್ನೂ ನಮಸ್ಕರಿಸಿದರು. ಭಗವದಾಜ್ಞೆಯನ್ನು ಪಡೆದು ಅವನ ಗುಣಗಾನವನ್ನು ಮಾಡುತ್ತಾ ಹಿಂತಿರುಗಿದರು.

ಭಗವಂತನು ಪಾರ್ಶದರೊಡನೆ ಹೇಳಿದನು-"ಯಾತಂ ಮಾಭೈಷ್ಟಂ ಅಸ್ತು ಶಂ" ನೀವುಗಳು ಹೊರಡಿ, ಹೆದರಬೇಡಿ, ಮಂಗಳವಾಗಲಿ, ನಾನೆಷ್ಟು ಸಮರ್ಥನಾದರೂ ಬ್ರಹ್ಮ ತೇಜಸ್ಸನ್ನು ನಿಗ್ರಹಿಸಲು ಇಷ್ಟಪಡುವುದಿಲ್ಲ. ನಿಮಗಳಿಗೂ ನೆನಪಿರಬಹುದು. ನಾನು ಯೋಗನಿದ್ರಾರೂಢನಾಗಿದ್ದಾಗ ಪ್ರವೇಶವನ್ನು ಬಯಸಿದ ಲಕ್ಷ್ಮಿಯನ್ನು ಹೀಗೇ ತಡೆದಿದ್ದಿರಿ. ದೈತ್ಯರಾಗಿಹುಟ್ಟಿ ಎಂದು ಲಕ್ಷ್ಮಿಯೆ ಶಪಿಸಿದಳು. ನೀವೀಗ ದೈತ್ಯರಾಗಿ ಹುಟ್ಟುವಿರಿ. ನಿಮ್ಮಲ್ಲಿ ಕ್ರೋಧಾಕಾರವೃತ್ತಿಯ ಏಕಾಗ್ರತೆಯಿರುವುದು. ಅದರಿಂದ ನೀವು ವಿಪ್ರತಿರಸ್ಕಾರ ಜನಿತ ಪಾಪದಿಂದ ಮುಕ್ತರಾಗುವಿರಿ.ಎಂದು ಭಗವಂತನು ಹೇಳಿ ಅಂತರ್ಧಾನನಾದನು. ದೇವೋತ್ತಮರಾದ ಜಯ-ವಿಜಯರು ಬ್ರಹ್ಮಶಾಪದಿಂದ ಹತಶ್ರೀಕರಾದರು. ಅವರ ಅಹಂಕಾರವೆಲ್ಲವೂ ನಾಶವಾಯಿತು. ವೈಕುಂಠ ಲೋಕದಿಂದ ಅವರ ಪತನವಾಯಿತು . ದೇವತೆಗಳೆಲ್ಲರೂ ಹಾಹಾಕಾರ ಮಾಡಿದರು. ಬ್ರಹ್ಮನು ದೇವತೆಗಳೊಡನೆ ಹೇಳುತ್ತಾನೆ-ಆಜಯ-ವಿಜಯರು ದಿತಿಯಗರ್ಭವನ್ನು ಪ್ರವೇಶಿಸಿದ್ದಾರೆ. ಅವರುಗಳ ತೇಜಸ್ಸಿನಿಂದ ನೀವುಗಳೆಲ್ಲರೂ ಕಾಂತಿಹೀನರಾಗಿರುವಿರಿ. ಇದೇ ಶ್ರೀಮನ್ನಾರಾಯಣನ ಇಚ್ಛೆಯು ಸಂಸಾರದ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣನಾದ. ಯಾರ ಯೋಗಮಾಯೆಯನ್ನು ಯೋಗಿಗಳೂ ಬಹಳ ಕಷ್ಟದಿಂದ ಪಾರುಮಾಡಿಕೊಳ್ಳುತ್ತಾರೊ, ಆತ್ರಿಗುಣನಿಯಂತಾ ಶ್ರೀಹರಿಯು ನಮಗಳಿಗೆ ಕಲ್ಯಾಣಕಾರಕನಾಗಲಿ, ನಮ್ಮ ವಿಚಾರವಿಮರ್ಶಾದಿಗಳಿಂದ ಯಾವಲಾಭವೂ ಇಲ್ಲ. ಚಿಂತಿಸುವವರು

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವಲ್ಲ. ಓರ್ವಮಹಾತ್ಮರು ಹೇಳುವಂತೆ

ಚಿಂತಾಕರೇ ಬಲಾಯ್ ಹಮಾರೀಜಗತೀಕೆ ಜಂಜಾಲಕೀ
ಬಲಿಹಾರೀ ಬಲಿಹಾರೀ ಬೋಲೋಗಿರಿಧಾರೀ ನಂದಲಾಲಕೀ
ಆ ಭಗವಂತನಿಗೇ ಎಲ್ಲವೂಸೇರಿದೆ.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ಷೋಡಶೋಽಧ್ಯಾಯಃ

ಶ್ರೀ ಮದ್ಭಾಗವತ ದರ್ಶನ, ಸ್ಕಂಧ ೩. ಅ. ೧೭
ಹಿರಣ್ಯಾಕ್ಷನ ದಿಗ್ವಿಜಯ.

ದೇವತೆಗಳು ಬ್ರಹ್ಮನ ವಿವರಣೆಯಿಂದ ಲೋಕದಸ್ಥಿತಿಯನ್ನರಿತು ಕೊಂಡು ತಮ್ಮ-ತಮ್ಮ ಲೋಕಗಳಿಗೆ ಹಿಂತಿರುಗಿದರು ದಿತಿಗೆ ಕಶ್ಯಪರು ಹೇಳಿದ್ದಂತೆ, ಲೋಕದಲ್ಲಿಉಂಟಾಗುತ್ತಿರುವ ಉಪದ್ರವಾದಿಗಳಿಂದ ಗರ್ಭದ ಬಗ್ಗೆ ವಿಶೇಷವಾಗಿ ಚಿಂತೆಯಾಗಿತ್ತು. ಒಂದುನೂರು ವರ್ಷಗಳ ಅವಧಿಯ ನಂತರ ದಿತಿಯು ಜೋಡಿ ಶಿಶುಗಳಿಗೆ ಜನ್ಮವನ್ನು ಕೊಟ್ಟಳು. ಅವರು ಜನ್ಮಿಸಿದಾಗ ಭೂಲೋಕದಲ್ಲಿ, ಸ್ವರ್ಗ ಲೋಕದಲ್ಲಿಯೂ ಸಹ ಅನೇಕ ಉತ್ಪಾತಗಳಾದುವು. ಇದರಿಂದ ಜನರು ಬಹಳ ಭಯಭೀತರಾದರು ಭೂಮಿಯು ಕಂಪಿಸಿತು ಪರ್ವತಗಳು ಅಳ್ಳಾಡಿದುವು. ದಿಕ್ಕುಗಳು ಧೂಮಾವೃತವಾದುವು. ಅಲ್ಲಲ್ಲಿ ಉಲ್ಕಾಪಾತಗಳು ಕಾಣಿಸಿಕೊಂಡುವು. ಸಿಡಿಲುಗಳು ಬಿದ್ದುವು, ಧೂಮಕೇತುಗಳು ಕಾಣಿಸಿಕೊಂಡುವು. ಸುಂಟರಗಾಳಿಯು ಬೀಸತೊಡಗಿತು. ನಿಬಿಡಮೋಡಗಳು ಅಂತರಿಕ್ಷದಲ್ಲಿ ವ್ಯಾಪಿಸಿ ಸೂರ್ಯ-ದರ್ಶನವಾಗದಂತೆ ಮಾಡಿದುವು. ಎಲ್ಲೆಡೆಯಲ್ಲಿಯೂ ಅಂಧಕಾರವು ತುಂಬಿಕೊಂಡಿತು. ದುಃಖೀಮಾನವನಂತೆ ಸಮುದ್ರನು ಕೋಲಾಹಲ ಮಾಡತೊಡಗಿದನು. ಪ್ರಬಲವಾದ ಅಲೆಗಳು ಏಳತೊಡಗಿದುವು. ಜಲಚರಗಳು ಒದ್ದಾಡಲಾರಂಭಿಸಿದುವು. ನದಿಗಳಲ್ಲಿಯೂ, ಜಲಾಶಯಗಳಲ್ಲಿಯೂ ಉಂಟಾದ ಕ್ಷೋಭೆಯಿಂದ ಅಲ್ಲಿಯ ಕಮಲಗಳು ಒಣಗಿಹೋದುವು. ಸೂರ್ಯ ಚಂದ್ರರ ಸುತ್ತ ಪರಿವೇಷಗಳು ಸುತ್ತುವರೆಯಲ್ಪಟ್ಟುವು. ಮೋಡಗಳಿಲ್ಲದಿದ್ದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಘೋರ ಗರ್ಜನೆಯು ಕೇಳಿ ಬರುತ್ತಿತ್ತು. ಹಳ್ಳಿಗಳಲ್ಲಿ ನೊಲಗಳೂ, ನರಿಗಳೂ, ಅಮಂಗಲ ಸೂಚಕ ಶಬ್ದಗಳನ್ನು ಮಾಡುತ್ತಿದ್ದುವು. ನಾಯಿಗಳು ವಿಧ-ವಿಧವಾಗಿ ಆರ್ತ ಸ್ವರ ಮಾಡುತ್ತಿದ್ದುವು. ಗುಂಪು ಗುಂಪಾಗಿ ಕತ್ತೆಗಳು ಕಾಲುಗಳಿಂದ ಭೂಮಿಯನ್ನು ಅಗೆಯುತ್ತಾ - ಕಿರುಚುತ್ತಾ ಮನಸ್ಸು ಬಂದ ಹಾಗೆ ಓಡುತ್ತಿದ್ದುವು. ಈವಾತಾವರಣದಿಂದ ಗಾಬರಿಗೊಂಡ ಪಕ್ಷಿಗಳು ಸಿಕ್ಕಾಪಟ್ಟೆ ಹಾರಾಡುತ್ತಿದ್ದುವು. ಕಾಡುಗಳಲ್ಲಿ ಮೇಯುತ್ತಿದ್ದ ಹಸು-ಎತ್ತು- ಎಮ್ಮೆಗಳು ಗಾಬರಿಯಿಂದ ಓಡುತ್ತಾ ಮಲ ಮೂತ್ರಗಳನ್ನು ವಿಸರ್ಜಿಸುತ್ತಿದ್ದುವು. ಹಸುಗಳು ಹೆದರಿಕೆಯಿಂದ ರಕ್ತವನ್ನು ಕರೆಯುತ್ತಿದ್ದುವು. ಮೇಘಗಳಿಂದ ರಕ್ತಧಾರೆಯು ಹರಿಯುತ್ತಿತ್ತು. ದೇವತಾ ಮೂರ್ತಿಗಳ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಬಿರುಗಾಳಿ ಇಲ್ಲದಿದ್ದರೂ ಮರಗಳು ಮುಗುಚಿಕೊಳ್ಳುತ್ತಲಿದ್ದವು. ಶನಿ- ರಾಹು-ಆದಿ ಕ್ರೂರ ಗ್ರಹಗಳು ಯುದ್ಧ ಮಾಡತೊಡಗಿದರು. ಇಂತಹ ಅಧ್ಭುತ.ಉತ್ಪಾತಗಳನ್ನು ನೋಡಿ ಸನಕಾದಿಗಳ ಹೊರತು ಎಲ್ಲರೂ ಭಯ ಭೀತರಾದರು. ಕಾರಣವು ತಿಳಿಯದಿದ್ದುದರಿಂದ ಪ್ರಳಯಕಾಲವು ಸನ್ನಿಹಿತವಾಗಿರಬಹುದೆಂದು ತಿಳಿದರು. ಆ ಆದಿದೈತ್ಯರು ಜನ್ಮ ತಾಳಿದ ಸ್ವಲ್ಪ ಕಾಲದಲ್ಲಿಯೇ ಅಧ್ಭುತ ರೂಪವನ್ನು ಧರಿಸಿ ಪರ್ವತಾಕಾರಿಗಳಾದರು. ಅವರು ಎಷ್ಟು ವಿಸ್ತೃತರಾಗಿದ್ದರೆಂದರೆ-ಅವರ ಶಿರೋಭಾಗದ ಕಿರೀಟವು ಸ್ವರ್ಗವನ್ನು ಮುಟ್ಟುತ್ತಿತ್ತು. ಶರೀರದ ಭಾಗಗಳು ದಿಕ್ಕುಗಳನ್ನು ಮುಚ್ಚಿದ್ದುವು. ಭುಜ ಕೀರ್ತಿಗಳಿಂದ ಶೋಭಿಸುವ ಆಜಾನುಬಾಹುಗಳು, ನಡೆದಾಡಿದರೆ ಭೂಮಿಯು ಕಂಪಿಸುತ್ತಿತ್ತು. ಅವರು ಧರಿಸಿದ ಆಭರಣಗಳ ಕಾಂತಿಯಿಂದ ಸೂರ್ಯನು ಕಳಾಹೀನನಾಗಿದ್ದನು.

ಕಶ್ಯಪರಿಂದ ನಾಮಕರಣವಾಯಿತು. ಗರ್ಭದಲ್ಲಿ ಮೊದಲು ಸ್ಥಾಪಿತನಾದವನು 'ಹಿರಣ್ಯ ಕಶಿಪು'. ಗರ್ಭದಿಂದ ಮೊದಲು ಹುಟ್ಟಿದವನು 'ಹಿರಣ್ಯಾಕ್ಷ'. ಹಿರಣ್ಯ ಕಶಿಪುವು ಬ್ರಹ್ಮನ ವರದಿಂದ ದೃಪ್ತನಾಗಿ ಮೃತ್ಯುಭಯದಿಂದ ಮುಕ್ತನಾದನು. ಉಧ್ಧತನಾದ ಅವನು ತನ್ನ ಭುಜಬಲ ಪರಾಕ್ರಮದಿಂದ ಮೂರು ಲೋಕಗಳನ್ನೂ ವಶಕ್ಕೆ ತೆಗೆದು ಕೊಂಡನು. ಅವನು

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ತಮ್ಮನಾದ ಹಿರಣ್ಯಾಕ್ಷನನ್ನು ಬಹಳ ಪ್ರೀತಿಸುತ್ತಿದ್ದನು. ಅವನೂ ಅಣ್ಣನಿಗೆ ವಿಧೇಯನಾಗಿ ನಡೆದುಕೊಳ್ಳುತ್ತಿದ್ದನು.

ಒಂದುಸಾರಿ:ಹಿರಣ್ಯಾಕ್ಷನು ಗದಾಪಾಣಿಯಾಗಿ ಯುಧ್ಧಾಕಾಂಕ್ಷೆಯಿಂದ ಸ್ವರ್ಗಕ್ಕೆ ಹೋದನು. ಅವನ ವೇಗವು ದುಸ್ಸಹವಾಗಿದ್ದಿತು. ಕಾಲಿನಲ್ಲಿ ಧರಿಸಿದ ಚಿನ್ನದನೂಪುರಗಳ ಧ್ವನಿಯು ಬಹಳ ದೂರ ವ್ಯಾಪಿಸಿತ್ತು. ಕಂಠದಲ್ಲಿ ಧರಿಸಿದ್ದ ವಿಜಯ ಮಾಲೆಯು ಶೋಭಾಯಮಾನವಾಗಿದ್ದಿತು. ಹೆಗಲಿನ ಮೇಲೆ ಕಠೋರವಾದ ಗದೆ, ಅವನು ಮನೋಬಲ, ಶಾರೀರಿಕಬಲ ಹಾಗೂ ಬ್ರಹ್ಮನವರದಿಂದ ಕೊಬ್ಬಿ ಹೋಗಿದ್ದನು. ನಿರಂಕುಶನೂ ನಿರ್ಭಯನೂ ಆಗಿದ್ದನು. ಅವನನ್ನು ಕಾಣುತ್ತಿದ್ದ ಹಾಗೆಯೆ ದೇವತೆಗಳು ಗರುಡ ದರ್ಶನ ಮಾಡಿದ ಸರ್ಪಗಳಂತೆ ಕಣ್ಮರೆಯಾದರು. ಹಿರಣ್ಯಾಕ್ಷನು ಮತ್ತಷ್ಟು ಉಬ್ಬಿದನು ಯಾರೂ ಎದುರಿಸುವವರೇ ಇಲ್ಲ. ಗರ್ಜನೆಯನ್ನಾದರೂ ಕೇಳಿ ಯಾರಾದರೂ ಬರಲೆಂದು ಗುಡುಗಿನೋಪಾದಿಯಲ್ಲಿ ಗರ್ಜಿಸಿದನು. ಯಾರೂ ಇಲ್ಲ- ಹಾಗೇ ಸುತ್ತುತ್ತಾ ಆಯಾಸ ಪರಿಹಾರಾರ್ಥವಾಗಿ ಮದಿಸಿದ ಆನೆಯಂತೆ ಆಳವಾದ ಸಮುದ್ರಕ್ಕೆ ಧುಮುಕಿ ಬಿಟ್ಟನು. ಅಷ್ಟುಮಾತ್ರದಿಂದ ವರುಣನ ಸೈನಿಕರೂ, ಜಲಚರ ಪ್ರಾಣಿಗಳೂ, ಗಾಬರಿಯಿಂದ ಸಿಕ್ಕಿದ ಕಡೆಗೆ ಓಡಿಹೋದರು.

ಮಹಾಬಲಶಾಲಿಯಾದ ಹಿರಣ್ಯಾಕ್ಷನು ಅನೇಕ ವರ್ಷಗಳ ವರೆಗೆ ಸಮುದ್ರದಲ್ಲಿಯೇ ವಿಹರಿಸುತ್ತಾ ಅಲೆಗಳನ್ನೇ ಗದೆಯಿಂದ ಪ್ರಹರಿಸುತ್ತಾ ಯಾರಾದರೂ ಎದುರಾಳಿಗಳು ಸಿಕ್ಕುವರೇ ಎಂದು ನಿರೀಕ್ಷಿಸುತ್ತಿದ್ದನು. ಹೀಗೆ ವಿಹರಿಸುತ್ತಾ ಆ ದೈತ್ಯನು ವರುಣನ ರಾಜಧಾನಿಯಾದ 'ವಿಭಾವರೀ' ಪುರಿಯನ್ನು ಹೊಕ್ಕನು. ಅಲ್ಲಿ ಪಾತಾಳ ಲೋಕಾಧಿಪತಿಯಾದ ವರುಣನನ್ನು ಕಂಡನು. ನೀಚನಂತೆ ಅಭಿವಂದಿಸಿ ನನ್ನೊಡನೆ ಯುಧ್ಧಮಾಡೆಂದನು. ನೀನು ಲೋಕಪಾಲಕನು, ಮಹಾ ಕೀರ್ತಿಶಾಲಿಯು, ವೈಭವೋಪೇತನು ಮಹಾವೀರಾಧಿವೀರರನ್ನೂ ಗೆದ್ದಿರುವೆ ಮತ್ತೊಮ್ಮೆ- ನನ್ನನ್ನು ಗೆಲ್ಲುವುದರ ಮೂಲಕ ಲೋಕದ ದೈತ್ಯದಾನವರನ್ನು ಗೆದ್ದು ಹಿಂದಿನಂತೆ ರಾಜಸೂಯ ಯಾಗವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿಬಿಡು. ಈ ಮದೋನ್ಮತ್ತ ಶತ್ರುವಿನ ಉಪಹಾಸ ನುಡಿಗಳನ್ನು ಕೇಳಿ ವರುಣನಿಗೂ ಅಧಿಕ ಕೋಪವು ಬಂದಿತು. ಆದರೂ ಎಲ್ಲವನ್ನೂ ನುಂಗಿ ಕೊಂಡು ಶಾಂತಿಯಿಂದಲೇ ಹೇಳಿದನು- ತಮ್ಮ- ನನ್ನಲ್ಲೀಗ ಯುದ್ಧ ಮಾಡುವ ಉತ್ಸಾಹವೇ ಇಲ್ಲ. ನನಗೀಗ ಪುರಾಣ ಪುರುಷನ ಪುಣ್ಯ ಸ್ಮರಣೆಯೊಂದನ್ನು ಬಿಟ್ಟರೆ ಏನೂ ಬೇಕಾಗಿಲ್ಲ. ನಿನ್ನಂತಹ ಶ್ರೇಷ್ಠ ವೀರರನ್ನು ಸಂತುಷ್ಟಿಗೊಳಿಸ ತಕ್ಕಂತಹ ಯುದ್ಧವನ್ನು ನಾನು ಮಾಡಲಾರೆ. ದೈತ್ಯರಾಜ -ನಿನ್ನ ಯುದ್ಧಾಕಾಂಕ್ಷೆಯು ತೀರ ಬೇಕಾದರೆ ಶ್ರೀ ಹರಿಯೊಡನೆ ಸೆಣಸಾಡು. ಈಗ ಅವನೊಬ್ಬನೆ ಪ್ರಬಲ ವೀರನು. ನಿನ್ನಂತಹ ವೀರರೆಲ್ಲರೂಅವನನ್ನೇ ಹೊಗಳುತ್ತಾರೆ. ಅವನನ್ನು ನೋಡುತ್ತಿದ್ದ ಹಾಗೆಯೇ ನಿನ್ನ ದರ್ಪವು ಅಳಿದು ಹೋಗುವುದು. ನಿಮ್ಮಂತಹವರ ನಾಶಕ್ಕಾಗಿ ಸಾಧು ಸಂತರ ರಕ್ಷಣೆಗಾಗಿಯೇ ಅವನು ಹಲವಾರು ರೂಪಗಳನ್ನು ಧರಿಸುತ್ತಾನೆ. ಹೀಗೆ ಉಪಾಯದಿಂದ ವರುಣನು ದೈತ್ಯನ ಉಪದ್ರವದಿಂದ ಪಾರಾದನು.

ಓಂ-ತತ್ಸದಿತ್ಯೇವಂ ತೃತೀಯಸ್ಕಂಧೇ ಸಪ್ತದಶೋಽಧ್ಯಾಯಃ-||

ಶ್ರೀಮದ್ಭಾಗವತ ದರ್ಶನ, ಸ್ಕಂಧ ೩-ಅ-೧೮
"ಹಿರಣ್ಯಾಕ್ಷನೊಡನೆ ವರಾಹನ ಯುದ್ಧ"

ವರುಣನ ಬೋಧೆಯಿಂದ ದೈತ್ಯನಿಗೆ ಸಂತೋಷವಾಯಿತು. ವರುಣನು ಕೊಟ್ಟ ಎಚ್ಚರಿಕೆಯನ್ನು ಅವನು ಗಮನಿಸಲೇ ಇಲ್ಲ. ನಾರದರಿಂದ ಶ್ರೀ ಹರಿಯ ವಿಳಾಸವನ್ನು ಪಡೆದು ರಸಾತಲಕ್ಕೆ ಹೋದನು.

ನೋಡಿ - ಹಿರಣ್ಯಾಕ್ಷನಿಗೂ ಶ್ರೀ ಹರಿಯು ಇರುವ ಸ್ಥಳವನ್ನು ತೋರಿಸಿದವರು ನಾರದರೇ. ನಾರದರಿಗೆ ಇಂತಹ ಶಿಷ್ಯರೂ ಬೇಕು. ಅವರ ಮುಖ್ಯಾಭಿಪ್ರಾಯವಿಷ್ಟೇ- ತಮ್ಮನ್ನು ಸಂದರ್ಶಿಸಿದವರು ಭಗವಂತನನ್ನು ಸ್ಮರಿಸುವವರಾಗಬೇಕು. ಅವನು ಕಾಮದಿಂದ-ಲೋಭದಿಂದ- ಕ್ರೋಧದಿಂದ ಹೇಗಾದರೂ ಸ್ಮರಿಸಲಿ. ಭಗವದಾಕಾರವೃತ್ತಿಯನ್ನು ಹೊಂದುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೈಷ್ಣವ ಸಾಧು ಸಂತರಲ್ಲಿ ಶಿಷ್ಯ ಪರಮಾಭಿವೃದ್ಧಿಗೆ ಪ್ರಾಮುಖ್ಯತೆಯುಂಟು. ಇದೇ ಪ್ರವೃತ್ತಿಯುಳ್ಳವರು ನಾರದರೂ ಸಹ. ಪ್ರಾಣಿಸಾಮಾನ್ಯದ ಉದ್ಧಾರವಾಗಲೆಂಬುವುದೇ ಲೋಕೋದ್ಧಾರಪ್ರತಿಗಳಾದ ನಾರದರ ಇಚ್ಛೆಯು. ನಾರದರು ಹಿರಣ್ಯಾಕ್ಷನಿಗೆ ಹೇಳಿದರು- ನಿನಗೆ ಖಂಡಿತವಾಗಿಯೂ ಭಗವಂತನ ದರ್ಶನವಾಗುವುದು. ಆದರೆ ಅವನು ಶಂಖ, ಚಕ್ರ, ಗಧಾಧಾರಿಯಾಗಿ ನಿನಗೆ ಕಾಣಿಸಿ ಕೊಳ್ಳುವುದಿಲ್ಲ. ನೀನು ಮುರಳೀ ಮನೋಹರ ಪೀತಾಂಬರೀ ಹರಿಯನ್ನು ಧ್ಯಾನಿಸಲಾರೆ. ಪೂಜಾರಿಗೆ ತಕ್ಕ ದೇವತೆಯಷ್ಟೆ. ನಿನಗಾಗಿ ಹರಿಯು ವರಾಹರೂಪನಾಗಿ ಪ್ರಕಟನಾಗಿದ್ದಾನೆ. ಈಗ ಭೂಮ್ಯುದ್ಧರಣಕ್ಕಾಗಿ ಪಾತಾಳಕ್ಕೆ ಹೋಗಿದ್ದಾನೆ. ಅಲ್ಲಿಗೇ ಹೋಗು.

ಹಿರಣ್ಯಾಕ್ಷನು ಪಾತಾಳಕ್ಕೆ ಹೋಗಿ ವರಾಹನನ್ನು ನೋಡಿದನು- ಭೂ ದೇವಿಯನ್ನು ಕೋರೆದಾಡೆಗಳ ಮೇಲೆ ಕೂರಿಸಿಕೊಂಡು ಮೇಲಕ್ಕೆ ಬರುತ್ತಿದ್ದಾನೆ. ಆದೃಶ್ಯವನ್ನು ನೋಡಿ ದೈತ್ಯನು ಹಾಸ್ಯ ಮಾಡುತ್ತಾ ಹೇಳಿದನು - '**ಅಹೋವನ ಗೋಚರೋ ಮೃಗ**": ಅರೇ ಇದೊಂದು ಕಾಡು ಪ್ರಾಣಿ.

ಆ ಹೈನ ಮೋಹ್ಯಜ್ಞ ಮಹೀಂವಿಮುಂಚನೊ
ರಸೌಕಸಾಂ ವಿಶ್ವಸೃಜೇಯಮರ್ಪಿತಾ

ಎಲ್ಲೈ ಅವಿವೇಕಿ ಮೃಗವೇ, ಈ ಕಡೆಗೆ ಭೂಮಿಯನ್ನು ಬಿಟ್ಟು ಬಿಡು. ವಿಧಾತಾ ಬ್ರಹ್ಮನು ನಮಗಾಗಿ ಕೊಟ್ಟಿರುವುದನ್ನು ನೀನು ಮುಟ್ಟಬೇಡ.

ನ ಸ್ವಸ್ತಿ ಯಾಸ್ಯಸ್ಯನಯಾಮಮೇಕ್ಷತಃ
ಸುರಾಧಮಾಸಾದಿತ ಸೂಕರಾಕೃತೇ

ವರಾಹರೂಪೀ ದೇವಾಧಮನೇ - ನಾನು ನೋಡುತ್ತಿರುವ ಹಾಗೆಯೇ ಇವಳೊಡನೆ ಪರಾರಿಯಾಗಲು ಸಾಧ್ಯವಿಲ್ಲ. ನೀನು ಯಾವಾಗಲೂ ಮಾಯೆಯಿಂದ ದೈತ್ಯರನ್ನು ಗುಪ್ತ ರೂಪದಿಂದಲೇ ನಿಗ್ರಹಿಸುತ್ತಿರುವೆ. ನಮ್ಮ ಶತ್ರುಗಳಾದ ದೇವತೆಗಳು ನಮ್ಮ ನಿಗ್ರಹಕ್ಕಾಗಿಯೇ ಮಾಯಾವಿಯಾದ ನಿನ್ನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಕಿ ಇಟ್ಟು ಕೊಂಡಿರ ಬಹುದು. ಮೂಢ ನಿನ್ನಬಲವೆಂದರೆ ಯೋಗ ಮಾಯೆಯೊಂದೇ. ಇನ್ನಾವ ಪುರುಷಾರ್ಥವೂ ನಿನ್ನಲ್ಲಿಲ್ಲ. ಇಂದು ನಾನು ನಿನ್ನನ್ನು ಸಂಹರಿಸಿ ನನ್ನವರಿಗೆಲ್ಲ ಸಂತೋಷವುಂಟು ಮಾಡುವೆನು. ನನ್ನ ಗಧಾಘಾತದಿಂದ ನಿನ್ನ ತಲೆಯೊಡೆದು ನೀನು ಪುಡಿ ಪುಡಿಯಾದಾಗ, ಸಕಲ ದೇವತೆಗಳೂ ಮೂಲವನ್ನು ಕಡಿದ ವೃಕ್ಷದಂತೆ ನಿರಾಶ್ರಿತರಾಗಿ ಸ್ವಯಂ-ನಾಶ ವಾಗುತ್ತಾರೆ. ಈ ರೀತಿ ದೈತ್ಯನು ತನ್ನ ವಾಗ್ಬಾಣಗಳಿಂದ ಚುಚ್ಚುತ್ತಿದ್ದರೂ ವರಾಹನು ಸಹಿಸಿಕೊಂಡನು. ಭೂದೇವಿಯು ನಡುಗುತ್ತಿದ್ದಳು. ಹೆಣ್ಣಾನೆ ಯಿಂದ ಕೂಡಿದ ಗಂಡಾನೆಯು ಮೊಸಳೆಯ ಏಟನ್ನು ಸಹಿಸುವಂತೆ ಸಹಿಸಿ ಕೊಂಡು ನೀರಿನಿಂದ ಮೇಲಕ್ಕೆ ಬರತೊಡಗಿದನು. ಬುದ್ಧಿವಂತರ ಲಕ್ಷಣವೇ ಇದು. ಮೊದಲು ತಮ್ಮ ಕೆಲಸವನ್ನು ಪೂರೈಸಬೇಕು

ಸ್ವಕಾರ್ಯಂ ಸಾಧಯೇದ್ಧೀಮಾನ್ ಕಾರ್ಯಧ್ವಂಸೋಹಿ ಮೂರ್ಖತಾ ಮೊಸಳೆಯು ಆನೆಯನ್ನು ಅನುಸರಿಸುವಂತೆ ಹಳದಿಬಣ್ಣದ ಕೇಶಗಳಿಂದಲೂ, ತೀಕ್ಷ್ಣಕೋರೆದಾಡೆಗಳಿಂದಲೂ, ಕೂಡಿದ ಹಿರಣ್ಯಾಕ್ಷನು ಅನುಸರಿಸಿ ಬಂದು ವಜ್ರದಂತೆ ಗರ್ಜಿಸಿ ಹೇಳಿದನು - **"ಗತಹ್ರಿಯಾಂ ಕಿಮು ಸತಾಂ ವಿಗರ್ಹಿತಮ್"** ನಿನಗೆ ಓಡಿಹೋಗಲು ನಾಚಿಕೆಯಾಗು ವುದಿಲ್ಲವೆ? ಅಸತ್‌ಪುರುಷರಿಗೆ ಕರ್ತವ್ಯಾಕರ್ತವ್ಯ ಜ್ಞಾನವು ಹೇಗೆ ಬಂದೀತು? ವರಾಹನು ದೈತ್ಯನ ಮಾತುಗಳಿಗೆ ಗಮನವನ್ನು ಕೊಡಲಿಲ್ಲ. ಜಲದಿಂದ ಮೇಲಕ್ಕೆ ಬಂದು ಸೂಕ್ತ ಸ್ಥಳದಲ್ಲಿ ಭೂಮಿಯನ್ನು ಸ್ಥಾಪಿಸಿದನು. ಹಾಗೂ ತನ್ನ ಆಧಾರ ಶಕ್ತಿಯನ್ನು ಸೇರಿಸಿ ಅಳ್ಳಾಡದಂತೆ ಮಾಡಿದನು. ಆವಾಗ ಬ್ರಹ್ಮಾದಿಗಳು ಸ್ತುತಿಸಿದರು. ಪುಷ್ಪವೃಷ್ಟಿಯನ್ನು ಕರೆದರು. ಆಗ ಶ್ರೀಹರಿಯು ಗದಾಪಾಣಿಯಾಗಿ ಹಿಂತಿರುಗಿ ನೋಡಿದನು – ಸುವರ್ಣಾಭೂಷಣಗಳನ್ನು ಧರಿಸಿ, ಕಟು ದುರ್ವಾಕ್ಯಗಳ ಮಳೆಯನ್ನು ಸುರಿಸುತ್ತಾ, ಹಿಂಬಾಲಿಸಿ ಬರುತ್ತಿರುವ ದೈತ್ಯನನ್ನು ನೋಡಿಕ್ರೋಧದಿಂದ ನಗುತ್ತಾಹೇಳಿದನು-

ಸತ್ಯಂ ವಯಂ ಭೋವನಗೋಚರಾನ್ಮೃಗಾಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಯುಷ್ಮದ್ವಿಧಾನ್ ಮೃಗಂಯೇ ಗ್ರಾಮಸಿಂಹಾನ್,
ನಮೃತ್ಯು ಪಾಶೈಃ ಪ್ರತಿಮುಕ್ತಸ್ಯವೀರಾಃ
ವಿಕತ್ಥನಂ ತವ ಗೃಹ್ಣಂತ್ಯಭದ್ರಮ್॥

ರೇ ದೈತ್ಯ-ನೀನು ಹೇಳಿದಂತೆ ನಾನು ಕಾಡುಪ್ರಾಣಿಯೇನೊ ಅಹುದು. ನಿನ್ನಂತಹ ಗ್ರಾಮ ಸಿಂಹಗಳನ್ನು ಹುಡುಕುತ್ತಾ ತಿರುಗುತ್ತಿರುತ್ತೇನೆ. ಯಾವಾಗಲೂ ವೀರಪುರುಷರು ನಿನ್ನಂತಹ ಮೃತ್ಯುಪಾಶದಿಂದ ಬಂಧಿತರಾದ ಕುತ್ಸಿತ ಜೀವಿಗಳ ಆತ್ಮಶ್ಲಾಘನೆಗೆ ಯಾವ ವಿಧವಾದ ಬೆಲೆಯನ್ನೂ ಕೊಡುವುದಿಲ್ಲ. ಹೌದುನೀನು ಹೇಳಿದುದು ಸತ್ಯ- ನಾನು ರಸಾತಲವಾಸಿಗಳ ನಿಧಿಯನ್ನು ಕದ್ದುಕೊಂಡು ನಿನ್ನಗದಾಘಾತದ ಭಯದಿಂದ ಓಡಿಬಂದುದೇನೊ ನಿಜ. ಆದರೆ ನಿನ್ನಂತಹ ಅಸಮಾನವೀರರನ್ನು ಕಂಡಮೇಲೆ ನನ್ನ ಪ್ರಾಣ ಗಳನ್ನುಳಿಸಿ ಕೊಂಡು ಓಡುವುದಾದರೂ ಎಲ್ಲಿಗೆ? ಹೇಗೆ ತಾನೇ ಸಾಧ್ಯ? "ತ್ವಂಪದ್ರಥಾನಾಂ ಕಿಲಯೂಥಪಾಧಿಪಃ" ನೀನು ವೀರರಾದ ಕಾಲಾಳು ಗಳ ಸರದಾರನು. ನೀನು ನಿಶ್ಶಂಕನಾಗಿ ನನ್ನನ್ನು ಘಾತಿಸಿ, ನಿನ್ನ ಸಹಚರ ರಿಗೆ ಸಂತೋಷವನ್ನುಂಟುಮಾಡು. ಅವರ ಕಣ್ಣೀರನ್ನೊರೆಸು. ಹೊತ್ತು ಕಳೆಯಬೇಡ. ತನ್ನಪ್ರತಿಜ್ಞಾ ಭಂಗಮಾಡುವವನು ಅಸಭ್ಯನು, ಸತ್ಪುರುಷ ರಿಂದ ಅವನು ಮಾನ್ಯತೆಯನ್ನು ಪಡೆಯಲಾರನು. ಭಗವಂತನ ತಿರಸ್ಕಾರ ಪೂರ್ವಕವಾದ ಈ ಪರಿಹಾಸದ ನುಡಿಗಳಿಂದ ಬಹಳ ಕೋಪಗೊಂಡ ದೈತ್ಯನು ತುಳಿಸಿಕೊಳ್ಳಲ್ಪಟ್ಟ ಸರ್ಪದಂತೆ ಬುಸುಗುಟ್ಟುತ್ತಿದ್ದನು. ಸಿಟ್ಟಿನಿಂದ ಬುಸು ಬುಸನೆ ಉಸಿರುಬಿಡುತ್ತಿದ್ದನು. ಅವನ ಇಂದ್ರಿಯಗಳು ಕ್ಷುಬ್ಧಗೊಂಡಿದ್ದುವು.

ಬಹಳ ವೇಗದಿಂದ ಭಗವಂತನ ಮೇಲೆ ಗದಾಪ್ರಹಾರವನ್ನು ನಡೆಸಿದನು, ಆದರೆ ಭಗವಾನ್ ವರಾಹನು ಯೋಗಿಯು ಮೃತ್ಯುಪಾಶದಿಂದ ಪಾರಾಗುವಂತೆ ಗದಾ ಪ್ರಹಾರದಿಂದ ಪಾರಾದನು. ಪದೇ-ಪದೇ ಗದೆಯನ್ನು ತಿರುಗಿಸುತ್ತಾ ದೈತ್ಯನು ಭಗವಂತನ ಕಡೆಗೆ ನುಗ್ಗಿಬರುತ್ತಿರಲು ಭಗವಂತನೂ ಇವನ ಕಡೆಗೆ ನುಗ್ಗಿಬಂದನು ಪ್ರಭುವು ಬಲಹುಬ್ಬಿಗೆ ಗುರಿಯಿಟ್ಟು ಗದೆಯಿಂದ ಹೊಡೆಯಲು, ದೈತ್ಯನು ಬುದ್ಧಿವಂತಿಕೆಯಿಂದ ಪಾರಾದನು. ಇಬ್ಬರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಯಾಕಾಂಕ್ಷಿಗಳಾಗಿ ವಿವಿಧ ಭಂಗಿಗಳಲ್ಲಿ ಸೆಣಸಾಡತೊಡಗಿದರು. ಇಬ್ಬರ ದೇಹಗಳಿಂದಲೂ ರಕ್ತವುಧಾರಾಕಾರವಾಗಿ ಹರಿಯತೊಡಗಿತು. ಒಂದು ಹಸುವಿಗಾಗಿ ಕಾದಾಡುವ ಎರಡು ಗೂಳಿಗಳಂತೆ, ಒಬ್ಬರನ್ನೊಬ್ಬರು ಜಯಿಸುವ ಇಚ್ಛೆಯಿಂದ ಸೆಣಸಾಡತೊಡಗಿದರು. ಇವರ ಮುಷ್ಟಾಮುಷ್ಟಿ ಯನ್ನು ನೋಡಲು ಬ್ರಹ್ಮನು ಋಷಿಗಣಗಳೊಡನೆ ಬಂದನು. ಬ್ರಹ್ಮನು ನೋಡಿದನು-ದೈತ್ಯನು ಮಹಾಬಲಶಾಲಿಯಾಗಿದ್ದಾನೆ. ನಿರ್ಭಯನಾಗಿ ದ್ದಾನೆ. ಹರಿಯನ್ನು ಎದುರಿಸಲು ಸಮರ್ಥನಾಗಿದ್ದಾನೆ. ಅವನನ್ನು ನಿಗ್ರಹಿಸುವುದು ಯಾರಿಗಾದರೂ ಕಷ್ಟಸಾಧ್ಯವೆಂದು ತೋರುತ್ತದೆ. ಆಗ ಭಗವಾನ್‌ವರಾಹನೊಡನೆ ಹೇಳಿದರು -ಪ್ರಭೋ, ಇವನು ನನ್ನ ವರದಾನ ದಿಂದ ದೃಪ್ತನಾಗಿ ಅಜೇಯನಾಗಿದ್ದಾನೆ. ಗೋ-ಬ್ರಾಹ್ಮಣರಾದಿಯಾಗಿ ನಿರಪರಾಧಿಜೀವಿಗಳ ಹಿಂಸಕನಾಗಿದ್ದಾನೆ. ಇವನಿಗೆ ಎದುರಾಳಿಗಳೇ ಇಲ್ಲದಿದ್ದುದರಿಂದ ತ್ರಿಲೋಕವನ್ನೆಲ್ಲಾ ಅಲೆದನು. ಈತನು ಮಹಾಮಾಯಾವೀ ಗರ್ವಿಷ್ಠನು ನಿರಂಕುಶನು. ಮಗುವು ಹಾವಿನೊಡನೆ ಆಟವಾಡುವಂತೆ, ಇವನೊಡನೆ ನೀನು ಆಟವಾಡತೊಡಗಬೇಡ. ಇವನ ಬಲವರ್ಧಿಸುವ ವೇಳೆಯು ಪ್ರಾಪ್ತವಾಗುವುದರಲ್ಲಿದೆ. ಅಷ್ಟರಲ್ಲಿ ನಿನ್ನ ಯೋಗಮಾಯಾ ಪ್ರಾಬಲ್ಯದಿಂದ ಇವನನ್ನು ನಿಗ್ರಹಿಸಬೇಕು.

ಈ ಸಂಧ್ಯಾಕಾಲವು ಪ್ರಾಪ್ತವಾಗುವುದರೊಳಗೆ, ನೀನು ಇವನನು ಸಂಹರಿಸಿ ದೇವತೆಗಳಿಗೆ ಹರ್ಷದಾಯಕನಾಗು. ಈಗ ಅಭಿಜಿನ್ಮುಹೂರ್ತವು ಪ್ರಾಪ್ತವಾಗಿದೆ. ಈಗಲೇ ಇವನನ್ನು ನಿಗ್ರಹಿಸಿ ನಮಗಳಿಗೆಲ್ಲಾ ಕಲ್ಯಾಣ ಕಾರಿಯಾಗು. ನಿನ್ನಿಂದಲೇ ಇವನಿಗೆ ಮರಣವು ನಿಶ್ಚಯಿಸಲ್ಪಟ್ಟಿದೆ, ಇವನ ಸಾವಿನಿಂದ ಲೋಕವು ಶಾಂತಿಯನ್ನು ಕಾಣಬೇಕು. ಶತ್ರುನಾಶದಲ್ಲಿ ವಿಳಂಬವುಸಲ್ಲದು.

ಓಂ ತತ್ಸದಿತ್ಯೈವಂ. ತೃತೀಯ ಸ್ಕಂಧೇ ಅಷ್ಟಾದಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

"ಹಿರಣ್ಯಾಕ್ಷ ವಧೆ"

ಭಗವಂತನು ಬ್ರಹ್ಮನ ಪ್ರಾರ್ಥನೆಯನ್ನು ಕೇಳಿ ಮಂದಸ್ಮಿತನಾಗಿ ಪ್ರೇಮ ಪೂರ್ಣ ದೃಷ್ಟಿಯಿಂದ ಅವನನ್ನೊಮ್ಮೆ ನೋಡಿದನು. ಹಾಗೂ ಹಿಂತುರುಗಿ ಹಿರಣ್ಯಾಕ್ಷನ ಮೇಲೆ ಗದೆಯನ್ನು ಪ್ರಯೋಗಿಸಿದನು. ಆದರೆ ಅದು ದೈತ್ಯನ ಗದಾಘಾತದಿಂದ ಕೆಳಕ್ಕೆ ಬಿದ್ದು ಬಿಟ್ಟಿತು. ಆ ಸಮಯದಲ್ಲಿ ದೈತ್ಯನು ಯುದ್ಧ ನೀತಿ ಗನುಗುಣವಾಗಿ ಪ್ರಭುವಿನ ಮೇಲೆ ಆಕ್ರಮಣ ಮಾಡಲಿಲ್ಲ, ನಂತರ ಅವನನ್ನು ಪ್ರಶಂಶಿಸುತ್ತಾ, ಸುದರ್ಶನ ಚಕ್ರವನ್ನು ಧರಿಸಿದನು. ಹಾಗೂ ಅವನೊಡನೆ ವಿವಿಧ ಯುದ್ಧ ಲೀಲೆಗಳಿಗೆ ತೊಡಗಿದನು.

ಆಗ ದೇವತೆಗಳು ಘೋಷಿಸಿದರು **ನಾರಾಯಣ, ವಿಜಯೀ ಭವ, ಆದಿ ವರಾಹ ಸ್ವಾಮಿನ್ ಶೀಘ್ರಂ ಜಯಮಾಪ್ನುಹಿ, ಸ್ವಸ್ತಿತೇ ಮುಂಜಹಿ.** ದೈತ್ಯನೂ ಇದನ್ನು ಕೇಳಿ ಮಹಾ ಕೋಪದಿಂದ ವರಾಹನನ್ನು ಸುಟ್ಟು ಬಿಡುವನೋ ಎಂಬಂತೆ ಗದೆಯಿಂದ ಅಪ್ಪಳಿಸಿದನು— **"ಹತೋಽಸಿ"** ಪ್ರಭುವು ಲೀಲೆಯಿಂದಲೇ ಅದನ್ನು ವ್ಯರ್ಥ ಗೊಳಿಸಿದನು. ಪುನಃ ದೈತ್ಯನು ಪ್ರಹರಿಸಲು ಪ್ರಭುವು ಗರುಡನು ಹಾವನ್ನು ಹಿಡಿಯುವಂತೆ ಗದೆಯನ್ನು ಹಿಡಿದು ಬಿಟ್ಟನು. ಪುನಃ ಪ್ರಭುವು ಗದೆಯನ್ನು ಕೊಟ್ಟರೂ ದೈತ್ಯನು ಸ್ವೀಕರಿಸದೆ ತ್ರಿಶೂಲವನ್ನು ಪ್ರಯೋಗಿಸಲು, ಅದನ್ನು ಹರಿಯು ತನ್ನ ಚಕ್ರದಿಂದ ಚೂರು ಚೂರು ಮಾಡಿದನು. ಇದರಿಂದ ಕ್ರುದ್ಧನಾದ ಹಾಗೂ ನಿರಾಶನಾದ ದೈತ್ಯನು ಓಡಿ ಬಂದು ಶ್ರೀವತ್ಸಾಂಕಿತ ಪ್ರಭುವಿನ ವಕ್ಷಃಸ್ಥಳವನ್ನು ತನ್ನ ವಜ್ರ ಮುಷ್ಟಿಯಿಂದ ಗುದ್ದಿ ಅಂತರ್ಧಾನನಾದನು.

ಆದಿ ವರಾಹನು ಇದರಿಂದ ಕಿಂಚಿತ್ತೂ ವಿಹ್ವಲನಾಗಲಿಲ್ಲ. ಆಗ ದೈತ್ಯನು ತನ್ನ ಆಸುರೀ ಮಾಯೆಯನ್ನು ಪ್ರಯೋಗಿಸಿದನು. ಬಿರುಗಾಳಿಯು ಬಿರುಸಾಗಿ ಬೀಸತೊಡಗಿತು. ಸರ್ವ ದಿಕ್ಕುಗಳಲ್ಲಿಯೂ ಧೂಳು ತುಂಬಿ ಲೋಕವು ಅಂಧಕಾರ ಮಯವಾಯಿತು. ಕಲ್ಲು ಮಳೆಯು ಕರೆಯತೊಡಗಿತು. ಸಿಡಿಲು- ಗುಡುಗು, ಆಕಾಶದಲ್ಲೆಲ್ಲಾ ಪ್ರಚಂಡ ಮೇಘಗಳು ಹರಿದಾಡ ತೊಡಗಿದುವು. ಸೂರ್ಯ ಚಂದ್ರರು ಮುಚ್ಚಿ ಹೋದರು- ರಕ್ತ - ಕೀವು-

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಂಸ ಮಲಮೂತ್ರಗಳ ವರ್ಷಣವಾಯಿತು. ಲೋಕದವರೆಲ್ಲರೂ ಹೆದರಿದರು. ಪ್ರಳಯ ಕಾಲವು ಸಮೀಪವಾಗಿದೆ ಎಂದೆನಿಸಿತು. ವಿದುರ- ಎಷ್ಟು ಹೇಳಲಿ? ಅಸ್ತ್ರ ಶಸ್ತ್ರಗಳನ್ನು ಗುಳುವ ಪರ್ವತಗಳೇ ಓಡಾಡುತ್ತಿದ್ದುವು. ಬೆತ್ತಲೆ ರಾಕ್ಷಸಿಯರು ತ್ರಿಶೂಲಧಾರಿಗಳಾಗಿ ಸುತ್ತತೊಡಗಿದರು. ಮಾಯಾ ರಾಕ್ಷಸರ ಹೊಡೆ- ಬಡಿ- ತಿವಿ ಶಬ್ದಗಳಿಂದ ಅಂತರಿಕ್ಷವು ತುಂಬಿಹೋಯಿತು. ಶ್ರೀ ಹರಿಯು ಸುದರ್ಶನ ಚಕ್ರದಿಂದ ಮಾಯೆಯನ್ನು ಸಂಹರಿಸಿದನು. ದಿತಿಯ ಹೃದಯವು ಭಯಾಕ್ರಾಂತನಾಯಿತು. ಅವಳ ಸ್ತನಗಳಲ್ಲಿ ರಕ್ತವು ಸುರಿಯಿತು. ಇದರಿಂದ ವಿಫಲಗೊಂಡ ದೈತ್ಯನು ಓಡಿ ಬಂದು ಹರಿಯನ್ನು ಬಾಚಿ ತಬ್ಬಿದನು. ವರಾಹನನ್ನು ಮುಷ್ಟಿಯಿಂದ ಹೊಡೆಯಲಾರಂಭಿಸಲು ಶ್ರೀಹರಿಯು ಇಂದ್ರನು ವೃತ್ರಾಸುರನನ್ನು ಸರಿಹರಿಸಿದಂತೆ ಅವನ ಕಿವಿಯ ಬಳಿ ತನ್ನ ಕೈನಿಂದ ಎತ್ತಿ ಹೊಡೆದನು. ಅದೇನೋ ಸಾಧಾರಣವಾದ ಹೊಡೆತವೇ ಅಹುದು. ಆದರೂ ದೈತ್ಯನ ಕಣ್ಣುಗಳೆರಡೂ ಹೊರಕ್ಕೆ ಬಂದವು. ಕೈ ಕಾಲುಗಳ ಶಕ್ತಿಯು ಉಡುಗಿತು. ದೇಹವು ನಿಲ್ಲಲಾರದೆ ಹೋಯಿತು. ಬುಡ ಕತ್ತರಿಸಿದ ಮರವು ಧಿಡೀರನೆ ಬೀಳುವಂತೆ ಭೂಮಿಯ ಮೇಲೆ ಬಿದ್ದು ಬಿಟ್ಟನು. ದೇವತೆಗಳೆಲ್ಲರೂ ದೈತ್ಯನ ಮಹಾಭಾಗ್ಯವನ್ನು ಹೊಗಳಲಾರಂಭಿಸಿದರು. ಯಾರನ್ನು ಯೋಗಿಗಳು ಸಮಾಧ್ಯವಸ್ಥೆಯಲ್ಲಿ ಧ್ಯಾನಿಸುವರೊ. ಅಂತಹ ದಿವ್ಯ ಪುರುಷನ ಸಂದರ್ಶನವನ್ನು ಮಾಡುತ್ತಾ, ದೈತ್ಯನು ದೇಹತ್ಯಾಗಿಯಾಗಿದ್ದಾನೆ. ದೇವತೆಗಳು ದೇವಾದಿದೇವನನ್ನು ಸ್ತುತಿಸುತ್ತಿದ್ದರು

ನಮೋ ನಮಸ್ತೇಽಖಿಲಯಜ್ಞತಂತವೇ
ಸ್ಥಿತೌಗೃಹೀತಾಮಲಸತ್ವಮೂರ್ತಯೇ
ದಿಷ್ಟ್ಯಾಹತೋಽಯಂ ಜಗತಾಮರುಂತುದಃ
ತ್ವತ್ಪಾದ ಭಕ್ತ್ಯಾವಯಮೀಶನಿರ್ವೃತಾ;

ಪ್ರಭೋ — ನಿನಗೆ ಅನಂತ ನಮಸ್ಕಾರಗಳು. ನೀನು ಸಂಪೂರ್ಣ ಯಜ್ಞಗಳ ವಿಸ್ತಾರ ಕರ್ತನು. ಜಗತ್ತಿನ ಸಂರಕ್ಷಣೆಗಾಗಿ ನಿನ್ನ ದಿವ್ಯ ಸ್ವರೂಪವನ್ನು ಪ್ರಕಟಿಸುವೆ. ಪ್ರಪಂಚಕ್ಕೆ ಭಯ ಪ್ರದನಾದ ದುಷ್ಟದೈತ್ಯನ ಸಂಹಾರವಾಯಿತು. ಇದು ಮಹಾಸಂತೋಷಕರವಾದ ವಿಚಾರವು. ನಿನ್ನ ಕೃಪೆಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವೆಲ್ಲರೂ ಸುಖ -ಶಾಂತಿಗಳನ್ನು ಪಡೆದೆವು.

ಹೀಗೆ ಮಹಾಪರಾಕ್ರಮಿ ಹಿರಣ್ಯಾಕ್ಷನ ವಧೆಯ ನಂತರ ಆದಿ ವರಾಹ ಸ್ವಾಮಿಯು ತನ್ನ ದಿವ್ಯವಾದ ಆನಂದ ಧಾಮಕ್ಕೆ ಪ್ರಯಾಣ ಮಾಡಿದನು. ಬ್ರಹ್ಮಾದಿದೇವತೆಗಳೆಲ್ಲರೂ ಅವನನ್ನು ಸ್ತುತಿಸಿದರು. ಮೈತ್ರೇಯರು ಹೇಳುತ್ತಾರೆ– ವಿದುರ - ಭಗವಂತನ ಲೀಲಾ ವಿಭೂತಿಗಳನ್ನು ಅವನು ಹೇಗೆ ಲೀಲಾ ಮಾತ್ರದಿಂದ ದುಷ್ಟರನ್ನು ಸಂಹರಿಸುತ್ತಾನೆ, ಶಿಷ್ಟರನ್ನು ಪಾಲಿಸುತ್ತಾನೆ, ಇದೆಲ್ಲವನ್ನೂ ನಾನು ಗುರು ಮುಖದಿಂದ ಶ್ರವಣ ಮಾಡಿದ ರೀತಿಯಲ್ಲಿ ನಿನಗೆ ತಿಳಿಸಿದ್ದೇನೆ.

ಸೂತ ಪುರಾಣಿಕರು ಹೇಳುತ್ತಾರೆ – ಮೈತ್ರೇಯರಿಂದ ಈ ಪರಮ ಪಾವನ ಕಥೆಯನ್ನು ಕೇಳಿದ ವಿದುರನು ಆನಂದಿತನಾದನು. ಸಾಮಾನ್ಯವಾಗಿ ಮಹಾಪುರುಷರ ದಿವ್ಯ ಕಥಾ ಶ್ರವಣವೆ ಆನಂದದಾಯಕವಾದುದು. ಅದರಲ್ಲಿಯೂ ಭಗವಂತನ ಕಥಾಶ್ರವಣದ ಬಗ್ಗೆ ಹೇಳುವುದೇನಿದೆ? ಗಜರಾಜನ ಆರ್ತನಾದವನ್ನು ಕೇಳಿ ಓಡಿಬಂದು ರಕ್ಷಿಸಲಿಲ್ಲವೇ? ಅವನ ಪತ್ನಿಯರಿಗೆ ಆವಾಗ ಎಷ್ಟು ಆನಂದದಾಯಕವಾಯಿತೆಂಬುವುದನ್ನು ಹೇಳಲಾದೀತೇ? ದುಷ್ಟ ಪುರುಷರಿಗೆ ಒಲಿಯುದ ಆ ಸಾಧು ಪುರುಷ ಪ್ರೇಮಿಯ ಲೀಲೆಗಳನ್ನು ಕೇಳಲು ಬಯಸದವರು ಯಾರಿರುವರು? ಶೌನಕರೇ – ಈ ಹಿರಣ್ಯಾಕ್ಷನ ವಧಾತ್ಮಕವಾದ ಆದಿವರಾಹನ ಅಧ್ಭುತ ಚರಿತ್ರೆಯನ್ನು ಕೇಳುವವರೂ ಹಾಡುವವರೂ, ಅನುಮೋದಿಸುವವರೂ ಬ್ರಹ್ಮನ ವಧೆಯಂತಹ ಘೋರಪಾಪ ದಿಂದಲೂ ಮುಕ್ತರಾಗುತ್ತಾರೆ.

ಈ ಚರಿತ್ರೆಯು ಅತ್ಯಂತ ಪುಣ್ಯಪ್ರದವಾದುದು ಪರಮ ಪವಿತ್ರವಾದುದು. ಸರ್ವ ಕಾಮನೆಗಳನ್ನೂ ಪೂರ್ಣ ಗೊಳಿಸುವ, ಯುಧ್ಧದಲ್ಲಿ ಪ್ರಾಣೇಂದ್ರಿಯ ಶಕ್ತಿಗಳನ್ನು ವೃಧ್ಧಿಪಡಿಸುವ ಈ ಮಹಾ ಚರಿತ್ರೆಯನ್ನು ಶ್ರವಣ ಮಾಡುವವರೆಲ್ಲರೂ ಭಗವಂತನ ಕೃಪಾಶ್ರಯಕ್ಕೆ ಪಾತ್ರರಾಗುತ್ತಾರೆ.

ಓಂ ತತ್ಸದಿತಿ ತೃತೀಯ ಸ್ಕಂಧೇ ಏಕೋನವಿಂಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

'ಬ್ರಹ್ಮಸಿಂದಾದ ಅನೇಕ ವಿಧ ಸೃಷ್ಟಿ ವರ್ಣನೆ'

ಶೌನಕಾದಿಗಳು ಸೂತ ಪೌರಾಣಿಕರನ್ನು ಕೇಳುತ್ತಾರೆ - ಪೂಜ್ಯರೇ - ಸ್ವಾಯಂಭುವ ಮನುವು ಪೃಥ್ವೀರೂಪ ಆಧಾರವನ್ನುಹೊಂದಿ ಸೃಷ್ಟಿಯ ಅಭಿವೃದ್ಧಿಗಾಗಿ ಯಾವ ಯಾವ ಉಪಾಯಗಳನ್ನು ಮಾಡಿದನು ವಿದ ನಾದರೊ ಶ್ರೇಷ್ಠ ಭಗವದ್ಭಕ್ತನು. ಹಾಗೂ ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯನು. ಆದರಿಂದ ಧೃತರಾಷ್ಟ್ರನನ್ನೂ ಅವನ ಮಕ್ಕಳನ್ನೂ, ಅವರು ಶ್ರೀಕೃಷ್ಣನನ್ನು ದ್ವೇಷಿಸುತ್ತಾರೆಂಬ ಕಾರಣದಿಂದಲೇ ತ್ಯಾಗಮಾಡಿದ್ದನು. ವಿದುರನು ವ್ಯಾಸ ಪುತ್ರನೆಂದ ಮೇಲೆ ಹೇಳುವುದೇನಿದೆ? ಅವನು ಸಾಕ್ಷಾತ್ ಶ್ರೀಕೃಷ್ಣಾತ್ರಿತನೂ, ಕೃಷ್ಣ ಸೇವಕನೂ ಆಗಿದ್ದನು. ತೀರ್ಥ ಸೇವನೆಯಿಂದ ಮತ್ತಷ್ಟು ಪವಿತ್ರ ನಾಗಿದ್ದನು. ಕುಶಾವರ್ತ (ಹರಿದ್ವಾರ) ಕ್ಷೇತ್ರದಲ್ಲಿ ಮೈತ್ರೇಯರನ್ನು ಸಂದರ್ಶಿಸಿದ ವಿದುರನು ಅವರೊಡನೆ ಮತ್ತೇನನ್ನು ಪ್ರಶ್ನಿಸಿದನು? ತತ್ವಜ್ಞರೊಶನೆ ನಡೆಯುವ ಸಂಭಾಷಣೆಯು ಸ್ವಾರಸ್ಯ ಕರವಾಗಿರುತ್ತದೆ. ಅವರಿಬ್ಬರಲ್ಲಿ ನಡೆದ ಕಥಾ ಪ್ರಸಂಗಗಳು ಭಕ್ತಿ ವರ್ಧಕಗಳಾಗಿರುತ್ತವೆ. ಗಂಗಾ ನದಿಯಂತೆ ಸಕಲಲೋಕ ಪಾವನಕರಗಳಾಗಿರುತ್ತವೆ. ಪೌರಾಣಿಕರೆ ತಮಗೆ ಅನಂತ ನಮಸ್ಕಾರಗಳು. ತಾವು ಭಗವಂತನ ಲೀಲಾವಿಭೂತಿಗಳನ್ನು ವರ್ಣಿಸಿರಿ. ಆ ಪ್ರಭುವಿನ ಗುಣಗಾನದಿಂದ ತೃಪ್ತಿಯೇ ಉಂಟಾಗುವುದಿಲ್ಲ. ಈ ರೀತಿ ನೈಮಿಷಾರಣ್ಯ ವಾಸಿಗಳು • ಉಗ್ರಶ್ರವಾ ಸೂತರನ್ನು ನಮ್ರತೆಯಿಂದ ಪ್ರಶ್ನಿಸೋಣ ಅವರು ಭಗವಂತನ ಚರಣ ಕಮಲಗಳನ್ನು ಧ್ಯಾನಿಸುತ್ತಾ ಹೇಳಿದರು —

ವರಾಹ ರೂಪಧಾರಿಯಾದ ಮಾಯಾವಿ ಶ್ರೀಹರಿಯು ರಸಾತಲದಿಂದ ಪೃಥ್ವಿಯನ್ನು ಉದ್ಧರಿಸಿ, ಹಿರಣ್ಯಾಕ್ಷನನ್ನು ನಿಗ್ರಹಿಸಿದನೆಂದು ಕೇಳಿದ ವಿದುರನು ಅತ್ಯಂತ ಆನಂದಿತನಾದನು. ಹಾಗೂ ಮೈತ್ರೇಯರನ್ನು ಕೇಳಿದನು - ಬ್ರಹ್ಮನ್ - ತಾವು ಪರೋಕ್ಷ ಪ್ರತ್ಯಕ್ಷ ಜ್ಞಾನಿಗಳು. ತಾವು ದಯೆಯಿಟ್ಟು ತಿಳಿಸಿ - ಬ್ರಹ್ಮನು ಮರೀಚ್ಯಾದಿ ಪ್ರಜಾಪತಿಗಳನ್ನು ಸೃಷ್ಟಿಸಿದ ನಂತರ ಸೃಷ್ಟಿಯ ಅಭಿವೃದ್ಧಿಗಾಗಿ ಮತ್ತೇನು ಮಾಡಿದನು? ಹಾಗೂ ಮರೀಚ್ಯಾದಿಗಳು ಹೇಗೆ ಸೃಷ್ಟಿಯನ್ನು ಅಭಿವೃದ್ಧಿ ಪಡಿಸಿದರು? ದಾಂಪತ್ಯ ಭಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದಲೇ? ಸ್ವತಂತ್ರರೂಪವಾಗಿಯೋ? ಅಥವಾ ಸಹಕಾರರೂಪದಿಂದಲೇ? ಎಲ್ಲವನ್ನೂ ದಯೆಯಿಟ್ಟು ವಿವರಿಸಿ ಎಂದು ಕೇಳಿಕೊಳ್ಳಲು ಮೈತ್ರೇಯರು ಹೇಳುತ್ತಾರೆ– ವಿದುರ ಪರಮಾತ್ಮನ ಗತಿಯನ್ನು ತಿಳಿಯುವುದು ಕಷ್ಟ. ಜೀವಿಗಳ ಪ್ರಾರಬ್ಧ- ಪ್ರಕೃತಿನಿಯಂತಾಪುರುಷ- ಹಾಗೂ ಕಾಲ ಈ ಮೂರರ ಕಾರಣಗಳಿಂದ ತ್ರಿಗುಣಮಯೀ ಪ್ರಕೃತಿಯು ಕ್ಷುಬ್ಧಗೊಂಡು ಮಹತ್ತತ್ತ್ವದ ಉತ್ಪತ್ತಿಗೆ ಕಾರಣವಾಯಿತು. ದೈವ ಪ್ರೇರಣೆ ಗನುಗುಣವಾಗಿ, ರಜ: ಪ್ರಧಾನವಾದ ಮಹತ್ತತ್ವದಿಂದ, ವೈಕಾರಿಕ- ಸಾತ್ವಿಕ- ರಾಜಸ-ತಾಮಸಾಹಂ ಕಾರಗಳು ಉತ್ಪನ್ನವಾದುವು. ಅವುಗಳಿಂದ ಆಕಾಶಾದಿ ಪಂಚ ತತ್ವಗಳ ಅನೇಕ ವರ್ಗಗಳು ಉತ್ಪನ್ನವಾದುವು. ಅಂದರೆ - ಪಂಚ ತನ್ಮಾತ್ರೆಗಳು, ಪಂಚ ಮಹಾಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂ ದ್ರಿಯಗಳು, ತದಭಿಮಾನಿ ಪಂಚ ಪಂಚ ದೇವತೆಗಳು. ಹೀಗೆ ಆರು ವರ್ಗ ಗಳು ಉತ್ಪನ್ನವಾದುವು. ಅವುಗಳು ಪೃಥಕ್- ಪೃಥಕ್ ಆಗಿದ್ದು ಸೃಷ್ಟಿಯನ್ನು ಮಾಡಲು ಸಮರ್ಥಗಳಾಗಿರಲಿಲ್ಲ. ಅಂತೆಯೇ ಭಗವಂತನ ಶಕ್ತಿಯಿಂದ ಪರಸ್ಪರ ಸಂಗಠಿತಗಳಾಗಿ, ಸುವರ್ಣದ ಭಾರಿ ಅಂಡವೊಂದನ್ನು ರಚಿಸಿದುವು. ಆ ಅಂಡವು ಚೇತನಾ ಶೂನ್ಯವಾಗಿ, ಕಾರಣವಾರಿಯಲ್ಲಿ ಒಂದು ಸಹಸ್ರ ವರ್ಷ ಕ್ಕಿಂತಲೂ ಹೆಚ್ಚು ಕಾಲವಿದ್ದಿತು. ಆಗ ಭಗವಂತನು ಅದರಲ್ಲಿ ಪ್ರವೇಶ ಮಾಡಿದನು. ಅವನ ಪ್ರವೇಶವಾದೊಡನೆ ನಾಭಿ ಪ್ರದೇಶದಿಂದ ಸಹಸ್ರ ಸೂರ್ಯ ತೇಜಸ್ಸುಳ್ಳ ಭಾರಿ ಕಮಲವೊಂದು ಆವಿರ್ಭವಿಸಿತು ಅದು ಸಂಪೂರ್ಣ ಜೀವ ಸಮುದಾಯಕ್ಕೆ ಆಶ್ರಯ ಭೂತವಾಗಿದ್ದಿತು. ಆ ಕಮಲ ದಿಂದಬ್ರಂಹ್ಮನ ಪ್ರಾದುರ್ಭಾವ ವಾಯಿತು. ಆಗಬ್ರಂಹ್ಮಾಡದ ಗರ್ಭದಲ್ಲಿ ಜಲಶಾಯಿಯಾಗಿದ್ದ ನಾರಾಯಣನು ಬ್ರಹ್ಮನ ಅಂತ:ಕರಣದಲ್ಲಿ ಪ್ರವೇಶಿಸಿ ದನು. ಆಗ ಬ್ರಹ್ಮನು ಪೂರ್ವಕಲ್ಪಾನುಸಾರವಾಗಿ ನಾಮರೂಪವ್ಯವಸ್ಥೆಯಿಂದ ಲೋಕಗಳನ್ನು ಸೃಷ್ಟಿಸತೊಡಗಿದನು. ಮೊಟ್ಟ ಮೊದಲು ತನ್ನ ಮಾಯೆ ಯಿಂದ ತಾಮಿಸ್ರ- ಅಂಧತಾಮಿಸ್ರ - ತಮಸ್ಸು – ಮೋಹ - ಮಹಾಮೋಹ ಈ ಐದು ವಿಧದ ಅವಿದ್ಯೆಯನ್ನು ಸೃಷ್ಟಿಸಿದನು- ಬ್ರಹ್ಮನಿಗೆ ಆ ತಮೋಮಯ ಶರೀರವು ಇಷ್ಟವಾಗಲಿಲ್ಲ. ಆದನ್ನು ತ್ಯಜಿಸಿಬಿಟ್ಟನು. ಆಗ ಯಕ್ಷ ರಾಕ್ಷಸರು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕ್ಷುತ್. ತೃಷ್ಣಾಯುಕ್ತವಾದ ರಾತ್ರಿರೂಪ ಶರೀರವನ್ನು ಗ್ರಹಿಸಿದರು. ಕ್ಷುತ್ ತೃಷ್ಣಾ ಪೀಡಿತರಾದ ಅವರು ಬ್ರಹ್ಮನನ್ನೆ ತಿನ್ನಲು ನುಗ್ಗಿದರು ಪರಸ್ಪರ ಕೂಗಾಡಿದರು. **ಜಕ್ಷಧ್ವಂ:ಮಾರಕ್ಷತ,** ಬ್ರಹ್ಮನೂ ಗಾಬರಿಯಿಂದ ಹೇಳಿದನು— ಹಾಗೆ ಮಾಡಬೇಡಿ ನಾನು ನಿಮ್ಮ ಮೂಲ ಪುರುಷನು. **ಮಾ ಮಾಂ ಜಕ್ಷತ— ರಕ್ಷತ,** ಇದರಿಂದ ಅವರು ಯಕ್ಷರು ರಾಕ್ಷಸರು ಎನಿಸಿಕೊಂಡರು.

ಇಲ್ಲಿ ವಾಚಕರುಗಮನಿಸಬೇಕು-ನಮ್ಮ ತತ್ವ ಜಿಜ್ಞಾಸೆಯಲ್ಲಿ ಒಂದು ಅಧ್ಭುತತೆಯಿದೆ. ಸೃಷ್ಟಿಯಲ್ಲಿ ಇನ್ನೂ ಹಲವಾರು ವಿಧದ ಈಶ್ವರವಾದಿಗಳಿದ್ದಾರೆ. ಅವರು ತತ್ವದೃಷ್ಟಿಯಿಂದ ಈಶ್ವರನನ್ನು ನಿರೂಪಿಸುವುದಿಲ್ಲ. ತಮ್ಮ ವಿಶ್ವಾಸ-ಭಾವನೆಗಳಿಗೆ ಅನುಗುಣವಾಗಿ ನಿರೂಪಿಸುತ್ತಾರೆ. ಆದರೆ ದರ್ಶನ ಶಾಸ್ತ್ರಪ್ರಧಾನವಾದ ನಮ್ಮ ವೈದಿಕಧರ್ಮದಲ್ಲಿ ತತ್ವದೃಷ್ಟಿಯಿಂದ ಪರಮಾತ್ಮನನ್ನು ನಿರೂಪಿಸುತ್ತಾರೆ. ನಮ್ಮಲ್ಲಿಯೂ ಕೆಲವರು ತತ್ವನಿರೂಪಣೆಯಲ್ಲಿ ಉತ್ಸಾಹಿಗಳಾಗಿರುವುದಿಲ್ಲ. ಇದು ಬೇರೆ ವಿಚಾರ. ತತ್ವಗಳಿಂದ ಅಂಡನಿರ್ಮಾಣ, ಅವುಗಳಿಂದ ಅವಿದ್ಯಾದಿಗಳ ಸೃಷ್ಟಿ, ಬ್ರಹ್ಮನು ದೇಹವನ್ನು ತ್ಯಜಿಸುವುದು ಇತ್ಯಾದಿ ವಿಚಾರಗಳನ್ನು ಸಾಧಾರಣರು ಅರ್ಥಮಾಡಿಕೊಳ್ಳಲಾರರು. ಕಾರಣವೇನೆಂದರೆ-ಅವರ ಅಭಿಪ್ರಾಯದಲ್ಲಿ ಬ್ರಹ್ಮನ ದೇಹಗಳು ನಮುಗಳ ದೇಹದಂತೆ ಸ್ಥೂಲದೇಹವೆಂದು ತಿಳಿಯುತ್ತಾರೆ. ಆ ತಿಳುವಳಿಕೆಯು ಸರಿಯಲ್ಲ. ಸೂಕ್ಷ್ಮಸಮಷ್ಟಿಯಲ್ಲಿ ಬ್ರಹ್ಮನು ಚೈತನ್ಯ ರೂಪದಿಂದ ವಿರಾಜಮಾನನಾಗಿರುತ್ತಾನೆ. ಅವನ ಶರೀರವು ಭಾವಾತ್ಮಕವು, ಈ ಸಂಸಾರದಲ್ಲಿ ಕಾಮಾತ್ಮಕ ಕ್ರೋಧಾತ್ಮಕ-ಲೋಭಾತ್ಮಕ-ಅನೇಕಾನೇಕ ಪ್ರಕಾರಾತ್ಮಕ ಭಾವಗಳಿರುವುದಿಲ್ಲವೇ, ಅವೆಲ್ಲವೂ ಸಮಷ್ಟಿಯಲ್ಲಿ ಸೂಕ್ಷ್ಮವಾಗಿರುತ್ತವೆ. **ಅವು**ಗಳ ಆವಿರ್ಭಾವಾನಂತರ ಬ್ರಹ್ಮನು ಅವುಗಳನ್ನು ತ್ಯಾಗ ಮಾಡುತ್ತಾನೆ. ಈ ಅಧ್ಯಾಯದಲ್ಲಿ ಬ್ರಹ್ಮನ ಭಾವಾತ್ಮಕದೇಹದ ತ್ಯಾಗ-ಗ್ರಹಣಗಳನ್ನು ವಿಶೇಷವಾಗಿ ತಿಳಿಸಿದ್ದಾರೆ.

ನಂತರ ಬ್ರಹ್ಮನು ಸಾತ್ವಿಕೀ ಪ್ರಭೆಯಿಂದ ದೇದೀಪ್ಯಮಾನರಾದ

Sri Vidyabharathi Book Centre, Sringeri

CC-0. In Public Domain. Digitized by eGangotri

ದೇವತೆಗಳನ್ನು ಸೃಷ್ಟಿಸಿದನು. ಅವರು ಬ್ರಹ್ಮನ ಪ್ರಕಾಶಮಾನವಾದ ಶರೀರವನ್ನು ಗ್ರಹಿಸಿದರು. ನಂತರ ಬ್ರಹ್ಮನ ಜಘನಪ್ರದೇಶದಿಂದ ಕಾಮಾಸಕ್ತ ಅಸುರರು ಉತ್ಪನ್ನರಾದರು. ಅವರು ತಮ್ಮ ಕಾಮನಾಪೂರ್ತಿಗಾಗಿ ಬ್ರಹ್ಮನ ಕಡೆಗೆ ನುಗ್ಗಿದರು. ಆಗ ಬ್ರಹ್ಮನು ಓಡಿಹೋಗಿ ನಾರಾಯಣನ ರಕ್ಷಣೆಯನ್ನು ಬೇಡಿದನು. ನಾರಾಯಣನ ಸಲಹೆಯ ಪ್ರಕಾರ ಆ ಕಾಮುಕಲುಷಿತ ದೇಹವನ್ನು ತ್ಯಾಗಮಾಡಿಬಿಟ್ಟನು. ಬ್ರಹ್ಮನು ತ್ಯಜಿಸಿದ ಆ ಶರೀರದಿಂದ ಭುವನ ಮೋಹಿನಿಯಾದ ಸಂಧ್ಯೆಯ ಆವಿರ್ಭಾವವಾಯಿತು. ಅವಳ ದರ್ಶನದಿಂದ ಮೋಹಿತರಾದ ಅಸುರರು ಅವಳ ವಿಷಯವಾಗಿ ಬಹಳಮಾತನಾಡುತ್ತಾ ಪ್ರೇಮದಿಂದ ಅವಳನ್ನು ಪ್ರಶ್ನಿಸಿದರು–**ಕಾಸಿ ಕಸ್ಯಾಸಿ ರಂಭೋರು ಕೋ ವಾರ್ಥಸ್ತೇತ್ರ ಭಾಮಿನಿ ರೂಪದ್ರವಿಣ ಪಣ್ಯೇನ ದುರ್ಭಗಾನ್ನೋ ವಿಬಾಧಸೇ** ಸುಂದರಿ ನೀನು ಯಾರು ? ಎಲ್ಲಿಂದ ಬಂದೆ ? ನಿನ್ನ ಕೆಲಸವೇನು ? ನಮ್ಮನ್ನೇಕೆ ನೀನು ನಿನ್ನ ಅಮೋಘ ರೂಪಸಂಪತ್ತಿನಿಂದ ಸತಾಯಿಸುತ್ತಿರುವೆ? ನೀನು ಯಾರೇ ಆಗಿರು, ನಿನ್ನ ರೂಪಸಂಪತ್ತಿನಿಂದ ನಾವು ಕೃತಾರ್ಥರಾದೆವು. ನಿನ್ನ ಕಂದುಕಕ್ರೀಡೆಯಿಂದ ಸಂತುಷ್ಟರಾಗಿದ್ದೇವೆ. ನಿನ್ನ ಅಂಗಾಂಗಳ ಸೌಂದರ್ಯವು ನಮ್ಮನ್ನು ಹುಚ್ಚರನ್ನಾಗಿಸಿದೆ. ನಿನ್ನ ದರ್ಶನಮಾತ್ರದಿಂದಲೇ ನಮ್ಮ ಆಯಾಸವೆಲ್ಲವೂ ಪರಿಹಾರವಾಯಿತು. ಹೀಗೆ ತನ್ನ ಅಸಾಧಾರಣರೂಪದಿಂದ ಸಂಧ್ಯೆಯು ಅವರನ್ನು ಕಾಮಾಸಕ್ತರನ್ನಾಗಿ ಮಾಡಿದಳು. ಅವರು ಅವಳನ್ನು ಸಾಮಾನ್ಯ ಸ್ತ್ರೀಯೆಂದು ಪರಿಗ್ರಹಿಸಿದರು. ನಂತರ ಬ್ರಹ್ಮನು ಗಂಧರ್ವಾಪ್ಸರೆಯರನ್ನು ಉತ್ಪನ್ನ ಮಾಡಿದನು, ನಂತರ ಜ್ಯೋತ್ಸ್ನಾರೂಪ ಆದೇಹವನ್ನೂ ಬಿಟ್ಟನು. ವಿಶ್ವಾವಸ್ವಾದಿ ಗಂಧರ್ವರು ಅದನ್ನು ಗ್ರಹಿಸಿದರು. ನಂತರ ಬ್ರಹ್ಮನು ತನ್ನ ತಂದ್ರೆಯಿಂದ ಭೂತಪಿಶಾಚಾದಿಗಳನ್ನು ನಿರ್ಮಾಣ ಮಾಡಿದನು ಅವರ ಸ್ವರೂಪಗಳನ್ನು ನೋಡಲಾರದೆ ಅವನೇ ಕಣ್ಣುಮುಚ್ಚಿಕೊಂಡನು.

ಬ್ರಹ್ಮನಿಂದ ಬಿಡಲ್ಪಟ್ಟ ಆದೇಹವನ್ನು ಭೂತಪ್ರೇತರು ಸ್ವೀಕರಿಸಿದರು ನಂತರ ತೇಜೋಮಯಶರೀರದಿಂದ ಸಾಧ್ಯಗಣಗಳನ್ನೂ, ಪಿತೃಗಣಗಳನ್ನೂ ಸೃಷ್ಟಿಸಿದನು

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಅದೃಶ್ಯಶರೀರವನ್ನು ಪಿತೃದೇವತೆಗಳು ಗ್ರಹಿಸಿದರು. ವಿದ್ವಾಂಸರು ಇವರುಗಳ ತೃಪ್ತ್ಯರ್ಥವಾಗಿ ಹವ್ಯಕವ್ಯಗಳನ್ನು ಅರ್ಪಿಸುತ್ತಾರೆ. ಅವನ ತಿರೋಧಾನ ಶಕ್ತಿಯಿಂದ ಸಿಧ್ಧರೂ, ವಿದ್ಯಾಧರರೂ ಸೃಷ್ಟರಾದರು. ಅವರಿಗೆ ತನ್ನ ಅಂತರ್ಧಾನರೂಪವಾದ ಶರೀರವನ್ನು ಕೊಟ್ಟನು, ಬ್ರಹ್ಮನು ತನ್ನ ಪ್ರತಿಬಿಂಬದಿಂದ ಕಿಂನರರನ್ನೂ ಕಿಂಪುರುಷರನ್ನೂ ಸೃಷ್ಟಿಸಿದನು ಅವರು ಆ ಪ್ರತಿಬಿಂಬರೂಪ ಶರೀರವನ್ನೇ ಗ್ರಹಿಸಿದರು ಇವರು ಉಷಃಕಾಲದಲ್ಲಿ ಪತ್ನಿಯರೊಡನೆ ಬ್ರಹ್ಮನ ಗುಣಕರ್ಮಗಳನ್ನು ಗಾನಮಾಡುತ್ತಾರೆ. ಇಷ್ಟಾದರೂ ಸೃಷ್ಟಿಯು ಇನ್ನೂ ಅಭಿವೃಧ್ಧಿಯನ್ನು ಪಡೆಯುತ್ತಿರಲಿಲ್ಲ. ಚಿಂತಿಸುತ್ತಾ ಕೈಕಾಲುಗಳನ್ನೂ ನೀಡಿ ಮಲಗಿದನು. ಕೋಪವೂ ಬಂದಿತು ಆ ಭೋಗಮಯ ಶರೀರವನ್ನೂ ಬಿಟ್ಟನು. ಉಜ್ಜುವಿಕೆಯಿಂದ ಬಿದ್ದ ಕೂದಲುಗಳು ಸರ್ಪಗಳಾದುವು. ಅವನ ದೇಹದ ವಕ್ರತೆಗೆ ಅನುಗುಣವಾಗಿ ಹೆಡೆಗಳುಳ್ಳವುಗಳಾದುವು ಕ್ರೂರಸ್ವಭಾವಿಗಳಾದುವು.

ಒಂದು ಸಾರಿ ಬ್ರಹ್ಮನಿಗೆ ಕೃತ ಕೃತ್ಯತೆಯ ಅನುಭವವಾಯಿತು. ಆಗ ತನ್ನ ಮನಸ್ಸಿನಿಂದ ಮನುಗಳನ್ನು ಸೃಷ್ಟಿಸಿದನು. ಇವರು ಎಲ್ಲಾ ವಿಧದ ಪ್ರಜೆಗಳನ್ನೂ ಅಭಿವೃಧ್ಧಿ ಪಡಿಸುವವರು ಮನಸ್ವೀ ಬ್ರಹ್ಮನು ಅವರಿಗಾಗಿ ತನ್ನ ಪುರುಷಾಕಾರದ ದೇಹವನ್ನು ತ್ಯಜಿಸಿದನು. ಮನುಗಳನ್ನೂ ಕಂಡ ದೇವತೆಗಳು ಬಹಳ ಸಂತೋಷಗೊಂಡರು. ಅವನನ್ನು ಸ್ತೋತ್ರಮಾಡಿದರು.

ಅಹೋ ಏತಜ್ಜಗತ್ಸ್ರಷ್ಟ:, ಸುಕೃತಂಬತತೇಕೃತಂ.
ಪ್ರತಿಷ್ಠಿತಾ: ಕ್ರಿಯಾಯಸ್ಮಿನ್, ಸಾಕಮ್ಮನ್ನಮದಾ ||

ಬ್ರಹ್ಮನ್- ನಿನ್ನೀ ಸೃಷ್ಟಿಯು ಅತ್ಯುತ್ತಮವಾಗಿದೆ. ಇದರಲ್ಲಿ ಅಗ್ನಿಹೋತ್ರಾದಿ ಕರ್ಮಗಳೆಲ್ಲವೂ ಪ್ರತಿಷ್ಠಿತವಾಗಿವೆ. ನಾವೂ ಸಹ ನಮ್ಮ ಅನ್ನವನ್ನು ಇವರಿಂದ ಸ್ವೀಕರಿಸುತ್ತೇವೆ. ನಂತರ ಬ್ರಹ್ಮನು ಇಂದ್ರಿಯ ಸಂಯಮ ಪೂರ್ವಕ ತಪಸ್ಸು- ಯೋಗ- ಸಮಾಧಿಸಂಪನ್ನರಾದ ಋಷಿಗಳನ್ನು ಪ್ರಕಟಮಾಡಿದನು. ಅವರವರಿಗೆ ಆಯಾಯಾ ಶರೀರಗಳನ್ನೂ ಕೊಟ್ಟನು ಮಾನವನು ಶ್ರಧ್ಧಾಳುವು, ವಿಚಾರಶೀಲನೂ ಸಹ, ಶ್ರಧ್ಧೆಯಿಲ್ಲದಿದ್ದರೆ ನಿಮ್ಮ ತಾಯಿ ತಂದೆಗಳನ್ನೆ ಗುರುತಿಸಲಾರಿರಿ.

ಓಂ ತತ್ಸದಿತ್ಯೇವಂ. ತೃತೀಯ ಸ್ಕಂಧೇ ವಿಂಶೋಽಧ್ಯಾಯ ಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ಭಾಗವತ ದರ್ಶನ. ತೃ- ಸ್ಕಂ. ಅ.೨೧.
ಕಪಿಲಯೋಗ. ಕರ್ದಮರ ತಪಸ್ಸು-
ಭಗವಂತನಿಂದ ವರದಾನ.

ವಿದುರನು ಮೈತ್ರೇಯರನ್ನು ಪ್ರಶ್ನಿಸುತ್ತಾನೆ— ಪೂಜ್ಯರೇ—ಸ್ವಾಯಂಭುವ ಮನುವಿನ ವಂಶವು ಬಹಳ ಆದರಣೀಯವಾದುದೆಂದು ತಿಳಿದಿದ್ದೇನೆ. ಅಲ್ಲಿ ಮೈಥುನ ಕ್ರಿಯೆಯಿಂದ ಪ್ರಜಾಭಿವೃದ್ಧಿಯಾಯಿತಷ್ಟೆ. ನನಗೆ ಆ ಕಥೆಯನ್ನು ವಿಸ್ತಾರವಾಗಿ ತಿಳಿಸಿರಿ. ಸ್ವಾಯಂಭುವ ಮನುವಿನ ಪುತ್ರರಾದ ಪ್ರಿಯವ್ರತ ಉತ್ತಾನಪಾದರು, ಸಪ್ತ ದ್ವೀಪವತೀ ಪೃಥ್ವಿಯನ್ನು ಧರ್ಮಪೂರ್ವಕ ಪಾಲಿಸುತ್ತಿದ್ದರು. ಮನು ಪುತ್ರಿಯಾದ ದೇವಹೂತಿಯು ಪರಮ ಯೋಗಿನಿಯಾಗಿದ್ದಳು. ಅವಳಲ್ಲಿ ಕರ್ದಮನು ಎಷ್ಟು ಸಂತಾನಗಳನ್ನು ಪಡೆದನು?. ಭಗವಾನ್ ರುಚಿ ಮತ್ತು ಬ್ರಹ್ಮ ಪುತ್ರ ದಕ್ಷ ಪ್ರಜಾಪತಿಯು ಮನು ಪುತ್ರಿಯರನ್ನು ವಿವಾಹವಾಗಿ, ಯಾವ ಯಾವ ಸಂತಾನಗಳನ್ನು ಪಡೆದನು?. ಈ ವಿಚಾರಗಳೆಲ್ಲವನ್ನೂ ದಯೆಯಿಟ್ಟು ನನಗೆ ತಿಳಿಸಿರಿ.

ಮೈತ್ರೇಯರು ಹೇಳಿದರು — ವಿದುರ, ಬ್ರಹ್ಮನು ಕರ್ದಮನಿಗೆ — ಪ್ರಜಾ: ಸೃಜ ಎಂದು ಅಪ್ಪಣೆಮಾಡಿದನು. ಆಗ ಕರ್ದಮನು ಹತ್ತು. ಸಾವಿರ ವರ್ಷಗಳ ಕಾಲ, ಸರಸ್ವತೀ ನದೀ ತೀರದಲ್ಲಿ ತಪಸ್ಸು ಮಾಡಿದನು ಕರ್ದಮನು ಏಕಾಗ್ರ ಚಿತ್ತದಿಂದ ಪ್ರೇಮ ಪೂರ್ವಕವಾಗಿ, ಉಪಚಾರಾದಿಗಳಿಂದ, ಶರಣಾಗತ ನರದಾಯಕನಾದ ಶ್ರೀಹರಿಯನ್ನು ಆರಾಧಿಸತೊಡಗಿದನು

ಸತ್ಯಯುಗದ ಆರಂಭದಲ್ಲಿ ಕಮಲಾಕ್ಷನಾದ ಭಗವಾನ್ ಶ್ರೀಹರಿಯು ಅವನ ತಪಸ್ಸಿನಿಂದ ಸಂತುಷ್ಟನಾದವನಾಗಿ, ತನ್ನ ಶಬ್ದ ಬ್ರಹ್ಮ ರೂಪದಿಂದ ದರ್ಶನವನ್ನು ಕೊಟ್ಟನು. 'ಶಾಬ್ದಂ ಬ್ರಹ್ಮ ದಧದ್ವಪು:'

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಆ ಭವ್ಯ ಮೂರ್ತಿಯು ಸೂರ್ಯನಂತೆ ತೇಜೋಮಯಿಯಾಗಿದ್ದಿತು. ಅವನ ಮುಖ ಕಮಲವು ನೀಲ ವರ್ಣದ ನುಣುಪಾದ ಅಲಕಾವಳಿಗಳಿಂದ ಪರಿಶೋಭಿಸುತ್ತಿತ್ತು. ಅವನು ನಿರ್ಮಲ ವಸ್ತ್ರಾಲಂಕೃತನಾಗಿದ್ದನು. ತಲೆಯ ಮೇಲೆ ಸ್ವರ್ಣಮಯ ಕಿರೀಟವು ಹೊಳೆಯುತ್ತಲಿದ್ದಿತು. ಕರ್ಣಗಳಲ್ಲಿ ಮಕರ ಕುಂಡಲಗಳು ಜೂಲಾಡುತ್ತಿದ್ದುವು. ಶಂಖ-ಚಕ್ರ-ಗದಾದ್ಯಾಯುಧಗಳು ಕರಗಳಲ್ಲಿ ಪರಿಶೋಭಿಸುತ್ತಿವೆ. ಕೈಯ್ಯಿನಲ್ಲಿ ಲೀಲಾ ವಿಹಾರ ಸೂಚಕ ಶ್ವೇತ ಕಮಲ, ಚೇತೋಹಾರಿಯಾದ ಮೃದು ಮಧುರ ಮಂದಹಾಸ. ವೃಕ್ಷಸ್ಥಳದಲ್ಲಿ ಶ್ರೀಲಕ್ಷ್ಮಿ. ಕಂಠದಲ್ಲಿ ಕೌಸ್ತುಭಮಣಿ, ಪಾದ ಕಮಲಗಳೆರಡೂ ಗರುಡನ ಮೇಲೆ. ಆಕಾಶಸ್ಥಿತ ಈ ಭವ್ಯ ಮೂರ್ತಿಯನ್ನು ಸಂದರ್ಶಿಸಿದ ಕರ್ದಮರು ಅತ್ಯಂತ ಹರ್ಷಿತರಾದರು ದರ್ಶನಮಾತ್ರದಿಂದ ಅವರ ಕಾಮನೆಗಳೆಲ್ಲವೂ ಪೂರ್ಣವಾದುವು. ಭೂಮಿಯಮೇಲೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಪ್ರೇಮಪೂರ್ಣ ಚಿತ್ತದಿಂದ ಕೈಮುಗಿದು ಸ್ತೋತ್ರ ಮಾಡತೊಡಗಿದರು.

ನೋಡಿ- ಒಬ್ಬರು ಪಂಡಿತರಿದ್ದರು. ತರ್ಕ ವ್ಯಾಕರಣ-ನ್ಯಾಯ. ವೇದಾಂತಾಚಾರ್ಯರು. ಅವರೇ ಸ್ವತ: ಒಂದುಕೋಟಿ ಪಾರ್ಥಿವ ಲಿಂಗಗಳ ಅರ್ಚನೆಯನ್ನು ನಡೆಸಿದರು.

ಒಂದು ದಿವಸ ಆವರು ಶಂಕರನ ಮಂದಿರದಲ್ಲಿ ಷಡಕ್ಷರೀ ಮಂತ್ರವನ್ನು ಜಪಿಸುತ್ತಿದ್ದರು. ಹಾಗೆಯೆ ಯೋಚನೆಯುಮೂಡಿತು, — ನಾನು ಅನೇಕ ಶಾಸ್ತ್ರಗಳನ್ನು ಅಭ್ಯಸಿಸಿ ಶಬ್ದಾರ್ಥಗಳ ನಿತ್ಯ ಸಂಬಂಧವನ್ನು ತಿಳಿದಿದ್ದೇನೆ. ಶಿವನಾಮೋಚ್ಚಾರಣೆಯನ್ನು ಮಾಡುತ್ತಾ, ಶಿವಲಿಂಗವನ್ನು ಪೂಜಿಸುತ್ತಾ ಜೀವನವೇ ಕಳೆಯಿತು. ಶಿವನ ಸಾಕ್ಷಾತ್ಕಾರವಾಗಲಿಲ್ಲ. ಇವೆಲ್ಲವೂ ಅಜ್ಞ ಜನರನ್ನು ವಂಚಿಸುವುವಕ್ಕಾಗಿಯೆ ಇದೆಯೆ? ಈ ಭಾವನೆಯು ಮನಸ್ಸಿನಲ್ಲಿ ಮೂಡುತ್ತಿದ್ದ ಹಾಗೆಯೇ ಕೈಯ್ಯಿನಲ್ಲಿದ್ದ ಲಿಂಗದಲ್ಲಿ ಜಟಾತ್ರಿಶೂಲಧಾರೀ ಶಿವನ ಸಾಕ್ಷಾತ್ಕಾರವಾಯಿತು. ಶಬ್ದದಲ್ಲಿ ಸಾಕ್ಷಾತ್ಕಾರಮಾಡಿಸುವ ಶಕ್ತಿಯಿದೆ. ಭಗವನ್ನಾಮ ಜಪದಿಂದ, ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಅದರಿಂದ ನಮ್ಮ ಹೃದಯವೂ ಶುದ್ಧವಾಗಿ ಶುದ್ಧಾಂತ:ಕರಣದಲ್ಲಿ ಪರಮೇ-

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ವರನ ಸಾಕ್ಷಾತ್ಕಾರವಾಗುತ್ತದೆ. ಆದರಿಂದ ಶಾಬ್ದಂ ಬ್ರಹ್ಮ ವಧದ್ವಪು: ಎಂದು ಹೇಳಿದ್ದಾರೆ.

ಕರ್ದಮರು ಭಗವಂತನನ್ನು ಸ್ತುತಿಸುತ್ತಾರೆ — ಭಗವನ್ — ನೀನು ಸಂಪೂರ್ಣ ಸತ್ವಗುಣದ ಆಧಾರಿಯು, ಯೋಗಿವರೇಣ್ಯರು ಉತ್ತಮ ಜನ್ಮವನ್ನು ಪಡೆದು, ಯೋಗಸ್ಥರಾಗಿ, ನಿನ್ನ ದರ್ಶನೇಚ್ಛೆಯನ್ನು ಹೊಂದುತ್ತಾರೆ. ನಿನ್ನ ಚರಣ ಕಮಲಗಳು ಭವಸಾಗರವನ್ನು ದಾಟಲು ನಾವೆಯಂತಿವೆ ನಿನ್ನಮಾಯಾಮೋಹಿತರಾದವರು ಕ್ಷಣಿಕ ವಿಷಯ ಸುಖಗಳನ್ನು ಬಯಸುತ್ತಾರೆ. ಆದರೆ ಅದನ್ನೂ ಸಹ ನೀನು ಪೂರೈಸಿ ಕೊಡುವೆ. ಪ್ರಭೋ - ನೀನು ಕಲ್ಪವೃಕ್ಷವು. ನಿನ್ನ ಚರಣ ಕಮಲಗಳು ಸರ್ವೇಚ್ಛಾಪರಿಪೂರಕಗಳು ನಾನಾದರೆ ಕರ್ದಮ . (ಕೆಸರು) ನನ್ನ ಹೃದಯವು ಕಾಮ ಕಲುಷಿತವಾಗಿದೆ ನಾನು ಗೃಹಸ್ಥಧರ್ಮ ಪರಿಪಾಲನೆಗಾಗಿ, ಸಮಾನ ರೂಪ, ಗುಣ, ಸೌಶೀಲ್ಯಗಳಿಂದ ಕೂಡಿದ ಕನ್ಯೆಯನ್ನು ವಿವಾಹವಾಗಲು ಬಯಸುತ್ತೇನೆ. ಸರ್ವೇಶ್ವರ ನೀನು ಸರ್ವ ಲೋಕಾಧಿಪತಿಯು. ನಾನಾ ಕಾಮನೆಗಳಲ್ಲಿ ಮುಳುಗಿರುವ ಲೋಕವು ನಿನ್ನ ವೇದವಾಣಿಯಿಂದ ಬಂಧಿಸಲ್ಪಟ್ಟಿದೆ. ತದನುಗುಣವಾಗಿ ನಾನೂ ನಿನಗೆ ಪೂಜೋಪಹಾರಾದಿಗಳನ್ನು ಸಮರ್ಪಿಸಲು ಇಚ್ಛಿಸುತ್ತೇನೆ. ಪ್ರಭೋ - ನಿನ್ನ ಭಕ್ತರಾದರೂ, ವಿಷಯಾಸಕ್ತಜನರನ್ನೂ, ಹಾಗೂ ಅವರನ್ನು ಅನುಸರಿಸುವ ನನ್ನಂತಹ ಕರ್ಮ ಜಡ ಪಶುಗಳನ್ನೂ ಲೆಕ್ಕಿಸದೆ ನಿನ್ನ ಚರಣಕಮಲಗಳ ಛತ್ರಛಾಯೆಯನ್ನೇ ಆಶ್ರಯಿಸುತ್ತಾರೆ. ನಿನ್ನ ಗುಣಗಾನರೂಪ , ಸುಧಾಪಾನದಿಂದ ಮತ್ತರಾಗಿ, ಕ್ಷುತ್ಪಿಪಾಸಾದಿ ದೇಹ ಧರ್ಮಗಳನ್ನು ದೂರಮಾಡಿ ಶಾಂತರಾಗುತ್ತಾರೆ. ದೇವ - ಈ ಕಾಲಚಕ್ರವು ಪ್ರಬಲವಾದುದು. ಬ್ರಹ್ಮನೇ ಇದರ ದೊರೆಯು. ಹದಿಮೂರು ತಿಂಗಳುಗಳೇ (ಅಧಿಕಮಾಸಗಳೂ ಸೇರಿ) ಇದರ ಹಾರೇ ಕಾಲುಗಳು. 360 ದಿವಸಗಳೇ ಇದರ ಜೋಡಣೆಗಳು. ಆರು ಋತುಗಳೇ ನೇಮಿಗಳು. ಮೂರು ಚಾತುರ್ಮಾಸಗಳು ಆಧಾರಭೂತವಾದ ನಾಭಿಗಳು. ಈ ಅತ್ಯಂತ ವೇಗಶಾಲಿಯಾದ ಸಂವತ್ಸರ ರೂಪವೇ ಕಾಲಚಕ್ರವು. ಚರಾಚರಾತ್ಮಕ ಜಗತ್ತಿನ ಆಯುಷ್ಯವನ್ನು ಛೇದಿಸುತ್ತಾ ಸುತ್ತುತ್ತಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೂ ನಿನ್ನ ಭಕ್ತರ ಆಯುಷ್ಯವನ್ನು ಕ್ಷಯಮಾಡಲಾಗುವುದಿಲ್ಲ. ಭಗವನ್ – ಜೇಡವು ಬಲೆಯನ್ನು ಹರಡಿ ಪುನಃ ಒಳಕ್ಕೆ ನುಂಗಿಕೊಂಡು ಬಿಡುವಂತೆ ನೀನೊಬ್ಬನೇ ಪ್ರಪಂಚವನ್ನು ಸೃಷ್ಟಿಸಿ, ಪಾಲಿಸಿ, ಕೊನೆಗೆ ನಿನ್ನಲ್ಲಿಯೆ ಉಪಸಂಹರಿಸಿ ಕೊಳ್ಳುವೆ. ಪ್ರಭೋ – ನಿನ್ನ ತುಳಸೀಮಾಲಾಲಂಕೃತ ಮನೋಹರ ಮೂರ್ತಿಯ ದಿವ್ಯದರ್ಶನದಿಂದ ಕೃತಾರ್ಥನಾಗಿರುವೆನು. ನೀನು ನಿನ್ನ ಭಕ್ತರಿಗೆ ಶಬ್ದಾದಿ ವಿಷಯ ಸುಖಗಳನ್ನು ಕೊಡಲು ಇಷ್ಟಪಡುವುದಿಲ್ಲವಾದರೂ ಕೊಡುತ್ತಿರುವೆ. ಏಕೆಂದರೆ ಹೇಗಾದರೂ ಇವರಿಗೆ ಕೊನೆಯಲ್ಲಾದರೂ ಶಾಂತಿಯು ದೊರಕಲೆಂಬುವುದೇ ನಿನ್ನ ಆಶಯವಾಗಿದೆ.

ದೀನೋದ್ಧಾರಕ – ನೀನು ಸ್ವರೂಪತಃ ನಿಷ್ಕ್ರಿಯನು, ಸಂಸಾರದ ನಿರ್ವಹಣಾ ಕಾರ್ಯವು ನಿನ್ನ ಮಾಯೆಯಿಂದಲೇ ನಡೆಯುತ್ತದೆ. ಹಾಗೂ ಸ್ವಲ್ಪಮಟ್ಟಿಗಾದರೂ ಸರಿ ನಿನ್ನನ್ನು ಉಪಾಸಿಸುವವರು ಎಲ್ಲಾ ಇಷ್ಟಾರ್ಥಗಳನ್ನೂ ಪಡೆಯುತ್ತಾರೆ. ನಿನಗೆ ಅನಂತ ನಮಸ್ಕಾರಗಳು.

ಗರುಡಾರೂಢನಾದ ಮೃದು, ಮಂದಹಾಸ ಭರಿತ ಭಗವಂತನು ಕರ್ದಮನ ನಿಷ್ಕಪಟ ಸ್ತೋತ್ರವನ್ನು ಕೇಳಿ ಆನಂದದಿಂದ ಹೇಳಿದನು— ಮಹರ್ಷೇ — ನಿನ್ನ ಮನಸ್ಸಿನ ಅಭಿಪ್ರಾಯಕ್ಕನುಗುಣವಾಗಿ ಅದರ ವ್ಯವಸ್ಥೆಯನ್ನು ಮಾಡಿದ್ದೇನೆ. ನನ್ನ ಆರಾಧನೆಯು ಯಾವಾಗಲೂ ನಿಷ್ಫಲವಾಗಲಾರದು. ಪ್ರಜಾಪತೇ—ಯಾರ ಮನಸ್ಸು ನನ್ನಲ್ಲಿಯೆ ರಮಿಸುತ್ತಿರುತ್ತದೊ ಅಂತಹ ನಿಷ್ಕಾಮ ಭಕ್ತರ ಕಾಮನೆಗಳು ಖಂಡಿತವಾಗಿಯೂ ಪೂರೈಸಲ್ಪಡುತ್ತವೆ. ಪರಮ ಯಶಸ್ವೀ ಸಮ್ರಾಟ್ ಸ್ವಾಯಂಭುವ ಮನುವು, ಬ್ರಹ್ಮಾವರ್ತದಲ್ಲಿ ಅಖಂಡ ಭೂಮಂಡಲವನ್ನು ಧರ್ಮದಿಂದ ಪಾಲಿಸುತ್ತಿದ್ದಾನೆ. ಅವನು ಮಹಾತ್ಮಾ ಧರ್ಮಿಷ್ಠನಾದ ರಾಜನು. ಅವನು ಮಹಾರಾಣೀ ಶತರೂಪಾಳೊಡನೆ ನಿನ್ನನ್ನು ನೋಡಲು ನಾಡಿದ್ದು ಬರುವನು. ಅವರ ರೂಪ ಗುಣ ಪರಿಶೋಭಿತಳಾದ ಶ್ಯಾಮಲೋಚನಾ ಕನ್ಯೆಯು ವಿವಾಹಕ್ಕೆ ಯೋಗ್ಯಳಾಗಿದ್ದಾಳೆ. ಸರ್ವ ವಿಧದಲ್ಲಿಯೂ ಯೋಗ್ಯನಾದ ನಿನಗೆ ಅವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ಯಾ ಪ್ರದಾನವನ್ನು ಮಾಡುತ್ತಾರೆ. ಬ್ರಹ್ಮನ್—ನೀನು ಬಹಳ ಕಾಲದಿಂದ ಯೋಗ್ಯ ಕನ್ಯೆಯ ಪ್ರತೀಕ್ಷೆಯಲ್ಲಿರುವೆ. ಅವಳು ಯೋಗ್ಯ ಪತ್ನಿಯಾಗಿ, ಯಥೇಷ್ಟವಾಗಿ ನಿನ್ನನ್ನು ಸೇವಿಸುವಳು. ಅವಳಲ್ಲಿ ನಿನಗೆ ಒಂಭತ್ತು ಮಂದಿ ಕನ್ಯೆಯರು ಹುಟ್ಟುವರು. ಮರೀಚ್ಯಾದಿ ಋಷಿಗಳು ವಿವಾಹವಾಗುವರು.

ನೀನು ನನ್ನ ಸೇವೆಯಿಂದ ನಿರ್ಮಲಾಂತ: ಕರಣನಾಗಿ ಸರ್ವ ಕರ್ಮಗಳನ್ನೂ ಮದರ್ಪಣವಮಾಡಿ ಮುಕ್ತನಾಗುವೆ. ಸರ್ವ ಜೀವಿಗಳಲ್ಲಿಯೂ ದಯಾಭಾವದಿಂದ ವರ್ತಿಸುತ್ತಾ ಆತ್ಮಜ್ಞಾನಿಯಾಗಿ ಸರ್ವದರಲ್ಲಿಯೂ ನಿನ್ನನ್ನೂ, ನಿನ್ನಲ್ಲಿ ಸರ್ವವನ್ನೂ ಕಾಣುವವನಾಗುವೆ. ನಾನು ನಿಮ್ಮಲ್ಲಿ ಅವತರಿಸಿ ಸಾಂಖ್ಯಾಚಾರ್ಯನಾಗುವೆನು. ಹೀಗೆ ಭಗವಂತನು ಕರ್ದಮರಿಗೆ ವರ ಪ್ರದಾನ ಮಾಡಿ ಅಂತರ್ಧಾನನಾದನು.

ಕರ್ದಮರು ಬಹಳಹೊತ್ತು ಗರುಡನ ಪಕ್ಷಾಘಾತ ಧ್ವನಿಯನ್ನು ಕೇಳುತ್ತಾ ತನ್ಮಯರಾಗಿ ನಿಂತಿದ್ದರು. ಭಗವಂತನು ಸೂಚಿಸಿದ ಸಮಯವನ್ನೇ ನಿರೀಕ್ಷಿಸುತ್ತಾ ಧ್ಯಾನಮಗ್ನರಾಗಿದ್ದರು. ಸ್ವಾಯಂಭುವ ಮನುವು ರಾಣೀ ಶತರೂಪೆಯೊಡನೆ ಸುವರ್ಣರಥಾರೂಢನಾಗಿ, ಕನ್ಯೆಯೊಡನೆ ಭಗವಂತನು ಸೂಚಿಸಿದ ಸಮಯಕ್ಕೆ ಸರಿಯಾಗಿ ಕರ್ದಮರ ಆಶ್ರಮಕ್ಕೆ ಬಂದನು. ಸರಸ್ವತೀ ನದೀತೀರದಲ್ಲಿಯೇ ಒಂದು ಸರೋವರವಿದೆ. ಈ ಸ್ಥಳದಲ್ಲಿ ಭಕ್ತಾಗ್ರೇಸರ ಕರ್ದಮನಿಗಾಗಿ ಭಗವಂತನು ಪ್ರೇಮಾಶ್ರುಗಳನ್ನು ಸುರಿಸಿದ್ದನು ಇದು ಪವಿತ್ರ ತೀರ್ಥವು. ಮಹರ್ಷಿಗಳು ಸದಾ ಇದನ್ನು ಸೇವಿಸುತ್ತಾರೆ. ಇದರ ತೀರದಲ್ಲಿ ಅನೇಕ ಲತಾವೃಕ್ಷಗಳಿವೆ. ವಿವಿಧ ಪಕ್ಷಿಗಳಿವೆ. ಫಲಪುಷ್ಪ ಸಮೃದ್ಧಿಯಿದೆ. ಮದಮತ್ತ ಭ್ರಮರಗಳ ಗುಂಜಾರವವು ಆಹ್ಲಾದಕರವಾಗಿದೆ ಉನ್ಮತ್ತ ಮಯೂರಗಳ ಲಾಸ್ಯವು ಮನಮೋಹಕವಾಗಿದೆ. ಕೋಗಿಲೆಗಳ ಕುಹೂಕುಹೂ ನಾದದಿಂದ ಸರ್ವರೂ ಆಕರ್ಷಿತರಾಗುತ್ತಿದ್ದಾರೆ. ಕದಂಬ, ಚಂಪಕ, ಅಶೋಕ, ಕರಂಜ, ಬಕುಲ, ಕುಂದ. ಮಂದಾರ, ಕುಟಜ,ಆಮ್ರ ವೃಕ್ಷಗಳಿಂದ ಪರಿಸರವು ಪರಿಶೋಭಾಯಮಾನವಾಗಿದೆ. ಹರಿಣ, ವರಾಹ, ಗಜ, ಸಿಂಹ, ವಾನರ, ಕಸ್ತೂರೀ ಮೃಗಾದಿಗಳಿಂದ ಆಪ್ರದೇಶವು ನಿಬಿಡವಾಗಿದೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಆದಿರಾಜನು, ಪತ್ನೀ ಪುತ್ರಿಯರೊಡನೆ ಆಶ್ರಮವನ್ನು ಪ್ರವೇಶಿಸಲು, ಆಗ ತಾನೇ ಕರ್ದಮರು ಅಗ್ನಿ ಹೋತ್ರವನ್ನು ಮುಗಿಸಿ ಆಸನಾ ರೂಢರಾಗಿದ್ದರು. ದೀರ್ಘಕಾಲದ ತಪಸ್ಸಿನ ಕಾಂತಿಯು ದೇಹದಿಂದ ಹೊರಹೊಮ್ಮುತ್ತಲಿದ್ದಿತು. ಇಷ್ಟು ದೀರ್ಘಕಾಲ ಅವರು ತಪಸ್ಸು ಮಾಡಿದ್ದರೂ ಅವರ ಧ್ವನಿಯಲ್ಲಿ ನಿರ್ಬಲತೆಯು ತೋರುತ್ತಿರಲಿಲ್ಲ. ಅವರು ದೀರ್ಘಕಾಯರಾಗಿದ್ದರು. ಕಮಲದಂತೆ ವಿಶಾಲವಾದ ಕಣ್ಣುಗಳು. ತಲೆಯ ಮೇಲೆ ಜಡೆಗಳು, ಸೊಂಟಕ್ಕೆ ಚೀರವಸ್ತ್ರಗಳನ್ನು ಸುತ್ತಿದ್ದಾರೆ. ಹತ್ತಿರದಲ್ಲಿ ನೋಡಿದರೆ ಸಾಣೆ ಹಿಡಿಯದ ವಜ್ರದಂತೆ ಕಾಣುತ್ತಿದ್ದಾರೆ.

ಕರ್ದಮರು ಆಶ್ರಮಕ್ಕೆ ಬಂದ ಅತಿಥಿಗಳನ್ನು ಉಚಿತ ರೀತಿಯಲ್ಲಿ ಸತ್ಕರಿಸಿದರು. ಸುಖಾಸನಾಲಂಕೃತನಾದ ಮನುವನ್ನು ಕುರಿತು ಕರ್ದಮರು ಹೇಳಿದರು— ರಾಜನ್- ನಿನ್ನ ರೂಪದಲ್ಲಿ ಭಗವಂತನ ಪಾಲಿನೀ ಶಕ್ತಿಯು ದುಷ್ಟಸಂಹಾರ, ಶಿಷ್ಟಪಾಲನೆಗಾಗಿ ಪ್ರಪಂಚದಲ್ಲಿ ಪರ್ಯಟನ ಮಾಡುತ್ತಿದೆ. ಸಾಕ್ಷಾದ್ವಿಷ್ಣು ಸ್ವರೂಪಿಯೂ,ಇಂದ್ರಾದ್ಯಂಶಧಾರಕನೂ ಆದ ನಿನಗೆ ಸುಸ್ವಾಗತವು. ನೀನು ರಥಾರೂಢನಾಗಿ, ವಿವಿಧಾಯುಧ ಧರನಾಗಿ ಪ್ರಪಂಚವನ್ನು ಸುತ್ತುತ್ತಾ ಸೂರ್ಯನಂತೆ ವಿರಾಜಿಸದಿದ್ದರೆ, ದುಷ್ಟದುರ್ಮದಾಂಧರು ವರ್ಣಾಶ್ರಮ ವ್ಯವಸ್ಥೆಯನ್ನು ನಾಶಪಡಿಸಿಯಾರು. ವಿಷಯ ಲಂಪಟರು ಸ್ವೇಛಾವರ್ತಿಗಳಾಗಿ ಅಧರ್ಮಾಭಿ ವರ್ಧಕರಾಗುತ್ತಾರೆ. ರಾಜನಾದವನು ಧರ್ಮ ರಕ್ಷಣೆಯಲ್ಲಿ ಆಲಸಿಯಾಗಿಬಿಟ್ಟರೆ, ದುರಾಚಾರಿಗಳ ದುರ್ನಡತೆಯಿಂದ ಧರ್ಮವು ನಷ್ಟವಾಗುವುದು. ವೀರಾಗ್ರೇಸರ - ನೀನು ಬಂದಿರುವ ಉದ್ದೇಶವಾದರೂ ಏನು ? ನೀನು ತಿಳಿಸಿದಂತೆ ನಾನು ನಡೆದು ಕೊಳ್ಳುವೆನು.

ಓಂ ತತ್ಸದಿತ್ಯೇವಂತೃತೀಯಸ್ಕಂದೇ ಏಕವಿಂಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾಗವತ ದರ್ಶನ—ಸ್ಕಂಧ ೩ ಅ. ೨೨
ದೇವಹೂತಿ ಕರ್ದಮರ—ವಿವಾಹ.

ಮೈತ್ರೇಯರು ಹೇಳುತ್ತಾರೆ - ವಿದುರ, ಈ ರೀತಿ ಕರ್ದಮರು ಮನುವಿನ ಸಂಪೂರ್ಣ ಗುಣ ಕರ್ಮಗಳನ್ನು ವರ್ಣಿಸೋಣ- ಆಗ ಮನುವು ನಿವೃತ್ತಿ ಪರಾಯಣರಾದ ಕರ್ದಮರನ್ನು ವಂದಿಸಿ ಸಂತೋಷದಿಂದ ಹೇಳಿದನು.— ಋಷಿಗಳೇ, ವೇದಮೂರ್ತಿ ಭಗವಾನ್ ಬ್ರಹ್ಮನು ತನ್ನ ವೇದ ಮಯ ವಿಗ್ರಹದ ರಕ್ಷಣೆಗಾಗಿ ತಪೋ ವಿದ್ಯಾ ಯೋಗಸಂಪನ್ನರಾದ, ವಿಷಯ ಪರಾಙ್ಮುಖರಾದ, ತಮ್ಮಂತಹ ಬ್ರಾಹ್ಮಣರನ್ನು ತನ್ನ ಮುಖದಿಂದ ಪ್ರಕಟಿಸಿದನು ,ನಂತರ ಸಹಸ್ರಶೀರ್ಷನೂ, ಸಹಸ್ರ ಚರಣಗಳುಳ್ಳವನೂ ಆದ ವಿರಾಟ ಪುರುಷನು ಬ್ರಾಹ್ಮಣ್ಯರ ರಕ್ಷಣೆಗಾಗಿ ತನ್ನ ಸಹಸ್ರಾರು ಭುಜಗಳಿಂದ ನಮ್ಮಂತಹ ಕ್ಷತ್ರಿಯರನ್ನು ಸೃಷ್ಟಿಸಿದನು ಹೀಗೆ.—

"ಹೃದಯಂ ತಸ್ಯ ಹ ಬ್ರಹ್ಮ, ಕ್ಷತ್ರಮಂಗಂಪ್ರಚಕ್ಷತೇ"

ಬ್ರಾಹ್ಮಣರನ್ನು ಹೃದಯವೆಂಬುದಾಗಿಯೂ, ಕ್ಷತ್ರಿಯರನ್ನು ಶರೀರ ವೆಂದೂ ಹೇಳುತ್ತಾರೆ. ಶರೀರದಲ್ಲಿ ಶಿರಸ್ಸಿನ ರಕ್ಷಣೆಗಾಗಿ, ಕೈಗಳಿರುವಂತೆ, ಬ್ರಾಹ್ಮಣರ ರಕ್ಷಣೆಗಾಗಿ, ಕ್ಷತ್ರಿಯರಿದ್ದಾರೆ. ಮಹಾಭಾರತದಲ್ಲ ಹೇಳುತ್ತಾರೆ **'ನಾಕ್ಷತ್ರಂ ಬ್ರಹ್ಮ ವರ್ಧತೇ'** ಕ್ಷತ್ರಿಯರಿಲ್ಲದೇ ಬ್ರಾಹ್ಮಣರ ಉನ್ನತಿ ಯಿಲ್ಲ. ಹೀಗೇ ಹೇಳುವುದರ ಅರ್ಥವೇನೆಂದರೆ—ಜೀವನದಲ್ಲಿ ದೈಹಿಕ ಬಲವೂ ಇರಬೇಕು. ಎರಡರಿಂದ ಮಾನವೀಯತೆಯ ವಿಕಾಸವಾಗುವುದು. 'ಇಬ್ಬರೂ ಅನ್ಯೋನ್ಯತೆಯಿಂದ ಒಬ್ಬರ ರಕ್ಷಣೆಯನ್ನು ಮತ್ತೊಬ್ಬರು ಮಾಡಬೇಕು. ಶ್ರೀಹರಿಯು ಎರಡು ರೂಪಗಳಲ್ಲಿಯೂ ರಕ್ಷಕನಾಗಿರುವನು. ಅವನು ಮಾತ್ರ ನಿರ್ವಿಕಾರಿ. ರಾಜನು ಹೇಳುತ್ತಾನೆ—ಬ್ರಹ್ಮನ್—ನಿಮ್ಮ ದರ್ಶನ ಮಾತ್ರ ದಿಂದ ನನ್ನ ಸಂದೇಹಗಳು ದೂರವಾದುವು. ತಾವು ನನ್ನನ್ನು ಪ್ರಶಂಸಿಸುವುದರ ಮೂಲಕ ಪ್ರಜಾ ಪಾಲನಿರತರಾದ ರಾಜರ ಧರ್ಮವನ್ನು ನಿರೂಪಿಸಿದ್ದೀರಿ ತಮ್ಮಂತಹವರ ದರ್ಶನವು ಅಜಿತೇಂದ್ರಿಯರಿಗೆ ದುರ್ಲಭವು.

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಭಾಗ್ಯ ವಿಶೇಷದಿಂದ ತಮ್ಮ ದರ್ಶನವಾಯಿತು. ತಮ್ಮ ಪಾದ ಧೂಳಿಯಿಂದ ನಾನು ಪವಿತ್ರನಾದೆನು. ತಾವು ರಾಜಧರ್ಮದ ಶಿಕ್ಷಣವನ್ನು ಕೊಟ್ಟು ನನ್ನನ್ನು ಅನುಗ್ರಹಿಸಿರುವಿರಿ. ಇದು ನನ್ನ ಭಾಗ್ಯೋದಯವೇ ಸರಿ. ಕನ್ಯಾ ಸ್ನೇಹ ವಶನಾದ ನನ್ನ ಚಿತ್ತವು ಚಿಂತಾಗ್ರಸ್ತವಾಗಿದೆ. ದೀನನಾದ ನನ್ನ ಪ್ರಾರ್ಥನೆಯನ್ನು ಪಾಲಿಸಬೇಕು.— ಇವಳು ನನ್ನ ಪುತ್ರಿ. ವಯ ಶೀಲ ಗುಣಾದಿಗಳಿಂದ ಯೋಗ್ಯ ಪತಿಯ ಅನ್ವೇಷಣೆಯಲ್ಲಿದ್ದಾಳೆ. ನಾರದರಿಂದ ತಮ್ಮ ಶೀಲ – ವಿದ್ಯಾರೂಪ ಗುಣಗಳನ್ನು ಕೇಳಿ ತಮ್ಮನ್ನೇ ಪತಿಯನ್ನಾಗಿ ವರಿಸಬೇಕೆಂದು ತೀರ್ಮಾನಿಸಿದ್ದಾಳೆ. ದ್ವಿಜವರ್ಯರೇ — ನಾನು ಶ್ರದ್ಧಾ ಪೂರ್ವಕವಾಗಿ ತಮಗೆ ಕನ್ಯೆಯನ್ನು ಸಮರ್ಪಿಸುತ್ತೇನೆ. ದಯವಿಟ್ಟು ಸ್ವೀಕರಿಸಿ.

"ಇವಳಾದರೋ ತ್ವಯ್ಯಾಸೀತ್ ಕೃತ ನಿಶ್ಚಯಂ". ಹಾಗೂ ಗೃಹ ಕಾರ್ಯಗಳಲ್ಲಿ ನಿಪುಣಳಾಗಿದ್ದಾಳೆ. ವಿರಕ್ತಪುರುಷರು ಸಹ ಸ್ವತ; ಪ್ರಾಪ್ತ ವಾದ ಭೋಗವನ್ನು ತಿರಸ್ಕರಿಸುವುದಿಲ್ಲ. ವಿಷಯಾಸಕ್ತರ ವಿಚಾರವೇ ಬೇರೆ. ಯಾರು ಸ್ವಯಂ ಪ್ರಾಪ್ತ ಭೋಗವನ್ನು ತಿರಸ್ಕರಿಸುವರೊ ಅವರು ಕೃಪಣರ ಮುಂದೆ ಕೈಯೊಡ್ಡಿ ಹಾಸ್ಯಾಸ್ಪದರಾಗುತ್ತಾರೆ. ಅವರ ಅರ್ಜಿತ ಯಶಸ್ಸೂ ನಷ್ಟವಾಗುವುದು. ಪರರ ತಿರಸ್ಕಾರದಿಂದ ಮಾನಭಂಗವೂ ಆಗುವುದು. ವಿದ್ವನ್—ತಾವು ವೈವಾಹಿಕ ಇಚ್ಛೆಯನ್ನು ಹೊಂದಿರುವಿರಿ ಎಂದೂ ತಿಳಿದಿದ್ದೇನೆ. ಅಂದ ಮೇಲೆ ತಾವು ದಯೆಯಿಟ್ಟು ನನ್ನ ಪ್ರಾರ್ಥನೆಯನ್ನು ಸ್ವೀಕರಿಸಿರಿ.

ಕರ್ದಮರು ಹೇಳಿದರು— **ಬಾಢ ಮುದ್ವೋಢು ಕಾಮೋಹಂ ಅಪ್ರಮತ್ತಾ ತವಾತ್ಮಜಂ.** ರಾಜನ್ ನೀನು ಯೋಗ್ಯವಾದುದನ್ನೇ ಹೇಳಿರುವೆ. ನಾನು ವಿವಾಹವಾಗಲು ಇಚ್ಛಿಸುತ್ತೇನೆ. ನಿನ್ನ ಕನ್ಯೆಯು ನನಗೆ ಅನುರೂಪಳಾಗಿದ್ದಾಳೆ. ಮತ್ತೊಬ್ಬರೊಡನೆ ಅವಳ ವಿವಾಹ ಸಂಬಂಧ ಏರ್ಪಾಟೂ ನಡೆದಿಲ್ಲ. ಅಂದಮೇಲೆ ಸ್ಮೃತಿಕಾರರು ಉದಹರಿಸಿರುವ ಎಂಟು ವೈವಾಹಿಕ ವಿಧಿಗಳಲ್ಲಿ (ಬ್ರಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಂಧರ್ವ ರಾಕ್ಷಸ, ಪೈಶಾಚ) ಶ್ರೇಷ್ಠವಾದ ಬ್ರಾಹ್ಮ ವಿವಾಹ ವಿಧಿ ಗನುಗುಣವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಮಗಳ ವಿವಾಹ ನಡೆಯುವುದು ಸೂಕ್ತವಾಗಿದೆ. ನಿಮ್ಮ ಕನ್ಯೆಯನ್ನು ವಿಧಿಗನುಗುಣವಾಗಿ ಸ್ವೀಕರಿಸಿ. ಪ್ರಜೋತ್ಪಾದನಾ ರೂಪಮನೋರಥವನ್ನು ಕೈ ಗೂಡಿಸಿ ಕೊಳ್ಳ ಬಹುದಾಗಿದೆ. ಸುವರ್ಣಾ ಭೂಷಣಗಳ ಕಾಂತಿಯನ್ನೂ ತಿರಸ್ಕರಿಸುವ ಅಂಗ ಕಾಂತಿಯುಳ್ಳ ನಿಮ್ಮ ಕನ್ಯೆಯನ್ನು ಯಾರು ತಾನೇ ತಿರಸ್ಕರಿಸಿಯಾರು ?. ಒಂದು ಸಾರಿ ಉಪ್ಪರಿಗೆಯ ಮೇಲೆ ಕಂದುಕ ಕ್ರೀಡಾ ಸಕ್ತಳಾಗಿದ್ದ ನಿಮ್ಮ ಕನ್ಯೆಯನ್ನು ವಿಶ್ವಾವಸು ಗಂಧರ್ವನು ನೋಡಿ, ಮೂರ್ಛಿತನಾಗಿ ವಿಮಾನದಿಂದ ಕೆಳಕ್ಕೆ ಬಿದ್ದಿದ್ದನಂತೆ. ಅಂತಹ ಸೌಂದರ್ಯವತಿಯು ತಾನಾಗಿ ನನ್ನನ್ನು ವರಿಸುವೆನೆಂದು ಬಂದಿರುವಾಗ ತಿರಸ್ಕರಿಸುವ ಪುರುಷರಾರಿರುವರು? ಇವಳೆಂದರೆ ಪ್ರಿಯವ್ರತ - ಉತ್ತಾನಪಾದರ ಸಹೋದರಿ. ಸ್ವಾಯಂಭುವ ಮನುವಿನ ಪ್ರಿಯಪುತ್ರಿ. ಶ್ರೀಲಕ್ಷ್ಮಿಯ ಉಪಾಸನೆಯನ್ನು ಮಾಡದಿರುವವರು ಇವಳ ದರ್ಶನವನ್ನೂ ಮಾಡಲಾರರು. ಇವಳ ಪಾಣಿಗ್ರಹಣ ಮಾಡುವುದಂತೂ ನಿಶ್ಚಯ. ಆದರೆ ಒಂದು ಷರತ್ತಿನ ಮೇಲೆ- ಇವಳು ಪುತ್ರವತಿ ಯಾಗುವ ವರೆಗೂ ನಾನು ಇವಳೊಡನೆ ಗೃಹಸ್ಥ ಧರ್ಮವನ್ನು ಪಾಲಿಸುತ್ತಿರುವೆನು. ನಂತರ ಅಹಿಂಸಾ - ಶಮ ದಮಾದಿ ಪ್ರಧಾನವಾದ ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತೇನೆ. ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾದ ಆ ಹರಿಯು ನನಗೆ ಸರ್ವಮಾನ್ಯನು.

ಇಷ್ಟು ಹೇಳಿ ಕರ್ದಮರು ಮೌನಿಗಳಾದರು. ಅವರ ಮೃದು ಮಂದಹಾಸ ಭರಿತ ಮುಖಚಂದ್ರನನ್ನು ನೋಡಿ ದೇವಹೂತಿಯು ಆನಂದಿತಳಾದಳು.

ಮನುದಂಪತಿಗಳು ವಿಧಿಗನುಗುಣವಾಗಿ ಕನ್ಯಾ ದಾನವನ್ನು ಮಾಡಿದರು ಹಾಗೂ ನವದಂಪತಿಗಳಿಗೆ ಅತ್ಯಮೂಲ್ಯಗಳಾದ ವಸ್ತ್ರ ಭೂಷಣಾದಿಗಳನ್ನೂ ಗೃಹೋಚಿತ ಸಲಕರಣೆಗಳನ್ನೂ ಕೊಟ್ಟರು. ಯೋಗ್ಯ ವರನಿಗೆ ಕನ್ಯಾದಾನ ಮಾಡಿ ಮನು ದಂಪತಿಗಳು ನಿಶ್ಚಿಂತರಾದರು. ಹೊರಡುವಾಗ ಅವರಿಂದ ಪುತ್ರೀ ವಿರಹವು ಸಹಿಸಲಾಗಲಿಲ್ಲ. ಪುತ್ರಿಯನ್ನು ಆಲಂಗಿಸಿ-ಕೊಂಡು ಗಳಗಳನೇ ಅತ್ತು ಬಿಟ್ಟರು. ದೇವಹೂತಿಯ ತಲೆಯೆಲ್ಲವೂ ಒದ್ದೆಯಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ದಮರ ಅನುಮತಿಯನ್ನುಪಡೆದು ರಾಜ ದಂಪತಿಗಳು ರಾಜಧಾನಿಯಾದ ಬರ್ಹಿಷ್ಮತಿಯತ್ತ ಪ್ರಯಾಣಮಾಡಿದರು. ಭಗವಾನ್‌ವರಾಹ ಸ್ವಾಮಿಯು ಭೂಮಿಯನ್ನುದ್ಧರಿಸಿದ ಮೇಲೆ ಅವನ ದೇಹದಿಂದ ಕೆಲವು ರೋಮಗಳು ಈ ಸ್ಥಳದಲ್ಲಿ ಬಿದ್ದಿದ್ದುವು. ಋಷಿಗಳು ಈ ಪವಿತ್ರ ಸ್ಥಳದಲ್ಲಿ ಯಜ್ಞಾದಿಗಳನ್ನು ನಡೆಸಿ ವಿಘ್ನಕಾರಕ ರಾಕ್ಷಸರನ್ನು ನಿಗ್ರಹಿಸಿದ್ದರು. ಮನುವು ಆದರ್ಶ ಭಗವಭ್ಭಕ್ತನಾದುದರಿಂದ ಇದನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು.

ತಾಪತ್ರಯ ವಿನಾಶಕನಾದ ತನ್ನ ದಿವ್ಯ- ಭವನವನ್ನು ಮನುವು ಪತ್ನಿಯೊಡನೆಪ್ರವೇಶಿಸಿ ಪುರುಷಾರ್ಥೋಪಯೋಗಿ ಭೋಗಗಳನ್ನು ಭೋಗಿಸುತ್ತಾ ಸುಖವಾಗಿದ್ದನು. ಪ್ರಾತ;ಕಾಲದಲ್ಲಿ ಗಂಧರ್ವರಿಂದ ತನ್ನ ಗುಣಗಾನವಾಗುತ್ತಿದ್ದರೂ ಅದರ ಶ್ರವಣದಲ್ಲಿ ಅನಾಸಕ್ತನಾದ ಮನುವು, ಭಗವತ್ಪರಾಯಣನಾಗಿ ಭಗವದ್ಗುಣಗಳನ್ನು ಶ್ರವಣ ಮಾಡುತ್ತಿದ್ದನು. ಭಗವಂತನ ಗುಣಗಳ ಶ್ರವಣ ಮನನಾದಿಗಳಲ್ಲಿ ಆಸಕ್ತನಾಗಿರುತ್ತಿದ್ದ ಅವನಿಗೆ ಮನ್ವಂತರದ ಕಾಲವೂ ಕ್ಷಣದಂತೆ ಕಳೆಯುತ್ತಿದ್ದಿತು. ಭಗವದ್ಭಕ್ತನು ಹರಿಯನ್ನೇ ಆಶ್ರಯಿಸಿರುತ್ತಾನೆ. ಅವನ ಜೀವನದಲ್ಲಿ ಕ್ಲೇಶಗಳು ಒದಗುವುದಿಲ್ಲ.

ಮನುವು ಯಾವಾಗಲೂ ಸರ್ವ ಪ್ರಾಣಿಗಳ ಹಿತ ಚಿಂತಕನೂ ಆಗಿದ್ದನು ಅವನೇ ಬ್ರಾಹ್ಮಣಾದಿ ವರ್ಣಾಶ್ರಮದವರೆಲ್ಲರಿಗೂ ಧರ್ಮೋಪದೇಶವನ್ನುಮಾಡಿದನು. ಅದೇ "ಮನು ಧರ್ಮ ಶಾಸ್ತ್ರವು". ಅವನ ಚರಿತ್ರೆಯು ಕೀರ್ತನೆಗೆ ಯೋಗ್ಯವಾದುದು, ವಿದುರ -ಇನ್ನು ಮನುಪುತ್ರಿ ದೇವಹೂತಿಯ ಪ್ರಭಾವವನ್ನು ಕೇಳು.

ಓಂ — ತತ್ಸದಿತ್ಯೇವಂ ತೃತೀಯ ಸ್ಕಂಧೇ ದ್ವಾವಿಂಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮದ್ಭಾಗವತ ದರ್ಶನ - ಸ್ಕಂದ ೩ ಅ - ೨೩
"ಕರ್ದಮ -ದೇವಹೂತಿಯರ ವಿಹಾರ."

ಮೈತ್ರೇಯರು ಹೇಳುತ್ತಾರೆ — ದೇವಹೂತಿಯ ತಂದೆ ತಾಯಿಗಳು ಹೊರಟು ಹೋದ ಮೇಲೆ, ಅವಳು ಪತಿಯ ಇಂಗಿತಕ್ಕನುಗುಣವಾಗಿ, ಭವಾನಿಯು ಭವನನ್ನು ಸೇವಿಸುವಂತೆ ಪತಿ ಸೇವೆಯಲ್ಲಿ ನಿರತಳಾದಳು. ನೋಡಿ—ನಮ್ಮ ಶಾಸ್ತ್ರಾದಿಗಳು ಕೇವಲ ತ್ಯಾಗಿಗಳಿಗಾಗಿ ಇಲ್ಲ. ಎಲ್ಲಾ ವರ್ಣದವರಿಗೂ ಎಲ್ಲಾ ಆಶ್ರಮದವರಿಗಾಗಿಯೂ ಇವೆ. ಇನ್ನೂ ಹೇಳಬೇಕೆಂದರೆ ಭೂಮಂಡಲದಲ್ಲಿ ಎಲ್ಲರಿಗಾಗಿಯೂ ಇವೆ. ಶ್ರೀಮದ್ಭಾಗವತದಲ್ಲಿ ದೇವಹೂತಿ-ಕರ್ದಮರ ದಾಂಪತ್ಯ ಜೀವನವನ್ನು ವರ್ಣಿಸಿದ್ದಾರೆ. ಪತಿ ಪತ್ನಿಯರು ಹೇಗಿರಬೇಕೆಂಬುದನ್ನು ಜಗತ್ತಿಗೆ ತೋರಿಸಿದ್ದಾರೆ.

ಪತ್ನಿಯಾದವಳು ಇಂಗಿತಕೋವಿದಳಾಗಿರಬೇಕು. ಅಂದರೆ ಪತಿಯ ಅಂತರ್ಯಾಮಿಯಾಗಿರಬೇಕು. ಯಾವಾಗ-ಯಾವುದರ ಆವಶ್ಯಕತೆಯು ಪತಿಗಿರುತ್ತದೆ ಎಂಬುದನ್ನು ತಿಳಿದುಕೊಂಡಿರಬೇಕು. ಎಲ್ಲವನ್ನೂ ಕೇಳಿ ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಬಾರದು. ಎಲ್ಲಕ್ಕೂ ಕೇಳಲು ಹೊರಟರೆ ಪತ್ನಿಯ ಬುದ್ಧಿ ಕೌಶಲ್ಯಕ್ಕೇನು ಬೆಲೆ ಬಂದೀತು ?. ಪತಿಸೇವೆಗಾಗಿ ಪತ್ನಿಯಲ್ಲಿರಬೇಕಾದ ಗುಣಗಳನ್ನು ಹೇಳುತ್ತಾರೆ.

ವಿಶ್ರಂಭೇಣಾತ್ಮಶೌಚೇನ ಗೌರವೇಣ ದಮೇನಚ|
ಶುಶ್ರೂಷಯಾ ಸೌಹೃದೇನ ವಾಚಾ ಮಧುರಯಾಚಭೋಃ

ವಿಶ್ರಂಭಣ ಎಂದರೆ ಪತ್ನಿಗೆ ಪತಿಯ ಮೇಲೆ ಗೌರವ - ವಿಶ್ವಾಸಗಳಿರಬೇಕು. ಪತಿಯು ನಾನು ಇಲ್ಲಿಂದ ಬರುತ್ತಿದ್ದೇನೆ ಎಂದರೆ ಪತ್ನಿಯು ಅದಕ್ಕೆ ಒಪ್ಪಿಕೊಳ್ಳಬೇಕು, ಸಲ್ಲದ ಸಂಶಯಗಳನ್ನು ತಾಳಬಾರದು. ಪತಿ - ಪತ್ನಿಯರಲ್ಲಿ ಪರಸ್ಪರ ವಿಶ್ವಾಸವಿಲ್ಲದಿದ್ದರೆ ಆ ಮನೆಯು ನರಕವಾಗುವುದು. ಒಬ್ಬರಲ್ಲೊಬ್ಬರು ವಿಶ್ವಾಸವನ್ನಿಡುವುದೆ. ಗ್ರಾರ್ಹಸ್ಥ್ಯ ಜೀವನದ ಸಫಲತೆಯು ಆತ್ಮ ಶೌಚೇನ - ಗೃಹಶುದ್ಧಿ, ದೇಹಶುದ್ಧಿ, ಮನಃಶುದ್ಧಿ, ಇತ್ಯಾದಿಗಳ ಬಗ್ಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವಾಗಲೂ ಔದಾಸೀನವು ಮೂಡಬಾರದು. ಗೌರವೇಣ — ಗೌರವ ಭಾವವು ತುಂಬಿರಬೇಕು. ಏನೋ ಬರ್ತಾನೆ ಹೋಗ್ತಾನೆ ಎನ್ನುವ ಭಾವನೆ ಯಿರಬಾರದು. ಅಪಮಾನ -ತಿರಸ್ಕಾರಗಳು ಇರಲೇಬಾರದು.

ದಮೇನ—ಇಂದ್ರಿಯಗಳನ್ನು ವಿಶೇಷತ: ನಾಲಿಗೆಯನ್ನು ವಶದಲ್ಲಿಟ್ಟು ಕೊಂಡಿರಬೇಕು. ಭೋಗಲಾಲಸೆಯನ್ನು ವಿಶೇಷವಾಗಿ ಬೆಳಸಿಕೊಳ್ಳಬಾರದು.

ಶುಷ್ರೂಷಯಾ— ಸೇವಾ ಪರಾಯಣತೆಯಿರಬೇಕು.

ಸೌಹೃದೇನ—ಸದ್ಭಾವಯುತಳಾಗಿರಬೇಕು.

ವಾಚಾಮಧುರಯಾ—ನಮ್ಮಲ್ಲಿ ಪರಸ್ಪರ ಪ್ರೇಮವಿದೆಯೆಂದು ತಿಳಿದು ಕಠೋರ ಮಾತುಗಳನ್ನಾಡುವುದೂ ಸಲ್ಲದು.

ಮಾತಿನ ವೈಪರಿತ್ಯದಿಂದಲೇ ಜಗಳವಾಗುವುದು. ಮಾನವನು ಕಠಿನ ಮನಸ್ಕನಾಗಿ ಎದುರಿನವರನ್ನು ಗಮನಿಸದೆ ಯದ್ವಾ ತದ್ವಾ ಮಾತಾಡಿದರೆ ಅವನೂ ದುಷ್ಟ ಭಾವವನ್ನು ತಾಳುತ್ತಾನೆ. ಮಾತು ಯಾವಾಗಲೂ ಮೃದು ಮಧುರವಾಗಿರಬೇಕು. ಹಾಗಾಗಬೇಕಾದರೆ, ಮನಸ್ಸು ನಿರ್ಮಲವಾಗಿರಬೇಕು ಮನಸ್ಸಿನ ನಿರ್ಮಲತೆಗೆ ಜಿಹ್ವಾದಿ ಇಂದ್ರಿಯಗಳ ಸಂಯಮವು ಆವಶ್ಯಕವು.

ದೇವಹೂತಿಯು— ವಿಸೃಜ್ಯ ಕಾಮಂ ದಂಭಂಚದ್ವೇಷಂ **ಲೋಭಮಘಂಮದಮ್ ಅಪ್ರಮತ್ತೋದ್ಯತಾ ನಿತ್ಯಂ ತೇಜೀಯಾಂ ಸಮತೋಷಯತ್.**

ಕಾಮ - ದಂಭ - ದ್ವೇಷ - ಲೋಭ - ಪಾಪ - ಅಭಿಮಾನಗಳನ್ನು ದೂರೀಕರಿಸಿ ಅಪ್ರಮತ್ತತೆಯಿಂದ ಪತಿಯನ್ನು ಸೇವಿಸಿದಳು. ಪ್ರಮಾದ - ಆಲಸ್ಯಗಳಲ್ಲಿ ಸ್ವಲ್ಪ ಅಂತರವಿದೆ. ಆಲಸ್ಯದಲ್ಲಿ ಮಾಡಬೇಕಾದ ಕೆಲಸವು ನೆನಪಿನಲ್ಲಿರುತ್ತದೆ. ಆದರೆ ಸಮಯಕ್ಕೆ ಸರಿಯಾಗಿ ಮಾಡಲಾಗುವುದಿಲ್ಲ. ಪ್ರಮಾದವೆಂದರೆ - ಸಮಯದಲ್ಲಿ ಮಾಡಬೇಕಾದುದು ನೆನಪಿಗೇ ಬರುವುದಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಪತ್ನಿಯಾದವಳು ಯಾವಾಗಲೂ ಅಪ್ರಮತ್ತತೆಯಿಂದಿರಬೇಕು. ಸೇವೆಯಿಂದ ವಿಮುಖಳಾಗ ಬಾರದು. ಅಕಾಲದಲ್ಲಿ ಅತಿಥಿಗಳು ಬಂದರೂ ಸತ್ಕರಿಸಬೇಕು. ದೇವಹೂತಿಯು ಸರ್ವ ವಿಧದಿಂದಲೂ ಪತಿಯನ್ನು ಸೇವಿಸುತ್ತಾ ಅವನ ಸಂತೋಷಕ್ಕೆ ಪಾತ್ರಳಾದಳು. ದೇವಹೂತಿಯ ಅಭಿಪ್ರಾಯದಲ್ಲಿ ಕರ್ದಮರು ದೇವೋಪಮರು. ಸಂಪೂರ್ಣ ವಿಶ್ವಾಸದಿಂದ ಅವರನ್ನು ಸೇವಿಸುತ್ತಿದ್ದಳು. ಯದ್ಯಪಿ ಕರ್ದಮರ ಮನೆಯಲ್ಲಿ ಎಲ್ಲಾ ಲೌಕಿಕ ಪದಾರ್ಥಗಳಿಗೂ ಅಭಾವವೇ. ರಾಜಪುತ್ರಿಯಾಗಿದ್ದ ದೇವಹೂತಿಯು ತನ್ನ ವೈಶಿಷ್ಟ್ಯದಿಂದ ಯಾವುದೇ ಅಭಾವವನ್ನೂ ಗುರುತಿಸಲಿಲ್ಲ. ಪೂರ್ಣ ಸಂತೃಪ್ತ ಭಾವದಿಂದಲೇ ಇರುತ್ತಿದ್ದಳು. ಮೊದಲೇ ರಾಜಕುಮಾರಿ, ಸುಮ ಕೋಮಲೆ, ಕೆಲಸಮಾಡಿ ಅಭ್ಯಾಸವಿಲ್ಲ. ದಿನೇ, ದಿನೇ ಕೃಶಳಾಗುತ್ತಿದ್ದಳು. ಒಂದು ದಿವಸ ಕರ್ದಮರು ನೋಡಿ ದಯಾ ವಿಷ್ವರಾಗಿ ಕೇಳಿದರು—

ತುಷ್ಟೋಽಹ ಮದ್ಯ ತವ ಮಾನವಿ ಮಾನದಾಯಾಃ
ಶುಶ್ರೂಷಯಾ ಪರಮಯಾ ಪರಯಾಚ ಭಕ್ತ್ಯಾ,
ಯೋದೇಹಿನಾಮಯ ಮತೀವ ಸುಹೃತ್ ಸ್ವದೇಹೋ,
ನಾವೇಕ್ಷಿತ; ಸಮುಚಿತ: ಕ್ಷಪಿತುಂ ಮದರ್ಥೇ.

ಮನುಪುತ್ರಿ—ನೀನು ನನ್ನನ್ನು ಬಹಳ ಆದರಿಸಿರುವೆ. ನಿನ್ನ ಉತ್ತಮ ಸೇವೆ, ಹಾಗೂ ಪರಾಭಕ್ತಿಯಿಂದ ಸಂತುಷ್ಟನಾಗಿದ್ದೇನೆ. ಎಲ್ಲರಿಗೂ ಅವರವರ ದೇಹಗಳು ಅತಿ ಪ್ರಿಯಕರವಾಗಿರುತ್ತವೆ. ನೀನು ನಿನ್ನ ದೇಹವನ್ನೇ ನನಗಾಗಿ ಸವೆಸಿರುವೆ. ನಿನ್ನ ಸೇವೆಯಿಂದಾಗಿ, ನಾನು ಆಚರಿಸಿರುವ ಧರ್ಮಾಚರಣೆಯಿಂದ ತಪಸ್ಸು- ಉಪಾಸನಾ, ಸಮಾಧಿಸ್ಥಿತಿಗಳು ಲಭ್ಯವಾದುವು. ಈ ಅಭಯ–ವಿಶೋಕಭಗವತ್ಪ್ರಸಾದರೂಪ ವಿಭೂತಿಗಳು ನಿನಗಾಗಿಯೂ ಇವೆ. ನನ್ನ ಅನುಗ್ರಹದಿಂದ ದಿವ್ಯ ದೃಷ್ಟಿಯನ್ನು ಪಡೆದು ಅವುಗಳನ್ನು ಅವಲೋಕಿಸುವವಳಾಗು. ಸಕಲ ಸಾಂಸಾರಿಕ ಭೋಗಗಳೂ ಶ್ರೀ ಹರಿಯ ಈ ಕ್ಷಣ ಮಾತ್ರದಿಂದ ನಷ್ಟವಾಗುತ್ತವೆ. ನನ್ನ ಸೇವೆಯಿಂದ ನೀನು ಕೃತಾರ್ಥಳಾಗಿರುವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತಿವ್ರತ್ಯ ಧರ್ಮಾಚರಣೆಯಿಂದ ನಿನಗೆ ಈ ಭೋಗಗಳು ಪ್ರಾಪ್ತವಾಗಿವೆ. ನಾವು ರಾಜರು- ಭೋಗಿಗಳು ಎಂಬ ದುರಭಿಮಾನವಿರುವವರಿಗೆ ಈಭೋಗಗಳ ಪ್ರಾಪ್ತಿಯಾಗುವುದಿಲ್ಲ.

ದೇವಹೂತಿಯು ಪತಿಯ ಮಾತುಗಳಿಂದ ಅತೀವ ಸಂತುಷ್ಟಳಾದಳು. ಅವರ ತಪೋ ವಿಧಾನವನ್ನು ತಿಳಿದು ನಿಶ್ಚಿಂತಳಾದಳು. ಮುಖದಲ್ಲಿ ಮಂದ ಹಾಸವು ಮಿನುಗಿತು. ದೃಷ್ಟಿಯಲ್ಲಿ ಮಾದಕತೆಯು ಮೂಡಿತು. ವಾಣಿಯು ಗದ್ಗದಿತವಾಯಿತು. ಪ್ರೇಮ ವಿನಯಗಳಿಂದ ಹೇಳಿದಳು—ದ್ವಿಜ ಶ್ರೇಷ್ಠರೇ ತಾವು ಮಹದ್ಯೋಗ ಶಕ್ತಿ ಸಂಪನ್ನರು. ತ್ರಿಗುಣಾತ್ಮಿಕಾ ಮಾಯೆಯನ್ನು ಗೆದ್ದಿರುವಿರಿ. ತಾವು ನನ್ನ ತಂದೆಯ ಮುಂದೆ ಹೇಳಿದಂತೆ, ಪತಿವ್ರತಾ ಸ್ತ್ರೀಗೆ ಪರಮ ಸೌಭಾಗ್ಯವಾದಂತಹ ಸಂತಾನ ಭಾಗ್ಯವನ್ನು ಕರುಣಿಸಬೇಕು. ಈ ನನ್ನ ದೇಹವು ದಾಂಪತ್ಯ ಧರ್ಮ ನಿರ್ವಹಣೆಗೆ ಯೋಗ್ಯವಾಗಬೇಕು. ಗಂಧ ಮಾಲ್ಯಾದಿಗಳ ಶೇಖರಣೆಯೂ, ಉಪಯುಕ್ತ ಸುಂದರ ಭವನದ ನಿರ್ಮಾಣವೂ ಆಗಬೇಕು.

ದೇವಹೂತಿಯಪ್ರಾರ್ಥನೆ ಗನುಗುಣವಾಗಿ ಕರ್ದಮರು ಯೋಗ ಶಕ್ತಿಯಿಂದ ಒಂದು ಸುಂದರ ವಿಮಾನವನ್ನು ರಚಿಸಿದರು. ಇಚ್ಛಾನುಸಾರವಾಗಿ ಎಲ್ಲೆಡೆಯೂ ಸಂಚರಿಸುವ ಶಕ್ತಿ ಪಡೆದಿದ್ದಿತು. ಎಲ್ಲಾ ಭೋಗ ಪದಾರ್ಥಗಳ ಅಗಾಧ ಶೇಖರಣೆಯು ಅದರಲ್ಲಿದ್ದಿತು. ವಿಮಾನವು ಮುತ್ತು-ರತ್ನಗಳಿಂದ-ಮಣಿ ಸ್ತಂಭಗಳಿಂದ ವಿರಾಜಮಾನವಾಗಿದೆ. ಎಲ್ಲಾ ಋತುಮಾನಗಳಿಗೂ ಹಿತಕರವಾಗಿದೆ. ಚಿತ್ರ ವಿಚಿತ್ರ ಧ್ವಜ ಪತಾಕೆಗಳಿಂದ ಅಲಂಕೃತವಾಗಿದೆ. ಮಧುಪಾನಾಸಕ್ತ ಭ್ರಮರಗಳ ಗುಂಜಾರವದಿಂದ ಆಕರ್ಷಿತವಾಗಿದೆ ಏಕಾಂತವಾಸಕ್ಕೆ ಅನುಕೂಲಕರಗಳಾದ ವಿವಿಧ ಕೊಠಡಿಗಳಲ್ಲಿ ಹಂಸತೂಲಿ ರಕಾತಲ್ಪಯುಕ್ತ ಮಂಚಗಳು ಸಿದ್ಧಪಡಿಸಲ್ಪಟ್ಟಿವೆ. ಗೋಡೆಗಳ ಮೇಲೆ ರಚಿಸಿದ್ದ ಶಿಲ್ಪಕಲಾಯುಕ್ತ ವಿವಿಧ ಭಂಗಿಯ ಚಿತ್ರಗಳು ಅಪೂರ್ವ ಶೋಭೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಬೀರುತ್ತಿವೆ. ನಾನಾವಿಧ ಪಕ್ಷಿಗಳು ವಿಹರಿಸುವ ಉದ್ಯಾನ ವನಗಳು ವಿಮಾನದ ಒಳಗಡೆ ವಿಹಾರಸ್ಥಾನವೇ ಬೇರೆ, ಪ್ರಾಂಗಣವೇ ಬೇರೆ. ಹೀಗೆ ಆ ವಿಮಾನದ ಭವ್ಯತೆಯನ್ನು ಎಂತಹ ವೈಜ್ಞಾನಿಕನೂ ಕಲ್ಪಿಸಿಕೊಳ್ಳಲೂ ಅಸಾಧ್ಯವಾಗಿದ್ದಿತು.

ಇಂತಹ ಸುಂದರವಾದ ಆ ವಾಸ ಸ್ಥಾನವನ್ನೂ ದೇವಹೂತಿಯು ಪ್ರಸನ್ನತೆಯಿಂದ ನೋಡಲಾರದೇ ಹೆದರಿಳು. ಆಗ ಕರ್ದಮರು ಹೇಳಿದರು— ಪ್ರಿಯೇ, ನೀನು ಮೊದಲು ಈ ಬಿಂದು ಸರೋವರದಲ್ಲಿ ಸ್ನಾನಮಾಡು. ಈ ಸರೋವರವನ್ನು ವಿಷ್ಣು ಭಗವಂತನೇ ನಿರ್ಮಿಸಿದ್ದಾನೆ. ಈ ತೀರ್ಥವು ಮಾನವರ ಸರ್ವ ಕಾಮನೆಗಳನ್ನೂ ಪೂರೈಸುವುದಾಗಿದೆ, ಪತಿಯ ಆಜ್ಞೆಗನುಗುಣವಾಗಿ ದೇವಹೂತಿಯು ಸರೋವರವನ್ನು ಪ್ರವೇಶಿಸಿದಳು. ಆಗ ಅವಳು ಬಹಳ ಮಲಿನಳಾಗಿ ಕಾಂತಿ ಹೀನಳಾಗಿದ್ದಳು. ಮೈ ಮೇಲೆ ಒಂದು ಕೊಳಕು ಸೀರೆ, ಕೇಶ ರಾಶಿಗಳು ಸಂಸ್ಕಾರ ಹೀನತೆಯಿಂದ ಒಂದಕ್ಕೊಂದು ಅಂಟಿಕೊಂಡಿದ್ದುವು ಅಂಗರಾಗಾದಿಗಳಿಲ್ಲದೆ ದೇಹವು ಕಾಂತಿ ಹೀನವಾಗಿದ್ದಿತು. ಹಾಗೂ ಸ್ತನಗಳು ಶೋಭೆಯನ್ನು ಕಳೆದು ಕೊಂಡಿದ್ದುವು.

ದೇವಹೂತಿಯು ಒಂದು ಸಾರಿ ಸರೋವರದಲ್ಲಿ ಮುಳುಗಿದಳು. ಸರೋವರದ ಒಳಗಡೆ ಒಂದು ದಿವ್ಯ ಭವನ. ಅಲ್ಲಿ ಸಾವಿರ ಮಂದಿ ಕಿಶೋರಿಯರು ಸಕಲಾಭರಣಭೂಷಿತರಾಗಿ ಇವಳನ್ನು ಕಂಡೊಡನೆ ಎದ್ದು ನಿಂತರು. ಕೈ ಕಟ್ಟಿಕೊಂಡು ಹೇಳಿದರು—

ವಯಂ ಕರ್ಮ ಕರೀ ಸ್ತುಭ್ಯಂ ಶಾಧಿನಃ ಕರವಾಮ ಕಿಮ್

ನಾವುಗಳು ನಿನ್ನ ಸೇವಕಿಯರು. ನಾವೇನು ಮಾಡಬೇಕೆಂಬುದನ್ನು ಆಜ್ಞಾಪಿಸು. ಅವರುಗಳು ದೇವಿಯನ್ನು, ಶುದ್ಧಿಕರವಾದ ದಿವ್ಯ ಮಸಾಲೆಯನ್ನು ಮೈಯ್ಯಿಗೆ ತಿಕ್ಕಿ, ಸ್ನಾನ ಮಾಡಿಸಿದರು. ನವೀನ -ನಿರ್ಮಲ ವಸನಗಳನ್ನು ಉಡಿಸಿದರು. ಸುಂದರಾಭರಣಗಳಿಂದ ಅಲಂಕರಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಗುಣ ಸಂಪನ್ನವಾದ ಭೋಜನವನ್ನು ಮಾಡಿಸಿ, ಅಮೃತಪ್ರಾಯವಾದ ಆಸವವನ್ನು ಒದಗಿಸಿಕೊಟ್ಟರು, ದರ್ಪಣದಲ್ಲಿ ಒಮ್ಮೆ ತನ್ನನ್ನು ನೋಡಿ ಕೊಂಡ ದೇವಹೂತಿಗೆ, ತನ್ನಮೇಲೆಯೆ ನಂಬಿಕೆ ಬರಲಿಲ್ಲ. ಅಧ್ಭುತ ದಿವ್ಯತೆಯಿಂದ ದೇದೀಪ್ಯ ಮಾನಳಾಗಿದ್ದಳು. ಸಹಸ್ರಸ್ತ್ರೀ ಪರಿವೃತಳಾದ ದೇವಹೂತಿಯು ಇಂದ್ರಾಣಿಯೋ ಪಾದೆಯಲ್ಲಿ ಪರಿಶೋಭಿ ಸುತ್ತಾ ಪತಿಯ ಸನ್ನಿಧಿಗೆ ಬಂದಳು. ಪತಿಯ ಯೋಗ ಶಕ್ತಿಯನ್ನು ಕಂಡು ಮುಗ್ಧಳಾಗಿ ಹೋಗಿದ್ದಳು, ಕರ್ದಮರು ಪ್ರೀತಿಯಿಂದ ಕೈ ಹಿಡಿದು ವಿಮಾನ ವನ್ನೇರಿಸಿದರು. ಅವರೂ ನಕ್ಷತ್ರ ಗಳಿಂದ ಪರಿವೃತನಾದ ಚಂದ್ರನಂತೆ ಶೋಭಿಸುತ್ತಿದ್ದರು.

ವಿಮಾನಾರೂಢರಾದ ದಂಪತಿಗಳು, ಸಾಕ್ಷಾತ್ ಕುಬೇರ ದಂಪತಿಗಳಂತೆ ಮೇರು ಪರ್ವತದ ತಪ್ಪಲುಗಳಲ್ಲಿ ಬಹಳ ಕಾಲ ವಿಹರಿಸಿದರು. ಅಲ್ಲಿ ಅಷ್ಟ ದಿಕ್ಪಾಲಕರುಗಳು ಪತ್ನಿಯರೊಡನೆ ವಿಹರಿಸುತ್ತಿದ್ದರು. ಸಿಧ್ಧವಿದ್ಯಾಧರಿಯ ರೆಲ್ಲರೂ ಇವರನ್ನು ಕಂಡು ವಂದಿಸುತ್ತಿದ್ದರು. ಕರ್ದಮ ದಂಪತಿಗಳು, ವೈಶ್ರಂಭಕ, ಸುರಸನ, ನಂದನ, ಪುಷ್ಪಭದ್ರ ಚೈತ್ರರಥ ಇತ್ಯಾದಿ ದೇವೋ ದ್ಯಾನಗಳಲ್ಲಿಯೂ ಮಾನಸ ಸರೋವರದಲ್ಲಿಯೂ ಯಥೇಚ್ಛವಾಗಿ ವಿಹರಿಸಿದರು, ವಾಯುವಿನಂತೆ ಅಡೆ ತಡೆಗಳಿಲ್ಲದೆ ಎಲ್ಲೆಡೆಯಲ್ಲಿಯೂ ಸಂಚ ರಿಸುತ್ತಾ ವಿಮಾನ ವಿಹಾರೀ ದೇವತೆಗಳಿಗಿಂತಲೂ ಮುಂದೆ ಮುಂದೆ ಹೋಗುತ್ತಿದ್ದರು.

ಕರ್ದಮರ ಈ ಮಹಾಭೋಗ ಭಾಗ್ಯಕ್ಕೆಯಾರೂ ಆಶ್ಚರ್ಯ ಪಡ ಬೇಕಾದುದ್ದಿಲ್ಲ. ಭಗವಂತನ ಭವಭಯಹಾರೀ ಪವಿತ್ರ ಪಾದ ಪದ್ಮಗಳನ್ನು ಆಶ್ರಯಿಸಿದ ಧೀರ ಪುರುಷರಿಗೆ ಯಾವುದು ತಾನೇ ದುರ್ಲಭವಾದೀತು?. ಮಹಾಯೋಗಿ ಕರ್ದಮರು, ಪತ್ನಿಯೊಡನೆ ಭೂಮಂಡಲವನ್ನೆಲ್ಲಾ ಸುತ್ತಿ ಎಲ್ಲಾ ರಮಣೀಯವಾದ ಸ್ಥಳಗಳಲ್ಲಿಯೂ ವಿಹರಿಸಿ, ಪತ್ನಿಯನ್ನು ಸಂತೋಷ ಪಡಿಸುತ್ತಾ ವರ್ಷಗಳ ಮೇಲೆ ವರ್ಷಗಳನ್ನು ಕಳೆದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ದಮ ದಂಪತಿಗಳು ಆಶ್ರಮಕ್ಕೆ ಹಿಂತಿರುಗಿದ್ದಾರೆ. ಭೋಗಾನುಭವದಲ್ಲಿ ಕಳೆದ ನೂರಾರು ವರ್ಷಗಳೂ ಒಂದು ಕ್ಷಣದಂತೆ ಕಳೆದಿವೆ. ಭಗವಂತನ ಆದೇಶಾನುಗುಣವಾಗಿ ದೇವಹೂತಿಯು ಒಂಭತ್ತು ಮಂದಿ ಪುತ್ರಿಯರಿಗೆ ಜನ್ಮವಿತ್ತಿದ್ದಾಳೆ, ಎಲ್ಲರೂ ಸರ್ವಾಂಗ ಸುಂದರಿಯರು, ರಕ್ತ ಕಮಲದಂತೆ ಶೋಭಾಯಮಾನರಾಗಿದ್ದರು. ಈಗ ಪತಿಯ ಮನಸ್ಸಿನಲ್ಲಿ ಸಂನ್ಯಾಸ ಸ್ವೀಕಾರದ ಇಚ್ಛೆಯು ಬಂದಿದೆ ಎಂದು ಅರಿತಳು. ನೋಡಿ--- ಕರ್ದಮರಂತಹವರೂ ಸಂನ್ಯಾಸದ ಇಚ್ಛೆಯುಳ್ಳವರಾಗುತ್ತಾರೆ ಅವರ ಗಾರ್ಹಸ್ಥ್ಯವು ಎಷ್ಟು ವೈಭವೋಪೇತವಾದುದು ?. ಜೀವನದಲ್ಲಿ ಭೋಗದೊಡನೆ ತ್ಯಾಗ ವೈರಾಗ್ಯಾದಿಗಳೂ ಇರಬೇಕು. ದು:ಖ ಬಂದಾಗ ತ್ಯಾಗಿಗಳಾಗುವುದು, ವೈರಾಗಿಯಾಗುವುದು ಸರಿಯಾದುದಲ್ಲ. ತ್ಯಾಗವೈರಾಗ್ಯಗಳೂ ಜೀವನದ ಒಂದೊಂದು ಮೆಟ್ಟಲು. ಇವುಗಳಿಲ್ಲದ ಜೀವನವು ಪೂರ್ಣತೆಯನ್ನು ಕಾಣಲಾರದು.

ದೇವಹೂತಿಯು ಸಂತಪ್ತ ಹೃದಯದಿಂದ ಮೃದು-ಮಧುರವಾಗಿ ಪತಿಯೊಡನೆ ಹೇಳಿದಳು- ಭಗವನ್ ತಮ್ಮ ಪ್ರತಿಜ್ಞೆಗನುಗುಣವಾಗಿ ತಾವು ಎಲ್ಲವನ್ನೂ ಪೂರೈಸಿರುವಿರಿ. ನಾನು ತಮ್ಮ ಶರಣಾಗತಳು. ನನಗೆ ನೀವು ಅಭಯದಾನವನ್ನು ನೀಡಬೇಕು. ಈ ನಮ್ಮ ಕನ್ಯೆಯರು ಯೋಗ್ಯ ಪತಿಯರನ್ನು ಹೊಂದುವಂತಾಗಬೇಕು. ತಾವು ವನವಾಸಿಗಳಾದ ಮೇಲೆ ನನ್ನ ಜನ್ಮ ಮರಣಾತ್ಮಕ ದು:ಖ ನಿವಾರಣೆಗಾಗಿ ಓರ್ವರ ಅವಲಂಬನವು ಬೇಕು ಇಲ್ಲಿಯವರೆಗೆ ನಶ್ವರವಾದ ಇಂದ್ರಿ ಸುಖ ಪ್ರಾಪ್ತಿಗಗಿ ಬಹಳ ಸಮಯವನ್ನು ನಾಶ ಮಾಡಿಕೊಂಡಾಯಿತು. ತಮ್ಮ ಅಪಾರ ಪರಮ ಪ್ರಭಾವವನ್ನು ತಿಳಿಯದ ನಾನು ಇಂದ್ರಿಯಾಸಕ್ತಿಯಿಂದ ತಮ್ಮನ್ನು ಪ್ರೀತಿಸಿದೆನು. ಆದರೂ— **"ತಥಾಪ್ಯಸ್ತ್ವ ಭಯಾಯಮೇ"**. ಈ ನಿಮ್ಮ ಸಹವಾಸವೂ ಸಂಸಾರ ಭಯವನ್ನು ದೂರಮಾಡುವುದಾಗಬೇಕು. ಅಸತ್ಪುರುಷರಲ್ಲಿ ಅಜ್ಞಾನದಿಂದ ಮಾಡಿದ ಸಂಗವು ಬಂಧಕಾರಿಯಾದರೆ ಸತ್ಸಂಗವು ನಿಸ್ಸಂಗವೆಂದೇ ಹೇಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳ್ಳಲ್ಪಡುತ್ತದೆ. ಸಂಸಾರದಲ್ಲಿ ಯಾರು ಧರ್ಮ ಸಂಪಾದನೆಯನ್ನು ಮಾಡದೆ ವೈರಾಗ್ಯ ಭಾವನೆಯನ್ನು ತಾಳದೆ, ಭಗವಂತನನ್ನು ಸೇವಿಸದೇ ಜೀವಿಸುವರೊ ಅವರ ಜೀವನವು ಶವದ ಜೀವನದಂತೆ, ಭಗವನ್ಮಾಯೆಯು ಮಹಾಶಕ್ತಿಯುತವಾದುದು. ನಿಮ್ಮಂತಹ ಮುಕ್ತಿದಾತಾ ಪತಿ ದೇವನನ್ನು ಹೊಂದಿಯೂ ಸಂಸಾರ ಬಂಧನದಿಂದ ಮುಕ್ತಳಾಗಲು ನಾನು ಇಲ್ಲಿಯವರೆಗೂ ಯೋಚಿಸಲಿಲ್ಲ

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ತ್ರಯೋ ವಿಂಶೋಽಧ್ಯಾಯ

ಶ್ರೀಮದ್ಭಾಗವತ ದರ್ಶನ. ಸ್ಕಂ-೩. ಅ೨೪.

"ಕಪಿಲ ದೇವರ ಜನ್ಮ"

ಮೈತ್ರೇಯರು ಹೇಳುತ್ತಾರೆ—ಉತ್ತಮ ಗುಣ ಭೂಷಿತೆಯಾದ ಮನು-ಪುತ್ರಿಯಾದ ದೇವಹೂತಿಯು ಕರ್ದಮರೊಡನೆ ಹೀಗೆ ನಿರ್ವೇದ ಯುಕ್ತ ಮಾತುಗಳನ್ನು ಹೇಳೋಣ, ಕೃಪಾಳುಗಳಾದ ಕರ್ದಮರು ಭಗವಾನ್ ವಿಷ್ಣುವಿನ ಕಥನವನ್ನು ಸ್ಮರಿಸಿಕೊಂಡು ಹೇಳಿದರು — **'ಮಾಖಿದೋ ರಾಜಪುತ್ರೀತ್ಥಂ'.** ನಿರ್ದುಷ್ಟಳಾದ ರಾಜಕುಮಾರಿ, ನೀನು ಹೀಗೆ ವೃಥಾ ಕೊರಗಬೇಡ. ಅವಿನಾಶಿ, ಭಗವಾನ್ ವಿಷ್ಣುವನ್ನು ಸದ್ಯದಲ್ಲಿಯೇ ನೀನು ಗರ್ಭದಲ್ಲಿ ಧರಿಸುವೆ. ಪ್ರಿಯೇ ನೀನು ಮೊದಲಿನಿಂದಲೂ ವ್ರತಾಚರಣೆಗಳಲ್ಲಿ ಆಸಕ್ತಳು. ನೀನು ಕಲ್ಯಾಣಭಾಗಿನಿಯಾಗುವೆ. ನೀನು ಈಗ ಸಂಯಮ ನಿಯಮಾದಿಗಳಿಂದ ದಾನಶೀಲಳಾಗಿ ತಪಸ್ಸನ್ನು ಮಾಡು. ಶ್ರದ್ಧೆಯಿಂದ ಭಗವಂತನನ್ನು ಆರಾಧಿಸು. ನಿನ್ನುದರದಿಂದ ಶ್ರೀಹರಿಯು ಅವತರಿಸಿ ನಾನು ಯಶೋವಂತನಾಗುವಂತೆ ಮಾಡುತ್ತಾನೆ. ಹಾಗೂ ನಿನಗೆ ಬ್ರಹ್ಮಜ್ಞಾನನನ್ನು ಉಪದೇಶಿಸಿ ನಿನ್ನ ಹೃದಯದ ಅಹಂಕಾರ ಗ್ರಂಥಿಯನ್ನು ಛೇದಿಸುತ್ತಾನೆ.

ಪ್ರಜಾಪತಿ ಕರ್ದಮರ ಆದೇಶದಲ್ಲಿ ಗೌರವ ಬುದ್ಧಿಯುಳ್ಳ ದೇವಹೂತಿಯು ಪೂರ್ಣ ವಿಶ್ವಾಸದಿಂದ, ನಿರ್ವಿಕಾರ ಜಗದ್ಗುರು ಭಗವಾನ್ ಪುರುಷೋತ್ತಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನು ಶ್ರದ್ಧೆಯಿಂದ ಆರಾಧಿಸತೊಡಗಿದಳು. ಭಗವಾನ್ ವಿಷ್ಣುವು — **'ಕಾರ್ದಮಂ ವೀರ್ಯಮಾಪನ್ನ:'** ಕರ್ದಮರ ವೀರ್ಯ್ಯದಲ್ಲಿ ಪ್ರವೇಶಿಸಿ ದೇವಹೂತಿಯ ಗರ್ಭವನ್ನು ಸೇರಿ ಅವತರಿಸಿದನು.

ಭಗವಂತನೂ ಸಹ ಪುರುಷನ ಮೂಲಕ ಗರ್ಭವನ್ನು ಸೇರುತ್ತಾನೆ. ನೇರವಾಗಿ ಸ್ತ್ರೀ ಗರ್ಭವನ್ನು ಪ್ರವೇಶಿಸುವುದಿಲ್ಲ. ಒಂದೊಂದು ಸಾರಿ ಪುತ್ರೇಷ್ಟಿ ಯಜ್ಞದ ಪ್ರಭಾವದಿಂದ ,ಚರುವಿನಲ್ಲಿ ,ಪರಮಾನ್ನದಲ್ಲಿ ಪ್ರವೇಶಿಸುತ್ತಾನೆ. ಸಾಮಾನ್ಯತ: ಭಗವಂತನು ಪ್ರಕಟಿತನಾಗಲು ಬಯಸಿದಾಗ— **'ಅಗ್ನಿರಿವ ದಾರುಣಿ'** ಮೊದಲು ವೀರ್ಯದಲ್ಲಿ ಅವತರಿಸುತ್ತಾನೆ

ಭಗವಂತನ ಆ ವಿರ್ಭಾವದ ಸಂದರ್ಭದಲ್ಲಿ ಆಕಾಶದಲ್ಲಿ ನಗಾರಿ ಶಬ್ದಗಳು ಕೇಳಿ ಬಂದವು. ಗಂದರ್ವರು ಗಾನಮಾಡಿದರು, ಅಪ್ಸರೆಯರು ನರ್ತಿಸಿದರು. ದೇವತಗಳು ಪುಷ್ಪ ವೃಷ್ಟಿಯನ್ನು ಕರೆದರು. ಎಲ್ಲಿಡೆಯಲ್ಲಿಯೂ ಆನಂದವೋ ಆನಂದ. ದಿಕ್ಕುಗಳು ನಿರ್ಮಲವಾದುವು. ಜಲಾಶಯಗಳು ಸ್ವಚ್ಛವಾದುವು ಎಲ್ಲಾ ಜೀವಿಗಳ ಮನಸ್ಸೂ ಪ್ರಸನ್ನಗೊಂಡಿತು.

ಆಸಮಯದಲ್ಲಿ ಮರೀಚ್ಯಾದಿ ಋಷಿಗಳೊಡನೆ ಬ್ರಹ್ಮದೇವನು ಸರಸ್ವತೀ ನದೀ ತೀರದಲ್ಲಿದ್ದ ಕರ್ದಮರ ಆಶ್ರಮಕ್ಕೆ ಬಂದನು. ಸ್ವತ: ಸಿಧ್ಧ ಜ್ಞಾನ ಸಂಪನ್ನನಾದ ಅಜನ್ಮಾಬ್ರಹ್ಮನು ತಿಳಿದಿದ್ದನು—ಭಗವಾನ್ ವಿಷ್ಣುವು ಸಾಂಖ್ಯ ಶಾಸ್ತ್ರವನ್ನು ಉಪದೇಶಿಸಲೋಸ್ಕರ ತನ್ನ ವಿಶುಧ್ಧಮಯ ಸತ್ತ್ವಾಂಶದಿಂದ ಅವ ತರಿಸಿದ್ದಾನೆ ಭಗವಂತನ ಈ ಸತ್ಕಾರ್ಯವನ್ನು ಅವನೂ ಮನಸಾ ಅನುಮೋ ಸಿದ್ದನು. ಪ್ರಸನ್ನಾಂತ:ಕರಣವುಳ್ಳವನಾಗಿ ಕರ್ದಮನನ್ನು ಕುರಿತು ಹೇಳಿದನು

ತ್ವಯಾ ಮೇಽಪಚಿತಿಸ್ತಾತ, ಕಲ್ಪಿತಾ ನಿರ್ವ್ಯಲೀಕತ:
ಯನ್ಮೇ ಸಂಜಗೃಹೇ ವಾಕ್ಯಂ ಭವಾನ್ಮಾನದ ಮಾನಯನ್

ಪ್ರಿಯ ಕರ್ದಮ— ನೀನು ನನ್ನ ಅಜ್ಞಾಧಾರಕನಾಗಿ ನನಗೆ ಅತ್ಯಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಿಯಕರನಾಗಿರುವೆ. ನಿನ್ನಿಂದ ನನ್ನ ನಿಷ್ಕಪಟ ಪೂಜೆಯು ಮಾಡಲ್ಪಟ್ಟಿದೆ. ತಂದೆಗೆ ಮಕ್ಕಳು ಮಾಡಬೇಕಾಗಿರುವ ಸೇವೆಯೆಂದರೆ —

ಏತಾವತ್ಯೇವ ಶುಶ್ರೂಷಾ, ಕಾರ್ಯಾ ಪಿತರಿಪುತ್ರಕೈ:
ಬಾಢ ಮಿತ್ಯನು ಮನ್ಯೇತ ಗೌರವೇಣ ಗುರೋರ್ವಚ:

ತಂದೆಯು ಹೇಳಿದುದನ್ನು ತಥಾಸ್ತು ಎಂದು ಒಪ್ಪಿಕೊಂಡು ನಡೆಸುವವನೇ ಸತ್ಪುತ್ರನು. ಕರ್ದಮ—ನಿನ್ನ ಈ ಸುಂದರೀ ಪುತ್ರಿಯರು ತಮ್ಮ ತಮ್ಮ ವಂಶವನ್ನು ಬೆಳೆಸುವುದರಿಂದ ಸೃಷ್ಟಿಯನ್ನು ಅಭಿವೃಧ್ಧಿ ಪಡಿಸುತ್ತಾರೆ. ನೀನು ಮರೀಚ್ಯಾದಿ ಮಹರ್ಷಿಗಳಿಗೆ ಅವರವರ ಅಭಿರುಚಿಗೆ ತಕ್ಕಂತೆ ಅವರನ್ನು ವಿವಾಹ ಮಾಡಿಕೊಡು ಶ್ರೀ ಮಹಾವಿಷ್ಣುವೇ ಸರ್ವರ ಮನೋರಥಗಳನ್ನೂ ಈಡೇರಿಸುವವನಾಗಿ ತನ್ನ ಯೋಗ ಮಾಯೆಯಿಂದ ಕಪಿಲನಾಗಿ ನಿನ್ನಲ್ಲಿ ಅವತರಿಸಿದ್ದಾನೆ. ರಾಜಕುಮಾರಿ ಕಮಲಾಕ್ಷನಾದ, ಧ್ವಜ– ವಜ್ರಾಂಕುಶ ಪಾದನಾದ, ಆಕೈಟಿಭಾರಿ ಶ್ರೀಹರಿಯು ನಿನ್ನ ಮಗನಾಗಿ ಅವತರಿಸಿದ್ದಾನೆ. ಇವನು ಅವಿದ್ಯಾಜನಿತ ಮೋಹ ಗ್ರಂಥಿಗಳನ್ನು ನಾಶಪಡಿಸತಕ್ಕವನಾಗಿ, ದ್ದಾನೆ. ಇವನು ಸಿಧ್ಧ ಗಣಾಧೀಶನು. ಸಾಂಖ್ಯಾಚಾರ್ಯರುಗಳಿಗೆ ಸಮ್ಮಾನ್ಯನು. ನಿನ್ನ ಕೀರ್ತಿ ವರ್ಧಕನು ನೋಡಿ - ಸಾಂಖ್ಯ ಪ್ರಣಾಳಿಕೆಯು ಎರಡು ವಿಧವಾಗಿದೆ.—"**ಸೇಶ್ವರ ಸಾಂಖ್ಯ - ನಿರೀಶ್ವರ ಸಾಂಖ್ಯ**" ಭಾಗವತದಲ್ಲಿ ಕಪಿಲರಿಂದ ಬೋಧಿತವಾದ ಸಾಂಖ್ಯದಲ್ಲಿ ಭಗವಧ್ಯಾನ ಪದ್ಧತಿಯನ್ನು ತೋರಿಸಿದ್ದಾರೆ. ಬ್ರಹ್ಮನು ಈ ರೀತಿ ಕರ್ದಮ ದಂಪತಿಗಳಿಗೆ ತಿಳಿಸಿ ಸನಕಾದಿಗಳೊಡನೆ ಹಂಸಾರೂಢನಾಗಿ ಸತ್ಯಲೋಕಕ್ಕೆ ಪ್ರಯಾಣ ಮಾಡಿದನು.

ನಂತರ ಕರ್ದಮರು ಬ್ರಹ್ಮನ ಆಜ್ಞೆಗೆ ಅನುಗುಣವಾಗಿ ತಮ್ಮ ಪುತ್ರಿಯರ ವಿವಾಹವನ್ನು ನಡೆಸಿದರು—

ಮರೀಚಿ ಮಹರ್ಷಿಗಳ ಪತ್ನಿ —	ಕಲಾ
ಅತ್ರಿಮಹರ್ಷಿಗಳ ಪತ್ನಿ —	ಅನುಸೂಯ
ಅಂಗಿರರ ಪತ್ನಿ —	ಶ್ರಧ್ಧಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಲಸ್ತ್ಯರ	ಪತ್ನಿ—	ಹವಿರ್ಭೂ
ಪುಲಹರ	ಪತ್ನಿ—	ಗತಿ
ಕ್ರತುಗಳ	ಪತ್ನಿ—	ಕ್ರಿಯಾ
ಭೃಗುಗಳ	ಪತ್ನಿ—	ಖ್ಯಾತಿ
ವಸಿಷ್ಠರ	ಪತ್ನಿ—	ಅರುಂಧತೀ
ಅಥರ್ವರ	ಪತ್ನಿ—	ಶಾಂತಿ

ಕರ್ದಮ ದಂಪತಿಗಳು ನವ ವಧೂವರರಿಗೆ ಯೋಗ್ಯ ವಸ್ತ್ರಾಭೂಷಣಗಳನ್ನಿತ್ತು ಸತ್ಕರಿಸಿಬೀಳ್ಕೊಟ್ಟರು ತಮ್ಮಲ್ಲಿ ಶ್ರೀಹರಿಯು ಅವತರಿಸಿರುವನೆಂದು ತಿಳಿದ ಕರ್ದಮರು ಅವನಲ್ಲಿಗೆ ಹೋಗಿ ಹೇಳಿದರು—ಸ್ವಾಮಿನ್—ಈ ದುಃಖಮಯ ಸಾಗರದಲ್ಲಿ ಮುಳುಗಿ-ಮುಳುಗಿ ಏಳುತ್ತಲಿರುವ ಪಾಪೀ ಪುರುಷರನ್ನು ಉಧ್ಧರಿಸಲು ಕರುಣಾಸಾಗರನಾದ ನೀನು ನಮ್ಮಲ್ಲಿ ಅವತರಿಸಿರುವೆ. ಸಾಂಖ್ಯ ಯೋಗವನ್ನು ಉಪದೇಶ ಮಾಡುವುದೇ ನಿನ್ನ ಅವತಾರದ ಉದ್ದೇಶ.

ಐಶ್ವರ್ಯ ವೈರಾಗ್ಯ ಯಶೋಽವಭೋಧ
ವೀರ್ಯಶ್ರಿಯಾ ಪೂರ್ತಮಹಂ ಪ್ರಪದ್ಯೇ

ತತ್ವಜ್ಞರಿಂದ ವಂದನೀಯನಾದ ಐಶ್ವರ್ಯ- ವೈರಾಗ್ಯ-ಯಶಸ್ಸು- ಜ್ಞಾನ-ವೀರ್ಯ -ಶ್ರೀ, ಈ ಆರು ಸಂಪತ್ತುಗಳಿಂದ ಪರಿಪೂರ್ಣನಾಗಿರುವ ನಿನ್ನನ್ನು ಅನನ್ಯ ಶರಣನನ್ನಾಗಿ ನಂಬಿರುವೆನು. ಭಗವನ್ — ನೀನು ಪರಬ್ರಹ್ಮ ಪರಮಾತ್ಮನು. ಸರ್ವ ಶಕ್ತಿ ಸಂಪನ್ನನು. ನೀನು ಪ್ರಕೃತಿ-ಪುರುಷ-ಮಹತ್ತತ್ವ - ಕಾಲ - ತ್ರಿವಿಧಾಹಂಕಾರ- ಸರ್ವಲೋಕ- ಲೋಕಪಾಲಕರ ರೂಪದಲ್ಲಿ ಪ್ರಕಟನಾಗಿರುವೆ. ಸರ್ವಜ್ಞ ಪರಮಾತ್ಮನಾದ ನೀನು ಸೃಷ್ಟಿಯೆಲ್ಲವನ್ನೂ ನಿನ್ನ ಚೇತನ ಶಕ್ತಿಯಲ್ಲಿ ಲಯ ಗೊಳಿಸಿಕೊಳ್ಳುವೆ.

'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ; ಸ್ಥಿತಃ' ಸೃಷ್ಟಿಯ ಒಳಗೂ ಹೊರಗೂ ನೀನೇ ವ್ಯಾಪಿಸಿರುವೆ. ನಿನ್ನ ಕೃಪೆಯಿಂದ ನಾನು ಋಣತ್ರಯ ವಿಮುಕ್ತನಾಗಿದ್ದೇನೆ. ನನ್ನ ಮನೋರಥಗಳೆಲ್ಲವೂ ಪೂರ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿವೆ. ನಾನು ಸಂನ್ಯಾಸ ಮಾರ್ಗವನ್ನು ಹಿಡಿದು, ನಿನ್ನನ್ನು ಚಿಂತಿಸುತ್ತಾ ಶೋಕರಹಿತನಾಗಿ ಸಂಚರಿಸಲು ಇಚ್ಛಿಸುತ್ತೇನೆ.

"ಪರಿವ್ರಜತ್ಪದವೀ ಮಾಸ್ಥಿತೋಽಹಂ
ಚರಿಷ್ಯೇತ್ವಾಂ ಹೃದಿಯುಂಜನ್ ವಿಶೋಕ;"

ನೀನು ಆಜ್ಞೆಯನ್ನಿತ್ತು ನನ್ನನ್ನು ಉದ್ಧರಿಸು. ನಾವು ಇಲ್ಲಿ ಗಮನಿಸಬೇಕು. ಸಾಕ್ಷಾದ್ಭಗವಂತನು ಕರ್ದಮರಲ್ಲಿ ಅವತರಿಸಿದ್ದಾನೆ. ಅವನೊಡನೆ ಮಾತನಾಡು ತ್ತಿದ್ದಾನೆ. ಅವರ ಕಣ್ಣಮುಂದೆ ಭಗವಂತನಿದ್ದಾನೆ. ಇಷ್ಟು ಮಾತ್ರದಿಂದ ಕೃತ ಕೃತ್ಯತೆಯು ಉಂಟಾಯಿತೆಂದು ತಿಳಿಯಬಾರದು. **ಇಷ್ಟೇ** ಆಗಿದ್ದಿದ್ದರೆ ಕರ್ದಮರೇಕೆ ಹೇಳಬೇಕಾಗಿತ್ತು ?–**'ಪರಿವ್ರಜತ್ಪದವೀ ಮಾಸ್ಥಿತೋಹಂ'** ನಾನು ಸಂನ್ಯಾಸಿಯಾಗಲು ಇಚ್ಛಿಸುತ್ತೇನೆ. ಯಾರ ಮನೆಗೆ ಶ್ರೀಹರಿಯು ಆಸಾಗಿ ಬಂದಿರುವನೊ, ಅಂತಹವನು ಸಹ ನಾನು ಸಂನ್ಯಾಸಿಯಾಗು ತ್ತೇನೆ ಎಂದು ಹೇಳಿಕೊಳ್ಳ ಬೇಕಾದರೆ -ಕೃತ ಕೃತ್ಯತೆಯು ಹೇಗುಂಟಾಗುವು ದೆಂಬುದನ್ನು ನಾವು ಯೋಚಿಸಿ ತಿಳಿದು ಕೊಳ್ಳಬೇಕು.

ಭಗವಾನ್ ಕಪಿಲನು ಹೇಳಿದನು —ಮುನೇ . ಲೌಕಿಕ–ವೈದಿಕಗಳಲ್ಲಿ ನನ್ನ ವಾಕ್ಯಗಳೇ ಪ್ರಮಾಣಗಳು. ನಿನಗೆ ಕೊಟ್ಟ ಮಾತಿನಂತೆ ನಾನು ನಿನ್ನಲ್ಲಿ ಅವತರಿಸಿದ್ದೇನೆ. ನನ್ನ ಅವತಾರದ ಉದ್ದೇಶವಷ್ಟೆ— ಮುಮುಕ್ಷು ಮುನಿಗಳಿಗೆ ಆತ್ಮ ದರ್ಶನೋಪಯೋಗಿ ತತ್ತ್ವವಿವೇಚನೆಯುಂ ಟಾಗಬೇಕು. ಸೂಕ್ಷ್ಮಾತಿ ಸೂಕ್ಷ್ಮವಾದ ಆತ್ಮ ಜ್ಞಾನ ಮಾರ್ಗವು ಈಗಲುಪ್ತ ಪ್ರಾಯವಾಗಿದೆ. **"ಗಚ್ಛ ಕಾಮಂ ಮಯಾಪೃಷ್ಟೋ ಮಯಿ ಸಂನ್ಯಸ್ತ ಕರ್ಮಣಾ॥"** ಎಲ್ಲಾ ಕರ್ಮಗಳನ್ನೂ ನನ್ನಲ್ಲಿ ಅರ್ಪಿಸಿ ನಿನ್ನ ಇಷ್ಟಾನು ಸಾರ ಹೋಗುವುದಕ್ಕೆ ನನ್ನ ಅನುಮತಿ ಇದೆ. ಮೃತ್ಯುಂಜಯನಾಗಿ ಅಮೃತತ್ವ ಪ್ರಾಪ್ತಿಗಾಗಿ ನನ್ನನ್ನು ಭಜಿಸು. ನಾನೇ ನಿನ್ನ ಆತ್ಮನು. ಸ್ವಯಂ ಪ್ರಕಾಶನು. ಸರ್ವ ಗುಹಾಶಯನು. ನಿನ್ನ ಹೃದಯದಲ್ಲಿ ನನ್ನ ಸಾಕ್ಷಾತ್ಕಾರ ವನ್ನು ಮಾಡಿಕೊಂಡು ಸರ್ವಬಂಧ ನಿರ್ಮುಕ್ತನಾಗು. ನಾನು ತಾಯಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಹೂತಿಗೆ ಸರ್ವ ಕರ್ಮ ಪ್ರಶಮಕವಾದ ಆತ್ಮ ಜ್ಞಾನವನ್ನು ಉಪದೇಶಿಸುತ್ತೇನೆ. ಅವಳು ಸಂಸಾರ ಭಯ ನಿರ್ಮುಕ್ತಳಾಗುತ್ತಾಳೆ.

ಭಗವಾನ್ ಕಪಿಲನ ಈ ಸದ್ವಾಣಿಯನ್ನು ಕೇಳಿ ಕರ್ದಮರು ಆನಂದದಿಂದ ಅವನ ಪರಿಕ್ರಮವನ್ನು ಮಾಡಿ ಅರಣ್ಯಕ್ಕೆ ಹೊರಟು ಹೋದರು. ಇಲ್ಲಿಯ ಭಕ್ತಿ ವೈಶಿಷ್ಟ್ಯವನ್ನು ನಾವು ಗಮನಿಸಬೇಕು— ಭಕ್ತನು ಭಗವತ್ ಸನ್ನಿಧಿಯನ್ನು ಬಿಟ್ಟೂ ಇರಬಲ್ಲನು. ಭಗವಾನ್ ರಾಮಚಂದ್ರನು ಅಯೋಧ್ಯೆಯನ್ನು ಬಿಟ್ಟು ಸಾಕೇತ ವಾಸಿಯಾದಾಗ ಹನುಮಂತನು ಅವನೊಡನೆಹೋಗಲಿಲ್ಲ. ಅವನು ಹೇಳಿದನು—ರಾಮ ನಾನು ಇಲ್ಲಿಯೇ ಇದ್ದು ಕೊಂಡು ನಿನ್ನ ಕಥಾಮೃತವನ್ನು ಪಾನ ಮಾಡುತ್ತಿರುವೆನು. ನಿನ್ನ ಕಥಾಶ್ರವಣವು ನಡೆಯುವ ಕಡೆಯಲ್ಲೆಲ್ಲಾ ನನ್ನ ಉಪಸ್ಥಿತಿಯಿರುವುದು. ನಾನು ಸಾಕೇತ ಲೋಕಕ್ಕೆ ಬಂದು ಮಾಡುವುದೇನಿದೆ?

'ಯಾವತ್ತವ ಕಥಾಲೋಕೇ, ವಿಚರಿಷ್ಯತಿಪಾವನೀ,
ತಾವತ್ ಸ್ಥಾಸ್ಯಾಮಿ ಮೇದಿನ್ಯಾಂ ತವಾಜ್ಞಾಮನು ಪಾಲಯನ್'

ನಿನ್ನ ಪವಿತ್ರ ಕಥಾ ಪ್ರಸಂಗವು ಲೋಕದಲ್ಲಿ ನಡೆಯುತ್ತಿರುವ ವರೆಗೆ, ನಿನ್ನ ಆಜ್ಞಾಧಾರಕನಾಗಿ ಭೂಲೋಕದಲ್ಲಿರುವೆನು.

ಕರ್ದಮರು ಮನೆಯಲ್ಲಿದ್ದ ಭಗವಂತನನ್ನು ಬಿಟ್ಟು ವನಕ್ಕೆ ತೆರಳಿದರು. ಸಂನ್ಯಾಸವನ್ನು ಸ್ವೀಕರಿಸಿ, ನಿಸ್ಸಂಗರಾಗಿ, ಆತ್ಮೈಕ ಶರಣರಾಗಿ, ಅನಿಕೇತನರೂ, ಅನಗ್ನಿಕರೂ ಆಗಿ ಭೂ ಪ್ರದಕ್ಷಿಣೆಯನ್ನು ಮಾಡುತ್ತಿದ್ದರು. ಸರ್ವೇಂದ್ರಿಯ ಭೋಗಗಳನ್ನು ಪರಿತ್ಯಜಿಸಿದ್ದರು. ಪ್ರದೀಪಾತ್ಮಕ ಅಂತರ್ದೃಷ್ಟಿಯೊಂದಿದೆ. —ವಸ್ತು ವಿಶೇಶ ದೊಡನೆ - ಸ್ಥಾನ ವಿಶೇಷ ದೊಡನೆ- ವ್ಯಕ್ತಿ ವಿಶೇಶದೊಡನೆ ಆಸಕ್ತಿಯಿರುವುದಿಲ್ಲ. ಸಂನ್ಯಾಸವೆಂದರೆ ಇದೇ. ಎಲ್ಲಿ ಹೇಗೆ ಎಂದರೆ ಹಾಗೆ ಇರುವುದು. ಕರ್ದಮರ ಮನಸ್ಸು ಬ್ರಹ್ಮನಲ್ಲಿ ಲೀನವಾಗಿತ್ತು. ಬ್ರಹ್ಮ ವಸ್ತುವಾದರೊ, ಸತ್ತಿನಿಂದಲೂ, ಅಸತ್ತಿನಿಂದಲೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅಸ್ತಿ - ನಾಸ್ತಿಗಳಿಂದಲೂ ಪರನು. ಆಸ್ತಿಕರು - ನಾಸ್ತಿಕರನ್ನು, ನಾಸ್ತಿಕರು - ಅಸ್ತಿಕರನ್ನು ತಿರಸ್ಕಾರ ಮಾಡುವುದುಂಟು. ಆದರೆ ನಮ್ಮ ವೈದಿಕ ಸಾಹಿತ್ಯರೀತ್ಯಾ ಎರಡಕ್ಕೂ ಮಾನ್ಯತೆಯಿದೆ. **'ಅಸ್ತೀತ್ಯೇಕೇ-ನಾಯಮಸ್ತೀತಿಚೈಕೇ'.** ಭಗವಂತನಾದರೋ ಆಸ್ತಿ ನಾಸ್ತಿಗಳೆರಡರಿಂದಲೂ ಪರನು, ಅವನು ವಾಣಿಗೆ ವಿಷಯನಾಗುವವನಲ್ಲ. ತಾನು ಸ್ವಭಾವತ: ನಿರ್ಗುಣನಾದರೂ ಸರ್ವ ಗುಣಾವಭಾಸಕನು, ಅನನ್ಯಭಕ್ತ್ಯಾ ತಿಳಿಯಲ್ಪಡುವವನು ಕರ್ದಮರು ಆಹಂಕಾರವನ್ನು ತ್ಯಜಿಸಿ ನಿರ್ಮಮ ನಿರ್ದ್ವಂದ್ವರಾಗಿ ಸಮುದ್ರದಂತೆ ಶಾಂತರಾದರು. ಅವರ ಶ್ರೇಷ್ಠ ಭಕ್ತಿ ಭಾವದಿಂದ ಭಗವಾನ್ ವಾಸುದೇವನ ಸಾಕ್ಷಾತ್ಕಾರವಾಯಿತು. ಸರ್ವ ಬಂಧ ನಿರ್ಮುಕ್ತರಾದರು. ಅವರ ಅನುಭವವು ಹೇಗಿತ್ತೆಂದರೆ—

ಆತ್ಮಾನಂ ಸರ್ವಭೂತೇಷು, ಭಗವಂತಮವಸ್ಥಿತಮ್
ಅಪಶ್ಯತ್ ಸರ್ವ ಭೂತಾನಿ, ಭಗವತ್ಯಪಿಚಾತ್ಮನಿ,
ಇಚ್ಛಾದ್ವೇಷ ವಿಹೀನೇನ, ಸರ್ವತ್ರ ಸಮಚೇತಸಾ,
ಭಗವಧ್ಭ ಭಕ್ತಿಯುಕ್ತೇನ, ಪ್ರಾಪ್ತಾಭಾಗವತೀಗತಿ:

ಆತ್ಮ ರೂಪೀ ಭಗವಂತನು, ಭಗವದ್ರೂಪೀ ಆತ್ಮನು, ಸರ್ವಭೂತಸ್ಥಿತನು. ಸರ್ವ ಭೂತಗಳೂ ಭಗವಂತನಲ್ಲಿವೆ. ಈ ರೀತಿಯಿಂದ ತಿಳಿದ ಕರ್ದಮರಿಗೆ ಒಂದರಲ್ಲಿ ರಾಗವಿಲ್ಲ, ಮತ್ತೊಂದರಲ್ಲಿ ದ್ವೇಷವಿಲ್ಲ. ಎಲ್ಲದರಲ್ಲಿಯೂ ಸಮದೃಷ್ಟಿಯುಳ್ಳವರಾಗಿದ್ದರು. ನಿರ್ವ್ಯಾಜ ಪರಾಭಕ್ತಿಯುತರಾದ ಆವರು ಭಾಗವತೀ ಗತಿಯನ್ನು ಪಡೆದರು.

ಓಂ - ತತ್ಸದಿತಿ ಶ್ರೀಮದ್ಭಾಗವತೇ ತೃತೀಯ ಸ್ಕಂಧೇ ಚತುರ್ವಿಂಶೋಽಧ್ಯಾಯಃ

Sri Vidyabharathi Book Centre, Sringeri

CC-0. In Public Domain. Digitized by eGangotri

ದೇವಹೂತಿಯ ಪ್ರಶ್ನೆ ಭಗವಂತನಿಂದ ಭಕ್ತಿಯೋಗದ ವರ್ಣನೆ—

ಶೌನಕರು ಸೂತ ಪೌರಾಣಿಕರನ್ನು ಪ್ರಶ್ನಿಸುತ್ತಾರೆ— ಸ್ವಾಮಿನ್- ಭಗವಂತನು ತತ್ವ ಜ್ಞಾನೋಪದೇಶಕ್ಕಾಗಿ ಅವತರಿಸಿದ್ದಾನೆ. ನಾವು ಭಗವಚ್ಚರಿತ್ರೆಗಳನ್ನು ಬಹಳ ಕೇಳಿದ್ದೇವೆ. ಆದರೂ ನಮ್ಮ ಇಂದ್ರಿಯಗಳಿಗೆ ತೃಪ್ತಿಯೊದಗಿಲ್ಲ. ಸರ್ವ ತಂತ್ರ ಸ್ವತಂತ್ರನಾದ ಶ್ರೀಹರಿಯು ತನ್ನ ಯೋಗ ಮಾಯೆಯಿಂದ, ಭಕ್ತರ ಇಷ್ಟಾನುಸಾರ ಶರೀರಧಾರಿಯಾಗಿ ವಿವಿಧ ಲೀಲೆಗಳನ್ನು ತೋರಿಸುತ್ತಾನೆ. ಅವುಗಳೆಲ್ಲವನ್ನೂ ನಮಗೀಗ ವಿಸ್ತಾರವಾಗಿ ತಿಳಿಸಿರಿ. ನೋಡಿ - ಇಲ್ಲಿ ಒಂದು ವಿಲಕ್ಷಣತೆಯಿದೆ. ವಸ್ತುತ: ಇಂದ್ರಿಯಾಭಿಮಾನಿ ದೇವತೆಯೂ ಪರಮೇಶ್ವರನೇ ಕೇವಲ ಶ್ರವಣೇಂದ್ರಿಯಗಳಿಂದ ಕೇಳಿ ಬಿಟ್ಟ ಮಾತ್ರಕ್ಕೆ ತೃಪ್ತಿಯೊದಗುವುದಿಲ್ಲ. ರಸಾ ವಿರ್ಭಾವವಾಗುವುದಿಲ್ಲ ಭಗವತ್ಕಥೆಯು ಕ್ಷಣೇ ಕ್ಷಣೇ ನವಂ ನವಂ ಎಷ್ಟೋ ಜನರು ಹೇಳುವುದನ್ನು ಕೇಳಿದ್ದೇವೆ. ಇದು ಭಾಗವತ ಕಥೆಯಲ್ಲವೇ?- ನಾವು ನಾಲ್ಕಾರು ಬಾರಿ ಕೇಳಿಯಾಗಿದೆ. ಆದರಲ್ಲಿ ಕೇಳಲಿಕ್ಕೇನಿದೆ?. ನಾಲ್ಕಾರು ಬಾರಿ ಕೇಳಿದ ಮಾತ್ರದಿಂದ ಕೇಳುವ ಅಭಿಲಾಷೆಯು ಹೊರಟುಹೋಗಿ ಬಿಡುವುದೆ? ಹಾಗಾದರೆ ಒಂದು ಬಾರಿಯೂ ಕೇಳಿಲ್ಲವೆಂದೇ ಅರ್ಥವು. ವಸ್ತುತ; ಕೇಳಿದ್ದಕ್ಕೆ ಸಫಲತೆಯೇನೆಂದರೆ- ಮತ್ತೂ ಮತ್ತೂ ಕೇಳಬೇಕೆಂಬ ಉತ್ಸಾಹವು ಮೂಡುತ್ತಿರಬೇಕು. ಸೂತ ಪೌರಾಣಿಕರು ಹೇಳುತ್ತಾರೆ- ನಿಮ್ಮಂತೆಯೆ ವಿದುರನೂ ಕೇಳಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಲು ಮೈತ್ರೇಯರು ಹೇಳುತ್ತಾರೆ—

ವಿದುರ-ಕರ್ದಮರು ಅರಣ್ಯಕ್ಕೆ ಹೊರಟು ಹೋದ ಮೇಲೆ- **"ಮಾತುಃ ಪ್ರಿಯ ಚಿಕೀರ್ಷಯಾ"** ತಾಯಿಗೆ ಒಳ್ಳೆಯದನ್ನು ಮಾಡಬೇಕೆಂಬ ಇಚ್ಛೆಯಿಂದ ಕಪಿಲನು ಬಿಂದು ಸರ ತೀರ್ಥದಲ್ಲಿಯೆ ಇರುತ್ತಿದ್ದನು. ಒಂದು ದಿವಸ **"ತಮಾಸೀನ ಮಕರ್ಮಾಣಂ"** ಕಪಿಲನು ಜನ್ಮತಃ ಸನ್ಯಾಸಿ, ಕೆಲವರು

CC-O. In Public Domain. Digitized by eGangotri

ವಿಧಿವತ್ತಾಗಿ ಯಜ್ಞೋಪವೀತಾದಿಗಳನ್ನು ಧರಿಸಿ. ಕರ್ತವ್ಯವನ್ನು ನಿರ್ವಹಿಸಿ ನಂತರ ವಿಧಿಗನುಗುಣವಾಗಿ ಯಜ್ಞೋಪವೀತಾದಿಗಳನ್ನು ಪರಿತ್ಯಾಗಮಾಡಿ ಸನ್ಯಾಸಿಗಳಾಗುತ್ತಾರೆ. ಮೊದಲು ಕರ್ಮಾಧಿಕಾರಿಗಳಾಗಿಗುತ್ತಾರೆ. ನಂತರ ತ್ಯಾಗಾಧಿಕಾರಿಗಳಾಗುತ್ತಾರೆ. ಆದರೆ ಕಪಿಲನು ಯಾವಾಗಲೂ ಕರ್ಮಾಧಿಕಾರಿಯಾಗಿ ಇರಲೇ ಇಲ್ಲ. ಏಕೆಂದರೆ ಜ್ಞಾನಸ್ವರೂಪನಾದ ಕಪಿಲನು ಕರ್ಮಾಧಿಕಾರಿಯಾಗಿ ಚಿತ್ತಶುಧ್ಧಿಯನ್ನು ಪಡೆಯಬೇಕಾಗಿರಲಿಲ್ಲ.

ಆಸನಾರೂಢನಾಗಿದ್ದ ಕಪಿಲನಲ್ಲಿಗೆ ಬ್ರಹ್ಮನು ಹೇಳಿದ್ದನ್ನು ಜ್ಞಾಪಿಸಿಕೊಂಡು ದೇವಹೂತಿಯು ಬಂದು ಕೇಳಿದಳು-ಭಗವನ್-ಪ್ರಭೋ ಇಲ್ಲಿಯವರೆಗೂ ಈ ಅಸದಿಂದ್ರಿಯಗಳನ್ನು ತೃಪ್ತಿ ಪಡಿಸುತ್ತಾ, ಘೋರ ಅಜ್ಞಾನಾಂಧಕಾರ ದಲ್ಲಿ ಮುಳುಗಿ ತೇಲುತ್ತಿದ್ದೇನೆ. ನೀನು ನನಗೆ ಜ್ಞಾನ ಪ್ರಕಾಶವನ್ನು ನೀಡಿ ನನ್ನ ಅಜ್ಞಾನಾಂಧಕಾರವನ್ನು ತೊಲಗಿಸು. ನೀನು ಕಮಲಗಳಿಗೆ ಸೂರ್ಯನೋಪಾದೆಯಲ್ಲಿ ಅಜ್ಞಾನಿಗಳಿಗೆ ನೇತ್ರ ಸ್ವರೂಪನಾಗಿ ಅವತರಿಸಿರುವ ಆದಿದೇವನಾಗಿರುವೆ. ನಾನು-ನನ್ನದು ಎಂಬ ದುರಾಗ್ರಹದಲ್ಲಿ ಬಿದ್ದು ನರಳುವ ಸಂಸಾರಿಗಳ ಮಹಾಮೋಹ ಧ್ವಂಸಕ್ಕಾಗಿ ನೀನು ಅವತರಿಸಿರುವೆ. ಸಂಸಾರರೂಪೀ ವೃಕ್ಷದ ಛೇದನಕ್ಕೆ ಕುಠಾರಪ್ರಾಯನಾಗಿರುವೆ.

ತಂ ತ್ವಾಂಗತಾಹಂ ಶರಣಂ ಶರಣ್ಯಂ
ಸ್ವಭೃತ್ಯ ಸಂಸಾರ ತರೋ ; ಕುಠಾರಮ್
ಜಿಜ್ಞಾಸಯ್ಯಾಽಹಂ ಪ್ರಕೃತೇ : ಪೂರುಷಸ್ಯ
ನಮಾಮಿ ಸಧ್ಧರ್ಮವಿದಾಂ ವರಿಷ್ಠಮ್

ಪ್ರಕೃತಿ-ಪುರುಷರ ಜ್ಞಾನ ಪ್ರಾಪ್ತಿಗಾಗಿ, ಸ್ವಭಕ್ತರ ಸಂಸಾರ ದುಃಖ ನಾಶಕನಾದ, ಶರಣಾಗತರಕ್ಷಕನಾದ ನಿನ್ನಲ್ಲಿಗೆ ಬಂದಿದ್ದೇನೆ. ನೀನು ಭಾಗವತಧರ್ಮ ವೇತೃಗಳಲ್ಲಿ ಅತ್ಯಂತ ಶ್ರೇಷ್ಠತಮನು ಇಂತಹ ನಿನಗೆ ಅನಂತ ನಮಸ್ಕಾರಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥನೋ ದೇವ ಸಮ್ಮೋಹಮಪಾಕ್ರಷ್ಟುಂ ತ್ವಮರ್ಹಸಿ,
ಯೋವಗ್ರಹೋಽಹಂ ಮಮೇತೀತ್ಯೇ ತಸ್ಮಿನ್ ಯೋಜಿತ ಸ್ತ್ವಯಾ

ದೇವಹೂತಿಯು ಮೋಹಧ್ವಂಸವನ್ನು ಪ್ರಾರ್ಥಿಸುತ್ತಾಳೆ-ಈ ಪ್ರಪಂಚದಲ್ಲಿ-ಈ ದೇಹದಲ್ಲಿ -ಈ ದೇಹ ಸಂಬಂಧೀಕರಲ್ಲಿ ನಾನು-ನನ್ನದು ಎಂಬ ದುರಾಗ್ರಹವೇ ಮೋಹವು. ಕಳೆದು ಹೋದುದನ್ನು ನೆನೆಸಿ ಕೊಳ್ಳುವುದು ಶೋಕವಾದರೆ. ಭವಿಷ್ಯವನ್ನು ಚಿಂತಿಸುವುದು ಭಯ. ವರ್ತಮಾನದಲ್ಲಿ ನಾನು ನನ್ನದು ಎಂದು ವ್ಯವಹರಿಸುವುದೇ 'ಮೋಹ' ಮುಹ-ವೈಚಿತ್ಯೇ, ಮುಹ್ ಧಾತುವಿನ ಅರ್ಥವೇ ವಿಚಿತ್ರತಾ. ದೇಹೇಂದ್ರಿಯಗಳಲ್ಲಿ ನಾನು-ನನ್ನದು ಎಂಬ ಅಭಿಮಾನವೇ "ಅವಗ್ರಹ" ಈಅಭಿಮಾನವೂ ಸಹ ತ್ವಯೈವ ಯೋಜಿತ ;, ನಿನ್ನ ಸಂಕಲ್ಪದಿಂದ ಮೂಡಿರುವ ಮೋಹವು ನಿನ್ನಿಂದಲೇ ನಿರ್ವರ್ತ್ಯವು . **ಯೋ ಬಂಧಕಃಸವಿಮೋಚಕ** :—

ನಾನು - ನನ್ನದು ಎನ್ನುವುದು ಚಿತ್ತದ ಭ್ರಾಂತಿ. ನಾನಾರು ಎನ್ನುವುದನ್ನೇ ತಿಳಿದಿಲ್ಲ. ಭಗವಂತನನ್ನೂ ತಿಳಿದಿಲ್ಲ. ಪ್ರಕೃತಿಯನ್ನೂ ತಿಳಿದಿಲ್ಲ. ಮಾಯೆಯ ಸ್ವರೂಪವನ್ನೂ ಅರಿತಿಲ್ಲ. ಅಂದ ಮೇಲೆ ನಾನು - ನನ್ನದು ಎಂದು ಹೇಳಿಕೊಳ್ಳುವುದರಲ್ಲಿ ಅರ್ಥವೇನಿದೆ?- ನಿಮ್ಮ ಸಿಧ್ಧಾಂತವು ಯಾವುದರಲ್ಲಿದೆ?. ನಿಮ್ಮ ದೃಢತೆಯು ಯಾವುದನ್ನು ಅವಲಂಬಿಸಿದೆ?. ಜ್ಞಾನ ಪ್ರಾಪ್ತಿಗಾಗಿ ಸಂಸಾರವನ್ನು ನಾಶ ಮಾಡ ಬೇಕಾಗಿಲ್ಲ. ಅದರಲ್ಲಿ ಮೂಡಿಸಿಕೊಂಡಿರುವ ಅಜ್ಞಾನವನ್ನು ನಾಶಮಾಡಿಕೊಂಡರೆ ಸಾಕು.

ತಾಯಿ ದೇವಹೂತಿಯ ಪ್ರಾರ್ಥನೆಯನ್ನು ಕೇಳಿ, ಭಗವಾನ್ ಕಪಿಲರಿಗೆ ಬಹಳ ಸಂತೋಷವಾಯಿತು- ಆ ಪ್ರಾರ್ಥನೆಯು ಪರಮ ಪವಿತ್ರವಾದುದು. ಮೋಕ್ಷ ಮಾರ್ಗ ಪ್ರದೀಪವದು. ಕೇಳಿದ ಸತ್ಪುರುಷರು ಉತ್ತಮಗತಿ ಭಾಗಿಗಳಾಗುತ್ತಾರೆ. ಭಗವಾನ್ ಕಪಿಲನು ಮನಸಾ ಅವಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿನಂದಿಸುತ್ತಾ ಮೃದು ಮಂದಹಾಸ ಭರಿತ ವದನಾರವಿಂದದಿಂದ ಹೇಳಿದನು –

ಯೋಗ ಆಧ್ಯಾತ್ಮಿಕ: ಪುಂಸಾಂ ಮತೋನಿಃ ಶ್ರೇಯಸಾಯಮೇ
ಅತ್ಯಂತೋ ಪರತಿರ್ಯತ್ರ ದು:ಖ ಸ್ಯಚ ಸುಖಸ್ಯಚ॥

ಸರ್ವಥಾತ್ಮನಾ ಸುಖ ದು:ಖಗಳನ್ನು ನಿವೃತ್ತಿ ಗೊಳಿಸುವ ಅಧ್ಯಾತ್ಮ ಯೋಗವೇ ಪುರುಷರಿಗೆ ಕಲ್ಯಾಣ ಸಾಧಕವಾದುದು. ತಮ್ಮ ಕಲ್ಯಾಣವನ್ನು ಬಯಸುವವರು ಯಾರೇ ಆಗಲಿ ಅಧ್ಯಾತ್ಮ ಯೋಗವನ್ನೇ ಆಶ್ರಯಿಸಬೇಕು. ಅಧ್ಯಾತ್ಮ ಯೋಗವೆಂದರೆ - ತನ್ನ ದೇಹದೊಳಗಿರುವ ಸ್ಥೂಲ - ಸೂಕ್ಷ್ಮ **ಕಾರಣ.** ಶರೀರಗಳನ್ನು ತಿಳಿದು ಕೊಳ್ಳುವುದು. ಆತ್ಮ ನೀತ್ಯಧ್ಯಾತ್ಮಂ ಒಳಗಡೆ ಇರುವುದೇ ಅಧ್ಯಾತ್ಮ ಅಧಯೋಧ್ಯಂ– ಅಯೋಧ್ಯೆಯಲ್ಲಿ. ಅಧಿಕಾಶಿ - ಕಾಶಿಯಲ್ಲಿ, ಹಾಗೆಯೆ ಅಧ್ಯಾತ್ಮ ಎಂದರೆ ತನ್ನೊಳಗೆ, ದೇಹದಲ್ಲಿ, ಇಂದ್ರಿಯ ಗಳಲ್ಲಿ ಮನಸ್ಸಿನಲ್ಲಿ, ಆತ್ಮನಲ್ಲಿ, ಈ ಮೂರೂವರೆ ಮೊಳದ ದೇಹದಲ್ಲಿ ಏನೇನಿದೆಯೋ ಎಲ್ಲವನ್ನೂ ಅನುಭವಕ್ಕೆ ತೆಗೆದುಕೊಳ್ಳುವುದು **'ಅಧ್ಯಾತ್ಮ ಯೋಗ'** ಇದನ್ನು ತಿಳಿದವನು ಸುಖ ದು:ಖಗಳಿಂದ ಮುಕ್ತನಾಗುತ್ತಾನೆ. ಒಂದು ಸಾರಿ ಈ ಶರೀರವು ರೋಗಿಯಾಗುತ್ತದೆ, ಸ್ಥೂಲವಾಗುತ್ತದೆ, ಕೃಶ ವಾಗುತ್ತದೆ. ನಾನೇ ಸ್ಥೂಲನಾದೆ- ಕೃಶನಾದೆ ಎಂದು ಜೀವನು ತಿಳಿಯು ತ್ತಾನೆ. ಇದೊಂದು ವಿಧವಾದ ಮನೋರೋಗವು. ಇವರಲ್ಲಿ ಹೊರಗಡೆಯ ಸಂಬಂಧವೇನೂ ಇಲ್ಲ. ಇದರ ಸ್ವರೂಪ ಜ್ಞಾನವನ್ನು ಮಾಡಿಕೊಂಡರೆ ಸುಖ ದು:ಖಗಳ ಆಕ್ರಮಣದಿಂದ ಮುಕ್ತರಾಗ ಬಹುದು.

ಆಕಾಶಕ್ಕೆ ಎರಡು ರೇಖೆಗಳಿರುವಂತೆ ತೋರುತ್ತದೆ, ಹಗಲಿನ ಬೆಳಕಿ ನಲ್ಲಿ ಒಂದು ವಿಧವಾಗಿದ್ದರೆ, ರಾತ್ರಿಯ ಅಂಧಕಾರದಲ್ಲಿ ಮತ್ತೊಂದು ವಿಧ ವಾಗಿರುತ್ತದೆ. ವಸ್ತುತ: ಬೆಳಕಾಗಲಿ, ಅಂಧಕಾರವಾಗಲಿ ಆಕಾಶದ ರೂಪ ವಲ್ಲ. ಒಂದುಸಾರಿ ಆಕಾಶದಲ್ಲಿ ಬಿರುಗಾಳಿ ಏಳುತ್ತದೆ. ಒಂದುಸಾರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಂತ ವಾತಾವರಣವಿರುತ್ತದೆ. ಆದರೆ ಆಕಾಶದೊಡನೆ ಇವುಗಳ ಸಂಬಂಧ ವಾವುದೂ ಇಲ್ಲವು. ಹೃದಯಾಕಾಶದ ಹೆಸರು –'ಖ'. ಶರೀರದ ಒಳಗಡೆ ಹೃದಯಾಕಾಶದ ಸುರೂಪವೇನುಂಟು. ಪ್ರಸನ್ನತೆ, ನಿರ್ಮಲತೆ, ಅದರ ಹೆಸರೇ 'ಸುಖ'. ಅದರ ಕಾಮ- ಕ್ರೋಧಾತ್ಮಕ ದುಷ್ಟ ರೂಪವೇನುಂಟು ಅದೇ 'ದು:ಖ'. **ದುಷ್ಟಂ ಖಂ ದು:ಖಂ, ಸುಷ್ಠು ಖಂ ಸುಖಂ.** ಇದರ ಹೊರತು ಸುಖ ದು:ಖಗಳ ಬೇರೆ ವ್ಯಾಖ್ಯೆಯಿಲ್ಲ. ಅಧ್ಯಾತ್ಮ ಯೋಗ ದಿಂದಮಾತ್ರ ಸುಖ –ದು:ಖಗಳ ಆತ್ಯಂತಿಕ ಉಪರತಿಯುಂಟಾಗುತ್ತದೆ.

ಕಪಿಲರು ಹೇಳುತ್ತಾರೆ— ಈ ಯೋಗವನ್ನು ನಾನು ಮೊದಲು ನಾರದಾದಿ ಮಹರ್ಷಿಗಳಿಗೆ ಉಪದೇಶಿಸಿದ್ದೆನು ಆಯೋಗವನ್ನೇ ನಿನಗೀಗ ಉಪದೇಷಿಸುತ್ತೇನೆ. ಜೀವನಿಗೆ ಬಂಧ ಮೋಕ್ಷಗಳು ಹೇಗೆ ಒದಗುತ್ತವೆ ? ಮನಸ್ಸೇ ಮನುಷ್ಯನನ್ನು ಬಂಧಿಸುತ್ತದೆ. ಮನಸ್ಸೇ ಮೋಕ್ಷವನ್ನು ಕೊಡುತ್ತದೆ

ಮನಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋ:

ಮಾಯೆ ಎಂದರೆ ಮನಸ್ಸೇ- ಮನಸ್ಸೇ, ಸುಖ ದು:ಖಗಳನ್ನೂ ಬಂಧ ಮೋಕ್ಷ ಗಳನ್ನೂ ಕೊಡುತ್ತದೆ.

ಚೇತ : ಖಲ್ವಾಸ್ಯಬಂಧಾಯ, ಮುಕ್ತಯೇ ಚಾತ್ಮನೊಮತಾ
ಗುಣೇಷು ಸಕ್ತಂಬಂಧಾಯ, ರತಂವಾಪುಂಸಿ ಮುಕ್ತಯೇ.

ಜೀವನವ ಬಂಧ ಮೋಕ್ಷಗಳಿಗೆ ಕಾರಣವಾದುದು ಮನಸ್ಸು, ವಿಷಯಾತ್ಮಕ (ಗುಣಾಸಕ್ತ) ಮನಸ್ಸು ಬಂಧನಕ್ಕೆ ಕಾರಣವಾದರೆ, ಪರಮಾತ್ಮನಲ್ಲಿ ಅನು ರಕ್ತವಾದ ಮನಸ್ಸು ಮುಕ್ತಿಗೆ ಕಾರಣವಾಗುತ್ತದೆ. ಸತ್ಯರೂಪೀ ಪರಮಾತ್ಮ ನನ್ನು ಅರ್ಥ ಮಾಡಿಕೊಳ್ಳುವುದೇ "ಅಧ್ಯಾತ್ಮ ಯೋಗ". ನಾನು - ನನ್ನದು ಎಂಬ ಕಾಮ ಲೋಭಗಳಿಂದ ಮುಕ್ತನಾದರೆ ಅವನು ಶುದ್ಧನಾದನು ಎಂದರ್ಥವು. ಅಂತಹವನನ್ನು ಸುಖ - ದು:ಖಾದಿಗಳು ಸ್ಪರ್ಶಿಸುವುದೂ ಇಲ್ಲ. ಅವನು ಸಮ ಸ್ಥಿತಿಯಲ್ಲಿರುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತದಾಪುರುಷ ಆತ್ಮಾನಂ, ಕೇವಲಂ ಪ್ರಕೃತೇ ; ಪರಂ
ನಿರಂತರಂ ಸ್ವಯಂ ಜ್ಯೋತಿ ; ಅಣಿಮಾನಮಖಂಡಿತಮ್
ಜ್ಞಾನ ವೈರಾಗ್ಯಯುಕ್ತೇನ ಭಕ್ತಿಯುಕ್ತೇನ ಚಾತ್ಮನಾ
ಪರಿಪಶ್ಯತ್ಯುದಾಸೀನಂ, ಪ್ರಕೃತಿಂಚ ಹತೌಜಸಮ್

ಮನಸ್ಸು ಸಮತಾಸ್ಥಿತಿಯನ್ನು ಪಡೆದಾಗ, ಹೃದಯವು ಜ್ಞಾನ ವೈರಾಗ್ಯ ಭಕ್ತಿಯುಕ್ತವಾಗುತ್ತದೆ ಆಗ ಆತ್ಮನು ಪ್ರಕೃತಿಯಿಂದ ಪರನು, ಏಕಮೇವಾ ದ್ವಿತೀಯನು, ಭೇದರಹಿತನು, ಸ್ವಯಂ ಪ್ರಕಾಶನು, ಸೂಕ್ಷ್ಮನು ಅಖಂಡನು, ಸುಖ-ದುಃಖಶೂನ್ಯನು,ಎಂಬ ಅನುಭವವು ಮೂಡಿ ಪ್ರಕೃತಿಯ ಆಕರ್ಷಣೆಯು ತಪ್ಪಿಹೋಗುತ್ತದೆ. ಯೋಗಿಗಳು ಭಗವಂತನನ್ನು ಹೊಂದ ಬೇಕಾದರೆ ಮಂಗಳಕರವಾದ ಈ ಭಕ್ತಿಮಾರ್ಗವನ್ನು ಬಿಟ್ಟು ಅನ್ಯ ಮಾರ್ಗವಿಲ್ಲ.

ನಯುಜ್ಯ ಮಾನಯಾ ಭಕ್ತ್ಯಾ, ಭಗವತ್ಯಖಿಲಾತ್ಮನಿ,
ಸದೃಶೋಸ್ತಿ ಶಿವ: ಪಂಥಾ, ಯೋಗಿನಾಂ ಬ್ರಹ್ಮಸಿದ್ಧಯೇ

ಸಂಸಾರಾಸಕ್ತಿಯೇ ಪ್ರಬಲತಮವಾದ ಪಾಶವು ಈ ಆಸಕ್ತಿಯು ಸಂಸಾರಮೋಹದಿಂದ ನಿವೃತ್ತನಾಗಿ, ಮಹಾಪುರುಷರಲ್ಲಿ ಮೂಡಿಬಿಟ್ಟರೆ ಮೋಕ್ಷದ ಬಾಗಿಲು ತೆರೆದಂತೆ.

ಮಹಾತ್ಮರು ಹೇಳುತ್ತಾರೆ-- **"ಸಂಗಸ್ತು ಸರ್ವಥಾತ್ಯಾಜ್ಯಃ"** ಸಂಗವನ್ನು ಪರಿತ್ಯಜಿಸಬೇಕು - **'ಸಚೇತ್ಯಕ್ತುಂ ನಶಕ್ಯತೇ'** ಅದನ್ನು ಬಿಡಲಾಗದಿದ್ದರೆ, - **'ಸತ್ಸಂಗ ಏವ ಕರ್ತವ್ಯಃ'** ಸತ್ಪುರುಷರ ಸಂಗವನ್ನೆ ಮಾಡಬೇಕು. - **'ಸತಾಂ ಸಂಗೋಹಿ ಭೇಷಜಮ್'** ಸತ್ಸಂಗವೇ ಸಂಸಾರ ತಾಪಾಕುಲರಿಗೆ ದಿವ್ಯೌಷಧವು, -"ಸತ್ಪುರುಷರಾರು" ? ತಿತಿಕ್ಷವಃ-ಸಹನಶೀಲರು ಕಾರುಣಿಕಾಃ-ದಯಾಶಾಲಿಗಳು, ಸುಹೃದಃ ಸರ್ವದೇಹಿನಾಂ- ಎಲ್ಲರ ಪರಮ ಹಿತೈಷಿಗಳು,

Sri Vidyabharathi Book Centre, Sringeri

CC-O. In Public Domain. Digitized by eGangotri

ಅಜಾತಶತ್ರವಃ-ಯಾರಲ್ಲಿಯೂ ಶತ್ರು ಭಾವವಿಲ್ಲದವರು.
ಶಾಂತಾಃ ,ಸಾಧವ,ಃ, ಸಾಧುಭೂಷಣಾಃ ಶಾಂತರು, ಸರಳಸ್ವಭಾವದವರು, ಸತ್ಪುರುಷರನ್ನು ಗೌರವಿಸುವವರು
ಮಯ್ಯನನ್ಯ ಭಾವೇನ ಭಕ್ತಿಂಕುರ್ವಂತಿಯೇ ದೃಢಾಂ ಅನನ್ಯ ಭಾವದಿಂದ ನನ್ನಲ್ಲಿ ದೃಢಭಕ್ತಿಯನ್ನು ಇಟ್ಟಿರುವವರು.
ಮತ್ಕೃತೇ ತ್ಯಕ್ತ ಕರ್ಮಾಣಃ , - ನನಗಾಗಿ ಸರ್ವ ಕರ್ಮ ತ್ಯಾಗಿಗಳಾಗಿರುವವರು ತ್ಯಕ್ತಸ್ವಜನ ಬಾಂಧವಾಃ ಒಡಹುಟ್ಟಿದವರನ್ನೂ ಸಂಬಂಧಿಗಳನ್ನೂ ತ್ಯಾಗಮಾಡಿರುವವರು.
ಮದಾಶ್ರಯಾಃ –ನನ್ನನ್ನೇ ಆಶ್ರಯಿಸಿರುವವರು.
ಕಥಾಮೃಷ್ಟಾಃ-ನನ್ನ ಪವಿತ್ರಕಥಾನಕಗಳನ್ನು ಹೇಳುವವರು ಕೇಳುವವರು.
ಶೃಣ್ವಂತಿ ಕಥಯಂತಿಚ ಇಂತವರನ್ನು
ನ ತಪಂತಿವಿವಿಧಾ ಸ್ತಾಪಾಃ - ಯಾವವಿಧವಾದ ಸಾಂಸಾರಿಕ ಕಷ್ಟಗಳೂ ಪೀಡಿಸುವುದಿಲ್ಲ ಇಂತಹವರೇ ಸತ್ಪುರುಷರು, ಇವರುಗಳ ಸಹವಾಸವನ್ನೇ ಮಾಡಬೇಕು.

ಮನುಷ್ಯನು ಸಹವಾಸಕ್ಕನುಗುಣವಾಗಿ, ಮಾರ್ಪಡುತ್ತಾನೆ, ಯಾವ ಬಣ್ಣವನ್ನು ಬಟ್ಟೆಗೆಬಳಿದರೆ, ಬಟ್ಟೆಯು ಆ ಬಣ್ಣದ್ದಾಗುತ್ತದೆ. ಎಷ್ಟೋ ಸದಾಚಾರಿಗಳು ದುರಾಚಾರಿಗಳ ಸಂಗಕ್ಕೆಸಿಲುಕಿ ಭ್ರಷ್ಟರಾಗಿ ಹೋಗಿ ಇರುವುದನ್ನು ನಾವು ಕಂಡಿದ್ದೇವೆ. ಸಹವಾಸ ದೋಷವು ಮಹಾಭಯಂಕರವಾದುದು ವಿಷ ಸಮಾನವಾದುದು ಆ ವಿಷವನ್ನು ಶಮನಗೊಳಿಸುವವರೇ 'ಸಂತರು' **"ಸಂಗದೋಷಹರಾಹಿತೇ"** ಸಮುದ್ರಮಂಥನದಿಂದ ಹೃತ್ಕರ್ಣರಸಾಯನವಾದ ಭಗವತ್ಕಥಾ ಸ್ವಾದವು ದೊರಕುತ್ತದೆ. ಅದರಿಂದ ಮೋಕ್ಷಮಾರ್ಗದಲ್ಲಿ ಭಕ್ತಿ-ಶ್ರಧ್ಧಾ ಪ್ರೇಮಗಳು ಮೂಡಿ, ವಿಕಾಸ ಶೀಲಗಳಾಗುತ್ತವೆ. ಮೊದಲು ಶ್ರದ್ಧೆಯು ಮೂಡುತ್ತದೆ, ನಂತರ ರಾಗ,ಆಮೇಲೆ ಭಕ್ತಿ, ಇದೇ ಅವುಗಳ ಕ್ರಮವು, ಭಕ್ತಿಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾದುರ್ಭಾವವಾದ ಮೇಲೆ ಲೌಕಿಕ ಪಾರಲೌಕಿಕ ಸುಖಗಳಲ್ಲಿ ವೈರಾಗ್ಯವು ಮೂಡುತ್ತದೆ. ಭಗವತ್ಕಥಾಶ್ರವಣಾದಿಗಳಲ್ಲಿ ಆಸಕ್ತಿಯು ಮೂಡುತ್ತದೆ. ಮನೋನಿಗ್ರಹಕ್ಕೆ ಇದು ಮುಖ್ಯವು. ಎಲ್ಲಿ ನೋಡಿದರಲ್ಲಿ ಭಗವಂತನ ಕೌಶಲ್ಯವೇ ಕಂಡು ಬರುತ್ತದೆ. ಎಲ್ಲವೂ ಭಗವಂತನ ಕಲೆಯೆ ಈ ಅರ್ಥದಲ್ಲಿಯೆ "ಸಕಲ" ಶಬ್ದವು ಪ್ರಯೋಗದಲ್ಲಿದೆ. ಸ-ಸರ್ಪವೂ, ಕ-ಬ್ರಹ್ಮನ, ಲ-ಲಾಸ್ಯವು. ಭಕ್ತಿಮಾರ್ಗವು ಚಿತ್ತವಶೀಕರಣಕ್ಕೆ ಅತ್ಯಂತ ಸಾಧುವಾದ, ಸರಳವಾದ ಮಾರ್ಗವು. ಇದಕ್ಕೆ ಆಸನ-ಪ್ರಾಣಾಯಾಮಾದಿಗಳ ಅವಶ್ಯಕತೆಯಿಲ್ಲವು. ವಿಷಯ ಸೇವನೆಗಳಿಂದ ವಿಮುಖನಾಗಿ, ಜ್ಞಾನ, ವೈರಾಗ್ಯಗಳಿಂದ, ಯೋಗ, ಭಕ್ತಿಗಳಿಂದ ಪ್ರತ್ಯಗಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

ಪ್ರತ್ಯಗಾತ್ಮನೆಂದರೆ, ಅಂತರ್ಯಾಮಿ, ಕಣ್ಣಿನಹಿಂದೆ ಕುಳಿತುಕೊಂಡು ಕಣ್ಣಿನಿಂದ ನೋಡುವವನು, ,ಪ್ರತೀಪಮಂಚತೀತಿಪ್ರತ್ಯಕ್, ವಿಷಯಗಳಿಗೆ ಅಭಿಮುಖನಾಗದಿರುವವನು, ಕಣ್ಣಿನ ಮುಂದಿರುವ ವಿಷಯಗಳನ್ನು ಕಣ್ಣಿನ ಹಿಂದುಗಡೆ ಕುಳಿತುಕೊಂಡು ಕಣ್ಣಿನ ಮರೆಯಿಂದ ನೋಡುವವನು- ಪ್ರತ್ಯಕ್ ಅಂತರ್ಯಾಮಿ ಬ್ರಾಹ್ಮಣದಲ್ಲಿ ಹೇಳುತ್ತಾರೆ,

ಯಶ್ಚಕ್ಷುಷಿ ತಿಷ್ಠನ್, ಚಕ್ಷುಷೋಂತರೋ
ಯಂ ಚಕ್ಷುರ್ನವೇದ, ಯಸ್ಯಚಕ್ಷುಃಶರೀರಂ
ಯಶ್ಚಕ್ಷುರಂತರೋಯಮಯತಿ, ಏಷತ
ಆತ್ಮಾ ಅಂತರ್ಯಾಮ್ಯಮೃತಃ

ಇಂತಹ ಪ್ರತ್ಯಗಾತ್ಮನ ಸಾಕ್ಷಾತ್ಕಾರವೇ ಜೀವನ ಪರಮಮುಖ್ಯಧ್ಯೇಯವು ದೇವಹೂತಿಯು ಕೇಳುತ್ತಾಳೆ-ಪ್ರಭೋ ನಿನ್ನ ಭಕ್ತಿ ಸ್ವರೂಪ ವೆಂತಹುದು? ನನ್ನಂತಹ ಅಬಲೆಯರಿಗೆ ಯಾವವಿಧದ ಭಕ್ತಿಮಾರ್ಗವು ಯೋಗ್ಯವಾದುದು? ಯಾವುದರಿಂದ ನಿರ್ವಾಣ ಪ್ರಾಪ್ತಿಯಾಗುವುದು? ನಿರ್ವಾಣವೆಂದರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮ ನಿರ್ವೃತಿ, ಪರಮಗತಿ, – 'ಬ್ರಹ್ಮನಿರ್ವಾಣಮೃಚ್ಛತಿ' ಎಂದು ಗೀತೆಯಲ್ಲಿಯೂ ಹೇಳಿದ್ದಾರೆ. ಮಹಾತ್ಮರು ಹೇಳುತ್ತಾರೆ. ಜೀವನದಲ್ಲಿ ಮೂರು ವಿಧದ ಬಾಣಗಳಿವೆ-ಒಂದು-ದುಃಖ ಬಾಣ, ಎರಡನೆಯದು-ಅಜ್ಞಾನ ಬಾಣ, ಮೂರನೆಯದು "ಮೃತ್ಯುಬಾಣ" ಈ ಮೂರು ಸಚ್ಚಿದಾನಂದ ವಿರೋಧಿಗಳು ದುಃಖ ಬಾಣವು-ಆನಂದವನ್ನೂ ಮೃತ್ಯು ಬಾಣವು- ಸತ್ತನ್ನೂ ವಿರೋಧಿಸುತ್ತದೆ. ಈ ಮೂರನ್ನೂ ನಾಶಮಾಡುವುದಾವುದೋ ಅದೇ "ನಿರ್ವಾಣ" ಬಾಣೇಭ್ಯೋ ನಿಷ್ಕ್ರಾಂತಂ–ನಿರ್ವಾಣಂ. (ವಬಯೋರಭೇದ) ಯೋಗದಿಂದ ನಿರ್ವಾಣಪದ ಪ್ರಾಪ್ತಿಯಾಗುತ್ತದೆ. ಯೋಗವು ನೇರವಾಗಿ ಭಗವಂತನನ್ನು ವಿಷಯೀಕರಿಸಿರ ಬೇಕು. ಭಗವಂತನ ನಿರ್ವಾಣಯೋಗವು ಬಾಣ. ವೇದದಲ್ಲಿ ಹೇಳುತ್ತಾರೆ.

ಅಪ್ರಮತ್ತೇನ ವೇದ್ಧವ್ಯಂ, ಶರವತ್ತನ್ಮಯೋಭವೇತ್.

ದೇವಹೂತಿಯು ಕೇಳುತ್ತಾಳೆ- ಪ್ರಭೋ, ಭಗವತ್ಪ್ರಾಪ್ತಿಕರವಾದ ಆ ಯೋಗವನ್ನು ಹೇಳು, ಆದರ ಅಂಗಗಳೆಷ್ಟು? ಅದರ ಅನುಷ್ಠಾನವು ಹೇಗೆ?

ಯಥಾಹಂ ಮೂಢಧೀರ್ಹರೇ,
ಸುಖಂ ಬುಧ್ಯೇಯ, ದುರ್ಬೋಧಂ,
ಯೋಷಾ ಭವದನುಗ್ರಹಾತ್,

ಮಂದಮತಿಯಾದ ಸ್ತ್ರೀಜಾತಿಯು ಈ ದುರ್ಬೋಧ ವಿಷಯವನ್ನು ಅರ್ಥ ಮಾಡಿಕೊಳ್ಳುವಂತೆ ಅನುಗ್ರಹಿಸು. ಮೈತ್ರೇಯರು ವಿದುರನೊಡನೆ ಹೇಳುತ್ತಾರೆ ವಿದುರ-ಜನ್ಮವನ್ನು ಕೊಟ್ಟ ಜನನಿಯ ಪ್ರಾರ್ಥನೆಯನ್ನು ಕೇಳಿ ಕಪಿಲನ ಹೃದಯವು ಸ್ನೇಹದಿಂದ ಕರಗಿ ಹೋಯಿತು. ಯಾವ ತಾಯಿಯು ತನ್ನ ಶರೀರದ ಸಾರ ರೂಪವಾದ ಕ್ಷೀರವನ್ನು ಪಾನಮಾಡಿಸಿರುವಳೋ, ಅಂತಹವಳಿಗೆ ನಾನೂ ಸಹ ಜೀವನದ ಸಾರ ಬೋಧವನ್ನು ಮಾಡಿಸಬೇಕು. ಹೀಗೆ ನಿಶ್ಚೈಸಿ ಪ್ರಕೃತ್ಯಾದಿ ತತ್ವಗಳನ್ನು ನಿರೂಪಿಸಿ ಸಾಂಖ್ಯ ಶಾಸ್ತ್ರವನ್ನು ಉಪದೇಶಿಸಿದನು ಹಾಗೂಭಕ್ತಿಯನ್ನು ವಿಸ್ತರಿಸುವ ಯೋಗವನ್ನು ತಿಳಿಸಿದನು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಸಾಂಖ್ಯವನ್ನು ಅಭ್ಯಸಿಸಿದರೆ ಭಕ್ತಿಯಲ್ಲಿ ಅರುಚಿಯುಂಟಾಗುತ್ತದೆ. ಮತ್ತೊಂದನ್ನು ಅಭ್ಯಸಿಸಿದರೆ ಭಕ್ತಿಯ ಅಭಿವೃದ್ಧಿಯಾಗುತ್ತದೆ.

ಭಗವಂತನು ಹೇಳುತ್ತಾನೆ— ಮಾತ- ನಮ್ಮ ದೇಹದಲ್ಲಿ ದ್ಯೋತನಾತ್ಮಕ-ದೇವತೆಗಳು ವಾಸಮಾಡುತ್ತಾರೆ. ನೇತ್ರೇಂದ್ರಿಯಗಳಲ್ಲಿ ಸೂರ್ಯದೇವನೂ, ಶ್ರವಣೇಂದ್ರಿಯಗಳಲ್ಲಿ ದಿಗ್ದೇವತೆಗಳೂ, ಘ್ರಾಣೇಂದ್ರಿಯದಲ್ಲಿ ಅಶ್ವಿನೀ ಕುಮಾರರೂ ವಾಸಮಾಡುತ್ತಾರೆ. ಇವರೆಲ್ಲರೂ ಸಾಂಸಾರಿಕ ವಿಷಯಗಳನ್ನು ಪ್ರಕಾಶಪಡಿಸುತ್ತಾರೆ.

ದೇವಾನಾಂ ಗುಣಲಿಂಗಾನಾಂ, ಆನುಶ್ರವಿಕ ಕರ್ಮಣಾಂ
ಸತ್ವ ಏವೈಕಮನಸೋ, ವೃತ್ತಿ: ಸ್ವಾಭಾವಿಕೀತುಯಾ,
ಅನಿಮಿತ್ತಾ ಭಾಗವತೀ ಭಕ್ತಿ; ಸಿದ್ಧೇರ್ಗರೀಯಸೀ,
ಜರಯತ್ಯಾಶುಯಾಕೋಶಂ, ನಿಗೀರ್ಣಮನಲೋಯಥಾ||

ಅಮ್ಮ—ಮೊಟ್ಟ ಮೊದಲು ಮಾಡಬೇಕಾದುದಿಷ್ಟೇ — ಇಂದ್ರಿಯಗಳನ್ನು ಆನುಶ್ರವಿಕ ಕರ್ಮಗಳಲ್ಲಿ ತೊಡಗಿಸಬೇಕು. ಇದೇ ಭಕ್ತಿಯ ಮೊದಲ ಹಂತ. ಆನುಶ್ರವಿಕ ಕರ್ಮವೆಂದರೆ– ಇಷ್ಟ ಬಂದಂತೆ ಕೆಲಸ ಮಾಡದಿರುವುದು. ವೇದೋಕ್ತವಾದುದನ್ನೇ ನಡೆಸುವುದು. ಅನುಕ್ತವಾದುದನ್ನು-ನಿಷೇಧಿಸಿರುವುದನ್ನು ಮಾಡದಿರುವುದು. ಅಂದರೆ ವಿಹಿತಾಚರಣೆಯಿರಬೇಕು. ಅವಿಹಿತಾಚರಣೆಯಿರಬಾರದು. ಕೆಲವರು 'ಆನುಶ್ರವಿಕ ಕರ್ಮ' ಎಂಬುವುದಕ್ಕೆ ಹೀಗೆ ಅರ್ಥವನ್ನು ಮಾಡುತ್ತಾರೆ—ಶ್ರೀಗುರು ಸಂಪ್ರದಾಯೋಪದಿಷ್ಟವಾದುದನ್ನೇ ನಡೆಸಬೇಕು. ವೇದವಿಹಿತ ಕರ್ಮಾಚರಣೆಯನ್ನು ಧರ್ಮವೆಂದು ಹೇಳುವಂತೆ, ಭಗವತ್ಪ್ರಾಪ್ತ್ಯರ್ಥವಾಗಿ, ಅಂತ:ಕರಣ ಶುದ್ಧಿಗಾಗಿ, ಮಹಾಪುರುಷೋಪದಿಷ್ಟವಾದ, ಕರ್ಮವನ್ನೂ ಧರ್ಮವೆಂದೇ ಹೇಳುತ್ತಾರೆ. ಪಾಂಚರಾತ್ರ-ಆಗಮ ಇತ್ಯಾದಿಗಳನ್ನು ವೇದೋಪದಿಷ್ಟಗಳೆಂದು ಪ್ರಮಾಣವನ್ನಾಗಿ ಒಪ್ಪುವುದಿಲ್ಲ. ಮಹಾಪುರುಷೋಪದಿಷ್ಟ ವಾದುದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಿಂದ ಪ್ರಮಾಣವೆಂದು ಒಪ್ಪುತ್ತಾರೆ, ಶ್ರುತಿ- ಶಾಸ್ತ್ರ- ಗುರ್ವಾಜ್ಞೆಗೆ ಅನುಗುಣವಾದುದೇ ಕರ್ಮವು. ಅದನ್ನೇ ಆಚರಿಸಬೇಕು. ಅಂತಹ ಕರ್ಮಾಚರಣೆಯಿಂದ ಮನಸ್ಸಿನಲ್ಲಿ ಏಕಾಗ್ರತೆಯು ಮೂಡುತ್ತದೆ. ಸತ್ವ ಸ್ಥಿತಿಯುಂಟಾಗುತ್ತದೆ. ಸ್ವಾಭಾವಿಕೀ ವೃತ್ತಿಯು ಉದಯಿಸುತ್ತದೆ. ಭಗವದ್ಭಕ್ತಿಯು ಅದು ಬೇಕು- ಇದು ಬೇಡ ಎಂಬ ಆಗ್ರಹಕ್ಕೆ ಸಿಲುಕಿಸುವುದಿಲ್ಲ. ವೃತ್ತಿಯು ಪರಮಾತ್ಮನನ್ನು ಮಾತ್ರ ವಿಷಯೀಕರಿಸಿರಬೇಕು. ಅದನ್ನೇ ಹೇಳುತ್ತಾರೆ–

ಅನಿಮಿತ್ತಾ ಭಾಗವತೀ, ಭಕ್ತಿ ಸಿದ್ಧೇರ್ಗರೀಯಸೀ.

ಇಂತಹ ಭಗವದ್ಭಕ್ತಿಯು ಸಿದ್ಧಿ- ಮುಕ್ತಿಗಳಿಗಿಂತಲೂ ಶ್ರೇಷ್ಠವಾದುದು. ಇಂತಹ ಅಹೈತುಕೀ ಭಕ್ತಿಯು **ಜರಯುತ್ಯಾಶು ಯಾಕೋಶಂ, ನಿಗೀರ್ಣ ಮನಲೋಯಥಾ-** ಜಠರಾಗ್ನಿಯು ತಿಂದ ಅನ್ನವನ್ನು ಪಚನಮಾಡಿ ಬಿಡುವಂತೆ, ವಾಸನಾಕೋಶ- ಸಂಸ್ಕಾರಕೋಶ, ಇತ್ಯಾದಿಗಳನ್ನು ಉರಿಸಿ ಭಸ್ಮಮಾಡಿ ಬಿಡುತ್ತದೆ. ಕರ್ಮ- ಸಂಸ್ಕಾರಗಳ ಭಂಡಾರದಂತಿರುವ ಈ ಲಿಂಗ ಶರೀರವನ್ನು ನಾಶಮಾಡಿ ಬಿಡುತ್ತದೆ.

ನೈಕಾತ್ಮತಾಂಮೇ ಸ್ಪೃಹಯಂತಿ

ಇಂತಹ ಭಕ್ತರು ನನ್ನೊಡನೆ ಐಕ್ಯವನ್ನೂ ಬಯಸುವುದಿಲ್ಲ. ಅವರಿಗೆ ನನ್ನ ಸೇವೆಯು ಬೇಕು. ಕೇವಲ ನನ್ನ ಸಂತೋಷವು ಬೇಕು. ಪರಸ್ಪರ ಕಲೆತು ಪ್ರೇಮದಿಂದ ನನ್ನ ಪರಾಕ್ರಮಗಳನ್ನು ವರ್ಣಿಸುತ್ತಾ, ಆನಂದ ಪಡುತ್ತಾರೆ. ಇಂತಹ ಮಹಾತ್ಮ ಭಕ್ತರುಗಳಲ್ಲಿ ಮೂರು ವಿಧಗಳಿರುತ್ತದೆ.

೧— ಅವರು ಭಗವಂತನ ಪಾದ ಸೇವಾಭಿಲಾಷಿಗಳು.

೨ ಭಗವದಾಜ್ಞಾನುಸಾರವಾಗಿ ಕೆಲಸ ಮಾಡುವವರು-

೩— ನಾಲ್ಕಾರು ಜನ ಒಟ್ಟಿಗೆ ಸೇರಿ ಚರಿತ್ರ ಕಥನದ ಆನಂದವನ್ನು ಅನುಭವಿಸುವವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮ್ಮ— ಇಂತಹ ನನ್ನ ಭಕ್ತರು ನನ್ನ ಮನೋಹರ ರೂಪಗಳನ್ನು ನೋಡುತ್ತಾರೆ. ಅರುಣನಯನಗಳಿಂದ ಕೂಡಿದ ಮುಖಾರವಿಂದದ ಶೋಭೆಯನ್ನು ನೋಡುತ್ತಾ ಆನಂದಿತರಾಗುತ್ತಾರೆ. ಇವರ ಪ್ರೇಮ ಸಂಭಾಷಣೆಗಳನ್ನು ಕೇಳಲು ಮಹಾತಪಸ್ವಿಗಳೂ ಸಹ ಆಸೆ ಪಡುತ್ತಾರೆ. ಕೆಲವರ ಮನಸ್ಸನ್ನು ಭಗವಂತನೇ ತನ್ನ ಕಡೆಗೆ ಸೆಳೆದುಕೊಳ್ಳುತ್ತಾನೆ. ಮತ್ತೆ ಕೆಲವರು ಪ್ರಯತ್ನಪಟ್ಟು ಭಗವಂತನಲ್ಲಿ ಮನಸ್ಸನ್ನು ನುಗ್ಗಿಸಬೇಕಾಗುತ್ತದೆ. ಭಕ್ತರ ಇಂದ್ರಿಯಗಳು, ಪರಮಾತ್ಮನ ಅಂಗ ಪ್ರತ್ಯಂಗಗಳ ಶೋಭಾವಲೋಕನದಲ್ಲಿ ಅವನ ಹಾಸ-ವಿಲಾಸಗಳಲ್ಲಿ, ಮುಗ್ಧ-ಮಧುರ ವಾಣಿಯಲ್ಲಿ ಅವನ ರೂಪ ಮಾಧುರಿಯಲ್ಲಿ ಲೀನವಾಗಿ ಬಿಡುತ್ತದೆ. ಈ ವಿವಿಧ ಶ್ರೇಷ್ಠ ಭಕ್ತಿಯಿಂದ ಅವರು ಇಚ್ಛಿಸದಿದ್ದರೂ, ಅವರಿಗೆ ಪರಮಪದ ಪ್ರಾಪ್ತಿಯಾಗುತ್ತದೆ. ಅವಿದ್ಯಾ ನಿವೃತ್ತಿಯ ನಂತರ ಯದ್ಯಪಿ ನನ್ನ ಶ್ರೇಷ್ಠ ಭಕ್ತರು, ಮಾಯಾಧೀಶನಾದ ನನ್ನ ಸತ್ಯಾದಿ ಲೋಕಗಳ ಭೋಗ ಸಂಪತ್ತನ್ನಾಗಲೀ, ಅಷ್ಟ ಸಿದ್ಧಿಗಳನ್ನಾಗಲೀ, ವೈಕುಂಠ ಲೋಕದ ಭಗವತ್ ಸಂಪತ್ತನ್ನಾಗಲೀ ಬಯಸುವುದಿಲ್ಲವಾದರೂ ಅವುಗಳು ತಾವಾಗಿಯೆ ಅವರನ್ನು ಸೇವಿಸುತ್ತವೆ. ಯಾರು ಸರ್ವತ್ಯಾಗಿಗಳಾಗಿ, ಸರ್ವಲೋಕ ಭೋಗ-ವಿಮುಖರಾಗಿ, ನನ್ನನ್ನೇ ಭಜಿಸುತಾರೆಯೋ, ಅನನ್ಯ ಭಕ್ತಿಯಿಂದ ಸರ್ವತ್ರ ನನ್ನ ದರ್ಶನವನ್ನೇ ಮಾಡುತ್ತಾರೆಯೊ ಅಂತಹವರನ್ನು ಮೃತ್ಯು ಸಂಸಾರದಿಂದ ಪಾರುಮಾಡುತ್ತೇನೆ. ಕಾಲಪುರುಷನ ಹಿಡಿತವು ಅವರ ಮೇಲೆ ಇರುವುದಿಲ್ಲ. ಅಮ್ಮ- ನನ್ನಲ್ಲಿ ಅನನ್ಯ ಭಕ್ತಿಯಿಲ್ಲದಿದ್ದರೆ, ಮೃತ್ಯು ಭಯದಿಂದ ಪಾರಾಗಲು ಸಾಧ್ಯವಿಲ್ಲ.

ಸಂಪೂರ್ಣ ಸೃಷ್ಟಿಯು ಭಯಭೀತವಾಗಿದೆ. "ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ". ಭಯದಿಂದ ವಾಯುವು ಸಂಚರಿಸುತ್ತಾನೆ. ಭಯದಿಂದ ಸೂರ್ಯನು ಬೆಳಗುತ್ತಾನೆ. ಭಯದಿಂದ ಅಗ್ನಿಯು ಜ್ವಲಿಸುತ್ತಾನೆ. ಎಲ್ಲರನ್ನೂ ಮೃತ್ಯುವಿನ ಭಯವು ಭಯ ಪಡಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ನನ್ನ ಭಕ್ತರು ಮಾತ್ರ ನಿರ್ಭಯರಾಗಿರುತ್ತಾರೆ. ಭಗವದ್ವಿಷಯಕ ಅನನ್ಯ ಭಕ್ತಿಯಿಲ್ಲದಿದ್ದರೆ ಯಾರೂ ಕಲ್ಯಾಣ ಭಾಗಿಗಳಾಗುವುದಿಲ್ಲ. ಅನನ್ಯ ಭಕ್ತರೆಂದರೆ- ಅವರಿಗೆ ಇಹ-ಪರ ಲೋಕಗಳ ಚಿಂತೆಯಿರುವುದಿಲ್ಲ. ಈ ಶರೀರ ಸಂಬಂಧಿಗಳಾದ ಧನ- ಪಶು- ಜನ- ಗೃಹ ಇತ್ಯಾದಿ ಸಂಗ್ರಹಗಳಲ್ಲಿ ಅಭಿರುಚಿ ಇರುವುದಿಲ್ಲ. ಇಂತಹ ಅನನ್ಯ ಭಕ್ತರು ಮೃತ್ಯುರೂಪೀ ಸಂಸಾರದಿಂದ ಉದ್ಧೃತರಾಗುತ್ತಾರೆ. ನಾನು ಪ್ರಕೃತಿ- ಪುರುಷ- ರಿಬ್ಬರಿಗೂ ಪ್ರಭುವಾದ ಭಗವಂತನು. ಸರ್ವ ಪ್ರಾಣಿಗಳ ಅಂತರಾತ್ಮನು. ಮೃತ್ಯು ಭಯ ಪೀಡಿತರಿಗೆ, ನನ್ನವಿನಾ ಆಶ್ರಯದಾತರರು ಮತ್ತೊಬ್ಬರಿಲ್ಲ,

ಯೋಗಿಗಳು ಜ್ಞಾನ- ವೈರಾಗ್ಯ- ಯುಕ್ತ ಭಕ್ತಿಯೋಗದ ಮೂಲಕ, ಶಾಂತಿಪ್ರಾಪ್ತಿಗಾಗಿ, ನನ್ನ ನಿರ್ಭಯದಾಯಕ ಚರಣಾರವಿಂದಗಳನ್ನು ಆಶ್ರಯಿಸುತ್ತಾರೆ. ಜ್ಞಾನ- ವೈರಾಗ್ಯಯುಕ್ತ ಯೋಗವೇ ಕಲ್ಯಾಣಕಾರಕವು ತೀವ್ರವಾದ ಭಕ್ತಿಯೋಗದ ಮೂಲಕ ನನ್ನಲ್ಲಿ ಮನಸ್ಸು ಸ್ಥಿರವಾಗಿ ನಿಲ್ಲುವುದು.

ಓಂ—ತತ್ಸದಿತ್ಯೇವಂ ತೃತೀಯ ಸ್ಕಂಧೇ ಪಂಚವಿಂಶೋಧ್ಯಾಯಃ.

ಶ್ರೀ ಭಾಗವತ ದರ್ಶನ - ಸ್ಕಂಧ – ೩ ಅ – ೨೬.
"ಮಹದಾದಿ ತತ್ವೋತ್ಪತ್ತಿ"

ಕಪಿಲನು ಹೇಳುತ್ತಾನೆ— ಅಮ್ಮ, ನಾನು ಈಗ ನಿನಗೆ ಪ್ರಕೃತ್ಯಾದಿ ತತ್ತ್ವಗಳ ಲಕ್ಷಣಗಳನ್ನು ತಿಳಿಸುತ್ತಾನೆ. ಇದನ್ನು ತಿಳಿದವನು ಪ್ರಾಕೃತಿಕ ಗುಣಗಳಿಂದ ಮುಕ್ತನಾಗುತ್ತಾನೆ.

ಜ್ಞಾನಂ ನಿಶ್ರೇಯಸಾರ್ಥಾಯ, ಪುರುಷಸ್ಯಾತ್ಮದರ್ಶನಂ
ಯದಾಹುರ್ವರ್ಣಯೇತತ್ತೇ, ಹೃದಯಗ್ರಂಥಿ ಭೇದನಮ್

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷನ ಮೋಕ್ಷ ಪುರುಷಾರ್ಥಕ್ಕೆ ಆತ್ಮ ದರ್ಶನ ರೂಪೀ ಜ್ಞಾನವೇ ಕಾರಣವು. ಇದರಿಂದ ಅಹಂಕಾರ ರೂಪವಾದ ಹೃದಯ ಗ್ರಂಥಿಯು ಛೇದನ ವಾಗುವುದು. ಇಂತಹ ಪಂಡಿತ ವೇದ್ಯವಾದ ಜ್ಞಾನವನ್ನು ನಿನಗೆ ಉಪದೇಶಿಸುತ್ತೇನೆ.

ಅನಾದಿರಾತ್ಮಾಪುರುಷಃ ನಿರ್ಗುಣಃ ಪ್ರಕೃತೇಃ ಪರಃ।
ಪ್ರತ್ಯಗ್ಧಾಮಾ ಸ್ವಯಂ ಜ್ಯೋತಿ; ವಿಶ್ವಂಯೇನ ಸಮನ್ವಿತಮ್॥

ಈ ಆತ್ಮನಿಂದಲೇ ವಿಶ್ವವೆಲ್ಲವೂ ವ್ಯಾಪಿಸಲ್ಪಟ್ಟಿದೆ. ಹಾಗೂ ಪ್ರಕಾಶಿಸ ಲ್ಪಟ್ಟಿದೆ. ಅವನು ಅನಾದಿ, ಅನಂತ, ಅವನೇ ಪುರುಷ ಶಬ್ದ ವಾಚ್ಯನು. ನಿರ್ಗುಣನು. ಪ್ರಕೃತಿಯಿಂದ ಪರನು. ಪ್ರತ್ಯೇಕ ಅಂತಃಕರಣದಲ್ಲಿಯೂ ಸ್ಫುರಿಸುವ ಸ್ವಯಂಜ್ಯೋತಿ ಸ್ವರೂಪನು.

ಅನಾದಿ— ಎಂದು ಹೇಳುವುದರಿಂದ, ಕ್ಷಣಿಕ ವಿಜ್ಞಾನ ಮಾತ್ಮಾ ಎನ್ನುವ ಪಕ್ಷವನ್ನು ತಿರಸ್ಕರಿಸಿದ್ದಾರೆ.

ಪ್ರಕೃತೇಃ ಪರ ;— ಎಂದು ಹೇಳುವುದರಿಂದ ಆತ್ಮಾ **ಸಂಸಾರೀ** ಎಂದು ಹೇಳುವ ಪಕ್ಷವನ್ನು ಪ್ರತಿಭಟಿಸಿದ್ದಾರೆ.

ನಿರ್ಗುಣ— ಎಂದು ಹೇಳಿ ಯಾವುದೇ ಗುಣ ಸಂಬಂಧವೂ ಆತ್ಮನಿಗಿಲ್ಲ ಎಂಬುವುದನ್ನು ತೋರಿಸಿದ್ದಾರೆ.

ಸ್ವಯಂ ಜ್ಯೋತಿ; — ಎಂದು ಹೇಳುವುದರ ಮೂಲಕ "ಜ್ಞಾನ ವಿಷಯಿ" ಆತ್ಮಾ ಎಂದು ಹೇಳುವ ಮೀಮಾಂಸಕಾದಿಗಳ ಅಭಿಪ್ರಾಯವನ್ನು ತಿರಸ್ಕರಿಸಿದ್ದಾರೆ. ಆ ಸರ್ವ ವ್ಯಾಪಕನಾದ ಪುರುಷನು, ಲೀಲೆಯಿಂದಲೇ ತನ್ನಲ್ಲಿಗೆ ಬಂದ ತ್ರಿಗುಣಾತ್ಮಿಕಾ ವೈಷ್ಣವೀ ಮಾಯೆಯನ್ನು ಸ್ವೇಚ್ಛೆಯಿಂದ ಸ್ವೀಕರಿಸಿದನು. ಲೀಲಾಪರಾಯಣಳಾದ ಪ್ರಕೃತಿಯು, ತನ್ನ ಸತ್ತ್ವಾದಿಗುಣ ಗಳ ಮೂಲಕ, ಅವನಂತಿರುವ ಪ್ರಜೆಗಳನ್ನು ಸೃಷ್ಟಿಸ ತೊಡಗಿದಳು. ಇದರಿಂದ ಪುರುಷನು, ಜ್ಞಾನಾಚ್ಛಾದಕವಾದ ಆವರಣ ಶಕ್ತಿಯಿಂದ ಮೋಹಿತನಾಗಿ, ಸ್ವ-ಸ್ವರೂಪವನ್ನು ಮರೆತನು. ಹೀಗೆ ಸ್ವಭಿನ್ನ ಪ್ರಕೃತಿಯನ್ನೇ ಸ್ವ-ಸ್ವರೂಪ

Sri Vidyabharathi Book Centre, Sringeri

CC-O. In Public Domain. Digitized by eGangotri

ವೆಂದೇ ತಿಳಿದ ಪುರುಷನು ಪ್ರಾಕೃತಿಕ ಗುಣಗಳಿಂದಾದ ಎಲ್ಲಾ ಕರ್ಮಗಳಿಗೂ ತಾನೇ ಕರ್ತಾ ಎಂದು ತಿಳಿದುಕೊಂಡನು. ಈ ಕರ್ತೃತ್ವಾಭಿಮಾನದಿಂದ, ಅಕರ್ತಾ, ಸರ್ವತಂತ್ರ- ಸ್ವತಂತ್ರ, ಸಾಕ್ಷೀಸ್ವರೂಪಿ ಪುರುಷನಿಗೆ ಜನ್ಮ-ಮೃತ್ಯುರೂಪೀ, ಬಂಧನವೂ, ಪರತಂತ್ರತೆಯೂ ಪ್ರಾಪ್ತವಾಗುತ್ತದೆ. ಕಾರ್ಯರೂಪ ಶರೀರ, ಕಾರಣರೂಪ ಇಂದ್ರಿಯ. ಕರ್ತೃರೂಪ ಇಂದ್ರಿಯಾಧಿಷ್ಠಾತೃ ದೇವತೆಗಳಲ್ಲಿ ಪುರುಷನು ತನ್ನ ತನವನ್ನು ಆರೋಪಿಸಿಕೊಳ್ಳುತ್ತಾನೆ.

ಕೆಲವರು ಪಂಡಿತರು ಜೀವನ ಸುಖ- ದುಃಖೋಪ ಭೋಗಗಳಿಗೆ ಪ್ರಕೃತಿಯೇ ಕಾರಣವೆಂದೂ, ಮತ್ತೆ ಕೆಲವರು ಪ್ರಕೃತಿಗಿಂತ ಪರನಾದ ಪುರುಷನೇ ಕಾರಣನೆಂದೂ ಹೇಳುತ್ತಾರೆ. ದೇಹೇಂದ್ರಿಯ- ಹಾಗೂ ದೇವತಾ ವರ್ಗಗಳ ಕಾರಣವನ್ನು ‘ಪ್ರಕೃತಿ’ ಎಂದೂ, ಸುಖ– ದು;ಖಗಳ ಬೇಕ್ತೃತ್ವದ ಕಾರಣನನ್ನು ಪುರುಷನೆಂದೂ ಹೇಳುತ್ತಾರೆ. ಈ ಕಾರ್ಯ ಕಾರಣ ಭಾವದ ಆರೋಪದಿಂದ ಉಂಟಾಗುವ ಅನರ್ಥದ ನಿವಾರಣೆಗೆ ಉಪಾಯವೆಂದರೆ, **‘ನಾಹಂ, ನಮಮ’.** ಅಹಂತಾ- ಮಮತಾ ಭಾವನೆಗಳಿಂದ ಮುಕ್ತನಾಗಬೇಕು.

“ದೇಹಾದೀನಾತ್ಮತ್ವೇನ ಅಭಿಮನ್ಯತೇ, ಸೋಭಿಮಾನ
ಆತ್ಮನೋ ಬಂಧ;, ತನ್ನಿವೃತ್ತಿರ್ಮೋಕ್ಷ:”

ಅಹಂತಾ- ಮಮತೆಗಳೇ ಸಂಸಾರ ಬಂಧನಕಾರಿಗಳು. ಇದೇ ಮಾಯಾಕೃತ ಪಾರತಂತ್ರ್ಯ ದೇವಹೂತಿಯು ಕೇಳುತ್ತಾಳೆ— ಪುರುಷೋತ್ತಮ ಈ ವಿಶ್ವದ ಸ್ಥೂಲ- ಸೂಕ್ಷ್ಮ ಕಾರ್ಯಗಳು ಯಾರು ಸ್ವರೂಪವೋ ಯಾರು ಇದಕ್ಕೆ ಕಾರಣರೊ, ಆ ಪ್ರಕೃತಿ- ಪುರುಷರ ಲಕ್ಷಣಗಳನ್ನು ದಯೆಯಿಟ್ಟು ತಿಳಿಸು.

ಭಗವಾನ್ ಕಪಿಲರು ಹೇಳುತ್ತಾರೆ—

ಯತ್ತತ್ತ್ರಿಗುಣ ಮವ್ಯಕ್ತಂ, ನಿತ್ಯಂ ಸದಸದಾತ್ಮಕಂ
ಪ್ರಧಾನಂ ಪ್ರಕೃತಿಂ ಪ್ರಾಹು: ಅವಿಶೇಷಂ ವಿಶೇಷವತ್ ।

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಗುಣಾತ್ಮಕವಾದ, ಅವ್ಯಕ್ತವಾದ, ನಿತ್ಯವಾದ, ಕಾರ್ಯ - ಕಾರಣರೂಪವಾದ, ಸ್ವಯಂ ನಿರ್ವಿಶೇಷವಾದರೂ, ಸಂಪೂರ್ಣ ವಿಶೇಷ ಧರ್ಮಗಳಿಗೆ ಆಶ್ರಯವಾದ, ಆ ಪ್ರಧಾನ ನಾಮಕ ತತ್ವವನ್ನೇ "ಪ್ರಕೃತಿ" ಎಂದು ಕರೆಯುತ್ತಾರೆ. (ಆವರಣ- ವಿಕ್ಷೇಪ ಶಕ್ತಿ ಭೇದದಿಂದ ಪ್ರಕೃತಿಯು ದ್ವಿವಿಧಾ, ಆವರಣ ಶಕ್ತಿಯೆ ಜೀವನ ಉಪಾಧಿಭೂತವಾದ "ಅವಿದ್ಯೆಯು". ವಿಕ್ಷೇಪ ಶಕ್ತಿಯೇ ಮಾಯಾ ಪರಮೇಶ್ವರೀ. ಪುರುಷನೂ ಜೀವೇಶ್ವರ ಭೇದದಿಂದ ದ್ವಿವಿಧನು. ಪ್ರಕೃತಿ ವಿವೇಕದಿಂದ ಸಂಸರಣ ಶೀಲನಾದವನು "ಜೀವನು" ಪ್ರಕೃತಿಯನ್ನು ತನ್ನವಶಕ್ಕೆ ತೆಗೆದುಕೊಂಡು ವಿಶ್ವದ ಸೃಷ್ಟ್ಯಾದಿಗಳನ್ನು ನಡೆಸುವವನು "ಈಶ್ವರನು".)

ಈಗ ತತ್ವಗಳ ಸಂಖ್ಯೆಯನ್ನು ತಿಳಿಸುತ್ತಾರೆ—

ಪಂಚಭಿಃ ಪಂಚಭಿಃ ಬ್ರಹ್ಮ, ಚತುರ್ಭಿರ್ದಶಭಿಸ್ತಥಾ।
ಏತಚ್ಚತುರ್ವಿಂಶತಿಕಂ, ಗಣಂ ಪ್ರಾಧಾನಿಕಂ ವಿದುಃ॥

ಪಂಚ ಮಹಾ ಭೂತಗಳು, ಪಂಚತನ್ಮಾತ್ರೆಗಳು, ನಾಲ್ಕು ಅಂತಃಕರಣಗಳು, ಹತ್ತು ಇಂದ್ರಿಯಗಳು, ಈ ಇಪ್ಪತ್ತನಾಲ್ಕು ತತ್ವಗಳ ಸಮೂಹವನ್ನು ಪ್ರಕೃತಿಯ ಕಾರ್ಯವೆಂದು ಹೇಳುತ್ತಾರೆ. ಪೃಥಿವ್ಯಪ್ತೇಜೋವಾಯ್ವಾಕಾಶಗಳು ಪಂಚಭೂತಗಳು. ಗಂಧ ರಸ ರೂಪ ಸ್ಪರ್ಶ ಶಬ್ದಗಳು ಪಂಚತನ್ಮಾತ್ರೆಗಳು ಶ್ರೋತ್ರ -ತ್ವಕ್, ಚಕ್ಷು ರಸನಾಘ್ರಾಣಗಳು ಐದು ಜ್ಞಾನೇಂದ್ರಿಯಗಳು ವಾಕ್, ಪಾಣಿ. ಪಾದ, ಪಾಯೂಪಸ್ಥಗಳು ಐದು ಕರ್ಮೇಂದ್ರಿಯಗಳು. ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು ನಾಲ್ಕು ಅಂತಃಕರಣ ಭೇದಗಳು. (ಸಂಕಲ್ಪ, ನಿಶ್ಚಯ, ಚಿಂತಾ, ಅಭಿಮಾನಗಳು ನಾಲ್ಕು ಅಂತಃಕರಣ ವೃತ್ತಿಗಳು.) ಇವುಗಳಲ್ಲದೆ ಕಾಲವನ್ನು ಕೆಲವರು ಇಪ್ಪತ್ತೈದನೆಯ ತತ್ವವನ್ನಾಗಿಯೂ ಹೇಳುತ್ತಾರೆ. ಕೆಲವರು ಭಗವಂತನ ಶಕ್ತಿಯನ್ನೇ ಕಾಲವೆಂದು ಒಪ್ಪುತ್ತಾರೆ. ಕೆಲವರು ಈಶ್ವರನ ಚೇಷ್ಟೆಯನ್ನು ಕಾಲವೆನ್ನುತ್ತಾರೆ. ಈ ವಿಚಾರದಲ್ಲಿ ಭಾಗವತದ ವ್ಯಾಖ್ಯಾಕಾರರಲ್ಲಿ ಮತ ಭೇಧವಿದೆ. ವಸ್ತುತಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲವು ವ್ಯವಹಾರದಲ್ಲಿ ಮಾತ್ರ ಸಿದ್ಧಿಸುತ್ತದೆ. ಪರಮಾರ್ಥತ; ಕಾಲವೆಲ್ಲಿ ಇದೆ? ಪರಮಾತ್ಮನ ಲೀಲೆಯನ್ನು ನೋಡಿ-ಅವನು ಆತ್ಮರೂಪದಲ್ಲಿ ಒಳಗಡೆ ಇದ್ದಾನೆ. ಕಾಲ ರೂಪದಲ್ಲಿ ಹೊರಗಡೆಯಿದ್ದಾನೆ.

ನೀವು ಲೌಕಿಕ ವಸ್ತುಗಳೊಡನೆ ಸಂಬಂಧವನ್ನು ಕಲ್ಪಿಸಿಕೊಂಡರೆ ಕಾಲ ಓಡಿತಕ್ಕೆ ಸಿಕ್ಕಬೇಕಾಗುತ್ತದೆ. ಆತ್ಮನೊಡನೆ ಸಂಬಂಧವನ್ನಿಟ್ಟು ಕೊಂಡರೆ ಮುಕ್ತರಾಗಬಹುದು. ವಸ್ತುತ; ಯಾರ ಪ್ರೇರಣೆಯಿಂದ ತ್ರಿಗುಣಗಳ ಸಾಮ್ಯಾವಸ್ಥಾರೂಪಿಣೀ ನಿರ್ವಿಶೇಷ ಪ್ರಕೃತಿಯಲ್ಲಿ ಗತಿಯುಂಟಾಗುವುದೊ ಆ ಪುರುಷರೂಪೀ ಭಗವಂತನೇ ಕಾಲನು ಹೀಗೆ ಮಾಯೆಯಿಂದ ಸರ್ವಪ್ರಾಣಿಗಳ ಅಂತರಂಗದಲ್ಲಿ ಜೀವರೂಪದಿಂದ, ಹೊರಗಡೆ ಕಾಲರೂಪದಿಂದ ಪ್ರಕಾಶಿಸುವವನೇ ಇಪ್ಪತ್ತೈದನೆಯ ತತ್ತ್ವವಾದ ಭಗವಂತನು. ಪರಮ ಪುರುಷ ಪರಮಾತ್ಮನು ಪ್ರಕೃತಿಯಲ್ಲಿ ಚಿಚ್ಛಕ್ತಿ ಆಧಾನವನ್ನು ಮಾಡುತ್ತಾನೆ ಚಿಚ್ಛಕ್ತಿ ಎಂದರೇನು? ವೇದಾಂತಿಗಳು ಕೂಡಲೇ ಉತ್ತರಿಸುತ್ತಾರೆ– 'ಚಿದಾಭಾಸ' ಪರಮಾತ್ಮನು ಆಧಾನಮಾಡಿದ ವೀರ್ಯವನ್ನು (ಚಿಚ್ಛಕ್ತಿಯನ್ನು)ಚಿದಾಭಾಸ ವೆನ್ನುತ್ತಾರೆ. ಪರಮಾತ್ಮನಿಂದ ಚಿಚ್ಛಕ್ತಿಯ ಆಧಾನವಾದಮೇಲೆ ಪ್ರಕೃತಿಯಿಂದ ಮಹತ್ತತ್ತ್ವದ ಪ್ರಸವವಾಗುತ್ತದೆ. ಮಹತ್ತತ್ತ್ವವು ತೇಜೋಮಯವಾದುದು. ಲಯ-ವಿಕ್ಷೇಪಾದಿರಹಿತವಾದುದು. ಜಗತ್ತಿಗೆ ಅಂಕುರೂಪವಾದ ಈ ಮಹತ್ತತ್ತ್ವವು ತನ್ನಲ್ಲಿದ್ದ ವಿಶ್ವವನ್ನು ಪ್ರಕಟಗೊಳಿಸಲು, ತನ್ನ ಸ್ವರೂಪವನ್ನು ಆಚ್ಛಾದಿಸಿದ್ದ ಪ್ರಳಯಕಾಲೀನ ಅಂಧಕಾರವನ್ನು ತನ್ನ ತೇಜಸ್ಸಿನಿಂದ ಕುಡಿದು ಬಿಟ್ಟಿತು ಈ ಮಹತ್ತತ್ತ್ವವು ಭಗವತ್‌ಪ್ರಾಪ್ತಿಸ್ಥಾನವು. ಇದು ಸತ್ತ್ವಗುಣಮಯಿ,ಸ್ವಚ್ಛ,ಶಾಂತ, ಮಹತ್ತತ್ತ್ವವನ್ನೇ ವಾಸುದೇವನೆಂದು ಕರೆಯುತ್ತಾರೆ. [ಅಧ್ಯಾತ್ಮದಲ್ಲಿ ಯಾವುದನ್ನು ಚಿತ್ತವೆನ್ನುತ್ತಾರೊ ಅದನ್ನೇ ಅಧಿಭೂತದಲ್ಲಿ ಮಹತ್ತತ್ತ್ವವೆನ್ನುತ್ತಾರೆ. ಚಿತ್ತದಲ್ಲಿ ಅಧಿಷ್ಠಾತಾ ಕ್ಷೇತ್ರಜ್ಞ ಉಪಾಸ್ಯನು ವಾಸುದೇವನು. ಅಹಂಕಾರದಲ್ಲಿ ಅಧಿಷ್ಠಾತಾ-ರುದ್ರನು ಉಪಾಸ್ಯನುಸಂಕರ್ಷಣನು. ಬುಧ್ಯಧಿಷ್ಠಾತಾ-ಬ್ರಹ್ಮ,ಉಪಾಸ್ಯನು ಪ್ರದ್ಯುಮ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮನಸ್ಸಿನ ಅಧಿಷ್ಠಾತಾ-ಚಂದ್ರಮಾ, ಉಪಾಸ್ಯನು ಅನಿರುದ್ಧ.] ಜಲದಲ್ಲಿ ಪೃಥಿವ್ಯಾದಿಗಳ ಸಂಬಂದವಿಲ್ಲದಿದ್ದಾಗ, ಸ್ವಚ್ಛತೆ, ಶಾಂತತೆ, ವಿಕಾರಶೂನ್ಯತೆ ಎಲ್ಲವೂ ಇರುತ್ತದೆ. ಹಾಗೆಯೇ ಸ್ವಭಾವತ : ಚಿತ್ತವು ಶಾಂತ ಸ್ವಚ್ಛ-ಅವಿಕಾರಿ ಭಗವಂತನ ವೀರ್ಯರೂಪ ಚಿಚ್ಛಕ್ತಿ ಯಿಂದ ಉತ್ಪನ್ನವಾದ ಮಹತ್ತತ್ತ್ವದ ವಿಕಾರದಿಂದ ಕ್ರಿಯಾಶಕ್ತಿ ಪ್ರಧಾನವಾದ, ಅಹಂಕಾರವು ಉತ್ಪನ್ನವಾಯಿತು. ಅಹಂಕಾರವು ವೈಕಾರಿಕ ತೈಜಸತಾಮಸ ಭೇದಗಳಿಂದ ಮೂರು ವಿಧವಾಗಿರುತ್ತದೆ. ಅದರಿಂದ ಕ್ರಮಶಃ ಮನಸ್ಸು ಇಂದ್ರಿಯ ಪಂಚ ಮಹಾಭೂತಗಳ ಉತ್ಪತ್ತಿಯಾಗುತ್ತದೆ. ಈ ಭೂತೇಂದ್ರಿಯ ಮನರೂಪಿ ಅಹಂಕಾರವನ್ನೇ ಪಂಡಿತರು ಸಂಕರ್ಷಣನಾಮಕ ಸಹಸ್ರಶೀರ್ಷವಾದ 'ಅನಂತ' ನೆಂದು ಕರೆಯುತ್ತಾರೆ. ಈ ಅಹಂಕಾರವು ದೇವತಾರೂಪದಿಂದ 'ಕರ್ತಾ' ಇಂದ್ರಿಯ ರೂಪದಿಂದ 'ಕರಣ' ಪಂಚಭೂತ ರೂಪದಿಂದಕಾರ್ಯ ಹಾಗೂ ಸತ್ತ್ವಾದಿಗುಣಗಳ ಸಂಬಂಧದಿಂದ ಶಾಂತ-ಘೋರ-ಮೂಢ ಹೀಗೆ ಅಹಂಕಾರದ ಮೂರು ಭೇದಗಳನ್ನು ಹೇಳಿದರು. ಅವುಗಳಲ್ಲಿ ವೈಕಾರಿಕ ಅಹಂಕಾರದಿಂದ-ಮನಸ್ಸಾಯಿತು. ಮನಸ್ಸಿನ ಸಂಕಲ್ಪ ವಿಕಲ್ಪಗಳಿಂದಲೇ ಕಾಮನೆಗಳುಂಟಾಗುತ್ತವೆ. ಈ ಮನಸ್ತತ್ತ್ವವೇ ಇಂದ್ರಿಯಾದಿಷ್ಠಾತಾ ಅನಿರುಧ್ಧನ ಹೆಸರಿನಿಂದ ಪ್ರಸಿದ್ಧವಾಗಿದೆ. ಯೋಗಿಗಳು ಶರತ್ಕಾಲೀನ ನೀಲ ಕಮಲದಂತೆ ಶ್ಯಾಮವರ್ಣದವನಾದ ಅನಿರುದ್ಧನನ್ನು ಜಿತಮನಸ್ಕರಾಗಿ ಆರಾಧಿಸುತ್ತಾರೆ ತೈಜಸಾಹಂಕಾರದ ವಿಕಾರದಿಂದ ಬುಧ್ಧಿತತ್ತ್ವವು ಉತ್ಪನ್ನವಾಯಿತು. ವಸ್ತುಸ್ಫುರಣೆಗೆ ಕಾರಣವಾದ ವಿಜ್ಞಾನ-ಇಂದ್ರಿಯವ್ಯಾಪಾರಗಳಲ್ಲಿ ಸಹಾಯ, ವಿಶಿಷ್ಟಪದಾರ್ಥಗಳನ್ನು ತಿಳಿಯುವುದು ಇವೆಲ್ಲವೂ ಬುದ್ಧಿಯಕಾರ್ಯವು: ವೃತ್ತಿಭೇದದಿಂದ ಬುಧ್ಧಿಯು ನಾನಾರೂಪಗಳನ್ನು ತಾಳುತ್ತದೆ— ಸಂಶಯ, ವಿಪರ್ಯಯ ನಿಶ್ಚಯ, ಸ್ಮೃತಿ, ನಿದ್ರಾ, ಇವುಗಳು ಬುಧ್ಧಿಯ ವೃತ್ತಿಗಳು. ಬುಧ್ಧಿತತ್ವದ ಅಧಿದೇವತೆ ಪ್ರದ್ಯುಮ್ನ. ಇಂದ್ರಿಯಗಳೂ ಸಹ ತೈಜಸಾಹಂಕಾರದ ಕಾರ್ಯಗಳು. ಜ್ಞಾನ- ಕರ್ಮ ವಿಭಾಗಕ್ಕನುಗುಣವಾಗಿ ಜ್ಞಾನೇಂದ್ರಿಯ - ಕರ್ಮೇಂದ್ರಿಯಗಳ ಭೇದವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಮವು ಪ್ರಾಣಶಕ್ತಿಯಾದರೆ ಜ್ಞಾನವು ಬುದ್ಧಿಶಕ್ತಿಯು. ಭಗವಂತನ ಚೇತನಶಕ್ತಿಯ ಪ್ರೇರಣೆಗನುಗುಣವಾಗಿ ತಾಮಸಾಹಂಕಾರದ ವಿಕಾರದಿಂದ ಶಬ್ದ ತನ್ಮಾತ್ರೆಯ ಪ್ರಾದುರ್ಭಾವವಾಯಿತು. ಶಬ್ದ ತನ್ಮಾತ್ರೆಯಿಂದ ಆಕಾಶವೂ,ಶಬ್ದಜ್ಞಾನವನ್ನು ಮಾಡಿಸುವ ಶ್ರೋತ್ರೇಂದ್ರಿಯವೂ, ಪ್ರಕಟವಾಯಿತು. ಅರ್ಥಪ್ರಕಾಶನ,ವಕ್ತೃವು ಮರೆಯಾಗಿದ್ದರೂ ಅವನ ಹೇಳಿಕೆಯಿಂದ ಜ್ಞಾನವಾಗುವುದು, ಆಕಾಶದ ಸೂಕ್ಷ್ಮತೆ ಇವುಗಳು ಶಾಬ್ದಿಕಲಕ್ಷಣಗಳು ಪ್ರಾಣಿಗಳಿಗೆ ಅವಕಾಶಕೊಡುವುದು, ಎಲ್ಲದರಒಳಗೂ ಹೊರಗೂ ಇರುವುದು, ಪ್ರಾಣೇಂದ್ರಿಯ ಮನಸ್ಸುಗಳಿಗೆ ಆಶ್ರಯಕೊಡುವುದು ಇವು ಆಕಾಶ ಕಾರ್ಯಗಳು.

ಶಬ್ದ ತನ್ಮಾತ್ರೆಯ ಕಾರ್ಯವಾದ ಆಕಾಶದಲ್ಲಿ ಕಾಲ ಗತಿಯಿಂದ ವಿಕಾರವುಂಟಾಗಿ ಸ್ಪರ್ಶತನ್ಮಾತ್ರೆಯಾಯಿತು. ಅದರಿಂದ ವಾಯುವಿನ ಹಾಗೂ ಸ್ಪರ್ಶ ಗ್ರಹಣ ಮಾಡುವ ತ್ವಗಿಂದ್ರಿಯದ ಉತ್ಪತ್ತಿಯಾಯಿತು. ಕೋಮಲತೆ, ಕಠೋರತೆ, ಶೀತಲತೆ, ಹಾಗೂ ಉಷ್ಣತೆ, ವಾಯುವಿನ ಸೂಕ್ಷ್ಮರೂಪ ಇವುಗಳು ಸ್ಪರ್ಶದ ಲಕ್ಷಣಗಳು. ಮರದ ಕೊಂಬೆಗಳನ್ನು ಅಲ್ಲಾಡಿಸುವುದು, ಹುಲ್ಲು ಕಡ್ಡಿಗಳನ್ನು ಹಾರಿಸುವುದು. ಗಂಧಾದ್ಯುಕ್ತ ದ್ರವ್ಯಗಳನ್ನು ಘ್ರಾಣೇಂದ್ರಿಯಕ್ಕೆ ತಲಪಿಸುವುದು, ಶಬ್ದವನ್ನು ಶ್ರೋತ್ರೇಂದ್ರಿಯದ ಬಳಿಗೆ ಒಯ್ಯುವುದು, ಇತ್ಯಾದಿಗಳು ವಾಯುವೃತ್ತಿಗಳ ಲಕ್ಷಣಗಳು, ದೈವ ಪ್ರೇರಣೆಗನುಗುಣವಾಗಿ ಸ್ಪರ್ಶತನ್ಮಾತ್ರ ವಿಶಿಷ್ಟ ವಾಯುವಿನ ವಿಕಾರದಿಂದ ರೂಪತನ್ಮಾತ್ರೆಯ ಆವಿರ್ಭಾವವಾಯಿತು- ಅದರಿಂದ ತೇಜಸ್ಸೂ, ರೂಪವನ್ನು ಸಾಕ್ಷಾತ್ಕರಿಸುವ ನೇತ್ರದ ಪ್ರಾದುರ್ಭಾವವೂ ಆಯಿತು. ವಸ್ತ್ವಾಕಾರದ ಬೋಧೆ, ದ್ರವ್ಯ ಸಾಕ್ಷಾತ್ಕಾರ, ತೇಜಸ್ಸಿನ ತೇಜಸ್ತ್ವ ಇವುಗಳು ರೂಪತನ್ಮಾತ್ರೆಯ ವೃತ್ತಿಗಳು ಹೊಳೆಯುವುದು, ಬೇಯಿಸುವುದು, ಶೀತವನ್ನು ದೂರೀಕರಿಸುವುದು, ಒಣಗಿಸುವುದು, ಹಸಿವು ಬಾಯಾರಿಕೆಗಳನ್ನುಂಟು ಮಾಡುವುದು, ತನ್ನಿವೃತ್ತಿಗಾಗಿ ಆಹಾರ-ಪಾನೀಯಗಳನ್ನು ಸೇವಿಸುವುದು ತೇಜಸ್ಸಿನವೃತ್ತಿಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನಃ ದೈವ ಪ್ರೇರಣೆಗನುಗುಣವಾಗಿ ರೂಪತನ್ಮಾತ್ರಮಯ ತೇಜಸ್ಸಿನ ವಿಕಾರದಿಂದ ರಸತನ್ಮಾತ್ರೆಯ ಆವಿರ್ಭಾವವಾಯಿತು. ಆದರಿಂದ ಜಲಹಾಗೂ ರಸಗ್ರಾಹಿಯಾದ ರಸನೇಂದ್ರಿಯದ ಉತ್ಪತ್ತಿಯಾಯಿತು ರಸವು ತನ್ನಶುಧ್ಧ ಸ್ವರೂಪದಲ್ಲಿ ಒಂದೇ, ಆದರೆ ಅನ್ಯಭೌತಿಕ ಪದಾರ್ಥಗಳ ಸಂಪರ್ಕದಿಂದ ಕಹಿ, ಸಿಹಿ, ಖಾರ, ಹುಳಿ, ಇತ್ಯಾದಿ ಸ್ವರೂಪಗಳನ್ನು ಹೊಂದುತ್ತದೆ. ಒದ್ದೆಯನ್ನಾಗಿ ಮಾಡುವುದು, ಮೃತ್ತನ್ನು ಪಿಂಡಾಕಾರವನ್ನಾಗಿ ಮಾಡುವುದು. ತೃಪ್ತಿಪಡಿಸುವುದು. ಉಜ್ಜೀವನಗೊಳಿಸುವುದು, ತೃಷೆಯ ನಿವೃತ್ತಿ, ಪದಾರ್ಥಗಳನ್ನು ಮೃದು ಮಾಡುವುದು. ತಾಪನಿವೃತ್ತಿ, ಭಾವಿಗಳಿಂದ ಮೇಲಕ್ಕೆ ತೆಗೆದ ಮೇಲೂ ಪುನಃ ಪುನಃ ಪ್ರಕಟವಾಗುವುದು. ಇವುಗಳೇ ಜಲವೃತ್ತಿಗಳು. ನಂತರ ದೈವ ಪ್ರೇರಣೆಗನುಗುಣವಾಗಿ ರಸಸ್ವರೂಪೀ ಜಲದವಿಕಾರದಿಂದ ಗಂಧತನ್ಮಾತ್ರೆಯು ಆವಿರ್ಭಾವವಾಯಿತು. ಅದರಿಂದ ಪೃಥ್ವಿಯು ಹಾಗೂ ಗಂಧವನ್ನು ಗ್ರಹಿಸುವ ಘ್ರಾಣೇಂದ್ರಿಯದ ಆವಿರ್ಭಾವವಾಯಿತು. ಗಂಧವು ಒಂದೇ, ಪರಸ್ಪರ ಸಂಪರ್ಕದಿಂದ ಮಿಶ್ರಿತಗಂಧ, ದುರ್ಗಂಧ, ಸುಗಂಧ, ಮೃದು. ತೀವ್ರ ಇತ್ಯಾದಿ ಅನೇಕ ಭೇದಗಳಾಗುತ್ತವೆ, ಪ್ರತಿಮಾದಿರೂಪಗಳಿಂದ ಬ್ರಹ್ಮನ ಸಾಕಾರ ಭಾವನೆಗೆ ಆಶ್ರಯಕೊಡುವುದು, ಜಲಾದಿಕಾರಣತತ್ವಗಳನ್ನು ಆಶ್ರಯಿಸದೇ ಇರುವುದು, ಜಲಾದಿಪದಾರ್ಥಾಂತರಗಳನ್ನು ಧರಿಸುವುದು, ಆಕಾಶಾದಿಗಳ ಅವಚ್ಛೇದಕವಾಗುವುದು, (ಘಟಾಕಾಶ-ಮಠಾಕಾಶ) ವಿಶೇಷ ಪರಿಣಾಮದಿಂದ ಪ್ರಾಣಿಗಳ ಗುಣಗಳನ್ನು ಪ್ರಕಟಿಸುವುದು. (ಸ್ತ್ರೀತ್ವ-ಪುರುಷತ್ವ) ಇತ್ಯಾದಿಗಳು ಪೃಥ್ವಿಯ ಕಾರ್ಯರೂಪ ಲಕ್ಷಣಗಳು. ಆಕಾಶದ ವಿಶೇಷಗುಣವು ಶಬ್ದವು. ಅದರ ವಿಷಯವು ಶ್ರೋತ್ರೇಂದ್ರಿಯವು. ವಾಯುವಿನ ವಿಶೇಷಗುಣವು ಸ್ಪರ್ಶವು. ಅದರ ವಿಷಯವು ತ್ವಗಿಂದ್ರಿಯವು. ತೇಜಸ್ಸಿನ ವಿಶೇಷಗುಣವು ರೂಪವು. ಅದರ ವಿಷಯವು ನೇತ್ರೇಂದ್ರಿಯವು: ಜಲದ ವಿಶೇಷ ಗುಣವು ರಸವು. ಅದರ ವಿಷಯವು ರಸನೇಂದ್ರಿಯವು. ಪೃಥ್ವಿಯ ವಿಶೇಷಗುಣವು ಗಂಧವು. ಅದರ ವಿಷಯವು ಘ್ರಾಣೇಂದ್ರಿಯವು. ವಾಯ್ವಾದಿ ಕಾರ್ಯತತ್ವಗಳಲ್ಲಿ ಆಕಾಶಾದಿಕಾರಣ ತತ್ವಗಳಿರುವುದರಿಂದ ಅವುಗಳಗುಣಗಳೂ ಅನುಗತಗಳಾಗಿ ಕಾಣಲ್ಪಡುತ್ತವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರಿಂದ ಮಹಾಭೂತಗಳಗುಣಗಳಾದ, ಶಬ್ದ, ಸ್ಪರ್ಶ, ರೂಪ. ರಸ, ಗಂಧಗಳು, ಕೇವಲ ಪೃಥ್ವಿಯಲ್ಲಿಯೆ ಉಪಲಬ್ಧವಾಗುತ್ತವೆ. ಮಹತ್ತತ್ವ, ಅಹಂಕಾರ, ಪಂಚಭೂತಗಳು ಈ ಏಳೂ ಪರಸ್ಪರ ಸೇರಲಾಗದೆ ಪೃಥಕ್ಕಾಗಿಯೆ ಇದ್ದಾಗ ಜಗತ್ತಿಗೆ ಆದಿಕಾರಣನಾದ ನಾರಾಯಣನು, ಕಾಲ, ಅದೃಷ್ಟ, ಸತ್ವಾದಿಗುಣಗಳೊಡನೆ ಅವುಗಳಲ್ಲಿ ಪ್ರವೇಶಮಾಡಿದನು. ಪರಮಾತ್ಮನ ಪ್ರವೇಶದಿಂದ ಕ್ಷುಭ್ದಗೊಂಡು ತಮ್ಮಲ್ಲಿ ಪರಸ್ಪರ ಸೇರಿದ ತತ್ವಗಳಿಂದ ಒಂದು ಜಡರೂಪನಾದ ಅಂಡದ ಉತ್ಪತ್ತಿಯಾಯಿತು. ಆ ಅಂಡದಿಂದ ವಿರಾಟಪುರುಷನ ಉತ್ಪತ್ತಿಯಾಯಿತು. ಈ ಅಂಡದ ಹೆಸರು "ವಿಶೇಷ" ಇದರೊಳಗಡೆ ಶ್ರೀಹರಿಯ ಸ್ವರೂಪ ಭೂತಗಳಾದ ಚತುರ್ದಶ ಭುವನಗಳಿವೆ. ಇದು ಆರುಆವರಣಗಳಿಂದ ಕೂಡಿದೆ. ಒಂದೊಂದು ಆವರಣವೂ ಒಂದಕ್ಕಿಂತ ಹತ್ತರಷ್ಟು ವಿಸ್ತಾರವಾದುದು ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ವ, ಇವುಗಳೇ ಆರು ಆವರಣಗಳು. ಇವುಗಳ ಹೊರಗಡೆ ಪ್ರಕೃತಿಯು ಏಳನೇ ಆವರಣವಿದೆ. ಕಾರಣಮಯ ಜಲದಲ್ಲಿದ್ದ ತೇಜೋಮಯ ಅಂಡದಿಂದ ವಿರಾಟನು ಎದ್ದು ಪುನಃ ಅದರಲ್ಲಿ ಪ್ರವೇಶಿಸೋಣ ಆಗ ಅದರಲ್ಲ ಕೆಲವು ಛಿದ್ರಗಳಾದುವು. ಮೊಟ್ಟ ಮೊದಲು ಅದರಲ್ಲಿ ಮುಖದ ಆವಿರ್ಭಾವವಾಯಿತು. ನಂತರ ವಾಗಿಂದ್ರಿಯ, ವಾಗಧಿಷ್ಠಾತೃ-ಅಗ್ನಿಯ ಉತ್ಪತ್ತಿಯಾಯಿತು. ನಾಸಿಕಾಛಿದ್ರದಿಂದ ಪ್ರಾಣ ಸಹಿತವಾದ ಘ್ರಾಣೇಂದ್ರಿಯದ ಉತ್ಪತ್ತಿಯಾಯಿತು. ನಂತರಘ್ರಾಣೇಂದ್ರಿಯದ ಅಧಿಷ್ಠಾತಾವಾಯುವಿನ ಆವಿರ್ಭಾವವಾಯಿತು. ನಂತರ ನೇತ್ರೇಂದ್ರಿಯಗಳು, ತದಧಿಷ್ಠಾತಾ ಸೂರ್ಯನೂ ಉತ್ಪನ್ನರಾದರು. ಶ್ರೋತ್ರಛಿದ್ರಗಳಿಂದ ಶ್ರೋತ್ರೇಂದ್ರಿಯಗಳೂ ಹಾಗೂ ತದಧಿಷ್ಠಾತಾ ದಿಗ್ದೇವತೆಗಳ ಆವಿರ್ಭಾವವಾಯಿತು. ನಂತರ ವಿರಾಟಪುರುಷ ನತ್ವಗಿಂದ್ರಿಯದ ಉತ್ಪತ್ತಿಯಾಯಿತು ಅದರಿಂದ ರೋಮಗಳು. ತ್ವಗಿಂದ್ರಿಯಾಭಿಮಾನೀ ಔಷಧಿಗಳು (ಅನ್ನಾದಿ) ಪ್ರಕಟವಾದುವು ಆಮೇಲೆ ಲಿಂಗದ ಉತ್ಪತ್ತಿಯಾಯಿತು. ಅದರಿಂದ ವೀರ್ಯ, ಲಿಂಗಾಭಿಮಾನದೇವತೆ, ಜಲದ ಆವಿರ್ಭಾವವಾಯಿತು ನಂತರ ಗುದಾ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರಿಂದ ಅಪಾನವಾಯು, ತದಭಿಮಾನಿ ಮೃತ್ಯುವಿನ ಆವಿರ್ಭಾವವಾಯಿತು ಆಮೇಲೆ ಹಸ್ತಗಳ ಆವಿರ್ಭಾವ,ಬಲಾಭಿಮಾನೀ ಇಂದ್ರನ ಆವಿರ್ಭಾವ ವಾಯಿತು. ಚರಣಗಳಿಂದ ಗಮನಕ್ರಿಯೆ, ತದಭಿಮಾನೀ ವಿಷ್ಣುದೇವತೆಯ ಆವಿರ್ಭಾವವಾಯಿತು.ಹೀಗೆಯೆ ವಿರಾಟಪುರುಷನ ನಾಡಿಗಳ ಆವಿರ್ಭಾವದಿಂದ ರಕ್ತೋತ್ಪತ್ತಿ,ಹಾಗೂ ನದಿಗಳ ಉತ್ಪತ್ತಿಯಾಯಿತು. ನಂತರ ಉದರವು ಪ್ರಕಟವಾಯಿತು. ಅದರಿಂದ ಕ್ಷುತ್- ಪಿಪಾಸೆಗಳು ಹುಟ್ಟಿದವು.ತದಭಿಮಾನೀ ದೇವತಾ ಸಮುದ್ರನ ಆವಿರ್ಭಾವವಾಯಿತು. ನಂತರ ಹೃದಯದ ಪ್ರಕಟಣೆ, ನಂತರ ತದಭಿಮಾನೀ ಚಂದ್ರನ ಪ್ರಕಟಣೆ.

ಹೃದಯದಿಂದಲೇ ಬುದ್ಧಿ, ಬುದ್ಧ್ಯಭಿಮಾನೀ ಬ್ರಹ್ಮನ ಪ್ರಕಟಣೆಯಾಯಿತು ನಂತರ ಅಹಂಕಾರ ತದಭಿಮಾನೀ ರುದ್ರದೇವನ ಆವಿರ್ಭಾವ ವಾಯಿತು. ನಂತರ ಚಿತ್ತ ತಡಭಿಮಾನೀ ಕ್ಷೇತ್ರಜ್ಞನ ಪ್ರಕಟಣೆಯಾಯಿತು. ಈ ದೇವತೆಗಳೆಲ್ಲರೂ ವಿರಾಟಪುರುಷನನ್ನು ಏಳಿಸಲು ಅಸಮರ್ಥರಾದರು,ಆಗ ಅವರುಗಳು ಪುನಃ ತಮ್ಮ-ತಮ್ಮ ಉತ್ಪತ್ತಿಸ್ಥಾನಗಳಲ್ಲಿ ಪ್ರವೇಶಿಸಿದರು. ಅಗ್ನಿಯು ವಾಣಿಯೊಡನೆ ಮುಖದಲ್ಲಿ ಪ್ರವೇಶಿಸಿದನು,ಆದರೂ ವಿರಾಟನು ಏಳಲ್ಲಿಲ್ಲ ವಾಯುವು ಘ್ರಾಣೇಂದ್ರಿಯದೊಡನೆ ನಾಸಾಛಿದ್ರಗಳಲ್ಲಿ, ಸೂರ್ಯನು ಚಕ್ಷುರಿಂದ್ರಿಯದೊಡನೆ ನೇತ್ರಗಳಲ್ಲಿ,ದಿಗ್ದೇವತೆಗಳು ಶ್ರವಣೇಂದ್ರಿಯದೊಡನೆ ಕಿವಿಗಳಲ್ಲಿ,ಓಷಧಿಗಳು ರೋಮಗಳೊಡನೆ ತ್ವಗಿಂದ್ರಿಯದಲ್ಲಿ,ಜಲವು ವೀರ್ಯದೊಡನೆ ಲಿಂಗದಲ್ಲಿ,ಮೃತ್ಯುವು ಅಪಾನದೊಡನೆ ಗುದಾ ಇಂದ್ರಿಯದಲ್ಲಿ, ಇಂದ್ರನು ಬಲದೊಡನೆ ಕೈಗಳಲ್ಲಿ,ವಿಷ್ಣುವು ಗತಿಯೊಡನೆ ಚರಣಗಳಲ್ಲಿ, ನದಿಗಳು ರುಧಿರದೊಡನೆ ನಾಡಿಗಳಲ್ಲಿ, ಸಮುದ್ರವು ಕ್ಷುತ್ಪಿಪಾಸೆಗಳೊಡನೆ ಉದರದಲ್ಲಿ, ಚಂದ್ರನು ಮನಸ್ಸಿನೊಡನೆ ಹೃದಯದಲ್ಲಿ, ಬ್ರಹ್ಮನೂ ಬುದ್ಧಿಯೊಡನೆ ಹೃದಯದಲ್ಲಿ, ರುದ್ರನೂ ಸಹ ಅಹಂಕಾರದೊಡನೆ ಹೃದಯದಲ್ಲಿ ಪ್ರವೇಶಿಸಿದರೂ ವಿರಾಟಪುರುಷನು ಏಳಲ್ಲಿಲ್ಲ.ಆದರೆ ಚಿತ್ತಾಧಿಷ್ಠಾತಾ ಕ್ಷೇತ್ರಜ್ಞನು ಚಿತ್ತದೊಡನೆ ಹೃದಯದಲ್ಲಿ ಪ್ರವೇಶಿಸಲು ವಿರಾಟಪುರುಷನು ಆಗಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಲದಲ್ಲಿ ಎದ್ದು ನಿಂತನು. ಹೇಗೆ ಲೋಕದಲ್ಲಿ ಪ್ರಾಣೇಂದ್ರಿಯ ಮನೋ ಬುಧ್ಯಾದಿಗಳು, ಚಿತ್ತಾಧಿಷ್ಠಾತಾ, ಕ್ಷೇತ್ರಜ್ಞನಸಹಾಯವಿಲ್ಲದೆ, ಮಲಗಿರುವ ಪ್ರಾಣಿಯನ್ನು ಏಳಿಸಲಾಗುವುದಿಲ್ಲವೊ, ಹಾಗೆ ವಿರಾಟಪುರುಷನೂ ಸಹ ಕ್ಷೇತ್ರಜ್ಞ ಪರಮಾತ್ಮನವಿನಾ ಏಳಲಾಗಲಿಲ್ಲ.

ಇದರಿಂದ ತಿಳಿಯ ಬೇಕಾದುದಿಷ್ಟೆ ಭಕ್ತಿ-ವೈರಾಗ್ಯ ಚಿತ್ತೈಕಾಗ್ರತೆ ಯಿಂದ ಕೂಡಿದ ಜ್ಞಾನದಿಂದ, ಅಂತರಾತ್ಮ ಸ್ವರೂಪೀ ಕ್ಷೇತ್ರಜ್ಞನನ್ನು ಈ ಶರೀರದಲ್ಲಿಯೆ ಚಿಂತಿಸಬೇಕು,

ಓಂ ತತ್ಸದಿತ್ಯೇವಂ ತೃತೀಯಸ್ಕಂಧೇ ಷಡ್ವಿಂಶೋಽಧ್ಯಾಯಃ

ಶ್ರೀ ಮದ್ಭಾಗವತ ದರ್ಶನ. ಸ್ಕಂಧ ೩. ಅ - ೨೭.
"ಪ್ರಕೃತಿ - ಪುರುಷ ವಿವೇಕದಿಂದ ಮೋಕ್ಷಪ್ರಾಪ್ತಿ".

ಭಗವಾನ್ ಕಪಿಲರು ತಾಯಿಗೆ ಹೇಳುತ್ತಾರೆ— ಅಮ್ಮ- ಈ ಚೈತನ್ಯಾತ್ಮನು ದೇಹಸ್ಥನಾಗಿದ್ದರೂ ಅವನು ಅಸಂಗನು, ನಿರ್ವಿಕಾರನು, ಜಲದಲ್ಲಿ ಪ್ರತಿಬಿಂಬಿತನಾದ ಸೂರ್ಯನೊಡನೆ, ಜಲದ ಶೀತಲತೆ, ಚಂಚಲತೆಯು ಸಂಬಂಧವಿರುವುದಿಲ್ಲ. ಅಂತೆಯೇ ಪ್ರಕೃತಿಯ ಕಾರ್ಯವಾದ ಈ ಶರೀರದಲ್ಲಿ ಆತ್ಮನು ಇದ್ದರೂ ಸುಖ ದುಃಖಾದಿಗಳಿಂದ ಲಿಪ್ತನಾಗುವುದಿಲ್ಲ. ಚೈತನ್ಯನು ನಿರ್ವಿಕಾರನೆಂದು ಯಾರಾದರೂ ಬಾಲ್ಯದಲ್ಲಿ ಕೇಳಿದರೆ ಅವರಿಗೆ ಅರ್ಥವಾಗುವುದಿಲ್ಲ. ವಿಕಾರದ ಅರ್ಥವೇನೆಂದರೆ — ಜಗತ್ತು ಬದಲಾಯಿಸುತ್ತಿರುತ್ತದೆ. ಆದರೆ ನೋಡುವ ದ್ರಷ್ಟಾ ಅದರೊಡನೆ ಬದಲಾವಣೆಯನ್ನು ಹೊಂದುವುದಿಲ್ಲ.

ಜಾಗ್ರತ್ತು - ಸುಷುಪ್ತಿಗಳೂ ಬದಲಾಯಿಸುತ್ತವೆ. ಆದರೆ ದ್ರಷ್ಟಾ ಆತ್ಮನು ಇದ್ದ ಹಾಗೆಯೇ ಇರುತ್ತಾನೆ ಅವಸ್ಥೆಗಳು ವಿಕಾರಿಗಳು, ಅದಕ್ಕನು

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಣವಾಗಿ ಸಂಸ್ಕಾರಗಳು ಬದಲಾಯಿಸುತ್ತವೆ. ಆತ್ಮನು ನಿರ್ವಿಕಾರನಾಗಿಯೆ ಇರುತ್ತಾನೆ. ಆದರೆ ಪ್ರಕೃತಿಯ ಗುಣಗಳನ್ನು ತನ್ನ ಗುಣಗಳೆಂದು ತಿಳಿದು ತನ್ನನ್ನು ಕರ್ತಾ ಎಂದು ಒಪ್ಪಿಕೊಂಡಾಗ, ಈ ಆಸಕ್ತಿಯ ಕಾರಣ ದಿಂದ ಪ್ರಕೃತಿಯ ಆಕಾರಗಳು ಇವನಲ್ಲಿ ತೋರುತ್ತವೆ. ವಾಸ್ತವಾಂಶವೇ ನೆಂದರೆ– ಆಕಾರ- ವಿಕಾರ- ಪ್ರಕಾರ - ಸಂಸ್ಕಾರಗಳೆಲ್ಲವೂ ಪ್ರಕೃತಿಯಲ್ಲಿಯೇ ನಡೆಯುತ್ತವೆ. ಆತ್ಮ ಚೈತನ್ಯನಲ್ಲಿ ನಡೆಯುವುದಿಲ್ಲ. ಅವನು ಎಲ್ಲದರ ಸಾಕ್ಷಿಯು. ಅವನಲ್ಲಿ ಆಧಿ. ವ್ಯಾಧಿ- ಸಮಾಧಿ - ಉಪಾಧಿಗಳೊಂದೂ ಇಲ್ಲ. ಅವನು ಎಲ್ಲದರಿಂದ ವಿನಿರ್ಮುಕ್ತನು. ಆದರೆ ಸ್ವಾಪ್ನಿಕ ಮೃತ್ಯುವಿನಂತೆ ಅವನಲ್ಲಿ ತೋರುತ್ತವೆ. ಧ್ಯಾನ- ಹಾಗೂ - ಸ್ವಪ್ನದಲ್ಲಿ ಬಹಳ ದೃಶ್ಯಗಳು ಕಾಣಲ್ಪಡುತ್ತವೆ. ಈ ಸಂಸಾರದಲ್ಲಿಯೂ ಹಾಗೆಯೇ. ಇವೆಲ್ಲವೂ ಮನಸ್ಸಿನ ಆಟ. ಮನಸ್ಸು ಕೆಟ್ಟ ಮಾರ್ಗದಲ್ಲಿ ಹೋಗದಂತೆ ತಡೆಯಬೇಕು. ತಡೆ ಯುವುದು ಹೇಗೆಂದರೆ— ಹೃದಯವು ಭಗವದ್ಭಕ್ತಿಯಿಂದ ತುಂಬಿರಬೇಕು. ಸಾಂಸಾರಿಕ ವಸ್ತುಗಳ ಬಗ್ಗೆ ವೈರಾಗ್ಯವಿರಬೇಕು. ಯಮ - ನಿಯಮ ಗಳನ್ನು ಪಾಲಿಸಬೇಕು. ಶ್ರದ್ಧೆಯಿಂದ ಭಗವತ್ಕಥಾನಕಗಳನ್ನು ಶ್ರವಣ ಮಾಡಬೇಕು. ರಾಗದ್ವೇಷಾದಿಗಳಿಂದ ದೂರವಿರಬೇಕು. ಎಲ್ಲದರಲ್ಲಿಯೂ 'ಸಮತಾ' ದೃಷ್ಟಿಯಿರಬೇಕು. ಸಮನೇ ಸರ್ವೋತ್ತಮನು. ನೋಡಿ– ಸಕಾರದ ಹಿಂದೆ ಆರು ಅಕ್ಷರಗಳಿವೆ- ಅಂದರೆ ಕಾ ಮಾ ದ್ಯ ರಿ ಷ ಡ್ವ ರ್ಗ ಗಳನ್ನು ಹಿಂದಕ್ಕೆ ಸರಿಸಿದರೆ ಸಮನಾಗುತ್ತಾನೆ. ಬ್ರಹ್ಮಚರ್ಯಪಾಲನೆ - ಮೌನಧಾರಣೆ. ನಿಷ್ಕಾಮ ಕರ್ಮಯೋಗ ಇವುಗಳೇ ಮನುಷ್ಯನ ಪರಮ ಕರ್ತವ್ಯಗಳು. ಏನನ್ನಾದರೂ ಹೊಂದುವುದಕ್ಕಾಗಿ ಮನುಷ್ಯನು ಧರ್ಮಾ ಚರಣೆಯನ್ನು ಮಾಡಬಾರದು.

ಭಕ್ತರೊಬ್ಬರು ಮಹಾತ್ಮರನ್ನು ಕೇಳಿದರು— ಪೂಜ್ಯರೇ - ರಾಮ - ರಾಮ ಎಂದು ಭಜಿಸುವುದರಿಂದೇನು ಪ್ರಯೋಜನ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾತ್ಮರು ಕೊಂಚ ತೀಕ್ಷ್ಣವಾಗಿಯೇ ಹೇಳಿದರು— ಏನು ನೀನು ರಾಮ - ರಾಮ ಎಂದು ಜಪಿಸಿ ಲಾಭವನ್ನು ಸಂಪಾದಿಸಲು ಬಯಸುವೆಯಾ? ಲಾಭದ ಯೋಚನೆಯನ್ನು ಬಿಟ್ಟು ಧಾರ್ಮಿಕ ವಿಧಿಯನ್ನು ಆಚರಿಸಲೇ ಬಾರದೇ? ಜನರು ಇಷ್ಟು ಪತಿತರಾದರೇ? ಮಗುವಿನ ಸಂರಕ್ಷಣೆಗಾಗಿ ತಾಯಿಯೂ ಲಾಭವನ್ನು ಕೇಳುವುದುಂಟೇ? ಹಾಗಾದರೆ ಪ್ರಾಸಂಗಿಕ ಲಾಭವು ಕಾಣದಿದ್ದರೆ ಒಳ್ಳೆಯ ಕೆಲಸವನ್ನು ಮಾಡಬಾರದೇ? ಅಯ್ಯೋ— ಉತ್ತಮ ಭಕ್ಷ್ಯವನ್ನು ತಿನ್ನಲು, ಹಣ ಸಂಪಾದನೆಯಾಗಬೇಕೆಂದೂ ಯಾರೂ ಜಪ, ಧ್ಯಾನ, ಸಂಧ್ಯಾದಿಗಳನ್ನು ನಡೆಸುವುದಿಲ್ಲ. ಅವುಗಳ ಆಚರಣೆಯಿಂದ ಒದಗುವ ಚಿತ್ತಶುದ್ಧಿ - ಆತ್ಮ ಬಲದ ವೃದ್ಧಿ ಇವುಗಳಿಗೆ ಬೆಲೆಯೇ ಇಲ್ಲವೇ? ಕರ್ತವ್ಯ ಪರಿಪಾಲನೆಯ ದೃಷ್ಟಿಯಿಂದ ನಾವು ಧರ್ಮವನ್ನು ಆಚರಿಸಬೇಕು ವ್ಯವಹಾರದಲ್ಲಿ ದೊರಕಿದಷ್ಟಕ್ಕೇ ಸಂತುಷ್ಟನಾಗಿರಬೇಕು. ಹೆಚ್ಚು ಅಪೇಕ್ಷೆ ಇಲ್ಲದುದಕ್ಕೆ ಕೊರಗು ಎರಡೂ ಇರಬಾರದು. ನಿಯಮಾನುಸಾರವಾಗಿ ಆಹಾರ– ವಿಹಾರಗಳನ್ನು ನಡೆಸಬೇಕು. ಭಾವೋದ್ರೇಕಕ್ಕೆ ಒಳಗಾಗ ಬಾರದು ಸ್ವಲ್ಪ ಮಾತು- ಏಕಾಂತವಾಸ- ಶಾಂತಿಯಿಂದಿರುವುದು, ಜನರೊಡನೆ ಸ್ನೇಹ ಪೂರ್ವಕ ವರ್ತನೆ, ದುಃಖಿಯನ್ನು ದಯೆಯಿಂದ ಸಮಾಧಾನ ಪಡಿಸುವುದು, ಇಂದ್ರಿಯಸಂಯಮ, ಪೈಹಿಕ ಸಂಬಂಧಿಗಳೊಡನೆಯೂ ನಾನು - ನನ್ನದು ಎಂಬ ಭಾವವನ್ನಿಟ್ಟುಕೊಳ್ಳದಿರುವುದು, ಇದೇ 'ಪರಮ ಧರ್ಮ' ಸತ್ಯ ಧರ್ಮ.

ಯಾವಾಗ ಜೀವಿಯು ಪ್ರಾಕೃತ ಗುಣಗಳೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾನೆ. ಆಗ ಅಹಂಕಾರಮೋಹಿತನಾದ ಅವನು 'ನಾನು ಕರ್ತಾ' ಎಂದು ತಿಳಿಯುತ್ತಾನೆ. ಆದರಿಂದ ಪಾಪ - ಪುಣ್ಯರೂಪೀ ಕರ್ಮ ದೋಷಕ್ಕೆ ಭಾಗಿಯಾಗುತ್ತಾನೆ. ಸ್ವಾಧೀನತೆಯನ್ನೂ, ಶಾಂತಿಯನ್ನೂ ಕಳೆದುಕೊಳ್ಳುತ್ತಾನೆ. ಯದ್ಯಪಿ. ಸ್ವಾಪ್ನಿಕ ಪದಾರ್ಥಗಳಂತೆ ಜನ್ಮ- ಮರಣಾತ್ಮಕ ರೂಪೀ ಸಂಸಾರವು "ಮಿಥ್ಯಾ" ಆದರೂ ಜೀವನು ಅವಿದ್ಯಾ ವಶನಾಗಿ ವಿಷಯ ಚಿಂತನೆಗಳನ್ನು ಮಾಡುತ್ತಾ ಸಂಸಾರ ಭ್ರಮಣೆಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿವೃತ್ತನಾಗುವುದಿಲ್ಲ. ಬುದ್ಧಿವಂತನಾದವನು ಜ್ಞಾನ - ಭಕ್ತಿ - ವೈರಾಗ್ಯ ಗಳನ್ನು ಗಳಿಸಿಕೊಂಡು ವಿಷಯಾಸಕ್ತ ಚಿತ್ತವನ್ನು ಭಗವಂತನ ಕಡೆಗೆ ನುಗ್ಗಿಸ ಬೇಕು. ಈ ಕೆಲಸವು ಹೇಗಾಗಬೇಕೆಂದರೆ, ಇದಕ್ಕಾಗಿ ದುರಾಗ್ರಹಿಯಾಗ ಬಾರದು. ಈ ದೇಹ–ಇವರ ಹಿಂದಿರುವ ಅನುಬಂಧ ಇವುಗಳ ಬಗ್ಗೆ ಆಗ್ರಹ ವಿರಬಾರದು. ಪ್ರಕೃತಿ - ಪುರುಷ ವಿವೇಕವನ್ನು ಮಾಡಿಕೊಳ್ಳಬೇಕು. ಬುದ್ಧಿ ಯಿಂದ ಪೃಥಕ್ಕಾಗಿ ಸಾಕ್ಷೀಭಾವವನ್ನು ಅನುಭವಕ್ಕೆ ತೆಗೆದುಕೊಳ್ಳಬೇಕು. ಆಭಾಸ ರಹಿತನಾದ ತನ್ನನ್ನು ನೋಡಲು ಅಭ್ಯಾಸ ಮಾಡಬೇಕು. **"ಇದೇ ಜೀವನ ದರ್ಶನ".** ಇವನ್ನು ಒಂದು ದೃಷ್ಟಾಂತದಿಂದ ತಿಳಿದುಕೊಳ್ಳಬಹುದು.

ನೀವು ಗೋಡೆಯ ಮೇಲೆ ಬೆಳಕು ಬಿದ್ದಿರುವುದನ್ನು ನೋಡುತ್ತೀರಿ. ಅದು ಎಲ್ಲಿಂದ ಬಂದಿತು? ಮುಂದುಗಡೆ ಒಂದು ತಟ್ಟೆಯಲ್ಲಿ ನೀರಿದೆ. ಅದ ರಿಂದ ಆ ಬೆಳಕು ಬರುತ್ತಿದೆ. ಆ ನೀರಿನಲ್ಲಿ ಬೆಳಕು ಹೇಗೆ ಬಂದಿತು? ಆಕಾಶದಲ್ಲಿರುವ ಸೂರ್ಯನ ಪ್ರತಿಬಿಂಬವು ತಟ್ಟೆಯಲ್ಲಿ ಬಿದ್ದಿದೆ ಅದರಿಂದ ಬೆಳಕು ಹೊರಟು ಗೋಡೆಯ ಮೇಲೆ ಬಿದ್ದಿದೆ. ಹಾಗೆಯೆ ಈ ಪ್ರಪಂಚವೂ ಸಹ ಯಾವ ಬೆಳಕಿನಿಂದ ಎಲ್ಲವನ್ನೂ ನೋಡುವೆವೊ ಆ ಬೆಳಕು ಪ್ರಪಂಚ ರೂಪೀ ಪರದೆಯಮೇಲೆ ಎಲ್ಲಿಂದ ಬಂದು ಬೀಳುವುದು? ಯಾವ ಜ್ಞಾನದಿಂದ ಎಲ್ಲದರ ಬೋಧವೂ ಆಗುವುದೊ, ಆಜ್ಞಾನವು ಎಲ್ಲಿಂದಬಂದಿತು? ಆ ಬೆಳಕು ಹೃದಯಾಂತಃಕರಣ ರೂಪೀ ತಟ್ಟೆಯಿಂದ ಜಿಗಿದು ಸಂಸಾರವೆಂಬ ಪರದೆಯ ಮೇಲೆ ಬೀಳುತ್ತವೆ ಅಂತಃಕರಣಕ್ಕೆ ಆ ಬೆಳಕು ಎಲ್ಲಿಂದ ಬಂದಿತು? ಜ್ಞಾನವು ಎಲ್ಲಿಂದ ಬಂದಿತು? ಅರೇ ಅವನೇ ಪರಮಾತ್ಮ, ಅಂತಃಕರಣದಿಂದ ವ್ಯಾವಹಾರಿಕ ಪ್ರಪಂಚಕ್ಕೆ ಜ್ಞಾನವು ಬಂದಿತು. ಅಂತಃಕರಣಕ್ಕಾದರೋ ಪರಮಾತ್ಮನಿಂದ ಬಂದಿತು. ಆತ್ಮದರ್ಶೀಮುನಿಯು ನೇತ್ರಗಳಿಂದ ಸೂರ್ಯನನ್ನು ನೋಡುವಂತೆ, ತನ್ನ ಶುದ್ಧಾಂತಃಕರಣದಿಂದ ಪರಮಾತ್ಮನನ್ನು ಸಾಕ್ಷಾತ್ಕಾರಿಸಿ ಕೊಂಡು ಅದ್ವಿತೀಯ ಬ್ರಹ್ಮ ಪದವನ್ನು ಹೊಂದುತ್ತಾನೆ.

•

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮನಾದರೋ ದೇಹಾದಿ ಸಂಪೂರ್ಣಉಪಾಧಿಗಳಿಂದ ಪೃಥಕ್ಕಾಗಿರುವವನು. ಅಹಂಕಾರಾದಿ ಮಿಥ್ಯಾವಸ್ತುಗಳಲ್ಲಿ ಸತ್ಯರೂಪದಿಂದ ತೋರುವವನು; ಜಗತ್ಕಾರಣ ಭೂತವಾದ ಪ್ರಕೃತಿಯ ಅಧಿಷ್ಠಾನನು. ಮಹದಾದಿ ಕಾರ್ಯವರ್ಗಗಳ ಪ್ರಕಾಶಕನು. ಕಾರ್ಯ ಕಾರಣರೂಪ ಸಂಪೂರ್ಣ ಪದಾರ್ಥಗಳಲ್ಲಿಯೂ ವ್ಯಾಪಿಸಿರುವವನು ಜಲಸ್ಥ ಸೂರ್ಯ ಬಿಂಬವು ಗೋಡೆಯ ಮೇಲೆ ಬಿದ್ದ ಆಭಾಸದ ಮೂಲಕ ನೋಡಲ್ಪಡುವಂತೆ, ಜಲಸ್ಥ ಸೂರ್ಯಬಿಂಬದಿಂದ ಆಕಾಶಸ್ಥ ಸೂರ್ಯನ ಜ್ಞಾನವಾಗುವಂತೆ, ದೇಹೇಂದ್ರಿಯ ಮನಸ್ಸುಗಳಲ್ಲಿ ಪ್ರತಿಬಿಂಬಿತವಾದ ಆಭಾಸೋಪಲಕ್ಷಿತ ಸತ್ ಪರಮಾತ್ಮನ ಜ್ಞಾನವಾಗುತ್ತದೆ. ಸುಷುಪ್ತಿಯಲ್ಲಿ-ಶಬ್ದಾದಿ ಭೂತಸೂಕ್ಷ್ಮಗಳೂ, ಇಂದ್ರಿಯ-ಮನೋಬುಧ್ಯಾದಿಗಳೂ, ಅವ್ಯಾಕೃತದಲ್ಲಿ ಲೀನವಾಗಿದ್ದರೂ ಪರಮಾತ್ಮನು ಎಚ್ಚರದಲ್ಲಿರುತ್ತಾನೆ. ಸರ್ವಥಾತ್ಮನಾ ಅವನು ಅಹಂಕಾರಶೂನ್ಯನು. (ಆತ್ಮನು ಜಾಗ್ರದವಸ್ಥೆಯಲ್ಲಿ ಭೂತಸೂಕ್ಷ್ಮಾದಿ ದೃಶ್ಯವರ್ಗಗಳ ದ್ರಷ್ಟೃರೂಪದಲ್ಲಿ ಸ್ಪಷ್ಟವಾಗಿ ಅನುಭವಕ್ಕೆ ಬರುತ್ತಾನೆ. ಸುಷುಪ್ತಿಯಲ್ಲಿ ಉಪಾಧಿಭೂತ ಅಹಂಕಾರದ ನಾಶವಾಗುವುದರಿಂದ ತಾನೇ ನಷ್ಟನಾದೆನೆಂಬ ಭ್ರಾಂತಿಗೆಬೀಳುತ್ತಾನೆ ಮನುಷ್ಯನು ಧನನಷ್ಟವಾದರೆ ತಾನೇ ನಷ್ಟನಾದೆನೆಂದು ತಿಳಿಯುವಂತೆ) ಅಮ್ಮ-ಈ ವಿಚಾರಗಳ ಮನದಿಂದ ಮಾನವನು ಆತ್ಮಾನುಭವಿಯಾಗುತ್ತಾನೆ. ಆತ್ಮನು ಅಹಂಕಾರಾದಿ ಸಂಪೂರ್ಣ ತತ್ವಗಳ ಅಧಿಷ್ಠಾತಾ ಹಾಗೂ ಪ್ರಕಾಶಕನು. ದೇವಹೂತಿಯು ಕೇಳುತ್ತಾಳೆ-ಪ್ರಭೋ- ಪುರುಷ-ಪ್ರಕೃತಿಗಳೆರಡೂ ನಿತ್ಯ, ಒಂದು ಮತ್ತೊಂದರ ಆಶ್ರಯದಲ್ಲಿರುತ್ತವೆ. ಪ್ರಕೃತಿಯು ಪುರುಷನನ್ನು ಯಾವಾಗಲೂ ಬಿಡುವುದಿಲ್ಲ. ಗಂಧ-ಪೃಥ್ವಿಗಳು, ರಸ-ಜಲಗಳು ಪ್ರತ್ಯೇಕವಾಗಿರಲಾರವು. ಅಂತೆಯೆ ಪ್ರಕೃತಿ-ಪುರುಷರು ಪ್ರತ್ಯೇಕವಾಗಿರಲಾರರು ಯಾವ ಪ್ರಾಕೃತಿಕ ಗುಣಗಳ ಆಶ್ರಯದಿಂದ ಅಕರ್ತಾ ಪುರುಷನು ಕರ್ಮಬಂಧನಕ್ಕೆ ಒಳಗಾಗಿರುವನೊ, ಆ ಪ್ರಾಕೃತಿಕ ಗುಣಗಳಿರುವ ಹಾಗೆಯೇ ಪುರುಷನು ಮುಕ್ತನಾಗುವುದು ಹೇಗೆ? ತತ್ವವಿಚಾರದಿಂದ ಸಂಸಾರಬಂಧನದ ತೀವ್ರಭಯವು ನಿವೃತ್ತವಾದರೂ, ಅದಕ್ಕೆ ನಿಮಿತ್ತಭೂತಗಳಾದ ಪ್ರಾಕೃತ

CC-O. In Public Domain. Digitized by eGangotri

ಗುಣಗಳ ಅಭಾವವಾಗದಿರುವುದರಿಂದ ಪುನಃ ಭಯ ಸ್ಥಿತಿಯು ಬಂದೇ ಬರುವುದಲ್ಲ ?

ಭಗವಾನ್ ಕಪಿಲರು ಹೇಳುತ್ತಾರೆ-ಅಭ್ಯಾಸದ ಬಲದಿಂದ ಪ್ರಕೃತಿಯಸಂಬಂಧ ವನ್ನು ಪೂರ್ಣವಾಗಿ ಕಳೆದು ಕೊಳ್ಳಬೇಕು. ಅಗ್ನಿಯ ಉತ್ಪತ್ತಿಸ್ಥಾನವಾದ ಅರಣಿಯು ತನ್ನಿಂದ ಉತ್ಪನ್ನವಾದ ಅಗ್ನಿಯಿಂದಲೇ ತಾನು ಭಸ್ಮವಾಗುವಂತೆ ನಿಷ್ಕಾಮ ಭಾವದಿಂದ ಆಚರಿಸಿದ ಸ್ವಧರ್ಮ ಪಾಲನೆಯಿಂದ ಅಂತಃಕರಣವು ಶುದ್ಧವಾಗುವುದು. ಬಹಳ ಕಾಲ ನಡೆಸಿದ ಭಗವತ್ಕಥಾಶ್ರವಣದಿಂದ ಪುಷ್ಟ ವಾದ ಭಗವದ್ಭಕ್ತಿಯಿಂದ ತತ್ತ್ವಸಾಕ್ಷಾತ್ಕಾರ ಕರ ಜ್ಞಾನವುಂಟಾಗುವುದು ಪ್ರಬಲವೈರಾಗ್ಯದಿಂದ, ವ್ರತೋಪವಾಸಾದಿ ನಿಯಮಾಚರಣೆಯಿಂದ, ಧ್ಯಾನಾಭ್ಯಾಸದಿಂದ, ಚಿತ್ತೈಕಾಗ್ರತೆಯು ಮೂಡುತ್ತದೆ. ಅದರಿಂದ ಪುರುಷನ ಪ್ರಕೃತಿರೂಪ ಅವಿದ್ಯೆಯು ಕ್ಷಣೇ-ಕ್ಷಣೇ ನಶಿಸುತ್ತಾ ನಿಧಾನವಾಗಿ ಲೀನ ವಾಗುವುದು. ಹೀಗೆ ಕ್ಷಯವನ್ನು ಹೊಂದಿದ ಪ್ರಕೃತಿಯು ಬಂಧಮುಕ್ತನಾದ ಪುರುಷನನ್ನು ಘಾಸಿಸಲಾರದು. ಮಲಗಿದ ಪುರುಷನನ್ನು ಸ್ವಾಪ್ನಿಕದೃಶ್ಯಗಳು ಘಾಸಿಸಬಹುದು ಆದರೆ ಎಚ್ಚರದಲ್ಲಿರುವವನು ಸ್ವಾಪ್ನಿಕ ಅನುಭವಗಳಿಂದ ಮೋಹ ಗೊಳ್ಳುವುದಿಲ್ಲ. ಅಂತೆಯೆ ತತ್ತ್ವಜ್ಞಾನಾನಂತರ ಯಾವಾಗಲೂ ತನ್ನಲ್ಲಿಯೇ ಲೀನ ವಾಗಿರುವ ಆತ್ಮಾ ರಾಮ ಮುನಿಯು ಪ್ರಕೃತಿಯ ಆಟಾಟೋಪಕ್ಕೆ ಗುರಿಯಾಗುವುದಿಲ್ಲ ಹೀಗೆಮನುಷ್ಯನು ಅನೇಕ ಜನ್ಮಗಳನ್ನು ಆತ್ಮಚಿಂತನೆಯಲ್ಲಿಯೆ ಕಳೆದ ಪಕ್ಷದಲ್ಲಿ ವೈರಾಗ್ಯಯುತನಾಗುತ್ತಾನೆ

ಅಂತಹ ಧೀರ ಭಕ್ತನು ನನ್ನ ಕೃಪೆಯಿಂದಲೇ ತತ್ವಜ್ಞನಾಗಿ ಆತ್ಮಾನು ಭವಿಯಾಗಿ ಸರ್ವ ಸಂಶಯ ಮುಕ್ತನಾಗುತ್ತಾನೆ. ಈ ಲಿಂಗ ದೇಹದ ನಾಶ ವಾದ ಮೇಲೆ ನನ್ನ ಸ್ವ-ಸ್ವರೂಪ ಭೂತವಾದ ಕೈವಲ್ಯ ಪದವಿಯನ್ನು ಪಡೆಯುತ್ತಾನೆ. **"ನಸಪುನರಾವರ್ತತೇ"** ಯೋಗವೊಂದೇ ಅಣಿಮಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧಿಗಳನ್ನು ನೀಡುವುದರಲ್ಲಿ ಸಮರ್ಥನು. ಯೋಗಿಯು ಆ ಸಿದ್ಧಿಗಳ ಮೋಹಕ್ಕೆ ಸಿಲುಕಿಕೊಳ್ಳದಿದ್ದರೆ ನನ್ನ ಅವಿನಾಶೀ ಪರಮ ಪದವನ್ನು ಪಡೆಯುತ್ತಾನೆ. ಅಲ್ಲಿ ಮೃತ್ಯುವಿನ ಛಾಯೆಯೂ ಬೀಳುವುದಿಲ್ಲ.

ಓಂ—ತತ್ಸದಿತ್ಯೇವಂ ತೃತೀಯ ಸ್ಕಂಧೇ ಸಪ್ತವಿಂಶೋಽಧ್ಯಾಯಃ.

ಶ್ರೀ ಭಾಗವತ ದರ್ಶನ - ಸ್ಕಂಧ - ೩ ಅ - ೨೮.

"ಅಷ್ಟಾಂಗ ಯೋಗವಿಧಿ"

ಭಗವಾನ್ ಕಪಿಲರು ಹೇಳುತ್ತಾರೆ_ಮಾತಃ -ನಾನು ನಿನಗೀಗ ಸಬೀಜ ಯೋಗದ ಉಪದೇಶವನ್ನು ಮಾಡುತ್ತೇನೆ. ಇದರಿಂದ ಚಿತ್ತಶುಧ್ಧಿ ಯಾಗುವುದು. ಹಾಗೂ ಪ್ರಸನ್ನತೆಯು ಮೂಡುವುದು. ಪ್ರಾಣಾಯಾಮದಲ್ಲಿ ಅಮಂತ್ರಕ-ಸಮಂತ್ರಕ ಎಂದು ಎರಡು ವಿಧವಿರುವಂತೆ ಯೋಗದಲ್ಲಿ ಸಬೀಜ ನಿರ್ಬೀಜ ಎಂದು ಎರಡು ವಿಧವಿದೆ. ಸಮಂತ್ರಕ ಪ್ರಾಣಾಯಾಮದಲ್ಲಿ ಮಂತ್ರದ ಅವಲಂಬನೆಯಿರುತ್ತದೆ. ಹಾಗೆಯೇ ಯೋಗದಲ್ಲಿಯೂ ಸಹ ಸಬೀಜಯೋಗವು ಸರಳ,ನಿರ್ಬೀಜ ಯೋಗವು ಕಠಿಣ. ಸಬೀಜ ಯೋಗದಿಂದ ಮನಸ್ಸು ಪ್ರಸನ್ನವಾಗುವುದು. ತಾನೇ ಸನ್ಮಾರ್ಗ ಪ್ರವರ್ತಕವಾಗುವುದು ಶಕ್ತ್ಯನುಸಾರ ಸ್ವಧರ್ಮಪರಿಪಾಲನೆ,ವಿಧರ್ಮದ ನಿವೃತ್ತಿಯನ್ನು ಮಾಡಿಕೊಳ್ಳಬೇಕು.

ಸ್ವಧರ್ಮಾಚರಣಂ ಶಕ್ತ್ಯಾ, ವಿಧರ್ಮಾಚ್ಚ ನಿವರ್ತನಂ,
ದೈವಾಲ್ಲಬ್ಧೇನಸಂತೋಷಃ, ಆತ್ಮವಿಚ್ಚರಣಾರ್ಚನಮ್.

ಪ್ರಾರಬ್ಧಾನುಸಾರ ದೊರಕಿದ್ದರಲ್ಲಿ ಸಂತುಷ್ಟನಾಗಿರಬೇಕು. ಆತ್ಮವಿದರ ಪಾದಪೂಜೆಯನ್ನು ಮಾಡಬೇಕು.

ಗ್ರಾಮಧರ್ಮ ನಿವೃತ್ತಿಶ್ಚ, ಮೋಕ್ಷಧರ್ಮರತಿಸ್ತಥಾ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮಿತಮೇಧ್ಯಾದನಂ ಶಶ್ವತ್, ವಿವಿಕ್ತ ಕ್ಷೇಮ ಸೇವನಮ್

ಗ್ರಾಮ್ಯಧರ್ಮಗಳೆಂದರೆ ವಿಷಯ ವಾಸನಾಕಾಂಕ್ಷೆಯನ್ನು ಹೆಚ್ಚಿಸುವ ಕರ್ಮಗಳು. ಅವುಗಳಿಂದ ನಿವೃತ್ತನಾಗಿ, ಸಂಸಾರ ನಿವರ್ತಕ ಧರ್ಮಗಳಲ್ಲಿ ಆಸಕ್ತಿಯನ್ನು ತಾಳಬೇಕು ಮಿತ-ಮೇಧ್ಯಾದನಂ ಪವಿತ್ರವಾದ, ಪರಿಮಿತವಾದ ಭೋಜನವನ್ನು ಮಾಡಬೇಕು. ಯಾವಾಗಲೂ ಏಕಾಂತದಲ್ಲಿ ನಿರ್ಭಯನಾಗಿರಬೇಕು. ಭೋಜನದ ವಿಷಯದಲ್ಲಿ ಒಂದೆರಡು ವಿಚಾರಗಳನ್ನು ಗಮನಿಸಬೇಕು -ಒಂದನೆಯದಾಗಿ-ಮರ್ಯಾದಿತ ಮಾತ್ರೆಯಲ್ಲಿರಬೇಕು. ಕೇವಲ ಬ್ರಹ್ಮನು ಮಾತ್ರ ಅಮಾತ್ರನು. ಇನ್ಯಾವುದೂ ಸಂಸಾರದಲ್ಲಿ ಅಮಾತ್ರವಾಗಿರಲಾರದು ಹಾಗಾದಲ್ಲಿ ಸ್ವಯಂನಷ್ಟವಾಗುವುದು, ಮತ್ತೊಂದು ವಿಚಾರ-ಭೋಜನವು ಪರಿಶುದ್ಧವಾಗಿರ ಬೇಕು. (ಮೇಧ್ಯ) ಮೇಧ್ಯ ಎಂದರೆ ಯಜ್ಞೀಯ, ನೀವು ಊಟಮಾಡುವುದನ್ನು ಹೋಮ ಮಾಡಲು ಸಾಧ್ಯವೇ? ಎನ್ನುವುದನ್ನು ಗಮನಿಸಬೇಕು. ಅದು ಭಗವಂತನಿಗೆ ನಿವೇದನಮಾಡುವಷ್ಟು ಶುಧ್ಧವಾಗಿದೆಯೆ? ತುಳಸೀದಳವು ಅದರಲ್ಲಿ ಬೀಳುವಷ್ಟು ಶುಧ್ಧವಾಗಿರಬೇಕು. ಭೋಜನದಲ್ಲಿ ಮಾತ್ರೆಯೂ, ಪರಿಶುಧ್ಧತೆಯೂ, ಚೆನ್ನಾಗಿರಬೇಕು. ಭೋಜನದ ವಿಚಾರವಾಗಿ ಭಾಗವತದಲ್ಲಿ ಮತ್ತೊಂದು ಕಡೆ ಹೇಳುತ್ತಾರೆ :-

"ಪಥ್ಯಂ ಪೂತಮನಾಯಸ್ತಂ" ಭೋಜನವು ಶರೀರಕ್ಕೆ ಪಥ್ಯಕರವಾಗಿರಬೇಕು. ಅದರ ಸ್ವಭಾವವೂ. ಜಾತಿಯೂ ಪವಿತ್ರವಾಗಿರ ಬೇಕು ಸುಲಭವಾಗಿ ಪಚನವಾಗಬೇಕು. ತಯಾರಿಸಲು ಕಷ್ಟವಾಗಬಾರದು, ಎರಡು ಮೂರಾವರ್ತಿ ಬೇಯಿಸಿರಬಾರದು. ಅದು ತಂಗಳಾಗಿರಬಾರದು, ಅದರಲ್ಲಿ ಜಾತಿ ದೋಷ, ಆಶ್ರಯದೋಷ, ವ್ಯಕ್ತಿದೋಷಗಳಿರಬಾರದು. ಅದು ಪ್ರಾಮಾಣಿಕ ಸಂಪಾದನೆಯಿಂದ ಬಂದಿರಬೇಕು, ಅಪ್ರಾಮಾಣಿಕ ಭೋಜನದಿಂದ ಮನಸ್ಸು ಭಗವದ್ಭಜನೆಯನ್ನು ಮಾಡಲಾರದು.

ಅಹಿಂಸಾ ಸತ್ಯಮಸ್ತೇಯಂ, ಯಾವದರ್ಥ ಪರಿಗ್ರಹಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮಚರ್ಯಂ ತಪಃಶೌಚಂ, ಸ್ವಾಧ್ಯಾಯಃಪುರುಷಾರ್ಚನಮ್॥

ಅಹಿಂಸಾ–ಮನಸಾ, ವಾಚಾ, ಕಾಯೇನ ಯಾವ ಜೀವಿಯನ್ನೂ ಹಿಂಸಿಸದಿರುವುದು. ಸತ್ಯಭಾಷಿಯಾಗಿರುವುದು. ಕಳ್ಳತನಮಾಡದಿರುವುದು, ಅವಶ್ಯಕತೆಗಿಂತ ಹೆಚ್ಚಿಗೆ ಸಂಪಾದಿಸದಿರುವುದು, ಬ್ರಹ್ಮಚರ್ಯ ತಪಸ್ಸು, ಶೌಚ (ಅಂತರಂಗ-ಬಹಿರಂಗಶುದ್ಧಿ) ಶಾಸ್ತ್ರಾಧ್ಯಯನ, ಭಗವತ್ಪೂಜೆ–ಹಾಗೂ-

ಮೌನಂಸದಾಃ ಸನಜಯ ಸ್ಥೈರ್ಯಂ ಪ್ರಾಣಜಯಃಶನೈಃ.
ಪ್ರತ್ಯಾಹಾರಶ್ಚೇಂದ್ರಿಯಾಣಾಂ, ವಿಷಯಾನ್ಮನಸಾಹೃದಿ.

ವಾಣಿಯ ಸಂಯಮನ, ಆಸನಸಿದ್ಧಿ, ಪ್ರಾಣಜಯ, ಇಂದ್ರಿಯಗಳು ವಿಷಯ ಪರಾಙ್ಮುಖಗಳಾಗಿ, ಆತ್ಮಾಭಿಮುಖಗಳಾಗುವುದು.

ಸ್ವಧಿಷ್ಣ್ಯಾನಾಮೇಕದೇಶೇ, ಮನಸಾಪ್ರಾಣಧಾರಣಂ.
ವೈಕುಂಠಲೀಲಾಭಿಧ್ಯಾನಂ ಸಮಾಧಾನಂತಥಾತ್ಮನಃ

ಮೂಲಾಧಾರಾದಿ ಒಂದು ಪ್ರದೇಶದಲ್ಲಿ ಮನ ಸಹಿತ ಪ್ರಾಣಗಳನ್ನು ಸ್ಥಿರೀಕರಿಸುವುದು, ಯಾವಾಗಲೂ ಭಗವಲ್ಲೀಲಾ ಕಥಾಮೃತದಲ್ಲಿ ಲೀನನಾಗಿರುವುದು, ಹಾಗೂ ಮನಸ್ಸನ್ನು ಸಮಾಧಾನ ಸ್ಥಿತಿಯಲ್ಲಿಟ್ಟು ಕೊಂಡಿರುವುದು. ಹಾಗೂ ವ್ರತದಾನಾದಿ ಸಾಧನಗಳಿಂದಲೂ ನಿಧಾನವಾಗಿ ಪ್ರಾಣಜಯವನ್ನು ಹೊಂದಿ ಬುದ್ಧಿಯಮೂಲಕ, ಕುಮಾರ್ಗಗಾಮಿ ದುಷ್ಟ ಚಿತ್ತವನ್ನು ಏಕಾಗ್ರತೆಯಿಂದ ಪರಮಾತ್ಮಧ್ಯಾನದಲ್ಲಿ ಕೂರಿಸಬೇಕು. ಮೊದಲು ಆಸನಜಯಿಯಾಗಬೇಕು. ಪ್ರಾಣಾಯಾಮಾಭ್ಯಾಸಕ್ಕಾಗಿ, ಪವಿತ್ರವಾದ ಸ್ಥಳದಲ್ಲಿ ಕುಶಮೃಗ ಚರ್ಮಾದಿಗಳಿಂದ ಆಸನವನ್ನು ಕಲ್ಪಿಸಿಕೊಳ್ಳಬೇಕು. (ಕುಶಚರ್ಮೋತ್ತರೀಯಕಂ ಚೈಲಾಜಿನ ಕುಶೋತ್ತರಮ್) ದೇಹವನ್ನು ಸ್ಥಿರವಾಗಿಟ್ಟುಕೊಂಡು ಸುಖವಾಗಿ ಕುಳಿತು ಅಭ್ಯಸಿಸಬೇಕು. ಪೂರಕ-ಕುಂಭಕ- ರೇಚಕ ಅಥವಾರೇಚಕ-ಪೂರಕ -ಕುಂಭಕ ಕ್ರಮದಿಂದ ಪ್ರಾಣ ಮಾರ್ಗವನ್ನು ಶೋಧಿಸಬೇಕು. ಇದರಿಂದ ಚಿತ್ತವು ಸ್ಥಿರವಾಗಿ ನಿಶ್ಚಲವಾಗುವುದು. ವಾಯ್ವಗ್ನಿ ತಾಪದಿಂದ ಚಿನ್ನವು ಶುಧ್ಧವಾಗುವಂತೆಪ್ರಾಣಾಯಾಮದಿಂದ ಮನಸ್ಸು ಶುಧ್ಧವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗಿಯು ಪ್ರಾಣಾಯಾಮದಿಂದ ವಾತಪಿತ್ತಾದಿ ಜನಿತ ದೋಷಗಳನ್ನೂ, ಧಾರಣೆಯಿಂದ ಪಾಪಗಳನ್ನೂ, ಪ್ರತ್ಯಾಹಾರದಿಂದ ವಿಷಯ ಸಂಬಂಧಗಳನ್ನೂ, ಧ್ಯಾನದಿಂದ ಭಗವದ್ವಿಮುಖವಾಗಿರುವ ರಾಗದ್ವೇಷಾದಿ ದುರ್ಗುಣಗಳನ್ನೂ ದೂರ ಮಾಡಿಕೊಳ್ಳಬೇಕು- ಯೋಗಾಭ್ಯಾಸದಿಂದ ಚಿತ್ತವು ನಿರ್ಮಲವಾಗಿ ಏಕಾಗ್ರವಾದಾಗ, ನಾಸಿಕಾಗ್ರಭಾಗದಲ್ಲಿ ದೃಷ್ಟಿಯನ್ನಿಟ್ಟು ಭಗವಚ್ಚಿಂತನೆಯನ್ನು ಮಾಡಬೇಕು. ಅವನ ರೂಪಚಿಂತನೆಯು ಹೀಗಿರಬೇಕು ಭಗವಂತನ ಮುಖ ಕಮಲವು ಆನಂದದಿಂದ ಅರಳಿದೆ. ಅವನು ಕಮಲಾಕ್ಷನು, ನೀಲಕಮಲದಳ ಸಮಾನ ಶ್ಯಾಮಲಾಂಗನು, ಶಂಖ ಚಕ್ರಗದಾಧಾರಿಯು, ಕಮಲ ಕೇಸರ ಸಮಾನವಾದ ಪೀತವಸ್ತ್ರಧಾರಿಯಾಗಿದ್ದಾನೆ. ವಕ್ಷಸ್ಥಳದಲ್ಲಿ ಶ್ರೀವತ್ಸಚಿಹ್ನೆಯೂ ಕಂಠದಲ್ಲಿ ಕೌಸ್ತುಭಮಣಿಯೂ ರಾರಾಜಿಸುತ್ತಿದೆ. ಆಪಾದ ಪರ್ಯಂತರವಿರುವ ವನಮಾಲೆಯು ಸುಗಂಧದಿಂದ ಆಕರ್ಷಿತಗಳಾದ ದುಂಭಿಗಳು ಝೇಂಕರಿಸುತ್ತಿವೆ.

ಅಂಗ-ಪ್ರತ್ಯಂಗಗಳಲ್ಲಿ ಹಾರ-ಕಂಕಣ-ಕಿರೀಟ-ಭುಜಬಂಧ-ನೂಪುರಾದಿ ಆಭೂಷಣಗಳು ವಿರಾಜಮಾನವಾಗಿವೆ. ಕಟಿಬಂಧದ ಶೋಭೆಯು ಸುತ್ತಲೂ ಹರಡಿದೆ. ಭಕ್ತರುಗಳ ಹೃದಯ ಕಮಲವೇ ಅವನ ದಿವ್ಯವಾದ ಆಸನವು. ಅವನದರ್ಶನೀಯ ಸ್ವರೂಪವು ಮನನಯನಾನಂದಕರವಾಗಿದೆ.

ಕಿಶೋರಾವಸ್ಥೆಯಲ್ಲಿರುವ ಭಗವಂತನು ಭಕ್ತಾನುಗ್ರಹ ಕಾತುರನಾಗಿ ಇದ್ದಾನೆ-ಅವನು ಸರ್ವಲೋಕನಮಸ್ಕೃತನು. ಕೀರ್ತನೀಯ ಯಶೋವಂತನು, ಪರಮ ಯಶಸ್ವಿ ರಾಜರುಗಳಾದ ಬಲಿ ಇತ್ಯಾದಿ ರಾಜರುಗಳ ಯಶಸ್ಸನ್ನೂ ಅಭಿವೃದ್ಧಿ ಪಡಿಸುವವನು. ಇಂತಹ ದೇವಾದಿದೇವನಾದ ನಾರಾಯಣನ ಅಂಗಧ್ಯಾನವನ್ನು ಮಾಡುತ್ತಿರಬೇಕು, ಚಿತ್ತವು ಅಲ್ಲಿಂದ ಚಲಿಸಬಾರದು, ತಮ್ಮ ತಮ್ಮ ರುಚಿಗನುಗುಣವಾಗಿ-ಸ್ಥಿರನಾಗಿರುವ, ನಡೆಯುತ್ತಿರುವ ಕುಳಿತಿರುವ, ಮಲಗಿರುವ, ಪರಮಾತ್ಮನಸ್ವರೂಪವನ್ನು ಚಿಂತಿಸಬೇಕು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಚಿಂತಿಸುತ್ತಾ ಚಿತ್ತವು ಭಗವದಾಕಾರವಾದ ಮೇಲೆ ಅವನ ಸರ್ವಾಂಗಗಳಲ್ಲಿ ಕುಳಿತಿರುವ ಮನಸ್ಸನ್ನು ಒಂದು ಅಂಗದಲ್ಲಿ ಕ್ರೋಢೀಕರಿಸಬೇಕು.

ಸಂಚಿತಯೇದ್ಭಗವ ಶ್ಚರಣಾರವಿಂದಂ
ವಜ್ರಾಂಕುಶ ಧ್ವಜಸರೋರುಹಲಾಂಛನಾಢ್ಯಂ,
ಉತ್ತುಂಗ ರಕ್ತ ವಿಲಸನ್ನಖ ಚಕ್ರವಾಲ-
ಜ್ಯೋತ್ಸ್ನಾಭಿರಾಹತ ಮಹದ್ಧೃದಯಾಂಧಕಾರಮ್||

ವಜ್ರಾಂಕುಶ ಧ್ವಜ ಸರೋರುಹ ಲಾಂಛನಾಢ್ಯವಾದ ಭಗವಂತನ ಚರಣಾರವಿಂದದ ನಖಚಂದ್ರ ಮಂಡಲದ ಕಾಂತಿಯಿಂದ ಭಕ್ತರ ಹೃದಯಾಂಧಕಾರವು ದೂರೀಕರಿಸಲ್ಪಡುತ್ತಿದೆ. ಈ ಪಾದಗಳ ಪ್ರಕ್ಷಾಳನೆಯಿಂದ ಗಂಗೆಯು ಆವಿರ್ಭಾವವಾಯಿತು. ಅದನ್ನು ಶಿರಸ್ಸಿನಲ್ಲಿ ಧರಿಸುವುದರಿಂದ ಶಿವನು ಗಂಗಾಧರನಾದನು. ಧ್ಯಾನಿಸುವ ಭಕ್ತರ ಪಾಪರೂಪ ಪರ್ವತಗಳನ್ನು ಭೇದಿಸುವುದರಲ್ಲಿ ಇಂದ್ರನವಜ್ರಾಯುಧದಂತಿರುವ ಭಗವತ್ಪಾದ ಪದ್ಮಗಳನ್ನು ಚಿರಕಾಲ ಧ್ಯಾನಿಸುತ್ತಿರಬೇಕು. ವಿಶ್ವವಿಧಾತಾ ಬ್ರಹ್ಮನ ತಾಯಿ ದೇವಾದಿದೇವ ವಂದಿತೆ, ಕಮಲ ಲೋಚನೆ ಮಹಾಲಕ್ಷ್ಮಿಯು, ತನ್ನ ತೊಡೆಗಳ ಮೇಲೆ ಭಗವಂತನ ಜಾನುದ್ವಯಗಳನ್ನಿಟ್ಟುಕೊಂಡು, ತನ್ನ ಕಮಲ ಪಾಣಿಗಳಿಂದ ಸದಾ ಸೇವಿಸುತ್ತಿರುತ್ತಾಳೆ. ಇಂತಹ ಪರಮಾತ್ಮನ ಜಾನುದ್ವಯಗಳನ್ನು ಧ್ಯಾನಿಸುವುದರಿಂದ ಭವ ಬಾಧೆಯು ದೂರವಾಗುವುದು.

ಭಗವಂತನ ಊರುಗಳು ಅತಸಿ ಪುಷ್ಪದಂತೆ ನೀಲವರ್ಣವಾಗಿವೆ. ಹಾಗೂ ಅತ್ಯಂತ ಬಲಶಾಲಿಗಳು. ಗರುಡನ ಬೆನ್ನಿನ ಮೇಲೆ ಶೋಭಾಯಮಾನವಾಗಿವೆ. ಅವನ ನಿತಂಬ ಪ್ರದೇಶವು ಕುತ್ತಿಗೆಯಿಂದ ಇಳಿಬಿದ್ದಿರುವ ಪೀತಾಂಬರದಿಂದ ಮುಚ್ಚಲ್ಪಟ್ಟಿದೆ. ಪೀತಾಂಬರದ ಮೇಲೆ ಧರಿಸಿರುವ ಕಾಂಚಿ ಕಲಾಪಗಳು ಶೋಭಿಸುತ್ತಿವೆ. ಅವನ ನಾಭಿ ಪ್ರದೇಶದಿಂದ ಬ್ರಹ್ಮನಿಗೆ ಆಧಾರ ಭೂತವಾದ ಕಮಲವು ಆವಿರ್ಭವಿಸಿತ್ತು. ಅವನ ಸ್ತನ ದ್ವಯಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಮರ ಕತ ಮಣಿ ಸದೃಶಗಳಾಗಿವೆ. ವೃಕ್ಷ ಸ್ಥಳದಲ್ಲಿ ಧರಿಸಿರುವ ರತ್ನಹಾರಗಳ ಕಿರಣಗಳಿಂದ ಗೌರವರ್ಣಗಳಾಗಿ ಕಾಣುತ್ತಿವೆ. ಅವನ ವೃಕ್ಷ ಸ್ಥಳದಲ್ಲಿ ಸದಾ ಮಹಾಲಕ್ಷ್ಮಿಯು ವಾಸಮಾಡುತ್ತಿದ್ದಾಳೆ. ಅವನ ಕಂಠ ಪ್ರದೇಶವಂತೂ ಕೌಸ್ತುಭ ಮಣಿಗೂ ಸಹ ಶೋಭಾದಾಯಕವಾಗಿದೆ. ಎಲ್ಲದರ ತೇಜಸ್ಸನ್ನೂ ಹರಣಮಾಡುವ ಸಹಸ್ರ ಅಲುಗುಗಳುಳ್ಳ ಸುದರ್ಶನ ಚಕ್ರವು ರಾಜಹಂಸದಂತೆ ಅವನ ಕ ಕಮಲದಲ್ಲಿ ಪರಿಶೋಭಿಸುತ್ತಿದೆ. ಕೌಮೋದಕೀ ಗದೆಯು ಪರ ಪಕ್ಷ ವೀರರ ರಕ್ತದಿಂದ ರಂಜಿತವಾಗಿ ಶೋಭಿಸುತ್ತಿದೆ ಅವನುಧರಿಸಿರುವ ವನಮಾಲೆಯು ಭ್ರಮರಗಳ ಗುಂಜಾರವದಿಂದ ಆಕರ್ಷಣೀಯವಾಗಿದೆ. ಅವನ ವಕ್ಷ:ಸ್ಥಳದಲ್ಲಿರುವ ವನಮಾಲೆಯು ಭ್ರಮರಗಳ ಗುಂಜಾರವದಿಂದ ಆಕರ್ಷಣೀಯವಾಗಿದೆ. ಅವನ ವಕ್ಷ: ಸ್ಥಳದಲ್ಲಿರುವ ಕೌಸ್ತುಭಮಣಿಯು ಜೀವರ ನಿರ್ಮಲ ತತ್ವ ಸ್ವರೂಪವಾಗಿದೆ.

ಈ ಜಗತ್ತಿನ ನಿರ್ಲೇಪ - ನಿರ್ಗುಣ - ನಿರ್ಮಲ - ಸ್ವರೂಪಭೂತ ಆತ್ಮನನ್ನು ಕೌಂಸ್ತುಭಮಣಿಯ ರೂಪದಲ್ಲಿ ಧರಿಸಿದ್ದಾನೆ. ಭಗವಂತನು ಸಕಾರನಾಗಿರುವುದು ಭಕ್ತರುಗಳನ್ನು ಸಂತೋಷ ಪಡಿಸುವುದಕ್ಕಾಗಿ ಅವನ ಮುಖ ಕಮಲವು ಕರ್ಣ ಕುಂಡಲಗಳ ಅತಿಶಯ ಕಾಂತಿಯಿಂದ ಹೊಳೆಯುತ್ತಿದೆ. ಅರುಣಕಪೋಲಗಳು ಮತ್ತಷ್ಟು ಶೋಭೆಯನ್ನು ಕೊಡುತ್ತಿವೆ. ಕಪ್ಪು ಕಪ್ಪಾದ ಮುಂಗುರುಳುಗಳಿಂದ ಮಂಡಿತವಾದ ಭಗವಂತನ ಮುಖ ಮಂಡಲವು ಭ್ರಮರಗಳಿಂದ ಸೇವ್ಯ ಮಾನವಾದ ಕಮಲ ಕೋಶವನ್ನೂ ತಿರಸ್ಕರಿಸುವಂತಿದೆ. ಹಾಗೂ ಆಕಮಲ ನಯನಗಳು ಕಮಲದ ಮೇಲೆ ಈಜಾಡುವ ಮತ್ಸ್ಯದ್ವಯದಂತೆ, ಪರಿಶೋಭಿಸುತ್ತಿವೆ. ಭ್ರುಕುಟಿಗಳಿಂದ ಪರಿಶೋಭಿತವಾದ ಭಗವಂತನ ಇಂತಹ ಮುಖಾರವಿಂದವನ್ನು ಮನಸ್ಸಿನಲ್ಲಿ ಆಲಸ್ಯರಹಿತನಾಗಿ ಧ್ಯಾನಿಸ ಬೇಕು. ಪ್ರೇಮ ಭರಿತ ಮಂದ ಹಾಸದಿಂದ ಕ್ಷಣೇ - ಕ್ಷಣೇ ವಿಸ್ತಾರವಾಗುತ್ತಿರುವ ಭಗವಂತನ ನೇತ್ರದ್ವಯಗಳನ್ನೂ, ಹೃದಯ ಗಹ್ವರದಲ್ಲಿ ಭಕ್ತಿಭಾವದಿಂದ ಧ್ಯಾನಿಸಬೇಕು. ಅವುಗಳಿಂದ ವಿಪುಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸಾದ ವರ್ಷಣವಾಗುತ್ತಿದೆ. ಭಕ್ತರ ತ್ರಿತಾಪಗಳನ್ನೂ ಶಾಂತಗೊಳಿಸುವುದಕ್ಕಾಗಿಯೇ ಅವುಗಳ ಪ್ರಕಟಣೆಯಾಗಿದೆ. ಅವನ ಹಾಸ್ಯವು, ಅವನನ್ನು ನಮಸ್ಕರಿಸುವ ಜನರ ದುಃಖಾಶ್ರುಸಾಗರವನ್ನು ಒಣಗಿಸುವುದಾಗಿದೆ.

ಮುನಿಸಂರಕ್ಷಣಾರ್ಥವಾಗಿ ಕಾಮದೇವನನ್ನು ಮೋಹಗೊಳಿಸಲು ಮಾಯೆಯಿಂದ ಶ್ರೀಹರಿಯು ಭ್ರೂಮಂಡಲಗಳನ್ನು ರಚಿಸಿದ್ದಾನೆ. ಭಕ್ತರು ತಮ್ಮ ಹೃದಯದಲ್ಲಿ ಶ್ರೀಹರಿಯು ಖಿಲ-ಖಿಲನೆ ನಗುತ್ತಿರುವನೆಂದು ಪ್ರೇಮದಿಂದ ಧ್ಯಾನಿಸಬೇಕು. ಅವನ ಚಿಕ್ಕ-ಚಿಕ್ಕ ದಂತ ಪಙ್ತಿಗಳ ಮೇಲೆ ತೊಂಡೆಯ ಹಣ್ಣಿನಂತೆ ಕೆಂಪಗಿರುವ ಅಧರೋಷ್ಠಗಳ ಕಾಂತಿಯು ಬಿದ್ದು ಕುಂದ ಪುಷ್ಪಗಳಂತೆ ಶೋಭೆಯುಹೊರಡುತ್ತಿದೆ ಹೀಗೆ ಭಕ್ತನು ಧ್ಯಾನಾಸಕ್ತನಾಪಿ ವಸ್ತ್ವಂತರ ಧ್ಯಾನಶೂನ್ಯನಾಗಿರಬೇಕು. ಹೀಗೆ ಧ್ಯಾನಿಸುವುದರಿಂದ ಸಾಧಕನಿಗೆ ಶ್ರೀಹರಿಯೊಡನೆ ಪ್ರೇಮ ಸಂಬಂಧವೇರ್ಪಡುವುದು. ಭಕ್ತಿಯ ಉದ್ವೇಗದಿಂದ ಹೃದಯವು ದ್ರವಿಸುವುದು. ಶರೀರದಲ್ಲಿ ಆನಂದಾತಿರೇಕದಿಂದ ರೋಮಾಂಚನವಾಗುವುದು. ಪ್ರೇಮಾಶ್ರುಪ್ರವಾಹದಿಂದ ದೇಹವು. ಒದ್ದೆಯಾಗುವುದು.

ಮತ್ಸ್ಯವನ್ನು ಹಿಡಿಯುವಗಾಳದಂತೆ,ಶ್ರೀಹರಿಯನ್ನು ತನ್ನ ಕಡೆಗೆ ಆಕರ್ಷಿಸಲು ಸಾಧನರೂಪವಾದ ಚಿತ್ತವನ್ನು ನಿಧಾನವಾಗಿ ಧ್ಯೇಯ ವಸ್ತುವಿನ ಕಡೆಗೆ ನುಗ್ಗಿಸಬೇಕು. ಎಣ್ಣೆಯು ಮುಗಿದಮೇಲೆ ದೀಪಜ್ವಾಲೆಯು ತೇಜಸ್ತತ್ವದಲ್ಲಿ ಲೀನವಾಗುವಂತೆ ಮನಸ್ಸು. ಆಶ್ರಯ, ವಿಷಯ, ರಾಗ ರಾಹಿತ್ಯವನ್ನು ಪಡೆದು ಶಾಂತವಾಗಿ ಬ್ರಹ್ಮಾಕಾರವಾಗುತ್ತದೆ. ಈ ಅವಸ್ಥೆಯನ್ನು ಹೊಂದಿದ ಜೀವನಗುಣ ಪ್ರವಾಹ ರೂಪವಾದ ದೇಹಾದ್ಯುಪಾಧಿಗಳಿಂದ ನಿವೃತ್ತನಾಗಿ ಧ್ಯಾತಾ,ಧ್ಯೇಯ,ಧ್ಯಾನ, ಈ ವಿಭಾಗರಾಹಿತ್ಯವನ್ನು ಪಡೆದು ಅಖಂಡ ಪರಮಾತ್ಮನನ್ನೇ ಕಾಣುತ್ತಾನೆ, ಯೋಗಾಭ್ಯಾಸದಿಂದ ಪ್ರಾಪ್ತವಾದ ಚಿತ್ತದ ಈ ಅವಿದ್ಯಾರಹಿತ ಲಯರೂಪ ನಿವೃತ್ತಿಯಿಂದ ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಖ ದುಃಖರಹಿತವಾದ ಬ್ರಹ್ಮಸ್ಥಿತಿಯಲ್ಲಿ ಸ್ಥಿತನಾಗಿ ಪರಮಾತ್ಮ ತತ್ವ ಸಾಕ್ಷಾತ್ಕಾರಿಯಾಗುತ್ತಾನೆ. ನಂತರ ಯಾವ ಸುಖ ದುಃಖಗಳ ಭೋಕ್ತೃತ್ವವನ್ನು ಮೊದಲು ಅಜ್ಞಾನದಿಂದ ತನ್ನ ಸ್ವರೂಪದಲ್ಲಿ ನೋಡುತ್ತಿದ್ದನೋ ಅದನ್ನು ಈಗ ಅವಿದ್ಯಾಕೃತ ಅಹಂಕಾರದಲ್ಲಿ ನೋಡುತ್ತಾನೆ.

ಮದಿರಾ ಮತ್ತ ಪುರುಷನಿಗೆ ಮೈಮೇಲಿನ ಬಟ್ಟೆಯು ಜಾರಿತೋ ಇಲ್ಲವೋ ಎನ್ನುವುದೂ ತಿಳಿಯದಿರುವಂತೆ, ಚರಮಾವಸ್ಥೆಯನ್ನು ತಲಪಿದ ಸಿಧ್ಧ ಪುರುಷನಿಗೆ, ತನ್ನ ದೇಹವು ಏಳುತ್ತದೆ, ಕೂರುತ್ತದೆ, ಬರುತ್ತದೆ, ಹೋಗುತ್ತದೆ ಯಾವುದರ ಜ್ಞಾನವೂ ಇರುವುದಿಲ್ಲ. ಸದಾ ಪರಮಾನಂದ ಸ್ವರೂಪದಲ್ಲಿ ಮಗ್ನನಾಗಿರುತ್ತಾನೆ, ಅವನ ಶರೀರವಾದರೋ ಪೂರ್ವಜನ್ಮ ಸಂಚಿತ ಸಂಸ್ಕಾರಾಧೀನವಾಗಿದೆ. ಆಪ್ರಾರಭ್ಧವಿರುವವರೆಗೆ ಆ ದೇಹೇಂದ್ರಿಯಗಳೊಡನೆ ಜೀವಿಸುತ್ತಿರುತ್ತಾನೆ. ಸಮಾಧಿಪರ್ಯಂತ ಸಿಧ್ಧನಾಗಿರುತ್ತಾನೆ. ಪರಮಾತ್ಮ ತತ್ತ್ವಸ್ವರೂಪಿಯಾಗಿ ಸ್ವಾಪ್ನಿಕಶರೀರದಂತೆ ಪುನಃ ಶರೀರಗ್ರಹಣವನ್ನು ಮಾಡುವುದಿಲ್ಲ, ಅವನಿಗೆ ಅಹಂತಾ-ಮಮತಾಗಳು ಪೂರ್ಣ ನಿವೃತ್ತವಾಗಿರುತ್ತದೆ. ಜೀವರಿಗೆ ಸ್ವಭಾವತಃ ಗೃಹಾರಾಮಾದಿಗಳ ಆಸಕ್ತಿಯು ಬಹಳವಾಗಿರುತ್ತದೆ. ಆದರೆ ಅವುಗಳಿಂದ ನಾವು ಖಂಡಿತ ಬೇರೆ ಎನ್ನುವುದು ವಿಚಾರಿಸಿದರೆ ಅರ್ಥವಾಗುತ್ತದೆ. ಹಾಗೆಯೇ ಸಾಕ್ಷಿಸ್ವರೂಪನ ಆತ್ಮನು ಎಲ್ಲಾ ದೇಹಾದಿಸಂಬಂಧಗಳಿಂದಲೂ ಪೃಥಕ್ಕಾಗಿರುತ್ತಾನೆ. ಉರಿಯುವ ಇಂಧನದಿಂದ, ಅಗ್ನಿಕಣಗಳಿಂದ, ಅಗ್ನಿಯಿಂದಲೇ ಹುಟ್ಟಿರುವ ಹೊಗೆಯಿಂದಲೂ ಸಹ, ಅಗ್ನಿಯು ಪೃಥಕ್ಕಾಗಿರುವಂತೆ ಇಂದ್ರಿಯಾಂತಃಕರಣಗಳಿಂದ ಸಾಕ್ಷೀ ಆತ್ಮನು ಪೃಥಕ್ಕಾಗಿರುತ್ತಾನೆ. ಜೀವಾತ್ಮನಿಂದಲೂ ಬ್ರಹ್ಮನು ಪರನು. ಪ್ರಕೃತಿಯಿಂದ ಪರನಾಗಿ ಸರ್ವಸಂಚಾಲಕನಾಗಿದ್ದಾನೆ. ದೇಹದೃಷ್ಟಿಯಿಂದ ಜರಾಯುಜ, ಅಂಡಜ, ಸ್ವೇದಜ, ಉಧ್ಭಿಜಾದಿಗಳು, ಎಲ್ಲಾ ಪ್ರಾಣಿಗಳೂ ಪಂಚ ಭೂತಮಾತ್ರಗಳೇ, ಸರ್ವ ಜೀವಿಗಳಲ್ಲಿ ಆತ್ಮನನ್ನೂ, ಆತ್ಮನಲ್ಲಿ ಸರ್ವ ಜೀವಿಗಳನ್ನೂ ನಿರೀಕ್ಷಿಸಬೇಕು. ಅಗ್ನಿಯು ಒಂದೇ ಆದರೂ, ಆಶ್ರಯಿಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಭಿನ್ನತೆಯ ಕಾರಣದಿಂದ ಭಿನ್ನ-ಭಿನ್ನ ಆಕಾರದಲ್ಲಿ ತೋರುವಂತೆ ದೇವ ಮನುಷ್ಯಾದಿ ಶರೀರಗಳಲ್ಲಿ ಇರುವ ಒಬ್ಬನೇ ಆದ ಆತ್ಮನು ಆಶ್ರಯಗಳ ಭಿನ್ನತೆಯಿಂದ ಭಿನ್ನ-ಭಿನ್ನ ರೂಪದಿಂದ ಪ್ರಕಾಶಿಸುತ್ತಾನೆ.

ಭಗವದ್ಭಕ್ತನು ಜೀವ ಸ್ವರೂಪದ ಆವರಣವಾದ, ಈ ಕಾರ್ಯ ಕಾರಣರೂಪೀ ಪರಿಣಾಮವನ್ನು ಹೊಂದಿರುವ ಪರಮಾತ್ಮನ ಅಚಿಂತ್ಯಶಕ್ತಿ ಮಯಿಮಾಯೆಯನ್ನು ಭಗವಂತನ ಕೃಪೆಯಿಂದಲೇ ದಾಟಿ, ಭಗವಂತನ ವಾಸ್ತವಿಕ ಸ್ವರೂಪವನ್ನು ತಿಳಿದು ಬ್ರಹ್ಮರೂಪದಲ್ಲಿ ಸ್ಥಿರನಾಗ ಬೇಕು.

ಓಂ ತತ್ಸದಿತ್ಯೇವಂ ತೃತೀಯಸ್ಕಂಧೇ ಅಷ್ಟಾವಿಂಶೋಽಧ್ಯಾಯ

ಶ್ರೀಮದ್ಭಾಗವತದರ್ಶನ, ಸ್ಕಂಧ ೩-ಅ ೨೯
ಭಕ್ತಿರಹಸ್ಯ, ಕಾಲಮಹಿಮೆ

ದೇವಹೂತಿಯು ಕೇಳುತ್ತಾಳೆ-ಪ್ರಭೋ ಇಲ್ಲಿಯವರೆಗೆ ನೀನು ಪ್ರಕೃತಿ-ಪುರುಷ-ಮಹತ್ತತ್ತ್ವಾದಿಗಳ ಲಕ್ಷಣಗಳನ್ನು ಸಾಂಖ್ಯೋಕ್ತ ಪ್ರಕಾರವಾಗಿ ತಿಳಿಸಿರುವೆ. ಭಕ್ತಿಯೋಗದ ಪ್ರಯೋಗವನ್ನು ಹೇಳಿರುವೆ. ಈಗ ಭಕ್ತಿ ಯೋಗದ ಮಾರ್ಗವನ್ನು ವಿಸ್ತಾರವಾಗಿ ತಿಳಿಸು. ಹಾಗೂ ಜೀವರ ಜನ್ಮ-ಮರಣ ರೂಪೀ ಗತಿಗಳನ್ನೂ ವರ್ಣಿಸು. ಇವುಗಳನ್ನು ಕೇಳುವುದರಿಂದ ಜೀವಿಗಳಿಗೆ ಸಾಂಸಾರಿಕ ವಸ್ತುಗಳಲ್ಲಿ ವೈರಾಗ್ಯವು ಮೂಡುವುದು. ಇದರಿಂದ ಜನರು ಶುಭಕರ್ಮ ಪ್ರವೃತ್ತರಾಗುತ್ತಾರೆ. ಬ್ರಹ್ಮಾದಿಗಳ ಮೇಲೂ ಶಾಸನ ಮಾಡುವ ಸರ್ವ ಸಮರ್ಥ ಕಾಲನ ಸ್ವರೂಪವನ್ನೂ ವರ್ಣಿಸು. ಜೀವಿಗಳಿಗೆ ಜ್ಞಾನದೃಷ್ಟಿಯು ಲುಪ್ತವಾಗಿ, ದೇಹಾದಿ ಮಿಥ್ಯಾವಸ್ತುಗಳಲ್ಲಿ ಆತ್ಮಾಭಿಮಾನವು ಮೂಡಿದೆ. ಹಾಗೂ ಬುದ್ಧಿಯು ಕರ್ಮಾಸಕ್ತವಾಗಿರುವುದ ರಿಂದ ಬಹಳ ಬಳಲಿ, ಅಂಧಕಾರಮಯ ಸಂಸಾರದಲ್ಲಿ ಮಲಗಿದ್ದಾರೆ. ಅವರನ್ನು ಎಚ್ಚರಗೊಳಿಸಲು ಯೋಗಪ್ರಕಾಶಕ ಸೂರ್ಯನಾದ ನೀನು ಪ್ರಕಟನಾಗಿರುವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೈತ್ರೇಯರು.- ಹೇಳುತ್ತಾರೆ- ಕುರುಶ್ರೇಷ್ಠನಾದ ವಿದುರನೇ, ತಾಯಿಯ ಈ ಪ್ರಶ್ನೆಗಳಿಂದ ಅತಿ ಪ್ರಸನ್ನನಾದ ಭಗವಂತನು ತಾಯಿಯನ್ನು ಪ್ರಶಂಸಿಸುತ್ತಾ ಜೀವರ ವಿಷಯದಲ್ಲಿ ಅನುಕಂಪಯುಕ್ತನಾಗಿ ಹೇಳುತ್ತಾನೆ-ಅಮ್ಮ-ಸಾಧಕರ ಭಾವನಾನುಗುಣವಾಗಿ ಭಕ್ತಿಯೋಗವೂ ಅನೇಕ ಪ್ರಕಾರವಾಗಿದೆ. ಸ್ವಭಾವ-ಗುಣಭೇದಗಳಿಗನುಗುಣವಾಗಿ, ಮನುಷ್ಯರ ಭಾವನೆಗಳಲ್ಲಿ ವಿಭಿನ್ನತೆಯು ತೋರುವುದು ಸಹಜವಾಗಿದೆ. ಯಾವ ಭೇದದರ್ಶಿ ಕ್ರೋಧಿಪುರುಷನು ಹೃದಯದಲ್ಲಿ ಹಿಂಸಾ-ದಂಭ-ಮಾತ್ಸರ್ಯ ಗಳನ್ನಿಟ್ಟುಕೊಂಡು ನನ್ನನ್ನು ಭಜಿಸುವನೋ ಅವನು ತಾಮಸ ಭಕ್ತನು ಯಾರು ಐಶ್ವರ್ಯಾದಿ ಕಾಮನಾವಶನಾಗಿ, ಭೇದ ಭಾವದಿಂದ ನನ್ನನ್ನು ಪೂಜಿಸುವನೊ, ಅವನು ರಾಜಸನು, ಯಾರು ಪಾಪಕ್ಷಯಾರ್ಥವಾಗಿ, ಭಗವತ್ಪ್ರೀತ್ಯರ್ಥವಾಗಿ, ಭಗವದರ್ಪಣ ಬುದ್ಧ್ಯಾ ನನ್ನನ್ನು ಪೂಜಿಸುವನೋ ಅವನು ಸಾತ್ತ್ವಿಕಭಕ್ತನು ಸಾತ್ತ್ವಿಕ-ರಾಜಸ-ತಾಮಸ ಭೇದದಿಂದ ಶ್ರವಣಾದಿಧರ್ಮಗಳು೨೭ ಪ್ರಕಾರಗಳಾಗುತ್ತವೆ. ಆದರೆ ಇವುಗಳಲ್ಲಿ ನಿರ್ಗುಣ ಭಕ್ತಿಯು ಉತ್ತಮೋತ್ತಮವಾದುದು ಅದರ ಲಕ್ಷಣವನ್ನು ಹೇಳುತ್ತೇನೆ ಕೇಳು-

ಮದ್ಗುಣ ಶ್ರುತಿಮಾತ್ರೇಣ, ಮಯಿ ಸರ್ವಗುಹಾಶಯೇ।
ಮನೋಗತಿರವಿಚ್ಛಿನ್ನಾ, ಯಥಾಗಂಗಾಂಭಸೋಽಂಬುಧೌ.
ಲಕ್ಷಣಂ ಭಕ್ತಿಯೋಗಸ್ಯ, ನಿರ್ಗುಣಸ್ಯಹ್ಯುದಾಹೃತಮ್.
ಅಹೈತುಕ್ಯವ್ಯವಹಿತಾ ಯಾಭಕ್ತಿಃ ಪುರುಷೋತ್ತಮೇ॥

ನಿರ್ಗುಣವೆಂದರೆ ಸತ್ತ್ವಾದಿಗುಣತ್ರಯ ರಹಿತ ವಾದುದು, ಗುಣೇಭ್ಯೋ ನಿಷ್ಕ್ರಾಂತಃ ನಿರ್ಗುಣಃ ಭಕ್ತಿಯೋಗಃ, ಈ ಯೋಗವು ಗುಣಾತೀತವಾದುದು. ಆಶ್ಚರ್ಯವೆಂದರೆ ಈ ಯೋಗವೂ ಗುಣಗಳಿಂದಲೇ ಉಂಟಾಗುವುದು. ಅಂದರೆ ಭಗವದ್ಗುಣಾನುವಾದದ ಶ್ರವಣ ಮಾತ್ರದಿಂದ ಉಂಟಾಗುವುದು. ಇದರಲ್ಲಿ ಕರ್ತವ್ಯಾಂಶವೇನೂ ಇಲ್ಲವು. ಸಮಾಧಿಗೆ ಹೋಗಬೇಕಾದ್ದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜೋಪಾಸನಾದಿಗಳನ್ನು ಮಾಡಬೇಕಾದ್ದಿಲ್ಲ. ಕೇವಲ ಭಗವದ್ಗುಣ ಶ್ರವಣವಾಯಿತು. ಮನೋಗತಿಯು ಆಕಡೆಗೆ ನುಗ್ಗಿತು.-ಮಯಿಸರ್ವ **ಗುಹಾಶಯೇ,** ಸರ್ವ ಭೂತಾಂತಸ್ಥನಾಗಿ, ಸ್ವಬುದ್ಧಿಸ್ಥನಾದ ಭಗವಂತನ ಕಡೆಗೆ. ನಿಜವಾದ ಭಕ್ತಿಯು ಉದಿಸಿದೊಡನೆ, ಭಕ್ತಿಧಾರೆಯು ಹೃದಯದಲ್ಲಿ ಹರಿಯುತ್ತಾ, ಭಗವಚ್ಚರಣಾರವಿಂದಗಳ ಮೇಲೆ ಬೀಳುತ್ತದೆ. **'ಮನೋ ಗತಿರವಿಚ್ಛಿನ್ನಾ'**-ಹೇಗೆ ಬೀಳುತ್ತದೆ? ಅವಿಚ್ಛಿನ್ನಗತಿಯಿಂದ, ತೈಲಧಾರಾವತ್ ಗಂಗಾ ಪ್ರವಾಹವು ಸಮುದ್ರಕ್ಕೆ ಬೀಳುವಂತೆ, ಭಗವತ್ಕಥಾ ಶ್ರವಣಮಾತ್ರ ದಿಂದ ಭಕ್ತಿಯು ಅವತರಿಸುತ್ತದೆ. ಶ್ರೀಮಧುಸೂದನ ಸರಸ್ವತಿಗಳು ಭಕ್ತಿಯ ಲಕ್ಷಣವನ್ನು ಹೀಗೆ ಹೇಳುತ್ತಾರೆ-

ದ್ರುತಸ್ಯ ಭಗವದ್ಧರ್ಮಾತ್- ಧಾರಾವಾಹಿಕತಾಂಗತಾ,
ಸರ್ವೇಶೇಮನಸೋವೃತ್ತಿಃ, ಭಕ್ತಿರಿತ್ಯಭಿಧೀಯತೇ.

ನಮ್ಮ ಹೃದಯವು ದ್ರವಿತವಾಗಬೇಕು, ಕರಗಿ ಹೋಗಬೇಕು, ಪ್ರಾಪಂಚಿಕ ಮಮತೆಯು ಅಳಿದು ಹೋಗ ಬೇಕು. ಕಠೋರತೆಯು ನಿವೃತ್ತವಾಗಬೇಕು ಗಂಗೆಯ ಪ್ರತಿ ಒಂದು ಅಲೆಯೂ, ಸಮುದ್ರಾಭಿಮುಖ ವಾಗುವಂತೆ ನಮ್ಮ ಪ್ರವೃತ್ತಿಯ ಪ್ರತ್ಯೇಕ ತರಂಗವೂ ಭಗವಂತನನ್ನು ವಿಷಯೀಕರಿಸ ಬೇಕು. ಇದುಗುಣಾತೀತ ಭಕ್ತಿ, ಇದರಲ್ಲಿ ಎರಡು ವಿಚಾರಗಳಿವೆ. **"ಅಹೈತುಕೀ. ಅವ್ಯವಹಿತಾ, ಅಹೈತುಕೀ-ಫಲಾನುಸಂಧಾನಶೂನ್ಯಾ."** ಈ ಶಬ್ದಕ್ಕೆ ಎರಡು ಅರ್ಥಗಳುಂಟು, ಮತ್ತೊಬರ ಹೇಳಿಕೆಯಿಂದ, ಮತ್ತೊಬ್ಬರಿಂದ ಪ್ರೇರಿತನಾಗಿ, ಭಕ್ತಿಯನ್ನು ಮಾಡದಿರುವುದು. ವಿಶೇಶ ಪ್ರಯೋಜನದ ಸಿದ್ಧಿ ಗಾಗಿ ಭಕ್ತಿಯನ್ನು ಮಾಡದಿರುವುದು. ಅಂದರೆ-ಬಾಹ್ಯ ಪ್ರೇರಣೆಯಿಂದ ಭಕ್ತಿಯುಹುಟ್ಟಿರಬಾರದು. ಹಾಗೂ ವಿಶೇಷ ಪ್ರಯೋಜನ ಸಿಧ್ಧಿಗಾಗಿಯೂ ಭಕ್ತಿಯನ್ನು ಮಾಡಬಾರದು. ಇಂತಹ ಭಕ್ತಿಯನ್ನೆ ಅಹೈತುಕೀ-ಭಕ್ತಿ ಯೆಂದು ಹೇಳುತ್ತಾರೆ- ಅಹೈತುಕೀ-ಹೇತುರಹಿತ (ಕಾರಣ ರಹಿತ) ಕಾರಣ ಶಬ್ದಾರ್ಥದಲ್ಲಿ ಪ್ರೇರಣೆ-ಪ್ರಯೋಜನ ಎರಡುಇದೆ. ಅನ್ಯಪ್ರೇರಣೆಯಾಗಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನ್ಯಪ್ರಯೋಜನ ವಾಗಲಿ ಇರಬಾರದು. **ಅವ್ಯವಹಿತಾ**-ಭೇದದರ್ಶರಹಿತಾ. ಎಂದರೆ ವ್ಯವಧಾನ ರಹಿತ ವಾದುದು ಧಾರಾಪ್ರವಾಹದಂತೆ ನಿರಂತರವಾಗಿರುವುದು ಆದರ್ಶ ಭಕ್ತನ ವೈಶಿಷ್ಟ್ಯವೆಂದರೆ–ಸಾಯುಜ್ಯಾದಿ ಮುಕ್ತಿಗಳನ್ನೂ ಅವನು ಅಪೇಕ್ಷಿಸುವುದಿಲ್ಲ. **ಸಾಲೋಕ್ಯಂ**-ಭಗವತಾಸಹ ಏಕಸ್ಮಿನ್ ಲೋಕೇವಾಸಃ, **ಸಾರ್ಷ್ಟಿ**-ಭಗವತ್ಸಮಾನ ವೈಶ್ವರ್ಯಂ. **ಸಾಮಿಪ್ಯಂ**-ನಿಕಟವರ್ತಿತ್ವಂ. **ಸಾರೂಪ್ಯಂ**-ಸಮಾನರೂಪತಾ, ಸಾಯುಜ್ಯಂ-ಏಕತ್ವಂ. ಭಗವಂತನು ಹೇಳುತ್ತಾನೆ—ಭಕ್ತ ನಿನ್ನನ್ನು ನಾನು ನನ್ನ ಪಟ್ಟಣದಲ್ಲಿಯೇ ಇಟ್ಟುಕೊಳ್ಳುತ್ತೇನೆ. ನಿನ್ನನ್ನು ಈ ಬ್ರಹ್ಮಾಂಡದ ಅಧಿಕಾರಿಯನ್ನಾಗಿ ಮಾಡುತ್ತೇನೆ. ಭಕ್ತನು ಉತ್ತರಿಸುತ್ತಾನೆ ಬೇಡ ಪ್ರಭೋ ಬಹಳ ಕೆಲಸವನ್ನು ಮಾಡಬೇಕಾಗುತ್ತದೆ. "ಹೋಗಲಿ ಬಾ, ನನ್ನ ಬಳಿಯೇ ಸ್ವಸ್ಥನಾಗಿರು" ಬೇಡ, ಪ್ರಭೋ, ಅದೂರುಚಿಸುವುದಿಲ್ಲ" "ಹೋಗಲಿ, ನನ್ನಂತೆಯೆ ವೇಷ ಭೂಷಣಗಳನ್ನು ತೊಟ್ಟುಕೊ" "ಅದೂಬೇಡ" "ನನ್ನೊಡನೆ ಐಕ್ಯನಾಗಿ ಬಿಡು" "ಐಕ್ಯನಾಗಿ ಬಿಟ್ಟರೆ ಏನು ಉಳಿಯಿತು? ಕೊನೆಗೆ ಪ್ರಭುವು ಕೇಳುತ್ತಾನೆ ಹಾಗಾದರೆ ನೀನೇನು ಬಯಸುವೆ?

ಭಕ್ತನು ಹೇಳುತ್ತಾನೆ—ನಿನ್ನ ಸೇವೆಯನ್ನು ಬಿಟ್ಟು ಮತ್ತೇನೂ ರುಚಿಸುವುದಿಲ್ಲ. **"ವಿನಾಮತ್ಸೇವನಂಜನಾಃ"** ಕೇವಲ ನಿನ್ನ ಸೇವೆಯಿದ್ದರೆ ಸಾಕು ಎನ್ನುತ್ತಾರೆ. ಮುಕ್ತಿ ಎಂದರೆ ಪೆನ್ಶನ್ನಿನ ಹಾಗೆ, ಭಕ್ತನು ಯಾವಾಗಲೂ ನಿವೃತ್ತನಾಗಲು ಅಪೇಕ್ಷಿಸುವುದಿಲ್ಲ, ಪೆನ್ಶನ್ನನ್ನೂ ಬಯಸುವುದಿಲ್ಲ. ಹಾಗೆ ಬಯಸಿದರೆ ಅದು ಸಕಾಮ ಸೇವೆ ಯಾಗುತ್ತದೆ. ಬಹಳ ವರ್ಷ ಸೇವೆಮಾಡಿಯಾಯಿತು, ಈಗ ವಿಶ್ರಾಂತಿವೇತನವನ್ನು ಕೊಟ್ಟುಬಿಡಿ. ಸುಖವಾಗಿರುತ್ತೇನೆ ಎಂದು ಹೇಳಿದಹಾಗೆ. ಅಹೈತುಕೀ ಭಕ್ತಿಯು ತ್ರಿಗುಣಾತಿಕ್ರಮಿಯಾಗಿರುತ್ತದೆ. ನಿಷ್ಕಾಮ ಧರ್ಮವನ್ನು ವಿವೇಚಿಸುತ್ತಾ

ಭಗವಂತನು ಹೇಳುತ್ತಾನೆ– ಸ್ವಧರ್ಮ ಪರಿಪಾಲನೆಯು ಬಹಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೇಷ್ಠವಾದುದು. ವಸ್ತುತಃ-ತನ್ನ ಕಡೆಗೆ ತಾನು,ತನ್ನ ಆತ್ಮನ ಕಡೆಗೆ ತಾನು ಹಿಂತಿರುಗುವುದೇ-"**ಅಧ್ಯಾತ್ಮ ಯೋಗ**" ಆತ್ಮನನ್ನು ತಿಳಿಯುವುದೂ, ಆತ್ಮನೊಡನೆ ಐಕ್ಯವಾಗುವುದು "ಅಧ್ಯಾತ್ಮ ಯೋಗ" ಹೀಗೆ ಎರಡು ಅವಸ್ಥೆಗಳಿರುತ್ತವೆ. – ಸಿಕ್ಕಿಕೊಂಡಿರುವ ಸ್ಥಳದಿಂದ ವಾಪಸ್ಸು ಬರುವುದು, ಹಿಂತಿರುಗಿ ಪರಮಾತ್ಮನೊಡನೆ ಐಕ್ಯವಾಗುವುದು. ಅಧ್ಯಾತ್ಮ ಯೋಗದಲ್ಲಿ ರಾಗದ್ವೇಷಾದಿಗಳಿಲ್ಲ. ಸ್ವ-ಪರಗಳಿಲ್ಲ ಸಾಧನಾವಸ್ಥೆಯಲ್ಲಿ ನಾವು ಗಮನಿಸುತ್ತಿರಬೇಕು, ಇಂತಹ ಅನುಕೂಲಕರ ಸ್ಥಿತಿಯುಂಟಾಗುತ್ತಿದೆಯೋ ಇಲ್ಲವೋ?

ಕರ್ಮಾಚರಣೆಯು ಪವಿತ್ರವಾಗಿರುವುದು. ಯಾರಿಗೂ ದುಃಖವನ್ನುಂಟು ಮಾಡದಿರುವುದು, ದೇವತಾ ಮೂರ್ತಿಗಳ ಪೂಜೆ, ದರ್ಶನ, ಸ್ಪರ್ಶಾದಿಗಳು, ಸರ್ವಪ್ರಾಣಿಗಳಲ್ಲಿಯೂ ಭಗವದ್ಭಾವದರ್ಶನ, ಎಲ್ಲಿಯೂ ಆಸಕ್ತಿಯು ಬೆಳೆಯದಿರುವುದು ಗುರುಹಿರಿಯರನ್ನು ಸತ್ಕರಿಸುವುದು, ಇವೆಲ್ಲವೂ ಅಧ್ಯಾತ್ಮಯೋಗವೇ. ಮಾನವನಿಗೆ ಸರ್ವಾಂತರ್ಯಾಮಿ ಈಶ್ವರನ ಬಗ್ಗೆ ಶಿಕ್ಷಣವು ದೊರಕದಿದ್ದರೆ ಅವನು ಅಭಿಮಾನಿಯಾಗುವನು-ಮಹಾತ್ಮರನ್ನು ಆದರಿಸುವುದು, ದೀನರ ಮೇಲೆ ದಯೆಯಿಡುವುದು, ಸಮಾನರನ್ನು ಸ್ನೇಹದಿಂದ ಕಾಣುವುದು, ಯಮ ನಿಯಮಾದಿಗಳನ್ನು ಪಾಲಿಸುವುದು-ಅಧ್ಯಾತ್ಮ ಶಾಸ್ತ್ರಗಳನ್ನು ಶ್ರವಣಮಾಡುವುದು, ನಾಮ ಸಂಕೀರ್ತನೆಯನ್ನು ನಡೆಸುವುದು. ಸಾಧ್ಯವಾದಷ್ಟೂ ಸರಳ ನಾಗಿರುವುದು, ಅಭಿಮಾನವನ್ನು ತ್ಯಾಗಮಾಡಿ ಸತ್ಪುರುಷರನ್ನು ಸೇವಿಸುವುದು, ಇತ್ಯಾದಿಗಳಿಂದ ಮನುಷ್ಯನ ಹೃದಯವು ಶುದ್ಧವಾಗುವುದು. ಆಗ ಶ್ರವಣ ಮಾತ್ರದಿಂದ ಭಕ್ತಿಯುಂಟಾಗುವುದು. ಯಾವರೀತಿಯಲ್ಲಿ ಗಂಧವು ವಾಯುವಿನಲ್ಲಿ ಬಂದು ಮೂಗನ್ನು ಪ್ರವೇಶಿಸುತ್ತದೊ ಅಂತಯೆ ಭಕ್ತಿ ತತ್ಪರನಾದವನು ಪರಮಾತ್ಮನನ್ನು ಪಡೆಯುತ್ತಾನೆ- ಭಗವಂತನು ಹೇಳುತ್ತಾನೆ.

ಅಹಂ ಸರ್ವೇಷು ಭೂತೇಷು, ಭೂತಾತ್ಮಾವಸ್ಥಿತ : ಸದಾ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾವಿಡಂಬನಮ್

ನಾನು ಸರ್ವ ಪ್ರಾಣಿಗಳಲ್ಲಿಯೂ ಆತ್ಮ ಸ್ವರೂಪನಾಗಿದ್ದೇನೆ. ಮಾನವನು ಆ ಪ್ರಾಣಿಯನ್ನು ತಿರಸ್ಕರಿಸಿ ಪ್ರತಿಮಾದಿಗಳಲ್ಲಿ ನನ್ನನ್ನು ಪೂಜಿಸುವುದಾದರೆ ಅದು ಕೇವಲ ತೋರಾಣಿಕೆಯ ಪೂಜೆಯಾಗುವುದು. ಸರ್ವ ಹೃದಯ ಸ್ಥಿತನಾದ ನನ್ನನ್ನು ಬಿಟ್ಟು ಮೂರ್ತಿ ಪೂಜೆಯನ್ನು ಮಾಡುವುದಾದರೆ, ಬೂದಿಯಲ್ಲಿ ಹೋಮವನ್ನು ಮಾಡಿದಂತೆ, **ನಿ**ಷ್ಫಲವೇ ಆಗುವುದು. ಕರ್ಮಕಾಂಡದ ನಿಯಮಾನುಸಾರವಾಗಿಯೂ; ಪ್ರಜ್ವಲಿತ ಅಗ್ನಿಯಲ್ಲಿಯೇ ಹೋಮ ಮಾಡಬೇಕೇ ಹೊರತು, ಅಗ್ನಿಯು ಆರಿದ ಮೇಲೆ ಹೋಮವನ್ನು ಮಾಡಿದರೆ ಪುಣ್ಯಪ್ರಾಪ್ತಿಯಿಲ್ಲ. ಸರ್ವ ಪ್ರಾಣಿಗಳಲ್ಲಿಯೂ ಭಗವದ್ಭಾವನೆಯನ್ನು ಇಡುವುದರಿಂದ, ಭಗವದಾರಾಧನೆಯು ನಡೆಯುತ್ತದೆ. ಅಭಿಮಾನಿಗಳು, ಪರದ್ವೇಷವನ್ನು ಸಾಧಿಸುತ್ತಾ ಭಗವಂತನನ್ನು ಆರಾಧಿಸುವುದಾದರೆ ಅವರಿಗೆ ಶಾಂತಿಯು ದೊರಕುವುದಿಲ್ಲ.

ಮುಖ್ಯವಾಗಿ ಎಲ್ಲರೂ ಗಮನಿಸಬೇಕಾದ ವಿಚಾರವಿದು— ಮೊಸಳೆ, ಸರ್ಪ ಯಾವುದರೊಡನೆಯಾದರೂ, ನೀವು ದ್ವೇಷವನ್ನಿಟ್ಟುಕೊಂಡರೆ ಆ ದ್ವೇಷರೂಪೀ ವಿಷವು ನಿಮ್ಮ ಹೃದಯದಲ್ಲಿಯೇ ಇರುವುದು. ಅಂದ ಮೇಲೆ ಎಷ್ಟೇ ವೈಭವೋಪೇತವಾದ ಭಗವತ್ಪೂಜೆಯನ್ನು ನಡೆಸಿದರೂ, ಆ ದ್ವೇಷ-ವಿಷಪೂರಿತವಾದ ಹೃದಯದಲ್ಲಿ ಭಕ್ತಿ ಪ್ರೇಮಗಳ ಸ್ರೋತವು ಹೇಗೆ ತಾನೇ ಹರಿದೀತು? ಆ ಪೂಜೆಯಿಂದ ಭಗವಂತನ ಪ್ರಸನ್ನತೆಯು ದೊರಕಲಾರದು. ಈಗ ಮೂರ್ತಿ ಪೂಜೆಯ ರಹಸ್ಯವನ್ನು ಭಗವಾನ್ ಕಪಿಲರು ಹೇಳುತ್ತಾರೆ.

ಅರ್ಚಾದಾವರ್ಚಯೇತ್ತಾವತ್, ಈಶ್ವರಂ ಮಾಂ ಸ್ವಕರ್ಮಕೃತ್
ಯಾವನ್ನವೇದ ಸ್ವಹೃದಿ. ಸರ್ವಭೂತೇಷ್ವವಸ್ಥಿತಮ್.

ಈ ಶ್ಲೋಕದಿಂದ ಮೂರ್ತಿ ಪೂಜೆಯ ಉತ್ಕೃಷ್ಟತೆಯನ್ನು ಹೇಳುತ್ತಿದ್ದಾರೆ. ಸರ್ವ ಪ್ರಾಣಿಗಳಲ್ಲಿಯೂ, ಪರಮಾತ್ಮನ ಪೂರ್ಣದರ್ಶನವು ಆಗುವವರೆಗೆ-

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿಮಾದಿ ಪೂಜೆಗಳನ್ನು ಸ್ವಧರ್ಮಾನುಷ್ಠಾನದ ಮೂಲಕ ನಡೆಸುತ್ತಿರಬೇಕು. ತಾತ್ಪರ್ಯ ವಿಷ್ಟೆ-ಎಲ್ಲವನ್ನೂ,ಎಲ್ಲರನ್ನೂ ಗೌರವಿಸುತ್ತಾ ಮೂರ್ತಿ ಪೂಜೆಯನ್ನು ಮಾಡು. ಅಭಿಮಾನಿಯಾಗಬೇಡ. ಒಂದು ದಿವಸ ಪೂಜ್ಯವಲ್ಲಭಾಚಾರ್ಯರು ಭಗವದರ್ಚನೆಯನ್ನು ನಡೆಸುತ್ತಿದ್ದರು. ಓರ್ವ ಸಾಹುಕಾರನು ಹತ್ತುಸಾವಿರ ನಾಣ್ಯಗಳನ್ನು ಅವರಿಗೆ ಸಮರ್ಪಿಸಲು ತಂದನು. ಅವನು ಹೊರಗಡೆ ಕುಳಿತುಕೊಂಡು ಬಿಗುಮಾನದಿಂದ ಜನಗಳ ಮುಂದೆ ಎಣಿಸುತ್ತಾ 20-20ರಂತೆ ಸಾಲು ಸಾಲಾಗಿ ಇಡತೊಡಗಿದನು. ಅರ್ಚನೆಯನ್ನು ಮುಗಿಸಿ ಆಚಾರ್ಯರು ಹೊರಕ್ಕೆ ಬಂದು ಹೇಳಿದರು-ಸೇಠ್ ಜಿ, ನಮ್ಮ ಬಾಲಕೃಷ್ಣನು ನಿಮ್ಮ ಸೇವೆಯನ್ನು ಸ್ವೀಕರಿಸಲಾರ, ಅರ್ಪಣೆ ಮಾಡುವುದಕ್ಕೆ ಮುಂಚೆ ಆದರ ಶಬ್ದವನ್ನು ಬಹಳ ಜನರು ಕೇಳಿದ್ದಾರೆ. ಅದರಿಂದ ಆನಾಣ್ಯಗಳು ಮೈಲಿಗೆಯಾದವು. ಅವನ್ನು ಸ್ವೀಕರಿಸಲು ಸಾಧ್ಯವಿಲ್ಲ, ಎಂದು ಹೇಳಿ ಆ ಬೃಹತ್ ಕಾಣಿಕೆಯನ್ನು ಹಿಂತಿರುಗಿಸಿದರಂತೆ. ಇದರಿಂದ ನಾವು ಕೊಡುವುದರಲ್ಲಿ ಎಷ್ಟು ನಿರಭಿಮಾನಿಗಳಾಗಿರಬೇಕೆಂಬುವುದು ವ್ಯಕ್ತವಾಗುವುದು. ಸೇವಾ ಕಾರ್ಯವು ಬಹಳ ಕಠಿನವಾದುದು. ನಮ್ಮ ಧನಕನಕಾದಿಗಳನ್ನು ತೆಗೆದುಕೊಳ್ಳಬೇಕೆಂಬುವಷ್ಟು ಭಗವಂತನು ಬಡವನಲ್ಲ,ನಮ್ಮ ಸೇವಾದಿಗಳಿಲ್ಲದಿದ್ದರೆ ಆಗುವುದೇ ಇಲ್ಲ ಎನ್ನು ವಷ್ಟು ದೀನನೂ ಅಲ್ಲ. ನಮ್ಮ ನೈವೇದ್ಯವಿಲ್ಲದಿದ್ದರೆ ಏನಪ್ಪಗತಿ ಎನ್ನುವಷ್ಟು ಅವನುಹಸಿದಿಲ್ಲ. ನೀವು ಯಾರನ್ನಾದರೂ ತಿರಸ್ಕರಿಸಿದರೆ,ದ್ವೇಷಿಸಿದರೆ ಭಗವಂತನು ಕೇಳುತ್ತಾನೆ-ಏನಯ್ಯಾ ಆ ರೂಪದಲ್ಲಿ ಇದ್ದವನೂ ನಾನೇ.ಅವನನ್ನು ತಿರಸ್ಕರಿಸುವುದೆಂದರೆ ನನ್ನನ್ನೇ ತಿರಸ್ಕರಿಸಿದಂತೆ ನೀನು ನನ್ನ ಪೂಜೆಯನ್ನು ಮಾಡುವೆ, ಮತ್ತೊಂದು ಕಡೆಯಲ್ಲಿ ತಿರಸ್ಕಾರವನ್ನೂ ಮಾಡುವೆ, ಇದು ಯಾವ ಧರ್ಮ?

ಆತ್ಮನಶ್ಚ ಪರಸ್ಯಾಪಿ, ಯಃಕರೋತ್ಯಂತರೋದರಂ।
ತಸ್ಯಭಿನ್ನದೃಶೋಮೃತ್ಯುಃ, ವಿದಧೇ ಭಯ ಮುಲ್ಬಣಮ್॥

ಯಾರು ಆತ್ಮ-ಪರಮಾತ್ಮರ ಮಧ್ಯೆ ಸ್ವಲ್ಪವಾದರೂ ಭೇದ ಭಾವವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣುತ್ತಾರೋ, ಅವರು ಘೋರಮೃತ್ಯುರೂಪ ಭಯದಿಂದ ಗ್ರಸ್ತರಾಗುತ್ತಾರೆ.

ಶೃತಿಯು ಹೇಳುತ್ತದೆ– " **ಉದರಮಂತರಂಕುರುತೇ. ಅಥತಸ್ಯ ಭಯಂ ಭವತಿ,** "ಉದರ-ಎಂದರೆ ಸ್ವಲ್ಪ, ಸ್ವ-ಪರ ಎಂದು ಸ್ವಲ್ಪ ಭೇದ ಭಾವವನ್ನು ತಳೆದರೂ, ಮೃತ್ಯುವಿನ ಆಕ್ರಮಣಕ್ಕೆ ಒಳಗಾಗ ಬೇಕಾಗುವುದು. ಆದರಿಂದ ಎಲ್ಲೆಲ್ಲಿಯೂ, ಎಲ್ಲದರಲ್ಲಿಯೂ ಪರಮಾತ್ಮನಿರುವನೆಂದು ತಿಳಿ. ಸರ್ವ ದೇಹಗಳೂ ಪರಮಾತ್ಮನ ಆಲಯಗಳೇ, ನವಿಲೂ ಒಂದುಮನೆ, ಕೋಗಿಲೆಯೂ ಒಂದು ಮನೆ, ಕಾಗೆಯೂ ಒಂದು ಮನೆ, 82ಲಕ್ಷ ಮನೆ ಗಳುಂಟು, ಈ ಎಲ್ಲಾ ಮನೆಗಳ ಮಾಲೀಕನೂ ಒಬ್ಬನೇ. ಯಥಾಶಕ್ತಿ ದಾನ ಮಾನ-ಮೈತ್ರ್ಯಾದಿಗಳಿಂದ ಭಗವಂತನನ್ನು ಪೂಜಿಸಬೇಕು ಮೊದಲನೆಯ ದಾಗಿ ಅಭಿನ್ನದೃಷ್ಟಿ, ಎರಡನೆಯದಾಗಿ ಸರ್ವ ಮೈತ್ರಿ ಭಾವ, ಮೂರನೆಯ ದಾಗಿ, ಸತ್ಕಾರಕ್ರಿಯೆ. ನಾಲ್ಕನೆಯದಾಗಿ ಯಥಾಶಕ್ತಿ ದಾನ, ಈ ನಾಲ್ಕರಿಂದ ಸಮಗ್ರ ಪ್ರಪಂಚವನ್ನೂ ಭಗವತ್ ಸ್ವರೂಪವೆಂದು ತಿಳಿದು ಅರ್ಚಿಸಬೇಕು ಯದ್ಯಪಿಪ್ರಾಣಿಗಳಲ್ಲಿ ಶ್ರೇಷ್ಠತಾ-ಕನಿಷ್ಠತೆಯ ಕ್ರಮವೂ ಇದೆ. ಪಾಷಾಣಾದಿ ಅಚೇತನಗಳ ಅಪೇಕ್ಷಯಾ, ವೃಕ್ಷಾದಿಗಳು ಶ್ರೇಷ್ಠವು. ಅವುಗಳಿಗಿಂತ ಶ್ವಾಸ ಗತಿಯುಳ್ಳ ಪ್ರಾಣಿಗಳು. ರಸಗ್ರಾಹಿಗಳು, ಮತ್ಸ್ಯಾದಿಗಳು, ಭ್ರಮರಾದಿ ಗಂಧಗ್ರಾಹಿಗಳು, ಸರ್ಪಾದಿ ಶಬ್ದಗ್ರಾಹಿಗಳು, ರೂಪಗ್ರಾಹಿಗಳಾದ ಕಾಕಾದಿ ಗಳು, ಹಲ್ಲಿರುವ ಪ್ರಾಣಿಗಳು, ಬಹಳ ಪಾದಗಳುಳ್ಳವು, ನಾಲ್ಕುಕಾಲು ಗಳಿರುವುವು, ಎಲ್ಲವಕ್ಕಿಂತ ಎರಡು ಕಾಲುಗಳುಳ್ಳ ಮಾನವರು ಶ್ರೇಷ್ಠರು. ನಾಲ್ಕು ವರ್ಣದವರಲ್ಲಿ, ಬ್ರಾಹ್ಮಣರು, ಬ್ರಾಹ್ಮಣರಲ್ಲಿ ವೇದಜ್ಞರು, ಅವರಲ್ಲಿ ಆಚಾರ್ಯರು. ಅವರಲ್ಲಿಯೂ ನಿಷ್ಕಾಮ ಕರ್ಮ ಯೋಗಿಗಳು ಶ್ರೇಷ್ಠರು ಕೆಲವರು ವೇದದವಿದರಿದ್ದಾರೆ, ಒಬ್ಬನು ಚತುರ್ವೇದ ವಿದನಿದ್ದನು, ಅವನಿಗೆ ನಾಲ್ಕು ವೇದಗಳ ಹೆಸರುಗಳೂ ಗೊತ್ತು, ಮತ್ತೇನೂ ತಿಳಿಯದು. ಇಷ್ಟು ಮಾತ್ರದಿಂದ ವೇದವಿತ್ ಬ್ರಾಹ್ಮಣನಾಗುವುದಿಲ್ಲ, ಆಚಾರಸಂಪನ್ನನಾಗಿ ಭಗವದ್ಭಕ್ತನಾಗಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಋಗ್ವೇದದ ಒಂದು ಮಂತ್ರದಲ್ಲಿ ಹೇಳುವಂತೆ ಸರ್ವರಿಗೂ ಪ್ರಿಯಸಖ ನಾದ ಭಗವಂತನೊಡನೆ, ಗಾಢವಾದ ಮೈತ್ರೀಸಂಬಂಧವಿಲ್ಲದವನಿಗೆ ವೇದ ವಾಣಿ ಯನ್ನು ಉಚ್ಚರಿಸುವ ಅಧಿಕಾರ ವಿಲ್ಲ. ಕಪಿಲರು ಹೇಳುತ್ತಾರೆ–

ಮನಸೈತಾನಿ ಭೂತಾನಿ, ಪ್ರಣಮೇದ್ಬಹುಮಾನಯನ್,
ಈಶ್ವರೋ ಜೀವಕಲಯಾ, ಪ್ರವಿಷ್ಟೋ ಭಗವಾನಿತಿ.

ಜೀವರೂಪದಿಂದ ಸರ್ವರಲ್ಲಿಯೂ ಪರಮಾತ್ಮನಿರುವನೆಂದು ತಿಳಿಯಬೇಕು ಎಲ್ಲರನ್ನೂ ಗೌರವಿಸಿ ನಮಸ್ಕರಿಸ ಬೇಕು. -ಅಮ್ಮ ಹೀಗೆ ಭಕ್ತಿಯೋಗ ಅಷ್ಟಾಂಗ ಯೋಗಗಳನ್ನು ವರ್ಣಿಸಿದ್ದೇನೆ. ಇವುಗಳಲ್ಲಿ ಒಂದನ್ನು ಸಾಧಿಸಿದರೂ ಭಗವತ್ಪ್ರಾಪ್ತಿಯಾಗುತ್ತದೆ.

ಜಾಗತಿಕ ಪದಾರ್ಥಗಳ ನಾನಾ ವಿಧ ವೈಚಿತ್ರ್ಯತೆಗೆ ಹೇತುಭೂತ ವಾದ ಭಗವತ್ ಸ್ವರೂಪ ವಿಶೇಷವೇ **"ಕಾಲನು"** ಕಾಲನಾದರೊ ಭಗವಾನ್ ಪರಮಾತ್ಮ ಪರಬ್ರಹ್ಮ ನ ಅದ್ಭುತ ಪ್ರಭಾವ ಸಂಪನ್ನನು. ಪ್ರಕೃತಿ-ಪುರುಷರು ಇವನರೂಪವೇ ಪ್ರಕೃತಿ ಪುರುಷರಿಂದ ಪೃಥಕ್ಕಾಗಿಯೂ ಭಗವಂತನಿರು ತ್ತಾನೆ. ನಾನಾವಿಧಕರ್ಮಗಳ ಮೂಲ ಭೂತವಾದ "ಅದೃಷ್ಟನೇ" ಇವನು ಇವನಿಂದ ಸರ್ವ ಭೇದದರ್ಶಿ ಪ್ರಾಣಿಗಳಿಗೂ ಭಯವಿದ್ದೇ ಇರುತ್ತದೆ.

ಯಾರು ಸರ್ವಾಶ್ರಯನಾಗಿ, ಸರ್ವ ಕಾರ್ಯ ಕಾರಣನಾಗಿ, ಸರ್ವ ಪ್ರಾಣಿ ಹೃದಯಾಂತಃ ಪ್ರವಿಷ್ಟನಾಗಿ, ಸರ್ವ ಸಂಹಾರಕಾರಕನೂ ಆಗಿ ರುವನೋ, ಅವನು ಜಗಚ್ಛ್ಯಾಪನಕಾರರಾದ ಬ್ರಹ್ಮಾದಿಗಳಿಗೂ ಪ್ರಭುವು ಭಗವಾನ್ ಕಾಲನೇ ಸರ್ವಯಜ್ಞ ಫಲದಾಯಕನಾದ ಮಹಾವಿಷ್ಣುವು, ಇವನಿಗೆ ಯಾರೂ ಮಿತ್ರರಿಲ್ಲ, ಶತ್ರುಗಳಿಲ್ಲ, ಒಡಹುಟ್ಟಿದ ಸಂಬಂಧಿಕರೂ ಇಲ್ಲ ಇವನು ಸದಾ ಜಾಗರಣ ಶೀಲನು. ಯಾರು ಭಗವದ್ವಿಮುಖರಾಗಿ, ಭೋಗಾ ಸಕ್ತರಾಗಿರುವರೊ ಅವರ ಸಂಹಾರ ಕಾರಕನೂ ಇವನೇ. ಇವನ ಭಯ ದಿಂದ ವಾಯುವು ಚಲಿಸುತ್ತದೆ, ಇಂದ್ರನು ವರ್ಷಿಸುತ್ತಾನೆ, ನಕ್ಷತ್ರಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಳೆಯುತ್ತವೆ. ಸರ್ವೌಷಧಿ ವನಸ್ಪತಿಗಳು ಕಾಲ ಕಾ-ಲಕ್ಕೆ ಫಲ-ಪುಷ್ಪ ಭರಿತಗಳಾಗುತ್ತವೆ. ನದಿಗಳು ಹರಿಯುವುದು ಇವನ ಹೆದರಿಕೆ ಯಿಂದಲೇ, ಹಾಗೂ ಸಮುದ್ರಗಳು ಮೇರೆ ತಪ್ಪುವುದಿಲ್ಲ, ಅಗ್ನಿಯು ಜ್ವಲಿಸುತ್ತದೆ. ಸಪರ್ವತ ಕ್ಷಿತಿಯು ಜಲದಲ್ಲಿ ಮುಳುಗುವುದಿಲ್ಲ. ಇವನ ಶಾಸನನಾನು ಗುಣವಾಗಿ ಆಕಾಶವು ಎಲ್ಲಾ ಪ್ರಾಣಿಗಳ ಶ್ವಾಸ ಪ್ರಶ್ವಾಸಕ್ರಿಯೆಗೆ ಅವಕಾಶ ವನ್ನು ಕೊಡುತ್ತದೆ. ಹಾಗೂ ಮಹತ್ತತ್ತ್ವ- ಅಹಂಕಾರಾದಿ ಸಪ್ತ ಆವರಣ ಗಳಿಂದ ಯುಕ್ತವಾದ ಬ್ರಹ್ಮಾಂಡದ ರೂಪದಲ್ಲಿ ವಿಸ್ತಾರವನ್ನು ಹೊಂದುತ್ತದೆ, ಈ ಕಾಲಪುರುಷನ ಹೆದರಿಕೆಯಿಂದ ಸತ್ವಾದಿಗುಣಗಳ ನಿಯಾಮಕರಾದ ವಿಷ್ಣ್ವಾದಿ ದೇವಗಣಗಳು ಜಗದ್ರಚನಾದಿ ಕಾರ್ಯಗಳಲ್ಲಿ ಯುಗಾನುಗುಣ ವಾಗಿ ತತ್ಪರರಾಗಿರುತ್ತಾರೆ.

ಅವಿನಾಶಿಕಾಲನು ಸ್ವಯಂ ಅನಾದಿ, ಆದಿಕೃತ್, ಹಾಗೂ ಅವ್ಯಯನು. ಸ್ವಯಂ ಅನಂತ ನಾಗಿದ್ದುಕೊಂಡು ಮತ್ತೊಬ್ಬರ ಅಂತ ಕೃತ್ತನಾಗಿದ್ದಾನೆ. ಜನರನ್ನು ಜನರಿಂದಲೇ ಸೃಜಿಸುತ್ತಾ, ಜಗತ್ತನ್ನು ನಿರ್ಮಿಸುತ್ತಾನೆ. ಹಾಗೂ ಸಂಹಾರ ಶಕ್ತಿ ಮೃತ್ಯುದ್ವಾರಾ ಯಮರಾಜನಿಗೂ ಅಂತಕೃದಾಗಿದ್ದಾನೆ.

ಓಂ-ತತ್ಸದಿತ್ಯೈಸಂ ತೃತೀಯ ಸ್ಕಂಧೇ ಏಕೋನತ್ರಿಂಶಃಅಧ್ಯಾಯಃ.

ಶ್ರೀ ಭಾಗವತ ದರ್ಶನ - ಸ್ಕಂಧ - ೩ ಅ - ೩೦.
ಆಸಕ್ತ ಪುರುಷರ ಅಧೋಗತಿಯ ವರ್ಣನೆ.

ಭಗವಾನ್ ಕಪಿಲರು ಹೇಳುತ್ತಾರೆ-ಅಮ್ಮ, ಇಷ್ಟಾದರೂ ಭಗವಚ್ಛಕ್ತಿ ಯನ್ನು ಜೀವರು ತಿಳಿಯಲಾರರು. ವಾಯುವಿನಿಂದ ಮೋಡಗಳು ಚಲಿಸುತ್ತಿರುತ್ತವೆ. ಆದರೂ ಮೋಡಗಳು ವಾಯುವಿನ ಬಲವನ್ನು ಅರ್ಥ ಮಾಡಿಕೊಳ್ಳುವುದಿಲ್ಲ ಭಿನ-ಭಿನ್ನ ಅವಸ್ಥೆಗಳಲ್ಲಿ, ಭಿನ್ನಭಿನ್ನಯೋನಿಗಳಲ್ಲಿ ಜೀವನು ಅಲೆಯುತ್ತಿದ್ದರೂ ಭಗವಂತನ ಪರಾಕ್ರಮವನ್ನು ಅರಿಯಲಾರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಂ ಯಮರ್ಥ ಮುಪಾದತ್ತೇ, ದುಃಖೇನ ಸುಖಹೇತವೇ,
ತಂ ತಂಧುನೋತಿ ಭಗವಾನ್, ಪುಮಾನ್ ಶೋಚತಿಯತ್ಕೃತೇ.

ಜೀವನು ಸುಖಾಭಿಲಾಷೆಯಿಂದ ಯಾವ ಯಾವುವನ್ನು ಸಂಪಾದಿಸುತ್ತಾನೊ ಕಾಲನು ಅದೆಲ್ಲವನ್ನೂ ನುಂಗಿ ಹಾಕುತ್ತಾನೆ. ಇದರಿಂದ ಜೀವನು ನಿರಂತರ ದುಃಖಿಯಾಗುತ್ತಾನೆ. ಇದಕ್ಕೆ ಕಾರಣವೇನೆಂದರೆ–ಮಂದ ಬುಧ್ಧಿ ಜೀವನು ತನ್ನ ಈ ನಾಶವಾನ್ ಶರೀರವನ್ನೂ, ಗೃಹಕ್ಷೇತ್ರಾದಿಗಳನ್ನೂ, ಶಾಶ್ವತ ವೆಂದು ತಿಳಿಯುತ್ತಾನೆ. ನನ್ನ ಧನವು ಆ ಮರಣ ಪರ್ಯಂತರವೂ ಸಹಯೋಗವನ್ನು ಕೊಡುತ್ತವೆಂದು ತಿಳಿಯುತ್ತಾನೆ.

ಆದರೆ ಪ್ರತ್ಯಕ್ಷದಲ್ಲಿ ನೋಡುತ್ತಿದ್ದೇವೆ-ಅವೆಷ್ಟು ಕ್ಷಣಿಕಗಳು? ನಾಲ್ಕಾರು ವರ್ಷಗಳಲ್ಲಿ ಎಷ್ಟೋ ಜನರು ಬಡವರಾದರು, ಸಾಹುಕಾರರಾದರು, ಯಾವ ಯೋನಿಯಲ್ಲಿ ಜನಿಸಲಿ, ಅಲ್ಲಿಯೆ ತನ್ನ ತನವನ್ನು ಸ್ಥಾಪಿಸಿಕೊಳ್ಳುತ್ತಾನೆ. ಆನಂದಿಸುತ್ತಾನೆ. ವಿರಕ್ತಿಯನ್ನು ತಾಳುವುದೇ ಇಲ್ಲ.

ಭಗವನ್ಮಾಯೆಯಿಂದ ಮೋಹಿತನಾದ ಜೀವನು ನಾರಕೀಯ ಯೋನಿಗಳಲ್ಲಿ ಹುಟ್ಟಿದರೂ, ಅಲ್ಲಿಯ ವಿಷ್ಠಾದಿಗಳಲ್ಲಿಯೇ ಆನಂದವನ್ನನುಭವಿಸುತ್ತಾ ಅದನ್ನು ಬಿಡಲಿಚ್ಛಿಸುವುದಿಲ್ಲ. ಮೂರ್ಖ ಜೀವಿಯು ತನ್ನ ದೇಹ, ಸ್ತ್ರೀಪುತ್ರ. ಪಶು, ಧನ, ಬಂಧು ಬಾಂಧವರಲ್ಲಿ ಅತ್ಯಂತ ಆಸಕ್ತನಾಗಿ ಅವರಿವರ ಇಷ್ಟಗಳನ್ನು ಸಲ್ಲಿಸುವುದರಲ್ಲಿ ಪ್ರಯತ್ನ ಶೀಲನಾಗಿ ತನ್ನನ್ನು ಕೃತ ಕೃತ್ಯನೆಂದು ತಿಳಿಯುತ್ತಾನೆ. ಅದರ ರಕ್ಷಣೆಗಾಗಿ ಮಾಡಿದ ಪಾಪಕೆಲಸಗಳ ದುರ್ವಾಸನೆಗಳಿಂದ ತಾಪಪಡುತ್ತಾನೆ. ಆದರೂ ಎಚ್ಚರಗೊಳ್ಳಲು ಇಷ್ಟ ಪಡುವುದಿಲ್ಲ. ಭಾರಾತಿ ಭಾರವನ್ನು ತಲೆಯ ಮೇಲೆ ಹೊರುತ್ತಾನೆ. ಕುಲಟಾಸ್ತ್ರೀಯರು ಸಂಭೋಗ ಸಮಯದಲ್ಲಿ ಏಕಾಂತದಲ್ಲಿ ತೋರಿಸುವ ಕಪಟ ಪ್ರೇಮದಿಂದ ವಂಚಿತನಾಗುತ್ತಾನೆ. ಆ ಕುಲಟೆಯು ಎಂದಾದರೂ ಇವನೊಡನೆ ಸಹಗಮನಕ್ಕೆ ಸಿಧ್ಧಳಾಗುವಳೇ? ಬಾಲಕರ ತೊದಲು ನುಡಿಗೆ ಮಾರುಹೋಗಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಸಂರಕ್ಷಣೆಗಾಗಿ ಮಾಡಬಾರದುದನ್ನೆಲ್ಲಾ ಮಾಡುತ್ತಾನಲ್ಲ, ಅವರಿಂದ ಇವನಿಗೆ ಸದ್ಗತಿಯು ದೊರಕುವುದೆ?.

ಗೃಹೇಷು ಕೂಟಧರ್ಮೇಷು, ದುಃಖ ತಂತ್ರೇಷ್ವತಂದ್ರಿತಃ
ಕುರ್ವನ್ ದುಃಖ ಪ್ರತೀಕಾರಂ, ಸುಖ ವನ್ಮನ್ಯತೇಗೃಹೀ,

ಗೃಹಸ್ಥರು ಕೂಟಧರ್ಮಿಗಳು' ದುಃಖದಾಯಕವಾದ ಕಪಟ ಪೂರ್ಣ ಕರ್ಮಗಳಲ್ಲಿಯೇ ಇವರಿಗೆ ಆಸಕ್ತಿಯು ಬಹಳ, ಅಲ್ಲಿ ಸಿಕ್ಕುವ ಅಲ್ಪಾಲ್ಪ ಸುಖವನ್ನೇ ಚಪ್ಪರಿಸುತ್ತಾ ಭೋಗಿಸುತ್ತಾರೆ. ನೋಡಿ – ಒಬ್ಬನು ತಲೆಯ ಮೇಲೆ ಹೊರಲಾರದ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿರುತ್ತಾನೆ. ಮಾರ್ಗದ ಮಧ್ಯದಲ್ಲಿ ಒಂದು ಮರದ ಸಹಾಯದಿಂದ ಹೊರೆಯನ್ನು ಹೆಗಲಿಗೆ ಇರಿಸಿಕೊಳ್ಳುತ್ತಾನೆ. ಆಗ ತತ್ಕಾಲದಲ್ಲಿ ಸ್ವಲ್ಪ ಮನಸ್ಸಿಗೆ ನೆಮ್ಮದಿಯು ಮೂಡುತ್ತದೆ. ಅಂದ ಮಾತ್ರಕ್ಕೆ ಅವನು ಸುಖಿಯಯಾದನೆಂದಲ್ಲ. ಜೀವನು ಕುಟುಂಬ ಭರಣಕ್ಕಾಗಿ ಎಷ್ಟೋ ಹಿಂಸಾ ವೃತ್ತಿಗಳನ್ನು ಅವಲಂಬಿಸುತ್ತಾನೆ. ತತ್ಫಲವಾಗಿ ನರಕವಾಸಿ ಯಾಗುತ್ತಾನೆ, ಅವರು ತಿಂದುಳಿದ ಅನ್ನವನ್ನು ತಿಂದು ಕೊಂಡು ಅವರಿಗಾಗಿ ಸಂಪಾದನೆಯಲ್ಲಿ ತೊಡಗಿರುತ್ತಾನೆ. ಯಾವಾಗಲೂ ತನ್ನ ಗತಿಯೇನು? ಎಂದು ಯೋಚಿಸುವುದೇ ಇಲ್ಲ. ಕುಟುಂಬ ಭರಣೆಯಲ್ಲಿ ಧನಾರ್ಜನೆಯಲ್ಲಿ ಅಸಮರ್ಥನಾದಾಗ ಕುಟುಂಬದವರು ಇವನನನ್ನು ಹಿಂದಿನಂತೆ ಗೌರವಿಸುವುದಿಲ್ಲ.

"ಕೀನಾಶಾ ಇವಗೋಜರಂ" ಕೃಷಿ ರೈತನು ಮುದಿ ಎತ್ತನ್ನು ಉಪೇಕ್ಷಿಸುವಂತೆ ಅವರ ಉಪೇಕ್ಷೆಗೆ ಇವನು ಪಾತ್ರನಾಗುತ್ತಾನೆ. ಆದರೂ ಇವನು ಸಂಸಾರದಿಂದ ವಿರಕ್ತನಾಗುವುದಿಲ್ಲ. ಪೋಷಿಸಲ್ಪಟ್ಟವರಿಂದಲೇ ಪೋಷಿತನಾಗುತ್ತಾನೆ. ವೃಧ್ಧಾವಸ್ಥೆಯಿಂದ ಹಿಂದಿನ ರೂಪವು ಅಳಿದು ಹೋಗಿದೆ. ಶರೀರವು ರೋಗ ಗ್ರಸ್ತವಾಗಿದೆ. ಅಗ್ನಿ ಮಂದವಾಗಿದೆ. ಭೋಜನವು ಅರಗುವುದಿಲ್ಲ. ತಿನ್ನ ಬೇಕೆಂಬ ಚಪಲವು ಅಳಿಯುವುದಿಲ್ಲ. ಮರಣವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರೀಕ್ಷಿಸುತ್ತಾ ಮೂಲೆಯಲ್ಲಿ ಬಿದ್ದಿರುತ್ತಾನೆ. ನಾಯಿಗೆ ನೀಡುವ ತುಂಡು ರೊಟ್ಟಿಯಂತೆ. ಕುಟುಂಬದವರು ನೀಡುವ ತುತ್ತನ್ನಕ್ಕೆ ಬಾಯಿಬಿಡುತ್ತಿರುತ್ತಾನೆ. ಅಷ್ಟರಲ್ಲಿ ಮೃತ್ಯು ದೇವನು ಪ್ರತ್ಯಕ್ಷನಾಗಿ ಬಿಡುವನು,

ವಾಯುನೋತ್ಕ್ರಮತೋತ್ತಾರ: ಕಫಸಂರುದ್ಧನಾಡಿಕ:
ಕಾಸಶ್ವಾಸ ಕೃತಾಯಾಸ: ಕಂಠೇಘುರಘುರಾಯತೇ||

ವಾಯುವಿನ ಉತ್ಕ್ರಮಣವಾಗಿ ಕಣ್ಣು ಗುಡ್ಡೆಗಳು ಮೇಲಕ್ಕೆ ಹೋಗುತ್ತವೆ. ಕಫ ಸಂರುದ್ಧವಾಗಿ ಶ್ವಾಸ ಪ್ರಶ್ವಾಸಗಳಿಗೇ ಕಷ್ಟ ಪಡುತ್ತಾನೆ. ಕೆಮ್ಮಲೂ ಸಾಧ್ಯವಾಗುವುದಿಲ್ಲ. ಕಫದ ಆಧಿಕ್ಯದಿಂದ ಕಂಠದಲ್ಲಿ ಘರ ಘರಾಶಬ್ದವು ಕೇಳಿ ಬರುತ್ತದೆ. ಬಂಧು - ಬಾಂಧವರು ಕಿರುಚಿಕೊಳ್ಳುತ್ತಿದ್ದರೂ ಮೃತ್ಯು ಪಾಶವಶೀ ಭೂತನಾದ ಇವನು ಮಾತನಾಡಲೂ ಅಸಮರ್ಥನು. ಹೀಗೆ ಸಂಸಾರಾಸಕ್ತನಾದ ಪುರುಷನು ಇಂದ್ರಿಯಾಧೀನನಾಗಿ ನಿರಂತರವೂ ಗೃಹಕಾರ್ಯಾಸಕ್ತನಾಗಿ, ಅತ್ಯಂತ ವೇದನೆಯಿಂದ ಅಜ್ಞಾತನನಾಗಿ ಮೃತ್ಯುಗ್ರಾಸನಾಗುತ್ತಾನೆ. ಆವನ ಅಂತ್ಯ ಕಾಲದಲ್ಲಿ ಅತಿಭಯಂಕರರಾದ ಕೋಪ ಸಂರಕ್ತಲೋಚನರಾದ, ಇಬ್ಬರು ಯಮದೂತರು ಬರುತ್ತಾರೆ. ಅವರ ದರ್ಶನಮಾತ್ರದಿಂದ ಭಯಗೊಂಡ ಜೀವನು ಮಲ ಮೂತ್ರಗಳನ್ನು ವಿಸರ್ಜಿಸುತ್ತಾನೆ ಯಮದೂತರು ಅವನ ಸೂಕ್ಷ್ಮದೇಹವನ್ನು ಆಕರ್ಷಿಸಿ, ಕುತ್ತಿಗೆಗೆ ಪಾಶವನ್ನು ಹಾಕಿ, ಪೋಲೀಸರು ಅಪರಾಧಿಯನ್ನು ಎಳೆದೊಯ್ಯುವಂತೆ ಯಮಲೋಕದ ಮಾರ್ಗದಲ್ಲಿ ಕೊಂಡೊಯ್ಯುತ್ತಾರೆ. ಅವರ ಬಿರುನುಡಿಗಳಿಂದ ಅವನ ಎದೆಯು ಕಂಪಿಸುತ್ತದೆ. ಶರೀರವು ನಡುಗುತ್ತದೆ. ಮಾರ್ಗದಲ್ಲಿ ನಾಯಿಗಳು ಕಚ್ಚುತ್ತವೆ. ಆಗ ಅವನ ಪಾಪ ಕರ್ಮಗಳು ಸ್ಮರಣೆಗೆ ಬಂದು ಅಳತೊಡಗುತ್ತಾನೆ. ಹಸಿವು - ಬಾಯಾರಿಕೆಗಳು ಪೀಡಿಸುತ್ತವೆ. ಕಾಡ್ಗಿಚ್ಚಿನ ಜ್ವಾಲೆಗಳಿಂದ ತಪ್ತನಾಗಿ ಹೋಗುತ್ತಾನೆ. ಮಾರ್ಗದಲ್ಲಿ ನೀರಿರುವುದಿಲ್ಲ. ವಿಶ್ರಾಂತಿ ಜಾಗಗಳಿಲ್ಲ. ಮರುಳು ಗಾಡಿನಲ್ಲಿ ಒಂದು ಹೆಜ್ಜೆ ಇಡಲೂ ಸಾಧ್ಯವಾಗದು. ಆದರೂ ಯಮದೂತರು ಬಿಡದೆ, ಚಾವಟಿಯಿಂದ ಬಾರಿಸುತ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಳೆದೊಯ್ಯುತ್ತಾರೆ. ಸುಸ್ತಾಗಿ ಬೀಳುತ್ತಾನೆ. ಮೂರ್ಛೆ ಹೋಗುತ್ತಾನೆ. ಪುನ: ಏಳುತ್ತಾನೆ. ಅಂತೂ ಯಮ ಲೋಕಕ್ಕೆ ಹೋಗುತ್ತಾನೆ. ಯಮ ಲೋಕದ ಮಾರ್ಗವು 90 ಸಾವಿರ ಯೋಜನ ದೂರವಿದೆ. ಕೇವಲ 2 - 3 ಮುಹೂರ್ತಕಾಲದಲ್ಲಿ ಅಷ್ಟು ದಾರಿಯನ್ನೂ ಕ್ರಮಿಸಿ, ನರಕದಲ್ಲಿ ವಿವಿಧ ಯಾತನೆಗಳನ್ನು ಭೋಗಿಸುತ್ತಾನೆ. ಉರಿಯುವ ಕಟ್ಟಿಗೆಗಳ ಮಧ್ಯೆ ಇವನನ್ನು ಹಾಕುತ್ತಾರೆ. ಸ್ವಮಾಂಸವನ್ನು ತಿನ್ನಿಸುತ್ತಾರೆ, ಅಲ್ಲಿಯ ನಾಯಿಗಳು, ಗಿಡುಗಗಳು ಇವನ ಕರುಳಗಳನ್ನು ಕೀಳುತ್ತವೆ. ಸರ್ಪಗಳು, ಚೇಳುಗಳು ಕಡಿಯುತ್ತವೆ. ಆನೆಗಳು ಬಂದು ತುಳಿಯುತ್ತವೆ. ಪರ್ವತಾಗ್ರಗಳಿಂದ ದಬ್ಬುತ್ತಾರೆ. ಹಳ್ಳದಲ್ಲಿ ಹಾಕಿ ಮುಚ್ಚುತ್ತಾರೆ.

ತಾಮಿಸ್ರ - ಅಂಧ ತಾಮಿಸ್ರ– ಕಾರವಾದಿ ನರಕಗಳ ಯಾತನೆಯನ್ನು ಸ್ತ್ರೀಯಾಗಲೀ, ಪುರುಷನಾಗಲೀ ಅನುಭವಿಸಿಯೆ ಅನುಭವಿಸುತ್ತಾನೆ. ಕೆಲವರು ಅನುಭವಿಗಳು ಹೆಳುತ್ತಾರೆ - ಸ್ವರ್ಗ - ನರಕಗಳು ಇಲ್ಲಿಯೇ ಇವೆ. ಕೆಲವರ ಅಭಿಪ್ರಾಯದಂತೆ ಪರಲೋಕಾದಿಗಳು ಇಲ್ಲದೇ ಇದ್ದರೆ ಸರಿ, ಇದ್ದು ಬಿಟ್ಟರೇನು ಗತಿ ?. ಇದನ್ನು ಯೋಚಿಸಿ ಯಾವಾಗಲೂ ಧರ್ಮ ಕಾರ್ಯ ಪ್ರವೃತ್ತನಾಗಿರಬೇಕು. ಬಹಳ ಕಷ್ಟ ಪಟ್ಟು ದಗ– ಮೋಸ- ಕಳ್ಳತನವನ್ನೂ ಮಾಡಿ ಕುಟುಂಬವನ್ನು ಪಾಲಿಸುವವನು ಎಲ್ಲವನ್ನೂ ಬಿಟ್ಟು ಒಂಟಿಯಾಗಿಯೇ ನರಕಯಾತನೆಯನ್ನು ಅನುಭವಿಸುತ್ತಾನೆ. ಅನ್ಯಾಯಾರ್ಜಿತ ವಿತ್ತದಿಂದ ಕುಟುಂಬವನ್ನು ಪಾಲಿಸುವನ ಮಾಜ ದ್ರೋಹಿಯು ಅಂಧತಾಮಿಸ್ರ ನರಕಕ್ಕೆ ಹೋಗುತ್ತಾನೆ. ಅಲ್ಲಿ ಸಾಕಷ್ಟು ಶುಧ್ಧನಾಗಿ, ತಿರ್ಯಗ್ಯೋನಿಗಳಲ್ಲಿ ಹುಟ್ಟಿ ನಂತರ ಪುನ: ಮನುಷ್ಯ ಯೋನಿಯಲ್ಲಿ ಹುಟ್ಟುತ್ತಾನೆ.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ತ್ರಿಂಶೋಽಧ್ಯಾಯ:

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ಭಾಗವತದರ್ಶನ, ಸ್ಕಂಧ ೩-ಅ ೩೧
ಮನುಷ್ಯ ಜನ್ಮಕ್ಕೆ ಬಂದ ಜೀವನ ಗತಿ ವರ್ಣನೆ

ಭಗವಾನ್ ಕಪಿಲರು ಆ ಆಖ್ಯಾನವನ್ನು ಮುಂದುವರಿಸುತ್ತಾ ಹೇಳುತ್ತಾರೆ-ಅಮ್ಮ-ಜೀವನು ಪೂರ್ವಕರ್ಮಾನುಸಾರವಾಗಿ, ಭಗವತ್ಪ್ರೇರಣೆಯಿಂದ, ಮನುಷ್ಯ ಜನ್ಮಕ್ಕೆ ಬರುವಾಗ, ಪುರುಷನ ವೀರ್ಯಕಣದ ಮೂಲಕ ಸ್ತ್ರೀಯ ಗರ್ಭಾಶಯವನ್ನು ಪ್ರವೇಶಿಸುತ್ತಾನೆ

ಮೊದಲರಾತ್ರಿಯಲ್ಲಿ ಕಲಲರೂಪ, ಐದುರಾತ್ರಿಗಳಲ್ಲಿ ಬುದ್ಬುದರೂಪ, ಹತ್ತುದಿನಗಳಲ್ಲಿ ಬಿಲ್ವಫಲದಂತೆ ಕಠಿಣ, ಒಂದು ತಿಂಗಳಲ್ಲಿ ತಲೆಯಾಗುತ್ತದೆ. ಎರಡು ತಿಂಗಳಿನಲ್ಲಿ ಕೈಕಾಲುಗಳ ಆವಿರ್ಭಾವವಾಗುತ್ತದೆ. ಮೂರುತಿಂಗಳಲ್ಲಿ ನಖ-ರೋಮಾಸ್ಥಿಗಳೂ, ಸ್ತ್ರೀ-ಪುರುಷ ಚಿಹ್ನೆಯೂ ಮೂಡುತ್ತದೆ. ನಾಲ್ಕು ತಿಂಗಳುಗಳಲ್ಲಿ ಮಾಂಸಾದಿ ಸಪ್ತಧಾತುಗಳು ಹುಟ್ಟುತ್ತವೆ. ಐದನೇ ತಿಂಗಳಿನಲ್ಲಿ ಹಸಿವು-ಬಾಯಾರಿಕೆಗಳಾಗುತ್ತವೆ ಆರನೇ ತಿಂಗಳಲ್ಲಿ ಜರಾಯುವೇಷ್ಟಿತನಾಗಿ ಹೊಟ್ಟೆಯ ದಕ್ಷಿಣಭಾಗದಲ್ಲಿ ಸುತ್ತುತ್ತಾನೆ. ತಾಯಿಯು ತಿಂದ ಆಹಾರಾದಿಗಳಿಂದ ಮಗುವಿನ ಧಾತುಗಳು ಪುಷ್ಟವಾಗುತ್ತವೆ. ಕ್ರಿಮಿಗಳು ತುಂಬಿರುವ ಮಲ-ಮೂತ್ರಕೋಶಗಳ ನಡುವೆ ಬಿದ್ದಿರುತ್ತದೆ ಬಹಳ ಕೋಮಲವಾಗಿರುತ್ತದೆ. ಕ್ರಿಮಿಗಳು ಕಚ್ಚಿ-ಕಚ್ಚಿ ಯಾತನೆಕೊಡುತ್ತವೆ. ಮೂರ್ಛೆಹೋಗುತ್ತದೆ. ತಾಯಿಯು ತಿಂದ ಕಟು, ತೀಕ್ಷ್ಣ, ಉಷ್ಣ, ಲವಣ, ರೂಕ್ಷಾಮ್ಲಾದಿರಸಗಳಿಂದ ಶರೀರದಲ್ಲಿ ತೊಂದರೆಯಾಗುತ್ತದೆ. ಜರಾಯು ಸಂವೃತವಾದ ಶಿಶುವು ಕರುಳುಗಳಿಂದ ಸುತ್ತುವರೆಯಲ್ಪಟ್ಟು ಹೊಟ್ಟೆಯ ಕಡೆಗೆ ಮುಖಮಾಡಿಕೊಂಡು ಮೂಢಸ್ಥಿತಿಯಲ್ಲಿರುತ್ತದೆ.

ಪಂಜರ ಬದ್ಧ ಪಕ್ಷಿಯಂತೆ, ಪರಾಧೀನನಾಗಿ, ಕೈಕಾಲುಗಳನ್ನು ಆಡಿಲಾರದೆ, ಇರುತ್ತದೆ. ಆವಾಗ ದೈವಾನುಕೂಲದಿಂದ ಸ್ಮರಣಶಕ್ತಿಯು ಬರುತ್ತದೆ. ನೂರಾರು ಜನ್ಮಗಳಲ್ಲಿ ಮಾಡಿದ ಕರ್ಮಗಳು ನೆನಪಿಗೆ ಬರುತ್ತವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಶಾಂತಿಯೂ ಮೂಡುತ್ತದೆ. ಉಸಿರು ಕಟ್ಟುತ್ತದೆ. ಶಾಂತಿಯುನಾಮ ಮಾತ್ರಕ್ಕೂ ಇರುವುದಿಲ್ಲ. ಏಳನೇ ತಿಂಗಳು ಪ್ರಾರಂಭವಾದ ಮೇಲೆ ಅದಕ್ಕೆ ಜ್ಞಾನ ಶಕ್ತಿಯೂ ಹುಟ್ಟುತ್ತದೆ, ಪ್ರಸೂತಿ ವಾಯುವಿನ ಒತ್ತಡದಿಂದ ಕ್ರಿಮಿಗಳಂತೆ ಒದ್ದಾಡುತ್ತಿರುತ್ತದೆ. ಒಂದು ಸ್ಥಾನದಲ್ಲಿರಲಾಗುವುದಿಲ್ಲ.

ನಾಥಮಾನ ಋಷಿರ್ಭೀತ�ః, ಸಪ್ತವಧ್ರಿಃಕೃತಾಂಜಲಿಃ,

ಸ್ತುವೀತತಂ ವಿಕ್ಲವಯಾ, ವಾಚಾಯೇನೋದರೇಽರ್ಪಿತಃ,

(ನಾಥಮಾನಃ-ಯಾಚಮಾನಃ, ಋಷಿಃ, ಋಷಿಯಂತೆ) ಸಪ್ತಧಾತುಮಯ ವಾದ, ಸ್ಥೂಲ ಶರೀರದಿಂದ ಬಂಧಿಸಲ್ಪಟ್ಟ, ಆ ದೇಹಾತ್ಮದರ್ಶಿ ಜೀವನು, ಅತ್ಯಂತ ಭಯಭೀತನಾಗಿ, ದೀನವಾಣಿಯಿಂದ, ಕೃಪಾಯಾಚನೆಯನ್ನು ಮಾಡುತ್ತಾ, ಕೈಮುಗಿದು ಕೊಂಡು ತನಗೆ ಗರ್ಭವಾಸವನ್ನು ಕೊಟ್ಟ ಪ್ರಭುವನ್ನು ಸ್ತುತಿಸುತ್ತಾನೆ. ಪ್ರಭೋ, ನೀನು ಶರಣಾಗತರನ್ನು ರಕ್ಷಿಸಲು ರಾಮ - ಕೃಷ್ಣಾದ್ಯವತಾರಗಳನ್ನು ಮಾಡಿ, ಈ ಜಗತ್ತಿನಲ್ಲಿ ಸಂಚರಿಸುವ ಭಗವಂತನ (ನಿನ್ನ) ಚರಣಾರವಿಂದಗಳನ್ನು ನಮಸ್ಕರಿಸುತ್ತೇನೆ. ಅಧಮಾಧಮನಾದ ನನಗೆ ನೀನು ಕೊಟ್ಟಿರುವ ಈ ಸ್ಥಿತಿಯು ಯುಕ್ತವಾಗಿದೆ. ಯಾರು ಆ ಭಗವಂತ? ಈ ಜೀವನು ಯಾರ ರಕ್ಷಣೆ ಯನ್ನು ಪ್ರಾರ್ಥಿಸುತ್ತಾನೆ? ಅವನ ವೈಶಿಷ್ಟ್ಯವೇನು? ಜೀವನು ಸೇವಕನೂ, ಪರಮಾತ್ಮನು ಸೇವ್ಯನೂ ಹೇಗಾದನು? ಎಂದರೆ-

ಇಲ್ಲಿ ತಾಯಿಯ ದೇಹವಲ್ಲಿ ದೇಹೇಂದ್ರಿಯಾಂತಃಕರಣರೂಪೀ ಮಾಯೆ ಯನ್ನು ಆಶ್ರಯಿಸಿ, ಬದ್ಧನಂತೆ, ತೋರುವ, ಪಾಪ-ಪುಣ್ಯ ರೂಪ ಕರ್ಮ ಗಳಿಂದಲಾವೃತನಾಗಿರುವ ನನ್ನ ಸಂತಪ್ತಹೃದಯದಲ್ಲಿಯೇ ತೋರುವ, ವಿಶುದ್ಧ ಅವಿಕಾರಿ, ಅಖಂಡ, ಬೋಧಸ್ವರೂಪನಾದ, ಪರಮಾತ್ಮನನ್ನು ನಮಸ್ಕರಿಸು ತ್ತೇನೆ. ಯದ್ಯಪಿ ಆತ್ಮಸ್ವರೂಪವು ಪಂಚಭೂತಾತ್ಮಕ ಶರೀರರಹಿತವಾದುದು. ಆದರೂ, ಶರೀರ ಸಂಬದ್ಧನಂತೆ, ತೋರುತ್ತಿದೆ. ಇಂದ್ರಿಯ-ಗುಣ-ಶಬ್ದಾದಿ ವಿಷಯಗಳ ರೂಪದಲ್ಲಿಯೂ ಅಭಿವ್ಯಕ್ತವಾಗುತ್ತಿದೆ. ಶರೀರಾದ್ಯಾವರಣ ಗಳಿಂದ ಅವನ ಮಹಿಮೆಯೂ ಕುಂಠಿತವಾಗುವುದಿಲ್ಲ. ಆ ಸರ್ವಜ್ಞ,ಪ್ರಕೃತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷಾಧೀಶನಾದ ಪರಮ ಪುರುಷನನ್ನು ನಮಸ್ಕರಿಸುತ್ತೇನೆ. ಜನ್ಮ-ಮರಣಾತ್ಮಕ ಬಂಧನದಿಂದ ಮುಕ್ತನಾಗಬೇಕಾದರೆ ಜ್ಞಾನವನ್ನು ಸಂಪಾದನೆ ಮಾಡಬೇಕು. ಪರಮೇಶ್ವರನ ವಂದನೆಯಿಂದ ಪ್ರಯೋಜನವೇನು? ಎಂದರೆ - ಭಗವಂತನ ಮಾಯೆಯಿಂದ, ಸ್ವ-ಸ್ವರೂಪ ಜ್ಞಾನವು ನಷ್ಟವಾಗಿ ಸತ್ವಾದಿ ಗುಣ- ಕರ್ಮ ಬಂಧನದಿಂದ ಯುಕ್ತವಾದ ಈ ಸಂಸಾರ ಮಾರ್ಗದಲ್ಲಿ ಜೀವನು ವಿವಿಧ ಕಷ್ಟಗಳನ್ನು ಅನುಭವಿಸುತ್ತಾ ಅಲೆಯುತ್ತಿದ್ದಾನೆ. ಈ ಪರಮ ಪುರುಷ ಪರಮಾತ್ಮನ ದಯೆಯಲ್ಲದೆ ಸ್ವ- ಸ್ವರೂಪ ಜ್ಞಾನ ಪ್ರಾಪ್ತಿಗೆ ಬೇರೆಉಪಾಯವೇನಿದೆ? **ಈಶ್ವರಾನುಗ್ರಹಾದೇವ ಪುಂಸಾಮದ್ವೈತವಾಸನಾ** ಎಂದು ಈಶ್ವರಾನುಗ್ರಹವಿಲ್ಲದೆ ಜ್ಞಾನವುಂಟಾಗುವುದಿಲ್ಲ. ಜ್ಞಾನದಾಯಕನು ಈಶ್ವರನೇ, ಆದರಿಂದ ಅವನನ್ನೇ ಪ್ರಾರ್ಥಿಸುತ್ತಿದ್ದೇನೆ. ಅವನಿಂದಲೇ ನನಗೆ ಈಗ ಭಗವಂತನ ಜ್ಞಾನವುಂಟಾಗಿದೆ. ಸ್ಥಾವರ ಜಂಗಮಾದಿ ಸಮಸ್ತ ಪ್ರಾಣಿಗಳಲ್ಲಿಯೂ ಏಕಮೇವಾ ದ್ವಿತೀಯನಾದ ಅವನೇ ಅಂತರ್ಯಾಮಿಯಾಗಿದ್ದಾನೆ. ಕರ್ಮ ಗತಿಗನುಗುಣವಾಗಿ ವರ್ತಿಸುವ ಜೀವಿಗಳಿಂದ ನಾವು ತ್ರಿವಿಧ ತಾಪೋಪಶಮನಕ್ಕಾಗಿ ಅವನನ್ನೇ ಭಜಿಸುತ್ತೇವೆ.

ಪ್ರಭೋ, ಈ ದೇಹಧಾರೀ ಜೀವನು ಅನ್ಯರ ದೇಹದೊಡನೆ(ತಾಯಿಯ ದೇಹದಲ್ಲಿ)ಮಲ ಮೂತ್ರ ರಕ್ತ ಭರಿತ ಮಡುವಿನಲ್ಲಿ ಬಿದ್ದಿದ್ದಾನೆ. ಜಾಠರಾಗ್ನಿಯಿಂದ ಶರೀರವು ಬೆಂದು ಹೋಗುತ್ತಿದೆ. ಹೊರಕ್ಕೆ ಹೋದರೆ ಸಾಕೆಂದು ತಿಂಗಳುಗಳನ್ನು ಎಣಿಸುತ್ತಿರುವ ಈ ದೀನನ ರಕ್ಷಣೆಯನ್ನು ಯಾವಾಗ ಮಾಡುವೆ? ನೀನು ಮಹಾದಯಾಳು ಮಾಡುದರಿಂದಲೇ ಹತ್ತು ತಿಂಗಳಿನ ಈ ಜೀವಕ್ಕೆ ದಿವ್ಯ ಜ್ಞಾನವನ್ನಿತ್ತಿರುವೆ. ದೀನ ಬಂಧೊ, ನೀನು ಮಾಡಿರುವ ಉಪಕಾರದಿಂದ ನೀನೇ ಸಂತುಷ್ಟನಾಗಬೇಕು. ನಿನಗೆ ಕೈ ಮುಗಿಯುವುದೆಂಬುವುದನ್ನು ಬಿಟ್ಟರೆ ಮತ್ತೇನು ಮಾಡಲು ಸಾಧ್ಯವಿದೆ?. ಯಾವ ವಿಧದಿಂದಲೂ ಪ್ರತ್ಯುಪಕಾರ ಮಾಡಲು ಜೀವರು ಅನರ್ಹರು. ಪ್ರಭೋ— ಸಂಸಾರದ ಪಶು ಪಕ್ಷ್ಯಾದಿ ಜೀವಿಗಳು, ತಮ್ಮಮೂಢ ಬುಧ್ಧಿಗನುಸಾರವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಶಾರೀರಿಕ ಸುಖ-ದುಃಖಗಳ ಅನುಭವವನ್ನು ಮಾತ್ರ ಪಡೆಯುತ್ತವೆ. ಆದರೆ ನಾನು ನಿನ್ನ ದಯೆಯಿಂದ ಶಮ - ದಮಾದಿ ಸಾಧನಾನುಕೂಲವಾದ ದೇಹವನ್ನು ಧರಿಸಿದ್ದೇನೆ. ವಿವೇಕಯುತವಾದ ಬುದ್ಧಿಯು ಪ್ರಾಪ್ತವಾಗಿದೆ. ಪುರಾಣ ಪುರುಷನಾದ ನಿನ್ನನ್ನು ಶರೀರದ ಒಳಗಡೆಯೂ, ಹೊರಗಡೆಯೂ ಸಂದರ್ಶಿಸುತ್ತಿದ್ದೇನೆ. ಬಹಳ ದುಃಖಕರವಾದ ಈ ಗರ್ಭಾಶಯದಲ್ಲಿ ಬಹಳ ಕಷ್ಟ ಭಾಗಿಯಾಗಿದ್ದೇನೆ. ಆದರೂ ಇದರಿಂದ ಹೊರಕ್ಕೆ ಹೋಗಲು ನಾನು ಇಷ್ಟಪಡುವುದಿಲ್ಲ. ಏಕೆಂದರೆ ಹೊರಕ್ಕೆ ಹೋದೊಡನೆ ನಿನ್ನ ವೈಷ್ಣವೀ ಮಾಯೆಯು ಆವರಿಸಿ ಬಿಡುತ್ತದೆ. ದೇಹಾತ್ಮ ಬುದ್ಧಿಯು ಬೆಳೆದು ಬಿಡುತ್ತದೆ. ಸಂಸಾರ ಚಕ್ರಭ್ರಮಣೆಯು ತಪ್ಪುವುದೇ ಇಲ್ಲ. ಆದರಿಂದ ನಾನು ಇಲ್ಲಿಯೇ ಇದ್ದುಕೊಂಡು ನಿನ್ನನ್ನು ಸ್ಮರಿಸುತ್ತಾ ಸಂಸಾರ ಸಾಗರವನ್ನು ದಾಟಿ ಬಿಡುತ್ತೇನೆ.

ಹೀಗೆ ಗರ್ಭಸ್ಥ ಶಿಶುವು ಚಿಂತಿಸುತ್ತಿರುವಾಗಲೇ ಪ್ರಸೂತಿವಾಯುವು ಶಿಶುವನ್ನು ಹೊರಗಡೆ ದಬ್ಬಿ ಬಿಡುತ್ತದೆ. ವ್ಯಾಕುಲ ಗೊಂಡ ಶಿಶುವು ಕೆಳಕ್ಕೆ ಬೀಳುತ್ತದೆ, ಮೂರ್ಛೆಹೋಗುತ್ತದೆ, ಉಸಿರು ಕಟ್ಟುತ್ತದೆ, ಪೂರ್ವಸ್ಮರಣೆಯು ಅಳಿದು ಹೋಗುತ್ತದೆ. ರಕ್ತ ಮೂತ್ರಗಳ ಮಡುವಿನಲ್ಲಿ ಬಿದ್ದ ಶಿಶುವು ವಿಷ್ಠೆಯ ಹುಳುವಿನಂತೆ ಒದ್ದಾಡುತ್ತದೆ.

ಆ ದಿವ್ಯ ಜ್ಞಾನವು ಮರೆತುಹೋಗಿ, ದೇಹಾಭಿಮಾನರೂಪೀ ಅಜ್ಞಾನ ದಿಂದ ಪದೇ ಪದೇ ಅಳತೊಡಗುತ್ತದೆ. ಅದರ ಸ್ವಭಾವವನ್ನು ತಿಳಿಯದ ಜನರಿಂದ ಅದರಪಾಲನೆ- ಪೋಷಣೆಗಳಾಗುತ್ತದೆ. ಪ್ರತಿಕೂಲವಾದುದನ್ನು ನಿಷೇಧಿಸಲೂ ಆದಕ್ಕೆ ಶಕ್ತಿ ಇರುವುದಿಲ್ಲ. ಕಚ್ಚಿದ ತಿಗಣೆ, ಸೊಳ್ಳೆಗಳನ್ನೂ ಓಡಿಸಿಕೊಳ್ಳಲು ಅದರಿಂದಾಗದು. ಮಗ್ಗುಲಾಗಲೂ ಅದರಿಂದಾಗವುದಿಲ್ಲ. ದೇಹವಾದರೋಬಹಳ ಕೋಮಲ, ಕ್ರಿಮಿಕೀಟಗಳು ಕಚ್ಚುತ್ತಿರುತ್ತವೆ, ಅಳುವು ದೊಂದನ್ನು ಬಿಟ್ಟರೆ ಮತ್ತೊಂದು ತಿಳಿಯದು. ಹೀಗೆ ಬಾಲ್ಯ-ಕೌಮಾರಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಸ್ಥೆಗಳನ್ನು ದಾಟಿಯುವಾವಸ್ಥೆಗೆ ಜೀವನು ಬರುತ್ತಾನೆ. ಆಗ ಬಯಸಿದ್ದು ದೊರಕದಿದ್ದರೆ ಕೋಪವುಂಟಾಗುತ್ತದೆ. ದೇಹದ ಬೆಳವಣಿಗೆಯೊಡನೆ ಕ್ರೋಧವೂ ಅಭಿಮಾನವೂ ಬೆಳೆಯುತ್ತವೆ. ಸ್ವತಃಕಾಮಿಯಾದ ಅವನು ಬೇರೆ ಕಾಮಿಗಳಿಗೆ ದ್ವೇಷ್ಯನಾಗುತ್ತಾನೆ.

ಬುದ್ಧಿಹೀನರಾದ ಅಜ್ಞಾನೀ ಜೀವರು ದೇಹದ ಮಿಥ್ಯಾಭಿನಿವೇಶದಿಂದ ನಾನು ನನ್ನದು ಎಂಬ ಅಭಿಮಾನಕ್ಕೆ ಒಳಗಾಗುತ್ತಾರೆ. ಯಾವ ದೇಹವು ಇವನಿಗೆ ವೃದ್ಧಾವಸ್ಥಾದಿ ದುರವಸ್ಥೆಗಳನ್ನು ಕೊಡುವುದೊ, ಅವಿದ್ಯಾಕರ್ಮ ಬಂಧನದಿಂದ ಹಿಂಬಾಲಿಸಿಕೊಂಡು ಬರುತ್ತಿದೆಯೋ, ಅದರ ಪೋಷಣೆಗಾಗಿ ಸಲ್ಲದ ಕರ್ಮಗಳನ್ನು ಮಾಡುತ್ತಾನೆ. ಅ ಸನ್ಮಾರ್ಗಾವಲಂಬಿಯಾಗಿ, ಶಿಶ್ನೋದರ ಪರಾಯಣರೊಡನೆ ಸಹವಾಸವನ್ನು ಬೆಳಸಿಕೊಂಡು ಹಿಂದಿ ನಂತೆಯೆ ಪುನಃ ನಾರಕೀಯ ಯೋನಿಗಳಲ್ಲಿ ಬೀಳುತ್ತಾನೆ. ಯಾರ ಸಹವಾಸ ವನ್ನು ಮಾಡಿದರೆ ಸತ್ಯ, ಶೌಚ, ದಯಾ, ಮೌನ, ಬುದ್ಧಿ,ಸಂಯಮ, ಧನ, ಸಂಪತ್ತಿ, ಲಜ್ಜಾ, ಯಶಸ್ಸು, ಕ್ಷಮಾ ಆದಿ ಸದ್ಗುಣಗಳು ನಷ್ಟವಾಗುವುವೊ ಅಂತಹ ಶೋಚನೀಯ ಸ್ತ್ರೀಯರ ಕ್ರಿಡಾಮೃಗವಾಗುತ್ತಾನೆ. ಸ್ತ್ರೀ ಮಾಯೆಯಿಂದ ಜಗತ್ತು ಮೋಹಿತವಾಗಿದೆ. ಸ್ತ್ರೀ ಮಾಯೆಯು ಬ್ರಹ್ಮಾದಿ ಗಳನ್ನೂ ಕಾಡದೆ ಬಿಟ್ಟಿಲ್ಲ, ಕೇವಲ ನಾರಾಯಣನೊಬ್ಬನನ್ನು ಬಿಟ್ಟರೆ ಎಲ್ಲರೂ ಸ್ತ್ರೀ ಮಾಯೆಯಿಂದ ಮೋಹಿತರಾಗಿರುವವರೇ.

ಯಾರು ಯೋಗದ ಪರಮಪದದಲ್ಲಿ ಅಧಿಷ್ಠಿತರಾಗಲು ಬಯಸುವರೋ, ಭಗವತ್ಸೇವಾ ಪ್ರಭಾವದಿಂದ ಆತ್ಮಾನಾತ್ಮಾ ವಿವೇಕಿಗಳಾಗಬೇಕೆನ್ನುವರೋ ಅವರು ಯಾವಾಗಲೂ ಸ್ತ್ರೀ ಸಹವಾಸವನ್ನು ಮಾಡಬಾರದು. ಸ್ತ್ರೀಯು ನರಕ ದ್ವಾರವೆಂದು ಅನುಭವಿಗಳು ಹೇಳುತ್ತಾರೆ. ಸ್ತ್ರೀ ಆಸಕ್ತಿಯ ಕಾರಣದಿಂದ, ಅಂತ್ಯಕಾಲದಲ್ಲಿ ಸ್ತ್ರೀಯನ್ನು ಧ್ಯಾನಿಸುವುದರಿಂದ ಜೀವನಿಗೆ ಸ್ತ್ರೀತ್ವವು ಪ್ರಾಪ್ತವಾಗುತ್ತದೆ. ಸ್ತ್ರೀರೂಪದಲ್ಲಿ ಬಂದ ಜೀವನು ಪುರುಷರೂಪದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣುವ ನನ್ನ ಮಾಯೆಯನ್ನು ಧನ-ಪುತ್ರ ಇತ್ಯಾದಿಗಳನ್ನೂ ಕೊಡುವ ಪತಿಯೆಂದು ತಿಳಿಯುತ್ತಾನೆ. ವ್ಯಾಧನಗಾನವನ್ನು ಕೇಳಿ ಮುಗ್ಧವಾದ ಪಶುಪಕ್ಷಿಗಳು ಮೃತ್ಯುಗ್ರಾಸವಾಗುವಂತೆ ಪತ್ನಿ ಪುತ್ರಮೋಹಾದಿಗಳೆಲ್ಲವೂ ಮೃತ್ಯುರೂಪಗಳೇ, ಜೀವನ ಉಪಾಧಿಭೂತವಾದ ಲಿಂಗದೇಹದಿಂದ ಪುರುಷನು ಒಂದು ಲೋಕದಿಂದ ಮತ್ತೊಂದು ಲೋಕಕ್ಕೆ ಹೋಗುತ್ತಾನೆ. ತನ್ನ ಪ್ರಾರಬ್ಧ ಕರ್ಮಗಳನ್ನು ಅನುಭವಿಸುತ್ತಾ, ಬೇರೆ-ಬೇರೆ ಕರ್ಮಗಳನ್ನು ಮಾಡುತ್ತಾ, ಲೋಕಾಂತರಗಳನ್ನು ಪಡೆಯುತ್ತಿರುತ್ತಾನೆ. ಜೀವನ ಉಪಾಧಿಭೂತವಾದ ಲಿಂಗ ಶರೀರವು ಮೋಕ್ಷಪರ್ಯಂತರವೂ ಅವನೊಡನೆ ಇರುತ್ತದೆ. ಇಂದ್ರಿಯಗಳ, ಭೂತಗಳ, ಮನಸ್ಸಿನ ಕಾರ್ಯ ಭೂತವಾದ ಈ ಸ್ಥೂಲ ಶರೀರವು ಜೀವನ ಭೋಗಾಧಿಷ್ಠಾನವು. ಇವೆರಡರ ಅಗುಲುವಿಕೆಯೇ ಮೃತ್ಯು, ಒಂದು ಗೂಡುವುದೇ ಜನ್ಮ.

ಯಾವಯಾವ ಇಂದ್ರಿಯಗಳಿಂದ ಸಂಸಾರಿಕ ವಿಷಯಗಳ ಜ್ಞಾನವಾಗುವುದೊ, ಆಯಾಯಾ ಇಂದ್ರಿಯಗಳ, ವಿಷಯ ಗ್ರಹಣ ಯೋಗ್ಯತೆಯು, ನಷ್ಟವಾಗುವುದೇ 'ಮರಣ' ದೈಹಿಕ ಪಂಚ ಭೂತಗಳು. ಸ್ವ-ಸ್ವರೂಪವನ್ನು ಸೇರುವುದೇ "**ಮರಣ**" ಈ ಸ್ಥೂಲ ಶರೀರವೇ ನಾನು ಎಂದು ತಿಳಿಯುವುದೇ "**ಜನ್ಮ**" ಅದರಿಂದ ಮುಮುಕ್ಷುವು ಮರಣದಿಂದ ಭಯಪಡಬಾರದು. ದೈನ್ಯ-ಮೋಹಗಳನ್ನು ತಾಳಬಾರದು . ಜೀವ ಸ್ವರೂಪವನ್ನರಿತು ನಿಸ್ಸಂಗ ಭಾವದಿಂದ ಸಂಚರಿಸಬೇಕು. ಮಾಯಾಮಯ ಸಂಸಾರದಲ್ಲಿ ಜ್ಞಾನ-ಯೋಗ-ವೈರಾಗ್ಯಯುಕ್ತನಾಗಿ, ಜ್ಞಾನ ದೃಷ್ಟಿಯಿಂದ ಶರೀರವೊಂದು ವಿಕ್ಷೇಪವೆಂದು ತಿಳಿದು, ಅನಾಸಕ್ತತೆಯಿಂದ ವ್ಯವಹಾರತತ್ಪರನಾಗಿರಬೇಕು.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ಏಕತ್ರಿಂಶೋಽಧ್ಯಾಯಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮದ್ಭಾಗವತ ದರ್ಶನ. ಸ್ಕಂಧ ೩ ಅ. ೩೨.
ಧೂಮ ಮಾರ್ಗದಲ್ಲಿ ಹೋಗುವವರ ವರ್ಣನೆ
ಭಕ್ತಿಯೋಗದ ಉತ್ಕೃಷ್ಟತೆ.

ಭಗವಾನ್ ಕಪಿಲರು ತಾಯಿಗೆ ಹೇಳುತ್ತಾರೆ — ಯಾವ ಗೃಹಸ್ಥನು ಸಕಾಮನಾಗಿ, ಗೃಹಸ್ಥ ಧರ್ಮಗಳನ್ನು ಪಾಲಿಸುತ್ತಾ, ಕಾಮೋಪ ಭೋಗ ಗಳಲ್ಲಿ ತತ್ಪರನಾಗಿರುವನೊ, ಅವನು ಭಾಗವತ ಧರ್ಮಗಳಿಂದ ವಿಮುಖನಾಗಿ ರುತ್ತಾನೆ. ಯಜ್ಞಾದಿಗಳಿಂದ ದೇವ ಪಿತ್ರಾದಿಗಳನ್ನು ಸಂತೋಷ ಪಡಿಸು ವುದರಲ್ಲಿಯೆ ತೃಪ್ತಿಯನ್ನು ಕಾಣುತ್ತಾನೆ. ಅವರೇ ಅವನಿಗೆ ಉಪಾಸ್ಯರು. ಅವನು ಚಂದ್ರ ಲೋಕವನ್ನು ಸೇರಿ, ಅವರೊಡನೆ ಸೋಮಪಾನವನ್ನು ಮಾಡುತ್ತಾ **'ಕ್ಷೀಣೇ ಪುಣ್ಯೇಮರ್ತ್ಯಲೋಕಂವಿಶತಿ'.** ಭಗವಂತನು ಶೇಷಶಾಯಿಯಾದಾಗ, ಪ್ರಳಯ ಕಾಲದಲ್ಲಿ, ಗೃಹಸ್ಥಾಶ್ರಮಿಗಳು ಹೊಂದುವ ಲೋಕಗಳೂ ಲೀನವಾಗುತ್ತವೆ. ವಿವೇಕಿ ಪುರುಷನು ತನ್ನ ಧರ್ಮವನ್ನು ಕಾಮೋಪಭೋಗಕ್ಕಾಗಿ ಬಳಸುವುದಿಲ್ಲ. ಭಗವತ್ಪ್ರೀತ್ಯರ್ಥವಾಗಿ ಅವುಗಳನ್ನು ಪಾಲಿಸುತ್ತಾನೆ. ನಿಸ್ಸಂಗಿಯಾಗಿ, ನ್ಯಸ್ತಕರ್ಮಿಯಾಗಿ, ಪ್ರಶಾಂತನಾಗಿ, ಶುದ್ಧ ಮನಸ್ಕನಾಗಿ, ನಿವೃತ್ತಿ ಧರ್ಮಪರಾಯಣನಾಗಿ, ನಿರ್ಮಮನಾಗಿ, ನಿರಹಂಕೃತಿಯಾಗಿ, ಸಾತ್ವಿಕ ಗುಣೋದ್ರೇಕದಿಂದ ಶುದ್ಧಾಂತಃಕರಣವುಳ್ಳವ ನಾಗುತ್ತಾನೆ. ಅಂತಹವನು ಸೂರ್ಯದ್ವಾರಾ ಸರ್ವ ವ್ಯಾಪಿ, ಪೂರ್ಣ ಪುರುಷನಾದ ಶ್ರೀಹರಿಯ ಲೋಕವನ್ನು ಪಡೆಯುತ್ತಾನೆ. ಶ್ರೀಹರಿಯು ಸರ್ವ ಕಾರ್ಯ - ಕಾರಣ ರೂಪಿಯು ಸೃಷ್ಟಿಯ ಉತ್ಪತ್ತಿ - ಸ್ಥಿತಿ-ಲಯ - ಕರ್ತಾ.

ಒಂದನೆಯದು - ಚಂದ್ರದ್ವಾರ, ಎರಡನೆಯದು - ಸೂರ್ಯದ್ವಾರ. ಚಂದ್ರದ್ವಾರವು ವಾಸನಾಮಯವಾದುದು. ಸೂರ್ಯದ್ವಾರವು ಜ್ಞಾನ ಮಯವಾದುದು. ಸೂರ್ಯನು ಪ್ರಕಾಶದ ದೇವತೆಯಾದರೆ, ಚಂದ್ರನು ಪ್ರಿಯತೆಯ ವಾಸನಾಮಯ ದೇವತೆ. ಮನುಷ್ಯನು ವಾಸನಾಧೀನನಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾರದು, ಸರ್ವಹೃತ್ಕಮಲಾಧಿಷ್ಠಿತನಾದ ಹರಿಯನ್ನು ಏಕಮಾತ್ರ ರಕ್ಷಕನನ್ನಾಗಿ ತಿಳಿದು, ಭಜಿಸಿ ಕೃತಕೃತ್ಯನಾಗ ಬೇಕು. ಯಾರುಪರಮಾತ್ಮನ ದೃಷ್ಟಿಯಿಂದ ಹಿರಣ್ಯಗರ್ಭನ ಉಪಾಸನೆಯನ್ನು ಮಾಡುವರೋ, ಅವರು ಎರಡು ಪರಾರ್ಧಗಳಿಗೊಮ್ಮೆ ಆಗುವ ಬ್ರಹ್ಮನ ಪ್ರಳಯ ಪರ್ಯಂತರ ಸತ್ಯಲೋಕವಲ್ಲಿರುತ್ತಾರೆ. ಸರ್ವದೇವ ಶ್ರೇಷ್ಠನಾದ ಬ್ರಹ್ಮನು ತನ್ನ ದ್ವಿಪರಾರ್ಧ ಕಾಲದ ಅಧಿಕಾರವನ್ನು ಬಿಟ್ಟು, ಪಂಚಭೂತಗಳು, ಇಂದ್ರಿಯಗಳು, ತದ್ವಿಷಯಕ ಶಬ್ದಾದಿಗಳು, ಹಾಗೂ ಅಹಂಕಾರಾದಿಗಳೊಡನೆ- ವಿಶ್ವಸಂಹಾರೇಚ್ಛೆಯಿಂದ ತ್ರಿಗುಣಾತ್ಮಿಕಾ ಪ್ರಕೃತಿಯೊಡನೆ ಒಂದಾಗಿ, ಲೀನನಾಗುವನು. (ನಿರ್ವಿಶೇಶ ಪರಮಾತ್ಮನಲ್ಲಿ) ಆವಾಗ ಜಿತೇಂದ್ರಿಯರಾದ ವಿರಕ್ತಯೋಗಿಗಳೂ, ದೇಹತ್ಯಾಗಿಗಳಾಗಿ ಭಗವಾನ್ ಬ್ರಹ್ಮನಲ್ಲಿ ಪ್ರವೇಶಿಸಿ ಅವನೊಡನೆ ಪರಬ್ರಹ್ಮ, ಪುರಾಣಪುರುಷನ ಪರಮಾನಂದ ಸ್ವರೂಪದಲ್ಲಿ ಲೀನರಾಗುತ್ತಾರೆ. ಅವರಲ್ಲಿ ಅಹಂಕಾರ ಶೇಷವಿರುತ್ತದೆ. ಆದರಿಂದ ಮೊದಲು ಲೀನ ರಾಗಲು ಆಗುವುದಿಲ್ಲ. ಮಾತಃ-ನೀನೂ ಶ್ರೀಹರಿಯ ಚರಣ ಕಮಲಗಳನ್ನು ಅನನ್ಯ ಶರಣಳಾಗಿ ಭಜಿಸು. ಸರ್ವಪ್ರಾಣಿಗಳ ಹೃತ್ಕಮಲದಲ್ಲಿಯೂ, ಅವನು ವಾಸವನ್ನು ಕಲ್ಪಿಸಿ ಕೊಂಡಿದ್ದಾನೆ. ಅವನ ಪ್ರಭಾವ ವರ್ಣನೆಯನ್ನೂ ಸಾಕಷ್ಟು ಕೇಳಿರುವೆ.

ಸರ್ವ ಸ್ಥಾವರ-ಜಂಗಮ ಪ್ರಾಣಿಗಳಿಗೆ ಆದಿಕಾರಣನಾದ ವೇದಗರ್ಭಾ ಬ್ರಹ್ಮನೂ, ಮರೀಚ್ಯಾದಿ ಋಷಿಗಳೂ, ಸನಕಾದಿಗಳೂ ಸಹ ಸರ್ಗಕಾಲದಲ್ಲಿಯೂ ಈಶ್ವರನ ಪ್ರೇರಣೆಗನುಗುಣವಾಗಿ ಹಿಂದಿನಂತೆ ಪ್ರಕಟರಾಗುತ್ತಾರೆ. ಯಾರುವೇದೋಕ್ತ ಕರ್ಮಾಚರಣೆಗಳಲ್ಲಿಯೇ ಆಸಕ್ತರಾಗಿರುತ್ತಾರೊ. ಅವರ ಬುದ್ಧಿಯು ರಜೋಗುಣದ ಆಧಿಕ್ಯದಿಂದ ಕುಂಠಿತ ವಾಗಿರುತ್ತದೆ. ಕಾಮನೆಗಳ ಮಾಯಜಾಲಕ್ಕೆಸಿಕ್ಕಿ ಕೊಂಡಿರುತ್ತಾರೆ. ಇಂದ್ರಿಯಗಳಿಗೆ ಅಧೀನರಾಗಿರುತ್ತಾರೆ. ಗೃಹಾಸಕ್ತರಾಗಿ ನಿತ್ಯವೂ ಪಿತೃದೇವತೆಗಳ ಆರಾಧನೆಯಲ್ಲಿ ತೊಡಗಿರುತ್ತಾರೆ. ಸಕಲ ಭವ ಭಯಹಾರೀ ಶ್ರೀಹರಿಯ ಕಥಾವಾರ್ತೆಗಳಲ್ಲಿ ಅನಾಸಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿರುತ್ತಾರೆ. ವಿಷ್ಠಾ ಭೋಜಿ ಸೂಕರಾದಿಗಳಂತೆ, ಭಗವತ್ಕಥಾಮೃತ ಸೇವನೆಯನ್ನು ಬಿಟ್ಟು, ವಿಷಯವಾರ್ತೆಗಳನ್ನು ಕೇಳುತ್ತಾ ದೈವ ಹತರಾಗಿರುತ್ತಾರೆ. ಇವರು ನಿಜವಾಗಿಯೂ ಹತಭಾಗ್ಯರು. ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿಯವರೆಗೆ ವಿಧಿಗನುಸಾರವಾಗಿ ಸಂಸ್ಕಾರಗಳನ್ನು ನಡೆಸುವ ಇವರುಗಳು ಪಿತೃಯಾನ ಅಥವಾ ಧೂಮ ಮಾರ್ಗದಿಂದ ಅರ್ಯಮಾಲೋಕಕ್ಕೆ ಹೋಗುತ್ತಾರೆ. ಹಾಗೂ ತಮ್ಮ ಸಂತತಿಯ ಮೂಲಕ ತಮ್ಮ ವಂಶದಲ್ಲಿ ಹುಟ್ಟುತ್ತಾರೆ.

ಆದರಿಂದ ಸರ್ವಥಾತ್ಮನಾ ಭಜನೀಯ ಪದಾಂಬುಜನಾದ ನಾರಾಯಣನನ್ನು ಸರ್ವಭಾವದಿಂದಲೂ ಮನಸ್ಸಿನಿಂದ, ವಾಣಿಯಿಂದ, ದೇಹದಿಂದ ಸ್ಮರಿಸುತ್ತಿರಬೇಕು. ಭಗವಂತನ ಭಕ್ತಿಯೋಗದಿಂದ ಜೀವನದಲ್ಲಿ ಎರಡು ವಿಚಾರಗಳು ಮೂಡುತ್ತವೆ. —**ಜನಯತ್ಯಾಶು ವೈರಾಗ್ಯಂ, ಜ್ಞಾನಂ ಯದ್ಬ್ರಹ್ಮ ದರ್ಶನಂ.** ಸಾಂಸಾರಿಕ ವಿಷಯಗಳೊಡನೆ ವೈರಾಗ್ಯವೂ, ಬ್ರಹ್ಮ ಸಾಕ್ಷಾತ್ಕಾರ ರೂಪ ಜ್ಞಾನವೂ ಮೂಡುತ್ತದೆ. ಎಲ್ಲಾ ವಿಷಯಗಳೂ ಭಗವದ್ರೂಪಗಳೇ, ಆದುದರಿಂದ ಎಲ್ಲವೂ ಸಮಾನವೇ, ಭಗವದ್ಭಕ್ತನ ಚಿತ್ತವು ಇಂದ್ರಿಯ ವೃತ್ತಿಗಳಲ್ಲಿ. ಪ್ರಿಯ, ಅಪ್ರಿಯ ವಿಷಮತೆಯ ಅನುಭವವನ್ನು ಪಡೆಯುವುದಿಲ್ಲ. ಎಲ್ಲೆಲ್ಲಿಯೂ ಭಗವದ್ದರ್ಶನವನ್ನೇ ಮಾಡುತ್ತಾನೆ. ಆಗ ಅವನು ಸಂಗ ರಹಿತನಾಗಿ, ಸಮಾನರೂಪದಿಂದ, ಹೇಯೋಪಾದೇಯರಹಿತನಾಗಿ, ಸ್ವಾತ್ಮರೂಪೀ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

ಜ್ಞಾನಮಾತ್ರಂ ಪರಂಬ್ರಹ್ಮ. ಪರಮಾತ್ಮೇಶ್ವರಃ ಪುಮಾನ್.
ದೃಶ್ಯಾದಿಭಿಃ ಪೃಥಗ್ಭಾವೈಃ, ಭಗವಾನೇಕ ಈಯತೇ.

ಭಗವಂತನೇ ಜ್ಞಾನ ಸ್ವರೂಪನು, ಅವನೇ ಪರಬ್ರಹ್ಮನು, ಅವನೇ ಪರಮಾತ್ಮನು, ಅವನೇ ಈಶ್ವರನು, ಪರಮಪುರುಷನು, ಶರೀರೇಂದ್ರಿಯ ವಿಷಯ ರೂಪಗಳಲ್ಲಿ ಅವನೇ ಪ್ರಕಾಶಿಸುತ್ತಾನೆ. ಸಂಪೂರ್ಣ ಸಂಸಾರ ನಿರಾಸಕ್ತಿಯೇ ಯೋಗಿಗಳಿಗೆ ಯೋಗ ಸಾಧನೆಯ ಉತ್ಕೃಷ್ಟಫಲವಾಗಿದೆ. **ಜ್ಞಾನಮಾತ್ರಂ**

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಂಬ್ರಹ್ಮ, ಎಂದರೇನು? ಜ್ಞಾನಮೇವೈತಿ ಜ್ಞಾನಮಾತ್ರಂ, ಕೇವಲ ಜ್ಞಾನವೇ ಎಂದರ್ಥವು. ಜ್ಞಾತೃ-ಜ್ಞಾನ -ಜ್ಞೇಯರಹಿತವಾದುದು, ಪರಬ್ರಹ್ಮ ಪರಮಾತ್ಮನಲ್ಲಿ ಜ್ಞಾತೃ-ಜ್ಞಾನದ ಭೇದವಿಲ್ಲ. ಒಬ್ಬನೇ ಆದ ಭಗವಂತನು, ದ್ರಷ್ಟೃವಾಗಿಯೂ, ದೃಶ್ಯವಾಗಿಯೂ ಭಾಸಿಸುತ್ತಿದ್ದಾನೆ. ಬಹಿರ್ಮುಖಗಳಾದ ಇಂದ್ರಿಯಗಳು ವಿವಿಧರೂಪದಲ್ಲಿ ಬ್ರಹ್ಮನನ್ನು ತೋರಿಸುತ್ತಿವೆ.

ಅಮ್ಮ- ನಿನಗೆ ಬ್ರಹ್ಮಸಾಕ್ಷಾತ್ಕಾರೋಪಯೋಗಿ ಜ್ಞಾನವನ್ನು ಉಪದೇಶಿಸಿದ್ದೇನೆ. ಇದರಿಂದ ಪ್ರಕೃತಿ ಪುರುಷರ ಯಥಾರ್ಥ ಬೋಧವಾಗುವುದು. ನಿರ್ಗುಣ ಬ್ರಹ್ಮವಿಷಯಕ ಜ್ಞಾನಯೋಗವೂ, ಭಕ್ತಿಯೋಗವೂ ಒಂದೇ. ಭಗವಂತನು ಒಬ್ಬನೇ. ಶಾಸ್ತ್ರೀಯ ಮಾರ್ಗಗಳು ಹಲವು.

ಮನ್ನಿಷ್ಠ ಭಕ್ತಿಯೋಗವಾಗಲಿ, ನಿರ್ಗುಣ ಬ್ರಹ್ಮ
ಜ್ಞಾನ ಯೋಗವಾಗಲಿ. ಎರಡೂ ಒಂದೇ.

ಶಾಸ್ತ್ರಸಂಪ್ರದಾಯಾನುಸಾರವಾಗಿ ಒಬ್ಬನೇ ಆದ ಭಗವಂತನು ವಿವಿಧರೂಪದಲ್ಲಿ ಕಾಣುತ್ತಾನೆ. ಕರ್ಮಗಳು ಬೇರೆ, ದಾನ-ತಪಸ್ಸು, ಸ್ವಾಧ್ಯಾಯಗಳು ಬೇರೆ, ಸಕಾಮ, ನಿಷ್ಕಾಮ ಧರ್ಮಗಳು ಬೇರೆ, ವೈರಾಗ್ಯವು ಬೇರೆ, ಈ ಮಾರ್ಗ ಭೇದಗಳಿಂದ ಪರಮಾತ್ಮನು ಭಿನ್ನನಾಗುವುದಿಲ್ಲ. ಅಮ್ಮ, ಸಾತ್ವಿಕ, ರಾಜಸ, ತಾಮಸ ನಿರ್ಗುಣ ಭೇದದಿಂದ ಭಕ್ತಿಯೋಗದ ವಿವಿಧತೆಯನ್ನು ತಿಳಿಸಿದ್ದೇನೆ. ಪ್ರಾಣಿಗಳು ಜನ್ಮಾದಿಗಳಿಗೆ ಕಾರಣ ಭೂತವಾದ, ಯಾವುದರ ಗತಿಗಳನ್ನು ತಿಳಿಯಲಾಗುವುದಿಲ್ಲವೋ ಆ ಕಾಲನಸ್ವರೂಪವನ್ನೂ ತಿಳಿಸಿದ್ದೇನೆ. ಅವಿದ್ಯಾ ಜನಿತ ಕರ್ಮಕಲಾಪಗಳಿಂದ ಜೀವನಿಗೆ ಅನೇಕಗತಿಗಳುಂಟಾಗುತ್ತವೆ. ಅವುಗಳಲ್ಲಿ ಪ್ರವೇಶಿಸಿ ಬಿಟ್ಟರೆ ಸ್ವಸ್ವರೂಪವನ್ನು ಪಡೆಯಲು ಸಾಧ್ಯವಿಲ್ಲ. ನಾನು ನಿನಗೆ ಮಾಡಿರುವ ಜ್ಞಾನೋಪದೇಶವನ್ನು ದುಷ್ಟ, ದುರ್ವಿನೀತ, ಗರ್ವಿ, ದುರಾಚಾರಿ, ಧರ್ಮಧ್ವಜೀ (ದಂಭಿ) ಪುರುಷರಿಗೆ ಹೇಳಬಾರದು. ವಿಷಯ ಲೋಲುಪರಿಗೆ, ಗೃಹಾಸಕ್ತರಿಗೆ, ಭಕ್ತರಲ್ಲದವರಿಗೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತದ್ವೇಷಿಗಳಿಗೆ, ಯಾವಾಗಲೂ ಇದನ್ನು ಹೇಳಬಾರದು. ಈ ಜ್ಞಾನ ಪ್ರಾಪ್ತಿಗೆ ವಿನಯ ಶ್ರದ್ಧಾ, ಜಿಜ್ಞಾಸಾ, ಮುಮುಕ್ಷುತ್ವಗಳಿರಬೇಕು. ಸದ್ಗುರುವಿನಿಂದ ಉಪದೇಶವನ್ನು ಪಡೆಯಬೇಕು.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ ದ್ವಾತ್ರಿಂಶೋಽಧ್ಯಾಯಃ

ಶ್ರೀಮದ್ಭಾಗವತದರ್ಶನ, ಸ್ಕಂಧ ೩-ಅ ೩೩.
ದೇವಹೂತಿಯ ತತ್ವ ಜ್ಞಾನ-ಮೋಕ್ಷಪ್ರಾಪ್ತಿ.

ಮೈತ್ರೇಯರು ಹೇಳುತ್ತಾರೆ-ವಿದುರ, ಭಗವಾನ್ ಕಪಿಲರ ಉಪದೇಶದಿಂದ ದೇವಹೂತಿಯ ಮೋಹ ಪಟಲವು ಕಳಚಿ ಹೋಯಿತು. ತತ್ತ್ವಪ್ರತಿಪಾದಕವಾದ ಸಾಂಖ್ಯ ಶಾಸ್ತ್ರದಆಧಾರಭೂಮಿಯಾದ ಕಪಿಲರನ್ನು ನಮಸ್ಕರಿಸಿ ಸ್ತೋತ್ರಮಾಡಿದಳು-ಭಗವನ್, ಬ್ರಹ್ಮನು ನಿನ್ನ ನಾಭಿಕಮಲಜನು, ಅವನು ಪ್ರಳಯ ಕಾಲದಲ್ಲಿ ಅಖಂಡ ಜಲಶಾಯಿಯಾಗಿದ್ದ ಪಂಚ ಭೂತಾತ್ಮಕ, ಇಂದ್ರಿಯ ಶಬ್ದಾದಿ ವಿಷಯಾತ್ಮಕವಾದ ನಿನ್ನ ಮನೋಮಯ ವಿಗ್ರಹವನ್ನು ಧ್ಯಾನಮಾಡಿದನು, ಆ ನಿನ್ನ ವಿಗ್ರಹವು ಸತ್ತ್ವಾದಿಗುಣಗಳಿಂದ ಯುಕ್ತವಾದುದು. ಸತ್ ಸ್ವರೂಪಿಯು, ಕಾರ್ಯಕಾರಣಗಳೆರಡರ ಬೀಜಸ್ವರೂಪವಾದುದು. ನೀನಾದರೋ ನಿಷ್ಕ್ರಿಯನು, ಸತ್ಯಕಾಮನು, ಸತ್ಯಸಂಕಲ್ಪನು, ಸಕಲ ಜೀವಿಗಳ ಪ್ರಭುವು, ಸಹಸ್ರಾರು ಅಚಿಂತ್ಯ ಶಕ್ತಿಗಳಿಂದ ಸಂಪನ್ನನಾದವನು. ನಿನ್ನ ಶಕ್ತಿಯನ್ನೇ ಗುಣ ಪ್ರವಾಹ ರೂಪದಿಂದ ಬ್ರಹ್ಮಾದ್ಯನಂತ ಮೂರ್ತಿಗಳಲ್ಲಿ ವಿಭಾಗಿಸಿ-ಅವರ ಮೂಲಕ ನೀನೇ ವಿಶ್ವವನ್ನು ರಚಿಸುವೆ. ಪ್ರಭೋ ಇದೊಂದು ಆಶ್ಚರ್ಯಕರವಾದ ಸಂಗತಿಯಾಗಿದೆ.-ಪ್ರಳಯಕಾಲದಲ್ಲಿ ನೀನು ಸಮಸ್ತಸೃಷ್ಟಿಯನ್ನು ನಿನ್ನಲ್ಲಿಲೀನಗೊಳಿಸಿಕೊಂಡು, ಮಾಯಾಮಯಬಾಲಕನಾಗಿ, ವಟಪತ್ರಶಾಯಿಯಾಗಿ ಕಾಲಿನ ಹೆಬ್ಬೆರಳನ್ನು ಚೀಪುತ್ತಾ ಮಲಗಿರುವೆ. ಇಂತಹ ನಿನ್ನನ್ನು ನಾನು ಗರ್ಭದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಧರಿಸಿದ್ದೆನೆಂದರೆ ಇದೆಂತಹ ಮಹದಾಶ್ಚರ್ಯವು? ಶ್ವಪಚರು, ಚಂಡಾಲರು ಯಜ್ಞಾಧಿಕಾರಿಗಳಲ್ಲವೆಂದು ಹೇಳುತ್ತಾರೆ. ಈ ವ್ಯವಸ್ಥೆಯು ಅನ್ಯಾಯ ಪೂರ್ವಕವಾದುದೆಂದೂ ಹೇಳುವವರಿದ್ದಾರೆ. ಆದರೆ ದೊಡ್ಡ-ದೊಡ್ಡ ಯಜ್ಞ-ಯಾಗಾದಿಗಳನ್ನು ನಡೆಸಿದವರಿಗೆ ಸಿಕ್ಕುವ ಫಲವು ಯಜ್ಞಾದಿಕರ್ಮ ಗಳಿಗೆ ಅನಧಿಕಾರಿಯಾದ ಚಂಡಾಲನಿಗೂ ದೊರಕುವುದಾದರೆ ಅನ್ಯಾಯವೆಲ್ಲಿ ಬಂದಿತು? ಬ್ರಾಹ್ಮಣನಿಗೆ ಬೃಹಸ್ಪತಿಚಯನದಿಂದ, ಕ್ಷತ್ರಿಯನಿಗೆ ರಾಜಸೂಯ ದಿಂದ, ವೈಶ್ಯನಿಗೆ ವೈಶ್ಯಸ್ತೋಮದಿಂದ ದೊರಕುವ ಫಲವು ಚಂಡಾಲನಿಗೆ ಭಗವನ್ನಾಮ ಶ್ರವಣ ಮಾತ್ರದಿಂದ, ಕೀರ್ತನೆ ಮಾತ್ರದಿಂದ, ಭಗವನ್ನಾಮ ಸ್ಮರದಿಂದ, ಭಗವಂತನ ಸ್ಮರಣೆಯಿಂದಲೇ ದೊರಕುವುದಾದರೆ, ಅದು ಅನ್ಯಾಯವೊ ಅನುಗ್ರಹವೊ? ನೀನು ಸಾಕ್ಷಾತ್ ಪರಬ್ರಹ್ಮನು, ಪರಮ ಪುರುಷನು. ಸಕಲ ವೃತ್ತಿಗಳನ್ನೂ ಅಂತರ್ಮುಖ ಮಾಡಿಕೊಂಡು ಯೋಗಿ ಗಳು ಅಂತಃಕರಣದಲ್ಲಿ ನಿನ್ನನ್ನು ಚಿಂತಿಸುತ್ತಾರೆ. ನೀನು ನಿನ್ನ ತೇಜಸ್ಸಿನಿಂದ ಮಾಯಾಕಾರ್ಯವಾದ ಗುಣ ಪ್ರವಾಹವನ್ನು ಶಾಂತಗೊಳಿಸುವೆ. ನೀನು ವೇದಗರ್ಭನು- ನಿನ್ನುದರದಲ್ಲಿ ಅಸಂಖ್ಯಾತ ವೇದಗಳಿವೆ. ಇಂತಹ ವಿಷ್ಣು ಸ್ವರೂಪಿಯಾದ ಭಗವಾನ್ ಕಪಿಲನಿಗೆ ಅನಂತ ನಮಸ್ಕಾರಗಳು.

ತಾಯಿಯ ಸ್ತೋತ್ರದಿಂದ ಪ್ರಸನ್ನನಾದ ಕಪಿಲನು ಗಂಭೀರ ವಾಣಿ ಯಿಂದ ಹೇಳಿದನು— ಮಾತ : ನಾನು ನಿನಗೆ ಬೋಧಿಸಿರುವ ಈ ಸುಗಮ ಮಾರ್ಗವನ್ನು ಅವಲಂಬಿಸುವುದರಿಂದ ನೀನು ಬಹುಬೇಗ ಪರಮ ಪದ ಭಾಗಿ ಯಾಗುವೆ. ನೀನು ಇದರಲ್ಲಿ ವಿಶ್ವಾಸವಿಡು. ಬ್ರಹ್ಮವಾದಿಗಳೆಲ್ಲರೂ ಈ ಮಾರ್ಗವನ್ನು ಅವಲಂಬಿಸಿದ್ದಾರೆ. ಇದರ ಮೂಲಕ ನೀನು ನನ್ನ ಜನ್ಮ-ಮರಣ ರಹಿತವಾದ ದಿವ್ಯ ಸ್ವರೂಪವನ್ನು ತಿಳಿಯುವೆ. ನನ್ನೀ ಅಭಿಪ್ರಾಯ ವನ್ನು ಮಾನ್ಯ ಮಾಡದಿರುವವರು ಜನ್ಮ ಮೃತ್ಯು ಪ್ರವಾಹದಲ್ಲಿ ಮುಳುಗು ತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಬ್ರಹ್ಮವಾದಿನಿಯಾದ ಜನನೀ ದೇವಹೂತಿಗೆ ಉಪದೇಶಿಸಿ ಕಪಿಲರು ಅವಳಿಂದ ಅನುಮತಿಯನ್ನು ಪಡೆದು ಹೊರಟು ಹೋದರು. ದೇವಹೂತಿಯೂ ಸರಸ್ವತೀ ತೀರದ ತನ್ನ ಆಶ್ರಮದಲ್ಲಿ, ಪುತ್ರನ ಉಪದೇಶಾನುಸಾರ ಯೋಗಾಭ್ಯಾಸರತಳಾಗಿ ಸಮಾಧಿಸ್ಥಳಾದಳು. ತ್ರಿಕಾಲ ಸ್ನಾನದಿಂದ ಅವಳ ನುಣುಪಾದ ಕೂದಲುಗಳು ಜಡೆಗಳಾದುವು. ವಲ್ಕಲಧಾರಿಣಿಯಾದ ಅವಳ ಶರೀರವು ದಿನೇ ದಿನೇ ಕೃಶವಾಗಹತ್ತಿತು. ಪ್ರಜಾಪತಿ ಕರ್ದಮರ ಮಹದ್ಯೋಗಬಲದಿಂದ ಪ್ರಾಪ್ತವಾದ ವೈಭವೋಪೇತವಾದ ಗಾರ್ಹಸ್ಥ್ಯವನ್ನೂ ತ್ಯಜಿಸಿದ್ದಳು ಅವರ ಗಾರ್ಹಸ್ಥ್ಯದ ವೈಭವವನ್ನು ನೋಡಿ ದೇವತೆಗಳೂ ಅಸೂಯೆ ಪಡುತ್ತಿದ್ದರು ಸರ್ವ ಮನೋಹರವಾದ ಗೃಹೋದ್ಯಾನವನು ತ್ಯಜಿಸಿ ಬಿಟ್ಟಳು. ಆ ಉದ್ಯಾನದ ಶೋಭೆಯನ್ನು ಬಣ್ಣಿಸಲಾಗುತ್ತಿತ್ತೆ? ಹಾಲಿನ ನೊರೆಯಂತೆ ಸ್ವಚ್ಛವಾದ, ಸುಕೋಮಲ ಶಯ್ಯೆಯಿಂದ ಯುಕ್ತವಾದ ಆನೆ ದಂತದ ಮಂಚಗಳಿದ್ದುವು. ಸುವರ್ಣ ಪಾತ್ರೆಗಳಿದ್ದುವು ರತ್ನ ಸಿಂಹಾಸನ, ಅದಕ್ಕೆ ಮೆಟ್ಟಿಲ್ದು, ಸ್ಫಟಿಕಮಣಿ, ಮರಕತ ಮಣಿಗಳು, ಮಣಿಮಯ ದೀಪಗಳಂತಿದ್ದುವು. ಫಲ ಪುಷ್ಪ ಭರಿತ ವೃಕ್ಷಗಳಿಂದ ಶೋಭಾಯಮಾನವಾಗಿದ್ದಿತು. ಆ ಪಕ್ಷಿಗಳ ಕಲರವ, ಭ್ರಮರಗಳ ಗುಂಜಾರವ, ಅವರ ಗುಣಗಾನ ಮಾಡುತ್ತಿದ್ದ ಗಂಧರ್ವರ ಸಮೂಹ, ಇಂದ್ರಾಣಿಯೂ ಸಹ ಇಂತಹುದು ಬೇಕೆಂದು ಬಯಸುತ್ತಿದ್ದಳು. ಅಂತಹ ಗೃಹೋದ್ಯಾನವನ್ನೂ ದೇವಹೂತಿಯು ತ್ಯಜಿಸಿ ಬಿಟ್ಟಳೆಂದರೆ ಅವಳ ವೈರಾಗ್ಯವೆಂತಹುದು?. ಪ್ರಬಲ ವೈರಾಗ್ಯಯುಕ್ತಳಾಗಿ, ಭಗವದ್ಭಕ್ತಿ ಪ್ರವಾಹದಲ್ಲಿ ಮುಳುಗಿ, ಯಥೋಚಿತ ಕರ್ಮಾನುಷ್ಠಾನದಿಂದ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡಳು.

ಬ್ರಹ್ಮಣ್ಯವಸ್ಥಿತಮತಿಃ ಭಗವತ್ಯಾತ್ಮ ಸಂಶ್ರಯೇ
ನಿವೃತ್ತಜೀವಾಪತ್ತಿತ್ವಾತ್ ಕ್ಷೀಣಕ್ಲೇಶಾಪ್ತನಿರ್ವೃತಿಃ

ಜೀವಾಪತ್ತಿ ಎಂದರೆ ಜೀವಭಾವಾಪನ್ನನು. ಆತ್ಮ ದೇವನು ಜೀವನಲ್ಲ– ಜೀವಭಾವೋಪನ್ನನಷ್ಟೆ. ಅಧ್ಯಾಸದ ಕಾರಣದಿಂದ, ಸ್ವರೂಪ ಜ್ಞಾನಾಭಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ಥಿಂದ ಜೀವನು ಪರಮಾತ್ಮನಿಂದ ವಿಮುಖನಾಗಿದ್ದಾನೆ. ದತ್ತಾತ್ರೇಯ, ಋಷಭದೇವ, ಜಡಭರತ ಇವರುಗಳ ಆಕರ್ಷಕ ಶರೀರದ ಸೌಷ್ಠವವನ್ನು ವರ್ಣಿಸುತ್ತಾರೆ. ಧೂಮದೊಡನೆ ಅಗ್ನಿಯು ಇರುವಂತೆ ಅವಳ ದೇಹವು ಮಲಿನವಾಗಿದ್ದಿತು. ದೇವತೆಗಳು ಅದನ್ನು ರಕ್ಷಿಸುತ್ತಿದ್ದರು. ದೇವಹೂತಿ ಯಾದರೊ ಪರಮಾತ್ಮನಲ್ಲಿ ಲೀನವಾಗಿದ್ದಳು. ಕೂದಲುಗಳು ಕೆದರಿದ್ದುವು. ವಸ್ತ್ರಗಳು ಜಾರಿಹೋಗಿದ್ದುವು. ಭಗವಂತನಲ್ಲಿ ಚಿತ್ತವು ಲೀನವಾಗಿದ್ದಿತು. ಹೀಗೆ ದೇವಹೂತಿಯು ಕಪಿಲೋಪದೇಶದಂತೆ ನಿತ್ಯ ಮುಕ್ತ ಪರಮಾತ್ಮನನ್ನು ಹೊಂದಿದಳು. ಅವಳಿಗೆ ಸಿದ್ಧಿಯು ದೊರಕಿದ ಆ ಪರಮ ಪವಿತ್ರ ಕ್ಷೇತ್ರವು "ಸಿದ್ಧಪದ" ಎಂಬ ಹೆಸರಿನಿಂದ ಈಗಲೂ ಪ್ರಸಿದ್ಧಿಯಲ್ಲಿದೆ.

ಮಹಾಯೋಗಿ ಕಪಿಲನು ತಾಯಿಯ ಆಜ್ಞೆಯನ್ನು ಪಡೆದು ತಂದೆಯ ಆಶ್ರಮದಿಂದ ಈಶಾನ್ಯದಿಕ್ಕಿಗೆ ಪ್ರಯಾಣ ಮಾಡಿದನು. ಸ್ವಯಂ ಸಮುದ್ರನು ಅವನನ್ನು ಪೂಜಿಸಿ ಸ್ಥಳವನ್ನು ಕೊಟ್ಟನು. ತ್ರಿಲೋಕಗಳಿಗೂ ಶಾಂತಿ ಪ್ರದನಾದ ಯೋಗಾಚಾರ್ಯ ಕಪಿಲನು ಸಮಾಧಿಸ್ಥನಾದನು. ಸಿದ್ಧ - ಚಾರಣ ಗಂಧರ್ವ - ಅಪ್ಸರೋಗಣಗಳು ಅವನನ್ನು ಸ್ತುತಿಸುತ್ತಿದ್ದಾರೆ. ಎಲ್ಲಾ ಸಾಂಖ್ಯಾಚಾರ್ಯರೂ ಅವನನ್ನು ಇಂದಿಗೂ ಸ್ತೋತ್ರ ಮಾಡುತ್ತಾರೆ.

ಮೈತ್ರೇಯರು ಹೇಳುತ್ತಾರೆ— ವಿದುರ - ನೀನು ಕೇಳಿದಂತೆ ಕಪಿಲ - ದೇವಹೂತಿಯರ ಪರಮ ಶ್ರೇಷ್ಠವಾದ ಈ ಸಂವಾದವನ್ನು ತಿಳಿಸಿದ್ದೇನೆ. ಈ ಯೋಗಶಾಸ್ತ್ರದ ಶ್ರವಣ - ವರ್ಣನ - ಮನನಗಳನ್ನು ಮಾಡುವವನ ಬುದ್ಧಿಯು ಭಗವಂತನನ್ನಾಶ್ರಯಿಸುತ್ತದೆ. ಶ್ರೀಗರುಡಧ್ವಜನ ಭಕ್ತಿಯಿಂದ ಶೀಘ್ರವಾಗಿ ಹರಿಚರಣಾರವಿಂದಗಳ ಪ್ರಾಪ್ತಿಯಾಗುತ್ತದೆ.

ಓಂ ತತ್ಸದಿತ್ಯೇವಂ ತೃತೀಯ ಸ್ಕಂಧೇ
ತ್ರಯಸ್ತ್ರಿಂಶಃ ಅಧ್ಯಾಯಃ
ಸಮಾಪ್ತಃ ತೃತೀಯ ಸ್ಕಂಧಃ
ಶ್ರೀವಾಸುದೇವಾರ್ಪಣಮಸ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯ ಜ್ಞಾನ ಸ್ವರೂಪಾಯ, ವಿಶ್ವೋತ್ಪತ್ತ್ಯಾದಿಹೇತವೇ।
ತಾಪತ್ರಯ ವಿನಾಶಾಯ; ಶ್ರೀಕೃಷ್ಣಾಯಾಸ್ತು ಮಂಗಳಮ್॥

ದುಷ್ಟ ಕಂಸ ಭಯಚ್ಛೇತ್ರೇ, ಶಿಶು ಪಾಲಾದಿಧ್ವಂಸಿನೇ।
ಜರಾಸಂಧ ವಿಮೋಕ್ಷಾಯ, ಶ್ರೀ ಕೃಷ್ಣಾಯಾಸ್ತು ಮಂಗಳಮ್॥

ದ್ವಾರಕಾವಾಸಿನೇ ತುಭ್ಯಂ, ಸತ್ಯಭಾಮಾರತಾಯಚ।
ದ್ರೌಪದೀ ಮಾನ ರಕ್ಷಿತ್ರೇ, ಶ್ರೀಕೃಷ್ಣಾಯಾಸ್ತು ಮಂಗಳಮ್॥

ಧರ್ಮ ರೂಪ ಸ್ವರೂಪಾಯ, ಧರ್ಮೋದ್ಧಾರ ರತಾಯತೇ।
ಧರ್ಮ ಪ್ರಿಯಾಯ ಸತ್ಯಾಯ, ಶ್ರೀಕೃಷ್ಣಾಯಾಸ್ತು ಮಂಗಳಮ್॥

ಮಂಗಳಂ ಯಾದವೇಂದ್ರಾಯ, ಮಹನೀಯ ಗುಣಾತ್ಮನೇ।
ವಾಸುದೇವಾಯ ಶುದ್ಧಾಯ, ಶ್ರೀ ಕೃಷ್ಣಾಯಾಸ್ತು ಮಂಗಳಮ್॥

ರಾಜಾಧಿರಾಜವೇಷಾಯ, ರಾಜತ್ಕಂಕಣಪಾಣಯೇ,।
ರಾಜೀವಚಾರು ನೇತ್ರಾಯ, ಕೃಷ್ಣ ಭದ್ರಾಯ ಮಂಗಳಮ್॥

ಮುಗ್ಧಗೋಪ ವಧೂತ್ತುಂಗ ಕುಚ ಮಂಡಲ ಶಾಯಿನೇ।
ಮುರಳೀ ಗಾನಲೋಲಾಯ, ಮುಕುಂದಾಯಾಸ್ತು ಮಂಗಳಮ್॥

ಮಂಗಳಂ ಕೃಷ್ಣಗುರುವೇ, ಶ್ರೀನಿವಾಸಾಯ ಮಂಗಳಮ್।
ಸರ್ವೇಷಾಮಸ್ತು ಭಕ್ತಾನಾಂ ನಿತ್ಯ ಶ್ರೀರ್ನಿತ್ಯ ಮಂಗಳಮ್॥

ಯೋಗಿ ಜ್ಞಾನ ವರೇಣ್ಯಾಯ, ನಿರ್ಮಲ ಜ್ಞಾನವರ್ತಯೇ।
ದೇವಹೂತಿ ಸುಪುತ್ರಾಯ, ಕಪಿಲಾಯಾಸ್ತು ಮಂಗಳಮ್॥

ಕರ್ದಮ ಜ್ಞಾನ ಬೋಧಾಯ, ನಿತ್ಯ ಜ್ಞಾನ ಸ್ವರೂಪಿಣೇ।
ಭಕ್ತ ಹಾರ್ದ ತಮಃ ಛೇತ್ರೇ, ಕಪಿಲಾಯಾಸ್ತು ಮಂಗಳಮ್॥

ಯೋಮಾತರಂ ಬೋಧಯಿತ್ವಾ, ಸ್ವಯಂ ಸತ್ತ್ವಪಸಿಸ್ಥಿತಃ।
ನಿರ್ಮಲಾಯ ಪ್ರಶಾಂತಾಯ, ಕಪಿಲಾಯಾಸ್ತು ಮಂಗಳಮ್॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರಾಯಣ ಸ್ವರೂಪಾಯ, ಸಾಂಖ್ಯಾಚಾರ್ಯಾಯ ಯೋಗಿನೇ
ಸಂಸಾರ ಭಯಹರ್ತ್ರೇಚ, ಕಪಿಲಾಯಾಸ್ತು ಮಂಗಳಂ
ದಯಾ ಮಯೋ ಹರಿಃ ಸಾಕ್ಷಾನ್ಮಾತುಃ ಪ್ರಿಯ ಚಿಕೀರ್ಷಯಾ,
ಅಜನ್ಮಾಪಿ ಭವಂ ಭೇಜೇ, ಕಪಿಲಾಯಾಸ್ತು ಮಂಗಳಮ್

ಆಶೀರ್ವಚನ

ಸರ್ವತಃ ಸುಖಿನಃ .ಸಂತು ಸರ್ವೇಸಂತುನಿರಾಮಯಾಃ।
ಸರ್ವೇಭದ್ರಾಣಿ ಪಶ್ಯಂತು ಮಾಕಶ್ಚಿದ್ದುಃಖಮಾಪ್ನುಯಾತ್॥
ಜಯತು ಜಯತು ಕೃಷ್ಣೋ ದೇವಕೀನಂದನೋಽಯಮ್।
ಜಯತು ಜಯತು ಧರ್ಮೋವೇದ ವಿದ್ಯಾ ಪ್ರಬೋಧಃ॥
ಜಯತು ಜಯತು ದೇಶೋಭಾರತೋ ಭೂರಿತಂತ್ರಃ।
ಜಯತು ಜಯತು ವಾಣೀ ಕೃಷ್ಣವಾಣೀ ಸುವಾಣೀ॥
ದುರ್ಜನಃ ಸಜ್ಜನೋ ಭೂಯಾತ್, ಸಜ್ಜನಃ ಶಾಂತಿಮಾಪ್ನುಯಾತ್।
ಶಾಂತೋಮುಚ್ಯೇತ ಬಂಧೇಭ್ಯೋ ಮುಕ್ತಶ್ಚಾನ್ಯಾನ್ವಿಮೋಚಯೇತ್॥

ಶ್ರೀ ಸದ್ಗುರು ಚರಣಾರವಿಂದಾರ್ಪಣಮಸ್ತು ॥

(ಶ್ರೀ ಭಾಗವತದರ್ಶನದ ಮಹೇಶನಾಮಕ ಎರಡನೆಯ ಸಂಪುಟವು ಮುದ್ರಣದಲ್ಲಿದೆ ಶೀಘ್ರದಲ್ಲಿಯೇ ಪ್ರಕಟಗೊಳ್ಳುವುದು)

Sri Vidyabharathi Book Centre, Sringeri

CC-0. In Public Domain. Digitized by eGangotri

ಆ ಶ್ರೀ ಭಾಗವತ ಪ್ರಕಾಶನ ಸಮಿತಿಯ ಮಹಾ ಪೋಷಕರು.

ಕ್ರಮ ಸಂಖ್ಯೆ			ಸದಸ್ಯ ಸಂಖ್ಯೆ
1	ಶ್ರೀ.ಬಿ. ಗೋಪಾಲಯ್ಯನವರು,	ಬೆಂಗಳೂರು 4	2
2	ಶ್ರೀ.ಕೆ.ರಾ.ವೆ. ಸುಬ್ರಹ್ಮಣ್ಯಶಾಸ್ತ್ರಿಗಳು, ಪ್ರವಕ್ತಾ	ಬೆಂ-ರು 11	3
3	ಶ್ರೀ.ಆರ್. ನಾಗರಾಜ್ ಅವರು ಜಮೀಂದಾರ್,	ಬೆಂ-ರು	4
4	ಶ್ರೀ.ಡಾ. ರಾಮಕೃಷ್ಣಅವರು.	ಬೆಂ-ರು 11	30
5	ಶ್ರೀ.ಅಪ್ಪಯ್ಯಮ್ಮಶ್ಯಾಮರಾವ್,	ಕೊಣನೂರು	18
6	ಶ್ರೀ. ರಮೇಶ್ ಅವರು ವಾಸ್ತುಶಿಲ್ಪಿಗಳು,	ಬೆಂ-ರು	28
7	ಶ್ರೀ. ನಳಿನಿ ರಮೇಶ್ ಅವರು "	"	29
8	ಶ್ರೀಕೆ.ವಿ.ಆರ್. ಕುಮಾರ್, ಮ್ಯಾನೇಜರ್,	ಕೆನರಾಬ್ಯಾಂಕ್.	32
9	ಶ್ರೀ.ಎನ್.ಡಿ. ಶಿವರಾಮ್ ಅವರು,	ಭದ್ರಾವತಿ.	37
10	ಶ್ರೀ.ಸಿ ವಿ. ನರಸಿಂಹಮೂರ್ತಿಗಳು,	ಚಿಲಕುಂದ	62
11	ಶ್ರೀ.ಬಿ. ವಿಟ್ಠಲರಾವ್ ಅವರು	ಬೆಂ-ರು	64
12	ಶ್ರೀ.ಎಚ್.ಆರ್. ರಾಮುಶೆಟ್ಟಿ ಅವರು	ಸಕಲೇಶಪುರ	68
13	ಶ್ರೀ ಎಚ್.ಆರ್. ಸತ್ಯನಾರಾಯಣ ಅವರು	ಬೆಂ-ರು	69
14	ಶ್ರೀ.ಸಿ.ಎನ್ ಶ್ರೀಕಂಠನ್ ಅವರು	ಬೆಂ-ರು	81
15	ಶ್ರೀ.ಡಾ.ಬಿ.ಆರ್. ಶ್ರೀನಿವಾಸಮೂರ್ತಿಗಳು	ಬೆಂ-ರು	95
16	ಶ್ರೀ. ಶಕುಂತಳಾ ಜಾದವ್ ಅವರು	ಬೆಂ-ರು	73
17	ಶ್ರೀ. ಅನಂತಲಕ್ಷ್ಮಿ ಅವರು		109

ಪೋಷಕರು

1	ಶ್ರೀ.ಬಿ. ಲಕ್ಷ್ಮೀನಾರಾಯಣ, ಬಸವಾಪಟ್ಟಣ	1
2	ಶ್ರೀ.ಸಿ ಎನ್. ಕೇಶವಪ್ರಕಾಶ್, ಬೆಂ-ರು	5
3	ಶ್ರೀ ಎ.ಎಸ್. ವೆಂಕಟೇಶಾವಧಾನಿಗಳು, ರಾಮನಾಥಪುರ	6
4	ಶ್ರೀ.ಆರ್. ರಾಮಯ್ಯ ಹೆಡ್ಮಾಸ್ಟರ್ ರುದ್ರಪಟ್ಟಣ	7
5	ಶ್ರೀ.ಕೆ.ಆರ್. ಶ್ರೀಕಂಠಯ್ಯನವರು ಜ್ಞಾನಭಾರತಿ ಬೆಂ-ರು	8
6	ಶ್ರೀ. ಸುಬ್ಬಕೃಷ್ಣ ಅವರು ಅಲಂಕಾರಟ್ರೇಡರ್ಸ ಗಾಂಧಿಬಜಾರ್	9
7	ಶ್ರೀ.ಕೆ. ನಾಗರಾಜ್ ಆನಂದಟ್ರಾವಲ್ಸ್,ಬಸವನಗುಡಿ. ಬೆಂ.ರು	10

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ಪ್ರಕಾಶನಸಮಿತಿಯ ಪೋಷಕರು

ಕ್ರಮ ಸಂಖ್ಯೆ — ಸದಸ್ಯ ಸಂಖ್ಯೆ

8 ಶ್ರೀ. ಜಯಮ್ಮ ಶ್ರೀನಿವಾಸರಾವ್ ಜಯನಗರ ಬೆಂ-ರು 11
9 ಶ್ರೀ ಬಿ. ಲಕ್ಷ್ಮೀನಾರಾಯಣ, ತ್ಯಾಗರಾಜ ನಗರ, ಬೆಂ-ರು 12
10 ಶ್ರೀ.ಎಚ್ ಸಿ ಸುಬ್ಬರಾಯರು. ಜಯನಗರ, ಬೆಂ-ರು 13
11 ಶ್ರೀ.ಎಂ.ಎಸ್ ನಂಜುಂಡಯ್ಯನವರು ಜಯನಗರ ಬೆಂರು 14
12 ಶ್ರೀ.ಡಾ.ಆರ್.ಎಸ್ ಕೆ. ಮೂರ್ತಿ, ಬೆಂ-ರು 15
13 ಶ್ರೀ ಪುಟ್ಟಯ್ಯನವರು, ಹನುಮಂತನಗರ. ಬೆಂ-ರು 16
14 ಶ್ರೀ ಬಿ. ರಾಮಚಂದ್ರ, ಬೆಂ-ರು 17
15 ಶ್ರೀ ರಘುನಾಥ್, ಹನುಮಂತನಗರ, ಬೆಂ-ರು 19
16 ಶ್ರೀ.ಡಾ, ಗೀತಾರಾಮಕೃಷ್ಣ, ಬೆಂ-ರು 20
17 ಶ್ರೀ. ಬಾಲಕೃಷ್ಣರಾವ್, ಸೀತಾರಾಮನಿವಾಸ, ಬೆಂ.ರು 21
18 ಶ್ರೀ ವೆಂಕಟರಾಮನ್, ಬೆಂ-ರು 22
19 ಶ್ರೀ.ಕೆ.ಆರ್. ಕೃಷ್ಣರಾಜು. ಬೆಂ-ರು 23
20 ಶ್ರೀ. ಬಾಲುಅವರು ಬೆಂ-ರು 24
21 ಶ್ರೀ ವಿದ್ವಾನ್ ನರಸಿಂಹಶಾಸ್ತ್ರಿಗಳು, 25
22 ಶ್ರೀ ಆರ್.ಎನ್. ಮೂರ್ತಿ, ಮಲ್ಲೇಶ್ವರಂ, 26
2 ಶ್ರೀ.ಎಂ.ಎಸ್. ನಾಗಭೂಷಣರಾವ್, ಬೆಂಗಳೂರು 31
24 ಶ್ರೀ.ಎಚ್.ಎಸ್.ಗೋಪಾಲ್, ಬೆಂ-ರು 27
25 ಶ್ರೀ.ಕೆ.ಎಸ್.ಸುಬ್ರಾಯರು, ಬೆಂ-ರು 33
26 ಶ್ರೀ ಎಚ್.ವಿ.ದ್ವಾರಕಾನಾಥ್, ಎಂ ಎಸ್. ರಾಮಯ್ಯ ಇಂಜನಿಯರಿಂಗಕಾಲೇಜ್ 34
27 ಶ್ರೀ.ಡಿ ಮಾಣಿಕ್ಯಚಂದ್, ,, 35
28 ಶ್ರೀ. ಆನಂದಕುಮಾರ್ ಬೆಂ-ರು 36
29 ಶ್ರೀ.ಕೆ.ಎಸ್. ಅನಂತರಾಮ್ ,, 38
30 ಶ್ರೀ. ಮೋಹನ್‌ರಾವ್ ಮಾಣೆ ಬೊಂಬಾಯಿ 39
31 ಶ್ರೀ. ವಿ. ನಾರಾಯಣ್ ಬೆಂ-ರು ಬೆಂ.ರು 40

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಾಗವತ ಪ್ರಕಾಶನ ಸಮಿತಿಯ ಪೋಷಕರು

ಕ್ರಮ ಸಂಖ್ಯೆ			ಸದಸ್ಯ ಸಂಖ್ಯೆ
32	ಶ್ರೀ. ಪಿ.ವಿ. ಸತ್ಯನಾರಾಯಣ ಶರ್ಮ	ಬೆಂಗಳೂರು	41
33	ಶ್ರೀ. ರಾಮಚಂದ್ರಬಾಬು	"	42
34	ಶ್ರೀ. ಪಿ. ಕೇಶವ.	ಬೆಂಗಳೂರು.	43
35	ಶ್ರೀ. ಎಚ್. ಆರ್. ಸುಬ್ರಾಯ ಶಾಸ್ತ್ರಿಗಳು	ಹೊಸಹಳ್ಳಿ.	44
36	ಶ್ರೀ. ವೇ.ಬ್ರಂ. ಶ್ರೀ ಮಾರ್ಕಂಡೇಯಾವಧಾನಿಗಳು	ಮತ್ತೂರು.	45
37	ಶ್ರೀ. ಎ. ಎಂ ದೇವದಾಸ್	ಬೆಂಗಳೂರು.	46
38	ಶ್ರೀ. ವೈ. ವಿ. ಶ್ರೀನಿವಾಸರಾವ್	"	47
39	ಶ್ರೀ. ನಾಗೇಂದ್ರ	"	48
40	ಶ್ರೀ. ಬಿ. ಕೆ ನಂಜುಂಡಯ್ಯ	"	49
41	ಶ್ರೀ. ಎಂ. ಕೆ ಬಾಲಸುಬ್ರಹ್ಮಣ್ಯ	"	50
42	ಶ್ರೀ. ಕೆ.ವೆಂಕಟರಾಮಯ್ಯ	"	51
43	ಶ್ರೀ. ಚನ್ನಕೇಶವಯ್ಯನವರು ರಾಜಾಜಿನಗರ	"	52
44	ಶ್ರೀ .ಕೆ. ರಾಮದಾಸ ಕಿಣಿ ಹೊಸಹಳ್ಳಿ	"	53
45	ಶ್ರೀ. ಎಸ್. ನಾರಾಯಣ	"	54
46	ಶ್ರೀ. ಡಾ. ಕೆ. ನಾರಾಯಣ ಮೂರ್ತಿ, ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು,	"	55
47	ಶ್ರೀ. ಡಾ.ಎ. ಪ್ರಭಾಕರ್ "	"	56
48	ಶ್ರೀ. ಡಾ. ಎಸ್. ಸಿದ್ದಪ್ಪ "	"	57
49	ಶ್ರೀ. ಎಚ್.ಕೆ. ಶ್ರೀನಿವಾಸನ್	ಗುಬ್ಬಿ, ತುಮಕೂರು	58
50	ಶ್ರೀ. ಕೆ. ಎಸ್ ಗುಂಡಪ್ಪ	ಬೆಂಗಳೂರು	59
51	ಶ್ರೀ. ನಾಗೇಂದ್ರ	"	60
52	ಶ್ರೀ. ಮೌನೇಶ್ವರಾಚಾರ್	"	61
53	ಶ್ರೀ. ಕೆ.ರಾಮಚಂದ್ರನ್	ಗುಲ್ಬರ್ಗ	64
54	ಶ್ರೀ ಕಪಿಲಾಚಾರಿ	ಬೆಂಗಳೂರು	65
55	ಶ್ರೀ. ದೇವದಾಸ ನಾಯಕ್ ಗೀತಾ ಸತ್ಸಂಗ ಸಮಿತಿ	"	66

Sri Vidyabharathi Book Centre, Sringeri

CC-0. In Public Domain. Digitized by eGangotri

ಕ್ರಮ ಸಂಖ್ಯೆ			ಸದಸ್ಯ ಸಂಖ್ಯೆ
56	ಶ್ರೀ. ಎಂ. ಡಿ. ಶಿವರಾವ್, ಮ್ಯಾನೇಜರ್, ಕೆನರಾ ಬ್ಯಾಂಕ್	ಗುಲ್ಬರ್ಗಾ	67
57	ಶ್ರೀ. ವೀರಪ್ಪ ರೆಡ್ಡಿ ವಿಶ್ವೇಶ್ವರಯ್ಯ ಇಂಜನಿಯರಿಂಗ್ ಕಾಲೇಜು,	ಬೆಂಗಳೂರು	70
58	ಶ್ರೀ ಜಯಮ್ಮ	”	71
59	ಬಿ. ಎಸ್. ಎನ್. ರಾವ್	ಠಾಣಾ	72
60	ಶ್ರೀ. ಬಿ.ಕೆ. ಸೂರ್ಯನಾರಾಯಣ	ಬೆಂಗಳೂರು	74
61	ಶ್ರೀ.ಬಿ. ಎಸ್ ವೆಂಕಟೇಶಯ್ಯನವರು	”	75
62	ಶ್ರೀ.ಕೇಶವ ಮೂರ್ತಿ ಅವರು	”	76
63	ಶ್ರೀ. ಕೆ.ವಿ. ವೆಂಕಟರಾಮನ್	”	77
64	ಶ್ರೀ. ಎಚ್. ಜೆ. ಸುಬ್ಬರಾಯರು	”	78
65	ಶ್ರೀ. ಎಂ.ಆರ್ ನಂಜುಂಡಯ್ಯನವರು	”	79
66	ಶ್ರೀ. .ಆರ್ ಜಗದೀಶ್	”	80
67	ಶ್ರೀ ವಿ. ವೆಂಕಟೇಶ ಭಟ್ಟರು	ಬಾಯೂರು	82
68	ಶ್ರೀ. ಸಾವಿತ್ರಮ್ಮನವರು	ಕೇರಳಾಪುರ	83
69	ಶ್ರೀ. ಡಾ. ಕೆ. ಕೃಷ್ಣಮೂರ್ತಿಗಳು,	ಧಾರವಾಡ	84
70	ಶ್ರೀ. ಎ. ಎನ್ ಮೂರ್ತಿ	ಬೆಂಗಳೂರು	86
71	ಶ್ರೀ. ಪುಂಡರೀಕಾಕ್ಷ	ಬೆಂಗಳೂರು	87
72	ಶ್ರೀ. ವೆಂಕಟನರಸಪ್ಪ	”	88
73	ಶ್ರೀ. ಟಿ ಎನ್ ಗೋಪಾಲರಾವ್	”	89
74	ಶ್ರೀ.ಎ ಕೆ ಸುಂದರೇಶ್	”	90
75	ವೇ.ಬ್ರಂ.ಶ್ರೀ-ಸುಬ್ರಹ್ಮಣ್ಯ ಘನಪಾಠಿಗಳು	ಸೋಮನಹಳ್ಳಿ	91
76	ಶ್ರೀ ಎನ್. ಎಲ್. ರಾಮಚಂದ್ರನ್	ಬೆಂಗಳೂರು	92
77	ಶ್ರೀ. ವೇ.ಬ್ರಂ. ಶ್ರೀ-ಕೇಶವಮೂರ್ತಿಘನಪಾಠಿಗಳು,	ಶಿವಮೊಗ್ಗ	93
97	ಶ್ರೀ. ಎಸ್ ಕೃಷ್ಣಮ್ಮ ಮಲ್ಲೇಶ್ವರಂ	ಬೆಂಗಳೂರು	94

Sri Vidyabharathi Book Centre, Sringeri

CC-O. In Public Domain. Digitized by eGangotri

 ಶ್ರೀ ಭಾಗವತ ಪ್ರಕಾಶನ ಸಮಿತಿಯ ಪೋಷಕರು,

ಕ್ರಮ ಸಂಖ್ಯೆ			ಸದಸ್ಯ ಸಂಖ್ಯೆ
79	ಶ್ರೀ. ಲಕ್ಷ್ಮೀ ನರಸಿಂಹಮೂರ್ತಿಗಳು	ಬಿಳಿಚೋಡು	95
80	ಶ್ರೀ. ಟಿ. ಎಸ್ ಸತ್ಯನಾರಾಯಣ	ಬೆಂಗಳೂರು	96
81	ಶ್ರೀ. ಕೆ ರಂಗನಾಥ್	"	97
82	ಶ್ರೀ. ಎಮ್. ಮಾಧವಭಟ್ಟ, ವಿದ್ವಾನ್	ಕಾಸರಗೋಡು	98
83	ಶ್ರೀ. ಪುರುಷೋತ್ತಮಭಟ್ಟ ಬಿ-ಎ-ಬಿ-ಟಿ	"	99
84	ಶ್ರೀ. ಎಂ ಸುಬ್ರಹ್ಮಣ್ಯಭಟ್ಟ ಬಿ-ಎ-ಬಿ-ಟಿ	"	100
85	ಶ್ರೀ. ಎನ್ ನಾರಾಯಣಭಟ್ಟ ಬಿ-ಎಸ್ಸಿ-ಬಿ-ಎಡ್	"	101
86	ಶ್ರೀ. ಕೆ. ಅನಂತಭಟ್ಟ-ಬಿ-ಎಸ್ಸಿ-ಬಿ-ಎಡ್	"	102
87	ಶ್ರೀ. ಎಂ. ಕೆ ಗೋಪಾಲಕೃಷ್ಣಭಟ್ಟ ವಿದ್ವಾನ್	"	103
88	ಶ್ರೀ. ಕೆ ಸುಬ್ರಹ್ಮಣ್ಯಭಟ್ಟ ಬಿ-ಎಸ್ಸಿ-ಬಿ-ಎಡ್	"	104
89	ಶ್ರೀ. ಕೆ. ಕೃಷ್ಣಭಟ್ಟ ಹೆಡ್‌ಮಾಸ್ಟರ್	"	105
90	ಶ್ರೀ ಲಕ್ಷ್ಮೀನಾಗಭೂಷಣರಾವ್	ಬೆಂಗಳೂರು	106
91	ಶ್ರೀ. ಲಕ್ಷ್ಮೀಕಾಂತ	ಬೆಂಗಳೂರು	107
92	ಶ್ರೀ. ಕೆ. ಅನಿಲ್‌ಕುಮಾರ್	ಬೆಂಗಳೂರು	108
93	ಶ್ರೀ. ಎಸ್ ಎಲ್-ಭಟ್ಟ	ಬಿಳಿಚೋಡ್	110
94	ಶ್ರೀ. ಎಸ್ ಚಂದ್ರಶೇಖರ್ ಬೈರಸಂದ್ರ	ಬೆಂಗಳೂರು	111
95	ಶ್ರೀ. ಎಚ್.ಸಿ ಅಶ್ವತ್ಥ	ಬೆಂಗಳೂರು	112
96	ಶ್ರೀ. ಎಸ್ ಅಶ್ವಥನಾರಾಯಣ	ಬೆಂಗಳೂರು	113
97	ಶ್ರೀ. ಜಯಲಕ್ಷ್ಮಿ ನಂಜುಂಡಯ್ಯ	ಮೈಸೂರು	114

ಈಪಟ್ಟಿಯು ಮುದ್ರಣಕ್ಕೆ ಹೋದ ಮೇಲೆ ಪೋಷಕರಾಗಿರುವವರ ಹೆಸರುಗಳನ್ನು ಮುಂದಿನ ಸಂಪುಟದಲ್ಲಿ ಪ್ರಕಟಿಸಲಾಗುವುದು. ಪತ್ರ ವ್ಯವಹಾರ ಮಾಡುವಾಗ ಸದಸ್ಯ ಸಂಖ್ಯೆಯನ್ನು ನಮೂದಿಸುವುದು. ಅದರಿಂದ ಉತ್ತರಿಸಲು ಅನುಕೂಲವಾಗುವುದು. ವಿಳಾಸವು ಬದಲಾದಲ್ಲಿ ದಯೆಯಿಟ್ಟು ತಿಳಿಸುವುದು.

ಭಾಗವತ ಪ್ರಕಾಶನ ಸಮಿತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರನ್ನು ನೊಂದಾಯಿಸಿ [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಹಾತ್ಮ್ಯೆ

ಪುಟ	ಸಾಲು	ತಪ್ಪು	ಒಪ್ಪು
2	15	ವಿಶ್ವೇ	ವಿಶ್ವೋ
3	9	ತಯೇಪ	ಯೇನ
6	8	ಮರ್ಧಿ	ಮರ್ದಿ
17	3	ಸ್ನಾಯಾ	ಸ್ನಾಯಿ
"	12	ರಭರಿ	ರಂಭರಿ
"	14	ಹಾರಕ	ಹಾರಕರು
18	1	ಷಾಖಂಡ	ಪಾಖಂಡ
"	7	ಹೆಚ್ಚಗೆ	ಹೆಚ್ಚಿಗೆ
19	1	ಅಷ್ವ	ಅಟ್ವ
"	25	ನಾಂತ	ನಾತ
20	13	ಲೋಕವ	ನಾತ
"	17	ಬಂಧಿ	ಬಾಧಿ
"	19	ನಜನ್ಮ	ನಹಸ್ಯ
21	18	ಗ್ರಹಿಸಿ	ಗ್ರಹಿಸ
23	5	ಯೊದಿಗಿ	ಯೊದಗಿ
23		ದುರ್ಷರ್ಮ	ದುಷ್ಕರ್ಮ
24	2	ಷ್ಟವರು	ಷ್ಟರು
"	12	ವರೇ	ವರೋ
"	20	ದೃಧ್ಧಿ	ವೃಧ್ಧಿ
25		ವೆಂವರೆ	ವೆಂದರೆ
34	19	ಸುದಿ	ಸುವುದಿ
40	1	ಜ್ಞಾಯತಿ	ಜ್ಞಾಯತೇ
43	2	ಶುಕ್ರ	ಶುಕ
47	16	ವ್ರತ	ವವ್ರತ
51	2	ಸಂಕುಚಿ	ಸಂಚಿ

Sri Vidyabharathi Book Centre, Sringeri

CC-O. In Public Domain. Digitized by eGangotri

	ಸಾಲು	ತಪ್ಪು	ಒಪ್ಪು
58	1	ಹೋದರಂ	ಹೋದರು
"	12	ಲಾರವೇ	ಲಾರದೇ
"	23	ಮತ್ಸೆಂದ್ರ	ಮತ್ಸ್ಯೇಂದ್ರ
67	13	ನಂತ	ನಂತರ
68	19	ಸೈವೆ	ಸೈವ
75	18	ಸಾಧ	ಸಾಧ್ಯ
	ಪ್ರಥಮ ಸ್ಕಂಧ	೧	
5	14	ಸ್ಯರಾಟ್	ಸ್ವರಾಟ್
"	19	ಜೀನವಲ್ಲ	ಜೀವನಲ್ಲ
8	3	ಛಾಯಯ	ಛಾಯಾ
"	11	ಯಾಜಾ	ಛಾಯಾ
9	13	ರವಿ	ರಪಿ
12	22	ಮುಂದವೆಂ	ಮುಂದರೆಂ
24	16	ಹಿತೊ	ಹೀತಯಾ
27	12	ಗಳ	ಗಳು
29	6	ಬ್ರಸ್ಮತ್ರವೇ	ಬ್ರಹ್ಮೈತವೇ
"	11	ತ್ಯಾದಿ	ತ್ವಾದಿ
0	22	ಮೇರ	ಮೇರು
32	7	ದಯು	ಹಯು
34	20	ವನ್ಬು	ವನ್ನು
38	19	ಯರ್ುಗ	ಯುರ್ಗ
"	23	ತ್ರಿಥ್	ತ್ರಿಧಾ
40	7	ಪರಾ	ಪುರಾ
"	21	ಇತ	ಇತಿ
"	22	ಸವ	ಸರ್ವ
41	16	ವತ	ವತ್ಸ್ಯೇ
"	24	ಸಾರಜರ	ಸಾರದರು

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಸಾಲು	ತಪ್ಪು	ಒಪ್ಪು
43	12	ನೂನ	ನ್ಯೂನ
52	4	ಪಯಸ್ಸು	ವಯಸ್ಸು
"	9	ರುಣತೆ	ರುಣೆ
"	22	ರಿನವು	ದಿದುವು
56	17	ಗಣ	ಗುಣ
57	8	ದಮುನ	ಚಮುನ
60	1	ಳ್ನೂ	ಳನ್ನೂ
61	17	ವನ್ನ	ವನ್ನು
63	18	ನಿಪ್ರಹಿ	ನಿಗ್ರಹಿ
"	22	ದರು	ದನು
64	10	ವ್ಸ್ವನಂ	ವ್ಯೈನಂ
65	14	ದಿಯುು	ದಿಯಃ
"	23	ತನ್ತ	ತಪ್ತ
66	5	ಬೆಡು	ಬಿಡು
67	14	ಯಧಿ	ಯುಧಿ
71	8	ಸ್ತೊತ್ರ	ಸ್ತೋತ್ರ
72	1	ಪರವ	ಪರವು
"	23	ಗೃಹಗ್ನಿ	ಗೃಹಾಗ್ನಿ
79	11	ಯಧಿ	ಯುಧಿ
82	16	ರುಷ	ಪುರುಷ
84	2	ಕೊಂಡಿರುವ	ಕೊಂಡಿದ್ದವು
"	18	ಬೆಟ್ಟ	ಬಿಟ್ಟೆ
87	17	ಯಾಗದರು	ಯಾಗದ
88	2	ಶ್ರೀ	ಶ್ರೀ
97	11	ನನ್ನ	ನನ್ನು
92	27	ತಂತೆ	ತಂದೆ
"	14	ಶ್ರಮಣ	ಶ್ರವಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಸಾಲು	ತಪ್ಪು	ಒಪ್ಪು
104	1	ಅನ	ಅನ್ಯ
”	11	ಅಂಗಷ್ಠ	ಅಂಗುಷ್ಠ
“	12	ಪುರುನೋ	ಪುರುಷನೋ
“	13	ತಿರುತಿ	ತಿರುಗಿ
104	24	ಜಾತ	ಜಾತಕ
107	”	ಬೃಚ್ಛ್ರ	ಬೃಹಚ್ಛ್ರ
“	23	ಸಂಭಾನೆ	ಸಂಭಾವನೆ
108	8	ಅಶ್ಯ	ಅಶ್ವ
109	7	ಬೆಕು	ಬೇಕು
“	44	ತಸ್ಮತ್ರ	ತಸ್ಮೈತ್ರ
111	15	ವಿದರ	ವಿದುರ
114	3	ನಂನಿ	ನಂದಿನಿ
115	15	ಮನಷ್ಯ	ಮನುಷ್ಯ
117	7	ಹೊಟು	ಹೊರಟು
“	24	ತ್ಯಪ್ರೋಪ	ತಾಪ್ರೋಪ
129	5	ಾಮ್ರಾ	ಸಾಮ್ರಾ,
130	1	ಮಿತ	ಮಿತ್ರ
	21	ಭಕ್ತ್ಯ	ಭಕ್ತ
137	5	ವೆಷೇಣ	ವೇಷೇಣ
139	2	್ದೇವೆ	ದ್ವೇವೆ.
140	4	ಅಸಕ್ತಿ	ಆಸಕ್ತಿ
114	7	ಲ್ಲಿಸಬೇ	ಲ್ಲಿರಬೇ
145	7	ಸಾಮರ್ಥ	ಸಾಮರ್ಥ್ಯ
”	15	ನಿಮ್ಮ	ನಿಮ
ಸ್ಕಂಧ ೨			
1	8	ತೃಕ್ಷ್ಣ	ತ್ವಕ್ಷ್ಣ

Sri Vidyabharathi Book Centre, Sringeri

ಪುಟ	ಸಾಲು	ತಪ್ಪು	ಒಪ್ಪು
2	21	ಪಪೂ	ಪರಪೂ
4	8	ಕಾಭ್ಯಾಂ	ಕಾಭ್ಯಾಂ
5	11	ವರಿಯಾ	ವೀಯಾ
	19	ಪುಸಾ	ಪುಂಸಾಂ
"	23	ಅಹಾಂ	ಅಹಂ
7		ಸಲ್ಮ	ಸಪ್ಪ
"	3	ಕೀರ್ತ್ರ	ಕೀತ್ರ್ಯ
"	14	ಹಾತ್ಮಾ	ಹಾತ್ಮ
"	20	ದ್ವೈತಪಾ	ದ್ವೈಪಾ
8	7	ಬಿಡುವು	ಬಿಟ್ಟು
"	18	ಯುವೆ	ಯುವೇ
11	3	ತದ	ತರ
15	7	ಕಾಪೀನ	ಕೌಪೀನ
16	14	ದಲ್ಲ	ದಲ್ಲಿ
20	7	ಹರಿಯು	ಹುಯು
20	20	ಉದ್ಯೇಗ	ಉದ್ವೇಗ
25	-6	ಭಕ್ತಿಯಂ	ಭಕ್ತಿಯ
26	1	ದಲ್ಲಿ	ದಲ್ಲಿಯೂ
"	2	ಧಿಸ್ಟಿ	ಧಿಷ್ಠಿ
"	5	ದಿನ	ದಿಗ
"	12	ಕೆಳ	ಕೇಳ
"	14	ಬೆಕು	ಬೇಕು
27	23	ಬೇಗಂ	ಬೇಕೆಂ
29	3	ತ್ರನೆ	ತಾನೆ
30	16	ವಸು	ವಾಸು
30	16	ಯಣ	ಯಣರು

CC-0. In Public Domain. Digitized by eGangotri
Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಸಾಲು	ತಪ್ಪು	ಒಪ್ಪು
30	23	ವಾಂಸನಾ	ವಾಸನಾ
31	9	ಪಶುವೊ	ಪಶವೊ
35	14	ಆಧ್ಭುತ	ಅಧ್ಭುತ
39	14	ಶ್ರೀಯು	ಶ್ರಿಯಃ
41	14	ತ್ಸಜನಾ	ಜನಾ
41	17	ಗುಣಾದ್	ಗುಣಾನ್
41	18	ವಜಾಂಸಿ	ವಚಾಂಸಿ
42	3	ನನ್ಮೃತ	ನಾನ್ಮೃತ
ಸ್ಕಂಧ ೨			
43	11	ಅಧಾರ	ಆಧಾರ
"	8	ಗಿವ್ತರೆ	ಗಿವ್ವರೆ
76	4	ಚಿತೆ	ಚಿಂತೆ
77	3	ರ್ಥನು	ರ್ಥಾನು
81	25	ಪ್ರಾರ್ಥಿಸ	ಪ್ರಾರ್ಥಿಸು
88	5	ತಿಷ್ಠಂ	ತಿಷ್ಠಂ
ತೃತೀಯ ಸ್ಕಂಧ			
1	15	ತ್ಕೃವೆ	ತ್ಕೃಪೆ
26	20	ವಂತ:	ವಂತೆ
31	25	ತರ್ಕೊ	ತಕ್ಕೊ
33	16	ನನೆ	ನಗೆ
39	23	ಮಂದರಗ	ಮಂದಿರ
47	40	ವೃತ್ಮ	ಆತ್ಮನಾಂ
"	21	ಪೃತ್ಯ	ಮೃತ್ಯ
49	1	ಧೃಶಾ	ದೃಶ್ಯಾ
50	21	ಲಿಂಗಿನ	ಲಿಂಗಿನ:
22	25	ರೂಪಗ	ರೂಪಿಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಸಾಲು	ತಪ್ಪು	ಒಪ್ಪು
7	1	ದಧರಾ	ದಧ್ವರಾ
8	15	ಪ್ರಾಣಿ	ಪ್ರಾಣ
11-13-15		ಅ. ೧೩	ಅ - ೧೪
18	1	ಸರ್ವರ್ಥ	ಸಮರ್ಥ
19	15	ವಾರ್ಗ	ಮಾರ್ಗ
		ಕಪಿಲಯೋಗ	
1	15	ನರ	ವರ
2	9	ಪೃಕ್ಷಸ್ದ	ವಕ್ಷಸ್ಥ
7	8	ಣ್ಯರ	ಣ್ಯದ
7	9	ವರ್ದತೇ	ವರ್ಧತೇ
8	10	ನಿಶ್ಚಯಂ	ನಿಶ್ಚಯಾ
"	19	ಆತ್ಮಜಂ	ಆತ್ಮಜಾ
"	22	ಸಂಬಂದ	ಸಂಬಧದ
18	19	ಜ್ಞಾನನ್ನು	ಜ್ಞಾನವನ್ನು
19	14	ಮರೀಜ್ಯಾದಿ	ಮರೀಚ್ಯಾದಿ
"	24	ಸಾಂಜಗೃಹೆ	ಸಂಜಗೃಹೇ
20	12	ಕೈಟಿಭಾ	ಕೈಟಭಾ
"	16	ಳಿಕೆಯು	ಳಿಕೆಯು
22	8	ಷ್ಟೇ	ಇಷ್ಟೇ
24	1	ಪರನು	ಪರವು
24	4	ಆಸ್ತಿ	ಆಸ್ತಿ
25	20	ಯೂ	ಯಾ
26	15	ವೇದನ	ಭೇದನ
26	19	ಯ್ಯಾಹಂ	ಯಾಹಂ
28	10	ಅಧಯೋಧ್ಯ	ಅಧ್ಯಯೋಧ್ಯಂ
35	7	ಘತ್ತಿ	ಛತ್ತ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಸಾಲು	ತಪ್ಪು	ಒಪ್ಪು
37	17	ಸುತ್ತಾನೆ	ಸುತ್ತೇನೆ.
38	14	ದ್ವಾರೆ	ದ್ವಾರೆ
39	1	ವೆಂದೇ	ವೆಂದು
"	10	ಬೇಕ್ತ್ರುತ್ವ	ಭೋಕ್ತೃತ್ವ
"	13	ನಾಹುಂ	ನಾಹಂ
41	16	ಅಂಕುರೂಪ	ಅಂಕುರರೂಪ
43	20	ಕಾರಡ	ಕಾರದ
44	5	ಸ್ವರೂಪ	ಸ್ವರೂಪ
46	4	ಅವಿಭಾವ	ಆವಿರ್ಭಾವ
46	11	ತಡಭಿ	ತದಭಿ
47	4	ಕ್ಷತ್ರಜ್ಞ	ಕ್ಷೇತ್ರಜ್ಞ
"	20	ಅವಸ್ದೆ	ಅವಸ್ಥೆ
49	24	ಸಂಸಾ	ಸಂಸಾರ
"	22	ಪಾಕೃತಿಕ	ಪ್ರಾಕೃತಿ
57	4	ಭಗವಶ್ಚ	ಭಗವತಶ್ಚ
42	14	ಮದಸ್ಸಾ	ಮನಸ್ಸಾ
58	6	ಕಕಮಲ	ಕರಕಮಲ
"	13	ಕೌಂಸುಭ	ಕಾ
"	17	ಮುಖ್ಯ	ಮುಖ
59	20	ಉಪಾದ್ನಿ	ಉಪಾಧಿ
70	4	ಇಪದ	ಇವನ
75	22	ಆಡಿಲಾ	ಆಡಿಸಲಾ
84		ಲಾಗವು	ಲಾಗುವು
88	9	ಪ್ರಸಿಧ್ಧ	ಪ್ರಸಿದ್ಧಿ
"	20	ಶ್ರೀಘ್ರ	ಶೀಘ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri